ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–32

ಅನುಶಾಸನಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩

ಅನುಶಾಸನಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಅನುಶಾಸನಪರ್ವ–ಭಾರತತಾತ್ಪರ್ಯನಿರ್ಣಯ– ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಅನುಶಾಸನಪರ್ವ - ಭಾಗ ೩

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-36-5

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	X + 583 = 593
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.



ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ಮುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೨

ಅನುಶಾಸನ ಪರ್ವ

		ಪುಟ ಸಂ.
57.	ಗಂಗಾ ಪ್ರಶಂಸೆ	1
58.	ಮತಂಗೋಪಾಖ್ಯಾನ ಪ್ರಾರಂಭ	26
59.	ಇಂದ್ರನಿಂದ ಬ್ರಾಹ್ಮಣ್ಯ ಪ್ರಶಂಸೆ	32
60.	ಮತಂಗೋಪಾಖ್ಯಾನದ ಉಪಸಂಹಾರ	36
61.	ಪೂಜ್ಯಪುರುಷ ಲಕ್ಷಣ ಕಥನ	40
62.	ಶ್ಯೇನಕಪೋತೀಯ	48
63.	ಭೀಷ್ಮರಿಂದ ಬ್ರಾಹ್ಮಣ ಪ್ರಶಂಸೆ	57
64.	ಪೃಥಿವಿ-ವಾಸುದೇವ ಸಂವಾದ	62
65.	ಬ್ರಾಹ್ಮಣ ಪ್ರಶಂಸೆ. ಬ್ರಹ್ಮದೇವರ ಹಿತವಚನ	69
66.	ಬ್ರಾಹ್ಮಣ ಪ್ರಶಂಸೆ - ಇಂದ್ರ-ಶಂಬರ ಸಂವಾದ	74
67.	ಪಾತ್ರಪರೀಕ್ಷೆ	79
68.	ಸ್ತ್ರೀಯರ ದೋಷಕಥನ. ನಾರದ ಮತ್ತು ಪಂಚಚೂಡಳ ಸಂವಾದ	83
69.	ಯುಧಿಷ್ಠಿರನಿಂದ ಸ್ತ್ರೀ ದೋಷಗಳ ಪ್ರಶ್ನೆ	90
70.	ಗುರುಪತ್ನಿಯ ಶೀಲವನ್ನು ರಕ್ಷಿಸಲು ವಿಪುಲನಿಂದ ಅವಳ ಶರೀರ ಪ್ರವೇಶ	94
71.	ಇಂದ್ರನ ಆಗಮನ. ವಿಪುಲನಿಂದ ಗುರುಪತ್ನಿಯ ರಕ್ಷಣೆ ಮತ್ತು ದೇವೇಂದ್ರನ ನಿಂದೆ	106
72.	ವನದಲ್ಲಿ ಸಂಚರಿಸುವ ವಿಪುಲನಿಂದ ತನ್ನ ಶಾಪದ ಶ್ರವಣ	113
73.	ವಿಪುಲನಿಗೆ ಗುರುಗಳ ಅನುಗ್ರಹ	120
74.	ವಿವಾಹಧರ್ಮಗಳು- ಕನ್ಯಾದಾನ ನಿರ್ಣಯ	127

75. ಕನ್ಯಾದಾನ ಧರ್ಮಗಳು 140
76. ಸ್ತ್ರೀಯರ ಪ್ರಶಂಸೆ 145
77. ತಂದೆಯ ಆಸ್ತಿ ವಿಭಾಗ 149
78. ಸಂಕರವರ್ಣಗಳ ವಿಭಾಗ 163
79. ಪುತ್ರಪ್ರಭೇದ ಕಥನ 175
80. ಚ್ಯವನೋಪಾಖ್ಯಾನ ಪ್ರಾರಂಭ. ಮೀನಿನ ಬಲೆಯಲ್ಲಿ ಚ್ಯವನರ ಗ್ರಹಣ 184
81. ಚ್ಯವನ-ನಹುಷ ಸಂವಾದ. ಗೋವಿನಿಂದ ಚ್ಯವನನ ಕ್ರಯಣ ಮತ್ತು ಗೋವುಗಳ ಮಹಿಮೆ 190
82. ಚ್ಯವನ-ಕುಶಿಕರ ಸಂವಾದ. ಕುಶಿಕರ ಗೃಹದಲ್ಲಿ ಚ್ಯವನರಿಗೆ ಆತಿಥ್ಯ 200
83. ಚ್ಯವನರಿಂದ ಕುಶಿಕನಿಗೆ ಅನುಗ್ರಹ 208
84. ಪ್ರಾತಃಕಾಲದಲ್ಲಿ ರಾಜನಿಂದ ಚ್ಯವನ ದರ್ಶನ. ವನದರ್ಶನ ಮತ್ತು ವಿಸ್ಮಯ 222
85. ಚ್ಯವನರಿಂದ ಕುಶಿಕನಿಗೆ ಬ್ರಾಹ್ಮಣ್ಯ ವರಲಾಭ 230
86. ಚ್ಯವನರಿಂದ ಕುಶಿಕನಿಗೆ ಪರಶುರಾಮ ಉತ್ಪತ್ತಿಯನ್ನು ಹೇಳಿ ತೀರ್ಥಯಾತ್ರಾ ಗಮನ 238
87. ಯಮ ನಿಯಮ ದಾನಫಲಗಳು 242
88. ಆರಾಮ ತಟಾಕಾದಿ ನಿರ್ಮಾಣ ಫಲ 250
89. ಬ್ರಾಹ್ಮಣ ಪೂಜಾ ಪ್ರಶಂಸೆ 260
90. ಅತಿಥಿ ಯಜ್ಞ. ಪಾತ್ರವಿಮರ್ಶೆ 268
91. ರಾಜಧರ್ಮಗಳು 273
92. ಭೂಮಿದಾನ ಪ್ರಶಂಸೆ 281
93. ಅನ್ನದಾನದ ಪ್ರಶಂಸೆ 301
94. ನಕ್ಷತ್ರಯೋಗದಲ್ಲಿ ದಾನಫಲ 312
95. ಕಾಂಚನಾದಿ ದಾನದ ಫಲ 320
96. ತಿಲಾದಿ ದಾನಫಲ 324

97. ಜಲದಾನ ಫಲ 337

98. ತಿಲಾದಿ ದಾನ ಪ್ರಶಂಸೆ – ಯಮದೂತನ ಅಚಾತುರ್ಯ 342

99. ಗೋದಾನದ ಫಲ 349

100. ಗೋದಾನ–ನೃಗೋಪಾಖ್ಯಾನ 356

101. ಗೋದಾನ– ನಾಚಿಕೇತೋಪಾಖ್ಯಾನ 363

102. ಗೋದಾನ – ಬ್ರಹ್ಮದೇವನನ್ನು ಕುರಿತು ಇಂದ್ರನಿಂದ ಪ್ರಶ್ನೆ 379

103. ಗೋದಾನ – ಬ್ರಹ್ಮನ ಉತ್ತರ 382

104. ಗೋ ಅಪಹಾರ ಫಲ 395

105. ವ್ರತನಿಯಮಫಲ 398

106. ಗೋದಾನ ವಿಧಿ 407

107. ಪುನಃ ವಿಸ್ತಾರವಾಗಿ ಗೋದಾನ ಮಹಿಮೆ 416

108. ಗೋ ಮಹಿಮೆ – ಸೌದಾಸ–ವಸಿಷ್ಠ ಸಂವಾದ 425

109. ಗೋದಾನಫಲ–ವಸಿಷ್ಠರ ಉಪದೇಶ 431

110. ಗೋಮಹಿಮೆ–ವಸಿಷ್ಠರ ವಚನ 437

111. ಗೋ ಮಹಿಮೆ – ವ್ಯಾಸ–ಶುಕ ಸಂವಾದ 441

112. ಗೋಲೋಕಸ್ಥಿತಿ 451

113. ಸುರಭಿಯ ಸಂತತಿ 456

114. ಸುರಭಿಯ ಶರೀರದಲ್ಲಿ ಸರ್ವದೇವತೆಗಳ ಪ್ರವೇಶ 462

115. ಫೇನಪೋಪಾಖ್ಯಾನ ಆರಂಭ 468

116. ಗೋವುಗಳ ಸಂವಾದ. ಭಾರ್ಗವನನ್ನು ವಧಿಸಲು ನಿರ್ಧಾರ 474

117. ಗೋಮಾತೆಯರಿಂದ ಭಾರ್ಗವನ ರಕ್ಷಣೆ 479

118. ರಂತಿದೇವನ ಯಜ್ಞದಲ್ಲಿ ಗೋವುಗಳ ವಿನಿಯೋಗ ಮತ್ತು ಅವುಗಳಿಗೆ ಸದ್ಗತಿ. ಭಾರ್ಗವೋಪಾಖ್ಯಾನ ಸಮಾಪ್ತಿ 482

119. ಗೋಮಹಿಮೆ. ಶ್ರೇಷ್ಠದಾನ ವಿಷಯದಲ್ಲಿ ವ್ಯಾಸ-ಶುಕ ಸಂವಾದ 487

120. ಕಪಿಲೋಪಜೀವನ ವಿಷಯದಲ್ಲಿ ವ್ಯಾಸ-ಶುಕ ಸಂವಾದ 496

121. ಕಪಿಲ ಗೋವಿನ ಶ್ರೇಷ್ಠತ್ವ ಕಥನ 499

122. ಕಪಿಲ ಗೋವುಗಳ ಪ್ರಭೇದ. ಅವುಗಳನ್ನು ಪೀಡಿಸಿದರೆ ಉಂಟಾಗುವ ಅನರ್ಥ 501

123. ಶ್ರೀ-ಗೋಸಂವಾದ 505

124. ಗೋಲೋಕ ವಿಷಯದಲ್ಲಿ ಬ್ರಹ್ಮೇಂದ್ರರ ಸಂವಾದ 511

125. ಸುವರ್ಣೋತ್ಪತ್ತಿ ಮತ್ತು ಸುವರ್ಣ ದಕ್ಷಿಣೆ 521

126. ಕಾರ್ತಿಕೇಯೋತ್ಪತ್ತಿ 533

127. ಸುವರ್ಣ ಮಹಿಮೆ 549

128. ತಾರಕ ವಧೆ 565

129. ಶ್ರಾದ್ಧಕಲ್ಪ 572

130. ಶ್ರಾದ್ಧದಲ್ಲಿ ಹವಿಸ್ಸಿನ ನಿರೂಪಣೆ 576

131. ನಕ್ಷತ್ರಯೋಗದಲ್ಲಿ ಶ್ರಾದ್ಧಫಲ ಕಥನ 580

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಅನುಶಾಸನ ಪರ್ವ

ಐವತ್ತೇಳನೆಯ ಅಧ್ಯಾಯ

ಗಂಗಾ ಪ್ರಶಂಸೆ.

ವೈಶಂಪಾಯನಃ

ಬೃಹಸ್ಪತಿಸಮಂ ಬುದ್ಧ್ಯಾ ಕ್ಷಮಯಾ ಬ್ರಹ್ಮಣಃ ಸಮಮ್ ।
ಪರಾಕ್ರಮೇ ಶಕ್ರಸಮಮಾದಿತ್ಯಸಮತೇಜಸಮ್ ॥೧॥

ಗಾಂಗೇಯಮರ್ಜುನೇನಾಜೌ ನಿಹತಂ ಭೂರಿವರ್ಚಸಮ್ ।
ಭ್ರಾತೃಭಿಃ ಸಹಿತೋಽನ್ಯೈಶ್ಚ ಪರ್ಯುಪಾಸ್ತೇ ಯುಧಿಷ್ಠಿರಃ ॥೨॥

ವೈಶಂಪಾಯನ– ಬುದ್ಧಿಯಲ್ಲಿ ಬೃಹಸ್ಪತಿಗೆ ಸಮನೂ, ಕ್ಷಮೆಯಲ್ಲಿ ಬ್ರಹ್ಮನಿಗೆ ಸಮನೂ, ಪರಾಕ್ರಮದಲ್ಲಿ ಇಂದ್ರನಿಗೆ ಸಮನೂ, ತೇಜಸ್ಸಿನಲ್ಲಿ ಸೂರ್ಯನಿಗೆ ಸಮನೂ ಆದ, ಅರ್ಜುನನಿಂದ ಯುದ್ಧದಲ್ಲಿ ಹತನಾಗಿ ಬಿದ್ದ, ಮಹಾವರ್ಚಸ್ವಿಯಾದ, ಗಂಗಾ

ಪುತ್ರರಾದ ಭೀಷ್ಮರನ್ನು ತಮ್ಮಂದಿರಿಂದಲೂ ಮತ್ತು ಅನ್ಯರಿಂದಲೂ ಸಹಿತನಾದ ಯುಧಿಷ್ಠಿರನು ಉಪಾಸನೆ ಮಾಡಿದನು.

ಶಯಾನಂ ವೀರಶಯನೇ ಕಾಲಾಕಾಂಕ್ಷಿಣಮಚ್ಯುತಮ್ ।
ಆಜಗ್ಮುರ್ಭರತಶ್ರೇಷ್ಠಂ ದ್ರಷ್ಟುಕಾಮಾ ಮಹರ್ಷಯಃ ॥೩॥

ವೀರಶಯನದಲ್ಲಿ ಮಲಗಿ ಉತ್ತರಾಯಣ ಕಾಲವನ್ನು ಆಕಾಂಕ್ಷಿಸುತ್ತಾ ತನ್ನ ಗುಣಗಳಿಂದ ಚ್ಯುತನಾಗದ ಭರತಶ್ರೇಷ್ಠನನ್ನು ನೋಡಲು ಬಯಸಿ ಮಹರ್ಷಿಗಳು ಆಗಮಿಸಿದರು.

ಅತ್ರಿರ್ವಸಿಷ್ಠೋಽಥ ಭೃಗುಃ ಪುಲಸ್ತ್ಯಃ ಪುಲಹಃ ಕ್ರತುಃ ।
ಅಂಗಿರಾ ಗೌತಮೋಽಗಸ್ತ್ಯಃ ಸುಮತಿಃ ಸ್ಥಾಯುರಾತ್ಮವಾನ್ ॥೪॥

ವಿಶ್ವಾಮಿತ್ರಃ ಸ್ಥೂಲಶಿರಾಃ ಸಂವರ್ತಃ ಪ್ರಮತಿರ್ದಮಃ ।
ಉಶನಾ ಬೃಹಸ್ಪತಿರ್ವ್ಯಾಸಶ್ಚ್ಯವನಃ ಕಾಶ್ಯಪೋ ಧ್ರುವಃ ॥೫॥

ದುರ್ವಾಸಾ ಜಮದಗ್ನಿಶ್ಚ ಮಾರ್ಕಂಡೇಯೋಽಥ ಗಾಲವಃ ।
ಭರದ್ವಾಜಶ್ಚ ರೈಭ್ಯಶ್ಚ ಯವಕ್ರೀತಸ್ತ್ರಿತಸ್ತಥಾ ॥೬॥

ಅತ್ರಿ, ವಸಿಷ್ಠ, ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಾ, ಗೌತಮ, ಅಗಸ್ತ್ಯ, ಸುಮತಿ, ಸ್ಥಾಯು, ವಿಶ್ವಾಮಿತ್ರ, ಸ್ಥೂಲಶಿರಾ, ಸಂವರ್ತ, ಪ್ರಮತಿ, ದಮ, ಶುಕ್ರ, ಗುರು, ವ್ಯಾಸ, ಚ್ಯವನ, ಕಾಶ್ಯಪ, ಧ್ರುವ, ದುರ್ವಾಸ, ಜಮದಗ್ನಿ, ಮಾರ್ಕಂಡೇಯ, ಗಾಲವ, ಭರದ್ವಾಜ, ರೈಭ್ಯ, ಯವಕ್ರೀತ, ತ್ರಿತ;

ಸ್ಥೂಲಾಕ್ಷಃ ಶಕಲಾಕ್ಷಶ್ಚ ಕಣ್ವೋ ಮೇಧಾತಿಥಿಃ ಕೃಶಃ ।
ನಾರದಃ ಪರ್ವತಶ್ಚೈವ ಸುಧನ್ವಾಥೈಕತೋ ದ್ವಿತಃ ॥೭॥

ನಿತಂಭೂರ್ಭುವನೋ ಧೌಮ್ಯಃ ಶತಾನಂದೋಽಕೃತವ್ರಣಃ ।
ಜಾಮದಗ್ನ್ಯಸ್ತಥಾ ರಾಮಃ ಕಾಮ್ಯಶ್ಚೇತ್ಯೇವಮಾದಯಃ ।
ಸಮಾಗತಾ ಮಹಾತ್ಮಾನೋ ಭೀಷ್ಮಂ ದ್ರಷ್ಟುಂ ಮಹರ್ಷಯಃ ॥೮॥

ಸ್ಥೂಲಾಕ್ಷ, ಶಕಲಾಕ್ಷ, ಕಣ್ವ, ಮೇಧಾತಿಥಿ, ಕೃಶ, ನಾರದ, ಪರ್ವತ, ಸುಧನ್ವಾ, ಏಕತ, ದ್ವಿತ, ನಿತಂಭೂ, ಭುವನ, ಧೌಮ್ಯ, ಶತಾನಂದ, ಅಕೃತವ್ರಣ, ಜಮದಗ್ನಿ

ಪುತ್ರರಾದ ಪರಶುರಾಮ, ಕಾಮ್ಯ - ಇವರೇ ಮೊದಲಾದ ಮಹಾತ್ಮರಾದ ಮಹರ್ಷಿಗಳು ಭೀಷ್ಮರನ್ನು ನೋಡಲು ಬಂದರು.

ತೇಷಾಂ ಮಹಾತ್ಮನಾಂ ಪೂಜಾಮಾಗತಾನಾಂ ಯುಧಿಷ್ಠಿರಃ ।
ಭ್ರಾತೃಭಿಃ ಸಹಿತಶ್ಚಕ್ರೇ ಯಥಾವದನುಪೂರ್ವಶಃ ॥೯॥

ಯುಧಿಷ್ಠಿರನು ಸಹೋದರರಿಂದ ಸಹಿತನಾಗಿ ಆಗತರಾದ ಆ ಮಹಾತ್ಮರಿಗೆ ಕ್ರಮವಾಗಿ ಪೂಜೆಯನ್ನು ಮಾಡಿದನು.

ತೇ ಪೂಜಿತಾಃ ಸುಖಾಸೀನಾಃ ಕಥಾಶ್ಚಕ್ರುರ್ಮಹರ್ಷಯಃ ।
ಭೀಷ್ಮಾಶ್ರಿತಾಃ ಸುಮಧುರಾಃ ಸರ್ವೇಂದ್ರಿಯಮನೋಹರಾಃ ॥೧೦॥

ಪೂಜಿತರಾದ ಆ ಮಹರ್ಷಿಗಳು ಸುಖವಾಗಿ ಕುಳಿತು ಭೀಷ್ಮರಿಗೆ ಸಂಬಂಧಿಸಿದ ಮಧುರವಾದ, ಸರ್ವೇಂದ್ರಿಯ ಮನೋಹರವಾದ ಕಥೆಗಳನ್ನು ಹೇಳಿದರು.

ಭೀಷ್ಮಸ್ತೇಷಾಂ ಕಥಾಃ ಶ್ರುತ್ವಾ ಋಷೀಣಾಂ ಭಾವಿತಾತ್ಮನಾಮ್ ।
ಮೇನೇ ದಿವಿಸ್ಥಮಾತ್ಮಾನಂ ತುಷ್ಟಾವ ಪರಮಯಾ ಯುತಃ ॥೧೧॥

ಭೀಷ್ಮರು ಪೂತಾತ್ಮರಾದ ಆ ಋಷಿಗಳ ಮಾತನ್ನು ಕೇಳಿ, ಬಹಳ ಸಂತೋಷದಿಂದ ಕೂಡಿದವರಾಗಿ ತಾವು ಸ್ವರ್ಗದಲ್ಲಿದ್ದೇವೆಂದು ತಿಳಿದರು.

ತತಸ್ತೇ ಭೀಷ್ಮಮಾಮಂತ್ರ್ಯ ಪಾಂಡವಾಂಶ್ಚ ಮಹರ್ಷಯಃ ।
ಅಂತರ್ಧಾನಂ ಗತಾಃ ಸರ್ವೇ ಸರ್ವೇಷಾಮೇವ ಪಶ್ಯತಾಮ್ ॥೧೨॥

ಅನಂತರ ಆ ಮಹರ್ಷಿಗಳು ಭೀಷ್ಮರ ಮತ್ತು ಪಾಂಡವರ ಅನುಮತಿಯನ್ನು ಪಡೆದು ಎಲ್ಲರೂ ನೋಡುತ್ತಿರುವಂತೆಯೇ ಅಂತರ್ಧಾನವನ್ನು ಹೊಂದಿದರು.

ತಾನೃಷೀನ್ ಸುಮಹಾಭಾಗಾನಂತರ್ಧಾನಗತಾನಪಿ ।
ಪಾಂಡವಾಸ್ತುಷ್ಟುವುಃ ಸರ್ವೇ ಪ್ರಣೇಮುಶ್ಚ ಮುಹುರ್ಮುಹುಃ ॥೧೩॥

ಆ ಋಷಿಗಳು ಅಂತರ್ಧಾನ ಹೊಂದಿದ್ದರೂ ಪಾಂಡವರೆಲ್ಲರೂ ಅವರನ್ನು ಸ್ತೋತ್ರ ಮಾಡಿ ಪುನಃ ಪುನಃ ನಮಸ್ಕರಿಸಿದರು.

ಪ್ರಸನ್ನಮನಸಃ ಸರ್ವೇ ಗಾಂಗೇಯಂ ಕುರುಸತ್ತಮಾಃ ।
ಉಪತಸ್ಥುರ್ಯಥೋದ್ಯಂತಮಾದಿತ್ಯಂ ಮಂತ್ರಕೋವಿದಾಃ ॥೧೪॥

ಪ್ರಸನ್ನಚಿತ್ತರಾದ ಗಾಂಗೇಯರನ್ನು ಕುರುಶ್ರೇಷ್ಠರೆಲ್ಲರೂ ಮಂತ್ರಜ್ಞರು ಉದಿಸಿದ ಸೂರ್ಯನನ್ನು ಸ್ತೋತ್ರ ಮಾಡುವಂತೆ ಸ್ತೋತ್ರ ಮಾಡಿದರು.

ಪ್ರಭಾವಾತ್ ತಪಸಸ್ತೇಷಾಮೃಷೀಣಾಂ ವೀಕ್ಷ್ಯ ಪಾಂಡವಾಃ ।
ಪ್ರಕಾಶಂತೋ ದಿಶಃ ಸರ್ವಾ ವಿಸ್ಮಯಂ ಪರಮಂ ಯಯುಃ ॥೧೫॥

ಆ ಋಷಿಗಳ ತಪಸ್ಸಿನ ಪ್ರಭಾವದಿಂದ ಎಲ್ಲ ದಿಕ್ಕುಗಳೂ ಪ್ರಕಾಶಿಸುತ್ತಿರುವುದನ್ನು ನೋಡಿದ ಪಾಂಡವರು ವಿಸ್ಮಯವನ್ನು ಹೊಂದಿದರು.

ಮಹಾಭಾಗ್ಯಂ ಪರಂ ತೇಷಾಮೃಷೀಣಾಮನುಚಿಂತ್ಯ ತೇ ।
ಪಾಂಡವಾಃ ಸಹ ಭೀಷ್ಮೇಣ ಕಥಾಶ್ಚಕ್ರುಸ್ತದಾಶ್ರಯಾಃ ॥೧೬॥

ಆ ಋಷಿಗಳ ಶ್ರೇಷ್ಠವಾದ ಮಹಾಭಾಗ್ಯವನ್ನು ಚಿಂತಿಸಿ ಪಾಂಡವರು ಭೀಷ್ಮರ ಜೊತೆಯಲ್ಲಿ ಆ ಋಷಿಗಳಿಗೆ ಸಂಬಂಧಪಟ್ಟ ಕಥೆಗಳನ್ನು ಮಾತನಾಡಿದರು.

ಕಥಾಂತೇ ಶಿರಸಾ ಪಾದೌ ಸ್ಪೃಷ್ಟ್ವಾ ಭೀಷ್ಮಸ್ಯ ಪಾಂಡವಃ ।
ಧರ್ಮ್ಯಂ ಧರ್ಮಸುತಃ ಪ್ರಶ್ನಂ ಪರ್ಯಪೃಚ್ಛದ್ ಯುಧಿಷ್ಠಿರಃ ॥೧೭॥

ಕಥೆಗಳ ಕೊನೆಯಲ್ಲಿ ಪಾಂಡವನಾದ ಧರ್ಮಪುತ್ರನಾದ ಯುಧಿಷ್ಠಿರನು ಭೀಷ್ಮರ ಪಾದಗಳನ್ನು ಶಿರಸಾ ಸ್ಪರ್ಶ ಮಾಡಿ ನಮಸ್ಕರಿಸಿ ಧರ್ಮಸಂಬಂಧಿಯಾದ ಪ್ರಶ್ನೆಯನ್ನು ಕೇಳಿದನು.

ಕೇ ದೇಶಾಃ ಕೇ ಜನಪದಾ ಆಶ್ರಮಾಃ ಕೇ ಚ ಪರ್ವತಾಃ ।
ಪ್ರಕೃಷ್ಟಾಃ ಪುಣ್ಯತಃ ಕಾಶ್ಚ ಜ್ಞೇಯಾ ನದ್ಯಃ ಪಿತಾಮಹ ॥೧೮॥

ಪಿತಾಮಹನೇ, ಪುಣ್ಯವನ್ನು ಉಂಟುಮಾಡುವ ದೃಷ್ಟಿಯಿಂದ ಯಾವ ದೇಶಗಳು, ಯಾವ ರಾಜ್ಯಗಳು, ಯಾವ ಆಶ್ರಮಗಳು, ಯಾವ ಪರ್ವತಗಳು ಶ್ರೇಷ್ಠವಾದವುಗಳು? ಯಾವ ನದಿಗಳನ್ನು ಶ್ರೇಷ್ಠವಾದವುಗಳೆಂದು ತಿಳಿಯಬೇಕು?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸಿಲೋಂಛವೃತ್ತೇಃ ಸಂವಾದಂ ಸಿದ್ಧಸ್ಯ ಚ ಯುಧಿಷ್ಠಿರ ॥೧೯॥

ಭೀಷ್ಮ– ಎಲೈ ಯುಧಿಷ್ಠಿರನೇ, ಈ ವಿಷಯದಲ್ಲೂ ಸಹ ಸಿಲೋಂಛವೃತ್ತಿಯ ಒಬ್ಬ ಬ್ರಾಹ್ಮಣನಿಗೂ ಮತ್ತು ಒಬ್ಬ ಸಿದ್ಧಪುರುಷನಿಗೂ ನಡೆದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಇಮಾಂ ಕಶ್ಚಿತ್ಪರಿಕ್ರಮ್ಯ ಪೃಥಿವೀಂ ಶೈಲಭೂಷಿತಾಮ್ ।
ಅಸಕೃದ್ ದ್ವಿಪದಾಂ ಶ್ರೇಷ್ಠಃ ಶ್ರೇಷ್ಠಸ್ಯ ಗೃಹಮೇಧಿನಃ ॥೨೦॥

ಸಿಲವೃತ್ತೇರ್ಗೃಹಂ ಪ್ರಾಪ್ತಃ ಸ ತೇನ ವಿಧಿನಾರ್ಚಿತಃ ।
ಕೃತಕೃತ್ಯ ಉಪಾತಿಷ್ಠತ್ ಸಿದ್ಧಂ ತಮತಿಥಿಂ ತದಾ ॥೨೧॥

ಮನುಷ್ಯರಲ್ಲಿ ಶ್ರೇಷ್ಠನಾದ ಒಬ್ಬ ಸಿದ್ಧ ಪುರುಷನು ಪರ್ವತಭೂಷಿತವಾದ ಈ ಭೂಮಿಯನ್ನು ಅನೇಕ ಬಾರಿ ಸಂಚರಿಸಿ, ಶ್ರೇಷ್ಠನಾದ ಸಿಲೋಂಛವೃತ್ತಿಯಿಂದ ಜೀವಿಸುವ ಒಬ್ಬ ಗೃಹಸ್ಥನ ಬಳಿಗೆ ಬಂದು, ಅವನಿಂದ ವಿಧಿಗೆ ಅನುಗುಣವಾಗಿ ಪೂಜಿಸಲ್ಪಟ್ಟನು. ಆ ಸಿಲೋಂಛವೃತ್ತಿಯ ಬ್ರಾಹ್ಮಣನು ಕೃತಕೃತ್ಯನಾಗಿ ಅತಿಥಿಯಾದ ಆ ಸಿದ್ಧನನ್ನು ಓಲೈಸಿದನು.

ತೌ ಸಮೇತ್ಯ ಮಹಾತ್ಮಾನೌ ಸುಖಾಸೀನೌ ಕಥಾಃ ಶುಭಾಃ ।
ಚಕ್ರತುರ್ವೇದಸಂಬದ್ಧಾಸ್ತಚ್ಛೇಷಕೃತಲಕ್ಷಣಾಃ ॥೨೨॥

ಆ ಇಬ್ಬರು ಮಹಾತ್ಮರು ಒಟ್ಟಿಗೆ ಸುಖವಾಗಿ ಕುಳಿತು, ದೇವತೆಗಳ ಶೇಷರೂಪವಾದ ಪ್ರಸಾದವನ್ನು ಧರಿಸಿ, ವೇದಸಂಬಂಧಿಯಾದ ಶುಭವಾದ ಕಥೆಯನ್ನು ಮಾಡಿದರು.

ಸಿಲವೃತ್ತಿಃ ಕಥಾಂತೇ ತು ಸಿದ್ಧಮಾಮಂತ್ರ್ಯ ಯತ್ನತಃ ।
ಪ್ರಶ್ನಂ ಪಪ್ರಚ್ಛ ಮೇಧಾವೀ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೩॥

ಸಿಲವೃತ್ತಿಯು ಕಥೆಯ ಕೊನೆಯಲ್ಲಿ ಸಿದ್ಧನನ್ನು ಪ್ರಯತ್ನಪೂರ್ವಕವಾಗಿ ಆಮಂತ್ರಿಸಿ ನೀನು ಕೇಳುವ ಪ್ರಶ್ನೆಯನ್ನೇ ಮೇಧಾವಿಯಾದ ಅವನು ಕೇಳಿದನು.

ಸಿಲವೃತ್ತಿಃ

ಕೇ ದೇಶಾಃ ಕೇ ಜನಪದಾಃ ಕೇऽऽಶ್ರಮಾಃ ಕೇ ಚ ಪರ್ವತಾಃ ।
ಪ್ರಕೃಷ್ಟಾಃ ಪುಣ್ಯತಃ ಕಾಶ್ಚ ಜ್ಞೇಯಾ ನದ್ಯಸ್ತದುಚ್ಯತಾಮ್ ॥೨೪॥

ಸಿಲವೃತ್ತಿ– ಪುಣ್ಯವನ್ನು ಪಡೆಯುವ ಉದ್ದೇಶದಿಂದ ಯಾವ ದೇಶಗಳು, ಯಾವ ರಾಜ್ಯಗಳು, ಯಾವ ಆಶ್ರಮಗಳು, ಯಾವ ಪರ್ವತಗಳು ಶ್ರೇಷ್ಠವಾದವುಗಳು? ಯಾವ ನದಿಗಳನ್ನು ಶ್ರೇಷ್ಠವಾದವುಗಳೆಂದು ತಿಳಿಯಬೇಕೆಂದು ಹೇಳು.

ಸಿದ್ಧಃ

ತೇ ದೇಶಾಸ್ತೇ ಜನಪದಾಸ್ತೇऽऽಶ್ರಮಾಸ್ತೇ ಚ ಪರ್ವತಾಃ ।
ಯೇಷಾಂ ಭಾಗೀರಥೀ ಗಂಗಾ ಮಧ್ಯೇನೈತಿ ಸರಿದ್ವರಾ ॥೨೫॥

ಸಿದ್ಧ– ಯಾವ ದೇಶದ ಮಧ್ಯದಲ್ಲಿ ಶ್ರೇಷ್ಠ ನದಿಯಾದ ಗಂಗೆಯು ಹರಿಯುತ್ತಾಳೆಯೋ ಆ ದೇಶಗಳು, ಆ ರಾಜ್ಯಗಳು, ಆ ಆಶ್ರಮಗಳು ಮತ್ತು ಆ ಪರ್ವತಗಳು ಶ್ರೇಷ್ಠವಾದವುಗಳು.

ತಪಸಾ ಬ್ರಹ್ಮಚರ್ಯೇಣ ಯಜ್ಞೈಸ್ತ್ಯಾಗೇನ ವಾ ಪುನಃ ।
ಗತಿಂ ತಾಂ ನ ಲಭೇಜ್ಜಂತುರ್ಗಂಗಾಂ ಸಂಸೇವ್ಯ ಯಾಂ ಲಭೇತ್ ॥೨೬॥

ಗಂಗೆಯನ್ನು ಸೇವಿಸಿ ಪಡೆಯಬಹುದಾದ ಗತಿಯನ್ನು ತಪಸ್ಸಿನಿಂದಾಗಲೀ, ಬ್ರಹ್ಮಚರ್ಯದಿಂದಾಗಲೀ, ಯಜ್ಞದಿಂದಾಗಲೀ, ತ್ಯಾಗದಿಂದಾಗಲೀ ಮನುಷ್ಯನು ಪಡೆಯಲು ಸಾಧ್ಯವಿಲ್ಲ.

ಸ್ಪೃಷ್ಟಾನಿ ಯೇಷಾಂ ಗಾಂಗೇಯೈಸ್ತೋಯೈರ್ಗಾತ್ರಾಣಿ ದೇಹಿನಾಮ್ ।
ನ್ಯಸ್ತಾನಿ ನ ಪುನಸ್ತೇಷಾಂ ತ್ಯಾಗಃ ಸ್ವರ್ಗಾದ್ ವಿಧೀಯತೇ ॥೨೭॥

ಯಾರ ದೇಹಗಳು ಗಂಗೆಯ ಜಲದಿಂದ ಸ್ಪರ್ಶವನ್ನು ಹೊಂದಿ, ಗಂಗೆಯ ಜಲದಲ್ಲಿ ಇಡಲ್ಪಡುತ್ತವೆಯೋ ಅವರಿಗೆ ಎಂದೂ ಸ್ವರ್ಗ ಪರಿತ್ಯಾಗವು ಹೇಳಲ್ಪಡುವುದಿಲ್ಲ.

ಸರ್ವಾಣಿ ಯೇಷಾಂ ಗಾಂಗೇಯೈಸ್ತೋಯೈಃ ಕೃತ್ಯಾನಿ ದೇಹಿನಾಮ್ ।
ಗಾಂ ತ್ಯಕ್ತ್ವಾ ಮಾನವಾ ವಿಪ್ರ ದಿವಿ ತಿಷ್ಠಂತಿ ತೇऽಚಲಾಃ ॥೨೮॥

ಎಲೈ ಬ್ರಾಹ್ಮಣನೇ, ಯಾವ ಮನುಷ್ಯನು ತನ್ನ ಎಲ್ಲ ಕಾರ್ಯಗಳನ್ನು ಗಂಗಾ ಜಲದಿಂದಲೇ ಮಾಡುತ್ತಾನೆಯೋ ಅವನು ಭೂಮಿಯನ್ನು ತ್ಯಜಿಸಿ, ಸ್ವರ್ಗದಲ್ಲಿ ಸುಖವಾಗಿ ನೆಲೆಸುತ್ತಾನೆ.

ಪೂರ್ವೇ ವಯಸಿ ಕರ್ಮಾಣಿ ಕೃತ್ವಾ ಪಾಪಾನಿ ಯೇ ನರಾಃ ।
ಪಶ್ಚಾದ್ ಗಂಗಾಂ ನಿಷೇವಂತೇ ತೇಽಪಿ ಯಾಂತ್ಯುತ್ತಮಾಂ ಗತಿಮ್ ॥

ಯಾವ ಮನುಷ್ಯರು ಪೂರ್ವವಯಸ್ಸಿನಲ್ಲಿ ಪಾಪಕೃತ್ಯವನ್ನು ಮಾಡಿ, ಅನಂತರ ಗಂಗೆಯನ್ನು ಸೇವಿಸುತ್ತಾರೆಯೋ ಅವರೂ ಸಹ ಉತ್ತಮ ಗತಿಯನ್ನು ಹೊಂದುತ್ತಾರೆ.

ಸ್ನಾತಾನಾಂ ಶುಚಿಭಿಸ್ತೋಯೈರ್ಗಾಂಗೇಯೈಃ ಪ್ರಯತಾತ್ಮನಾಮ್ ।
ವ್ಯುಷ್ಟಿರ್ಭವತಿ ಯಾ ಪುಂಸಾಂ ನ ಸಾ ಕ್ರತುಶತೈರಪಿ ॥೩೦॥

ಗಂಗೆಯ ಶುಭ ಜಲಗಳಿಂದ ಯಾವ ಜಿತಾತ್ಮರು ಸ್ನಾನವನ್ನು ಮಾಡುತ್ತಾರೆಯೋ ಅಂತಹವರಿಗೆ ಉಂಟಾಗುವ ಪುಣ್ಯದ ಅಭಿವೃದ್ಧಿಯು ನೂರು ಯಾಗಗಳಿಂದಲೂ ಉಂಟಾಗುವುದಿಲ್ಲ.

ಯಾವದಸ್ಥಿ ಮನುಷ್ಯಸ್ಯ ಗಂಗಾತೋಯೇಷು ತಿಷ್ಠತಿ ।
ತಾವದ್ವರ್ಷಸಹಸ್ರಾಣಿ ಸ್ವರ್ಗಂ ಪ್ರಾಪ್ಯ ಮಹೀಯತೇ ॥೩೧॥

ಎಲ್ಲಿಯವರೆಗೆ ಮನುಷ್ಯನ ಅಸ್ಥಿಯು ಗಂಗಾಜಲದಲ್ಲಿ ಇರುತ್ತದೆಯೋ ಅಷ್ಟು ಸಹಸ್ರ ವರ್ಷಗಳು ಅವನು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ಅಪಹತ್ಯ ತಮಸ್ತೀವ್ರಂ ಯಥಾ ಭಾತ್ಯುದಯೇ ರವಿಃ ।
ತಥಾऽಪಹತ್ಯ ಪಾಪ್ಮಾನಂ ಭಾತಿ ಗಂಗಾಜಲೋಕ್ಷಿತಃ ॥೩೨॥

ಸೂರ್ಯನು ಉದಯಿಸುವಾಗ ತೀವ್ರವಾದ ತಮಸ್ಸನ್ನು ನಾಶಪಡಿಸಿ ಪ್ರಕಾಶಿಸುವಂತೆ ಗಂಗಾಜಲದಲ್ಲಿ ಸ್ನಾನ ಮಾಡಿದವನು ತನ್ನ ಪಾಪವನ್ನು ನಾಶಪಡಿಸಿ ಪ್ರಕಾಶಿಸುತ್ತಾನೆ.

ವಿಸೋಮಾ ಇವ ಶರ್ವರ್ಯೋ ವಿಪುಷ್ಪಾಸ್ತರವೋ ಯಥಾ ।
ತದ್ವದ್ ದೇಶಾ ದಿಶಶ್ಚೈವ ಹೀನಾ ಗಂಗಾಜಲೈಃ ಶುಭೈಃ ॥೩೩॥

ಶುಭವಾದ ಗಂಗಾಜಲದಿಂದ ರಹಿತವಾದ ದಿಕ್ಕುಗಳು ಮತ್ತು ದೇಶಗಳು ಚಂದ್ರನಿಲ್ಲದ ರಾತ್ರಿಯಂತೆ, ಪುಷ್ಪವಿಲ್ಲದ ವೃಕ್ಷಗಳಂತೆ.

ವರ್ಣಾಶ್ರಮಾ ಯಥಾ ಸರ್ವೇ ಸ್ವಧರ್ಮಜ್ಞಾನವರ್ಜಿತಾಃ ।
ಕ್ರತವಶ್ಚ ಯಥಾऽಸೋಮಾಸ್ತಥಾ ಗಂಗಾಂ ವಿನಾ ಜಗತ್ ॥೩೪॥

ಗಂಗೆ ಇಲ್ಲದ ಜಗತ್ತು ತಮ್ಮ ಧರ್ಮ ಮತ್ತು ಜ್ಞಾನಗಳಿಂದ ವರ್ಜಿತರಾದ ವರ್ಣಾಶ್ರಮಗಳಂತೆ, ಸೋಮವಿಲ್ಲದ ಯಾಗದಂತೆ.

ಯಥಾ ಹೀನಂ ನಭೋऽರ್ಕೇಣ ಭೂಃ ಶೈಲೈಃ ಖಂ ಚ ವಾಯುನಾ ।
ತಥಾ ದೇಶಾ ದಿಶಶ್ಚೈವ ಗಂಗಾಹೀನಾ ನ ಸಂಶಯಃ ॥೩೫॥

ಗಂಗಾರಹಿತವಾದ ದೇಶ ಮತ್ತು ದಿಕ್ಕುಗಳು ಸೂರ್ಯನಿಲ್ಲದ ಆಕಾಶದಂತೆ, ಪರ್ವತವಿಲ್ಲದ ಭೂಮಿಯಂತೆ ಮತ್ತು ವಾಯುವಿಲ್ಲದ ಅಂತರಿಕ್ಷದಂತೆ. ಇದರಲ್ಲಿ ಸಂಶಯವಿಲ್ಲ.

ತ್ರಿಷು ಲೋಕೇಷು ಯೇ ಕೇಚಿತ್ಪ್ರಾಣಿನಃ ಸರ್ವ ಏವ ತೇ ।
ತರ್ಪ್ಯಮಾಣಾಃ ಪರಾಂ ತೃಪ್ತಿಂ ಯಾಂತಿ ಗಂಗಾಜಲೈಃ ಶುಭೈಃ ॥೩೬॥

ಮೂರು ಲೋಕಗಳಲ್ಲಿ ಯಾವ ಪ್ರಾಣಿಗಳಿವೆಯೋ ಅವುಗಳಿಗೆ ಶುಭವಾದ ಗಂಗಾ ಜಲದಿಂದ ತರ್ಪಣವನ್ನು ಕೊಟ್ಟರೆ ಶ್ರೇಷ್ಠವಾದ ತೃಪ್ತಿಯನ್ನು ಹೊಂದುತ್ತವೆ.

ಅನ್ಯೇ ಚ ದೇವಾ ಮುನಯಃ ಪ್ರೇತಾನಿ ಪಿತೃಭಿಃ ಸಹ ।
ತರ್ಪಿತಾಸ್ತೃಪ್ತಿಮಾಯಾಂತಿ ತ್ರಿಷು ಲೋಕೇಷು ಸರ್ವಶಃ ॥೩೭॥

ಮೂರು ಲೋಕಗಳಲ್ಲಿರುವ ಎಲ್ಲ ದೇವತೆಗಳು, ಋಷಿಗಳು, ಪಿತೃಗಳು ಮತ್ತು ಪ್ರೇತಗಳು ಗಂಗಾಜಲದಿಂದ ತೃಪ್ತಿಯನ್ನು ಹೊಂದುತ್ತಾರೆ.

ಯಸ್ತು ಸೂರ್ಯೇಣ ನಿಷ್ಪಪ್ತಂ ಗಾಂಗೇಯಂ ಪಿಬತೇ ಜಲಮ್ ।
ಗವಾಂ ನಿರ್ಹಾರನಿರ್ಮುಕ್ತಾದ್ಯಾವಕಾತ್ ತದ್ ವಿಶಿಷ್ಯತೇ ॥೩೮॥

ಯಾವನು ಸೂರ್ಯಕಿರಣಗಳು ಬಿದ್ದ ಗಂಗಾಜಲವನ್ನು ಪಾನ ಮಾಡುತ್ತಾನೆಯೋ ಅವನು ಗೋಮಯದಲ್ಲಿ ಬಂದ ಯವ(ಗೋಧಿ)ಗಳನ್ನು ಉಪಯೋಗಿಸಿ ವ್ರತವನ್ನು ಮಾಡುವವನಿಗಿಂತ ಶ್ರೇಷ್ಠವಾದ ಪುಣ್ಯವನ್ನು ಪಡೆಯುತ್ತಾನೆ.

ಇಂದುವ್ರತಸಹಸ್ರಂ ತು ಚರೇದ್ ಯಃ ಕಾಯಶೋಧನಮ್ ।
ಪಿಬೇದ್ ಯಶ್ಚಾಪಿ ಗಂಗಾಂಭಃ ಸಮೌ ಸ್ಯಾತಾಂ ನ ವಾ ಸಮೌ ॥೩೯॥

ಒಬ್ಬನು ದೇಹಶೋಧನೆಗಾಗಿ ಸಹಸ್ರ ಚಾಂದ್ರಾಯಣವನ್ನು ಮಾಡಿದರೆ, ಇನ್ನೊಬ್ಬನು ಗಂಗಾಜಲವನ್ನು ಕುಡಿದರೆ ಅವರಿಬ್ಬರೂ ಸಮರಾಗಬಹುದು ಅಥವಾ ಆಗಲಾರರು.

ತಿಷ್ಠೇದ್ ಯುಗಸಹಸ್ರಂ ತು ಪಾದೇನೈಕೇನ ಯಃ ಪುಮಾನ್ ।
ಮಾಸಮೇಕಂ ತು ಗಂಗಾಯಾಂ ಸಮೌ ಸ್ಯಾತಾಂ ನ ವಾ ಸಮೌ ॥೪೦॥

ಒಬ್ಬನು ಸಹಸ್ರ ಯುಗಗಳ ಕಾಲ ಒಂದು ಪಾದದ ಮೇಲೆ ನಿಂತು ತಪಸ್ಸನ್ನು ಮಾಡಿದರೆ, ಇನ್ನೊಬ್ಬನು ಒಂದು ತಿಂಗಳ ಕಾಲ ಗಂಗೆಯಲ್ಲಿ ನಿಂತರೆ ಅವರಿಬ್ಬರೂ ಸಮರಾಗಬಹುದು ಅಥವಾ ಇಲ್ಲದಿರಬಹುದು.

ಲಂಬೇತಾವಾಕ್ಶಿರಾ ಯಸ್ತು ಯುಗಾನಾಮಯುತಂ ಪುಮಾನ್ ।
ತಿಷ್ಠೇದ್ ಯಥೇಷ್ಟಂ ಯಶ್ಚಾಪಿ ಗಂಗಾಯಾಂ ಸ ವಿಶಿಷ್ಯತೇ ॥೪೧॥

ಹತ್ತು ಸಾವಿರ ವರ್ಷಗಳ ಕಾಲ ಒಬ್ಬನು ತಲೆಕೆಳಗಾಗಿ ನಿಂತು ತಪಸ್ಸನ್ನು ಮಾಡಿದರೆ ಇನ್ನೊಬ್ಬನು ಗಂಗೆಯಲ್ಲಿ ತನ್ನ ಮನಸ್ಸಿಗೆ ಬಂದಂತೆ ನಿಂತರೆ ಗಂಗೆಯಲ್ಲಿ ನಿಂತವನೇ ಅವರಲ್ಲಿ ಶ್ರೇಷ್ಠನಾಗುತ್ತಾನೆ.

ಅಗ್ನೌ ಪ್ರಾಸ್ತಂ ಪ್ರದೂಯೇತ ಯಥಾ ತೂಲಂ ದ್ವಿಜೋತ್ತಮ ।
ತಥಾ ಗಂಗಾವಗಾಢಸ್ಯ ಸರ್ವಂ ಪಾಪಂ ಪ್ರದೂಯತೇ ॥೪೨॥

ಎಲೈ ದ್ವಿಜೋತ್ತಮನೇ, ಅಗ್ನಿಯಲ್ಲಿ ಎಸೆದ ಹತ್ತಿಯು ನಾಶ ಹೊಂದುವಂತೆ ಗಂಗಾಜಲದಲ್ಲಿ ಮುಳುಗಿದವನ ಎಲ್ಲ ಪಾಪಗಳೂ ನಾಶವನ್ನು ಹೊಂದುತ್ತವೆ.

ಭೂತಾನಾಮಿಹ ಸರ್ವೇಷಾಂ ದುಃಖೋಪಹತಚೇತಸಾಮ್ ।
ಗತಿಮನ್ವೇಷಮಾಣಾನಾಂ ನ ಗಂಗಾಸದೃಶೀ ಗತಿಃ ॥೪೩॥

ದುಃಖದಿಂದ ಪೀಡಿತರಾಗಿ ಸದ್ಗತಿಯನ್ನು ಹುಡುಕುವ ಎಲ್ಲ ಪ್ರಾಣಿಗಳಿಗೆ ಗಂಗಾ ಸದೃಶವಾದ ಗತಿಯು ಇನ್ನೊಂದು ಇಲ್ಲ.

ಭವಂತಿ ನಿರ್ವಿಷಾಃ ಸರ್ಪಾ ಯಥಾ ತಾರ್ಕ್ಷ್ಯಸ್ಯ ದರ್ಶನಾತ್ ।
ಗಂಗಾಯಾ ದರ್ಶನಾತ್ ತದ್ವತ್ ಸರ್ವಪಾಪೈಃ ಪ್ರಮುಚ್ಯತೇ ॥೪೪॥

ಗರುಡನನ್ನು ನೋಡಿದ ತಕ್ಷಣ ಹೇಗೆ ಸರ್ಪಗಳು ತಮ್ಮ ವಿಷವನ್ನು ಕಳೆದುಕೊಳ್ಳುತ್ತವೆಯೋ ಅದರಂತೆ ಗಂಗೆಯ ದರ್ಶನದಿಂದ ಮನುಷ್ಯನು ಸರ್ವ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ಅಪ್ರತಿಷ್ಠಾಶ್ಚ ಯೇ ಕೇಚಿದಧರ್ಮಶರಣಾಶ್ಚ ಯೇ ।
ತೇಷಾಂ ಪ್ರತಿಷ್ಠಾ ಗಂಗೇಹ ಶರಣಂ ಶರ್ಮ ವರ್ಮ ಚ ॥೪೫॥

ಪ್ರಪಂಚದಲ್ಲಿ ಯಾರಿಗೆ ನೆಲೆ ಇಲ್ಲವೋ, ಯಾರು ಅಧರ್ಮ ಪರಾಯಣರಾಗಿರುತ್ತಾರೆಯೋ ಅವರಿಗೆ ಈ ಲೋಕದಲ್ಲಿ ಗಂಗೆಯೇ ನೆಲೆ, ಗಂಗೆಯೇ ಆಶ್ರಯ, ಗಂಗೆಯೇ ಸುಖ, ಗಂಗೆಯೇ ಕವಚ.

ಪ್ರಕೃಷ್ಟೈರಶುಭೈರ್ಗ್ರಸ್ತಾನನೇಕೈಃ ಪುರುಷಾಧಮಾನ್ ।
ಪತತೋ ನರಕೇ ಗಂಗಾ ಸಂಶ್ರಿತಾನ್ ಪ್ರೇತ್ಯ ತಾರಯೇತ್ ॥೪೬॥

ಅನೇಕ ಅಶುಭ ಕರ್ಮಗಳನ್ನು ಮಾಡಿ ನರಕದಲ್ಲಿ ಬೀಳಲಿರುವ ಪುರುಷಾಧಮನಿಂದ ಗಂಗೆಯು ಸೇವಿಸಲ್ಪಟ್ಟರೆ ಅವಳು ಅವನನ್ನು ನರಕದಿಂದ ದಾಟಿಸುತ್ತಾಳೆ.

ತೇ ಸಂವಿಭಕ್ತಾ ಮುನಿಭಿರ್ನೂನಂ ದೇವೈಃ ಸವಾಸವೈಃ ।
ಯೇऽಭಿಗಚ್ಛಂತಿ ಸತತಂ ಗಂಗಾಮಭಿಗತಾಂ ಸುರೈಃ ॥೪೭॥

ದೇವತೆಗಳಿಂದ ಸೇವಿಸಲ್ಪಡುವ ಗಂಗೆಯನ್ನು ಯಾರು ನಿತ್ಯವೂ ಹೋಗಿ ಸ್ನಾನಾದಿಗಳಿಂದ ಸೇವಿಸುತ್ತಾರೆಯೋ ಅವರು ಮರಣವನ್ನು ಹೊಂದಿದ ಮೇಲೆ ಇಂದ್ರಾದಿ ದೇವತೆಗಳಿಂದಲೂ, ಋಷಿಗಳಿಂದಲೂ ಕೂಡಿ ಸುಖಗಳನ್ನು ಹಂಚಿಕೊಂಡು ಅನುಭವಿಸುತ್ತಾರೆ.

ವಿನಯಾಚಾರಹೀನಾಶ್ಚ ಅಶಿವಾಶ್ಚ ನರಾಧಮಾಃ ।
ತೇ ಭವಂತಿ ಶಿವಾ ವಿಪ್ರ ಯೇ ವೈ ಗಂಗಾಂ ಸಮಾಶ್ರಿತಾಃ ॥೪೮॥

ಎಲೈ ಬ್ರಾಹ್ಮಣನೇ, ವಿನಯಾಚಾರ ರಹಿತರಾದವರೂ, ಅಮಂಗಳರಾದ ನರಾಧಮರೂ ಗಂಗೆಯನ್ನು ಚೆನ್ನಾಗಿ ಆಶ್ರಯಿಸಿದರೆ ಅವರು ಮಂಗಳ ಸ್ವರೂಪರಾಗುತ್ತಾರೆ.

ಯಥಾ ಸುರಾಣಾಮಮೃತಂ ಪಿತೃಣಾಂ ಚ ಯಥಾ ಸ್ವಧಾ ।
ಸುಧಾ ಯಥಾ ಚ ನಾಗಾನಾಂ ತಥಾ ಗಂಗಾಜಲಂ ನೃಣಾಮ್ ॥೪೯॥

ದೇವತೆಗಳಿಗೆ ಅಮೃತವಿದ್ದಂತೆ, ಪಿತೃಗಳಿಗೆ ಸ್ವಧೆ ಇದ್ದಂತೆ, ನಾಗಗಳಿಗೆ ಸುಧೆಯಿದ್ದಂತೆ ಮನುಷ್ಯರಿಗೆ ಗಂಗಾಜಲವಿದೆ.

ಉಪಾಸತೇ ಯಥಾ ಬಾಲಾ ಮಾತರಂ ಕ್ಷುಧಯಾऽರ್ದಿತಾಃ ।
ಶ್ರೇಯಸ್ಕಾಮಾಸ್ತಥಾ ಗಂಗಾಮುಪಾಸಂತೀಹ ದೇಹಿನಃ ॥೫೦॥

ಹಸಿವಿನಿಂದ ಬಳಲುವ ಮಕ್ಕಳು ತಾಯಿಯನ್ನು ಆಶ್ರಯಿಸುವಂತೆ ಈ ಲೋಕದಲ್ಲಿ ಶ್ರೇಯಸ್ಸನ್ನು ಬಯಸುವ ಮಾನವರು ಗಂಗೆಯನ್ನು ಆಶ್ರಯಿಸುತ್ತಾರೆ.

ಸ್ವಾಯಂಭುವಂ ಯಥಾ ಸ್ಥಾನಂ ಸರ್ವೇಷಾಂ ಶ್ರೇಷ್ಠಮುಚ್ಯತೇ ।
ಸ್ನಾತಾನಾಂ ಸರಿತಾಂ ಶ್ರೇಷ್ಠಾ ಗಂಗಾ ತದ್ವದಿಹೋಚ್ಯತೇ ॥೫೧॥

ಬ್ರಹ್ಮದೇವರ ಸ್ಥಾನವು ಹೇಗೆ ಎಲ್ಲಕ್ಕಿಂತಲೂ ಶ್ರೇಷ್ಠವೆಂದು ಹೇಳಲ್ಪಡುತ್ತದೆಯೋ ಹಾಗೆಯೇ ಸ್ನಾನವನ್ನು ಮಾಡುವವರಿಗೆ ಗಂಗೆಯು ಈ ಲೋಕದಲ್ಲಿ ಎಲ್ಲ ನದಿಗಳಿಗಿಂತಲೂ ಶ್ರೇಷ್ಠವಾದುದೆಂದು ಹೇಳಲ್ಪಡುತ್ತದೆ.

ಯಥೋಪಜೀವಿನಾಂ ಧೇನುರ್ದೇವಾದೀನಾಂ ಧರಾ ಸ್ಮೃತಾ ।
ತಥೋಪಜೀವಿನಾಂ ಗಂಗಾ ಸರ್ವಪ್ರಾಣಭೃತಾಮಿಹ ॥೫೨॥

ಹೇಗೆ ಹವಿಸ್ಸನ್ನು ಉಪಜೀವಿಸುವ ದೇವತೆಗಳಿಗೆ ಧೇನುವು ಧಾರಣ-ಪೋಷಣೆಯನ್ನು ಮಾಡುತ್ತದೆಯೋ ಹಾಗೆ ತನ್ನನ್ನು ಆಶ್ರಯಿಸುವ ಸರ್ವಪ್ರಾಣಿಗಳಿಗೆ ಗಂಗೆಯು ಧಾರಣ-ಪೋಷಣೆಯನ್ನು ಮಾಡುತ್ತಾಳೆ.

ದೇವಾಃ ಸೋಮಾರ್ಕಸಂಸ್ಥಾನಿ ಯಥಾ ಸತ್ರಾದಿಭಿರ್ಮಖೈಃ ।
ಅಮೃತಾನ್ಯುಪಜೀವಂತಿ ತಥಾ ಗಂಗಾಜಲಂ ನರಾಃ ॥೫೩॥

ದೇವತೆಗಳು ಸತ್ರವೇ ಮೊದಲಾದ ಯಾಗಗಳಿಂದ ಸೂರ್ಯ-ಚಂದ್ರರಲ್ಲಿರುವ ಅಮೃತವನ್ನು ಉಪಜೀವಿಸುವಂತೆ ಮನುಷ್ಯರು ಗಂಗಾಜಲವನ್ನು ಉಪಜೀವಿಸುತ್ತಾರೆ.

ಜಾಹ್ನವೀಪುಳಿನೋತ್ಥಾಭಿಃ ಸಿಕತಾಭಿಃ ಸಮುಕ್ಷಿತಃ ।
ಮನ್ಯತೇ ಪುರುಷೋ೭೭ತ್ಮಾನಂ ದಿವಿಷ್ಠಮಿವ ಶೋಭಿತಮ್ ॥೫೪॥

ಜಾಹ್ನವಿಯ ತೀರದ ಮರಳಿನ ಕಣಗಳು ತನ್ನ ಶರೀರಕ್ಕೆ ಮೆತ್ತಿಕೊಂಡ ಪುರುಷನು ತಾನು ಸ್ವರ್ಗದಲ್ಲಿದ್ದೇನೆಂದು ತಿಳಿದು ಶೋಭಿಸುತ್ತಾನೆ.

ಜಾಹ್ನವೀತೀರಸಂಭೂತಾಂ ಮೃದಂ ಮೂರ್ಧ್ನಾ ಬಿಭರ್ತಿ ಯಃ ।
ಬಿಭರ್ತಿ ರೂಪಂ ಸೋ೭ರ್ಕಸ್ಯ ತಮೋನಾಶಾತ್ ಸುನಿರ್ಮಲಮ್ ॥

ಜಾಹ್ನವೀತೀರದ ಮೃತ್ತಿಕೆಯನ್ನು ತಲೆಯ ಮೇಲೆ ಧರಿಸುವವನು ತನ್ನ ಅಜ್ಞಾನವನ್ನು ಕಳೆದುಕೊಂಡು ಸುನಿರ್ಮಲರೂಪವನ್ನು ಧರಿಸಿ ಸೂರ್ಯನ ಕಾಂತಿಯನ್ನು ಹೊಂದುತ್ತಾನೆ.

ಗಂಗೋರ್ಮಿಭಿರಥೋ ದಿಗ್ಧಃ ಪುರುಷಂ ಪವನೋ ಯದಾ ।
ಸ್ಪೃಶತೇ ಸೋ೭ಪಿ ಪಾಪ್ಮಾನಂ ಸದ್ಯ ಏವಾಪಮಾರ್ಜತಿ ॥೫೬॥

ಗಂಗೆಯ ಜಲದ ಕಣಗಳಿಂದ ಕೂಡಿದ ವಾಯುವು ಯಾವನ ದೇಹವನ್ನು ಸ್ಪರ್ಶ ಮಾಡುತ್ತದೆಯೋ ಅವನೂ ಸಹ ತಕ್ಷಣವೇ ತನ್ನ ಪಾಪಗಳನ್ನು ಕಳೆದುಕೊಳ್ಳುತ್ತಾನೆ.

ವ್ಯಸನೈರಭಿತಪ್ತಸ್ಯ ನರಸ್ಯ ವಿನಶಿಷ್ಯತಃ ।
ಗಂಗಾದರ್ಶನಜಾ ಪ್ರೀತಿರ್ವ್ಯಸನಾನ್ಯಪಕರ್ಷತಿ ॥೫೭॥

ವ್ಯಸನಗಳಿಗೆ ತುತ್ತಾಗಿ ವಿನಾಶವನ್ನು ಹೊಂದಿರುವ ಮನುಷ್ಯನಿಗೆ ಗಂಗೆಯ ದರ್ಶನದಿಂದ ಉಂಟಾದ ಸಂತೋಷವು ವ್ಯಸನಗಳನ್ನು ನಾಶಮಾಡುತ್ತದೆ.

ಹಂಸಾರಾವೈಃ ಕೋಕರವೈ ರವೈರನ್ಯೈಶ್ಚ ಪಕ್ಷಿಣಾಮ್ ।
ಪಸ್ಪರ್ಧ ಗಂಗಾ ಗಂಧರ್ವಾನ್ ಪುಳಿನೈಶ್ಚ ಶಿಲೋಚ್ಚಯಾನ್ ॥೫೮॥

ಗಂಗೆಯು ಹಂಸಧ್ವನಿಗಳಿಂದಲೂ, ಕೋಕಪಕ್ಷಿಯ ಧ್ವನಿಗಳಿಂದಲೂ ಮತ್ತು ಉಳಿದ ಪಕ್ಷಿಯ ಧ್ವನಿಗಳಿಂದಲೂ ಗಂಧರ್ವರ ಜೊತೆ ಸ್ಪರ್ಧೆಯನ್ನು ಮಾಡುತ್ತದೆ. ತನ್ನ ಮರಳುಗಳಿಂದ ಪರ್ವತಗಳ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡುತ್ತದೆ.

ಹಂಸಾದಿಭಿಃ ಸುಬಹುಭಿರ್ವಿವಿಧೈಃ ಪಕ್ಷಿಭಿರ್ವೃತಾಮ್ ।
ಗಂಗಾಂ ಗೋಕುಲಸಂಬಾಧಾಂ ದೃಷ್ಟ್ವಾ ಸ್ವರ್ಗೋಽಪಿ ವಿಸ್ಮೃತಃ ॥೫೯॥

ಅನೇಕ ಹಂಸಾದಿ ಪಕ್ಷಿಗಳಿಂದ ಕೂಡಿದ, ತೀರದಲ್ಲಿ ಮೇಯುವ ಗೋವುಗಳ ಸಮೂಹದಿಂದ ನಿಬಿಡವಾದ ಗಂಗೆಯನ್ನು ನೋಡಿ ಸ್ವರ್ಗವೂ ಮರೆತುಹೋಗುತ್ತದೆ.

ನ ಸಾ ಪ್ರೀತಿರ್ದಿವಿಷ್ಠಸ್ಯ ಸರ್ವಕಾಮಾನುಪಾಶ್ನತಃ ।
ಅಭವದ್ ಯಾ ಪರಾ ಪ್ರೀತಿರ್ಗಂಗಾಯಾಃ ಪುಲಿನೇ ನೃಣಾಮ್ ॥೬೦॥

ಗಂಗೆಯ ತೀರದ ಮರುಳುಗಳಲ್ಲಿ ಮನುಷ್ಯರಿಗೆ ಯಾವ ಶ್ರೇಷ್ಠವಾದ ಸಂತೋಷ ಉಂಟಾಗುತ್ತದೆಯೋ ಅಂತಹ ಸಂತೋಷವು ಸ್ವರ್ಗದಲ್ಲಿ ಎಲ್ಲ ಕಾಮಗಳನ್ನು ಅನುಭವಿಸುವವನಿಗೂ ಉಂಟಾಗುವುದಿಲ್ಲ.

ವಾಙ್ಮನಃಕರ್ಮಜೈರ್ಗ್ರಸ್ತಃ ಪಾಪೈರಪಿ ಪುಮಾನಿಹ ।
ವೀಕ್ಷ್ಯ ಗಂಗಾಂ ಭವೇತ್ಪೂತಸ್ತತ್ರ ಮೇ ನಾಸ್ತಿ ಸಂಶಯಃ ॥೬೧॥

ವಾಗೀಂದ್ರಿಯದಿಂದ, ಮನಸ್ಸಿನಿಂದ ಮತ್ತು ಕರ್ಮಗಳಿಂದ ಉಂಟಾದ ಪಾಪಗಳಿಂದ ಗ್ರಸ್ತನಾದ ಪುರುಷನು ಗಂಗೆಯನ್ನು ನೋಡುವುದರಿಂದಲೇ ಪವಿತ್ರನಾಗುತ್ತಾನೆ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಸಪ್ತಾವರಾನ್ ಸಪ್ತ ಪರಾನ್ ಪಿತೄಂಸ್ತೇಭ್ಯಶ್ಚ ಯೇ ಪರೇ ।
ಪುಮಾಂಸ್ತಾರಯತೇ ಗಂಗಾಂ ವೀಕ್ಷ್ಯ ಸ್ಪೃಷ್ಟ್ವಾವಗಾಹ್ಯ ಚ ॥೬೨॥

ಗಂಗೆಯನ್ನು ನೋಡುವ, ಸ್ಪರ್ಶಿಸುವ, ಗಂಗೆಯಲ್ಲಿ ಸ್ನಾನವನ್ನು ಮಾಡುವ ಪುರುಷನು ತನ್ನ ಹಿಂದಿನ ಏಳು ತಲೆಯ ಪಿತೃಗಳನ್ನು, ಮುಂದಿನ ಏಳು ತಲೆಯ ಪಿತೃಗಳನ್ನು ಮತ್ತು ಅವರಿಂದ ಆಚೆಯವರನ್ನೂ ನರಕದಿಂದ ದಾಟಿಸುತ್ತಾನೆ.

ಶ್ರುತಾऽಭಿಲಷಿತಾ ದೃಷ್ಟಾ ಸ್ಪೃಷ್ಟಾ ಪೀತಾವಗಾಹಿತಾ ।
ಗಂಗಾ ತಾರಯತೇ ನ್ಯಾಣಾಮುಭೌ ವಂಶೌ ವಿಶೇಷತಃ ॥೬೩॥

ಗಂಗೆಯ ಮಹಿಮೆಯನ್ನು ಕೇಳಿದರೆ, ಗಂಗೆಯನ್ನು ಆಶಿಸಿದರೆ, ನೋಡಿದರೆ, ಸ್ಪರ್ಶ ಮಾಡಿದರೆ, ಗಂಗಾಜಲವನ್ನು ಪಾನ ಮಾಡಿದರೆ, ಗಂಗೆಯಲ್ಲಿ ಸ್ನಾನ ಮಾಡಿದರೆ ಗಂಗೆಯು ಆ ಮನುಷ್ಯನ ತಂದೆ-ತಾಯಿಯ ಎರಡು ವಂಶಗಳನ್ನೂ ವಿಶೇಷವಾಗಿ ಸಂಕಟದಿಂದ ಪಾರುಮಾಡುತ್ತಾಳೆ.

ದರ್ಶನಾತ್ ಸ್ಪರ್ಶನಾತ್ ಪಾನಾತ್ ತಥಾ ಗಂಗೇತಿ ಕೀರ್ತನಾತ್ ।
ಪುನಾತ್ಯಪುಣ್ಯಾನ್ ಪುರುಷಾನ್ ಶತಶೋऽಥ ಸಹಸ್ರಶಃ ॥೬೪॥

ದರ್ಶನದಿಂದ, ಸ್ಪರ್ಶದಿಂದ, ಪಾನದಿಂದ, ಗಂಗಾ ಎಂದು ಹೇಳುವುದರಿಂದ ಗಂಗೆಯು ಪಾಪಿಗಳಾದ ಪುರುಷರನ್ನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಪವಿತ್ರೀಕರಿಸುತ್ತಾಳೆ.

ಯ ಇಚ್ಛೇತ್ಸಫಲಂ ಜನ್ಮ ಜೀವಿತಂ ಶ್ರುತಮೇವ ಚ ।
ಸ ಪಿತ್ರ್ಯಂಸ್ತರ್ಪಯೇದ್ ಗಂಗಾಮಭಿಗಮ್ಯ ಸುರಾಂಸ್ತಥಾ ॥೬೫॥

ಯಾವನು ತನ್ನ ಜನ್ಮವು, ಜೀವನವು ಮತ್ತು ವಿದ್ಯೆಯು ಸಫಲವಾಗಬೇಕೆಂದು ಬಯಸುತ್ತಾನೆಯೋ ಅವನು ಗಂಗೆಗೆ ಹೋಗಿ ಪಿತೃಗಳಿಗೆ ಮತ್ತು ದೇವತೆಗಳಿಗೆ ತರ್ಪಣವನ್ನು ಕೊಡಬೇಕು.

ನ ಸುತೈರ್ನ ಚ ವಿತ್ತೇನ ಕರ್ಮಣಾ ನ ಚ ತತ್ಫಲಮ್ ।
ಪ್ರಾಪ್ನುಯಾತ್ಪುರುಷೋऽತ್ಯಂತಂ ಗಂಗಾಂ ಪ್ರಾಪ್ಯ ಯದಾಪ್ನುಯಾತ್ ॥

ಪುರುಷನು ಗಂಗೆಗೆ ಹೋಗುವುದರಿಂದ ಯಾವ ಪುಣ್ಯಫಲವನ್ನು ಸಂಪಾದಿಸುತ್ತಾನೆಯೋ ಅದನ್ನು ಪುತ್ರರಿಂದಾಗಲೀ, ಧನದಿಂದಾಗಲೀ, ಸತ್ಕರ್ಮದಿಂದಾಗಲೀ ಪಡೆಯಲಾರ.

ಜಾತ್ಯಂಧೈರಿಹ ತುಲ್ಯಾಸ್ತೇ ಮೃತೈಃ ಪಂಗುಭಿರೇವ ಚ ।
ಸಮರ್ಥಾ ಯೇ ನ ಪಶ್ಯಂತಿ ಗಂಗಾಂ ಪುಣ್ಯಜಲಾಂ ಶಿವಾಮ್ ॥೬೭॥

ಸಮರ್ಥರಾದ ಯಾರು ಪವಿತ್ರವಾದ ಜಲವುಳ್ಳ ಮಂಗಳಪ್ರದಳಾದ ಗಂಗೆಯನ್ನು ನೋಡುವುದಿಲ್ಲವೋ ಅವರು ಹುಟ್ಟುಕುರುಡರಿಗೆ, ಮೃತರಾದವರಿಗೆ ಮತ್ತು ಕುಂಟರಿಗೆ ಸಮರಾದವರು.

ಭೂತಭವ್ಯಭವಿಷ್ಯಜ್ಞೈರ್ಮಹರ್ಷಿಭಿರುಪಸ್ಥಿತಾಮ್ ।
ದೇವೈಃ ಸೇಂದ್ರೈಶ್ಚ ಕೋ ಗಂಗಾಂ ನೋಪಸೇವೇತ ಮಾನವಃ ॥೬೮॥

ಭೂತ-ಭವ್ಯ-ವರ್ತಮಾನ ಕಾಲಗಳನ್ನು ತಿಳಿದ ಮಹರ್ಷಿಗಳಿಂದ ಮತ್ತು ಇಂದ್ರಾದಿ ದೇವತೆಗಳಿಂದ ಸೇವಿತವಾದ ಗಂಗೆಯನ್ನು ಯಾವ ಮನುಷ್ಯನು ಸೇವಿಸಲಾರ?

ವಾನಪ್ರಸ್ಥೈರ್ಗೃಹಸ್ಥೈಶ್ಚ ಯತಿಭಿರ್ಬ್ರಹ್ಮಚಾರಿಭಿಃ ।
ವಿದ್ಯಾವದ್ಭಿಃ ಶ್ರಿತಾಂ ಗಂಗಾಂ ಪುಮಾನ್ ಕೋ ನಾಮ ನಾಶ್ರಯೇತ್ ॥

ವಿದ್ಯಾವಂತರಾದ ಬ್ರಹ್ಮಚಾರಿಗಳಿಂದಲೂ, ಗೃಹಸ್ಥರಿಂದಲೂ, ವಾನಪ್ರಸ್ಥರಿಂದಲೂ ಮತ್ತು ಯತಿಗಳಿಂದಲೂ ಸೇವಿತವಾದ ಗಂಗೆಯನ್ನು ಯಾವ ಪುರುಷನು ಆಶ್ರಯಿಸುವುದಿಲ್ಲ?

ಉತ್ತಮದ್ಭಿಶ್ಚ ಯಃ ಪ್ರಾಣೈಃ ಪ್ರಯತಃ ಶಿಷ್ಟಸಮ್ಮತಃ ।
ಚಿಂತಯೇನ್ಮನಸಾ ಗಂಗಾಂ ಸ ಗತಿಂ ಪರಮಾಂ ಲಭೇತ್ ॥೭೦॥

ಯಾವನು ಶಿಷ್ಟಸಮ್ಮತನಾಗಿ ಪ್ರಾಣಗಳು ಹೊರಡಲು ಸಿದ್ಧವಾದಾಗ ಪ್ರಯತ್ನ ಪೂರ್ವಕವಾಗಿ ಮನಸ್ಸಿನಿಂದಲೇ ಗಂಗೆಯನ್ನು ಚಿಂತಿಸುತ್ತಾನೆಯೋ ಅವನು ಶ್ರೇಷ್ಠವಾದ ಗತಿಯನ್ನು ಹೊಂದುವನು.

ನ ಭಯೇಭ್ಯೋ ಭಯಂ ತಸ್ಯ ನ ಪಾಪೇಭ್ಯೋ ನ ರಾಜತಃ ।
ಆ ದೇಹಪತನಾದ್ ಗಂಗಾಮುಪಾಸ್ತೇ ಯಃ ಪುಮಾನಿಹ ॥೭೧॥

ಯಾವ ಮನುಷ್ಯನು ದೇಹಪಾತವಾಗುವವರೆಗೆ ಗಂಗೆಯನ್ನು ಉಪಾಸನೆ ಮಾಡುತ್ತಾನೆಯೋ ಅವನಿಗೆ ಭಯದ ಕಾರಣಗಳಿಂದಾಗಲೀ, ಪಾಪದಿಂದಾಗಲೀ, ರಾಜನಿಂದಾಗಲೀ ಭಯವುಂಟಾಗುವುದಿಲ್ಲ.

ಗಗನಾದ್ ಯಾಂ ಮಹಾಪುಣ್ಯಾಂ ಪತಂತೀಂ ವೈ ಮಹೇಶ್ವರಃ ।
ದಧಾರ ಶಿರಸಾ ದೇವೀಂ ತಾಮೇವ ದಿವಿ ಸೇವತೇ ॥೭೨॥

ಯಾವ ಮಹೇಶ್ವರನು ಗಗನದಿಂದ ಕೆಳಗೆ ಬೀಳುವ ಮಹಾಪುಣ್ಯಳಾದ ಗಂಗಾದೇವಿಯನ್ನು ಶಿರಸ್ಸಿನಲ್ಲಿ ಧರಿಸಿದನೋ ಅವನೇ ಸ್ವರ್ಗಲೋಕದಲ್ಲಿ ಆ ಗಂಗೆಯನ್ನು ಸೇವಿಸುತ್ತಾನೆ.

ಅಲಂಕೃತಾಸ್ತ್ರಯೋ ಲೋಕಾಃ ಪಥಿಭಿರ್ವಿಮಲೈಸ್ತ್ರಿಭಿಃ ।
ಯಸ್ತು ತಸ್ಯಾ ಜಲಂ ಸೇವೇತ್ಕೃತಕೃತ್ಯಃ ಪುಮಾನ್ ಭವೇತ್ ॥೭೩॥

ಗಂಗೆಯ ವಿಮಲವಾದ ಮೂರು ಮಾರ್ಗಗಳಿಂದ ಮೂರು ಲೋಕಗಳು ಅಲಂಕೃತವಾಗಿವೆ. ಯಾವನು ಅಂತಹ ಗಂಗೆಯ ಜಲವನ್ನು ಸೇವಿಸುತ್ತಾನೆಯೋ ಅವನು ಕೃತಕೃತ್ಯನಾಗುತ್ತಾನೆ.

ದಿವಿ ಜ್ಯೋತಿರ್ಯಥಾऽದಿತ್ಯಃ ಪಿತೃಣಾಂ ಚೈವ ಚಂದ್ರಮಾಃ ।
ದೇವೇಶಶ್ಚ ಯಥಾ ನೃಣಾಂ ಗಂಗೇಹ ಸರಿತಾಂ ತಥಾ ॥೭೪॥

ಆಕಾಶದಲ್ಲಿ ಜ್ಯೋತೀರೂಪನಾದ ಆದಿತ್ಯನು ಹೇಗೋ, ಪಿತೃಗಳಿಗೆ ಚಂದ್ರಮನು ಹೇಗೋ, ಮನುಷ್ಯರಿಗೆ ಇಂದ್ರನು ಹೇಗೋ ಹಾಗೆ ನದಿಗಳಿಗೆ ಗಂಗೆಯು ಶ್ರೇಷ್ಠಳಾದವಳು.

ಮಾತ್ರಾ ಪಿತ್ರಾ ಸುತೈರ್ದಾರೈರ್ವಿಯುಕ್ತಸ್ಯ ಧನೇನ ವಾ ।
ನ ಭವೇದ್ಧಿ ತಥಾ ದುಃಖಂ ಯಥಾ ಗಂಗಾವಿಯೋಗಜಮ್ ॥೭೫॥

ತಂದೆಯಿಂದ, ತಾಯಿಯಿಂದ, ಪುತ್ರರಿಂದ, ಪತ್ನಿಯಿಂದ, ಧನದಿಂದ ವಿಯೋಗವನ್ನು ಹೊಂದಿದರೂ ಗಂಗೆಯ ವಿಯೋಗದಿಂದ ಉಂಟಾಗುವಷ್ಟು ದುಃಖವು ಉಂಟಾಗುವುದಿಲ್ಲ.

ನಾರಣ್ಯೈರ್ನೇಷ್ಟವಿಷಯೈರ್ನ ಸುತೈರ್ನ ಧನಾಗಮೈಃ ।
ತಥಾ ಪ್ರಸಾದೋ ಭವತಿ ಗಂಗಾಂ ವೀಕ್ಷ್ಯ ಯಥಾ ನೃಣಾಮ್ ॥೭೬॥

ಗಂಗೆಯನ್ನು ನೋಡುವ ಮನುಷ್ಯರಿಗೆ ಮನಸ್ಸಿಗೆ ಎಂತಹ ಪ್ರಸನ್ನತೆ ಉಂಟಾಗುತ್ತದೆಯೋ ಅಂತಹ ಪ್ರಸನ್ನತೆಯು ಅರಣ್ಯದರ್ಶನದಿಂದಾಗಲೀ, ಇಷ್ಟ

ವಿಷಯಗಳ ಪ್ರಾಪ್ತಿಯಿಂದಾಗಲೀ, ಪುತ್ರರಿಂದಾಗಲೀ, ಧನಪ್ರಾಪ್ತಿಯಿಂದಾಗಲೀ ಆಗುವುದಿಲ್ಲ.

ಪೂರ್ಣಮಿಂದುಂ ಯಥಾ ದೃಷ್ಟ್ವಾ ನೃಣಾಂ ದೃಷ್ಟಿಃ ಪ್ರಸೀದತಿ ।
ಗಂಗಾಂ ತ್ರಿಪಥಗಾಂ ದೃಷ್ಟ್ವಾ ತಥಾ ದೃಷ್ಟಿಃ ಪ್ರಸೀದತಿ ॥೭೭॥

ಪೂರ್ಣಚಂದ್ರನನ್ನು ನೋಡಿ ಹೇಗೆ ಮನುಷ್ಯರಕಣ್ಣಿಗೆ ಸಂತೋಷವಾಗುತ್ತದೆಯೋ ಅದರಂತೆ ತ್ರಿಪಥಗಾಮಿನಿಯಾದ ಗಂಗೆಯನ್ನು ನೋಡಿ ದೃಷ್ಟಿಯು ಪ್ರಸನ್ನವಾಗುತ್ತದೆ.

ತದ್ಭಾವಸ್ತದ್ಗತಮನಾಸ್ತನ್ನಿಷ್ಠಸ್ತತ್ಪರಾಯಣಃ ।
ಗಂಗಾಂ ಯೋಽನುಗತೋ ಭಕ್ತ್ಯಾ ಸ ತಸ್ಯಾಃ ಪ್ರಿಯತಾಂ ವ್ರಜೇತ್ ॥

ಯಾವನು ಗಂಗೆಯಲ್ಲಿ ಭಕ್ತಿಯನ್ನು ಹೊಂದಿ, ಅವಳಲ್ಲೇ ಮನಸ್ಸನ್ನಿಟ್ಟು, ಅವಳಲ್ಲಿ ನಿಷ್ಠೆಯನ್ನು ಹೊಂದಿ, ಅವಳನ್ನೇ ಶ್ರೇಷ್ಠಳಾದ ಆಶ್ರಯವೆಂದು ತಿಳಿದು ಭಕ್ತಿಯಿಂದ ಗಂಗೆಯನ್ನು ಅನುಸರಿಸುತ್ತಾನೆಯೋ ಅವನು ಗಂಗೆಗೆ ಪ್ರಿಯನಾಗುತ್ತಾನೆ.

ಭೂಃಸ್ಪೃಃ ಖಸ್ಪೃರ್ದಿವಿಷ್ಪೃಶ್ಚ ಭೂತ್ಯೈರುಚ್ಚಾವಚೈರಪಿ ।
ಗಂಗಾ ವಿಗಾಹ್ಯಾ ಸತತಮೇತತ್ಕಾರ್ಯತಮಂ ಸತಾಮ್ ॥೭೯॥

ಭೂಮಿಯಲ್ಲಿರುವ, ಸ್ವರ್ಗದಲ್ಲಿರುವ ಉಚ್ಚ-ನೀಚಪ್ರಾಣಿಗಳು ಗಂಗೆಯಲ್ಲಿ ಸತತವಾಗಿ ಸ್ನಾನವನ್ನು ಮಾಡಬೇಕು. ಇದು ಸಜ್ಜನರು ಅವಶ್ಯವಾಗಿ ಮಾಡಬೇಕಾದ ಕಾರ್ಯಗಳಲ್ಲಿ ಶ್ರೇಷ್ಠವಾದುದು.

ತ್ರಿಷು ಲೋಕೇಷು ಪುಣ್ಯತ್ವಾದ್ ಗಂಗಾಯಾಃ ಪ್ರಥಿತಂ ಯಶಃ ।
ಯತ್ಪುತ್ರಾನ್ ಸಗರಸ್ಯೈಷಾ ಭಸ್ಮಾಖ್ಯಾನನಯದ್ ದಿವಮ್ ॥೮೦॥

ಭಸ್ಮಸಂಜ್ಞರಾಗಿದ್ದ ಸಗರಪುತ್ರರನ್ನು ಸ್ವರ್ಗಕ್ಕೆ ಕಳುಹಿಸಿ ಪವಿತ್ರಳಾದುದರಿಂದ ಗಂಗೆಯ ಕೀರ್ತಿಯು ಮೂರುಲೋಕಗಳಲ್ಲಿಯೂ ಹಬ್ಬಿದೆ.

ವಾಯ್ವೀರಿತಾಭಿಃ ಸುಮಹಾಸ್ವನಾಭಿಃ
ದ್ರುತಾಭಿರತ್ಯರ್ಥಸಮುಚ್ಛ್ರಿತಾಭಿಃ ।
ಗಂಗೋರ್ಮಿಭಿರ್ಭಾನುಮತೀಭಿರಿದ್ಧಃ
ಸಹಸ್ರರಶ್ಮಿಪ್ರತಿಮೋ ವಿಭಾತಿ ॥೮೧॥

ವಾಯುವಿನಿಂದ ಎಬ್ಬಿಸಲ್ಪಟ್ಟು ಮಹಾನಾದದಿಂದ ಕೂಡಿದ, ಶೀಘ್ರವಾದ, ಅತ್ಯಂತ ಎತ್ತರವಾದ, ಪ್ರಕಾಶಮಾನವಾದ ಗಂಗೆಯ ತರಂಗಗಳಿಂದ ತೊಯ್ದು ದೀಪ್ತನಾದ ಪುರುಷನು ಸಹಸ್ರರಶ್ಮಿಯುಳ್ಳ ಸೂರ್ಯನಂತೆ ಶೋಭಿಸುತ್ತಾನೆ.

ಪಯಸ್ವಿನೀಂ ಘೃತನೀಮತ್ಯುದಾರಾಂ
ಸಮೃದ್ಧಿನೀಂ ವೇಗಿನೀಂ ದುರ್ವಿಗಾಹ್ಯಾಮ್ ।
ಗಂಗಾಂ ಗತ್ವಾ ಯೈಃ ಶರೀರಂ ವಿಸೃಷ್ಟಂ
ಗತಾ ಧೀರಾಸ್ತೇ ವಿಬುಧೈಃ ಸಮತ್ವಮ್ ॥೮೨॥

ಯಾರು ಜಲಪೂರ್ಣಳಾದ, ಘೃತದಂತೆ ಶೀಘ್ರವಾದ ಜಲದಿಂದ ಕೂಡಿದ, (ಯಾವಾಗಲೂ ಪ್ರವಹಿಸುವ) ಉದಾರಳಾದ, ಸಮೃದ್ಧಿಯಿಂದ ಕೂಡಿದ, ವೇಗದಿಂದ ಕೂಡಿದ, ಪ್ರವೇಶಿಸಲು ಕಷ್ಟಸಾಧ್ಯಳಾದ ಗಂಗೆಗೆ ಹೋಗಿ ಶರೀರವನ್ನು ಬಿಡುತ್ತಾರೆಯೋ ಅಂತಹ ಧೀರರು ದೇವತೆಗಳಿಗೆ ಸಮಾನರಾಗುತ್ತಾರೆ.

ಅಂಧಾನ್ ಜಡಾನ್ ದ್ರವ್ಯಹೀನಾಂಶ್ಚ ಗಂಗಾ
ಯಶಸ್ವಿನೀ ಬೃಹತೀ ವಿಶ್ವರೂಪಾ ।
ದೇವೈಃ ಸೇಂದ್ರೈರ್ಮುನಿಭಿರ್ಮಾನವೈಶ್ಚ
ನಿಷೇವಿತಾ ಸರ್ವಕಾಮೈರ್ಯುನಕ್ತಿ ॥೮೩॥

ಇಂದ್ರ ಸಹಿತರಾದ ದೇವತೆಗಳಿಂದಲೂ, ಋಷಿಗಳಿಂದಲೂ, ಮನುಷ್ಯರಿಂದಲೂ ಸೇವಿಸಲ್ಪಡುವ, ಕೀರ್ತಿವಂತಳಾದ, ಮಹಾತ್ಮಳಾದ, ವಿಶ್ವರೂಪಳಾದ ಗಂಗೆಯು ಕುರುಡರನ್ನೂ, ಬುದ್ಧಿಹೀನರನ್ನೂ, ದ್ರವ್ಯಹೀನರನ್ನೂ ಎಲ್ಲ ಅಭೀಷ್ಟಗಳಿಂದಲೂ ಸಂಯೋಜಿಸುತ್ತಾಳೆ.

ಊರ್ಜಾವತೀಂ ಮಧುಮತೀಂ ಮಹಾಪುಣ್ಯಾಂ ತ್ರಿವರ್ತ್ಮಗಾಮ್ ।
ತ್ರಿಲೋಕಗೋಪ್ತ್ರೀಂ ಯೇ ಗಂಗಾಂ ಸಂಶ್ರಿತಾಸ್ತೇ ದಿವಂ ಗತಾಃ ॥೮೪॥

ದೇವತೆಗಳಿಗೆ ಅನ್ನವನ್ನು ಕೊಡುವ, ಪಿತೃಗಳಿಗೆ ಅನ್ನವನ್ನು ಕೊಡುವ ಮಹಾಪುಣ್ಯವತಿಯಾದ, ತ್ರಿಪಥಗಾಮಿನಿಯಾದ, ಮೂರುಲೋಕಗಳನ್ನೂ ರಕ್ಷಿಸುವ ಗಂಗೆಯನ್ನು ಯಾರು ಆಶ್ರಯಿಸುತ್ತಾರೋ ಅವರು ಸ್ವರ್ಗವನ್ನು ಹೊಂದುತ್ತಾರೆ.

ಯೋ ವತ್ಸ್ಯತಿ ದ್ರಕ್ಷ್ಯತಿ ವಾಪಿ ಮರ್ತ್ಯಃ
ತಸ್ಮೈ ಪ್ರಯಚ್ಛಂತಿ ಸುಖಾನಿ ದೇವಾಃ ।
ತದ್ಭಾವಿತಾಃ ಸ್ಪರ್ಶನೇ ದರ್ಶನೇ ಯಃ
ತಸ್ಮೈ ದೇವಾ ಗತಿಮಿಷ್ಟಾಂ ದಿಶಂತಿ ॥೮೫॥

ಯಾವ ಮರ್ತ್ಯನು ಗಂಗೆಯ ಬಳಿಯಲ್ಲಿ ವಾಸ ಮಾಡುವನೋ, ಗಂಗೆಯನ್ನು ನಿತ್ಯವೂ ದರ್ಶನ ಮಾಡುವನೋ ಅವನಿಗೆ ದೇವತೆಗಳು ಸುಖವನ್ನು ಕೊಡುತ್ತಾರೆ. ಗಂಗೆಯ ಸ್ಪರ್ಶನ, ದರ್ಶನದಿಂದ ಪವಿತ್ರನಾದವನಿಗೆ ದೇವತೆಗಳು ಇಷ್ಟವಾದ ಗತಿಯನ್ನು ಕೊಡುತ್ತಾರೆ.

ದಕ್ಷಾಂ ಪೃಥ್ವೀಂ ಬೃಹತೀಂ ವಿಪ್ರಕೃಷ್ಟಾಂ
ಶಿವಾಮೃತಾಂ ಸುರಸಾಂ ಸುಪ್ರಸನ್ನಾಮ್ ।
ವಿಭಾವರೀಂ ಸರ್ವಭೂತಪ್ರತಿಷ್ಠಾಂ
ಗಂಗಾಂ ಗತಾ ಯೇ ತ್ರಿದಿವಂ ಗತಾಸ್ತೇ ॥೮೬॥

ಪಾಪಪರಿಹಾರದಕ್ಷಳೂ, ವಿಸ್ತಾರವುಳ್ಳವಳೂ, ಮಹತ್ವವುಳ್ಳವಳೂ, ವಿಶೇಷವಾಗಿ ಅತ್ಯಂತ ಶ್ರೇಷ್ಠಳೂ, ಸುಖಪ್ರದವಾದ ಅಮೃತಪ್ರಿಯವಾದ ಒಳ್ಳೆಯ ರಸವುಳ್ಳ ಜಲವುಳ್ಳವಳೂ, ಬಹಳ ಪ್ರಸನ್ನಳೂ, ಬೆಳದಿಂಗಳ ರಾತ್ರಿಯಂತೆ ಇರುವವಳೂ, ಸರ್ವಭೂತಗಳಿಗೆ ಆಶ್ರಯಳಾದವಳೂ ಆದ ಗಂಗೆಗೆ ಯಾರು ಹೋಗುತ್ತಾರೆಯೋ ಅವರು ಸ್ವರ್ಗಕ್ಕೆ ಹೋಗುತ್ತಾರೆ.

ಖ್ಯಾತಿರ್ಯಸ್ಯಾಃ ಖಂ ದಿವಂ ಗಾಂ ಚ ನಿತ್ಯಂ
ಪುರಾ ದಿಶೋ ವಿದಿಶಶ್ಚಾವತಸ್ಥೇ ।
ತಸ್ಯಾ ಜಲಂ ಸೇವ್ಯ ಸರಿದ್ವರಾಯಾ
ಮರ್ತ್ಯಾಃ ಸರ್ವೇ ಕೃತಕೃತ್ಯಾ ಭವಂತಿ ॥೮೭॥

ಯಾವಳ ಖ್ಯಾತಿಯು ಹಿಂದಿನಿಂದಲೂ ಸತತವಾಗಿ ಭೂಮಿ, ಅಂತರಿಕ್ಷ, ಸ್ವರ್ಗ, ದಿಕ್ಕು ಮತ್ತು ವಿದಿಕ್ಕುಗಳನ್ನು ವ್ಯಾಪಿಸಿ ನಿಂತಿದೆಯೋ ಅಂತಹ ಸರಿತ್ ಶ್ರೇಷ್ಠಳಾದ ಗಂಗೆಯ ಜಲವನ್ನು ಸೇವಿಸುವ ಮರ್ತ್ಯರೆಲ್ಲರೂ ಕೃತಕೃತ್ಯರಾಗುತ್ತಾರೆ.

ಇಯಂ ಗಂಗೇತಿ ನಿಯತಂ ಪ್ರತಿಷ್ಠಾ
ಗುಹಸ್ಯ ರುಗ್ಮಸ್ಯ ಚ ಗರ್ಭಯೋಷಾ ।
ಪ್ರಾತಸ್ತ್ರಿಮಾರ್ಗಾ ಘೃತವಹಾ ವಿಪಾಪ್ಮಾ
ಗಂಗಾವತೀರ್ಣಾ ವಿಯತೋ ವಿಶ್ವತೋಯಾ ॥೮೮॥

ಈ ಗಂಗೆಯು ನಿಯತವಾಗಿ ಪ್ರಾಣಿಗಳಿಗೆ ಆಶ್ರಯಳಾದವಳು. ಸ್ಕಂದನನ್ನು ಮತ್ತು ಸುವರ್ಣವನ್ನು ಗರ್ಭದಲ್ಲಿ ಧರಿಸಿದವಳು. ಮೂರು ಮಾರ್ಗದಲ್ಲಿ ಹರಿಯುವವಳು (ಪ್ರಾತಃಕಾಲದಲ್ಲಿ ಸ್ನಾನ ಮಾಡುವವರಿಗೆ ಧರ್ಮಾರ್ಥ ಕಾಮಗಳನ್ನು ಕೊಡುವವಳು) ಘೃತದಂತಹ ಶುದ್ಧವಾದ ನೀರನ್ನು ಹೊಂದಿದವಳು, ಪಾಪರಹಿತಳಾದವಳು, ಪೂರ್ಣ ಜಲವುಳ್ಳವಳು, ಆಕಾಶದಿಂದ ಭೂಮಿಗೆ ಇಳಿದವಳು.

ಸುತಾऽವನೀಧ್ರಸ್ಯ ಹರಸ್ಯ ಭಾರ್ಯಾ
ದಿವೋ ಭುವಶ್ಚಾಪಿ ಕಕ್ಷ್ಯಾನುರೂಪಾ ।
ಭವ್ಯಾ ಪೃಥಿವ್ಯಾ ಭಾವಿನೀ ಭಾತಿ ರಾಜನ್
ಗಂಗಾ ಲೋಕಾನಾಂ ಪುಣ್ಯದಾ ವೈ ತ್ರಯಾಣಾಮ್ ॥೮೯॥

ಪರ್ವತರಾಜನಾದ ಹಿಮಾಲಯನ ಪುತ್ರಿ (ಭಗೀರಥರಾಜನ ಪುತ್ರಿ), ಶಿವನ ಪತ್ನಿ, ಸ್ವರ್ಗದಲ್ಲಿಮತ್ತು ಭೂಮಿಯಲ್ಲಿ ಆಯಾ ದೇಶದ ಎತ್ತರಕ್ಕೆ ಅನುಗುಣಳಾಗಿದ್ದಾಳೆ, ಭವ್ಯಳಾಗಿದ್ದಾಳೆ. ಪೃಥಿವಿಯನ್ನು ವೈಭವೀಕರಿಸುತ್ತಾಳೆ. ಎಲೈ ರಾಜನೇ, ಅಂತಹ ಈ ಗಂಗೆಯು ಮೂರು ಲೋಕಗಳಿಗೂ ಪುಣ್ಯವನ್ನು ಕೊಡುತ್ತಾ ಕಂಗೊಳಿಸುತ್ತಾಳೆ. (ಸಿದ್ಧಪುರುಷ ಮತ್ತು ಸಿಲವೃತ್ತಿಯ ಸಂಭಾಷಣೆಯು ಭೀಷ್ಮ-ಯುಧಿಷ್ಠಿರ ಸಂಭಾಷಣೆಯಲ್ಲಿ ಮೂಡಿ ಬಂದಿದೆ ಎಂದು ತಿಳಿಸಲು ಮಧ್ಯದಲ್ಲಿ ಧರ್ಮರಾಜನನ್ನು ಕುರಿತ ಭೀಷ್ಮನ ಸಂಭಾಷಣೆಯಲ್ಲಿ ರಾಜನ್ ಎಂದು ಮೂಡಿಬಂದಿದೆ).

ಮಧುಪ್ರವಾಹಾ ಘೃತರಾಗೋದ್ಧತಾಭಿಃ
ಮಹೋರ್ಮಿಭಿಃ ಶೋಭಿತಾ ಬ್ರಾಹ್ಮಣೈಶ್ಚ ।
ದಿವಶ್ಚ್ಯುತಾ ಶಿರಸಾತ್ತಾ ಭವೇನ
ಗಂಗಾವನೀಧ್ರಾತ್ ತ್ರಿದಿವಸ್ಯ ಮಾಲಾ ॥೯೦॥

ಮಧುರವಾದ ಪ್ರವಾಹವುಳ್ಳ, ಭಕ್ತರಲ್ಲಿ ಪ್ರೇಮವನ್ನು ಹೊಂದಿದ, ಎತ್ತರವಾದ ದೊಡ್ಡ ಅಲೆಗಳಿಂದಲೂ ಮತ್ತು ಬ್ರಾಹ್ಮಣರಿಂದಲೂ ಶೋಭಿಸುವ, ಆಕಾಶದಿಂದ ಕೆಳಗಿಳಿದ, ಈಶ್ವರನು ತಲೆಯ ಮೇಲೆ ಧರಿಸಿದ ಗಂಗೆಯು ಹಿಮಾಲಯ ಪರ್ವತದಿಂದ ಸ್ವರ್ಗದವರೆಗೂ ಹಾಕಿದ ಮಾಲೆಯಂತಿದೆ.

ಯೋನಿರ್ವರಿಷ್ಠಾ ವಿರಜಾ ವಿತನ್ವೀ
ಶುಷ್ಮಾ ಇರಾ ವಾರಿವಹಾ ಯಶೋದಾ ।
ವಿಶ್ವಾವತೀ ಚಾಕೃತಿರಿಷ್ಟಿರಿದ್ಧಾ
ಗಂಗೋಕ್ಷಿತಾನಾಂ ಭುವನಸ್ಯ ಪಂಥಾಃ ॥೯೦॥

ಗಂಗೆಯು ಪುಣ್ಯಕ್ಕೆ ಕಾರಣಳಾದವಳು, ಶ್ರೇಷ್ಠಳಾದವಳು, ದೋಷ-ದೂರಳಾದವಳು, ಬಹಳ ಸೂಕ್ಷ್ಮಳಾದವಳು, ಸಮರ್ಥಳಾದವಳು, ಸುಖಪ್ರದಳಾದವಳು, ಜಲಪೂರ್ಣಳಾದವಳು, ಕೀರ್ತಿಪ್ರದಳಾದವಳು, ವಿಶ್ವವನ್ನು ರಕ್ಷಿಸುವವಳು, ಒಳ್ಳೆಯ ಕಾರ್ಯವನ್ನು ಮಾಡುವವಳು, ಎಲ್ಲರಿಗೂ ಬಹಳವಾಗಿ ಇಷ್ಟಳಾದವಳು, ಕಂಗೊಳಿಸುವವಳು, ಸ್ನಾನ ಮಾಡುವವರಿಗೆ ಸ್ವರ್ಗ ಮಾರ್ಗಪ್ರದಳಾದವಳು.

ಕ್ಷಾಂತ್ಯಾ ಮಹ್ಯಾ ಗೋಪನೇ ಧಾರಣೇ ಚ
ದೀಪ್ತ್ಯಾ ಕೃಶಾನೋಸ್ತಪನಸ್ಯ ಚೈವ ।
ತುಲ್ಯಾ ಗಂಗಾ ಸಮ್ಮತಾ ಬ್ರಾಹ್ಮಣಾನಾಂ
ಗುಹಸ್ಯ ಬ್ರಹ್ಮಣ್ಯತಯಾ ಚ ನಿತ್ಯಮ್ ॥೯೨॥

ಕ್ಷಮಾಗುಣದಿಂದಲೂ ಮತ್ತು ಧರಿಸುವ ಗುಣಗಳಿಂದಲೂ ಭೂಮಿಗೆ ಸಮಳಾದವಳು. ಪ್ರಕಾಶದಿಂದ ಅಗ್ನಿಗೆ ಮತ್ತು ಸೂರ್ಯನಿಗೆ ಸಮಳಾದವಳು, ಬ್ರಾಹ್ಮಣರ ವಾತ್ಸಲ್ಯದಲ್ಲಿ ಸ್ಕಂದನಿಗೆ ಸಮಳಾದವಳು ಎಂದು ಬ್ರಾಹ್ಮಣರಿಗೆ ಸಮ್ಮತಳಾದವಳು.

ಋಷಿಷ್ಟುತಾಂ ವಿಷ್ಣುಪದೀಂ ಪುರಾಣೀಂ
ಸುಪುಣ್ಯತೋಯಾಂ ಮನಸಾಽಪಿ ಲೋಕೇ ।
ಸರ್ವಾತ್ಮನಾ ಜಾಹ್ನವೀಂ ಯೇ ಪ್ರಪನ್ನಾ-
ಸ್ತೇ ಬ್ರಹ್ಮಣಃ ಸದನಂ ಸಂಪ್ರಯಾತಾಃ ॥೯೩॥

ಋಷಿಗಳಿಂದ ಸ್ತುತಿಸಲ್ಪಟ್ಟ, ವಿಷ್ಣುಪಾದದಿಂದ ಉದ್ಭವಿಸಿದ, ಪ್ರಾಚೀನಳಾದ, ಪವಿತ್ರಜಲವನ್ನು ಹೊಂದಿದ ಗಂಗೆಯನ್ನು ಸ್ಮರಿಸಿ ಸರ್ವಾತ್ಮನಾ ಮನಸ್ಸಿನಿಂದಾದರೂ ಯಾರು ಶರಣಾಗತರಾಗುತ್ತಾರೆಯೋ ಅವರು ಬ್ರಹ್ಮಸದನಕ್ಕೆ ಹೋಗುತ್ತಾರೆ.

ಲೋಕಾನಿಮಾನ್ ನಯತಿ ಯಾ ಜನನೀವ ಪುತ್ರಾನ್
ಸರ್ವಾತ್ಮನಾ ಸರ್ವಗುಣೋಪಪನ್ನಾ ।
ಸ್ವಸ್ಥಾನಮಿಷ್ಟಮಿಹ ಬ್ರಾಹ್ಮಮಭೀಪ್ಸಮಾನೈಃ
ಗಂಗಾ ಸದೈವಾತ್ಮವಶೈರುಪಾಸ್ಯಾ ॥೯೪॥

ಯಾವ ಗಂಗೆಯು ತಾಯಿಯು ಮಕ್ಕಳನ್ನು ನಡೆಸಿದಂತೆ ಈ ಪ್ರಜೆಗಳನ್ನು ಸ್ವರ್ಗಕ್ಕೆ ನಡೆಸಿಕೊಂಡು ಹೋಗುತ್ತಾಳೆಯೋ ಅಂತಹ ಸರ್ವರೀತಿಯಿಂದಲೂ, ಸರ್ವಗುಣಗಳಿಂದ ಕೂಡಿದ ಗಂಗೆಯು ತಮಗೆ ಇಷ್ಟವಾದ ಬ್ರಹ್ಮಸ್ಥಾನವನ್ನು ಹೊಂದಲು ಬಯಸುವ ಆತ್ಮವಶರಾದವರಿಂದ ಯಾವಾಗಲೂ ಉಪಾಸಿಸಲ್ಪಡಲು ಯೋಗ್ಯಳಾದವಳು.

ಉಸ್ರಾಂ ಜುಷ್ಟಾಂ ಮಿಷತೀಂ ವಿಶ್ವತೋಯಾ-
ಮಿರಾಂ ವಜ್ರೀಂ ರೇವತೀಂ ಭೂಧರಾಣಾಮ್ ।
ಶಿಷ್ಟಾಶ್ರಯಾಮಮೃತಾಂ ಬ್ರಹ್ಮಕಾಂತಾಂ
ಗಂಗಾಂ ಶ್ರಯೇದಾತ್ಮವಾನ್ ಸಿದ್ಧಿಕಾಮಃ ॥೯೫॥

ಪ್ರಕಾಶಮಾನವಾದ ಕಿರಣಗಳಿಂದ ಕೂಡಿದ, ಋಷ್ಯಾದಿಗಳಿಂದ ಸೇವಿತಳಾದ, ಸರ್ವಸಾಕ್ಷಿಯಾದ, ಪೂರ್ಣಜಲವನ್ನು ಹೊಂದಿದ, ಅನ್ನಪ್ರದಳಾದ, ವಜ್ರಗಳನ್ನು ಹೊಂದಿದ, ಪರ್ವತಗಳಿಗೆ ಸಂಪತ್ತನ್ನು ನೀಡುವ, ಶಿಷ್ಟರಿಂದ ಆಶ್ರಯಿಸಲ್ಪಡುವ, ನಿತ್ಯಳಾದ, ಬ್ರಾಹ್ಮಣರ ಪ್ರೀತಿಗೆ ಪಾತ್ರಳಾದ ಗಂಗೆಯನ್ನು ಸಿದ್ಧಿಯನ್ನು ಬಯಸುವ ಧೈರ್ಯಶಾಲಿಯು ಆಶ್ರಯಿಸಬೇಕು.

ಪ್ರಸಾದ್ಯ ದೇವಾನ್ ಸವಿಭೂನ್ ಸಮಸ್ತಾನ್
ಭಗೀರಥಸ್ತಪಸೋಗ್ರೇಣ ಗಂಗಾಮ್ ।
ಗಾಮಾನಯತ್ ತಾಮಭಿಗಮ್ಯ ಶಶ್ವತ್
ಪುಮಾನ್ ಭಯಂ ನೇಹ ನಾಮುತ್ರ ವಿದ್ಯಾತ್ ॥೯೬॥

ವಿಭುವೇ ಮೊದಲಾದ ಸಮಸ್ತ ದೇವತೆಗಳನ್ನು ಪ್ರಸನ್ನೀಕರಿಸಿ ಭಗೀರಥನು ಉಗ್ರವಾದ ತಪಸ್ಸಿನಿಂದ ಗಂಗೆಯನ್ನು ಭೂಮಿಗೆ ತಂದನು. ಅಂತಹ ಗಂಗೆಯನ್ನು ಸಮೀಪಿಸುವ ಪುರುಷನು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಭಯವನ್ನು ಹೊಂದುವುದಿಲ್ಲ.

ಉದಾಹೃತಃ ಸರ್ವಥಾ ತೇ ಗುಣಾನಾಂ
ಮಯೈಕದೇಶಃ ಪ್ರಸಮೀಕ್ಷ್ಯ ಬುದ್ಧ್ಯಾ ।
ಶಕ್ತಿರ್ನ ಮೇ ಕಾಚಿದಿಹಾಸ್ತಿ ವಕ್ತುಂ
ಗುಣಾನ್ ಸರ್ವಾನ್ ಪರಿಮಾತುಂ ತಥೈವ ॥೯೭॥

ನಿನಗೆ ನನ್ನ ಬುದ್ಧಿಯಿಂದ ಆಲೋಚಿಸಿ ಗಂಗೆಯ ಗುಣಗಳ ಏಕದೇಶವನ್ನು ಮಾತ್ರ ಸರ್ವಥಾ ಹೇಳಿದ್ದೇನೆ. ಆದರೆ ಎಲ್ಲ ಗುಣಗಳನ್ನು ಹೇಳಲು ಅಥವಾ ಪರಿಗಣಿಸಲು ನನಗೆ ಶಕ್ತಿ ಇಲ್ಲ.

ಮೇರೋಃ ಸಮುದ್ರಸ್ಯ ಚ ಸರ್ವರತ್ನೈಃ
ಸಂಖ್ಯೋಪಲಾನಾಮುದಕಸ್ಯ ವಾಪಿ ।
ವಕ್ತುಂ ಶಕ್ಯಂ ನೇಹ ಗಂಗಾಜಲಾನಾಂ
ಗುಣಾಖ್ಯಾನಂ ಪರಿಮಾತುಂ ತಥೈವ ॥೯೮॥

ಮೇರುವಿನಲ್ಲಿರುವ ಶಿಲೆಗಳ ಸಂಖ್ಯೆಯನ್ನೂ, ಸಮುದ್ರದಲ್ಲಿರುವ ರತ್ನಗಳ ಸಂಖ್ಯೆಯನ್ನೂ ಹೇಳಲು ಸಾಧ್ಯವಾದೀತು. ಆದರೆ ಗಂಗಾಜಲದ ಗುಣಗಳನ್ನು ಎಣಿಸಲು ಸಾಧ್ಯವಾಗುವುದಿಲ್ಲ.

ತಸ್ಮಾದಿಮಾನ್ ಪರಯಾ ಶ್ರದ್ಧಯೋಕ್ತಾನ್
ಗುಣಾನ್ ಸರ್ವಾನ್ ಜಾಹ್ನವೀಜಾಂಸ್ತಥೈವ ।
ಭಜೇದ್ ವಾಚಾ ಮನಸಾ ಕರ್ಮಣಾ ಚ
ಭಕ್ತ್ಯಾ ಯುಕ್ತಃ ಪರಯಾ ಶ್ರದ್ದಧಾನಃ ॥೯೯॥

ಆದ್ದರಿಂದ ನಾನು ಶ್ರದ್ಧೆಯಿಂದ ಹೇಳಿದ ಗಂಗೆಯ ಎಲ್ಲಾ ಗುಣಗಳನ್ನೂ

ಮಾತಿನಿಂದ, ಮನಸ್ಸಿನಿಂದ ಮತ್ತು ಕರ್ಮದಿಂದ ಭಕ್ತಿ-ಶ್ರದ್ಧೆಗಳಿಂದ ಕೂಡಿದವನಾಗಿ ಉಪಾಸನೆ ಮಾಡಬೇಕು.

ಲೋಕಾನಿಮಾಂಸ್ತ್ರೀನ್ ಯಶಸಾ ವಿತತ್ಯ
ಸಿದ್ಧಿಂ ಪ್ರಾಪ್ಯ ಮಹತೀಂ ತಾಂ ದುರಾಪಾಮ್ ।
ಗಂಗಾಕೃತಾನಚರೇಣ್ಯೈವ ಲೋಕಾನ್
ಯಥೇಷ್ಟಮಿಷ್ಟಾನ್ ವಿಚರಿಷ್ಯಸಿ ತ್ವಮ್ ॥೧೦೦॥

ಎಲೈ ಸಿಲವೃತ್ತಿ ಬ್ರಾಹ್ಮಣನೇ, ನೀನು ಪಡೆಯಲು ಕಷ್ಟಸಾಧ್ಯವಾದ ಸಿದ್ಧಿಯನ್ನು ಹೊಂದಿ, ಮೂರುಲೋಕಗಳಲ್ಲಿ ನಿನ್ನ ಕೀರ್ತಿಯನ್ನು ತುಂಬಿ, ಗಂಗೆಯ ಪ್ರಸಾದ ರೂಪವಾದ ಇಷ್ಟವಾದ ಲೋಕವನ್ನು ಹೊಂದಿ ಅವುಗಳಲ್ಲಿ ಸಂಚರಿಸುವಿ.

ತವ ಮಮ ಚ ಗುಣೈರ್ಮಹಾನುಭಾವಾ
ಜುಷತು ಮತಿಂ ಸತತಂ ಸ್ವಧರ್ಮಯುಕ್ತೈಃ ।
ಅಭಿಗತಜನವತ್ಸಲಾ ಹಿ ಗಂಗಾ
ಭಜತಿ ಯುನಕ್ತಿ ಸುಖೈಶ್ಚ ಭಕ್ತಿಮಂತಮ್ ॥೧೦೧॥

ನನ್ನ ಮತ್ತು ನಿನ್ನ ಗುಣಗಳಿಂದ ಮಹಾನುಭಾವಳಾದ ಗಂಗೆಯು ತನ್ನ ಗುಣಗಳನ್ನು ಹೇಳುವ ಮಾತುಗಳಿಗೆ ಕಾರಣವಾದ ನಮ್ಮ ಬುದ್ಧಿಯನ್ನು ನೋಡಿ ಸಂತೋಷಪಡಲಿ. ಶರಣಾಗತರಲ್ಲಿ ವಾತ್ಸಲ್ಯವುಳ್ಳ ಗಂಗೆಯು ತನ್ನಲ್ಲಿ ಭಕ್ತಿಯುಳ್ಳವರನ್ನು ಸಮೀಪಿಸಿ ಸುಖವನ್ನು ನೀಡುತ್ತಾಳೆ.

ಭೀಷ್ಮಃ

ಇತಿ ಪರಮಮತಿರ್ಗುಣಾನನೇಕಾನ್
ಸಿಲರತಯೇ ತ್ರಿಪಥಾನುಯೋಗರೂಪಾನ್ ।
ಬಹುವಿಧಮನುಶಾಸ್ಯ ತಥ್ಯರೂಪಾನ್
ಗಗನತಳಂ ದ್ಯುತಿಮಾನ್ ವಿವೇಶ ಸಿದ್ಧಃ ॥೧೦೨॥

ಭೀಷ್ಮ– ಹೀಗೆ ಶ್ರೇಷ್ಠವಾದ ಬುದ್ಧಿಯುಳ್ಳ ಆ ಸಿದ್ಧನು ಗಂಗೆಯ ಸ್ವರೂಪದ ಪ್ರಶ್ನೆಗೆ ಉತ್ತರರೂಪವಾದ ಗಂಗೆಯ ಅನೇಕ ಸತ್ಯವಾದ ಗುಣಗಳನ್ನು ಸಿಲವೃತ್ತಿ ಬ್ರಾಹ್ಮಣನಿಗೆ ಬಹುವಿಧವಾಗಿ ಉಪದೇಶ ಮಾಡಿ ಕಾಂತಿಯುಕ್ತನಾಗಿ ಆಕಾಶವನ್ನು ಪ್ರವೇಶಿಸಿದನು.

ಸಿಲವೃತ್ತಿಸ್ತು ಸಿದ್ಧಸ್ಯ ವಾಕ್ಯೈಃ ಸಂಬೋಧಿತಸ್ತದಾ ।
ಗಂಗಾಮುಪಾಸ್ಯ ವಿಧಿವತ್ ಸಿದ್ಧಿಂ ಪ್ರಾಪ್ತಃ ಸುದುಲರ್ಭಾಮ್ ॥೧೦೩॥

ಸಿಲವೃತ್ತಿ ಬ್ರಾಹ್ಮಣನಾದರೂ ಸಿದ್ಧನ ಮಾತುಗಳಿಂದ ಪ್ರಭಾವಿತನಾಗಿ, ಗಂಗೆಯನ್ನು ವಿಧಿಯ ಪ್ರಕಾರವಾಗಿ ಉಪಾಸನೆಯನ್ನು ಮಾಡಿ, ದುರ್ಲಭವಾದ ಸಿದ್ಧಿಯನ್ನು ಪಡೆದನು.

ತಸ್ಮಾತ್ ತ್ವಮಪಿ ಕೌಂತೇಯ ಭಕ್ತ್ಯಾ ಪರಮಯಾ ಯುತಃ ।
ಗಂಗಾಮಭ್ಯೇಹಿ ಸತತಂ ಪ್ರಾಪ್ಸ್ಯಸೇ ಸಿದ್ಧಿಮುತ್ತಮಾಮ್ ॥೧೦೪॥

ಎಲೈ ಕೌಂತೇಯನೇ, ನೀನೂ ಸಹ ಪರಮಭಕ್ತಿಯಿಂದ ಕೂಡಿದವನಾಗಿ ಸತತವಾಗಿ ಗಂಗೆಗೆ ಶರಣಾಗತನಾಗು, ಶ್ರೇಷ್ಠವಾದ ಸಿದ್ಧಿಯನ್ನು ಪಡೆಯುವಿ.

ವೈಶಂಪಾಯನಃ

ಶ್ರುತ್ವೇತಿಹಾಸಂ ಭೀಷ್ಮೋಕ್ತಂ ಗಂಗಾಯಾಃ ಸ್ತವಸಂಯುತಮ್ ।
ಯುಧಿಷ್ಠಿರಃ ಪರಾಂ ಪ್ರೀತಿಮಗಚ್ಛದ್ ಭ್ರಾತೃಭಿಃ ಸಹ ॥೧೦೫॥

ವೈಶಂಪಾಯನ– ಭೀಷ್ಮರು ಹೇಳಿದ ಗಂಗೆಯ ಸ್ತೋತ್ರ ಸಹಿತವಾದ ಇತಿಹಾಸವನ್ನು ಕೇಳಿ ಯುಧಿಷ್ಠಿರನು ತಮ್ಮಂದಿರ ಜೊತೆಯಲ್ಲಿ ಬಹಳ ಸಂತೋಷವನ್ನು ಹೊಂದಿದನು.

ಇತಿಹಾಸಮಿಮಂ ಪುಣ್ಯಂ ಶೃಣುಯಾದ್ ಯಃ ಪಠೇತ ವಾ ।
ಗಂಗಾಯಾಃ ಸ್ತವಸಂಯುಕ್ತಂ ಸ ಮುಚ್ಯೇತ್ಸರ್ವಕಿಲ್ಬಿಷೈಃ ॥೧೦೬॥

ಯಾವನು ಗಂಗೆಯ ಸ್ತೋತ್ರದಿಂದ ಕೂಡಿದ ಈ ಪವಿತ್ರವಾದ ಇತಿಹಾಸವನ್ನು ಕೇಳುತ್ತಾನೆಯೋ ಅಥವಾ ಪಾರಾಯಣ ಮಾಡುತ್ತಾನೆಯೋ ಅವನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗಂಗಾಮಾಹಾತ್ಮ್ಯವರ್ಣನಂ ನಾಮ
ಸಪ್ತಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆಂಟನೆಯ ಅಧ್ಯಾಯ

ಮತಂಗೋಪಾಖ್ಯಾನ ಪ್ರಾರಂಭ.

ಯುಧಿಷ್ಠಿರಃ

ಪ್ರಜ್ಞಾಶ್ರುತಾಭ್ಯಾಂ ವೃತ್ತೇನ ಶೀಲೇನ ಚ ಯಥಾ ಭವಾನ್ ।
ಗುಣೈಃ ಸಮುದಿತಃ ಸರ್ವೈರ್ವಯಸಾ ಚ ಸಮನ್ವಿತಃ ।
ತಸ್ಮಾದ್ ಭವಂತಂ ಪೃಚ್ಛಾಮಿ ಧರ್ಮಂ ಧರ್ಮಭೃತಾಂ ವರ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಪ್ರಜ್ಞೆ ಮತ್ತು ವೃತ್ತಗಳಿಂದಲೂ, ನಡತೆಯಿಂದಲೂ ಮತ್ತು ಎಲ್ಲ ಗುಣಗಳಿಂದಲೂ, ಮನಸ್ಸಿನಿಂದಲೂ ನೀನು ಕೂಡಿದ್ದೀಯೆ. ಧರ್ಮಿಷ್ಠರಲ್ಲಿ ಶ್ರೇಷ್ಠನೇ, ಆದ್ದರಿಂದ ನಿನ್ನನ್ನು ಧರ್ಮದ ವಿಷಯದಲ್ಲಿ ಪ್ರಶ್ನೆಯನ್ನು ಮಾಡುತ್ತಿದ್ದೇನೆ.

ಕ್ಷತ್ರಿಯೋ ಯದಿ ವಾ ವೈಶ್ಯಃ ಶೂದ್ರೋ ವಾ ರಾಜಸತ್ತಮ ।
ಬ್ರಾಹ್ಮಣ್ಯಂ ಪ್ರಾಪ್ನುಯಾತ್ ಕೇನ ತನ್ಮೇ ವ್ಯಾಖ್ಯಾತುಮರ್ಹಸಿ ॥೨॥

ಎಲೈ ರಾಜಶ್ರೇಷ್ಠನೇ, ಕ್ಷತ್ರಿಯ, ವೈಶ್ಯ ಅಥವಾ ಶೂದ್ರನು ಬ್ರಾಹ್ಮಣ್ಯವನ್ನು ಪಡೆಯುವುದಾದರೆ ಅದನ್ನು ಯಾವ ರೀತಿಯಿಂದ ಪಡೆಯುತ್ತಾನೆ ಎಂದು ನನಗೆ ತಿಳಿಸು.

ತಪಸಾ ವಾ ಸುಮಹತಾ ಕರ್ಮಣಾ ವಾ ಶ್ರುತೇನ ವಾ ।
ಬ್ರಾಹ್ಮಣ್ಯಮಥ ಚೇದಿಚ್ಛೇತ್ತನ್ಮೇ ಬ್ರೂಹಿ ಪಿತಾಮಹ ॥೩॥

ಪಿತಾಮಹನೇ, ಅವನು ಬ್ರಾಹ್ಮಣ್ಯವನ್ನು ಬಯಸಿದರೆ ಅದನ್ನು ತಪಸ್ಸಿನಿಂದ ಅಥವಾ ಮಹಾಕರ್ಮದಿಂದ ಅಥವಾ ವಿದ್ಯೆಯಿಂದ ಪಡೆಯಬಹುದೋ ಎಂದು ನನಗೆ ತಿಳಿಸು.

ಭೀಷ್ಮಃ

ಬ್ರಾಹ್ಮಣ್ಯಂ ತಾತ ದುಷ್ಪ್ರಾಪಂ ವರ್ಣೈಃ ಕ್ಷತ್ರಾದಿಭಿಸ್ತ್ರಿಭಿಃ ।
ಪರಂ ಹಿ ಸರ್ವಭೂತಾನಾಂ ಸ್ಥಾನಮೇತದ್ ಯುಧಿಷ್ಠಿರ ॥೪॥

ಭೀಷ್ಮ– ಎಲೈ ಯುಧಿಷ್ಠಿರನೇ, ಕ್ಷತ್ರಿಯಾದಿ ಮೂರು ವರ್ಣದವರಿಂದ ಬ್ರಾಹ್ಮಣ್ಯವನ್ನು ಸಂಪಾದಿಸುವುದು ಅಸಾಧ್ಯವಾದುದು. ಬ್ರಾಹ್ಮಣ್ಯವೆಂಬುದು ಸರ್ವ ಪ್ರಾಣಿಗಳಲ್ಲಿ ಶ್ರೇಷ್ಠವಾದ ಸ್ಥಾನ.

ಬಹ್ವೀಸ್ತು ಸಂಸರನ್ ಯೋನೀರ್ಜಾಯಮಾನಃ ಪುನಃ ಪುನಃ ।
ಪರ್ಯಾಯೇ ತಾತ ಕಸ್ಮಿಂಶ್ಚಿದ್ ಬ್ರಾಹ್ಮಣೋ ನಾಮ ಜಾಯತೇ ॥೫॥

ಸಂಸಾರದಲ್ಲಿ ಪುನಃ ಪುನಃ ಅನೇಕ ಯೋನಿಗಳಲ್ಲಿ ಜನಿಸುವ ಜೀವನು ಎಲೈ ಪ್ರೀತಿಪಾತ್ರನೇ, ಯಾವುದೋ ಒಂದು ಪರ್ಯಾಯದಲ್ಲಿ ಬ್ರಾಹ್ಮಣನಾಗಿ ಜನಿಸುತ್ತಾನೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮತಂಗಸ್ಯ ಚ ಸಂವಾದಂ ಗರ್ದಭ್ಯಾಶ್ಚ ಯುಧಿಷ್ಠಿರ ॥೬॥

ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿಯೂ ಸಹ ಮತಂಗ ಋಷಿಗಳಿಗೆ ಮತ್ತು ಒಂದು ಹೆಣ್ಣು ಕತ್ತೆಗೆ ನಡೆದ ಸಂವಾದರೂಪವಾದ ಪ್ರಾಚೀನವಾದ ಈ ಇತಿಹಾಸವನ್ನು ಹೇಳುತ್ತಾರೆ.

ದ್ವಿಜಾತೇಃ ಕಸ್ಯಚಿತ್ ತಾತ ತುಲ್ಯವರ್ಣಃ ಸುತಃ ಪ್ರಭುಃ ।
ಮತಂಗೋ ನಾಮ ನಾಮ್ನಾऽಭೂತ್ ಸರ್ವೈಃ ಸಮುದಿತೋ ಗುಣೈಃ ॥

ಯಾವನೋ ಒಬ್ಬ ಬ್ರಾಹ್ಮಣನಿಗೆ ತನ್ನ ವರ್ಣದವನಾದ, ಸಮರ್ಥನಾದ, ಸರ್ವಗುಣಗಳಿಂದ ಸಂಪನ್ನನಾದ ಮತಂಗನೆಂಬ ಪುತ್ರನು ಜನಿಸಿದನು.

ಸ ಯಜ್ಞಕಾರಃ ಕೌಂತೇಯ ಪಿತ್ರಾ ಸೃಷ್ಟಃ ಪರಂತಪ ।
ಪ್ರಾಯಾದ್ ಗರ್ದಭಯುಕ್ತೇನ ರಥೇನೇಹಾಶುಗಾಮಿನಾ ॥೮॥

ಎಲೈ ಪರಂತಪನೇ, ಅವನು ವಿದ್ಯಾಸಂಪನ್ನನಾಗಿ ತಂದೆಯಿಂದ ಯಜ್ಞವನ್ನು ಮಾಡಿಸಲು ಹೇಳಲ್ಪಟ್ಟು, ಕತ್ತೆಯನ್ನು ಹೂಡಿದ ಶೀಘ್ರಗಾಮಿಯಾದ ರಥದಿಂದ ಹೊರಟನು.

ಸ ಬಾಲಂ ಗರ್ದಭಂ ರಾಜನ್ ವಹಂತಂ ಮಾತುರಂತಿಕೇ ।
ನಿರವಿಧ್ಯತ್ ಪ್ರತೋದೇನ ನಾಸಿಕಾಯಾಂ ಪುನಃ ಪುನಃ ॥೯॥

ಎಲೈ ರಾಜನೇ, ಅವನು ತಾಯಿಯ ಸಮೀಪದಲ್ಲಿಯೇ ಕಟ್ಟಿದ ರಥವನ್ನು ಎಳೆಯುತ್ತಿದ್ದ ಒಂದು ಎಳೆಯ ಕತ್ತೆಯನ್ನು ಚಾವಟಿಯಿಂದ ಅದರ ನಾಸಿಕದಲ್ಲಿ ಪುನಃ ಪುನಃ ಹೊಡೆದನು.

ತಂ ತು ತೀವ್ರವ್ರಣಂ ದೃಷ್ಟ್ವಾ ಗರ್ದಭೀ ಪುತ್ರಗೃದ್ಧಿನೀ ।
ಉವಾಚ ಮಾ ಶುಚಃ ಪುತ್ರ ಚಂಡಾಲಸ್ತ್ವಧಿತಿಷ್ಠತಿ ॥೧೦॥

ಪುತ್ರನ ಮೇಲೆ ಮಮತೆಯುಳ್ಳ ಆ ಕತ್ತೆಯು ಪುತ್ರನ ತೀವ್ರವ್ರಣವನ್ನು ನೋಡಿ ಪುತ್ರನೇ ಶೋಕ ಪಡಬೇಡ, ರಥದಲ್ಲಿ ಚಂಡಾಲನು ಕುಳಿತಿದ್ದಾನೆ ಎಂದು ಹೇಳಿತು.

ಬ್ರಾಹ್ಮಣೇ ದಾರುಣಂ ನಾಸ್ತಿ ಮೈತ್ರೋ ಬ್ರಾಹ್ಮಣ ಉಚ್ಯತೇ ।
ಆಚಾರ್ಯಃ ಸರ್ವಭೂತಾನಾಂ ಶಾಸ್ತಾ ಕಿಂ ಪ್ರಹರಿಷ್ಯತಿ ॥೧೧॥

ಬ್ರಾಹ್ಮಣರಲ್ಲಿ ಕ್ರೂರಕರ್ಮವು ಇರುವುದಿಲ್ಲ. ಅವನು ಸರ್ವರಲ್ಲಿಯೂ ಸ್ನೇಹವುಳ್ಳವನು. ಸರ್ವಭೂತಗಳಿಗೂ ಆಚಾರ್ಯನಾಗಿ ಉಪದೇಶ ಮಾಡುವವನು. ಅಂತಹವನು ಏಕೆ ಹೊಡೆಯುವನು?

ಅಯಂ ತು ಪಾಪಪ್ರಕೃತಿರ್ಬಾಲೇ ನ ಕುರುತೇ ದಯಾಮ್ ।
ಸ್ವಯೋನಿಂ ಮಾನಯತ್ಯೇಷ ಭಾವೋ ಭಾವಂ ನಿಗಚ್ಛತಿ ॥೧೨॥

ರಥದಲ್ಲಿ ಕುಳಿತ ಇವನಾದರೂ ಪಾಪಸ್ವಭಾವದವನು. ಚಿಕ್ಕ ವಯಸ್ಸಿನ ನಿನ್ನಲ್ಲಿ ದಯೆಯನ್ನು ತೋರಿಸುತ್ತಿಲ್ಲ. ತನ್ನ ಯೋನಿಯನ್ನೇ ಗೌರವಿಸುತ್ತಾನೆ. ಜಾತಿ ಸ್ವಭಾವವು ಮನಸ್ಸಿನ ಸ್ವಭಾವವನ್ನು ನಿಯಂತ್ರಿಸುತ್ತದೆ (ಎಂದು ಹೇಳಿತು).

ಏತಚ್ಛ್ರುತ್ವಾ ಮತಂಗಸ್ತು ದಾರುಣಂ ರಾಸಭೀವಚಃ ।
ಅವತೀರ್ಯ ರಥಾತ್ತೂರ್ಣಂ ರಾಸಭೀಂ ಪ್ರತ್ಯಭಾಷತ ॥೧೩॥

ಮತಂಗನು ಹೆಣ್ಣು ಕತ್ತೆಯ ದಾರುಣವಾದ ಈ ಮಾತನ್ನು ಕೇಳಿ, ರಥದಿಂದ ಶೀಘ್ರವಾಗಿ ಇಳಿದು ರಾಸಭಿಯನ್ನು ಕುರಿತು ಮಾತನಾಡಿದನು.

ಬ್ರೂಹಿ ರಾಸಭಿ ಕಲ್ಯಾಣಿ ಮಾತಾ ಮೇ ಯೇನ ದೂಷಿತಾ ।
ಕಥಂ ಮಾಂ ವೇತ್ಸಿ ಚಂಡಾಲಂ ಕ್ಷಿಪ್ರಂ ರಾಸಭಿ ಶಂಸ ಮೇ ॥೧೪॥

ಎಲೌ ರಾಸಭಿಯೇ, ಕಲ್ಯಾಣಿಯೇ ನನ್ನ ತಾಯಿಯು ಯಾವನಿಂದ ದೂಷಿಸಲ್ಪಟ್ಟಳು? ನಾನು ಚಂಡಾಲನೆಂದು ನೀನು ಹೇಗೆ ತಿಳಿದಿದ್ದೀಯೆ? ಅದನ್ನು ಶೀಘ್ರವಾಗಿ ನನಗೆ ಹೇಳು.

ಕೇನ ಜಾತೋಽಸ್ಮಿ ಚಂಡಾಲೋ ಬ್ರಾಹ್ಮಣ್ಯಂ ಯೇನ ಮೇಽನಶತ್ ।
ತತ್ತ್ವೈತನ್ಮಹಾಪ್ರಾಜ್ಞೇ ಬ್ರೂಹಿ ಸರ್ವಮಶೇಷತಃ ॥೧೫॥

ಯಾವ ಕಾರಣದಿಂದ ನಾನು ಚಂಡಾಲನಾದೆ? ಬ್ರಾಹ್ಮಣ್ಯವು ಯಾವ ಆಧಾರದಿಂದ ನಾಶವನ್ನು ಹೊಂದಿತು? ಮಹಾಪ್ರಾಜ್ಞೆಯೇ, ಇವೆಲ್ಲವನ್ನೂ ಸಮಗ್ರವಾಗಿ ನನಗೆ ನಿಜವಾಗಿ ಹೇಳು (ಎಂದು ಹೇಳಿದನು).

ಗರ್ದಭೀ

ಬ್ರಾಹ್ಮಣ್ಯಾಂ ವೃಷಲೇನ ತ್ವಂ ಮತ್ತಾಯಾಂ ನಾಪಿತೇನ ಹ ।
ಜಾತಸ್ತ್ವಮಸಿ ಚಂಡಾಲೋ ಬ್ರಾಹ್ಮಣ್ಯಂ ತೇನ ತೇಽನಶತ್ ॥೧೬॥

ಗರ್ದಭೀ– ನೀನು ಮೈಮರೆತ ನಿನ್ನ ಬ್ರಾಹ್ಮಣಳಾದ ತಾಯಿಯಲ್ಲಿ ಶೂದ್ರನಾದ ಒಬ್ಬ ಕ್ಷೌರಿಕನಿಂದ ಜನಿಸಿದ್ದೀಯೆ. ಅದರಿಂದ ನಿನ್ನ ಬ್ರಾಹ್ಮಣ್ಯವು ನಷ್ಟವಾಗಿ ಚಂಡಾಲನಾಗಿದ್ದೀಯೆ.

ಏವಮುಕ್ತೋ ಮತಂಗಸ್ತು ಪ್ರತ್ಯುಪಾಯಾದ್ ಗೃಹಂ ಪ್ರತಿ ।
ತಮಾಗತಮಭಿಪ್ರೇಕ್ಷ್ಯ ಪಿತಾ ವಾಕ್ಯಮಥಾಬ್ರವೀತ್ ॥೧೭॥

ಈ ಮಾತುಗಳನ್ನು ಕೇಳಿದ ಮತಂಗನು ತನ್ನ ಮನೆಗೆ ಹಿಂದಿರುಗಿದನು. ಹಿಂದಿರುಗಿದ ಅವನನ್ನು ನೋಡಿ ತಂದೆಯು ಮಾತನಾಡಿದನು.

ಮಯಾ ತ್ವಂ ಯಜ್ಞಸಂಸಿದ್ಧೌ ನಿಯುಕ್ತೋ ಗುರುಕರ್ಮಣಿ ।
ಕಸ್ಮಾತ್ ಪ್ರತಿನಿವೃತ್ತೋಽಸಿ ಕಚ್ಚಿನ್ನ ಕುಶಲಂ ತವ ॥೧೮॥

ನಾನು ನಿನಗೆ ಯಜ್ಞವನ್ನು ಮಾಡಿಸುವ ದೊಡ್ಡ ಭಾರವನ್ನು ಒಪ್ಪಿಸಿದ್ದೆ. ಏತಕ್ಕೆ ಹಿಂದಿರುಗಿದೆ? ನಿನಗೆ ಎಲ್ಲವೂ ಕ್ಷೇಮವಷ್ಟೆ?

ಮತಂಗಃ

ಅಯೋನಿರಭಿಯೋನಿರ್ವಾ ಯಃ ಸ್ಯಾತ್ಸ ಕುಶಲೀ ಭವೇತ್ ।
ಕುಶಲಂ ತು ಕುತಸ್ತಸ್ಯ ಯಸ್ಯೇಯಂ ಜನನೀ ಪಿತಃ ॥೧೯॥

ಮತಂಗ– ಅಯೋನಿಜರಾದವರು ಅಥವಾ ಪ್ರಶಸ್ತ ಯೋನಿಯಲ್ಲಿ ಜನಿಸಿದವನು ಕ್ಷೇಮದಿಂದಿರಬಹುದು. ಆದರೆ ಎಲೈ ತಂದೆಯೇ, ಇಂತಹ ತಾಯಿಯನ್ನು ಹೊಂದಿದವನು ಹೇಗೆ ಕ್ಷೇಮದಿಂದ ಇರಲು ಸಾಧ್ಯ ?

ಬ್ರಾಹ್ಮಣ್ಯಾಂ ವೃಷಲಾಜ್ಜಾತಂ ಪಿತರ್ಮೇದಯತೀಹ ಮಾಮ್ ।
ಅಮಾನುಷೀ ಗರ್ದಭೀಯಂ ತಸ್ಮಾತ್ ತಪ್ಸ್ಯೇ ತಪೋ ಮಹತ್ ॥೨೦॥

ತಂದೆಯೇ, ನಾನು ಬ್ರಾಹ್ಮಣಿಯಲ್ಲಿ ಶೂದ್ರನಿಂದ ಜನಿಸಿದವನೆಂದು ಈ ಅಮಾನುಷವಾದ ಕತ್ತೆಯು ಹೇಳುತ್ತಿದೆ. ಆದ್ದರಿಂದ ದೊಡ್ಡ ತಪಸ್ಸನ್ನು ಮಾಡುವೆನು.

ಏವಮುಕ್ತ್ವಾ ಸ ಪಿತರಂ ಪ್ರತಸ್ಥೇ ಕೃತನಿಶ್ಚಯಃ ।
ತತೋ ಗತ್ವಾ ಮಹಾರಣ್ಯಮತಪ್ಯತ ಮಹತ್ತಪಃ ॥೨೧॥

ತಂದೆಗೆ ಹೀಗೆ ಹೇಳಿ ತಪಸ್ಸನ್ನು ಮಾಡುವುದಾಗಿ ನಿಶ್ಚಯಿಸಿ ಹೊರಟು ಮಹಾರಣ್ಯವನ್ನು ಸೇರಿ ಅವನು ದೊಡ್ಡ ತಪಸ್ಸನ್ನು ಮಾಡಿದನು.

ತತಃ ಸಂತಾಪಯಾಮಾಸ ವಿಬುಧಾಂಸ್ತಪಸಾऽನ್ವಿತಃ ।
ಮತಂಗಃ ಸುಸುಖಂ ಪ್ರೇಪ್ಸುಃ ಸ್ಥಾನಂ ಸುಚರಿತಾದಪಿ ॥೨೨॥

ಮತಂಗನು ತನ್ನ ಶ್ರೇಷ್ಠವಾದ ತಪಸ್ಸಿನಿಂದ ಸುಖಪ್ರದವಾದ ಬ್ರಾಹ್ಮಣ್ಯರೂಪವಾದ ಸ್ಥಾನವನ್ನು ಪಡೆಯಲು ಬಯಸಿ, ತಪಸ್ಸಿನಿಂದ ಪೂರ್ಣನಾಗಿ ದೇವತೆಗಳಿಗೆ ಸಂತಾಪವನ್ನು ಉಂಟುಮಾಡಿದನು.

ತಂ ತಥಾ ತಪಸಾ ಯುಕ್ತಮುವಾಚ ಹರಿವಾಹನಃ ।
ಮತಂಗ ತಪ್ಯಸೇ ಕಿಂ ತ್ವಂ ಭೋಗಾನುತ್ಸೃಜ್ಯ ಮಾನುಷಾನ್ ॥೨೩॥

ವರಂ ದದಾನಿ ತೇ ಹಂತ ವೃಣೀಷ್ವ ತ್ವಂ ಯದಿಚ್ಛಸಿ ।
ಯಚ್ಚಾಪ್ಯವಾಪ್ಯಮನ್ಯತ್ ತೇ ಸರ್ವಂ ಪ್ರಬ್ರೂಹಿ ಮಾಚಿರಮ್ ॥೨೪॥

ಇಂದ್ರನು ಆ ರೀತಿಯಲ್ಲಿ ತಪಸ್ಸನ್ನು ಮಾಡುತ್ತಿದ್ದ ಅವನ ಬಳಿಗೆ ಬಂದು ಮತಂಗನೇ, ಮಾನುಷ ಭೋಗಗಳನ್ನು ತ್ಯಜಿಸಿ ಏಕೆ ತಪಸ್ಸನ್ನು ಮಾಡುತ್ತಿದ್ದೀಯೆ? ಸಂತೋಷ. ನಿನಗೆ ವರಗಳನ್ನು ಕೊಡುವೆನು. ಇಷ್ಟವಾದ ವರಗಳನ್ನು ಕೇಳು ಅಥವಾ ಪಡೆಯಲು ಸಾಧ್ಯವಿಲ್ಲದ ಬೇರೆ ಏನಾದರೂ ಇದ್ದರೂ ಶೀಘ್ರವಾಗಿ ಹೇಳು ಎಂದು ಹೇಳಿದನು.

ಮತಂಗಃ

ಬ್ರಾಹ್ಮಣ್ಯಂ ಕಾಮಯಾನೋऽಹಮಿದಮಾರಬ್ಧವಾಂಸ್ತಪಃ ।
ಗಚ್ಛೇಯಂ ತದವಾಪ್ಯೇಹ ವರ ಏಷ ವೃತೋ ಮಯಾ ॥೨೫॥

ಮತಂಗ– ಬ್ರಾಹ್ಮಣ್ಯವನ್ನು ಪಡೆಯಲು ಬಯಸಿ ನಾನು ಈ ತಪಸ್ಸನ್ನು ಆರಂಭಿಸಿದ್ದೇನೆ. ಆ ವರವನ್ನು ಪಡೆದು ನಾನು ಇಲ್ಲಿಂದ ಹೋದೇನು. ಇದೇ ನಾನು ಬೇಡುವ ವರ.

ಏತಚ್ಛ್ರುತ್ವಾ ತು ವಚನಂ ತಮುವಾಚ ಪುರಂದರಃ ।
ಬ್ರಾಹ್ಮಣ್ಯಂ ಪ್ರಾರ್ಥಯಾನಸ್ತ್ವಮಪ್ರಾಪ್ಯಮಕೃತಾತ್ಮಭಿಃ ॥೨೬॥

ಈ ಮಾತನ್ನು ಕೇಳಿ ಇಂದ್ರನು ಅವನನ್ನು ಕುರಿತು ನೀನು ಮನೋಜಯ ರಹಿತರಾದ ಮನುಷ್ಯರಿಂದ ಹೊಂದಲು ಅಸಾಧ್ಯವಾದ ಬ್ರಾಹ್ಮಣ್ಯವನ್ನು ಬೇಡುತ್ತಿದ್ದೀಯೆ.

ಶ್ರೇಷ್ಠಂ ಯತ್ಸರ್ವಭೂತೇಷು ತಪೋ ಯನ್ನಾತಿವರ್ತತೇ ।
ತದಗ್ರ್ಯಂ ಪ್ರಾರ್ಥಯಾನಸ್ತ್ವಮಚಿರಾದ್ ವಿನಶಿಷ್ಯಸಿ ॥೨೭॥

ಸರ್ವಪ್ರಾಣಿಗಳಲ್ಲಿಯೂ ಶ್ರೇಷ್ಠವಾದ, ತಪಸ್ಸು ಸಂಪಾದಿಸಿಕೊಡಲು ಅಸಾಧ್ಯವಾದ, ಶ್ರೇಷ್ಠವಾದ ಆ ಬ್ರಾಹ್ಮಣ್ಯವನ್ನು ಬಯಸುವ ನೀನು ಶೀಘ್ರದಲ್ಲಿಯೇ ವಿನಾಶವನ್ನು ಹೊಂದುವಿ.

ದೇವತಾಸುರಮರ್ತ್ಯೇಷು ಯತ್ಪವಿತ್ರಂ ಪರಂ ಸ್ಮೃತಮ್ ।
ಚಂಡಾಲಯೋನೌ ಜಾತೇನ ನ ತತ್ ಪ್ರಾಪ್ಯಂ ಕಥಂಚನ ॥೨೮॥

ದೇವತಾಸುರಮನುಷ್ಯರಲ್ಲಿ ಯಾವುದು ಅತ್ಯಂತ ಶ್ರೇಷ್ಠವೆಂದು ಹೇಳಲ್ಪಡುತ್ತದೆಯೋ ಅಂತಹ ಬ್ರಾಹ್ಮಣ್ಯವು ಚಂಡಾಲಯೋನಿಯಲ್ಲಿ ಜನಿಸಿದ ನಿನ್ನಿಂದ ಯಾವ ರೀತಿಯಲ್ಲೂ ಪಡೆಯಲು ಅಸಾಧ್ಯವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನ-ಧರ್ಮೇ ಇಂದ್ರ-ಮತಂಗಸಂವಾದೋ ನಾಮ ಅಷ್ಟಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂಬತ್ತನೆಯ ಅಧ್ಯಾಯ

ಇಂದ್ರನಿಂದ ಬ್ರಾಹ್ಮಣ್ಯ ಪ್ರಶಂಸೆ.

ಭೀಷ್ಮಃ

ಏವಮುಕ್ತೋ ಮತಂಗಸ್ತು ಸಂಶಿತಾತ್ಮಾ ಯತವ್ರತಃ ।
ಅತಿಷ್ಠದೇಕಪಾದೇನ ವರ್ಷಾಣಾಂ ಶತಮಚ್ಯುತ ॥೧॥

ಭೀಷ್ಮ- ಎಲೈ ಅಚ್ಯುತನೇ, ಹೀಗೆ ಹೇಳಲ್ಪಟ್ಟ ಮತಂಗನು ವ್ರತನಿಷ್ಠನಾಗಿ, ಮನೋಜಯವನ್ನು ಹೊಂದಿ ನೂರು ವರ್ಷಗಳ ಕಾಲ ಒಂದು ಪಾದದ ಮೇಲೆ ನಿಂತು ತಪಸ್ಸನ್ನು ಮಾಡಿದನು.

ತಮುವಾಚ ತತಃ ಶಕ್ರಃ ಪುನರೇವ ಮಹಾಯಶಾಃ ।
ಮತಂಗ ಪರಮಂ ಸ್ಥಾನಂ ಪ್ರಾರ್ಥಯನ್ನತಿದುರ್ಲಭಮ್ ॥೨॥

ಮಾ ಕೃಥಾಃ ಸಾಹಸಂ ಪುತ್ರ ನೈಷ ಧರ್ಮಪಥಸ್ತವ ।
ಅಪ್ರಾಪ್ಯಂ ಪ್ರಾರ್ಥಯಾನೋ ಹಿ ನಚಿರಾದ್ ವಿನಶಿಷ್ಯಸಿ ॥೩॥

ಮಹಾಕೀರ್ತಿವಂತನಾದ ಇಂದ್ರನು ಪುನಃ ಬಂದು ಅವನನ್ನು ಕುರಿತು ಮತಂಗನೇ, ಅತ್ಯಂತ ದುರ್ಲಭವಾದ ಶ್ರೇಷ್ಠವಾದ ಸ್ಥಾನವನ್ನು ಬಯಸುತ್ತಿದ್ದೀಯೆ. ಪುತ್ರನೇ, ಇಂತಹ ಸಾಹಸವನ್ನು ಮಾಡಬೇಡ. ಇದು ನಿನಗೆ ಧರ್ಮದ ಮಾರ್ಗವಲ್ಲ.

ಅಸಾಧ್ಯವಾದುದನ್ನು ಬೇಡುವವನು ಶೀಘ್ರವಾಗಿ ವಿನಾಶವನ್ನು ಹೊಂದುವನು ಎಂದು ಹೇಳಿದನು.

ಮತಂಗ ಪರಮಂ ಸ್ಥಾನಂ ವಾರ್ಯಮಾಣೋ ಮಯಾऽಸಕೃತ್ ।
ಚಿಕೀರ್ಷಸ್ಯೇವ ತಪಸಾ ಸರ್ವಥಾ ನ ಭವಿಷ್ಯಸಿ ॥೪॥

ಎಲೈ ಮತಂಗನೇ, ನಾನು ಅನೇಕ ಬಾರಿ ನಿಷೇಧ ಮಾಡಿದರೂ ನೀನು ಶ್ರೇಷ್ಠ ಸ್ಥಾನವನ್ನು ಪಡೆಯಲು ಬಯಸಿ ತಪಸ್ಸನ್ನೇ ಮಾಡುತ್ತಿದ್ದೀಯೆ. ಸರ್ವಥಾ ನಿನಗೆ ಅಂತಹ ಸ್ಥಾನವು ದೊರೆಯುವುದಿಲ್ಲ.

ತಿರ್ಯಗ್ಯೋನಿಗತಃ ಸರ್ವೋ ಮಾನುಷ್ಯಂ ಯದಿ ಗಚ್ಛತಿ ।
ಸ ಜಾಯತೇ ಪುಲ್ಕಸೋ ವಾ ಚಂಡಾಲೋ ವಾ ಕದಾಚನ ॥೫॥

ತಿರ್ಯಗ್ಯೋನಿಯಲ್ಲಿ ಇರುವವನು ಮಾನುಷತ್ವವನ್ನು ಬಯಸಿದರೆ ಅವನು ಯಾವಾಗಲೋ ಒಮ್ಮೆ ಬೇಡನೋ, ಚಂಡಾಲನೋ ಆಗಿ ಜನಿಸುತ್ತಾನೆ.

ಪುಂಶ್ಚಲಃ ಪಾಪಯೋನಿರ್ವಾ ಯಃ ಕಶ್ಚಿದಿಹ ಲಕ್ಷ್ಯತೇ ।
ಸ ತಸ್ಯಾಮೇವ ಸುಚಿರಂ ಮತಂಗ ಪರಿವರ್ತತೇ ॥೬॥

ಕಾರ್ಯನಿಯಮವಿಲ್ಲದವನಾಗಿ, ಪಾಪಯೋನಿಯಲ್ಲಿ ಜನಿಸಿದವನಾಗಿ ಯಾವನು ಇಲ್ಲಿ ಕಂಡುಬರುತ್ತಾನೆಯೋ ಅವನು ಎಲೈ ಮತಂಗನೇ, ಅದೇ ಯೋನಿಯಲ್ಲಿಯೇ ಬಹಳ ಕಾಲ ತಿರುಗುತ್ತಿರುತ್ತಾನೆ.

ತತೋ ದಶಗುಣೇ ಕಾಲೇ ಲಭತೇ ಶೂದ್ರತಾಮಪಿ ।
ಶೂದ್ರಯೋನಾವಪಿ ತತೋ ಬಹುಶಃ ಪರಿವರ್ತತೇ ॥೭॥

ಅನಂತರ ಹತ್ತುಪಟ್ಟು ಕಾಲವು ಕಳೆದ ಮೇಲೆ ಶೂದ್ರಯೋನಿಯಲ್ಲಿ ಜನಿಸಿ ಶೂದ್ರಯೋನಿಯಲ್ಲಿಯೂ ಸಹ ಹಾಗೆಯೇ ಬಹಳ ಕಾಲ ತಿರುಗುತ್ತಿರುತ್ತಾನೆ.

ತತಸ್ತ್ರಿಶಂದ್ಗುಣೇ ಕಾಲೇ ಲಭತೇ ವೈಶ್ಯತಾಮಪಿ ।
ವೈಶ್ಯತಾಯಾಂ ಚಿರಂ ಕಾಲಂ ತತ್ರೈವ ಪರಿವರ್ತತೇ ॥೮॥

ಅನಂತರ ಮೂವತ್ತು ಪಟ್ಟು ಕಾಲವು ಕಳೆದ ಮೇಲೆ ವೈಶ್ಯಯೋನಿಯಲ್ಲಿ ಜನಿಸಿ, ವೈಶ್ಯಯೋನಿಯಲ್ಲಿಯೂ ಸಹ ಬಹಳ ಕಾಲದವರೆಗೆ ಅಲ್ಲಿಯೇ ತಿರುಗುತ್ತಿರುತ್ತಾನೆ.

ತತಃ ಷಷ್ಟಿಗುಣೇ ಕಾಲೇ ರಾಜನ್ಯೋ ನಾಮ ಜಾಯತೇ ।
ರಾಜನ್ಯತ್ವೇ ಚಿರಂ ಕಾಲಂ ತತ್ರೈವ ಪರಿವರ್ತತೇ ॥೯॥

ಅನಂತರ ಅರವತ್ತು ಪಟ್ಟು ಕಾಲವು ಕಳೆದ ಮೇಲೆ ಕ್ಷತ್ರಿಯನಾಗಿ ಜನಿಸಿ ಬಹುಕಾಲ ಕ್ಷತ್ರಿಯ ಯೋನಿಯಲ್ಲಿಯೇ ತಿರುಗುತ್ತಿರುತ್ತಾನೆ.

ತತಃ ಷಷ್ಟಿಗುಣೇ ಕಾಲೇ ಲಭತೇ ಬ್ರಹ್ಮಬಂಧುತಾಮ್ ।
ಬ್ರಹ್ಮಬಂಧುಶ್ಚಿರಂ ಕಾಲಂ ತತ್ರೈವ ಪರಿವರ್ತತೇ ॥೧೦॥

ಪುನಃ ಅರವತ್ತು ಪಟ್ಟು ಕಾಲವು ಕಳೆದ ಮೇಲೆ ಬ್ರಹ್ಮಬಂಧುವಾಗಿ ಜನಿಸಿ ಬಹುಕಾಲ ಬ್ರಹ್ಮಬಂಧುವಾಗಿಯೇ ತಿರುಗುತ್ತಿರುತ್ತಾನೆ.

ತತಸ್ತು ದ್ವಿಶತೇ ಕಾಲೇ ಲಭತೇ ಕಾಂಡಪೃಷ್ಠತಾಮ್ ।
ಕಾಂಡಪೃಷ್ಠಶ್ಚಿರಂ ಕಾಲಂ ತತ್ರೈವ ಪರಿವರ್ತತೇ ॥೧೧॥

ಅನಂತರ ಹಿಂದಿನ ಇನ್ನೂರು ಪಟ್ಟು ಕಾಲವು ಕಳೆದ ಮೇಲೆ ಶಸ್ತ್ರಧಾರಿಯಾದ ಬ್ರಾಹ್ಮಣನಾಗಿ ಅಲ್ಲಿಯೇ ಬಹುಕಾಲ ತಿರುಗುತ್ತಿರುತ್ತಾನೆ.

ತತಸ್ತು ತ್ರಿಶತೇ ಕಾಲೇ ಲಭತೇ ದ್ವಿಜತಾಮಪಿ ।
ತಾಂ ಚ ಪ್ರಾಪ್ಯ ಚಿರಂ ಕಾಲಂ ತತ್ರೈವ ಪರಿವರ್ತತೇ ॥೧೨॥

ಹಿಂದಿನ ಮೂರು ನೂರು ಪಟ್ಟು ಕಾಲವು ಕಳೆದ ಮೇಲೆ ದ್ವಿಜನಾಗಿ ಜನಿಸಿ ಅಲ್ಲಿಯೇ ಬಹುಕಾಲ ತಿರುಗುತ್ತಿರುತ್ತಾನೆ.

ತತಶ್ಚತುಃಶತೇ ಕಾಲೇ ಶ್ರೋತ್ರಿಯೋ ನಾಮ ಜಾಯತೇ ।
ಶ್ರೋತ್ರಿಯತ್ವೇ ಚಿರಂ ಕಾಲಂ ತತ್ರೈವ ಪರಿವರ್ತತೇ ॥೧೩॥

ಅನಂತರ ಹಿಂದಿನ ನಾಲ್ಕುನೂರು ಪಟ್ಟು ಕಾಲವು ಕಳೆದ ಮೇಲೆ ಶ್ರೋತ್ರಿಯನಾಗಿ ಜನಿಸಿ ಬಹುಕಾಲ ಅಲ್ಲಿಯೇ ತಿರುಗುತ್ತಿರುತ್ತಾನೆ.

ತದೈವ ಕ್ರೋಧಹರ್ಷೌ ಚ ಕಾಮದ್ವೇಷೌ ಚ ಪುತ್ರಕ ।
ಅತಿಮಾನಾತಿವಾದೌ ತಮಾವಿಶಂತಿ ದ್ವಿಜಾಧಮಮ್ ॥೧೪॥

ಎಲೈ ಪುತ್ರನೇ, ಆಗಲೇ ಅವನಿಗೆ ಕ್ರೋಧ-ಹರ್ಷಗಳು, ಕಾಮ-ದ್ವೇಷಗಳು, ಅಹಂಕಾರ ಮತ್ತು ಅತಿವಾದಗಳು ದ್ವಿಜಾಧಮನಾದರೆ ಅವನನ್ನು ಆವರಿಸುತ್ತವೆ.

ತಾಂಶ್ಚೇಜ್ಜಯತಿ ಶತ್ರೂನ್ ಸ ತದಾ ಪ್ರಾಪ್ನೋತಿ ಸದ್ಗತಿಮ್ ।
ಅಥ ತೇ ವೈ ಜಯಂತ್ಯೇನಂ ತಾಳಾಗ್ರಾದಿವ ಪಾತ್ಯತೇ ॥೧೫॥

ಆ ಶತ್ರುಗಳನ್ನು ಅವನು ಜನಿಸಿದರೆ ಸದ್ಗತಿಯನ್ನು ಹೊಂದುತ್ತಾನೆ. ಆ ದೋಷಗಳೇ ಅವನನ್ನು ಜಯಿಸಿದರೆ ತಾಳೆಯ ಮರದ ತುದಿಯಿಂದ ಬಿದ್ದಂತೆ ಅಧಃಪತನವನ್ನು ಹೊಂದುತ್ತಾನೆ.

ಮತಂಗ ಸಂಪ್ರಧಾರ್ಯೈತದ್ ಯದಹಂ ತ್ವಾಮಚೂಚುದಮ್ ।
ವೃಣೀಷ್ವ ಕಾಮಮನ್ಯಂ ತ್ವಂ ಬ್ರಾಹ್ಮಣ್ಯಂ ಹಿ ಸುದುಲರ್ಭಮ್ ॥೧೬॥

ಎಲೈ ಮತಂಗನೇ, ಈ ವಿಷಯವನ್ನು ಚೆನ್ನಾಗಿ ನಿರ್ಧರಿಸಿ ನಾನು ನಿನ್ನನ್ನು ಪ್ರೇರಿಸುತ್ತಿರುವಂತೆ ಬೇರೆ ವರವನ್ನು ಕೇಳು. ಬ್ರಾಹ್ಮಣ್ಯವು ಅತ್ಯಂತ ದುರ್ಲಭವಾದುದು (ಎಂದು ಹೇಳಿದನು).

॥ ॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನ-ಧರ್ಮೇ ಇಂದ್ರ-ಮತಂಗಸಂವಾದೇ ಬ್ರಾಹ್ಮಣ್ಯಪ್ರಶಂಸಾ ನಾಮ ಏಕೋನಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತನೆಯ ಅಧ್ಯಾಯ

ಮತಂಗೋಪಾಖ್ಯಾನದ ಉಪಸಂಹಾರ.

ಭೀಷ್ಮಃ

ಏವಮುಕ್ತೋ ಮತಂಗಸ್ತು ಸಂಶಿತಾತ್ಮಾ ಯತವ್ರತಃ ।
ಸಹಸ್ರಮೇಕಪಾದೇನ ತತೋಽಬ್ದಾನಾಮತಿಷ್ಠತ ॥೧॥

ಭೀಷ್ಮ– ಹೀಗೆ ಹೇಳಲ್ಪಟ್ಟ ಮತಂಗನಾದರೂ ದೃಢವ್ರತನಾಗಿ ತೀವ್ರವಾದ ಮನಸ್ಸನ್ನು ಹೊಂದಿ ಒಂದು ಸಹಸ್ರವರ್ಷಗಳ ಕಾಲ ಒಂದು ಪಾದದ ಮೇಲೆ ನಿಂತು ತಪಸ್ಸನ್ನು ಮಾಡಿದನು.

ತಂ ಸಹಸ್ರಾವರೇ ಕಾಲೇ ಶಕ್ರೋ ದ್ರಷ್ಟುಮುಪಾಗಮತ್ ।
ತದೇವ ಚ ಪುನರ್ವಾಕ್ಯಮುವಾಚ ಬಲವೃತ್ರಹಾ ॥೨॥

ಸಹಸ್ರವರ್ಷಗಳು ಕಳೆಯುವುದಕ್ಕಿಂತ ಸ್ವಲ್ಪ ಮುಂಚೆ ಬಲಾರಿಯೂ, ವೃತ್ರಹನೂ ಆದ ಇಂದ್ರನು ಅವನನ್ನು ನೋಡಲು ಬಂದು ಪುನಃ ಹಿಂದೆ ಆಡಿದ ಮಾತುಗಳನ್ನೇ ಆಡಿದನು.

ಮತಂಗಃ

ಇದಂ ವರ್ಷಸಹಸ್ರಂ ವೈ ಬ್ರಹ್ಮಚಾರೀ ಸಮಾಹಿತಃ ।
ಅತಿಷ್ಠಮೇಕಪಾದೇನ ಬ್ರಾಹ್ಮಣ್ಯಂ ನಾಪ್ನುಯಾಂ ಕಥಮ್ ॥೩॥

ಮತಂಗ– ಈ ಒಂದು ಸಹಸ್ರವರ್ಷ ಕಾಲ ಬ್ರಹ್ಮಚಾರಿಯಾಗಿ ಸಮಾಧಿಯನ್ನು ಮಾಡಿ ಒಂದು ಪಾದದ ಮೇಲೆ ನಿಂತಿದ್ದೇನೆ. ನನಗೆ ಹೇಗೆ ಬ್ರಾಹ್ಮಣ್ಯವು ದೊರೆಯುವುದಿಲ್ಲ?

ಶಕ್ರಃ

ಚಂಡಾಲಯೋನೌ ಜಾತೇನ ನಾವಾಪ್ಯಂ ವೈ ಕಥಂಚನ ।
ಅನ್ಯಂ ಕಾಮಂ ವೃಣೀಷ್ವ ತ್ವಂ ಮಾ ವೃಥಾ ತೇಽಸ್ತ್ವಯಂ ಶ್ರಮಃ ॥೪॥

ಇಂದ್ರ– ಚಂಡಾಲಯೋನಿಯಲ್ಲಿ ಜನಿಸಿದವನಿಗೆ ಬ್ರಾಹ್ಮಣ್ಯವು ಎಂದೂ ದೊರೆಯುವುದಿಲ್ಲ. ನೀನು ಬೇರೆ ವರವನ್ನು ಕೇಳು. ವ್ಯರ್ಥವಾಗಿ ಶ್ರಮವನ್ನು ಪಡಬೇಡ.

ಭೀಷ್ಮಃ

ಏವಮುಕ್ತೋ ಮತಂಗಸ್ತು ಭೃಶಂ ಶೋಕಪರಾಯಣಃ ।
ಅತಿಷ್ಠತ ಗಯಾಂ ಗತ್ವಾ ಸೋಽಂಗುಷ್ಠೇನ ಶತಂ ಸಮಾಃ ॥೫॥

ಭೀಷ್ಮ– ಹೀಗೆ ಹೇಳಲ್ಪಟ್ಟ ಮತಂಗನು ತೀವ್ರಶೋಕಪರಾಯಣನಾಗಿ ಗಯಾ ಕ್ಷೇತ್ರಕ್ಕೆ ಹೋಗಿ ಪಾದಾಂಗುಷ್ಠದ ಮೇಲೆ ನೂರು ವರ್ಷಗಳ ಕಾಲ ನಿಂತನು.

ಸುದುಷ್ಕರಂ ವಹನ್ ಯೋಗಂ ಕೃಶೋ ಧಮನಿಸಂತತಃ ।
ತ್ವಗಸ್ಥಿಭೂತೋ ಧರ್ಮಾತ್ಮಾ ಸ ಪಪಾತೇತಿ ನಃ ಶ್ರುತಮ್ ॥೬॥

ಸುದುಷ್ಕರವಾದ ತಪಸ್ಸನ್ನು ಮಾಡುತ್ತಾ ಕೃಶನಾಗಿ ಧಮನಿಸಂತತನಾಗಿ ಅಸ್ಥಿ ಚರ್ಮಗಳು ಮಾತ್ರ ಉಳಿದ ಧರ್ಮಾತ್ಮನಾದ ಅವನು ಕುಸಿದು ಬಿದ್ದನೆಂದು ನಾವು ಕೇಳಿದ್ದೇವೆ.

ತಂ ಪತಂತಮಭಿದ್ರುತ್ಯ ಪರಿಜಗ್ರಾಹ ವಾಸವಃ ।
ವರಾಣಾಮೀಶ್ವರೋ ದಾತಾ ಸರ್ವಭೂತಹಿತೇ ರತಃ ॥೭॥

ವರಗಳನ್ನು ಕೊಡುವುದರಲ್ಲಿ ಪ್ರಭುವಾದ, ಸರ್ವಭೂತಹಿತದಲ್ಲಿ ರತನಾದ ಇಂದ್ರನು ಬೀಳುತ್ತಿದ್ದ ಅವನ ಬಳಿಗೆ ಓಡಿ ಬಂದು ಹಿಡಿದುಕೊಂಡನು.

ಶಕ್ರಃ

ಮತಂಗ ಬ್ರಾಹ್ಮಣತ್ವಂ ತೇ ಸಂವೃತಂ ಪರಿಪಂಥಿಭಿಃ ।
ಪೂಜಯನ್ ಸುಖಮಾಪ್ನೋತಿ ದುಃಖಮಾಪ್ನೋತ್ಯಪೂಜಯನ್ ॥೮॥

ಇಂದ್ರ– ಮತಂಗನೇ, ನಿನಗೆ ಬ್ರಾಹ್ಮಣ್ಯವು ಶತ್ರುಗಳಿಂದ ತಡೆಹಿಡಿಯಲ್ಪಟ್ಟಿದೆ. ಈ ಅಭಿಪ್ರಾಯವನ್ನು ಪೂಜಿಸುವವನು ಸುಖವನ್ನು ಪಡುತ್ತಾನೆ, ಇಲ್ಲದಿದ್ದರೆ ದುಃಖವನ್ನು ಪಡೆಯುತ್ತಾನೆ.

ಬ್ರಾಹ್ಮಣೇ ಸರ್ವಭೂತಾನಾಂ ಯೋಗಕ್ಷೇಮಃ ಸಮಾಹಿತಃ ।
ಬ್ರಾಹ್ಮಣೇಭ್ಯೋऽನುತೃಪ್ಯಂತಿ ಪಿತರೋ ದೇವತಾಸ್ತಥಾ ॥೯॥

ಎಲ್ಲ ಪ್ರಾಣಿಗಳ ಯೋಗಕ್ಷೇಮವು ಬ್ರಾಹ್ಮಣನಲ್ಲಿ ನೆಲೆಗೊಂಡಿದೆ. ಪಿತೃಗಳು ಮತ್ತು ದೇವತೆಗಳು ಬ್ರಾಹ್ಮಣರಿಂದ ತೃಪ್ತಿಯನ್ನು ಪಡುತ್ತಾರೆ.

ಬ್ರಾಹ್ಮಣಃ ಸರ್ವಭೂತಾನಾಂ ಮತಂಗ ಪರ ಉಚ್ಯತೇ ।
ಬ್ರಾಹ್ಮಣಃ ಕುರುತೇ ತದ್ಧಿ ಯಥಾ ಯದ್ಯಚ್ಚ ವಾಂಛತಿ ॥೧೦॥

ಎಲೈ ಮತಂಗನೇ, ಬ್ರಾಹ್ಮಣನು ಸರ್ವಭೂತಗಳಲ್ಲಿ ಶ್ರೇಷ್ಠನಾದವನೆಂದು ಹೇಳಲ್ಪಡುತ್ತದೆ. ಬ್ರಾಹ್ಮಣನು ಏನನ್ನು ಬಯಸುತ್ತಾನೆಯೋ ಅದೆಲ್ಲವನ್ನೂ ಸಂಪಾದಿಸುತ್ತಾನೆ.

ಬಹ್ವೀಸ್ತು ಸಂಸರನ್ ಯೋನೀರ್ಜಾಯಮಾನಃ ಪುನಃ ಪುನಃ ।
ಪರ್ಯಾಯೇ ತಾತ ಕಸ್ಮಿಂಶ್ಚಿದ್ ಬ್ರಾಹ್ಮಣ್ಯಮಿಹ ವಿಂದತಿ ॥೧೧॥

ಅನೇಕ ಯೋನಿಗಳಲ್ಲಿ ಸಂಚರಿಸುತ್ತಾ, ಪುನಃ ಪುನಃ ಹುಟ್ಟುತ್ತಾ ಎಲೈ ಪ್ರೀತಿಪಾತ್ರನೇ, ಯಾವುದೋ ಒಂದು ಪರ್ಯಾಯದಲ್ಲಿ ಇಲ್ಲಿ ಬ್ರಾಹ್ಮಣನಾಗಿ ಜನಿಸುತ್ತಾನೆ.

ಮತಂಗಃ

ಕಿಂ ಮಾಂ ತುದಸಿ ದುಃಖಾರ್ತಂ ಮೃತಂ ಮಾರಯಸೇ ಚ ಮಾಮ್ ।
ಕಿಂತು ಶೋಚಾಮಿ ಯಲ್ಲಭ್ಯಂ ಬ್ರಾಹ್ಮಣ್ಯಂ ನ ಬುಭೂಷಸೇ ॥೧೨॥

ಮತಂಗ– ಮೊದಲೇ ದುಃಖದಿಂದ ಕೂಡಿರುವ ನನ್ನನ್ನು ಏಕೆ ಮಾತುಗಳಿಂದ ಚುಚ್ಚುತ್ತಿದ್ದೀಯೆ? ಮೊದಲೇ ಮೃತನಾದ ನನ್ನನ್ನು ನೀನು ಪುನಃ ಕೊಲ್ಲುತ್ತಿದ್ದೀಯೆ. ಆದರೆ ನಾನು ಬಯಸುವ ಬ್ರಾಹ್ಮಣ್ಯವನ್ನು ನೀನು ಕೊಡಲು ಇಚ್ಛಿಸುವುದಿಲ್ಲವೆಂದು ನಾನು ಶೋಕಪಡುತ್ತಿದ್ದೇನೆ (ಲಕ್ಷಾಲಂಕಾರ).

ಬ್ರಾಹ್ಮಣ್ಯಂ ಯದಿ ದುಷ್ಪ್ರಾಪಂ ತ್ರಿಭಿರ್ವರ್ಣೈಃ ಶತಕ್ರತೋ ।
ಸುದುರ್ಲಭಂ ತದಾವಾಪ್ಯ ನಾನುತಿಷ್ಠಂತಿ ಮಾನವಾಃ ॥೧೩॥

ಎಲೈ ಇಂದ್ರನೇ, ಮೂರು ವರ್ಣದವರಿಂದ ಬ್ರಾಹ್ಮಣ್ಯವು ಪಡೆಯಲು ಅಸಾಧ್ಯವಾದರೆ ಅತ್ಯಂತ ದುರ್ಲಭವಾದ ಅದನ್ನು ಪಡೆದು ಯಾವ ಮನುಷ್ಯರೂ ಅನುಷ್ಠಾನವನ್ನೇ ಮಾಡಲಾರರು.

ಯಃ ಪಾಪೇಭ್ಯಃ ಪಾಪತಮಸ್ತೇಷಾಮಧಮ ಏವ ಸಃ ।
ಬ್ರಾಹ್ಮಣ್ಯಂ ಯೋಽವಜಾನೀತೇ ಧನಂ ಲಬ್ಧ್ವೇವ ದುರ್ಲಭಮ್ ॥೧೪॥

ದುಷ್ಪಾಪಂ ಖಲು ವಿಪ್ರತ್ವಂ ಪ್ರಾಪ್ತಂ ದುರನುಪಾಲನಮ್ ।
ದುರವಾಪಮವಾಪ್ಯೈತನ್ನಾನುತಿಷ್ಠಂತಿ ಮಾನವಾಃ ॥೧೫॥

ಯಾವನು ಬ್ರಾಹ್ಮಣ್ಯವನ್ನು ಅವಮಾನ ಮಾಡುತ್ತಾನೆಯೋ ಅವನು ಪಾಪಿಷ್ಠರಲ್ಲಿ ಪಾಪಿಷ್ಠನು ಮತ್ತು ಅಧಮನಾದವನು. ದುರ್ಲಭವಾದ ಧನವನ್ನು ಸಂಪಾದಿಸಿ ಅದನ್ನು ರಕ್ಷಿಸದಿದ್ದವನಂತೆ ದುರ್ಲಭವಾದ ಬ್ರಾಹ್ಮಣ್ಯವನ್ನು ಪಡೆದ ಮಾನವನು ಅದನ್ನು ರಕ್ಷಿಸದಿದ್ದರೆ ಮಾನವರು ಅಂತಹ ಬ್ರಾಹ್ಮಣ್ಯವನ್ನು ಪಡೆದು ಅನುಷ್ಠಾನ ಮಾಡಲಾರರು.

ಏಕಾರಾಮೋ ಹ್ಯಹಂ ಶಕ್ರ ನಿರ್ದ್ವಂದ್ವೋ ನಿಷ್ಪರಿಗ್ರಹಃ ।
ಅಹಿಂಸಾದಮದಾನಸ್ಥಃ ಕಥಂ ನಾರ್ಹಾಮಿ ವಿಪ್ರತಾಮ್ ॥೧೬॥

ಎಲೈ ಶಕ್ರನೇ, ನನಗೆ ಒಂದೇ ಮನೆ ಇದೆ. ದ್ವಂದ್ವಾತೀತನಾಗಿದ್ದೇನೆ. ಯಾವ ದಾನವನ್ನೂ ಸ್ವೀಕರಿಸುವುದಿಲ್ಲ. ಅಹಿಂಸಾ, ಇಂದ್ರಿಯನಿಗ್ರಹ ಮತ್ತು ದಾನಗಳಲ್ಲಿ ನಿರತನಾಗಿದ್ದೇನೆ. ಅಂತಹ ನಾನು ಬ್ರಾಹ್ಮಣ್ಯಕ್ಕೆ ಹೇಗೆ ಅರ್ಹನಾಗುವುದಿಲ್ಲ?

ಯಥಾಕಾಮವಿಹಾರೀ ಸ್ಯಾಂ ಕಾಮರೂಪೀ ವಿಹಂಗಮಃ ।
ಬ್ರಹ್ಮಕ್ಷತ್ರಾವಿರೋಧೇನ ಪೂಜಾಂ ಚ ಪ್ರಾಪ್ನುಯಾಮಹಮ್ ।
ಯಥಾ ಮಮಾಕ್ಷಯಾ ಕೀರ್ತಿರ್ಭವೇಚ್ಚಾಪಿ ಪುರಂದರ ॥೧೭॥

ನಾನು ಮನಸ್ಸಿಗೆ ಬಂದಂತೆ ವಿಹರಿಸುವ ಕಾಮರೂಪಿಯಾದ ಪಕ್ಷಿಯಾಗಬೇಕು. ಬ್ರಾಹ್ಮಣ-ಕ್ಷತ್ರಿಯರಿಗೆ ವಿರೋಧವಿಲ್ಲದಂತೆ ಸತ್ಕಾರವನ್ನು ಪಡೆಯಬೇಕು. ನನ್ನ ಕೀರ್ತಿಯು ಅಕ್ಷಯವಾಗಬೇಕು. ಎಲೈ ಪುರಂದರನೇ, ಆ ರೀತಿಯಲ್ಲಿ ಮಾಡು.

ಇಂದ್ರಃ

ಛಂದೋದೇವ ಇತಿ ಖ್ಯಾತಃ ಸ್ತ್ರೀಣಾಂ ಪೂಜ್ಯೋ ಭವಿಷ್ಯಸಿ ।

ಇಂದ್ರ– ಛಂದೋದೇವ ಎಂದು ಪ್ರಖ್ಯಾತನಾಗಿ ನೀನು ಸ್ತ್ರೀಯರಿಂದ ಪೂಜ್ಯನಾಗು.

ಭೀಷ್ಮಃ

ಏವಂ ತಸ್ಮೈ ವರಂ ದತ್ತ್ವಾ ವಾಸವೋಽಂತರಧೀಯತ ।
ಪ್ರಾಣಾಂಸ್ತ್ಯಕ್ತ್ವಾ ಮತಂಗೋಽಪಿ ಪ್ರಾಪ ತತ್ಸ್ಥಾನಮುತ್ತಮಮ್ ॥೧೮॥

ಭೀಷ್ಮ– ಹೀಗೆ ಮತಂಗನಿಗೆ ವರವನ್ನು ಕೊಟ್ಟು ಇಂದ್ರನು ಅಂತರ್ಧಾನವನ್ನು ಹೊಂದಿದನು. ಮತಂಗನೂ ಸಹ ಪ್ರಾಣಗಳನ್ನು ತ್ಯಜಿಸಿ ಅಂತಹ ಶ್ರೇಷ್ಠವಾದ ಸ್ಥಾನವನ್ನು ಪಡೆದನು.

ಏವಮೇತತ್ವರಂ ಸ್ಥಾನಂ ಬ್ರಾಹ್ಮಣ್ಯಂ ನಾಮ ಭಾರತ ।
ತಚ್ಚ ದುಷ್ಪ್ರಾಪಮಿಹ ವೈ ಮಹೇಂದ್ರವಚನಂ ಯಥಾ ॥೧೯॥

ಎಲೈ ಭಾರತನೇ, ಈ ರೀತಿಯಲ್ಲಿ ಬ್ರಾಹ್ಮಣ್ಯವು ಶ್ರೇಷ್ಠವಾದ ಸ್ಥಾನ. ಇಂದ್ರನ ವಚನದಂತೆ ಅದು ದುಷ್ಪ್ರಾಪ್ಯವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನ-ಧರ್ಮೇ
ಶಕ್ರ-ಮತಂಗಸಂವಾದೋ ನಾಮ ಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂದನೆಯ ಅಧ್ಯಾಯ

ಪೂಜ್ಯಪುರುಷರ ಲಕ್ಷಣಕಥನ.

ಯುಧಿಷ್ಠಿರಃ

ಕೇ ಪೂಜ್ಯಾಃ ಕೇ ನಮಸ್ಕಾರ್ಯಾ ಮಾನವೈರ್ಭರತರ್ಷಭ ।
ವಿಸ್ತರೇಣ ತದಾಚಕ್ಷ್ವ ನ ಹಿ ತೃಪ್ಯಾಮಿ ಕಥ್ಯತಾಮ್ ॥೧॥

ಯುಧಿಷ್ಠಿರ– ಎಲೈ ಭರತರ್ಷಭನೇ, ಮಾನವರಿಂದ ಪೂಜೆಗೆ ಮತ್ತು ನಮಸ್ಕಾರಕ್ಕೆ ಅರ್ಹರಾದವರು ಯಾರು? ಇದನ್ನು ವಿಸ್ತಾರವಾಗಿ ನನಗೆ ಹೇಳು. ನಿನ್ನ ಮಾತುಗಳನ್ನು ಕೇಳುತ್ತಾ ನನಗೆ ತೃಪ್ತಿಯೇ ಆಗುತ್ತಿಲ್ಲ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಾರದಸ್ಯ ಚ ಸಂವಾದಂ ವಾಸುದೇವಸ್ಯ ಚೋಭಯೋಃ ॥೨॥

ಭೀಷ್ಮ– ಈ ವಿಷಯದಲ್ಲೂ ಸಹ ನಾರದ ಮತ್ತು ಕೃಷ್ಣರಿಗೆ ನಡೆದ ಸಂವಾದ ರೂಪವಾದ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ನಾರದಂ ಪ್ರಾಂಜಲಿಂ ದೃಷ್ಟ್ವಾ ಪೂಜಯಾನಂ ದ್ವಿಜರ್ಷಭಾನ್ ।
ಕೇಶವಃ ಪರಿಪಪ್ರಚ್ಛ ಭಗವನ್ ಕಾನ್ ನಮಸ್ಯಸಿ ॥೩॥

ನಾರದರು ಕೈಗಳನ್ನು ಮುಗಿದು ದ್ವಿಜಶ್ರೇಷ್ಠರನ್ನು ಪೂಜಿಸುವುದನ್ನು ನೋಡಿದ ಕೇಶವನು ಪೂಜ್ಯರೇ, ಯಾರನ್ನು ನಮಸ್ಕರಿಸುತ್ತೀರಿ ಎಂದು ಪ್ರಶ್ನೆ ಮಾಡಿದನು.

ಬಹುಮಾನಃ ಪರಃ ಕೇಷು ಭವತೋ ಯಾನ್ ನಮಸ್ಯಸಿ ।
ಶಕ್ಯಂ ಚೇಚ್ಛ್ರೋತುಮಿಚ್ಛಾಮಿ ಬ್ರೂಹ್ಯೇತದ್ ಧರ್ಮವಿತ್ತಮ ॥೪॥

ಎಲೈ ಧರ್ಮಜ್ಞರಲ್ಲಿ ಶ್ರೇಷ್ಠರಾದವರೇ, ನಿಮಗೆ ಯಾರಲ್ಲಿ ಶ್ರೇಷ್ಠವಾದ ಬಹುಮಾನ (ಗೌರವ) ವಿದೆ? ಯಾರನ್ನು ನಮಸ್ಕರಿಸುವಿರಿ? ನಾನು ತಿಳಿಯಲು ಸಾಧ್ಯವಾದರೆ ನನಗೆ ಅದನ್ನು ಹೇಳಿ.

ನಾರದಃ

ಶೃಣು ಗೋವಿಂದ ಯಾನೇತಾನ್ ಪೂಜಯಾಮ್ಯರಿಮರ್ದನ ।
ತ್ವತ್ತೋಽನ್ಯಃ ಕಃ ಪುಮಾನ್‌ಲೋಕೇ ಶ್ರೋತುಮೇತದಿಹಾರ್ಹತಿ ॥೫॥

ನಾರದರು– ಗೋವಿಂದನೇ, ಅರಿಮರ್ದನನೇ, ನಾನು ಯಾವ ಇವರನ್ನು ಪೂಜೆ ಮಾಡುತ್ತಾನೆಂದು ಕೇಳು. ನಿನ್ನನ್ನು ಬಿಟ್ಟು ಲೋಕದಲ್ಲಿ ಯಾವ ಪುರುಷನು ಇದನ್ನು ಕೇಳಲು ಅರ್ಹನಾಗುತ್ತಾನೆ?

ವರುಣಂ ವಾಯುಮಾದಿತ್ಯಂ ಪರ್ಜನ್ಯಂ ಜಾತವೇದಸಮ್ ।
ಸ್ಥಾಣುಂ ಸ್ಕಂದಂ ತಥಾ ಲಕ್ಷ್ಮೀಂ ವಿಷ್ಣುಂ ಬ್ರಹ್ಮಾಣಮೇವ ಚ ॥೬॥

ವಾಚಸ್ಪತಿಂ ಚಂದ್ರಮಸಮಪಃ ಪೃಥ್ವೀಂ ಸರಸ್ವತೀಮ್ ।
ಸತತಂ ಯೇ ನಮಸ್ಯಂತಿ ತಾನ್ನಮಸ್ಯಾಮ್ಯಹಂ ವಿಭೋ ॥೭॥

ವರುಣ, ವಾಯು, ಆದಿತ್ಯ, ಪರ್ಜನ್ಯ, ಅಗ್ನಿ, ಶಿವ, ಸ್ಕಂದ, ಲಕ್ಷ್ಮೀ, ವಿಷ್ಣು, ಬ್ರಹ್ಮ, ಬೃಹಸ್ಪತಿ, ಚಂದ್ರ, ಜಲ, ಪೃಥಿವೀ, ಸರಸ್ವತೀ - ಇವರನ್ನು ಸತತವಾಗಿ ಯಾರು ನಮಸ್ಕರಿಸುತ್ತಾರೆಯೋ ಎಲೈ ವಿಭುವೇ, ಅಂತಹವರನ್ನು ನಾನು ನಮಸ್ಕರಿಸುತ್ತೇನೆ.

ತಪೋಧನಾನ್ ವೇದವಿದೋ ನಿತ್ಯಂ ವೇದಪರಾಯಣಾನ್ ।
ಮಹಾರ್ಹಾನ್ ವೃಷ್ಣಿಶಾರ್ದೂಲ ಸದಾ ಸಂಪೂಜಯಾಮ್ಯಹಮ್ ॥೮॥

ಎಲೈ ವೃಷ್ಣಿಶಾರ್ದೂಲನೇ, ತಪೋಧನರೂ, ವೇದಜ್ಞರೂ, ವೇದಪರಾಯಣರೂ ಆಗಿ ಮಹಾಯೋಗ್ಯತೆಯನ್ನು ಹೊಂದಿದವರನ್ನು ನಾನು ಯಾವಾಗಲೂ ಪೂಜಿಸುತ್ತೇನೆ.

ಅಭುಕ್ತ್ವಾ ದೇವಕಾರ್ಯಾಣಿ ಕುರ್ವತೇ ಯೇऽವಿಕತ್ಥನಾಃ ।
ಸಂತುಷ್ಟಾಶ್ಚ ಕ್ಷಮಾಯುಕ್ತಾಸ್ತಾನ್ನಮಸ್ಯಾಮ್ಯಹಂ ವಿಭೋ ॥೯॥

ಯಾರು ಏನನ್ನೂ ತಿನ್ನದೆ ದೇವಕಾರ್ಯವನ್ನು ಮಾಡುತ್ತಾರೆಯೋ, ತಮ್ಮನ್ನು ತಾವು ಹೊಗಳಿಕೊಳ್ಳುವುದಿಲ್ಲವೋ, ತುಷ್ಟಿಯನ್ನು ಹೊಂದಿ ಕ್ಷಮೆಯಿಂದ ಕೂಡಿರುತ್ತಾರೆಯೋ ಎಲೈ ವಿಭುವೇ, ನಾನು ಅವರನ್ನು ನಮಸ್ಕರಿಸುತ್ತೇನೆ.

ಸಮ್ಯಗ್ದದತಿ ಯೇ ಚೇಷ್ಟಾನ್ ಕ್ಷಾಂತಾ ದಾಂತಾ ಜಿತೇಂದ್ರಿಯಾಃ ।
ಸಸ್ಯಂ ಧನಂ ಕ್ಷಿತಿಂ ಗಾಶ್ಚ ತಾನ್ ನಮಸ್ಯಾಮಿ ಯಾದವ ॥೧೦॥

ಎಲೈ ಯಾದವನೇ, ಯಾರು ಇಷ್ಟವಾದ ಪದಾರ್ಥಗಳನ್ನು ಚೆನ್ನಾಗಿ ದಾನ ಮಾಡುತ್ತಾರೆಯೋ, ಕ್ಷಮೆಯಿಂದಲೂ ನಿಯಮದಿಂದಲೂ ಕೂಡಿ ಜಿತೇಂದ್ರಿಯರಾಗಿರುತ್ತಾರೆಯೋ, ಸಸ್ಯವನ್ನೂ, ಧನವನ್ನೂ, ಗೋವನ್ನೂ ದಾನ ಮಾಡುತ್ತಾರೆಯೋ ಅವರನ್ನು ನಮಸ್ಕರಿಸುವೆನು.

ಯೇ ತೇ ತಪಸಿ ವರ್ತಂತೇ ವನೇ ಮೂಲಫಲಾಶನಾಃ ।
ಅಸಂಚಯಾಃ ಕ್ರಿಯಾವಂತಸ್ತಾನ್ ನಮಸ್ಯಾಮಿ ಯಾದವ ॥೧೧॥

ಎಲೈ ಯಾದವನೇ, ಯಾರು ಅರಣ್ಯದಲ್ಲಿ ವಾಸಿಸಿ, ತಪೋನಿರತರಾಗಿ, ಕಂದ ಮೂಲ-ಫಲಗಳನ್ನು ಆಹಾರವಾಗಿ ಸೇವಿಸಿ ಶೇಖರಿಸಿ ಇಟ್ಟುಕೊಳ್ಳದೆ ಸತ್ಕರ್ಮವನ್ನು ಮಾಡುತ್ತಾರೆಯೋ ಅವರನ್ನು ನಮಸ್ಕರಿಸುವೆನು.

ಯೇ ಭೃತ್ಯಭರಣೇ ಸಕ್ತಾಃ ಸತತಂ ಚಾತಿಥಿಪ್ರಿಯಾಃ ।
ಭುಂಜಂತೇ ದೇವಶೇಷಾಣಿ ತಾನ್ ನಮಸ್ಯಾಮಿ ಯಾದವ ॥೧೨॥

ಎಲೈ ಯಾದವನೇ, ಯಾರು ಸೇವಕರನ್ನು ಪೋಷಿಸುವುದರಲ್ಲಿ ಆಸಕ್ತರಾಗಿರುತ್ತಾರೆಯೋ, ಸತತವಾಗಿ ಅತಿಥಿಪ್ರಿಯರಾಗಿರುತ್ತಾರೆಯೋ, ದೇವ ನೈವೇದ್ಯ ಶೇಷವನ್ನು ಭುಂಜಿಸುತ್ತಾರೆಯೋ ಅವರನ್ನು ನಮಸ್ಕರಿಸುತ್ತೇನೆ.

ಯೇ ವೇದಂ ಪ್ರಾಪ್ಯ ದುರ್ಧರ್ಷಾ ವಾಗ್ಮಿನೋ ಬ್ರಹ್ಮವಾದಿನಃ ।
ಯಾಜನಾಧ್ಯಾಪನೇ ಯುಕ್ತಾ ನಿತ್ಯಂ ತಾನ್ ಪೂಜಯಾಮ್ಯಹಮ್ ॥

ಯಾವ ದುರ್ಧರ್ಷರು ವೇದವನ್ನು ಅಧ್ಯಯನ ಮಾಡಿ ವಾಗ್ಮಿಗಳಾಗಿ, ಬ್ರಹ್ಮವಾದಿಗಳಾಗಿ, ಯಾಜನ ಮತ್ತು ಅಧ್ಯಾಪನದಲ್ಲಿ ನಿರತರಾಗಿರುತ್ತಾರೆಯೋ ಅವರನ್ನು ನಾನು ನಿತ್ಯವೂ ಪೂಜಿಸುತ್ತೇನೆ.

ಪ್ರಸನ್ನಹೃದಯಾಶ್ಚೈವ ಸರ್ವಸತ್ತ್ವೇಷು ನಿತ್ಯಶಃ ।
ಆಪೃಷ್ಠತಾಪಾತ್ ಸ್ವಾಧ್ಯಾಯೇ ಯುಕ್ತಾಸ್ತಾನ್ ಪೂಜಯಾಮ್ಯಹಮ್ ॥

ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಪ್ರಸನ್ನವಾದ ಮನಸ್ಸನ್ನು ಹೊಂದಿದವರಾಗಿ ಪ್ರಾತಃಕಾಲದಲ್ಲಿ ಕುಳಿತರೆ ಬೆನ್ನು ಕಾಯುವವರೆಗೂ ಸ್ವಾಧ್ಯಾಯದಲ್ಲಿ ನಿರತರಾದವರನ್ನು ನಾನು ಪೂಜಿಸುತ್ತೇನೆ.

ಗುರುಪ್ರಸಾದೇ ಸ್ವಾಧ್ಯಾಯೇ ಯತಂತೇ ಯೇ ಸ್ಥಿರವ್ರತಾಃ ।
ಶಿ(ಶು)ಶ್ರೂಷವೋಽನಸೂಯಂತಸ್ತಾನ್ ನಮಸ್ಯಾಮಿ ಯಾದವ ॥೧೫॥

ಯಾರು ಸ್ಥಿರವಾದ ವ್ರತವನ್ನು ಧರಿಸಿ, ಗುರುಗಳ ಅನುಗ್ರಹವನ್ನು ಸಂಪಾದಿಸುವುದಲ್ಲಿಯೂ, ಸ್ವಾಧ್ಯಾಯದಲ್ಲಿಯೂ ಪ್ರಯತ್ನಶೀಲರಾಗಿರುತ್ತಾರೆಯೋ, ದೊಡ್ಡವರನ್ನು ಸೇವಿಸಿ ಅಸೂಯಾರಹಿತರಾಗಿರುತ್ತಾರೆಯೋ ಎಲೈ ಯಾದವನೇ, ಅಂತಹವರನ್ನು ನಮಸ್ಕರಿಸುವೆನು.

ಸುವ್ರತಾ ಮುನಯೋ ಯೇ ಚ ಬ್ರಹ್ಮಣ್ಯಾಃ ಸತ್ಯಸಂಗರಾಃ ।
ವೋಢಾರೋ ಹವ್ಯಕವ್ಯಾನಾಂ ತಾನ್ನಮಸ್ಯಾಮಿ ಯಾದವ ॥೧೬॥

ಎಲೈ ಯಾದವನೇ, ಒಳ್ಳೆಯ ವ್ರತವನ್ನು ಧರಿಸಿದ ಮುನಿಗಳು, ಬ್ರಾಹ್ಮಣ ವತ್ಸಲರಾದವರು, ಸತ್ಯನಿರತರಾದವರು, ಹವ್ಯ-ಕವ್ಯಗಳನ್ನು ದಾನ ಮಾಡುವವರು ಆದವರನ್ನು ನಮಸ್ಕರಿಸುವೆನು.

ಭೈಕ್ಷ್ಯಚರ್ಯಾಸು ನಿರತಾಃ ಕೃಶಾ ಗುರುಕುಲಾಶ್ರಯಾಃ ।
ನಿಃಸುಖಾ ನಿರ್ಧನಾ ಯೇ ಚ ತಾನ್ ನಮಸ್ಯಾಮಿ ಯಾದವ ॥೧೭॥

ಎಲೈ ಯಾದವನೇ, ಗುರುಕುಲದಲ್ಲಿ ವಾಸವನ್ನು ಮಾಡಿ ಕೃಶರಾಗಿ ಭಿಕ್ಷಾಟನೆಯಲ್ಲಿ ನಿರತರಾಗಿ, ಸುಖರಹಿತರಾಗಿ, ಧನರಹಿತರಾಗಿ ಇರುವವರನ್ನು ನಾನು ನಮಸ್ಕರಿಸುವೆನು.

ನಿರ್ಮಮಾ ನಿಷ್ಪ್ರತಿದ್ವಂದ್ವಾ ನಿರ್ಹ್ರೀಕಾ ನಿಷ್ಪ್ರಯೋಜನಾಃ ।
ಅಹಿಂಸಾನಿರತಾ ಯೇ ಚ ಯೇ ಚ ಸತ್ಯವ್ರತಾ ನರಾಃ ।
ದಾಂತಾಃ ಶಮಪರಾಶ್ಚೈವ ತಾನ್ ನಮಸ್ಯಾಮಿ ಕೇಶವ ॥೧೮॥

ಎಲೈ ಕೇಶವನೇ, ಯಾರು ಮಮಕಾರರಹಿತರಾಗಿ, ಯಾರಲ್ಲಿಯೂ ಶತ್ರುತ್ವವನ್ನು ಮಾಡದೆ, ದೇಹಾಭಿಮಾನವನ್ನು ತೊರೆದು, ಫಲೋದ್ದೇಶದಿಂದ ಕರ್ಮವನ್ನು ಮಾಡದೆ, ಅಹಿಂಸಾ ನಿರತರಾಗಿ, ಸತ್ಯವ್ರತರಾಗಿ, ಕ್ಷಮದಮವನ್ನು ಹೊಂದಿದವರಾಗಿರುತ್ತಾರೆಯೋ ಅವರನ್ನು ನಾನು ನಮಸ್ಕರಿಸುವೆನು.

ದೇವತಾತಿಥಿಪೂಜಾಯಾಂ ಪ್ರಸಕ್ತಾ ಗೃಹಮೇಧಿನಃ ।
ಕಪೋತವೃತ್ತಯೋ ನಿತ್ಯಂ ತಾನ್ ನಮಸ್ಯಾಮಿ ಯಾದವ ॥೧೯॥

ಎಲೈ ಯಾದವನೇ, ಯಾವ ಗೃಹಸ್ಥರು ದೇವತಾತಿಥಿ ಪೂಜೆಯಲ್ಲಿ ದೀಕ್ಷೆಯನ್ನು ಹೊಂದಿ ಕಪೋತವೃತ್ತಿಯನ್ನು (ಅಸಂಚಯವನ್ನು) ಅನುಸರಿಸುತ್ತಾರೆಯೋ ಅವರನ್ನು ಯಾವಾಗಲೂ ನಮಸ್ಕರಿಸುವೆನು.

ಯೇಷಾಂ ತ್ರಿವರ್ಗಃ ಕೃತ್ಯೇಷು ವರ್ತತೇ ನೋಪಹೀಯತೇ ।
ಶಿಷ್ಟಾಚಾರಪ್ರವೃತ್ತಾಶ್ಚ ತಾನ್ ನಮಸ್ಯಾಮ್ಯಹಂ ಸದಾ ॥೨೦॥

ಯಾರ ಕಾರ್ಯಗಳಲ್ಲಿ ಧರ್ಮಾರ್ಥಕಾಮಗಳು ಇರುತ್ತವೆಯೋ, ಅವು ನಾಶವನ್ನು ಹೊಂದುವುದಿಲ್ಲವೋ, ಯಾರು ಶಿಷ್ಟಾಚಾರದಂತೆ ನಡೆದುಕೊಳ್ಳುತ್ತಾರೆಯೋ ಅವರನ್ನು ಯಾವಾಗಲೂ ನಮಸ್ಕರಿಸುವೆನು.

ಬ್ರಾಹ್ಮಣಾಸ್ತ್ರಿಷು ಲೋಕೇಷು ಯೇ ತ್ರಿವರ್ಗಮನುಷ್ಠಿತಾಃ ।
ಅಲೋಲುಪಾಃ ಪುಣ್ಯಶೀಲಾಸ್ತಾನ್ ನಮಸ್ಯಾಮಿ ಕೇಶವ ॥೨೧॥

ಎಲೈ ಕೇಶವನೇ, ಮೂರುಲೋಕದಲ್ಲಿರುವ ಧರ್ಮಾರ್ಥಕಾಮಗಳ ಅನುಷ್ಠಾನದಲ್ಲಿ ಆಸಕ್ತರಾದ, ಇಂದ್ರಿಯಲೋಲುಪತೆಯನ್ನು ಹೊಂದದ, ಪುಣ್ಯಶೀಲರಾದ ಬ್ರಾಹ್ಮಣರನ್ನು ನಮಸ್ಕರಿಸುವೆನು.

ಅಭ್ಯಕ್ಷಾ ವಾಯುಭಕ್ಷಾಶ್ಚ ಸುಧಾಭಕ್ಷಾಶ್ಚ ಯೇ ಸದಾ ।
ವ್ರತೈಶ್ಚ ವಿವಿಧೈರ್ಯುಕ್ತಾಸ್ತಾನ್ನಮಸ್ಯಾಮಿ ಮಾಧವ ॥೨೨॥

ಎಲೈ ಮಾಧವನೇ, ಅಭಕ್ಷರಾದವರನ್ನೂ, ವಾಯುಭಕ್ಷರಾದವರನ್ನೂ, ಕ್ಷೀರ ಭಕ್ಷರಾದವರನ್ನೂ, ಸದಾ ವಿವಿಧವಾದ ವ್ರತಗಳನ್ನು ಧರಿಸಿದವರನ್ನೂ ನಾನು ನಮಸ್ಕರಿಸುವೆನು.

ಅಯೋನೀನಗ್ನಿಯೋನೀಂಶ್ಚ ಬ್ರಹ್ಮಯೋನೀಂಸ್ತಥೈವ ಚ ।
ಸರ್ವಭೂತಾತ್ಮಯೋನೀಂಶ್ಚ ತಾನ್ ನಮಸ್ಯಾಮ್ಯಹಂ ದ್ವಿಜಾನ್ ॥೨೩॥

ಅಯೋನಿಜರಾದ, ಅಗ್ನಿಯಿಂದ ಉದ್ಭವಿಸಿದ, ಬ್ರಹ್ಮನಿಂದ ಉದ್ಭವಿಸಿದ, ಸರ್ವಭೂತಗಳ ಅಂತರ್ಯಾಮಿಯಿಂದ ಜನಿಸಿದ ದ್ವಿಜರನ್ನು ನಾನು ನಮಸ್ಕರಿಸುವೆನು.

ನಿತ್ಯಮೇತಾನ್ ನಮಸ್ಯಾಮಿ ಕೃಷ್ಣ ಲೋಕಕರಾನೃಷೀನ್ ।
ಲೋಕಜ್ಯೇಷ್ಠಾನ್ ಜ್ಞಾನನಿಷ್ಠಾಂಸ್ತಮೋಘ್ನಾಲ್ಲೋಕಭಾಸ್ಕರಾನ್ ॥೨೪॥

ಎಲೈ ಕೃಷ್ಣನೇ, ಲೋಕಕ್ಕೆ ಶ್ರೇಯಸ್ಕರರೂ, ಲೋಕದಲ್ಲಿ ಹಿರಿಯರೂ, ಜ್ಞಾನನಿಷ್ಠರೂ, ಅಜ್ಞಾನವನ್ನು ಕಳೆದು ಜ್ಞಾನದಿಂದ ಸೂರ್ಯನಂತೆ ಇರುವವರೂ ಆದ ಈ ಋಷಿಗಳನ್ನು ನಿತ್ಯವೂ ನಮಸ್ಕರಿಸುತ್ತೇನೆ.

ತಸ್ಮಾತ್ತ್ವಮಪಿ ವಾರ್ಷ್ಣೇಯ ದ್ವಿಜಾನ್ ಪೂಜಯ ನಿತ್ಯದಾ ।
ಪೂಜಿತಾಃ ಪೂಜನಾರ್ಹಾ ಹಿ ಸುಖಂ ದಾಸ್ಯಂತಿ ತೇಽನಘ ॥೨೫॥

ಆದ್ದರಿಂದ ಎಲೈ ವಾರ್ಷ್ಣೇಯನೇ, ನೀನೂ ಯಾವಾಗಲೂ ದ್ವಿಜರನ್ನು ಪೂಜಿಸು. ಎಲೈ ಅನಘನೇ, ಪೂಜೆಗೆ ಅರ್ಹರಾದ ಅವರು ಪೂಜಿಸಲ್ಪಟ್ಟರೆ ಸುಖವನ್ನು ನೀಡುವರು.

ಅಸ್ಮಿನ್‌ಲೋಕೇ ಸದಾ ಹ್ಯೇತೇ ಪರತ್ರ ಚ ಸುಖಪ್ರದಾಃ ।
ತ ಏತೇ ಮಾನ್ಯಮಾನಾ ವೈ ಪ್ರದಾಸ್ಯಂತಿ ಸುಖಂ ತವ ॥೨೬॥

ಇಂತಹವರು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಪ್ರದರಾದವರು. ಅಂತಹ ಇವರನ್ನು ಪೂಜಿಸಿದರೆ ಅವರು ನಿನಗೆ ಸುಖವನ್ನು ಕೊಡುತ್ತಾರೆ.

ಯೇ ಸರ್ವಾತಿಥಯೋ ನಿತ್ಯಂ ಗೋಷು ಚ ಬ್ರಾಹ್ಮಣೇಷು ಚ ।
ನಿತ್ಯಂ ಸತ್ಯೇ ಚ ನಿರತಾ ದುರ್ಗಾಣ್ಯತಿತರಂತಿ ತೇ ॥೨೭॥

ಯಾರು ಎಲ್ಲರನ್ನೂ ಅತಿಥಿಗಳಾಗಿ ಸ್ವೀಕಾರ ಮಾಡುತ್ತಾರೆಯೋ, ನಿತ್ಯವೂ ಗೋವುಗಳಲ್ಲಿಯೂ, ಬ್ರಾಹ್ಮಣರಲ್ಲಿಯೂ ಮತ್ತು ಸತ್ಯದಲ್ಲಿಯೂ ರತರಾಗಿರುತ್ತಾರೆಯೋ ಅಂತಹವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ನಿತ್ಯಂ ಶಮಪರಾ ಯೇ ಚ ತಥಾ ಯೇ ಚಾನಸೂಯಕಾಃ ।
ನಿತ್ಯಂ ಸ್ವಾಧ್ಯಾಯಿನೋ ಯೇ ಚ ದುರ್ಗಾಣ್ಯತಿತರಂತಿ ತೇ ॥೨೮॥

ನಿತ್ಯವೂ ಭಗವದ್ಧ್ಯಾನ ಮಾಡುವವರು, ಅಸೂಯಾರಹಿತರಾದವರು ಮತ್ತು ನಿತ್ಯವೂ ಸ್ವಾಧ್ಯಾಯವನ್ನು ಮಾಡುವವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ಸರ್ವಾನ್ ದೇವಾನ್ ನಮಸ್ಯಂತಿ ಯೇ ಚೈಕಂ ದೇವಮಾಶ್ರಿತಾಃ ।
ಶ್ರದ್ದಧಾನಾಶ್ಚ ದಾಂತಾಶ್ಚ ದುರ್ಗಾಣ್ಯತಿತರಂತಿ ತೇ ॥೨೯॥

ಯಾರು ಪ್ರಧಾನನಾದ ಒಬ್ಬ ದೇವನನ್ನು ಆಶ್ರಯಿಸಿ, ಉಳಿದ ದೇವತೆಗಳಿಗೂ ನಮಸ್ಕಾರ ಮಾಡಿ, ಶ್ರದ್ಧೆ ಮತ್ತು ದಮಗಳಿಂದ ಕೂಡಿಎರುತ್ತಾರೆಯೋ ಅವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ತಥೈವ ವಿಪ್ರಪ್ರವರಾನ್ ನಮಸೃತ್ಯ ಯತವ್ರತಾನ್ ।
ಭವಂತಿ ಯೇ ದಾನರತಾ ದುರ್ಗಾಣ್ಯತಿತರಂತಿ ತೇ ॥೩೦॥

ಹಾಗೆಯೇ ವ್ರತನಿಷ್ಠರಾದ ಶ್ರೇಷ್ಠಬ್ರಾಹ್ಮಣರಿಗೆ ನಮಸ್ಕರಿಸಿ ಯಾರು ದಾನವನ್ನು ಕೊಡುವುದರಲ್ಲಿ ಆಸಕ್ತರಾಗಿರುತ್ತಾರೆಯೋ ಅವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ತಪಸ್ವಿನಶ್ಚ ಯೇ ನಿತ್ಯಂ ಕೌಮಾರಬ್ರಹ್ಮಚಾರಿಣಃ ।
ತಪಸಾ ಭಾವಿತಾತ್ಮಾನೋ ದುರ್ಗಾಣ್ಯತಿತರಂತಿ ತೇ ॥೩೧॥

ಯಾರು ತಪಸ್ವಿಗಳೋ, ಬಾಲ್ಯದಿಂದಲೂ ಬ್ರಹ್ಮಚಾರಿಗಳೋ, ತಪಸ್ಸಿನಿಂದ ಶುದ್ಧವಾದ ಮನಸ್ಸುಳ್ಳವರೋ ಅವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ದೇವತಾತಿಥಿಭೃತ್ಯಾನಾಂ ಪಿತೄಣಾಂ ಚಾರ್ಚನೇ ರತಾಃ ।
ಶಿಷ್ಟಾನ್ನಭೋಜಿನೋ ಯೇ ಚ ದುರ್ಗಾಣ್ಯತಿತರಂತಿ ತೇ ॥೩೨॥

ದೇವತೆಗಳ, ಅತಿಥಿಗಳ, ವೃದ್ಧರ ಮತ್ತು ಪಿತೃಗಳ ಅರ್ಚನೆಯಲ್ಲಿ ರತರಾಗಿ ದೇವನೈವೇದ್ಯವನ್ನೇ ಭುಂಜಿಸುವವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ಅಗ್ನೀನಾಧಾಯ ವಿಧಿವತ್ ಪ್ರಯತಾ ಧಾರಯಂತಿ ಯೇ ।
ಪ್ರಾಪ್ತಾಃ ಸೋಮಾಹುತಿಂ ಚೈವ ದುರ್ಗಾಣ್ಯತಿತರಂತಿ ತೇ ॥೩೩॥

ಅಗ್ನಿಗಳನ್ನು ಶಾಸ್ತ್ರೋಕ್ತ ರೀತಿಯಲ್ಲಿ ಆಧಾನ ಮಾಡಿ, ಪ್ರಯತ್ನಪೂರ್ವಕವಾಗಿ ಯಾರು ಅವುಗಳನ್ನು ಇಟ್ಟುಕೊಂಡು ಕಾಲ-ಕಾಲದಲ್ಲಿ ಸೋಮಾಹುತಿಯನ್ನು ಕೊಡುತ್ತಾರೆಯೋ ಅವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ.

ಮಾತಾಪಿತ್ರೋರ್ಗುರುಷು ಚ ಸಮ್ಯಗ್ವರ್ತಂತಿ ಯೇ ಸದಾ ।
ಯಥಾ ತ್ವಂ ವೃಷ್ಣಿಶಾರ್ದೂಲೇತ್ಯುಕ್ತ್ವೈವಂ ವಿರರಾಮ ಸಃ ॥೩೪॥

ಎಲೈ ವೃಷ್ಣಿಶಾರ್ದೂಲನೇ, ನಿನ್ನಂತೆ ಮಾತಾ-ಪಿತೃ-ಗುರುಗಳಲ್ಲಿ ಯಾರು ಯಾವಾಗಲೂ ಚೆನ್ನಾಗಿ ನಡೆದುಕೊಳ್ಳುತ್ತಾರೆಯೋ ಅವರು ಎಲ್ಲ ಕಷ್ಟಗಳನ್ನೂ ದಾಟುತ್ತಾರೆ ಎಂದು ಹೇಳಿ ಸುಮ್ಮನಾದರು.

ತಸ್ಮಾತ್ ತ್ವಮಪಿ ಕೌಂತೇಯ ಪಿತೃದೇವದ್ವಿಜಾತಿಥೀನ್ ।
ಸಮ್ಯಕ್ಪೂಜಯ ಯೇನ ತ್ವಂ ಗತಿಮಿಷ್ಟಾಮವಾಪ್ಸ್ಯಸಿ ॥೩೫॥

ಆದ್ದರಿಂದ ಎಲೈ ಕೌಂತೇಯನೇ, ನೀನು ಪಿತೃಗಳ, ದೇವತೆಗಳ, ದ್ವಿಜರ ಮತ್ತು ಅತಿಥಿಗಳ ಪೂಜೆಯನ್ನು ಚೆನ್ನಾಗಿ ಮಾಡು. ಅದರಿಂದ ನೀನು ಇಷ್ಟವಾದ ಗತಿಯನ್ನು ಹೊಂದುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನ-ಧರ್ಮೇ ಕೃಷ್ಣ-ನಾರದಸಂವಾದೇ
ಪೂಜ್ಯಪುರುಷವರ್ಣನಂ ನಾಮ ಏಕಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆರಡನೆಯ ಅಧ್ಯಾಯ

ಶ್ಯೇನ-ಕಪೋತೀಯ

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ತತ್ತ್ವತೋऽಹಂ ಶ್ರೋತುಮಿಚ್ಛಾಮಿ ಧರ್ಮಂ ಭರತಸತ್ತಮ ॥೧॥

ಯುಧಿಷ್ಠಿರ– ಪಿತಾಮಹನೇ, ಮಹಾಪ್ರಾಜ್ಞನೇ, ಸರ್ವಶಾಸ್ತ್ರ ವಿಶಾರದನೇ, ಭರತಶ್ರೇಷ್ಠನೇ, ನಿನ್ನಿಂದ ನಾನು ಧರ್ಮವನ್ನು ಕೇಳಲು ಬಯಸುತ್ತೇನೆ.

ಶರಣಾಗತಂ ಯೇ ರಕ್ಷಂತಿ ಭೂತಗ್ರಾಮಂ ಚತುರ್ವಿಧಮ್ ।
ಕಿಂ ತಸ್ಯ ಭರತಶ್ರೇಷ್ಠ ಫಲಂ ಭವತಿ ತತ್ತ್ವತಃ ॥೨॥

ಎಲೈ ಭರತಶ್ರೇಷ್ಠನೇ, ಶರಣಾಗತವಾದ ನಾಲ್ಕು ವಿಧವಾದ ಪ್ರಾಣಿ ಸಮೂಹವನ್ನು ರಕ್ಷಿಸುವವನಿಗೆ ಯಾವ ನಿಜವಾದ ಫಲವು ಉಂಟಾಗುತ್ತದೆ?

ಭೀಷ್ಮಃ

ಇದಂ ಶೃಣು ಮಹಾರಾಜ ಧರ್ಮಪುತ್ರ ಮಹಾಯಶಃ ।
ಇತಿಹಾಸಂ ಪುರಾವೃತ್ತಂ ಶರಣಾರ್ಥಂ ಮಹಾಫಲಮ್ ॥೩॥

ಭೀಷ್ಮ– ಎಲೈ ಮಹಾರಾಜನೇ, ಧರ್ಮಪುತ್ರನೇ, ಮಹಾಕೀರ್ತಿವಂತನೇ, ಶರಣಾಗತರ ವಿಷಯದಲ್ಲಿ ಹಿಂದೆ ನಡೆದ ಮಹಾಫಲಪ್ರದವಾದ ಈ ಇತಿಹಾಸವನ್ನು ಕೇಳು.

ಪ್ರಪಾತ್ಯಮಾನಃ ಶ್ಯೇನೇನ ಕಪೋತಃ ಪ್ರಿಯದರ್ಶನಃ ।
ವೃಷದರ್ಭಂ ಮಹಾಭಾಗಂ ನರೇಂದ್ರಂ ಶರಣಂ ಗತಃ ॥೪॥

ಹಿಂದೆ ಗಿಡುಗದಿಂದ ಅಟ್ಟಿಸಿಕೊಂಡು ಬರಲ್ಪಟ್ಟ ಒಂದು ಸುಂದರವಾದ ಪಾರಿವಾಳವು ಎಲೈ ಮಹಾಭಾಗನೇ, ರಾಜನಾದ ವೃಷದರ್ಭನಿಗೆ ಶರಣಾಗತವಾಯಿತು.

ಸ ತಂ ದೃಷ್ಟ್ವಾ ವಿಶುದ್ಧಾತ್ಮಾ ತ್ರಾಸಾದಂಕಮುಪಾಗತಮ್ ।
ಆಶ್ವಾಸ್ಯಾಶ್ವಸಿಹೀತ್ಯಾಹ ನ ತೇಽಸ್ತಿ ಭಯಮಂಡಜ ॥೫॥

ವಿಶುದ್ಧವಾದ ಮನಸ್ಸುಳ್ಳ ಅವನು ಭಯದಿಂದ ತನ್ನ ತೊಡೆಯ ಮೇಲೆ ಕುಳಿತ ಆ ಕಪೋತವನ್ನು ನೋಡಿ ಸಮಾಧಾನಗೊಳಿಸಿ ಎಲೈ ಪಕ್ಷಿಯೇ, ಸಮಾಧಾನವನ್ನು ತಂದುಕೊ, ನಿನಗೆ ಭಯವಿಲ್ಲ ಎಂದು ಹೇಳಿದ್ದನು.

ಭಯಂ ತೇ ಸುಮಹತ್ಕಸ್ಮಾತ್ ಕುತ್ರ ಕಿಂ ವಾ ಕೃತಂ ತ್ವಯಾ ।
ಯೇನ ತ್ವಮಿಹ ಸಂಪ್ರಾಪ್ತೋ ವಿಸಂಜ್ಞೋ ಭ್ರಾಂತಚೇತನಃ ॥೬॥

ನಿನಗೆ ಯಾವ ಕಾರಣದಿಂದ ದೊಡ್ಡ ಭಯವುಂಟಾಗಿದೆ? ನೀನು ಎಲ್ಲಿ ಏನನ್ನು ಮಾಡಿ ಸಂಜ್ಞಾಶೂನ್ಯನಾಗಿ, ದಿಗ್ಭ್ರಾಂತನಾಗಿ ಇಲ್ಲಿಗೆ ಬಂದಿದ್ದೀಯೆ?

ನವನೀಲೋತ್ಪಲಾಪೀಡ ಚಾರುವರ್ಣ ಸುದರ್ಶನ ।
ದಾಡಿಮಾಶೋಕಪುಷ್ಪಾಕ್ಷ ಮಾ ತ್ರಸಸ್ವಾಭಯಂ ತವ ॥೭॥

ಹೊಸ ನೀಲೋತ್ಪಲಪುಷ್ಪದಂತೆ ತಲೆಯ ಮೇಲೆ ಭಾಗವನ್ನು ಧರಿಸಿದವನೇ, ಒಳ್ಳೆಯ ಬಣ್ಣವನ್ನು ಹೊಂದಿದವನೇ, ಮನೋಹರನೇ, ದಾಳಿಂಬೆಯ ಮತ್ತು ಅಶೋಕ ಪುಷ್ಪದಂತಹ ಕಣ್ಣುಳ್ಳವನೇ ಹೆದರಬೇಡ. ನಿನಗೆ ಅಭಯವನ್ನು ನೀಡಿದ್ದೇನೆ.

ಮತ್ಸಕಾಶಮನುಪ್ರಾಪ್ತಂ ನ ತ್ವಾಂ ಕಶ್ಚಿತ್ಸಮುತ್ಸಹೇತ್ ।
ಮನಸಾ ಗ್ರಹಣಂ ಕರ್ತುಂ ರಕ್ಷಾಧ್ಯಕ್ಷಪುರಸ್ಕೃತಮ್ ॥೮॥

ನನ್ನ ಸಮೀಪಕ್ಕೆ ಬಂದು ರಕ್ಷಣೆ ಮತ್ತು ನನ್ನ ದೃಷ್ಟಿಯಿಂದ ಕೂಡಿದ ನಿನ್ನನ್ನು ಯಾವನೂ ಸಹ ತನ್ನ ಮನಸ್ಸಿನಿಂದಲೂ ಹಿಡಿಯಲು ಚಿಂತಿಸಲಾರ.

ಕಾಶಿರಾಜ್ಯಂ ತವಾದ್ಯೇಹ ತ್ವದರ್ಥಂ ಜೀವಿತಂ ತಥಾ ।
ತ್ಯಜೇಯಂ ಭವ ವಿಸ್ರಬ್ಧಃ ಕಪೋತ ನ ಭಯಂ ತವ ॥೯॥

ಈ ದಿನ ಕಾಶಿರಾಜ್ಯವು ನಿನ್ನದು. ನಿನ್ನ ಸಲುವಾಗಿ ನಾನು ಈ ದಿನ ಇಲ್ಲಿ ಜೀವಿತವನ್ನೂ ತೊರೆದೇನು, ಸಮಾಧಾನದಿಂದಿರು. ಎಲೈ ಕಪೋತವೇ, ನಿನಗೆ ಭಯವಿಲ್ಲ(ಎಂದು ಹೇಳಿದನು).

ಶ್ಯೇನಃ

ಮಮೈತದ್ ವಿಹಿತಂ ಭಕ್ಷ್ಯಂ ನ ರಾಜಂಸ್ತ್ಯಾತುಮರ್ಹಸಿ ।
ಅತಿಕ್ರಾಂತಂ ಚ ಪ್ರಾಪ್ತಂ ಚ ಪ್ರಯತ್ನಾಚ್ಚೋಪಪಾದಿತಮ್ ॥೧೦॥

ಶ್ಯೇನ– ಎಲೈ ರಾಜನೇ, ನನಗೆ ದೈವವಿಹಿತವಾದ ಈ ಆಹಾರವನ್ನು ನೀನು ರಕ್ಷಿಸುವುದು ಸರಿಯಲ್ಲ. ನನ್ನನ್ನು ಮೀರಿ ಹೋಗಿದ್ದ ಈ ಕಪೋತವು ನನ್ನ ಪ್ರಯತ್ನದಿಂದ ನನಗೆ ದೊರಕಿದೆ.

ಮಾಂಸಂ ಚ ರುಧಿರಂ ಚಾಸ್ಯ ಮಜ್ಜಾ ಮೇದಶ್ಚ ಮೇ ಹಿತಮ್ ।
ಪರಿತೋಷಕರೋ ಹ್ಯೇಷ ಮಮ ಮಾಸ್ಯಾಗ್ರತೋ ಭವ ॥೧೧॥

ಇದರ ಮಾಂಸ, ರಕ್ತ, ಮಜ್ಜಾ ಮತ್ತು ಮೇದಸ್ಸುಗಳು ನನಗೆ ಹಿತವನ್ನೂ, ಸಂತೋಷವನ್ನೂ ಉಂಟುಮಾಡುವಂತಹವು. ಅದರ ಮುಂದೆ ಬಂದು ನನಗೆ ಅಡ್ಡವಾಗಿ ನಿಲ್ಲಬೇಡ.

ತೃಷ್ಣಾಂ ಮೇ ಬಾಧತೇऽತ್ಯುಗ್ರಾ ಕ್ಷುಧಾ ನಿರ್ದಹತೀವ ಮಾಮ್ ।
ಮುಂಚ್ಯೇನಂ ನ ಹಿ ಶಕ್ಷ್ಯಾಮಿ ರಾಜನ್ ಮಂದಯಿತುಂ ಕ್ಷುಧಾಮ್ ॥

ನನ್ನನ್ನು ಬಾಯಾರಿಕೆಯು ತೀವ್ರವಾಗಿ ಬಾಧಿಸುತ್ತಿದೆ. ಉಗ್ರವಾದ ಹಸಿವೆಯು ನನ್ನನ್ನು ಸುಟ್ಟುಬಿಡುವಂತಿದೆ. ಎಲೈ ರಾಜನೇ, ಇದನ್ನು ಬಿಟ್ಟುಬಿಡು. ನಾನು ಬೇರೆ ರೀತಿಯಲ್ಲಿ ನನ್ನ ಹಸಿವನ್ನು ನೀಗಿಸಿಕೊಳ್ಳಲಾರೆ.

ಮಯಾ ಹ್ಯನುಸೃತೋ ಹ್ಯೇಷ ಮತ್ಪಕ್ಷನಖವಿಕ್ಷತಃ ।
ಕಿಂಚಿದುಚ್ಛ್ವಾಸನಿಶ್ವಾಸಂ ನ ರಾಜನ್ ಗೋಪ್ತುಮರ್ಹಸಿ ॥೧೩॥

ನಾನು ಇದನ್ನು ಅನುಸರಿಸಿ ಇದನ್ನು ನನ್ನ ರೆಕ್ಕೆ ಮತ್ತು ನಖಗಳಿಂದ ಗಾಯಗೊಳಿಸಿದ್ದೇನೆ. ಎಲೈ ರಾಜನೇ, ಸ್ವಲ್ಪವೇ ಉಸಿರಾಡುತ್ತಿರುವ ಇದನ್ನು ನೀನು ರಕ್ಷಿಸುವುದು ಯೋಗ್ಯವಲ್ಲ.

ಯದಿ ಸ್ವವಿಷಯೇ ರಾಜನ್ ಪ್ರಭುಸ್ತ್ವಂ ರಕ್ಷಣೇ ನೃಣಾಮ್ ।
ಖೇಚರಸ್ಯ ತೃಷಾರ್ತಸ್ಯ ನ ತ್ವಂ ಪ್ರಭುರಘೋ ಮಮ ॥೧೪॥

ಎಲೈ ರಾಜನೇ, ನೀನು ನಿನ್ನ ರಾಜ್ಯದಲ್ಲಿರುವ ಮಾನವರ ರಕ್ಷಣೆಯಲ್ಲಿ ಪ್ರಭುತ್ವವನ್ನು (ಅಧಿಕಾರವನ್ನು) ಹೊಂದಿದ್ದರೂ ಗಗನ ಸಂಚಾರಿಯೂ, ಬಾಯಾರಿಕೆಯಿಂದ ಬಳಲಿದವನೂ ಆದ ನನ್ನ ಮೇಲೆ ನಿನ್ನ ಅಧಿಕಾರವಿಲ್ಲ.

ಯದಿ ವೈರಿಷು ಭೃತ್ಯೇಷು ಸ್ವಜನವ್ಯವಹಾರಯೋಃ ।
ವಿಷಯೇಷ್ವಿಂದ್ರಿಯಾಣಾಂ ಚ ಆಕಾಶೇ ಮಾ ಪರಾಕ್ರಮ ॥೧೫॥

ನಿನಗೆ ಪ್ರಭುತ್ವವಿರಬೇಕಾದರೆ ನಿನ್ನ ವೈರಿಗಳಲ್ಲಿ, ಭೃತ್ಯರಲ್ಲಿ, ಸ್ವಜನರಲ್ಲಿ, ವ್ಯವಹಾರಗಳಲ್ಲಿ, ಇಂದ್ರಿಯವಿಷಯಗಳಲ್ಲಿ ಅದನ್ನು ತೋರಿಸು. ಆಕಾಶದಲ್ಲಿ ಅದನ್ನು ತೋರಿಸಲು ಉದ್ಯುಕ್ತನಾಗಬೇಡ.

ಪ್ರಭುತ್ವಂ ಹಿ ಪರಾಕ್ರಮ್ಯ ಸಮ್ಯಕ್ ಪಕ್ಷಹರೇಷು ತೇ ।
ಯದಿ ತ್ವಮಿಹ ಧರ್ಮಾರ್ಥೀ ಮಾಮಪಿ ದ್ರಷ್ಟುಮರ್ಹಸಿ ॥೧೬॥

ನಿನ್ನನ್ನು ಆಕ್ರಮಿಸಿ ನಿನ್ನ ಸತ್ತನ್ನು ಅಪಹರಿಸುವವರಲ್ಲಿ ನೀನು ನಿನ್ನ ಪ್ರಭುತ್ವವನ್ನು ತೋರಿಸಬೇಕಷ್ಟೆ? ಧರ್ಮಾರ್ಥಿಯಾಗಿ ಕಪೋತವನ್ನು ರಕ್ಷಿಸುವುದಾದರೆ ಹಸಿವಿನಿಂದ ಬಳಲಿದ ನನ್ನನ್ನೂ ಸಹ ಧರ್ಮದೃಷ್ಟಿಯಿಂದಲೇ ನೋಡಬೇಕು (ಎಂದು ಹೇಳಿತು).

ಭೀಷ್ಮಃ

ಶ್ರುತ್ವಾ ಶ್ಯೇನಸ್ಯ ತದ್ವಾಕ್ಯಂ ರಾಜರ್ಷಿರ್ವಿಸ್ಮಯಂ ಗತಃ ।
ಸಂಭಾವ್ಯ ಚೈನಂ ತದ್ವಾಕ್ಯಂ ತದರ್ಥಿ ಪ್ರತ್ಯಭಾಷತ ॥೧೭॥

ಭೀಷ್ಮ– ಆ ರಾಜರ್ಷಿಯು ಗಿಡುಗದ ಆ ಮಾತುಗಳನ್ನು ಕೇಳಿ ವಿಸ್ಮಿತನಾದನು. ಆ ಪಕ್ಷಿಯನ್ನು ಸಮಾಧಾನಪಡಿಸಿ ಅದನ್ನು ಬೇಡುತ್ತಾ ಮಾತನಾಡಿದನು.

ಗೋವೃಷೋ ವಾ ವರಾಹೋ ವಾ ಮೃಗೋ ವಾ ಮಹಿಷೋಽಪಿ ವಾ ।
ತದ್ದರ್ಥಮದ್ಯ ಕ್ರಿಯತಾಂ ಕ್ಷುಧಾಪ್ರಶಮನಾಯ ತೇ ॥೧೮॥

ವೃಷಭವನ್ನಾಗಲೀ, ವರಾಹವನ್ನಾಗಲೀ, ಜಿಂಕೆಯನ್ನಾಗಲೀ ಅಥವಾ ಎಮ್ಮೆಯನ್ನಾಗಲೀ ನಿನ್ನ ಹಸಿವೆಯನ್ನು ಇಂಗಿಸುವುದಕ್ಕೆ ಈ ದಿನ ಆಹಾರವನ್ನಾಗಿ ಮಾಡಿಕೊ.

ಶರಣಾಗತಂ ನ ತ್ಯಜೇಯಮಿತಿ ಮೇ ವ್ರತಮಾಹಿತಮ್ ।
ನ ಮುಂಚತಿ ಮಮಾಂಗಾನಿ ದ್ವಿಜೋಽಯಂ ಪಶ್ಯ ವೈ ದ್ವಿಜ ॥೧೯॥

ಶರಣಾಗತರನ್ನು ಪರಿತ್ಯಜಿಸುವುದಿಲ್ಲವೆಂಬುದು ನಾನು ಧರಿಸಿದ ವ್ರತ. ಎಲೈ ಪಕ್ಷಿಯೇ, ಈ ಕಪೋತವು ನನ್ನ ಶರೀರದ ಅಂಗಗಳನ್ನು ಬಿಡುತ್ತಿಲ್ಲವೆಂಬುದನ್ನು ನೋಡು (ಎಂದು ಹೇಳಿದನು).

ಶ್ಯೇನಃ

ನ ವರಾಹಂ ನ ಚೋಕ್ಷಾಣಂ ನ ಚಾನ್ಯಾನ್ ವಿವಿಧಾನ್ ದ್ವಿಜಾನ್ ।
ಭಕ್ಷಯಾಮಿ ಮಹಾರಾಜ ಕಿಮನ್ನಾದ್ಯೇನ ತೇನ ಮೇ ॥೨೦॥

ಶ್ಯೇನ– ಎಲೈ ಮಹಾರಾಜನೇ, ನಾನು ವರಾಹವನ್ನಾಗಲೀ, ವೃಷಭವನ್ನಾಗಲೀ ಅಥವಾ ವಿವಿಧ ಪಕ್ಷಿಗಳನ್ನಾಗಲೀ ತಿನ್ನುವುದಿಲ್ಲ. ಅಂತಹ ಆಹಾರದಿಂದ ನನಗೆ ಏನು ಪ್ರಯೋಜನ?

ಯಸ್ತು ಮೇ ವಿಹಿತೋ ಭಕ್ಷಂ ಸ್ವಯಂ ದೇವೈಃ ಸನಾತನಃ ।
ಶ್ಯೇನಾ ಕಪೋತಾನ್ ಖಾದಂತಿ ಸ್ಥಿತಿರೇಷಾ ಸನಾತನೀ ॥೨೧॥

ನನಗೆ ದೇವತೆಗಳಿಂದ ಅನಾದಿಯಿಂದಲೂ ಯಾವುದು ಆಹಾರವೆಂದು ವಿಹಿತವಾಗಿದೆಯೋ ಅದು ನನಗೆ ಬೇಕು. ಗಿಡುಗಗಳು ಕಪೋತಗಳನ್ನು ತಿನ್ನುತ್ತವೆ ಎಂಬುದು ಒಂದು ಸನಾತನವಾದ ವಸ್ತುಸ್ಥಿತಿ.

ಉಶೀನರ ಕಪೋತೇ ತು ಯದಿ ಸ್ನೇಹಸ್ತವಾನಘ ।
ತತಸ್ತ್ವಂ ಮೇ ಪ್ರಯಚ್ಛಾದ್ಯ ಸ್ವಮಾಂಸಂ ತುಲಯಾ ಧೃತಮ್ ॥೨೨॥

ಎಲೈ ಉಶೀನರನೇ, ಅನಘನೇ, ನಿನಗೆ ಕಪೋತದಲ್ಲಿ ಸ್ನೇಹವಿದ್ದರೆ ಕಪೋತದ ಮಾಂಸದಷ್ಟು ನಿನ್ನ ಶರೀರದ ಮಾಂಸವನ್ನು ತಕ್ಕಡಿಯಲ್ಲಿ ತೂಗಿ ಈ ದಿನ ನನಗೆ ಕೊಡು.

ರಾಜಾ

ಮಹಾನನುಗ್ರಹೋ ಮೇಽದ್ಯ ಯಸ್ತ್ವಮೇವಮಿಹಾತ್ಥ ಮಾಮ್ ।
ಬಾಢಮೇವಂ ಕರಿಷ್ಯಾಮೀತ್ಯುಕ್ತ್ವಾ ಽಸೌ ರಾಜಸತ್ತಮ ॥೨೩॥

ಉತ್ಕೃತ್ಯೋತ್ಕೃತ್ಯ ಮಾಂಸಾನಿ ತುಲಯಾ ಸಮತೋಲಯತ್ ॥೨೪॥

ರಾಜ– ಎಲೈ ರಾಜಶ್ರೇಷ್ಠನೇ, ಆಗ ಉಶೀನರನು ಹೀಗೆ ಮಾತನಾಡಿ, ನೀನು ನನಗೆ ಮಹಾ ಅನುಗ್ರಹವನ್ನು ಮಾಡಿದ್ದೀಯೆ, ಒಳ್ಳೆಯದು, ಹಾಗೆಯೇ ಮಾಡುತ್ತೇನೆಂದು ಹೇಳಿ, ತನ್ನ ಶರೀರದ ಮಾಂಸವನ್ನು ಕತ್ತರಿಸಿ ಕತ್ತರಿಸಿ ತಕ್ಕಡಿಯಲ್ಲಿಟ್ಟು ತೂಗಿದನು.

ಅಂತಃಪುರೇ ತತಸ್ತಸ್ಯ ಸ್ತ್ರಿಯೋ ರತ್ನವಿಭೂಷಿತಾಃ ।
ಹಾಹಾಭೂತಾ ವಿನಿಷ್ಕ್ರಾಂತಾಃ ಶ್ರುತ್ವಾ ಪರಮದುಃಖಿತಾಃ ॥೨೫॥

ಅಂತಃಪುರದಲ್ಲಿದ್ದ ರತ್ನಭೂಷಿತರಾದ ಅವನ ಸ್ತ್ರೀಯರು ಈ ವಾರ್ತೆಯನ್ನು ಕೇಳಿ ಬಹಳ ದುಃಖದಿಂದ ಕೂಡಿದವರಾಗಿ ಹಾಹಾಕಾರವನ್ನು ಮಾಡುತ್ತಾ ಅಲ್ಲಿಗೆ ಬಂದರು.

ತಾಸಾಂ ರುದಿತಶಬ್ದೇನ ಮಂತ್ರಿಭೃತ್ಯಜನಸ್ಯ ಚ ।
ಬಭೂವ ಸುಮಹಾನ್ನಾದೋ ಮೇಘಗಂಭೀರನಿಸ್ವನಃ ॥೨೬॥

ಅವರ ರೋದನದ ಶಬ್ದದಿಂದ ಮತ್ತು ಮಂತ್ರಿ-ಭೃತ್ಯಜನರ ಶಬ್ದದಿಂದ ಮೇಘ ಗಂಭೀರವಾದ ದೊಡ್ಡ ನಾದವುಂಟಾಯಿತು.

ನಿರುದ್ಧಂ ಗಗನಂ ಸರ್ವಂ ಶುಭ್ರಂ ಮೇಘೈಃ ಸಮಂತತಃ ।
ಮಹೀ ಪ್ರಚಲಿತಾ ಚಾಸೀತ್ ತಸ್ಯ ಸತ್ಯೇನ ಕರ್ಮಣಾ ॥೨೭॥

ಶುಭ್ರವಾದ ಗಗನವನ್ನು ಮೇಘವು ಎಲ್ಲ ಕಡೆಗಳಲ್ಲಿಯೂ ಮುಚ್ಚಿತು. ಅವನ ಆ ಸತ್ಯಕರ್ಮದಿಂದ ಭೂಮಿಯು ನಡುಗಿತು.

ಸ ರಾಜಾ ಪಾರ್ಶ್ವತಶ್ಚೈವ ಬಾಹುಭ್ಯಾಮೂರುತಶ್ಚ ಯತ್ ।
ತಾನಿ ಮಾಂಸಾನಿ ಸಂಛಿದ್ಯ ತುಲಾಂ ಪೂರಯತೇ ಶನೈಃ ॥೨೮॥

ಆ ರಾಜನು ತನ್ನ ಪಕ್ಕೆಗಳಿಂದಲೂ, ಬಾಹುಗಳಿಂದಲೂ ಮತ್ತು ತೊಡೆಗಳಿಂದಲೂ ಮಾಂಸವನ್ನು ಕತ್ತರಿಸಿ ನಿಧಾನವಾಗಿ ತಕ್ಕಡಿಯಲ್ಲಿ ತುಂಬಿದನು.

ತಥಾಪಿ ನ ಸಮಸ್ತೇನ ಕಪೋತೇನ ಬಭೂವ ಹ ।
ಅಸ್ಥಿಭೂತೋ ಯದಾ ರಾಜಾ ನಿರ್ಮಾಂಸೋ ರುಧಿರಸ್ರವಃ ॥೨೯॥

ತುಲಾಂ ತತಃ ಸಮಾರೂಢಃ ಸ್ವಂ ಮಾಂಸಕ್ಷಯಮುತ್ಸೃಜನ್ ।
ತತಃ ಸೇಂದ್ರಾಸ್ತ್ರಯೋ ಲೋಕಾಸ್ತಂ ನರೇಂದ್ರಮುಪಸ್ಥಿತಾಃ ॥೩೦॥

ಆದರೂ ಅದರ ತೂಕವು ಕಪೋತದ ತೂಕಕ್ಕೆ ಸಮನಾಗಲಿಲ್ಲ. ರಾಜನು ತನ್ನ ಮಾಂಸವನ್ನೆಲ್ಲ ತೆಗೆದು ರಕ್ತವನ್ನು ಸುರಿಸುತ್ತಾ ಕೇವಲ ಅಸ್ಥಿಮಾತ್ರ ಶರೀರನಾಗಿ ತನ್ನ ಮಾಂಸ ರಹಿತ ಶರೀರವನ್ನು ನೋಡಿ ತಾನೇ ತಕ್ಕಡಿಯಲ್ಲಿ ಕುಳಿತುಕೊಂಡನು. ಆಗ ಇಂದ್ರನನ್ನೇ ಮೊದಲು ಮಾಡಿಕೊಂಡ ಮೂರುಲೋಕಗಳು ಆ ನರೇಂದ್ರನ ಸಮೀಪಕ್ಕೆ ಬಂದರು.

ಭೇರ್ಯಶ್ಚಾಕಾಶಗೈಸ್ತತ್ರ ವಾದಿತಾ ದೇವದುಂದುಭಿಃ ।
ಅಮೃತೇನಾವಸಿಕ್ತಶ್ಚ ವೃಷದರ್ಭೋ ನರೇಶ್ವರಃ ॥೩೧॥

ಆಕಾಶಸಂಚಾರಿಗಳಿಂದ ಭೇರಿಗಳು ಬಾರಿಸಲ್ಪಟ್ಟವು. ದೇವದುಂದುಭಿಗಳು ಮೊಳಗಿಸಲ್ಪಟ್ಟವು. ರಾಜನಾದ ವೃಷದರ್ಭನು ಅಮೃತದಿಂದ ಚುಮುಕಿಸಲ್ಪಟ್ಟನು.

ದಿವ್ಯೈಶ್ಚ ಸುಮುಖೈರ್ಮಾಲ್ಯೈರಭಿವೃಷ್ಟಃ ಪುನಃ ಪುನಃ ।
ದೇವಗಂಧರ್ವಸಂಘಾತೈರಪ್ಸರೋಭಿಶ್ಚ ಸರ್ವತಃ ॥೩೨॥

ದೇವ-ಗಂಧರ್ವಸಮೂಹದಿಂದಲೂ, ಅಪ್ಸರೆಯರಿಂದಲೂ ಪುನಃ ಪುನಃ ಅವನ ಮೇಲೆ ಎಲ್ಲ ಕಡೆಯಿಂದಲೂ ಸುಗಂಧಯುಕ್ತವಾದ, ಸುಖಕರವಾದ ಹೂಮಾಲೆಗಳ ಮಳೆಯು ಸುರಿಸಲ್ಪಟ್ಟಿತು.

ನೃತ್ತಶ್ಚೈವೋಪಗೀತಶ್ಚ ಪಿತಾಮಹ ಇವ ಪ್ರಭುಃ ।
ಹೇಮಪ್ರಾಸಾದಸಂಬಾಧಂ ಮಣಿಕಾಂಚನತೋರಣಮ್ ॥೩೩॥

ಸ ವೈದೂರ್ಯಮಣಿಸ್ತಂಭವಿಮಾನಂ ಸಮಧಿಷ್ಠಿತಃ ।
ಸ ರಾಜರ್ಷಿರ್ಗತಃ ಸ್ವರ್ಗಂ ಕರ್ಮಣಾ ತೇನ ಶಾಶ್ವತಮ್ ॥೩೪॥

ಪ್ರಭುವಾದ ಅವನು ಪಿತಾಮಹನಾದ ಬ್ರಹ್ಮನಂತೆ ನೃತ್ಯ, ಗೀತೆಗಳಿಂದ ಸೇವಿಸಲ್ಪಟ್ಟನು. ಆ ರಾಜರ್ಷಿಯು ಸುವರ್ಣಮಯವಾದ ಪ್ರಾಸಾದಗಳಿಂದ ನಿಬಿಡವಾದ ಮಣಿ-ಕಾಂಚನ ತೋರಣಗಳನ್ನು ಹೊಂದಿದ, ವೈಡೂರ್ಯಮಣಿ ಸ್ತಂಭಗಳಿರುವ ಉಪ್ಪರಿಗೆಗಳನ್ನು ಹೊಂದಿರುವ ಗೃಹಗಳಿಂದ ಕೂಡಿದ ಶಾಶ್ವತವಾದ ಸ್ವರ್ಗಕ್ಕೆ ಆ ಕರ್ಮದಿಂದ ಹೋದನು.

ಶರಣಾಗತೇಷು ಚೈವಂ ತ್ವಂ ಕುರು ಸರ್ವಂ ಯುಧಿಷ್ಠಿರ ।
ಭಕ್ತಾನಾಮನುರಕ್ತಾನಾಮಾಶ್ರಿತಾನಾಂ ಚ ರಕ್ಷಿತಾ ॥೩೫॥

ಎಲೈ ಯುಧಿಷ್ಠಿರನೇ, ನೀನು ಶರಣಾಗತರಿಗೆ ಹೀಗೆ ಸರ್ವ ಉಪಕಾರವನ್ನು ಮಾಡು. ಭಕ್ತರು, ಅನುರಕ್ತರು ಮತ್ತು ಆಶ್ರಿತರಾದವರನ್ನು ರಕ್ಷಿಸುವವನಾಗು.

ದಯಾವಾನ್ ಸರ್ವಭೂತೇಷು ಪರತ್ರ ಸುಖಮೇಧತೇ ॥೩೬॥

ಸರ್ವಪ್ರಾಣಿಗಳಲ್ಲಿ ದಯೆಯನ್ನು ಹೊಂದಿದವನು ಪರಲೋಕದಲ್ಲಿ ಸುಖವನ್ನು ಪಡೆಯುತ್ತಾನೆ.

ಸಾಧುವೃತ್ತೋ ಹಿ ಯೋ ರಾಜಾ ಸದ್ವೃತ್ತಮನುತಿಷ್ಠತಿ ।
ಕಿಂ ನ ಪ್ರಾಪ್ತಂ ಭವೇತ್ತೇನ ಸ್ವರ್ವ್ಯಾಜೇನೇಹ ಕರ್ಮಣಾ ॥೩೭॥

ಸ ರಾಜರ್ಷಿರ್ವಿಶುದ್ಧಾತ್ಮಾ ಧೀರಃ ಸತ್ಯಪರಾಕ್ರಮಃ ।
ಕಾಶೀನಾಮೀಶ್ವರಃ ಖ್ಯಾತಸ್ತ್ರಿಷು ಲೋಕೇಷು ಕರ್ಮಣಾ ॥೩೮॥

ತನ್ನನ್ನೇ ನಿಮಿತ್ತೀಕರಿಸಿಕೊಂಡು ಮಾಡಿದ ಆ ಸತ್ಕರ್ಮದಿಂದ ಆ ರಾಜನು ಏನನ್ನು ಪಡೆಯಲು ಸಾಧ್ಯವಿಲ್ಲ? ವಿಶುದ್ಧವಾದ ಮನಸ್ಸುಳ್ಳವನೂ, ಧೀರನೂ, ಸತ್ಯಪರಾಕ್ರಮ ಉಳ್ಳವನೂ ಆದ ಕಾಶೀರಾಜನಾದ ಆ ರಾಜರ್ಷಿಯು ತನ್ನ ಇಂತಹ ಕರ್ಮದಿಂದ ಮೂರುಲೋಕಗಳಲ್ಲಿಯೂ ಪ್ರಖ್ಯಾತನಾದನು.

ಯೋಽಪ್ಯನ್ಯಃ ಕಾರಯೇದೇವಂ ಶರಣಾಗತರಕ್ಷಣಮ್ ।
ಸೋಽಪಿ ಗಚ್ಛೇತ ತಾಮೇವ ಗತಿಂ ಭರತಸತ್ತಮ ॥೩೯॥

ಎಲೈ ಭರತಸತ್ತಮನೇ, ಬೇರೆಯವನೂ ಸಹ ಹೀಗೆ ಶರಣಾಗತ ರಕ್ಷಣೆಯನ್ನು ಮಾಡಿದರೆ ಅವನೂ ಸಹ ಅದೇ ಗತಿಯನ್ನು ಹೊಂದುವನು.

ಇದಂ ವೃತ್ತಂ ಹಿ ರಾಜರ್ಷೇರ್ವೃಷದರ್ಭಸ್ಯ ಕೀರ್ತಯನ್ ।
ಪೂತಾತ್ಮಾ ವೈ ಭವೇಲ್ಲೋಕೇ ಶೃಣುಯಾದ್ ಯಶ್ಚ ನಿತ್ಯಶಃ ॥೪೦॥

ರಾಜರ್ಷಿಯಾದ ವೃಷದರ್ಭನ ಈ ವೃತ್ತಾಂತವನ್ನು ಯಾವನು ನಿತ್ಯದಲ್ಲಿಯೂ ಕೀರ್ತನೆ ಮಾಡುತ್ತಾನೆಯೋ ಅಥವಾ ಕೇಳುತ್ತಾನೆಯೋ ಅವನು ಲೋಕದಲ್ಲಿ ಪವಿತ್ರಾತ್ಮನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನ-ಧರ್ಮೇ ಶ್ಯೇನ-ಕಪೋತೀಯಂ ನಾಮ
ದ್ವಿಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಐರವತ್ಕೂರನೆಯ ಅಧ್ಯಾಯ

ಭೀಷ್ಮರಿಂದ ಬ್ರಾಹ್ಮಣಪ್ರಶಂಸೆ.

ಯುಧಿಷ್ಠಿರಃ

ಕಿಂ ರಾಜ್ಞಃ ಸರ್ವಕೃತ್ಯಾನಾಂ ಗರೀಯಃ ಸ್ಯಾತ್ ಪಿತಾಮಹ ।
ಕಿಂ ಕುರ್ವನ್ ಕರ್ಮ ನೃಪತಿರುಭೌ ಲೋಕೌ ಸಮಶ್ನುತೇ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ರಾಜರು ಮಾಡಬೇಕಾದ ಕಾರ್ಯದಲ್ಲಿ ಅತ್ಯಂತ ದೊಡ್ಡದಾದುದು ಯಾವುದು? ರಾಜನು ಯಾವ ಕರ್ಮವನ್ನು ಮಾಡಿದರೆ ಎರಡು ಲೋಕಗಳನ್ನೂ ಪಡೆಯುತ್ತಾನೆ?

ಭೀಷ್ಮಃ

ಏತದ್ ರಾಜ್ಞಃ ಕೃತ್ಯತಮಮಭಿಷಿಕ್ತಸ್ಯ ಭಾರತ ।
ಬ್ರಾಹ್ಮಣಾನಾಮನುಷ್ಠಾನಮತ್ಯಂತಂ ಸುಖಮಿಚ್ಛತಾ ।
ಶ್ರೋತ್ರಿಯಾನ್ ಬ್ರಾಹ್ಮಣಾನ್ ವೃದ್ಧಾನ್ ನಿತ್ಯಮೇವಾಭಿಪೂಜಯೇತ್ ॥

ಭೀಷ್ಮ– ಎಲೈ ಭಾರತನೇ, ಅಭಿಷಿಕ್ತನಾಗಿ ಸುಖವನ್ನು ಬಯಸುವ ರಾಜನಿಗೆ ಬ್ರಾಹ್ಮಣರಿಗೆ ಅನುಕೂಲವಾದ ಸ್ಥಾನವನ್ನು ಕಲ್ಪಿಸಿಕೊಡುವುದು ಮಾಡಬೇಕಾದ ಗುರುತರವಾದ ಕಾರ್ಯ. ಶ್ರೋತ್ರಿಯರೂ, ವೃದ್ಧರೂ ಆದ ಬ್ರಾಹ್ಮಣರನ್ನು ನಿತ್ಯವೂ ಪೂಜಿಸಬೇಕು (ಲಕ್ಷಾಲಂಕಾರ).

ಪೌರಜಾನಪದಾಂಶ್ಚಾಪಿ ಬ್ರಾಹ್ಮಣಾಂಶ್ಚ ಬಹುಶ್ರುತಾನ್ ।
ಸಾಂತ್ವೇನ ಭೋಗದಾನೇನ ನಮಸ್ಕಾರೈಸ್ತಥಾऽರ್ಚಯೇತ್ ॥೩॥

ಪೌರ-ಜಾನಪದರನ್ನೂ, ಬಹುಶ್ರುತರಾದ ಬ್ರಾಹ್ಮಣರನ್ನೂ ಸಮಾಧಾನ ವಚನಗಳಿಂದಲೂ, ಭೋಗದಾನಗಳಿಂದಲೂ, ನಮಸ್ಕಾರಗಳಿಂದಲೂ ಪೂಜಿಸಬೇಕು.

ಏತತ್ ಕೃತ್ಯತಮಂ ರಾಜ್ಞೋ ನಿತ್ಯಮೇವೇತಿ ಲಕ್ಷಯೇತ್ ।
ಯಥಾऽऽತ್ಮಾನಂ ಯಥಾ ಪುತ್ರಾಂಸ್ತಥೈತಾನ್ ಪರಿಪಾಲಯೇತ್ ॥೪॥

ಇದು ರಾಜನು ನಿತ್ಯವೂ ಮಾಡಬೇಕಾದ ಅತ್ಯಂತ ದೊಡ್ಡ ಕಾರ್ಯವೆಂದು ಗಮನಿಸಬೇಕು. ತನ್ನನ್ನು, ತನ್ನ ಪುತ್ರರನ್ನು ಪರಿಪಾಲಿಸಿದಂತೆ ಇವರನ್ನೂ ಪರಿಪಾಲಿಸಬೇಕು.

ಯೇ ಚಾಪ್ಯೇಷಾಂ ಪೂಜ್ಯತಮಾಸ್ತಾನ್ ದೃಢಂ ಪ್ರತಿಪೂಜಯೇತ್ ।
ತೇಷು ಶಾಂತೇಷು ತದ್ರಾಷ್ಟ್ರಂ ಸರ್ವಮೇವ ವಿರಾಜತೇ ॥೫॥

ಅವರಲ್ಲಿಯೂ ಯಾರು ಅತ್ಯಂತ ಪೂಜ್ಯರಿರುತ್ತಾರೆಯೋ ಅವರನ್ನು ಇನ್ನೂ ಹೆಚ್ಚಾಗಿ ಪೂಜಿಸಬೇಕು. ಅಂತಹವರು ಶಾಂತವಾಗಿದ್ದರೆ ರಾಷ್ಟ್ರವೆಲ್ಲವೂ ಕಂಗೊಳಿಸುತ್ತದೆ.

ತೇ ಪೂಜ್ಯಾಸ್ತೇ ನಮಸ್ಕಾರ್ಯಾಸ್ತೇ ರಕ್ಷ್ಯಾಃ ಪಿತರೋ ಯಥಾ ।
ತೇಷ್ವೇವ ಯಾತ್ರಾ ಲೋಕಸ್ಯ ಭೂತಾನಾಮಿವ ವಾಸವೇ ॥೬॥

ಅವರೇ ತಂದೆಯಂತೆ ಪೂಜ್ಯರು, ಅವರೇ ನಮಸ್ಕಾರಕ್ಕೆ ಅರ್ಹರಾದವರು ಮತ್ತು ರಕ್ಷಿಸಲ್ಪಡಬೇಕಾದವರು. ಪ್ರಾಣಿಗಳ ಜೀವನವು ಇಂದ್ರನನ್ನು ಅವಲಂಬಿಸಿದಂತೆ ಲೋಕಯಾತ್ರೆಯು ಅವರನ್ನೇ ಅವಲಂಬಿಸಿದೆ.

ಅಭಿಚಾರೈರುಪಾಯೈಶ್ಚ ದಹೇಯುರಪಿ ತೇಜಸಾ ।
ನಿಃಶೇಷಂ ಕುಪಿತಾಃ ಕುರ್ಯುರುಗ್ರಾಃ ಸತ್ಯಪರಾಕ್ರಮಾಃ ॥೭॥

ಅಂತಹ ಉಗ್ರರೂ, ಸತ್ಯಪರಾಕ್ರಮರೂ ಆದ ಬ್ರಾಹ್ಮಣರು ಕೋಪಗೊಂಡರೆ ತಮ್ಮ ತೇಜಸ್ಸಿನಿಂದಲೂ, ಅಭಿಚಾರ ಪ್ರಯೋಗಗಳಿಂದಲೂ, ಬೇರೆ ಉಪಾಯಗಳಿಂದಲೂ ನಿಶ್ಶೇಷವಾಗಿ ದಹಿಸಿಯಾರು.

ನಾಂತಮೇಷಾಂ ಪ್ರಪಶ್ಯಾಮಿ ನ ದಿಶಶ್ಚಾಪ್ಯಪಾವೃತಾಃ ।
ಕುಪಿತಾಃ ಸಮುದೀಕ್ಷಂತೇ ದಾವೇಷ್ವಗ್ನಿಶಿಖಾ ಇವ ॥೮॥

ಅವರ ಸಾಮರ್ಥ್ಯಕ್ಕೆ ಎಲ್ಲೆಯನ್ನೇ ಕಾಣುವುದಿಲ್ಲ. ಎಲ್ಲ ದಿಕ್ಕುಗಳೂ ಅವರಿಗೆ ಮುಕ್ತವಾಗಿವೆ. ಕುಪಿತರಾದರೆ ಅವರ ದೃಷ್ಟಿಯು ದಾವಾಗ್ನಿಯ ಜ್ವಾಲೆಯಂತೆ ಇರುತ್ತದೆ.

ಬಿಭ್ಯತ್ಯೇಷಾಂ ಸಾಹಸಿಕಾ ಗುಣಾಸ್ತೇಷಾಮತೀವ ಹಿ ।
ಕೂಪಾ ಇವ ತೃಣಚ್ಛನ್ನಾ ವಿಶುದ್ಧಾ ದ್ಯೌರಿವಾಪರೇ ॥೯॥

ಸಾಹಸ ಮಾಡುವವರೂ ಸಹ ಅವರಿಗೆ ಹೆದರುತ್ತಾರೆ. ಅವರ ಗುಣಗಳು ಅಪಾರವಾಗಿವೆ. ಕೆಲವರು ಹುಲ್ಲಿನಿಂದ ಮುಚ್ಚಿದ ಬಾವಿಯಂತೆಯೂ, ಇನ್ನು ಕೆಲವರು ವಿಶುದ್ಧವಾದ ಆಕಾಶದಂತೆಯೂ ಇರುತ್ತಾರೆ.

ಪ್ರಸಹ್ಯಕಾರಿಣಃ ಕೇಚಿತ್ ಕಾರ್ಪಾಸಮೃದವೋಽಪರೇ ।
ಸಂತಿ ಚೈಷಾಮತಿಶತಾಸ್ತಥಾನ್ಯೇಽತಿತಪಸ್ವಿನಃ ॥೧೦॥

ಕೆಲವರು ತಮ್ಮ ಸಾಮರ್ಥ್ಯವನ್ನು ಉಪಯೋಗಿಸಿ ಕಾರ್ಯವನ್ನು ಮಾಡುವವರು, ಇನ್ನು ಕೆಲವರು ಹತ್ತಿಯಂತೆ ಮೃದುವಾದವರು. ಅವರಲ್ಲಿ ಬಹಳ ಶತರೂ ಇದ್ದಾರೆ ಬಹಳ ತಪಸ್ವಿಗಳಾದವರೂ ಇದ್ದಾರೆ.

ಕೃಷಿಗೋರಕ್ಷಮಪ್ಯನ್ಯೇ ಭೈಕ್ಷಮನ್ಯೇಽಪ್ಯನುಷ್ಠಿತಾಃ ।
ಚೋರಾಶ್ಚಾನ್ಯೇಽನೃತಾಶ್ಚಾನ್ಯೇ ತಥಾನ್ಯೇ ನಟನರ್ತಕಾಃ ॥೧೧॥

ಕೆಲವರು ಕೃಷಿ, ಗೋರಕ್ಷವನ್ನು ಮಾಡುತ್ತಾರೆ. ಇನ್ನು ಕೆಲವರು ಭಿಕ್ಷಾವೃತ್ತಿಯನ್ನು ಮಾಡುತ್ತಾರೆ. ಅವರಲ್ಲಿ ಚೋರರೂ, ಅನೃತವನ್ನು ನುಡಿಯುವವರೂ, ನಟ-ನರ್ತಕರೂ ಇದ್ದಾರೆ.

ಸರ್ವಕರ್ಮಸು ದೃಶ್ಯಂತೇ ಪ್ರಶಾಂತೇಷ್ವಿತರೇಷು ಚ ।
ವಿವಿಧಾಚಾರಯುಕ್ತಾಶ್ಚ ಬ್ರಾಹ್ಮಣಾ ಭರತರ್ಷಭ ॥೧೨॥

ಅವರು ಪ್ರಶಾಂತವಾದ ಮತ್ತು ಪ್ರಶಾಂತವಲ್ಲದ ಎಲ್ಲ ಕಾರ್ಯಗಳಲ್ಲಿಯೂ ಕಂಡುಬರುತ್ತಾರೆ. ಎಲೈ ಭರತಶ್ರೇಷ್ಠನೇ, ಬ್ರಾಹ್ಮಣರು ಅನೇಕ ವಿಧವಾದ ಆಚಾರದಿಂದ ಕೂಡಿದವರು.

ನಾನಾಕರ್ಮಸು ಯುಕ್ತಾನಾಂ ಬಹುಕರ್ಮೋಪಜೀವಿನಾಮ್ ।
ಧರ್ಮಜ್ಞಾನಾಂ ಸತಾಂ ತೇಷಾಂ ನಿತ್ಯಮೇವಾನುಕೀರ್ತಯೇತ್ ॥೧೩॥

ಅನೇಕ ಕಾರ್ಯಗಳಲ್ಲಿ ನಿಯುಕ್ತರಾದ, ಅನೇಕ ಕರ್ಮಗಳನ್ನು ಉಪಜೀವಿಸುವ ಧರ್ಮಜ್ಞರಾದ, ಸಜ್ಜನರಾದ ಅವರನ್ನು ಯಾವಾಗಲೂ ಪ್ರಶಂಸಿಸಬೇಕು.

ಪಿತೄಣಾಂ ದೇವತಾನಾಂ ಚ ಮನುಷ್ಯೋರಗರಕ್ಷಸಾಮ್ ।
ಪುರೋಹಿತಾ ಮಹಾಭಾಗಾ ಬ್ರಾಹ್ಮಣಾ ವೈ ನರಾಧಿಪ ॥೧೪॥

ಎಲ್ಲೆ ನರಾಧಿಪನೇ, ಪಿತೃಗಳಿಗೂ, ದೇವತೆಗಳಿಗೂ, ಮನುಷ್ಯೋರಗ-ರಾಕ್ಷಸರಿಗೂ ಮಹಾನುಭಾವರಾದ ಬ್ರಾಹ್ಮಣರೇ ಪುರೋಹಿತರಪ್ಪೆ?

ನೈತೇ ದೇವೈರ್ನ ಪಿತೃಭಿರ್ನ ಗಂಧರ್ವೈರ್ನ ರಾಕ್ಷಸೈಃ ।
ನಾಸುರೈರ್ನ ಪಿಶಾಚೈಶ್ಚ ಶಕ್ಯಾ ಜೇತುಂ ದ್ವಿಜಾತಯಃ ॥೧೫॥

ದೇವತೆಗಳಾಗಲೀ, ಪಿತೃಗಳಾಗಲೀ, ಗಂಧರ್ವರಾಗಲೀ, ರಾಕ್ಷಸರಾಗಲೀ, ಅಸುರರಾಗಲೀ, ಪಿಶಾಚಿಗಳಾಗಲೀ ತಮ್ಮ ಶಕ್ತಿಯಿಂದ ಬ್ರಾಹ್ಮಣರನ್ನು ಜಯಿಸಲು ಸಾಧ್ಯವಿಲ್ಲ.

ಅದೈವಂ ದೈವತಂ ಕುರ್ಯುರ್ದೈವತಂ ಚಾಪ್ಯದೈವತಮ್ ।
ಯಮಿಚ್ಛೇಯುಃ ಸ ರಾಜಾ ಸ್ಯಾದ್ ಯಂ ದ್ವಿಷ್ಯುಃ ಸ ಪರಾಭವೇತ್ ॥

ಅವರು ದೇವತೆಯಲ್ಲದವನನ್ನೂ ದೇವತೆಯಾಗಿ ಮಾಡಿಯಾರು. ದೇವತೆಯನ್ನು ಅದೇವತೆಯನ್ನಾಗಿ ಮಾಡಿಯಾರು. ಅವರು ಯಾರನ್ನು ಇಷ್ಟಪಡುತ್ತಾರೆಯೋ ಅವನು ರಾಜನಾದಾನು. ಯಾರನ್ನು ದ್ವೇಷಿಸುತ್ತಾರೋ ಅವನು ಪರಾಭವ ಹೊಂದಿಯಾನು.

ಪರಿವಾದಂ ಚ ಯೇ ಕುರ್ಯುರ್ಬ್ರಾಹ್ಮಣಾನಾಮಚೇತಸಃ ।
ನಿಂದಾಪ್ರಶಂಸಾಕುಶಲಾಃ ಕೀರ್ತ್ಯಕೀರ್ತಿಪರಾವರಾಃ ।
ಪರಿಕುಪ್ಯಂತಿ ತೇ ರಾಜನ್ ಸತತಂ ದ್ವಿಷತಾಂ ದ್ವಿಜಾಃ ॥೧೭॥

ನಿಂದಾ-ಪ್ರಶಂಸೆಗಳಲ್ಲಿ ಕುಶಲರಾದ, ಕೀರ್ತಿಯನ್ನು ಶ್ರೇಷ್ಠವೆಂದೂ, ಅಕೀರ್ತಿಯನ್ನು ಕನಿಷ್ಠವೆಂದೂ ತಿಳಿಯುವ ಅವರು ಯಾವ ಮೂರ್ಖರು ತಮ್ಮನ್ನು ನಿಂದಿಸುತ್ತಾರೆಯೋ ಮತ್ತು ದ್ವೇಷವನ್ನು ಮಾಡುತ್ತಾರೆಯೋ ಅವರ ಮೇಲೆ ಸತತವಾಗಿ ಕೋಪಗೊಳ್ಳುತ್ತಾರೆ.

ಬ್ರಾಹ್ಮಣಾ ಯಂ ಪ್ರಶಂಸಂತಿ ಪುರುಷಃ ಸ ಪ್ರವರ್ಧತೇ ।
ಬ್ರಾಹ್ಮಣೈರ್ಯಃ ಪರಾಕ್ರುಷ್ಟಃ ಪರಾಭೂಯಾತ್ ಕ್ಷಣಾದ್ಧಿ ಸಃ ॥೧೮॥

ಬ್ರಾಹ್ಮಣರು ಯಾವನನ್ನು ಹೊಗಳುತ್ತಾರೆಯೋ ಅಂತಹ ಪುರುಷನು ಅಭಿವೃದ್ಧಿಯನ್ನು ಹೊಂದುತ್ತಾನೆ. ಬ್ರಾಹ್ಮಣರಿಂದ ನಿಂದಿಸಲ್ಪಡುವವನು ಒಂದೇ ಕ್ಷಣದಲ್ಲಿ ಪರಾಭವ ಹೊಂದುತ್ತಾನೆ.

ಶಕಾ ಯವನಕಾಂಬೋಜಾಸ್ತಾಸ್ತಾಃ ಕ್ಷತ್ರಿಯಜಾತಯಃ ।
ವೃಷಲತ್ವಂ ಪರಿಗತಾ ಬ್ರಾಹ್ಮಣಾನಾಮದರ್ಶನಾತ್ ॥೧೯॥

ಶಕರೂ, ಯವನರೂ, ಕಾಂಬೋಜರೂ ಮೊದಲಾದ ಕ್ಷತ್ರಿಯ ಜಾತಿಯವರು ಬ್ರಾಹ್ಮಣರನ್ನು ನೋಡದಿದ್ದ ಕಾರಣದಿಂದ ಶೂದ್ರತ್ವವನ್ನು ಹೊಂದಿದರು.

ದ್ರಮಿಳಾಶ್ಚ ಕಳಿಂಗಾಶ್ಚ ಪುಳಿಂದಾಶ್ಚಾಪ್ಯುಶೀನರಾಃ ।
ಕೌಲಾಃ ಸರ್ಪಾ ಮಾಹಿಷಕಾಸ್ತಾಸ್ತಾಃ ಕ್ಷತ್ರಿಯಜಾತಯಃ ॥೨೦॥

ವೃಷಲತ್ವಂ ಪರಿಗತಾ ಬ್ರಾಹ್ಮಣಾನಾಮದರ್ಶನಾತ್ ।
ಶ್ರೇಯಾನ್ ಪರಾಜಯಸ್ತೇಭ್ಯೋ ನ ಜಯೋ ಜಯತಾಂವರ ॥೨೧॥

ದ್ರಮಿಳರೂ, ಕಳಿಂಗರೂ, ಪುಳಿಂದರೂ, ಉಶೀನರರೂ, ಕೌಲರೂ, ಸರ್ಪದೇಶದವರೂ, ಮಾಹಿಷ್ಮಿಕರೂ ಮೊದಲಾದ ಕ್ಷತ್ರಿಯಜಾತಿಯವರು ಬ್ರಾಹ್ಮಣರನ್ನು ನೋಡದಿದ್ದ ಕಾರಣದಿಂದ ಶೂದ್ರರಾದರು. ಎಲೈ ಜಯಶಾಲಿಗಳಲ್ಲಿ ಶ್ರೇಷ್ಠನೇ, ಬ್ರಾಹ್ಮಣರಿಂದ ಪರಾಜಯವನ್ನು ಹೊಂದುವುದು ಶ್ರೇಯಸ್ಕರವಾದುದು. ಅವರನ್ನು ಜಯಿಸುವುದು ಶ್ರೇಯಸ್ಕರವಲ್ಲ.

ಯಸ್ತು ಸರ್ವಮಿದಂ ಹನ್ಯಾದ್ ಬ್ರಾಹ್ಮಣಂ ಚ ನ ತತ್ಸಮಮ್ ।
ಬ್ರಹ್ಮವಧ್ಯಾ ಮಹಾನ್ ದೋಷ ಇತ್ಯಾಹುಃ ಪರಮರ್ಷಯಃ ॥೨೨॥

ಒಬ್ಬನು ಈ ಜಗತ್ತೆಲ್ಲವನ್ನೂ ಕೊಂದರೂ ಮತ್ತು ಬ್ರಾಹ್ಮಣರನ್ನು ಕೊಂದರೂ ಜಗತ್ತಿನ ಹತ್ಯೆಯು ಬ್ರಹ್ಮಹತ್ಯೆಗೆ ಸಮವಾಗುವುದಿಲ್ಲ. ಬ್ರಹ್ಮಹತ್ಯೆಯು ಬಹಳ ದೊಡ್ಡ ದೋಷವೆಂದು ಶ್ರೇಷ್ಠರಾದ ಋಷಿಗಳು ಹೇಳುತ್ತಾರೆ.

ಪರಿವಾದೋ ದ್ವಿಜಾತೀನಾಂ ನ ಶ್ರೋತವ್ಯಃ ಕಥಂಚನ ।
ಆಸೀತಾಧೋಮುಖಸ್ತೂಷ್ಣೀಂ ಸಮುತ್ಥಾಯ ವ್ರಜೇತ ವಾ ॥೨೩॥

ಬ್ರಾಹ್ಮಣರ ನಿಂದೆಯನ್ನು ಎಂದೂ ಕೇಳಬಾರದು. ತಲೆಯನ್ನು ತಗ್ಗಿಸಿ ಕುಳಿತು ಕೊಳ್ಳಬೇಕು ಅಥವಾ ಮೌನದಿಂದ ಎದ್ದು ಹೊರಗೆ ಹೋಗಬೇಕು.

ನ ಸ ಜಾತೋ ಜನಿಷ್ಯೋ ವಾ ಪೃಥಿವ್ಯಾಮಿಹ ಕಶ್ಚನ ।
ಯೋ ಬ್ರಾಹ್ಮಣವಿರೋಧೇನ ಸುಖಂ ಜೀವಿತುಮುತ್ಸಹೇತ್ ॥೨೪॥

ಹಿಂದೆ ಹುಟ್ಟಿದವನಾಗಲೀ, ಮುಂದೆ ಹುಟ್ಟುವವನಾಗಲೀ ಈ ಭೂಮಿಯಲ್ಲಿ ಬ್ರಾಹ್ಮಣರ ವಿರೋಧವನ್ನು ಮಾಡಿ ಸುಖವಾಗಿ ಜೀವಿಸ ಬಯಸಲು ಸಾಧ್ಯವಿಲ್ಲ.

ದುರ್ಗ್ರಹೋ ಮುಷ್ಟಿನಾ ವಾಯುರ್ದುಃಸ್ಪರ್ಶಃ ಪಾಣಿನಾ ಶಶೀ ।
ದುರ್ಧರಾ ಪೃಥಿವೀ ಮೂರ್ಧ್ನಾ ದುರ್ಜಯಾ ಬ್ರಾಹ್ಮಣಾ ಭುವಿ ॥೨೫॥

ವಾಯುವನ್ನು ಮುಷ್ಟಿಯಿಂದ ಹಿಡಿಯುವುದು ಅಸಾಧ್ಯ. ಚಂದ್ರನನ್ನು ಹಸ್ತದಿಂದ ಮುಟ್ಟುವುದು ಅಸಾಧ್ಯ. ಭೂಮಿಯನ್ನು ಶಿರಸ್ಸಿನಲ್ಲಿ ಧರಿಸುವುದು ಅಸಾಧ್ಯ. ಭೂಮಿಯಲ್ಲಿ ಬ್ರಾಹ್ಮಣರನ್ನು ಜಯಿಸುವುದು ಅಸಾಧ್ಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನ-ಧರ್ಮೇ ಬ್ರಾಹ್ಮಣಪ್ರಶಂಸಾನಾಮ ತ್ರಿಷಷ್ಟಿತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ನಾಲ್ಕನೆಯ ಅಧ್ಯಾಯ

ಬ್ರಾಹ್ಮಣ ಪ್ರಶಂಸೆ. ಪೃಥಿವೀ-ವಾಸುದೇವ ಸಂವಾದ.

ಭೀಷ್ಮಃ

ಬ್ರಾಹ್ಮಣಾನೇವ ಸತತಂ ಭೃಶಂ ಸಂಪ್ರತಿಪೂಜಯೇತ್ ।
ಏತೇ ಹಿ ಸೋಮರಾಜಾನ ಈಶ್ವರಾಃ ಸುಖದುಃಖಯೋಃ ॥೧॥

ಭೀಷ್ಮ- ಬ್ರಾಹ್ಮಣರನ್ನೇ ಸತತವಾಗಿ ಚೆನ್ನಾಗಿ ಪೂಜಿಸಬೇಕು. ಅವರಿಗೆ ಚಂದ್ರನು ರಾಜನಾದವನು. ಅವರು ಸುಖ-ದುಃಖವನ್ನು ಉಂಟು ಮಾಡಲು ಸಮರ್ಥರಾದವರು.

ಏತೇ ಭೋಗೈರಲಂಕಾರೈರನ್ಯೈಶ್ಚೈವ ಕಿಮಿಚ್ಛಕೈಃ ।
ಸದಾ ಪೂಜ್ಯಾ ನಮಸ್ಕಾರ್ಯಾ ರಕ್ಷ್ಯಾಶ್ಚ ಪಿತೃವನ್ನೃಪೈಃ ।
ಅತೋ ರಾಷ್ಟ್ರಸ್ಯ ಶಾಂತಿರ್ಹಿ ಭೂತಾನಾಮಿವ ವಾಸವಾತ್ ॥೨॥

ಅವರನ್ನು ಭೋಗಗಳಿಂದಲೂ, ಅಲಂಕಾರಗಳಿಂದಲೂ, ಅವರು ಇಚ್ಛಿಸುವ ಅನೇಕ ಪದಾರ್ಥಗಳಿಂದಲೂ ಯಾವಾಗಲೂ ಚೆನ್ನಾಗಿ ಪೂಜಿಸಿ, ನಮಸ್ಕರಿಸಿ ರಾಜರು ತಂದೆಯಂತೆ ರಕ್ಷಿಸಬೇಕು. ಎಲ್ಲ ಪ್ರಾಣಿಗಳಿಗೆ ಇಂದ್ರನಿಂದ ಶಾಂತಿ ಉಂಟಾದಂತೆ ರಾಷ್ಟ್ರಕ್ಕೆ ಬ್ರಾಹ್ಮಣರಿಂದ ಶಾಂತಿಯುಂಟಾಗುತ್ತದೆ.

ಜಾಯತಾಂ ಬ್ರಹ್ಮವರ್ಚಸ್ವೀ ರಾಷ್ಟ್ರೇ ವೈ ಬ್ರಾಹ್ಮಣಃ ಶುಚಿಃ ।
ಮಹಾರಥಶ್ಚ ರಾಜನ್ಯ ಏಷ್ಟವ್ಯಃ ಶತ್ರುತಾಪನಃ ॥೩॥

ನನ್ನ ರಾಜ್ಯದಲ್ಲಿ ಶುಚಿಯೂ, ಬ್ರಹ್ಮವರ್ಚಸ್ವಿಯೂ ಆದ ಬ್ರಾಹ್ಮಣನು ಜನಿಸಲಿ. ಮಹಾರಥನೂ, ಶತ್ರುತಾಪನನೂ ಆದ ಕ್ಷತ್ರಿಯನು ಜಯಿಸಲಿ ಎಂದು (ರಾಜನು) ಬಯಸಬೇಕು.

ಬ್ರಾಹ್ಮಣಂ ಜಾತಿಸಂಪನ್ನಂ ಧರ್ಮಜ್ಞಂ ಸಂಶಿತವ್ರತಮ್ ।
ವಾಸಯೇತ ಗೃಹೇ ರಾಜನ್ನ ತಸ್ಮಾತ್ ಪರಮಸ್ತಿ ವೈ ॥೪॥

ಎಲೈ ರಾಜನೇ, ಸತ್ಕುಲಪ್ರಸೂತನಾದ, ಧರ್ಮಜ್ಞನಾದ, ವ್ರತಧಾರಿಯಾದ ಬ್ರಾಹ್ಮಣನನ್ನು ಮನೆಯಲ್ಲಿ ಇರಿಸಿಕೊಳ್ಳಬೇಕು. ಅವನಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ.

ಬ್ರಾಹ್ಮಣೇಭ್ಯೋ ಹವಿರ್ದತ್ತಂ ಪ್ರತಿಗೃಹ್ಣಂತಿ ದೇವತಾಃ ।
ಪಿತರಃ ಸರ್ವಭೂತಾನಾಂ ನೈತೇಭ್ಯೋ ವಿದ್ಯತೇ ಪರಮ್ ॥೫॥

ಬ್ರಾಹ್ಮಣರಿಗೆ ಕೊಟ್ಟ ಹವಿಸ್ಸನ್ನು ದೇವತೆಗಳು ಸ್ವೀಕರಿಸುತ್ತಾರೆ. ಬ್ರಾಹ್ಮಣರು ಎಲ್ಲ ಜೀವರಿಗೂ ತಂದೆಯ ಸಮಾನರಾದವರು. ಅವರಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ.

ಆದಿತ್ಯಶ್ಚಂದ್ರಮಾ ವಾಯುರ್ಭೂಮಿರಾಪೋऽಂಬರಂ ದಿಶಃ ।
ಸರ್ವೇ ಬ್ರಾಹ್ಮಣಮಾವಿಶ್ಯ ಸದಾऽನ್ನಮುಪಭುಂಜತೇ ॥೬॥

ಸೂರ್ಯ, ಚಂದ್ರ, ವಾಯು, ಭೂಮಿ, ಜಲ, ಆಕಾಶ, ದಿಕ್ಕು- ಎಲ್ಲವೂ ಬ್ರಾಹ್ಮಣರನ್ನು ಪ್ರವೇಶಿಸಿ ಯಾವಾಗಲೂ ಅನ್ನವನ್ನು ಭುಂಜಿಸುತ್ತಾರೆ.

ನ ತಸ್ಯಾಶ್ನಂತಿ ಪಿತರೋ ಯಸ್ಯ ವಿಪ್ರಾ ನ ಭುಂಜತೇ ।
ದೇವಾಶ್ಚಾಪ್ಯಸ್ಯ ನಾಶ್ನಂತಿ ಪಾಪಸ್ಯ ಬ್ರಾಹ್ಮಣದ್ವಿಷಃ ॥೭॥

ಯಾವನ ಮನೆಯಲ್ಲಿ ಬ್ರಾಹ್ಮಣರು ಭುಂಜಿಸುವುದಿಲ್ಲವೋ ಅವನ ಅನ್ನವನ್ನು ಪಿತೃಗಳು ಸ್ವೀಕರಿಸುವುದಿಲ್ಲ. ಬ್ರಾಹ್ಮಣರನ್ನು ದ್ವೇಷಿಸುವ ಪಾಪಿಯ ಅನ್ನವನ್ನು ದೇವತೆಗಳೂ ಸ್ವೀಕರಿಸುವುದಿಲ್ಲ.

ಬ್ರಾಹ್ಮಣೇಷು ತು ತುಷ್ಟೇಷು ಪ್ರೀಯಂತೇ ಪಿತರಃ ಸದಾ ।
ತಥೈವ ದೇವತಾ ರಾಜನ್ ನಾತ್ರ ಕಾರ್ಯಾ ವಿಚಾರಣಾ ॥೮॥

ಎಲೈ ರಾಜನೇ, ಬ್ರಾಹ್ಮಣರು ಪ್ರೀತರಾದರೆ ಪಿತೃಗಳು ಸದಾ ಪ್ರೀತರಾಗುತ್ತಾರೆ. ಹಾಗೆಯೇ ದೇವತೆಗಳೂ ಪ್ರೀತರಾಗುತ್ತಾರೆ. ಇದರಲ್ಲಿ ಸಂಶಯಪಡಬೇಕಾದುದಿಲ್ಲ.

ತಥೈವ ತೇಽಪಿ ಪ್ರೀಯಂತೇ ಯೇಷಾಂ ಭವತಿ ತದ್ಧವಿಃ ।
ನ ಚ ಪ್ರೇತ್ಯ ವಿನಶ್ಯಂತಿ ಗಚ್ಛಂತಿ ಪರಮಾಂ ಗತಿಮ್ ॥೯॥

ಹಾಗೆಯೇ ಯಾರ ಉದ್ದೇಶದಿಂದ ಹವಿಸ್ಸನ್ನು ಕೊಟ್ಟಿದೆಯೋ ಅಂತಹ ದೇವತೆಗಳೂ ಪ್ರೀತರಾಗುತ್ತಾರೆ. ಅಂತಹವರು ಮರಣವನ್ನು ಹೊಂದಿ ವಿನಾಶವನ್ನು ಹೊಂದದೆ ಶ್ರೇಷ್ಠವಾದ ಗತಿಯನ್ನು ಪಡೆಯುತ್ತಾರೆ.

ಯೇನ ಯೇನೈವ ಹವಿಷಾ ಬ್ರಾಹ್ಮಣಾಂಸ್ತರ್ಪಯೇನ್ನರಃ ।
ತೇನ ತೇನೈವ ಪ್ರೀಯಂತೇ ಪಿತರೋ ದೇವತಾಸ್ತಥಾ ॥೧೦॥

ಯಾವ ಯಾವ ಹವಿಸ್ಸಿನಿಂದ ನರನು ಬ್ರಾಹ್ಮಣರನ್ನು ತೃಪ್ತಿಪಡಿಸುತ್ತಾನೆಯೋ ಅದೇ ಹವಿಸ್ಸುಗಳಿಂದ ಪಿತೃಗಳು ಮತ್ತು ದೇವತೆಗಳು ಪ್ರೀತರಾಗುತ್ತಾರೆ.

ಬ್ರಾಹ್ಮಣಾದೇವ ತದ್ಭೂತಂ ಪ್ರಭವಂತಿ ಯತಃ ಪ್ರಜಾಃ ।
ಯತಶ್ಚಾಯಂ ಪ್ರಭವತಿ ಪ್ರೇತ್ಯ ಯತ್ರ ಚ ಗಚ್ಛತಿ ॥೧೧॥

ವೇದೈಷ ಮಾರ್ಗಂ ಸ್ವರ್ಗಸ್ಯ ತಥೈವ ನರಕಸ್ಯ ಚ ।
ಆಗತಾನಾಗತೇ ಚೋಭೇ ಬ್ರಾಹ್ಮಣೋ ದ್ವಿಪದಾಂವರಃ ।
ಬ್ರಾಹ್ಮಣೋ ಭರತಶ್ರೇಷ್ಠ ಸ್ವಧರ್ಮಂ ವೇದ ಮೇಧಯಾ ॥೧೨॥

ಬ್ರಾಹ್ಮಣರಿಂದಲೇ ಎಲ್ಲವೂ ಉಂಟಾಗಿದೆ. ಪ್ರಜೆಗಳು ಎಲ್ಲಿಂದ ಜನಿಸುತ್ತಾರೆ? ಈ ಪ್ರಪಂಚವು ಎಲ್ಲಿಂದ ಬಂದಿದೆ? ವಿನಾಶವನ್ನು ಹೊಂದಿ ಎಲ್ಲಿಗೆ ಹೋಗುತ್ತದೆ? ಹೀಗೆ ಇದೆಲ್ಲವನ್ನೂ ಸ್ವರ್ಗ ಮತ್ತು ನರಕ ಮಾರ್ಗಗಳನ್ನೂ, ಅತೀತ ಮತ್ತು ಭವಿಷ್ಯ ವಸ್ತುಗಳನ್ನೂ ದ್ವಿಪದರಲ್ಲಿ ಶ್ರೇಷ್ಠನಾದ ಈ ಬ್ರಾಹ್ಮಣನು ತಿಳಿದಿರುತ್ತಾನೆ. ಎಲೈ ಭರತಶ್ರೇಷ್ಠನೇ, ಬ್ರಾಹ್ಮಣನು ತನ್ನ ಮೇಧಾಶಕ್ತಿಯಿಂದ ತನ್ನ ಧರ್ಮವನ್ನು ತಿಳಿದಿರುತ್ತಾನೆ.

ಯೇ ಚೈನಮನುವರ್ತಂತೇ ತೇ ನ ಯಾಂತಿ ಪರಾಭವಮ್ ।
ನ ತೇ ಪ್ರೇತ್ಯ ವಿನಶ್ಯಂತಿ ಗಚ್ಛಂತಿ ನ ಪರಾಭವಮ್ ॥೧೩॥

ಬ್ರಾಹ್ಮಣರನ್ನು ಅನುಸರಿಸುವವರು ಪರಾಭವವನ್ನು ಹೊಂದುವುದಿಲ್ಲ. ಅವರು ಮರಣವನ್ನು ಹೊಂದಿ ವಿನಾಶವನ್ನು ಹೊಂದುವುದಿಲ್ಲ. ಪರಾಭವವನ್ನೂ ಹೊಂದುವುದಿಲ್ಲ.

ಯೇ ಬ್ರಾಹ್ಮಣಮುಖಾತ್ ಪ್ರಾಪ್ತಂ ಪ್ರತಿಗೃಹ್ಣಂತಿ ವೈ ವಚಃ ।
ಕೃತಾತ್ಮಾನೋ ಮಹಾತ್ಮಾನಸ್ತೇ ನ ಯಾಂತಿ ಪರಾಭವಮ್ ॥೧೪॥

ಯಾವ ಜಿತಮನಸ್ಕರಾದ ಮಹಾತ್ಮರು ಬ್ರಾಹ್ಮಣನ ಮುಖದಿಂದ ಬಂದ ಮಾತನ್ನು ಸ್ವೀಕರಿಸುತ್ತಾರೆಯೋ ಅವರು ಪರಾಭವವನ್ನು ಹೊಂದುವುದಿಲ್ಲ.

ಕ್ಷತ್ರಿಯಾಣಾಂ ಪ್ರತಪತಾಂ ತೇಜಸಾ ಚ ಬಲೇನ ಚ ।
ಬ್ರಾಹ್ಮಣೇಷ್ವೇವ ಶಾಮ್ಯಂತಿ ತೇಜಾಂಸಿ ಚ ಬಲಾನಿ ಚ ॥೧೫॥

ತೇಜಸ್ಸಿನಿಂದಲೂ ಮತ್ತು ಬಲದಿಂದಲೂ ಜ್ವಲಿಸುವ ಕ್ಷತ್ರಿಯರ ತೇಜಸ್ಸು ಬ್ರಾಹ್ಮಣರನ್ನು ತಲುಪಿ ಉಪಶಮನವನ್ನು ಹೊಂದುತ್ತದೆ.

ಭೃಗವೋಽಜಯಂಸ್ತಾಳಜಂಘಾನ್ನೀಪಾನಂಗಿರಸೋಽಜಯನ್ ।
ಭರದ್ವಾಜೋ ವೈತಹವ್ಯಾನ್ಸೈಲಾಂಶ್ಚ ಭರತರ್ಷಭ ॥೧೬॥

ಭರತಶ್ರೇಷ್ಠನೇ, ಭೃಗುಗಳು ತಾಳಜಂಘರನ್ನು ಜಯಿಸಿದರು. ಅಂಗಿರಸರು ನೀಪರನ್ನು ಜಯಿಸಿದರು. ಎಲೈ ಭರತಶ್ರೇಷ್ಠನೇ, ಭರದ್ವಾಜರು ವೀತಹವ್ಯರನ್ನೂ ಮತ್ತು ಇಳಾ ಪುತ್ರರನ್ನೂ ಜಯಿಸಿದರು.

ಚಿತ್ರಾಯುಧಾಂಶ್ಚಾಪ್ಯಜಯನ್ನೇತೇ ಕೃಷ್ಣಾಜಿನಧ್ವಜಾಃ ।
ಪ್ರಕ್ಷಿಪ್ಯಾಥ ಚ ಕುಂಭಾನ್ ವೈ ಪಾರಗಾಮಿನಮಾಹರನ್ ॥೧೭॥

ಕೃಷ್ಣಾಜಿನಧ್ವಜವುಳ್ಳ ಈ ಬ್ರಾಹ್ಮಣರು ವಿಚಿತ್ರವಾದ ಆಯುಧಗಳುಳ್ಳ ಕ್ಷತ್ರಿಯರನ್ನು ಜಯಿಸಿದರು. ತಮ್ಮ ಕುಂಭಗಳನ್ನು (ಕಮಂಡಲುಗಳನ್ನು) ಎಸೆದು ಕಾರ್ಯದ ತುದಿಯನ್ನು ತಲುಪಿ ರಾಜರ ಸತ್ತನ್ನು ಎಳೆದು ತಂದರು.

ಯತ್ಕಿಂಚಿತ್ ಕಥ್ಯತೇ ಲೋಕೇ ಶ್ರೂಯತೇ ಪಶ್ಯತೇಽಪಿ ವಾ ।
ಸರ್ವಂ ತದ್ ಬ್ರಾಹ್ಮಣೇಷ್ವೇವ ಗೂಢೋಽಗ್ನಿರಿವ ದಾರುಷು ॥೧೮॥

ಪ್ರಪಂಚದಲ್ಲಿ ಯಾವ ಒಳ್ಳೆಯ ವಿಷಯವು ಹೇಳಲ್ಪಡುತ್ತದೆಯೋ, ಕೇಳಲ್ಪಡುತ್ತದೆಯೋ ಅಥವಾ ನೋಡಲ್ಪಡುತ್ತದೆಯೋ ಅವೆಲ್ಲವೂ ಬ್ರಾಹ್ಮಣರಲ್ಲಿಯೇ ಅಗ್ನಿಯು ಗೂಢವಾಗಿರುವಂತೆ ಗೂಢವಾಗಿರುತ್ತವೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸಂವಾದಂ ವಾಸುದೇವಸ್ಯ ಪೃಥ್ವ್ಯಾಶ್ಚ ಭರತರ್ಷಭ ॥೧೯॥

ಎಲೈ ಭರತರ್ಷಭನೇ, ಈ ವಿಷಯದಲ್ಲಿಯೂ ಸಹ ವಾಸುದೇವ ಮತ್ತು ಭೂಮಿಗೆ ನಡೆದ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ವಾಸುದೇವಃ

ಮಾತರಂ ಸರ್ವಭೂತಾನಾಂ ಪೃಚ್ಛೇ ತ್ವಾ ಸಂಶಯಂ ಶುಭೇ ।
ಕೇನಸ್ವಿತ್ಕರ್ಮಣಾ ಪಾಪಂ ವ್ಯಪೋಹತಿ ನರೋ ಗೃಹೀ ॥೨೦॥

ವಾಸುದೇವ– ಎಲೌ ಶುಭಳೇ, ಸರ್ವಭೂತಗಳಿಗೆ ತಾಯಿಯಾದ ನಿನ್ನನ್ನು ಕೇಳುತ್ತಿದ್ದೇನೆ. ಗೃಹಸ್ಥನಾದ ಮನುಷ್ಯನು ಯಾವ ಕರ್ಮದಿಂದ ಪಾಪವನ್ನು ಕಳೆದುಕೊಳ್ಳುತ್ತಾನೆ?

ಪೃಥಿವೀ

ಬ್ರಾಹ್ಮಣಾನೇವ ಸೇವೇತ ಪವಿತ್ರಂ ಹ್ಯೇತದುತ್ತಮಮ್ ।
ಬ್ರಾಹ್ಮಣಾನ್ ಸೇವಮಾನಸ್ಯ ರಜಃ ಸರ್ವಂ ಪ್ರಣಶ್ಯತಿ ॥೨೧॥

ಪೃಥಿವೀ– ಬ್ರಾಹ್ಮಣರನ್ನೇ ಸೇವಿಸಬೇಕು. ಇದೇ ಪವಿತ್ರವಾದುದು ಮತ್ತು ಶ್ರೇಷ್ಠವಾದುದು. ಬ್ರಾಹ್ಮಣರನ್ನು ಸೇವೆ ಮಾಡುವವನ ಎಲ್ಲ ದೋಷಗಳೂ ಪರಿಹಾರವನ್ನು ಹೊಂದುತ್ತವೆ.

ಅತೋ ಭೂತಿರತಃ ಕೀರ್ತಿರತೋ ಬುದ್ಧಿಃ ಪ್ರಜಾಯತೇ ।
ಅಪರೇಷಾಂ ಪರೇಷಾಂ ಚ ಪರೇಭ್ಯಶ್ಚೈವ ಯೇ ಪರೇ ॥೨೨॥

ಕನಿಷ್ಠರಾದವರಿಗೂ, ಶ್ರೇಷ್ಠರಾದವರಿಗೂ, ಶ್ರೇಷ್ಠರಿಗಿಂತಲೂ ಶ್ರೇಷ್ಠರಾದವರಿಗೂ ಸಹ ಬ್ರಾಹ್ಮಣರಿಂದಲೇ ಐಶ್ವರ್ಯ, ಬ್ರಾಹ್ಮಣರಿಂದಲೇ ಕೀರ್ತಿ ಮತ್ತು ಬ್ರಾಹ್ಮಣರಿಂದಲೇ ಬುದ್ಧಿಯುಂಟಾಗುತ್ತದೆ.

ಬ್ರಾಹ್ಮಣಾ ಯಂ ಪ್ರಶಂಸಂತಿ ಪುರುಷಃ ಸ ಪ್ರವರ್ಧತೇ ।
ಅಥ ಯೋ ಬ್ರಾಹ್ಮಣಾಕ್ರುಷ್ಟಃ ಪರಾಭವತಿ ಸೋಽಚಿರಾತ್ ॥೨೩॥

ಬ್ರಾಹ್ಮಣರು ಯಾರನ್ನು ಹೊಗಳುತ್ತಾರೆಯೋ ಅಂತಹ ಪುರುಷನು ಅಭಿವೃದ್ಧಿಯನ್ನು ಹೊಂದುತ್ತಾನೆ. ಬ್ರಾಹ್ಮಣರಿಂದ ನಿಂದಿಸಲ್ಪಡುವವನು ಕ್ಷಿಪ್ರವಾಗಿ ಪರಾಭವವನ್ನು ಹೊಂದುತ್ತಾನೆ.

ಯಥಾ ಮಹಾರ್ಣವೇ ಕ್ಷಿಪ್ತಂ ಆಮಲೋಷ್ಟೋ ವಿನಶ್ಯತಿ ।
ತಥಾ ದುಶ್ಚರಿತಂ ಕರ್ಮ ಪರಾಭಾವಾಯ ಕಲ್ಪತೇ ॥೨೪॥

ದೊಡ್ಡ ಸಾಗರದಲ್ಲಿ ಎಸೆದ ಹಸಿಯ ಮಣ್ಣಿನ ಹೆಂಟೆಯು ಹೇಗೆ ಕ್ಷಿಪ್ರವಾಗಿ ನಾಶವನ್ನು ಹೊಂದುತ್ತದೆಯೋ ಅದರಂತೆ (ಬ್ರಾಹ್ಮಣರನ್ನು ಪೂಜಿಸುವವನು) ಮಾಡಿದ ದುಷ್ಕರ್ಮವು ಕ್ಷಿಪ್ರವಾಗಿ ಪರಾಭವವನ್ನು ತಂದುಕೊಡುತ್ತದೆ.

ಪಶ್ಯ ಚಂದ್ರೇ ಕೃತಂ ಲಕ್ಷ್ಮ ಸಮುದ್ರೇ ಲವಣೋದಕಮ್ ।
ತಥಾ ಭಗಸಹಸ್ರೇಣ ಮಹೇಂದ್ರಂ ಪರಿಚಿಹ್ನಿತಮ್ ॥೨೫॥

ಚಂದ್ರನಲ್ಲಿ ಇರುವ ಕಳಂಕವನ್ನು ನೋಡು. ಸಮುದ್ರದಲ್ಲಿರುವ ಉಪ್ಪುನೀರನ್ನು ನೋಡು. ಸಹಸ್ರ ಭಗಗಳಿಂದ ಚಿಹ್ನಿತನಾದ ಮಹೇಂದ್ರನನ್ನು ನೋಡು.

ತೇಷಾಮೇವ ಪ್ರಭಾವೇನ ಸಹಸ್ರನಯನೋ ಹ್ಯಸೌ ।
ಶತಕ್ರತುಃ ಸಮಭವತ್ ಪಶ್ಯ ಮಾಧವ ಯಾದೃಶಮ್ ॥೨೬॥

ಅವರ ಪ್ರಭಾವದಿಂದಲೇ ಈ ಸಹಸ್ರನಯನನಾದ ಇಂದ್ರನು ಶತಕ್ರತುವಾದನು. ಎಲೈ ಮಾಧವನೇ, ಪರಿಸ್ಥಿತಿಯು ಹೇಗಿದೆ ಎಂಬುದನ್ನು ನೋಡು.

ಇಚ್ಛನ್ ಭೂತಿಂ ಚ ಕೀರ್ತಿಂ ಚ ಲೋಕಾಂಶ್ಚ ಮಧುಸೂದನ ।
ಬ್ರಾಹ್ಮಣಾನುಮತೇ ತಿಷ್ಠೇತ್ ಪುರುಷಃ ಶುಚಿರಾತ್ಮವಾನ್ ॥೨೭॥

ಎಲೈ ಮಧುಸೂದನನೇ, ಐಶ್ವರ್ಯವನ್ನೂ, ಶುಭಲೋಕಗಳನ್ನೂ ಇಚ್ಛಿಸುವ ಪುರುಷನು ಶುಚಿಯಾಗಿ ಮನೋಧೈರ್ಯವನ್ನು ಹೊಂದಿ ಬ್ರಾಹ್ಮಣರನ್ನು ಅನುಸರಿಸಿ ನಡೆಯಬೇಕು.

ಭೀಷ್ಮಃ

ಇತ್ಯೇತದ್ವಚನಂ ಶ್ರುತ್ವಾ ಮೇದಿನ್ಯಾ ಮಧುಸೂದನಃ ।
ಸಾಧು ಸಾಧ್ವಿತ್ಯಥೇತ್ಯುಕ್ತ್ವಾ ಮೇದಿನೀಂ ಪ್ರತ್ಯಪೂಜಯತ್ ॥೨೮॥

ಭೀಷ್ಮ– ಮಧುಸೂದನನು ಭೂಮಿಯ ಈ ಮಾತುಗಳನ್ನು ಕೇಳಿ ಸಾಧು-ಸಾಧು ಎಂದು ಹೇಳಿ ಭೂಮಿಯನ್ನು ಪೂಜಿಸಿದನು.

ಏತಾಂ ಶ್ರುತ್ವೋಪಮಾಂ ಪಾರ್ಥ ಪ್ರಯತೋ ಬ್ರಾಹ್ಮಣರ್ಷಭಾನ್ ।
ಸತತಂ ಪೂಜಯೇಥಾಸ್ತ್ವಂ ತತಃ ಶ್ರೇಯೋऽಭಿಪತ್ಸ್ಯಸೇ ॥೨೯॥

ಎಲೈ ಪಾರ್ಥನೇ, ಈ ದೃಷ್ಟಾಂತವನ್ನು ಕೇಳಿ ನೀನು ಶ್ರದ್ಧೆಯಿಂದ ಬ್ರಾಹ್ಮಣ ಶ್ರೇಷ್ಠರನ್ನು ಸತತವಾಗಿ ಪೂಜಿಸುವವನಾಗು. ಅದರಿಂದ ನೀನು ಶ್ರೇಯಸ್ಸನ್ನು ಹೊಂದುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನ-ಧರ್ಮೇ ಬ್ರಾಹ್ಮಣಪ್ರಶಂಸಾನಾಮ
ಚತುಃಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೈದನೆಯ ಅಧ್ಯಾಯ

ಬ್ರಾಹ್ಮಣಪ್ರಶಂಸೆ. ಬ್ರಹ್ಮದೇವರ ಹಿತವಚನ.

ಭೀಷ್ಮಃ

ಜನ್ಮನ್ಯೇವ ಮಹಾಭಾಗೋ ಬ್ರಾಹ್ಮಣೋ ನಾಮ ಜಾಯತೇ ।
ನಮಸ್ಯಃ ಸರ್ವಭೂತಾನಾಮತಿಥಿಃ ಪ್ರಸೃತಾಗ್ರಭುಕ್ ॥೧॥

ಭೀಷ್ಮ– ಬ್ರಾಹ್ಮಣನು ಹುಟ್ಟಿದಾಗಿನಿಂದಲೇ ಮಹಾಭಾಗ್ಯವಂತನಾಗಿ, ಸರ್ವಪ್ರಾಣಿಗಳಿಂದಲೂ ನಮಸ್ಕಾರಕ್ಕೆ ಅರ್ಹನಾಗಿ, ಆತಿಥ್ಯಕ್ಕೆ ಯೋಗ್ಯನಾಗಿ, ಅಗ್ರಭೋಜನಕ್ಕೆ ಅರ್ಹನಾಗಿ ಜನಿಸುತ್ತಾನೆ.

ಸರ್ವಾನ್ ನಃ ಸುಹೃದಸ್ತಾತ ಬ್ರಾಹ್ಮಣಾಃ ಸುಮನೋಮುಖಾಃ ।
ಗೀರ್ಭಿರ್ಮಂಗಲಯುಕ್ತಾಭಿರನುಧ್ಯಾಯಂತಿ ಪೂಜಿತಾಃ ॥೨॥

ಎಲೈ ಪ್ರೀತಿಪಾತ್ರನೇ, ಒಳ್ಳೆಯ ಮನಸ್ಸು ಮತ್ತು ಮುಖವುಳ್ಳ ಬ್ರಾಹ್ಮಣರು ಪೂಜಿಸಲ್ಪಟ್ಟರೆ ಸುಹೃದರಾದ ನಮ್ಮೆಲ್ಲರನ್ನೂ ಮಂಗಳವಾದ ವಚನಗಳಿಂದ ಅನುಧ್ಯಾನ ಮಾಡುತ್ತಾರೆ.

ಸರ್ವಾನ್ ನೋ ದ್ವಿಷತಸ್ತಾತ ಬ್ರಾಹ್ಮಣಾ ಜಾತಮನ್ಯವಃ ।
ಗೀರ್ಭಿರ್ದಾರುಣಯುಕ್ತಾಭಿರಭಿಹನ್ಯುರಪೂಜಿತಾಃ ॥೩॥

ಪೂಜಿಸದೆ ಬ್ರಾಹ್ಮಣರನ್ನು ದ್ವೇಷಿಸುವ ನಮ್ಮೆಲ್ಲರನ್ನೂ ಅವರು ಕೋಪಗೊಂಡು ದಾರುಣವಾದ ಮಾತುಗಳಿಂದ ವಿನಾಶಗೊಳಿಸಿಯಾರು.

ಅತ್ರ ಗಾಥಾ ಬ್ರಹ್ಮಗೀತಾಃ ಕೀರ್ತಯಂತಿ ಪುರಾವಿದಃ ।
ಸೃಷ್ಟ್ವಾ ದ್ವಿಜಾತೀನ್ ಧಾತಾ ಹಿ ಯಥಾಪೂರ್ವಂ ಸಮಾದಧತ್ ॥೪॥

ಈ ವಿಷಯದಲ್ಲಿ ಪುರಾಣವನ್ನು ತಿಳಿದವರು ಬ್ರಹ್ಮದೇವರು ಹಾಡಿದ ಗೀತೆಯನ್ನು ಹೇಳುತ್ತಾರೆ. ಬ್ರಹ್ಮದೇವರು ಮೊದಲಿನಂತೆ ಬ್ರಾಹ್ಮಣರನ್ನು ಸೃಷ್ಟಿಸಿ ಅವರಿಗೆ ಸಮಾಧಾನದ ಮಾತುಗಳನ್ನು ಹೇಳಿದರು.

ನ ವೋಽನ್ಯದಿಹ ಕರ್ತವ್ಯಂ ಕಿಂಚಿದೂರ್ಧ್ವಂ ಯಥಾವಿಧಿ ।
ಗುಪ್ತಾ ಗೋಪಾಯತ ಬ್ರಹ್ಮ ಶ್ರೇಯೋ ವಸ್ತೇನ ಶೋಭನಮ್ ॥೫॥

ನೀವು ಇನ್ನು ಮುಂದೆ ಬೇರೆ ಏನನ್ನೂ ಮಾಡಬೇಕಾದುದಿಲ್ಲ. ನೀವು ಕ್ಷತ್ರಿಯರಿಂದ ರಕ್ಷಿತರಾಗಿ ವೇದವನ್ನು ರಕ್ಷಿಸುವವರಾಗಿ. ನಿಮಗೆ ಅದರಿಂದ ಒಳ್ಳೆಯ ಶ್ರೇಯಸ್ಸು ಉಂಟಾಗುತ್ತದೆ.

ಸ್ವಮೇವ ಕುರ್ವತಾಂ ಕರ್ಮ ಶ್ರೀರ್ವೋ ಬ್ರಾಹ್ಮೀ ಭವಿಷ್ಯತಿ ।
ಪ್ರಮಾಣಂ ಸರ್ವಭೂತಾನಾಂ ಪ್ರಗ್ರಹಂ ಚ ಗಮಿಷ್ಯಥ ॥೬॥

ನಿಮ್ಮ ಕರ್ಮವನ್ನೇ ನೀವು ಮಾಡಿದರೆ ಬ್ರಹ್ಮತೇಜಸ್ಸುಂಟಾಗುತ್ತದೆ. ನೀವು ಎಲ್ಲರಿಗೂ ಪ್ರಮಾಣಭೂತರೂ, ಸ್ವೀಕಾರಕ್ಕೆ ಅರ್ಹರೂ ಆಗುವಿರಿ.

ನ ಶೌದ್ರಂ ಕರ್ಮ ಕರ್ತವ್ಯಂ ಬ್ರಾಹ್ಮಣೇನ ವಿಪಶ್ಚಿತಾ ।
ಶೌದ್ರಂ ಹಿ ಕುರ್ವತಃ ಕರ್ಮ ಧರ್ಮಃ ಸಮುಪರುಧ್ಯತೇ ॥೭॥

ವಿದ್ವಾಂಸನಾದ ಬ್ರಾಹ್ಮಣನು ಶೂದ್ರನ ಕರ್ಮವನ್ನು ಮಾಡಬಾರದು. ಶೂದ್ರ ಕರ್ಮವನ್ನು ಮಾಡುವ ಬ್ರಾಹ್ಮಣನಿಗೆ ಅವನ ಧರ್ಮವು ನಾಶವನ್ನು ಹೊಂದುತ್ತದೆ.

ಶ್ರೀಶ್ಚ ಬುದ್ಧಿಶ್ಚ ತೇಜಶ್ಚ ವಿಭೂತಿಶ್ಚ ಪ್ರತಾಪಿನೀ ।
ಸ್ವಾಧ್ಯಾಯೇನೈವ ಮಾಹಾತ್ಮ್ಯಂ ವಿಮಲಂ ಪ್ರತಿಪತ್ಸ್ಯಥ ॥೮॥

ಸಂಪತ್ತು , ಬುದ್ಧಿ, ತೇಜಸ್ಸು, ಜ್ವಲಿಸುವ ಐಶ್ವರ್ಯ, ವಿಮಲವಾದ ಮಾಹಾತ್ಮ್ಯ ಎಲ್ಲವನ್ನೂ ವೇದಾಧ್ಯಯನದಿಂದಲೇ ಪಡೆಯುವಿರಿ.

ಹುತ್ವಾ ಚಾಹವನೀಯಸ್ಥಂ ಮಹಾಭಾಗ್ಯೇ ಪ್ರತಿಷ್ಠಿತಾಃ ।
ಅಗ್ರಭೋಜ್ಯಾಃ ಪ್ರಸೂತೀನಾಂ ಶ್ರಿಯಾ ಬ್ರಾಹ್ಮ್ಯಾನುಕಲ್ಪಿತಾಃ ॥೯॥

ಆಹವನೀಯ ಸ್ಥಾನದಲ್ಲಿರುವ ಅಗ್ನಿಯಲ್ಲಿ ಹೋಮವನ್ನು ಮಾಡಿ ಮಹಾಭಾಗ್ಯದಲ್ಲಿ ಪ್ರತಿಷ್ಠಿತರಾಗಿ ಪ್ರಜೆಗಳಲ್ಲಿ ಅಗ್ರಭೋಜನರಾಗಿ ಬ್ರಾಹ್ಮ ಸಂಪತ್ತಿನಿಂದ ಕೂಡಿದವರಾಗಿ ನೀವು ಸೃಷ್ಟಿಸಲ್ಪಟ್ಟಿದ್ದೀರಿ.

ಶ್ರದ್ಧಯಾ ಪರಯಾ ಯುಕ್ತಾ ಹ್ಯನಭಿದ್ರೋಹಲಬ್ಧಯಾ ।
ದಮಸ್ವಾಧ್ಯಾಯನಿರತಾಃ ಸರ್ವಾನ್ ಕಾಮಾನವಾಪ್ಸ್ಯಥ ॥೧೦॥

ಯಾವ ಪ್ರಾಣಿಗಳಿಗೂ ದ್ರೋಹವನ್ನು ಮಾಡದಿರುವುದರಿಂದ ಉಂಟಾದ ಶ್ರೇಷ್ಠವಾದ ಶ್ರದ್ಧೆಯಿಂದ ಕೂಡಿದವರಾಗಿ ಇಂದ್ರಿಯನಿಗ್ರಹ ಮತ್ತು ಸ್ವಾಧ್ಯಾಯದಲ್ಲಿ ನಿರತರಾಗಿ ಎಲ್ಲಾ ಅಭೀಷ್ಟಗಳನ್ನೂ ಹೊಂದುವಿರಿ.

ಯಚ್ಚೈವ ಮಾನುಷೇ ಲೋಕೇ ಯಚ್ಚ ದೇವೇಷು ಕಿಂಚನ ।
ಸರ್ವಂ ತತ್ತಪಸಾ ಸಾಧ್ಯಂ ಜ್ಞಾನೇನ ವಿನಯೇನ ಚ ॥೧೧॥

ಮನುಷ್ಯಲೋಕದಲ್ಲಿ ಮತ್ತು ದೈವಲೋಕದಲ್ಲಿ ಶ್ರೇಷ್ಠವಾದುದು ಏನಿವೆಯೋ ಅವೆಲ್ಲವನ್ನೂ ತಪಸ್ಸಿನಿಂದಲೂ, ಜ್ಞಾನದಿಂದಲೂ ಮತ್ತು ವಿನಯದಿಂದಲೂ ಪಡೆಯಲು ಸಾಧ್ಯ.

ಯುಷ್ಮತ್‌ಸಮ್ಮಾನನಾತ್ ಪ್ರೀತಿಂ ಪಾವನೈಃ ಕ್ಷತ್ರಿಯಾಶ್ರಮಮ್ ।
ಅಮುತ್ರೇಹ ಸಮಾಯಾಂತಿ ವೈಶ್ಯಶೂದ್ರಾದಿಕಾಸ್ತಥಾ ॥೧೨॥

ವೈಶ್ಯ-ಶೂದ್ರಾದಿಗಳು ನಿಮ್ಮನ್ನು ಪೂಜಿಸುವುದರಿಂದ ನಿಮ್ಮ ಪ್ರೀತಿಯನ್ನು ಸಂಪಾದಿಸಿ ಪವಿತ್ರವಾದ ಕರ್ಮಗಳಿಂದ ಮುಂದೆ ಕ್ಷತ್ರಿಯಜನ್ಮವನ್ನು ಪಡೆಯುತ್ತಾರೆ.

ಅರಕ್ಷಿತಾಶ್ಚ ಯುಷ್ಮಾಭಿರ್ವಿರುದ್ಧಾ ಯಾಂತಿ ವಿಪ್ಲವಮ್ ।
ಯುಷ್ಮತ್ತೇಜೋಧೃತಾ ಲೋಕಾಸ್ತದ್ ರಕ್ಷಥ ಜಗತ್ತ್ರಯಮ್ ॥೧೩॥

ನೀವು ಅವರನ್ನು ರಕ್ಷಿಸದಿದ್ದರೆ ನಿಮ್ಮ ವಿರುದ್ಧರಾಗಿ ಅವರು ವಿನಾಶವನ್ನು ಹೊಂದುತ್ತಾರೆ. ಲೋಕಗಳು ನಿಮ್ಮ ತೇಜಸ್ಸಿನಿಂದ ಧರಿಸಲ್ಪಟ್ಟಿದೆ. ಆದ್ದರಿಂದ ಮೂರು ಲೋಕಗಳನ್ನೂ ರಕ್ಷಿಸಿ (ಎಂದು ಹೇಳಿದರು).

ಭೀಷ್ಮಃ

ಇತ್ಯೇತಾ ಬ್ರಹ್ಮಗೀತಾಸ್ತೇ ಸಮಾಖ್ಯಾತಾ ಮಯಾऽನಘ ।
ವಿಪ್ರಾನುಕಂಪಾರ್ಥಮಿದಂ ತೇನ ಪ್ರೋಕ್ತಂ ಹಿ ಧೀಮತಾ ॥೧೪॥

ನ ವೋಽನ್ಯದಿಹ ಕರ್ತವ್ಯಂ ಕಿಂಚಿದೂರ್ಧ್ವಂ ಯಥಾವಿಧಿ ।
ಗುಪ್ತಾ ಗೋಪಾಯತ ಬ್ರಹ್ಮ ಶ್ರೇಯೋ ವಸ್ತೇನ ಶೋಭನಮ್ ॥೫॥

ನೀವು ಇನ್ನು ಮುಂದೆ ಬೇರೆ ಏನನ್ನೂ ಮಾಡಬೇಕಾದುದಿಲ್ಲ. ನೀವು ಕ್ಷತ್ರಿಯರಿಂದ ರಕ್ಷಿತರಾಗಿ ವೇದವನ್ನು ರಕ್ಷಿಸುವವರಾಗಿ. ನಿಮಗೆ ಅದರಿಂದ ಒಳ್ಳೆಯ ಶ್ರೇಯಸ್ಸು ಉಂಟಾಗುತ್ತದೆ.

ಸ್ವಮೇವ ಕುರ್ವತಾಂ ಕರ್ಮ ಶ್ರೀರ್ವೋ ಬ್ರಾಹ್ಮೀ ಭವಿಷ್ಯತಿ ।
ಪ್ರಮಾಣಂ ಸರ್ವಭೂತಾನಾಂ ಪ್ರಗ್ರಹಂ ಚ ಗಮಿಷ್ಯಥ ॥೬॥

ನಿಮ್ಮ ಕರ್ಮವನ್ನೇ ನೀವು ಮಾಡಿದರೆ ಬ್ರಹ್ಮತೇಜಸ್ಸುಂಟಾಗುತ್ತದೆ. ನೀವು ಎಲ್ಲರಿಗೂ ಪ್ರಮಾಣಭೂತರೂ, ಸ್ವೀಕಾರಕ್ಕೆ ಅರ್ಹರೂ ಆಗುವಿರಿ.

ನ ಶೌದ್ರಂ ಕರ್ಮ ಕರ್ತವ್ಯಂ ಬ್ರಾಹ್ಮಣೇನ ವಿಪಶ್ಚಿತಾ ।
ಶೌದ್ರಂ ಹಿ ಕುರ್ವತಃ ಕರ್ಮ ಧರ್ಮಃ ಸಮುಪರುಧ್ಯತೇ ॥೭॥

ವಿದ್ವಾಂಸನಾದ ಬ್ರಾಹ್ಮಣನು ಶೂದ್ರನ ಕರ್ಮವನ್ನು ಮಾಡಬಾರದು. ಶೂದ್ರ ಕರ್ಮವನ್ನು ಮಾಡುವ ಬ್ರಾಹ್ಮಣನಿಗೆ ಅವನ ಧರ್ಮವು ನಾಶವನ್ನು ಹೊಂದುತ್ತದೆ.

ಶ್ರೀಶ್ಚ ಬುದ್ಧಿಶ್ಚ ತೇಜಶ್ಚ ವಿಭೂತಿಶ್ಚ ಪ್ರತಾಪಿನೀ ।
ಸ್ವಾಧ್ಯಾಯೇನೈವ ಮಾಹಾತ್ಮ್ಯಂ ವಿಮಲಂ ಪ್ರತಿಪತ್ಸ್ಯಥ ॥೮॥

ಸಂಪತ್ತು , ಬುದ್ಧಿ, ತೇಜಸ್ಸು, ಜ್ವಲಿಸುವ ಐಶ್ವರ್ಯ, ವಿಮಲವಾದ ಮಾಹಾತ್ಮ್ಯ ಎಲ್ಲವನ್ನೂ ವೇದಾಧ್ಯಯನದಿಂದಲೇ ಪಡೆಯುವಿರಿ.

ಹುತ್ವಾ ಚಾಹವನೀಯಸ್ಥಂ ಮಹಾಭಾಗ್ಯೇ ಪ್ರತಿಷ್ಠಿತಾಃ ।
ಅಗ್ರಭೋಜ್ಯಾಃ ಪ್ರಸೂತೀನಾಂ ಶ್ರಿಯಾ ಬ್ರಾಹ್ಮ್ಯಾನುಕಲ್ಪಿತಾಃ ॥೯॥

ಆಹವನೀಯ ಸ್ಥಾನದಲ್ಲಿರುವ ಅಗ್ನಿಯಲ್ಲಿ ಹೋಮವನ್ನು ಮಾಡಿ ಮಹಾಭಾಗ್ಯದಲ್ಲಿ ಪ್ರತಿಷ್ಠಿತರಾಗಿ ಪ್ರಜೆಗಳಲ್ಲಿ ಅಗ್ರಭೋಜನರಾಗಿ ಬ್ರಾಹ್ಮ ಸಂಪತ್ತಿನಿಂದ ಕೂಡಿದವರಾಗಿ ನೀವು ಸೃಷ್ಟಿಸಲ್ಪಟ್ಟಿದ್ದೀರಿ.

ಶ್ರದ್ಧಯಾ ಪರಯಾ ಯುಕ್ತಾ ಹ್ಯನಭಿದ್ರೋಹಲಬ್ಧಯಾ ।
ದಮಸ್ವಾಧ್ಯಾಯನಿರತಾಃ ಸರ್ವಾನ್ ಕಾಮಾನವಾಪ್ಸ್ಯಥ ॥೧೦॥

ಯಾವ ಪ್ರಾಣಿಗಳಿಗೂ ದ್ರೋಹವನ್ನು ಮಾಡದಿರುವುದರಿಂದ ಉಂಟಾದ ಶ್ರೇಷ್ಠವಾದ ಶ್ರದ್ಧೆಯಿಂದ ಕೂಡಿದವರಾಗಿ ಇಂದ್ರಿಯನಿಗ್ರಹ ಮತ್ತು ಸ್ವಾಧ್ಯಾಯದಲ್ಲಿ ನಿರತರಾಗಿ ಎಲ್ಲಾ ಅಭೀಷ್ಟಗಳನ್ನೂ ಹೊಂದುವಿರಿ.

ಯಚ್ಚೈವ ಮಾನುಷೇ ಲೋಕೇ ಯಚ್ಚ ದೇವೇಷು ಕಿಂಚನ ।
ಸರ್ವಂ ತತ್ತಪಸಾ ಸಾಧ್ಯಂ ಜ್ಞಾನೇನ ವಿನಯೇನ ಚ ॥೧೧॥

ಮನುಷ್ಯಲೋಕದಲ್ಲಿ ಮತ್ತು ದೈವಲೋಕದಲ್ಲಿ ಶ್ರೇಷ್ಠವಾದುದು ಏನಿವೆಯೋ ಅವೆಲ್ಲವನ್ನೂ ತಪಸ್ಸಿನಿಂದಲೂ, ಜ್ಞಾನದಿಂದಲೂ ಮತ್ತು ವಿನಯದಿಂದಲೂ ಪಡೆಯಲು ಸಾಧ್ಯ.

ಯುಷ್ಮತ್‌ಸಮ್ಮಾನನಾತ್ ಪ್ರೀತಿಂ ಪಾವನೈಃ ಕ್ಷತ್ರಿಯಾಶ್ರಮಮ್ ।
ಅಮುತ್ರೇಹ ಸಮಾಯಾಂತಿ ವೈಶ್ಯಶೂದ್ರಾದಿಕಾಸ್ತಥಾ ॥೧೨॥

ವೈಶ್ಯ-ಶೂದ್ರಾದಿಗಳು ನಿಮ್ಮನ್ನು ಪೂಜಿಸುವುದರಿಂದ ನಿಮ್ಮ ಪ್ರೀತಿಯನ್ನು ಸಂಪಾದಿಸಿ ಪವಿತ್ರವಾದ ಕರ್ಮಗಳಿಂದ ಮುಂದೆ ಕ್ಷತ್ರಿಯಜನ್ಮವನ್ನು ಪಡೆಯುತ್ತಾರೆ.

ಅರಕ್ಷಿತಾಶ್ಚ ಯುಷ್ಮಾಭಿರ್ವಿರುದ್ಧಾ ಯಾಂತಿ ವಿಪ್ಲವಮ್ ।
ಯುಷ್ಮತ್ತೇಜೋಧೃತಾ ಲೋಕಾಸ್ತದ್ ರಕ್ಷಥ ಜಗತ್ತ್ರಯಮ್ ॥೧೩॥

ನೀವು ಅವರನ್ನು ರಕ್ಷಿಸದಿದ್ದರೆ ನಿಮ್ಮ ವಿರುದ್ಧರಾಗಿ ಅವರು ವಿನಾಶವನ್ನು ಹೊಂದುತ್ತಾರೆ. ಲೋಕಗಳು ನಿಮ್ಮ ತೇಜಸ್ಸಿನಿಂದ ಧರಿಸಲ್ಪಟ್ಟಿದೆ. ಆದ್ದರಿಂದ ಮೂರು ಲೋಕಗಳನ್ನೂ ರಕ್ಷಿಸಿ (ಎಂದು ಹೇಳಿದರು).

ಭೀಷ್ಮಃ

ಇತ್ಯೇತಾ ಬ್ರಹ್ಮಗೀತಾಸ್ತೇ ಸಮಾಖ್ಯಾತಾ ಮಯಾऽನಘ ।
ವಿಪ್ರಾನುಕಂಪಾರ್ಥಮಿದಂ ತೇನ ಪ್ರೋಕ್ತಂ ಹಿ ಧೀಮತಾ ॥೧೪॥

ಭೀಷ್ಮ- ಎಲೈ ಅನಘನೇ, ಬ್ರಹ್ಮದೇವರು ಆಡಿದ ಈ ಮಾತುಗಳನ್ನು ನಾನು ನಿನಗೆ ಹೇಳಿದ್ದೇನೆ. ಬ್ರಾಹ್ಮಣರ ಮೇಲಿನ ಅನುಕಂಪದಿಂದ ಮೇಧಾವಿಗಳಾದ ಅವರು ಇದನ್ನು ಹೇಳಿದ್ದಾರಷ್ಟೆ?

ಭೂಯಸ್ತೇಷಾಂ ಬಲಂ ಮನ್ಯೇ ಯಥಾ ರಾಜ್ಞಸ್ತಪಸ್ವಿನಃ ।
ದುರಾಸದಾಶ್ಚ ಚಂಡಾಶ್ಚ ರಭಸಾಃ ಕ್ಷಿಪ್ರಕಾರಿಣಃ ॥೧೫॥

ತಪಸ್ವಿಯಾದ ರಾಜನ ಬಲದಂತೆ ಬ್ರಾಹ್ಮಣನ ಬಲವು ಬಹಳ ಅಧಿಕವಾಗಿದೆ ಎಂದು ನಾನು ತಿಳಿದಿದ್ದೇನೆ. ಅವರು ಸಮೀಪಿಸಲು ಸಾಧ್ಯವಿಲ್ಲದವರು, ದಾರುಣರು, ಶೀಘ್ರರು ಮತ್ತು ಶೀಘ್ರವಾಗಿ ಕಾರ್ಯವನ್ನು ಮಾಡುವವರು.

ಸಂತ್ಯೇಷಾಂ ಸಿಂಹಸತ್ತ್ವಾಶ್ಚ ವ್ಯಾಘ್ರಸತ್ತ್ವಾಸ್ತಥಾಪರೇ ।
ವರಾಹಮೃಗಸತ್ತ್ವಾಶ್ಚ ಗಜಸತ್ತ್ವಾಸ್ತಥಾಪರೇ ॥೧೬॥

ಅವರಲ್ಲಿ ಸಿಂಹಪರಾಕ್ರಮವುಳ್ಳವರೂ ಇದ್ದಾರೆ. ಇನ್ನು ಕೆಲವರು ವ್ಯಾಘ್ರಪರಾಕ್ರಮವನ್ನು ಹೊಂದಿರುತ್ತಾರೆ. ಕೆಲವರು ವರಾಹ-ಮೃಗಗಳ ಪರಾಕ್ರಮವನ್ನೂ, ಇನ್ನು ಕೆಲವರು ಗಜಗಳ ಪರಾಕ್ರಮವನ್ನೂ ಹೊಂದಿರುತ್ತಾರೆ.

ಕಾರ್ಪಾಸಮೃದವಃ ಕೇಚಿತ್ತಥಾನ್ಯೇ ಮಕರಸ್ಪರ್ಶಃ ।
ವಿಭಾಷ್ಯಘಾತಿನಃ ಕೇಚಿತ್ ತಥಾ ಚಕ್ಷುರ್ಹಣೋಽಪರೇ ॥೧೭॥

ಕೆಲವರು ಹತ್ತಿಯಂತೆ ಮೃದುವಾಗಿರುತ್ತಾರೆ. ಇನ್ನು ಕೆಲವರು ಮೊಸಳೆಯ ಸ್ಪರ್ಶದಂತೆ ಕರ್ಕಶರಾಗಿರುತ್ತಾರೆ. ಕೆಲವರು ಮಾತಿನಿಂದ ಹೇಳಿ ನಾಶವನ್ನು ಉಂಟುಮಾಡುತ್ತಾರೆ. ಇನ್ನು ಕೆಲವರು ದೃಷ್ಟಿಯಿಂದಲೇ ವಿನಾಶವನ್ನು ಉಂಟುಮಾಡುತ್ತಾರೆ.

ಸಂತಿ ಚಾಶೀವಿಷನಿಭಾಃ ಸಂತಿ ಮಂದಾಸ್ತಥಾಽಪರೇ ।
ವಿವಿಧಾನೀಹ ವೃತ್ತಾನಿ ಬ್ರಾಹ್ಮಣಾನಾಂ ಯುಧಿಷ್ಠಿರ ॥೧೮॥

ಸರ್ಪದಂತೆ ಇರುವವರೂ ಇದ್ದಾರೆ.. ಮಂದಗಾಮಿಗಳೂ ಇದ್ದಾರೆ. ಎಲೈ ಯುಧಿಷ್ಠಿರನೇ, ಬ್ರಾಹ್ಮಣರ ನಡತೆಗಳು ಹೀಗೆ ಅನೇಕ ವಿಧವಾಗಿರುತ್ತವೆ.

ಮೇಕಲಾ ದ್ರಮಿಳಾಃ ಕಾಶಾಃ ಪೌಂಡ್ರಾಃ ಕೋಲ್ಲಗಿರಾಸ್ತಥಾ ।
ಶೌಂಡಿಕಾ ದರದಾ ದರ್ವಾಶ್ಚೌರಾಃ ಶಬರಬರ್ಬರಾಃ ॥೧೯॥

ಕಿರಾತಾ ಯವನಾಶ್ಚೈವ ತಾಸ್ತಾಃ ಕ್ಷತ್ರಿಯಜಾತಯಃ ।
ವೃಷಲತ್ವಮನುಪ್ರಾಪ್ತಾ ಬ್ರಾಹ್ಮಣಾನಾಮದರ್ಶನಾತ್ ॥೨೦॥

ಕ್ಷತ್ರಿಯಜಾತಿಗೆ ಸೇರಿದ ಮೇಕಲರು, ದ್ರಮಿಳರು, ಕಾಶರು, ಪೌಂಡ್ರರು, ಕೊಲ್ಲಗಿರರು, ಶೌಂಡಿಕರು, ದರದರು, ದರ್ವರು, ಚೌರರು, ಶಬರರು, ಬರ್ಬರರು, ಕಿರಾತರು, ಯವನರು ಮುಂತಾದವರು ಬ್ರಾಹ್ಮಣರ ದರ್ಶನವನ್ನು ಮಾಡದೆ ಶೂದ್ರತ್ವವನ್ನು ಹೊಂದಿದರು.

ಬ್ರಾಹ್ಮಣಾನಾಂ ಪರಿಭವಾದಸುರಾಃ ಸಲಿಲೇಶಯಾಃ ।
ಬ್ರಾಹ್ಮಣಾನಾಂ ಪ್ರಸಾದಾಚ್ಚ ದೇವಾಃ ಸ್ವರ್ಗನಿವಾಸಿನಃ ॥೨೧॥

ಬ್ರಾಹ್ಮಣರನ್ನು ಪರಾಭವಗೊಳಿಸಿದುದರಿಂದ ಅಸುರರು ಸಮುದ್ರಜಲದಲ್ಲಿ ಮಲಗಿದ್ದಾರೆ (ವಾಸ ಮಾಡುತ್ತಾರೆ). ಬ್ರಾಹ್ಮಣರ ಅನುಗ್ರಹದಿಂದ ದೇವತೆಗಳು ಸ್ವರ್ಗದಲ್ಲಿ ವಾಸವನ್ನು ಮಾಡುತ್ತಾರೆ.

ಅಶಕ್ಯಂ ಸ್ಪ್ರಷ್ಟುಮಾಕಾಶಮಚಾಲ್ಯೋ ಹಿಮವಾನ್ ಗಿರಿಃ ।
ಅವಾರ್ಯಾ ಸೇತುನಾ ಗಂಗಾ ದುರ್ಜಯಾ ಬ್ರಾಹ್ಮಣಾ ಭುವಿ ॥೨೨॥

ಆಕಾಶವನ್ನು ಮುಟ್ಟಲು ಸಾಧ್ಯವಿಲ್ಲ. ಹಿಮಾಲಯ ಪರ್ವತವನ್ನು ಅಲುಗಾಡಿಸಲು ಸಾಧ್ಯವಿಲ್ಲ. ಗಂಗೆಯನ್ನು ಸೇತುವೆಯಿಂದ ಕಟ್ಟಿನಿಲ್ಲಿಸಲು ಸಾಧ್ಯವಿಲ್ಲ. ಭೂಮಿಯಲ್ಲಿ ಬ್ರಾಹ್ಮಣರನ್ನು ಜಯಿಸಲು ಸಾಧ್ಯವಿಲ್ಲ.

ನ ಬ್ರಾಹ್ಮಣವಿರೋಧೇನ ಶಕ್ಯಾ ಶಾಸ್ತುಂ ವಸುಂಧರಾ ।
ಬ್ರಾಹ್ಮಣಾ ಹಿ ಮಹಾತ್ಮಾನೋ ದೇವಾನಾಮಪಿ ದೇವತಾಃ ॥೨೩॥

ಬ್ರಾಹ್ಮಣರಿಗೆ ವಿರೋಧವನ್ನು ಮಾಡಿ ಭೂಮಿಯನ್ನು ಆಳಲು ಸಾಧ್ಯವಿಲ್ಲ. ಏಕೆಂದರೆ ಬ್ರಾಹ್ಮಣರು ಮಹಾತ್ಮರು, ದೇವತೆಗಳಿಗೂ ದೇವತೆಗಳು.

ತಾನ್ ಪೂಜಯಸ್ವ ಸತತಂ ದಾನೇನ ಪರಿಚರ್ಯಯಾ ।
ಯದೀಚ್ಛಸಿ ಮಹೀಂ ಭೋಕ್ತುಮಿಮಾಂ ಸಾಗರಮೇಖಲಾಮ್ ॥೨೪॥

ಸಾಗರ ಮೇಖಲೆಯಾದ ಈ ಭೂಮಿಯನ್ನು ಭೋಗಿಸಲು ಇಚ್ಛಿಸುವಿಯಾದರೆ ಅವರನ್ನು ದಾನದಿಂದಲೂ ಪರಿಚರ್ಯದಿಂದಲೂ ಸತತವಾಗಿ ಪೂಜಿಸು.

ಪ್ರತಿಗ್ರಹೇಣ ತೇಜೋ ಹಿ ವಿಪ್ರಾಣಾಂ ಶಾಮ್ಯತೇಽನಘ ।
ಪ್ರತಿಗ್ರಹಂ ಯೇ ನೇಚ್ಛೇಯುಸ್ತೇಽಪಿ ರಕ್ಷ್ಯಾಸ್ತ್ವಯಾಽನಘ ॥೨೫॥

ಎಲೈ ಅನಘನೇ, ಪ್ರತಿಗ್ರಹದಿಂದ ಬ್ರಾಹ್ಮಣರ ತೇಜಸ್ಸು ಶಮನಗೊಳ್ಳುತ್ತದೆ. ಎಲೈ ಅನಘನೇ, ಯಾವ ಬ್ರಾಹ್ಮಣರು ಪ್ರತಿಗ್ರಹವನ್ನು ಬಯಸುವುದಿಲ್ಲವೋ ಅವರನ್ನೂ ನೀನು ರಕ್ಷಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನ-ಧರ್ಮೇ
ಬ್ರಾಹ್ಮಣಪ್ರಶಂಸಾನಾಮ ಪಂಚಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತಾರನೆಯ ಅಧ್ಯಾಯ

ಬ್ರಾಹ್ಮಣಪ್ರಶಂಸೆ - ಇಂದ್ರಶಂಬರ ಸಂವಾದ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಶಕ್ರಶಂಬರಸಂವಾದಂ ತನ್ನಿಬೋಧ ಯುಧಿಷ್ಠಿರ ॥೧॥

ಭೀಷ್ಮ- ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿಯೂ ಸಹ ಇಂದ್ರ ಮತ್ತು ಶಂಬರರಿಗೆ ನಡೆದ ಸಂವಾದ ರೂಪವಾದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ. ಅದನ್ನು ಕೇಳು.

ಶಕ್ರೋ ಹ್ಯಜ್ಞಾತರೂಪೇಣ ಜಟೀ ಭೂತ್ವಾ ರಜೋರುಣಃ ।
ವಿರೂಪಂ ರೂಪಮಾಸ್ಥಾಯ ಪ್ರಶ್ನಂ ಪಪ್ರಚ್ಛ ಶಂಬರಮ್ ॥೨॥

ಇಂದ್ರನು ತನ್ನ ಸ್ವರೂಪವು ತಿಳಿಯದಂತೆ ಜಟೆಯನ್ನು ಧರಿಸಿ ಶರೀರವು ಧೂಳಿನಿಂದ ಕೂಡಿದವನಾಗಿ ತನ್ನನ್ನು ವಿರೂಪನನ್ನಾಗಿ ಮಾಡಿಕೊಂಡು ಶಂಬರನನ್ನು ಪ್ರಶ್ನೆ ಮಾಡಿದನು.

ಕೇನ ಶಂಬರ ವೃತ್ತೇನ ಸ್ವಜಾತ್ಯಾನಧಿತಿಷ್ಠಸಿ ।
ಶ್ರೇಷ್ಠಂ ತ್ವಾಂ ಕೇನ ಮನ್ಯಂತೇ ತನ್ಮೇ ಪ್ರಬ್ರೂಹಿ ಪೃಚ್ಛತಃ ॥೩॥

ಶಂಬರನೇ, ಯಾವ ನಡತೆಯಿಂದ ನೀನು ನಿನ್ನ ಜಾತಿಯವರಲ್ಲಿ ಶ್ರೇಷ್ಠನಾಗಿದ್ದೀಯೆ? ಯಾವ ಕಾರಣದಿಂದ ನಿನ್ನನ್ನು ನಿನ್ನ ಜಾತಿಯವರು ಶ್ರೇಷ್ಠನೆಂದು ತಿಳಿಯುತ್ತಾರೆ? ಪ್ರಶ್ನೆ ಮಾಡುವ ನನಗೆ ಅದನ್ನು ಹೇಳು.

ಶಂಬರಃ

ನಾಸೂಯಾಮಿ ಸದಾ ವಿಪ್ರಾನ್ ಬ್ರಹ್ಮಾಣಂ ಚ ಪಿತಾಮಹಮ್ ।
ಶಾಸ್ತ್ರಾಣಿ ವದತೋ ವಿಪ್ರಾನ್ ಸಮ್ಮನ್ಯಾಮಿ ಯಥಾಸುಖಮ್ ॥೪॥

ಶಂಬರ– ಬ್ರಾಹ್ಮಣರನ್ನು ನೋಡಿ ಅಸೂಯೆ ಪಡುವುದಿಲ್ಲ. ಪಿತಾಮಹನಾದ ಬ್ರಹ್ಮದೇವರ ಮೇಲೂ ಅಸೂಯೆಯನ್ನು ಹೊಂದುವುದಿಲ್ಲ. ಶಾಸ್ತ್ರಗಳನ್ನು ವ್ಯಾಖ್ಯಾನ ಮಾಡುವ ಬ್ರಾಹ್ಮಣರನ್ನು ಸಾಧ್ಯವಾದಷ್ಟು ಪೂಜಿಸುತ್ತೇನೆ.

ಶ್ರುತ್ವಾ ಚ ನಾವಜಾನಾಮಿ ನಾಪರಾಧ್ಯಾಮಿ ಕರ್ಹಿಚಿತ್ ।
ಅಭ್ಯರ್ಚ್ಯಾನನುಪೃಚ್ಛಾಮಿ ಪಾದೌ ಗೃಹ್ಣಾಮಿ ಧೀಮತಾಮ್ ॥೫॥

ಅವರ ಮಾತುಗಳನ್ನು ಕೇಳಿ ಅವರನ್ನು ಅವಮಾನಗೊಳಿಸುವುದಿಲ್ಲ. ಯಾವ ಕಾರಣದಿಂದಲೂ ಅವರಿಗೆ ಅಪರಾಧವನ್ನು ಮಾಡುವುದಿಲ್ಲ. ಪೂಜ್ಯರಾದ ಅವರನ್ನು ಪ್ರಶ್ನೆ ಮಾಡಿ ವಿಷಯಗಳನ್ನು ತಿಳಿದುಕೊಳ್ಳುತ್ತೇನೆ. ಮೇಧಾವಿಗಳಾದ ಅವರನ್ನು ನಮಸ್ಕರಿಸುತ್ತೇನೆ.

ತೇ ವಿಸ್ರಬ್ಧಾಃ ಪ್ರಭಾಷಂತೇ ಸಂಯಚ್ಛಂತಿ ಚ ಮಾಂ ಸದಾ ।
ಪ್ರಮತ್ತೇಷ್ವಪ್ರಮತ್ತೋಽಸ್ಮಿ ಸದಾ ಸುಪ್ತೇಷು ಜಾಗ್ಮಿ ॥೬॥

ಅವರು ನನ್ನನ್ನು ಯಾವಾಗಲೂ ನಿಯಂತ್ರಿಸುತ್ತಾರೆ. ಅವರು ಎಚ್ಚರ ತಪ್ಪಿ ನಡೆದರೂ ನಾನು ಎಚ್ಚರ ತಪ್ಪುವುದಿಲ್ಲ. ಅವರು ನಿಂದ್ರಿಸುತ್ತಿದ್ದರೂ ನಾನು ಎಚ್ಚರದಿಂದ ಇರುತ್ತೇನೆ.

ತೇ ಮಾಂ ಶಾಸ್ತ್ರಪಥೇ ಯುಕ್ತಂ ಬ್ರಹ್ಮಣ್ಯಮನಸೂಯಕಮ್ ।
ಸಮಾಸಿಂಚಂತಿ ಶಾಸ್ತಾರಃ ಕ್ಷೌದ್ರಂ ಮಧ್ವಿವ ಮಕ್ಷಿಕಾಃ ॥೭॥

ಶಾಸನವನ್ನು ಮಾಡುವ ಅವರು ಶಾಸ್ತ್ರಮಾರ್ಗದಲ್ಲಿದ್ದು ಬ್ರಾಹ್ಮಣ ವತ್ಸಲನೂ, ಅಸೂಯಾ ರಹಿತನೂ ಆದ ನನ್ನನ್ನು ತಮ್ಮ ಉಪದೇಶರೂಪವಾದ ವಚನಗಳಿಂದ ಜೇನುಹುಳುಗಳು ಜೇನನ್ನು ಸುರಿಸಿದಂತೆ ನನ್ನ ಕಿವಿಯಲ್ಲಿ ಮಧುಪ್ರಾಯವಾದ ವಚನಗಳನ್ನು ಸುರಿಸುತ್ತಾರೆ.

ಯಚ್ಚ ಭಾಷಂತಿ ತೇ ತುಷ್ಟಾಸ್ತತ್ತದ್ ಗೃಹ್ಣಾಮಿ ಮೇಧಯಾ ।
ಸಮಾಧಿಮಾತ್ಮನೋ ನಿತ್ಯಮನುಲೋಮಮಚಿಂತಯನ್ ॥೮॥

ಅವರು ಸಂತೋಷದಿಂದ ಆಡಿದ ಮಾತುಗಳನ್ನು ನಾನು ಬುದ್ಧಿಯಿಂದ ಗ್ರಹಿಸುತ್ತೇನೆ. ಯಾವಾಗಲೂ ಸಮಾಧಾನದಿಂದಿದ್ದು ಅವರಿಗೆ ವಿರುದ್ಧವಾದುದನ್ನು ಯಾವುದನ್ನೂ ಚಿಂತಿಸದೆ ಇರುತ್ತೇನೆ.

ಸೋಽಹಮಗ್ರಪ್ರಶಿಷ್ಟಾನಾಂ ರಸಾನಾಮವಲೇಹಕಃ ।
ಸ್ವಜಾತ್ಯಾನಧಿತಿಷ್ಠಾಮಿ ನಕ್ಷತ್ರಾಣೀವ ಚಂದ್ರಮಾಃ ॥೯॥

ಅಂತಹ ನಾನು ಬ್ರಾಹ್ಮಣರಿಗೆ ದಾನ ಮಾಡಿ ಉಳಿದ ಆಹಾರವನ್ನು ಸ್ವೀಕರಿಸುತ್ತೇನೆ. ಚಂದ್ರನು ನಕ್ಷತ್ರಗಳ ಮಧ್ಯದಲ್ಲಿ ಶೋಭಿಸುವಂತೆ ನಾನು ನನ್ನ ಜಾತಿಯವರ ಮಧ್ಯದಲ್ಲಿ ಶ್ರೇಷ್ಠನಾಗಿದ್ದೇನೆ (ಲಕ್ಷಾಲಂಕಾರ).

ಏತತ್ ಪೃಥಿವ್ಯಾಮಮೃತಮೇತಚ್ಚಕ್ಷುರನುತ್ತಮಮ್ ।
ಯದ್ ಬ್ರಾಹ್ಮಣಮುಖಾಚ್ಛಾಸ್ತ್ರಮಿಹ ಶ್ರುತ್ವಾ ಪ್ರವರ್ತತೇ ॥೧೦॥

ಬ್ರಾಹ್ಮಣರ ಮುಖದಿಂದ ಬರುವ ಮಾತುಗಳನ್ನು ಕೇಳಿ ಪ್ರವೃತ್ತನಾಗುವುದು ಭೂಮಿಯಲ್ಲಿ ಅಮೃತಪ್ರಾಯವಾದುದು. ಶ್ರೇಷ್ಠವಾದ ಕಣ್ಣಿನಂತೆ ಇರುವುದು (ಮಾರ್ಗದರ್ಶಕವಾದುದು).

ಏತತ್ಕಾರಣಮಾಜ್ಞಾಯ ದೃಷ್ಟ್ವಾ ದೇವಾಸುರಂ ಪುರಾ ।
ಯುದ್ಧಂ ಪಿತಾ ಮೇ ಹೃಷ್ಟಾತ್ಮಾ ವಿಸ್ಮಿತಃ ಪ್ರತ್ಯಪದ್ಯತ ॥೧೧॥

ಈ ಕಾರಣವನ್ನು ತಿಳಿದು ಹಿಂದೆ ದೇವಾಸುರ ಯುದ್ಧವು ನಡೆದಾಗ ನನ್ನ ತಂದೆಯು ವಿಸ್ಮಿತನಾದನು.

ದೃಷ್ಟ್ವಾ ಚ ಬ್ರಾಹ್ಮಣಾನಾಂ ತು ಮಹಿಮಾನಂ ಮಹಾತ್ಮನಾಮ್ ।
ಪರ್ಯಪೃಚ್ಛತ್ ಕಥಮಿಮೇ ಸಿದ್ಧಾ ಇತಿ ನಿಶಾಕರಮ್ ॥೧೨॥

ಮಹಾತ್ಮರಾದ ಬ್ರಾಹ್ಮಣರ ಮಹಿಮೆಯನ್ನು ನೋಡಿ ಅವನು ಚಂದ್ರನನ್ನು, ಇವರು ಹೇಗೆ ಸಿದ್ಧಿಯನ್ನು ಪಡೆದರು ಎಂದು ಪ್ರಶ್ನೆ ಮಾಡಿದನು.

ಸೋಮಃ

ಬ್ರಾಹ್ಮಣಾಸ್ತಪಸಾ ಸರ್ವೇ ಸಿಧ್ಯಂತೇ ವಾಗ್ಬಲಾಃ ಸದಾ ।
ಭುಜವೀರ್ಯಾ ಹಿ ರಾಜಾನೋ ವಾಗಸ್ತ್ರಾಶ್ಚ ದ್ವಿಜಾತಯಃ ॥೧೩॥

ಚಂದ್ರ– ಬ್ರಾಹ್ಮಣರೆಲ್ಲರೂ ತಪಸ್ಸಿನಿಂದ ಸಿದ್ಧಿಯನ್ನು ಪಡೆಯುತ್ತಾರೆ. ಅವರು ಯಾವಾಗಲೂ ವಾಗ್ಬಲವುಳ್ಳವರು. ರಾಜರು ಭುಜಪರಾಕ್ರಮಿಗಳು. ಬ್ರಾಹ್ಮಣರು ವಾಗಸ್ತ್ರವುಳ್ಳವರು.

ಪ್ರವಸನ್ ವಾऽಪ್ಯಧೀಯೀತ ಬಹ್ವೀರ್ದುರ್ವಸತೀರ್ವಸನ್ ।
ನಿರ್ಮನ್ಯುರಪಿ ನಿರ್ಮಾನೋ ಯತಿಃ ಸ್ಯಾತ್ ಸಮದರ್ಶನಃ ॥೧೪॥

ಗುರುಕುಲಕ್ಕೆ ಪ್ರವಾಸವನ್ನು ಮಾಡಿ, ಗುರುಸೇವಾರೂಪವಾದ ಅನೇಕ ಕ್ಲೇಶಗಳನ್ನು ಅನುಭವಿಸಿಯಾದರೂ ಅಧ್ಯಯನವನ್ನು ಮಾಡಬೇಕು. ಕೋಪವನ್ನೂ, ಅಹಂಕಾರವನ್ನೂ ತ್ಯಜಿಸಿ ಸಮಾಧಾನದಿಂದಿದ್ದು ಪ್ರಯತ್ನಶೀಲನಾಗಬೇಕು.

ಅಪಿ ಚೇಜ್ಜಾತಿಸಂಪನ್ನಃ ಸರ್ವಾನ್ ವೇದಾನ್ ಪಿತುರ್ಗೃಹೇ ।
ಶ್ಲಾಘಮಾನ ಇವಾಧೀಯೇದ್ ಗ್ರಾಮ್ಯ ಇತ್ಯೇವ ತಂ ವಿದುಃ ॥೧೫॥

ಶ್ರೇಷ್ಠಜಾತಿಯಲ್ಲಿ ಹುಟ್ಟಿದವನು ತಂದೆಯ ಮನೆಯಲ್ಲಿ ಎಲ್ಲ ವೇದಗಳನ್ನು ಇನ್ನೊಬ್ಬರು ಪ್ರಶಂಸಿಸುವಂತೆ ಅಧ್ಯಯನ ಮಾಡಿದರೂ ಅವನನ್ನು ಅಧ್ಯಯನ ಮಾಡದವನು ಎಂದೇ ತಿಳಿಯುತ್ತಾರೆ.

ಭೂಮಿರೇತೌ ನಿಗಿರತಿ ಸರ್ಪೋ ಬಿಲಶಯಾನಿವ ।
ರಾಜಾನಂ ಚಾಪ್ಯಯೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್ ॥೧೬॥

ಯುದ್ಧವನ್ನು ಮಾಡದಿರುವ ಕ್ಷತ್ರಿಯ ಮತ್ತು ಪ್ರವಾಸವನ್ನು ಮಾಡದಿರುವ ಬ್ರಾಹ್ಮಣ ಇವರಿಬ್ಬರನ್ನೂ ಭೂಮಿಯು ಸರ್ಪವು ಇಲಿಗಳನ್ನು ನುಂಗುವಂತೆ ನುಂಗುತ್ತದೆ.

ಅತಿಮಾನಃ ಶ್ರಿಯಂ ಹಂತಿ ಪುರುಷಸ್ಯಾಲ್ಪಮೇಧಸಃ ।
ಗರ್ಭೇಣ ದುಷ್ಯತೇ ಕನ್ಯಾ ಗೃಹವಾಸೇನ ಚ ದ್ವಿಜಃ ॥೧೭॥

ಅಲ್ಪಬುದ್ಧಿಯುಳ್ಳ ಮನುಷ್ಯನ ಅಹಂಕಾರವು ಅವನ ಸಂಪತ್ತನ್ನು ನಾಶಗೊಳಿಸುತ್ತದೆ. ಗರ್ಭವು ಕನ್ಯೆಯನ್ನು ಹಾಳುಮಾಡುತ್ತದೆ. ಗೃಹವಾಸವು ಬ್ರಾಹ್ಮಣನನ್ನು ಹಾಳು ಮಾಡುತ್ತದೆ.

ಶಂಬರಃ

ಇತ್ಯೇತನ್ಮೇ ಪಿತಾ ಶ್ರುತ್ವಾ ಸೋಮಾದದ್ಭುತದರ್ಶನಾತ್ ।
ಬ್ರಾಹ್ಮಣಾನ್ ಪೂಜಯಾಮಾಸ ತಥೈವಾಹಂ ಮಹಾವ್ರತಾನ್ ॥೧೮॥

ಶಂಬರ– ಅದ್ಭುತ ಜ್ಞಾನವುಳ್ಳ ಚಂದ್ರನಿಂದ ಇದನ್ನು ಕೇಳಿದ ನನ್ನ ತಂದೆಯು ಬ್ರಾಹ್ಮಣರನ್ನು ಪೂಜಿಸಿದನು. ಹಾಗೆಯೇ ನಾನೂ ಮಹಾವ್ರತರಾದ ಬ್ರಾಹ್ಮಣರನ್ನು ಪೂಜಿಸುತ್ತೇನೆ.

ಭೀಷ್ಮಃ

ಶ್ರುತ್ವೈತದ್ವಚನಂ ಶಕ್ರೋ ದಾನವೇಂದ್ರಮುಖಾಚ್ಚ್ಯುತಮ್ ।
ದ್ವಿಜಾನ್ ಸಂಪೂಜಯಾಮಾಸ ಮಹೇಂದ್ರತ್ವಮವಾಪ ಚ ॥೧೯॥

ಭೀಷ್ಮ– ಇಂದ್ರನು ದಾನವೇಂದ್ರನಾದ ಶಂಬರನ ಮುಖದಿಂದ ಹೊರಟ ಈ ಮಾತುಗಳನ್ನು ಕೇಳಿ ಬ್ರಾಹ್ಮಣರನ್ನು ಪೂಜಿಸಿ ಮಹೇಂದ್ರತ್ವವನ್ನು ಪಡೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಶಕ್ರಶಂಬರಸಂವಾದೋ ನಾಮ
ಷಟ್‌ಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೇಳನೆಯ ಅಧ್ಯಾಯ

ಬ್ರಾಹ್ಮಣ ಪ್ರಶಂಸೆ. ಪಾತ್ರಪರೀಕ್ಷೆ.

ಯುಧಿಷ್ಠಿರಃ

ಅಪೂರ್ವಂ ವಾ ಭವೇತ್ ಪಾತ್ರಮಥ ವಾಪಿ ಚಿರೋಷಿತಮ್ ।
ದೂರಾದಭ್ಯಾಗತಂ ವಾಪಿ ಕಿಂ ಪಾತ್ರಂ ಸ್ಯಾತ್ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ಹೊಸದಾಗಿ ಬಂದ ಅಪರಿಚಿತನು ಪಾತ್ರನಾಗುತ್ತಾನೆಯೋ? ಹತ್ತಿರದಲ್ಲಿಯೇ ಬಹಳ ಕಾಲ ವಾಸಿಸಿದವನು ಪಾತ್ರನಾಗುತ್ತೇನೆಯೋ? ಅಥವಾ ದೂರದಿಂದ ಬಂದವನು ಪಾತ್ರನಾಗುತ್ತಾನೆಯೋ?

ಭೀಷ್ಮಃ

ಕ್ರಿಯಾ ಭವತಿ ಕೇಷಾಂಚಿದುಪಾಂಶುವ್ರತಮುತ್ತಮಮ್ ।
ಯೋ ಯೋ ಯಾಚೇತ ಯತ್ ಕಿಂಚಿತ್ ಸರ್ವಂ ದದ್ಯಾಮ ಇತ್ಯುತ ॥

ಅಪೀಡಯನ್ ಭೃತ್ಯವರ್ಗಮಿತ್ಯೇವಮನುಶುಶ್ರುಮ ।
ಪೀಡಯನ್ ಭೃತ್ಯವರ್ಗಂ ಹಿ ಆತ್ಮಾನಮಪಕರ್ಷತಿ ॥೩॥

ಭೀಷ್ಮ– ಕೆಲವರು ಯಾವಯಾವನು ಏನನ್ನು ಬೇಡುತ್ತಾನೆಯೋ ಅವೆಲ್ಲವನ್ನೂ ಭೃತ್ಯವರ್ಗವನ್ನು ಪೀಡಿಸದೆ ಕೊಡುತ್ತೇನೆ ಎಂಬ ರಹಸ್ಯವ್ರತವನ್ನು ಧರಿಸಿ ಅದಕ್ಕೆ ಅನುಗುಣವಾಗಿ ದಾನವನ್ನು ಮಾಡುತ್ತಾರೆ ಎಂದು ಕೇಳಿದ್ದೇವೆ. ಭೃತ್ಯವರ್ಗವನ್ನು ಪೀಡಿಸುವವನು ತನ್ನನ್ನು ಹೀನ ಸ್ಥಿತಿಗೆ ತಂದುಕೊಳ್ಳುತ್ತಾನೆ.

ಅಪೂರ್ವಂ ವಾಪಿ ಯತ್ ಪಾತ್ರಂ ಯಚ್ಚಾಪಿ ಸ್ಯಾಚ್ಚಿರೋಷಿತಮ್ ।
ದೂರಾದಭ್ಯಾಗತಂ ಚಾಪಿ ತತ್ ಪಾತ್ರಂ ಚ ವಿದುರ್ಬುಧಾಃ ॥೪॥

ಅಪರಿಚಿತನಾಗಲೀ ಅಥವಾ ಬಹುಕಾಲ ಪರಿಚಿತನಾಗಲೀ ಅಥವಾ ದೂರದಿಂದ ಬಂದವನಾಗಲೀ ಅವನು ಪಾತ್ರನೆಂದು ಜ್ಞಾನಿಗಳು ತಿಳಿಯುತ್ತಾರೆ.

ಯುಧಿಷ್ಠಿರಃ

ಅಪೀಡಯಾ ಚ ಭೃತ್ಯಾನಾಂ ಧರ್ಮಸ್ಯಾಹಿಂಸಯಾ ತಥಾ ।
ಪಾತ್ರಂ ವಿದ್ಯಾಮ ತತ್ತ್ವೇನ ಯಸ್ಮೈ ದತ್ತಂ ನ ಸಂತಪೇತ್ ॥೫॥

ಯುಧಿಷ್ಠಿರ– ಭೃತ್ಯರನ್ನು ಪೀಡಿಸದೆ ಧರ್ಮವನ್ನು ಹಿಂಸೆ ಮಾಡದಂತೆ ಯಾವನಿಗೆ ದಾನ ಮಾಡಿದರೆ ಸಂತಾಪ ಉಂಟುಮಾಡುವುದಿಲ್ಲವೋ ಅಂತಹ ಪಾತ್ರನನ್ನು ಸರಿಯಾಗಿ ತಿಳಿಯೋಣ.

ಭೀಷ್ಮಃ

ಋತ್ವಿಕ್ಪುರೋಹಿತಾಚಾರ್ಯಾಃ ಶಿಷ್ಯಾಃ ಸಂಬಂಧಿಬಾಂಧವಾಃ ।
ಸರ್ವೇ ಪೂಜ್ಯಾಶ್ಚ ಮಾನ್ಯಾಶ್ಚ ಶ್ರುತವೃತ್ತೋಪಸಂಹಿತಾಃ ॥೬॥

ಭೀಷ್ಮ– ಒಳ್ಳೆಯ ವಿದ್ಯೆ ಮತ್ತು ನಡತೆಯಿಂದ ಕೂಡಿದ ಋತ್ವಿಜರು, ಪುರೋಹಿತರು, ಆಚಾರ್ಯರು, ಶಿಷ್ಯರು, ಸಂಬಂಧಿ-ಬಾಂಧವರು ಎಲ್ಲರೂ ಪೂಜ್ಯರು ಮತ್ತು ಸಮ್ಮಾನಕ್ಕೆ ಅರ್ಹರಾದವರು.

ಅತೋಽನ್ಯಥಾ ವರ್ತಮಾನಾಃ ಸರ್ವೇ ನಾರ್ಹಂತಿ ಸತ್ಕ್ರಿಯಾಮ್ ।
ತಸ್ಮಾನ್ನಿತ್ಯಂ ಪರೀಕ್ಷೇತ ಪುರುಷಾನ್ ಪ್ರಣಿಧಾಯ ವೈ ॥೭॥

ಅವರೆಲ್ಲರೂ ಬೇರೆ ರೀತಿಯಲ್ಲಿ ಇದ್ದರೆ ಸತ್ಕಾರಕ್ಕೆ ಅರ್ಹರಾಗುವುದಿಲ್ಲ. ಆದ್ದರಿಂದ ರಾಜನಾದವನು ಗೂಢಚಾರರನ್ನಿಟ್ಟು ಯಾವಾಗಲೂ ಪರೀಕ್ಷಿಸಬೇಕು.

ಅಕ್ರೋಧಃ ಸತ್ಯವಚನಮಹಿಂಸಾ ದಮ ಆರ್ಜವಮ್ ।
ಅದ್ರೋಹೋ ನಾತಿಮಾನಶ್ಚ ಹ್ರೀಸ್ತಿತಿಕ್ಷಾ ತಪಃ ಶಮಃ ॥೮॥

ಯಸ್ಮಿನ್ನೇತಾನಿ ದೃಶ್ಯಂತೇ ನ ಚಾಕಾರ್ಯಾಣಿ ಭಾರತ ।
ಭಾವತೋ ಸ್ವನಿವಿಷ್ಟಾನಿ ತತ್ಪಾತ್ರಂ ಮಾನಮರ್ಹತಿ ॥೯॥

ಕ್ರೋಧರಾಹಿತ್ಯ, ಸತ್ಯವಚನ, ಅಹಿಂಸೆ, ಇಂದ್ರಿಯನಿಗ್ರಹ, ಮೃದು ಸ್ವಭಾವ, ಅದ್ರೋಹ, ಅಹಂಕಾರ ರಾಹಿತ್ಯ, ನಾಚಿಕೆ, ದ್ವಂದ್ವಸಹಿಷ್ಣುತೆ, ತಪಸ್ಸು, ಭಗವನ್ನಿಷ್ಠೆ - ಎಲೈ ಭಾರತನೇ, ಇವೆಲ್ಲವೂ ಯಾವನಲ್ಲಿ ಕಂಡುಬರುತ್ತವೋ ಮತ್ತು ಯಾವನಲ್ಲಿ ಸ್ವಾಭಾವಿಕವಾಗಿಯೇ ಇವೆಯೋ ಅವನು ಪಾತ್ರ. ಅವನು ಸಮ್ಮಾನಕ್ಕೆ ಅರ್ಹನಾದವನು.

ತಥಾ ಚಿರೋಷಿತಂ ಚಾಪಿ ಸಂಪ್ರತ್ಯಾಗತಮೇವ ಚ ।
ಅಪೂರ್ವಂ ಚೈವ ಪೂರ್ವಂ ಚ ತತ್ಪಾತ್ರಂ ಮಾನಮರ್ಹತಿ ॥೧೦॥

ಅಂತಹ ಬಹುಕಾಲದಿಂದ ವಾಸಮಾಡಿ ಪರಿಚಿತನಾದವನು, ಈಗ ತಾನೇ ಬಂದವನು, ಹಿಂದೆ ಅಪರಿಚಿತನಾದವನೂ ಪಾತ್ರನಾಗುತ್ತಾನೆ, ಸತ್ಕಾರಕ್ಕೆ ಅರ್ಹನಾಗುತ್ತಾನೆ.

ಅಪ್ರಾಮಾಣ್ಯಂ ಚ ವೇದಾನಾಂ ಶಾಸ್ತ್ರಾಣಾಂ ಚಾತಿಲಂಘನಮ್ ।
ಸರ್ವತ್ರ ಚಾನವಸ್ಥಾನಮೇತನ್ನಾಶನಮಾತ್ಮನಃ ॥೧೧॥

ವೇದಗಳಿಗೆ ಅಪ್ರಾಮಾಣ್ಯವನ್ನು ಹೇಳುವುದು, ಶಾಸ್ತ್ರವಚನಗಳನ್ನು ಮೀರುವುದು, ಯಾವ ಮಾತನ್ನೂ ಒಪ್ಪದಿರುವುದು ಇದು ಆತ್ಮನಾಶಕ್ಕೆ ಕಾರಣ.

ಭವೇತ್ ಪಂಡಿತಮಾನೀ ಯೋ ಬ್ರಾಹ್ಮಣೋ ವೇದನಿಂದಕಃ ।
ಆನ್ವೀಕ್ಷಿಕೀಂ ತರ್ಕವಿದ್ಯಾಮನುರಕ್ತೋ ನಿರರ್ಥಿಕಾಮ್ ॥೧೨॥

ಹೇತುವಾದಾನ್ ಬ್ರುವನ್ ಸತ್ಸು ವಿಜೇತಾ ಹೇತುವಾದಿಕಃ ।
ಆಕ್ರೋಷ್ಟಾ ಚಾತಿವಕ್ತಾ ಚ ಬ್ರಾಹ್ಮಣಾನಾಂ ಸದೈವ ಹಿ ॥೧೩॥

ಸರ್ವಾಭಿಶಂಕೀ ಮೂಢಶ್ಚ ಬಾಲಃ ಕಟುಕವಾಗಪಿ ।
ಬೋದ್ಧವ್ಯಸ್ತಾದೃಶಸ್ತಾತ ನರಶ್ವಾನಂ ಹಿ ತಂ ವಿದುಃ ॥೧೪॥

ತಾನು ಪಂಡಿತನೆಂಬ ಅಹಂಕಾರವನ್ನು ಹೊಂದಿರುವವನು, ವೇದನಿಂದಕನಾದ ಬ್ರಾಹ್ಮಣನು, ವ್ಯರ್ಥವಾದ ಶುಷ್ಕತರ್ಕವಿದ್ಯೆಯಲ್ಲಿ ಅನುರಕ್ತನಾದವನು, ಸಜ್ಜನರನ್ನು ದುಷ್ಟಹೇತುಗಳನ್ನು ಹೇಳಿ ಜಯಿಸುವವನು, ಹೇತುವಾದವನ್ನು ಅವಲಂಬಿಸುವವನು, ಬ್ರಾಹ್ಮಣರನ್ನು ನಿಂದಿಸುವವನು, ಬ್ರಾಹ್ಮಣರ ಜೊತೆಯಲ್ಲಿ ಅವರನ್ನು ಮೀರಿ ಮಾತನಾಡುವವನನು, ಎಲ್ಲರನ್ನೂ ಶಂಕಿಸುವವನು, ಸ್ವತಃ ಮೂಢನೂ ಬುದ್ಧಿಶೂನ್ಯನೂ ಆಗಿ ಕ್ರೂರವಾಗಿ ಮಾತನಾಡುವವನು ಅಂತಹ ಬ್ರಾಹ್ಮಣನು ಯಾರೆಂದು ತಿಳಿಯಬೇಕು. ಎಲೈ ಪ್ರೀತಿಪಾತ್ರನೇ, ಜ್ಞಾನಿಗಳು ಅಂತಹ ಬ್ರಾಹ್ಮಣನನ್ನು ಮನುಷ್ಯ ಶ್ವಾನನೆಂದು ಕರೆಯುತ್ತಾರೆ.

ಯಥಾ ಶ್ವಾ ಭಷಿತುಂ ಚೈವ ಹಂತುಂ ಚೈವಾವಸೃಜ್ಯತೇ ।
ಏವಂ ಸಂಭಾಷಣಾರ್ಥಾಯ ಸರ್ವಶಾಸ್ತ್ರವಧಾಯ ಚ ।
ಅಲ್ಪಶ್ರುತಾಃ ಕುತರ್ಕಾಶ್ಚ ದೃಷ್ಟಾಃ ಸೃಷ್ಟಾಃ ಕುಪಂಡಿತಾಃ ॥೧೫॥

ಹೇಗೆ ನಾಯಿಯು ಬೊಗಳುವುದಕ್ಕಾಗಿ ಮತ್ತು ಕಚ್ಚುವುದಕ್ಕಾಗಿ ಸಾಕಲ್ಪಡುತ್ತದೆಯೋ ಹಾಗೆಯೇ ಶುಷ್ಕವಾದ ಮಾತನ್ನು ಆಡುವುದಕ್ಕಾಗಿ, ಸರ್ವಶಾಸ್ತ್ರ ವಧೆಯನ್ನು ಮಾಡುವುದಕ್ಕಾಗಿ ಅಲ್ಪಶ್ರುತರೂ, ಕುತರ್ಕಿಗಳೂ, ಕುಪಂಡಿತರೂ ಆದವರು ಸೃಷ್ಟರಾಗಿ ಕಾಣುತ್ತಾರೆ.

ವಿದ್ಯಾತಪೋಭ್ಯಾಂ ಹೀನೇನ ನ ತು ಗ್ರಾಹ್ಯಃ ಪ್ರತಿಗ್ರಹಃ ।
ಗೃಹ್ಣನ್ ಪ್ರತಿಗ್ರಹಮಥೋ ನಯತ್ಯಾತ್ಮಾನಮೇವ ಚ ॥೧೬॥

ವಿದ್ಯಾ-ತಪಸ್ಸುಗಳಿಂದ ಹೀನನಾದ ಮನುಷ್ಯನು ನೀಡಿದ ದಾನವನ್ನು ಸ್ವೀಕರಿಸಬಾರದು. ಅಂತಹ ದಾನವನ್ನು ಸ್ವೀಕರಿಸುವವನು ತನ್ನನ್ನೇ ಅಧಃಪತನಕ್ಕೆ ಸೆಳೆದೊಯ್ಯುತ್ತಾನೆ.

ಪ್ರತಿಗ್ರಹಸಮರ್ಥೋಽಪಿ ನಾದತ್ತೇ ಯಃ ಪ್ರತಿಗ್ರಹಮ್ ।
ಯೇ ಲೋಕಾ ದಾನಶೀಲಾನಾಂ ಸ ತಾನಾಪ್ನೋತಿ ಪುಷ್ಕಲಾನ್ ॥೧೭॥

ದಾನವನ್ನು ಸ್ವೀಕರಿಸಲು ಅರ್ಹತೆ ಇದ್ದರೂ ಯಾವನು ಸ್ವೀಕಾರ ಮಾಡುವುದಿಲ್ಲವೋ ಅವನು ದಾನಶೀಲರು ಪಡೆಯುವ ಪುಷ್ಕಳವಾದ ಲೋಕಗಳನ್ನು ಪಡೆಯುತ್ತಾನೆ.

ಶ್ರುತಿಸ್ಮೃತೀತಿಹಾಸಾದಿಪುರಾಣಾರಣ್ಯವೇದಿನಃ ।
ಅನುರುಂಧ್ಯಾದ್ ಬಹುಜ್ಞಾಂಶ್ಚ ಸಾರಜ್ಞಾಂಶ್ಚೈವ ಪಂಡಿತಾನ್ ॥೧೮॥

ಶ್ರುತಿ-ಸ್ಮೃತಿ-ಇತಿಹಾಸ-ಪುರಾಣ-ಆರಣ್ಯಕಾದಿಗಳನ್ನು ತಿಳಿದ ಬಹುಜ್ಞರೂ, ಸಾರಜ್ಞರೂ ಆದ ಪಂಡಿತರನ್ನು ಅನುಸರಿಸಬೇಕು.

ಲೋಕಯಾತ್ರಾ ಚ ದ್ರಷ್ಟವ್ಯಾ ಧರ್ಮಶಾಸ್ತ್ರಹಿತಾನಿ ಚ ।
ಏವಂ ನರೋ ವರ್ತಮಾನಃ ಶಾಶ್ವತೀರೇಧತೇ ಸಮಾಃ ॥೧೯॥

ಲೋಕಯಾತ್ರೆಯನ್ನೂ ಗಮನಿಸಬೇಕು, ಧರ್ಮವನ್ನೂ ಮತ್ತು ಆತ್ಮಹಿತವನ್ನೂ ಗಮನಿಸಬೇಕು. ಈ ರೀತಿಯಲ್ಲಿ ಬದುಕುವ ಮನುಷ್ಯನು ಶಾಶ್ವತವಾಗಿ ಅಭಿವೃದ್ಧಿಯನ್ನು ಹೊಂದುತ್ತಾನೆ.

ಋಣಮುನ್ಮುಚ್ಯ ದೇವಾನಾಮೃಷೀಣಾಂ ಚ ತಥೈವ ಚ ।
ಪಿತೄಣಾಮಥ ವಿಪ್ರಾಣಾಮತಿಥೀನಾಂ ಚ ಪಂಚಮಮ್ ॥೨೦॥

ಪರ್ಯಾಯೇಣ ವಿಶುದ್ಧೇನ ಸುನಿರ್ವಿಕ್ತೇನ ಕರ್ಮಣಾ ।
ಏವಂ ಗೃಹಸ್ಥಃ ಕರ್ಮಾಣಿ ಕುರ್ವನ್ ಧರ್ಮಾನ್ನ ಹೀಯತೇ ॥೨೧॥

ದೇವರ್ಷಿ-ಪಿತೃಗಳ ಋಣವನ್ನು, ಬ್ರಾಹ್ಮಣರ ಋಣವನ್ನು, ಅತಿಥಿಗಳ ಋಣವನ್ನು ಶುದ್ಧವಾಗಿ ಸತ್ಕರ್ಮಗಳಿಂದ ಒಂದರ ನಂತರ ಒಂದನ್ನು ತೀರಿಸಿ ಈ ರೀತಿ ಕರ್ಮವನ್ನು ಆಚರಿಸುವ ಗೃಹಸ್ಥನು ಧರ್ಮದಿಂದ ಹೀನನಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬ್ರಾಹ್ಮಣಪ್ರಶಂಸಾಯಾಂ ಪಾತ್ರಪರೀಕ್ಷಾನಾಮ ಸಪ್ತಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆಂಟನೆಯ ಅಧ್ಯಾಯ

ಸ್ತ್ರೀಯರ ದೋಷಕಥನ. ನಾರದ ಮತ್ತು ಪಂಚಚೂಡಳ ಸಂವಾದ.

ಯುಧಿಷ್ಠಿರಃ

ಸ್ತ್ರೀಣಾಂ ಸ್ವಭಾವಮಿಚ್ಛಾಮಿ ಶ್ರೋತುಂ ಭರತಸತ್ತಮ ।
ಸ್ತ್ರಿಯೋ ಹಿ ಮೂಲಂ ದೋಷಾಣಾಂ ಲಘುಚಿತ್ತಾಃ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಸ್ತ್ರೀಯರ ಸ್ವಭಾವವನ್ನು ಕೇಳಲು ಬಯಸುತ್ತೇನೆ. ಪಿತಾಮಹನೇ, ಸ್ತ್ರೀಯರು ಚಂಚಲಚಿತ್ತರಾದವರು ಮತ್ತು ದೋಷಗಳಿಗೆ ಕಾರಣರಾದವರು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಾರದಸ್ಯ ಚ ಸಂವಾದಂ ಪುಂಶ್ಚಲ್ಯಾ ಪಂಚಚೂಡಯಾ ॥೨॥

ಭೀಷ್ಮ– ಈ ವಿಷಯದಲ್ಲಿಯೂ ಸಹ ನಾರದರಿಗೂ ಮತ್ತು ಅಪ್ಸರೆಯಾದ ಪಂಚಚೂಡೆಗೂ ನಡೆದ ಪುರಾತನವಾದ ಸಂವಾದ ರೂಪವಾದ ಈ ಇತಿಹಾಸವನ್ನು ಹೇಳುತ್ತಾರೆ.

ಲೋಕಾನನುಚರನ್ ಧೀಮಾನ್ ದೇವರ್ಷಿರ್ನಾರದಃ ಪುರಾ ।
ದದರ್ಶಾಪ್ಸರಸಂ ಬ್ರಾಹ್ಮೀಂ ಪಂಚಚೂಡಾಮನಿಂದಿತಾಮ್ ॥೩॥

ಮೇಧಾವಿಗಳಾದ ದೇವರ್ಷಿಗಳಾದ ನಾರದರು ಲೋಕಗಳನ್ನು ಸಂಚರಿಸುತ್ತಾ ಹಿಂದೆ ಒಮ್ಮೆ ಬ್ರಹ್ಮಲೋಕದ ಅಪ್ಸರೆಯಾದ ಸುಂದರಿಯಾದ ಪಂಚಚೂಡೆಯನ್ನು ನೋಡಿದರು.

ತಾಂ ದೃಷ್ಟ್ವಾ ಚಾರುಸರ್ವಾಂಗೀಂ ಪಪ್ರಚ್ಛಾಪ್ಸರಸಂ ಮುನಿಃ ।
ಸಂಶಯೋ ಹೃದಿ ಮೇ ಕಶ್ಚಿತ್ ತನ್ಮೇ ಬ್ರೂಹಿ ಸುಮಧ್ಯಮೇ ॥೪॥

ಸುಂದರ ಸರ್ವಾಂಗವುಳ್ಳ ಅವಳನ್ನು ನೋಡಿದ ನಾರದರು ಅಪ್ಸರೆಯನ್ನು ಕುರಿತು ಸುಂದರಿಯೇ, ನನ್ನ ಮನಸ್ಸಿನಲ್ಲಿ ಒಂದು ಸಂಶಯವಿದೆ. ಅದಕ್ಕೆ ಉತ್ತರವನ್ನು ಹೇಳು ಎಂದು ಕೇಳಿದರು.

ಏವಮುಕ್ತಾ ತು ಸಾ ವಿಪ್ರಂ ಪ್ರತ್ಯುವಾಚಾಥ ನಾರದಮ್ ।
ವಿಷಯೇ ಸತಿ ವಕ್ಷ್ಯಾಮಿ ಸಮರ್ಥಾಂ ಮನ್ಯಸೇ ಚ ಮಾಮ್ ॥೫॥

ಹೀಗೆ ಹೇಳಲ್ಪಟ್ಟ ಅವಳು ನಾರದರನ್ನು ಕುರಿತು ನೀನು ನನ್ನನ್ನು ಉತ್ತರವನ್ನು ಕೊಡಲು ಸಮರ್ಥಳೆಂದು ತಿಳಿದಿದ್ದೀಯೆ. ಯೋಗ್ಯವಾದ ವಿಷಯವಾದರೆ ನಾನು ಉತ್ತರವನ್ನು ಹೇಳುವೆನು ಎಂದಳು.

ನಾರದಃ

ನ ತ್ವಾಮವಿಷಯೇ ಭದ್ರೇ ನಿಯೋಕ್ಷ್ಯಾಮಿ ಕಥಂಚನ ।
ಸ್ತ್ರೀಣಾಂ ಸ್ವಭಾವಮಿಚ್ಛಾಮಿ ತತ್ತಃ ಶ್ರೋತುಂ ವರಾನನೇ ॥೬॥

ನಾರದರು– ಶುಭಳಾದವಳೇ, ನಿನ್ನನ್ನು ಅಯೋಗ್ಯ ವಿಷಯದಲ್ಲಿ ಪ್ರಶ್ನೆ ಮಾಡುವುದಿಲ್ಲ. ಸುಂದರಿಯೇ, ಸ್ತ್ರೀಯರ ಸ್ವಭಾವವನ್ನು ನಿನ್ನಿಂದ ಕೇಳಲು ಬಯಸುತ್ತೇನೆ.

ಭೀಷ್ಮಃ

ಏತಚ್ಛ್ರುತ್ವಾ ವಚಸ್ತಸ್ಯ ದೇವರ್ಷೇರಪ್ಸರೋತ್ತಮಾ ।
ಪ್ರತ್ಯುವಾಚ ನ ಶಕ್ಷ್ಯಾಮಿ ಸ್ತ್ರೀ ಸತೀ ನಿಂದಿತುಂ ಸ್ತ್ರಿಯಃ ॥೭॥

ಭೀಷ್ಮ– ದೇವರ್ಷಿಯ ಈ ಮಾತನ್ನು ಕೇಳಿ ಶ್ರೇಷ್ಠ ಅಪ್ಸರೆಯಾದ ಅವಳು ನಾನೇ ಸ್ತ್ರೀಯಾಗಿದ್ದು ಸ್ತ್ರೀಯರನ್ನು ನಿಂದಿಸಲಾರೆ ಎಂದು ಉತ್ತರವನ್ನು ನೀಡಿದಳು.

ವಿದಿತಾಸ್ತೇ ಸ್ತ್ರಿಯೋ ಯಾಶ್ಚ ಯಾದೃಶಾಶ್ಚ ಸ್ವಭಾವತಃ ।
ನ ಮಾಮರ್ಹಸಿ ದೇವರ್ಷೇ ನಿಯೋಕ್ತುಂ ಪ್ರಶ್ನ ಈದೃಶೇ ॥೮॥

ಸ್ತ್ರೀಯರು ಎಂತಹವರು? ಎಂತಹ ಸ್ವಭಾವವುಳ್ಳವರು ಎಂದು ನಿಮಗೆ ತಿಳಿದಿದೆ. ದೇವರ್ಷಿಯೇ, ನೀವು ನನಗೆ ಇಂತಹ ಪ್ರಶ್ನೆಯನ್ನು ಮಾಡಬಾರದು (ಎಂದು ಹೇಳಿದಳು).

ತಾಮುವಾಚ ಸ ದೇವರ್ಷಿಃ ಸತ್ಯಂ ವದ ಸುಮಧ್ಯಮೇ ।
ಮೃಷಾವಾದೇ ಭವೇದ್ ದೋಷಃ ಸತ್ಯೇ ದೋಷೋ ನ ವಿದ್ಯತೇ ॥೯॥

ದೇವರ್ಷಿಯು ಅವಳನ್ನು ಕುರಿತು- 'ಸುಂದರಿಯೇ, ಸತ್ಯವನ್ನು ಹೇಳು. ಸುಳ್ಳನ್ನು ಹೇಳಿದರೆ ದೋಷವುಂಟಾಗುತ್ತದೆ. ಸತ್ಯವನ್ನು ಹೇಳಿದರೆ ದೋಷವಿಲ್ಲ' ಎಂದು ಹೇಳಿದರು.

ಇತ್ಯುಕ್ತಾ ಸಾ ಕೃತಮತಿರಭವಚ್ಚಾರುಹಾಸಿನೀ ।
ಸ್ತ್ರೀದೋಷಾನ್ ಶಾಶ್ವತಾನ್ ಸತ್ಯಾನ್ ಭಾಷಿತುಂ ಸಂಪ್ರಚಕ್ರಮೇ ॥೧೦॥

ಈ ಮಾತನ್ನು ಕೇಳಿದ ಅವಳು ಮನಸ್ಸಿನಲ್ಲಿ ನಿಶ್ಚಯಿಸಿ, ಸುಂದರವಾದ ಮಂದಹಾಸವನ್ನು ಬೀರಿ, ಶಾಶ್ವತವಾದ ಮತ್ತು ಸತ್ಯವಾದ ಸ್ತ್ರೀ ದೋಷಗಳನ್ನು ಹೇಳಲು ಉಪಕ್ರಮಿಸಿದಳು.

ಪಂಚಚೂಡಾ

ಕುಲೀನಾ ರೂಪವತ್ಯಶ್ಚ ನಾಥವತ್ಯಶ್ಚ ಯೋಷಿತಃ ।
ಮರ್ಯಾದಾಸು ನ ತಿಷ್ಠಂತಿ ಸ ದೋಷಃ ಸ್ತ್ರೀಷು ನಾರದ ॥೧೧॥

ಪಂಚಚೂಡಾ– ನಾರದರೇ, ಒಳ್ಳೆಯ ಕುಲದಲ್ಲಿ ಜನಿಸಿದವರೂ, ಒಳ್ಳೆಯ ರೂಪವನ್ನು ಹೊಂದಿದವರೂ, ಒಳ್ಳೆಯ ಪತಿಯನ್ನು ಹೊಂದಿದವರೂ ಆದ ಸ್ತ್ರೀಯರು ಕಟ್ಟುಪಾಡಿನಲ್ಲಿ ನಿಲ್ಲುವುದಿಲ್ಲ. ಇದು ಸ್ತ್ರೀಯರ ದೋಷ.

ನ ಸ್ತ್ರೀಭ್ಯಃ ಕಿಂಚಿದನ್ಯದ್ ವೈ ಪಾಪೀಯಸ್ತರಮಸ್ತಿ ವೈ ।
ಸ್ತ್ರಿಯೋ ಹಿ ಮೂಲಂ ದೋಷಾಣಾಂ ತಥಾ ತ್ವಮಪಿ ವೇತ್ಥ ಹ ॥೧೨॥

ಸ್ತ್ರೀಯರಿಗಿಂತ ಹೆಚ್ಚು ಪಾಪಿಷ್ಠವಾದುದು ಇನ್ನೊಂದು ಯಾವುದೂ ಇಲ್ಲ. ಸ್ತ್ರೀಯರೇ ಎಲ್ಲ ದೋಷಗಳಿಗೂ ಮೂಲಕಾರಣರಾದವರು. ಅದನ್ನು ನೀವೂ ತಿಳಿದಿದ್ದೀರಿ.

ಸಮಾಜ್ಞಾತಾನೃದ್ಧಿಮತಃ ಪ್ರತಿರೂಪಾನ್ ವಶೇ ಸ್ಥಿತಾನ್ ।
ಪತೀನಂತರಮಾಸಾದ್ಯ ನಾಲಂ ನಾರ್ಯಃ ಪ್ರತೀಕ್ಷಿತುಮ್ ॥೧೩॥

ಸ್ತ್ರೀಯರು ಒಂದು ಅವಕಾಶವು ದೊರೆತರೆ ತಾವು ಚೆನ್ನಾಗಿ ತಿಳಿದ ಭಾಗ್ಯವಂತರಾದ ತಮ್ಮ ನೆರಳಿನಂತಿರುವ ತಮ್ಮ ವಶವರ್ತಿಗಳಾದ ಪತಿಗಳನ್ನೂ ಲಕ್ಷಿಸುವುದಿಲ್ಲ.

ಅಸದ್ಧರ್ಮಸ್ತ್ವಯಂ ಸ್ತ್ರೀಣಾಮಸ್ಮಾಕಂ ಭವತಿ ಪ್ರಭೋ ।
ಪಾಪೀಯಸೋ ನರಾನ್ ಯದ್ ವೈ ಲಜ್ಜಾಂ ತ್ಯಕ್ತ್ವಾ ಭಜಾಮಹೇ ॥

ಎಲೈ ಪ್ರಭುಗಳೇ, ಇದು ನಮ್ಮಂತಹ ಸ್ತ್ರೀಯರ ಕೆಟ್ಟ ಧರ್ಮವಾಗಿರುತ್ತದೆ. ಪಾಪಿಷ್ಠರಾದ ನರರ ಜೊತೆಯಲ್ಲಿಯೂ ಸಹ ನಾವು ಲಜ್ಜೆಯನ್ನು ತೊರೆದು ಅವರನ್ನು ಸೇವಿಸುತ್ತೇವೆ.

ಸ್ತ್ರಿಯಂ ಹಿ ಯಃ ಪ್ರಾರ್ಥಯತೇ ಸನ್ನಿಕರ್ಷಂ ಚ ಗಚ್ಛತಿ ।
ಈಷಚ್ಚ ಕುರುತೇ ಸೇವಾಂ ತಮೇವೇಚ್ಛಂತಿ ಯೋಷಿತಃ ॥೧೫॥

ಯಾವನು ತಮ್ಮನ್ನು ಬೇಡುತ್ತಾನೆಯೋ, ತಮ್ಮ ಸಮೀಪಕ್ಕೆ ಬರುತ್ತಾನೆಯೋ, ಸ್ವಲ್ಪ ಉಪಕಾರವನ್ನು ಮಾಡುತ್ತಾನೆಯೋ ಅವನನ್ನೇ ಸ್ತ್ರೀಯರು ಬಯಸುತ್ತಾರೆ.

ಅನರ್ಥಿತ್ವಾನ್ನಮನುಷ್ಯಾಣಾಂ ಭಯಾತ್ ಪರಿಜನಸ್ಯ ಚ ।
ಮರ್ಯಾದಾಯಾಮಮರ್ಯಾದಾಃ ಸ್ತ್ರಿಯಸ್ತಿಷ್ಠಂತಿ ಭರ್ತೃಷು ॥೧೬॥

ಸ್ವತಃ ಕಟ್ಟುಪಾಡಿಲ್ಲದ ಸ್ತ್ರೀಯರು ಬೇರೆ ಪುರುಷರು ಬಂದು ಬೇಡದಿರುವುದರಿಂದ ಮತ್ತು ಪರಿಜನರ ಭಯದಿಂದ ಕಟ್ಟುಪಾಡನ್ನು ಅನುಸರಿಸಿ ತಮ್ಮ ಪತಿಗಳ ಬಳಿಯಲ್ಲಿ ಇರುತ್ತಾರೆ.

ನಾಸಾಂ ಕಶ್ಚಿದಗಮ್ಯೋಽಸ್ತಿ ನಾಸಾಂ ವಯಸಿ ಸಂಸ್ಥಿತಿಃ ।
ವಿರೂಪಂ ರೂಪವಂತಂ ವಾ ಪುಮಾನಿತ್ಯೇವ ಭುಂಜತೇ ॥೧೭॥

ಅವರಿಗೆ ಅಗಮ್ಯನಾದವನು ಯಾವನೂ ಇಲ್ಲ. ಅವರು ವಯಸ್ಸನ್ನು ಪರಿಗಣಿಸುವುದಿಲ್ಲ. ರೂಪಹೀನನ್ನಾಗಲೀ, ರೂಪವಂತನನ್ನಾಗಲೀ ಪುರುಷನೆಂದೇ ಭೋಗಿಸುತ್ತಾರೆ.

ನ ಭಯಾನ್ನಾಪ್ಯನುಕ್ರೋಶಾನ್ನಾರ್ಥಹೇತೋಃ ಕಥಂಚನ ।
ನ ಜ್ಞಾತಿಕುಲಸಂಬಂಧಾತ್ ಸ್ತ್ರಿಯಸ್ತಿಷ್ಠಂತಿ ಭರ್ತೃಷು ॥೧೮॥

ಭಯದಿಂದಲಾಗಲೀ, ದಯೆಯಿಂದಲಾಗಲೀ, ಧನದ ಕಾರಣದಿಂದಾಗಲೀ, ನಿಬಿಡವಾದ ಪರಿಜನರು ಇರುವ ಕಾರಣದಿಂದಾಗಲೀ ಸ್ತ್ರೀಯರು ಪತಿಗಳಲ್ಲಿ ನಿಯತರಾಗಿ ನಿಲ್ಲುವುದಿಲ್ಲ.

ಯೌವನೇ ವರ್ತಮಾನಾನಾಂ ಮೃಷ್ಟಾಭರಣವಾಸಸಾಮ್ ।
ನಾರೀಣಾಂ ಸ್ವೈರವೃತ್ತಾನಾಂ ಸ್ಪೃಹಯಂತಿ ಕುಲಸ್ತ್ರಿಯಃ ॥೧೯॥

ಕುಲಸ್ತ್ರೀಯರು ಒಳ್ಳೆಯ ವಸ್ತ್ರಾಭರಣಗಳನ್ನು ಧರಿಸಿದ, ಸ್ವಚ್ಛಂದ ವೃತ್ತಿಗಳಾದ ಯುವತಿಯರನ್ನು ನೋಡಿ ಅವರ ಜೀವನದ ರೀತಿಯನ್ನು ಬಯಸುತ್ತಾರೆ.

ಯಾಶ್ಚ ಶಶ್ವದ್ ಬಹುಮತಾ ರಕ್ಷ್ಯಂತೇ ದಯಿತಾಃ ಸ್ತ್ರಿಯಃ ।
ಅಪಿ ತಾಃ ಸಂಪ್ರಸಜ್ಜಂತೇ ಕುಬ್ಜಾಂಧಜಡವಾಮನೈಃ ॥೨೦॥

ಪಂಗುಷ್ವಪಿ ಚ ದೇವರ್ಷೇ ಯೇ ಚಾನ್ಯೇ ಕುತ್ಸಿತಾ ನರಾಃ ।
ಸ್ತ್ರೀಣಾಮಗಮ್ಯೋ ಲೋಕೇಽಸ್ಮಿನ್ನಾಸ್ತಿ ಕಶ್ಚಿನ್ಮಹಾಮುನೇ ॥೨೧॥

ಪತಿಯಿಂದ ಯಾವಾಗಲೂ ಬಹುಮಾನಕ್ಕೆ ಒಳಗಾಗಿ ಯಾವ ಸ್ತ್ರೀಯರು ಪ್ರೀತಿಯಿಂದ ರಕ್ಷಿಸಲ್ಪಡುತ್ತಾರೆಯೋ ಅವರೂ ಸಹ ಕುಬ್ಜರಲ್ಲಿಯೂ, ಅಂಧರಲ್ಲಿಯೂ,

ಮೂರ್ಖರಲ್ಲಿಯೂ, ವಾಮನರಲ್ಲಿಯೂ, ಕುಂಟರಲ್ಲಿಯೂ ಮತ್ತು ಬೇರೆ ಕೆಟ್ಟ ಪುರುಷರಲ್ಲಿಯೂ ಪ್ರಸಕ್ತರಾಗುತ್ತಾರೆ. ಎಲೈ ಮಹಾಮುನಿಗಳೇ, ಈ ಲೋಕದಲ್ಲಿ ಸ್ತ್ರೀಯರಿಗೆ ಅಗಮ್ಯನಾದ ಪುರುಷನು ಯಾವನೂ ಇಲ್ಲ.

ಯದಿ ಪುಂಸಾಂ ಗತಿರ್ಬ್ರಹ್ಮನ್ ಕಥಂಚಿನ್ನೋಪಪದ್ಯತೇ ।
ಅಪ್ಯನ್ಯೋನ್ಯಂ ಪ್ರವರ್ತಂತೇ ನ ಹಿ ತಿಷ್ಠಂತಿ ಭರ್ತೃಷು ॥೨೨॥

ಎಲೈ ಬ್ರಾಹ್ಮಣರೇ, ಅವರಿಗೆ ಪುರುಷನು ಯಾವ ರೀತಿಯಿಂದಲೂ ದೊರೆಯದಿದ್ದರೆ ಕಾಮಾತುರರಾದ ವನಿತೆಯರು ತಮ್ಮ ತಮ್ಮಲ್ಲಿಯೇ ಕಾಮಕೇಳಿಗಳಲ್ಲಿ ಪ್ರವೃತ್ತರಾಗುತ್ತಾರೆ. ಪತಿಯ ಅಣತಿಯಲ್ಲಿ ಇರುವುದಿಲ್ಲ.

ದುಷ್ಟಾಚಾರಾಃ ಪಾಪರತಾ ಅಸತ್ಯಾ ಮಾಯಯಾ ವೃತಾಃ ।
ಅದೃಷ್ಟಬುದ್ಧಿಬಹುಲಾಃ ಪ್ರಾಯೇಣೇತ್ಯವಗಮ್ಯತಾಮ್ ॥೨೩॥

ಸ್ತ್ರೀಯರು ಹೆಚ್ಚಾಗಿ ದುಷ್ಟಾಚಾರವುಳ್ಳವರು, ಪಾಪ ಕರ್ಮದಲ್ಲಿ ನಿರತರಾದವರು, ಸುಳ್ಳನ್ನು ಹೇಳುವವರು, ಕಪಟದಿಂದ ಕೂಡಿದವರು ಮತ್ತು ಬುದ್ಧಿವೈಶಾಲ್ಯವಿಲ್ಲದವರು ಎಂದು ತಿಳಿಯಬೇಕು.

ಅಲಾಭಾತ್ ಪುರುಷಾಣಾಂ ಹಿ ಭಯಾತ್ ಪರಿಜನಸ್ಯ ಚ ।
ವಧಬಂಧಭಯಾಚ್ಚಾಪಿ ಸ್ವಯಂ ಗುಪ್ತಾ ಭವಂತಿ ತಾಃ ॥೨೪॥

ಪುರುಷರು ದೊರೆಯದಿರುವುದರಿಂದ ಮತ್ತು ಪರಿಜನರ ಭಯದಿಂದ ಮತ್ತು ವಧೆ, ಬಂಧಗಳ ಭಯದಿಂದ ಸ್ತ್ರೀಯರು ಸ್ವತಃ ರಕ್ಷಿತರಾಗಿರುತ್ತಾರೆ.

ಚಲಸ್ವಭಾವಾ ದುಃಸೇವ್ಯಾ ದುರ್ಗ್ರಾಹ್ಯಾ ಭಾವತಸ್ತಥಾ ।
ಪ್ರಾಜ್ಞಸ್ಯ ಪುರುಷಸ್ಯೇಹ ಯಥಾ ವಾಚಸ್ತಥಾ ಸ್ತ್ರಿಯಃ ।
ಸುಹೃದ್ಯವದ್ಯಹೃದ್ಯಾಸ್ತಾ ವೈರಕೋಪಾಲಯಾ ಸ್ಮೃತಾಃ ॥೨೫॥

ಸ್ತ್ರೀಯರು ಪ್ರಾಜ್ಞ ಪುರುಷನ ವಚನದಂತೆ ಚಂಚಲಸ್ವಭಾವವುಳ್ಳವರು, ಸೇವಿಸಲು ಕಷ್ಟಸಾಧ್ಯರಾದವರು ಮತ್ತು ತಿಳಿಯಲು ಸಾಧ್ಯವಾಗದ ಅಭಿಪ್ರಾಯವುಳ್ಳವರು. ಅವರು ಸುಹೃದರಲ್ಲಿಯೂ ದೋಷವನ್ನು ಚಿಂತಿಸುವವರು ಮತ್ತು ವೈರ, ಕೋಪಗಳಿಗೆ ಆಶ್ರಯರಾದವರು ಎಂದು ಹೇಳಲ್ಪಡುತ್ತಾರೆ.

ನಾಗ್ನಿಸ್ತೃಪ್ಯತಿ ಕಾಷ್ಠಾನಾಂ ನಾಪಗಾನಾಂ ಮಹೋದಧಿಃ ।
ನಾಂತಕಃ ಸರ್ವಭೂತಾನಾಂ ನ ಪುಂಸಾಂ ವಾಮಲೋಚನಾಃ ॥೨೬॥

ಅಗ್ನಿಯು ಕಟ್ಟಿಗೆಗಳಿಂದ ತೃಪ್ತಿಯನ್ನು ಹೊಂದುವುದಿಲ್ಲ. ಮಹಾಸಮುದ್ರವು ನದಿಗಳಿಂದ ತೃಪ್ತಿಯನ್ನು ಹೊಂದುವುದಿಲ್ಲ. ಯಮನು ಸರ್ವಭೂತಗಳ ಮಾರಣದಿಂದ ತೃಪ್ತಿಯನ್ನು ಹೊಂದುವುದಿಲ್ಲ. ವಾಮಲೋಚನೆಯರು (ಸುಂದರಿಯರು) ಪುರುಷರಿಂದ ತೃಪ್ತಿಯನ್ನು ಹೊಂದುವುದಿಲ್ಲ.

ಇದಮನ್ಯಚ್ಚ ದೇವರ್ಷೇ ರಹಸ್ಯಂ ಸರ್ವಯೋಷಿತಾಮ್ ।
ದೃಷ್ಟ್ವೈವ ಪುರುಷಂ ಹೃದ್ಯಂ ಯೋನಿಃ ಪ್ರಕ್ಲಿದ್ಯತೇ ಸ್ತ್ರಿಯಃ ॥೨೭॥

ಎಲೈ ದೇವರ್ಷಿಗಳೇ, ಎಲ್ಲ ಸ್ತ್ರೀಯರಿಗೆ ರಹಸ್ಯವಾದುದು ಇದು ಇನ್ನೊಂದು ವಿಷಯ. ಸುಂದರನಾದ ಪುರುಷನನ್ನು ನೋಡಿದ ಕೂಡಲೇ ಸ್ತ್ರೀಯರ ಯೋನಿಯು ಸ್ರವಿಸುತ್ತದೆ.

ಕಾಮಾನಾಮಪಿ ದಾತಾರಂ ಕರ್ತಾರಂ ಮಾನಸಾಂತ್ವಯೋಃ ।
ರಕ್ಷಿತಾರಂ ನ ಮೃಷ್ಯಂತಿ ಭರ್ತಾರಂ ಪರಮಂ ಸ್ತ್ರಿಯಃ ॥೨೮॥

ತಾವು ಬೇಡಿದುದನ್ನೆಲ್ಲಾ ತಂದುಕೊಡುವ, ತಮಗೆ ಯಾವಾಗಲೂ ಗೌರವವನ್ನು ಮತ್ತು ಸಮಾಧಾನವನ್ನು ಕೊಡುವ, ತಮ್ಮನ್ನು ರಕ್ಷಿಸುವ ಶ್ರೇಷ್ಠನಾದ ಪತಿಯನ್ನೂ ಸ್ತ್ರೀಯರು ಸಹಿಸುವುದಿಲ್ಲ.

ನ ಕಾಮಭೋಗಾನ್ ಬಹುಲಾನ್ನಾಲಂಕಾರಾರ್ಥಸಂಚಯಾನ್ ।
ತಥೈವ ಬಹು ಮನ್ಯಂತೇ ಯಥಾ ರತ್ಯಾಮನುಗ್ರಹಮ್ ॥೨೯॥

ಸ್ತ್ರೀಯರಿಗೆ ರತಿಸುಖವು ಎಷ್ಟು ಪ್ರಿಯವಾದುದೋ ಹಾಗೆ ಇಷ್ಟವಸ್ತುಗಳ ಭೋಗವಾಗಲೀ, ಬಹಳವಾದ ಅಲಂಕಾರ ಅಥವಾ ಧನರಾಶಿಯಾಗಲೀ ಇಷ್ಟವಾದುದಲ್ಲ.

ಅಂತಕಃ ಶಮನೋ ಮೃತ್ಯುಃ ಪಾತಾಳಂ ವಡವಾಮುಖಮ್ ।
ಕ್ಷುರಧಾರಾ ವಿಷಂ ಸರ್ಪೋ ವಹ್ನಿರಿತ್ಯೇಕತಃ ಸ್ತ್ರಿಯಃ ॥೩೦॥

ಅಂತಕನೂ ಎಲ್ಲವನ್ನು ಮುಗಿಸುವವನೂ ಆದ ಮೃತ್ಯು, ಪಾತಾಳ, ವಡವಾಗ್ನಿಯ ಮುಖ, ಕತ್ತಿಯ ಅಲುಗು, ವಿಷ, ಸರ್ಪ, ಅಗ್ನಿ ಇವುಗಳು ಒಂದೇ ಸೇರಿದ ವಸ್ತುವೇ ಕಡೆ ಸ್ತ್ರೀಯರು ಎನಿಸುತ್ತಾರೆ.

ಯತಶ್ಚ ಭೂತಾನಿ ಮಹಾಂತಿ ಪಂಚ
ಯತಶ್ಚ ಲೋಕಾ ವಿಹಿತಾ ವಿಧಾತ್ರಾ ।
ಯತಃ ಪುಮಾಂಸಃ ಪ್ರಮದಾಶ್ಚ ನಿರ್ಮಿತಾ-
ಸ್ತದೈವ ದೋಷಾಃ ಪ್ರಮದಾಸು ನಾರದ ॥೩೧॥

ಎಲೈ ನಾರದರೇ, ಬ್ರಹ್ಮದೇವರು ಯಾವಾಗ ಪಂಚಭೂತಗಳನ್ನು ಸೃಷ್ಟಿಸಿದರೋ, ಯಾವಾಗ ಲೋಕಗಳನ್ನು ಸೃಷ್ಟಿಸಿದರೋ, ಯಾವಾಗ ಪುರುಷರು ಮತ್ತು ಸ್ತ್ರೀಯರನ್ನು ಸೃಷ್ಟಿಸಿದರೋ ಆಗಲೇ ಸ್ತ್ರೀಯರಲ್ಲಿ ದೋಷಗಳನ್ನು ಸೃಷ್ಟಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ನಾರದಪಂಚಚೂಡಾಸಂವಾದೇ ಸ್ತ್ರೀಣಾಂ ಸ್ವಭಾವವರ್ಣನಂ ನಾಮ ಅಷ್ಟಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂಬತ್ತನೆಯ ಅಧ್ಯಾಯ

ಯುಧಿಷ್ಠಿರನಿಂದ ಸ್ತ್ರೀದೋಷಗಳ ಪ್ರಶ್ನೆ.

ಯುಧಿಷ್ಠಿರಃ

ಇಮೇ ವೈ ಮಾನವಾ ಲೋಕೇ ಸ್ತ್ರೀಷು ಸಜ್ಜಂತ್ಯಭೀಕ್ಷ್ಣಶಃ ।
ಮೋಹೇನ ಪರಮಾವಿಷ್ಟಾ ದೈವಾದಿಷ್ಟೇನ ಪಾರ್ಥಿವ ।
ಸ್ತ್ರಿಯಶ್ಚ ಪುರುಷೇಷ್ವೇವ ಪ್ರತ್ಯಕ್ಷಂ ಲೋಕಸಾಕ್ಷಿಕಮ್ ॥೧॥

ಯುಧಿಷ್ಠಿರ– ಎಲೈ ರಾಜನೇ, ದೈವದತ್ತವಾದ ಮೋಹಕ್ಕೆ ಒಳಗಾದ ಪುರುಷರು ಸತತವಾಗಿ ಸ್ತ್ರೀಯರಲ್ಲಿ ಅನುರಕ್ತರಾಗುತ್ತಾರೆ. ಹಾಗೆಯೇ ಸ್ತ್ರೀಯರು ಪುರುಷರಲ್ಲಿ ಅನುರಕ್ತರಾಗುತ್ತಾರೆ. ಇದು ಲೋಕಸಾಕ್ಷಿಕವಾಗಿ ಪ್ರತ್ಯಕ್ಷಸಿದ್ಧವಾಗಿದೆ.

ಅತ್ರ ಮೇ ಸಂಶಯಸ್ತೀವ್ರೋ ಹೃದಿ ಸಂಪರಿವರ್ತತೇ ।
ಕಥಮಾಸಾಂ ನರಾಃ ಸಂಗಂ ಕುರ್ವತೇ ಕುರುನಂದನ ।
ಸ್ತ್ರಿಯೋ ವಾ ತೇಷು ರಜ್ಯಂತೇ ವಿರಜ್ಯಂತೇऽಥ ವಾ ಪುನಃ ॥೨॥

ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲಿ ತೀವ್ರವಾದ ಸಂಶಯವಿದೆ. ಎಲೈ ಕುರುನಂದನನೇ, ಪುರುಷರು ಇಂತಹವರ ಜೊತೆಯಲ್ಲಿ ಹೇಗೆ ಸಂಗವನ್ನು ಮಾಡುತ್ತಾರೆ? ಸ್ತ್ರೀಯರಾದರೂ ಪುರುಷರಲ್ಲಿ ಹೇಗೆ ಆಸಕ್ತರೂ, ನಿರಾಸಕ್ತರೂ ಆಗುತ್ತಾರೆ?

ಇತಿ ತಾಃ ಪುರುಷವ್ಯಾಘ್ರ ಕಥಂ ಶಕ್ಯಾಃ ಸ್ಮ ರಕ್ಷಿತುಮ್ ।
ಪ್ರಮದಾಃ ಪುರುಷೇಣೇಹ ತನ್ಮೇ ವ್ಯಾಖ್ಯಾತುಮರ್ಹಸಿ ॥೩॥

ಎಲೈ ಪುರುಷವ್ಯಾಘ್ರನೇ, ಇಂತಹ ಸ್ವಚ್ಛಂದವೃತ್ತಿಗಳಾದ ಸ್ತ್ರೀಯರನ್ನು ಪುರುಷನು ಹೇಗೆ ರಕ್ಷಿಸಬೇಕೆಂದು ನನಗೆ ನೀನು ಹೇಳು.

ಏತಾ ಹಿ ಮಯಮಾಯಾಭಿರ್ವಂಚಯಂತೀಹ ಮಾನವಾನ್ ।
ನ ಚಾಸಾಂ ಮುಚ್ಯತೇ ಕಶ್ಚಿತ್ಪುರುಷೋ ಹಸ್ತಮಾಗತಃ ।
ಗಾವೋ ನವತೃಣಾನೀವ ಗೃಹ್ಣಂತ್ಯೇವ ನವಾನ್ನವಾನ್ ॥೪॥

ಈ ಸ್ತ್ರೀಯರು ಮಯನ ಮಾಯೆಗಳಿಂದ ಪುರುಷನನ್ನು ವಂಚಿಸುತ್ತಾರೆ. ಅವರ ಕೈಗೆ ಸಿಲುಕಿದ ಯಾವ ಪುರುಷನೂ ತಪ್ಪಿಸಿಕೊಳ್ಳಲಾರ. ಹಸುಗಳು ಹೊಸ ಹುಲ್ಲನ್ನು ಸ್ವೀಕರಿಸಿದಂತೆ ಇವರು ಹೊಸ ಹೊಸ ಪುರುಷರನ್ನು ಪರಿಗ್ರಹಿಸುತ್ತಾರೆ.

ಶಂಬರಸ್ಯ ಚ ಯಾ ಮಾಯಾ ಯಾ ಮಾಯಾ ನಮುಚೇರಪಿ ।
ಬಲೇಃ ಕುಂಭೀನಸಾನಾಂ ಚ ಸರ್ವಾಸ್ತಾ ಯೋಷಿತೋ ವಿದುಃ ॥೫॥

ಶಂಬರನ ಮಾಯೆಗಳನ್ನೂ, ಮಯ, ನಮುಚಿ ಮತ್ತು ಬಲಿಗಳ ಮಾಯೆಗಳನ್ನೂ, ಸರ್ಪದ ಮಾಯೆ- ಎಲ್ಲವನ್ನೂ ಸ್ತ್ರೀಯರು ತಿಳಿದಿದ್ದಾರೆ.

ಹಸಂತಂ ಪ್ರಹಸಂತ್ಯೇತಾ ರುದಂತಂ ಪ್ರರುದಂತಿ ಚ ।
ಅಪ್ರಿಯಂ ಪ್ರಿಯವಾಕ್ಯೈಶ್ಚ ಗೃಹ್ಣಂತೇ ಕಾಲಯೋಗತಃ ॥೬॥

ಅವರು ನಗುವವನನ್ನು ನೋಡಿ ನಗುತ್ತಾರೆ. ಅಳುವವನನ್ನು ನೋಡಿ ಅಳುತ್ತಾರೆ. ತಮ್ಮಲ್ಲಿ ಪ್ರೀತಿ ಇಲ್ಲದವನನ್ನೂ ಸೂಕ್ತಕಾಲದಲ್ಲಿ ಪ್ರಿಯವಾಕ್ಯಗಳಿಂದ ಸ್ವೀಕರಿಸುತ್ತಾರೆ.

ಯದಿ ಜಿಹ್ವಾಸಹಸ್ರಂ ಸ್ಯಾಜ್ಜೀವೇಚ್ಚ ಶರದಾಂ ಶತಮ್ ।
ಅನನ್ಯಕರ್ಮಾ ಸ್ತ್ರೀದೋಷಾನ್ನ ಚೋಕ್ತ್ವಾ ನಿಧನಂ ವ್ರಜೇತ್ ॥೭॥

ಒಂದು ಸಹಸ್ರ ನಾಲಿಗೆಗಳಿದ್ದು, ನೂರು ವರ್ಷ ಬದುಕಿ ಬೇರೆ ಯಾವ ಕೆಲಸವನ್ನೂ ಮಾಡದೆ ಕೇವಲ ಸ್ತ್ರೀದೋಷವನ್ನೇ ಹೇಳುತ್ತಿದ್ದರೂ ಅವುಗಳನ್ನು ಮುಗಿಸಲು ಸಾಧ್ಯವಿಲ್ಲ.

ಉಶನಾ ವೇದ ಯಚ್ಛಾಸ್ತ್ರಂ ಯಚ್ಚ ವೇದ ಬೃಹಸ್ಪತಿಃ ।
ಸ್ತ್ರೀಬುದ್ಧ್ಯಾ ನ ವಿಶಿಷ್ಯೇತೇ ತಾಃ ಸ್ಮ ರಕ್ಷ್ಯಾಃ ಕಥಂ ನರೈಃ ॥೮॥

ಶುಕ್ರನಿಗೆ ಯಾವ ಶಾಸ್ತ್ರವು ತಿಳಿದಿದೆಯೋ, ಬೃಹಸ್ಪತಿಗೆ ಯಾವ ಶಾಸ್ತ್ರವು ತಿಳಿದಿದೆಯೋ ಅಂತಹ ಶಾಸ್ತ್ರಪ್ರಣೇತಾರರ ಬುದ್ಧಿಯು ಸ್ತ್ರೀ ಬುದ್ಧಿಗಿಂತ ಅತಿಶಯವೇನೂ ಅಲ್ಲ. ಅಂತಹ ಸ್ತ್ರೀಯರನ್ನು ಪುರುಷರು ರಕ್ಷಿಸುವ ಬಗೆ ಹೇಗೆ?

ಅನೃತಂ ಸತ್ಯಮಿತ್ಯಾಹುಃ ಸತ್ಯಂ ಚಾಪಿ ತಥಾಽನೃತಮ್ ।
ಇತಿ ಯಾಸ್ತಾಃ ಕಥಂ ವೀರ ಸಂರಕ್ಷ್ಯಾಃ ಪುರುಷೈರಿಹ ॥೯॥

ಅನೃತವನ್ನು ಸತ್ಯವೆಂದು ಹೇಳುತ್ತಾರೆ. ಸತ್ಯವನ್ನು ಅನೃತವೆಂದು ಹೇಳುತ್ತಾರೆ. ಎಲೈ ವೀರನೇ, ಅಂತಹ ಸ್ತ್ರೀಯರನ್ನು ಪುರುಷರು ಹೇಗೆ ರಕ್ಷಿಸಬೇಕು?

ಸ್ತ್ರೀಣಾಂ ಬುದ್ಧ್ಯುಪನಿಷತ್ಕರ್ಷಾದರ್ಥಶಾಸ್ತ್ರಾಣಿ ಶತ್ರುಹನ್ ।
ಬೃಹಸ್ಪತಿಪ್ರಭೃತಿಭಿರ್ಮನ್ಯೇ ಸದ್ಭಿಃ ಕೃತಾನಿ ವೈ ॥೧೦॥

ಎಲೈ ಶತ್ರುಘಾತಕನೇ, ಸ್ತ್ರೀಯರ ಬುದ್ಧಿಯನ್ನು ಅವಲಂಬಿಸಿಯೇ ಬೃಹಸ್ಪತಿ ಮೊದಲಾದ ಸಜ್ಜನರು ಅರ್ಥಶಾಸ್ತ್ರಗಳನ್ನು ರಚಿಸಿದ್ದಾರೆಂದು ನಾನು ತಿಳಿದಿದ್ದೇನೆ.

ಸಂಪೂಜ್ಯಮಾನಾಃ ಪುರುಷೈರ್ವಿಕುರ್ವಂತಿ ಮನೋ ನೃಷು ।
ಅಪಾಸ್ತಾಶ್ಚ ತಥಾ ರಾಜನ್ ವಿಕುರ್ವಂತಿ ಮನಃ ಸ್ತ್ರಿಯಃ ॥೧೧॥

ಪುರುಷರಿಂದ ಸನ್ಮಾನಿಸಲ್ಪಟ್ಟರೂ ಅವರ ಮನಸ್ಸನ್ನು ವಿಕಾರಗೊಳಿಸುತ್ತಾರೆ. ಎಲೈ ರಾಜನೇ, ಪುರುಷರಿಂದ ನಿರಾಕರಿಸಲ್ಪಟ್ಟರೂ ಸ್ತ್ರೀಯರು ಅವರ ಮನಸ್ಸನ್ನು ವಿಕಾರಗೊಳಿಸುತ್ತಾರೆ.

ಇಮಾಃ ಪ್ರಜಾ ಮಹಾಬಾಹೋ ಧಾರ್ಮಿಕ್ಯ ಇತಿ ನಃ ಶ್ರುತಮ್ ।
ಸತ್ಕೃತಾಸತ್ಕೃತಾಶ್ಚಾಪಿ ವಿಕುರ್ವಂತಿ ಮನಃ ಸದಾ ॥೧೨॥

ಎಲೈ ಮಹಾಬಾಹುವೇ, ಈ ಸ್ತ್ರೀ ಪ್ರಜೆಗಳು ಧಾರ್ಮಿಕರಾದವರೆಂದು ನಾವು ಕೇಳಿದ್ದೇವೆ. ಅವರಿಗೆ ಸತ್ಕಾರ ಮಾಡಿದರೂ ಅಥವಾ ತಿರಸ್ಕಾರ ಮಾಡಿದರೂ ಅವರು ಪುರುಷರ ಮನಸ್ಸನ್ನು ವಿಕಾರಗೊಳಿಸುತ್ತಾರೆ.

ಕಸ್ತಾಃ ಶಕ್ತೋ ರಕ್ಷಿತುಂ ಸ್ಯಾದಿತಿ ಮೇ ಸಂಶಯೋ ಮಹಾನ್ ।
ತನ್ಮೇ ಬ್ರೂಹಿ ಮಹಾಬಾಹೋ ಕುರೂಣಾಂ ವಂಶವರ್ಧನ ॥೧೩॥

ಎಲೈ ಕುರುವಂಶದ ಕೀರ್ತಿವರ್ಧನನೇ, ಮಹಾಬಾಹುವೇ, ಇಂತಹ ಸ್ತ್ರೀಯರನ್ನು ಯಾರು ರಕ್ಷಿಸಲು ಸಾಧ್ಯ ಎಂದು ನನಗೆ ದೊಡ್ಡ ಸಂಶಯ ಉಂಟಾಗಿದೆ. ಅದಕ್ಕೆ ಉತ್ತರವನ್ನು ಹೇಳು.

ಯದಿ ಶಕ್ಯಾ ಕುರುಶ್ರೇಷ್ಠ ರಕ್ಷಾ ತಾಸಾಂ ಕಥಂಚನ ।
ಕರ್ತುಂ ವಾ ಕೃತಪೂರ್ವಾ ವಾ ತನ್ಮೇ ವ್ಯಾಖ್ಯಾತುಮರ್ಹಸಿ ॥೧೪॥

ಎಲೈ ಕುರುಶ್ರೇಷ್ಠನೇ, ಅವರನ್ನು ರಕ್ಷಿಸುವುದು ಸಾಧ್ಯವಾಗುವುದಾದರೆ ಅಥವಾ ಹಿಂದೆ ಯಾರಾದರೂ ರಕ್ಷಿಸಿದ್ದರೆ ಅದನ್ನೂ ನನಗೆ ಹೇಳಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ನಾರದಪಂಚಚೂಡಾಸಂವಾದೇ ಸ್ತ್ರೀಣಾಂ ದೋಷಕಥನಂ ನಾಮ ಏಕೋನಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತನೆಯ ಅಧ್ಯಾಯ

ಗುರುಪತ್ನಿಯ ಶೀಲವನ್ನು ರಕ್ಷಿಸಲು ವಿಪುಲನಿಂದ ಅವಳ ಶರೀರಪ್ರವೇಶ.

ಭೀಷ್ಮಃ

ಏವಮೇತನ್ಮಹಾಬಾಹೋ ನಾತ್ರ ಮಿಥ್ಯಾऽಸ್ತಿ ಕಿಂಚನ ।
ಯಥಾ ಬ್ರವೀಷಿ ಕೌರವ್ಯ ನಾರೀಂ ಪ್ರತಿ ಜನಾಧಿಪ ॥೧॥

ಭೀಷ್ಮ– ಎಲೈ ಮಹಾಬಾಹುವೇ, ನರಾಧಿಪನೇ, ಕೌರವ್ಯನೇ, ನೀನು ಸ್ತ್ರೀಯರ ವಿಷಯದಲ್ಲಿ ಏನು ಹೇಳಿದೆಯೋ ಅದೆಲ್ಲವೂ ಹಾಗೆಯೇ ಸರಿ. ಅದರಲ್ಲಿ ಯಾವುದೂ ಸುಳ್ಳಲ್ಲ.

ಅತ್ರ ತೇ ವರ್ತಯಿಷ್ಯಾಮಿ ಇತಿಹಾಸಂ ಪುರಾತನಮ್ ।
ಯಥಾ ರಕ್ಷಾ ಕೃತಾ ಪೂರ್ವಂ ವಿಪುಲೇನ ಮಹಾತ್ಮನಾ ॥೨॥

ಈ ವಿಷಯದಲ್ಲಿ ಮಹಾತ್ಮನಾದ ವಿಪುಲನು ಹಿಂದೆ ಗುರುಪತ್ನಿಯನ್ನು ರಕ್ಷಣೆ ಮಾಡಿದ ಒಂದು ಪುರಾತನ ಇತಿಹಾಸವನ್ನು ಹೇಳುತ್ತೇನೆ.

ಪ್ರಮದಾಶ್ಚ ಯಥಾ ಸೃಷ್ಟಾ ಬ್ರಹ್ಮಣಾ ಭರತರ್ಷಭ ।
ಯದರ್ಥಂ ತಚ್ಚ ತೇ ತಾತ ಪ್ರವಕ್ಷ್ಯೇ ವಸುಧಾಧಿಪ ॥೩॥

ಎಲೈ ಭರತಶ್ರೇಷ್ಠನೇ, ವಸುಧಾಧಿಪನೇ, ಪ್ರೀತಿಪಾತ್ರನೇ, ಬ್ರಹ್ಮದೇವರಿಂದ ಸ್ತ್ರೀಯರು ಹೇಗೆ ಸೃಷ್ಟರಾದರು, ಏತಕ್ಕೆ ಸೃಷ್ಟರಾದರೆಂದು ನಿನಗೆ ಹೇಳುವೆನು.

ನ ಹಿ ಸ್ತ್ರೀಭ್ಯ ಪರಂ ಪುತ್ರ ಪಾಪೀಯಃ ಕಿಂಚಿದಸ್ತಿ ವೈ ।
ಅಗ್ನಿರ್ಹಿ ಪ್ರಮದಾ ದೀಪ್ತೋ ಮಾಯಾಶ್ಚ ಮಯಜಾ ವಿಭೋ ।
ಕ್ಷುರಧಾರಾ ವಿಷಂ ಸರ್ಪೋ ಮೃತ್ಯುರಿತ್ಯೇಕತಃ ಸ್ತ್ರಿಯಃ ॥೪॥

ಎಲೈ ಪುತ್ರನೇ, ಸ್ತ್ರೀಯರಿಗಿಂತ ಕೆಟ್ಟದಾದ ವಸ್ತುವು ಇನ್ನೊಂದಿಲ್ಲ. ಎಲೈ ವಿಭುವೇ, ದೀಪ್ತವಾದ ಅಗ್ನಿ, ಮಯನ ಮಾಯೆಗಳು, ಕತ್ತಿಯ ಅಲುಗು, ವಿಷ, ಸರ್ಪ, ಮೃತ್ಯು - ಇವೆಲ್ಲದರ ದೋಷವನ್ನು ಸೇರಿಸಿದರೆ ಸ್ತ್ರೀಯರೆನಿಸುತ್ತಾರೆ.

ಇಮಾಃ ಪ್ರಜಾ ಮಹಾಬಾಹೋ ಧಾರ್ಮಿಕಾ ಇತಿ ನಃ ಶ್ರುತಮ್ ।
ಸ್ವಯಂ ಗಚ್ಛಂತಿ ದೇವತ್ವಂ ತತೋ ದೇವಾನಿಯಾದ್ ಭಯಮ್ ॥೫॥

ಎಲೈ ಮಹಾಬಾಹುವೇ, ಈ ಪ್ರಜೆಗಳು ಧಾರ್ಮಿಕರು ಎಂದು ನಾನು ಹೇಳಿದ್ದೇನೆ. ತಮ್ಮ ಅನುಷ್ಠಾನದಿಂದ ಪ್ರಜೆಗಳು ದೇವತ್ವವನ್ನು ಪಡೆಯಲು ಪ್ರಾರಂಭಿಸಿದರು. ಆಗ ದೇವತೆಗಳಿಗೆ ಭಯವುಂಟಾಯಿತು.

ಅಥಾಭ್ಯಗಚ್ಛನ್ ದೇವಾಸ್ತೇ ಪಿತಾಮಹಮರಿಂದಮ ।
ನಿವೇದ್ಯ ಮಾನಸಂ ಚಾಪಿ ತೂಷ್ಣೀಮಾಸನ್ನವಾಙ್ಮುಖಾಃ ॥೬॥

ಎಲೈ ಅರಿಂದಮನೇ, ಆಗ ದೇವತೆಗಳು ಪಿತಾಮಹರಾದ ಬ್ರಹ್ಮದೇವರ ಬಳಿಗೆ ಹೋಗಿ ತಮ್ಮ ಮನಸ್ಸಿನ ಅಭಿಪ್ರಾಯವನ್ನು ನಿವೇದಿಸಿ, ತಲೆಯನ್ನು ತಗ್ಗಿಸಿ, ಮೌನದಿಂದ ನಿಂತರು.

ತೇಷಾಮಂತರ್ಗತಂ ಜ್ಞಾತ್ವಾ ದೇವಾನಾಂ ಸ ಪಿತಾಮಹಃ ।
ಮಾನವಾನಾಂ ಪ್ರಮೋಹಾರ್ಥಂ ಕೃತ್ಯಾ ನಾರ್ಯೋಽಸೃಜತ್ ಪ್ರಭುಃ ॥

ಪ್ರಭುಗಳಾದ ಬ್ರಹ್ಮದೇವರು ದೇವತೆಗಳ ಮನಸ್ಸಿನ ಭಾವವನ್ನು ತಿಳಿದು, ಮನುಷ್ಯರನ್ನು ಮೋಹಗೊಳಿಸಲು ಪಿಶಾಚಿಗಳನ್ನು ಸ್ತ್ರೀಯರನ್ನಾಗಿ ಸೃಷ್ಟಿಸಿದನು.

ಪೂರ್ವಸರ್ಗೇ ತು ಕೌಂತೇಯ ಸಾಧ್ವ್ಯೋ ನಾರ್ಯ ಇಹಾಭವನ್ ।
ಅಸಾಧ್ವ್ಯಸ್ತು ಸಮುತ್ಪನ್ನಾ ಕೃತ್ಯಾಸರ್ಗಾತ್ ಪ್ರಜಾಪತೇಃ ॥೮॥

ಎಲೈ ಕೌಂತೇಯನೇ, ಮೊದಲನೆಯ ಸೃಷ್ಟಿಯಲ್ಲಿ ಭೂಲೋಕದಲ್ಲಿ ನಾರಿಯರು ಸಾಧ್ವಿಯರಾಗಿದ್ದರು. ಬ್ರಹ್ಮದೇವರ ಈ ಪಿಶಾಚಸೃಷ್ಟಿಯ ನಂತರ ಅವರು ಅಸಾಧ್ವಿಯರಾದರು.

ತಾಭ್ಯಃ ಕಾಮಾನ್ ಯಥಾಕಾಮಂ ಪ್ರಾದಾದ್ಧಿ ಸ ಪಿತಾಮಹಃ ।
ತಾಃ ಕಾಮಲುಬ್ಧಾಃ ಪ್ರಮದಾಃ ಪ್ರಾಮಥ್ನಂತ ನರಾಂಸ್ತದಾ ॥೯॥

ಬ್ರಹ್ಮದೇವರು ಅವರಿಗೆ ಇಷ್ಟ ಬಂದ ಕಾಮ್ಯವರಗಳನ್ನೆಲ್ಲಾ ಕೊಟ್ಟರು. ಆ ವರಗಳನ್ನು ಪಡೆದ ಪ್ರಮದೆಯರು ಕಾಮಲುಬ್ಧರಾಗಿ ಪುರುಷರ ಮನಸ್ಸನ್ನು ಕಲಕಿದರು.

ಕ್ರೋಧಂ ಕಾಮಸ್ಯ ದೇವೇಶಃ ಸಹಾಯಂ ಚಾಸೃಜತ್ ಪ್ರಭುಃ ।
ಅಸಜ್ಜಂತ ಪ್ರಜಾಃ ಸರ್ವಾಃ ಕಾಮಕ್ರೋಧವಶಂ ಗತಾಃ ॥೧೦॥

ಪ್ರಭುಗಳಾದ ದೇವೇಶರಾದ ಬ್ರಹ್ಮದೇವರು ಕ್ರೋಧವನ್ನು ಕಾಮದ ಸಹಾಯಕ್ಕಾಗಿ ಸೃಷ್ಟಿಸಿದರು. ಕಾಮ-ಕ್ರೋಧವಶರಾದ ಪ್ರಜೆಗಳೆಲ್ಲರೂ ಸ್ತ್ರೀಯರಲ್ಲಿ ಆಸಕ್ತರಾದರು.

ದ್ವಿಜಾನಾಂ ಚ ಗುರೂಣಾಂ ಚ ಮಹಾಗುರುನೃಪಾದಿನಾಮ್ ।
ಕ್ಷಣಸ್ತ್ರೀಸಂಗಕಾಮೋತ್ಥಾ ಯಾತನಾऽಹೋ ನಿರಂತರಾ ॥೧೧॥

ಬ್ರಾಹ್ಮಣರಿಗೆ, ಗುರುಗಳಿಗೆ, ಮಹಾಗುರುಗಳಿಗೆ, ರಾಜರಿಗೆ ಎಲ್ಲರಿಗೂ ಒಂದು ಕ್ಷಣದ ಸ್ತ್ರೀ ಸಂಗದ ಆಸೆಯಿಂದ ಉಂಟಾಗುವ ಯಾತನೆಯು ನಿರಂತರವಾಗಿರುತ್ತದೆ.

ಅರಕ್ತಮನಸಾಂ ನಿತ್ಯಂ ಬ್ರಹ್ಮಚರ್ಯಾಮಲಾತ್ಮನಾಮ್ ।
ತಪೋದಮಾರ್ಚನಾಧ್ಯಾನಯುಕ್ತಾನಾಂ ಶುದ್ಧಿರುತ್ತಮಾ ॥೧೨॥

ವೈರಾಗ್ಯದಿಂದ ಕೂಡಿದ ಮನಸ್ಸನ್ನು ಹೊಂದಿ ಬ್ರಹ್ಮಚರ್ಯದಿಂದ ನಿರ್ಮಲವಾದ ಮನಸ್ಸನ್ನು ಹೊಂದಿ ತಪಸ್ಸು, ಇಂದ್ರಿಯನಿಗ್ರಹ, ದೇವತಾರ್ಚನೆ ಮತ್ತು ಧ್ಯಾನದಿಂದ ಕೂಡಿರುವವರಿಗೆ ಉತ್ತಮವಾದ ಶುದ್ಧಿ ಇರುತ್ತದೆ.

ನ ಚ ಸ್ತ್ರೀಣಾಂ ಕ್ರಿಯಾ ಕಾಚಿದಿತಿ ಧರ್ಮೇ ವ್ಯವಸ್ಥಿತಃ ।
ನಿರಿಂದ್ರಿಯಾ ಅಮಂತ್ರಾಶ್ಚ ಸ್ತ್ರಿಯೋऽನೃತಮಿತಿ ಶ್ರುತಿಃ ॥೧೩॥

ಸ್ತ್ರೀಯರಿಗೆ ಯಾವ ಧಾರ್ಮಿಕ ಕ್ರಿಯೆಯೂ ವಿಹಿತವಾಗಿಲ್ಲ ಎಂಬುದು ಲೋಕದ ವ್ಯವಸ್ಥೆ. ಇಂದ್ರಿಯಜಯವಿಲ್ಲದ, ಮಂತ್ರಹೀನರಾದ ಸ್ತ್ರೀಯರು ಅನೃತರು ಎಂದು ಶ್ರುತಿ ಇದೆ.

ಶಯ್ಯಾಸನಮಲಂಕಾರಮನ್ನಪಾನಮನಾರ್ಯತಾಮ್ ।
ದುರ್ವಾಗ್ಭಾವಂ ರತಿಂ ಚೈವ ದದೌ ಸ್ತ್ರೀಭ್ಯಃ ಪ್ರಜಾಪತಿಃ ॥೧೪॥

ಪ್ರಜಾಪತಿಗಳಾದ ಬ್ರಹ್ಮದೇವರು ಸ್ತ್ರೀಯರಿಗೆ ಹಾಸಿಗೆ, ಆಸನ, ಅಲಂಕಾರ, ಅನ್ನ-ಪಾನಗಳು, ನೀಚಬುದ್ಧಿ, ಒರಟು ಮಾತುಗಳು, ರತಿಯ ಆಸೆ ಎಲ್ಲವನ್ನೂ ಕೊಟ್ಟರು.

ನ ತಾಸಾಂ ರಕ್ಷಣಂ ಕರ್ತುಂ ಶಕ್ಯಂ ಪುಂಸಾ ಕಥಂಚನ ।
ಅಪಿ ವಿಶ್ವಕೃತಾ ತಾತ ಕುತಸ್ತು ಪುರುಷೈರಿಹ ॥೧೫॥

ಎಲೈ ಪ್ರೀತಿಪಾತ್ರನೇ, ವಿಶ್ವಸೃಷ್ಟಿಯನ್ನು ಮಾಡುವ ಬ್ರಹ್ಮದೇವರೂ ಅವರ ರಕ್ಷಣೆಯನ್ನು ಮಾಡಲು ಸಾಧ್ಯವಿಲ್ಲ. ಇನ್ನು ಭೂಮಿಯಲ್ಲಿ ಪುರುಷರು ಹೇಗೆ ರಕ್ಷಣೆ ಮಾಡಿಯಾರು?

ವಾಚಾ ವಾ ವಧಬಂಧೈರ್ವಾ ಕ್ಲೇಶೈರ್ವಾ ವಿವಿಧೈಸ್ತಥಾ ।
ನ ಶಕ್ಯಾ ರಕ್ಷಿತುಂ ನಾರ್ಯಸ್ತಾ ಹಿ ನಿತ್ಯಮಸಂಯತಾಃ ॥೧೬॥

ಮಾತಿನಿಂದಾಗಲೀ, ಪ್ರಹಾರ ಅಥವಾ ಬಂಧನದಿಂದಾಗಲೀ, ವಿವಿಧವಾದ ಕ್ಲೇಶಗಳಿಂದಾಗಲೀ ನಾರಿಯರನ್ನು ರಕ್ಷಿಸಲು ಸಾಧ್ಯವಿಲ್ಲ. ಅವರು ಯಾವಾಗಲೂ ಸ್ವೇಚ್ಛಾಚಾರಿಗಳು.

ಇದಂ ತು ಪುರುಷವ್ಯಾಘ್ರ ಪುರಸ್ತಾಚ್ಛ್ರುತವಾನಹಮ್ ।
ಯಥಾ ರಕ್ಷಾ ಕೃತಾ ಪೂರ್ವಂ ವಿಪುಲೇನ ಗುರುಸ್ತ್ರಿಯಾಃ ॥೧೭॥

ಎಲೈ ಪುರುಷವ್ಯಾಘ್ರನೇ, ಹೇಗೆ ದೇವಶರ್ಮನ ಶಿಷ್ಯನಾದ ವಿಪುಲನು ಹಿಂದೆ ಗುರುಪತ್ನಿಯನ್ನು ರಕ್ಷಿಸಿದನು ಎಂದು ನಾನು ಮೊದಲು ಕೇಳಿದ್ದೇನೆ.

ಋಷಿರಾಸೀನ್ಮಹಾಭಾಗೋ ದೇವಶರ್ಮೇತಿ ವಿಶ್ರುತಃ ।
ತಸ್ಯ ಭಾರ್ಯಾ ರುಚಿರ್ನಾಮ ರೂಪೇಣಾಸದೃಶೀ ಭುವಿ ॥೧೮॥

ಮಹಾನುಭಾವನಾದ ಪ್ರಖ್ಯಾತನಾದ ದೇವಶರ್ಮನೆಂಬ ಋಷಿ ಇದ್ದನು. ಭೂಲೋಕದಲ್ಲಿ ಅಸದೃಶವಾದ ರೂಪವನ್ನು ಹೊಂದಿದ ರುಚಿ ಎಂಬುವಳು ಅವನ ಪತ್ನಿ.

ತಸ್ಯ ರೂಪೇಣ ಸಮ್ಮತ್ತಾ ದೇವಗಂಧರ್ವದಾನವಾಃ ।
ವಿಶೇಷತಸ್ತು ರಾಜೇಂದ್ರ ವೃತ್ರಹಾ ಪಾಕಶಾಸನಃ ॥೧೯॥

ಅವಳ ರೂಪದಿಂದ ದೇವ-ಗಂಧರ್ವ-ದಾನವರು ಮೋಹಗೊಂಡರು. ಎಲೈ ರಾಜೇಂದ್ರನೇ, ವೃತ್ರಸಂಹಾರಿಯೂ, ಪಾಕಶಾಸನನೂ ಆದ ಇಂದ್ರನು ವಿಶೇಷವಾಗಿ ಮೋಹಗೊಂಡನು.

ನಾರೀಣಾಂ ಚರಿತಜ್ಞಶ್ಚ ದೇವಶರ್ಮಾ ಮಹಾಮುನಿಃ ।
ಯಥಾಶಕ್ತಿ ಯಥೋತ್ಸಾಹಂ ಭಾರ್ಯಾಂ ತಾಮಭ್ಯರಕ್ಷತ ॥೨೦॥

ನಾರಿಯರ ನಡತೆಯನ್ನು ತಿಳಿದ ಮಹಾಮುನಿಯಾದ ದೇವಶರ್ಮನು ತನ್ನ ಶಕ್ತಿ ಮತ್ತು ಉತ್ಸಾಹಕ್ಕೆ ಅನುಗುಣವಾಗಿ ಆ ಭಾರ್ಯೆಯನ್ನು ರಕ್ಷಿಸಿದನು.

ಪುರಂದರಂ ಚ ಜಾನೀತೇ ಪರಸ್ತ್ರೀಕಾಮಚಾರಿಣಮ್ ।
ತಸ್ಮಾದ್ ಯತ್ನೇನ ಭಾರ್ಯಾಯಾ ರಕ್ಷಣಂ ಸ ಚಕಾರ ಹ ॥೨೧॥

ಇಂದ್ರನು ಪರಸ್ತ್ರೀಕಾಮುಕನೆಂಬುದನ್ನು ಅವನು ತಿಳಿದಿದ್ದನು. ಆದ್ದರಿಂದ ಪ್ರಯತ್ನ ಪೂರ್ವಕವಾಗಿ ಪತ್ನಿಯ ರಕ್ಷಣೆಯನ್ನು ಮಾಡಿದನು.

ಸ ಕದಾಚಿದೃಷಿಸ್ತಾತ ಯಜ್ಞಂ ಕರ್ತುಮನಾಸ್ತದಾ ।
ಭಾರ್ಯಾಸಂರಕ್ಷಣಂ ಕಾರ್ಯಂ ಕಥಂ ಸ್ಯಾದಿತ್ಯಚಿಂತಯತ್ ॥೨೨॥

ಎಲೈ ಪ್ರೀತಿಪಾತ್ರನೇ, ಅವನು ಒಮ್ಮೆ ಯಜ್ಞವನ್ನು ಮಾಡಿಸುವ ಮನಸ್ಸುಳ್ಳವನಾಗಿ ಭಾರ್ಯೆಯ ಸಂರಕ್ಷಣೆಯನ್ನು ಹೇಗೆ ಮಾಡಬೇಕೆಂದು ಚಿಂತಿಸಿದನು.

ರಕ್ಷಾವಿಧಾನಂ ಮನಸಾ ಸ ವಿಚಿಂತ್ಯ ಮಹಾತಪಾಃ ।
ಆಹೂಯ ದಯಿತಂ ಶಿಷ್ಯಂ ವಿಪುಲಂ ಪ್ರಾಹ ಭಾರ್ಗವಮ್ ॥೨೩॥

ಮಹಾತಪಸ್ವಿಯಾದ ಅವನು ರಕ್ಷಣೆಯನ್ನು ಮಾಡುವ ಪ್ರಕಾರವನ್ನು ಮನಸ್ಸಿನಲ್ಲಿ ಚಿಂತಿಸಿ ಪ್ರೀತಿಪಾತ್ರನಾದ ಶಿಷ್ಯನಾದ ವಿಪುಲನನ್ನು ಆಹ್ವಾನಿಸಿದನು. ಭಾರ್ಗವ ಗೋತ್ರಕ್ಕೆ ಸೇರಿದ ಅವನನ್ನು ಕುರಿತು ಮಾತನಾಡಿದನು.

ಯಜ್ಞಕಾರೋ ಗಮಿಷ್ಯಾಮಿ ರುಚಿಂ ಚೇಮಾಂ ಸುರೇಶ್ವರಃ ।
ಪುತ್ರ ಪ್ರಾರ್ಥಯತೇ ನಿತ್ಯಂ ತಾಂ ರಕ್ಷಸ್ವ ಯಥಾಬಲಮ್ ॥೨೪॥

ನಾನು ಯಜ್ಞವನ್ನು ಮಾಡಿಸಲು ಹೊರಡುತ್ತಿದ್ದೇನೆ. ನನ್ನ ಪತ್ನಿಯಾದ ರುಚಿಯನ್ನು ಸುರೇಶ್ವರನು ಯಾವಾಗಲೂ ಬಯಸುತ್ತಾನೆ. ನಿನ್ನ ಶಕ್ತಿಗನುಗುಣವಾಗಿ ಅವಳನ್ನು ರಕ್ಷಿಸು.

ಅಪ್ರಮತ್ತೇನ ತೇ ಭಾವ್ಯಂ ಸದಾ ಪ್ರತಿ ಪುರಂದರಮ್ ।
ಸ ಹಿ ರೂಪಾಣಿ ಕುರುತೇ ವಿವಿಧಾನಿ ಭೃಗೂದ್ವಹ ॥೨೫॥

ಪುರಂದರನ ವಿಷಯದಲ್ಲಿ ನೀನು ಯಾವಾಗಲೂ ಜಾಗರೂಕನಾಗಿರಬೇಕು. ಎಲೈ ಭೃಗೂದ್ವಹನೇ, ಅವನು ವಿವಿಧ ರೂಪಗಳನ್ನು ಧರಿಸಿ ಬರುತ್ತಾನೆ (ಎಂದು ಹೇಳಿದನು).

ಇತ್ಯುಕ್ತೋ ವಿಪುಲಸ್ತೇನ ತಪಸ್ವೀ ನಿಯತೇಂದ್ರಿಯಃ ।
ಸದೈವೋಗ್ರತಪಾ ರಾಜನ್ನಗ್ನ್ಯರ್ಕಸದೃಶದ್ಯುತಿಃ ॥೨೬॥

ಧರ್ಮಜ್ಞಃ ಸತ್ಯವಾದೀ ಚ ತಥೇತಿ ಪ್ರತ್ಯಭಾಷತ ।
ಪುನಶ್ಚೇದಂ ಮಹಾರಾಜ ಪಪ್ರಚ್ಛ ಪ್ರಥಿ(ಸ್ಥಿ)ತಂ ಗುರುಮ್ ॥೨೭॥

ಎಲೈ ರಾಜನೇ, ಹೀಗೆ ಹೇಳಲ್ಪಟ್ಟ ತಪಸ್ವಿಯೂ, ಜಿತೇಂದ್ರಿಯನೂ, ಯಾವಾಗಲೂ ಉಗ್ರ ತಪಸ್ಸಿನಲ್ಲಿ ನಿರತನೂ, ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳವನೂ, ಧರ್ಮಜ್ಞನೂ, ಸತ್ಯವಾದಿಯೂ ಆದ ಅವನು ಹಾಗೆಯೇ ಆಗಲಿ ಎಂದು ಹೇಳಿದನು. ಎಲೈ ಮಹಾರಾಜನೇ, ಅವನು ಪುನಃ ತನ್ನ ಪ್ರಖ್ಯಾತವಾದ ಗುರುವನ್ನು ಕುರಿತು ಹೀಗೆ ಮಾತನಾಡಿದನು.

ಕಾನಿ ರೂಪಾಣಿ ಶಕ್ರಸ್ಯ ಭವಂತ್ಯಾಗಚ್ಛತೋ ಮುನೇ ।
ವಪುಸ್ತೇಜಶ್ಚ ಕೀದೃಗ್ವೈ ತನ್ಮೇ ವ್ಯಾಖ್ಯಾತುಮರ್ಹಸಿ ॥೨೮॥

ಎಲೈ ಋಷಿಯೇ, ಇಂದ್ರನು ಬರುವಾಗ ಎಂತಹ ರೂಪವನ್ನು ತೆಗೆದುಕೊಂಡು ಬರುತ್ತಾನೆ? ಅವನ ಶರೀರ ಮತ್ತು ತೇಜಸ್ಸುಗಳು ಹೇಗಿರುತ್ತವೆ ಎಂಬುದನ್ನು ನನಗೆ ನೀವು ತಿಳಿಸಬೇಕು (ಎಂದು ಕೇಳಿದನು).

ತತಃ ಸ ಭಗವಾಂಸ್ತಸ್ಮೈ ವಿಪುಲಾಯ ಮಹಾತ್ಮನೇ ।
ಆಚಚಕ್ಷೇ ಯಥಾತತ್ತ್ವಂ ಮಾಯಾಂ ಶಕ್ರಸ್ಯ ಭಾರತ ॥೨೯॥

ಎಲೈ ಭಾರತನೇ, ಆಗ ಪೂಜ್ಯನಾದ ಆ ಋಷಿಯು ಮಹಾತ್ಮನಾದ ವಿಪುಲನಿಗೆ ಶಕ್ರನ ಮಾಯೆಯನ್ನು ಚೆನ್ನಾಗಿ ತಿಳಿಸಿದನು.

ಬಹುಮಾಯಃ ಸ ವಿಪ್ರರ್ಷೇ ಬಲಹಾ ಪಾಕಶಾಸನಃ ।
ತಾಂಸ್ತಾನ್ ವಿಕುರುತೇ ಭಾವಾನ್ ಬಹೂನಥ ಮುಹುರ್ಮುಹುಃ ॥

ಎಲೈ ವಿಪ್ರರ್ಷಿಯೇ, ಬಲಸಂಹಾರಕನೂ, ಪಾಕಶಾಸನನೂ ಆದ ಇಂದ್ರನು ಅನೇಕ ಮಾಯೆಗಳನ್ನು ಹೊಂದಿರುವವನು. ಅವನು ಪುನಃ ಪುನಃ ತನ್ನ ಅನೇಕ ರೂಪಗಳನ್ನು ಬದಲಾಯಿಸುತ್ತಾನೆ.

ಕಿರೀಟೀ ವಜ್ರಭೃದ್ದನ್ವೀ ಮುಕುಟೀ ಬದ್ಧಕುಂಡಲಃ ।
ಭವತ್ಯಥ ಮುಹೂರ್ತೇನ ಚಂಡಾಲಸಮದರ್ಶನಃ ॥೩೧॥

ಕಿರೀಟಧಾರಿಯಾಗಿ, ವಜ್ರ-ಧನುಸ್ಸುಗಳನ್ನು ಕೈಯಲ್ಲಿ ಹಿಡಿದು ಮುಕುಟ-ಕುಂಡಲ ಧಾರಿಯಾಗಿ ಕಾಣಿಸುತ್ತಾನೆ. ಒಂದು ಮುಹೂರ್ತದಲ್ಲಿ ಚಂಡಾಲನ ವೇಷವನ್ನು ಹಾಕಿಕೊಳ್ಳುತ್ತಾನೆ.

ಶಿಖೀ ಜಟೀ ಚೀರವಾಸಾಃ ಪುನರ್ಭವತಿ ಪುತ್ರಕ ।
ಬೃಹಚ್ಛರೀರಶ್ಚ ಪುನಃ ಪೀವರೋऽಥ ಪುನಃ ಕೃಶಃ ॥೩೨॥

ಶಿಖೆಯನ್ನೂ, ಜಟೆಯನ್ನೂ ಧರಿಸಿ ಪುನಃ ನಾರುಮಡಿಯನ್ನುಟ್ಟವನಾಗುತ್ತಾನೆ. ಎಲೈ ಪುತ್ರನೇ, ಅವನು ಪುನಃ ದೊಡ್ಡ ಶರೀರವನ್ನು, ಸ್ಥೂಲಶರೀರವನ್ನು, ಪುನಃ ಕೃಶ ಶರೀರವನ್ನು ತೆಗೆದುಕೊಳ್ಳುತ್ತಾನೆ.

ಗೌರಂ ಶ್ಯಾಮಂ ಚ ಕೃಷ್ಣಂ ಚ ವರ್ಣಂ ವಿಕುರುತೇ ಪುನಃ ।
ವಿರೂಪೋ ರೂಪವಾಂಶ್ಚೈವ ಯುವಾ ವೃದ್ಧಸ್ತಥೈವ ಚ ॥೩೩॥

ಪ್ರಾಜ್ಞೋ ಜಡಶ್ಚ ಮೂಕಶ್ಚ ಹ್ರಸ್ವೋ ದೀರ್ಘಸ್ತಥೈವ ಚ ।
ಬ್ರಾಹ್ಮಣಃ ಕ್ಷತ್ರಿಯಶ್ಚೈವ ವೈಶ್ಯಃ ಶೂದ್ರಸ್ತಥೈವ ಚ ।
ಪ್ರತಿಲೋಮಾನುಲೋಮಶ್ಚ ಭವತ್ಯಥ ಶತಕ್ರತುಃ ॥೩೪॥

ಗೌರವರ್ಣದ, ಶ್ಯಾಮವರ್ಣದ, ಕೃಷ್ಣವರ್ಣದ ರೂಪಗಳನ್ನು ತೆಗೆದುಕೊಳ್ಳುತ್ತಾನೆ. ರೂಪಹೀನವಾದ, ರೂಪದಿಂದ ಕೂಡಿದ ದೇಹಗಳನ್ನು ತೆಗೆದುಕೊಳ್ಳುತ್ತಾನೆ. ಯುವಕನಾಗುತ್ತಾನೆ ಹಾಗೆಯೇ ವೃದ್ಧನಾಗುತ್ತಾನೆ. ಪ್ರಾಜ್ಞ, ಜಡ, ಮೂಕ, ಕುಳ್ಳ, ಎತ್ತರ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪ್ರತಿಲೋಮ, ಅನುಲೋಮ - ಈ ಎಲ್ಲ ರೂಪಗಳನ್ನೂ ಶತಕ್ರತುವು (ಇಂದ್ರನು) ತೆಗೆದುಕೊಳ್ಳುತ್ತಾನೆ.

ಶುಕವಾಯಸರೂಪೀ ಚ ಹಂಸಕೋಕಿಲರೂಪವಾನ್ ।
ಸಿಂಹವ್ಯಾಘ್ರಗಜಾನಾಂ ಚ ರೂಪಂ ಧಾರಯತೇ ಪುನಃ ॥೩೫॥

ಗಿಣಿ ಮತ್ತು ಕಾಗೆಯ ರೂಪಗಳನ್ನು ಧರಿಸುತ್ತಾನೆ. ಹಂಸ, ಕೋಗಿಲೆಗಳ ರೂಪಗಳನ್ನು, ಪುನಃ ಸಿಂಹ-ವ್ಯಾಘ್ರ-ಗಜಗಳ ರೂಪವನ್ನು ಧರಿಸುತ್ತಾನೆ.

ದೈವಂ ದೈತ್ಯಮಥೋ ರಾಜ್ಞಾಂ ವಪುರ್ಧಾರಯತೇಽಪಿ ಚ ।
ಸುಕೃಶೋ ವಾಯುಭಗ್ನಾಂಗಃ ಶಕುನಿರ್ವಿಕೃತಸ್ತಥಾ ॥೩೬॥

ದೇವತಾರೂಪ, ದೈತ್ಯರೂಪ, ರಾಜರೂಪಗಳನ್ನು ಧರಿಸುತ್ತಾನೆ. ಅತ್ಯಂತ ಕೃಶನಾಗಿ ಪಾರ್ಶ್ವವಾಯು ಮೊದಲಾದವುಗಳಿಂದ ಭಗ್ನವಾದ ಶರೀರವುಳ್ಳವನಾಗಿ, ವಿಕಾರ ರೂಪವನ್ನು ಹೊಂದಿದ ಪಕ್ಷಿಯಾಗಿ ಬರುತ್ತಾನೆ.

ಚತುಷ್ಪಾದ್ ಬಹುರೂಪಶ್ಚ ಪುನರ್ಭವತಿ ಬಾಲಿಶಃ ।
ಮಕ್ಷಿಕಾಮಶಕಾದೀನಾಂ ವಪುರ್ಧಾರಯತೇಽಪಿ ಚ ॥೩೭॥

ನಾಲ್ಕು ಪಾದವುಳ್ಳವನಾಗಿ, ಬಹುರೂಪವುಳ್ಳವನಾಗಿ ಪುನಃ ಬಾಲಿಶನಾಗಿ ಬರುತ್ತಾನೆ. ನೊಣ, ಸೊಳ್ಳೆ ಮೊದಲಾದವುಗಳ ಶರೀರವನ್ನು ಧರಿಸಿ ಬರುತ್ತಾನೆ.

ನ ಶಕ್ಯಮಸ್ಯ ಗ್ರಹಣಂ ಕರ್ತುಂ ವಿಪುಲ ಕೇನಚಿತ್ ।
ಅಪಿ ವಿಶ್ವಕೃತಾ ತಾತ ಯೇನ ಸೃಷ್ಟಮಿದಂ ಜಗತ್ ॥೩೮॥

ಎಲೈ ವಿಪುಲನೇ, ಅವನ ರೂಪವನ್ನು ತಿಳಿಸಲು ಯಾರಿಗೂ ಸಾಧ್ಯವಿಲ್ಲ. ಜಗತ್ತನ್ನು ಸೃಷ್ಟಿಸಿದ ಬ್ರಹ್ಮನಿಗೂ ಸಾಧ್ಯವಿಲ್ಲ.

ಪುನರಂತರ್ಹಿತಃ ಶಕ್ರೋ ದೃಶ್ಯತೇ ಜ್ಞಾನಚಕ್ಷುಷಾ ।
ವಾಯುಭೂತಶ್ಚ ಸ ಪುನರ್ದೇವರಾಜೋ ಭವತ್ಯುತ ॥೩೯॥

ಇಂದ್ರನು ಪುನಃ ಅಂತರ್ಧಾನವನ್ನು ಹೊಂದಿ ಜ್ಞಾನದೃಷ್ಟಿಗೆ ಗೋಚರಿಸುತ್ತಾನೆ. ದೇವರಾಜನಾದ ಅವನು ಪುನಃ ವಾಯುಶರೀರವನ್ನು ತೆಗೆದುಕೊಳ್ಳುತ್ತಾನೆ.

ಏವಂ ರೂಪಾಣಿ ಸತತಂ ಕುರುತೇ ಪಾಕಶಾಸನಃ ।
ತಸ್ಮಾದ್ ವಿಪುಲ ಯತ್ನೇನ ರಕ್ಷೇಮಾಂ ತನುಮಧ್ಯಮಾಮ್ ॥೪೦॥

ಹೀಗೆ ಪಾಕಶಾಸನನು ಸತತವಾಗಿ ರೂಪಗಳನ್ನು ಬದಲಾಯಿಸುತ್ತಾನೆ. ಆದ್ದರಿಂದ ಎಲೈ ವಿಪುಲನೇ, ಸುಂದರಿಯಾದ ಈ ನನ್ನ ಪತ್ನಿಯನ್ನು ಪ್ರಯತ್ನಪೂರ್ವಕವಾಗಿ ರಕ್ಷಿಸು.

ಯಥಾ ರುಚಿಂ ನಾವಲಿಹೇದ್ ದೇವೇಂದ್ರೋ ಭೃಗುಸತ್ತಮ ।
ಕ್ರತಾವುಪಹಿತಂ ನ್ಯಸ್ತಂ ಹವಿಃ ಶ್ವೇವ ದುರಾತ್ಮವಾನ್ ॥೪೧॥

ಎಲೈ ಭೃಗುಶ್ರೇಷ್ಠನೇ, ಯಜ್ಞದಲ್ಲಿ ಸ್ಥಾಪಿಸಿದ ಹವಿಸ್ಸನ್ನು ನಾಯಿಯು ನೆಕ್ಕಿದಂತೆ ದುರಾತ್ಮನಾದ ದೇವೇಂದ್ರನು ರುಚಿಯನ್ನು ಸ್ಪರ್ಶಿಸದಂತೆ ನೋಡಿಕೊ.

ಏವಮಾಖ್ಯಾಯ ಸ ಮುನಿರ್ಯಜ್ಞಕಾರೋಽಗಮತ್ ತದಾ ।
ದೇವಶರ್ಮಾ ಮಹಾಭಾಗಸ್ತತೋ ಭರತಸತ್ತಮ ॥೪೨॥

ಎಲೈ ಭರತಶ್ರೇಷ್ಠನೇ, ಮಹಾನುಭಾವನಾದ ದೇವಶರ್ಮನು ಹೀಗೆ ಶಿಷ್ಯನಿಗೆ ಆದೇಶವನ್ನು ಮಾಡಿ ಯಜ್ಞವನ್ನು ಮಾಡಿಸಲು ಹೊರಟು ಹೋದನು.

ವಿಪುಲಸ್ತು ವಚಃ ಶ್ರುತ್ವಾ ಗುರೋಶ್ಚಿಂತಾಪರೋಽಭವತ್ ।
ರಕ್ಷಾಂ ಚ ಪರಮಾಂ ಚಕ್ರೇ ದೇವರಾಜಾನ್ಮಹಾಬಲಾತ್ ॥೪೩॥

ವಿಪುಲನಾದರೂ ಗುರುಗಳ ಮಾತನ್ನು ಕೇಳಿ ಚಿಂತಾಪರನಾದನು. ಮಹಾಬಲನಾದ ದೇವೇಂದ್ರನಿಂದ ಗುರುಪತ್ನಿಯನ್ನು ರಕ್ಷಿಸಲು ಬಹಳ ಪ್ರಯತ್ನವನ್ನು ಮಾಡಿದನು.

ಕಿಂ ನು ಶಕ್ಯಂ ಮಯಾ ಕರ್ತುಂ ಗುರುದಾರಾಭಿರಕ್ಷಣೇ ।
ಮಾಯಾವೀ ಹಿ ಸುರೇಂದ್ರೋಽಸೌ ದುರ್ಧರ್ಷಶ್ಚಾಪಿ ವೀರ್ಯವಾನ್ ॥

ಗುರುಪತ್ನಿಯನ್ನು ರಕ್ಷಿಸುವ ವಿಷಯದಲ್ಲಿ ನಾನು ಏನು ಮಾಡಲು ಸಾಧ್ಯ ? ಈ ಸುರೇಂದ್ರನಾದರೂ ಮಾಯಾವಿಯಾದವನು, ಸೋಲಿಸಲು ಅಸಾಧ್ಯನಾದವನು ಮತ್ತು ಪರಾಕ್ರಮಶಾಲಿಯಾದವನು.

ನಾಪಿಧಾಯಾಶ್ರಮಂ ಶಕ್ಯೋ ರಕ್ಷಿತುಂ ಪಾಕಶಾಸನಃ ।
ಉಟಜಂ ವಾ ತಥಾ ಹ್ಯಸ್ಯ ನಾನಾವಿಧಸರೂಪತಾ ॥೪೫॥

ಆಶ್ರಮವನ್ನು ಮುಚ್ಚಿ ಇಂದ್ರನಿಂದ ರಕ್ಷಿಸಲು ಸಾಧ್ಯವಿಲ್ಲ ಅಥವಾ ಪರ್ಣಶಾಲೆಯನ್ನಾದರೂ ಮುಚ್ಚಬೇಕು. ಏಕೆಂದರೆ ಅವನು ನಾನಾ ರೂಪಗಳನ್ನು ತೆಗೆದುಕೊಂಡು ಬರುತ್ತಾನೆ.

ವಾಯುರೂಪೇಣ ವಾ ಶಕ್ರೋ ಗುರುಪತ್ನೀಂ ಪ್ರಧರ್ಷಯೇತ್ ।
ತಸ್ಮಾದಿಮಾಂ ಸಂಪ್ರವಿಶ್ಯ ರುಚಿಂ ಸ್ಥಾಸ್ಯೇಽಹಮದ್ಯ ವೈ ॥೪೬॥

ಇಂದ್ರನು ವಾಯುರೂಪವನ್ನು ತೆಗೆದುಕೊಂಡು ಬಂದು ಗುರುಪತ್ನಿಯನ್ನು ಬಲಾತ್ಕರಿಸಬಹುದು. ಆದ್ದರಿಂದ ನಾನು ಈ ರುಚಿಯನ್ನು ಪ್ರವೇಶ ಮಾಡಿ ಈ ದಿನ ನಿಲ್ಲುತ್ತೇನೆ.

ಅಥ ವಾ ಪೌರುಷೇಣೇಯಮಶಕ್ಯಾ ರಕ್ಷಿತುಂ ಮಯಾ ।
ಬಹುರೂಪೋ ಹಿ ಭಗವಾನ್ ಶ್ರೂಯತೇ ಹರಿವಾಹನಃ ॥೪೭॥

ಅಥವಾ ಪುರುಷಪ್ರಯತ್ನದಿಂದ ನಾನು ಇವಳನ್ನು ರಕ್ಷಿಸಲಾರೆ. ಪೂಜ್ಯನಾದ ದೇವೇಂದ್ರನು ಬಹುರೂಪವುಳ್ಳವನೆಂದು ಕೇಳಿಬರುತ್ತದೆ.

ಸೋಽಹಂ ಯೋಗಬಲಾದೇನಾಂ ರಕ್ಷಿಷ್ಯೇ ಪಾಕಶಾಸನಾತ್ ।
ಗಾತ್ರಾಣಿ ಗಾತ್ರೈರಸ್ಯಾಹಂ ಸಂಪ್ರವೇಕ್ಷ್ಯೇಽಭಿರಕ್ಷಿತುಮ್ ॥೪೮॥

ಆದ್ದರಿಂದ ನಾನು ಇವಳನ್ನು ನನ್ನ ಯೋಗಬಲದಿಂದ ದೇವೇಂದ್ರನಿಂದ ರಕ್ಷಿಸುವೆನು. ಅವಳನ್ನು ರಕ್ಷಿಸಲು ನನ್ನ ಶರೀರದ ಅವಯವಗಳಿಂದ ಅವಳ ಶರೀರವನ್ನು ಪ್ರವೇಶಿಸುವೆನು.

ಯದ್ಯುಚ್ಛಿಷ್ಟಾಮಿಮಾಂ ಪತ್ನೀಂ ರುಚಿಂ ಪಶ್ಯೇತ ಮೇ ಗುರುಃ ।
ಶಪ್ಸ್ಯತ್ಯಸಂಶಯಂ ಕೋಪಾದ್ ದಿವ್ಯಜ್ಞಾನೋ ಮಹಾತಪಾಃ ॥೪೯॥

ಇಂದ್ರನಿಂದ ಸ್ಪರ್ಶಿಸಲ್ಪಟ್ಟ ರುಚಿಯನ್ನು ಗುರುವು ಏನಾದರೂ ನೋಡಿದರೆ ದಿವ್ಯ ಜ್ಞಾನವನ್ನು ಹೊಂದಿದ ಮಹಾತಪಸ್ವಿಯಾದ ಅವರು ನಿಸ್ಸಂಶಯವಾಗಿ ಶಾಪವನ್ನು ಕೊಡುವರು.

ನ ಚೇಯಂ ರಕ್ಷಿತುಂ ಶಕ್ಯಾ ಯಥಾಽನ್ಯಾ ಪ್ರಮದಾ ನೃಭಿಃ ।
ಮಾಯಾವೀ ಹಿ ಸುರೇಂದ್ರೋಸಾವಹೋ ಪ್ರಾಪ್ತೋಸ್ಮಿ ಸಂಶಯಮ್ ॥

ಲೋಕದ ಸಾಮಾನ್ಯ ಸ್ತ್ರೀಯರನ್ನು ರಕ್ಷಿಸಿದಂತೆ ಇವಳನ್ನು ರಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಸುರೇಂದ್ರನು ಮಾಯಾವಿಯಾದವನು. ಆದ್ದರಿಂದ ನಾನು ಬಹಳ ಸಂಶಯಕ್ಕೆ ಸಿಲುಕಿದ್ದೇನೆ.

ಅವಶ್ಯಕರಣೀಯಂ ಹಿ ಗುರೋರಿಹ ಹಿ ಶಾಸನಮ್ ।
ಯದಿ ತ್ವೇತದಹಂ ಕುರ್ಯಾಮಾಶ್ಚರ್ಯಂ ಸ್ಯಾತ್ ಕೃತಂ ಮಯಾ ॥

ಗುರುಗಳ ಆಜ್ಞೆಯು ಅವಶ್ಯವಾಗಿ ಪಾಲಿಸಲ್ಪಡಬೇಕಾದುದು. ನಾನು ಈ ಕಾರ್ಯವನ್ನು ಮಾಡಿದರೆ ಒಂದು ಅದ್ಭುತವನ್ನು ಮಾಡಿದಂತಾಗುತ್ತದೆ.

ಯೋಗೇನಾನುಪ್ರವಿಶ್ಯೇಹ ಗುರುಪತ್ನ್ಯಾಃ ಕಳೇವರಮ್ ।
ನಿರ್ಮುಕ್ತಸ್ಯ ರಜೋರೂಪಾನ್ನಾಪರಾಧೋ ಭವೇನ್ಮಮ ॥೫೨॥

ನಾನು ಒಂದು ಧೂಳಿನ ಕಣದ ರೂಪದಲ್ಲಿ ಗುರುಪತ್ನಿಯ ಶರೀರವನ್ನು ಪ್ರವೇಶಿಸಿ ಹೊರಗೆ ಬಂದರೆ ನನಗೆ ಯಾವ ದೋಷವೂ ಉಂಟಾಗುವುದಿಲ್ಲ.

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಅನ್ಯಥಾಲಿಂಗ್ಯತೇ ಕಾಂತಾಂ ದುಹಿತಾಲಿಂಗ್ಯತೇಽನ್ಯಥಾ ॥೫೩॥

ಮನುಷ್ಯರ ಬಂಧ-ಮೋಕ್ಷಗಳಿಗೆ ಮನಸ್ಸೇ ಕಾರಣವಾದುದು. ಭಾರ್ಯೆಯನ್ನು ಬೇರೆ ರೀತಿಯಲ್ಲಿ ಆಲಿಂಗಿಸುತ್ತಾನೆ. ಪುತ್ರಿಯನ್ನು ಬೇರೆ ರೀತಿ ಆಲಿಂಗಿಸುತ್ತಾನೆ.

ಗರ್ಭಸಂಸ್ಥೋ ಯಥಾ ಪುತ್ರೋ ಜಾಯಮಾನೋ ನ ಲಿಪ್ಯತೇ ।
ಏವಂ ಜ್ಞಾನೀ ನ ಲೌಕ್ಯೈಶ್ಚ ಕರ್ಮಭಿರ್ನೈವ ದುಷ್ಯತೇ ॥೫೪॥

ಗರ್ಭದಲ್ಲಿದ್ದ ಪುತ್ರನು ಜನಿಸುವಾಗ ಹೇಗೆ ಅವನಿಗೆ ದೋಷವಿಲ್ಲವೋ ಅದರಂತೆ ಜ್ಞಾನಿಯಾದವನು ಲೋಕ ಸಹಜವಾದ ಕರ್ಮಗಳಿಂದ ದೂಷಿತನಾಗುವುದಿಲ್ಲ.

ಯಥಾ ಹಿ ಶೂನ್ಯಾಂ ಪಥಿಕಃ ಸಭಾಮಧ್ಯಾವಸೇತ್ ಪಥಿ ।
ತಥಾದ್ಯಾವಾಸಯಿಷ್ಯಾಮಿ ಗುರುಪತ್ನ್ಯಾಃ ಕಳೇವರಮ್ ॥೫೫॥

ದಾರಿಹೋಕನಾದವನು ದಾರಿಯಲ್ಲಿ ಸಿಗುವ ಶೂನ್ಯವಾದ ಸಭೆಯಲ್ಲಿ ವಾಸ ಮಾಡಿದಂತೆ ಈ ದಿನ ನಾನು ಗುರುಪತ್ನಿಯ ಶರೀರದಲ್ಲಿ ವಾಸ ಮಾಡುವೆನು.

ಅಸಕ್ತಃ ಪದ್ಮಪತ್ರಸ್ಥೋ ಜಲಬಿಂದುರ್ಯಥಾ ಚಲಃ ।
ಏವಮೇವ ಶರೀರೇಽಸ್ಯಾ ನಿವತ್ಸ್ಯಾಮಿ ಸಮಾಹಿತಃ ॥೫೬॥

ಪದ್ಮಪತ್ರದಲ್ಲಿ ಚಲಿಸುವ ಜಲಬಿಂದುವು ಹೇಗೆ ಅಂಟಿಕೊಳ್ಳದೆ ಇರುತ್ತದೆಯೋ ಅದರಂತೆ ನಾನು ಸಮಾಧಿಯನ್ನು ಹೊಂದಿ ಇವಳ ಶರೀರದಲ್ಲಿ ವಾಸ ಮಾಡುವೆನು.

ಇತ್ಯೇವಂ ಧರ್ಮಮಾಲೋಕ್ಯ ವೇದವೇದಾಂಶ್ಚ ಸರ್ವಶಃ ।
ತಪಶ್ಚ ವಿಪುಲಂ ದೃಷ್ಟ್ವಾ ಗುರೋರಾತ್ಮನ ಏವ ಚ ॥೫೭॥

ಇತಿ ನಿಶ್ಚಿತ್ಯ ಮನಸಾ ರಕ್ಷಾಂ ಪ್ರತಿ ಸ ಭಾರ್ಗವಃ ।
ಅನ್ವತಿಷ್ಠತ್ಪರಂ ಯತ್ನಂ ಯಥಾ ತಚ್ಛೃಣು ಪಾರ್ಥಿವ ॥೫೮॥

ಈ ರೀತಿಯಲ್ಲಿ ಧರ್ಮಶಾಸ್ತ್ರವನ್ನು ಗಮನಿಸಿ, ವೇದಶಾಸ್ತ್ರವನ್ನು ಗಮನಿಸಿ, ಗುರುವಿನ ಮತ್ತು ತನ್ನ ವಿಪುಲವಾದ ತಪಸ್ಸನ್ನು ಗಮನಿಸಿ, ಭಾರ್ಗವ, ಗೋತ್ರನಾದ ವಿಪುಲನು ಗುರುಪತ್ನಿಯ ರಕ್ಷಣೆಯನ್ನು ಮನಸ್ಸಿನಿಂದಲೇ ನಿಶ್ಚಯಿಸಿ ಹೇಗೆ ಶ್ರೇಷ್ಠ ಪ್ರಯತ್ನವನ್ನು ಮಾಡಿದನೆಂದು ನನ್ನಿಂದ ಕೇಳುವವನಾಗು.

ಗುರುಪತ್ನೀಂ ಸಮಾಸೀನೋ ವಿಪುಲಃ ಸ ಮಹಾತಪಾಃ ।
ಉಪಾಸೀನಾಮನಿಂದ್ಯಾಂಗೀಂ ಕಥಾರ್ಥೈಃ ಸಮಲೋಭಯತ್ ॥೫೯॥

ಮಹಾತಪಸ್ವಿಯಾದ ವಿಪುಲನು ಗುರುಪತ್ನಿಯ ಸಮೀಪದಲ್ಲಿ ಕುಳಿತು ಅನೇಕ ಕಥೆಗಳಿಂದ ಅನವದ್ಯಾಂಗಿಯಾದ (ಸುಂದರಿಯಾದ) ಅವಳನ್ನು ಮರುಳುಗೊಳಿಸಿದನು.

ನೇತ್ರಾಭ್ಯಾಂ ನೇತ್ರಯೋರಸ್ಯಾ ರಶ್ಮಿಂ ಸಂಯೋಜ್ಯ ರಶ್ಮಿಭಿಃ ।
ವಿವೇಶ ವಿಪುಲಃ ಕಾಯಮಾಕಾಶಂ ಪವನೋ ಯಥಾ ॥೬೦॥

ಅವಳ ನೇತ್ರರಶ್ಮಿಗಳ ಜೊತೆಯಲ್ಲಿ ತನ್ನ ನೇತ್ರರಶ್ಮಿಗಳನ್ನು ಸೇರಿಸಿ ವಿಪುಲನು ವಾಯುವು ಆಕಾಶವನ್ನು ಪ್ರವೇಶಿಸಿದಂತೆ ಅವಳ ಶರೀರವನ್ನು ಪ್ರವೇಶಿಸಿದನು.

ಲಕ್ಷಣಂ ಲಕ್ಷಣೇನೈವ ವದನಂ ವದನೇನ ಚ ।
ಅವಿಚೇಷ್ಟನ್ನತಿಷ್ಠದ್ವೈ ಛಾಯೇವಾಂತರ್ಗತೋ ಮುನಿಃ ॥೬೧॥

ತನ್ನ ಲಕ್ಷಣಗಳನ್ನು ಅವಳ ಲಕ್ಷಣಗಳ ಜೊತೆಯಲ್ಲಿ, ತನ್ನ ಮುಖವನ್ನು ಅವಳ ಮುಖದ ಜೊತೆಯಲ್ಲಿ ಸಂಯೋಜಿಸಿ ಒಳಗೆ ಪ್ರವೇಶಿಸಿದವನಾಗಿ ವಿಪುಲ ಋಷಿಯು ನೆರಳಿನಂತೆ ಅಲುಗಾಡದೆ ನಿಂತನು.

ತತೋ ವಿಷ್ಟಭ್ಯ ವಿಪುಲೋ ಗುರುಪತ್ನ್ಯಾಃ ಕಳೇವರಮ್ ।
ಉವಾಸ ರಕ್ಷಣೇ ಯುಕ್ತೋ ನ ಚ ಸಾ ತಮಬುಧ್ಯತ ॥೬೨॥

ಆಗ ವಿಪುಲನು ಗುರುಪತ್ನಿಯ ಶರೀರವನ್ನು ಸ್ತಂಭನಗೊಳಿಸಿ ರಕ್ಷಣೆಯಲ್ಲಿ ತತ್ಪರನಾಗಿ ಅಲ್ಲಿನೆಲೆಸಿದನು. ರುಚಿಗೆ ಅದು ತಿಳಿಯಲಿಲ್ಲ.

ಯಂ ಕಾಲಂ ನಾಗತೋ ರಾಜನ್ ಗುರುಸ್ತಸ್ಯ ಮಹಾತ್ಮನಃ ।
ಕ್ರತುಂ ಸಮಾಪ್ಯ ಸ್ವಗೃಹಂ ತಂ ಕಾಲಂ ಸೋಽಭ್ಯರಕ್ಷತ ॥೬೩॥

ಎಲೈ ರಾಜನೇ, ಮಹಾತ್ಮನಾದ ಅವನ ಗುರುವು ಯಾಗವನ್ನು ಮುಗಿಸಿ ಮನೆಗೆ ಹಿಂದಿರುಗಿ ಬರುವಷ್ಟು ಕಾಲದವರೆಗೆ ಅವನು ಅವಳನ್ನು ರಕ್ಷಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವಿಪುಲೋಪಾಖ್ಯಾನೇ ಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

ಇಂದ್ರನ ಆಗಮನ. ವಿಪುಲನಿಂದ ಗುರುಪತ್ನಿಯ ರಕ್ಷಣೆ ಮತ್ತು ದೇವೇಂದ್ರನ ನಿಂದೆ.

ಭೀಷ್ಮಃ

ತತಃ ಕದಾಚಿದ್ ದೇವೇಂದ್ರೋ ದಿವ್ಯರೂಪವಪುರ್ಧರಃ ।
ಇದಮಂತರಮಿತ್ಯೇವಮಭ್ಯಗಾತ್ ತಮಥಾಶ್ರಮಮ್ ॥೧॥

ಭೀಷ್ಮ- ಅನಂತರ ದೇವೇಂದ್ರನು ಇದೇ ಸರಿಯಾದ ಅವಕಾಶವೆಂದು ತಿಳಿದು ದಿವ್ಯರೂಪದ ಶರೀರವನ್ನು ಧರಿಸಿ ಆ ಆಶ್ರಮಕ್ಕೆ ಬಂದನು.

ರೂಪಮಪ್ರತಿಮಂ ಕೃತ್ವಾ ಲೋಭನೀಯಂ ಜನಾಧಿಪ ।
ದರ್ಶನೀಯತಮೋ ಭೂತ್ವಾ ಪ್ರವಿವೇಶ ತಮಾಶ್ರಮಮ್ ॥೨॥

ಎಲೈ ಜನಾಧಿಪನೇ, ಆಸೆಯನ್ನು ಹುಟ್ಟಿಸುವಂತಹ ಅಸದೃಶವಾದ ರೂಪವನ್ನು ಧರಿಸಿ ಅತ್ಯಂತ ಸುಂದರನಾಗಿ ಆ ಆಶ್ರಮವನ್ನು ಪ್ರವೇಶಿಸಿದನು.

ಸ ದದರ್ಶ ತಮಾಸೀನಂ ವಿಪುಲಸ್ಯ ಕಳೇವರಮ್ ।
ನಿಶ್ಚೇಷ್ಟಂ ಸ್ತಬ್ಧನಯನಂ ಯಥಾಽಽಲೇಖ್ಯಗತಂ ತಥಾ ॥೩॥

ರುಚಿಂ ಚ ರುಚಿರಾಪಾಂಗೀಂ ಪೀನಶ್ರೋಣಿಪಯೋಧರಾಮ್ ।
ಪದ್ಮಪತ್ರವಿಶಾಲಾಕ್ಷೀಂ ಸಂಪೂರ್ಣೇಂದುನಿಭಾನನಾಮ್ ॥೪॥

ಅವನು ಅಲುಗಾಡದೆ ಕಣ್ಣುಗಳನ್ನೂ ಅಲುಗಾಡಿಸದೆ ಚಿತ್ರದಲ್ಲಿ ಬರೆದ ಪ್ರತಿಮೆಯಂತೆ ಕುಳಿತಿದ್ದ ವಿಪುಲನ ಶರೀರವನ್ನು ನೋಡಿದನು. ಮನೋಹರವಾದ ಕಟಾಕ್ಷವುಳ್ಳ, ಪೀನನಿತಂಬ-ಸ್ತನಗಳನ್ನು ಹೊಂದಿದ, ಪದ್ಮದಳದಂತೆ ವಿಶಾಲವಾದ ಕಣ್ಣುಳ್ಳ, ಪೂರ್ಣಚಂದ್ರನಂತಹ ಮುಖವನ್ನು ಹೊಂದಿದ ರುಚಿಯನ್ನೂ ನೋಡಿದನು.

ಸಾ ತಮಾಲೋಕ್ಯ ಸಹಸಾ ಪ್ರತ್ಯುತ್ಥಾತುಮಿಯೇಷ ಹ ।
ರೂಪೇಣ ವಿಸ್ಮಿತಾ ಕೋಽಸೀತ್ಯಥ ವಕ್ತುಮಿಹೇಚ್ಛತೀ ॥೫॥

ಅವಳು ಅವನನ್ನು ನೋಡಿ ತಕ್ಷಣ ಮೇಲಕ್ಕೇಳಲು ಬಯಸಿದಳು. ಅವನ ರೂಪವನ್ನು ನೋಡಿ ವಿಸ್ಮಿತಳಾಗಿ ನೀನು ಯಾರು ಎಂದು ಕೇಳಲು ಬಯಸಿದಳು.

ಉತ್ಥಾತುಕಾಮಾಽಪಿ ಸತೀ ವಿಷ್ಟಬ್ಧಾ ವಿಪುಲೇನ ಸಾ ।
ನಿಗೃಹೀತಾ ಮನುಷ್ಯೇಂದ್ರ ನ ಶಶಾಕ ವಿಚೇಷ್ಟಿತುಮ್ ॥೬॥

ಅವಳು ಏಳಲು ಬಯಸಿದರೂ ವಿಪುಲನಿಂದ ಅವಳು ತಡೆಹಿಡಿಯಲ್ಪಟ್ಟಳು. ಎಲೈ ಮನುಷ್ಯೇಂದ್ರನೇ, ವಿಪುಲನ ಬಲಕ್ಕೆ ಅಧೀನಳಾದ ಅವಳು ನಿಗೃಹೀತಳಾಗಿ ಅಲುಗಾಡಲು ಸಾಧ್ಯವಾಗಲಿಲ್ಲ.

ತಾಮಾಬಭಾಷೇ ದೇವೇಂದ್ರಃ ಸಾಮ್ನಾ ಪರಮವಲ್ಗುನಾ ।
ತ್ವದರ್ಥಮಾಗತಂ ವಿದ್ಧಿ ದೇವೇಂದ್ರಂ ಮಾಂ ಶುಚಿಸ್ಮಿತೇ ॥೭॥

ಕ್ಲಿಶ್ಯಮಾನಮನಂಗೇನ ತ್ವತ್ಸಂಕಲ್ಪಭವೇನ ಹ ।
ತತ್ಪರ್ಯಾಪ್ನುಹಿ ಮಾಂ ಸುಭ್ರು ಪುರಾ ಕಾಲೋಽತಿವರ್ತತೇ ॥೮॥

ದೇವೇಂದ್ರನು ಅವಳನ್ನು ಕುರಿತು ಅತ್ಯಂತ ಮೃದುವಾದ ವಾಣಿಯಿಂದ ಎಲೌ ಶುಚಿಸ್ಮಿತೆಯೇ ನನ್ನನ್ನು ನಿನ್ನಸಲುವಾಗಿ ಬಂದ ದೇವೇಂದ್ರನೆಂದು ತಿಳಿ. ನಿನ್ನ ಆಸೆಯಿಂದ ಉಂಟಾದ ಮನ್ಮಥನ ಬಾಧೆಯಿಂದ ನಿನ್ನ ಬಳಿಗೆ ಬಂದಿದ್ದೇನೆ. ಎಲೌ ಸುಂದರಿಯೇ, ಕಾಲವು ಮೀರಿಹೋಗುವುದಕ್ಕಿಂತ ಮೊದಲು ನನ್ನ ಬಳಿಗೆ ಬಾ ಎಂದು ಹೇಳಿದನು.

ತಮೇವಂವಾದಿನಂ ಶಕ್ರಂ ಶುಶ್ರಾವ ವಿಪುಲೋ ಮುನಿಃ ।
ಗುರುಪತ್ನ್ಯಾಃ ಶರೀರಸ್ಥೋ ದದರ್ಶ ಚ ಸುರಾಧಿಪಮ್ ॥೯॥

ಋಷಿಯಾದ ವಿಪುಲನು ಇಂದ್ರನ ಈ ಮಾತುಗಳನ್ನು ಕೇಳಿದನು ಮತ್ತು ಗುರುಪತ್ನಿಯ ಶರೀರದಲ್ಲಿಯೇ ಇದ್ದು ಸುರಾಧಿಪನಾದ ಇಂದ್ರನನ್ನು ನೋಡಿದನು.

ನ ಶಶಾಕ ಚ ಸಾ ರಾಜನ್ ಪ್ರತ್ಯುತ್ಥಾತುಮನಿಂದಿತಾ ।
ವಕ್ತುಂ ಚ ನಾಶಕದ್ ರಾಜನ್ ವಿಷ್ಟಬ್ಧಾ ವಿಪುಲೇನ ಸಾ ॥೧೦॥

ಎಲೈ ರಾಜನೇ, ಅನಿಂದಿತಳಾದ ಅವಳು ಏಳಲು ಸಮರ್ಥಳಾಗಲಿಲ್ಲ. ಎಲೈ ರಾಜನೇ, ವಿಪುಲನಿಂದ ಸ್ತಂಬಿತಳಾದ ಅವಳು ಮಾತನಾಡಲೂ ಸಮರ್ಥಳಾಗಲಿಲ್ಲ.

ಆಕಾರಂ ಗುರುಪತ್ನ್ಯಾಸ್ತು ವಿಜ್ಞಾಯ ಸ ಭೃಗೂದ್ವಹಃ ।
ನಿಜಗ್ರಾಹ ಮಹಾತೇಜಾ ಯೋಗೇನ ಬಲವತ್ ಪ್ರಭೋ ।
ಬಬಂಧ ಯೋಗಬಂಧೈಶ್ಚ ತಸ್ಯಾಃ ಸರ್ವೇಂದ್ರಿಯಾಣಿ ಸಃ ॥೧೧॥

ಆ ಭೃಗುವಂಶದಲ್ಲಿ ಜನಿಸಿದ ವಿಪುಲನು ಗುರುಪತ್ನಿಯ ಇಂಗಿತವನ್ನು ತಿಳಿದ ಮಹಾತೇಜಸ್ವಿಯಾದ ಅವನು ಯೋಗಶಕ್ತಿಯಿಂದ ಅವಳನ್ನು ಬಲವಾಗಿ ತಡೆದನು. ಎಲೈ ಪ್ರಭುವೇ, ಯೋಗಬಂಧಗಳಿಂದ ಅವಳ ಎಲ್ಲ ಇಂದ್ರಿಯಗಳನ್ನು ಬಂಧಿಸಿದನು.

ತಾಂ ನಿರ್ವಿಕಾರಾಂ ದೃಷ್ಟ್ವಾ ತು ಪುನರೇವ ಶಚೀಪತಿಃ ।
ಉವಾಚ ವ್ರೀಡಿತೋ ರಾಜಂಸ್ತಾಂ ಯೋಗಬಲಮೋಹಿತಾಮ್ ॥೧೨॥

ಎಲೈ ರಾಜನೇ, ಅವಳು ನಿರ್ವಿಕಾರಳಾಗಿರುವುದನ್ನು ನೋಡಿದ ಶಚೀಪತಿಯಾದ ಇಂದ್ರನು ನಾಚಿಕೆಗೊಂಡು ಯೋಗಬಲಮೋಹಿತಳಾದ ಅವಳನ್ನು ಕುರಿತು ಪುನಃ ಮಾತನಾಡಿದನು.

ಏಹ್ಯೇಹೀತಿ ತತಃ ಸಾ ತಂ ಪ್ರತಿವಕ್ತುಮಿಯೇಷ ಚ ।
ಸ ತಾಂ ವಾಚಂ ಗುರೋಃ ಪತ್ನ್ಯಾ ವಿಪುಲಃ ಪರ್ಯವರ್ತಯತ್ ॥೧೩॥

ಅವಳು ಬಾ, ಬಾ ಎಂದು ಅವನನ್ನು ಕರೆಯಲು ಬಯಸಿದಳು. ಆದರೆ ವಿಪುಲನು ಗುರುಪತ್ನಿಯ ಆ ಮಾತುಗಳನ್ನು ತಿರುಗಿಸಿದನು.

ಭೋಃ ಕಿಮಾಗಮನೇ ಕೃತ್ಯಮಿತಿ ತಸ್ಯಾಶ್ಚ ನಿಃಸೃತಾ ।
ವಕ್ತ್ರಾಚ್ಚಶಾಂಕಪ್ರತಿಮಾದ್ ವಾಣೀ ಸಂಸ್ಕಾರಭೂಷಿತಾ ॥೧೪॥

ಚಂದ್ರಮುಖಿಯಾದ ಅವಳ ಮುಖದಿಂದ ಸಂಸ್ಕಾರಭೂಷಿತವಾದ ಅಯ್ಯಾ ಇಲ್ಲಿ ಬರಲು ಉದ್ದೇಶವೇನು ಎಂಬ ಮಾತುಗಳು ಹೊರಬಂದವು.

ವ್ರೀಡಿತಾ ಸಾ ತು ತದ್ವಾಕ್ಯಮುಕ್ತ್ವಾ ಪರವಶಾ ತದಾ ।
ಪುರಂದರಶ್ಚ ಸಂತ್ರಸ್ತೋ ಬಭೂವ ವಿಮನಾಸ್ತದಾ ॥೧೫॥

ಪರವಶಳಾದ ಅವಳು ಆ ವಾಕ್ಯವನ್ನು ಹೇಳಿ ನಾಚಿಕೆಗೊಂಡಳು. ಪುರಂದರನೂ ಸಹ ಹೆದರಿ ವಿಮನಸ್ಕನಾದನು.

ಸ ತದ್ವೈಕೃತಮಾಲಕ್ಷ್ಯ ದೇವರಾಜೋ ವಿಶಾಂಪತೇ ।
ಅವೈಕ್ಷತ ಸಹಸ್ರಾಕ್ಷಸ್ತದಾ ದಿವ್ಯೇನ ಚಕ್ಷುಷಾ ॥೧೬॥

ಎಲೈ ರಾಜನೇ, ದೇವರಾಜನಾದ ಇಂದ್ರನು ಅವಳ ವ್ಯತ್ಯಾಸವನ್ನು ಗಮನಿಸಿ ಸಹಸ್ರಾಕ್ಷನಾದ ಅವನು ದಿವ್ಯಚಕ್ಷುಸ್ಸಿನಿಂದ ನೋಡಿದನು.

ದದರ್ಶ ಚ ಮುನಿಂ ತಸ್ಯಾಃ ಶರೀರಾಂತರಗೋಚರಮ್ ।
ಪ್ರತಿಬಿಂಬಮಿವಾದರ್ಶೇ ಗುರುಪತ್ನ್ಯಾಃ ಶರೀರಗಮ್ ॥೧೭॥

ಅವನು ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡಿದಂತೆ ಗುರುಪತ್ನಿಯ ಶರೀರದೊಳಗೆ ಕಾಣಿಸುತ್ತಿದ್ದಂತಹ ಆ ವಿಪುಲ ಮುನಿಯನ್ನು ನೋಡಿದನು.

ಸ ತಂ ಘೋರೇಣ ತಪಸಾ ಯುಕ್ತಂ ದೃಷ್ಟ್ವಾ ಪುರಂದರಃ ।
ಪ್ರಾವೇಪತ ಸುಸಂತ್ರಸ್ತಃ ಶಾಪಭೀತಸ್ತದಾ ವಿಭೋ ॥೧೮॥

ಎಲೈ ವಿಭುವೇ, ಪುರಂದರನು ಘೋರವಾದ ತಪಸ್ಸಿನಿಂದ ಕೂಡಿದ ಆ ವಿಪುಲನನ್ನು ನೋಡಿ ಅವನು ಕೊಡಬಹುದಾದ ಶಾಪಕ್ಕೆ ಬಹಳ ಹೆದರಿದನು.

ವಿಮುಚ್ಯ ಗುರುಪತ್ನೀಂ ತು ವಿಪುಲಃ ಸುಮಹಾತಪಾಃ ।
ಸ್ವಂ ಕಳೇವರಮಾವಿಶ್ಯ ಶಕ್ರಂ ಭೀತಮಥಾಬ್ರವೀತ್ ॥೧೯॥

ಮಹಾತಪಸ್ವಿಯಾದ ವಿಪುಲನು ಗುರುಪತ್ನಿಯ ಶರೀರವನ್ನು ಬಿಟ್ಟು ತನ್ನ ಶರೀರವನ್ನು ಪ್ರವೇಶಿಸಿ ಭೀತನಾದ ಇಂದ್ರನನ್ನು ಕುರಿತು ಮಾತನಾಡಿದನು.

ಅಜಿತೇಂದ್ರಿಯ ಪಾಪಾತ್ಮನ್ ಕಾಮಾತ್ಮಕ ಪುರಂದರ ।
ನ ಚಿರಂ ಪೂಜಯಿಷ್ಯಂತಿ ದೇವಾಸ್ತಾ ತ್ವಂ ಮಾನುಷಾಸ್ತಥಾ ॥೨೦॥

ಎಲೈ ಅಜಿತೇಂದ್ರಿಯನೇ, ಪಾಪಾತ್ಮನೇ, ಕಾಮಾತ್ಮಕನೇ, ಪುರಂದರನೇ, ನಿನ್ನನ್ನು ದೇವತೆಗಳು ಮತ್ತು ಮನುಷ್ಯರು ಬಹುಕಾಲ ಪೂಜಿಸುವುದಿಲ್ಲ.

ಕಿಂ ನು ತದ್ ವಿಸ್ಮೃತಂ ಶಕ್ರ ನ ತನ್ಮನಸಿ ತೇ ಸ್ಥಿತಮ್ ।
ಗೌತಮೇನಾಸಿ ಯನ್ಮುಕ್ತೋ ಭಗಾಂಕಪರಿಚಿಹ್ನಿತಃ ॥೨೧॥

ಎಲೈ ಶಕ್ರನೇ, ಗೌತಮರಿಂದ ಬಿಡುಗಡೆಯನ್ನು ಹೊಂದಿ ದೇಹದಲ್ಲೆಲ್ಲ ಸ್ತ್ರೀಯೋನಿಯ ಚಿಹ್ನೆಯನ್ನು ಧರಿಸಿರುವ ನೀನು ಎಲ್ಲವನ್ನೂ ಮರೆತೆಯಾ? ಅದು ಯಾವುದೂ ನಿನ್ನ ಮನಸ್ಸಿನಲ್ಲಿ ಇಲ್ಲವೆ?

ಜಾನೇ ತ್ವಾಂ ಬಾಲಿಶಮತಿಮಕೃತಾತ್ಮಾನಮಸ್ಥಿರಮ್ ।
ಮಯೇಯಂ ರಕ್ಷ್ಯತೇ ಮೂಢ ಗಚ್ಛ ಪಾಪ ಯಥಾಗತಮ್ ॥೨೨॥

ನೀನು ಹುಡುಗ ಬುದ್ಧಿಯವನೆಂದೂ, ಅಜಿತಮನಸ್ಕನೆಂದೂ, ಚಂಚಲನೆಂದೂ ನಾನು ತಿಳಿದಿದ್ದೇನೆ. ಎಲೈ ಮೂಢನೇ, ನಾನು ಇವಳನ್ನು ರಕ್ಷಿಸುತ್ತಿದ್ದೇನೆ. ಪಾಪಿಯಾದ ನೀನು ಬಂದಂತೆ ಹೊರಟು ಹೋಗು.

ನಾಹಂ ತ್ವಾಮದ್ಯ ಮೂಢಾತ್ಮನ್ ದಹೇಯಂ ಹಿ ಸ್ವತೇಜಸಾ ।
ಕೃಪಾಯಮಾಣಸ್ತು ನ ತೇ ದಗ್ಧುಮಿಚ್ಛಾಮಿ ವಾಸವ ॥೨೩॥

ಎಲೈ ಮೂಢಾತ್ಮನೇ, ಈ ದಿನ ನಾನು ನಿನ್ನನ್ನು ನನ್ನ ತೇಜಸ್ಸಿನಿಂದ ಸುಡುವುದಿಲ್ಲ. ಎಲೈ ವಾಸವನೇ, ನಿನ್ನ ಮೇಲೆ ಕೃಪೆಯನ್ನು ಹೊಂದಿ ನಾನು ಈ ದಿನ ನಿನ್ನನ್ನು ದಹಿಸಲು ಬಯಸುವುದಿಲ್ಲ.

ಸ ಚ ಘೋರತಪಾ ಧೀಮಾನ್ ಗುರುರ್ಮೇ ಪಾಪಚೇತಸಮ್ ।
ದೃಷ್ಟ್ವಾ ತ್ವಾಂ ನಿರ್ದಹೇದದ್ಯ ಕ್ರೋಧದೀಪ್ತೇನ ಚಕ್ಷುಷಾ ॥೨೪॥

ಮೇಧಾವಿಯೂ, ಘೋರತಪಸ್ವಿಗಳೂ ಆದ ನನ್ನ ಗುರುಗಳು ಪಾಪಮನಸ್ಸುಳ್ಳ ನಿನ್ನನ್ನು ನೋಡಿ ಕ್ರೋಧದಿಂದ ಉರಿಯುವ ಕಣ್ಣುಗಳಿಂದ ಈ ದಿನ ನಿನ್ನನ್ನು ಕೊಂದಾರು.

ನೈವಂ ತು ಶಕ್ರ ಕರ್ತವ್ಯಂ ಪುನರ್ಮಾನ್ಯಾಶ್ಚ ತೇ ದ್ವಿಜಾಃ ।
ಮಾ ಗಮಃ ಸಸುತಾಮಾತ್ಯೋಽತ್ಯಯಂ ಬ್ರಹ್ಮಬಲಾರ್ದಿತಃ ॥೨೫॥

ಎಲೈ ಶಕ್ರನೇ, ಪುನಃ ಹೀಗೆ ಮಾಡಬಾರದು. ನೀನು ಬ್ರಾಹ್ಮಣರನ್ನು ಸನ್ಮಾನಿಸಬೇಕು. ಬ್ರಹ್ಮತೇಜಸ್ಸಿಗೆ ಒಳಗಾಗಿ ನೀನು ಪುತ್ರ-ಅಮಾತ್ಯರೊಂದಿಗೆ ವಿನಾಶವನ್ನು ಹೊಂದಬೇಡ.

ಅಮರೋಽಸ್ಮೀತಿ ಯದ್ ಬುದ್ಧಿಮೇತಾಮಾಸ್ಥಾಯ ವರ್ತಸೇ ।
ಮಾವಮಂಸ್ಥಾ ನ ತಪಸಾಮಸಾಧ್ಯಂ ನಾಮ ಕಿಂಚನ ॥೨೬॥

ನಾನು ಅಮರನಾಗಿದ್ದೇನೆ (ನನಗೆ ಮೃತ್ಯುವಿಲ್ಲ) ಎಂಬ ಬುದ್ಧಿಯನ್ನು ಹೊಂದಿ ನೀನು ನಡೆದುಕೊಳ್ಳುತ್ತಿದ್ದೀಯಷ್ಟೆ? ಹಾಗೆ ಅವಮಾನವನ್ನು ಮಾಡಬೇಡ. ತಪಸ್ಸಿಗೆ ಅಸಾಧ್ಯವಾದುದು ಯಾವುದೂ ಇಲ್ಲ.

ತಚ್ಛ್ರುತ್ವಾ ವಚನಂ ಶಕ್ರೋ ವಿಪುಲಸ್ಯ ಮಹಾತ್ಮನಃ ।
ಅಕಿಂಚಿದುಕ್ತ್ವಾ ವ್ರೀಡಿತಸ್ತತ್ರೈವಾಂತರಧೀಯತ ॥೨೭॥

ಮಹಾತ್ಮನಾದ ವಿಪುಲನ ಆ ಮಾತುಗಳನ್ನು ಕೇಳಿ ಇಂದ್ರನು ಏನೂ ಮಾತನಾಡದೆ ನಾಚಿಕೆಗೊಂಡು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಮುಹೂರ್ತಯಾತೇ ಶಕ್ರೇ ತು ದೇವಶರ್ಮಾ ಮಹಾತಪಾಃ ।
ಕೃತ್ವಾ ಯಜ್ಞಂ ಯಥಾಕಾಮಮಾಜಗಾಮ ಸ್ವಮಾಶ್ರಮಮ್ ॥೨೮॥

ಇಂದ್ರನು ಹೋಗಿ ಒಂದು ಮುಹೂರ್ತವಾಗುತ್ತಿರಲು ಮಹಾತಪಸ್ವಿಯಾದ ದೇವಶರ್ಮನು ತನ್ನ ಸಂಕಲ್ಪದಂತೆಯೇ ಯಜ್ಞವನ್ನು ಮುಗಿಸಿ ತನ್ನ ಆಶ್ರಮಕ್ಕೆ ಹಿಂದಿರುಗಿದನು.

ಆಗತೇऽಥ ಗುರೌ ರಾಜನ್ ವಿಪುಲಃ ಪ್ರಿಯಕರ್ಮಕೃತ್ ।
ರಕ್ಷಿತಾಂ ಗುರವೇ ಭಾರ್ಯಾಂ ನ್ಯವೇದಯದನಿಂದಿತಾಮ್ ॥೨೯॥

ಎಲೈ ರಾಜನೇ, ಗುರುವು ಆಶ್ರಮಕ್ಕೆ ಬಂದ ಮೇಲೆ ಪ್ರಿಯಕಾರ್ಯವನ್ನು ಮಾಡಿದ ವಿಪುಲನು ಗುರುಗಳಿಗೆ ಅನಿಂದಿತಳಾಗಿ ರಕ್ಷಿಸಲ್ಪಟ್ಟ ಅವರ ಪತ್ನಿಯನ್ನು ಸಮರ್ಪಿಸಿದನು.

ಅಭಿವಾದ್ಯ ಚ ಶಾಂತಾತ್ಮಾ ಸ ಗುರುಂ ಗುರುವತ್ಸಲಃ ।
ವಿಪುಲಃ ಪರ್ಯುಪಾತಿಷ್ಠದ್ ಯಥಾಪೂರ್ವಮಶಂಕಿತಃ ॥೩೦॥

ಗುರುಭಕ್ತಿಯುಳ್ಳ ಶಾಂತಾತ್ಮನಾದ ವಿಪುಲನು ಗುರುವಿಗೆ ನಮಸ್ಕರಿಸಿ ಮೊದಲಿನಂತೆಯೇ ನಿಶ್ಶಂಕೆಯಿಂದ ಅವರ ಸಮೀಪದಲ್ಲಿ ನಿಂತನು.

ವಿಶ್ರಾಂತಾಯ ತತಸ್ತಸ್ಮೈ ಸಹಾಸೀನಾಯ ಭಾರ್ಯಯಾ ।
ನಿವೇದಯಾಮಾಸ ತದಾ ವಿಪುಲಃ ಶಕ್ರಕರ್ಮ ತತ್ ॥೩೧॥

ಅನಂತರ ವಿಶ್ರಾಂತಿಯನ್ನು ಹೊಂದಿ ಪತ್ನಿಯ ಜೊತೆಯಲ್ಲಿ ಕುಳಿತಿದ್ದ ಅವರಿಗೆ ವಿಪುಲನು ಶಕ್ರನು ಮಾಡಿದ ಕಾರ್ಯವನ್ನು ನಿವೇದಿಸಿದನು.

ತಚ್ಛ್ರುತ್ವಾ ಸ ಮುನಿಸ್ತುಷ್ಟೋ ವಿಪುಲಸ್ಯ ಪ್ರತಾಪವಾನ್ ।
ಬಭೂವ ಶೀಲವೃತ್ತಾಭ್ಯಾಂ ತಪಸಾ ನಿಯಮೇನ ಚ ॥೩೨॥

ಪ್ರತಾಪಶಾಲಿಯಾದ ಆ ಗುರುಗಳು ವಿಪುಲನ ಶೀಲ-ವೃತ್ತದಿಂದಲೂ, ತಪಸ್ಸಿನಿಂದಲೂ, ನಿಯಮದಿಂದಲೂ ಅವನ ಮೇಲೆ ಬಹಳ ಪ್ರಸನ್ನರಾದರು.

ವಿಪುಲಸ್ಯ ಗುರೌ ವೃತ್ತಿಂ ಭಕ್ತಿಮಾತ್ಮನಿ ಚ ಪ್ರಭುಃ ।
ಧರ್ಮೇ ಚ ಸ್ಥಿರತಾಂ ದೃಷ್ಟ್ವಾ ಸಾಧು ಸಾಧ್ವಿತ್ಯುವಾಚ ಹ ॥೩೩॥

ವಿಪುಲನ ಗುರುಗಳ ಮೇಲಿನ ನಡತೆಯನ್ನು, ತನ್ನ ಮೇಲಿರುವ ಭಕ್ತಿಯನ್ನೂ, ಧರ್ಮದ ಮೇಲಿರುವ ಸ್ಥಿರತೆಯನ್ನೂ ನೋಡಿ ಸಮರ್ಥರಾದ ಅವರು 'ಸಾಧು-ಸಾಧು' ಎಂದು ಹೇಳಿದರು.

ಪ್ರತಿನಂದ್ಯ ಚ ಧರ್ಮಾತ್ಮಾ ಶಿಷ್ಯಂ ಧರ್ಮಪರಾಯಣಮ್ ।
ವರೇಣ ಚ್ಛಂದಯಾಮಾಸ ಸ ತಸ್ಮಾದ್ ಗುರುವತ್ಸಲಃ ।
ಅನುಜ್ಞಾತಶ್ಚ ಗುರುಣಾ ಚಚಾರಾನುತ್ತಮಂ ತಪಃ ॥೩೪॥

ಧರ್ಮಾತ್ಮರಾದ ಅವರು ಧರ್ಮಪರಾಯಣನಾದ ಶಿಷ್ಯನನ್ನು ಅಭಿನಂದಿಸಿ ವರವನ್ನು ಕೇಳುವಂತೆ ಒತ್ತಾಯಿಸಿದರು. ಗುರುವತ್ಸಲನಾದ ವಿಪುಲನು ಗುರುಗಳ ಅನುಮತಿಯನ್ನು ಪಡೆದು ಶ್ರೇಷ್ಠವಾದ ತಪಸ್ಸನ್ನು ಆಚರಿಸಿದನು.

ತಥೈವ ದೇವಶರ್ಮಾಪಿ ಸಭಾರ್ಯಃ ಸ ಮಹಾತಪಾಃ ।
ನಿರ್ಭಯೋ ಬಲವೃತ್ರಘ್ನಾಚ್ಚಚಾರ ವಿಜನೇ ವನೇ ॥೩೫॥

ಹಾಗೆಯೇ ಮಹಾತಪಸ್ವಿಯಾದ ದೇವಶರ್ಮನೂ ಸಹ ಪತ್ನೀ ಸಹಿತನಾಗಿ ಇಂದ್ರನ ಭಯವಿಲ್ಲದೆ ನಿರ್ಜನವಾದ ವನದಲ್ಲಿ ತಪಸ್ಸನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವಿಪುಲೋಪಾಖ್ಯಾನೇ
ಗುರುಪತ್ನಿಸಂರಕ್ಷಣೋಪಾಯಕಥನಂ ನಾಮ ಏಕಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

ವನದಲ್ಲಿ ಸಂಚರಿಸುವ ವಿಪುಲನಿಂದ ತನ್ನ ಶಾಪದ ಶ್ರವಣ.

ಭೀಷ್ಮಃ

ವಿಪುಲಸ್ತ್ವಕರೋತ್ ತೀವ್ರಂ ತಪಃ ಕೃತ್ವಾ ಗುರೋರ್ವಚಃ ।
ತಪೋಯುಕ್ತಮಥಾತ್ಮಾನಮಮನ್ಯತ ಚ ವೀರ್ಯವಾನ್ ॥೧॥

ಭೀಷ್ಮ– ವಿಪುಲನು ಗುರುಗಳ ಮಾತನ್ನು ನಡೆಸಿಕೊಟ್ಟು ತೀವ್ರವಾದ ತಪಸ್ಸನ್ನು ಮಾಡಿದನು. ಮಹಾಸಾಮರ್ಥ್ಯವುಳ್ಳ ಅವನು ತನ್ನನ್ನು ತಪೋಬಲಯುಕ್ತನಾದವನೆಂದು ತಿಳಿದನು.

ಸ ತೇನ ಕರ್ಮಣಾ ಸ್ಪರ್ಧನ್ ಪೃಥಿವೀಂ ಪೃಥಿವೀಪತೇ ।
ಚಚಾರ ಗತಭೀಃ ಪ್ರೀತೋ ಲಬ್ಧಕೀರ್ತಿರ್ವರೋ ನೃಷು ॥೨॥

ಎಲೈ ಪೃಥಿವೀಪತಿಯೇ, ಮನುಷ್ಯರಲ್ಲಿ ಶ್ರೇಷ್ಠನಾದ ಅವನು ಆ ಕರ್ಮದಿಂದ ಉತ್ತಮರ ಜೊತೆಯಲ್ಲಿ ಸ್ಪರ್ಧಿಸುತ್ತಾ ಕೀರ್ತಿವಂತನಾಗಿ ಭಯವಿಲ್ಲದೆ ಸಂತೋಷದಿಂದ ಭೂಮಿಯಲ್ಲಿ ಸಂಚರಿಸಿದನು.

ಉಭೌ ಲೋಕೌ ಜಿತೌ ಚಾಪಿ ತಥೈವಾಮನ್ಯತ ಪ್ರಭುಃ ।
ಕರ್ಮಣಾ ತೇನ ಕೌರವ್ಯ ತಪಸಾ ವಿಪುಲೇನ ಚ ॥೩॥

ಎಲೈ ಕೌರವ್ಯನೇ, ಪ್ರಭುವಾದ ಅವನು ತನ್ನ ಕರ್ಮದಿಂದಲೂ ಮತ್ತು ವಿಪುಲವಾದ ತಪಸ್ಸಿನಿಂದಲೂ ಎರಡು ಲೋಕಗಳನ್ನೂ ಜಯಿಸಿದ್ದೇನೆಂದು ತಿಳಿದನು.

ಅಥ ಕಾಲೇ ವ್ಯತಿಕ್ರಾಂತೇ ಕಸ್ಮಿಂಶ್ಚಿತ್ಕುರುನಂದನ ।
ರುಚ್ಯಾ ಭಗಿನ್ಯಾ ದಾನಂ ವೈ ಬಭೂವ ಧನಧಾನ್ಯವತ್ ॥೪॥

ಎಲೈ ಕುರುನಂದನನೇ, ಅನಂತರ ಸ್ವಲ್ಪ ಕಾಲವು ಕಳೆದ ಮೇಲೆ ರುಚಿಯ ತಂಗಿಯ ದಾನವು ಧನ-ಧಾನ್ಯ ಸಮೃದ್ಧಿಯಿಂದ ಕೂಡಿದುದಾಗಿ ಪ್ರವೃತ್ತವಾಯಿತು.

ಏತಸ್ಮಿನ್ನೇವ ಕಾಲೇ ತು ದಿವ್ಯಾ ಕಾಚಿದ್ ವರಾಂಗನಾ ।
ಬಿಭ್ರತೀ ಪರಮಂ ರೂಪಂ ಜಗಾಮಾಥ ವಿಹಾಯಸಾ ॥೫॥

ಅದೇ ಸಮಯದಲ್ಲಿ ಯಾವಳೋ ಒಬ್ಬಳು ವರಾಂಗನೆಯು ಶ್ರೇಷ್ಠವಾದ ರೂಪವನ್ನು ಧರಿಸಿ ಆಕಾಶದಲ್ಲಿ ಹೋಗುತ್ತಿದ್ದಳು.

ತಸ್ಯಾಃ ಶರೀರಾತ್ ಪುಷ್ಪಾಣಿ ಪತಿತಾನಿ ಮಹೀತಲೇ ।
ತಸ್ಯಾಶ್ರಮಸ್ಯಾವಿದೂರೇ ದಿವ್ಯಗಂಧಾನಿ ಭಾರತ ॥೬॥

ಎಲೈ ಭಾರತನೇ, ಅವನ ಆಶ್ರಮದ ಸಮೀಪದಲ್ಲಿ ಅವಳ ಶರೀರದಿಂದ ದಿವ್ಯಗಂಧಯುಕ್ತವಾದ ಪುಷ್ಪಗಳು ಭೂಮಿಯ ಮೇಲೆ ಬಿದ್ದವು.

ತಾನ್ಯಗೃಹ್ಣಾತ್ ತತೋ ರಾಜನ್ ರುಚಿರ್ನಳಿನಲೋಚನಾ ।
ತದಾ ನಿಮಂತ್ರಕಸ್ತಸ್ಯಾ ಅಂಗೇಭ್ಯಃ ಕ್ಷಿಪ್ರಮಾಗಮತ್ ॥೭॥

ಎಲೈ ರಾಜನೇ, ನಳಿನಾಕ್ಷಿಯಾದ ರುಚಿಯು ಆ ಪುಷ್ಪಗಳನ್ನು ಎತ್ತಿಕೊಂಡಳು. ಆಗ ಅಂಗದೇಶದಿಂದ ಅವಳಿಗೆ ಆಹ್ವಾನವನ್ನು ಕೊಡಲು ರಾಜದೂತನು ಶೀಘ್ರವಾಗಿ ಬಂದನು.

ತಸ್ಯಾ ಹಿ ಭಗಿನೀ ತಾತ ಜ್ಯೇಷ್ಠಾ ನಾಮ್ನಾ ಪ್ರಭಾವತೀ ।
ಭಾರ್ಯಾ ಚಿತ್ರರಥಸ್ಯಾಥ ಬಭೂವಾಂಗೇಶ್ವರಸ್ಯ ವೈ ॥೮॥

ಎಲೈ ಪ್ರೀತಿಪಾತ್ರನೇ, ಅವಳ ಅಕ್ಕಳಾದ ಪ್ರಭಾವತಿ ಎಂಬುವಳು ಅಂಗರಾಜನಾದ ಚಿತ್ರರಥನ ಪತ್ನಿ.

ಪಿನಹ್ಯ ತಾನಿ ಪುಷ್ಪಾಣಿ ಕೇಶೇಷು ವರವರ್ಣಿನೀ ।
ಆಮಂತ್ರಿತಾ ತತೋಽಗಚ್ಛದ್ ರುಚಿರಂಗಪತೇರ್ಗೃಹಾನ್ ॥೯॥

ಸುಂದರಿಯಾದ ರುಚಿಯು ಆ ಪುಷ್ಪಗಳನ್ನು ಕಟ್ಟಿ ತಲೆಯಲ್ಲಿ ಮುಡಿದು ಅಂಗಪತಿಯ ಅರಮನೆಗೆ ಹೋದಳು.

ಪುಷ್ಪಾಣಿ ತಾನಿ ದೃಷ್ಟ್ವಾಽಥ ತದಾಽಂಗೇಂದ್ರವರಾಂಗನಾ ।
ಭಗಿನೀಂ ಚೋದಯಾಮಾಸ ಪುಷ್ಪಾರ್ಥೇ ಚಾರುಲೋಚನಾ ॥೧೦॥

ಆ ಪುಷ್ಪಗಳನ್ನು ನೋಡಿದ ಚಾರುನೇತ್ರೆಯಾದ ಅಂಗರಾಜನ ಪತ್ನಿಯು ತನ್ನ ತಂಗಿಗೆ ಆ ಪುಷ್ಪಗಳ ಸಲುವಾಗಿ ಒತ್ತಾಯ ಮಾಡಿದಳು.

ಸಾ ಭರ್ತ್ರೇ ಸರ್ವಮಾಚಷ್ಟ ರುಚಿಃ ಸುರುಚಿರಾನನಾ ।
ಭಗಿನ್ಯಾ ಭಾಷಿತಂ ಸರ್ವಮೃಷಿಸ್ತಚ್ಚಾಭ್ಯನಂದತ ॥೧೧॥

ಸುಂದರಮುಖಿಯಾದ ರುಚಿಯು ತನ್ನ ಅಕ್ಕನು ಹೇಳಿದ ಎಲ್ಲ ವಿಷಯವನ್ನೂ ಪತಿಗೆ ತಿಳಿಸಿದಳು. ಪತಿಯಾದ ದೇವಶರ್ಮನು ಅದನ್ನು ಅಭಿನಂದಿಸಿದನು.

ತತೋ ವಿಪುಲಮಾನಾಯ್ಯ ದೇವಶರ್ಮಾ ಮಹಾತಪಾಃ ।
ಪುಷ್ಪಾರ್ಥೇ ಚೋದಯಾಮಾಸ ಗಚ್ಛ ಗಚ್ಛೇತಿ ಭಾರತ ॥೧೨॥

ಎಲೈ ಭಾರತನೇ, ಆಗ ಮಹಾತಪಸ್ವಿಯಾದ ದೇವಶರ್ಮನು ವಿಪುಲನನ್ನು ಕರೆಸಿ ಪುಷ್ಪಗಳನ್ನು ತರುವಂತೆ ಒತ್ತಾಯ ಮಾಡಿ ಹೋಗು ಹೋಗು ಎಂದು ಕಳುಹಿಸಿದನು.

ವಿಪುಲಸ್ತು ಗುರೋರ್ವಾಕ್ಯಮವಿಚಾರ್ಯ ಮಹಾತಪಾಃ ।
ಸ ತಥೇತ್ಯಬ್ರವೀದ್ ರಾಜಂಸ್ತಂ ಚ ದೇಶಂ ಜಗಾಮ ಹ ॥೧೩॥

ಎಲೈ ರಾಜನೇ, ಮಹಾತಪಸ್ವಿಯಾದ ವಿಪುಲನಾದರೂ ಗುರುಗಳ ವಾಕ್ಯವನ್ನು ಕೇಳಿ ವಿಚಾರ ಮಾಡದೆ ಹಾಗೆಯೇ ಆಗಲಿ ಎಂದು ಹೇಳಿ ಆ ಪ್ರದೇಶಕ್ಕೆ ಹೋದನು.

ಯಸ್ಮಿನ್ ದೇಶೇ ತು ತಾನ್ಯಾಸನ್ ಪತಿತಾನಿ ನಭಸ್ತಳಾತ್ ।
ಅಮ್ಲಾನಾನ್ಯಪಿ ತತ್ರಾಸನ್ ಕುಸುಮಾನ್ಯಪರಾಣ್ಯಪಿ ॥೧೪॥

ಯಾವ ಪ್ರದೇಶದಲ್ಲಿ ಆಕಾಶದಿಂದ ಆ ಪುಷ್ಪಗಳು ಬಿದ್ದಿದ್ದವೋ ಅಲ್ಲಿ ಬಾಡದಿದ್ದ ಅಂತಹ ಬೇರೆ ಪುಷ್ಪಗಳೂ ಬಿದ್ದಿದ್ದವು.

ತತಃ ಸ ತಾನಿ ಜಗ್ರಾಹ ದಿವ್ಯಾನಿ ರುಚಿರಾಣಿ ಚ ।
ಪ್ರಾಪ್ತಾನಿ ಸ್ವೇನ ತಪಸಾ ದಿವ್ಯಗಂಧಾನಿ ಭಾರತ ॥೧೫॥

ಎಲೈ ಭಾರತನೇ, ಅವನು ತನ್ನ ತಪಸ್ಸಿನಿಂದ ಪ್ರಾಪ್ತವಾದ ಆ ದಿವ್ಯವೂ ಮನೋಹರವೂ ಆದ ಪುಷ್ಪಗಳನ್ನು ತೆಗೆದುಕೊಂಡನು.

ಸಂಪ್ರಾಪ್ಯ ತಾನಿ ಪ್ರೀತಾತ್ಮಾ ಗುರೋರ್ವಚನಕಾರಕಃ ।
ತತೋ ಜಗಾಮ ತೂರ್ಣಂ ಚ ಚಂಪಾಂ ಚಂಪಕಮಾಲಿನೀಮ್ ॥೧೬॥

ಗುರುಗಳ ವಚನವನ್ನು ನಡೆಸುವ ಅವನು ಸಂತೋಷಗೊಂಡು ಆ ಪುಷ್ಪಗಳನ್ನು ತೆಗೆದುಕೊಂಡು ಶೀಘ್ರವಾಗಿ ಚಂಪಕಮಾಲೆಯನ್ನು ಹೊಂದಿದ ಚಂಪಾಪುರಿಗೆ (ಅಂಗದೇಶದ ರಾಜಧಾನಿಗೆ) ಹೊರಟನು.

ಸ ವನೇ ವಿಜನೇ ತಾತ ದದರ್ಶ ಮಿಥುನಂ ನೃಣಾಮ್ ।
ಚಕ್ರವತ್ಪರಿವರ್ತಂತಂ ಗೃಹೀತ್ವಾ ಪಾಣಿನಾ ಕರಮ್ ॥೧೭॥

ಎಲೈ ಪ್ರೀತಿಪಾತ್ರನೇ, ಅವನು ನಿರ್ಜನವಾದ ಕಾಡಿನಲ್ಲಿ ಹೋಗುತ್ತಾ ಇಬ್ಬರು ಪುರುಷರನ್ನು ನೋಡಿದನು. ಅವರು ಕೈಗಳಿಂದ ಕೈಗಳನ್ನು ಹಿಡಿದುಕೊಂಡು ಚಕ್ರದಂತೆ ಸುತ್ತುತ್ತಿದ್ದರು.

ತತ್ಕೈಕಸ್ಯೂರ್ಣಮಗಮತ್ ತತ್ಪದೇ ಪರಿವರ್ತಯನ್ ।
ಏಕಸ್ತು ನ ತಥಾ ರಾಜಂಶ್ಚಕ್ರತುಃ ಕಲಹಂ ತತಃ ॥೧೮॥

ಅವರಲ್ಲಿ ಒಬ್ಬನು ಪಾದಗಳಲ್ಲಿ ತಿರುಗುತ್ತಾ ಶೀಘ್ರವಾಗಿ ತಿರುಗುತ್ತಿದ್ದನು. ಎಲೈ ರಾಜನೇ, ಇನ್ನೊಬ್ಬನು ಮಂದಗತಿಯಲ್ಲಿ ತಿರುಗುತ್ತಿದ್ದನು. ಅನಂತರ ಅವರು ಕಲಹವನ್ನು ಮಾಡಿದರು.

ತ್ವಂ ಶೀಘ್ರಂ ಗಚ್ಛಸೀತ್ಯೇಕೋಽಬ್ರವೀನ್ನೇತಿ ತಥಾಪರಃ ।
ನೇತಿ ನೇತಿ ಚ ತೌ ತಾತ ಪರಸ್ಪರಮಥೋಚತುಃ ॥೧೯॥

ನೀನು ಶೀಘ್ರವಾಗಿ ಹೋಗುತ್ತಿದ್ದೀಯೆ ಎಂದು ಒಬ್ಬನು ಹೇಳಿದನು. ಇನ್ನೊಬ್ಬನು ಇಲ್ಲ ಎಂದು ಹೇಳಿದನು. ಎಲೈ ಪ್ರೀತಿಪಾತ್ರನೇ, ನೀನು ಹೇಳುವುದು ಸುಳ್ಳು, ನೀನು ಹೇಳುವುದು ಸುಳ್ಳು ಎಂದು ಅವರು ಪರಸ್ಪರವಾಗಿ ಹೇಳಿಕೊಂಡರು.

ತಯೋರ್ವಿಸ್ಪರ್ಧತೋರೇವಂ ಶಪಥೋಽಯಮಭೂತ್ ತದಾ ।
ಮನಸೋದ್ದಿಶ್ಯ ವಿಪುಲಂ ತತೋ ವಾಕ್ಯಮಥೋಚತುಃ ॥೨೦॥

ಅವರು ಹೀಗೆ ಸ್ಪರ್ಧೆಯನ್ನು ಮಾಡುತ್ತಿದ್ದಾಗ ಒಂದು ಶಪಥವನ್ನು ಮಾಡಿದರು. ಮನಸ್ಸಿನಿಂದ ವಿಪುಲನನ್ನು ಉದ್ದೇಶಿಸಿ ಈ ವಾಕ್ಯವನ್ನು ಹೇಳಿದರು.

ಆವಯೋರನೃತಂ ಪ್ರಾಹ ಯಸ್ತಸ್ಯಾಥ ದ್ವಿಜಸ್ಯ ವೈ ।
ವಿಪುಲಸ್ಯ ಪರೇ ಲೋಕೇ ಯಾ ಗತಿಃ ಸಾ ಭವೇದಿತಿ ॥೨೧॥

ನಮ್ಮಿಬ್ಬರಲ್ಲಿ ಯಾರು ಅನೃತವನ್ನು ನುಡಿಯುತ್ತಾರೆಯೋ ಅವನಿಗೆ ಬ್ರಾಹ್ಮಣನಾದ ವಿಪುಲನಿಗೆ ಯಾವ ಗತಿಯು ಆಗುತ್ತದೆಯೋ ಅಂತಹ ಗತಿಯು ಆಗಲಿ (ಎಂದು ಹೇಳಿದರು).

ಏತಚ್ಛ್ರುತ್ವಾ ತು ವಿಪುಲೋ ವಿಷಣ್ಣವದನೋಽಭವತ್ ।
ಏವಂ ತೀವ್ರತಪಾಶ್ಚಾಹಂ ಕಷ್ಟಶ್ಚಾಯಂ ಪರಿಶ್ರಮಃ ॥೨೨॥

ಮಿಥುನಸ್ಯಾಸ್ಯ ಕಿಂ ಮೇ ಸ್ಯಾತ್ಕೃತಂ ಪಾಪಂ ಯತೋ ಗತಿಃ ।
ಅನಿಷ್ಟಾ ಸರ್ವಭೂತಾನಾಂ ಕೀರ್ತಿತಾಽನೇನ ಮೇಽದ್ಯ ವೈ ॥೨೩॥

ಇದನ್ನು ಕೇಳಿದ ವಿಪುಲನು ವಿಷಣ್ಣವದನನಾದನು. ಇಂತಹ ತೀವ್ರ ತಪಸ್ಸನ್ನು ಮಾಡಿದ ನನಗೆ ನನ್ನ ಪರಿಶ್ರಮವೆಲ್ಲವೂ ವ್ಯರ್ಥವಾಯಿತು. ನನಗೆ ಅನಿಷ್ಟಗತಿಯಾಗಲೆಂದು ಹೇಳುವಂತಿದೆ. ಈ ಮಿಥುನಕ್ಕಾದರೂ (ಪುರುಷ ಜೋಡಿಗಾದರೂ) ನಾನು ಯಾವ ಅಪರಾಧವನ್ನು ಮಾಡಿದ್ದೇನೆ?

ಏವಂ ಸಂಚಿಂತಯನ್ನೇವ ವಿಪುಲೋ ರಾಜಸತ್ತಮ ।
ಅವಾಙ್ಮುಖೋ ನ್ಯಸ್ತಶಿರಾ ದಧ್ಯೌ ದುಷ್ಕೃತಮಾತ್ಮನಃ ॥೨೪॥

ಎಲೈ ರಾಜಶ್ರೇಷ್ಠನೇ, ಹೀಗೆ ಚಿಂತಿಸುತ್ತಲೇ ತಲೆಯನ್ನೂ, ಮುಖವನ್ನೂ ಕೆಳಗೆ ಮಾಡಿ ತನ್ನ ಪಾಪವನ್ನು ಕುರಿತು ಚಿಂತಿಸಿದನು.

ತತಃ ಷಡನ್ಯಾನ್ ಪುರುಷಾನಕ್ಷೈಃ ಕಾಂಚನರಾಜತೈಃ ।
ಅಪಶ್ಯದ್ ದೀವ್ಯಮಾನಾನ್ ವೈ ಲೋಭಹರ್ಷಾನ್ವಿತಾಂಸ್ತಥಾ ॥೨೫॥

ಆಗ ಅವನು ಚಿನ್ನದ ಮತ್ತು ಬೆಳ್ಳಿಯ ದಾಳಗಳಿಂದ ಲೋಭ ಮತ್ತು ಕೋಪಗಳಿಂದ ಕೂಡಿದವರಾಗಿ ಪಗಡೆಯಾಡುತ್ತಿದ್ದ ಬೇರೆ ಆರು ಪುರುಷರನ್ನು ನೋಡಿದನು.

ಕುರ್ವತಃ ಶಪಥಂ ತಂ ವೈ ಯಃ ಕೃತೋ ಮಿಥುನೇನ ವೈ ।
ವಿಪುಲಂ ವೈ ಸಮುದ್ದಿಶ್ಯ ತೇಪಿ ವಾಕ್ಯಮಥಾಬ್ರುವನ್ ॥೨೬॥

ಆ ಮಿಥುನರು ಮಾಡಿದಂತೆ ಶಪಥವನ್ನು ಮಾಡುತ್ತಿದ್ದ ಆ ಆರು ಪುರುಷರನ್ನು ಅವನು ನೋಡಿದನು. ಅವರೂ ಸಹ ವಿಪುಲನನ್ನು ಉದ್ದೇಶಿಸಿ ಈ ವಾಕ್ಯವನ್ನು ಹೇಳಿದರು.

ಯೋ ಲೋಭಮಾಸ್ಥಾಯಾಸ್ಮಾಕಂ ವಿಷಮಂ ಕರ್ತುಮುತ್ಸಹೇತ್ ।
ವಿಪುಲಸ್ಯ ಪರೇ ಲೋಕೇ ಯಾ ಗತಿಸ್ತಾಮವಾಪ್ನುಯಾತ್ ॥೨೭॥

ನಮ್ಮಲ್ಲಿ ಯಾವನು ಲೋಭದಿಂದ ಮೋಸದಿಂದ ಆಡುತ್ತಾನೆಯೋ ಅವನಿಗೆ ವಿಪುಲನಿಗೆ ಪರಲೋಕದಲ್ಲಿ ಯಾವ ಗತಿಯಾಗುತ್ತದೆಯೋ ಅಂತಹ ಗತಿಯಾಗಲಿ (ಎಂದು ಹೇಳಿದರು).

ಏತಚ್ಛ್ರುತ್ವಾ ತು ವಿಪುಲೋ ನಾಪಶ್ಯದ್ ಧರ್ಮಸಂಕರಮ್ ।
ಜನ್ಮಪ್ರಭೃತಿ ಕೌರವ್ಯ ಕೃತಪೂರ್ವಮಥಾತ್ಮನಃ ॥೨೮॥

ಎಲೈ ಕೌರವ್ಯನೇ, ಈ ಮಾತನ್ನು ಕೇಳಿದ ವಿಪುಲನು ಹುಟ್ಟಿದಾಗಿನಿಂದ ತಾನು ಮಾಡಿದ ಯಾವ ಧರ್ಮದ ಅಪಚಾರವನ್ನೂ ಕಾಣಲಿಲ್ಲ.

ಸ ಪ್ರದಧ್ಯೌ ತದಾ ರಾಜನ್ನಗ್ನಾವಗ್ನಿರಿವಾಹಿತಃ ।
ದಹ್ಯಮಾನೇನ ಮನಸಾ ಶಾಪಂ ಶ್ರುತ್ವಾ ತಥಾವಿಧಮ್ ॥೨೯॥

ಎಲೈ ರಾಜನೇ, ಮೊದಲಿನ ಮಾತಿನ ಜೊತೆಯಲ್ಲಿ ಈ ಮಾತು ಬೆರೆತು ಅಗ್ನಿಯಲ್ಲಿ ಹಾಕಿದ ಅಗ್ನಿಯಂತೆ ಮನಸ್ಸಿನಲ್ಲಿ ಬೇಯುತ್ತಾ ಅಂತಹ ಶಾಪವನ್ನು ಕುರಿತು ಅವನು ಬಹಳವಾಗಿ ಚಿಂತಿಸಿದನು.

ತಸ್ಯ ಚಿಂತಯತಸ್ತಾತ ಬಹ್ವ್ಯೀ ದಿನನಿಶಾ ಯಯುಃ ।
ಇದಮಾಸೀನ್ಮನಸಿ ಚ ರುಚ್ಯಾ ರಕ್ಷಣಕಾರಿತಮ್ ॥೩೦॥

ಎಲೈ ಪ್ರೀತಿಪಾತ್ರನೇ, ಆ ರೀತಿಯಲ್ಲಿ ಚಿಂತಿಸುತ್ತಿದ್ದ ಅವನಿಗೆ ಬಹಳ ಹಗಲು-ರಾತ್ರಿಗಳು ಕಳೆದುಹೋದವು. ಕೊನೆಗೆ ಅವನ ಮನಸ್ಸಿನಲ್ಲಿ ರುಚಿಯ ರಕ್ಷಣೆಗಾಗಿ ತಾನು ಮಾಡಿದ ಕಾರ್ಯವು ಸ್ಮರಣೆಗೆ ಬಂದಿತು.

ಲಕ್ಷಣಂ ಲಕ್ಷಣೇನೈವ ವದನಂ ವದನೇನ ಚ ।
ವಿಧಾಯ ನ ಮಯಾ ಚೋಕ್ತಂ ಸತ್ಯಮೇತದ್ ಗುರೋಸ್ತದಾ ॥೩೧॥

ನಾನು ರುಚಿಯ ಮುಖಕ್ಕೆ ಮುಖವನ್ನು ಜೋಡಿಸಿ, ಅಂಗಗಳಿಗೆ ಅಂಗಗಳನ್ನು ಸಂಯೋಜಿಸಿ ಸತ್ಯವಾದ ಈ ಕಾರ್ಯವನ್ನು ಗುರುಗಳಿಗೆ ಹೇಳಲಿಲ್ಲ (ಎಂದು ಚಿಂತಿಸಿದನು).

ಏತದಾತ್ಮನಿ ಕೌರವ್ಯ ದುಷ್ಕೃತಂ ವಿಪುಲಸ್ತದಾ ।
ಅಮನ್ಯತ ಮಹಾಭಾಗ ತಥಾ ತಚ್ಚ ನ ಸಂಶಯಃ ॥೩೨॥

ಎಲೈ ಕೌರವ್ಯನೇ, ಮಹಾನುಭಾವನಾದ ವಿಪುಲನು ತಾನು ಮಾಡಿದ ಈ ಒಂದು ಕಾರ್ಯವು ತನ್ನ ದುಷ್ಕೃತವೆಂದು ತಿಳಿದನು. ಅದು ಹಾಗೆಯೇ ಸರಿ, ಅದರಲ್ಲಿ ಸಂಶಯವಿಲ್ಲ.

ಸ ಚಂಪಾಂ ನಗರೀಮೇತ್ಯ ಪುಷ್ಪಾಣಿ ಗುರವೇ ದದೌ ।
ಪೂಜಯಾಮಾಸ ಚ ಗುರುಂ ವಿಧಿವತ್ ಸ ಗುರುಪ್ರಿಯಃ ॥೩೩॥

ಗುರುಪ್ರಿಯನಾದ ಅವನು ಚಂಪಾನಗರಕ್ಕೆ ಬಂದು ಗುರುಗಳಿಗೆ ಪುಷ್ಪವನ್ನು ಕೊಟ್ಟನು. ಗುರುಗಳಾದರೂ ಅವನನ್ನು ವಿಧಿಗೆ ಅನುಗುಣವಾಗಿ ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವಿಪುಲಸ್ಯ ಸ್ವದುಷ್ಕೃತಸ್ಮರಣಂ
ನಾಮ ದ್ವಾಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ಮೂರನೆಯ ಅಧ್ಯಾಯ

ವಿಪುಲನಿಗೆ ಗುರುಗಳ ಅನುಗ್ರಹ

ಭೀಷ್ಮಃ

ತಮಾಗತಮಭಿಪ್ರೇಕ್ಷ್ಯ ಶಿಷ್ಯಂ ವಾಕ್ಯಮಥಾಬ್ರವೀತ್ ।
ದೇವಶರ್ಮಾ ಮಹಾತೇಜಾ ಯತ್ತಚ್ಛೃಣು ನರಾಧಿಪ ॥೧॥

ಭೀಷ್ಮ– ಎಲೈ ನರಾಧಿಪನೇ, ಮಹಾತೇಜಸ್ವಿಯಾದ ದೇವಶರ್ಮನು ಹಿಂದಿರುಗಿದ ಶಿಷ್ಯನನ್ನು ನೋಡಿ ಏನು ಮಾತನಾಡಿದನೆಂಬುದನ್ನು ಕೇಳು.

ದೇವಶರ್ಮಾ

ಕಿಂ ತೇ ವಿಪುಲ ದೃಷ್ಟಂ ವೈ ತಸ್ಮಿನ್ನದ್ಯ ಮಹಾವನೇ ।
ತೇ ತ್ವಾಂ ಜಾನಂತಿ ನಿಪುಣಂ ಆತ್ಮಾ ಚ ರುಚಿರೇವ ಚ ॥೨॥

ದೇವಶರ್ಮ– ಎಲೈ ವಿಪುಲನೇ, ಆ ದೊಡ್ಡ ಕಾಡಿನಲ್ಲಿ ನೀನು ಈ ದಿನ ಏನನ್ನು ನೋಡಿದೆ? ಅವರು ನಿನ್ನನ್ನು ಚೆನ್ನಾಗಿ ತಿಳಿದಿದ್ದಾರೆ. ನಾನು ಮತ್ತು ರುಚಿಯೂ ಸಹ ನಿನ್ನನ್ನು ಚೆನ್ನಾಗಿ ತಿಳಿದಿದ್ದೇವೆ.

ವಿಪುಲಃ

ಬ್ರಹ್ಮರ್ಷೇ ಮಿಥುನಂ ಕಿಂ ತತ್ಕೇ ಚ ತೇ ಪುರುಷಾ ವಿಭೋ ।
ಯೇ ಮಾಂ ಜಾನಂತಿ ತತ್ತ್ವೇನ ತಾಂಶ್ಚ ಮೇ ವಕ್ತುಮರ್ಹಸಿ ॥೩॥

ವಿಪುಲ– ಬ್ರಹ್ಮರ್ಷಿಯೇ, ವಿಭುವೇ, ನಾನು ನೋಡಿದ ಇಬ್ಬರು ಪುರುಷರು ಯಾರು? ಅವರು ನನ್ನನ್ನು ಸರಿಯಾಗಿ ತಿಳಿದಿದ್ದಾರೆ. ಅವರನ್ನು ನನಗೆ ತಿಳಿಸಬೇಕು.

ದೇವಶರ್ಮಾ

ಯದ್ವೈ ತನ್ಮಿಥುನಂ ಬ್ರಹ್ಮನ್ನಹೋರಾತ್ರಂ ಹಿ ವಿದ್ಧಿ ತತ್ ।
ಚಕ್ರವತ್ಪರಿವರ್ತೇತ ತತ್ತೇ ಜಾನಾತಿ ದುಷ್ಕೃತಮ್ ॥೪॥

ದೇವಶರ್ಮ– ಎಲೈ ಬ್ರಾಹ್ಮಣನೇ, ನೀನು ನೋಡಿದ ಪುರುಷಜೋಡಿಯನ್ನು ಹಗಲು ಮತ್ತು ರಾತ್ರಿ ಎಂದು ತಿಳಿ. ಅವು ಚಕ್ರದಂತೆ ತಿರುಗುತ್ತವೆ. ಆ ಮಿಥುನವು ನಿನ್ನ ದುಷ್ಕರ್ಮವನ್ನು ತಿಳಿದಿದೆ.

ಯೇ ಚ ತೇ ಪುರುಷಾ ವಿಪ್ರ ಅಕ್ಷ್ಣೈರ್ದೀವ್ಯಂತಿ ಹೃಷ್ಟವತ್ ।
ಋತೂಂಸ್ತಾನಭಿಜಾನೀಹಿ ತೇ ತೇ ಜಾನಂತಿ ದುಷ್ಕೃತಮ್ ॥೫॥

ಎಲೈ ಬ್ರಾಹ್ಮಣನೇ, ಸಂತೋಷದಿಂದ ಪಗಡೆಯಾಡುತ್ತಿದ್ದ ಆ ಪುರುಷರನ್ನು ಋತುಗಳೆಂದು ತಿಳಿ. ಅವರೂ ಸಹ ನಿನ್ನ ದುಷ್ಕರ್ಮವನ್ನು ತಿಳಿದಿದ್ದಾರೆ.

ನ ಮಾಂ ಕಶ್ಚಿದ್ ವಿಜಾನೀತ ಇತಿ ಕೃತ್ವಾ ನ ವಿಶ್ವಸೇತ್ ।
ನರೋ ರಹಸಿ ಪಾಪಾತ್ಮಾ ಪಾಪಕಂ ಕರ್ಮ ವೈ ದ್ವಿಜ ॥೬॥

ಎಲೈ ಬ್ರಾಹ್ಮಣನೇ, ಪಾಪಾತ್ಮನಾದ ಮನುಷ್ಯನು ರಹಸ್ಯವಾಗಿ ಪಾಪಕರ್ಮವನ್ನು ಮಾಡಿ ನನ್ನನ್ನು (ನನ್ನ ದುಷ್ಕರ್ಮವನ್ನು) ಯಾರೂ ನೋಡುತ್ತಿಲ್ಲ ಎಂದು ತಿಳಿಯಬಾರದು.

ಕುರ್ವಾಣಂ ಹಿ ನರಂ ಕರ್ಮ ಪಾಪಂ ರಹಸಿ ಸರ್ವದಾ ।
ಪಶ್ಯಂತಿ ಋತವಶ್ಚಾಪಿ ತಥಾ ದಿನನಿಶೇಪ್ಯುತ ॥೭॥

ಏಕಾಂತದಲ್ಲಿ ಪಾಪಕರ್ಮವನ್ನು ಮಾಡುವ ಪುರುಷನ ಪಾಪಕರ್ಮವನ್ನು ಋತುಗಳು ಮತ್ತು ಹಗಲು-ರಾತ್ರಿಗಳು ಯಾವಾಗಲೂ ನೋಡುತ್ತವೆ.

ತೇ ತ್ವಾಂ ಹರ್ಷಸ್ಮಿತಂ ದೃಷ್ಟ್ವಾ ಗುರೋಃ ಕರ್ಮಾನಿವೇದಕಮ್ ।
ಸ್ಮಾರಯಂತಸ್ತಥಾ ಪ್ರಾಹುಸ್ತೇ ಯಥಾ ಶ್ರುತವಾನ್ ಭವಾನ್ ॥೮॥

ಅವರು ಗುರುಗಳಿಗೆ ನೀನು ಮಾಡಿದ ಕಾರ್ಯವನ್ನು ಪೂರ್ಣವಾಗಿ ಹೇಳದೆ ಸಂತೋಷದಿಂದ ಇರುವುದನ್ನು ನೋಡಿ ನಿನಗೆ ನಿನ್ನ ಕರ್ಮವನ್ನು ಸ್ಮರಣೆಗೆ ತರುತ್ತಾ ನೀನು ಕೇಳಿದಂತೆ ಮಾತನಾಡಿದ್ದಾರೆ.

ಅಹೋರಾತ್ರಂ ವಿಜಾನಾತಿ ಋತವಶ್ಚಾಪಿ ನಿತ್ಯಶಃ ।
ಪುರುಷೇ ಪಾಪಕಂ ಕರ್ಮ ಶುಭಂ ವಾ ಶುಭಕರ್ಮಣಃ ॥೯॥

ಅಹೋರಾತ್ರಿಗಳು ಮತ್ತು ಋತುಗಳು ಪುರುಷನು ಮಾಡುವ ಪಾಪಕರ್ಮವನ್ನಾಗಲೀ ಅಥವಾ ಶುಭ ಪುರುಷನು ಮಾಡುವ ಶುಭಕರ್ಮವನ್ನಾಗಲೀ ಯಾವಾಗಲೂ ತಿಳಿದಿರುತ್ತಾರೆ.

ತತ್ತ್ವಯಾ ವೈ ತಥಾ ಕರ್ಮಮಭಿಚಾರಭಯಾತ್ಮಕಮ್ ।
ನಾಖ್ಯಾತಮಿತಿ ಜಾನಂತಸ್ತೇ ತ್ವಾಮಾಹುಸ್ತಥಾ ದ್ವಿಜ ॥೧೦॥

ನೀನು ಮಾಡಿದ ಆ ಕರ್ಮವನ್ನು ವ್ಯಭಿಚಾರದ ಶಂಕೆಯಿಂದ ನನಗೆ ಹೇಳಲಿಲ್ಲವೆಂದು ತಿಳಿದು ನಿನಗೆ ಹಾಗೆ ಹೇಳಿದರು.

ತೇ ಚೈವ ಹಿ ಭವೇಯುಸ್ತೇ ಲೋಕಾಃ ಪಾಪಕೃತೋ ಯಥಾ ।
ಕೃತ್ವಾ ನಾಚಕ್ಷತಃ ಕರ್ಮ ಮಮ ಯಚ್ಚ ತ್ವಯಾ ಕೃತಮ್ ॥೧೧॥

ನನಗೆ ನೀನು ಮಾಡಿದಂತೆ ಪಾಪಕರ್ಮವನ್ನು ಮಾಡಿ ಹೇಳದಿದ್ದವನಿಗೆ ಪಾಪಿಗಳಿಗೆ ದೊರೆಯುವ ಲೋಕಗಳೇ ದೊರೆಯುತ್ತವೆ.

ತಥಾऽಶಕ್ಯಾ ಚ ದುರ್ವೃತ್ತಾ ರಕ್ಷಿತುಂ ಪ್ರಮದಾ ದ್ವಿಜ ।
ನ ಚ ತ್ವಂ ಕೃತವಾನ್ ಕಿಂಚಿದಾಗಃ ಪ್ರೀತೋऽಸ್ಮಿ ತೇನ ತೇ ॥೧೨॥

ಎಲೈ ಬ್ರಾಹ್ಮಣನೇ, ದುರ್ನಡತೆಯುಳ್ಳ ಸ್ತ್ರೀಯರನ್ನು ನೀನು ಮಾಡಿದ ರೀತಿಯನ್ನು ಬಿಟ್ಟು ಬೇರೆ ರೀತಿಯಲ್ಲಿ ರಕ್ಷಿಸಲು ಸಾಧ್ಯವಿಲ್ಲ. ನೀನು ಯಾವ ಅಪರಾಧವನ್ನೂ ಮಾಡಿಲ್ಲ. ಆದ್ದರಿಂದ ನಾನು ನಿನಗೆ ಪ್ರಸನ್ನನಾಗಿದ್ದೇನೆ.

ಮನೋದೋಷವಿಹೀನಾನಾಂ ನ ದೋಷಃ ಸ್ಯಾತ್ ತಥಾ ತವ ।
ಅನ್ಯಥಾऽऽಲಿಂಗ್ಯತೇ ಕಾಂತಾ ಸ್ನೇಹೇನ ದುಹಿತಾऽನ್ಯಥಾ ॥೧೩॥

ಮನೋದೋಷವಿಲ್ಲದವರಿಗೆ ನಿನ್ನಂತೆ ಯಾವ ದೋಷವೂ ಬರುವುದಿಲ್ಲ. ಪತ್ನಿಯನ್ನು ಬೇರೆ ರೀತಿಯಲ್ಲಿ ಆಲಿಂಗಿಸುತ್ತಾನೆ. ಮಗಳನ್ನು ಬೇರೆ ರೀತಿಯಲ್ಲಿ ಆಲಿಂಗಿಸುತ್ತಾನೆ.

ಯತೇಶ್ಚ ಕಾಮುಕಾನಾಂ ಚ ಯೋಷಿದ್ರೂಪೇऽನ್ಯಥಾ ಮತಿಃ ।
ಅಶಿಕ್ಷಯೈವ ಮನಸಃ ಪ್ರಾಯೋ ಲೋಕಾಸ್ತು ವಂಚ್ಯತೇ ॥೧೪॥

ಒಬ್ಬ ಹೆಂಗಸನ್ನು ನೋಡಿದರೆ ಸಂನ್ಯಾಸಿಗೆ ಬರುವ ಬುದ್ಧಿಯೇ ಬೇರೆ, ಕಾಮುಕನಿಗೆ ಬರುವ ಬುದ್ಧಿಯೇ ಬೇರೆ. ಮನಸ್ಸನ್ನು ನಿಯಂತ್ರಿಸದಿರುವುದರಿಂದ ಜನರು ಹೆಚ್ಚಾಗಿ ವಂಚನೆಗೀಡಾಗುತ್ತಾರೆ (ದುಃಖವನ್ನು ಅನುಭವಿಸುತ್ತಾರೆ).

ಲಾಲೇತ್ಯುದ್ವಿಜತೇ ಲೋಕೋ ವಕ್ತ್ರಸವ ಇತಿ ಸ್ಪೃಹಾ ।
ಅಬಂಧಾಯೋಗ್ಯಮನಸಾಮಿತಿ ಮಂತ್ರಾತ್ಮದೈವಕಮ್ ॥೧೫॥

ಜೊಲ್ಲು ಎಂದರೆ ಅಸಹ್ಯವಾಗುತ್ತದೆ. ಅದೇ ವಸ್ತುವನ್ನು ವಕ್ತ್ರಸವ ಎಂದು ಹೇಳಿದರೆ ಆಸೆಯುಂಟಾಗುತ್ತದೆ (ಇದು ಮನೋದೋಷ). ಹಿಡಿತವಿಲ್ಲದ ಅಯೋಗ್ಯವಾದ ಮನಸ್ಸುಳ್ಳವರಿಗೆ ಮಂತ್ರಗಳು ದೇವತೆಗಳು ಹೀಗೆಯೇ (ಒಳ್ಳೆಯ ಫಲವನ್ನು ಕೊಡುವುದಿಲ್ಲ).

ನ ರಾಗಸ್ನೇಹಲೋಭಾಂಧಂ ಕರ್ಮಿಣಾಂ ತನ್ಮಹಾಫಲಮ್ ।
ನಿಷ್ಕಷಾಯೋ ವಿಶುದ್ಧಸ್ತ್ವಂ ರುಚ್ಯಾವೇಶಾನ್ನ ದೂಷಿತಃ ॥೧೬॥

ರಾಗ, ಸ್ನೇಹ ಮತ್ತು ಲೊಭಗಳಿಂದ ಕುರುಡರಾಗಿ ಕರ್ಮವನ್ನು ಮಾಡುವವರಿಗೆ ಆ ಕರ್ಮಗಳು ಮಹಾಫಲವನ್ನು ಕೊಡುವುದಿಲ್ಲ. ನೀನು ನಿರ್ದುಷ್ಟನಾಗಿದ್ದೀಯೆ. ವಿಶುದ್ಧನಾಗಿದ್ದೀಯೆ. ರುಚಿಯನ್ನು ಪ್ರವೇಶ ಮಾಡಿದುದರಿಂದ ನಿನಗೆ ಯಾವ ದೋಷಗಳೂ ಉಂಟಾಗಲಿಲ್ಲ.

ಯದಿ ತ್ವಹಂ ತ್ವಾಂ ದುರ್ವೃತ್ತಮದ್ರಾಕ್ಷಂ ದ್ವಿಜಸತ್ತಮ ।
ಶಪೇಯಂ ತ್ವಾಮಹಂ ಕ್ರೋಧಾನ್ನ ಮೇಽತ್ರಾಸ್ತಿ ವಿಚಾರಣಾ ॥೧೭॥

ಎಲೈ ದ್ವಿಜಶ್ರೇಷ್ಠನೇ, ನೀನು ದುರ್ನಡತೆಯುಳ್ಳವನೆಂದು ನಾನು ಗಮನಿಸಿದ್ದರೆ ಕ್ರೋಧದಿಂದ ನಿನಗೆ ಶಾಪವನ್ನು ಕೊಡುತ್ತಿದ್ದೆ. ಈ ವಿಷಯದಲ್ಲಿ ಸಂಶಯವಿಲ್ಲ.

ಸಜ್ಜಂತಿ ಪುರುಷೇ ನಾರ್ಯಃ ಪುಂಸಾಂ ಸೋಽರ್ಥಶ್ಚ ಪುಷ್ಕಲಃ ।
ಅನ್ಯಥಾ ರಕ್ಷತಃ ಶಾಪೋಽಭವಿಷ್ಯತ್ತೇ ಗತಿಶ್ಚ ಸಾ ॥೧೮॥

ರಕ್ಷಿತಾ ಸಾ ತ್ವಯಾ ಪುತ್ರ ಮಮ ಚಾಪಿ ನಿವೇದಿತಾ ।
ಅಹಂ ತೇ ಪ್ರೀತಿಮಾಂಸ್ತಾತ ಸ್ವಸ್ತಿ ಸ್ವರ್ಗಂ ಗಮಿಷ್ಯಸಿ ॥೧೯॥

ನಾರಿಯರು ಪುರುಷರಲ್ಲಿ ಆಸಕ್ತರಾಗುತ್ತಾರೆ. ಪುರುಷರಿಗೆ ಅದು ಬಹಳವಾಗಿ ಅಪೇಕ್ಷಿತವಾದ ವಿಷಯ. ನನಗೆ ನೀನು ನಿವೇದಿಸಿದ್ದೀಯೆ. ಪ್ರೀತಿಪಾತ್ರನೇ, ನಾನು ನಿನ್ನಲ್ಲಿ ಪ್ರೀತಿಯುಳ್ಳವನಾಗಿದ್ದೇನೆ. ನಿನಗೆ ಶುಭವಾಗಲಿ, ನೀನು ಸ್ವರ್ಗಕ್ಕೆ ಹೋಗುವಿ (ಎಂದು ಹೇಳಿದರು).

ಭೀಷ್ಮಃ

ಇತ್ಯುಕ್ತ್ವಾ ವಿಪುಲಂ ಪ್ರೀತೋ ದೇವಶರ್ಮಾ ಮಹಾನೃಷಿಃ ।
ಮುಮೋದ ಸ್ವರ್ಗಮಾಸ್ಥಾಯ ಸಹಭಾರ್ಯಃ ಸಶಿಷ್ಯಕಃ ॥೨೦॥

ಭೀಷ್ಮ– ಆ ಮಹಾಋಷಿಯಾದ ದೇವಶರ್ಮರು ವಿಪುಲನಿಗೆ ಈ ರೀತಿ ಸಂತೋಷದಿಂದ ಹೇಳಿ ಸ್ವರ್ಗಕ್ಕೆ ಹೋಗಿ ಪತ್ನಿ ಮತ್ತು ಶಿಷ್ಯರ ಜೊತೆಯಲ್ಲಿ ಸುಖವಾಗಿದ್ದನು.

ಇದಮಾಖ್ಯಾತವಾಂಶ್ಚಾಪಿ ಮಮಾಖ್ಯಾನಂ ಮಹಾಮುನಿಃ ।
ಮಾರ್ಕಂಡೇಯಃ ಪುರಾ ರಾಜನ್ ಗಂಗಾಕೂಲೇ ಕಥಾಂತರೇ ॥೨೧॥

ಎಲೈ ರಾಜನೇ, ಹಿಂದೆ ಇದನ್ನು ಗಂಗಾತೀರದಲ್ಲಿ ಬೇರೆ ಕಥೆಗಳ ಮಧ್ಯದಲ್ಲಿ ಮಹರ್ಷಿಗಳಾದ ಮಾರ್ಕಂಡೇಯರು ನನಗೆ ಹೇಳಿದರು.

ತಸ್ಮಾದ್ ಬ್ರವೀಮಿ ಪಾರ್ಥ ತ್ವಾಂ ಸ್ತ್ರಿಯಃ ಸರ್ವಾಃ ಸದೈವ ಚ ।
ಉಭಯಂ ದೃಶ್ಯತೇ ತಾಸು ಸತತಂ ಸಾಧ್ವಸಾಧು ಚ ॥೨೨॥

ಎಲೈ ಪಾರ್ಥನೇ, ಆದ್ದರಿಂದ ನಾನು ನಿನಗೆ ಹೇಳುತ್ತಿದ್ದೇನೆ. ಸ್ತ್ರೀಯರಲ್ಲಿ ಯಾವಾಗಲೂ ಒಳ್ಳೆಯದು ಮತ್ತು ಕೆಟ್ಟದು ಎರಡೂ ಕಂಡುಬರುತ್ತವೆ.

ಸ್ತ್ರಿಯಃ ಸಾಧ್ವ್ಯೋ ಮಹಾಭಾಗಾಃ ಸಮ್ಮತಾ ಲೋಕಮಾತರಃ ।
ಧಾರಯಂತಿ ಮಹೀಂ ರಾಜನ್ನಿಮಾಂ ಸವನಕಾನನಾಮ್ ॥೨೩॥

ಮಹಾನುಭಾವೆಯರಾದ, ಸಾಧ್ವಿಯರಾದ ಸ್ತ್ರೀಯರು ಲೋಕಕ್ಕೆ ತಾಯಿಯರು ಮತ್ತು ಪೂಜ್ಯರು. ಎಲೈ ರಾಜನೇ, ಅವರೇ ವನ-ಕಾನನ ಸಹಿತವಾದ ಈ ಭೂಮಿಯನ್ನು ಧರಿಸಿರುತ್ತಾರೆ.

ಅಸಾಧ್ವ್ಯಶ್ಚಾಪಿ ದುರ್ವೃತ್ತಾಃ ಕುಲಘ್ನ್ಯಃ ಪಾಪನಿಶ್ಚಯಾಃ ।
ವಿಜ್ಞೇಯಾ ಲಕ್ಷಣೈರ್ದುಷ್ಟೈಃ ಸ್ವಗಾತ್ರಸಹಜೈರ್ನೃಪ ॥೨೪॥

ಅಸಾಧ್ವಿಯರಾದವರು ದುರ್ನಡತೆಯುಳ್ಳವರು, ಕುಲನಾಶಕರು ಮತ್ತು ಪಾಪನಿಶ್ಚಯವುಳ್ಳವರು. ಎಲೈ ರಾಜನೇ, ಅವರ ದೇಹದಲ್ಲಿ ಸಹಜವಾಗಿ ಇರುವ ದುಷ್ಟಲಕ್ಷಣಗಳಿಂದಲೇ ಅವರನ್ನು ತಿಳಿಯಬಹುದು.

ಏವಮೇತಾಸು ರಕ್ಷಾ ವೈ ಶಕ್ಯಾ ಕರ್ತುಂ ಮಹಾತ್ಮಭಿಃ ।
ಅನ್ಯಥಾ ರಾಜಶಾರ್ದೂಲ ನ ಶಕ್ಯಾ ರಕ್ಷಿತುಂ ಸ್ತ್ರಿಯಃ ॥೨೫॥

ವಿಧಿಯನು ಮಾಡಿದ ರೀತಿಯಲ್ಲಿಯೇ ಮಹಾತ್ಮರಿಂದ ಸ್ತ್ರೀಯರ ರಕ್ಷಣೆಯನ್ನು ಮಾಡಲು ಸಾಧ್ಯ. ಎಲೈ ರಾಜಶಾರ್ದೂಲನೇ, ಬೇರೆ ರೀತಿಯಲ್ಲಿ ಅವರನ್ನು ರಕ್ಷಿಸುವುದಕ್ಕೆ ಸಾಧ್ಯವಿಲ್ಲ.

ಏತಾ ಹಿ ಮನುಜವ್ಯಾಘ್ರ ತೀಕ್ಷ್ಣಾಸ್ತೀಕ್ಷ್ಣಪರಾಕ್ರಮಾಃ ।
ನಾಸಾಮಸ್ತಿ ಪ್ರಿಯೋ ನಾಮ ಮೈಥುನೇ ಸಂಗಮೇ ನೃಭಿಃ ॥೨೬॥

ಎಲೈ ಮನುಜಶ್ರೇಷ್ಠನೇ, ಇವರು ಕ್ರೂರಿಗಳು ಮತ್ತು ಕ್ರೂರವಾದ ಪರಾಕ್ರಮ ಉಳ್ಳವರು. ಅವರಿಗೆ ಯಾವನೂ ಪ್ರಿಯನಲ್ಲ. ಮೈಥುನದಲ್ಲಿ ಸಂಗತನಾದ ಎಲ್ಲ ಪುರುಷನೂ ಪ್ರಿಯನಾಗುತ್ತಾನೆ.

ಏತಾಃ ಕೃತ್ಯಾಶ್ಚ ಕಾರ್ಯಾಶ್ಚ ಕೃತಾಶ್ಚ ಭರತರ್ಷಭ ।
ನ ಚೈಕಸ್ಮಿನ್ ರಮಂತ್ಯೇತಾಃ ಪುರುಷೇ ಪಾಂಡುನಂದನ ॥೨೭॥

ಎಲೈ ಭರತರ್ಷಭನೇ, ಅವರು ಪಿಶಾಚಿಗಳಂತೆ ಅಥವಾ ಮಾಟದ ಗೊಂಬೆಗಳಂತೆ, ಮಾಟದ ಕ್ರಿಯೆಗಳಂತೆ, ಮಾಟದ ಫಲದಂತೆ ಇರುತ್ತಾರೆ. ಎಲೈ ಪಾಂಡುನಂದನನೇ, ಅವರು ಒಬ್ಬ ಪುರುಷನಲ್ಲಿ ರಮಿಸಿ ತೃಪ್ತಿಯನ್ನು ಹೊಂದುವುದಿಲ್ಲ.

ನಾಸು ಸ್ನೇಹೋ ನೃಭಿಃ ಕಾರ್ಯಸ್ತಥೈವೇರ್ಷ್ಯಾ ಜನೇಶ್ವರ ।
ಸ್ವೇದಮಾಸ್ಥಾಯ ಭುಂಜೀತ ಧರ್ಮಮಾಸ್ಥಾಯ ಚೈವ ಹಿ ॥೨೮॥

ಎಲೈ ಜನೇಶ್ವರನೇ, ಅವರಲ್ಲಿ ಸ್ನೇಹವನ್ನು ಮಾಡಬಾರದು, ಹಾಗೆಯೇ ಅಸೂಯೆಯನ್ನೂ ಮಾಡಬಾರದು. ಬೆವರು ನಮಗೆ ಅಪ್ರಿಯವಾದರೂ ಅದನ್ನು ಬಿಟ್ಟಿರಲು ಸಾಧ್ಯವಿಲ್ಲದಂತೆ ಅವರನ್ನು ಧರ್ಮಕ್ಕೆ ಅನುಗುಣವಾಗಿ ಭೋಗಿಸಬೇಕು.

ವಿಹನ್ಯೇತಾನ್ಯಥಾ ಕುರ್ವನ್ ನರಃ ಕೌರವನಂದನ ।
ಸರ್ವಥಾ ರಾಜಶಾರ್ದೂಲ ಯುಕ್ತಿಃ ಸರ್ವತ್ರ ಪೂಜ್ಯತೇ ॥೨೯॥

ಎಲೈ ಕೌರವನಂದನನೇ, ಬೇರೆ ರೀತಿಯಲ್ಲಿ ನಡೆದುಕೊಳ್ಳುವ ಮನುಷ್ಯನು ವಿನಾಶವನ್ನು ಹೊಂದಿಯಾನು! ಎಲೈ ರಾಜಶಾರ್ದೂಲನೇ, ವಿರಕ್ತಿಯು ಎಲ್ಲ ರೀತಿಯಿಂದಲೂ, ಎಲ್ಲ ಕಡೆಯಲ್ಲಿಯೂ ಪೂಜಿಸಲ್ಪಡುತ್ತದೆ.

ತೇನೈಕೇನ ತು ರಕ್ಷಾ ವೈ ವಿಪುಲೇನ ಕೃತಾ ಸ್ತ್ರಿಯಾಃ ।
ನಾನ್ಯಃ ಶಕ್ತೋ ನೃಲೋಕೇಽಸ್ಮಿನ್ ರಕ್ಷಿತುಂ ನೃಪ ಯೋಷಿತಃ ॥೩೦॥

ಆ ವಿಪುಲನೊಬ್ಬನು ಒಬ್ಬ ವನಿತೆಯ ರಕ್ಷಣೆಯನ್ನು ಮಾಡಿದನು. ಎಲೈ ರಾಜನೇ, ಬೇರೆಯವನು ಈ ಮನುಷ್ಯಲೋಕದಲ್ಲಿ ಸ್ತ್ರೀಯರನ್ನು ರಕ್ಷಿಸಲು ಸಮರ್ಥನಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವಿಪುಲೋಪಾಖ್ಯಾನಂ ನಾಮ
ತ್ರಿಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ನಾಲ್ಕನೆಯ ಅಧ್ಯಾಯ

ವಿವಾಹಧರ್ಮಗಳು- ಕನ್ಯಾದಾನ ನಿರ್ಣಯ.

ಯುಧಿಷ್ಠಿರಃ

ಯನ್ಮೂಲಂ ಸರ್ವಧರ್ಮಾಣಾಂ ಪ್ರಜನಸ್ಯ ಗೃಹಸ್ಯ ಚ ।
ಪಿತೃದೇವಾತಿಥೀನಾಂ ಚ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ- ಎಲೈ ಪಿತಾಮಹನೇ, ಎಲ್ಲ ಧರ್ಮಗಳಿಗೂ, ಸಂತತಿಗೂ, ಗೃಹಕ್ಕೂ, ಪಿತೃ-ದೇವ-ಅತಿಥಿ(ಪೂಜೆ)ಗಳಿಗೂ ಮೂಲವಾದ ವಿಷಯವನ್ನು ನನಗೆ ಹೇಳಿ.

ಭೀಷ್ಮಃ

ಅಯಂ ಹಿ ಸರ್ವಧರ್ಮಾಣಾಂ ಧರ್ಮಶ್ಚಿಂತ್ಯತಮೋ ಮತಃ ।
ಕೀದೃಶಾಯ ಪ್ರದೇಯಾ ಸ್ಯಾತ್ ಕನ್ಯೇತಿ ವಸುಧಾಧಿಪ ॥೨॥

ಭೀಷ್ಮ- ಎಲೈ ರಾಜನೇ, ಎಲ್ಲ ಧರ್ಮಗಳಲ್ಲಿ ಯಾರಿಗೆ ಕನ್ಯೆಯನ್ನು ಕೊಡಬೇಕೆಂದು ಚಿಂತಿಸುವುದು ಬಹಳವಾಗಿ ಚಿಂತಿಸಬೇಕಾದ ಒಂದು ಧರ್ಮ.

ಶೀಲವೃತ್ತೇ ಸಮಾಜ್ಞಾಯ ವಿದ್ಯಾಂ ಯೋನಿಂ ಚ ಕರ್ಮ ಚ ।
ಅದ್ಭಿರೇವ ಪ್ರದಾತವ್ಯಾ ಕನ್ಯಾ ಗುಣವತೇ ವರೇ ।
ಬ್ರಾಹ್ಮಣಾನಾಂ ಸತಾಮೇಷ ಧರ್ಮೋ ನಿತ್ಯಂ ಯುಧಿಷ್ಠಿರ ॥೩॥

ವರನ ಶೀಲ-ವೃತ್ತಗಳನ್ನು, ವಿದ್ಯೆ, ಕುಲ ಮತ್ತು ಕರ್ಮಗಳನ್ನು ತಿಳಿದು ಗುಣವಂತನಾದ ಅಂತಹವನಿಗೆ ಧಾರಾಪೂರ್ವಕವಾಗಿ ಕನ್ಯೆಯನ್ನು ಕೊಡಬೇಕು. ಎಲೈ ಯುಧಿಷ್ಠಿರನೇ, ಇದು ಸಜ್ಜನರಾದ ಬ್ರಾಹ್ಮಣರ ನಿತ್ಯವಾದ ಧರ್ಮ (ಇದಕ್ಕೆ ಬ್ರಾಹ್ಮ ವಿವಾಹವೆಂದು ಹೆಸರು).

ಆವಾಹ್ಯಮಾವಹೇದೇವಂ ಯೋ ದದ್ಯಾದನುಕೂಲತಃ ।
ಶಿಷ್ಟಾನಾಂ ಕ್ಷತ್ರಿಯಾಣಾಂ ಚ ಧರ್ಮ ಏಷ ಸನಾತನಃ ॥೪॥

ಕನ್ಯೆಯನ್ನು ಕೊಡಲು ಯೋಗ್ಯನಾದವನನ್ನು ಕರೆದು ಅನುಕೂಲವಿದ್ದಷ್ಟು ಧನ-ಕನಕಾದಿಗಳನ್ನು ಕೊಟ್ಟು ವಿವಾಹವನ್ನು ಮಾಡುವುದು ಶಿಷ್ಟರಾದ ಕ್ಷತ್ರಿಯರ ಸನಾತನವಾದ ಧರ್ಮ (ಇದು ಪ್ರಾಜಾಪತ್ಯ ವಿವಾಹ).

ಆತ್ಮಾಭಿಪ್ರೇತಮುತ್ಸೃಜ್ಯ ಕನ್ಯಾಭಿಪ್ರೇತ ಏವ ಯಃ ।
ಅಭಿಪ್ರೇತಾ ಚ ಯಾ ಯಸ್ಯ ತಸ್ಮೈ ದೇಯಾ ಯುಧಿಷ್ಠಿರ ।
ಗಾಂಧರ್ವಮಿತಿ ತಂ ಧರ್ಮಂ ಪ್ರಾಹುರ್ಧರ್ಮವಿದೋ ಜನಾಃ ॥೫॥

ಎಲೈ ಯುಧಿಷ್ಠಿರನೇ, ಕನ್ಯಾಪಿತೃವು ತನಗೆ ಇಷ್ಟವಾದ ವರನನ್ನು ಬಿಟ್ಟು ಕನ್ಯೆಗೆ ಇಷ್ಟವಾದ ವರನಿಗೇ ಕೊಡುವುದು ಗಾಂಧರ್ವವಿವಾಹವೆನಿಸುತ್ತದೆ. ಧರ್ಮವನ್ನು ತಿಳಿದವರು ಅದನ್ನೂ ಧರ್ಮವೆಂದೇ ಹೇಳುತ್ತಾರೆ.

ಧನೇನ ಬಹುನಾ ಕ್ರೀತ್ವಾ ಸಂಪ್ರಲೋಭ್ಯ ಚ ಬಾಂಧವಾನ್ ।
ಅಸುರಾಣಾಂ ನೃಪೈತಂ ವೈ ಧರ್ಮಮಾಹುರ್ಮನೀಷಿಣಃ ॥೬॥

ಕನ್ಯಾಬಾಂಧವರನ್ನು ಮರುಳುಗೊಳಿಸಿ ಬಹಳ ಧನವನ್ನು ಕೊಟ್ಟು ಕನ್ಯೆಯನ್ನು ಕೊಂಡುಕೊಂಡು ಹೋಗಿ ಮದುವೆ ಮಾಡಿಕೊಳ್ಳುವುದು ಅಸುರ ಧರ್ಮ. ಇದನ್ನು ಜ್ಞಾನಿಗಳು ಆಸುರ ವಿವಾಹ ಅಥವಾ ಪೈಶಾಚ ವಿವಾಹ ಎನ್ನುತ್ತಾರೆ.

ಹತ್ವಾ ಛಿತ್ತ್ವಾ ಚ ಶೀರ್ಷಾಣಿ ರುದತಾಂ ರುದತೀಂ ಗೃಹಾತ್ ।
ಪ್ರಸಹ್ಯ ಹರಣಂ ತಾತ ರಾಕ್ಷಸಂ ಧರ್ಮಲಕ್ಷಣಮ್ ॥೭॥

ಎಲೈ ಪ್ರೀತಿಪಾತ್ರನೇ, ಕನ್ಯೆಯ ಬಂಧುಗಳಲ್ಲಿ ಕೆಲವರನ್ನು ಕೊಂದು, ಕೆಲವರ ತಲೆಯನ್ನು ಸೀಳಿ, ಅಳುತ್ತಿರುವ ಬಂಧುಗಳ ಮಧ್ಯದಿಂದ ಅಳುತ್ತಿರುವ ಕನ್ಯೆಯನ್ನು ಬಲಾತ್ಕಾರದಿಂದ ಕರೆದುಕೊಂಡು ಹೋಗುವುದು ರಾಕ್ಷಸ ಧರ್ಮ. ಈ ವಿವಾಹವು ರಾಕ್ಷಸ ವಿವಾಹವೆನಿಸುತ್ತದೆ.

ಪಂಚಾನಾಂ ತು ತ್ರಯೋ ಧರ್ಮ್ಯಾ ದ್ವಾವಧರ್ಮ್ಯೌ ಯುಧಿಷ್ಠಿರ ।
ಪೈಶಾಚ ಆಸುರಶ್ಚೈವ ನ ಕರ್ತವ್ಯೌ ಕಥಂಚನ ॥೮॥

ಎಲೈ ಯುಧಿಷ್ಠಿರನೇ, ಈ ಐದು ವಿವಾಹಗಳಲ್ಲಿ ಮೊದಲನೆಯ ಮೂರು ಧರ್ಮಸಮ್ಮತವಾದವುಗಳು. ಪೈಶಾಚ ಮತ್ತು ಆಸುರ ವಿವಾಹಗಳನ್ನು ಮಾತ್ರ ಯಾವ ಕಾರಣದಿಂದಲೂ ಮಾಡಬಾರದು.

ಬ್ರಾಹ್ಮಃ ಕ್ಷಾತ್ರೋಽಥ ಗಾಂಧರ್ವ ಏತೇ ಧರ್ಮ್ಯಾ ನರರ್ಷಭ ।
ಪೃಥಗ್ವಾ ಯದಿ ವಾ ಮಿಶ್ರಾಃ ಕರ್ತವ್ಯಾ ನಾತ್ರ ಸಂಶಯಃ ॥೯॥

ಎಲೈ ನರಶ್ರೇಷ್ಠನೇ, ಬ್ರಾಹ್ಮ, ಕ್ಷಾತ್ರ ಮತ್ತು ಗಾಂಧರ್ವ ವಿವಾಹಗಳು ಮೂರೂ ಧರ್ಮಸಮ್ಮತವಾದವುಗಳು. ಅವುಗಳನ್ನು ಬೇರೆ ಬೇರೆಯಾಗಿಯೇ ಅಥವಾ ಒಂದು ವಿವಾಹದಲ್ಲಿ ಬೇರೆ ವಿವಾಹಗಳನ್ನು ಬೆರೆಸಿಯಾದರೂ ಕೂಡ ಮಾಡಬಹುದು. ಇದರಲ್ಲಿ ಸಂಶಯವಿಲ್ಲ (ಕೇವಲ ಕನ್ಯಾ-ವರರು ಪರಸ್ಪರವಾಗಿ ಮೆಚ್ಚಿ ಮಂತ್ರವಿಲ್ಲದೆ ವಿವಾಹವಾಗುವುದು ಗಾಂಧರ್ವವಿವಾಹ. ಕನ್ಯಾ-ವರರು ಪರಸ್ಪರವಾಗಿ ಮೆಚ್ಚಿದ ಮೇಲೆ ಧಾರಾ ಪೂರ್ವಕವಾಗಿ ಧಾರೆ ಎರೆದು ಕೊಡುವುದು ಗಾಂಧರ್ವ ಮತ್ತು ಬ್ರಾಹ್ಮ ವಿವಾಹದ ಮಿಶ್ರಣ. ವರನಿಗೆ ಧನ-ಕನಕಾದಿಗಳನ್ನು ಕೊಟ್ಟು ಕನ್ಯಾ-ವರರು ಮೆಚ್ಚಿದ ಮೇಲೆ ವಿವಾಹ ಮಾಡಿಕೊಡುವುದು ಬ್ರಾಹ್ಮ-ಕ್ಷಾತ್ರ ಮತ್ತು ಗಾಂಧರ್ವ ವಿವಾಹಗಳ ಮಿಶ್ರಣ).

ತಿಸ್ರೋ ಭಾರ್ಯಾ ಬ್ರಾಹ್ಮಣಸ್ಯ ದ್ವೇ ಭಾರ್ಯೇ ಕ್ಷತ್ರಿಯಸ್ಯ ತು ।
ವೈಶ್ಯಃ ಸ್ವಜಾತಿಂ ವಿಂದೇತ ತಾಸ್ವಪತ್ಯಂ ಸಮಂ ಭವೇತ್ ॥೧೦॥

ಬ್ರಾಹ್ಮಣರಿಗೆ ಮೂರು ಜನ ಎಂದರೆ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ಸ್ತ್ರೀಯರು ಭಾರ್ಯೆಯರಾಗುತ್ತಾರೆ. ಕ್ಷತ್ರಿಯನಿಗೆ ಕ್ಷತ್ರಿಯ ಮತ್ತು ವೈಶ್ಯ ಸ್ತ್ರೀಯರು ಭಾರ್ಯೆ ಆಗಬಹುದು. ವೈಶ್ಯನು ತನ್ನ ಜಾತಿಯಲ್ಲಿಯೇ ವಿವಾಹವನ್ನು ಮಾಡಿಕೊಳ್ಳಬೇಕು. ಅವರಲ್ಲಿ ಜನಿಸಿದ ಮಕ್ಕಳು ಆಯಾ ವರ್ಣದವರೇ ಆಗುತ್ತಾರೆ.

ಬ್ರಾಹ್ಮಣೇ ತು ಭವೇಜ್ಜ್ಯೇಷ್ಠಾ ಕ್ಷತ್ರಿಯಾ ಕ್ಷತ್ರಿಯಸ್ಯ ತು ।
ರತ್ಯರ್ಥಮಪಿ ಶೂದ್ರಾ ಸ್ಯಾನ್ನೇತ್ಯಾಹುರಪರೇ ಜನಾಃ ॥೧೧॥

ಬ್ರಾಹ್ಮಣನಿಗೆ ಬ್ರಾಹ್ಮಣ ಸ್ತ್ರೀಯೇ ಜ್ಯೇಷ್ಠಪತ್ನಿಯಾಗಬೇಕು. ಕ್ಷತ್ರಿಯನಿಗೆ ಕ್ಷತ್ರಿಯ ಸ್ತ್ರೀಯರು ಜ್ಯೇಷ್ಠಪತ್ನಿಯಾಗಬೇಕು. ರತಿಸುಖಕ್ಕಾಗಿ ಶೂದ್ರ ಸ್ತ್ರೀಯನ್ನೂ ವಿವಾಹವಾಗಬಹುದು ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಹಾಗೆ ಮಾಡಕೂಡದು ಎಂದು ಹೇಳುತ್ತಾರೆ.

ಅಪತ್ಯಜನ್ಮ ದೋಷಾಯ ವಿಪ್ರೇ ಶೂದ್ರತ್ವಸಾಧನಾತ್ ।
ಶೂದ್ರಾಯಾಂ ಜನಯನ್ ವಿಪ್ರಃ ಪ್ರಾಯಶ್ಚಿತ್ತೀ ವಿಧೀಯತೇ ॥೧೨॥

ಬ್ರಾಹ್ಮಣನಿಗೆ ಶೂದ್ರ ಸ್ತ್ರೀಯಲ್ಲಿ ಮಕ್ಕಳನ್ನು ಪಡೆಯುವುದು ಶೂದ್ರತ್ವವನ್ನು ತಂದುಕೊಡುತ್ತದೆ. ಶೂದ್ರಳಲ್ಲಿ ಮಕ್ಕಳನ್ನು ಪಡೆದ ಬ್ರಾಹ್ಮಣನಿಗೆ ಪ್ರಾಯಶ್ಚಿತ್ತವು ವಿಧಿಸಲ್ಪಡುತ್ತದೆ.

ನಾತಿಬಾಲಾಂ ವಹಂತ್ಯನ್ಯೇ ಅನಿತ್ಯತ್ವಾತ್ ಪ್ರಜಾರ್ಥಿನಃ ।
ವಹಂತಿ ಕರ್ಮಿಣಸ್ತಸ್ಯಾಮಂತಃಶುದ್ಧಿವ್ಯಪೇಕ್ಷಯಾ ॥

ಜೀವನವು ಅನಿತ್ಯವಾದುದರಿಂದ ಬೇಗ ಸಂತತಿಯನ್ನು ಬಯಸುವ ಕೆಲವರು ಬಹಳ ಚಿಕ್ಕ ಕನ್ಯೆಯನ್ನು ವಿವಾಹವಾಗುವುದಿಲ್ಲ. ಕರ್ಮದೀಕ್ಷೆಯುಳ್ಳವರು ಕರ್ಮದ ಶುದ್ಧಿಯನ್ನು ಬಯಸಿ ಬಹಳ ಚಿಕ್ಕವಯಸ್ಸಿನ ಕನ್ಯೆಯನ್ನು ಮದುವೆಯಾಗುತ್ತಾರೆ.

ತ್ರಿಶಂದ್ವಷೋ೯ ದಶವರ್ಷಾಂ ಭಾರ್ಯಾಂ ವಿಂದೇತ ನಗ್ನಿಕಾಮ್ ।
ಏಕವಿಂಶತಿವರ್ಷೋ೯ ವಾ ಸಪ್ತವರ್ಷಾಮವಾಪ್ನುಯಾತ್ ॥೧೩॥

ಮೂವತ್ತು ವರ್ಷದವನು ಹತ್ತು ವರ್ಷದ ಋತುಮತಿಯಾಗದ ಕನ್ಯೆಯನ್ನು ವಿವಾಹವಾಗಬೇಕು. ಅಥವಾ ಇಪ್ಪತ್ತೊಂದು ವರ್ಷದ ವರನು ಏಳು ವರ್ಷದ ಕನ್ಯೆಯನ್ನು ವಿವಾಹವಾಗಬೇಕು.

ಯಸ್ಯಾಸ್ತು ನ ಭವೇದ್ ಭ್ರಾತಾ ಪಿತಾ ವಾ ಭರತರ್ಷಭ ।
ನೋಪಯಚ್ಛೇತ ತಾಂ ಜಾತು ಪುತ್ರಿಕಾಧರ್ಮಿಣೀ ಹಿ ಸಾ ॥೧೪॥

ಎಲೈ ಭರತರ್ಷಭನೇ, ಯಾವ ಕನ್ಯೆಗೆ ತಂದೆಯಾಗಲೀ, ಸಹೋದರರಾಗಲೀ ಇರುವುದಿಲ್ಲವೋ ಅಂತಹವಳನ್ನು ಮದುವೆಯಾಗಬಾರದು. ಅವಳಲ್ಲಿ ಹುಟ್ಟಿದ ಮಗನು ಕನ್ಯೆಯ ತಂದೆಗೆ ಸೇರುವವನು.

ತ್ರೀಣಿ ವರ್ಷಾಣ್ಯುದೀಕ್ಷೇತ ಕನ್ಯಾ ಋತುಮತೀ ಸತೀ ।
ಚತುರ್ಥೇ ತ್ವಥ ಸಂಪ್ರಾಪ್ತೇ ಸ್ವಯಂ ಭರ್ತಾರಮರ್ಜಯೇತ್ ॥೧೫॥

ಋತುಮತಿಯಾದ ಕನ್ಯೆಯು ಮೂರುವರ್ಷದವರೆಗೆ ತಂದೆಯ ಮನೆಯಲ್ಲಿ ನಿರೀಕ್ಷಿಸಬೇಕು. ನಾಲ್ಕನೆಯ ವರ್ಷವು ಪ್ರಾಪ್ತವಾದರೆ ತಾನೇ ಸ್ವತಃ ಪತಿಯನ್ನು ಸಂಪಾದಿಸಬೇಕು.

ಪ್ರಜಾ ನ ಹೀಯತೇ ತಸ್ಯಾ ರತಿಶ್ಚ ಭರತರ್ಷಭ ।
ಅತೋಽನ್ಯಥಾ ವರ್ತಮಾನಾ ಭವೇದ್ ವಾಚ್ಯಾ ಪ್ರಜಾಪತೇಃ ॥೧೬॥

ಎಲೈ ಭರತರ್ಷಭನೇ, ಅಂತಹವಳಲ್ಲಿ ಸಂತತಿಯಾಗಲೀ, ರತಿಸುಖವಾಗಲೀ ನಾಶವನ್ನು ಹೊಂದುವುದಿಲ್ಲ. ಹಾಗಲ್ಲದೆ ತಾನೇ ಪತಿಯನ್ನು ಪಡೆದು ವಿವಾಹವಾಗದೆ ಬೇರೆ ರೀತಿಯಲ್ಲಿ ವರ್ತಿಸುವವಳು ಪ್ರಜಾಪತಿಯಿಂದ ನಿಂದಿತಳಾಗುತ್ತಾಳೆ.

ಅಸಪಿಂಡಾ ಚ ಯಾ ಮಾತುರಸಗೋತ್ರಾ ಚ ಯಾ ಪಿತುಃ ।
ಇತ್ಯೇತಾಮನುಗಚ್ಛೇತ ತಂ ಧರ್ಮಂ ಮನುರಬ್ರವೀತ್ ॥೧೭॥

ತಾಯಿಯ ಸಪಿಂಡಳಲ್ಲದವಳು, ತಂದೆಯ ಸಗೋತ್ರಳಲ್ಲದವಳು ಆದ ಕನ್ಯೆಯನ್ನು ಮದುವೆಯಾಗಬೇಕು. ಅದು ಧರ್ಮವೆಂದು ಮನುವು ಹೇಳಿದನು (ಎರಡು ಕಡೆಯಲ್ಲಿಯೂ ಚಕಾರವಿರುವುದರಿಂದ ಅವಳು ತಾಯಿಗೆ ಸಗೋತ್ರಳೂ ಆಗಿರಬಾರದು ಮತ್ತು ತಂದೆಗೂ ಸಪಿಂಡಳಾಗಿರಬಾರದು).

ಯುಧಿಷ್ಠಿರಃ

ಶುಲ್ಕಮನ್ಯೇನ ದತ್ತಂ ಸ್ಯಾದ್ ದದಾನೀತ್ಯಾಹ ಚಾಪರಃ ।
ಬಲಾದನ್ಯಃ ಪ್ರಭಾಷೇತ ಧನಮನ್ಯಃ ಪ್ರದರ್ಶಯೇತ್ ॥೧೮॥

ಪಾಣಿಗ್ರಹೀತಾ ತ್ವನ್ಯಃ ಸ್ಯಾತ್ ಕಸ್ಯ ಕನ್ಯಾ ಪಿತಾಮಹ ।
ತತ್ತ್ವಂ ಜಿಜ್ಞಾಸಮಾನಾನಾಂ ಚಕ್ಷುರ್ಭವತು ನೋ ಭವಾನ್ ॥೧೯॥

ಯುಧಿಷ್ಠಿರ– ಒಬ್ಬನು ಕನ್ಯಾಶುಲ್ಕವನ್ನು ಕೊಟ್ಟಿರುತ್ತಾನೆ. ಇನ್ನೊಬ್ಬನು ಕನ್ಯಾಶುಲ್ಕವನ್ನು ಕೊಡುತ್ತೇನೆ ಎಂದು ಹೇಳುತ್ತಾನೆ. ಇನ್ನೊಬ್ಬನು ಪ್ರಬಲನಾಗಿದ್ದು ನನಗೇ ಕನ್ಯೆಯನ್ನು ಕೊಡಬೇಕೆಂದು ಮಾತನಾಡುತ್ತಾನೆ. ಅಧಿಕವಾದ ಕನ್ಯಾಶುಲ್ಕವನ್ನು ಇನ್ನೊಬ್ಬನು ತೋರಿಸುತ್ತಾನೆ. ಪಾಣಿಗ್ರಹಣವನ್ನು ಮಾಡಿಕೊಳ್ಳುವವನು ಇನ್ನೊಬ್ಬನಾಗುತ್ತಾನೆ. ಎಲೈ ಪಿತಾಮಹನೇ, ಆ ಕನ್ಯೆಯು ಯಾರಿಗೆ ಸೇರಿದವಳು? ತತ್ತ್ವವನ್ನು ಕೇಳಲು ಹೊರಟ ನನಗೆ ನೀವು ಜ್ಞಾನದೃಷ್ಟಿಯನ್ನು ಕೊಡಿ.

ಭೀಷ್ಮಃ

ಯತ್ ಕಿಂಚಿತ್ ಕರ್ಮ ಮಾನುಷ್ಯಂ ಸಂಸ್ಥಾನಾಯ ಪ್ರದೃಶ್ಯತೇ ।
ಮಂತ್ರವನ್ಮಂತ್ರಿತಂ ತಸ್ಯ ಮೃಷಾವಾದಸ್ತು ಪಾತಕಃ ॥೨೦॥

ಭೀಷ್ಮ– ಮಂತ್ರಪೂತವಾದ ವಿವಾಹದ ಘಟನೆಗಾಗಿ ಮನುಷ್ಯರಲ್ಲಿ ಯಾವ ಮಂತ್ರಾಲೋಚನೆಯು ನಡೆಯುತ್ತದೆಯೋ ಅದನ್ನು ನಿರಾಕರಿಸುವುದು ಪಾತಕವಾಗುತ್ತದೆ.

ಭಾರ್ಯಾಪತ್ಯೃತ್ವಿಗಾಚಾರ್ಯಾಃ ಶಿಷ್ಯೋಪಾಧ್ಯಾಯ ಏವ ಚ ।
ಮೃಷೋಕ್ತೇ ದಂಡಮರ್ಹಂತಿ ನೇತ್ಯಾಹುರಪರೇ ಜನಾಃ ॥೨೧॥

ಪತ್ನಿಯಾಗಲೀ, ಪುತ್ರನಾಗಲೀ, ಋತ್ವಿಕ್-ಆಚಾರ್ಯ-ಶಿಷ್ಯರಾಗಲೀ, ಉಪಾಧ್ಯಾಯರಾಗಲೀ ಸುಳ್ಳನ್ನು ಹೇಳಿದರೆ ಅವರು ದಂಡಕ್ಕೆ ಅರ್ಹರಾಗುತ್ತಾರೆ. ವಿವಾಹದ ಸಂದರ್ಭದಲ್ಲಿ ಸುಳ್ಳನ್ನು ಹೇಳಿದರೆ ದಂಡಾರ್ಹರಾಗುವುದಿಲ್ಲ ಎಂದು ಇನ್ನು ಕೆಲವರ ಅಭಿಪ್ರಾಯ.

ನ ಹ್ಯಕಾಮೇನ ಸಂವಾದಂ ಮನುರೇವಂ ಪ್ರಶಂಸತಿ ।
ಅಯಶಸ್ಯಮಧರ್ಮ್ಯಂ ಚ ಯನ್ಮೃಷಾ ಧರ್ಮಕೋಪನಮ್ ॥೨೨॥

ಯಾರಿಗೆ ಕನ್ಯೆಯನ್ನು ಕೊಡಲು ಇಷ್ಟವಿಲ್ಲವೋ ಅವನ ಜೊತೆಯಲ್ಲಿ ವಿವಾಹ ಸಂವಾದವನ್ನು ಮಾಡುವುದನ್ನು ಮನುವು ಪ್ರಶಂಸಿಸುವುದಿಲ್ಲ. ಅದು ಅಕೀರ್ತಿಕರವಾದುದು, ಅಧಾರ್ಮಿಕವಾದುದು ಮತ್ತು ವ್ಯರ್ಥವಾಗಿ ಧರ್ಮಕ್ಕೆ ಕೋಪವನ್ನುಂಟು ಮಾಡುವಂತಹದು.

ನೈಕಾಂತದೋಷ ಏಕಸ್ಮಿಂಸ್ತದ್ದಾನಂ ನೋಪಲಭ್ಯತೇ ।
ಧರ್ಮತೋ ಯಾಂ ಪ್ರಯಚ್ಛಂತಿ ಯಾಂ ಚ ಕ್ರೀಣಂತಿ ಭಾರತ ॥೨೩॥

ಎಲೈ ಭಾರತನೇ, ಒಬ್ಬನಿಗೇ ಕೊಡಲು ಬಯಸಿ ಅಥವಾ ಒಬ್ಬನಿಂದಲೇ ಶುಲ್ಕವನ್ನು ತೆಗೆದುಕೊಳ್ಳಲು ಬಯಸಿ, ಅವನನ್ನೇ ಕರೆದು ಮಾತನಾಡುವುದು ದೋಷಕ್ಕೆ ಕಾರಣವಾಗುವುದಿಲ್ಲ. ಅಂತಹ ದಾನಗಳು ಅಪರೂಪವಾದವುಗಳು.

ಬಂಧುಭಿಃ ಸಮನುಜ್ಞಾತೋ ಮಂತ್ರಹೋಮೌ ಪ್ರಯೋಜಯೇತ್ ।
ತಥಾ ಸಿಧ್ಯಂತಿ ತೇ ಮಂತ್ರಾ ನಾದತ್ತಾಯಾಃ ಕಥಂಚನ ॥೨೪॥

ಬಂಧುಗಳ ಅನುಮತಿಯನ್ನು ಪಡೆದು, ಮಂತ್ರಹೋಮ ಪುರಸ್ಸರವಾಗಿ ಯಾವ ಕನ್ಯೆಯನ್ನು ಧರ್ಮದಿಂದ ದಾನ ಮಾಡುತ್ತಾರೆಯೋ ಅಥವಾ ಧನದಿಂದ ಕ್ರಯವನ್ನು ಮಾಡಿ ಅನಂತರ ದಾನವಾಗಿ ಪಡೆಯುತ್ತಾರೆಯೋ ಅಂತಹ ಸಂದರ್ಭದಲ್ಲಿ ಎಲ್ಲ ಮಂತ್ರಗಳೂ ಸಿದ್ಧಿಸುತ್ತವೆ. ಬಂಧುಗಳಿಂದ ದಾನ ಮಾಡಲ್ಪಡದಿದ್ದರೆ ಯಾವ ಮಂತ್ರವೂ ಸಿದ್ಧಿಸುವುದಿಲ್ಲ.

ಯಸ್ತ ತ್ರ ಮಂತ್ರಸಮಯೋ ಭಾರ್ಯಾಪತ್ಯೋರ್ಮಿಥಃ ಕೃತಃ ।
ತಮೇವಾಹುರ್ಗರೀಯಾಂಸಂ ಯಶ್ಚಾಸೌ ಜ್ಞಾತಿಭಿಃ ಕೃತಃ ॥೨೫॥

ವಿವಾಹಸಂದರ್ಭದಲ್ಲಿ ವಧೂ-ವರರು ಮಂತ್ರಕ್ಕೆ ಅನುಗುಣವಾಗಿ ಯಾವ ಪರಸ್ಪರ ನಿಬಂಧನೆಗಳನ್ನು ಅಂಗೀಕರಿಸುತ್ತಾರೆಯೋ ಜೊತೆಗೆ ಕನ್ಯಾ-ವರರ ಬಂಧುಗಳು ಯಾವ ನಿಬಂಧನೆಗಳನ್ನು ವಿಧಿಸುತ್ತಾರೆಯೋ ಅವೇ ಬಹಳ ಶ್ರೇಷ್ಠವಾದವು.

ದೇವದತ್ತಾಂ ಪತಿರ್ಭಾರ್ಯಾಂ ವೇತ್ತಿ ಧರ್ಮಸ್ಯ ಶಾಸನಾತ್ ।
ಸಾ ದೈವೀಂ ಮಾನುಷೀಂ ವಾಚಮನೃತಾಂ ಪರ್ಯುದಸ್ಯತಿ ॥೨೬॥

ಯಾವ ವರನು ದೇವರ ಮುಂದೆ ಚೀಟಿಯನ್ನು ಹಾಕಿ ಬಂದ ಚೀಟಿಗೆ ಅನುಸಾರವಾಗಿ ಕನ್ಯೆಯನ್ನು ಸ್ವೀಕರಿಸುತ್ತಾನೆಯೋ ಅವಳನ್ನು ಅವನು ತನಗೆ ದೇವರು ಕೊಟ್ಟ ಭಾರ್ಯೆ ಎಂದು ತಿಳಿಯುತ್ತಾನೆ. ಆ ದೈವವಾಣಿಯು ಬಂಧುಗಳು ಮೊದಲು ಹೇಳಿದ ಕೊಡುವುದಿಲ್ಲ ಎಂಬ ಮಾತನ್ನು ನಿರಾಕರಿಸುತ್ತದೆ (ಲಕ್ಷಾಲಂಕಾರ).

ಯುಧಿಷ್ಠಿರಃ

ಕನ್ಯಾಯಾಂ ಪ್ರಾಪ್ತಶುಲ್ಕಾಯಾಂ ಜ್ಯಾಯಾಂಶ್ಚೇದಾವ್ರಜೇದ್ ವರಃ ।
ಧರ್ಮಕಾಮಾರ್ಥಸಂಪನ್ನೋ ವಾಚ್ಯಮತ್ರಾನೃತಂ ನ ವಾ ॥೨೭॥

ಯುಧಿಷ್ಠಿರ– ಕನ್ಯೆಗೆ ಶುಲ್ಕವನ್ನು ಕೊಟ್ಟಮೇಲೆ ಧರ್ಮಕಾಮಾರ್ಥಸಂಪನ್ನನಾದ ಶ್ರೇಷ್ಠನಾದ ವರನು ಬಂದರೆ ಆಗ ಸುಳ್ಳನ್ನು ಹೇಳಬೇಕೇ, ಬೇಡವೆ?

ತಸ್ಮಿನ್ನುಭಯತೋ ದೋಷೇ ಕುರ್ವಂಶ್ಚ್ರೇಯಃ ಸಮಾಚರೇತ್ ।
ಅಯಂ ನಃ ಸರ್ವಧರ್ಮಾಣಾಂ ಧರ್ಮಶ್ಚಿಂತ್ಯತಮೋ ಮತಃ ॥೨೮॥

ಆಗ ಎರಡನೆಯ ವರನಿಗೆ ಕೊಟ್ಟರೆ ಮೊದಲನೆಯ ವರನಿಗೆ ಸುಳ್ಳು ಹೇಳಿದಂತಾಗುತ್ತದೆ. ಎರಡನೆಯ ವರನಿಗೆ ಕೊಡದಿದ್ದರೆ ಕನ್ಯೆಯ ಆಸೆಯನ್ನು ಭಂಗ ಮಾಡಿದಂತಾಗುತ್ತದೆ. ಎರಡು ಪಕ್ಷಗಳಲ್ಲಿಯೂ ದೋಷವಿದೆ. ಏನು ಮಾಡಿದರೆ ಶ್ರೇಯಸ್ಸು ಉಂಟಾಗುತ್ತದೆ? ಎಲ್ಲ ಧರ್ಮಗಳಲ್ಲಿ ಇದು ನಾವು ಬಹಳವಾಗಿ ಚಿಂತಿಸಬೇಕಾದ ಧರ್ಮ.

ತತ್ತ್ವಂ ಜಿಜ್ಞಾಸಮಾನಾನಾಂ ಚಕ್ಷುರ್ಭವತು ನೋ ಭವಾನ್ ।
ತದೇತತ್ ಸರ್ವಮಾಚಕ್ಷ್ವ ನ ಹಿ ತೃಪ್ಯಾಮಿ ಕಥ್ಯತಾಮ್ ॥೨೯॥

ತತ್ತ್ವವನ್ನು ತಿಳಿಯಲು ಬಯಸುವ ನಮಗೆ ನೀವು ತತ್ತ್ವಜ್ಞಾನವನ್ನು ನೀಡಿ. ಇವೆಲ್ಲವನ್ನೂ ನಮಗೆ ತಿಳಿಸಿ. ನೀವು ಹೇಳುವ ವಿಷಯಗಳನ್ನು ಕೇಳಿ ನನಗೆ ತೃಪ್ತಿಯೇ ಆಗುತ್ತಿಲ್ಲ.

ಭೀಷ್ಮಃ

ನ ವೈ ನಿಷ್ಕಾಕರಂ ಶುಲ್ಕಂ ಜ್ಞಾತ್ವಾಸೀತ್ ತೇನ ನಾಹೃತಮ್ ।
ನ ಹಿ ಶುಲ್ಕಪರಾಃ ಸಂತಃ ಕನ್ಯಾಂ ದದತಿ ಕರ್ಹಿಚಿತ್ ॥೩೦॥

ಭೀಷ್ಮ– ಶುಲ್ಕವೇ ವಿವಾಹವನ್ನು ನಿರ್ಧರಿಸುವುದಿಲ್ಲ. ಮೊದಲನೆಯ ವರನು ಕನ್ಯೆಯನ್ನು ಕರೆದುಕೊಂಡು ಹೋಗಿಲ್ಲ. ಸಜ್ಜನರಾದವರು ಶುಲ್ಕದ ಮೇಲೆ ಆಸೆಯನ್ನು ಹೊಂದಿ ಎಂದೂ ಕನ್ಯಾದಾನವನ್ನು ಮಾಡುವುದಿಲ್ಲ.

ಅನ್ಯೈರ್ಗುಣೈರುಪೇತಂ ತು ಶುಲ್ಕಂ ಯಾಚಂತಿ ಬಾಂಧವಾಃ ।
ಅಲಂಕೃತ್ವಾ ವಹಸ್ವೇತಿ ಯೋ ದದ್ಯಾದನುಕೂಲತಃ ॥೩೧॥

ತಚ್ಚ ತಾಂ ಚ ದದಾತ್ಯೇವ ನ ಶುಲ್ಕಂ ವಿಕ್ರಯೋ ನ ಸಃ ।
ಪ್ರತಿಗೃಹ್ಯ ಭವೇದ್ ದೇಯಮೇಷ ಧರ್ಮಃ ಸನಾತನಃ ॥೩೨॥

ಬೇರೆ ಗುಣಗಳಿಂದ (ಕೆಲವು ದೋಷಗಳಿದ್ದರೂ) ಯುಕನಾದ ವರನು ಬಂದರೆ ಆಗ ಬಾಂಧವರು ಅವನಿಗೆ ಶುಲ್ಕವನ್ನು ಬೇಡುತ್ತಾರೆ. ಅವನು ಅವರಿಗೆ

ಅನುಕೂಲವಾಗುವಷ್ಟು ಶುಲ್ಕವನ್ನು ಕೊಡುವ ಸಾಮರ್ಥ್ಯವನ್ನು ಹೊಂದಿದರೆ ನಮಗೆ ಸಾಕಾಗುವಷ್ಟು ಶುಲ್ಕವನ್ನು ನೀಡಿ ಕನ್ಯೆಯನ್ನು ಮದುವೆಯಾಗು ಎಂದು ಹೇಳುತ್ತಾರೆ. ಅವನು ಆ ಶುಲ್ಕವನ್ನು ಕೊಟ್ಟು ವಿವಾಹ ಮಾಡಿಕೊಳ್ಳುತ್ತಾನೆ. ಆ ಶುಲ್ಕವು ವಿಕ್ರಯವಲ್ಲ. ದಾನವನ್ನು ಸ್ವೀಕಾರ ಮಾಡಿದ್ದಕ್ಕೆ ಪ್ರತಿಯಾಗಿ ಏನನ್ನಾದರೂ ಕೊಡುವುದು ಸನಾತನ ಧರ್ಮ.

ದಾಸ್ಯಾಮಿ ಭವತೇ ಕನ್ಯಾಮಿತಿ ಪೂರ್ವಂ ನ ಭಾಷಿತಮ್ ।
ಯೇ ಚೈವಾಹುರ್ಯೇ ಚ ನಾಹುರ್ಯೇ ಚಾವಶ್ಯಂ ವದನ್ತ್ಯುತ ॥೩೩॥

ತಸ್ಮಾದಾಗ್ರಹಣಾತ್ ಪಾಣೇರ್ಯಾಚಯಂತಿ ಪರಸ್ಪರಮ್ ।
ಕನ್ಯಾವರಃ ಪುರಾ ದತ್ತೋ ಮರುದ್ಭಿರಿತಿ ನಃ ಶ್ರುತಮ್ ॥೩೪॥

ಶುಲ್ಕವನ್ನು ತೆಗೆದುಕೊಂಡಾಗ ನಿನಗೇ ಕನ್ಯೆಯನ್ನು ಕೊಡುತ್ತೇನೆ ಎಂದು ಹೇಳಿರುವುದಿಲ್ಲ. ಒಂದು ಪಕ್ಷ ಹಾಗೆ ಹೇಳಿದ್ದರೂ ಅಥವಾ ಹೇಳದಿದ್ದರೂ ಅಥವಾ ಒತ್ತಾಯಕ್ಕೆ ಸಿಲುಕಿ ಹೇಳಿದ್ದರೂ ಸಹ ಪಾಣಿಗ್ರಹಣವಾಗುವವರೆಗೆ ಆ ಮಾತುಗಳಿಗೆ ಬೆಲೆ ಇಲ್ಲ. ಪಾಣಿಗ್ರಹಣವಾಗುವವರೆಗೆ ಪರಸ್ಪರವಾಗಿ ಯಾಚನೆಯನ್ನು ಮಾಡುತ್ತಾರೆ. ಮೊದಲು ಒಬ್ಬ ವರನು ಬಂದಿದ್ದರೂ ಅದಕ್ಕಿಂತ ಉತ್ತಮ ವರನು ಬಂದಾಗ ಅವನನ್ನು ವಿವಾಹ ಮಾಡಿಕೊಂಡರೆ ಯಾವ ದೋಷವೂ ಇಲ್ಲವೆಂದು ಕನ್ಯೆಯರಿಗೆ ಮರುತ್ತುಗಳು ವರವನ್ನು ಕೊಟ್ಟಿದ್ದಾರೆಂದು ನಾವು ಕೇಳಿದ್ದೇವೆ.

ನಾನಿಷ್ಟಾಯ ಪ್ರದಾತವ್ಯಾ ಕನ್ಯಾ ಇತ್ಯೃಷಿಚೋದಿತಮ್ ।
ತನ್ಮೂಲಂ ಕಾಮಮೂಲಸ್ಯ ಪ್ರಜನಸ್ಯೇತಿ ಮೇ ಮತಿಃ ॥೩೫॥

ಕನ್ಯೆಯು ಒಪ್ಪದಿದ್ದ ವರನಿಗೆ ಅವಳನ್ನು ಕೊಟ್ಟು ವಿವಾಹ ಮಾಡಬಾರದೆಂದು ಋಷಿಗಳ ಅಭಿಪ್ರಾಯ. ವಿವಾಹವು ಕಾಮಭೋಗಕ್ಕೂ ಮತ್ತು ಸಂತತಿಗೂ ಮೂಲವಾದುದೆಂದು ನನ್ನ ಅಭಿಪ್ರಾಯ.

ಸಮೀಕ್ಷ್ಯ ಚ ಬಹೂನ್ ದೋಷಾನ್ ಸಂವಾಸಾದ್ ವಿದ್ವಿಷಾಣಯೋಃ ।
ಯಥಾ ನಿಷ್ಕಾಕರಂ ಶುಲ್ಕಂ ನ ಜಾತ್ವಾಸೀತ್ ತಥಾ ಶೃಣು ॥೩೬॥

ಶುಲ್ಕವನ್ನು ತೆಗೆದುಕೊಂಡು ವಿವಾಹವಾಗಿ ಬಹುಕಾಲ ವಾಸಿಸುವವರು ಮಾಡುವ ಪರಸ್ಪರ ದ್ವೇಷವನ್ನು ನೋಡಿ ಶುಲ್ಕವು ಎಂದೂ ವಿವಾಹ ನಿಶ್ಚಾಯಕವಲ್ಲ ಎಂದು ನಾನು ತೀರ್ಮಾನ ಮಾಡಿದೆ. ಅದರ ಪ್ರಕಾರವನ್ನು ಕೇಳು.

ಅಹಂ ವಿಚಿತ್ರವೀರ್ಯಾಯ ದ್ವೇ ಕನ್ಯೇ ಸಮುದಾವಹಮ್ ।
ಜಿತ್ವಾ ಚ ಮಾಗಧಾನ್ ಸರ್ವಾನ್ ಕಾಶೀನಥ ಚ ಕೋಸಲಾನ್ ।
ಗೃಹೀತಪಾಣಿರೇಕಾಸೀತ್ ಪ್ರಾಪ್ತಶುಲ್ಕಾಽಪರಾಭವತ್ ॥೩೭॥

ನಾನು ವಿಚಿತ್ರವೀರ್ಯನಿಗೆ ಇಬ್ಬರು ಕನ್ಯೆಯರನ್ನು ಕರೆದುಕೊಂಡು ಬಂದೆ. ಮಾಗಧರನ್ನೂ, ಕಾಶಿಗಳನ್ನೂ, ಕೋಸಲರನ್ನೂ ಎಲ್ಲರನ್ನೂ ಜಯಿಸಿ ಕರೆದುಕೊಂಡು ಬಂದೆನು. ಅದರಲ್ಲಿ ಒಬ್ಬಳು ಪಾಣಿಗ್ರಹಣ ಮಾಡಿಕೊಂಡವಳು, ಇನ್ನೊಬ್ಬಳು ಶುಲ್ಕವನ್ನು ಪಡೆದವಳು.

ಪಾಣೌ ಗೃಹೀತಾ ತತ್ಕೈವ ವಿಸೃಜ್ಯಾ ಇತಿ ಮೇ ಪಿತಾ ।
ಅಬ್ರವೀದಿತರಾಂ ಕನ್ಯಾಮಾವಹತ್ ಸ ತು ಕೌರವಃ ॥೩೮॥

ಪಾಣಿಗ್ರಹಣ ಮಾಡಿಕೊಂಡವಳನ್ನು ಅಲ್ಲಿಯೇ ಬಿಟ್ಟುಬಿಡು ಎಂದು ನನ್ನ ತಂದೆಯು ಹೇಳಿದನು. ಕೌರವನಾದ ವಿಚಿತ್ರವೀರ್ಯನು ಇನ್ನೊಬ್ಬಳನ್ನು ವಿವಾಹವಾದನು.

ಅಪ್ಯನ್ಯಾಮನುಪಪ್ರಚ್ಛ ಶಂಕಮಾನಃ ಪಿತುರ್ವಚಃ ।
ಅತೀವ ಹ್ಯಸ್ಯ ಧರ್ಮೇಪ್ಸಾ ಪಿತುರ್ಮೇಽಭ್ಯಧಿಕಾಭವತ್ ॥೩೯॥

ನಾನು ನನ್ನ ತಂದೆಯ ಮಾತನ್ನು ಪೂರ್ಣವಾಗಿ ನಂಬದೆ ಅದನ್ನು ಶಂಕಿಸಿ ಬೇರೆ ವಿದ್ವಾಂಸರನ್ನು ಕೇಳಿದೆನು. ನನ್ನ ತಂದೆಗಾದರೂ ಧರ್ಮನಿಷ್ಠೆಯು ಬಹಳವಾಗಿದ್ದಿತು.

ತತೋಽಹಮಬ್ರುವಂ ರಾಜನ್ನಾಚಾರೇಪ್ಸುರಿದಂ ವಚಃ ।
ಆಚಾರಂ ತತ್ತ್ವತೋ ವೇತ್ತುಮಿಚ್ಛಾಮೀತಿ ಪುನಃ ಪುನಃ ॥೪೦॥

ಎಲೈ ರಾಜನೇ, ಆಗ ನಾನು ಶುದ್ಧವಾದ ಆಚಾರವನ್ನು ಅನುಷ್ಠಾನ ಮಾಡಲು ಬಯಸಿ, ಅದನ್ನು ಮೊದಲು ಸರಿಯಾಗಿ ತಿಳಿಯಲು ಬಯಸಿ ನನ್ನ ತಂದೆಯನ್ನು ಪುನಃ ಪುನಃ ಕೇಳಿದೆನು.

ತತೋ ಮಯ್ಯೇವಮುಕ್ತೇ ತು ವಾಕ್ಯೇ ಧರ್ಮಭೃತಾಂ ವರಃ ।
ಪಿತಾ ಮಮ ಮಹಾರಾಜ ಬಾಹ್ಲೀಕೋ ವಾಕ್ಯಮಬ್ರವೀತ್ ॥೪೧॥

ಎಲೈ ಮಹಾರಾಜನೇ, ಆಗ ನನ್ನ ತಂದೆಯನ್ನು ಹಾಗೆ ಕೇಳಿದಾಗ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ನನ್ನ ತಂದೆಯಾದ ಬಾಹ್ಲೀಕನು ಹೀಗೆ ಮಾತನಾಡಿದನು.

ಯದಿ ವಃ ಶುಲ್ಕತೋ ನಿಷ್ಠಾ ನ ಪಾಣಿಗ್ರಹಣಂ ತಥಾ ।
ಲಾಜಾಂತರಮುಪಾಸೀತ ಪ್ರಾಪ್ತಶುಲ್ಕಾ ಪತಿಂ ವೃತಮ್ ॥೪೨॥

ನಿಮಗೆ ಶುಲ್ಕದಲ್ಲಿಯೇ ತಾತ್ಪರ್ಯ, ಪಾಣಿಗ್ರಹಣವು ವಿವಾಹ ಸ್ವೀಕಾರ ಎಂಬ ಅಭಿಪ್ರಾಯವಿಲ್ಲದಿದ್ದರೆ ಮೊದಲು ಶುಲ್ಕವನ್ನು ಪಡೆದವಳು ಇನ್ನೊಬ್ಬ ಪತಿಯು ಬಂದರೆ ಬೇರೆ ಲಾಜಾಹೋಮವನ್ನು ಮಾಡಿ ಅನಂತರ ಬಂದ ತಾನು ವರಿಸಿದವನನ್ನು ಪತಿಯಾಗಿ ಹೊಂದಬೇಕು.

ನ ಹಿ ಧರ್ಮವಿದಃ ಪ್ರಾಹುಃ ಪ್ರಮಾಣಂ ವಾಕ್ಯತಃ ಸ್ಮೃತಮ್ ।
ಯೇಷಾಂ ವೈ ಶುಲ್ಕತೋ ನಿಷ್ಠಾ ನ ಪಾಣಿಗ್ರಹಣಾತ್ ತಥಾ ॥೪೩॥

ಯಾರಿಗೆ ಶುಲ್ಕದಲ್ಲೇ ತಾತ್ಪರ್ಯವೋ, ಪಾಣಿಗ್ರಹಣದಲ್ಲಿ ತಾತ್ಪರ್ಯವಿಲ್ಲವೋ ಅಂತಹವರ ವಾಕ್ಯವು ಪ್ರಮಾಣವಲ್ಲವೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

ಪ್ರಸಿದ್ಧಂ ಭಾಷಿತಂ ದಾನೇ ತೇಷಾಂ ಪ್ರತ್ಯಸನಂ ಪುನಃ ।
ಯೇ ಮನ್ಯಂತೇ ಕ್ರಯಂ ಶುಲ್ಕಂ ನ ತೇ ಧರ್ಮವಿದೋ ಜನಾಃ ॥೪೪॥

ಎಲ್ಲ ಕಡೆಗಳಲ್ಲಿಯೂ ಪಾಣಿಗ್ರಹಣ ಮಹೋತ್ಸವವಾಯಿತು ಎಂದೇ ಹೇಳುತ್ತಾರೆ. ಶುಲ್ಕಗ್ರಹಣವಾಯಿತು (ಎಂದು ವಿವಾಹವನ್ನು) ಹೇಳುವುದಿಲ್ಲ. ಅಂತಹವರ ಮಾತನ್ನು ಒಪ್ಪಿದರೆ ಲೋಕಸಮ್ಮತವಾದ ವ್ಯವಹಾರವನ್ನು ನಿರಾಕರಿಸಬೇಕಾಗುತ್ತದೆ. ಕನ್ಯಾಶುಲ್ಕವನ್ನು ಕ್ರಯವೆಂದು ತಿಳಿಯುವವರು ಧರ್ಮಜ್ಞರಲ್ಲ.

ನ ಚೈತೇಭ್ಯಃ ಪ್ರದಾತವ್ಯಾ ನ ವೋಢವ್ಯಾ ತಥಾವಿಧಾ ।
ನ ಹ್ಯೇವ ಭಾರ್ಯಾ ಕ್ರೇತವ್ಯಾ ನ ವಿಕ್ರೇಯಾ ಕಥಂಚನ ॥೪೫॥

ಯಾರು ಕನ್ಯಾಶುಲ್ಕವನ್ನು ಕ್ರಯವೆಂದು ತಿಳಿಯುತ್ತಾರೆಯೋ ಅಂತಹವರಿಗೆ ಕನ್ಯೆಯನ್ನು ಕೊಡಬಾರದು ಅಥವಾ ಕನ್ಯೆಯೇ ಹಾಗೆ ತಿಳಿದಿದ್ದರೆ ಅವಳನ್ನು ವಿವಾಹವಾಗಬಾರದು. ಪತ್ನಿಯು ಮಾರುವ ಅಥವಾ ಕೊಳ್ಳುವ ಒಂದು ವಸ್ತುವಲ್ಲ.

ಯೇ ಚ ಕ್ರೀಣಂತಿ ದಾಸೀವದ್ ಯೇ ಚ ವಿಕ್ರೀಣತೇ ಜನಾಃ ।
ಭವೇತ್ ತೇಷಾಂ ತಥಾ ನಿಷ್ಠಾ ಲುಬ್ಧಾನಾಂ ಪಾಪಚೇತಸಾಮ್ ॥೪೬॥

ಯಾರು ದಾಸಿಯರನ್ನು ಕೊಂಡುಕೊಂಡಂತೆ (ಕನ್ಯೆಯರನ್ನು) ಕೊಂಡುಕೊಳ್ಳುತ್ತಾರೆಯೋ ಅಥವಾ ಮಾರುತ್ತಾರೆಯೋ ಅಂತಹ ಧನಲೋಭವುಳ್ಳ ಪಾಪಿಷ್ಠರಿಗೆ ಅಂತಹ ಅಭಿಪ್ರಾಯ ಇರಬಹುದಷ್ಟೆ?

ಅಸ್ಮಿನ್ ಧರ್ಮೇ ಸತ್ಯವಂತಂ ಪರ್ಯಪೃಚ್ಛಂತ ವೈ ಜನಾಃ ।
ಕನ್ಯಾಯಾಃ ಪ್ರಾಪ್ತಶುಲ್ಕಾಯಾಃ ಶುಲ್ಕದಃ ಪ್ರಶಮಂ ಗತಃ ॥೪೭॥

ಪಾಣಿಗ್ರಹೀತಾ ಚಾನ್ಯಃ ಸ್ಯಾದತ್ರ ನೋ ಧರ್ಮಸಂಶಯಃ ।
ತನ್ನಶ್ಚಿಂಧಿ ಮಹಾಪ್ರಾಜ್ಞ ತ್ವಂ ಹಿ ವೈ ಪ್ರಾಜ್ಞಸಮ್ಮತಃ ।
ತತ್ತ್ವಂ ಜಿಜ್ಞಾಸಮಾನಾನಾಂ ಚಕ್ಷುರ್ಭವತು ನೋ ಭವಾನ್ ॥೪೮॥

ಈ ಧರ್ಮದ ವಿಷಯದಲ್ಲಿ ಜನರು ಸಾವಿತ್ರೀಪತಿಯಾದ ಸತ್ಯವಂತನನ್ನು ಪ್ರಶ್ನೆ ಮಾಡಿದರು. ಶುಲ್ಕವನ್ನು ಪಡೆದ ಕನ್ಯೆಗೆ ಶುಲ್ಕವನ್ನು ಕೊಟ್ಟ ಪತಿಯು ಮೃತನಾಗುತ್ತಾನೆ. ಇನ್ನೊಬ್ಬನು ಪಾಣಿಗ್ರಹಣ ಮಾಡಿಕೊಳ್ಳುತ್ತಾನೆ. ಇಂತಹ ಸಂದರ್ಭದಲ್ಲಿ ನಮಗೆ ಧರ್ಮಸಂಶಯ ಉಂಟಾಗಿದೆ. ಎಲೈ ಮಹಾಪ್ರಾಜ್ಞನೇ, ನೀನು ಪ್ರಾಜ್ಞರಿಗೆ ಸಮ್ಮತನಾದವನು. ಆದ್ದರಿಂದ ನಮ್ಮ ಸಂಶಯವನ್ನು ಪರಿಹಾರ ಮಾಡು. ತತ್ತ್ವವನ್ನು ತಿಳಿಯಲು ಬಯಸುವ ನಮಗೆ ನೀನು ಜ್ಞಾನಚಕ್ಷುಸ್ಸನ್ನು ನೀಡುವವನಾಗು (ಎಂದು ಹೇಳಿದರು).

ತಾನೇವಂ ಬ್ರುವತಃ ಸರ್ವಾನ್ ಸತ್ಯವಾನ್ ವಾಕ್ಯಮಬ್ರವೀತ್ ।
ಯತ್ರೇಷ್ಟಂ ತತ್ರ ದೇಯಾ ಸ್ಯಾನ್ನಾತ್ರ ಕಾರ್ಯಾ ವಿಚಾರಣಾ ।
ಕುರ್ವತೇ ಜೀವತೋಽಪ್ಯೇವಂ ಮೃತೇ ನೈವಾಸ್ತಿ ಸಂಶಯಃ ॥೪೯॥

ಹೀಗೆ ಹೇಳುವ ಅವರೆಲ್ಲರನ್ನೂ ಕುರಿತು ಸತ್ಯವಂತನು ಮಾತನಾಡಿದನು: ಕನ್ಯೆಗೆ ಯಾವ ವರನು ಇಷ್ಟವೋ ಅವನು ಅನಂತರ ಬಂದ ವರನಾದರೂ ಅವನಿಗೇ ಕೊಟ್ಟು ವಿವಾಹವನ್ನು ಮಾಡಬೇಕು. ಇದರಲ್ಲಿ ವಿಚಾರ ಮಾಡುವ ಅಗತ್ಯವೇ ಇಲ್ಲ. ಮೊದಲನೆಯ ವರನು ಬದುಕಿದ್ದರೂ ಹೀಗೆಯೇ ಮಾಡಬೇಕು. ಇನ್ನು ಮೊದಲನೆಯ ವರನು ಮೃತನಾದ ಮೇಲೆ ಯಾವ ಸಂಶಯಕ್ಕೂ ಅವಕಾಶವಿಲ್ಲ.

ದೇವರಂ ಪ್ರವಿಶೇತ್ ಕನ್ಯಾ ತಪ್ಯೇದ್ವಾಪಿ ಮಹತ್ ತಪಃ ।
ತಮೇವಾನುವ್ರತಾ ಭೂತ್ವಾ ಪಾಣಿಗ್ರಹಣಕಾಮ್ಯಯಾ ॥೫೦॥

ಪಾಣಿಗ್ರಹಣವಾದ ಮೇಲೆ ಪತಿಯು ಮೃತನಾದರೆ ಕನ್ಯೆಯು ಮೈದುನನನ್ನು ಮದುವೆ ಮಾಡಿಕೊಳ್ಳಬಹುದು ಅಥವಾ ಮೃತನಾದ ಪತಿಗೇ ನಿಷ್ಠಳಾಗಿ ಜನ್ಮಾಂತರದಲ್ಲಿ ಅವನನ್ನು ಪಡೆವ ಆಸೆಯಿಂದ ದೊಡ್ಡ ತಪಸ್ಸನ್ನಾದರೂ ಆಚರಿಸಬಹುದು.

ಲಿಖಿಂತ್ಯೇವ ತು ಕೇಷಾಂಚಿದಪರೇಷಾಂ ಶನೈರಪಿ ।
ಇತಿ ಯೇ ಸಂವದಂತ್ಯತ್ರ ತ ಏತಂ ನಿಶ್ಚಯಂ ವಿದುಃ ॥೫೧॥

ಕೆಲವರು ಹೀಗೆ ಮೈದುನನನ್ನು ವಿವಾಹವಾಗಬಹುದು ಎಂದು ಬರೆಯುತ್ತಾರೆ. ಕೆಲವರು ಇದನ್ನು ಅಷ್ಟಾಗಿ ಒಪ್ಪುವುದಿಲ್ಲ. ಈ ವಿಷಯವನ್ನು ವಿದ್ವಾಂಸರು ನಿಶ್ಚಯ ಮಾಡಿ ತಿಳಿಯುತ್ತಾರೆ.

ತತ್‌ಪಾಣಿಗ್ರಹಣಾತ್ ಪೂರ್ವಮುತ್ತರಂ ಯತ್ರ ವರ್ತತೇ ।
ಸರ್ವಮಂಗಲಮಂತ್ರಂ ವೈ ಮೃಷಾವಾದಸ್ತು ಪಾತಕಃ ॥೫೨॥

ಪಾಣಿಗ್ರಹಣಕ್ಕಿಂತ ಮೊದಲು ಉತ್ತಮವಾದ ಇನ್ನೊಬ್ಬ ವರನು ಬಂದರೆ ಅವನ ಜೊತೆಯಲ್ಲಿ ಸರ್ವಮಂಗಳ ಮಂತ್ರಗಳಿಂದ ವಿವಾಹವನ್ನು ಮಾಡಬಹುದು. ಕನ್ಯಾ ಪಿತೃಗಳಿಗೆ ಸುಳ್ಳನ್ನು ಹೇಳಿದ ದೋಷವು ಮಾತ್ರ ಬರುತ್ತದೆ.

ಪಾಣಿಗ್ರಹಣಮಂತ್ರಾಣಾಂ ನಿಷ್ಠಾ ಸ್ಯಾತ್‌ಸಪ್ತಮೇ ಪದೇ ।
ಪಾಣಿಗ್ರಾಹಸ್ಯ ಭಾರ್ಯಾ ಸ್ಯಾದ್ ಯಸ್ಯ ಚಾದ್ಭಿಃ ಪ್ರದೀಯತೇ ॥೫೩॥

ಪಾಣಿಗ್ರಹಣ ಮಂತ್ರಗಳ ಪರಿಸಮಾಪ್ತಿ ಎಂದರೆ ಅದು ಸಪ್ತಪದಿಯ ಏಳನೆಯ ಹೆಜ್ಜೆಯಲ್ಲಿ. ಜಲಧಾರಾಪೂರ್ವಕವಾಗಿ ಧಾರೆ ಎರೆದುಕೊಡಲ್ಪಟ್ಟವಳು ಯಾವನು ಅಂತಹ ಪಾಣಿಗ್ರಹಣವನ್ನು ಮಾಡಿಕೊಳ್ಳುತ್ತಾನೆಯೋ ಅವನ ಭಾರ್ಯೆಯಾಗುತ್ತಾಳೆ.

ಅನುಕೂಲಮನುವಂಶಾಂ ಭ್ರಾತ್ರಾ ದತ್ತಾಮುಪಾಗ್ನಿಕಾಮ್ ।
ಪರಿಕ್ರಮ್ಯ ಯಥಾನ್ಯಾಯಂ ಭಾರ್ಯಾಂ ವಿಂದೇತ ವೈ ದ್ವಿಜಃ ॥೫೪॥

ಒಳ್ಳೆಯ ವಂಶದಿಂದ ಬಂದ, ತನಗೆ ಅನುಕೂಲಳಾದ ಸಹೋದರರಿಂದ ಅಗ್ನಿ ಸಾಕ್ಷಿಕವಾಗಿ ಕೊಡಲ್ಪಟ್ಟ, ಅಗ್ನಿ ಪ್ರದಕ್ಷಿಣೆಯನ್ನು ಮಾಡಿ ಶಾಸ್ತ್ರೋಕ್ತ ವಿಧಿಯಂತೆ ಸ್ವೀಕರಿಸಲ್ಪಟ್ಟ ಕನ್ಯೆಯು ದ್ವಿಜನ ಪತ್ನಿಯಾಗುತ್ತಾಳೆ (ಅಂತಹ ಕನ್ಯೆಯನ್ನು ದ್ವಿಜರು ಪತ್ನಿಯಾಗಿ ಪಡೆಯಬೇಕು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕನ್ಯಾದಾನನಿರ್ಣಯೋ ನಾಮ
ಚತುಃಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೈದನೆಯ ಅಧ್ಯಾಯ

ಕನ್ಯಾದಾನಧರ್ಮಗಳು

ಯುಧಿಷ್ಠಿರಃ

ಕನ್ಯಾಯಾಃ ಪ್ರಾಪ್ತಶುಲ್ಕಾಯಾಃ ಪತಿಶ್ಚೇನ್ನಾಸ್ತಿ ಕಶ್ಚನ ।
ತತ್ರ ಕಾ ಪ್ರತಿಪತ್ತಿಃ ಸ್ಯಾತ್ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಕನ್ಯೆಯು ಒಬ್ಬನಿಂದ ಶುಲ್ಕವನ್ನು ತೆಗೆದುಕೊಂಡ ಮೇಲೆ ಅವನು ಯಾವುದಾದರೂ ಕಾರ್ಯದಿಂದ ಪುನಃ ಬರದೆ ಹೋದರೆ ಅವಳು ಏನು ಮಾಡಬೇಕೆಂದು ನನಗೆ ಹೇಳು.

ಭೀಷ್ಮಃ

ಯಾ ಪುತ್ರಕಸ್ಯಾಪ್ಯರಿಕ್ಥಸ್ಯ ಪ್ರತಿಪತ್ಸಾ ತದಾ ಭವೇತ್ ॥೨॥

ಅಥ ಚೇತ್ ಸಾ ಹರೇಚ್ಛುಲ್ಕಂ ಕ್ರೀತಾ ಶುಲ್ಕಪ್ರದಸ್ಯ ಸಾ ।
ತಸ್ಯಾರ್ಥೇऽಪತ್ಯಮೀಹೇತ ಯೇನ ನ್ಯಾಯೇನ ಶಕ್ನುಯಾತ್ ॥೩॥

ನ ತಸ್ಯಾ ಮಂತ್ರವತ್ ಕಾರ್ಯಂ ಕಶ್ಚಿತ್ ಕುರ್ಯೀತ ಕಿಂಚನ ॥೪॥

ಭೀಷ್ಮ– ಆಸ್ತಿಯಲ್ಲಿ ಭಾಗವನ್ನು ತೆಗೆದುಕೊಳ್ಳಲು ಅರ್ಹನಾದ ಪುತ್ರನಂತೆ ಅವಳನ್ನು ತಿಳಿಯಬೇಕು. ಅವಳು (ಅವಳಿಗಾಗಿ ಅವಳ ತಂದೆಯು) ಶುಲ್ಕವನ್ನು ತೆಗೆದುಕೊಂಡಿದ್ದರೆ ಅವಳು ಶುಲ್ಕವನ್ನು ಕೊಟ್ಟವನಿಗೆ ಮಾರಲ್ಪಟ್ಟಂತೆಯೇ ಸರಿ. ಯಾವ ನ್ಯಾಯಮಾರ್ಗದಿಂದಾದರೂ ಶುಲ್ಕವನ್ನು ಕೊಟ್ಟವನ ಸಲುವಾಗಿ ಮಕ್ಕಳನ್ನು ಪಡೆಯಲು ಪ್ರಯತ್ನವನ್ನು ಮಾಡಬೇಕು. ಆದರೆ ಅವಳು ಯಾವ ಕಾರ್ಯವನ್ನೂ ಮಂತ್ರ ಪೂರ್ವಕವಾಗಿ ಮಾಡಬಾರದು.

ಸ್ವಯಂವೃತೇತಿ ಸಾವಿತ್ರೀ ಪಿತ್ರಾ ವೈ ಪ್ರತ್ಯಪದ್ಯತ ।
ತತ್ ತಸ್ಯಾನ್ಯೇ ಪ್ರಶಂಸಂತಿ ಧರ್ಮಜ್ಞಾ ನೇತರೇ ಜನಾಃ ॥೫॥

ಸಾವಿತ್ರಿಯ ತಂದೆಯು ಸತ್ಯವಂತನು ಅವಳಿಂದ ಸ್ವತಃ ವರಿಸಲ್ಪಟ್ಟಿದ್ದಾನೆ ಎಂದು ತಿಳಿದು ಅಂಗೀಕರಿಸಿದನು. ಧರ್ಮಜ್ಞರಾದ ಕೆಲವರು ಅಂತಹ ನೀತಿಯನ್ನು ಪ್ರಶಂಸೆ ಮಾಡುತ್ತಾರೆ. ಇನ್ನು ಕೆಲವರು ಪ್ರಶಂಸೆ ಮಾಡುವುದಿಲ್ಲ.

ಏತತ್ತು ನಾಪರೇ ಚಕ್ರುರ್ನ ಪರೇ ಜಾತು ಸಾಧವಃ ।
ಸಾಧೂನಾಂ ಪುನರಾಚಾರೋ ಗರೀಯೋ ಧರ್ಮಲಕ್ಷಣಮ್ ॥೬॥

ಸಾವಿತ್ರಿಯ ಮಾಡಿದಂತಹ ಕಾರ್ಯವನ್ನು ಉಳಿದವರು ಯಾರೂ ಮಾಡಲಿಲ್ಲ. ಸಜ್ಜನರಂತೂ ಎಂದೂ ಮಾಡಲಿಲ್ಲ. ಸಜ್ಜನರ ಆಚಾರವೇ ಶ್ರೇಷ್ಠವಾದ ಧರ್ಮಪ್ರಮಾಣವಷ್ಟೆ?

ಅಸ್ಮಿನ್ನೇವ ಪ್ರಕರಣೇ ಸುಕ್ರತುರ್ವಾಕ್ಯಮಬ್ರವೀತ್ ।
ನಪ್ತಾ ವಿದೇಹರಾಜಸ್ಯ ಜನಕಸ್ಯ ಮಹಾತ್ಮನಃ ॥೭॥

ಅಸದಾಚರಿತೇ ಮಾರ್ಗೇ ಕಥಂ ಸ್ಯಾದನುಕೀರ್ತನಮ್ ।
ಅನುಪ್ರಶ್ನಃ ಸಂಶಯೋ ವಾ ಸತಾಮೇತದುಪಾಲಭೇತ್ ॥೮॥

ಈ ಪ್ರಕರಣದಲ್ಲಿಯೇ ಮಹಾತ್ಮನಾದ ವಿದೇಹರಾಜನಾದ ಜನಕನ ಮೊಮ್ಮಗನಾದ ಸುಕ್ರತುವು ಹೀಗೆ ಮಾತನಾಡಿದನು: ಅಸಜ್ಜನರು ಆಚರಿಸಿದ ರೀತಿಯನ್ನು ಮಾತಿನಿಂದ ಹೇಳುವುದೂ ಯೋಗ್ಯವಲ್ಲ. ಅದು ವಿಮರ್ಶೆಗೂ ಅರ್ಹವಲ್ಲ. ಸಂಶಯ ಮತ್ತು ವಿಮರ್ಶೆಗಳನ್ನು ಸಜ್ಜನರ ಆಚಾರದಲ್ಲಿಯೇ ಮಾಡಬೇಕು.

ಅಸದೇವ ಹಿ ಧರ್ಮಸ್ಯ ಪ್ರಮಾದೋ ಧರ್ಮ ಆಸುರಃ ।
ನಾನುಶುಶ್ರುಮ ಜಾತ್ವೇತಾಮಿಮಾಂ ಪೂರ್ವೇಷು ಜನ್ಮಸು ॥೯॥

ಧರ್ಮದ ವಿಷಯದಲ್ಲಿ ಪ್ರಮಾದವನ್ನು ಮಾಡುವುದು ಅಸುರರ ಸ್ವಭಾವ. ಪೂರ್ವದಲ್ಲಿ ಜನಿಸಿದವರಲ್ಲಿ ಇಂತಹ ವೃತ್ತಾಂತವನ್ನು ನಾವು ಎಂದೂ ಕೇಳಲಿಲ್ಲ.

ಭಾರ್ಯಾಪತ್ಯೋರ್ಹಿ ಸಂಬಂಧಃ ಸ್ತ್ರೀಪುಂಸೋಸ್ತುಲ್ಯ ಏವ ಸಃ ।
ರತಿಃ ಸಾಧಾರಣೋ ಧರ್ಮ ಇತಿ ಚಾಹ ಸ ಪಾರ್ಥಿವಃ ॥೧೦॥

ಪತಿ-ಪತ್ನಿಯರ ಸಂಬಂಧವು ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾದುದು. ರತಿ ಸುಖವು ಇಬ್ಬರಿಗೂ ಸಾಧಾರಣವಾದ ಧರ್ಮ ಎಂದು ಆ ರಾಜನು ಹೇಳಿದನು.

ಯುಧಿಷ್ಠಿರಃ

ಅಥ ಕೇನ ಪ್ರಮಾಣೇನ ಪುಂಸಾಮಾದೀಯತೇ ಧನಮ್ ।
ಪುತ್ರವದ್ಧಿ ಪಿತುಸ್ತಸ್ಯ ಕನ್ಯಾ ಭವಿತುಮರ್ಹತಿ ॥೧೧॥

ಯುಧಿಷ್ಠಿರ– (ಪುತ್ರರಿಲ್ಲದಿರುವಾಗ) ಪಿತೃಧನವು ಹೇಗೆ ಇನ್ನೊಬ್ಬರಿಂದ ತೆಗೆದುಕೊಳ್ಳಲ್ಪಡುತ್ತದೆ. ಆ ತಂದೆಗೆ ಪುತ್ರಿಯೇ ಪುತ್ರನಂತಾಗುತ್ತಾಳಷ್ಟೆ? (ಪುತ್ರರಿಗೆ ಧನವು ತೆಗೆದುಕೊಳ್ಳಲ್ಪಡುವುದಿಲ್ಲವಷ್ಟೆ?)

ಭೀಷ್ಮಃ

ಯಥೈವಾತ್ಮಾ ತಥಾ ಪುತ್ರಃ ಪುತ್ರೇಣ ದುಹಿತಾ ಸಮಾ ।
ತಸ್ಯಾಮಾತ್ಮನಿ ತಿಷ್ಠಂತ್ಯಾಂ ಕಥಮನ್ಯೋ ಧನಂ ಹರೇತ್ ॥೧೨॥

ಭೀಷ್ಮ– ತಾನು ಹೇಗೋ ಹಾಗೆಯೇ ಪುತ್ರನು. ಪುತ್ರಿಯು ಪುತ್ರನಿಗೆ ಸಮಾನಳಾದವಳು. ಅಂತಹ ಆತ್ಮರೂಪಳಾದ ಪುತ್ರಿಯು ಬದುಕಿರುವಾಗ ಅವಳನ್ನು ಬಿಟ್ಟು ಇನ್ನೊಬ್ಬನು ಹೇಗೆ ಪಿತೃಧನವನ್ನು ತೆಗೆದುಕೊಳ್ಳುತ್ತಾನೆ?

ಮಾತುಶ್ಚ ಯೌತಕಂ ಯತ್ ಸ್ಯಾತ್ ಕುಮಾರೀಭಾಗ ಏವ ಸಃ ।
ದೌಹಿತ್ರ ಏವ ವಾ ರಿಕ್ಥಮಪುತ್ರಸ್ಯ ಪಿತುರ್ಹರೇತ್ ॥೧೩॥

ತಾಯಿಗೆ ತವರು ಮನೆಯಿಂದ ಬಂದ ಸಂಪತ್ತು ಏನಿದೆಯೋ ಅದೆಲ್ಲವೂ ಪುತ್ರಿಯ ಭಾಗವೇ. ಪುತ್ರನಿಲ್ಲದಿದ್ದರೆ ಆ ಪುರುಷನ ಆಸ್ತಿಯನ್ನು ದೌಹಿತ್ರನೇ ತೆಗೆದುಕೊಳ್ಳಬೇಕು.

ದದಾತಿ ಹಿ ಸ ಪಿಂಡಂ ವೈ ಪಿತುರ್ಮಾತಾಮಹಸ್ಯ ಚ ।
ಪುತ್ರದೌಹಿತ್ರಯೋರ್ನೇಹ ವಿಶೇಷೋ ಧರ್ಮತಃ ಸ್ಮೃತಃ ॥೧೪॥

ದೌಹಿತ್ರನು ತನ್ನ ತಂದೆಗೂ ಮತ್ತು ಮಾತಾಮಹನಿಗೂ ಪಿಂಡಪ್ರದಾನ ಮಾಡುವನಷ್ಟೆ? ಧರ್ಮದ ದೃಷ್ಟಿಯಿಂದ ಪುತ್ರನಿಗೂ ಮತ್ತು ದೌಹಿತ್ರನಿಗೂ ಯಾವ ವೈಲಕ್ಷಣ್ಯವೂ ಇಲ್ಲ.

ಅನ್ಯತ್ರ ಜಾತಯಾ ಸಾ ಹಿ ಪ್ರಜಯಾ ಪುತ್ರ ಈಹತೇ ।
ದುಹಿತಾಽನ್ಯತ್ರ ಜಾತೇನ ಪುತ್ರೇಣಾಪಿ ವಿಶಿಷ್ಯತೇ ॥೧೫॥

ಪತಿಯು ಮರಣವನ್ನು ಹೊಂದಿದ ಮೇಲೆ ಜ್ಯೇಷ್ಠ-ಕನಿಷ್ಠಾದಿ ದೇವರರಿಂದಲಾಗಲೀ ಅಥವಾ ಪತಿಗೆ ಜೀವಿಸಿದಾಗ ದಾಸಿಯಲ್ಲಿ ಜನಿಸಿದ ಪುತ್ರನಿಂದಾಗಲೀ ಪುತ್ರನಿರಬಹುದು. ಆದರೆ ಅಂತಹ ಪುತ್ರನಿಗಿಂತಲೂ ಪುತ್ರಿಯೇ ಶ್ರೇಷ್ಠಳಾದವಳು. ಅವಳೇ ತಂದೆಯ ಆಸ್ತಿಯ ಬಹುಭಾಗಕ್ಕೆ ಅರ್ಹಳಾದವಳು.

ದೌಹಿತ್ರಕೇಣ ಧರ್ಮೇಣ ನಾತ್ರ ಪಶ್ಯಾಮಿ ಕಾರಣಮ್ ।
ವಿಕ್ರೀತಾಸು ಚ ಯೇ ಪುತ್ರಾ ಭವಂತಿ ಪಿತುರೇವ ತೇ ॥೧೬॥

ಕನ್ಯಾಶುಲ್ಕವನ್ನು ಪಡೆದು ಪುತ್ರಿಯನ್ನು ವಿವಾಹ ಮಾಡಿಕೊಟ್ಟು ಅವಳಲ್ಲಿ ದೌಹಿತ್ರನನ್ನು ಪಡೆದರೆ ಅವನಿಗೆ ಮಾತಾಮಹನ ಆಸ್ತಿಯಲ್ಲಿ ಭಾಗವು ಇರುವುದಕ್ಕೆ ಯಾವುದೂ ಕಾರಣವಿಲ್ಲ. ವಿಕ್ರೀತಳಾದವಳಲ್ಲಿ ಹುಟ್ಟಿದ ಪುತ್ರನು ಮಾತ್ರ ತಂದೆಗೇ ಸೇರುತ್ತಾರೆ (ಅವರು ತಂದೆಯ ಆಸ್ತಿಗೆ ಪಾಲುದಾರರಾಗುತ್ತಾರೆ).

ಅಸೂಯವಸ್ತ್ವಧರ್ಮಿಷ್ಠಾಃ ಪರಸ್ವಾದಾಯಿನಃ ಶಠಾಃ ।
ಆಸುರಾದಧಿಸಂಭೂತಾ ಧರ್ಮಾದ್ ವಿಷಮವೃತ್ತಯಃ ॥೧೭॥

ಈ ಪ್ರಕರಣದಲ್ಲಿಯೇ ಮಹಾತ್ಮನಾದ ವಿದೇಹರಾಜನಾದ ಜನಕನ ಮೊಮ್ಮಗನಾದ ಸುಕ್ರತುವು ಹೀಗೆ ಮಾತನಾಡಿದನು: ಅಸಜ್ಜನರು ಆಚರಿಸಿದ ರೀತಿಯನ್ನು ಮಾತಿನಿಂದ ಹೇಳುವುದೂ ಯೋಗ್ಯವಲ್ಲ. ಅದು ವಿಮರ್ಶೆಗೂ ಅರ್ಹವಲ್ಲ. ಸಂಶಯ ಮತ್ತು ವಿಮರ್ಶೆಗಳನ್ನು ಸಜ್ಜನರ ಆಚಾರದಲ್ಲಿಯೇ ಮಾಡಬೇಕು.

ಅಸದೇವ ಹಿ ಧರ್ಮಸ್ಯ ಪ್ರಮಾದೋ ಧರ್ಮ ಆಸುರಃ ।
ನಾನುಶುಶ್ರುಮ ಜಾತ್ವೇತಾಮಿಮಾಂ ಪೂರ್ವೇಷು ಜನ್ಮಸು ॥೯॥

ಧರ್ಮದ ವಿಷಯದಲ್ಲಿ ಪ್ರಮಾದವನ್ನು ಮಾಡುವುದು ಅಸುರರ ಸ್ವಭಾವ. ಪೂರ್ವದಲ್ಲಿ ಜನಿಸಿದವರಲ್ಲಿ ಇಂತಹ ವೃತ್ತಾಂತವನ್ನು ನಾವು ಎಂದೂ ಕೇಳಲಿಲ್ಲ.

ಭಾರ್ಯಾಪತ್ಯೋರ್ಹಿ ಸಂಬಂಧಃ ಸ್ತ್ರೀಪುಂಸೋಸ್ತುಲ್ಯ ಏವ ಸಃ ।
ರತಿಃ ಸಾಧಾರಣೋ ಧರ್ಮ ಇತಿ ಚಾಹ ಸ ಪಾರ್ಥಿವಃ ॥೧೦॥

ಪತಿ-ಪತ್ನಿಯರ ಸಂಬಂಧವು ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾದುದು. ರತಿ ಸುಖವು ಇಬ್ಬರಿಗೂ ಸಾಧಾರಣವಾದ ಧರ್ಮ ಎಂದು ಆ ರಾಜನು ಹೇಳಿದನು.

ಯುಧಿಷ್ಠಿರಃ

ಅಥ ಕೇನ ಪ್ರಮಾಣೇನ ಪುಂಸಾಮಾದೀಯತೇ ಧನಮ್ ।
ಪುತ್ರವದ್ಧಿ ಪಿತುಸ್ತಸ್ಯ ಕನ್ಯಾ ಭವಿತುಮರ್ಹತಿ ॥೧೧॥

ಯುಧಿಷ್ಠಿರ– (ಪುತ್ರರಿಲ್ಲದಿರುವಾಗ) ಪಿತೃಧನವು ಹೇಗೆ ಇನ್ನೊಬ್ಬರಿಂದ ತೆಗೆದುಕೊಳ್ಳಲ್ಪಡುತ್ತದೆ. ಆ ತಂದೆಗೆ ಪುತ್ರಿಯೇ ಪುತ್ರನಂತಾಗುತ್ತಾಳಷ್ಟೆ? (ಪುತ್ರರಿಗೆ ಧನವು ತೆಗೆದುಕೊಳ್ಳಲ್ಪಡುವುದಿಲ್ಲವಷ್ಟೆ?)

ಭೀಷ್ಮಃ

ಯಥೈವಾತ್ಮಾ ತಥಾ ಪುತ್ರಃ ಪುತ್ರೇಣ ದುಹಿತಾ ಸಮಾ ।
ತಸ್ಯಾಮಾತ್ಮನಿ ತಿಷ್ಠಂತ್ಯಾಂ ಕಥಮನ್ಯೋ ಧನಂ ಹರೇತ್ ॥೧೨॥

ಭೀಷ್ಮ– ತಾನು ಹೇಗೋ ಹಾಗೆಯೇ ಪುತ್ರನು. ಪುತ್ರಿಯು ಪುತ್ರನಿಗೆ ಸಮಾನಳಾದವಳು. ಅಂತಹ ಆತ್ಮರೂಪಳಾದ ಪುತ್ರಿಯು ಬದುಕಿರುವಾಗ ಅವಳನ್ನು ಬಿಟ್ಟು ಇನ್ನೊಬ್ಬನು ಹೇಗೆ ಪಿತೃಧನವನ್ನು ತೆಗೆದುಕೊಳ್ಳುತ್ತಾನೆ?

ಮಾತುಶ್ಚ ಯೌತಕಂ ಯತ್ ಸ್ಯಾತ್ ಕುಮಾರೀಭಾಗ ಏವ ಸಃ ।
ದೌಹಿತ್ರ ಏವ ವಾ ರಿಕ್ಥಮಪುತ್ರಸ್ಯ ಪಿತುರ್ಹರೇತ್ ॥೧೩॥

ತಾಯಿಗೆ ತವರು ಮನೆಯಿಂದ ಬಂದ ಸಂಪತ್ತು ಏನಿದೆಯೋ ಅದೆಲ್ಲವೂ ಪುತ್ರಿಯ ಭಾಗವೇ. ಪುತ್ರನಿಲ್ಲದಿದ್ದರೆ ಆ ಪುರುಷನ ಆಸ್ತಿಯನ್ನು ದೌಹಿತ್ರನೇ ತೆಗೆದುಕೊಳ್ಳಬೇಕು.

ದದಾತಿ ಹಿ ಸ ಪಿಂಡಂ ವೈ ಪಿತುರ್ಮಾತಾಮಹಸ್ಯ ಚ ।
ಪುತ್ರದೌಹಿತ್ರಯೋರ್ನೇಹ ವಿಶೇಷೋ ಧರ್ಮತಃ ಸ್ಮೃತಃ ॥೧೪॥

ದೌಹಿತ್ರನು ತನ್ನ ತಂದೆಗೂ ಮತ್ತು ಮಾತಾಮಹನಿಗೂ ಪಿಂಡಪ್ರದಾನ ಮಾಡುವನಷ್ಟೆ? ಧರ್ಮದ ದೃಷ್ಟಿಯಿಂದ ಪುತ್ರನಿಗೂ ಮತ್ತು ದೌಹಿತ್ರನಿಗೂ ಯಾವ ವೈಲಕ್ಷಣ್ಯವೂ ಇಲ್ಲ.

ಅನ್ಯತ್ರ ಜಾತಯಾ ಸಾ ಹಿ ಪ್ರಜಯಾ ಪುತ್ರ ಈಹತೇ ।
ದುಹಿತಾಽನ್ಯತ್ರ ಜಾತೇನ ಪುತ್ರೇಣಾಪಿ ವಿಶಿಷ್ಯತೇ ॥೧೫॥

ಪತಿಯು ಮರಣವನ್ನು ಹೊಂದಿದ ಮೇಲೆ ಜ್ಯೇಷ್ಠ-ಕನಿಷ್ಠಾದಿ ದೇವರರಿಂದಲಾಗಲೀ ಅಥವಾ ಪತಿಗೆ ಜೀವಿಸಿದಾಗ ದಾಸಿಯಲ್ಲಿ ಜನಿಸಿದ ಪುತ್ರನಿಂದಾಗಲೀ ಪುತ್ರನಿರಬಹುದು. ಆದರೆ ಅಂತಹ ಪುತ್ರನಿಗಿಂತಲೂ ಪುತ್ರಿಯೇ ಶ್ರೇಷ್ಠಳಾದವಳು. ಅವಳೇ ತಂದೆಯ ಆಸ್ತಿಯ ಬಹುಭಾಗಕ್ಕೆ ಅರ್ಹಳಾದವಳು.

ದೌಹಿತ್ರಕೇಣ ಧರ್ಮೇಣ ನಾತ್ರ ಪಶ್ಯಾಮಿ ಕಾರಣಮ್ ।
ವಿಕ್ರೀತಾಸು ಚ ಯೇ ಪುತ್ರಾ ಭವಂತಿ ಪಿತುರೇವ ತೇ ॥೧೬॥

ಕನ್ಯಾಶುಲ್ಕವನ್ನು ಪಡೆದು ಪುತ್ರಿಯನ್ನು ವಿವಾಹ ಮಾಡಿಕೊಟ್ಟು ಅವಳಲ್ಲಿ ದೌಹಿತ್ರನನ್ನು ಪಡೆದರೆ ಅವನಿಗೆ ಮಾತಾಮಹನ ಆಸ್ತಿಯಲ್ಲಿ ಭಾಗವು ಇರುವುದಕ್ಕೆ ಯಾವುದೂ ಕಾರಣವಿಲ್ಲ. ವಿಕ್ರೀತಳಾದವಳಲ್ಲಿ ಹುಟ್ಟಿದ ಪುತ್ರನು ಮಾತ್ರ ತಂದೆಗೇ ಸೇರುತ್ತಾರೆ (ಅವರು ತಂದೆಯ ಆಸ್ತಿಗೆ ಪಾಲುದಾರರಾಗುತ್ತಾರೆ).

ಅಸೂಯವಸ್ತ್ವಧರ್ಮಿಷ್ಠಾಃ ಪರಸ್ವಾದಾಯಿನಃ ಶಠಾಃ ।
ಆಸುರಾದಧಿಸಂಭೂತಾ ಧರ್ಮಾದ್ ವಿಷಮವೃತ್ತಯಃ ॥೧೭॥

ಅಸೂಯೆಯಿಂದ ತಮ್ಮ ಧರ್ಮವನ್ನು ಮಾಡುವವರು (ಧರ್ಮಿಷ್ಠರ ಮೇಲಿನ ಅಸೂಯೆಯಿಂದ ಅಧರ್ಮವನ್ನು ಮಾಡುವವರು) ಪರಸ್ವತ್ತನ್ನು ಅಪಹರಿಸುವವರು, ಅಹಂಕಾರಿಗಳು, ಆಸುರವಿವಾಹದಿಂದ ಜೀವಿಸಿದವರು ಇವರೆಲ್ಲರೂ ಧರ್ಮಕ್ಕೆ ವಿರುದ್ಧವಾದ ನಡತೆಯುಳ್ಳವರು.

ಅತ್ರ ಗಾಥಾ ಯಮೋದ್ಗೀತಾಃ ಕೀರ್ತಯಂತಿ ಪುರಾವಿದಃ ।
ಧರ್ಮಜ್ಞಾ ಧರ್ಮಶಾಸ್ತ್ರೇಷು ನಿಬದ್ಧಾ ಧರ್ಮಸೇತುಷು ॥೧೮॥

ಈ ವಿಷಯದಲ್ಲಿ ಧರ್ಮಶಾಸ್ತ್ರಗಳನ್ನು ತಿಳಿದವರೂ, ಧರ್ಮದ ಕಟ್ಟುಪಾಡನ್ನು ಅನುಸರಿಸುವವರೂ ಆದ ಪ್ರಾಚೀನರು ಯಮದೇವರು ಹಾಡಿದ ಒಂದು ಗೀತೆಯನ್ನು ಹಾಡುತ್ತಾರೆ.

ಯೋ ಮನುಷ್ಯಃ ಸ್ವಕಂ ಪುತ್ರಂ ವಿಕ್ರೀಯ ಧನಮಿಚ್ಛತಿ ।
ಕನ್ಯಾಂ ವಾ ಜೀವಿತಾರ್ಥಾಯ ಯಃ ಶುಲ್ಕೇನ ಪ್ರಯಚ್ಛತಿ ॥೧೯॥

ಸಪ್ತಾವರೇ ಮಹಾಘೋರೇ ನಿರಯೇ ಕಾಲಸಾಹ್ವಯೇ ।
ಸ್ವೇದಂ ಮೂತ್ರಂ ಪುರೀಷಂ ಚ ತಸ್ಮಿನ್ ಪ್ರೇತ ಉಪಾಶ್ನತೇ ॥೨೦॥

ಯಾವ ಮನುಷ್ಯನು ತನ್ನ ಜೀವನದ ಸಲುವಾಗಿ ಪುತ್ರನನ್ನು ಮಾರಿ ಧನವನ್ನು ಪಡೆಯಲು ಬಯಸುತ್ತಾನೆಯೋ, ಅಥವಾ ಕನ್ಯೆಯನ್ನು ಶುಲ್ಕಕ್ಕಾಗಿ ಕೊಡುತ್ತಾನೆಯೋ ಅವನ ನಂತರದ ಏಳು ತಲೆಮಾರಿನವರು ಮರಣವನ್ನು ಹೊಂದಿದ ಮೇಲೆ ಕಾಲಸೂತ್ರನಾಮಕವಾದ ನರಕದಲ್ಲಿ ಬಿದ್ದು ಅಲ್ಲಿ ಮೂತ್ರ ಮತ್ತು ಮಲಗಳನ್ನು ಭಕ್ಷಿಸುತ್ತಾರೆ.

ಆರ್ಷೇ ಗೋಮಿಥುನಂ ಶುಲ್ಕಂ ಕೇಚಿದಾಹುರ್ಮೃಷೈವ ತತ್ ।
ಅಲ್ಪಂ ವಾ ಬಹು ವಾ ರಾಜನ್ ವಿಕ್ರಯಸ್ತಾವದೇವ ಸಃ ॥೨೧॥

ಆರ್ಷವಿವಾಹದಲ್ಲಿ ಒಂದು ಜೊತೆ ಗೂಳಿಗಳು ಶುಲ್ಕವೆಂದು ಕೆಲವರು ಹೇಳುತ್ತಾರೆ. ಅದು ಸುಳ್ಳು. ಎಲೈ ರಾಜನೇ, ಅಲ್ಪವಾಗಲೀ, ಬಹಳವಾಗಲೀ ಕನ್ಯೆಗೆ ಪ್ರತಿಯಾಗಿ ಏನನ್ನಾದರೂ ತೆಗೆದುಕೊಂಡರೆ ಅದು ವಿಕ್ರಯವೇ ಆಗುತ್ತದೆ.

ಯದ್ಯಪ್ಯಾಚರಿತಃ ಕೈಶ್ಚಿನ್ನೈಷ ಧರ್ಮಃ ಕಥಂಚನ ।
ಅನ್ಯೇಷಾಮಪಿ ದೃಶ್ಯಂತೇ ಲೋಭತಃ ಸಂಪ್ರವೃತ್ತಯಃ ॥೨೨॥

ಯದ್ಯಪಿ ಕೆಲವರು ಅದನ್ನು ಆಚರಿಸುತ್ತಾರೆ. ಆದರೂ ಅದು ಯಾವ ರೀತಿಯಲ್ಲೂ ಧರ್ಮವಲ್ಲ. ಪ್ರಪಂಚದಲ್ಲಿ ಅನೇಕರು ಲೋಭದಿಂದ ಇಂತಹ ಪ್ರವೃತ್ತಿಯನ್ನು ಮಾಡುವುದು ಕಂಡುಬರುತ್ತದೆ.

ವಶ್ಯಾಂ ಕುಮಾರೀಂ ವಿಹಿತಾಂ ಯೇ ಚ ತಾಮುಪಭುಂಜತೇ ।
ಏತೇ ಪಾಪಸ್ಯ ಕರ್ತಾರಸ್ತಮಸ್ಯಂಧೇऽಥ ಶೇರತೇ ॥೨೩॥

ಇನ್ನೊಬ್ಬನಿಗೆ ಸಂಕಲ್ಪಿಸಿದ ಕುಮಾರಿಯನ್ನು ಬಲಾತ್ಕಾರದಿಂದ ವಶಪಡಿಸಿಕೊಂಡು ಅವಳನ್ನು ಭೋಗಿಸುವವರು ಪಾಪಿಷ್ಠರು. ಅವರು ಅಂಧತಮಸ್ಸಿನಲ್ಲಿ ಮಲಗುತ್ತಾರೆ.

ಅನ್ಯೋऽಪ್ಯಥ ನ ವಿಕ್ರೇಯೋ ಮನುಷ್ಯಃ ಕಿಂ ಪುನಃ ಪ್ರಜಾಃ ।
ಅಧರ್ಮಮೂಲೈರ್ಹಿ ಧನೈರ್ನ ತೈರರ್ಥೋऽಸ್ತಿ ಕಶ್ಚನ ॥೨೪॥

ಯಾವ ಮನುಷ್ಯನನ್ನೂ ವಿಕ್ರಯ ಮಾಡಬಾರದು. ಇನ್ನು ಪ್ರಜೆಗಳನ್ನು ಮಾರುವುದು ಹೇಗೆ? ಅಧರ್ಮದಿಂದ ಗಳಿಸಿದ ಧನದಿಂದ ಯಾವ ಪುರುಷಾರ್ಥವೂ ಉಂಟಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕನ್ಯಾದಾನಧರ್ಮಕಥನಂ ನಾಮ
ಪಂಚಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತಾರನೆಯ ಅಧ್ಯಾಯ

ಸ್ತ್ರೀಯರ ಪ್ರಶಂಸೆ.

ಭೀಷ್ಮಃ

ಪ್ರಾಚೇತಸಸ್ಯ ವಚನಂ ಕೀರ್ತಯಂತಿ ಪುರಾವಿದಃ ।
ಯಸ್ಯಾಃ ಕಿಂಚಿನ್ನಾದದತೇ ಜ್ಞಾತಯೋ ನ ಸ ವಿಕ್ರಯಃ ॥೧॥

ಭೀಷ್ಮ– ಪುರಾಣಗಳನ್ನು ತಿಳಿದವರು ಪ್ರಾಚೇತಸನಾದ ದಕ್ಷನ ಮಾತನ್ನು ಉದಾಹರಿಸುತ್ತಾರೆ. ಕನ್ಯೆಗೆ ಬಂದ ಧನ, ಉಡುಗೊರೆಗಳೆಲ್ಲವನ್ನೂ ಜ್ಞಾತಿಗಳು ತೆಗೆದುಕೊಳ್ಳದಿದ್ದರೆ ಅದು ವಿಕ್ರಯವೆನಿಸುವುದಿಲ್ಲ.

ಅರ್ಹಣಂ ತತ್ಕುಮಾರೀಣಾಮಾನೃಶಂಸ್ಯತಮಂ ಚ ತತ್ ।
ಸರ್ವಂ ಚ ಪ್ರತಿದೇಯಂ ಸ್ಯಾತ್ ಕನ್ಯಾಯೈ ತದಶೇಷತಃ ॥೨॥

ಅದು ಕುಮಾರಿಯರಿಗೆ ಮಾಡಬೇಕಾದ ಕರುಣಾಮಯವಾದ ಪೂಜೆ. ವಿವಾಹದಲ್ಲಿ ಬಂದುದೆಲ್ಲವನ್ನೂ ಸಂಪೂರ್ಣವಾಗಿ ಕನ್ಯೆಗೆ ಕೊಡಬೇಕು.

ಪಿತೃಭಿರ್ಭ್ರಾತೃಭಿಶ್ಚೈವ ಶ್ವಶುರೈರಥ ದೇವರೈಃ ।
ಪೂಜ್ಯಾ ಲಾಲಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ ॥೩॥

ಬಹಳ ಕಲ್ಯಾಣವನ್ನು ಬಯಸುವ ತಂದೆ, ಸಹೋದರರು, ಮಾವ, ಮೈದುನರು ಎಲ್ಲರೂ ಅವಳನ್ನು ಲಾಲಿಸಿ ಪೂಜಿಸಬೇಕು.

ಯದಿ ವೈ ಸ್ತ್ರೀ ನ ರೋಚೇತ ಪುಮಾಂಸಂ ನ ಪ್ರಮೋದಯೇತ್ ।
ಅಮೋದನಾತ್ ಪುನಃ ಪುಂಸಃ ಪ್ರಜನಂ ನ ಪ್ರವರ್ಧತೇ ॥೪॥

ಸ್ತ್ರೀಯು ಸಂತೋಷದಿಂದಿಲ್ಲದಿದ್ದರೆ ಪುರುಷನಿಗೆ ಸಂತೋಷವನ್ನು ಕೊಡುವುದಿಲ್ಲ. ಪುರುಷನು ಸಂತೋಷದಿಂದಿಲ್ಲದಿದ್ದರೆ ಪುನಃ ಸಂತತಿಯು ಪ್ರವೃದ್ಧಿಯನ್ನು ಹೊಂದುವುದಿಲ್ಲ.

ಪೂಜ್ಯಾ ಲಾಲಯಿತವ್ಯಾಶ್ಚ ಸ್ತ್ರಿಯೋ ನಿತ್ಯಂ ಜನಾಧಿಪ ।
ಅಪೂಜಿತಾಶ್ಚ ಯತ್ರೈತಾಃ ಸರ್ವಾಸ್ತತ್ರಾಫಲಾಃ ಕ್ರಿಯಾಃ ।
ತದೈವ ತತ್ಕುಲಂ ನಾಸ್ತಿ ಯದಾ ಶೋಚಂತಿ ಜಾಮಯಃ ॥೫॥

ಎಲೈ ಜನಾಧಿಪನೇ, ಸ್ತ್ರೀಯರು ಯಾವಾಗಲೂ ಪೂಜನೀಯರು ಮತ್ತು ಲಾಲನೀಯರು. ಎಲ್ಲಿ ಸ್ತ್ರೀಯರಿಗೆ ಗೌರವವಿಲ್ಲವೋ ಅಲ್ಲಿ ಮಾಡಿದ ಎಲ್ಲ ಕ್ರಿಯೆಗಳೂ ವ್ಯರ್ಥವಾಗುತ್ತವೆ. ಸೊಸೆಯರು ಶೋಕಪಟ್ಟರೆ ಆಗಲೇ ಆ ಕುಲವು ನಾಶವನ್ನು ಹೊಂದುತ್ತದೆ.

ಜಾಮೀಶಪ್ತಾನಿ ಗೇಹಾನಿ ನಿಕೃತ್ತಾನೀವ ಕೃತ್ಯಯಾ ।
ನೈವ ಭಾಂತಿ ನ ವರ್ಧಂತೇ ಶ್ರಿಯಾ ಹೀನಾನಿ ಪಾರ್ಥಿವ ॥೬॥

ಎಲೈ ರಾಜನೇ, ಸೊಸೆಯರ ಶಾಪಕ್ಕೆ ಒಳಗಾದ ಕುಲಗಳು ಪಿಶಾಚಿಯಿಂದ ಸಂಹರಿಸಲ್ಪಟ್ಟಂತೆ ಪ್ರಕಾಶಿಸುವುದಿಲ್ಲ, ಅಭಿವೃದ್ಧಿಯನ್ನು ಹೊಂದುವುದಿಲ್ಲ, ಸಂಪತ್ತಿನಿಂದಲೂ ರಹಿತವಾಗುತ್ತವೆ.

ಸ್ತ್ರಿಯಃ ಪುಂಸಾಂ ಪರಿದದೇ ಮನುರ್ದಿಗಮಿಷುರ್ದಿವಮ್ ।
ಅಬಲಾಃ ಸ್ವಲ್ಪಕೌಪೀನಾಃ ಸುಹೃದಃ ಸತ್ಯಜಿಷ್ಣವಃ ॥೭॥

ಮನುವು ಸ್ವರ್ಗಕ್ಕೆ ಹೋಗಲು ಬಯಸಿ ಪುರುಷರಿಗೆ ಸ್ತ್ರೀಯರನ್ನು ಕೊಟ್ಟನು. ಅವರು ಅಬಲೆಯರು, ಸ್ವಲ್ಪ ಕೆಟ್ಟಕಾರ್ಯವನ್ನು ಮಾಡುವವರು (ಅಲ್ಪ ವಸ್ತ್ರಗಳಿಂದಲೂ ತೃಪ್ತರಾಗುವವರು), ಸ್ನೇಹಮಯರಾದವರು, ಸತ್ಯದಿಂದ ಜಯಿಸುವವರು.

ಈರ್ಷ್ಯವೋ ಮಾನಕಾಮಾಶ್ಚ ಚಂಡಾ ಅಸುಹೃದೋಽಬುಧಾಃ ।
ಸ್ತ್ರಿಯೋ ಮಾನನಮರ್ಹಂತಿ ತಾ ಮಾನಯತ ಮಾನವಾಃ ॥೮॥

ಕೆಲವರು ಅಸೂಯಾಪರರು, ಸಮ್ಮಾನವನ್ನು ಬಯಸುವವರು, ಹಠ ಸ್ವಭಾವದವರು, ಸ್ನೇಹವಿಲ್ಲದವರು, ಮೂಢರೂ ಆಗಿರುತ್ತಾರೆ. ಆದರೂ ಅವರು ಸಮ್ಮಾನಕ್ಕೆ ಅರ್ಹರಾದವರು. ಎಲೈ ಮಾನವರೇ, ಅವರನ್ನು ಸಮ್ಮಾನಿಸಿ.

ಸ್ತ್ರೀಪ್ರತ್ಯಯೋ ಹಿ ವೋ ಧರ್ಮೋ ರತಿಭೋಗಾಶ್ಚ ಕೇವಲಾಃ ।
ಪರಿಚರ್ಯಾನ್ನಸಂಸ್ಕಾರಾಸ್ತದಾಯತ್ತಾ ಭವಂತು ವಃ ॥೯॥

ನಿಮ್ಮ ಧರ್ಮ ಮತ್ತು ರತಿಭೋಗಗಳೆಲ್ಲವೂ ಸ್ತ್ರೀಯರ ಜ್ಞಾನ ಮತ್ತು ಶ್ರದ್ಧೆಯನ್ನು ಅವಲಂಬಿಸಿವೆ. ನಿಮ್ಮ ಪರಿಚರ್ಯೆ ಅನ್ನಸಂಸ್ಕಾರ ಎಲ್ಲವೂ ಅವರಿಗೆ ಅಧೀನವಾಗಿರಲಿ.

ಉತ್ಪಾದನಮಪತ್ಯಸ್ಯ ಜಾತಸ್ಯ ಪರಿಪಾಲನಮ್ ।
ಪ್ರೀತ್ಯರ್ಥಂ ಲೋಕಯಾತ್ರಾ ಚ ಪಶ್ಯತ ಸ್ತ್ರೀನಿಬಲಂಧನಮ್ ॥೧೦॥

ಮಕ್ಕಳನ್ನು ಪಡೆಯುವುದು, ಹುಟ್ಟಿದ ಮಕ್ಕಳನ್ನು ಪಾಲಿಸುವುದು, ಸಂತೋಷದಿಂದ ಸಮಾಜದಲ್ಲಿ ಪಾಲ್ಗೊಳ್ಳುವುದು ಎಲ್ಲವೂ ಸ್ತ್ರೀಯ ಅಧೀನವಾಗಿದೆ ಎಂಬುದನ್ನು ನೋಡಿ.

ಭೀಷ್ಮ– ಪುರಾಣಗಳನ್ನು ತಿಳಿದವರು ಪ್ರಾಚೇತಸನಾದ ದಕ್ಷನ ಮಾತನ್ನು ಉದಾಹರಿಸುತ್ತಾರೆ. ಕನ್ಯೆಗೆ ಬಂದ ಧನ, ಉಡುಗೊರೆಗಳೆಲ್ಲವನ್ನೂ ಜ್ಞಾತಿಗಳು ತೆಗೆದುಕೊಳ್ಳದಿದ್ದರೆ ಅದು ವಿಕ್ರಯವೆನಿಸುವುದಿಲ್ಲ.

ಅರ್ಹಣಂ ತತ್ಕುಮಾರೀಣಾಮಾನೃಶಂಸ್ಯತಮಂ ಚ ತತ್ ।
ಸರ್ವಂ ಚ ಪ್ರತಿದೇಯಂ ಸ್ಯಾತ್ ಕನ್ಯಾಯೈ ತದಶೇಷತಃ ॥೨॥

ಅದು ಕುಮಾರಿಯರಿಗೆ ಮಾಡಬೇಕಾದ ಕರುಣಾಮಯವಾದ ಪೂಜೆ. ವಿವಾಹದಲ್ಲಿ ಬಂದುದೆಲ್ಲವನ್ನೂ ಸಂಪೂರ್ಣವಾಗಿ ಕನ್ಯೆಗೆ ಕೊಡಬೇಕು.

ಪಿತೃಭಿರ್ಭ್ರಾತೃಭಿಶ್ಚೈವ ಶ್ವಶುರೈರಥ ದೇವರೈಃ ।
ಪೂಜ್ಯಾ ಲಾಲಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ ॥೩॥

ಬಹಳ ಕಲ್ಯಾಣವನ್ನು ಬಯಸುವ ತಂದೆ, ಸಹೋದರರು, ಮಾವ, ಮೈದುನರು ಎಲ್ಲರೂ ಅವಳನ್ನು ಲಾಲಿಸಿ ಪೂಜಿಸಬೇಕು.

ಯದಿ ವೈ ಸ್ತ್ರೀ ನ ರೋಚೇತ ಪುಮಾಂಸಂ ನ ಪ್ರಮೋದಯೇತ್ ।
ಅಮೋದನಾತ್ ಪುನಃ ಪುಂಸಃ ಪ್ರಜನಂ ನ ಪ್ರವರ್ಧತೇ ॥೪॥

ಸ್ತ್ರೀಯು ಸಂತೋಷದಿಂದಿಲ್ಲದಿದ್ದರೆ ಪುರುಷನಿಗೆ ಸಂತೋಷವನ್ನು ಕೊಡುವುದಿಲ್ಲ. ಪುರುಷನು ಸಂತೋಷದಿಂದಿಲ್ಲದಿದ್ದರೆ ಪುನಃ ಸಂತತಿಯು ಪ್ರವೃದ್ಧಿಯನ್ನು ಹೊಂದುವುದಿಲ್ಲ.

ಪೂಜ್ಯಾ ಲಾಲಯಿತವ್ಯಾಶ್ಚ ಸ್ತ್ರಿಯೋ ನಿತ್ಯಂ ಜನಾಧಿಪ ।
ಅಪೂಜಿತಾಶ್ಚ ಯತ್ರೈತಾಃ ಸರ್ವಾಸ್ತತ್ರಾಫಲಾಃ ಕ್ರಿಯಾಃ ।
ತದೈವ ತತ್ಕುಲಂ ನಾಸ್ತಿ ಯದಾ ಶೋಚಂತಿ ಜಾಮಯಃ ॥೫॥

ಎಲೈ ಜನಾಧಿಪನೇ, ಸ್ತ್ರೀಯರು ಯಾವಾಗಲೂ ಪೂಜನೀಯರು ಮತ್ತು ಲಾಲನೀಯರು. ಎಲ್ಲಿ ಸ್ತ್ರೀಯರಿಗೆ ಗೌರವವಿಲ್ಲವೋ ಅಲ್ಲಿ ಮಾಡಿದ ಎಲ್ಲ ಕ್ರಿಯೆಗಳೂ ವ್ಯರ್ಥವಾಗುತ್ತವೆ. ಸೊಸೆಯರು ಶೋಕಪಟ್ಟರೆ ಆಗಲೇ ಆ ಕುಲವು ನಾಶವನ್ನು ಹೊಂದುತ್ತದೆ.

ಜಾಮೀಶಪ್ತಾನಿ ಗೇಹಾನಿ ನಿಕೃತ್ತಾನೀವ ಕೃತ್ಯಯಾ ।
ನೈವ ಭಾಂತಿ ನ ವರ್ಧಂತೇ ಶ್ರಿಯಾ ಹೀನಾನಿ ಪಾರ್ಥಿವ ॥೬॥

ಎಲೈ ರಾಜನೇ, ಸೊಸೆಯರ ಶಾಪಕ್ಕೆ ಒಳಗಾದ ಕುಲಗಳು ಪಿಶಾಚಿಯಿಂದ ಸಂಹರಿಸಲ್ಪಟ್ಟಂತೆ ಪ್ರಕಾಶಿಸುವುದಿಲ್ಲ, ಅಭಿವೃದ್ಧಿಯನ್ನು ಹೊಂದುವುದಿಲ್ಲ, ಸಂಪತ್ತಿನಿಂದಲೂ ರಹಿತವಾಗುತ್ತವೆ.

ಸ್ತ್ರಿಯಃ ಪುಂಸಾಂ ಪರಿದದೇ ಮನುರ್ದಿಗಮಿಷುರ್ದಿವಮ್ ।
ಅಬಲಾಃ ಸ್ವಲ್ಪಕೌಪೀನಾಃ ಸುಹೃದಃ ಸತ್ಯಜಿಷ್ಣವಃ ॥೭॥

ಮನುವು ಸ್ವರ್ಗಕ್ಕೆ ಹೋಗಲು ಬಯಸಿ ಪುರುಷರಿಗೆ ಸ್ತ್ರೀಯರನ್ನು ಕೊಟ್ಟನು. ಅವರು ಅಬಲೆಯರು, ಸ್ವಲ್ಪ ಕೆಟ್ಟಕಾರ್ಯವನ್ನು ಮಾಡುವವರು (ಅಲ್ಪ ವಸ್ತ್ರಗಳಿಂದಲೂ ತೃಪ್ತರಾಗುವವರು), ಸ್ನೇಹಮಯರಾದವರು, ಸತ್ಯದಿಂದ ಜಯಿಸುವವರು.

ಈರ್ಷ್ಯವೋ ಮಾನಕಾಮಾಶ್ಚ ಚಂಡಾ ಅಸುಹೃದೋಽಬುಧಾಃ ।
ಸ್ತ್ರಿಯೋ ಮಾನನಮರ್ಹಂತಿ ತಾ ಮಾನಯತ ಮಾನವಾಃ ॥೮॥

ಕೆಲವರು ಅಸೂಯಾಪರರು, ಸಮ್ಮಾನವನ್ನು ಬಯಸುವವರು, ಹಠ ಸ್ವಭಾವದವರು, ಸ್ನೇಹವಿಲ್ಲದವರು, ಮೂಢರೂ ಆಗಿರುತ್ತಾರೆ. ಆದರೂ ಅವರು ಸಮ್ಮಾನಕ್ಕೆ ಅರ್ಹರಾದವರು. ಎಲೈ ಮಾನವರೇ, ಅವರನ್ನು ಸಮ್ಮಾನಿಸಿ.

ಸ್ತ್ರೀಪ್ರತ್ಯಯೋ ಹಿ ವೋ ಧರ್ಮೋ ರತಿಭೋಗಾಶ್ಚ ಕೇವಲಾಃ ।
ಪರಿಚರ್ಯಾನ್ನಸಂಸ್ಕಾರಾಸ್ತದಾಯತ್ತಾ ಭವಂತು ವಃ ॥೯॥

ನಿಮ್ಮ ಧರ್ಮ ಮತ್ತು ರತಿಭೋಗಗಳೆಲ್ಲವೂ ಸ್ತ್ರೀಯರ ಜ್ಞಾನ ಮತ್ತು ಶ್ರದ್ಧೆಯನ್ನು ಅವಲಂಬಿಸಿವೆ. ನಿಮ್ಮ ಪರಿಚರ್ಯೆ ಅನ್ನಸಂಸ್ಕಾರ ಎಲ್ಲವೂ ಅವರಿಗೆ ಅಧೀನವಾಗಿರಲಿ.

ಉತ್ಪಾದನಮಪತ್ಯಸ್ಯ ಜಾತಸ್ಯ ಪರಿಪಾಲನಮ್ ।
ಪ್ರೀತ್ಯರ್ಥಂ ಲೋಕಯಾತ್ರಾ ಚ ಪಶ್ಯತ ಸ್ತ್ರೀನಿಬಲಂಧನಮ್ ॥೧೦॥

ಮಕ್ಕಳನ್ನು ಪಡೆಯುವುದು, ಹುಟ್ಟಿದ ಮಕ್ಕಳನ್ನು ಪಾಲಿಸುವುದು, ಸಂತೋಷದಿಂದ ಸಮಾಜದಲ್ಲಿ ಪಾಲ್ಗೊಳ್ಳುವುದು ಎಲ್ಲವೂ ಸ್ತ್ರೀಯ ಅಧೀನವಾಗಿದೆ ಎಂಬುದನ್ನು ನೋಡಿ.

ಸಮ್ಮಾನ್ಯಮಾನಾಶ್ಚೈತಾಭಿಃ ಸರ್ವಕಾರ್ಯಾಣ್ಯವಾಪ್ಸ್ಯಥ ।
ವಿದೇಹರಾಜದುಹಿತಾ ಚಾತ್ರ ಶ್ಲೋಕಮಗಾಯತ ॥೧೧॥

ಅವರಿಂದ ನೀವು ಸಮ್ಮಾನಿಸಲ್ಪಟ್ಟರೆ ಎಲ್ಲ ಕಾರ್ಯಗಳಲ್ಲಿಯೂ ಸಫಲರಾಗುತ್ತೀರಿ. ವಿದೇಹರಾಜಕುಮಾರಿಯು ಈ ವಿಷಯದಲ್ಲಿ ಒಂದು ಶ್ಲೋಕವನ್ನು ಹಾಡಿದಳು.

ನಾಸ್ತಿ ಯಜ್ಞಃ ಸ್ತ್ರಿಯಃ ಕಶ್ಚಿನ್ನ ಶ್ರಾದ್ಧಂ ನೋಪವಾಸಕಮ್ ।
ಧರ್ಮಸ್ತು ಭರ್ತೃಶುಶ್ರೂಷಾ ತಯಾ ಸ್ವರ್ಗಂ ಜಯತ್ಯುತ ॥೧೨॥

ಸ್ತ್ರೀಯರಿಗೆ ಯಾವ ಯಜ್ಞವೂ ಇಲ್ಲ. ಶ್ರಾದ್ಧ ಮತ್ತು ಉಪವಾಸಗಳು ಹೇಳಲ್ಪಡುವುದಿಲ್ಲ. ಭರ್ತೃಸೇವೆಯೊಂದೇ ಧರ್ಮ. ಅದರಿಂದ ಅವರು ಸ್ವರ್ಗವನ್ನು ಜಯಿಸುತ್ತಾರೆ.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ಪುತ್ರಾಸ್ತು ಸ್ಥವಿರೀಭಾವೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥೧೩॥

ಬಾಲ್ಯದಲ್ಲಿ ತಂದೆಯು ರಕ್ಷಿಸುತ್ತಾನೆ. ಯೌವನದಲ್ಲಿ ಪತಿಯು ರಕ್ಷಿಸುತ್ತಾನೆ. ಮುಪ್ಪಿನಲ್ಲಿ ಪುತ್ರರು ರಕ್ಷಿಸುತ್ತಾರೆ. ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ (ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳುವುದಕ್ಕೆ ಅರ್ಹಳಲ್ಲ. ಅದು ಸಮಾಜಕ್ಕೆ ಒಂದು ಅಪಶಕುನ).

ಶ್ರಿಯ ಏತಾಃ ಸ್ತ್ರಿಯೋ ನಾಮ ಸತ್ಕಾರ್ಯಾ ಭೂತಿಮಿಚ್ಛತಾ ।
ಲಾಲಿತಾ ನಿಗೃಹೀತಾ ಚ ಸ್ತ್ರೀ ಶ್ರೀರ್ಭವತಿ ಭಾರತ ॥೧೪॥

ಈ ಸ್ತ್ರೀಯರು ಲಕ್ಷ್ಮಿಯರೇ. ಸಂಪತ್ತನ್ನು ಬಯಸುವವನು ಅವರನ್ನು ಸತ್ಕರಿಸಬೇಕು. ಎಲೈ ಭಾರತನೇ, ಲಾಲಿತರಾಗಿ ಸ್ವಲ್ಪ ನಿಬಂಧನೆಯಲ್ಲೂ ಇಡಲ್ಪಟ್ಟ ಸ್ತ್ರೀಯು ಮನೆಗೆ ಲಕ್ಷ್ಮಿಯೇ ಆಗುತ್ತಾಳೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಸ್ತ್ರೀಪ್ರಶಂಸನಂ ನಾಮ ಸಪ್ತಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೇಳನೆಯ ಅಧ್ಯಾಯ

ತಂದೆಯ ಆಸ್ತಿವಿಭಾಗ.

ಯುಧಿಷ್ಠಿರಃ

ಅತೀವಸಂಶಯಚ್ಛೇತ್ತಾ ಭವಾನ್ ವೈ ಪ್ರಥಿತಃ ಕ್ಷಿತೌ ।
ಕಶ್ಚಿತ್ತು ಸಂಶಯೋ ಮೇಽಸ್ತಿ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ನನ್ನ ಮನಸ್ಸಿನಲ್ಲಿ ಒಂದು ಸಂಶಯವಿದೆ. ಅದನ್ನು ಪರಿಹರಿಸು. ಇಂತಹ ಕಷ್ಟವಾದ ಆಪತ್ಕಾಲದಲ್ಲಿ ನಾವು ಯಾರನ್ನು ಕೇಳೋಣ.

ಅಸ್ಯಾಮಾಪದಿ ಕಷ್ಟಾಯಾಮನ್ಯಂ ಪೃಚ್ಛಾಮ ಕಂ ವಯಮ್ ।
ಸರ್ವಶಾಸ್ತ್ರವಿಧಾನಜ್ಞ ಸಂಶಯಂ ಛಿಂಧಿ ತಾತ ಮೇ ॥೨॥

ಸರ್ವಶಾಸ್ತ್ರವಿಧಿಯನ್ನು ತಿಳಿದವನೇ, ಪ್ರೀತಿಪಾತ್ರನೇ, ನನ್ನ ಸಂಶಯವನ್ನು ಪರಿಹರಿಸು. ಈ ಭೂಮಿಯಲ್ಲಿ ಸಂಶಯವನ್ನು ಪರಿಹರಿಸುವವನೆಂದು ಪ್ರಖ್ಯಾತನಾಗಿದ್ದೀಯೆ.

ಯಥಾ ನರೇಣ ಕರ್ತವ್ಯಂ ಯಶ್ಚ ಧರ್ಮಃ ಸನಾತನಃ ।
ಏತತ್ಸರ್ವಂ ಮಹಾಬಾಹೋ ಭವಾನ್ ವ್ಯಾಖ್ಯಾತುಮರ್ಹತಿ ॥೩॥

ಎಲೈ ಮಹಾಬಾಹುವೇ, ಮನುಷ್ಯನ ಕರ್ತವ್ಯವೇನು? ಸನಾತನ ಧರ್ಮ ಯಾವುದು? ಇವೆಲ್ಲವನ್ನೂ ನೀನು ಸರಿಯಾಗಿ ಹೇಳಬಲ್ಲೆ.

ಚತಸ್ರೋ ವಿಹಿತಾ ಭಾರ್ಯಾ ಬ್ರಾಹ್ಮಣಸ್ಯ ಪಿತಾಮಹ ।
ಬ್ರಾಹ್ಮಣೀ ಕ್ಷತ್ರಿಯಾ ವೈಶ್ಯಾ ಶೂದ್ರಾ ಚ ರತಿಮಿಚ್ಛತಃ ॥೪॥

ಎಲೈ ಪಿತಾಮಹನೇ, ಬ್ರಾಹ್ಮಣನಿಗೆ ನಾಲ್ಕು ಭಾರ್ಯೆಯರು ಹೇಳಲ್ಪಟ್ಟಿದ್ದಾರೆ. ಅವರು ಬ್ರಾಹ್ಮಣೀ, ಕ್ಷತ್ರಿಯಾ ಮತ್ತು ವೈಶ್ಯಾ. ರತಿಯನ್ನು ಬಯಸುವವನಿಗೆ ಶೂದ್ರಳೂ ಆಗಬಹುದು.

ತತ್ರ ಜಾತೇಷು ಪುತ್ರೇಷು ಸರ್ವಾಸಾಂ ಕುರುಸತ್ತಮ ।
ಆನುಪೂರ್ವ್ಯೇಣ ಕಸ್ತೇಷಾಂ ಪಿತ್ರ್ಯಂ ದಾಯಾದ್ಯಮರ್ಹತಿ ॥೫॥

ಎಲೈ ಕುರುಶ್ರೇಷ್ಠನೇ, ಅವರಲ್ಲಿ ಜನಿಸಿದ ಎಲ್ಲ ಪುತ್ರರಲ್ಲಿ ಕ್ರಮವಾಗಿ ಯಾರು ತಂದೆಯ ಆಸ್ತಿಯಲ್ಲಿ ಎಷ್ಟು ಭಾಗಕ್ಕೆ ಅಧಿಕಾರಿಗಳಾಗುತ್ತಾರೆ?

ಕೇನ ವಾ ಕಿಂ ತತೋ ಹಾರ್ಯಂ ಪಿತೃವಿತ್ತಾತ್ ಪಿತಾಮಹ ।
ಏತದಿಚ್ಛಾಮಿ ಕಥಿತಂ ವಿಭಾಗಸ್ತೇಷು ಯಃ ಸ್ಮೃತಃ ॥೬॥

ಎಲೈ ಪಿತಾಮಹನೇ, ಯಾವನು ಪಿತೃಧನದ ಎಷ್ಟು ಭಾಗವನ್ನು ತೆಗೆದುಕೊಳ್ಳಬೇಕು? ಈ ಆಸ್ತಿವಿಭಾಗವನ್ನು ನಿನ್ನಿಂದ ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಸ್ತ್ರಯೋ ವರ್ಣಾ ದ್ವಿಜಾತಯಃ ।
ಏತೇಷು ವಿಹಿತೋ ಧರ್ಮೋ ಬ್ರಾಹ್ಮಣಸ್ಯ ಯುಧಿಷ್ಠಿರ ॥೭॥

ಭೀಷ್ಮ– ಎಲೈ ಯುಧಿಷ್ಠಿರನೇ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ವರ್ಣಗಳೂ ದ್ವಿಜ ಎನಿಸಿಕೊಳ್ಳುತ್ತವೆ. ಬ್ರಾಹ್ಮಣನಿಗೆ ವಿಶೇಷವಾದ ಧರ್ಮಗಳು ವಿಧಿಸಲ್ಪಡುತ್ತವೆ.

ವೈಷಮ್ಯಾದಥ ವಾ ಲೋಭಾತ್ ಕಾಮಾದ್ ವಾಪಿ ಪರಂತಪ ।
ಬ್ರಾಹ್ಮಣಸ್ಯ ಭವೇಚ್ಛೂದ್ರಾ ನ ತು ದೃಷ್ಟಾಂತತಃ ಸ್ಮೃತಾ ॥೮॥

ಎಲೈ ಪರಂತಪನೇ, ಮನಸ್ತಾಪದಿಂದಲೋ ಅಥವಾ ಲೋಭದಿಂದಲೋ ಅಥವಾ ಕಾಮದಿಂದಲೋ ಬ್ರಾಹ್ಮಣರಿಗೆ ಶೂದ್ರಳು ಭಾರ್ಯೆಯಾಗಬಹುದು. ಆದರೆ ಹಿಂದಿನಿಂದಲೂ ಅಂತಹ ಉದಾಹರಣೆಗಳಿಲ್ಲ.

ಶೂದ್ರಾಂ ಶಯನಮಾರೋಪ್ಯ ಬ್ರಾಹ್ಮಣಃ ಪೀಡಿತೋ ಭವೇತ್ ।
ಪ್ರಾಯಶ್ಚಿತ್ತೀಯತೇ ಚಾಪಿ ವಿಧಿದೃಷ್ಟೇನ ಹೇತುನಾ ॥೯॥

ಶೂದ್ರಳನ್ನು ಶಯನದಲ್ಲಿ ಕರೆದುಕೊಂಡರೆ ಬ್ರಾಹ್ಮಣನಿಗೆ ಧರ್ಮಪೀಡೆಯುಂಟಾಗಿ ಅಧೋಗತಿಯನ್ನು ಹೊಂದುತ್ತಾನೆ. ಆ ಕಾರಣದಿಂದ ಶಾಸ್ತ್ರವು ಹೇಳಿದಂತೆ ಅವನಿಗೆ ಪ್ರಾಯಶ್ಚಿತ್ತವು ವಿಧಿಸಲ್ಪಡುತ್ತದೆ.

ತತ್ರ ಜಾತೇಷ್ವಪತ್ಯೇಷು ದ್ವಿಗುಣಂ ಸ್ಯಾದ್ ಯುಧಿಷ್ಠಿರ ।
ಅತಸ್ತೇ ನಿಯಮಂ ವಿತ್ತೇ ಸಂಪ್ರವಕ್ಷ್ಯಾಮಿ ಭಾರತ ॥೧೦॥

ಎಲೈ ಯುಧಿಷ್ಠಿರನೇ, ಅವಳಲ್ಲಿ ಮಕ್ಕಳನ್ನು ಪಡೆದರೆ ಅದರ ಎರಡರಷ್ಟು ಪ್ರಾಯಶ್ಚಿತ್ತವು ಹೇಳಲ್ಪಡುತ್ತದೆ. ಆದ್ದರಿಂದ ಪಿತೃಧನದಲ್ಲಿ ಭಾಗ ಮಾಡಬೇಕಾದ ನಿಯಮವನ್ನು ನಾನು ಹೇಳುತ್ತೇನೆ.

ಲಕ್ಷಣ್ಯೋ ಗೋವೃಷೋ ಯಾನಂ ಯತ್‌ಪ್ರಧಾನತಮಂ ಭವೇತ್ ।
ಬ್ರಾಹ್ಮಣ್ಯಾಸ್ತದ್ಧರೇತ್ ಪುತ್ರ ಏಕಾಂಶಂ ವೈ ಪಿತುರ್ಧನಾತ್ ॥೧೧॥

ಶ್ರೇಷ್ಠವಾದ ಪದಾರ್ಥಗಳು, ಎತ್ತು, ಯಾನ, ಪ್ರಧಾನವಾದ ವಸ್ತುಗಳು ಎಲ್ಲವನ್ನೂ ಒಟ್ಟುಮಾಡಿ ಆ ಪಿತೃಧನದಲ್ಲಿ ಅರ್ಧಭಾಗವನ್ನು ಬ್ರಾಹ್ಮಣಿಯ ಪುತ್ರನು ತೆಗೆದುಕೊಳ್ಳಬೇಕು.

ಶೇಷಂ ತು ದಶಧಾ ಕಾರ್ಯಂ ಬ್ರಾಹ್ಮಣಸ್ವಂ ಯುಧಿಷ್ಠಿರ ।
ತತ್ರ ತೇನೈವ ಹರ್ತವ್ಯಾಶ್ಚತ್ವಾರೋಽಂಶಾಃ ಪಿತುರ್ಧನಾತ್ ॥೧೨॥

ಎಲೈ ಯುಧಿಷ್ಠಿರನೇ, ಉಳಿದ ಪಿತೃಧನವನ್ನು ಹತ್ತುಭಾಗವನ್ನಾಗಿ ಮಾಡಬೇಕು. ಅದರಲ್ಲಿ ಆ ಬ್ರಾಹ್ಮಣಿಯ ಪುತ್ರನೇ ನಾಲ್ಕು ಭಾಗಗಳನ್ನು ತೆಗೆದುಕೊಳ್ಳಬೇಕು.

ಕ್ಷತ್ರಿಯಾಯಾಸ್ತು ಯಃ ಪುತ್ರೋ ಬ್ರಾಹ್ಮಣಃ ಸೋಽಪ್ಯಸಂಶಯಃ ।
ಸ ತು ಮಾತೃವಿಶೇಷೇಣ ತ್ರೀನಂಶಾನ್ ಹರ್ತುಮರ್ಹತಿ ॥೧೩॥

ಕ್ಷತ್ರಿಯ ಸ್ತ್ರೀಯಲ್ಲಿ ಜನಿಸಿದ ಪುತ್ರನೂ ಬ್ರಾಹ್ಮಣನೇ, ಇದರಲ್ಲಿ ಸಂಶಯವಿಲ್ಲ. ಅವನೂ ತಾಯಿಯು ವೈಶ್ಯಸ್ತ್ರೀಗಿಂತಲೂ ಶ್ರೇಷ್ಠಳಾದ ಕಾರಣ ಮೂರು ಭಾಗಗಳನ್ನು ತೆಗೆದುಕೊಳ್ಳಬೇಕು.

ವರ್ಣೇ ತೃತೀಯೇ ಜಾತಸ್ತು ವೈಶ್ಯಾಯಾಂ ಬ್ರಾಹ್ಮಣಾದಪಿ ।
ದ್ವಿರಂಶಸ್ತೇನ ಹರ್ತವ್ಯೋ ಬ್ರಾಹ್ಮಣಸ್ವಾದ್ ಯುಧಿಷ್ಠಿರ ॥೧೪॥

ಎಲೈ ಯುಧಿಷ್ಠಿರನೇ, ಬ್ರಾಹ್ಮಣನಿಗೆ ವೈಶ್ಯ ಸ್ತ್ರೀಯಲ್ಲಿ ಜನಿಸಿದ ಪುತ್ರನು ಎರಡು ಭಾಗಗಳನ್ನು ತೆಗೆದುಕೊಳ್ಳಬೇಕು.

ಶೂದ್ರಾಯಾಂ ಬ್ರಾಹ್ಮಣಾಜ್ಜಾತೋ ನಿತ್ಯಾದೇಯಧನಃ ಸ್ಮೃತಃ ।
ಅಲ್ಪಂ ವಾಪಿ ಪ್ರದಾತವ್ಯಂ ಶೂದ್ರಾಪುತ್ರಾಯ ಭಾರತ ॥೧೫॥

ಶೂದ್ರಸ್ತ್ರೀಯಲ್ಲಿ ಬ್ರಾಹ್ಮಣನಿಂದ ಜನಿಸಿದವನು ಯದ್ಯಪಿ ಪಿತೃಧನಕ್ಕೆ ಅರ್ಹನಾಗುವುದಿಲ್ಲ. ಆದರೂ ಎಲೈ ಭಾರತನೇ, ಅವನಿಗೂ ಸ್ವಲ್ಪ ಭಾಗವನ್ನಾದರೂ ಕೊಡಬೇಕು. ಆದ್ದರಿಂದ ಹತ್ತು ಭಾಗದಲ್ಲಿ ಉಳಿದ ಒಂದು ಭಾಗವನ್ನು ಅವನಿಗೆ ಕೊಡಬೇಕು.

ದಶಧಾ ಪ್ರವಿಭಕ್ತಸ್ಯ ಧನಸ್ಯೈಷ ಭವೇತ್ಕ್ರಮಃ ।
ಸವರ್ಣಾಸು ತು ಜಾತಾನಾಂ ಸಮಾನ್ ಭಾಗಾನ್ ಪ್ರಕಲ್ಪಯೇತ್ ॥

ಹತ್ತು ಭಾಗವಾಗಿ ವಿಭಜಿಸಿದ ತಂದೆಯ ಆಸ್ತಿಯನ್ನು ಹಂಚುವುದರಲ್ಲಿ ಈ ಕ್ರಮವಿರುತ್ತದೆ. ಒಂದೇ ವರ್ಣದ ಸ್ತ್ರೀಯಲ್ಲಿ ಹುಟ್ಟಿದ ಪುತ್ರರು ಆ ಭಾಗವನ್ನು ಎಲ್ಲರೂ ಸಮವಾಗಿ ಹಂಚಿಕೊಳ್ಳಬೇಕು.

ಅಧಿಕಂ ಗುಣತೋ ವಾಂಶಂ ಸರ್ವಜ್ಯೇಷ್ಠಃ ಸಮೇಷು ವಾ ।
ದೇಯಂ ವರ್ಣೋತ್ತರಾಧಿಕ್ಯಾದಪರೇಷ್ವಲ್ಪಕೇಷು ಚ ॥೧೭॥

ಅಥವಾ ಒಂದೇ ತಾಯಿಯಲ್ಲಿ ಹುಟ್ಟಿದ ಪುತ್ರರಲ್ಲಿ ಸರ್ವಜ್ಯೇಷ್ಠನೂ, ಗುಣದಿಂದ ಶ್ರೇಷ್ಠನಾದವನೂ ಅಧಿಕ ಭಾಗವನ್ನು ತೆಗೆದುಕೊಂಡು ಉಳಿದವನ್ನು ಉಳಿದವರಿಗೆ ಕೊಡಬೇಕು.

ಅಬ್ರಾಹ್ಮಣಂ ತು ಮನ್ಯಂತೇ ಶೂದ್ರಾಪುತ್ರಮನೈಪುಣಾತ್ ।
ತ್ರಿಷು ವರ್ಣೇಷು ಜಾತೋ ಹಿ ಬ್ರಾಹ್ಮಣಾದ್ ಬ್ರಾಹ್ಮಣೋ ಭವೇತ್ ॥

ಶೂದ್ರಸ್ತ್ರೀಯ ಪುತ್ರನಿಗೆ ನೈಪುಣ್ಯವಿಲ್ಲದಿರುವುದರಿಂದ ಅವನನ್ನು ಬ್ರಾಹ್ಮಣನೆಂದು ಅಂಗೀಕರಿಸುವುದಿಲ್ಲ. ಉಳಿದ ಮೂರು ವರ್ಣಗಳಲ್ಲಿ ಬ್ರಾಹ್ಮಣನಿಂದ ಜನಿಸಿದ ಪುತ್ರನು ಬ್ರಾಹ್ಮಣನಾಗುತ್ತಾನೆ.

ಸ್ಮೃತಾ ವರ್ಣಾಶ್ಚ ಚತ್ವಾರಃ ಪಂಚಮೋ ನಾಧಿಗಮ್ಯತೇ ।
ಹರೇತ್ತು ದಶಮಂ ಭಾಗಂ ಶೂದ್ರಾಪುತ್ರಃ ಪಿತುರ್ಧನಾತ್ ॥೧೯॥

ವರ್ಣಗಳು ನಾಲ್ಕೇ ಆಗಿವೆ. ಐದನೆಯ ವರ್ಣವು ಎಲ್ಲಿಯೂ ಕೇಳಿ ಬರುವುದಿಲ್ಲ. ಶೂದ್ರಸ್ತ್ರೀಯ ಪುತ್ರನಾದವನು ತಂದೆಯ ಧನದಲ್ಲಿ ಹತ್ತನೆಯ ಒಂದು ಭಾಗವನ್ನು ಸ್ವೀಕರಿಸಬೇಕು.

ತತ್ತು ದತ್ತಂ ಹರೇತ್‌ಪಿತ್ರಾ ನಾದತ್ತಂ ಹರ್ತುಮರ್ಹತಿ ।
ಅವಶ್ಯಂ ಹಿ ಧನಂ ದೇಯಂ ಶೂದ್ರಾಪುತ್ರಾಯ ಭಾರತ ॥೨೦॥

ಎಲೈ ಭಾರತನೇ, ಅದನ್ನೂ ಸಹ ತಂದೆಯು ಕೊಟ್ಟುದನ್ನು ಸ್ವೀಕರಿಸಬೇಕು. ತಂದೆಯು ಕೊಡದಿದ್ದಾಗ ಕಿತ್ತುಕೊಳ್ಳಬಾರದು. ಶೂದ್ರಸ್ತ್ರೀಯ ಪುತ್ರನಿಗೂ ಅವಶ್ಯವಾಗಿ ಧನವನ್ನು ಕೊಡಬೇಕು.

ಆನೃಶಂಸ್ಯಂ ಪರೋ ಧರ್ಮ ಇತಿ ತಸ್ಯೈ ಪ್ರದೀಯತೇ ।
ಯತ್ರ ತತ್ರ ಸಮುತ್ಪನ್ನೋ ಗುಣಾಯೈವೋಪಕಲ್ಪತೇ ॥೨೧॥

ದಯೆಯು ದೊಡ್ಡ ಧರ್ಮ ಎಂಬ ಕಾರಣದಿಂದ ಅವನಿಗೆ ಕೊಡಲ್ಪಡುತ್ತದೆ. ಅವನು ಎಲ್ಲಿ ಜನಿಸಿದರೂ ದಯೆಯಿಂದ ಮಾಡುವ ಈ ಧನದಾನವು ಗುಣವೆಂದೇ ಹೇಳಲ್ಪಡುತ್ತದೆ.

ಯದಿ ವಾಪ್ಯೇಕಪುತ್ರಃ ಸ್ಯಾದಪುತ್ರೋ ಯದಿ ವಾ ಭವೇತ್ ।
ನಾಧಿಕಂ ದಶಮಾದ್ ದದ್ಯಾಚ್ಛೂದ್ರಾಪುತ್ರಾಯ ಭಾರತ ॥೨೨॥

ತಂದೆಗೆ ಒಬ್ಬನೇ ಪುತ್ರನಿದ್ದರೆ ಅಥವಾ ಪುತ್ರನೇ ಇಲ್ಲದಿದ್ದರೂ ಎಲೈ ಭಾರತನೇ, ಶೂದ್ರಸ್ತ್ರೀಯ ಪುತ್ರನು ಹತ್ತನೆಯ ಒಂದು ಭಾಗಕ್ಕಿಂತ ಹೆಚ್ಚು ಆಸ್ತಿಯನ್ನು ತೆಗೆದುಕೊಳ್ಳಬಾರದು.

ಸ್ಮೃತ ಏಕಶ್ಚತುರ್ಭಾಗಃ ಕನ್ಯಾಭಾಗಸ್ತು ಧರ್ಮತಃ ।
ಅಭ್ರಾತೃಕಾ ಸಮಗ್ರಾರ್ಹಾ ಚಾರ್ಧಸ್ಯೇತ್ಯಪರೇ ವಿದುಃ ॥೨೩॥

ತಂದೆಯ ಆಸ್ತಿಯಲ್ಲಿ ಪುತ್ರಿಯ ಭಾಗ ನಾಲ್ಕನೆಯ ಒಂದು ಭಾಗ ಎಂದು ಧರ್ಮದಿಂದ ಹೇಳಲ್ಪಡುತ್ತದೆ. ಅವಳಿಗೆ ಸಹೋದರರೇ ಇಲ್ಲದಿದ್ದರೆ ಅವಳು ತಂದೆಯ ಸಮಸ್ತ ಧನಕ್ಕೆ ಅರ್ಹಳಾಗುತ್ತಾಳೆ. ಇನ್ನು ಕೆಲವರು ತಂದೆ ಇದ್ದಾಗ ಅರ್ಧಕ್ಕೆ ಮಾತ್ರ ಅರ್ಹಳಾಗುತ್ತಾಳೆಂದು ಹೇಳುತ್ತಾರೆ.

ತ್ರೈವಾರ್ಷಿಕಾದ್ ಯದಾ ಭಕ್ತಾದಧಿಕಂ ಸ್ಯಾದ್ ದ್ವಿಜಸ್ಯ ತು ।
ಯಜೇತ ತೇನ ದ್ರವ್ಯೇಣ ನ ವೃಥಾ ಸಾಧಯೇದ್ ಧನಮ್ ॥೨೪॥

ದ್ವಿಜನಿಗೆ ಹೀಗೆ ತೆಗೆದುಕೊಂಡ ಭಾಗದಲ್ಲಿ ಮೂರುವರ್ಷಗಳಿಗೆ ಬೇಕಾಗುವ ಧನಕ್ಕಿಂತ ಹೆಚ್ಚು ಧನವಿದ್ದರೆ ಆ ಧನದಿಂದ ಯಜ್ಞವನ್ನು ಮಾಡಬೇಕು. ಧನವನ್ನು ವ್ಯರ್ಥವಾಗಿ ಸಂಗ್ರಹಿಸಿ ವೃದ್ಧಿಪಡಿಸಬಾರದು.

ತ್ರಿಸಾಹಸ್ರಪರೋ ದಾಯಃ ಸ್ತ್ರಿಯೋ ದೇಯೋ ಧನಸ್ಯ ವೈ ।
ತಚ್ಚ ಭರ್ತ್ರಾ ಧನಂ ದತ್ತಂ ನಾದತ್ತಂ ಭೋಕ್ತುಮರ್ಹತಿ ॥೨೫॥

ಪುತ್ರಿಗೆ ಕೊಡಬಹುದಾದ ಪರಮ ಆಸ್ತಿಯ ಭಾಗವೆಂದರೆ ಮೂರುಸಹಸ್ರ (ನಿಷ್ಕಗಳು). ಅದನ್ನು ಅವಳು ತನ್ನ ಪತಿಯು ಕೊಟ್ಟುದನ್ನು ಮಾತ್ರ ಸ್ವೀಕರಿಸಬೇಕು. ಪತಿಯಿಂದ ಕೊಡಲ್ಪಡದಿದ್ದುದನ್ನು ಅವಳು ಭೋಗಿಸಬಾರದು.

ಸ್ತ್ರಿಯಾಸ್ತು ಯತ್ ಭವೇದ್ ವಿತ್ತಂ ಪಿತ್ರಾ ದತ್ತಂ ಯುಧಿಷ್ಠಿರ ।
ಕನ್ಯೈಕಾ ತದ್ಹರೇದನ್ಯಾ ಪಿತೃದಾಯಾದ್ಯಭಾಗಿನಃ ॥೨೬॥

ಎಲೈ ಯುಧಿಷ್ಠಿರನೇ, ತಂದೆಯ ಮನೆಯಿಂದ ಸ್ತ್ರೀಗೆ ಬಂದ ಧನಕ್ಕೆ ಅವಳ ಪುತ್ರಿಯು ಮಾತ್ರ ಅಧಿಕಾರಿಯಾಗುತ್ತಾಳೆ. ಉಳಿದವರು ಅದರಲ್ಲಿ ಭಾಗಕ್ಕೆ ಅರ್ಹರಾಗುವುದಿಲ್ಲ.

ಸ್ತ್ರೀಣಾಂ ತು ಪತಿದಾಯಾದ್ಯಮುಪಭೋಗಫಲಂ ಸ್ಮೃತಮ್ ।
ನಾಪಹಾರಂ ಸ್ತ್ರಿಯಃ ಕುರ್ಯುಃ ಪತಿವಿತ್ತಾತ್ ಕಥಂಚನ ॥೨೭॥

ಸ್ತ್ರೀಯರಿಗೆ ದೊರಕುವ ಪತಿಯ ಧನ ಮತ್ತು ತಂದೆಯ ಧನಗಳನ್ನು ಉಪಭೋಗಿಸಿ ವ್ಯಯ ಮಾಡಬೇಕು. ಸ್ತ್ರೀಯರು ಪತಿವಿತ್ತವನ್ನು ಎಂದೂ ಅಪಹರಿಸಬಾರದು (ಪತಿಯು ಕೊಟ್ಟುದನ್ನು ಮಾತ್ರ ಉಪಯೋಗಿಸಬೇಕು).

ಶೂದ್ರೇಣ ಚಾಧಿಕಂ ದೇಯಂ ದ್ವಿಜೇಭ್ಯೋ ಯಜನಂ ಪ್ರತಿ ।
ದಾಸ್ಯೈರ್ವಾ ಬಂಧುಭಿರ್ವಾಽಪಿ ಸ್ವತ್ವಂ ಯೋಗಾದ್ ಯಥಾರ್ಹತಃ ॥

ಶೂದ್ರನಾದವನು ಬ್ರಾಹ್ಮಣನಿಗೆ ಯಾಗ-ಯಜ್ಞಕ್ಕಾಗಿ ಅಧಿಕ ಭಾಗವನ್ನು ಕೊಡಬೇಕು. ದಾಸರಾಗಲೀ ಅಥವಾ ಬಂಧುಗಳಾಗಲೀ ಹಾಗೆ ಕೊಟ್ಟು ಉಳಿದ ಭಾಗಕ್ಕೆ ಅರ್ಹರಾಗುತ್ತಾರೆ.

ಜ್ಞಾತಿಕ್ಷತ್ರಿಯವೈಶ್ಯಾಭ್ಯಾಂ ತ್ರೈವಾರ್ಷಿಕಾದಧಿಕಂ ಧನಮ್ ।
ವಿಪ್ರೇಭ್ಯಸ್ತು ಪ್ರದಾತವ್ಯಂ ಯಜ್ಞಾರ್ಥಮಭಿವರ್ಜಿತಮ್ ॥೨೯॥

ಜ್ಞಾತಿಗಳು, ಕ್ಷತ್ರಿಯರು ಮತ್ತು ವೈಶ್ಯರು ತಮಗೆ ಮೂರುವರ್ಷಕ್ಕೆ ಬೇಕಾಗುವುದಕ್ಕಿಂತ ಅಧಿಕವಾದ ಧನವನ್ನು ಯಜ್ಞಾರ್ಥವಾಗಿ ಬ್ರಾಹ್ಮಣರಿಗೆ ಕೊಡಬೇಕು.

ಸ್ತ್ರಿಯಾಸ್ತು ಯದ್ ಭವೇದ್ ವಿತ್ತಂ ಪಿತ್ರಾ ದತ್ತಂ ಯುಧಿಷ್ಠಿರ ।
ಬ್ರಾಹ್ಮಣ್ಯಾಸ್ತದ್ಧರೇತ್ ಕನ್ಯಾ ಯಥಾ ಪುತ್ರಸ್ತಥಾ ಹಿ ಸಾ ।
ಸಾ ಹಿ ಪುತ್ರಸಮಾ ರಾಜನ್ ವಿಹಿತಾ ಕುರುನಂದನ ॥೩೦॥

ಎಲೈ ಯುಧಿಷ್ಠಿರನೇ, ಸ್ತ್ರೀಗೆ ತಂದೆಯಿಂದ ಕೊಟ್ಟ ಧನವೇನಿದೆಯೋ ಅದನ್ನು ಬ್ರಾಹ್ಮಣಪತ್ನಿಯ ಪುತ್ರಿಯು ತೆಗೆದುಕೊಳ್ಳಬೇಕು. ಅವಳು ಪುತ್ರನಂತೆಯೇ ಇರುತ್ತಾಳೆ. ಎಲೈ ರಾಜನೇ, ಕುರುನಂದನನೇ, ಅವಳು ಪುತ್ರನಿಗೆ ಸಮಳಾದವಳು ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.

ಏವಮೇತತ್‌ಸಮುದ್ದಿಷ್ಟಂ ಧರ್ಮೇಷು ಭರತರ್ಷಭ ।
ಏತದ್ ಧರ್ಮಮನುಸ್ಮೃತ್ಯ ನ ವೃಥಾ ಸಾಧಯೇದ್ ಧನಮ್ ॥೩೧॥

ಎಲೈ ಭರತರ್ಷಭನೇ, ಧರ್ಮಶಾಸ್ತ್ರಗಳಲ್ಲಿ ಆಸ್ತಿ ವಿಭಾಗವು ಹೀಗೆ ಹೇಳಲ್ಪಟ್ಟಿದೆ. ಈ ಧರ್ಮವನ್ನು ಮನಸ್ಸಿನಲ್ಲಿಸ್ಮರಿಸಿ ವ್ಯರ್ಥವಾಗಿ ಧನಸಂಗ್ರಹವನ್ನು ಮಾಡಬಾರದು.

ಯುಧಿಷ್ಠಿರಃ

ಶೂದ್ರಾಯಾಂ ಬ್ರಾಹ್ಮಣಾಜ್ಜಾತೋ ಯದ್ಯದೇಯಧನಃ ಸ್ಮೃತಃ ।
ಕೇನ ಪ್ರತಿವಿಶೇಷೇಣ ದಶಮೋಽಪ್ಯಸ್ಯ ದೀಯತೇ ॥೩೨॥

ಯುಧಿಷ್ಠಿರ– ಶೂದ್ರಳಲ್ಲಿ ಬ್ರಾಹ್ಮಣನಿಂದ ಹುಟ್ಟಿದ ಪುತ್ರನು ತಂದೆಯ ಆಸ್ತಿಯ ಭಾಗಕ್ಕೆ ಅನರ್ಹನಾದರೆ ಯಾವ ಕಾರಣದಿಂದ ಅವನಿಗೆ ಹತ್ತನೆಯ ಒಂದು ಭಾಗವಾದರೂ ಕೊಡಲ್ಪಡುತ್ತದೆ?

ಬ್ರಾಹ್ಮಣ್ಯಾಂ ಬ್ರಾಹ್ಮಣಾಜ್ಜಾತೋ ಬ್ರಾಹ್ಮಣಃ ಸ್ಯಾನ್ನ ಸಂಶಯಃ ।
ಕ್ಷತ್ರಿಯಾಯಾಂ ತಥೈವ ಸ್ಯಾದ್ ವೈಶ್ಯಾಯಾಮಪಿ ಚೈವ ಹಿ ॥೩೩॥

ಬ್ರಾಹ್ಮಣಿಯಲ್ಲಿ ಬ್ರಾಹ್ಮಣನಿಂದ ಹುಟ್ಟಿದ ಪುತ್ರನು ಬ್ರಾಹ್ಮಣನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ. ಕ್ಷತ್ರಿಯ ಸ್ತ್ರೀ ಮತ್ತು ವೈಶ್ಯಸ್ತ್ರೀಯಲ್ಲಿ ಹುಟ್ಟಿದ ಪುತ್ರನೂ ಹಾಗೆಯೇ ಬ್ರಾಹ್ಮಣನಾಗುತ್ತಾನೆ?

ಕಸ್ಮಾತ್ ತೇ ವಿಷಮಂ ಭಾಗಂ ಭಜೇರನ್ ನೃಪಸತ್ತಮ ।
ಯದಾ ಸರ್ವೇ ತ್ರಯೋ ವರ್ಣಾಸ್ತ್ವಯೋಕ್ತಾ ಬ್ರಾಹ್ಮಣಾ ಇತಿ ॥೩೪॥

ಎಲೈ ನೃಪಶ್ರೇಷ್ಠನೇ, ಮೂರು ವರ್ಣದ ಸ್ತ್ರೀಯರಲ್ಲಿ ಜನಿಸಿದ ಪುತ್ರರೆಲ್ಲರೂ ಬ್ರಾಹ್ಮಣರಾದ ಮೇಲೆ ಅವರು ಏಕೆ ವಿಷಮವಾಗಿ ಭಾಗವನ್ನು ಸ್ವೀಕರಿಸುತ್ತಾರೆ?

ಭೀಷ್ಮಃ

ದಾರಾ ಇತ್ಯುಚ್ಯತೇ ಲೋಕೇ ನಾಮ್ನೈಕೇನ ಪರಂತಪ ।
ಪ್ರೋಕ್ತೇನ ಚೈಕನಾಮ್ನಾಯಂ ವಿಶೇಷಃ ಸುಮಹಾನ್ ಭವೇತ್ ॥೩೫॥

ಭೀಷ್ಮ– ಎಲೈ ಪರಂತಪನೇ, ಮೂರು ಜನ ಪತ್ನಿಯರೂ ದಾರಾ ಎಂಬ ಒಂದೇ ಶಬ್ದದಿಂದ ಹೇಳಲ್ಪಡುತ್ತಾರೆ. ಆದರೆ ಒಂದೇ ಶಬ್ದದಿಂದ ಹೇಳಿದರೂ ಅವರಲ್ಲಿ ಬಹಳ ವ್ಯತ್ಯಾಸಗಳಿವೆ.

ತಿಸ್ರಃ ಕೃತ್ವಾ ಪುರೋ ಭಾರ್ಯಾಃ ಪಶ್ಚಾದ್ ವಿಂದೇತ ಬ್ರಾಹ್ಮಣೀಮ್ ।
ಸಾ ಜ್ಯೇಷ್ಠಾ ಸಾ ಚ ಪೂಜ್ಯಾ ಸ್ಯಾತ್ ಸಾ ಚ ತಾಭ್ಯೋ ಗರೀಯಸೀ ॥

ಮೊದಲು ಉಳಿದ ವರ್ಣದ ಭಾರ್ಯೆಯರನ್ನು ಸಂಪಾದಿಸಿ ಕೊನೆಯಲ್ಲಿ ಬ್ರಾಹ್ಮಣ ಸ್ತ್ರೀಯನ್ನು ವಿವಾಹವಾದರೂ ಬ್ರಾಹ್ಮಣಸ್ತ್ರೀಯೇ ಜ್ಯೇಷ್ಠಳಾಗುತ್ತಾಳೆ, ಪೂಜ್ಯಳಾಗುತ್ತಾಳೆ ಮತ್ತು ಆ ಮೂವರಿಗಿಂತ ಶ್ರೇಷ್ಠಳೂ ಆಗುತ್ತಾಳೆ.

ಸ್ನಾನಂ ಪ್ರಸಾಧನಂ ಭರ್ತುರ್ದಂತಧಾವನಮಂಜನಮ್ ।
ಹವ್ಯಂ ಕವ್ಯಂ ಚ ಯಚ್ಚಾನ್ಯದ್ ಧರ್ಮ್ಯಯುಕ್ತಂ ಭವೇದ್ ಗೃಹೇ ॥೩೭॥

ನ ತಸ್ಯಾಂ ಜಾತು ತಿಷ್ಠಂತ್ಯಾಮನ್ಯಾ ತತ್ಕರ್ತುಮರ್ಹತಿ ।
ಬ್ರಾಹ್ಮಣೀ ತ್ವೇವ ತತ್ಕುರ್ಯಾದ್ ಬ್ರಾಹ್ಮಣಸ್ಯ ಯುಧಿಷ್ಠಿರ ॥೩೮॥

ಪತಿಯು ಗೃಹದಲ್ಲಿ ಮಾಡಬೇಕಾದ ಸ್ನಾನ, ಅಲಂಕಾರ, ದಂತಧಾವನ, ಅಂಜನ, ಹವ್ಯ-ಕವ್ಯಗಳು, ಉಳಿದ ಧರ್ಮಕಾರ್ಯಗಳು ಇವುಗಳನ್ನು ಬ್ರಾಹ್ಮಣಿಯು ಇರುವಾಗ

ಉಳಿದವರು ಮಾಡುವಂತಿಲ್ಲ. ಎಲೈ ಯುಧಿಷ್ಠಿರನೇ, ಬ್ರಾಹ್ಮಣನಾದವನಿಗೆ ಈ ಸಹಾಯ ಅಥವಾ ಉಪಕಾರವನ್ನು ಬ್ರಾಹ್ಮಣಿಯೇ ಮಾಡಬೇಕು.

ಅನ್ನಂ ಪಾನಂ ಚ ಮಾಲ್ಯಂ ಚ ವಾಸಾಂಸ್ಯಾಭರಣಾನಿ ಚ ।
ಬ್ರಾಹ್ಮಣ್ಯೈ ತಾನಿ ದೇಯಾನಿ ಭರ್ತುಃ ಸಾ ಹಿ ಗರೀಯಸೀ ॥೩೯॥

ಅನ್ನ-ಪಾನಗಳು, ವಸ್ತ್ರ-ಮಾಲ್ಯಗಳು, ಆಭರಣಗಳು ಇವುಗಳನ್ನು ಬ್ರಾಹ್ಮಣಿಯೇ ಕೊಡಬೇಕು. ಏಕೆಂದರೆ ಪತಿಗೆ ಅವಳೇ ಶ್ರೇಷ್ಠಳಾದವಳು.

ಮನುನಾಭಿಹಿತಂ ಶಾಸ್ತ್ರಂ ಯಚ್ಚಾಪಿ ಕುರುನಂದನ ।
ಅನುರಾಗಸ್ತಥಾ ಧರ್ಮೋ ಸಾ ಹಿ ತಾಭ್ಯೋ ಗರೀಯಸೀ । ॥೪೦॥

ಎಲೈ ಕುರುನಂದನನೇ, ಮನುವು ಹೇಳಿದ ಶಾಸ್ತ್ರವು ಹಾಗೆಯೇ ಇದೆ. ಬ್ರಾಹ್ಮಣಿಯಲ್ಲಿಯೇ ಅನುರಾಗ ಮತ್ತು ಧರ್ಮಗಳು ಅಧಿಕವಾಗಿದೆ. ಏಕೆಂದರೆ ಅವಳೇ ಉಳಿದವರಿಗಿಂತಲೂ ಶ್ರೇಷ್ಠಳಾದವಳು.

ಅಥ ಚೇದನ್ಯಥಾ ಕುರ್ಯಾತ್ ಕಾಮಲೋಭಾದ್ ಯುಧಿಷ್ಠಿರ ।
ಯಥಾ ಬ್ರಾಹ್ಮಣಚಂಡಾಲಃ ಪೂರ್ವದೃಷ್ಟಸ್ತಥೈವ ಸಃ ॥೪೧॥

ಎಲೈ ಯುಧಿಷ್ಠಿರನೇ, ಕಾಮಲೋಭದಿಂದ ಬ್ರಾಹ್ಮಣನು ಬೇರೆ ರೀತಿಯಲ್ಲಿ ನಡೆದುಕೊಂಡರೆ ಅವನು ಹಿಂದೆ ಹೇಳಿದ ಬ್ರಾಹ್ಮಣ ಚಂಡಾಲನಂತೆಯೇ ಆಗುತ್ತಾನೆ.

ಬ್ರಾಹ್ಮಣ್ಯಾಃ ಸದೃಶಃ ಪುತ್ರಃ ಕ್ಷತ್ರಿಯಾಯಾಶ್ಚ ಯೋ ಭವೇತ್ ।
ರಾಜನ್ ವಿಶೇಷೋ ನಾಸ್ಯತ್ರ ವರ್ಣಯೋರುಭಯೋರಪಿ ।
ನ ತು ಜಾತ್ಯಾ ಸಮಾ ಲೋಕೇ ಬ್ರಾಹ್ಮಣ್ಯಾಃ ಕ್ಷತ್ರಿಯಾ ಭವೇತ್ ॥೪೨॥

ಎಲೈ ರಾಜನೇ, ಕ್ಷತ್ರಿಯಸ್ತ್ರೀಯ ಪುತ್ರನು, ಬ್ರಾಹ್ಮಣಸ್ತ್ರೀಯ ಪುತ್ರನ ಸದೃಶನಾಗಿದ್ದರೆ ಆ ಎರಡು ವರ್ಣದವರಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಜಾತಿಯಿಂದ ಮಾತ್ರ ಕ್ಷತ್ರಿಯ ಸ್ತ್ರೀಯು ಬ್ರಾಹ್ಮಣ ಸ್ತ್ರೀಗೆ ಸಮವಾಗುವುದಿಲ್ಲ. ಉಳಿದ ಎಲ್ಲ ವಿಷಯಗಳಲ್ಲಿಯೂ ಸಮನಾಗುತ್ತಾಳೆ.

ಬ್ರಾಹ್ಮಣ್ಯಾಃ ಪ್ರಥಮಃ ಪುತ್ರೋ ಭೂಯಾನ್ ಸ್ಯಾದ್ರಾಜಸತ್ತಮ ।
ಭೂಯೋಽಪಿ ಭೂಯಸಾ ಹಾರ್ಯಂ ಪಿತೃವಿತ್ತಾದ್ ಯುಧಿಷ್ಠಿರ ॥೪೩॥

ಎಲೈ ರಾಜಶ್ರೇಷ್ಠನೇ, ಬ್ರಾಹ್ಮಣಿಯ ಪ್ರಥಮ ಪುತ್ರನು ಶ್ರೇಷ್ಠನಾದವನು. ಆದ್ದರಿಂದ ಎಲೈ ಯುಧಿಷ್ಠಿರನೇ, ಅವನು ಪಿತೃಧನದಲ್ಲಿ ಅಧಿಕ ಭಾಗವನ್ನು ಪಡೆಯಬೇಕು.

ಯಥಾ ನ ಸದೃಶೀ ಜಾತು ಬ್ರಾಹ್ಮಣ್ಯಾಃ ಕ್ಷತ್ರಿಯಾ ಭವೇತ್ ।
ಕ್ಷತ್ರಿಯಾಯಾಸ್ತಥಾ ವೈಶ್ಯಾ ನ ಜಾತು ಸದೃಶೀ ಭವೇತ್ ॥೪೪॥

ಕ್ಷತ್ರಿಯಸ್ತ್ರೀಯು ಹೇಗೆ ಬ್ರಾಹ್ಮಣಸ್ತ್ರೀಗೆ ಎಂದೂ ಸದೃಶವಾಗುವುದಿಲ್ಲವೋ ಅದರಂತೆ ವೈಶ್ಯಸ್ತ್ರೀಯೂ ಸಹ ಕ್ಷತ್ರಿಯಸ್ತ್ರೀಗೆ ಎಂದೂ ಸದೃಶವಾಗುವುದಿಲ್ಲ.

ಶ್ರೀಶ್ಚ ರಾಜ್ಯಂ ಚ ಕೋಶಶ್ಚ ಕ್ಷತ್ರಿಯಾಣಾಂ ಯುಧಿಷ್ಠಿರ ।
ವಿಹಿತಂ ದೃಶ್ಯತೇ ರಾಜನ್ ಸಾಗರಾಂತಾ ಚ ಮೇದಿನೀ ॥೪೫॥

ಎಲೈ ಯುಧಿಷ್ಠಿರನೇ, ಸಂಪತ್ತು, ರಾಜ್ಯ, ಕೋಶ, ಸಾಗರಾಂತವಾದ ಭೂಮಿ ಎಲ್ಲವೂ ಕ್ಷತ್ರಿಯರಿಗೆ ವಿಹಿತವಾಗಿರುವುದು ಕಂಡುಬರುತ್ತದೆ.

ಕ್ಷತ್ರಿಯೋ ಹಿ ಸ್ವಧರ್ಮೇಣ ಶ್ರಿಯಂ ಪ್ರಾಪ್ನೋತಿ ಭೂಯಸೀಮ್ ।
ರಾಜಾ ದಂಡಧರೋ ರಾಜನ್ ರಕ್ಷಾ ನಾನ್ಯತ್ರ ಕ್ಷತ್ರಿಯಾತ್ ॥೪೬॥

ಕ್ಷತ್ರಿಯನು ತನ್ನ ಧರ್ಮದಿಂದ ಬಹಳ ಸಂಪತ್ತನ್ನು ಗಳಿಸುತ್ತಾನೆ. ಎಲೈ ರಾಜನೇ, ರಾಜನೇ ದಂಡಧಾರಿಯಾಗಿ ರಕ್ಷಿಸುವವನು. ಲೋಕದ ರಕ್ಷಣೆಯು ಕ್ಷತ್ರಿಯನನ್ನು ಬಿಟ್ಟು ಬೇರೆಯವರಿಗೆ ಹೇಳಲ್ಪಟ್ಟಿಲ್ಲ.

ಬ್ರಾಹ್ಮಣಾ ಹಿ ಮಹಾಭಾಗಾ ದೇವಾನಾಮಪಿ ದೇವತಾಃ ।
ತೇಷು ಧರ್ಮಾಶ್ಚ ವೇದಾಶ್ಚ ಗೌರವಂ ಚ ಪ್ರತಿಷ್ಠಿತಮ್ ।
ವೈದಿಕಾನಿ ಹಿ ಧರ್ಮಾಣಿ ವೈಶ್ಯೋ ಪುತ್ರಾಧಿಕಾರವಾನ್ ॥೪೭॥

ಮಹಾಭಾಗರಾದ ಬ್ರಾಹ್ಮಣರು ದೇವತೆಗಳಿಗೂ ದೇವತೆಗಳು. ಅವರಲ್ಲಿ ಧರ್ಮಗಳು, ವೇದಗಳು, ಗೌರವವು, ವೈದಿಕಧರ್ಮಗಳು ಎಲ್ಲವೂ ಪ್ರತಿಷ್ಠಿತವಾಗಿವೆ. ವೈಶ್ಯ ಸ್ತ್ರೀಯ ಪುತ್ರನು ಪುತ್ರಾಧಿಕಾರವನ್ನು ಹೊಂದಿರುತ್ತಾನೆ.

ನಾತ್ರಾಧಿಕಾರಃ ಶೂದ್ರಸ್ಯ ನ ಗುರೂಂಸ್ತ್ರಾಯತೇ ಭಯಾತ್ ।
ಭಯಂ ಸಂಜನಯತ್ಯೇವ ತಸ್ಮಾತ್ ದೇಯಧನಸ್ತ್ವಸೌ ।
ಲುಪ್ಯಮಾನಾಃ ಸ್ವಧರ್ಮೇಣ ಕ್ಷತ್ರಿಯೋ ರಕ್ಷತಿ ಪ್ರಜಾಃ ॥೪೮॥

ರಕ್ಷಣೆಯ ವಿಷಯದಲ್ಲಿ ಶೂದ್ರನಿಗೆ ಅಧಿಕಾರವಿಲ್ಲ. ಅವನು ತನಗಿಂತ ಹಿರಿಯರಾದವರನ್ನು ರಕ್ಷಿಸುವುದಿಲ್ಲ. ಅದಕ್ಕೆ ಬದಲಾಗಿ ಅವರಿಗೆ ಭಯವನ್ನು ಉಂಟು ಮಾಡುತ್ತಾನೆ. ಆದ್ದರಿಂದ ಅವನು ಕೊಟ್ಟ ಧನವನ್ನು ಮಾತ್ರ ಸ್ವೀಕರಿಸುವವನು. ಕೆಲವರಿಗೆ ಧರ್ಮಲೋಪವುಂಟಾದರೆ ಆಗ ಕ್ಷತ್ರಿಯನು ರಕ್ಷಿಸುತ್ತಾನೆ.

ದಸ್ಯುಭಿರ್ಹ್ರಿಯಮಾಣಂ ಚ ಧನಂ ದಾರಾಶ್ಚ ಸರ್ವಶಃ ।
ಸರ್ವೇಷಾಮೇವ ವರ್ಣಾನಾಂ ತ್ರಾತಾ ಭವತಿ ಪಾರ್ಥಿವಃ ॥೪೯॥

ಧನ-ದಾರಾದಿಗಳನ್ನು ಕಳ್ಳರು ಮತ್ತು ದರೋಡೆಕೋರರು ಅಪಹರಿಸಿದರೆ ಆಗ ಎಲ್ಲ ವರ್ಣದವರನ್ನೂ ರಕ್ಷಿಸುವವನು ರಾಜನೇ ಆಗುತ್ತಾನೆ.

ಭೂಯಾನ್ ಸ್ಯಾತ್ ಕ್ಷತ್ರಿಯಾಪುತ್ರೋ ವೈಶ್ಯಾಪುತ್ರಾನ್ನ ಸಂಶಯಃ ।
ಭೂಯಸ್ತೇನಾಪಿ ಹರ್ತವ್ಯಂ ಪಿತೃವಿತ್ತಾದ್ ಯುಧಿಷ್ಠಿರ ॥೫೦॥

ವೈಶ್ಯಾಪುತ್ರನಿಗಿಂತಲೂ ಕ್ಷತ್ರಿಯಸ್ತ್ರೀಯ ಪುತ್ರನು ಶ್ರೇಷ್ಠನಾಗುವುದರಲ್ಲಿ ಸಂಶಯವಿಲ್ಲ. ಎಲೈ ಯುಧಿಷ್ಠಿರನೇ, ಆದ್ದರಿಂದ ಪಿತೃಧನದಲ್ಲಿ ವೈಶ್ಯಾಪುತ್ರನಿಗಿಂತಲೂ ಪಿತೃಧನದಲ್ಲಿ ಅವನು ಅಧಿಕಭಾಗವನ್ನು ತೆಗೆದುಕೊಳ್ಳಬೇಕು.

ಯುಧಿಷ್ಠಿರಃ

ಉಕ್ತಂ ತೇ ವಿಧಿವದ್ ರಾಜನ್ ಬ್ರಾಹ್ಮಣಸ್ಯೇ ಪಿತಾಮಹ ।
ಇತರೇಷಾಂ ತು ವರ್ಣಾನಾಂ ಕಥಂ ವಿನಿಯಮೋ ಭವೇತ್ ॥೫೧॥

ಯುಧಿಷ್ಠಿರ– ಎಲೈ ಪಿತಾಮಹನೇ, ರಾಜನೇ, ಬ್ರಾಹ್ಮಣ ಧನವನ್ನು ಶಾಸ್ತ್ರೋಕ್ತವಾಗಿ ವಿಭಾಗ ಮಾಡುವ ರೀತಿಯನ್ನು ನೀನು ಹೇಳಿದ್ದೀಯೆ. ಬೇರೆ ವರ್ಣದವರಲ್ಲಿ ತಂದೆಯ ಆಸ್ತಿಯನ್ನು ವಿಭಾಗ ಮಾಡಿಕೊಳ್ಳುವ ಬಗೆ ಹೇಗೆ?

ಭೀಷ್ಮಃ

ಕ್ಷತ್ರಿಯಸ್ಯಾಪಿ ಭಾರ್ಯೇ ದ್ವೇ ವಿಹಿತೇ ಕುರುನಂದನ ।
ತೃತೀಯಾ ಚ ಭವೇಚ್ಛೂದ್ರಾ ನ ತು ದೃಷ್ಟಾಂತತಃ ಸ್ಮೃತಾ ॥೫೨॥

ಭೀಷ್ಮ– ಎಲೈ ಕುರುನಂದನನೇ, ಕ್ಷತ್ರಿಯನಿಗೆ ಕ್ಷತ್ರಿಯ ಭಾರ್ಯೆ ಮತ್ತು ವೈಶ್ಯ

ಭಾರ್ಯೆಯರು ವಿಹಿತರಾಗಿದ್ದಾರೆ. ಮೂರನೆಯವಳಾದ ಶೂದ್ರಳೂ ಭಾರ್ಯೆಯಾಗಬಹುದು. ಆದರೆ ಅದಕ್ಕೆ ಉದಾಹರಣೆಗಳಿಲ್ಲ.

ಏಷ ಏವ ಕ್ರಮೋ ಹಿ ಸ್ಯಾತ್ ಕ್ಷತ್ರಿಯಾಣಾಂ ಯುಧಿಷ್ಠಿರ ।
ಅಷ್ಟಧಾ ತು ಭವೇತ್ ಕಾರ್ಯಂ ಕ್ಷತ್ರಿಯಸ್ವಂ ಯುಧಿಷ್ಠಿರ ॥೫೩॥

ಎಲೈ ಯುಧಿಷ್ಠಿರನೇ, ಬ್ರಾಹ್ಮಣರಿಗೆ ಆಸ್ತಿ ವಿಭಾಗದ ವಿಷಯದಲ್ಲಿ ಇದ್ದಂತೆಯೇ ಕ್ಷತ್ರಿಯರಿಗೂ ಕ್ರಮವಿರುತ್ತದೆ. ಎಲೈ ಯುಧಿಷ್ಠಿರನೇ, ಕ್ಷತ್ರಿಯನ ಆಸ್ತಿಯನ್ನು ಎಂಟು ಭಾಗವನ್ನಾಗಿ ಮಾಡಬೇಕು.

ಕ್ಷತ್ರಿಯಾಯಾ ಹರೇತ್ ಪುತ್ರಶ್ಚತುರೋಽಂಶಾನ್ ಪಿತುರ್ಧನಾತ್ ।
ಯುದ್ಧಾವಹಾರಿಕಂ ಯಚ್ಚ ಪಿತುಃ ಸ್ಯಾತ್ ಸ ಹರೇಚ್ಚ ತತ್ ॥೫೪॥

ಆ ಪಿತೃಧನದಲ್ಲಿ ಕ್ಷತ್ರಿಯಳಲ್ಲಿ ಜನಿಸಿದ ಪುತ್ರನು ನಾಲ್ಕು ಭಾಗವನ್ನು ತೆಗೆದುಕೊಳ್ಳಬೇಕು. ತಂದೆಯ ಯುದ್ಧಸಲಕರಣೆಗಳನ್ನೂ ಅವನೇ ತೆಗೆದುಕೊಳ್ಳಬೇಕು.

ವೈಶ್ಯಾಪುತ್ರಸ್ತು ಭಾಗಾಂಸ್ತ್ರೀನ್ ಶೂದ್ರಾಪುತ್ರಸ್ತಥಾಷ್ಟಮಮ್ ।
ಸೋಽಪಿ ದತ್ತಂ ಹರೇತ್ ಪಿತ್ರಾ ನಾದತ್ತಂ ಹರ್ತುಮರ್ಹತಿ ॥೫೫॥

ವೈಶ್ಯಸ್ತ್ರೀಯ ಪುತ್ರನು ಮೂರು ಭಾಗವನ್ನೂ, ಶೂದ್ರ ಸ್ತ್ರೀಯ ಪುತ್ರನು ಒಂದು ಭಾಗವನ್ನು ತೆಗೆದುಕೊಳ್ಳಬೇಕು. ಶೂದ್ರಪುತ್ರನೂ ಸಹ ಕೊಟ್ಟುದನ್ನು ತೆಗೆದುಕೊಳ್ಳಬೇಕು. ಕೊಡದಿದ್ದುದನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳುವ ಪ್ರಯತ್ನವನ್ನು ಮಾಡಬಾರದು.

ಏಕೈವ ಹಿ ಭವೇದ್ ಭಾರ್ಯಾ ವೈಶ್ಯಸ್ಯ ಕುರುನಂದನ ।
ದ್ವಿತೀಯಾ ವಾ ಭವೇಚ್ಛೂದ್ರಾ ನ ತು ದೃಷ್ಟಾಂತತಃ ಸ್ಮೃತಾ ॥೫೬॥

ಎಲೈ ಕುರುನಂದನನೇ, ವೈಶ್ಯನಿಗೆ ವೈಶ್ಯಸ್ತ್ರೀ ಒಬ್ಬಳೇ ಭಾರ್ಯೆ. ಎರಡನೆಯವಳಾದ ಶೂದ್ರ ಸ್ತ್ರೀಯೂ ಆಗಬಹುದು. ಆದರೆ ಅದಕ್ಕೆ ಉದಾಹರಣೆಗಳಿಲ್ಲ.

ವೈಶ್ಯಸ್ಯ ವರ್ತಮಾನಸ್ಯ ವೈಶ್ಯಾಯಾಂ ಭರತರ್ಷಭ ।
ಶೂದ್ರಾಯಾಂ ಚೈವ ಕೌಂತೇಯ ತಯೋರ್ವಿನಿಯಮಃ ಸ್ಮೃತಃ ॥೫೭॥

ಎಲೈ ಭರತರ್ಷಭನೇ, ವೈಶ್ಯನಿಗೆ ವೈಶ್ಯಪತ್ನಿಯಲ್ಲಿಯೂ ಮತ್ತು ಶೂದ್ರ ಸ್ತ್ರೀಯಲ್ಲಿಯೂ ಪುತ್ರರಿದ್ದರೆ ಅವರು ತಂದೆಯ ಆಸ್ತಿಯನ್ನು ಹಂಚಿಕೊಳ್ಳಬೇಕಾದ ರೀತಿಯು ಹೀಗೆ ಹೇಳಲ್ಪಟ್ಟಿದೆ.

ಪಂಚಧಾ ತು ಭವೇತ್ ಕಾರ್ಯಂ ವೈಶ್ಯಸ್ವಂ ಭರತರ್ಷಭ ।
ತಯೋರಪತ್ಯೇ ವಕ್ಷ್ಯಾಮಿ ವಿಭಾಗಂ ಚ ಜನಾಧಿಪ ॥೫೮॥

ಎಲೈ ಭರತರ್ಷಭನೇ, ತಂದೆಯಾದ ವೈಶ್ಯನ ಧನವನ್ನು ಐದು ಭಾಗವನ್ನಾಗಿ ಮಾಡಬೇಕು. ಎಲೈ ರಾಜನೇ, ಅವನ ಪುತ್ರರು ಮಾಡಿಕೊಳ್ಳಬೇಕಾದ ವಿಭಾಗವನ್ನು ಹೇಳುವೆನು.

ವೈಶ್ಯಾಪುತ್ರೇಣ ಹರ್ತವ್ಯಾಶ್ಚತ್ವಾರೋಽಂಶಾಃ ಪಿತುರ್ಧನಾತ್ ।
ಪಂಚಮಸ್ತು ಭವೇದ್ ಭಾಗಃ ಶೂದ್ರಾಪುತ್ರಾಯ ಭಾರತ ॥೫೯॥

ತಂದೆಯ ಧನದಲ್ಲಿ ನಾಲ್ಕು ಭಾಗಗಳನ್ನು ವೈಶ್ಯಸ್ತ್ರೀಯ ಪುತ್ರನು ತೆಗೆದುಕೊಳ್ಳಬೇಕು. ಎಲೈ ಭಾರತನೇ, ಉಳಿದ ಒಂದು ಭಾಗವು ಶೂದ್ರ ಸ್ತ್ರೀಯ ಪುತ್ರನಿಗೆ ಸೇರಿದುದು.

ಸೋಽಪಿ ದತ್ತಂ ಹರೇತ್ ಪಿತ್ರಾ ನಾದತ್ತಂ ಹರ್ತುಮರ್ಹತಿ ।
ತ್ರಿಭಿರ್ವರ್ಣೈಸ್ತಥಾ ಜಾತಃ ಶೂದ್ರೋ ದೇಯಧನೋ ಭವೇತ್ ।
ಪ್ರತಿಲೋಮವಿಹೀನಂ ತು ಗ್ರಾಹ್ಯಾಸ್ತೈರ್ಬಾಂಧವಾಃ ಸದಾ ॥೬೦॥

ಅವನೂ ಸಹ ತಂದೆಯು ಕೊಟ್ಟುದನ್ನೇ ಸ್ವೀಕರಿಸಬೇಕು. ಕೊಡದಿದ್ದುದನ್ನು ಕಿತ್ತುಕೊಳ್ಳುವ ಪ್ರಯತ್ನವನ್ನು ಮಾಡಬಾರದು. ಈ ರೀತಿಯಲ್ಲಿ ಮೂರು ವರ್ಣದ ಪಿತೃಗಳಿಂದ ಜನಿಸಿದ್ದರೂ ಶೂದ್ರನು ದೇಯಧನನೇ ಆಗುತ್ತಾನೆ (ಕೊಟ್ಟ ಧನಕ್ಕೆ ಮಾತ್ರ ಅಧಿಕಾರಿಯಾಗುತ್ತಾನೆ). ಪ್ರತಿಲೋಮವಿಲ್ಲದಿದ್ದರೆ (ಶೂದ್ರನು ತನಗಿಂತ ಉತ್ತಮ ವರ್ಣದವರ ಸ್ತ್ರೀಯರನ್ನು ವಿವಾಹವಾಗದಿದ್ದರೆ) ಅಂತಹ ಶೂದ್ರಪುತ್ರನಿಗೆ ಬಂಧುಗಳು ತಂದೆಯ ಆಸ್ತಿಯ ಆ ಭಾಗವನ್ನು ಕೊಡಬೇಕು.

ಶೂದ್ರಸ್ಯ ಸ್ಯಾತ್ ಸವರ್ಣೈವ ಭಾರ್ಯಾ ನಾನ್ಯಾ ಕಥಂಚನ ।
ಶೂದ್ರಸ್ಯ ಸಮಭಾಗಃ ಸ್ಯಾದ್ ಯದಿ ಪುತ್ರಶತಂ ಭವೇತ್ ॥೬೧॥

ಶೂದ್ರನಿಗೆ ತನ್ನ ವರ್ಣಕ್ಕೆ ಸೇರಿದ ಶೂದ್ರಸ್ತ್ರೀಯು ಒಬ್ಬಳೇ ಪತ್ನಿ. ವೈಶ್ಯಾದಿ ಕುಲದಲ್ಲಿ ಜನಿಸಿದ ಸ್ತ್ರೀಯರು ಅವನ ಪತ್ನಿಯರಾಗುವುದಿಲ್ಲ. ಶೂದ್ರನಿಗೆ ನೂರು ಮಕ್ಕಳಿದ್ದರೂ ಅವರು ತಂದೆಯ ಆಸ್ತಿಯನ್ನು ಸಮವಾಗಿ ಹಂಚಿಕೊಳ್ಳಬೇಕು.

ಜಾತಾನಾಂ ಸಮವರ್ಣಾಸು ಪುತ್ರಾಣಾಮವಿಶೇಷತಃ ।
ಸರ್ವೇಷಾಮೇವ ವರ್ಣಾನಾಂ ಸಮಭಾಗೋ ಧನೇ ಸ್ಮೃತಃ ॥೬೨॥

ಒಂದೇ ವರ್ಣದ ಸ್ತ್ರೀಯರಲ್ಲಿ ಎಂದರೆ ಬ್ರಾಹ್ಮಣಿಯಲ್ಲಿ ಅಥವಾ ಕ್ಷತ್ರಿಯಳಲ್ಲಿ ಅಥವಾ ವೈಶ್ಯರಲ್ಲಿ ಎಷ್ಟು ಪುತ್ರರು ಜನಿಸಿದ್ದರೂ ಅವರು ಹಿಂದೆ ಹೇಳಿದ ರೀತಿಯಲ್ಲಿ ಬಂದ ಭಾಗವನ್ನು ಸಮವಾಗಿ ಹಂಚಿಕೊಳ್ಳಬೇಕು.

ಜ್ಯೇಷ್ಠಸ್ಯ ಭಾಗೋ ಜ್ಯೇಷ್ಠಃ ಸ್ಯಾದೇಕಾಂಶೋ ಯಃ ಪ್ರಧಾನತಃ ।
ಏಷ ದಾಯವಿಧಿಃ ಪಾರ್ಥ ಪೂರ್ವಮುಕ್ತಃ ಸ್ವಯಂಭುವಾ ॥೬೩॥

ಜ್ಯೇಷ್ಠಪುತ್ರನಿಗೆ ಪ್ರಾಧಾನ್ಯವಿರುವ ಕಾರಣ ಅವನಿಗೆ ಸ್ವಲ್ಪ ಭಾಗವನ್ನು ಅಧಿಕವಾಗಿ ಕೊಡಬೇಕು. ಎಲೈ ಭಾರತನೇ, ಇದು ಬ್ರಹ್ಮದೇವರು ಹಿಂದೆ ಉಪದೇಶ ಮಾಡಿದ ಆಸ್ತಿ ವಿಭಾಗದ ವಿಧಿ.

ಸಮವರ್ಣಾಸು ಜಾತಾನಾಂ ವಿಶೇಷೋಽಸ್ತ್ಯಪರೋ ನೃಪ ।
ವಿವಾಹವೈಶೇಷ್ಯಕೃತಃ ಪೂರ್ವಃ ಪೂರ್ವೋ ವಿಶಿಷ್ಯತೇ ॥೬೪॥

ಎಲೈ ರಾಜನೇ, ಒಂದೇ ವರ್ಣದ ಸ್ತ್ರೀಯಲ್ಲಿ ಜನಿಸಿದವರಲ್ಲಿ ಇನ್ನೊಂದು ವಿಶೇಷವಿದೆ. ವಿವಾಹದ ಕ್ರಮವನ್ನು ಅನುಸರಿಸಿ ಮೊದಮೊದಲು ಜನಿಸಿದವನು ಶ್ರೇಷ್ಠನೆನಿಸುತ್ತಾನೆ.

ಹರೇಜ್ಜ್ಯೇಷ್ಠಃ ಪ್ರಧಾನಾಂಶಮೇಕಂ ತುಲ್ಯಾಸುತೇಷ್ವಪಿ ।
ಮಧ್ಯಮೋ ಮಧ್ಯಮಂ ಚೈವ ಕನೀಯಾಂಸ್ತು ಕನೀಯಸಮ್ ॥೬೫॥

ಒಂದೇ ವರ್ಣದ ಅನೇಕ ಸ್ತ್ರೀಯರನ್ನು ವಿವಾಹ ಮಾಡಿಕೊಂಡರೂ ಆ ಸ್ತ್ರೀಯರೆಲ್ಲರೂ ಸಮಾನರಾದರೂ ಅವರಲ್ಲಿ ಜ್ಯೇಷ್ಠಪುತ್ರನು ಪ್ರಧಾನಾಂಶವನ್ನೂ, ಮಧ್ಯಮ ಪುತ್ರನು ಮಧ್ಯಮಾಂಶವನ್ನೂ, ಕನಿಷ್ಠ ಪುತ್ರನು ಕನಿಷ್ಠಾಂಶವನ್ನು ತೆಗೆದುಕೊಳ್ಳಬೇಕು.

ಏವಂ ಜಾತಿಷು ಸರ್ವಾಸು ಸವರ್ಣಾಃ ಶ್ರೇಷ್ಠತಾಂ ಗತಾಃ ।
ಮಹರ್ಷಿರಪಿ ಚೈತದ್ ವೈ ಮಾರೀಚಃ ಕಾಶ್ಯಪೋಽಬ್ರವೀತ್ ॥೬೬॥

ಹೀಗೆ ಎಲ್ಲ ಜಾತಿಗಳಲ್ಲಿಯೂ ಸಜಾತೀಯರು ಶ್ರೇಷ್ಠರೆನಿಸುತ್ತಾರೆ. ಮರೀಚಿ ಪುತ್ರರಾದ ಕಶ್ಯಪ ಮಹರ್ಷಿಗಳೂ ಸಹ ಇದನ್ನು ಹೇಳಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದಾಯಾದವಿಭಾಗವಿಧಿರ್ನಾಮ
ಸಪ್ತಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆಂಟನೆಯ ಅಧ್ಯಾಯ

ಸಂಕರವರ್ಣಗಳ ವಿಭಾಗ.

ಯುಧಿಷ್ಠಿರಃ

ಅರ್ಥಾಶ್ರಯಾದ್ವಾ ಕಾಮಾದ್ವಾ ವರ್ಣಾನಾಂ ವಾಪ್ಯನಿಶ್ಚಯಾತ್ ।
ಅಜ್ಞಾನಾದ್ವಾಪಿ ವರ್ಣಾನಾಂ ಜಾಯತೇ ವರ್ಣಸಂಕರಃ ॥೧॥

ತೇಷಾಮೇತೇನ ವಿಧಿನಾ ಜಾತಾನಾಂ ವರ್ಣಸಂಕರೇ ।
ಕೋ ಧರ್ಮಃ ಕಾನಿ ಕರ್ಮಾಣಿ ತನ್ಮೇ ಬ್ರೂಹಿ ಪಿತಾಮಹ ॥೨॥

ಯುಧಿಷ್ಠಿರ– ಧನದ ನಿಮಿತ್ತದಿಂದಾಗಲಿ, ಕಾಮದಿಂದಾಗಲೀ, ವರ್ಣದ ಜ್ಞಾನವಿಲ್ಲದಿರುವುದರಿಂದಾಗಲೀ ಅಥವಾ ಅಜ್ಞಾನದಿಂದಾಗಲೀ ವರ್ಣಸಂಕರವು ಉಂಟಾಗುತ್ತದೆ. ಎಲೈ ಪಿತಾಮಹನೇ, ಈ ವರ್ಣಸಂಕರದಿಂದ ಜನಿಸಿದವರಿಗೆ ಯಾವ ಧರ್ಮ ಮತ್ತು ಯಾವ ಕರ್ಮಗಳು ಹೇಳಲ್ಪಡುತ್ತವೆ ಎಂದು ನನಗೆ ತಿಳಿಸು.

ಭೀಷ್ಮಃ

ಚಾತುರ್ವರ್ಣ್ಯಸ್ಯ ಕರ್ಮಾಣಿ ಚಾತುರ್ವರ್ಣ್ಯಂ ಚ ಕೇವಲಮ್ ।
ಅಸೃಜತ್ ಸ ಹ ಯಜ್ಞಾರ್ಥೇ ಪೂರ್ವಮೇವ ಪ್ರಜಾಪತಿಃ ॥೩॥

ಭೀಷ್ಮ– ಬ್ರಹ್ಮದೇವರು ಯಜ್ಞದ ಸಲುವಾಗಿ ನಾಲ್ಕು ವರ್ಣಗಳನ್ನು ಸೃಷ್ಟಿಸಿ ನಾಲ್ಕು ವರ್ಣಕ್ಕೆ ಸಂಬಂಧಪಟ್ಟ ಧರ್ಮವನ್ನು ಅವರಿಗೇ ವಿಧಿಸಿದ್ದಾರೆ.

ಭಾರ್ಯಾಶ್ಚತಸ್ರೋ ವಿಪ್ರಸ್ಯ ದ್ವಯೋರಾತ್ಮಾಸ್ಯ ಜಾಯತೇ ।
ಆನುಪೂರ್ವ್ಯಾದ್ ದ್ವಯೋರ್ಹೀನೌ ಮಾತೃಜಾತ್ಯೌ ಪ್ರಸೂಯತಃ ॥೪॥

ಬ್ರಾಹ್ಮಣರಿಗೆ ನಾಲ್ಕು ವರ್ಣದವರು ಭಾರ್ಯೆಯರು. ಅವರಲ್ಲಿ ಮೊದಲನೆಯ ಎರಡು ವರ್ಣದಲ್ಲಿ ತಾನೇ ಜನಿಸುತ್ತಾನೆ. ಕೊನೆಯ ಎರಡು ವರ್ಣಗಳಲ್ಲಿ ಹೀನನಾದ ಮಾತೃಜಾತಿಗೆ ಸೇರಿದ ಪುತ್ರರನ್ನು ಪಡೆಯುತ್ತಾನೆ.

ಪರಂ ಶವಾದ್ ಬ್ರಾಹ್ಮಣಸ್ಯೈಷ ಪುತ್ರಃ
ಶೂದ್ರಾಪುತ್ರಂ ಪಾರಶವಂ ತಮಾಹುಃ ।
ಶುಶ್ರೂಷಕಃ ಸ್ವಸ್ಯ ಕುಲಸ್ಯ ಸ ಸ್ಯಾತ್
ಸ್ವಂ ಚಾರಿತ್ರಂ ನಿತ್ಯಮಧೋ ನ ಜಹ್ಯಾತ್ ॥೫॥

ಬ್ರಾಹ್ಮಣನಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಪುತ್ರನನ್ನು ಪಾರಶವ ಎಂದು ಕರೆಯುತ್ತಾರೆ. ಶೂದ್ರನಿಗೆ ಶವ ಎಂದು ಹೆಸರು. ಆ ಪುತ್ರನು ಶೂದ್ರನಿಗಿಂತ ಶ್ರೇಷ್ಠನಾದುದರಿಂದ ಪಾರಶವ ಎಂದು ಕರೆಯುತ್ತಾರೆ. ಅವನು ತನ್ನ ಕುಲದ ಶುಶ್ರೂಷೆಯನ್ನು ಮಾಡಬೇಕು ಮತ್ತು ತನ್ನ ಶೀಲವನ್ನು ಯಾವಾಗಲೂ ಬಿಡದೆ ರಕ್ಷಿಸಿಕೊಳ್ಳಬೇಕು.

ಸರ್ವಾನುಪಾಯಾನಪಿ ಸಂಪ್ರಧಾರ್ಯ
ಸಮುದ್ಧರೇತ್ ಸ್ವಸ್ಯ ಕುಲಸ್ಯ ತಂತುಮ್ ।
ಜ್ಯೇಷ್ಠೋ ಯವೀಯಾನಥ ವೈ ದ್ವಿಜೇಭ್ಯಃ
ಶುಶ್ರೂಷವಾನ್ ದಾನಪರಾಯಣಃ ಸ್ಯಾತ್ ॥೬॥

ಎಲ್ಲ ಉಪಾಯಗಳನ್ನೂ ಪರೀಕ್ಷಿಸಿ ತನ್ನ ಕುಲದ ತಂತುವನ್ನು ಬೆಳೆಸಬೇಕು. ಬ್ರಾಹ್ಮಣನಿಗೆ ಶೂದ್ರ ಸ್ತ್ರೀಯಲ್ಲಿ ಹುಟ್ಟಿದ ಪುತ್ರನು ವಯಸ್ಸಿನಲ್ಲಿ ಜ್ಯೇಷ್ಠನಾಗಿದ್ದರೂ ಬ್ರಾಹ್ಮಣ ಜಾತಿಯಲ್ಲಿ ಅನಂತರ ಹುಟ್ಟಿದ ಪುತ್ರನಿಗಿಂತ ಕನಿಷ್ಠನಾದವನು.

ತಿಸ್ರಃ ಕ್ಷತ್ರಿಯಸಂಬಾಧಾದ್ ದ್ವಯೋರಾತ್ಮಾಸ್ಯ ಜಾಯತೇ ।
ಹೀನವರ್ಣಸ್ತೃತೀಯಾಯಾಂ ಶೂದ್ರ ಉಗ್ರ ಇತಿ ಸ್ಮೃತಃ ॥೭॥

ಕ್ಷತ್ರಿಯನಿಗೆ ಮೂರುವರ್ಣದ ಸ್ತ್ರೀಯರ ಸಮಾಗಮವಾಗಬಹುದು. ಕ್ಷತ್ರಿಯ ಮತ್ತು ವೈಶ್ಯ ಸ್ತ್ರೀಯರಲ್ಲಿ ತಾನೇ ಜನಿಸುತ್ತಾನೆ. ಶೂದ್ರಸ್ತ್ರೀಯಲ್ಲಿ ಕ್ಷತ್ರಿಯನಿಗೆ ಜನಿಸಿದ ಶೂದ್ರನನ್ನು ಉಗ್ರನೆಂದು ಕರೆಯುತ್ತಾರೆ.

ದ್ವೇ ಚಾಪಿ ಭಾರ್ಯೇ ವೈಶ್ಯಸ್ಯ ದ್ವಯೋರಾತ್ಮಾಸ್ಯ ಜಾಯತೇ ।
ಶೂದ್ರಾ ಶೂದ್ರಸ್ಯ ಚಾಪ್ಯೇಕಾ ಶೂದ್ರಮೇವ ಪ್ರಜಾಯತೇ ॥೮॥

ವೈಶ್ಯನಿಗೆ ವೈಶ್ಯಸ್ತ್ರೀ ಮತ್ತು ಶೂದ್ರ ಸ್ತ್ರೀ ಇಬ್ಬರು ಭಾರ್ಯೆಯರು. ಅವರಲ್ಲಿ ವೈಶ್ಯಸ್ತ್ರೀಯಲ್ಲಿ ತಾನೇ ಜನಿಸುತ್ತಾನೆ. ಶೂದ್ರನಿಗೆ ಶೂದ್ರಸ್ತ್ರೀಯೊಬ್ಬಳೇ ಭಾರ್ಯೆ. ಅವಳು ಶೂದ್ರನೊಬ್ಬನನ್ನೇ ಪ್ರಸವಿಸುತ್ತಾಳೆ (ಲಕ್ಷಾಲಂಕಾರ).

ಅತೋಽವಿಶಿಷ್ಟಸ್ತ್ವಧಮೋ ಗುರುದಾರಪ್ರಧರ್ಷಕಃ ।
ಬಾಹ್ಯಂ ವರ್ಣಂ ಜನಯತಿ ಚಾತುರ್ವರ್ಣ್ಯವಿಗರ್ಹಿತಮ್ ॥೯॥

ಆದ್ದರಿಂದ ಯಾವ ಗುಣವನ್ನು ಹೊಂದದ ಅಧಮನಾದವನು ತನಗಿಂತ ಉತ್ತಮ ವರ್ಣದ ಸ್ತ್ರೀಯನ್ನು ಸ್ಪರ್ಶ ಮಾಡಿದರೆ ಚಾತುರ್ವರ್ಣ್ಯನಿಂದಿತನಾದ, ವರ್ಣ ಬಾಹ್ಯನಾದ ಪುತ್ರನನ್ನು ಪಡೆಯುತ್ತಾನೆ.

ಅಯಾಜ್ಯಂ ಕ್ಷತ್ರಿಯೋ ವ್ರಾತ್ಯಂ ಸೂತಂ ಸ್ತೋಮಕ್ರಿಯಾಪರಮ್ ।
ವೈಶ್ಯೋ ವೈದೇಹಕಂ ಚಾಪಿ ಮೌದ್ಗಲ್ಯಮಪವರ್ಜಿತಮ್ ॥೧೦॥

ಕ್ಷತ್ರಿಯನು ಬ್ರಾಹ್ಮಣ ಸ್ತ್ರೀಯಲ್ಲಿ ಯಾಗಕ್ಕೆ ಅರ್ಹನಲ್ಲದ ವ್ರಾತ್ಯನೆಂಬ ಸೂತನನ್ನು ಪಡೆಯುತ್ತಾನೆ. ಅವನು ರಥವನ್ನು ನಡೆಸುವುದು ಮತ್ತು ರಾಜರನ್ನು ಸ್ತೋತ್ರ ಮಾಡುವುದು ಇಂತಹ ಕಾರ್ಯಗಳಲ್ಲಿ ನಿರತನಾಗಿರುತ್ತಾನೆ. ವೈಶ್ಯನು ಬ್ರಾಹ್ಮಣ ಕನ್ಯೆಯಲ್ಲಿ ಮುದ್ಗಲನೆಂಬ ಹೀನಜಾತಿಯ ಪುತ್ರನನ್ನು ಪಡೆಯುತ್ತಾನೆ. ಮುಗಿಲ ಎಂದು ಆ ಜಾತಿಗೆ ಬಳಕೆಯಲ್ಲಿರುವ ಹೆಸರು. ಅಂತಹ ಪುತ್ರನಿಗೆ ವೈದೇಹಕ ಎಂದು ಹೆಸರು ಅವನು ಅಂತಃಪುರದ ಸ್ತ್ರೀಯರ ಸೇವಾಕಾರ್ಯದಲ್ಲಿ ನಿರತನಾಗಿರುತ್ತಾನೆ - (ಲಕ್ಷಾಲಂಕಾರ).

ಶೂದ್ರಶ್ಚಂಡಾಲಮತ್ಯುಗ್ರಂ ವಧ್ಯಘ್ನಂ ಬಾಹ್ಯವಾಸಿನಮ್ ।
ಬ್ರಾಹ್ಮಣ್ಯಾಂ ಸಂಪ್ರಜಾಯಂತ ಇತ್ಯೇತೇ ಕುಲಪಾಂಸನಾಃ ।
ಏತೇ ಮತಿಮತಾಂ ಶ್ರೇಷ್ಠ ವರ್ಣಸಂಕರಜಾಃ ಪ್ರಭೋ ॥೧೧॥

ಶೂದ್ರನು ಬ್ರಾಹ್ಮಣಸ್ತ್ರೀ ಸಮಾಗಮವನ್ನು ಮಾಡಿದರೆ ಅತ್ಯಂತ ಉಗ್ರನಾದ ಅಪರಾಧ ಮಾಡಿ ವಧ್ಯರಾದವರನ್ನು ವಧೆ ಮಾಡುವ, ಊರಿನ ಹೊರಗೆ ವಾಸಿಸುವ ಪುತ್ರನನ್ನು ಪಡೆಯುತ್ತಾನೆ. ಎಲೈ ಮೇಧಾವಿಗಳಲ್ಲಿ ಶ್ರೇಷ್ಠನೇ, ಪ್ರಭುವೇ, ಇವರೆಲ್ಲರೂ ಬ್ರಾಹ್ಮಣ ಸ್ತ್ರೀಯಲ್ಲಿ ವರ್ಣಸಂಕರದಿಂದ ಹುಟ್ಟಿದ ಕುಲನಾಶಕರು.

ಬಂದೀ ತು ಜಾಯತೇ ವೈಶ್ಯಾನ್ಮಾಗಧೋ ವಾಕ್ಯಜೀವನಃ ।
ಶೂದ್ರಾನ್ನಿಷಾದೋ ಮತ್ಸ್ಯಘ್ನಃ ಕ್ಷತ್ರಿಯಾಯಾಂ ವ್ಯತಿಕ್ರಮಾತ್ ॥೧೨॥

ವೈಶ್ಯನಿಗೆ ಕ್ಷತ್ರಿಯ ಸ್ತ್ರೀಯಲ್ಲಿ ಹುಟ್ಟಿದ ಪುತ್ರನ ಜಾತಿಗೆ ಮಾಗಧ ಎಂದು ಹೆಸರು. ಅವರು ರಾಜನನ್ನು ದೊಡ್ಡವಾಕ್ಯಗಳಿಂದ ಹೊಗಳಿ ಜೀವಿಸುವವರು. ಶೂದ್ರನಿಗೆ ಕ್ಷತ್ರಿಯ ಸ್ತ್ರೀಯಲ್ಲಿ ಹುಟ್ಟಿದವನು ನಿಷಾದನೆನಿಸುತ್ತಾನೆ. ಅವನು ಮತ್ಸ್ಯಗಳನ್ನು ಕೊಲ್ಲುವ ವೃತ್ತಿಯನ್ನು ಹೊಂದಿರುತ್ತಾನೆ.

ಶೂದ್ರಾದಾಯೋಗವಶ್ಚಾಪಿ ವೈಶ್ಯಾಯಾಂ ಗ್ರಾಮಧರ್ಮಿಣಃ ।
ಬ್ರಾಹ್ಮಣೈರಪ್ರತಿಗ್ರಾಹ್ಯಸ್ತಕ್ಷಾ ಸ ವನಜೀವನಃ ॥೧೩॥

ಶೂದ್ರನು ವೈಶ್ಯಸ್ತ್ರೀ ಜೊತೆಯಲ್ಲಿ ಸಮಾಗಮವನ್ನು ಮಾಡಿದರೆ ಅಯೋಗವನೆಂಬ ಜಾತಿಯ ಪುತ್ರನು ಹುಟ್ಟುತ್ತಾನೆ. ಅವನು ಬ್ರಾಹ್ಮಣರಿಂದ ಸ್ವೀಕೃತನಾಗುವುದಿಲ್ಲ. ಕಾಡಿನಲ್ಲಿ ವಾಸಿಸಿ ಬಡಗಿಯ ವೃತ್ತಿಯನ್ನು ಮಾಡುತ್ತಾನೆ.

ಏತೇऽಪಿ ಸದೃಶಂ ವರ್ಣಂ ಜನಯಂತಿ ಸ್ವಯೋನಿಷು ।
ಮಾತೃಜಾತ್ಯಾಂ ಪ್ರಸೂಯಂತೇ ಪ್ರವರಾ ಹೀನಯೋನಿಷು ॥೧೪॥

ಈ ಸಂಕರ ಜಾತಿಯವರೂ ಕೂಡ ತಮ್ಮ ಜಾತಿಯ ಸ್ತ್ರೀಯರಲ್ಲಿ ಸಮಾಗಮವನ್ನು ಮಾಡಿದರೆ ಜನಿಸುವ ಪುತ್ರರು ತಮ್ಮ ಜಾತಿಯವರೇ ಆಗಿರುತ್ತಾರೆ. ತಮಗಿಂತ ಹೀನ ಜಾತಿಯವರ ಜೊತೆಯಲ್ಲಿ ಸಮಾಗಮವನ್ನು ಮಾಡಿದರೆ ಜನಿಸುವ ಪುತ್ರನು ಆ ತಾಯಿಯ ಜಾತಿಗೆ ಸೇರಿದವರಾಗುತ್ತಾರೆ.

ಯಥಾ ಚತುರ್ಷು ವರ್ಣೇಷು ದ್ವಯೋರಾತ್ಮಾಸ್ಯ ಜಾಯತೇ ।
ಆನಂತರ್ಯಾತ್ತು ಜಾಯಂತೇ ತಥಾ ಬಾಹ್ಯಾಃ ಪ್ರಧಾನತಃ ॥೧೫॥

ನಾಲ್ಕು ವರ್ಣದವರಲ್ಲಿ ಮೊದಲನೆಯ ಎರಡು ವರ್ಣಗಳಲ್ಲಿ ತಾನೇ ಜನಿಸುತ್ತಾನೆ. ಅನಂತರದ ವರ್ಣಗಳಲ್ಲಿ ಪ್ರಧಾನವಾಗಿ ಬಾಹ್ಯರೇ ಜನಿಸುತ್ತಾರೆ (ಬ್ರಾಹ್ಮಣನಿಗೆ ಬ್ರಾಹ್ಮಣ-ಕ್ಷತ್ರಿಯರಲ್ಲಿ ಜನಿಸುವವರು ಬ್ರಾಹ್ಮಣರೂ, ವೈಶ್ಯ ಸ್ತ್ರೀಯಲ್ಲಿ ಹುಟ್ಟುವವನು ವೈಶ್ಯನೂ, ಶೂದ್ರಸ್ತ್ರೀಯಲ್ಲಿ ಹುಟ್ಟುವವನು ಶೂದ್ರನೂ ಆಗುತ್ತಾನೆ).

ತೇ ಚಾಪಿ ಸದೃಶಂ ವರ್ಣಂ ಜನಯಂತಿ ಸ್ವಯೋನಿಷು ।
ಪರಸ್ಪರಸ್ಯ ವರ್ತಂತೋ ಜನಯಂತಿ ವಿಗರ್ಹಿತಾನ್ ॥೧೬॥

ಈ ಸಂಕರ ಜಾತಿಯಲ್ಲಿ ಜನಿಸುವವರೂ ಸಹ ತಮ್ಮ ತಮ್ಮ ಜಾತಿಗೆ ಸೇರಿದ ಸ್ತ್ರೀಯರಲ್ಲಿ ತಮ್ಮ ತಮ್ಮ ಜಾತಿಗೆ ಸೇರಿದ ಪುತ್ರರನ್ನೇ ಪಡೆಯುತ್ತಾರೆ. ಅವರು ಪರಸ್ಪರವಾಗಿ ಸಹಾಯವನ್ನು ಮಾಡಿಕೊಂಡು ವೇದವರ್ಗದಿಂದ ನಿಂದಿತರಾದ ಪುತ್ರರನ್ನು ಪಡೆಯುತ್ತಾರೆ.

ಯಥಾ ಚ ಶೂದ್ರೋ ಬ್ರಾಹ್ಮಣ್ಯಾಂ ಜಂತುಂ ಬಾಹ್ಯಂ ಪ್ರಸೂಯತೇ ।
ಏವಂ ಬಾಹ್ಯತರಾದ್ ಬಾಹ್ಯಶ್ಚಾತುರ್ವರ್ಣ್ಯಾತ್ ಪ್ರಸೂಯತೇ ॥೧೭॥

ಹೇಗೆ ಶೂದ್ರನು ಬ್ರಾಹ್ಮಣ ಸ್ತ್ರೀಯ ಸಂಪರ್ಕವನ್ನು ಮಾಡಿದರೆ ಜನಿಸುವ ಪುತ್ರನು ಚಂಡಾಲನಾಗುತ್ತಾನೆಯೋ ಅದರಂತೆ ಚಾತುರ್ವರ್ಣದಿಂದ ಹೊರಗೆ ಇರುವವನು ಚಾತುರ್ವರ್ಣದ ಸ್ತ್ರೀಯನ್ನು ಸಂಪರ್ಕಿಸಿದರೆ ಚಂಡಾಲನಿಗಿಂತಲೂ ಬಾಹ್ಯನಾದ ಪುತ್ರನನ್ನು ಪಡೆಯುತ್ತಾನೆ.

ಪ್ರತಿಲೋಮಂ ತು ವರ್ತಂತೋ ಬಾಹ್ಯಾದ್ ಬಾಹ್ಯತರಂ ಪುನಃ ।
ಹೀನಾ ಹೀನಾತ್ ಪ್ರಸೂಯಂತೇ ವರ್ಣಾಃ ಪಂಚದಶೈವ ತೇ ॥೧೮॥

ಅವರೂ ಸಹ ಪ್ರತಿಲೋಮವಾಗಿ ನಡೆದುಕೊಂಡರೆ (ಪ್ರತಿಲೋಮವೆಂದರೆ ತಮಗಿಂತ ಉತ್ತಮ ಜಾತಿಯ ಸ್ತ್ರೀಯ ಸಂಪರ್ಕವನ್ನು ಮಾಡುವುದು) ಹೀನರಿಗಿಂತಲೂ ಹೀನರಾದ ಜಾತಿಗೆ ಸೇರಿದ ಪುತ್ರರನ್ನು ಪಡೆಯುತ್ತಾರೆ. ಹೀಗೆ ಸಂಕರ ಜಾತಿಗೆ ಸೇರಿದ ಜಾತಿಗಳು (ಸ್ಥೂಲವಾಗಿ) ಹದಿನೈದು ಆಗುತ್ತವೆ.

ಅಗಮ್ಯಾಗಮನಾಚ್ಚೈವ ವರ್ತತೇ ವರ್ಣಸಂಕರಃ ।
ವ್ರಾತ್ಯಾನಾಮತ್ರ ಜಾಯಂತೇ ಸೈರಂಧ್ರಾ ಮಾಗಧೇಷು ಚ ।
ಪ್ರಸಾಧನೋಪಚಾರಜ್ಞಮದಾಸಂ ದಾಸಜೀವನಮ್ ॥೧೯॥

ಅಗಮ್ಯಳಾದ ಸ್ತ್ರೀಯನ್ನು ಗಮನ ಮಾಡುವುದರಿಂದಲೂ ವರ್ಣಸಂಕರವು ಉಂಟಾಗುತ್ತದೆ. ಕ್ಷತ್ರಿಯನಿಗೆ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದ ವ್ರಾತ್ಯನಿಗೆ ಮಾಗಧ ಜಾತಿಯ ಸ್ತ್ರೀಯಲ್ಲಿ ಸೈರಂಧ್ರ ಜಾತಿಗೆ ಸೇರಿದವರು ಹುಟ್ಟುತ್ತಾರೆ. ಅವರು ದಾಸರಾಗದೆ ಸ್ತ್ರೀಯರಿಗೆ ಅಲಂಕಾರ ಮಾಡುವುದು ಮುಂತಾದ ಕಾರ್ಯಗಳಲ್ಲಿ ದಾಸಜೀವನವನ್ನು ನಡೆಸುತ್ತಾರೆ.

ಅತಶ್ಚಾಯೋಗವಂ ಸೂತೇ ವಾಗುರಾವನಜೀವನಮ್ ।
ಮೈರೇಯಕಂ ಚ ವೈದೇಹಃ ಸಂಪ್ರಸೂತೇऽಥ ಮಾಧುಕಮ್ ॥೨೦॥

ಸೈರಂಧ್ರಜಾತಿಯ ಸ್ತ್ರೀಯು ಅಯೋಗವಜಾತಿಯ ಪುರುಷನೊಡನೆ ಸಮಾಗಮವನ್ನು ಮಾಡಿದರೆ ಅಯೋಗವ ಜಾತಿಯವನನ್ನೇ ಪ್ರಸವಿಸುತ್ತಾಳೆ. ಅವನು ಬಲೆಗಳಿಂದ ಪ್ರಾಣಿಗಳನ್ನು ಹಿಡಿದು ಕಾಡಿನಲ್ಲಿ ಜೀವಿಸುವವನು. ಈ ಸೈರಂಧ್ರ ಸ್ತ್ರೀಯೊಡನೆ ವೈದೇಹಕನು ಸಂಪರ್ಕ ಮಾಡಿದರೆ ಮೈರೇಯ ಮತ್ತು ಮಾಧುಕರೆಂಬ ಜಾತಿಗೆ ಸೇರಿದ ಪುತ್ರರನ್ನು ಪಡೆಯುತ್ತಾನೆ. ಇವರಿಬ್ಬರೂ ಮದ್ಯವನ್ನು ಮಾಡಿ, ಮಾರಿ ಜೀವಿಸುವವರು.

ನಿಷಾದೋ ಮುದ್ಗರಂ ಸೂತೇ ದಾಶಂ ನಾವೋಪಜೀವಿನಮ್ ।
ಮೃತಪಂ ಚಾಪಿ ಚಂಡಾಲಃ ಶ್ವಪಾಕಮತಿಕುತ್ಸಿತಮ್ ॥೨೧॥

ನಿಷಾದನು ಸೈರಂಧ್ರಜಾತಿಯ ಸ್ತ್ರೀಯೊಡನೆ ಸಂಪರ್ಕ ಮಾಡಿದರೆ ಅವಳಲ್ಲಿ ಮುದ್ಗರ ಜಾತಿಯ ಪುತ್ರನು ಹುಟ್ಟುತ್ತಾನೆ. ಅವನು ನಾವೆಯನ್ನು ನಡೆಸುವವನು ಮತ್ತು ಅದರಿಂದಲೇ ಜೀವನವನ್ನು ಮಾಡುವವನು. ಅವನಿಗೆ ದಾಶ ಎಂದು ಹೆಸರು. ಚಂಡಾಲನು ಸೈರಂಧ್ರಿಯೊಡನೆ ಸಮಾಗಮ ಮಾಡಿದರೆ ಮೃತಪ ಎಂಬ ಅತೀ ಕುತ್ಸಿತನಾದ ಶ್ವಪಾಕ ಎಂಬ ಪುತ್ರನನ್ನು ಪಡೆಯುತ್ತಾನೆ.

ಚತುರೋ ಮಾಗಧೀ ಸೂತೇ ಕ್ರೂರಾನ್ ಮಾಯೋಪಜೀವಿನಃ ।
ಮಾಂಸಂ ಸ್ವಾದುಕರಂ ಸೂದಂ ಸೌಗಂಧಮಿತಿ ಸಂಜ್ಞಿತಮ್ ॥೨೨॥

ಮಾಗಧ ಜಾತಿಗೆ ಸೇರಿದ ಸ್ತ್ರೀಯು ಕಪಟದಿಂದ ಜೀವಿಸುವ ಕ್ರೂರರಾದ ನಾಲ್ಕು ಜಾತಿಯ ಮಕ್ಕಳನ್ನು ಪಡೆಯುತ್ತಾಳೆ. ಅವರಿಗೆ ಕ್ರಮವಾಗಿ ಮಾಂಸ-ಸ್ವಾದುಕರ-ಸೂದ ಮತ್ತು ಸೌಗಂಧ ಎಂದು ಹೆಸರು.

ವೈದೇಹಕಾಚ್ಚ ಪಾಪಿಷ್ಠಂ ಕ್ರೂರಂ ಭಾರ್ಯೋಪಜೀವಿನಮ್ ।
ನಿಷಾದಾನ್ ಮದ್ರನಾಭಂ ಚ ಖರಯಾನಪ್ರಯಾಯಿನಮ್ ॥೨೩॥

ಅಯೋಗವ ಜಾತಿಗೆ ಸೇರಿದ ಸ್ತ್ರೀಯು ವೈದೇಹಕನಿಂದ ಪಾಪಿಷ್ಠನೂ, ಕ್ರೂರನೂ, ಹೆಂಡತಿಯನ್ನು ಉಪಜೀವಿಸುವವನೂ ಆದ ಪುತ್ರನನ್ನು ಪಡೆಯುತ್ತಾಳೆ. ಅವಳು ನಿಷಾದನೊಡನೆ ಸಂಪರ್ಕವನ್ನು ಮಾಡಿದರೆ ಕತ್ತೆಯ ಯಾನವನ್ನು ಹೊಡೆಯುವ ಮದ್ರನಾಭನೆಂಬ ಜಾತಿಯ ಪುತ್ರನನ್ನು ಪಡೆಯುತ್ತಾಳೆ.

ಚಂಡಾಲಾತ್ ಪುಲ್ಕಸಂ ಚಾಪಿ ಖರಾಶ್ವಗಜಭೋಜಿನಮ್ ।
ಮೃತಚೇಲಪ್ರತಿಚ್ಛನ್ನಂ ಭಿನ್ನಭಾಜನಭೋಜಿನಮ್ ॥೨೪॥

ಅಯೋಗವ ಕನ್ಯೆಯು ಚಂಡಾಲನ ಸಂಪರ್ಕವನ್ನು ಮಾಡಿದರೆ ಪುಲ್ಕಸ ಜಾತಿಯ (ಮೃತವಾದ) ಕತ್ತೆ, ಕುದುರೆ ಮತ್ತು ಆಡುಗಳನ್ನು ಭಕ್ಷಿಸುವ, ಶವವಸ್ತ್ರವನ್ನು ಧರಿಸುವ, ಒಡೆದ ಪಾತ್ರೆಗಳಲ್ಲಿ ಭುಂಜಿಸುವ ಪುತ್ರನನ್ನು ಪಡೆಯುತ್ತಾಳೆ.

ಆಯೋಗವೀಷು ಜಾಯಂತೇ ಹೀನವರ್ಣಾಸು ತೇ ತ್ರಯಃ ।
ಕ್ಷುದ್ರೋ ವೈದೇಹಕಾದಂಧ್ರೋ ಬಹಿರ್ಗ್ರಾಮಪ್ರತಿಶ್ರಯಃ ॥೨೫॥

ಅಯೋಗವ ಸ್ತ್ರೀಯಲ್ಲಿ ವೈದೇಹಕನಿಂದ ಶೂದ್ರ, ಅಂಧ್ರ ಮತ್ತು ಕಾರಾವರ ಜಾತಿಗೆ ಸೇರಿದ ಗ್ರಾಮದ ಹೊರಗೆ ವಾಸಿಸುವ ಮೂರು ಹೀನವರ್ಣದ ಪುತ್ರರು ಜನಿಸುತ್ತಾರೆ.

ಕಾರಾವರೋ ನಿಷಾದ್ಯಾಂ ತು ಚರ್ಮಕಾರಾತ್ ಪ್ರಜಾಯತೇ ।
ಚಂಡಾಲಾತ್ ಪಾಂಡುಸೌಪಾಕಸ್ತ್ವಕ್ಸಾರವ್ಯವಹಾರವಾನ್ ॥೨೬॥

ಕಾರಾವರನಿಂದ ನಿಷಾದಿಯಲ್ಲಿ ಚರ್ಮಕಾರರು ಜನಿಸುತ್ತಾರೆ. ಚಂಡಾಲ ಪುರುಷನಿಂದ ನಿಷಾದಿಯಲ್ಲಿ ಹುಟ್ಟಿದ ಸುತನು ಪಾಂಡುಸೌಪಾಕ ಜಾತಿಗೆ ಸೇರಿದವನಾಗುತ್ತಾನೆ. ಅವನು ಚರ್ಮಗಳ ವ್ಯವಹಾರವನ್ನು ಮಾಡಿ ಜೀವಿಸುತ್ತಾನೆ.

ಆಹಿಂಡಿಕೋ ನಿಷಾದೇನ ವೈದೇಹ್ಯಾಂ ಸಂಪ್ರಜಾಯತೇ ।
ಚಂಡಾಲೇನ ತು ಸೌಪಾಕೋ ಮೌದ್ಗಲ್ಯಸಮವೃತ್ತಿಮಾನ್ ॥೨೭॥

ನಿಷಾದನಿಂದ ವೈದೇಹಿಕ ಸ್ತ್ರೀಯಲ್ಲಿ ಹುಟ್ಟುವ ಪುತ್ರನು ಆಹಿಂಡಿಕನೆನಿಸುತ್ತಾನೆ. ಅವನಿಗೆ ಚಂಡಾಲನಿಂದ ಹುಟ್ಟಿದ ಪುತ್ರನು ಸೌಪಾಕನೆನಿಸಿ ಮೌದ್ಗಲ್ಯ ಜಾತಿಗೆ ಸಮವಾದ ವೃತ್ತಿಯನ್ನು ಹೊಂದಿರುತ್ತಾನೆ.

ನಿಷಾದೀ ಚಾಪಿ ಚಂಡಾಲಾತ್ ಪುತ್ರಮಂತಾವಸಾಯಿನಮ್ ।
ಶ್ಮಶಾನಗೋಚರಂ ಸೂತೇ ಬಾಹ್ಯೈರಪಿ ಬಹಿಷ್ಕೃತಮ್ ॥೨೮॥

ನಿಷಾದಸ್ತ್ರೀಯು ಚಂಡಾಲನಿಂದ ಊರಿನ ಹೊರಗೆ ವಾಸಿಸುವ, ವರ್ಣಬಾಹ್ಯರಿಂದಲೂ ಬಹಿಷ್ಕೃತನಾದ, ಶ್ಮಶಾನದಲ್ಲಿ ವಾಸಿಸುವ ಪುತ್ರನನ್ನು ಪಡೆಯುತ್ತಾಳೆ.

ಇತ್ಯೇತಾಃ ಸಂಕರೇ ಜಾತ್ಯಃ ಪಿತೃಮಾತೃವ್ಯತಿಕ್ರಮಾತ್ ।
ಪ್ರಚ್ಛನ್ನಾ ವಾ ಪ್ರಕಾಶಾ ವಾ ವೇದಿತವ್ಯಾಃ ಸ್ವಕರ್ಮಭಿಃ ॥೨೯॥

ಇವು ತಂದೆ-ತಾಯಿಗಳ ಅಪಚಾರದಿಂದ ಉಂಟಾಗುವ ಸಂಕರ ಜಾತಿಗಳು. ಕೆಲವು ರಹಸ್ಯವಾಗಿರುತ್ತವೆ. ಕೆಲವು ಸ್ಪಷ್ಟವಾಗಿ ಗೋಚರಿಸುತ್ತವೆ. ಅವರನ್ನು (ಜಾತಿ) ಅವರ ಕರ್ಮದಿಂದ ತಿಳಿಯಬೇಕು.

ಚತುರ್ಣಾಮೇವ ವರ್ಣಾನಾಂ ಧರ್ಮೋ ನಾನ್ಯಸ್ಯ ವಿದ್ಯತೇ ।
ವರ್ಣಾನಾಂ ಧರ್ಮಹೀನೇಷು ಸಂಜ್ಞಾ ನಾಸ್ತೀಹ ಕಸ್ಯಚಿತ್ ॥೩೦॥

ಎಲ್ಲ ಧರ್ಮಗಳೂ ನಾಲ್ಕು ವರ್ಣದವರಿಗೆ ಹೇಳಲ್ಪಟ್ಟಿವೆ. ವರ್ಣಬಾಹ್ಯರಾಗಿ ಧರ್ಮಹೀನರಾದವರ ವರ್ಣಗಳಿಗೆ ಹೆಸರೇ ಇರುವುದಿಲ್ಲ (ಹೀಗೆ ಸಂಕರ ಜಾತಿಯವರು ಬೆಳೆಯುತ್ತಾ ಹೋಗುವುದರಿಂದ ಅದಕ್ಕೆ ಸಂಖ್ಯೆಯೇ ಇಲ್ಲ).

ಯದೃಚ್ಛಯೋಪಸಂಪನ್ನೈರ್ಯಜ್ಞಸಾಧುಬಹಿಷ್ಕೃತೈಃ ।
ಬಾಹ್ಯಾ ಬಾಹ್ಯೈಸ್ತು ಜಾಯಂತೇ ಯಥಾವೃತ್ತಿ ಯಥಾಶ್ರಯಮ್ ॥೩೧॥

ಯಜ್ಞದಿಂದಲೂ, ಸಜ್ಜನರಿಂದಲೂ ಬಹಿಷ್ಕೃತರಾದವರು ತಮಗೆ ಸಹಜವಾಗಿ ದೊರಕಿದ ಬಾಹ್ಯಸ್ತ್ರೀಯ ಜೊತೆಯಲ್ಲಿ ಸಮಾಗಮವನ್ನು ಮಾಡಿದರೆ ಅವರ ವೃತ್ತಿಗೆ ಮತ್ತು ಆಶ್ರಯಕ್ಕೆ ಅನುಗುಣವಾದ ಪುತ್ರರು ಜನಿಸುತ್ತಾರೆ.

ಕಾರ್ಷ್ಣಾಯಸಮಲಂಕಾರಂ ಪರಿಗೃಹ್ಯ ಚ ನಿತ್ಯಶಃ ।
ವಸೇಯುರೇತೇ ಪಿತ್ರ್ಯೇಸ್ತು ವರ್ತಯಂತಃ ಸ್ವಕರ್ಮಭಿಃ ॥೩೨॥

ಅವರು ಕಬ್ಬಿಣದ (ಉಕ್ಕಿನ) ಆಭರಣಗಳಿಂದ ಅಲಂಕಾರವನ್ನು ಮಾಡಿಕೊಂಡು ಪಿತೃವೃತ್ತಿಯನ್ನೇ ಅನುಸರಿಸಿ ವಾಸಿಸುತ್ತಾರೆ. ಅವರ ಜಾತಿಯನ್ನು ಅವರ ಕರ್ಮಗಳಿಂದಲೇ ತಿಳಿಯಬೇಕು.

ಚತುಷ್ಪಥಶ್ಮಶಾನಾನಿ ಶೈಲಾಂಶ್ಚಾನ್ಯಾನ್ ವನಸ್ಪತೀನ್ ।
ಯುಂಜಂತೇ ಚಾಪ್ಯಲಂಕಾರಾಂಸ್ತಥೋಪಕರಣಾನಿ ಚ ॥೩೩॥

ನಾಲ್ಕು ಬೀದಿಗಳು ಕೂಡುವ ಸ್ಥಳಗಳನ್ನೂ, ಶ್ಮಶಾನಗಳನ್ನೂ, ವನಸ್ಪತಿಗಳನ್ನೂ, ಬೇರೆ ವೃಕ್ಷಗಳನ್ನು ಕಾಯ್ದುಕೊಂಡು ವಾಸಿಸುತ್ತಿರುತ್ತಾರೆ. ಅಂತಹ ಅಲಂಕಾರಗಳನ್ನೇ ಮತ್ತು ಉಪಕರಣಗಳನ್ನೇ ಧರಿಸಿರುತ್ತಾರೆ.

ಗೋಬ್ರಾಹ್ಮಣಾರ್ಥೇ ಸಾಹಾಯ್ಯಂ ಕುರ್ವಾಣಾ ವೈ ನ ಸಂಶಯಃ ।
ಆನೃಶಂಸ್ಯಮನುಕ್ರೋಶಃ ಸತ್ಯವಾಕ್ಯಮಥ ಕ್ಷಮಾ ॥೩೪॥

ಸ್ವಶರೀರೈಃ ಪರಿತ್ರಾಣಂ ಬಾಹ್ಯಾನಾಂ ಸಿದ್ಧಿಕಾರಕಮ್ ।
ಮನುಜವ್ಯಾಘ್ರ ಭವತಿ ತತ್ರ ಮೇ ನಾಸ್ತಿ ಸಂಶಯಃ ॥೩೫॥

ಅವರೂ ಸಹ ಗೋ-ಬ್ರಾಹ್ಮಣರ ಸಲುವಾಗಿ ಸಹಾಯವನ್ನು ಮಾಡಿ ದಯಾಪರರಾಗಿ, ಸತ್ಯವಚನರಾಗಿ, ಕ್ಷಮಾಶೀಲರಾಗಿ ನಡೆದುಕೊಂಡರೆ ಅವರಿಗೂ ಸಹ ಸಿದ್ಧಿಯುಂಟಾಗುತ್ತದೆ (ಮುಂದೆ ಉತ್ತಮ ಜನ್ಮವು ದೊರೆಯುತ್ತದೆ). ಎಲೈ ಮನುಜವ್ಯಾಘ್ರನೇ, ಈ ವಿಷಯದಲ್ಲಿ ನಿನಗೆ ಸಂಶಯವು ಬೇಡ.

ಯಥೋಪದೇಶಂ ಪರಿಕೀರ್ತಿತಾಸು
ನರಃ ಪ್ರಜಾಯೇತ ವಿಚಾರ್ಯ ಬುದ್ಧಿಮಾನ್ ।
ವಿಹೀನಯೋನಿರ್ಹಿ ಸುತೋऽವಸಾದಯೇತ್
ತಿತೀರ್ಷಮಾಣಂ ಸಲಿಲೇ ಯಥೋಪಲಮ್ ॥೩೬॥

ವಿವೇಕಿಯಾದ ಮನುಷ್ಯನಾದವನು ವಿಚಾರ ಮಾಡಿ, ಶಾಸ್ತ್ರದಲ್ಲಿ ಹೇಳಲ್ಪಟ್ಟ ಜಾತಿಗಳನ್ನು ಗಮನಿಸಿ ಪುತ್ರರನ್ನು ಪಡೆಯಬೇಕು. ಹೀನಯೋನಿಯಲ್ಲಿ ಹುಟ್ಟಿದ ಪುತ್ರನು

ನೀರನ್ನು ದಾಟಲು ಬಯಸುವವನನ್ನು ಕಲ್ಲು ಮುಳುಗಿಸುವಂತೆ ತಂದೆಯನ್ನೂ, ಕುಲವನ್ನೂ ನಾಶಗೊಳಿಸುತ್ತಾನೆ.

ಅವಿದ್ವಾಂಸಮಲಂ ಲೋಕೇ ವಿದ್ವಾಂಸಮಪಿ ವಾ ಪುನಃ ।
ನಯಂತೇ ಹ್ಯುತ್ಪಥಂ ನಾರ್ಯಃ ಕಾಮಕ್ರೋಧವಶಾನುಗಮ್ ॥೩೭॥

ನಾರಿಯರು ಕಾಮ-ಕ್ರೋಧವಶನಾದ ಪುರುಷನು ವಿದ್ವಾಂಸನಾಗಿರಲಿ ಅಥವಾ ಅವಿದ್ವಾಂಸನಾಗಿರಲಿ ಅವನನ್ನು ದುರ್ಮಾರ್ಗಕ್ಕೆ ಎಳೆಯುತ್ತಾರೆ.

ಸ್ವಭಾವಶ್ಚೈವ ನಾರೀಣಾಂ ನರಾಣಾಮಿಹ ದೂಷಣಮ್ ।
ಅತ್ಯರ್ಥಂ ನ ಪ್ರಸಜ್ಜಂತೇ ಪ್ರಮದಾಸು ವಿಪಶ್ಚಿತಃ ॥೩೮॥

ಪುರುಷರನ್ನು ದೂಷಿಸುವುದೇ ಈ ಲೋಕದಲ್ಲಿ ನಾರಿಯರ ಸ್ವಭಾವ. ಆದ್ದರಿಂದ ವಿವೇಕಿಗಳಾದ ಪುರುಷರು ನಾರಿಯರಲ್ಲಿ ಬಹಳವಾದ ಸ್ನೇಹವನ್ನು ಹೊಂದುವುದಿಲ್ಲ.

ಯುಧಿಷ್ಠಿರಃ

ವರ್ಣಾಪೇತಮವಿಜ್ಞಾತಂ ನರಂ ಕಲುಷಯೋನಿಜಮ್ ।
ಆರ್ಯರೂಪಮಿವಾನಾರ್ಯಂ ಕಥಂ ವಿದ್ಯಾಮಹೇ ನೃಪ ॥೩೯॥

ಯುಧಿಷ್ಠಿರ– ದುಷ್ಟಯೋನಿಯಲ್ಲಿ ಜನಿಸಿ, ವರ್ಣಬಾಹಿರನಾಗಿ ಅದನ್ನು ತೋರಿಸಿಕೊಳ್ಳದೆ ಶ್ರೇಷ್ಠರೂಪವನ್ನು ತೋರಿಸುವ ಅನಾರ್ಯರನ್ನು ಎಲೈ ರಾಜನೇ, ನಾವು ಹೇಗೆ ತಿಳಿಯಬೇಕು?

ಭೀಷ್ಮಃ

ಯೋನಿಸಂಕಲುಷೇ ಜಾತಂ ನಾನಾಚಾರಸಮಾಹಿತಮ್ ।
ಕರ್ಮಭಿಃ ಸಜ್ಜನಾಚೀರ್ಣೈರ್ವಿಜ್ಞೇಯಾ ಯೋನಿಶುದ್ಧತಾ ॥೪೦॥

ಭೀಷ್ಮ– ಸಜ್ಜನರ ಆಚಾರವನ್ನು ನೋಡಿ, ಯೋನಿಸಂಕರದಿಂದ ಜನಿಸಿದವನು ಅನೇಕ ವಿಧವಾದ ಆಚಾರವನ್ನು ಹೊಂದಿರುವುದನ್ನು ನೋಡಿ ಅವನ ಯೋನಿಯ ಶುದ್ಧಿ-ಅಶುದ್ಧಿಗಳನ್ನು ತಿಳಿಯಬೇಕು.

ಅನಾರ್ಯತ್ವಮನಾಚಾರಃ ಕ್ರೂರತ್ವಂ ನಿಷ್ಕ್ರಿಯಾತ್ಮತಾ ।
ಪುರುಷಂ ವ್ಯಂಜಯಂತೀಹ ಲೋಕೇ ಕಲುಷಯೋನಿಜಮ್ ॥೪೧॥

ನೀಚವರ್ತನೆ, ಆಚಾರರಾಹಿತ್ಯ, ಕ್ರೂರತನ, ಆಲಸ್ಯ - ಇವುಗಳು ಹೀನ ಯೋನಿಯಲ್ಲಿ ಜನಿಸಿದ ಪುರುಷರನ್ನು ತೋರಿಸಿಕೊಡುತ್ತವೆ.

ಪಿತ್ರ್ಯಂ ವಾ ಭಜತೇ ಶೀಲಂ ಮಾತೃಜಂ ವಾ ತಥೋಭಯಮ್ ।
ನ ಕಥಂಚನ ಸಂಕೀರ್ಣಃ ಪ್ರಕೃತಿಂ ಸ್ವಾಂ ನಿಯಚ್ಛತಿ ॥೪೨॥

ಅಂತಹವನು ತಂದೆಯ ಶೀಲವನ್ನಾಗಲೀ ಅಥವಾ ತಾಯಿಯ ಶೀಲವನ್ನಾಗಲೀ ಹೊಂದಿರುತ್ತಾನೆ. ಸಂಕರಜಾತಿಯಲ್ಲಿ ಜನಿಸಿದವನಿಗೆ ತನ್ನ ಸ್ವತಂತ್ರವಾದ ಸ್ವಭಾವ ಎಂಬುದು ಇರುವುದಿಲ್ಲ.

ಯಥೈವ ಸದೃಶೋ ರೂಪೇ ಮಾತಾಪಿತ್ರೋರ್ಹಿ ಜಾಯತೇ ।
ವ್ಯಾಘ್ರಶಿತ್ಥೈಸ್ತಥಾ ಯೋನಿಂ ಪುರುಷಃ ಸ್ವಾಂ ನಿಯಚ್ಛತಿ ॥೪೩॥

ಹೇಗೆ ಮಾತಾ-ಪಿತೃಗಳಿಗೆ ಸದೃಶವಾದ ಚಿತ್ರರೂಪದಿಂದ ವ್ಯಾಘ್ರಶಿಶುವು ಜನಿಸುತ್ತದೆಯೋ ಹಾಗೆಯೇ ಪುರುಷನು ತನ್ನ ಯೋನಿಗೆ ಸ್ವಾಭಾವಿಕವಾದ ಗುಣಗಳಿಂದ ಕೂಡಿ ತನ್ನನ್ನು ತೋರಿಸಿಕೊಳ್ಳುತ್ತಾನೆ.

ಕುಲಸ್ರೋತಸಿ ಸಂಛಿನ್ನೇ ಯಸ್ಯ ಸ್ಯಾದ್ ಯೋನಿಸಂಕರಃ ।
ಸಂಶ್ರಯತ್ಯೇವ ತಚ್ಛೀಲಂ ನರೋಽಲ್ಪಮಪಿ ವಾ ಬಹು ॥೪೪॥

ಕುಲಮೂಲವು ತಿಳಿಯದೆ ಇದ್ದಾಗ ಯೋನಿಸಂಕರದಿಂದ ಜನಿಸಿದ ನರನು ಸ್ವಲ್ಪವಾಗಲೀ ಅಥವಾ ಬಹಳವಾಗಲೀ ತನ್ನ ಜನಕರ ಯೋನಿಗಳ ಶೀಲಗಳನ್ನೇ ಆಶ್ರಯಿಸಿರುತ್ತಾನೆ.

ಆರ್ಯರೂಪಸಮಾಚಾರಂ ಚರಂತಂ ಕೃತಕೇ ಪಥಿ ।
ಸ್ವವರ್ಣಮನ್ಯವರ್ಣಂ ವಾ ಸ್ವಶೀಲಂ ಶಾಸ್ತಿ ನಿಶ್ಚಯೇ ॥೪೫॥

ಸ್ವತಃ ಅನಾರ್ಯನಾದವನು ಆರ್ಯನಾದವನ ನಡವಳಿಕೆಯನ್ನು ಕೃತಕವಾಗಿ ನಡೆಸುತ್ತಾ ಇದ್ದರೆ ಅವನು ಆರ್ಯವರ್ಣದವನೋ ಅಥವಾ ಅನ್ಯವರ್ಣದವನೋ ಎಂದು ನಿಶ್ಚಯಿಸಲು ಅವನ ಶೀಲವೇ ಸಮರ್ಥವಾಗುತ್ತದೆ.

ನಾನಾವೃತ್ತೇಷು ಭೂತೇಷು ನಾನಾಕರ್ಮರತೇಷು ಚ ।
ಜನ್ಮವೃತ್ತಸಮಂ ಲೋಕೇ ಸುಶ್ಲಿಷ್ಟಂ ನ ವಿರಜ್ಯತೇ ॥೪೬॥

ಪ್ರಾಣಿಗಳು ಅನೇಕ ನಡತೆಯನ್ನು ಹೊಂದಿದ್ದರೂ ಅಥವಾ ಅನೇಕ ಕರ್ಮಗಳಲ್ಲಿ ನಿರತರಾಗಿದ್ದರೂ ಜನ್ಮದಿಂದ ಬಂದ ಅವನಿಗೆ ಬಹಳವಾಗಿ ಅಂಟಿಕೊಂಡಿರುವ ಅವನ ಸ್ವಭಾವವು ಅವನನ್ನು ಬಿಟ್ಟುಹೋಗುವುದಿಲ್ಲ.

ಶರೀರಮಿಹ ಸತ್ತ್ವೇನ ನರಸ್ಯ ಪರಿಕೃಷ್ಯತೇ ।
ಜ್ಯೇಷ್ಠಮಧ್ಯಾವರಂ ಸತ್ತ್ವಂ ತುಲ್ಯಸತ್ತ್ವಂ ಪ್ರಮೋದತೇ ॥೪೭॥

ಭೂಮಿಯಲ್ಲಿ ಮನುಷ್ಯನ ಶರೀರವು ಅವನ ಸ್ವಭಾವಕ್ಕೆ ಅನುಗುಣವಾಗಿ ಯೋನಿಗಳಲ್ಲಿ ಸಂಚರಿಸುತ್ತವೆ. ಶ್ರೇಷ್ಠ, ಮಧ್ಯಮ ಮತ್ತು ನೀಚ ಸ್ವಭಾವಗಳಿರುತ್ತವೆ. ತನ್ನ ಸ್ವಭಾವಕ್ಕನುಗುಣವಾದ ಸ್ವಭಾವವುಳ್ಳವರಲ್ಲಿ ಮನುಷ್ಯನು ಸಂತೋಷಪಡುತ್ತಾನೆ.

ಜ್ಯಾಯಾಂಸಮಪಿ ಶೀಲೇನ ವಿಹೀನಂ ನೈವ ಪೂಜಯೇತ್ ।
ಅಪಿ ಶೂದ್ರಂ ತು ಸದ್ವೃತ್ತಂ ಧರ್ಮಜ್ಞಮಭಿಪೂಜಯೇತ್ ॥೪೮॥

ಉತ್ತಮ ಜಾತಿಯಲ್ಲಿ ಜನಿಸಿದ್ದರೂ ಶೀಲವಿಲ್ಲದವನನ್ನು ಪೂಜಿಸಬಾರದು. ಶೂದ್ರನೂ ಸಹ ಅವನು ಒಳ್ಳೆಯ ನಡತೆಯುಳ್ಳವನೂ, ಧರ್ಮಜ್ಞನೂ ಆಗಿದ್ದರೆ ಅವನನ್ನು ಪೂಜಿಸಬೇಕು.

ಆತ್ಮಾನಮಾಖ್ಯಾತಿ ಹಿ ಕರ್ಮಭಿರ್ನರಃ
ಸ್ವಶೀಲಚಾರಿತ್ರಕೃತೈಃ ಶುಭಾಶುಭೈಃ ।
ಪ್ರನಷ್ಟಮಪ್ಯಾತ್ಮಕುಲಂ ತಥಾ ನರಃ
ಪುನಃ ಪ್ರಕಾಶಂ ಕುರುತೇ ಸ್ವಕರ್ಮಭಿಃ ॥೪೯॥

ಮನುಷ್ಯನು ಶುಭಾಶುಭವಾದ ತನ್ನ ಶೀಲ, ಚಾರಿತ್ರ್ಯ ಮತ್ತು ಕರ್ಮಗಳಿಂದ ತನ್ನನ್ನು ವ್ಯಕ್ತಪಡಿಸಿಕೊಳ್ಳುತ್ತಾನೆ. ಹಾಗೆಯೇ ಅವನ ಕುಲದ ಮೂಲವು ನಷ್ಟವಾಗಿದ್ದರೂ ಸಹ ತನ್ನ ಕರ್ಮಗಳಿಂದ ಅದನ್ನು ಪುನಃ ಪ್ರಕಾಶಗೊಳಿಸುತ್ತಾನೆ.

ಯೋನಿಷ್ವೇತಾಸು ಸರ್ವಾಸು ಸಂಕೀರ್ಣಾಸ್ವಿತರಾಸು ಚ ।
ಯತ್ರಾತ್ಮಾನಂ ನ ಜನಯೇದ್ ಬುಧಸ್ತಾಃ ಪರಿವರ್ಜಯೇತ್ ॥೫೦॥

ಈ ಸಂಕರಯೋನಿಗಳಲ್ಲಿ ಮತ್ತು ಇತರ ಯೋನಿಗಳಲ್ಲಿ ಎಲ್ಲಿ ಪುರುಷನು ತಾನೇ ಪುತ್ರನಾಗಿ ಜನಿಸುವುದಿಲ್ಲವೋ (ಎಲ್ಲಿ ಪುತ್ರನಿಗೆ ತನ್ನ ಜಾತಿಯು ಬರುವುದಿಲ್ಲವೋ) ಅಂತಹ ಜಾತಿಗಳನ್ನು ವಿವೇಕಿಯಾದವನು ಪರಿತ್ಯಜಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವರ್ಣಸಂಕರವರ್ಣನಂ ನಾಮ
ಅಷ್ಟಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೊಂಬತ್ತನೆಯ ಅಧ್ಯಾಯ

ಪುತ್ರಪ್ರಭೇದ ಕಥನ.

ಯುಧಿಷ್ಠಿರಃ

ಬ್ರೂಹಿ ಪುತ್ರಾನ್ ಕುರುಶ್ರೇಷ್ಠ ವರ್ಣಾನಾಂ ತ್ವಂ ಪೃಥಕ್‌ಪೃಥಕ್ ।
ಕೀದೃಶ್ಯಾಂ ಕೀದೃಶಾಶ್ಚಾಪಿ ಪುತ್ರಾಃ ಕಸ್ಯ ಚ ಕೇ ಚ ತೇ ॥೧॥

ವಿಪ್ರವಾದಾಃ ಸುಬಹುಶಃ ಶ್ರೂಯಂತೇ ಪುತ್ರಕಾರಿತಾಃ ।
ಅತ್ರ ನೋ ಮುಹ್ಯತಾಂ ರಾಜನ್ ಸಂಶಯಂ ಛೇತ್ತುಮರ್ಹಸಿ ॥೨॥

ಯುಧಿಷ್ಠಿರ– ಎಲೈ ಕುರುಶ್ರೇಷ್ಠನೇ, ವರ್ಣಗಳಲ್ಲಿ ಜನಿಸಿದ ಪುತ್ರರ ಪ್ರಭೇದಗಳನ್ನು ಬೇರೆ ಬೇರೆಯಾಗಿ ಹೇಳು. ಯಾವ ವರ್ಣದವರಲ್ಲಿ ಎಂತಹ ಪುತ್ರರು ಜನಿಸುತ್ತಾರೆ? ಅವರು ಯಾರಿಗೆ ಸೇರಿದವರು ಮತ್ತು ಅವರು ಯಾರು? (ಅವರ ವಿಶೇಷ ಹೆಸರುಗಳೇನು?) ಎಲೈ ರಾಜನೇ, ಪುತ್ರರ ವಿಷಯದಲ್ಲಿ ಬ್ರಾಹ್ಮಣರು ಅನೇಕ ವಿಧವಾಗಿ ಮಾತನಾಡುವುದು ಕೇಳಿಬರುತ್ತದೆ. ಈ ವಿಷಯದಲ್ಲಿ ಮೋಹ ಹೊಂದಿರುವ ನಮಗೆ ನಮ್ಮ ಸಂಶಯವನ್ನು ನೀನು ಪರಿಹರಿಸಬೇಕು.

ಭೀಷ್ಮಃ

ಆತ್ಮಾ ಪುತ್ರಸ್ತು ವಿಜ್ಞೇಯಃ ಪ್ರಥಮೋ ಬಹುಧಾ ಪರೇ ।
ಸ್ವೇ ಕ್ಷೇತ್ರೇ ಸಂಸ್ಕೃತೇ ಯಸ್ತು ಪುತ್ರಮುತ್ಪಾದಯೇತ್ ಸ್ವಯಮ್ ।
ತಮೌರಸಂ ವಿಜಾನೀಯಾತ್ ಪುತ್ರಂ ಪ್ರಥಮಕಲ್ಪಿತಮ್ ॥೩॥

ಭೀಷ್ಮ– ಪ್ರಥಮಪುತ್ರನನ್ನು ಎಂದರೆ ಶ್ರೇಷ್ಠನಾದ ಪುತ್ರನನ್ನು ಆತ್ಮನೆಂದೇ ತಿಳಿಯಬೇಕು. ಉಳಿದ ಪುತ್ರರು ಅನೇಕ ರೀತಿಯಲ್ಲಿ ಇರುತ್ತಾರೆ. ತನ್ನ ಪತ್ನಿಯಲ್ಲಿ ಸಂಸ್ಕಾರಪೂರ್ವಕವಾಗಿ ತಾನೇ ಪಡೆದ ಮಗನನ್ನು ಔರಸಪುತ್ರನೆಂದು ತಿಳಿಯಬೇಕು. ಅವನು ಎಲ್ಲ ಪುತ್ರರಿಗಿಂತ ಶ್ರೇಷ್ಠನಾದವನೆಂದು ಹೇಳಲ್ಪಟ್ಟಿದ್ದಾನೆ.

ಅಗ್ನಿಂ ಪ್ರಜಾಪತಿಂ ಚೇಷ್ಟ್ವಾ ವರಾಯ ಪ್ರತಿಪಾದಿತಾ ।
ಪುತ್ರಿಕಾ ಸ್ಯಾದ್ ದುಹಿತರಿ ಸಂಕಲ್ಪೇನಾಪಿ ವಾ ಸುತಃ ॥೪॥

ಅಗ್ನಿ ಮತ್ತು ಪ್ರಜಾಪತಿಗಳನ್ನು ಕುರಿತು ಹೋಮವನ್ನು ಮಾಡಿ ವರನಿಗೆ ಸಂಕಲ್ಪಪೂರ್ವಕವಾಗಿ ದಾನ ಕೊಟ್ಟ ಪುತ್ರಿಯಲ್ಲಿ ಜನಿಸುವ ಸುತನು ಪುತ್ರಿಕಾ ಪುತ್ರನೆಂದು ಕರೆಯಲ್ಪಡುತ್ತಾನೆ.

ತಲ್ಪೇ ಜಾತಃ ಪ್ರಮೀತಸ್ಯ ಕ್ಲೀಬಸ್ಯ ಪತಿತಸ್ಯ ವಾ ।
ಸ್ವಧರ್ಮೇಣ ನಿಯುಕ್ತೋ ಯಃ ಸ ಪುತ್ರಃ ಕ್ಷೇತ್ರಜಃ ಸ್ಮೃತಃ ॥೫॥

ಮೃತಹೊಂದಿದವನ, ನಪುಂಸಕನ ಅಥವಾ ಪತಿತನಾದವನ ಪತ್ನಿಯಲ್ಲಿ ಧರ್ಮಕ್ಕೆ ಅನುಸಾರವಾಗಿ ನಿಯೋಗಪದ್ಧತಿಯಿಂದ ಜನಿಸಿದ ಪುತ್ರನು ಕ್ಷೇತ್ರಜ ಎಂದು ಕರೆಯಲ್ಪಡುತ್ತಾನೆ.

ಮಾತಾ ಪಿತಾ ಚ ದದ್ಯಾತಾಂ ಯಮದ್ಭಿಃ ಪುತ್ರಮಾಪದಿ ।
ಸದೃಶಂ ಪ್ರೀತಿಸಂಯುಕ್ತೆ ವಿಜ್ಞೇಯೋ ದತ್ತಕಃ ಸುತಃ ॥೬॥

ಆಪತ್ತಿಗೆ ಸಿಲುಕಿದ ಮಾತಾಪಿತೃಗಳು ತಮಗೆ ಸದೃಶನಾದ ಯಾವ ಪುತ್ರನನ್ನು ಪ್ರೀತಿಯಿಂದ ಧಾರಾ ಪೂರ್ವಕವಾಗಿ ಕೊಡುತ್ತಾರೋ ಅವನನ್ನು ದತ್ತಪುತ್ರನೆಂದು ತಿಳಿಯಬೇಕು.

ಸದೃಶಂ ತು ಪ್ರಕುರ್ಯಾದ್ ಯಂ ಗುಣದೋಷವಿಚಕ್ಷಣಮ್ ।
ಪುತ್ರಂ ಪುತ್ರಗುಣೈರ್ಯುಕ್ತಂ ವಿಜ್ಞೇಯಸ್ತು ಸ ಕೃತ್ರಿಮಃ ॥೭॥

ಗುಣ-ದೋಷ ವಿವೇಚನವುಳ್ಳ, ಉತ್ತಮಗುಣಗಳಿಂದ ಕೂಡಿದ, ತನಗೆ ಸದೃಶನಾದ ಯಾವನನ್ನು ಯಾವನು ಪುತ್ರನನ್ನಾಗಿ ಸ್ವೀಕರಿಸುತ್ತಾನೆಯೋ ಅವನನ್ನು ಕೃತ್ರಿಮಪುತ್ರ ಎಂದು ಕರೆಯುತ್ತಾರೆ.

ಉತ್ಪದ್ಯತೇ ಯಸ್ತು ಗೂಢಂ ನ ಚ ಜ್ಞಾಯೇತ ಕಸ್ಯಚಿತ್ ।
ಸ ಭವೇದ್ ಗೂಢಜೋ ನಾಮ ತಸ್ಯ ಸ್ಯಾದ್ ಯಸ್ಯ ತಲ್ಪತಃ ॥೮॥

ಯಾವನ ತಂದೆಯು ಗೂಢನಾಗಿದ್ದು ಇಂತಹವನೆಂದು ತಿಳಿಯದೆ ಜನಿಸುತ್ತಾನೆಯೋ ಅವನನ್ನು ಗೂಢಜ ಪುತ್ರನೆಂದು ಕರೆಯುತ್ತಾರೆ. ಅವನು ಆ ಗೂಢನಾದ ತಂದೆಗೇ ಸೇರುತ್ತಾನೆ.

ಮಾತಾಪಿತೃಭ್ಯಾಮುತ್ಸೃಷ್ಟಃ ತಯೋರನ್ಯತರೇಣ ವಾ ।
ಯಂ ಪುತ್ರಂ ಪ್ರತಿಗೃಹ್ಣೀಯಾದಪವಿದ್ಧಃ ಸ ಉಚ್ಯತೇ ॥೯॥

ತಂದೆ-ತಾಯಿಗಳಿಂದಲಾಗಲೀ ಅಥವಾ ಒಬ್ಬೊಬ್ಬರಿಂದಾಗಲೀ ತ್ಯಜಿಸಲ್ಪಟ್ಟವನನ್ನು ಯಾರು ಪುತ್ರನನ್ನಾಗಿ ಸ್ವೀಕರಿಸುತ್ತಾರೆಯೋ ಅವನನ್ನು ಅಪವಿದ್ಧ ಪುತ್ರನೆಂದು ಕರೆಯುತ್ತಾರೆ.

ಪಿತೃವೇಶ್ಮನಿ ಕನ್ಯಾ ತು ಯಂ ಪುತ್ರಂ ಜನಯೇದ್ ರಹಃ ।
ಕಾನೀನಂ ತಂ ವದೇನ್ನಾಮ್ನಾ ವೋಢುಃ ಕನ್ಯಾಸಮುದ್ಭವಃ ॥೧೦॥

ತಂದೆಯ ಮನೆಯಲ್ಲಿ ವಿವಾಹವಾಗುವುದಕ್ಕಿಂತ ಮೊದಲೇ ಕನ್ಯೆಯು ರಹಸ್ಯವಾಗಿ ಯಾವ ಪುತ್ರನನ್ನು ಪಡೆಯುತ್ತಾಳೆಯೋ ಅವನನ್ನು ಕಾನೀನ ಎಂದು ಕರೆಯುತ್ತಾರೆ. ಅವನು ಮುಂದೆ ಆ ಕನ್ಯೆಯನ್ನು ಮದುವೆಯಾಗುವವನಿಗೆ ಸೇರುತ್ತಾನೆ.

ಯಾ ಗರ್ಭಿಣೀ ಸಂಸ್ಕ್ರಿಯತೇ ಜ್ಞಾತಾऽಜ್ಞಾತಾಪಿ ವಾ ಸತೀ ।
ವೋಢುಃ ಸ ಗರ್ಭೋ ಭವತಿ ಸಹೋಢ ಇತಿ ಚೋಚ್ಯತೇ ॥೧೧॥

ಯಾವಳು ಗರ್ಭಿಣಿಯಾದಮೇಲೆ ಅದನ್ನು ತಿಳಿದು ಅಥವಾ ತಿಳಿಯದೆ ವಿವಾಹ ಸಂಸ್ಕಾರವನ್ನು ಹೊಂದುತ್ತಾಳೆಯೋ ಅವಳಲ್ಲಿ ಜನಿಸುವವನು ಅವಳನ್ನು ವಿವಾಹವಾಗುವವನಿಗೆ ಸೇರುತ್ತಾನೆ. ಆ ಪುತ್ರನಿಗೆ ಸಹೋಢ ಎಂದು ಹೆಸರು.

ಯಾ ಪತ್ಯಾ ಪರಿತ್ಯಕ್ತಾ ಅಥವಾ ಸ್ವೇಚ್ಛಯಾऽಪಿ ವಾ ।
ಉತ್ಪಾದಯೇದಕ್ಷತಾ ಯಾ ಸ ಪೌನರ್ಭವ ಉಚ್ಯತೇ ॥೧೨॥

ಅಕ್ಷತಯೋನಿಯಾದ ಯಾವ ಕನ್ಯೆಯು ವಿವಾಹವಾದ ಮೇಲೆ ಪತಿಯಿಂದ ಪರಿತ್ಯಕ್ತಳಾಗಿ ಅಥವಾ ತನ್ನ ಸ್ವಂತ ಇಚ್ಛೆಯಿಂದಲೇ ಪುತ್ರನನ್ನು ಪಡೆಯುತ್ತಾಳೆಯೋ ಅವನಿಗೆ ಪೌನರ್ಭವ ಎಂದು ಹೆಸರು.

ಮಾತಾಪಿತೃವಿಹೀನೋ ವಾ ತ್ಯ(ಸ)ಕ್ತೋ ವಾ ಸ್ಯಾದಕಾರಣಾತ್ ।
ಆತ್ಮಾನಂ ಸ್ಪರ್ಶಯೇದ್ ಯಸ್ತು ಸ್ವಯಂದತ್ತಃ ಸ ಉಚ್ಯತೇ ॥೧೩॥

ಮಾತಾ-ಪಿತೃರಹಿತನಾಗಿ ಅಥವಾ ಅವರಿಂದ ನಿಷ್ಕಾರಣವಾಗಿ ಪರಿತ್ಯಕ್ತನಾಗಿ ಯಾವನು ತಾನೇ ಇನ್ನೊಬ್ಬನ ಬಳಿಗೆ ಹೋಗಿ ನಾನು ನಿಮ್ಮ ಪುತ್ರ ಎಂದು ಹೇಳಿಕೊಳ್ಳುತ್ತಾನೆಯೋ ಅವನನ್ನು ಸ್ವಯಂದತ್ತಪುತ್ರ ಎಂದು ಕರೆಯುತ್ತಾರೆ.

ಕ್ರೀಣೀಯಾದ್ ಯಸ್ತ ಪತ್ಯರ್ಥಂ ಮಾತಾಪಿತ್ರೋರ್ಯಮಂತಿಕಾತ್ ।
ಸ ಸುತಸ್ತಸ್ಯ ಸದೃಶಃ ಕ್ರೀತೋ ನಾಮ ಬುಧೈಃ ಸ್ಮೃತಃ ।
ದ್ವಾದಶೈತೇ ಪರೇ ಪ್ರಾಹುರೇವಂ ಧರ್ಮಸ್ಯ ಪಾಲಕಾಃ ॥೧೪॥

ತಂದೆ-ತಾಯಿಗಳ ಸಮೀಪಕ್ಕೆ ಹೋಗಿ ಮಕ್ಕಳಿಲ್ಲದ ಯಾವನು ಅವರ ಪುತ್ರನನ್ನು ಕ್ರಯಕ್ಕೆ ಪಡೆಯುತ್ತಾನೆಯೋ ಆ ಪುತ್ರನು ಕ್ರಯಪಡೆದವನಿಗೆ ಸದೃಶನಾಗಿ ಜ್ಞಾನಿಗಳಿಂದ ಕ್ರೀತಪುತ್ರ ಎಂದು ಕರೆಯಲ್ಪಡುತ್ತಾನೆ. ಧರ್ಮದ ರಕ್ಷಕರಾದ ಜ್ಞಾನಿಗಳು ಈ ಹನ್ನೆರಡು ರೀತಿಯ ಪುತ್ರರು ಇರುತ್ತಾರೆಂದು ಹೇಳುತ್ತಾರೆ.

ಆತ್ಮಾ ಪುತ್ರಸ್ತು ವಿಜ್ಞೇಯಸ್ತಸ್ಯಾನಂತರಜಶ್ಚ ಯಃ ।
ನಿಯುಕ್ತಜಶ್ಚ ವಿಜ್ಞೇಯಃ ಸುತಃ ಪ್ರಸೃತಜಸ್ತಥಾ ॥೧೫॥

ಪತಿತಸ್ಯ ಚ ಭಾರ್ಯಾಯಾಂ ಭರ್ತ್ರಾ ಸುಸಮವೇತಯಾ ।
ತಥಾ ದತ್ತಕೃತೌ ಪುತ್ರಾವಧ್ಯೂಢಶ್ಚ ತಥಾಪರಃ ॥೧೬॥

ಷಡಪಧ್ವಂಸಜಾಶ್ಚಾಪಿ ಕಾನೀನಾಪಶದಾಸ್ತಥಾ ।
ಇತ್ಯೇತೇ ತೇ ಸಮಾಖ್ಯಾತಾಸ್ತಾನ್ ವಿಜಾನೀಹಿ ಭಾರತ ॥೧೭॥

ತನ್ನ ವೀರ್ಯದಿಂದ ತನ್ನ ಪತ್ನಿಯಲ್ಲಿ ಹುಟ್ಟಿದವನು ಔರಸಪುತ್ರ. ಅವನನ್ನು ತಿಳಿಯಬೇಕು. ಅವನ ಅನಂತರದಲ್ಲಿ ಜನಿಸುವ ನಿಯೋಗಜ ಪುತ್ರನನ್ನೂ, ಹಾಗೆಯೇ ಪ್ರಸೃತಜ ಪುತ್ರನನ್ನೂ ತಿಳಿಯಬೇಕು (ತನ್ನ ಪತ್ನಿಯಲ್ಲದವಳಲ್ಲಿ ಪಡೆದ ಪುತ್ರನಿಗೆ

ಪ್ರಸೃತಜ ಪುತ್ರನೆಂದು ಹೆಸರು). ಪತಿತನ ಭಾರ್ಯೆಯಲ್ಲಿ ಸಮಾಗಮವನ್ನು ಹೊಂದಿ ಜನಿಸಿದ ಪುತ್ರನು ಕ್ಷೇತ್ರಜನಾದವನು. ಅವನನ್ನು ತಿಳಿಯಬೇಕು. ದತ್ತಪುತ್ರ, ಕೃತಕಪುತ್ರ ಮತ್ತು ಇನ್ನೊಬ್ಬನಾದ ಅಧ್ಯೂಢಪುತ್ರ ಇವರನ್ನೂ ತಿಳಿಯಬೇಕು. ಈ ಎಂಟು ಪುತ್ರರಲ್ಲದೆ ಆರು ಅಪಧ್ವಂಸಜ ಪುತ್ರರನ್ನೂ ಕಾನೀನನನ್ನೂ, ಆರು ಅಪಶದರನ್ನೂ ತಿಳಿಯಬೇಕು. ಎಲೈ ಭಾರತನೇ, ಈ ಪುತ್ರರ ಪ್ರಭೇದವನ್ನು ನಿನಗೆ ಹೇಳಿದ್ದೇನೆ. ಅವರನ್ನು ತಿಳಿದುಕೊ.

ಯುಧಿಷ್ಠಿರಃ

ಷಡಪಧ್ವಂಸಜಾಃ ಕೇ ಸ್ಯುಃ ಕೇ ವಾಪ್ಯಪಶದಾಸ್ತಥಾ ।
ಏತತ್ ಸರ್ವಂ ಯಥಾತತ್ತ್ವಂ ವ್ಯಾಖ್ಯಾತುಂ ಮೇ ತ್ವಮರ್ಹಸಿ ॥೧೮॥

ಯುಧಿಷ್ಠಿರ– ಅಪಧ್ವಂಸರ ಆರು ಪುತ್ರರು ಯಾರು? ಅಪಶದರು ಯಾರು? ಇವೆಲ್ಲವನ್ನೂ ನನಗೆ ಸರಿಯಾಗಿ ಹೇಳಬೇಕು.

ಭೀಷ್ಮಃ

ತ್ರಿಷು ವರ್ಣೇಷು ಯೇ ಪುತ್ರಾ ಬ್ರಾಹ್ಮಣಸ್ಯ ಯುಧಿಷ್ಠಿರ ।
ವರ್ಣಯೋಶ್ಚ ದ್ವಯೋಃ ಸ್ಯಾತಾಂ ಯೌ ರಾಜನ್ಯಸ್ಯ ಭಾರತ ॥೧೯॥

ಏಕೋ ವಿಡ್ವರ್ಣ ಏವಾಥ ತಥಾತ್ಮೈವೋಪಲಕ್ಷಿತಃ ।
ಷಡಪಧ್ವಂಸಜಾಸ್ತೇ ಹಿ ತಥೈವಾಪಶದಾನ್ ಶೃಣು ॥೨೦॥

ಭೀಷ್ಮ– ಎಲೈ ಯುಧಿಷ್ಠಿರನೇ, ಬ್ರಾಹ್ಮಣನಿಗೆ ಬ್ರಾಹ್ಮಣವರ್ಣವನ್ನು ಬಿಟ್ಟು ಉಳಿದ ಮೂರು ವರ್ಣಗಳಲ್ಲಿ ಜನಿಸಿದ ಪುತ್ರರು, ಕ್ಷತ್ರಿಯನಿಗೆ ಕ್ಷತ್ರಿಯಳನ್ನು ಬಿಟ್ಟು ಉಳಿದ ಎರಡು ವರ್ಣಗಳಲ್ಲಿ ಜನಿಸಿದ ಪುತ್ರರು, ವೈಶ್ಯನಿಗೆ ವೈಶ್ಯಳನ್ನು ಬಿಟ್ಟು ಶೂದ್ರನಲ್ಲಿ ಜನಿಸಿದ ಪುತ್ರನು ಸೇರಿ ಈ ಆರು ಪುತ್ರರು ಅಪಧ್ವಂಸಜಪುತ್ರರೆಂದು ಕರೆಯಲ್ಪಡುತ್ತಾರೆ. ಹಾಗೆಯೇ ಅಪಶದಪುತ್ರರನ್ನೂ ಕೇಳು.

ಚಂಡಾಲೋ ವ್ರಾತ್ಯವೇನೌ ಚ ಬ್ರಾಹ್ಮಣ್ಯಾಂ ಕ್ಷತ್ರಿಯಾಸು ಚ ।
ವೈಶ್ಯಾಯಾಂ ಚೈವ ಶೂದ್ರಸ್ಯ ಲಕ್ಷ್ಯಂತೇಽಪಸದಾಸ್ತ್ರಯಃ ॥೨೧॥

ಮಾಗಧೋ ವಾಮಕಶ್ಚೈವ ದ್ವೌ ವೈಶ್ಯಸ್ಯೋಪಲಕ್ಷಿತೌ ।
ಬ್ರಾಹ್ಮಣ್ಯಾಂ ಕ್ಷತ್ರಿಯಾಯಾಂ ಚ ಕ್ಷತ್ರಿಯಸ್ಯೈಕ ಏವ ತು ॥೨೨॥

ಬ್ರಾಹ್ಮಣ್ಯಾಂ ಲಕ್ಷ್ಯತೇ ಸೂತ ಇತ್ಯೇತೇಽಪಶದಾಃ ಸ್ಮೃತಾಃ ।
ಪುತ್ರರೇತೋ ನ ಶಕ್ಯಂ ಹಿ ಮಿಥ್ಯಾ ಕರ್ತುಂ ನರಾಧಿಪ ॥೨೩॥

ಶೂದ್ರನಿಗೆ ಬ್ರಾಹ್ಮಣಿಯಲ್ಲಿ ಚಂಡಾಲನೂ, ಕ್ಷತ್ರಿಯ ಸ್ತ್ರೀಯಲ್ಲಿ ವ್ರಾತ್ಯನೂ, ವೈಶ್ಯ ಸ್ತ್ರೀಯಲ್ಲಿ ವೇನನೂ ಪ್ರತಿಲೋಮದಿಂದ ಜನಿಸುತ್ತಾರೆ. ಇವರು ಮೂವರು ಅಪಶದರು. ವೈಶ್ಯನಿಗೆ ಬ್ರಾಹ್ಮಣಿಯಲ್ಲಿ ಮಾಗಧನೂ, ಕ್ಷತ್ರಿಯ ಸ್ತ್ರೀಯಲ್ಲಿ ವಾಮಕನು ಜನಿಸುತ್ತಾರೆ (ಮಾಗಧನನ್ನು ಹಿಂದಿನ ಅಧ್ಯಾಯದಲ್ಲಿ ವೈದೇಹಕ ಎಂಬ ಹೆಸರಿನಿಂದ ಹೇಳಿದ್ದಾರೆ). ಕ್ಷತ್ರಿಯನಿಗೆ ಬ್ರಾಹ್ಮಣಿಯಲ್ಲಿ ಒಬ್ಬನೇ ಜನಿಸುತ್ತಾನೆ (ಇವನು ಸೂತ). ಈ ಆರು ಜನ ಪುತ್ರರು ಅಪಶದ ಪುತ್ರರೆಂದು ಕರೆಯಲ್ಪಡುತ್ತಾರೆ. ಎಲೈ ರಾಜನೇ, ಪುತ್ರರನ್ನು ಪಡೆಯುವ ರೇತಸ್ಸನ್ನು ವ್ಯರ್ಥವನ್ನು ಮಾಡಲು ಸಾಧ್ಯವಿಲ್ಲ (ಇವರನ್ನು ಪುತ್ರರಲ್ಲವೆಂದು ಹೇಳಲು ಸಾಧ್ಯವಿಲ್ಲ).

ಶೂದ್ರಸ್ಯ ಪ್ರತಿಲೋಮೇನ ಚಂಡಾಲಾಃ ಕ್ರಮಶೋಧಮಾಃ ।
ತ್ರಯಸ್ತೇ ದ್ವೌ ತು ವೈಶ್ಯಸ್ಯ ಕ್ಷತ್ರಿಯಸ್ಯೈಕ ಏವ ಚ ॥೨೪॥

ಶೂದ್ರನಿಗೆ ಪ್ರತಿಲೋಮದಿಂದ ಜನಿಸಿದ ಚಂಡಾಲರು ಮೂರು ಜನರು ಕ್ರಮವಾಗಿ ಅಧಮರಾಗುತ್ತಾರೆ. ವೈಶ್ಯನಿಗೆ ಪ್ರತಿಲೋಮದಿಂದ ಜನಿಸಿದ ಇಬ್ಬರು ಮತ್ತು ಕ್ಷತ್ರಿಯನಿಗೆ ಪ್ರತಿಲೋಮದಿಂದ ಜನಿಸಿದ ಒಬ್ಬನೂ ಸಹ ಅಧಮರಾಗುತ್ತಾರೆ (ಇಲ್ಲಿ ಯಾವ ಕ್ರಮವೆಂದು ಹೇಳಿಲ್ಲ).

ಯುಧಿಷ್ಠಿರಃ

ಕ್ಷೇತ್ರಜಂ ಕೇಚಿದೇವಾಹುಃ ಸುತಂ ಕೇಚಿತ್ತು ಶುಕ್ಲಜಮ್ ।
ತುಲ್ಯಾವೇತೌ ಸುತೌ ಕಸ್ಯ ತನ್ಮೇ ಬ್ರೂಹಿ ಪಿತಾಮಹ ॥೨೫॥

ಯುಧಿಷ್ಠಿರ– ಎಲೈ ಪಿತಾಮಹನೇ, ಕೆಲವರು ಕ್ಷೇತ್ರಜನನ್ನು ಪುತ್ರನೆಂದು ಹೇಳುತ್ತಾರೆ. ಕೆಲವರು ತನ್ನ ವೀರ್ಯದಿಂದ ಹುಟ್ಟಿದವನನ್ನೇ ಪುತ್ರನೆಂದು ಹೇಳುತ್ತಾರೆ. ಇಬ್ಬರು ಪುತ್ರರೂ ಸಮಾನರೇ? ಇವರು ಯಾರಿಗೆ ಸೇರುತ್ತಾರೆ ಎಂದು ನನಗೆ ಹೇಳು.

ಭೀಷ್ಮಃ

ರೇತಜೋ ವಾ ಭವೇತ್ ಪುತ್ರಸ್ಯಕ್ತೋ ವಾ ಕ್ಷೇತ್ರಜೋ ಭವೇತ್ ।
ಅಧ್ಯೂಢಃ ಸಮಯಂ ಭಿತ್ತ್ವೇತ್ಯೇತದೇವ ನಿಬೋಧ ಮೇ ॥೨೬॥

ಭೀಷ್ಮ– ರೇತಸ್ಸಿನಿಂದ ಹುಟ್ಟಿದವನೂ, ತ್ಯಕ್ತನಾದವನೂ, ಕ್ಷೇತ್ರಜನಾದವನೂ, ಅಧ್ಯೂಢನಾದವನೂ ಪುತ್ರನಾಗಬಹುದು. ಅವನನ್ನು ನನ್ನಿಂದ ತಿಳಿ (ಇಲ್ಲಿ ಅಧ್ಯೂಢನೆಂದರೆ ತಂದೆಯ ಸಂಕೇತವನ್ನು ಮೀರಿ ಇನ್ನೊಬ್ಬ ಶ್ರೇಷ್ಠನಿಂದ ಅಧಿಕೃತನಾದ ಪುತ್ರ - ಲಕ್ಷಾಲಂಕಾರ).

ಯುಧಿಷ್ಠಿರಃ

ರೇತೋಜಂ ವಿದ್ಮ ವೈ ಪುತ್ರಂ ಕ್ಷೇತ್ರಜಸ್ಯಾಗಮಃ ಕಥಮ್ ।
ಅಧ್ಯೂಢಂ ವಿದ್ಮ ವೈ ಪುತ್ರಂ ಭಿತ್ತ್ವಾ ಚ ಸಮಯಂ ಕಥಮ್ ॥೨೭॥

ಯುಧಿಷ್ಠಿರ– ವೀರ್ಯದಿಂದ ಹುಟ್ಟಿದ ಪುತ್ರನನ್ನು ತಿಳಿದಿದ್ದೇವೆ. ಕ್ಷೇತ್ರಜಪುತ್ರನನ್ನು ತಿಳಿಯುವ ರೀತಿ ಯಾವುದು? ತಂದೆಯ ಸಮಯವನ್ನು ಮೀರಿ ಅಧ್ಯೂಢನಾದ ಪುತ್ರನನ್ನು ತಿಳಿಯುವ ಬಗೆ ಹೇಗೆ?

ಭೀಷ್ಮಃ

ಆತ್ಮಜಂ ಪುತ್ರಮುತ್ಪಾದ್ಯ ಯಸ್ಯಜೇತ್ ಕಾರಣಾಂತರೇ ।
ನ ತತ್ರ ಕಾರಣಂ ರೇತಃ ಸ ಕ್ಷೇತ್ರಸ್ವಾಮಿನೋ ಭವೇತ್ ॥೨೮॥

ಭೀಷ್ಮ– ತನ್ನ ಮಗನನ್ನು ಉತ್ಪಾದಿಸಿ ಕಾರಣಾಂತರದಿಂದ ಅವನನ್ನು ತ್ಯಜಿಸಿದರೆ ಅಲ್ಲಿ ಪುತ್ರನ ಮೇಲೆ ಸಾಮ್ಯವನ್ನು ಪಡೆಯುವುದಕ್ಕೆ ಅಲ್ಲಿ ರೇತಸ್ಸು ಕಾರಣವಲ್ಲ. ಅದು ಆ ಕ್ಷೇತ್ರದ ಸ್ವಾಮಿಗೆ (ಆ ತಾಯಿಯನ್ನು ವಿವಾಹವಾಗುವ ಇನ್ನೊಬ್ಬನಿಗೆ) ಸೇರುತ್ತದೆ.

ಪುತ್ರಕಾಮೋ ಹಿ ಪುತ್ರಾರ್ಥೇ ಯಾಂ ವೃಣೀತೇ ವಿಶಾಂಪತೇ ।
ತತ್ರ ಕ್ಷೇತ್ರಂ ಪ್ರಮಾಣಂ ಸ್ಯಾನ್ನ ವೈ ತತ್ಪಾತ್ಮಜಃ ಸುತಃ ॥೨೯॥

ಎಲೈ ರಾಜನೇ, ಪುತ್ರಕಾಮನಾದವನು ಕೆಲವು ಸಂದರ್ಭದಲ್ಲಿ ಪುತ್ರಾರ್ಥವಾಗಿ ಗರ್ಭಿಣಿಯನ್ನು ಮದುವೆಯಾದರೆ ಆ ಪುತ್ರನು ಕ್ಷೇತ್ರವನ್ನು ಮದುವೆ ಮಾಡಿಕೊಂಡವನಿಗೇ ಸೇರುತ್ತಾನೆ ಹೊರತು ವೀರ್ಯಸೇಕ ಮಾಡಿದವನಿಗೆ ಸೇರುವುದಿಲ್ಲ.

ಅನ್ಯಸ್ತು ಕ್ಷೇತ್ರಜಃ ಪುತ್ರೋ ಲಕ್ಷ್ಯತೇ ಭರತರ್ಷಭ ।
ನ ಹ್ಯಾತ್ಮಾ ಶಕ್ಯತೇ ಹಂತುಂ ದೃಷ್ಟಾಂತೋಪಗತೋ ಹ್ಯಸೌ ॥೩೦॥

ಎಲೈ ಭರತಶ್ರೇಷ್ಠನೇ, ಭರ್ತೃವಿನ ಅನುಮತಿ ಇಲ್ಲದೆ ಕ್ಷೇತ್ರದಲ್ಲಿ ಜನಿಸಿದ ಕ್ಷೇತ್ರಜನಾದ ಪುತ್ರನಿರುತ್ತಾನೆ. ಅಲ್ಲಿ ರೇತಸ್ಸೇಕ ಮಾಡಿದವನ ಹೋಲಿಕೆಯು ಸ್ಪಷ್ಟವಾಗಿರುವುದರಿಂದ ಅವನು ಅದನ್ನು ನಿರಾಕರಣೆ ಮಾಡಲು ಸಾಧ್ಯವಿಲ್ಲ.

ಕಶ್ಚಿಚ್ಚ ಕೃತಕಃ ಪುತ್ರಃ ಸಂಗ್ರಹಾದೇವ ಲಕ್ಷ್ಯತೇ ।
ನ ತತ್ರ ರೇತಃ ಕ್ಷೇತ್ರಂ ವಾ ಪ್ರಮಾಣಂ ಸ್ಯಾದ್ ಯುಧಿಷ್ಠಿರ ॥೩೧॥

ಕೆಲವು ಸಂದರ್ಭಗಳಲ್ಲಿ ಕೃತಕ ಪುತ್ರನು ಅವನನ್ನು ಸಂಗ್ರಹಿಸುವುದರಿಂದಲೇ ತಿಳಿಯಲ್ಪಡುತ್ತಾನೆ. ಎಲೈ ಯುಧಿಷ್ಠಿರನೇ, ಅಲ್ಲಿ ರೇತಸ್ಸಾಗಲೀ, ಕ್ಷೇತ್ರವಾಗಲೀ ಪ್ರಮಾಣವಾಗುವುದಿಲ್ಲ (ಅವನನ್ನು ಸಾಕ್ಷಾತ್ತಾಗಿ ಪಡೆದ ಮಾತಾ-ಪಿತೃಗಳು ಅವನ ಮೇಲೆ ಅಧಿಕಾರವನ್ನು ಹೊಂದಿರುವುದಿಲ್ಲ).

ಯುಧಿಷ್ಠಿರಃ

ಕೀದೃಶಃ ಕೃತಕಃ ಪುತ್ರಃ ಸಂಗ್ರಹಾದೇವ ಲಕ್ಷ್ಯತೇ ।
ಶುಕ್ರಂ ಕ್ಷೇತ್ರಂ ಪ್ರಮಾಣಂ ವಾ ಯತ್ರ ಲಕ್ಷ್ಯೇತ ಭಾರತ ॥೩೨॥

ಯುಧಿಷ್ಠಿರ– ಎಲೈ ಭಾರತನೇ, ಎಂತಹ ಕೃತಕಪುತ್ರನು ಸ್ವೀಕಾರದಿಂದ ತಿಳಿಯಲ್ಪಡುತ್ತಾನೆ? ಶುಕ್ರವಾಗಲೀ, ಕ್ಷೇತ್ರವಾಗಲೀ ಎಲ್ಲಿ ಪುತ್ರನ ಮೇಲೆ ಅಧಿಕಾರಕ್ಕೆ ಕಾರಣವಾಗುತ್ತದೆ?

ಭೀಷ್ಮಃ

ಮಾತಾಪಿತೃಭ್ಯಾಂ ಸಂತ್ಯಕ್ತಂ ಪಥಿ ಯಂ ತು ಪ್ರಲಕ್ಷಯೇತ್ ।
ನ ಚಾಸ್ಯ ಮಾತಾಪಿತರೌ ಜ್ಞಾಯೇತೇ ಸ ಹಿ ಕೃತ್ರಿಮಃ ॥೩೩॥

ತಂದೆ-ತಾಯಿಗಳಿಂದ ಪರಿತ್ಯಜಿಸಲ್ಪಟ್ಟು ಮಾರ್ಗದಲ್ಲಿ ಬಿದ್ದಿರುವ ಬಾಲಕನನ್ನು ಅವನ ಮಾತಾ-ಪಿತೃಗಳು ತಿಳಿಯದಿದ್ದಾಗ ಕೃತ್ರಿಮ ಪುತ್ರನೆಂದು ಕರೆಯುತ್ತಾರೆ.

ಅಸ್ವಾಮಿಕಸ್ಯ ಸ್ವಾಮಿತ್ವಂ ಯಸ್ಮಿನ್ ಸಂಪ್ರತಿ ಲಕ್ಷಯೇತ್ ।
ಸವರ್ಣಸ್ತಂ ಚ ಪೋಷೇತ ಸವರ್ಣಸ್ತಸ್ಯ ಜಾಯತೇ ॥೩೪॥

ಸ್ವಾಮಿ ಇಲ್ಲದಿರುವ ಆ ಶಿಶುವಿಗೆ ಯಾರಲ್ಲಿ ಸ್ವಾಮಿತ್ವವು ಕಂಡುಬರುತ್ತದೆಯೋ ಅವನ ವರ್ಣವು ಉಂಟಾಗುತ್ತದೆ. ಅವನೂ ಅವನನ್ನು ಸವರ್ಣನಂತೇ ಪೂಜಿಸಬೇಕು. ಅವನಲ್ಲಿ ಸವರ್ಣನೇ ಜನಿಸುತ್ತಾನೆ.

ಯುಧಿಷ್ಠಿರಃ

ಕಥಮಸ್ಯ ಪ್ರಯೋಕ್ತವ್ಯಃ ಸಂಸ್ಕಾರಃ ಕಸ್ಯ ವಾ ಕಥಮ್ ।
ದೇಯಾ ಕನ್ಯಾ ಕಥಂ ಚೇತಿ ತನ್ಮೇ ಬ್ರೂಹಿ ಪಿತಾಮಹ ॥೩೫॥

ಯುಧಿಷ್ಠಿರ– ಎಲೈ ಪಿತಾಮಹನೇ, ಅಂತಹ ಕೃತ್ರಿಮ ಪುತ್ರನಿಗೆ ಹೇಗೆ ಸಂಸ್ಕಾರವನ್ನು ಮಾಡಬೇಕು? ಅಥವಾ ಅವನಿಗೆ ಹೇಗೆ ಕನ್ಯೆಯನ್ನು ಕೊಡಬೇಕು? ಈ ವಿಷಯವನ್ನು ನನಗೆ ತಿಳಿಸು.

ಭೀಷ್ಮಃ

ಆತ್ಮವತ್ತಸ್ಯ ಕುರ್ವೀತ ಸಂಸ್ಕಾರಂ ಸ್ವಾಮಿವತ್ ತಥಾ ।
ತ್ಯಕ್ತೋ ಮಾತಾಪಿತೃಭ್ಯಾಂ ಯಃ ಸವರ್ಣಂ ಪ್ರತಿಪದ್ಯತೇ ।
ತದ್ಗೋತ್ರವರ್ಣತಸ್ತಸ್ಯ ಕುರ್ಯಾತ್ ಸಂಸ್ಕಾರಮಚ್ಯುತ ॥೩೬॥

ಭೀಷ್ಮ– ಮಾತಾ-ಪಿತೃಗಳಿಂದ ತ್ಯಕ್ತನಾದವನಿಗೆ ಯಾವನ ಸವರ್ಣತ್ವವು ಉಂಟಾಗುತ್ತದೆಯೋ ಅವನು ಅವನಿಗೆ ಸ್ವಾಮಿಯಾದ ತನಗೆ ಮಾಡಿಕೊಳ್ಳುವ ಸಂಸ್ಕಾರದಂತೆ ಅವನಿಗೂ ಸಂಸ್ಕಾರವನ್ನು ಮಾಡಬೇಕು. ಎಲೈ ಅಚ್ಯುತನೇ, ಎಲ್ಲ ಸಂಸ್ಕಾರಗಳನ್ನೂ ತನಗೋಸ್ಕರ ತನ್ನ ವರ್ಣದವರಿಗೆ ಮಾಡುವಂತೆ ಮಾಡಬೇಕು.

ಅಥ ದೇಯಾ ತು ಕನ್ಯಾ ಸ್ಯಾತ್ ತದ್ವರ್ಣೇನ ಯುಧಿಷ್ಠಿರ ॥೩೭॥

ಎಲೈ ಯುಧಿಷ್ಠಿರನೇ, ಅವನಿಗೆ ಕನ್ಯೆಯನ್ನೂ ಸಹ ಆ ವರ್ಣದವನೇ ಕೊಡಬೇಕು.

ಸಂಸ್ಕರ್ತುಂ ಮಾತೃಗೋತ್ರಂ ಚ ಮಾತೃವರ್ಣವಿನಿಶ್ಚಯೇ ।
ಕಾನೀನಾಧ್ಯೂಢಜೌ ಚಾಪಿ ವಿಜ್ಞೇಯೌ ಪುತ್ರಕಿಲ್ಬಿಷೌ ।
ತಾವಪಿ ಸ್ವಾವಿವ ಸುತೌ ಸಂಸ್ಕಾರ್ಯಾವಿತಿ ನಿಶ್ಚಯಃ ॥೩೮॥

ಕಾನೀನ ಮತ್ತು ಅಧ್ಯೂಢಜ ಪುತ್ರನಿಗೆ ಹುಟ್ಟಿದ ಪುತ್ರನನ್ನು ಪುತ್ರಕಿಲ್ಬಿಷ ಎಂದು

ತಿಳಿಯಬೇಕು. ಮಾತೃವರ್ಣವು ತಿಳಿದಿದ್ದರೆ ಅವರಿಗೂ ಸಹ ತನ್ನ ಔರಸ ಪುತ್ರರಿಗೆ ಮಾಡುವಂತೆ ಸಂಸ್ಕಾರವನ್ನು ಮಾಡಬೇಕೆಂಬುದು ನಿಶ್ಚಿತವಾದುದು.

ಕ್ಷೇತ್ರಜೋ ವಾಪ್ಯಪಶದೋ ಯೇಽಧ್ಯೂಢಾಸ್ತೇಷು ಚಾಪ್ಯಥ ।
ಆತ್ಮವದ್ ವೈ ಪ್ರಯುಂಜೀರನ್ ಸಂಸ್ಕಾರಂ ಬ್ರಾಹ್ಮಣಾದಯಃ ॥೩೯॥

ಬ್ರಾಹ್ಮಣಾದಿಗಳು ಆ ಪುತ್ರನು ಕ್ಷೇತ್ರಜನಾಗಲಿ, ಅಪಶದನಾಗಿರಲಿ ಅಥವಾ ಅಧ್ಯೂಢನಾಗಿರಲಿ ಅವನಿಗೆ ತಮ್ಮಂತೆಯೇ ಸಂಸ್ಕಾರವನ್ನು ಮಾಡಬೇಕು.

ಧರ್ಮಶಾಸ್ತ್ರೇಷು ವರ್ಣಾನಾಂ ನಿಶ್ಚಯೋಽಯಂ ಪ್ರದೃಶ್ಯತೇ ।
ಏತತ್ ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೪೦॥

ಧರ್ಮಶಾಸ್ತ್ರದಲ್ಲಿ ವರ್ಣಗಳ ವಿಷಯದಲ್ಲಿ ಈ ರೀತಿಯ ನಿರ್ಣಯವು ಕಂಡುಬರುತ್ತದೆ. ಇವೆಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಪುತ್ರಭೇದಕಥನಂ ನಾಮ
ಏಕೋನಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತನೆಯ ಅಧ್ಯಾಯ

ಚ್ಯವನೋಪಾಖ್ಯಾನ ಪ್ರಾರಂಭ. ಮೀನಿನ ಬಲೆಯಲ್ಲಿ ಚ್ಯವನರ ಗ್ರಹಣ.

ಯುಧಿಷ್ಠಿರಃ

ದರ್ಶನೇ ಕೀದೃಶಃ ಸ್ನೇಹಃ ಸಂವಾಸೇ ಚ ಪಿತಾಮಹ ।
ಮಹಾಭಾಗ್ಯಂ ಗವಾಂ ಚೈವ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಸಜ್ಜನರ ದರ್ಶನದಿಂದ ಎಂತಹ ಸ್ನೇಹ ಉಂಟಾಗುತ್ತದೆ? ಅವರ ಜೊತೆಯಲ್ಲಿ ವಾಸ ಮಾಡುವುದರಿಂದ ಎಂತಹ ಸ್ನೇಹ ಉಂಟಾಗುತ್ತದೆ? ಗೋವುಗಳ ಮಹಾಭಾಗ್ಯವೇನು? ಇವುಗಳನ್ನು ನನಗೆ ಹೇಳಿ.

ಭೀಷ್ಮಃ

ಹಂತ ತೇ ಕಥಯಿಷ್ಯಾಮಿ ಪುರಾವೃತ್ತಂ ಮಹಾದ್ಯುತೇ ।
ನಹುಷಸ್ಯ ಚ ಸಂವಾದಂ ಮಹರ್ಷೇಶ್ಚ್ಯವನಸ್ಯ ಚ ॥೨॥

ಭೀಷ್ಮ- ಎಲೈ ಮಹಾದ್ಯುತಿಯೇ, ನಹುಷನಿಗೂ ಮತ್ತು ಮಹರ್ಷಿಯಾದ ಚ್ಯವನರಿಗೂ ಹಿಂದೆ ನಡೆದ ಸಂವಾದರೂಪವಾದ ಕಥೆಯನ್ನು ನಿನಗೆ ಹೇಳುತ್ತೇನೆ.

ಪುರಾ ಮಹರ್ಷಿಶ್ಚ್ಯವನೋ ಭಾರ್ಗವೋ ಭರತರ್ಷಭ ।
ಉದವಾಸಕೃತಾರಂಭೋ ಬಭೂವ ಸುಮಹಾವ್ರತಃ ॥೩॥

ಎಲೈ ಭರತಶ್ರೇಷ್ಠನೇ, ಹಿಂದೆ ಭೃಗುಕುಲೋತ್ಪನ್ನರಾದ, ದೊಡ್ಡ ವ್ರತಗಳನ್ನು ಮಾಡುವ ಚ್ಯವನ ಮಹರ್ಷಿಗಳು ಜಲದಲ್ಲಿದ್ದು ತಪಸ್ಸನ್ನು ಮಾಡಲು ಪ್ರಾರಂಭಿಸಿದರು.

ನಿಹತ್ಯ ಮಾನಂ ಕ್ರೋಧಂ ಚ ಪ್ರಹರ್ಷಂ ಶೋಕಮೇವ ಚ ।
ವರ್ಷಾಣಿ ದ್ವಾದಶ ಮುನಿರ್ಜಲವಾಸೇ ಧೃತವ್ರತಃ ॥೪॥

ಅಹಂಕಾರ-ಕ್ರೋಧಗಳನ್ನೂ, ಹರ್ಷ-ಶೋಕಗಳನ್ನೂ ತ್ಯಜಿಸಿ ಹನ್ನೆರಡು ವರ್ಷಗಳ ಕಾಲ ಅವರು ಜಲವಾಸವ್ರತವನ್ನು ಮಾಡಲು ನಿಶ್ಚಯಿಸಿದರು.

ಆದಧತ್ ಸರ್ವಭೂತೇಷು ವಿಸ್ರಂಭಂ ಪರಮಂ ಶುಭಮ್ ।
ಜಲೇಚರೇಷು ಸತ್ತ್ವೇಷು ಶೀತರಶ್ಮಿರಿವ ಪ್ರಭುಃ ॥೫॥

ಪ್ರಭುಗಳಾದ ಅವರು ಎಲ್ಲ ಜಲಚರ ಪ್ರಾಣಿಗಳಲ್ಲಿ ಶೀತರಶ್ಮಿಯಾದ ಚಂದ್ರನಂತೆ ಶುಭವಾದ ಪರಮವಿಶ್ವಾಸವನ್ನು ಉಂಟುಮಾಡಿದರು.

ಸ್ಥಾಣುಭೂತಃ ಶುಚಿರ್ಭೂತ್ವಾ ದೈವತೇಭ್ಯಃ ಪ್ರಣಮ್ಯ ಚ ।
ಗಂಗಾಯಮುನಯೋರ್ಮಧ್ಯೇ ಜಲಂ ಸಂಪ್ರವಿವೇಶ ಹ ॥೬॥

ಶುಚಿಯಾಗಿ, ದೇವತೆಗಳಿಗೆ ನಮಸ್ಕರಿಸಿ, ಗಂಗಾ-ಯಮುನಾ ಸಂಗಮದಲ್ಲಿ ಆ ಎರಡು ನದಿಗಳ ಮಧ್ಯದಲ್ಲಿ ಮರದ ತುಂಡಿನಂತೆ ಜಲವನ್ನು ಪ್ರವೇಶಿಸಿದರಷ್ಟೆ?

ಗಂಗಾಯಮುನಯೋರ್ವೇಗಂ ಸುಭೀಮಂ ಭೀಮನಿಸ್ವನಮ್ ।
ಪ್ರತಿಜಗ್ರಾಹ ಶಿರಸಾ ವಾತವೇಗಸಮಂ ಜವೇ ॥೭॥

ಗಂಗಾ-ಯಮುನೆಯರ ವಾಯುವೇಗಕ್ಕೆ ಸಮವಾದ ವೇಗವನ್ನೂ, ಭಯಂಕರವಾದ ಘೋಷವನ್ನೂ ಅವರು ಶಿರಸಾ ಸ್ವೀಕರಿಸಿದರು.

ಗಂಗಾ ಚ ಯಮುನಾ ಚೈವ ಸರಿತಶ್ಚಾನುಗಾಸ್ತಯೋಃ ।
ಪ್ರದಕ್ಷಿಣಮೃಷಿಂ ಚಕ್ರುರ್ನ ಚೈನಂ ಪರ್ಯಪೀಡಯನ್ ॥೮॥

ಗಂಗಾಯಮುನಾ ನದಿಗಳು ಮತ್ತು ಅವುಗಳಿಗೆ ಬಂದು ಸೇರುವ ಉಪನದಿಗಳು ಅವರಿಗೆ ಪ್ರದಕ್ಷಿಣೆಯನ್ನು ಮಾಡಿ ಹರಿದವು. ಅವರಿಗೆ ಹಿಂಸೆಯನ್ನು ಉಂಟು ಮಾಡಲಿಲ್ಲ.

ಅಂತರ್ಜಲೇ ಸ ಸುಷ್ಟಾಪ ಕಾಷ್ಠಭೂತೋ ಮಹಾಮುನಿಃ ।
ತತಶ್ಚೋರ್ಧ್ವಸ್ಥಿತೋ ಧೀಮಾನಭವದ್ ಭರತರ್ಷಭ ॥೯॥

ಮಹರ್ಷಿಗಳಾದ ಅವರು ಒಂದು ಕಾಷ್ಠದಂತೆ ನೀರಿನ ಮಧ್ಯದಲ್ಲಿಯೇ ನಿದ್ರೆಯನ್ನು ಮಾಡುತ್ತಿದ್ದರು. ಎಲೈ ಭರತರ್ಷಭನೇ, ಮೇಧಾವಿಗಳಾದ ಅವರು ಅಲ್ಲಿಯೇ ಏಳುತ್ತಿದ್ದರು.

ಜಲೌಕಸಾಂ ಸ ಸತ್ತ್ವಾನಾಂ ಬಭೂವ ಪ್ರಿಯದರ್ಶನಃ ।
ಉಪಾಜಿಘ್ರಂತ ಚ ತದಾ ಮತ್ಸ್ಯಾಸ್ತಂ ಹೃಷ್ಟಮಾನಸಾಃ ।
ತತ್ರ ತಸ್ಯಾಸತಃ ಕಾಲಃ ಸಮತೀತೋऽಭವನ್ಮಹಾನ್ ॥೧೦॥

ಜಲಚರಪ್ರಾಣಿಗಳಿಗೆ ಅವರ ದರ್ಶನವು ಪ್ರಿಯವಾಯಿತು. ಮೀನುಗಳು ಅವರ ಬಳಿಗೆ ಬಂದು ಸಂತೋಷದಿಂದ ಅವರನ್ನು ಮೂಸಿ ನೋಡಿದವು. ಅಲ್ಲಿಯೇ ವಾಸ ಮಾಡುವ ಅವರಿಗೆ ಬಹಳ ಕಾಲವು ಕಳೆದು ಹೋಯಿತು.

ತತಃ ಕದಾಚಿತ್ಸಮಯೇ ಕಸ್ಮಿಂಶ್ಚಿನ್ಮತ್ಸ್ಯಜೀವಿನಃ ।
ತಂ ದೇಶಂ ಸಮುಪಾಜಗ್ಮುರ್ಜಾಲಹಸ್ತಾ ಮಹಾದ್ಯುತೇ ॥೧೧॥

ಎಲೈ ಮಹಾದ್ಯುತಿಯೇ, ಅನಂತರ ಒಂದು ಸಮಯದಲ್ಲಿ ಮತ್ಸ್ಯಜೀವಿಗಳು ಕೈಯಲ್ಲಿ ಬಲೆಯನ್ನು ಹಿಡಿದು ಆ ಪ್ರದೇಶಕ್ಕೆ ಬಂದರು.

ನಿಷಾದಾ ಬಹವಸ್ತತ್ರ ಮತ್ಸ್ಯೋದ್ಧರಣನಿಶ್ಚಿತಾಃ ।
ವ್ಯಾಯತಾ ಬಲಿನಃ ಶೂರಾಃ ಸಲಿಲೇಷ್ವನಿವರ್ತಿನಃ ।
ಅಭ್ಯಾಯಯುಶ್ಚ ತಂ ದೇಶಂ ನಿಶ್ಚಿತಾ ಜಾಲಕರ್ಮಣಿ ॥೧೨॥

ಮೀನನ್ನು ಹಿಡಿದು ಜೀವನವನ್ನು ಮಾಡುವ ಬಲಿಷ್ಠರೂ, ಶೂರರೂ, ಒಳ್ಳೆಯ ಮೈಕಟ್ಟುಳ್ಳವರೂ, ನೀರಿಗೆ ಹೆದರಿ ಹಿಂದಿರುಗದವರೂ ಆದ, ಬಲೆಯನ್ನು ಬೀಸಿ ಮೀನುಗಳನ್ನು ಹಿಡಿಯುವುದರಲ್ಲಿ ಪರಿಣತರಾದ ಅನೇಕ ಬೆಸ್ತರ ಜಾತಿಯವರು ಅಲ್ಲಿಗೆ ಬಂದರು.

ಜಾಲಂ ಚ ಯೋಜಯಾಮಾಸುರ್ವಿಶೇಷೇಣ ಜನಾಧಿಪ ।
ಮತ್ಸ್ಯೋದಕಂ ಸಮಾಸಾದ್ಯ ತದಾ ಭರತಸತ್ತಮ ॥೧೩॥

ಎಲೈ ಜನಾಧಿಪನೇ, ಭರತಶ್ರೇಷ್ಠನೇ, ಅವರು ಮೀನುಗಳಿರುವ ನೀರಿನ ಸ್ಥಳಕ್ಕೆ ಬಂದು ವಿಶೇಷವಾಗಿ ಬಲೆಯನ್ನು ಬೀಸಿದರು.

ತತಸ್ತೇ ಬಹುಭಿರ್ಯೋಗೈಃ ಕೈವರ್ತಾ ಮತ್ಸ್ಯಕಾಂಕ್ಷಿಣಃ ।
ಗಂಗಾಯಮುನಯೋರ್ವಾರಿ ಜಾಲೈರಭ್ಯಕಿರಂಸ್ತತಃ ॥೧೪॥

ಅನಂತರ ಮೀನುಗಳನ್ನು ಹಿಡಿಯಲು ಬಯಸಿದ ಆ ಬೆಸ್ತರು ಬಹಳ ಉಪಾಯಗಳಿಂದ ಗಂಗಾ-ಯಮುನೆಯರ ಜಲದಲ್ಲಿ ಬಲೆಯನ್ನು ಬೀಸಿದರು.

ಜಾಲಂ ಸುವಿತತಂ ತೇಷಾಂ ನವಸೂತ್ರಕೃತಂ ತಥಾ ।
ವಿಸ್ತಾರಾಯಾಮಸಂಪನ್ನಂ ಯತ್ ತತ್ರ ಸಲಿಲೇ ಕ್ಷಮಮ್ ॥೧೫॥

ಆ ಬಲೆಯು ಹೊಸದಾರಗಳಿಂದ ಹೆಣೆಯಲ್ಪಟ್ಟಿದ್ದು, ಒಳ್ಳೆಯ ಉದ್ದಗಲಗಳನ್ನು ಹೊಂದಿದ್ದು, ನೀರಿನ ವೇಗವನ್ನು ತಡೆಯುವುದಾಗಿದ್ದು ಬಹಳ ವಿಸ್ತಾರವಾಗಿದ್ದಿತು.

ತತಸ್ತೇ ಸುಮಹಚ್ಚೈವ ಬಲವಚ್ಚ ಸುವರ್ತಿತಮ್ ।
ಪ್ರಕೀರ್ಯ ಸರ್ವತಃ ಸರ್ವೇ ಜಾಲಂ ಚಕೃಷಿರೇ ತದಾ ॥೧೬॥

ಅನಂತರ ಅವರು ಬಲಿಷ್ಠವೂ, ದೊಡ್ಡದೂ, ಚೆನ್ನಾಗಿ ಬೀಸಲ್ಪಟ್ಟದ್ದೂ ಆದ ಆ ಬಲೆಯನ್ನು ಎಲ್ಲರೂ ಸೇರಿ ಎಲ್ಲ ಕಡೆಗಳಿಂದಲೂ ಎಳೆದರು.

ಅಭೀತರೂಪಾಃ ಸಂಹೃಷ್ಟಾಸ್ತೇऽನ್ಯೋನ್ಯವಶವರ್ತಿನಃ ।
ಬಬಂಧುಸ್ತತ್ರ ಮತ್ಸ್ಯಾಂಶ್ಚ ತಥಾನ್ಯಾನ್ ಜಲಚಾರಿಣಃ ॥೧೭॥

ಭಯರಹಿತರಾದ, ಪರಸ್ಪರ ವಶವರ್ತಿಗಳಾದ, ಸಂತೋಷದಿಂದ ಕೂಡಿದ ಅವರು ಆ ಬಲೆಯಲ್ಲಿ ಮೀನುಗಳನ್ನೂ, ಬೇರೆ ಜಲಚರ ಪ್ರಾಣಿಗಳನ್ನೂ ಅಲ್ಲಿ ಬಂಧಿಸಿದರು.

ತಥಾ ಮತ್ಸ್ಯೈಃ ಪರಿವೃತಂ ಚ್ಯವನಂ ಭೃಗುನಂದನಮ್ ।
ಆಕರ್ಷಂತ ಮಹಾರಾಜ ಜಾಲೇನಾಥ ಯದೃಚ್ಛಯಾ ॥೧೮॥

ಎಲೈ ಮಹಾರಾಜನೇ, ಹಾಗೆಯೇ ಅವರು ಅನಿರೀಕ್ಷಿತವಾಗಿ ಮತ್ಸ್ಯಗಳಿಂದ ಪರಿವೃತರಾದ ಭೃಗುನಂದನರಾದ ಚ್ಯವನರನ್ನೂ ಬಲೆಯಲ್ಲಿ ಎಳೆದರು.

ನದೀಶೈವಲದಿಗ್ಧಾಂಗಂ ಹರಿಶ್ಮಶ್ರುಜಟಾಧರಮ್ ।
ಲಗ್ನೈಃ ಶಂಖಗಣೈರ್ಗಾತ್ರೈಃ ಕೋಷ್ಣೈಶ್ಚಿತ್ರೈರಿವಾವೃತಮ್ ॥೧೯॥

ತಂ ಜಾಲೇನೋದ್ಧೃತಂ ದೃಷ್ಟ್ವಾ ತೇ ತದಾ ವೇದಪಾರಗಮ್ ।
ಸರ್ವೇ ಪ್ರಾಂಜಲಯೋ ದಾಶಾಃ ಶಿರೋಭಿಃ ಪ್ರಾಪತನ್ ಭುವಿ ॥೨೦॥

ನದಿಯ ಪಾಚಿಗಳಿಂದ ಶರೀರವೆಲ್ಲಾ ತುಂಬಿದ್ದ, ಹಸಿರುಬಣ್ಣದ ಮೀಸೆ ಮತ್ತು ಜಟೆಗಳನ್ನು ಹೊಂದಿದ್ದ, ದೇಹದಲ್ಲೆಲ್ಲಾ ವಿಚಿತ್ರವಾದ ಕೋಶಗಳಂತೆ ಶಂಖಗಳು ಅಂಟಿಕೊಂಡಿದ್ದ ವೇದಪಾರಂಗತರಾದ ಅವರು ಬಲೆಯಲ್ಲಿ ಸಿಕ್ಕಿದುದನ್ನು ನೋಡಿ ಎಲ್ಲ ಬೆಸ್ತರು ಕೈಗಳನ್ನು ಮುಗಿದು ಭೂಮಿಯ ಮೇಲೆ ಶಿರಸಾ ನಮಸ್ಕಾರವನ್ನು ಮಾಡಿದರು.

ಪರಿಖೇದಪರಿತ್ರಾಸಾಜ್ಜಾಲಸ್ಯಾಕರ್ಷಣೇನ ಚ ।
ಮತ್ಸ್ಯಾ ಬಭೂವುರ್ವ್ಯಾಪನ್ನಾಃ ಸ್ಥಲಸಂಕರ್ಷಣೇನ ಚ ॥೨೧॥

ಆ ಮೀನುಗಳು ಬಲೆಯಲ್ಲಿ ಸಿಕ್ಕಿದ ದುಃಖದಿಂದಲೂ, ಬಲೆಯನ್ನು ಎಳೆಯುವಾಗ ಉಂಟಾದ ಆಯಾಸದಿಂದಲೂ ಮತ್ತು ಭೂಮಿಯ ಮೇಲೆ ಬಂದು ಬಿದ್ದುದರಿಂದಲೂ ಮರಣವನ್ನು ಹೊಂದಿದವು.

ಸ ಮುನಿಸ್ತತ್ತದಾ ದೃಷ್ಟ್ವಾ ಮತ್ಸ್ಯಾನಾಂ ಕದನಂ ಕೃತಮ್ ।
ಬಭೂವ ಕೃಪಯಾऽऽವಿಷ್ಟೋ ನಿಃಶ್ವಸಂಶ್ಚ ಪುನಃ ಪುನಃ ॥೨೨॥

ಆ ಋಷಿಗಳು ಆಗ ಮತ್ಸ್ಯಗಳ ದುರವಸ್ಥೆಯನ್ನು ನೋಡಿ ಕೃಪೆಯಿಂದ ಕೂಡಿದವರಾಗಿ ಪುನಃ ಪುನಃ ನಿಟ್ಟುಸಿರನ್ನು ಬಿಟ್ಟರು.

ನಿಷಾದಾಃ

ಅಜ್ಞಾನಾದ್ ಯತ್‌ಕೃತಂ ಪಾಪಂ ಪ್ರಸಾದಂ ತತ್ರ ನಃ ಕುರು ।
ಕರವಾಮ ಪ್ರಿಯಂ ಕಿಂ ತೇ ತನ್ನೋ ಬ್ರೂಹಿ ಮಹಾಮುನೇ ॥೨೩॥

ನಿಷಾದರು– ಮಹರ್ಷಿಗಳೇ, ನಾವು ಅಜ್ಞಾನದಿಂದ ಅಪರಾಧವನ್ನು ಮಾಡಿದ್ದೇವೆ. ನಮ್ಮ ಮೇಲೆ ಅನುಗ್ರಹವನ್ನು ಮಾಡಿ. ನಿಮಗೆ ನಾವು ಯಾವ ಪ್ರಿಯವನ್ನು ಮಾಡಬಹುದು ಎಂದು ಹೇಳಿ.

ಭೀಷ್ಮಃ

ಇತ್ಯುಕ್ತೋ ಮತ್ಸ್ಯಮಧ್ಯಸ್ಥಶ್ಚ್ಯವನೋ ವಾಕ್ಯಮಬ್ರವೀತ್ ।
ಯೋ ಮೇऽದ್ಯ ಪರಮಃ ಕಾಮಸ್ತಂ ಶೃಣುಧ್ವಂ ಸಮಾಹಿತಾಃ ॥೨೪॥

ಪ್ರಾಣೋತ್ಸರ್ಗಂ ವಿಕ್ರಯಂ ವಾ ಮತ್ಸ್ಯೈರ್ಯಾಸ್ಯಾಮ್ಯಹಂ ಸಹ ।
ಸಂವಾಸಾನ್ನೋತ್ಸಹೇ ತ್ಯಕ್ತುಂ ಸಲಿಲಾಧ್ಯುಷಿತಾನಿಮಾನ್ ॥೨೫॥

ಭೀಷ್ಮ– ಹೀಗೆ ಹೇಳಲ್ಪಟ್ಟ ಚ್ಯವನರು ಮೀನುಗಳ ಮಧ್ಯದಲ್ಲೇ ಇದ್ದವರಾಗಿ ಎಲೈ ಬೆಸ್ತರೇ, ನನ್ನ ಶ್ರೇಷ್ಠವಾದ ಆಸೆಯನ್ನು ಮನಸ್ಸಮಾಧಾನದಿಂದ ಕೇಳಿ. ನಾನು ಪ್ರಾಣತ್ಯಾಗವನ್ನಾಗಲೀ ಅಥವಾ ವಿಕ್ರಯವನ್ನಾಗಲೀ ಈ ಮತ್ಸ್ಯಗಳ ಜೊತೆಯಲ್ಲೇ ಹೊಂದುವೆನು. ಬಹುಕಾಲದವರೆಗೆ ನೀರಿನಲ್ಲಿ ಇವುಗಳ ಜೊತೆಯಲ್ಲಿ ವಾಸ ಮಾಡಿದ ನಾನು ಇವುಗಳನ್ನು ಪರಿತ್ಯಾಗ ಮಾಡಲಾರೆ ಎಂದು ಹೇಳಿದರು.

ಇತ್ಯುಕ್ತಾಸ್ತೇ ನಿಷಾದಾಸ್ತು ಸುಭೃಶಂ ಭಯಕಂಪಿತಾಃ ।
ಸರ್ವೇ ವಿಷಣ್ಣವದನಾ ನಹುಷಾಯ ನ್ಯವೇದಯನ್ ॥೨೬॥

ಹೀಗೆ ಹೇಳಲ್ಪಟ್ಟ ಆ ಬೆಸ್ತರು ಬಹಳ ಭಯದಿಂದ ನಡುಗಿ ಎಲ್ಲರೂ ವಿಷಣ್ಣ ವದನರಾಗಿ ಮಹಾರಾಜನಾದ ನಹುಷನ ಬಳಿಗೆ ಹೋಗಿ ಈ ವಿಷಯವನ್ನು ನಿವೇದಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಚ್ಯವನಜಾಲಗ್ರಹಣಂ ನಾಮ
ಅಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂದನೆಯ ಅಧ್ಯಾಯ

ಚ್ಯವನ-ನಹುಷ ಸಂವಾದ. ಗೋವಿನಿಂದ ಚ್ಯವನರ ಕ್ರಯಣ ಮತ್ತು ಗೋವುಗಳ ಮಹಿಮೆ.

ಭೀಷ್ಮಃ

ನಹುಷಸ್ತು ತತಃ ಶ್ರುತ್ವಾ ಚ್ಯವನಂ ತಂ ತಥಾಗತಮ್ ।
ತ್ವರಿತಃ ಪ್ರಯಯೌ ತತ್ರ ಸಹಾಮಾತ್ಯಪುರೋಹಿತಃ ॥೧॥

ಭೀಷ್ಮ- ನಹುಷನು ಆ ರೀತಿಯಲ್ಲಿ ಬಂದ ಚ್ಯವನರ ವಾರ್ತೆಯನ್ನು ಕೇಳಿ ಅಮಾತ್ಯ-ಪುರೋಹಿತರ ಜೊತೆಯಲ್ಲಿ ಅಲ್ಲಿಗೆ ಶೀಘ್ರವಾಗಿ ಬಂದನು.

ಶೌಚಂ ಕೃತ್ವಾ ಯಥಾನ್ಯಾಯಂ ಪ್ರಾಂಜಲಿಃ ಪ್ರಯತೋ ನೃಪಃ ।
ಆತ್ಮಾನಮಾಚಚಕ್ಷೇ ಚ ಚ್ಯವನಾಯ ಮಹಾತ್ಮನೇ ॥೨॥

ಅವನು ಶುಚಿಯಾಗಿ ಕೈಗಳನ್ನು ಮುಗಿದು, ಶ್ರದ್ಧೆಯಿಂದ ಕೂಡಿದವನಾಗಿ, ನ್ಯಾಯಕ್ಕೆ ಅನುಗುಣವಾಗಿ ಮಹಾತ್ಮರಾದ ಚ್ಯವನರನ್ನು ಕುರಿತು ತನ್ನನ್ನು ನಿವೇದಿಸಿಕೊಂಡನು.

ಅರ್ಚಯಾಮಾಸ ತಂ ಚಾಪಿ ತಸ್ಯ ರಾಜ್ಞಃ ಪುರೋಹಿತಃ ।
ಸತ್ಯವ್ರತಂ ಮಹಾಭಾಗಂ ದೇವಕಲ್ಪಂ ವಿಶಾಂಪತೇ ॥೩॥

ಎಲೈ ರಾಜನೇ, ಆ ರಾಜಪುರೋಹಿತನೂ ಸಹ ಸತ್ಯವ್ರತರೂ, ಮಹಾನುಭಾವರೂ, ದೇವತೆಗಳಂತೆ ಇರುವವರೂ ಆದ ಚ್ಯವನರನ್ನು ಪೂಜಿಸಿದರು.

ನಹುಷಃ

ಕರವಾಣಿ ಪ್ರಿಯಂ ಕಿಂ ತೇ ತನ್ಮೇ ವ್ಯಾಖ್ಯಾತುಮರ್ಹಸಿ ।
ಸರ್ವಂ ಕರ್ತಾಸ್ಮಿ ಭಗವನ್ ಯದ್ಯಪಿ ಸ್ಯಾತ್ ಸುದುಷ್ಕರಮ್ ॥೪॥

ನಹುಷ– ಪೂಜ್ಯರೇ, ನಿಮಗೆ ನಾನು ಯಾವ ಪ್ರಿಯವನ್ನು ಮಾಡಲಿ ಎಂಬುದನ್ನು ಹೇಳಬೇಕು. ಅದು ದುಸ್ಸಾಧ್ಯವಾಗಿದ್ದರೂ ನಾನು ಅದನ್ನು ಮಾಡುವೆನು.

ಚ್ಯವನಃ

ಶ್ರಮೇಣ ಮಹತಾ ಯುಕ್ತಾಃ ಕೈವರ್ತಾ ಮತ್ಸ್ಯಜೀವಿನಃ ।
ಮಮ ಮೂಲ್ಯಂ ಪ್ರಯಚ್ಛೈಭ್ಯೋ ಮತ್ಸ್ಯಾನಾಂ ವಿಕ್ರಯೈಃ ಸಹ ॥೫॥

ಚ್ಯವನ– ಮತ್ಸ್ಯಜೀವಿಗಳಾದ ಬೆಸ್ತರು ಬಹಳ ಶ್ರಮದಿಂದ ನನ್ನನ್ನು ಎಳೆದಿದ್ದಾರೆ. ನೀನು ಮತ್ಸ್ಯಗಳ ಬೆಲೆಗಳ ಜೊತೆಯಲ್ಲಿ ನನ್ನ ಬೆಲೆಯನ್ನು ಅವರಿಗೆ ಕೊಡು.

ನಹುಷಃ

ಸಹಸ್ರಂ ದೀಯತಾಂ ಮೂಲ್ಯಂ ನಿಷಾದೇಭ್ಯಃ ಪುರೋಹಿತ ।
ನಿಷ್ಕಯಾರ್ಥಂ ಭಗವತೋ ಯಥಾಹ ಭೃಗುನಂದನಃ ॥೬॥

ನಹುಷ– ಎಲೈ ಪುರೋಹಿತನೇ, ಭೃಗುನಂದನರಾದ ಚ್ಯವನರು ಹೇಳಿದಂತೆ ಕೊಂಡುಕೊಳ್ಳುವ ಸಲುವಾಗಿ ನಿಷಾದರಿಗೆ ಒಂದು ಸಹಸ್ರ ನಿಷ್ಕಗಳನ್ನು ಕೊಡು.

ಚ್ಯವನಃ

ಸಹಸ್ರಂ ನಾಹಮರ್ಹಾಮಿ ಕಿಂ ವಾ ತ್ವಂ ಮನ್ಯಸೇ ನೃಪ ।
ಸದೃಶಂ ದೀಯತಾಂ ಮೂಲ್ಯಂ ಸ್ವಬುದ್ಧ್ಯಾ ನಿಶ್ಚಯಂ ಕುರು ॥೭॥

ಚ್ಯವನ– ರಾಜನೇ, ಸಹಸ್ರನಿಷ್ಕಗಳು ನನಗೆ ಯೋಗ್ಯವಾದ ಬೆಲೆಯಲ್ಲ. ನಿನ್ನ ಅಭಿಪ್ರಾಯವೇನು? ನಿನ್ನ ಬುದ್ಧಿಯಿಂದ ನಿಶ್ಚಯಿಸಿ ನನಗೆ ಉಚಿತವಾದ ಬೆಲೆಯನ್ನು ಕೊಡು.

ನಹುಷಃ

ಸಹಸ್ರಾಣಾಂ ಶತಂ ಕ್ಷಿಪ್ರಂ ನಿಷಾದೇಭ್ಯಃ ಪ್ರದೀಯತಾಮ್ ।
ಸ್ಯಾದೇತತ್ತು ಭವೇನ್ಮೂಲ್ಯಂ ಕಿಂ ವಾನ್ಯನ್ಮನ್ಯತೇ ಭವಾನ್ ॥೮॥

ನಹುಷ– ಒಂದು ಲಕ್ಷ ನಿಷ್ಕಗಳನ್ನು ಶೀಘ್ರವಾಗಿ ಈ ಬೆಸ್ತರಿಗೆ ಕೊಡಿ. ಮಹರ್ಷಿಗಳೇ, ಇದು ನಿಮಗೆ ಸದೃಶವಾದ ಬೆಲೆಯಾಗುತ್ತದೆಯೇ? ಅಥವಾ ನಿಮ್ಮ ಅಭಿಪ್ರಾಯವೇನು?

ಚ್ಯವನಃ

ನಾಹಂ ಶತಸಹಸ್ರೇಣ ನಿಮೇಯಃ ಪಾರ್ಥಿವರ್ಷಭ ।
ದೀಯತಾಂ ಸದೃಶಂ ಮೂಲ್ಯಮಮಾತ್ಯೈಃ ಸಹ ಚಿಂತಯ ॥೯॥

ಚ್ಯವನ– ಎಲೈ ರಾಜನೇ, ನನ್ನನ್ನು ಒಂದು ಲಕ್ಷ ನಿಷ್ಕಗಳಿಂದ ವಿನಿಮಯ ಮಾಡಿಕೊಳ್ಳಲು ಸಾಧ್ಯವಿಲ್ಲ. ನನಗೆ ಯೋಗ್ಯವಾದ ಬೆಲೆಯನ್ನು ಕೊಡು. ನಿನ್ನ ಅಮಾತ್ಯರ ಜೊತೆಯಲ್ಲಿ ವಿಚಾರ ಮಾಡು.

ನಹುಷಃ

ಕೋಟಿಃ ಪ್ರದೀಯತಾಂ ಮೂಲ್ಯಂ ನಿಷಾದೇಭ್ಯಃ ಪುರೋಹಿತ ।
ಯದೇತದಪಿ ನೌಪಮ್ಯಮತೋ ಭೂಯಃ ಪ್ರದೀಯತಾಮ್ ॥೧೦॥

ನಹುಷ– ಎಲೈ ಪುರೋಹಿತನೇ, ನಿಷಾದರಿಗೆ ಒಂದುಕೋಟಿ ನಿಷ್ಕಗಳನ್ನು ಕೊಡು. ಅದೂ ಸಾಲದಿದ್ದರೆ ಅದಕ್ಕಿಂತಲೂ ಹೆಚ್ಚಿನ ಧನವನ್ನು ಕೊಡು.

ಚ್ಯವನಃ

ರಾಜನ್ನಾರ್ಹಾಮ್ಯಹಂ ಕೋಟಿಂ ಭೂಯೋ ವಾಪಿ ಮಹಾದ್ಯುತೇ ।
ಸದೃಶಂ ದೀಯತಾಂ ಮೂಲ್ಯಂ ಬ್ರಾಹ್ಮಣೈಃ ಸಹ ಚಿಂತಯ ॥೧೧॥

ಚ್ಯವನ– ರಾಜನೇ, ಮಹಾದ್ಯುತಿಯೇ, ಒಂದು ಕೋಟಿಯಾಗಲೀ ಅಥವಾ ಅದಕ್ಕಿಂತ ಹೆಚ್ಚು ಧನವಾಗಲೀ ನನಗೆ ಸಮವಾದುದಲ್ಲ. ಬ್ರಾಹ್ಮಣರ ಜೊತೆಯಲ್ಲಿ ವಿಚಾರ ಮಾಡಿ ನನಗೆ ಯೋಗ್ಯವಾದ ಬೆಲೆಯನ್ನು ಕೊಡುವವನಾಗು.

ನಹುಷಃ

ಅರ್ಧರಾಜ್ಯಂ ಸಮಗ್ರಂ ವಾ ನಿಷಾದೇಭ್ಯಃ ಪ್ರದೀಯತಾಮ್ ।
ಏತನ್ಮೂಲ್ಯಮಹಂ ಮನ್ಯೇ ಕಿಂ ವಾನ್ಯನ್ಮನ್ಯಸೇ ದ್ವಿಜ ॥೧೨॥

ನಹುಷ– ನಿಷಾದರಿಗೆ ಅರ್ಧರಾಜ್ಯವನ್ನಾಗಲೀ ಅಥವಾ ಸಮಗ್ರ ರಾಜ್ಯವನ್ನಾಗಲೀ ಕೊಡಿ. ಇದು ಮಹರ್ಷಿಗಳಿಗೆ ಉಚಿತವಾಗುವುದೆಂದು ಭಾವಿಸುತ್ತೇನೆ. ಎಲೈ ಬ್ರಾಹ್ಮಣರೇ, ನಿಮ್ಮ ಅಭಿಪ್ರಾಯವೇನು?

ಚ್ಯವನಃ

ಅರ್ಧರಾಜ್ಯಂ ಸಮಗ್ರಂ ವಾ ನಾಹಮರ್ಹಾಮಿ ಪಾರ್ಥಿವ ।
ಸದೃಶಂ ದೀಯತಾಂ ಮೂಲ್ಯಮೃಷಿಭಿಃ ಸಹ ಚಿಂತ್ಯತಾಮ್ ॥೧೩॥

ರಾಜನೇ, ಅರ್ಧರಾಜ್ಯವಾಗಲೀ, ಸಮಗ್ರರಾಜ್ಯವಾಗಲೀ ನನಗೆ ಯೋಗ್ಯವಾದ ಬೆಲೆಯಲ್ಲ. ಋಷಿಗಳ ಜೊತೆಯಲ್ಲಿ ವಿಚಾರ ಮಾಡಿ ನನಗೆ ಯೋಗ್ಯವಾದ ಬೆಲೆಯನ್ನು ಕೊಡು.

ಭೀಷ್ಮಃ

ಮಹರ್ಷೇರ್ವಚನಂ ಶ್ರುತ್ವಾ ನಹುಷೋ ದುಃಖಕರ್ಶಿತಃ ।
ಸ ಚಿಂತಯಾಮಾಸ ತದಾ ಸಹಾಮಾತ್ಯಪುರೋಹಿತಃ ॥೧೪॥

ಭೀಷ್ಮ– ಮಹರ್ಷಿಗಳ ವಚನವನ್ನು ಕೇಳಿ ನಹುಷನು ದುಃಖತಪ್ತನಾದನು. ಆಗ ಅವನು ಅಮಾತ್ಯರ ಮತ್ತು ಪುರೋಹಿತರ ಜೊತೆಯಲ್ಲಿ ಸೇರಿ ವಿಚಾರ ಮಾಡಿದನು.

ತತ್ರ ತ್ವನ್ಯೋ ವನಚರಃ ಕಶ್ಚಿನ್ಮೂಲಫಲಾಶನಃ ।
ನಹುಷಸ್ಯ ಸಮೀಪಸ್ಥೋ ಗವಿಜಾತೋಽಭವನ್ಮುನಿಃ ॥೧೫॥

ಅಲ್ಲಿ ನಹುಷನ ಸಮೀಪದಲ್ಲಿ ಮೂಲಫಲಾಹಾರನಾದ, ವನಚರನಾದ, ಗೋವಿನಲ್ಲಿ ಜನಿಸಿದ ಇನ್ನೊಬ್ಬ ಋಷಿ ಇದ್ದನು.

ಸ ಸಮಾಭಾಷ್ಯ ರಾಜಾನಮಬ್ರವೀದ್ ದ್ವಿಜಸತ್ತಮಃ ।
ತೋಷಯಿಷ್ಯಾಮ್ಯಹಂ ವಿಪ್ರಂ ಯಥಾ ತುಷ್ಟೋ ಭವಿಷ್ಯತಿ ॥೧೬॥

ನಾಹಂ ಮಿಥ್ಯಾವಚೋ ಬ್ರೂಯಾಂ ಸ್ವೈರೇಷ್ವಪಿ ಕುತೋಽನ್ಯಥಾ ।
ಭವತೋ ಯದಹಂ ಬ್ರೂಯಾಂ ತತ್ಕಾರ್ಯಮವಿಶಂಕಯಾ ॥೧೭॥

ಆ ದ್ವಿಜಶ್ರೇಷ್ಠನು ರಾಜನ ಜೊತೆಯಲ್ಲಿ ಮಾತನಾಡಿ ಅವನನ್ನು ಕುರಿತು, ನಾನು ಬ್ರಹ್ಮರ್ಷಿಗಳಾದ ಚ್ಯವನರನ್ನು ಸಂತೋಷಪಡಿಸುತ್ತೇನೆ. ನಾನು ವಿನೋದಕ್ಕಾಗಿಯೂ

ಸುಳ್ಳು ಮಾತನಾಡುವವನಲ್ಲ. ಬೇರೆ ಸಂದರ್ಭದಲ್ಲಿ ಏಕೆ ಸುಳ್ಳನ್ನು ಹೇಳಲಿ? ನಾನು ನಿಮಗೆ ಹೇಳುವ ಕಾರ್ಯವನ್ನು ನೀವು ನಿಶ್ಶಂಕೆಯಿಂದ ಮಾಡಬೇಕು ಎಂದು ಹೇಳಿದನು.

ನಹುಷಃ

ಬ್ರವೀತು ಭಗವಾನ್ಮೂಲ್ಯಂ ಮಹರ್ಷೇಃ ಸದೃಶಂ ಭೃಗೋಃ ।
ಪರಿತ್ರಾಯಸ್ವ ಮಾಮಸ್ಮಾದ್ವಿಷಯಂ ಚ ಕುಲಂ ಚ ಮೇ ॥೧೮॥

ನಹುಷ– ಪೂಜ್ಯರೂ ಮಹರ್ಷಿಗಳೂ ಆದ ಭೃಗುಗಳಿಗೆ ಯೋಗ್ಯವಾದ ಬೆಲೆಯನ್ನು ಹೇಳಬೇಕು. ಈ ಸಂಕಟದಿಂದ ನನ್ನನ್ನೂ, ನನ್ನ ಕುಲವನ್ನೂ, ನನ್ನ ರಾಜ್ಯವನ್ನೂ ಪಾರು ಮಾಡಿ.

ಹನ್ಯಾದ್ಧಿ ಭಗವಾನ್ ಕ್ರುದ್ಧಸ್ತ್ರೀಲೋಕ್ಯಮಪಿ ಕೇವಲಮ್ ।
ಕಿಂ ಪುನರ್ಮಾಂ ತಪೋಹೀನಂ ಬಾಹುವೀರ್ಯಪರಾಯಣಮ್ ॥೧೯॥

ಚ್ಯವನರು ಕೋಪಗೊಂಡರೆ ಪೂಜ್ಯರಾದ ಅವರು ಮೂರು ಲೋಕಗಳನ್ನೂ ದಹಿಸಿಯಾರು. ಇನ್ನು ಕೇವಲ ಬಾಹುಬಲವನ್ನೇ ಆಶ್ರಯಿಸಿದ ತಪೋಹೀನನಾದ ನನ್ನನ್ನು ದಹಿಸುವ ವಿಷಯದಲ್ಲಿ ಏನು ಹೇಳಬೇಕು?

ಅಗಾಧೇऽಂಭಸಿ ಮಗ್ನಸ್ಯ ಸಾಮಾತ್ಯಸ್ಯ ಸಹರ್ತ್ವಿಜಃ ।
ಪ್ಲವೋ ಭವ ಮಹರ್ಷೇ ತ್ವಂ ಕುರು ಮೂಲ್ಯವಿನಿಶ್ಚಯಮ್ ॥೨೦॥

ಎಲೈ ಮಹರ್ಷಿಗಳೇ, ಅಮಾತ್ಯರ ಮತ್ತು ಋತ್ವಿಜರ ಜೊತೆಯಲ್ಲಿ ಅಗಾಧವಾದ ಜಲದಲ್ಲಿ ಮುಳುಗುತ್ತಿರುವ ನನ್ನನ್ನು ಚ್ಯವನರ ಮೌಲ್ಯವನ್ನು ನಿಶ್ಚಯ ಮಾಡಿ ದೋಣಿಯಾಗಿ ಜಲದಿಂದ ದಾಟಿಸಿ.

ಭೀಷ್ಮಃ

ನಹುಷಸ್ಯ ವಚಃ ಶ್ರುತ್ವಾ ಗವಿಜಾತಃ ಪ್ರತಾಪವಾನ್ ।
ಉವಾಚ ಹರ್ಷಯನ್ ಸರ್ವಾನಮಾತ್ಯಾನ್ ಪಾರ್ಥಿವಂ ಚ ತಮ್ ॥

ಭೀಷ್ಮ– ನಹುಷನ ಮಾತುಗಳನ್ನು ಕೇಳಿ ಗೋವಿನಲ್ಲಿ ಜನಿಸಿದ ಆ ಪ್ರತಾಪಶಾಲಿಯಾದ ಋಷಿಯು ನಹುಷನಿಗೂ ಮತ್ತು ಅವನ ಅಮಾತ್ಯರಿಗೂ ಸಂತೋಷವನ್ನು ನೀಡುತ್ತಾ ಮಾತನಾಡಿದನು.

ಅನರ್ಘ್ಯೇಯಾ ಮಹಾರಾಜ ದ್ವಿಜಾ ವರ್ಣಮಹತ್ತಮಾಃ ।
ಗಾವಶ್ಚ ಪೃಥಿವೀಪಾಲ ನೌರ್ಮೂಲ್ಯಂ ಪರಿಕಲ್ಪ್ಯತಾಮ್ ॥೨೨॥

ಎಲೈ ಮಹಾರಾಜನೇ, ವರ್ಣಗಳಲ್ಲಿ ಶ್ರೇಷ್ಠರಾದ ಬ್ರಾಹ್ಮಣರಿಗೆ ಬೆಲೆಯನ್ನು ಕಟ್ಟಲು ಸಾಧ್ಯವಿಲ್ಲ. ಎಲೈ ಪೃಥಿವೀಪಾಲನೇ, ಗೋವುಗಳಿಗೂ ಬೆಲೆಯನ್ನು ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ಚ್ಯವನರಿಗೆ ಉಚಿತ ಬೆಲೆಯಾಗಿ ಒಂದು ಗೋವನ್ನು ನಿರ್ಧರಿಸು.

ನಹುಷಸ್ತು ತತಃ ಶ್ರುತ್ವಾ ಮಹರ್ಷೇರ್ವಚನಂ ನೃಪ ।
ಹರ್ಷೇಣ ಮಹತಾ ಯುಕ್ತಃ ಸಹಾಮಾತ್ಯಪುರೋಹಿತಃ ॥೨೩॥

ಎಲೈ ರಾಜನೇ, ನಹುಷನಾದರೂ ಆ ಮಹರ್ಷಿಯ ವಚನವನ್ನು ಕೇಳಿ ಅಮಾತ್ಯ-ಪುರೋಹಿತರಿಂದ ಕೂಡಿ ಬಹಳ ಸಂತುಷ್ಟನಾದನು.

ಅಭಿಗಮ್ಯ ಭೃಗೋಃ ಪುತ್ರಂ ಚ್ಯವನಂ ಸಂಶಿತವ್ರತಮ್ ।
ಇದಂ ಪ್ರೋವಾಚ ನೃಪತೇ ವಾಚಾ ಸಂತರ್ಪಯನ್ನಿವ ॥೨೪॥

ಉತ್ತಿಷ್ಠೋತ್ತಿಷ್ಠ ವಿಪ್ರರ್ಷೇ ಗವಾ ಕ್ರೀತೋಽಸಿ ಭಾರ್ಗವ ।
ಏತನ್ಮೂಲ್ಯಮಹಂ ಮನ್ಯೇ ತವ ಧರ್ಮಭೃತಾಂ ವರ ॥೨೫॥

ಭೃಗುಪುತ್ರರಾದ, ಶ್ರೇಷ್ಠವ್ರತಧಾರಿಗಳಾದ ಚ್ಯವನರ ಬಳಿಗೆ ಹೋಗಿ ಮಾತಿನಿಂದ ಅವರನ್ನು ತೃಪ್ತಿಪಡಿಸುವಂತೆ- 'ಎಲೈ ಬ್ರಹ್ಮರ್ಷಿಗಳೇ, ಭೃಗುಕುಲೋತ್ಪನ್ನರೇ, ಎದ್ದೇಳಿ, ಎದ್ದೇಳಿ. ಒಂದು ಗೋವನ್ನು ನಿಮ್ಮ ಬೆಲೆಯೆಂದು ನಿರ್ಧರಿಸಿ ನಿಮ್ಮನ್ನು ಕೊಂಡುಕೊಂಡಿದ್ದೇನೆ. ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠರೇ, ಈ ಬೆಲೆಯು ನಿಮಗೆ ಯೋಗ್ಯವಾದುದೆಂದು ಭಾವಿಸುತ್ತೇನೆ' ಎಂದು ಹೇಳಿದನು.

ಚ್ಯವನಃ

ಉತ್ತಿಷ್ಠಾಮ್ಯೇಷ ರಾಜೇಂದ್ರ ಸಮ್ಯಕ್ ಕ್ರೀತೋಽಸ್ಮಿ ತೇಽನಘ ।
ಗೋಭಿಸ್ತುಲ್ಯಂ ನ ಪಶ್ಯಾಮಿ ಧನಂ ಕಿಂಚಿದಿಹಾಚ್ಯುತ ॥೨೬॥

ಚ್ಯವನ– ಎಲೈ ರಾಜೇಂದ್ರನೇ, ಅನಘನೇ, ಇಗೋ ಏಳುತ್ತೇನೆ. ಸರಿಯಾದ ಬೆಲೆಯಿಂದ ನನ್ನನ್ನು ಕೊಂಡುಕೊಂಡಿದ್ದೀಯೆ. ಗೋವುಗಳಿಗೆ ಸಮಾನವಾದ ಬೆಲೆಯನ್ನು ನಾನು ಎಲ್ಲಿಯೂ ಕಾಣುವುದಿಲ್ಲ.

ಕೀರ್ತನಂ ಶ್ರವಣಂ ದಾನಂ ದರ್ಶನಂ ಚಾಪಿ ಪಾರ್ಥಿವ ।
ಗವಾಂ ಪ್ರಶಸ್ಯತೇ ವೀರ ಸರ್ವಪಾಪಹರಂ ಶಿವಮ್ ॥೨೭॥

ಎಲೈ ರಾಜನೇ, ವೀರನೇ, ಗೋವುಗಳ ಕೀರ್ತನ, ಶ್ರವಣ, ದರ್ಶನ, ದಾನ ಎಲ್ಲವೂ ಪ್ರಶಸ್ತವಾದುದು, ಮಂಗಳಕರವಾದುದು ಮತ್ತು ಸರ್ವಪಾಪ ಪರಿಹಾರಕವಾದುದು.

ಗಾವೋ ಲಕ್ಷ್ಮ್ಯಾಃ ಸದಾ ಮೂಲಂ ಗೋಷು ಪಾಪ್ಮಾ ನ ವಿದ್ಯತೇ ।
ಅನ್ನಮೇವ ಸದಾ ಗಾವೋ ದೇವಾನಾಂ ಪರಮಂ ಹವಿಃ ॥೨೮॥

ಗೋವುಗಳು ಯಾವಾಗಲೂ ಲಕ್ಷ್ಮಿಯ ಮೂಲಸ್ಥಾನ. ಗೋವುಗಳಲ್ಲಿ ಪಾಪ ಇರುವುದಿಲ್ಲ. ಅವು ಮನುಷ್ಯರಿಗೆ ಆಹಾರವನ್ನು ಮತ್ತು ದೇವತೆಗಳಿಗೆ ಶ್ರೇಷ್ಠವಾದ ಹವಿಸ್ಸನ್ನು ಕೊಡುತ್ತದೆ.

ಸ್ವಾಹಾಕಾರವಷಟ್‌ಕಾರೌ ಗೋಷು ನಿತ್ಯಂ ಪ್ರತಿಷ್ಠಿತೌ ।
ಗಾವೋ ಯಜ್ಞಪ್ರಣೇತ್ರ್ಯೋ ವೈ ತಥಾ ಯಜ್ಞಸ್ಯ ತಾ ಮುಖಮ್ ॥

ಸ್ವಾಹಾಕಾರ, ವಷಟ್‌ಕಾರಗಳು ಗೋವುಗಳಲ್ಲಿ ನಿತ್ಯವೂ ಆಶ್ರಯಿಸಿಕೊಂಡಿರುತ್ತವೆ. ಗೋವುಗಳು ಯಜ್ಞಗಳನ್ನು ನಿರ್ವಾಹ ಮಾಡುತ್ತವೆ ಮತ್ತು ಯಜ್ಞಗಳಲ್ಲಿ ಪ್ರಧಾನವಾದವುಗಳು.

ಅಮೃತಂ ಹ್ಯಕ್ಷಯಂ ದಿವ್ಯಂ ಕ್ಷರಂತಿ ಚ ವಹಂತಿ ಚ ।
ಅಮೃತಾಯತನಂ ಚೈತಾಃ ಸರ್ವಲೋಕನಮಸ್ಕೃತಾಃ ॥೩೦॥

ದಿವ್ಯವಾದ, ಅಮೃತಸಮಾನವಾದ ಕ್ಷೀರವನ್ನು ಅವು ಕೊಡುತ್ತವೆ. ಭಾರವನ್ನು ಹೊರುತ್ತವೆ. ಅವು ಅಮೃತಕ್ಕೆ ಆಶ್ರಯವಾದವುಗಳು ಮತ್ತು ಎಲ್ಲ ಜನರಿಂದಲೂ ನಮಸ್ಕೃತವಾದವುಗಳು.

ತೇಜಸಾ ವಪುಷಾ ಚೈವ ಗಾವೋ ವಹ್ನಿಸಮಾ ಭುವಿ ।
ಗಾವೋ ಹಿ ಸುಮಹತ್ತೇಜಃ ಪ್ರಾಣಿನಾಂ ಚ ಸುಖಪ್ರದಾಃ ॥೩೧॥

ತೇಜಸ್ಸಿನಿಂದಲೂ ಮತ್ತು ದೇಹದಿಂದಲೂ ಭೂಮಿಯಲ್ಲಿ ಗೋವುಗಳು ಅಗ್ನಿಗೆ ಸಮಾನವಾದವುಗಳು. ಗೋವುಗಳು ಮಹಾತೇಜಸ್ಸನ್ನು ಹೊಂದಿವೆ ಮತ್ತು ಪ್ರಾಣಿಗಳಿಗೆ ಸುಖವನ್ನು ಕೊಡುತ್ತವೆ.

ನಿವಿಷ್ಟಂ ಗೋಕುಲಂ ಯತ್ರ ಶ್ವಾಸಂ ಮುಂಚತಿ ನಿರ್ಭಯಮ್ ।
ವಿರಾಜಯತಿ ತಂ ದೇಶಂ ಪಾಪ್ಮಾನಂ ಚಾಪಕರ್ಷತಿ ॥೩೨॥

ಎಲ್ಲಿ ಗೋವುಗಳು ಮಲಗಿ ಸುಖವಾಗಿ ಉಸಿರಾಡುತ್ತವೋ ಅವು ಆ ದೇಶವನ್ನೇ ಶೋಭಿಸುತ್ತವೆ ಮತ್ತು ಅಲ್ಲಿರುವ ಎಲ್ಲ ದೋಷಗಳನ್ನೂ ನಿವಾರಿಸುತ್ತವೆ.

ಗಾವಃ ಸ್ವರ್ಗಸ್ಯ ಸೋಪಾನಂ ಗಾವಃ ಸ್ವರ್ಗೇऽಪಿ ಪೂಜಿತಾಃ ।
ಗಾವಃ ಕಾಮದುಘಾ ದೇವ್ಯೋ ನಾನ್ಯತ್ ಕಿಂಚಿತ್ಪರಂ ಸ್ಮೃತಮ್ ॥೩೩॥

ಗೋವುಗಳು ಸ್ವರ್ಗಕ್ಕೆ ಸೋಪಾನ. ಅವು ಸ್ವರ್ಗದಲ್ಲಿಯೂ ಪೂಜಿಸಲ್ಪಡುತ್ತವೆ. ಅವು ಇಷ್ಟವಾದ ಕಾಮವನ್ನು ಕೊಡುವ ದೇವತೆಗಳು. ಗೋವುಗಳಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ.

ಇತ್ಯೇತದ್ಗೋಷು ಮೇ ಪ್ರೋಕ್ತಂ ಮಾಹಾತ್ಮ್ಯಂ ಪಾರ್ಥಿವರ್ಷಭ ।
ಗುಣೈಕದೇಶವಚನಂ ಶಕ್ಯಂ ಪಾರಾಯಣಂ ನ ತು ॥೩೪॥

ಎಲೈ ರಾಜಶ್ರೇಷ್ಠನೇ, ನಾನು ಹೇಳಿದ ಈ ಗೋ ಮಹಿಮೆಯು ಅವುಗಳ ಗುಣದ ಒಂದಂಶ ಮಾತ್ರ. ಅವುಗಳ ಎಲ್ಲಾ ಗುಣಗಳನ್ನು ಹೇಳಿ ಪೂರೈಸಲು ಸಾಧ್ಯವಿಲ್ಲ.

ನಿಷಾದಾಃ

ದರ್ಶನಂ ಕಥನಂ ಚೈವ ಸಹಾಸ್ಮಾಭಿಃ ಕೃತಂ ಮುನೇ ।
ಸತಾಂ ಸಪ್ತಪದಂ ಮಿತ್ರಂ ಪ್ರಸಾದಂ ನಃ ಕುರು ಪ್ರಭೋ ॥೩೫॥

ನಿಷಾದರು– ಋಷಿಗಳೇ, ಪ್ರಭುಗಳೇ, ನಾವು ನಿಮ್ಮ ದರ್ಶನವನ್ನೂ, ನಿಮ್ಮ ಜೊತೆಯಲ್ಲಿ ಸಂಭಾಷಣೆಯನ್ನೂ ಮಾಡಿದ್ದೇವೆ. ಸಜ್ಜನರಿಗೆ ಏಳು ಹೆಜ್ಜೆಗಳಲ್ಲಿ ಸ್ನೇಹ ಉಂಟಾಗುತ್ತದೆ. ನಮ್ಮ ಮೇಲೆ ಅನುಗ್ರಹವನ್ನು ಮಾಡಿ.

ಹವೀಂಷಿ ಸರ್ವಾಣಿ ಯಥಾ ಹ್ಯುಪಭುಂಕ್ತೇ ಹುತಾಶನಃ ।
ಏವಂ ತ್ವಮಪಿ ಧರ್ಮಾತ್ಮನ್ ಪುರುಷಾಗ್ನಿಃ ಪ್ರತಾಪವಾನ್ ॥೩೬॥

ಅಗ್ನಿಯು ತನ್ನಲ್ಲಿ ಹಾಕಿದ ಹವಿಸ್ಸನ್ನು ಉಪಭುಂಜಿಸುವಂತೆ ಎಲೈ ಧರ್ಮಾತ್ಮರೇ, ನೀವೂ ಸಹ ಪ್ರತಾಪಶಾಲಿಗಳಾದ ಪುರುಷಾಗ್ನಿಯಾಗಿರುವವರು.

ಪ್ರಸಾದಯಾಮಹೇ ವಿದ್ವನ್ ಭವಂತಂ ಪ್ರಣತಾ ವಯಮ್ ।
ಅನುಗ್ರಹಾರ್ಥಮಸ್ಮಾಕಮಿಯಂ ಗೌಃ ಪ್ರತಿಗೃಹ್ಯತಾಮ್ ॥೩೭॥

ಜ್ಞಾನಿಗಳೇ, ನಿಮಗೆ ನಾವು ನಮಸ್ಕಾರವನ್ನು ಮಾಡಿ ಪ್ರಸನ್ನರಾಗಿ ಎಂದು ಹೇಳುತ್ತಿದ್ದೇವೆ. ನಮ್ಮಲ್ಲಿ ಅನುಗ್ರಹವನ್ನು ಮಾಡಲು ಈ ಗೋವನ್ನು ಸ್ವೀಕರಿಸಿ.

ಚ್ಯವನಃ

ಕೃಪಣಸ್ಯ ಚ ಯಚ್ಚಕ್ಷುರ್ಮುನೇರಾಶೀವಿಷಸ್ಯ ಚ ।
ನರಂ ಸಮೂಲಂ ದಹತಿ ಕಕ್ಷಮಗ್ನಿರಿವ ಜ್ವಲನ್ ॥೩೮॥

ಚ್ಯವನ– ಕಷ್ಟದಲ್ಲಿರುವವನ ದೃಷ್ಟಿ, ಋಷಿಯ ದೃಷ್ಟಿ ಮತ್ತು ಸರ್ಪಗಳ ದೃಷ್ಟಿಗಳು ಯಾವ ಮನುಷ್ಯನ ಮೇಲೆ ಬೀಳುತ್ತವೆಯೋ ಅವು ಅವನನ್ನು ಅಗ್ನಿಯು ಹುಲ್ಲನ್ನು ಸುಡುವಂತೆ ಮೂಲ ಸಹಿತವಾಗಿ ಸುಡುತ್ತವೆ.

ಪ್ರತಿಗೃಹ್ಣಾಮಿ ವೋ ಧೇನುಂ ಕೈವರ್ತಾ ಮುಕ್ತಕಿಲ್ಬಿಷಾಃ ।
ದಿವಂ ಗಚ್ಛತ ವೈ ಕ್ಷಿಪ್ರಂ ಮತ್ಸ್ಯೈರ್ಜಾಲೋದ್ಧೃತೈಃ ಸಹ ॥೩೯॥

ಎಲೈ ಕೈವರ್ತರೇ, ನಿಮ್ಮ ಗೋವನ್ನು ಸ್ವೀಕರಿಸುತ್ತೇನೆ. ನೀವು ಅಪರಾಧದಿಂದ ನಿರ್ಮುಕ್ತರಾಗಿದ್ದೀರಿ. ನೀವು ಶೀಘ್ರವಾಗಿ ಬಲೆಯಲ್ಲಿ ಹಿಡಿದ ಮೀನುಗಳ ಜೊತೆಯಲ್ಲಿ ಸ್ವರ್ಗಕ್ಕೆ ಹೋಗಿ.

ಭೀಷ್ಮಃ

ತತಸ್ತಸ್ಯ ಪ್ರಸಾದಾತ್ ತೇ ಮಹರ್ಷೇರ್ಭಾವಿತಾತ್ಮನಃ ।
ನಿಷಾದಾಸ್ತೇನ ವಾಕ್ಯೇನ ಸಹ ಮತ್ಸ್ಯೈರ್ದಿವಂ ಯಯುಃ ॥೪೦॥

ಭೀಷ್ಮ– ಶುದ್ಧಮನಸ್ಸಿನ ಆ ಮಹರ್ಷಿಗಳ ಅನುಗ್ರಹದಿಂದ ಆಗ ಆ ನಿಷಾದರು ಋಷಿಗಳ ಮಾತಿನಂತೆ ಮತ್ಸ್ಯಗಳ ಜೊತೆಯಲ್ಲಿ ಸ್ವರ್ಗಕ್ಕೆ ಹೋದರು.

ತತಃ ಸ ರಾಜಾ ನಹುಷೋ ವಿಸ್ಮಿತಃ ಪ್ರೇಕ್ಷ್ಯ ಧೀವರಾನ್ ।
ಆರೋಹಮಾಣಾಂಸ್ತ್ರಿದಿವಂ ಮತ್ಸ್ಯಾಂಶ್ಚ ಭರತರ್ಷಭ ॥೪೧॥

ಎಲೈ ಭರತರ್ಷಭನೇ, ರಾಜನು ಮತ್ಸ್ಯಗಳ ಜೊತೆಯಲ್ಲಿ ಸ್ವರ್ಗವನ್ನು ಏರುತ್ತಿದ್ದ ಆ ಬೆಸ್ತರನ್ನು ನೋಡಿ ವಿಸ್ಮಯಗೊಂಡನು.

ತತಸ್ತೌ ಗವಿಜಶ್ಚೈವ ಚ್ಯವನಶ್ಚ ಭೃಗೂದ್ವಹಃ ।
ವರಾಭ್ಯಾಮನುರೂಪಾಭ್ಯಾಂ ಛಂದಯಾಮಾಸತುರ್ನೃಪಮ್ ॥೪೨॥

ಅನಂತರ ಭೃಗೂದ್ವಹರಾದ ಚ್ಯವನರೂ ಮತ್ತು ಗೋಜಾತನಾದ ಇನ್ನೊಬ್ಬ ಋಷಿಯೂ ರಾಜನಿಗೆ ಅನುರೂಪವಾದ ವರಗಳನ್ನು ಕೇಳುವಂತೆ ಹೇಳಿದರು.

ತತೋ ರಾಜಾ ಮಹಾವೀರ್ಯೋ ನಹುಷಃ ಪೃಥಿವೀಪತಿಃ ।
ಪರಮಿತ್ಯಬ್ರವೀತ್ ಪ್ರೀತಸ್ತದಾ ಭರತಸತ್ತಮ ॥೪೩॥

ಎಲೈ ಭರತಶ್ರೇಷ್ಠನೇ, ಆಗ ಮಹಾಪರಾಕ್ರಮಿಯೂ, ಪೃಥಿವೀಪತಿಯೂ ಆದ ನಹುಷನು ಸಂತೋಷಗೊಂಡು ಬಹಳ ಒಳ್ಳೆಯದು ಎಂದು ಹೇಳಿದನು.

ತತೋ ಜಗ್ರಾಹ ಧರ್ಮೇ ಸ ಸ್ಥಿತಿಮಿಂದ್ರನಿಭೋ ನೃಪಃ ।
ತಥೇತಿ ಚೋದಿತಃ ಪ್ರೀತಸ್ತಾವೃಷೀ ಪ್ರತ್ಯಪೂಜಯತ್ ॥೪೪॥

ಆಗ ಇಂದ್ರನಿಗೆ ಸಮಾನನಾದ ಆ ರಾಜನು ಧರ್ಮದಲ್ಲಿ ಅಚಲವಾದ ಸ್ಥಿತಿಯನ್ನು ವರವಾಗಿ ಬೇಡಿದನು. ಆ ಋಷಿಗಳು ಹಾಗೆಯೇ ಆಗಲಿ ಎಂದು ಹೇಳಿದ ಮೇಲೆ ಸಂತೋಷಗೊಂಡ ರಾಜನು ಆ ಇಬ್ಬರು ಋಷಿಗಳನ್ನು ಪೂಜಿಸಿದನು.

ಸಮಾಪ್ತದೀಕ್ಷಶ್ಚ್ಯವನಸ್ತತೋಽಗಚ್ಛತ್ ಸ್ವಮಾಶ್ರಮಮ್ ।
ಗವಿಜಶ್ಚ ಮಹಾತೇಜಾಃ ಸ್ವಮಾಶ್ರಮಪದಂ ಯಯೌ ॥೪೫॥

ಚ್ಯವನರು ತಮ್ಮ ಹನ್ನೆರಡು ವರ್ಷಗಳ ದೀಕ್ಷೆಯನ್ನು ಮುಗಿಸಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು. ಮಹಾತೇಜಸ್ವಿಯಾದ ಗೋಜಾತನಾದ ಋಷಿಯೂ ತನ್ನ ಆಶ್ರಮಕ್ಕೆ ಹಿಂದಿರುಗಿದನು.

ನಿಷಾದಾಶ್ಚ ದಿವಂ ಜಗ್ಮುಸ್ತೇ ಚ ಮತ್ಸ್ಯಾ ಜನಾಧಿಪ ।
ನಹುಷೋಽಪಿ ವರಂ ಲಬ್ಧ್ವಾ ಪ್ರವಿವೇಶ ಪುರಂ ಸ್ವಕಮ್ ॥೪೬॥

ಎಲೈ ರಾಜನೇ, ಆ ಬೆಸ್ತರು ಮತ್ತು ಮತ್ಸ್ಯಗಳು ಸ್ವರ್ಗಕ್ಕೆ ಹೋದರು. ನಹುಷನೂ ಸಹ ಋಷಿಗಳಿಂದ ವರಗಳನ್ನು ಪಡೆದು ತನ್ನ ಪಟ್ಟಣವನ್ನು ಪ್ರವೇಶಿಸಿದನು.

ಏತತ್ತೇ ಕಥಿತಂ ತಾತ ಯನ್ಮಾಂ ತ್ವಂ ಪರಿಪೃಚ್ಛಸಿ ।
ದರ್ಶನೇ ಯಾದೃಶಃ ಸ್ನೇಹಃ ಸಂವಾಸೇ ಚ ಯುಧಿಷ್ಠಿರ ॥೪೭॥

ಪ್ರೀತಿಪಾತ್ರನಾದ ಯುಧಿಷ್ಠಿರನೇ, ದರ್ಶನ ಮತ್ತು ಸಹವಾಸಗಳಿಂದ ಎಂತಹ ಪ್ರೀತಿಯುಂಟಾಗುತ್ತದೆ ಎಂದು ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾನು ಇದನ್ನು ನಿನಗೆ ಹೇಳಿದ್ದೇನೆ.

ಮಹಾಭಾಗ್ಯಂ ಗವಾಂ ಚೈವ ತಥಾ ಧರ್ಮವಿನಿಶ್ಚಯಮ್ ।
ಕಿಂ ಭೂಯಃ ಕಥ್ಯತಾಂ ವೀರ ಕಿಂ ತೇ ಹೃದಿ ವಿವಕ್ಷಿತಮ್ ॥೪೮॥

ಗೋವುಗಳ ಮಹಾಭಾಗ್ಯವನ್ನೂ ಮತ್ತು ಧರ್ಮನಿಶ್ಚಯವನ್ನೂ ಹೇಳಿದ್ದೇನೆ. ಎಲೈ ವೀರನೇ, ನಿನ್ನ ಮನಸ್ಸಿನಲ್ಲಿ ಕೇಳಬೇಕೆಂದಿರುವ ಯಾವ ಬೇರೆ ವಿಷಯವನ್ನು ಹೇಳಲಿ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಚ್ಯವನೋಪಾಖ್ಯಾನಂ ನಾಮ
ಏಕಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆರಡನೆಯ ಅಧ್ಯಾಯ

ಚ್ಯವನ-ಕುಶಿಕರ ಸಂವಾದ. ಕುಶಿಕರ ಗೃಹದಲ್ಲಿ ಚ್ಯವನರಿಗೆ ಆತಿಥ್ಯ.

ಯುಧಿಷ್ಠಿರಃ

ಸಂಶಯೋ ಮೇ ಮಹಾಪ್ರಾಜ್ಞ ಸುಮಹಾನ್ ಸಾಗರೋಪಮಃ ।
ತನ್ಮೇ ಶೃಣು ಮಹಾಬಾಹೋ ಶ್ರುತ್ವಾ ಚಾಖ್ಯಾತುಮರ್ಹಸಿ ॥೧॥

ಯುಧಿಷ್ಠಿರ– ಎಲೈ ಮಹಾಪ್ರಾಜ್ಞನೇ, ನನಗೆ ಸಾಗರದಷ್ಟು ದೊಡ್ಡದಾದ ಸಂಶಯವಿದೆ. ಎಲೈ ಮಹಾಬಾಹುವೇ, ಅದನ್ನು ಕೇಳಿ ಪರಿಹರಿಸಬೇಕು.

ಕೌತೂಹಲಂ ಮೇ ಸುಮಹಜ್ಜಾಮದಗ್ನ್ಯಂ ಪ್ರತಿ ಪ್ರಭೋ ।
ರಾಮಂ ಧರ್ಮಭೃತಾಂ ಶ್ರೇಷ್ಠಂ ತನ್ಮೇ ವ್ಯಾಖ್ಯಾತುಮರ್ಹಸಿ ॥೨॥

ಎಲೈ ಪ್ರಭುವೇ, ಜಮದಗ್ನಿಪುತ್ರರೂ, ಧರ್ಮಿಷ್ಠರಲ್ಲಿ ಶ್ರೇಷ್ಠರೂ ಆದ ಪರಶುರಾಮರ ವಿಷಯದಲ್ಲಿ ನನಗೆ ದೊಡ್ಡ ಕುತೂಹಲವಿದೆ. ಅದನ್ನು ಸರಿಯಾಗಿ ವಿವರಿಸಬೇಕು.

ಕಥಮೇಷ ಸಮುತ್ಪನ್ನೋ ರಾಮಃ ಸತ್ಯಪರಾಕ್ರಮಃ ।
ಕಥಂ ಬ್ರಹ್ಮರ್ಷಿವಂಶೇ ಚ ಕ್ಷತ್ರಧರ್ಮಾ ವ್ಯಜಾಯತ ॥೩॥

ಸತ್ಯಪರಾಕ್ರಮರಾದ ಈ ಪರಶುರಾಮರು ಹೇಗೆ ಜನಿಸಿದರು? ಬ್ರಹ್ಮರ್ಷಿಗಳ ವಂಶದಲ್ಲಿ ಜನಿಸಿದ ಅವರು ಹೇಗೆ ಕ್ಷತ್ರಿಯ ಧರ್ಮವನ್ನು ಆಚರಿಸಿದರು?

ತದಸ್ಯ ಸಂಭವಂ ರಾಜನ್ ನಿಖಿಲೇನಾನುಕೀರ್ತಯ ।
ಕೌಶಿಕಾಚ್ಚ ಕಥಂ ವಂಶಾತ್ ಕ್ಷತ್ರಾದ್ ವೈ ಬ್ರಾಹ್ಮಣೋಽಭವತ್ ॥೪॥

ಎಲೈ ರಾಜನೇ, ಅವರ ಉತ್ಪತ್ತಿಯನ್ನು ಸಮಗ್ರವಾಗಿ ವಿವರಿಸು. ಕ್ಷತ್ರಿಯ ವಂಶವಾದ ಕೌಶಿಕ ವಂಶದಲ್ಲಿ ಜನಿಸಿದ ವಿಶ್ವಾಮಿತ್ರರು ಹೇಗೆ ಬ್ರಾಹ್ಮಣರಾದರು?

ಅಹೋ ಪ್ರಭಾವಃ ಸುಮಹಾನಾಸೀದ್ ವೈ ಸುಮಹಾತ್ಮನೋಃ ।
ರಾಮಸ್ಯ ಚ ನರವ್ಯಾಘ್ರ ವಿಶ್ವಾಮಿತ್ರಸ್ಯ ಚೈವ ಹ ॥೫॥

ಎಲೈ ನರವ್ಯಾಘ್ರನೇ, ಮಹಾತ್ಮರಾದ ಪರಶುರಾಮ ಮತ್ತು ವಿಶ್ವಾಮಿತ್ರರಿಗೆ ಎಂತಹ ಮಹಾಸಾಮರ್ಥ್ಯವಿದ್ದಿತು!

ಕಥಂ ಪುತ್ರಾನತಿಕ್ರಮ್ಯ ತೇಷಾಂ ನಪ್ತೃಷ್ವಥಾಭವತ್ ।
ಏಷ ದೋಷಃ ಸುತಾನ್ ಹಿತ್ವಾ ತನ್ಮೇ ವ್ಯಾಖ್ಯಾತುಮರ್ಹಸಿ ॥೬॥

ಋಚೀಕಪುತ್ರರಾದ ಜಮದಗ್ನಿಗಳಲ್ಲಿಲ್ಲದೆ, ಕುಶಿಕಪುತ್ರನಾದ ಗಾಧಿಯಲ್ಲಿಲ್ಲದೆ, ಅವರ ಪುತ್ರರಾದ ಪರಶುರಾಮ-ವಿಶ್ವಾಮಿತ್ರರಲ್ಲಿ ಈ ವರ್ಣ ವ್ಯತ್ಯಾಸರೂಪವಾದ ದೋಷವು ಹೇಗೆ ಉಂಟಾಯಿತೆಂಬುದನ್ನು ನನಗೆ ತಿಳಿಸು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಚ್ಯವನಸ್ಯ ಚ ಸಂವಾದಂ ಕುಶಿಕಸ್ಯ ಚ ಭಾರತ ॥೭॥

ಭೀಷ್ಮ– ಎಲೈ ಭಾರತನೇ, ಈ ವಿಷಯದಲ್ಲಿಯೂ ಸಹ ಚ್ಯವನರಿಗೂ ಮತ್ತು ಕುಶಿಕನಿಗೂ ನಡೆದ ಸಂವಾದರೂಪವಾದ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಏತಂ ದೋಷಂ ಪುರಾ ದೃಷ್ಟ್ವಾ ಭಾರ್ಗವಶ್ಚ್ಯವನಸ್ತದಾ ।
ಆಗಾಮಿನಂ ಮಹಾಬುದ್ಧಿಃ ಸ್ವವಂಶೇ ಮುನಿಪುಂಗವಃ ॥೮॥

ಸಂಚಿಂತ್ಯ ಮನಸಾ ಸರ್ವಂ ಗುಣದೋಷಬಲಾಬಲಮ್ ।
ದಗ್ಧುಕಾಮಃ ಕುಲಂ ಸರ್ವಂ ಕುಶಿಕಾನಾಂ ತಪೋಧನಃ ॥೯॥

ಚ್ಯವನಸ್ತಮನುಪ್ರಾಪ್ಯ ಕುಶಿಕಂ ವಾಕ್ಯಮಬ್ರವೀತ್ ।
ವಸ್ತುಮಿಚ್ಛಾ ಸಮುತ್ಪನ್ನಾ ತ್ವಯಾ ಸಹ ಮಮಾನಘ ॥೧೦॥

ಭೃಗುಕುಲೋತ್ಪನ್ನರಾದ, ಮಹಾಬುದ್ಧಿಯನ್ನು ಹೊಂದಿದ, ಮುನಿಶ್ರೇಷ್ಠರಾದ ಚ್ಯವನರು ತಮ್ಮ ವಂಶದಲ್ಲಿ ಮುಂದೆ ಉಂಟಾಗಲಿರುವ ಈ ವ್ಯತ್ಯಾಸವನ್ನು ಮೊದಲೇ ತಿಳಿದು ಅದರ ಎಲ್ಲ ಗುಣದೋಷಗಳನ್ನೂ, ಬಲಾಬಲಗಳನ್ನೂ ಮನಸ್ಸಿನಲ್ಲಿಯೇ ಚಿಂತಿಸಿ ತಪೋಧನರಾದ ಅವರು ಕುಶಿಕರ ವಂಶವನ್ನೇ ಸುಟ್ಟುಹಾಕಲು ಇಚ್ಛಿಸಿ ಕುಶಿಕನ ಬಳಿಗೆ ಬಂದು ಅವನನ್ನು ಕುರಿತು- 'ಎಲೈ ಅನಘನೇ, ನಿನ್ನ ಜೊತೆಯಲ್ಲಿ ವಾಸಿಸಲು ನನಗೆ ಇಚ್ಛೆಯುಂಟಾಗಿದೆ' ಎಂದು ಹೇಳಿದರು.

ಕುಶಿಕಃ

ಭಗವನ್ ಸಹಧರ್ಮೋಽಯಂ ಪಂಡಿತೈರಿಹ ಧಾರ್ಯತೇ ।
ಪ್ರದಾನಕಾಲೇ ಕನ್ಯಾನಾಮುಚ್ಯತೇ ಚ ಸದಾ ಬುಧೈಃ ॥೧೧॥

ಯತ್ತು ತಾವದತಿಕ್ರಾಂತಂ ಧರ್ಮದ್ವಾರಂ ತಪೋಧನ ।
ತತ್ಕಾರ್ಯಂ ಪ್ರಕರಿಷ್ಯಾಮಿ ತದನುಜ್ಞಾತುಮರ್ಹಸಿ ॥೧೨॥

ಕುಶಿಕ– ಪೂಜ್ಯರೇ, ಪಂಡಿತರು ಯಾವಾಗಲೂ ಇಂತಹ ಸಹಧರ್ಮವನ್ನು ಆಶ್ರಯಿಸಿ ಧರಿಸಿರುತ್ತಾರೆ. ಕನ್ಯೆಯ ಪ್ರದಾನ ಕಾಲದಲ್ಲಿಯೂ ಸಹ ದಾನಿಗಳು

ಸಹಧರ್ಮವನ್ನು ಆದೇಶಿಸಿರುತ್ತಾರೆ. ಎಲೈ ತಪೋಧನರೇ, ಧರ್ಮದ್ವಾರವಾದ ಇಂತಹ ಸಹಧರ್ಮವನ್ನು ನಾನು ಇದುವರೆಗೂ ಆಚರಿಸಿಲ್ಲ. ಈಗ ಆಚರಿಸುವೆನು. ಅದಕ್ಕೆ ತಾವು ಅನುಮತಿಯನ್ನು ಕೊಡಬೇಕು.

ಭೀಷ್ಮಃ

ಅಥಾಸನಮುಪಾದಾಯ ಚ್ಯವನಸ್ಯ ಮಹಾಮುನೇಃ ।
ಕುಶಿಕೋ ಭಾರ್ಯಯಾ ಸಾರ್ಧಮಾಜಗಾಮ ಯತೋ ಮುನಿಃ ॥೧೩॥

ಭೀಷ್ಮ– ಅನಂತರ ಕುಶಿಕನು ಮಹರ್ಷಿಗಳಾದ ಚ್ಯವನರನ್ನು ಪತ್ನೀ ಸಹಿತನಾಗಿ ಸಮೀಪಿಸಿ ಅವರಿಗೆ ಆಸನವನ್ನು ನೀಡಿದನು.

ಪ್ರಗೃಹ್ಯ ರಾಜಾ ಭೃಂಗಾರಂ ಪಾದ್ಯಮಸ್ಮೈ ನ್ಯವೇದಯತ್ ।
ಕಾರಯಾಮಾಸ ಸರ್ವಾಶ್ಚ ಕ್ರಿಯಾಸ್ತಸ್ಯ ಮಹಾತ್ಮನಃ ॥೧೪॥

ರಾಜನು ಪೂರ್ಣಕುಂಭವನ್ನು ಹಿಡಿದು ಅವರಿಗೆ ಪಾದ್ಯವನ್ನು ನಿವೇದಿಸಿದನು. ಮಹಾತ್ಮರಾದ ಅವರಿಗೆ ಎಲ್ಲ ಉಚಿತವಾದ ಉಪಚಾರಗಳನ್ನೂ ಮಾಡಿದನು.

ತತಃ ಸ ರಾಜಾ ಚ್ಯವನಂ ಮಧುಪರ್ಕಂ ಯಥಾವಿಧಿ ।
ಪ್ರತ್ಯಗ್ರಾಹಯದವ್ಯಗ್ರೋ ಮಹಾತ್ಮಾ ನಿಯತವ್ರತಃ ॥೧೫॥

ಅನಂತರ ಆ ರಾಜನು ಮಹಾತ್ಮರೂ, ನಿಯತವ್ರತರೂ ಆದ ಅವರಿಗೆ ಶಾಸ್ತ್ರೋಕ್ತ ರೀತಿಯಲ್ಲಿ ಮಧುಪರ್ಕವನ್ನು ಸಮರ್ಪಿಸಿದನು. ಋಷಿಗಳು ಅವ್ಯಗ್ರರಾಗಿ ಅದನ್ನು ಸ್ವೀಕರಿಸಿದರು.

ಸತ್ಕೃತ್ಯ ಸ ತಥಾ ವಿಪ್ರಮಿದಂ ವಚನಮಬ್ರವೀತ್ ।
ಭಗವನ್ ಪರವಂತೌ ಸ್ವೋ ಬ್ರೂಹಿ ಕಿಂ ಕರವಾವಹೇ ॥೧೬॥

ಯದಿ ರಾಜ್ಯಂ ಯದಿ ಧನಂ ಯದಿ ಗಾಃ ಸಂಶಿತವ್ರತ ।
ಯಜ್ಞದಾನಾನಿ ಚ ತಥಾ ಬ್ರೂಹಿ ಸರ್ವಂ ದದಾಮಿ ತೇ ॥೧೭॥

ಇದಂ ಗೃಹಮಿದಂ ರಾಜ್ಯಮಿದಂ ಧರ್ಮಾಸನಂ ಚ ತೇ ।
ರಾಜಾ ತ್ವಮಸಿ ಶಾಧ್ಯುರ್ವೀಂ ಭೃತ್ಯೋಽಹಂ ಪರವಾಂಸ್ತ್ವಯಿ ॥೧೮॥

ಹೀಗೆ ಆ ಋಷಿಗಳನ್ನು ಸತ್ಕರಿಸಿ ಅವರನ್ನು ಕುರಿತು- 'ಪೂಜ್ಯರೇ, ನಾವಿಬ್ಬರೂ ನಿಮ್ಮ ಅಧೀನರಾಗಿದ್ದೇವೆ. ನಿಮಗೆ ಯಾವ ಸೇವೆಯನ್ನು ಮಾಡಬೇಕು? ಎಲೈ ವ್ರತಧಾರಿಗಳೇ, ನಿಮಗೆ ರಾಜ್ಯವಾಗಲೀ, ಧನವಾಗಲೀ, ಗೋವುಗಳಾಗಲೀ ಅಥವಾ ಯಜ್ಞೋಪಯೋಗಿಯಾದ ದಾನವಾಗಲೀ ಅಪೇಕ್ಷಿತವಾಗಿದೆಯೇ? ಅದನ್ನು ಹೇಳಿ. ನಿಮಗೆ ಎಲ್ಲವನ್ನೂ ಕೊಡುತ್ತೇನೆ. ಈ ನನ್ನ ರಾಜ್ಯ, ಈ ಗೃಹ, ಈ ಧರ್ಮಾಸನ ಎಲ್ಲವೂ ನಿಮ್ಮದೆ. ನೀವೇ ರಾಜರು. ನೀವೇ ಭೂಮಿಯನ್ನು ಆಳುವವರಾಗಿ. ನಾನು ನಿಮಗೆ ಅಧೀನನಾದ ನಿಮ್ಮ ಸೇವಕ' ಎಂದು ಹೇಳಿದನು.

ಏವಮುಕ್ತೇ ತತೋ ವಾಕ್ಯೇ ಚ್ಯವನೋ ಭಾರ್ಗವಸ್ತದಾ ।
ಕುಶಿಕಂ ಪ್ರತ್ಯುವಾಚೇದಂ ಮುದಾ ಪರಮಯಾ ಯುತಃ ॥೧೯॥

ನ ರಾಜ್ಯಂ ಕಾಮಯೇ ರಾಜನ್ನ ಧನಂ ನ ಚ ಯೋಷಿತಃ ।
ನ ಚ ಗಾ ನ ಚ ತೇ ದೇಶಾನ್ನ ಯಜ್ಞಾನ್ ಶ್ರೂಯತಾಮಿದಮ್ ॥೨೦॥

ನಿಯಮಂ ಕಂಚಿದಾರಪ್ಸ್ಯೇ ಯುವಯೋರ್ಯದಿ ರೋಚತೇ ।
ಪರಿಚರ್ಯೋಽಸ್ಮಿ ಯತ್ತಾಭ್ಯಾಂ ಯುವಾಭ್ಯಾಮವಿಶಂಕಯಾ ॥೨೧॥

ರಾಜನು ಹೀಗೆ ಹೇಳುತ್ತಿರಲು ಭಾರ್ಗವರಾದ ಚ್ಯವನರು ಬಹಳ ಸಂತೋಷದಿಂದ ಕೂಡಿದವರಾಗಿ ಅವನನ್ನು ಕುರಿತು- 'ಎಲೈ ರಾಜನೇ, ನನಗೆ ರಾಜ್ಯವಾಗಲೀ, ಧನವಾಗಲೀ, ಸ್ತ್ರೀಯರಾಗಲೀ ಬೇಕಾಗಿಲ್ಲ. ಗೋವುಗಳಾಗಲೀ, ನಿನ್ನ ದೇಶವಾಗಲೀ, ಯಜ್ಞಗಳಾಗಲೀ ಅಪೇಕ್ಷಿತವಲ್ಲ. ಈ ಮಾತನ್ನು ಕೇಳು. ನಿಮ್ಮಿಬ್ಬರಿಗೂ ಸಮ್ಮತವಾದರೆ ನಾನು ಒಂದು ವ್ರತವನ್ನು ಆರಂಭಿಸುವೆನು. ನೀವಿಬ್ಬರೂ ನಿಶ್ಶಂಕೆಯಾಗಿ, ಪ್ರಯತ್ನ ಪೂರ್ವಕವಾಗಿ ನನ್ನ ಪರಿಚರ್ಯೆಯನ್ನು ಮಾಡಬೇಕು' ಎಂದು ಹೇಳಿದರು.

ಏವಮುಕ್ತೇ ತದಾ ತೇನ ದಂಪತೀ ತೌ ಜಹರ್ಷತುಃ ।
ಪ್ರತ್ಯಬ್ರೂತಾಂ ಚ ತಮೃಷಿಮೇವಮಸ್ತ್ವಿತಿ ಭಾರತ ॥೨೨॥

ಚ್ಯವನರು ಹೀಗೆ ಹೇಳುತ್ತಿರಲು ಆ ದಂಪತಿಗಳು ಸಂತೋಷಪಟ್ಟರು. ಎಲೈ ಭಾರತನೇ, ಆ ಋಷಿಗಳನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದರು.

ಅಥ ತಂ ಕುಶಿಕೋ ಹೃಷ್ಟಃ ಪ್ರಾವೇಶಯದನುತ್ತಮಮ್ ।
ಗೃಹೋದ್ದೇಶಂ ತತಸ್ತತ್ರ ದರ್ಶನೀಯಮದರ್ಶಯತ್ ॥೨೩॥

ಅನಂತರ ಕುಶಿಕನು ಸಂತೋಷಗೊಂಡು ಅವರನ್ನು ಒಂದು ಶ್ರೇಷ್ಠವಾದ ಗೃಹಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವರಿಗೆ ಸುಂದರವಾದ ಪದಾರ್ಥಗಳೆಲ್ಲವನ್ನೂ ತೋರಿಸಿದನು.

ಇಯಂ ಶಯ್ಯಾ ಭಗವತೋ ಯಥಾಕಾಮಮಿಹೋಷ್ಯತಾಮ್ ।
ಪ್ರಯತಿಷ್ಯಾವಹೇ ಪ್ರೀತಿಮಾಹರ್ತುಂ ತೇ ತಪೋಧನ ॥೨೪॥

ಎಲೈ ತಪೋಧನರೇ, ಇದು ಪೂಜ್ಯರಾದ ನಿಮ್ಮ ಹಾಸಿಗೆ. ನಿಮ್ಮ ಇಚ್ಛೆಗೆ ಅನುಗುಣವಾಗಿ ಇಲ್ಲಿ ವಾಸವನ್ನು ಮಾಡಿ. ನಾವಿಬ್ಬರೂ ನಿಮಗೆ ಸಂತೋಷವನ್ನುಂಟು ಮಾಡಲು ಪ್ರಯತ್ನಿಸುತ್ತೇವೆ ಎಂದು ಹೇಳಿದನು.

ಅಥ ಸೂರ್ಯೋऽತಿಚಕ್ರಾಮ ತೇಷಾಂ ಸಂವದತಾಂ ತಥಾ ।
ಅಥರ್ಷಿಶ್ಚೋದಯಾಮಾಸ ಪಾನಮನ್ನಂ ತಥೈವ ಚ ॥೨೫॥

ಅವರು ಹಾಗೆ ಮಾತನಾಡುತ್ತಿರಲು ಸೂರ್ಯನು ಆಕಾಶದಲ್ಲಿ ಬಹಳ ದೂರಕ್ಕೆ ಬಂದನು. ಆಗ ಋಷಿಗಳು ತಮಗೆ ಅನ್ನ-ಪಾನಗಳು ಬೇಕೆಂದು ಅವನಿಗೆ ಹೇಳಿದರು.

ತಮಪೃಚ್ಛತ್ತತೋ ರಾಜಾ ಕುಶಿಕಃ ಪ್ರಣತಸ್ತದಾ ।
ಕಿಮನ್ನಜಾತಮಿಷ್ಟಂ ತೇ ಕಿಮುಪಸ್ಥಾಪಯಾಮ್ಯಹಮ್ ॥೨೬॥

ರಾಜನಾದ ಕುಶಿಕನು ಅವರಿಗೆ ನಮಸ್ಕಾರವನ್ನು ಮಾಡಿ ತಮಗಿಷ್ಟವಾದ ಅನ್ನವು ಯಾವುದು? ಯಾವ ಅನ್ನವನ್ನು ತರಲಿ? ಎಂದು ಕೇಳಿದನು.

ತತಃ ಸ ಪರಯಾ ಪ್ರೀತ್ಯಾ ಪ್ರತ್ಯುವಾಚ ಜನಾಧಿಪಮ್ ।
ಔಪಪತ್ತಿಕಮಾಹಾರಂ ಪ್ರಯಚ್ಛಸ್ವೇತಿ ಭಾರತ ॥೨೭॥

ಎಲೈ ಭಾರತನೇ, ಆಗ ಅವರು ಬಹಳ ಸಂತೋಷದಿಂದ ರಾಜನನ್ನು ಕುರಿತು ಈ ಸಮಯದಲ್ಲಿ ಸಿದ್ಧವಾಗಿರುವ ಆಹಾರವನ್ನು ನೀಡು ಎಂದು ಹೇಳಿದರು.

ತದ್ವಚಃ ಪೂಜಯಿತ್ವಾ ತು ತಥೇತ್ಯಾಹ ಸ ಪಾರ್ಥಿವಃ ।
ಯಥೋಪಪನ್ನಂ ಚಾಹಾರಂ ತಸ್ಮೈ ಪ್ರಾದಾಜ್ಜನಾಧಿಪಃ ॥೨೮॥

ರಾಜನು ಆ ಮಾತನ್ನು ಗೌರವಿಸಿ ಹಾಗೆಯೇ ಆಗಲಿ ಎಂದು ಹೇಳಿ ಸಿದ್ಧವಾದ ಆಹಾರವನ್ನು ತಂದು ಅವರಿಗೆ ನೀಡಿದನು.

ತತಃ ಸ ಭಗವಾನ್ ಭುಕ್ತ್ವಾ ದಂಪತೀ ಪ್ರಾಹ ಧರ್ಮವಿತ್ ।
ಸ್ವಪ್ತುಮಿಚ್ಛಾಮ್ಯಹಂ ನಿದ್ರಾ ಬಾಧತೇ ಮಾಮಿತಿ ಪ್ರಭೋ ॥೨೯॥

ಆಗ ಪೂಜ್ಯರೂ, ಧರ್ಮಜ್ಞರೂ ಆದ ಅವರು ಆಹಾರವನ್ನು ಸ್ವೀಕರಿಸಿ ದಂಪತಿಗಳನ್ನು ಕುರಿತು- 'ಪ್ರಭುವೇ, ನಿದ್ರೆಯು ನನ್ನನ್ನು ಬಾಧಿಸುತ್ತಿದೆ. ನಾನು ನಿದ್ರೆ ಮಾಡಲು ಅಪೇಕ್ಷಿಸುತ್ತೇನೆ' ಎಂದು ಹೇಳಿದರು.

ತತಃ ಶಯ್ಯಾಗೃಹಂ ಪ್ರಾಪ್ಯ ಭಗವಾನೃಷಿಸತ್ತಮಃ ।
ಸಂವಿವೇಶ ನರೇಂದ್ರಸ್ತು ಸಪತ್ನೀಕಃ ಸ್ಥಿತೋಽಭವತ್ ॥೩೦॥

ಅನಂತರ ಪೂಜ್ಯರಾದ ಋಷಿಶ್ರೇಷ್ಠರು ಶಯ್ಯಾಗೃಹವನ್ನು ಪ್ರವೇಶಿಸಿ ಮಲಗಿಕೊಂಡರು. ರಾಜನು ಪತ್ನೀ ಸಹಿತನಾಗಿ ಹಾಗೆಯೇ ನಿಂತಿದ್ದನು.

ನ ಪ್ರಬೋಧ್ಯೋಽಸ್ಮಿ ಸಂಸುಪ್ತ ಇತ್ಯುವಾಚಾಥ ಭಾರ್ಗವಃ ।
ಸಂವಾಹಿತವ್ಯೌ ಪಾದೌ ಮೇ ಜಾಗರ್ತವ್ಯಂ ಚ ವಾಂ ನಿಶಿ ॥೩೧॥

ಭಾರ್ಗವರು ಅವರನ್ನು ಕುರಿತು, ನಿದ್ದೆಯಲ್ಲಿರುವ ನನ್ನನ್ನು ಎಬ್ಬಿಸಬಾರದು. ರಾತ್ರಿಯ ಕಾಲದಲ್ಲಿ ನೀವಿಬ್ಬರೂ ಜಾಗರಣೆಯನ್ನು ಮಾಡಿ ನನ್ನ ಪಾದಗಳನ್ನು ಒತ್ತುತ್ತಿರಬೇಕು ಎಂದು ಹೇಳಿದರು.

ಅವಿಶಂಕಶ್ಚ ಕುಶಿಕಸ್ತಥೇತ್ಯಾಹ ಸ ಧರ್ಮವಿತ್ ।
ನ ಪ್ರಾಬೋಧಯತಾಂ ತಂ ಚ ತೌ ತದಾ ರಜನೀಕ್ಷಯೇ ॥೩೨॥

ಧರ್ಮಜ್ಞನಾದ ಕುಶಿಕನು ಯಾವ ಶಂಕೆಯೂ ಇಲ್ಲದೆ ಹಾಗೆಯೇ ಆಗಲಿ ಎಂದು ಹೇಳಿದನು. ಆ ದಂಪತಿಗಳು ರಾತ್ರಿಯ ಕಾಲದಲ್ಲಿ ಅವರನ್ನು ಎಬ್ಬಿಸಲಿಲ್ಲ.

ಯಥಾದೇಶಂ ಮಹರ್ಷೇಸ್ತು ಶುಶ್ರೂಷಾಪರಮೌ ತದಾ ।
ಬಭೂವತುರ್ಮಹಾರಾಜ ಪ್ರಯತಾವಥ ದಂಪತೀ ॥೩೩॥

ಎಲೈ ಮಹಾರಾಜನೇ, ಆ ದಂಪತಿಗಳು ಶ್ರದ್ಧಾಯುಕ್ತರಾಗಿ ಆ ಮಹರ್ಷಿಗಳ ಆಜ್ಞೆಯಂತೆ ಅವರ ಸೇವೆಯಲ್ಲಿ ನಿರತರಾದರು.

ತತಃ ಸ ಭಗವಾನ್ ವಿಪ್ರಃ ಸಮಾದಿಶ್ಯ ನರಾಧಿಪಮ್ ।
ಸುಷ್ವಾಪೈಕೇನ ಪಾರ್ಶ್ವೇನ ದಿವಸಾನೇಕವಿಂಶತಿಮ್ ॥೩೪॥

ರಾಜನಿಗೆ ಹೀಗೆ ಆದೇಶವನ್ನು ನೀಡಿ ಅನಂತರ ಪೂಜ್ಯರಾದ ಆ ಬ್ರಾಹ್ಮಣರು ಒಂದು ಮಗ್ಗುಲಿನಲ್ಲಿ ಇಪ್ಪತ್ತೊಂದು ದಿವಸಗಳವರೆಗೆ ಮಲಗಿ ನಿದ್ರೆಯನ್ನು ಮಾಡಿದರು.

ಸ ತು ರಾಜಾ ನಿರಾಹಾರಃ ಸಭಾರ್ಯಃ ಕುರುನಂದನ ।
ಪರ್ಯುಪಾಸತ ತಂ ಹೃಷ್ಟಶ್ಚ್ಯವನಾರಾಧನೇ ರತಃ ॥೩೫॥

ಎಲೈ ಕುರುನಂದನನೇ, ರಾಜನು ಪತ್ನಿಯೊಡನೆ ನಿರಾಹಾರನಾಗಿ ಅವರನ್ನು ಸಂತೋಷಪಡಿಸುವುದರಲ್ಲಿ ನಿರತನಾಗಿ ಅವರ ಸೇವೆಯನ್ನು ಮಾಡಿದನು.

ಭಾರ್ಗವಸ್ತು ಸಮುತ್ತಸ್ಥೌ ಸ್ವಯಮೇವ ತಪೋಧನಃ ।
ಅಕಿಂಚಿದುಕ್ತ್ವಾ ತು ಗೃಹಾತ್ ನಿಶ್ಚಕ್ರಾಮ ಮಹಾತಪಾಃ ॥೩೬॥

ತಪೋಧನರಾದ ಭಾರ್ಗವರು ಇಪ್ಪತ್ತೊಂದು ದಿನಗಳು ಕಳೆದ ಮೇಲೆ ತಾವಾಗಿಯೇ ಎದ್ದರು. ಮಹಾತಪಸ್ವಿಗಳಾದ ಅವರು ಯಾವ ಮಾತನ್ನೂ ಆಡದೆ ಗೃಹದಿಂದ ಹೊರಗೆ ನಡೆದರು.

ತಮನ್ವಗಚ್ಛತಾಂ ತೌ ತು ಕ್ಷುಧಿತೌ ಶ್ರಮಕರ್ಶಿತೌ ।
ಭಾರ್ಯಾಪತೀ ಮುನಿಶ್ರೇಷ್ಠೋ ನ ಚ ತಾವವಲೋಕಯತ್ ॥೩೭॥

ಹಸಿವು ಮತ್ತು ಶ್ರಮದಿಂದ ಬಳಲಿದ ಆ ದಂಪತಿಗಳು ಅವರನ್ನು ಹಿಂಬಾಲಿಸಿದರು. ಆದರೆ ಆ ಮುನಿಶ್ರೇಷ್ಠರು ಅವರನ್ನು ನೋಡಲೇ ಇಲ್ಲ.

ತಯೋಽಸ್ತು ಪ್ರೇಕ್ಷತೋರೇವ ಭಾರ್ಗವಾಣಾಂ ಕುಲೋದ್ವಹಃ ।
ಅಂತರ್ಹಿತೋಽಭೂದ್ ರಾಜೇಂದ್ರ ತತೋ ರಾಜಾಽಪತತ್ ಕ್ಷಿತೌ ॥

ಆ ದಂಪತಿಗಳು ನೋಡುತ್ತಿರುವಂತೆಯೇ ಭಾರ್ಗವ ಕುಲೋದ್ವಹರಾದ ಚ್ಯವನರು ಅಂತರ್ಧಾನವನ್ನು ಹೊಂದಿದರು. ಎಲೈ ರಾಜೇಂದ್ರನೇ, ಆಗ ರಾಜನು ಭೂಮಿಯ ಮೇಲೆ ಕುಸಿದು ಬಿದ್ದನು.

ಸ ಮುಹೂರ್ತಂ ಸಮಾಶ್ವಸ್ಯ ಸಹ ದೇವ್ಯಾ ಮಹಾದ್ಯುತಿಃ ।
ಪುನರನ್ವೇಷಣೇ ಯತ್ನಮಕರೋತ್ ಪರಮಂ ತದಾ ॥೩೯॥

ಮಹಾಕಾಂತಿಯನ್ನು ಹೊಂದಿದ್ದ ಅವನು ಒಂದು ಮುಹೂರ್ತದ ಕಾಲ ಸುಧಾರಿಸಿಕೊಂಡು ಪುನಃ ಅವರನ್ನು ಅನ್ವೇಷಿಸಲು ತನ್ನ ಪತ್ನಿಯ ಜೊತೆಯಲ್ಲಿ ಪರಮ ಪ್ರಯತ್ನವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಚ್ಯವನಕುಶಿಕಸಂವಾದೋನಾಮ ದ್ವ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ಮೂರನೆಯ ಅಧ್ಯಾಯ

ಕುಶಿಕನಿಗೆ ಚ್ಯವನರ ಅನುಗ್ರಹ

ಯುಧಿಷ್ಠಿರಃ

ತಸ್ಮಿನ್ನಂತರ್ಹಿತೇ ವಿಪ್ರೇ ರಾಜಾ ಕಿಮಕರೋತ್ ತದಾ ।
ಭಾರ್ಯಾ ಚಾಸ್ಯ ಮಹಾಭಾಗಾ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಬ್ರಾಹ್ಮಣರಾದ ಆ ಚ್ಯವನರು ಅದೃಶ್ಯರಾದ ಮೇಲೆ ರಾಜನು ಏನು ಮಾಡಿದನು? ಮಹಾನುಭಾವಳಾದ ಅವನ ಪತ್ನಿಯು ಏನು ಮಾಡಿದಳು ಎಂಬುದನ್ನು ನನಗೆ ಹೇಳು.

ಭೀಷ್ಮಃ

ಅದೃಷ್ಟ್ವಾ ತು ಸ ಮಹೀಪಾಲಸ್ತಮೃಷಿಂ ಸಹ ಭಾರ್ಯಯಾ ।
ಪರಿಶ್ರಾಂತೋ ನಿವವೃತೇ ವ್ರೀಡಿತೋ ನಷ್ಟಚೇತನಃ ॥೨॥

ಭೀಷ್ಮ- ಪತ್ನಿಯಿಂದ ಕೂಡಿದ ಆ ರಾಜನು ಆ ಋಷಿಗಳನ್ನು ಕಾಣದೆ ಬಳಲಿ ನಾಚಿಕೆಯಿಂದ ಜ್ಞಾನಶೂನ್ಯನಾಗಿ ಹಿಂದಿರುಗಿದನು.

ಸ ಪ್ರವಿಶ್ಯ ಪುರೀಂ ದೀನೋ ನಾಭ್ಯಭಾಷತ ಕಿಂಚನ ।
ತದೇವ ಚಿಂತಯಾಮಾಸ ಚ್ಯವನಸ್ಯ ವಿಚೇಷ್ಟಿತಮ್ ॥೩॥

ಅವನು ಪಟ್ಟಣಕ್ಕೆ ಹಿಂದಿರುಗಿ ದೀನನಾಗಿ ಯಾರ ಜೊತೆಯಲ್ಲೂ ಮಾತನಾಡಲಿಲ್ಲ. ಚ್ಯವನರ ಆ ಚರ್ಯೆಯನ್ನೇ ಚಿಂತಿಸಿದನು.

ಅಥ ಶೂನ್ಯೇನ ಮನಸಾ ಪ್ರವಿವೇಶ ಗೃಹಂ ನೃಪಃ ।
ದದರ್ಶ ಶಯನೇ ತಸ್ಮಿನ್ ಶಯಾನಂ ಭೃಗುನಂದನಮ್ ॥೪॥

ಅನಂತರ ರಾಜನು ಶೂನ್ಯಮನಸ್ಸಿನಿಂದ ಚ್ಯವನರು ಇದ್ದ ಗೃಹವನ್ನು ಪ್ರವೇಶಿಸಿದನು. ಅಲ್ಲಿ ಹಾಸಿಗೆಯಲ್ಲಿ ಮಲಗಿದ ಭೃಗುನಂದನರಾದ ಚ್ಯವನರನ್ನು ನೋಡಿದನು.

ವಿಸ್ಮಿತೌ ತೌ ತು ದೃಷ್ಟ್ವಾ ತಂ ತದಾಶ್ಚರ್ಯಂ ವಿಚಿಂತ್ಯ ಚ ।
ದರ್ಶನಾತ್ ತಸ್ಯ ಚ ಮುನೇರ್ವಿಶ್ರಾಂತೌ ಸಂಬಭೂವತುಃ ॥೫॥

ಅವರಿಬ್ಬರೂ ಅವರನ್ನು ನೋಡಿ ಆ ಆಶ್ಚರ್ಯವನ್ನು ಚಿಂತಿಸಿ ವಿಸ್ಮಿತರಾದರು. ಆ ಋಷಿಗಳ ದರ್ಶನದಿಂದಲೇ ಅವರು ಶ್ರಮವನ್ನೆಲ್ಲ ಕಳೆದುಕೊಂಡರು.

ಯಥಾಸ್ಥಾನಂ ತು ತೌ ಸ್ಥಿತ್ವಾ ಭೂಯಸ್ತಂ ಸಂವವಾಹತುಃ ।
ಅಥಾಪರೇಣ ಪಾರ್ಶ್ವೇನ ಸುಷ್ವಾಪ ಸ ಮಹಾಮುನಿಃ ॥೬॥

ಪುನಃ ಮೊದಲಿನಂತೆಯೇ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತು ಅವರ ಪಾದವನ್ನು ಒತ್ತಿದರು. ಆಗ ಮಹಾಮುನಿಗಳು ಇನ್ನೊಂದು ಮಗ್ಗುಲಿಗೆ ತಿರುಗಿ ನಿದ್ದೆಯನ್ನು ಮಾಡಿದರು.

ತೇನೈವ ಚ ಸ ಕಾಲೇನ ಪ್ರತ್ಯಬುಧ್ಯತ ವೀರ್ಯವಾನ್ ।
ನ ಚ ತೌ ಚಕ್ರತುಃ ಕಿಂಚಿದ್ ವಿಕಾರಂ ಭಯಶಂಕಿತೌ ॥೭॥

ಪರಾಕ್ರಮಶಾಲಿಗಳಾದ ಅವರು ಮೊದಲಿನಂತೆ ಇಪ್ಪತ್ತೊಂದು ದಿನಗಳು ಕಳೆದ ಮೇಲೆ ಎಚ್ಚರಗೊಂಡರು. ಭಯದಿಂದ ಕೂಡಿದ ರಾಜ ದಂಪತಿಗಳು ಯಾವ ವಿಕಾರವನ್ನೂ ತೋರಿಸಲಿಲ್ಲ.

ಪ್ರತಿಬುದ್ಧಸ್ತು ಸ ಮುನಿಸ್ತೌ ಪ್ರೋವಾಚ ವಿಶಾಂಪತೇ ।
ತೈಲಾಭ್ಯಂಗೋ ದೀಯತಾಂ ಮೇ ಸ್ನಾಸ್ಯೇಽಹಮಿತಿ ಭಾರತ ॥೮॥

ಎಲೈ ರಾಜನೇ, ಎಚ್ಚರಗೊಂಡ ಆ ಋಷಿಗಳು ಅವರಿಬ್ಬರನ್ನು ಕುರಿತು ನನಗೆ ತೈಲಾಭ್ಯಂಗವನ್ನು ಸಿದ್ಧಪಡಿಸಿ, ನಾನು ಸ್ನಾನವನ್ನು ಮಾಡುವೆನು ಎಂದು ಹೇಳಿದರು.

ತಥೇತಿ ತೌ ಪ್ರತಿಶ್ರುತ್ಯ ಕ್ಷುಧಿತೌ ಶ್ರಮಕರ್ಶಿತೌ ।
ಶೃತಪಾಕೇನ ತೈಲೇನ ಮಹಾರ್ಹೇಣೋಪತಸ್ಥತುಃ ॥೯॥

ಹಸಿದು, ಶ್ರಮದಿಂದ ಬಳಲಿದ ಅವರು ಹಾಗೆಯೇ ಆಗಲಿ ಎಂದು ಹೇಳಿ ಕಾಯಿಸಿ ಪಾಕವನ್ನು ಮಾಡಿದ ಮಹಾಬೆಲೆಬಾಳುವ ತೈಲವನ್ನು ಅವರಿಗೆ ತಂದರು.

ತತಃ ಸುಖಾಸೀನಮೃಷಿಂ ವಾಗ್ಯತೌ ಸಂವವಾಹತುಃ ।
ನ ಚ ಪರ್ಯಾಪ್ತಮಿತ್ಯಾಹ ಭಾರ್ಗವಃ ಸುಮಹಾತಪಾಃ ॥೧೦॥

ಅವರಿಬ್ಬರು ಮೌನವಾಗಿ ಕುಳಿತು ಸುಖಾಸೀನರಾದ ಋಷಿಗಳ ಪಾದಗಳನ್ನು ಒತ್ತಿದರು. ಮಹಾತಪಸ್ವಿಗಳಾದ ಭಾರ್ಗವರು ಇನ್ನೂ ಸಾಲದು ಎಂದು ಹೇಳಿದರು.

ಯದಾ ತೌ ನಿರ್ವಿಕಾರೌ ತು ಲಕ್ಷಯಾಮಾಸ ಭಾರ್ಗವಃ ।
ತತ ಉತ್ಥಾಯ ಸಹಸಾ ಸ್ನಾನಶಾಲಾಂ ವಿವೇಶ ಹ ।
ಕಲ್ಪ್ತಮೇವ ತು ತತ್ರಾಸೀತ್ ಸ್ನಾನೀಯಂ ಪಾರ್ಥಿವೋಚಿತಮ್ ॥೧೧॥

ಚ್ಯವನರು ಅವರು ನಿರ್ವಿಕಾರವಾಗಿರುವುದನ್ನು ನೋಡಿ ಅಲ್ಲಿಂದ ಎದ್ದು ಸ್ನಾನ ಶಾಲೆಯನ್ನು ಪ್ರವೇಶಿಸಿದರು. ಅಲ್ಲಿ ರಾಜೋಚಿತವಾದ ಸ್ನಾನದ್ರವ್ಯಗಳು ಸಿದ್ಧವಾಗಿದ್ದವು.

ಅಸತೃತ್ಯ ತು ತತ್ಸರ್ವಂ ತತ್ರೈವಾಂತರಧೀಯತ ।
ಸ ಮುನಿಃ ಪುನರೇವಾಥ ನೃಪತೇಃ ಪಶ್ಯತಸ್ತದಾ ।
ನಾಸೂಯಾಂ ಚಕ್ರತುಸ್ತೌ ಚ ದಂಪತೀ ಭರತರ್ಷಭ ॥೧೨॥

ಆ ಋಷಿಗಳು ರಾಜನು ನೋಡುತ್ತಿರುವಂತೆಯೇ ಅದೆಲ್ಲವನ್ನೂ ತಿರಸ್ಕರಿಸಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದರು. ಎಲೈ ಭರತರ್ಷಭನೇ, ಆ ರಾಜ ದಂಪತಿಗಳು ಅಸೂಯೆಯನ್ನು ಪಡಲಿಲ್ಲ.

ಅಥ ಸ್ನಾತಃ ಸ ಭಗವಾನ್ ಸಿಂಹಾಸನಗತಃ ಪ್ರಭುಃ ।
ದರ್ಶಯಾಮಾಸ ಕುಶಿಕಂ ಸಭಾರ್ಯಂ ಭೃಗುನಂದನಃ ॥೧೩॥

ಅನಂತರ ಪೂಜ್ಯರಾದ, ಪ್ರಭುಗಳಾದ ಋಷಿಗಳು ಸ್ನಾನವನ್ನು ಮಾಡಿ ಸಿಂಹಾಸನದಲ್ಲಿ ಕುಳಿತು ಪತ್ನೀ ಸಹಿತನಾದ ರಾಜನಿಗೆ ದರ್ಶನವನ್ನು ನೀಡಿದರು.

ಸಂಹೃಷ್ಟವದನೋ ರಾಜಾ ಸಭಾರ್ಯಃ ಕುಶಿಕೋ ಮುನಿಮ್ ।
ಸಿದ್ಧಮನ್ನಮಿತಿ ಪ್ರಹ್ವೋ ನಿರ್ವಿಕಾರೋ ನ್ಯವೇದಯತ್ ॥೧೪॥

ಪತ್ನೀ ಸಹಿತನಾದ ರಾಜನು ಸಂತೋಷಗೊಂಡ ಮುಖವುಳ್ಳವನಾಗಿ ಋಷಿಗಳನ್ನು ಕುರಿತು ವಿನಯದಿಂದ ಕೂಡಿ, ನಿರ್ವಿಕಾರನಾಗಿ, ಅನ್ನವು ಸಿದ್ಧವಾಗಿದೆ ಎಂದು ನಿವೇದಿಸಿದನು.

ಆನೀಯತಾಮಿತಿ ಮುನಿಸ್ತಂ ಚೋವಾಚ ನರಾಧಿಪಮ್ ।
ರಾಜಾ ಚ ಸಮುಪಾಜಹ್ರೇ ತದನ್ನಂ ಸಹ ಭಾರ್ಯಯಾ ॥೧೫॥

ಋಷಿಗಳು ರಾಜನನ್ನು ಕುರಿತು ತೆಗೆದುಕೊಂಡು ಬಾ ಎಂದು ಹೇಳಿದರು. ರಾಜನು ರಾಣಿಯ ಜೊತೆಯಲ್ಲಿ ಆ ಅನ್ನವನ್ನು ತೆಗೆದುಕೊಂಡು ಬಂದನು.

ಮಾಂಸಪ್ರಕಾರಾನ್ ವಿವಿಧಾನ್ ಶಾಕಾನಿ ವಿವಿಧಾನಿ ಚ ।
ವೇಸವಾರವಿಕಾರಾಂಶ್ಚ ಪಾನಕಾನಿ ಲಘೂನಿ ಚ ॥೧೬॥

ರಸಾಲಾಪೂಪಕಾಂಶ್ಚಿತ್ರಾನ್ ಮೋದಕಾನಥ ಷಾಡವಾನ್ ।
ರಸಾನ್ನಾನಾಪ್ರಕಾರಾಂಶ್ಚ ವನ್ಯಂ ಚ ಮುನಿಭೋಜನಮ್ ॥೧೭॥

ಫಲಾನಿ ಚ ವಿಚಿತ್ರಾಣಿ ತಥಾ ಭೋಜ್ಯಾನಿ ಭೂರಿಶಃ ।
ಬದರೇಂಗುದಕಾಶ್ಮರ್ಯಭಲ್ಲಾತಕವಟಾನಿ ಚ ॥೧೮॥

ಗೃಹಸ್ಥಾನಾಂ ಚ ಯದ್ಭೋಜ್ಯಂ ಯಚ್ಚಾಪಿ ವನವಾಸಿನಾಮ್ ।
ಸರ್ವಮಾಹಾರಯಾಮಾಸ ರಾಜಾ ಶಾಪಭಯಾನ್ಮುನೇಃ ॥೧೯॥

ಅನೇಕ ವಿಧವಾದ ಮಾಂಸಗಳು ಮತ್ತು ತರಕಾರಿಗಳು, ಪಾನಕಗಳು, ಅಪೂಪಗಳು, ವಿಚಿತ್ರವಾದ ಕಡುಬುಗಳು, ಷಾಡವಗಳು, ನಾನಾ ಪ್ರಕಾರವಾದ ರಸಗಳು, ವನದಲ್ಲಿ ದೊರೆಯುವ ಮುನಿಭೋಜನಕ್ಕೆ ಅರ್ಹವಾದ ವಸ್ತುಗಳು, ವಿಚಿತ್ರವಾದ ಫಲಗಳು, ಅನೇಕ ಭೋಜ್ಯಗಳು, ಬದರ, ಇಂಗುದ, ಕಾಶ್ಮೀರ್ಯ, ಭಲ್ಲಾತಕ, ವಟ ಫಲಗಳು, ಗೃಹಸ್ಥರಿಗೆ ಯೋಗ್ಯವಾದ ಭೋಜ್ಯ ಪದಾರ್ಥಗಳು, ವಾನಪ್ರಸ್ಥರಿಗೆ ಯೋಗ್ಯವಾದ ಪದಾರ್ಥಗಳು ಎಲ್ಲವನ್ನೂ ರಾಜನು ಮುನಿಗಳು ಕೊಡಬಹುದಾದ ಶಾಪಕ್ಕೆ ಹೆದರಿ ತೆಗೆದುಕೊಂಡು ಬಂದನು.

ಅಥ ಸರ್ವಮುಪನ್ಯಸ್ತಮಗ್ರತಶ್ಚ್ಯವನಸ್ಯ ತತ್ ।
ತತಃ ಸರ್ವಂ ಸಮಾನೀಯ ತಚ್ಚ ಶಯ್ಯಾಸನಂ ಮುನಿಃ ॥೨೦॥

ವಸ್ತ್ರೈಃ ಶುಭ್ರೈರವಚ್ಛಾದ್ಯ ಭೋಜನೋಪಸ್ಕರೈಃ ಸಹ ।
ಸರ್ವಮಾದೀಪಯಾಮಾಸ ಚ್ಯವನೋ ಭೃಗುನಂದನಃ ॥೨೧॥

ಅವೆಲ್ಲವೂ ಚ್ಯವನರ ಮುಂದೆ ಇಡಲ್ಪಟ್ಟಿತು. ಚ್ಯವನರು ಅದೆಲ್ಲವನ್ನು ಇಟ್ಟು ಅದರ ಜೊತೆಯಲ್ಲಿ ಶಯ್ಯಾಸನವನ್ನು ಇಟ್ಟು ಭೋಜನ ಉಪಕರಣಗಳು ಮತ್ತು ಭೋಜನ ಪದಾರ್ಥಗಳನ್ನು ಶುಭ್ರವಸ್ತ್ರದಿಂದ ಮುಚ್ಚಿ ಎಲ್ಲದಕ್ಕೂ ಅಗ್ನಿಯನ್ನು ಹೊತ್ತಿಸಿದರು.

ನ ಚ ತೌ ಚಕ್ರತುಃ ಕೋಪಂ ದಂಪತೀ ಸುಮಹಾವ್ರತೌ ।
ತಯೋಃ ಸಂಪ್ರೇಕ್ಷತೋರೇವ ಪುನರಂತರ್ಹಿತೋಽಭವತ್ ॥೨೨॥

ಮಹಾವ್ರತವನ್ನು ಧರಿಸಿದ ಆ ದಂಪತಿಗಳು ಕೋಪವನ್ನು ಮಾಡಲಿಲ್ಲ. ಚ್ಯವನರು ಅವರು ನೋಡುತ್ತಿರುವಂತೆಯೆ ಪುನಃ ಅಂತರ್ಧಾನವನ್ನು ಹೊಂದಿದರು.

ತತ್ರೈವ ಚ ಸ ರಾಜರ್ಷಿಸ್ತಸ್ಥೌ ತಾಂ ರಜನೀಂ ತದಾ ।
ಸಭಾರ್ಯೋ ವಾಗ್ಯತಃ ಶ್ರೀಮಾನ್ನ ಚ ತಂ ಕೋಪ ಆವಿಶತ್ ॥೨೩॥

ಸಂಪದ್ಯುಕ್ತನಾದ ರಾಜನು ಆ ರಾತ್ರಿಯಲ್ಲಿ ತನ್ನ ಪತ್ನಿಯ ಜೊತೆಯಲ್ಲಿ ಮೌನದಿಂದ ಅಲ್ಲಿಯೇ ನಿಂತನು. ಅವನಿಗೆ ಕೋಪವುಂಟಾಗಲಿಲ್ಲ.

ನಿತ್ಯಂ ಸಂಸ್ಕೃತಮನ್ನಂ ತು ವಿವಿಧಂ ರಾಜವೇಶ್ಮನಿ ।
ಶಯನಾನಿ ಚ ಮುಖ್ಯಾನಿ ಪರಿಷೇಕಾಶ್ಚ ಪುಷ್ಕಲಾಃ ॥೨೪॥

ವಸ್ತ್ರಂ ಚ ವಿವಿಧಾಕಾರಮಭವತ್ ಸಮುಪಾರ್ಜಿತಮ್ ।
ನ ಶಶಾಕ ತತೋ ದ್ರಷ್ಟುಮಂತರಂ ಚ್ಯವನಸ್ತದಾ ॥೨೫॥

ಹೀಗೆ ರಾಜನ ಅರಮನೆಯಲ್ಲಿ ನಿತ್ಯವೂ ಚೆನ್ನಾಗಿ ಸಿದ್ಧಪಡಿಸಿದ ವಿವಿಧವಾದ ಅನ್ನಗಳು, ಶ್ರೇಷ್ಠವಾದ ಶಯನಗಳು, ಪುಷ್ಕಲವಾದ ಪದಾರ್ಥಗಳು, ವಿವಿಧಾಕಾರವಾದ ವಸ್ತುಗಳು ಎಲ್ಲವೂ ತರಲ್ಪಡುತ್ತಿದ್ದವು. ಚ್ಯವನರು ರಾಜನ ಸೇವೆಯಲ್ಲಿ ಸಣ್ಣ ಛಿದ್ರವನ್ನೂ ಕಾಣಲು ಸಾಧ್ಯವಾಗಲಿಲ್ಲ.

ಪುನರೇವ ಚ ವಿಪ್ರರ್ಷಿಃ ಪ್ರೋವಾಚ ಕುಶಿಕಂ ನೃಪಮ್ ।
ಸಭಾರ್ಯೋ ಮಾಂ ರಥೇನಾಶು ವಹ ಯತ್ರ ಬ್ರವೀಮ್ಯಹಮ್ ॥೨೬॥

ಆಗ ವಿಪರ್ಷಿಗಳಾದ ಚ್ಯವನರು ಪುನಃ ಕುಶಿಕನನ್ನು ಕುರಿತು ನನ್ನನ್ನು ರಥದಲ್ಲಿ ಕುಳ್ಳಿರಿಸಿ ನಾನು ಹೇಳಿದ ಸ್ಥಳಕ್ಕೆ ನಿನ್ನ ಪತ್ನಿಯ ಜೊತೆಯಲ್ಲಿ ಶೀಘ್ರವಾಗಿ ರಥವನ್ನು ಎಳೆದುಕೊಂಡು ಹೋಗು ಎಂದು ಹೇಳಿದರು.

ತಥೇತಿ ಚ ಪ್ರಾಹ ನೃಪೋ ನಿರ್ವಿಶಂಕಸ್ತಪೋಧನಮ್ ।
ಕ್ರೀಡಾರಥೋಽಸ್ತು ಭಗವನ್ನುತ ಸಾಂಗ್ರಾಮಿಕೋ ರಥಃ ॥೨೭॥

ರಾಜನು ಯಾವ ಶಂಕೆಯೂ ಇಲ್ಲದೆ ಆ ತಪೋಧನರನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ, ನಿಮಗೆ ಕ್ರೀಡಾರಥವಾಗಬಹುದೋ ಅಥವಾ ಯುದ್ಧ ರಥವಾಗಬಹುದೋ ಎಂದು ಕೇಳಿದನು.

ಇತ್ಯುಕ್ತಃ ಸ ಮುನಿಸ್ತೇನ ರಾಜ್ಞಾ ಹೃಷ್ಟೇನ ತದ್ವಚಃ ।
ಚ್ಯವನಃ ಪ್ರತ್ಯುವಾಚೇದಂ ಹೃಷ್ಟಃ ಪರಪುರಂಜಯಮ್ ॥೨೮॥

ಸಂತೋಷಗೊಂಡ ಆ ರಾಜನಿಂದ ಹೀಗೆ ಕೇಳಲ್ಪಟ್ಟ ಆ ಚ್ಯವನ ಋಷಿಗಳು ಸಂತೋಷಗೊಂಡು ಪರಪುರಂಜಯನಾದ ಅವನನ್ನು ಕುರಿತು ಹೀಗೆ ಹೇಳಿದರು.

ಸಜ್ಜೀಕುರು ರಥಂ ಕ್ಷಿಪ್ರಂ ಯಸ್ತೇ ಸಾಂಗ್ರಾಮಿಕೋ ಮತಃ ।
ಸಾಯುಧಃ ಸಪತಾಕಶ್ಚ ಸಶಕ್ತಿಃ ಕಣಯಷ್ಟಿಮಾನ್ ॥೨೯॥

ಕಿಂಕಿಣೀಶತನಿರ್ಘೋಷೋ ಯುಕ್ತಸ್ತೋಮರಕಂಪನೈಃ ।
ಗದಾಖಡ್ಗನಿಬದ್ಧಶ್ಚ ಪರಮೇಷುಶತಾನ್ವಿತಃ ॥೩೦॥

ನಿನ್ನ ಯುದ್ಧದ ರಥವಿದೆಯಷ್ಟೆ? ಅದನ್ನು ಆಯುಧಗಳು, ಪತಾಕೆಗಳು, ಶಕ್ತಿಗಳು, ಕಣಯಷ್ಟಿಗಳು ಇವುಗಳಿಂದಲೂ, ತೋಮರ, ಕಂಪನ, ಗದೆ, ಖಡ್ಗ, ಶ್ರೇಷ್ಠವಾದ ನೂರಾರು ಬಾಣಗಳು ಇವುಗಳಿಂದಲೂ ತುಂಬಿ ನೂರು ಕಿಂಕಿಣಿ ನಾದದಿಂದ ಕೂಡಿರುವಂತೆ ಮಾಡಿ ಶೀಘ್ರವಾಗಿ ಸಿದ್ಧಪಡಿಸು ಎಂದು ಹೇಳಿದರು.

ತತಃ ಸ ತಂ ತಥೇತ್ಯುಕ್ತ್ವಾ ಕಲ್ಪಯಿತ್ವಾ ಮಹಾರಥಮ್ ।
ಭಾರ್ಯಾಂ ವಾಮೇ ಧುರಿ ತದಾ ಚಾತ್ಮಾನಂ ದಕ್ಷಿಣೇ ತಥಾ ॥೩೧॥

ತ್ರಿದಂಷ್ಟ್ರಂ ವಜ್ರಸೂಚ್ಯಗ್ರಂ ಪ್ರತೋದಂ ತತ್ರ ಚಾದಧತ್ ।
ಸರ್ವಮೇತತ್ತತೋ ದತ್ತ್ವಾ ನೃಪೋ ವಾಕ್ಯಮಥಾಬ್ರವೀತ್ ॥೩೨॥

ಭಗವನ್ ಕ್ವ ರಥೋ ಯಾತು ಬ್ರವೀತು ಭೃಗುನಂದನಃ ।
ಯತ್ರ ವಕ್ಷ್ಯಸಿ ವಿಪ್ರರ್ಷೇ ತತ್ರ ಯಾಸ್ಯತಿ ತೇ ರಥಃ ॥೩೩॥

ಆಗ ರಾಜನು ಹಾಗೆಯೇ ಆಗಲಿ ಎಂದು ಹೇಳಿ ಅಂತಹ ದೊಡ್ಡ ರಥವನ್ನು ಸಿದ್ಧಪಡಿಸಿ ರಥದ ಎಡಭಾಗದಲ್ಲಿ ತನ್ನ ಪತ್ನಿಯನ್ನು ಸಂಯೋಜಿಸಿ ತಾನೂ ದಕ್ಷಿಣ ಭಾಗದಲ್ಲಿ ರಥದ ನೊಗವನ್ನು ಹೊತ್ತು ಮೂರು ತುದಿಗಳಿರುವ ವಜ್ರದಿಂದ ಮಾಡಿದ ಸೂಜಿಗಳಂತೆ ತೀಕ್ಷ್ಣವಾಗಿರುವ ಚಾವಟಿಯನ್ನು ಅವರ ಕೈಯಲ್ಲಿ ನೀಡಿದನು. ಇದೆಲ್ಲವನ್ನೂ ಕೊಟ್ಟು ರಾಜನು ಅವರನ್ನು ಕುರಿತು- 'ಪೂಜ್ಯರೇ, ಭೃಗುನಂದನರಾದ ತಾವು ರಥವು ಎಲ್ಲಿಗೆ ಹೋಗಬೇಕೆಂದು ಹೇಳಬೇಕು. ಎಲೈ ವಿಪ್ರರ್ಷಿಗಳೇ, ನೀವು ಎಲ್ಲಿಗೆ ಹೋಗಬೇಕೆಂದು ಹೇಳುತ್ತೀರೋ, ಅಲ್ಲಿಗೆ ತಮ್ಮ ರಥವು ಹೋಗುತ್ತದೆ' ಎಂದು ಹೇಳಿದನು.

ಏವಮುಕ್ತಸ್ತು ಭಗವಾನ್ ಪ್ರತ್ಯುವಾಚಾಥ ತಂ ನೃಪಮ್ ।
ಇತಃಪ್ರಭೃತಿ ಯಾತವ್ಯಂ ಪದಕಂ ಪದಕಂ ಶನೈಃ ॥೩೪॥

ಹೀಗೆ ಹೇಳಲ್ಪಟ್ಟ ಪೂಜ್ಯರಾದ ಚ್ಯವನರು ಆ ರಾಜನನ್ನು ಕುರಿತು ಇಲ್ಲಿಂದ ಹೆಜ್ಜೆ ಹೆಜ್ಜೆಯ ಕ್ರಮದಿಂದ ರಥವು ನಿಧಾನವಾಗಿ ಚಲಿಸಬೇಕು.

ಶ್ರಮೋ ಮಮ ಯಥಾ ನ ಸ್ಯಾತ್ ತಥಾ ಮೇ ಛಂದಚಾರಿಣೌ ।
ಸುಖಂ ಚೈವಾಸ್ಮಿ ವೋಢವ್ಯೋ ಜನಃ ಸರ್ವಶ್ಚ ಪಶ್ಯತು ॥೩೫॥

ನನ್ನ ಮನಸ್ಸಿನ ಅಭಿಪ್ರಾಯಕ್ಕೆ ಅನುಗುಣವಾಗಿ ನನಗೆ ಶ್ರಮವಾಗದಂತೆ ರಥವನ್ನು ಸುಖವಾಗಿ ಎಳೆದುಕೊಂಡು ಹೋಗಬೇಕು. ಎಲ್ಲ ಜನರು ನೋಡಲಿ.

ನೋತ್ಸಾರ್ಯಃ ಪಥಿಕಃ ಕಶ್ಚಿತ್ ತೇಭ್ಯೋ ದಾಸ್ಯಾಮ್ಯಹಂ ವಸು ।
ಬ್ರಾಹ್ಮಣೇಭ್ಯಶ್ಚ ಯೇ ಕಾಮಾನರ್ಥಯಿಷ್ಯಂತಿ ಮಾಂ ಪಥಿ ॥೩೬॥

ದಾರಿಯಲ್ಲಿರುವ ಯಾರನ್ನೂ ತಳ್ಳಬಾರದು. ಅವರಿಗೆ ನಾನು ಧನ-ದಾನವನ್ನು ಮಾಡಬೇಕಾಗಿದೆ. ನನ್ನನ್ನು ಬೇಡುವ ಬ್ರಾಹ್ಮಣರಿಗೂ ಸಹ ಮಾರ್ಗದಲ್ಲಿ ಬೇಡಿದುದನ್ನು ಕೊಡಬೇಕಾಗಿದೆ.

ಸರ್ವಂ ದಾಸ್ಯಾಮ್ಯಶೇಷೇಣ ಧನಂ ರತ್ನಾನಿ ಚೈವ ಹಿ ।
ಕ್ರಿಯತಾಂ ನಿಖಿಲೇನೈತನ್ಮಾ ವಿಚಾರಯ ಪಾರ್ಥಿವ ॥೩೭॥

ನಾನು ಧನವನ್ನು ಮತ್ತು ರತ್ನಗಳನ್ನು ಸಂಪೂರ್ಣವಾಗಿ ಕೊಡುತ್ತೇನೆ. ಎಲೈ ರಾಜನೇ, ಅದಕ್ಕೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡು. ಏನನ್ನೂ ಶಂಕಿಸಬೇಡ' ಎಂದು ಹೇಳಿದರು.

ತಸ್ಯ ತದ್ವಚನಂ ಶ್ರುತ್ವಾ ರಾಜಾ ಭೃತ್ಯಾನಥಾಬ್ರವೀತ್ ।
ಯದ್ಯದ್ ಬ್ರೂಯಾನ್ಮುನಿಸ್ತತ್ತತ್ಸರ್ವಂ ದೇಯಮಶಂಕಿತೈಃ ॥೩೮॥

ಅವರ ಆ ಮಾತನ್ನು ಕೇಳಿ ರಾಜನು ಭೃತ್ಯರನ್ನು ಕುರಿತು ಋಷಿಗಳು ಏನೇನು ಹೇಳುತ್ತಾರೆಯೋ ಅವೆಲ್ಲವನ್ನೂ ನಿಶ್ಶಂಕೆಯಿಂದ ಕೊಡಿ ಎಂದು ಹೇಳಿದನು.

ತತೋ ರತ್ನಾನ್ಯನೇಕಾನಿ ಸ್ತ್ರಿಯೋ ಯುಗ್ಯಮಜಾವಿಕಮ್ ।
ಕೃತಾಕೃತಂ ಚ ಕನಕಮ್ ಆದಾಯಾನುವ್ರಜಂತಿ ತಮ್ ॥೩೯॥

ಆಗ ಅನೇಕ ರತ್ನಗಳನ್ನೂ, ಸ್ತ್ರೀಯರನ್ನೂ, ರಥಕ್ಕೆ ಹೂಡುವ ಕುದುರೆಗಳನ್ನೂ, ಆಡು-ಕುರಿಗಳನ್ನೂ, ಆಭರಣರೂಪವಾದ ಮತ್ತು ಆಭರಣವಾಗದಿದ್ದ ಚಿನ್ನವನ್ನೂ ತೆಗೆದುಕೊಂಡು ಅನೇಕರು ಅವನನ್ನು ಹಿಂಬಾಲಿಸಿದರು.

ಅನ್ವಗಚ್ಛಂತ ತಮೃಷಿಂ ರಾಜಾಮಾತ್ಯಾಶ್ಚ ಸರ್ವಶಃ ।
ಹಾಹಾಭೂತಂ ಚ ತತ್ಸರ್ವಮಾಸೀನ್ನಗರಮಾರ್ತಿಮತ್ ॥೪೦॥

ರಾಜನು ಮತ್ತು ಎಲ್ಲಾ ಅಮಾತ್ಯರು ಆ ಋಷಿಯನ್ನು ಹಿಂಬಾಲಿಸಿದರು. ಆ ನಗರವೆಲ್ಲವೂ ದುಃಖದಿಂದ ಕೂಡಿ ಹಾಹಾಕಾರವನ್ನು ಮಾಡಿತು.

ತೌ ತೀಕ್ಷ್ಣಾಗ್ರೇಣ ಸಹಸಾ ಪ್ರತೋದೇನ ಪ್ರಚೋದಿತೌ ।
ಪೃಷ್ಠೇ ಏದ್ಧೌ ಕಟೇ ಚೈವ ನಿರ್ವಿಕಾರೌ ತಮೂಹತುಃ ॥೪೧॥

ಋಷಿಯು ಹರಿತವಾದ ತುದಿಯುಳ್ಳ ಚಾವಟಿಯಿಂದ ಅವರಿಗೆ ಬೆನ್ನಿನಲ್ಲಿಯೂ, ಕಟಿಯಲ್ಲಿಯೂ ಹೊಡೆದು ಅವರನ್ನು ಪ್ರಚೋದಿಸುತ್ತಿದ್ದನು. ರಾಜದಂಪತಿಗಳು ನಿರ್ವಿಕಾರವಾಗಿ ರಥವನ್ನು ಎಳೆದರು.

ವೇಪಮಾನೌ ನಿರಾಹಾರೌ ಪಂಚಾಶದ್ರಾತ್ರಕರ್ಶಿತೌ ।
ಕಥಂಚಿದೂಹತುರ್ವೀರೌ ದಂಪತೀ ತಂ ರಥೋತ್ತಮಮ್ ॥೪೨॥

ಐವತ್ತು ದಿನಗಳ ಕಾಲ ನಿರಾಹಾರರಾಗಿ ನಡುಗುತ್ತಾ ವೀರರಾದ ಆ ದಂಪತಿಗಳು ಆ ಶ್ರೇಷ್ಠವಾದ ರಥವನ್ನು ಹೇಗೋ ಮಾಡಿ ಎಳೆದರು.

ಬಹುಶೋ ಭೃಶವಿದ್ಧೌ ತೌ ಕ್ಷರಮಾಣೌ ಕ್ಷತೋದ್ಭವಮ್ ।
ದದೃಶಾತೇ ಮಹಾರಾಜ ಪುಷ್ಪಿತಾವಿವ ಕಿಂಶುಕೌ ॥೪೩॥

ಎಲೈ ಮಹಾರಾಜನೇ, ಅನೇಕ ಬಾರಿ ಬೆನ್ನಿನ ಮೇಲೆ ಚಾವಟಿ ಏಟನ್ನು ತಿಂದು ಉಂಟಾದ ಗಾಯದಿಂದ ರಕ್ತವನ್ನು ಸುರಿಸುತ್ತಾ ಹೂವರಳಿದ ಮುತ್ತುಗದ ಮರದಂತೆ ಅವರು ಕಾಣುತ್ತಿದ್ದರು.

ತೌ ದೃಷ್ಟ್ವಾ ಪೌರವರ್ಗಸ್ತು ಭೃಶಂ ಶೋಕಪರಾಯಣಃ ।
ಅಭಿಶಾಪಭಯಾತ್ ತ್ರಸ್ತೋ ನ ಚ ಕಿಂಚಿದುವಾಚ ಹ ॥೪೪॥

ಆ ದಂಪತಿಗಳನ್ನು ನೋಡಿದ ಪೌರವರ್ಗವು ಬಹಳ ಶೋಕದಿಂದ ಕೂಡಿದ್ದಾಯಿತು. ಋಷಿಗಳು ಕೊಡಬಹುದಾದ ಶಾಪದ ಭಯದಿಂದ ಯಾರೂ ಮಾತನಾಡಲಿಲ್ಲ.

ದ್ವಂದ್ವಶಶ್ಚಾಬ್ರುವನ್ಸರ್ವೇ ಪಶ್ಯಧ್ವಂ ತಪಸೋ ಬಲಮ್ ।
ಕ್ರುದ್ಧಾ ಅಪಿ ಮುನಿಶ್ರೇಷ್ಠಂ ವೀಕ್ಷಿತುಂ ನೈವ ಶಕ್ನುಮಃ ॥೪೫॥

ಅಹೋ ಭಗವತೋ ವೀರ್ಯಂ ಮಹರ್ಷೇರ್ಭಾವಿತಾತ್ಮನಃ ।
ರಾಜ್ಞಶ್ಚಾಪಿ ಸಭಾರ್ಯಸ್ಯ ಧೈರ್ಯಂ ಪಶ್ಯತ ಯಾದೃಶಮ್ ॥೪೬॥

ಇಬ್ಬಿಬ್ಬರು ಪೌರರು ಜೊತೆಯಾಗಿ ಕೂಡಿ ಎಲ್ಲರೂ ತಪಸ್ಸಿನ ಬಲವನ್ನು ನೋಡಿ, ನಮಗೆ ಕೋಪವುಂಟಾಗಿದ್ದರೂ ಆ ಮುನಿಶ್ರೇಷ್ಠರನ್ನು ನೋಡಲು ಸಾಧ್ಯವಾಗುತ್ತಿಲ್ಲ. ಪೂಜ್ಯರೂ ಇಂದ್ರಿಯಜಯವುಳ್ಳವರೂ ಆದ ಮಹರ್ಷಿಗಳ ಸಾಮರ್ಥ್ಯವನ್ನು ನೋಡಿ. ಪತ್ನೀ ಸಹಿತನಾದ ರಾಜನ ಧೈರ್ಯವು ಎಂತಹದು ಎಂದು ನೋಡಿ (ಎಂದು ಮಾತನಾಡಿದರು).

ಶ್ರಾಂತಾವಪಿ ಹಿ ಕೃಚ್ಛ್ರೇಣ ರಥಮೇತಂ ಸಮೂಹತುಃ ।
ನ ಚೈತಯೋರ್ವಿಕಾರಂ ವೈ ದದರ್ಶ ಭೃಗುನಂದನಃ ॥೪೭॥

ಅವರು ದಣಿದಿದ್ದರೂ ಆ ರಥವನ್ನು ಬಹಳ ಕಷ್ಟಪಟ್ಟು ಎಳೆದರು. ಭೃಗುನಂದನರಾದ ಚ್ಯವನರು ಅವರಲ್ಲಿ ಯಾವ ವಿಕಾರವನ್ನೂ ಕಾಣಲಿಲ್ಲ.

ತತಃ ಸ ನಿರ್ವಿಕಾರೌ ತೌ ದೃಷ್ಟ್ವಾ ಭೃಗುಕುಲೋದ್ವಹಃ ।
ವಸು ವಿಶ್ರಾಣಯಾಮಾಸ ಯಥಾ ವೈಶ್ರವಣಸ್ತಥಾ ॥೪೮॥

ಅನಂತರ ಅವರು ನಿರ್ವಿಕಾರರಾಗಿರುವುದನ್ನು ನೋಡಿದ ಭೃಗುಕುಲಶ್ರೇಷ್ಠರಾದ ಚ್ಯವನರು ಕುಬೇರನಂತೆ ಧನವನ್ನು ದಾನ ಮಾಡಿದರು.

ತತ್ರಾಪಿ ರಾಜಾ ಪ್ರೀತಾತ್ಮಾ ಯಥಾಜ್ಞಪ್ತಮಥಾಕರೋತ್ ।
ತತೋಽಸ್ಯ ಭಗವಾನ್ ಪ್ರೀತೋ ಬಭೂವ ಮುನಿಸತ್ತಮಃ ॥೪೯॥

ಆಗ ಅನೇಕ ರತ್ನಗಳನ್ನೂ, ಸ್ತ್ರೀಯರನ್ನೂ, ರಥಕ್ಕೆ ಹೂಡುವ ಕುದುರೆಗಳನ್ನೂ, ಆಡು-ಕುರಿಗಳನ್ನೂ, ಆಭರಣರೂಪವಾದ ಮತ್ತು ಆಭರಣವಾಗದಿದ್ದ ಚಿನ್ನವನ್ನೂ ತೆಗೆದುಕೊಂಡು ಅನೇಕರು ಅವನನ್ನು ಹಿಂಬಾಲಿಸಿದರು.

ಅನ್ವಗಚ್ಛಂತ ತಮೃಷಿಂ ರಾಜಾಮಾತ್ಯಾಶ್ಚ ಸರ್ವಶಃ ।
ಹಾಹಾಭೂತಂ ಚ ತತ್ಸರ್ವಮಾಸೀನ್ನಗರಮಾರ್ತಿಮತ್ ॥೪೦॥

ರಾಜನು ಮತ್ತು ಎಲ್ಲಾ ಅಮಾತ್ಯರು ಆ ಋಷಿಯನ್ನು ಹಿಂಬಾಲಿಸಿದರು. ಆ ನಗರವೆಲ್ಲವೂ ದುಃಖದಿಂದ ಕೂಡಿ ಹಾಹಾಕಾರವನ್ನು ಮಾಡಿತು.

ತೌ ತೀಕ್ಷ್ಣಾಗ್ರೇಣ ಸಹಸಾ ಪ್ರತೋದೇನ ಪ್ರಚೋದಿತೌ ।
ಪೃಷ್ಠೇ ವಿದ್ಧೌ ಕಟೇ ಚೈವ ನಿರ್ವಿಕಾರೌ ತಮೂಹತುಃ ॥೪೧॥

ಋಷಿಯು ಹರಿತವಾದ ತುದಿಯುಳ್ಳ ಚಾವಟಿಯಿಂದ ಅವರಿಗೆ ಬೆನ್ನಿನಲ್ಲಿಯೂ, ಕಟಿಯಲ್ಲಿಯೂ ಹೊಡೆದು ಅವರನ್ನು ಪ್ರಚೋದಿಸುತ್ತಿದ್ದನು. ರಾಜದಂಪತಿಗಳು ನಿರ್ವಿಕಾರವಾಗಿ ರಥವನ್ನು ಎಳೆದರು.

ವೇಪಮಾನೌ ನಿರಾಹಾರೌ ಪಂಚಾಶದ್ರಾತ್ರಕರ್ಶಿತೌ ।
ಕಥಂಚಿದೂಹತುರ್ವೀರೌ ದಂಪತೀ ತಂ ರಥೋತ್ತಮಮ್ ॥೪೨॥

ಐವತ್ತು ದಿನಗಳ ಕಾಲ ನಿರಾಹಾರರಾಗಿ ನಡುಗುತ್ತಾ ವೀರರಾದ ಆ ದಂಪತಿಗಳು ಆ ಶ್ರೇಷ್ಠವಾದ ರಥವನ್ನು ಹೇಗೋ ಮಾಡಿ ಎಳೆದರು.

ಬಹುಶೋ ಭೃಶವಿದ್ಧೌ ತೌ ಕ್ಷರಮಾಣೌ ಕ್ಷತೋದ್ಭವಮ್ ।
ದದೃಶಾತೇ ಮಹಾರಾಜ ಪುಷ್ಪಿತಾವಿವ ಕಿಂಶುಕೌ ॥೪೩॥

ಎಲೈ ಮಹಾರಾಜನೇ, ಅನೇಕ ಬಾರಿ ಬೆನ್ನಿನ ಮೇಲೆ ಚಾವಟಿ ಏಟನ್ನು ತಿಂದು ಉಂಟಾದ ಗಾಯದಿಂದ ರಕ್ತವನ್ನು ಸುರಿಸುತ್ತಾ ಹೂವರಳಿದ ಮುತ್ತುಗದ ಮರದಂತೆ ಅವರು ಕಾಣುತ್ತಿದ್ದರು.

ತೌ ದೃಷ್ಟ್ವಾ ಪೌರವರ್ಗಸ್ತು ಭೃಶಂ ಶೋಕಪರಾಯಣಃ ।
ಅಭಿಶಾಪಭಯಾತ್ ತ್ರಸ್ತೋ ನ ಚ ಕಿಂಚಿದುವಾಚ ಹ ॥೪೪॥

ಆ ದಂಪತಿಗಳನ್ನು ನೋಡಿದ ಪೌರವರ್ಗವು ಬಹಳ ಶೋಕದಿಂದ ಕೂಡಿದ್ದಾಯಿತು. ಋಷಿಗಳು ಕೊಡಬಹುದಾದ ಶಾಪದ ಭಯದಿಂದ ಯಾರೂ ಮಾತನಾಡಲಿಲ್ಲ.

ದ್ವಂದ್ವಶಶ್ಚಾಬ್ರುವನ್ಸರ್ವೇ ಪಶ್ಯಧ್ವಂ ತಪಸೋ ಬಲಮ್ ।
ಕ್ರುದ್ಧಾ ಅಪಿ ಮುನಿಶ್ರೇಷ್ಠಂ ವೀಕ್ಷಿತುಂ ನೈವ ಶಕ್ನುಮಃ ॥೪೫॥

ಅಹೋ ಭಗವತೋ ವೀರ್ಯಂ ಮಹರ್ಷೇರ್ಭಾವಿತಾತ್ಮನಃ ।
ರಾಜ್ಞಶ್ಚಾಪಿ ಸಭಾರ್ಯಸ್ಯ ಧೈರ್ಯಂ ಪಶ್ಯತ ಯಾದೃಶಮ್ ॥೪೬॥

ಇಬ್ಬಿಬ್ಬರು ಪೌರರು ಜೊತೆಯಾಗಿ ಕೂಡಿ ಎಲ್ಲರೂ ತಪಸ್ಸಿನ ಬಲವನ್ನು ನೋಡಿ, ನಮಗೆ ಕೋಪವುಂಟಾಗಿದ್ದರೂ ಆ ಮುನಿಶ್ರೇಷ್ಠರನ್ನು ನೋಡಲು ಸಾಧ್ಯವಾಗುತ್ತಿಲ್ಲ. ಪೂಜ್ಯರೂ ಇಂದ್ರಿಯಜಯವುಳ್ಳವರೂ ಆದ ಮಹರ್ಷಿಗಳ ಸಾಮರ್ಥ್ಯವನ್ನು ನೋಡಿ. ಪತ್ನೀ ಸಹಿತನಾದ ರಾಜನ ಧೈರ್ಯವು ಎಂತಹದು ಎಂದು ನೋಡಿ (ಎಂದು ಮಾತನಾಡಿದರು).

ಶ್ರಾಂತಾವಪಿ ಹಿ ಕೃಚ್ಛ್ರೇಣ ರಥಮೇತಂ ಸಮೂಹತುಃ ।
ನ ಚ್ಯವಿತಯೋರ್ವಿಕಾರಂ ವೈ ದದರ್ಶ ಭೃಗುನಂದನಃ ॥೪೭॥

ಅವರು ದಣಿದಿದ್ದರೂ ಆ ರಥವನ್ನು ಬಹಳ ಕಷ್ಟಪಟ್ಟು ಎಳೆದರು. ಭೃಗುನಂದನರಾದ ಚ್ಯವನರು ಅವರಲ್ಲಿ ಯಾವ ವಿಕಾರವನ್ನೂ ಕಾಣಲಿಲ್ಲ.

ತತಃ ಸ ನಿರ್ವಿಕಾರೌ ತೌ ದೃಷ್ಟ್ವಾ ಭೃಗುಕುಲೋದ್ವಹಃ ।
ವಸು ವಿಶ್ರಾಣಯಾಮಾಸ ಯಥಾ ವೈಶ್ರವಣಸ್ತಥಾ ॥೪೮॥

ಅನಂತರ ಅವರು ನಿರ್ವಿಕಾರರಾಗಿರುವುದನ್ನು ನೋಡಿದ ಭೃಗುಕುಲಶ್ರೇಷ್ಠರಾದ ಚ್ಯವನರು ಕುಬೇರನಂತೆ ಧನವನ್ನು ದಾನ ಮಾಡಿದರು.

ತತ್ರಾಪಿ ರಾಜಾ ಪ್ರೀತಾತ್ಮಾ ಯಥಾಜ್ಞಪ್ತಮಥಾಕರೋತ್ ।
ತತೋಽಸ್ಯ ಭಗವಾನ್ ಪ್ರೀತೋ ಬಭೂವ ಮುನಿಸತ್ತಮಃ ॥೪೯॥

ಅಲ್ಲಿಯೂ ಸಹ ರಾಜನು ಸಂತೋಷದಿಂದಲೇ ಕೂಡಿ ಅವರು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು. ಆಗ ಆ ಮುನಿಶ್ರೇಷ್ಠರಾದ ಪೂಜ್ಯರು ರಾಜನ ಮೇಲೆ ಪ್ರಸನ್ನರಾದರು.

ಅವತೀರ್ಯ ರಥಶ್ರೇಷ್ಠಾದ್ ದಂಪತೀ ತೌ ಮುಮೋಚ ಹ ।
ವಿಮೋಚ್ಯ ಚೈತೌ ವಿಧಿವತ್ ತತೋ ವಾಕ್ಯಮುವಾಚ ಹ ॥೫೦॥

ಸ್ನಿಗ್ಧಗಂಭೀರಯಾ ವಾಚಾ ಭಾರ್ಗವಃ ಸುಪ್ರಸನ್ನಯಾ ।
ದದಾನಿ ವಾಂ ವರಂ ಶ್ರೇಷ್ಠಂ ತದ್ ಬ್ರೂತಾಮಿತಿ ಭಾರತ ॥೫೧॥

ಅವರು ಆ ಶ್ರೇಷ್ಠವಾದ ರಥದಿಂದ ಇಳಿದು ದಂಪತಿಗಳನ್ನು ನೊಗದಿಂದ ಬಿಡಿಸಿದರು. ಅವರನ್ನು ನ್ಯಾಯದಂತೆ ರಥದಿಂದ ಬಿಡಿಸಿ ಅನಂತರ ಅವರನ್ನು ಕುರಿತು ಸ್ನಿಗ್ಧಗಂಭೀರವಾದ, ಅತ್ಯಂತ ಪ್ರಸನ್ನವಾದ ತಮ್ಮ ವಾಣಿಯಿಂದ ನಿಮಗೆ ಶ್ರೇಷ್ಠವಾದ ವರವನ್ನು ಕೊಡುವೆನು ಎಂದು ಹೇಳಿದರು.

ಸುಕುಮಾರೌ ಚ ತೌ ವಿದ್ವಾನ್ ಕರಾಭ್ಯಾಂ ಮುನಿಸತ್ತಮಃ ।
ಪಸ್ಪರ್ಶಾಮೃತಕಲ್ಪಾಭ್ಯಾಂ ಸ್ನೇಹಾದ್ ಭರತಸತ್ತಮ ॥೫೨॥

ಎಲೈ ಭರತಶ್ರೇಷ್ಠನೇ, ಅವರಿಬ್ಬರೂ ಸುಕುಮಾರಶರೀರರೆಂದು ತಿಳಿದ ಆ ಮುನಿಶ್ರೇಷ್ಠರು ತಮ್ಮ ಎರಡು ಕೈಗಳಿಂದಲೂ ಅವರಿಬ್ಬರನ್ನು ಸ್ನೇಹದಿಂದ ಸ್ಪರ್ಶಿಸಿದರು.

ಅಥಾಬ್ರವೀನ್ನೃಪೋ ವಾಕ್ಯಂ ಶ್ರಮೋ ನಾಸ್ತ್ಯಾವಯೋರಿಹ ।
ವಿಶ್ರಾಂತೌ ಸ್ವಃ ಪ್ರಭಾವಾತ್ ತೇ ಧ್ಯಾನೇನೈವೇತಿ ಭಾರ್ಗವ ॥೫೩॥

ಆಗ ರಾಜನು ಋಷಿಗಳನ್ನು ಕುರಿತು- 'ಎಲೈ ಭಾರ್ಗವರೇ, ನಮಗೆ ಈಗ ಯಾವ ಶ್ರಮವೂ ಇಲ್ಲ. ನಿಮ್ಮ ಸಾಮರ್ಥ್ಯದಿಂದ ಮತ್ತು ಧ್ಯಾನದಿಂದ (ನಮಗೆ ಶುಭವನ್ನು ಬಯಸುವುದರಿಂದ) ನಾವು ಶ್ರಮರಹಿತರಾಗಿದ್ದೇವೆ' ಎಂದು ಹೇಳಿದನು.

ಅಥ ತೌ ಭಗವಾನ್ ಪ್ರಾಹ ಪ್ರಹೃಷ್ಟಶ್ಚ್ಯವನಸ್ತದಾ ।
ನ ವೃಥಾ ವ್ಯಾಹೃತಂ ಪೂರ್ವಂ ಯನ್ಮಯಾ ತದ್ಭವಿಷ್ಯತಿ ॥೫೪॥

ರಮಣೀಯಃ ಸಮುದ್ದೇಶೋ ಗಂಗಾತೀರಮಿದಂ ಶುಭಮ್ ।
ಕಂಚಿತ್ಕಾಲಂ ವ್ರತಪರೋ ನಿವತ್ಸ್ಯಾಮೀಹ ಪಾರ್ಥಿವ ॥೫೫॥

ಆಗ ಪೂಜ್ಯರಾದ ಚ್ಯವನರು ಸಂತೋಷದಿಂದ ಕೂಡಿದವರಾಗಿ ಅವರನ್ನು ಕುರಿತು- 'ನಾನು ಆಡಿದ ಮಾತು ಎಂದೂ ವ್ಯರ್ಥವಾಗುವುದಿಲ್ಲ. ಇದು ರಮಣೀಯವಾದ, ಪವಿತ್ರವಾದ ಗಂಗಾತೀರ. ಎಲೈ ರಾಜನೇ, ಇನ್ನು ಕೆಲವು ಕಾಲದವರೆಗೆ ಇಲ್ಲಿ ವ್ರತನಿಷ್ಠನಾಗಿ ವಾಸ ಮಾಡುವೆನು ಎಂದು ಹೇಳಿದರು.

ಗಮ್ಯತಾಂ ಸ್ವಪುರಂ ಪುತ್ರ ವಿಶ್ರಾಂತಃ ಪುನರೇಷ್ಯಸಿ ।
ಇಹಸ್ಥಂ ಮಾಂ ಸಭಾರ್ಯಸ್ತ್ವಂ ದ್ರಷ್ಟಾಸಿ ಶ್ವೋ ನರಾಧಿಪ ॥೫೬॥

ಎಲೈ ಪುತ್ರನೇ, ನಿನ್ನ ಪಟ್ಟಣಕ್ಕೆ ಹಿಂದಿರುಗು. ನೀನು ವಿಶ್ರಾಂತಿಯನ್ನು ಪಡೆದು ಪುನಃ ಇಲ್ಲಿಗೆ ಬರುವಿ. ಎಲೈ ರಾಜನೇ, ನಾಳೆಯ ದಿವಸ ನೀನು ನಿನ್ನ ಪತ್ನಿಯ ಜೊತೆಯಲ್ಲಿ ಇಲ್ಲಿಗೆ ಬಂದು ನನ್ನನ್ನು ನೋಡುವಿ.

ನ ಚ ಮನ್ಯುಸ್ತ್ವಯಾ ಕಾರ್ಯಃ ಶ್ರೇಯಸ್ತೇ ಸಮುಪಸ್ಥಿತಮ್ ।
ಯತ್ಕಾಂಕ್ಷಿತಂ ಹೃದಿಸ್ಥಂ ತೇ ತತ್ಸರ್ವಂ ಸಂಭವಿಷ್ಯತಿ ॥೫೭॥

ನೀನು ಕೋಪವನ್ನು ಮಾಡಬೇಡ. ನಿನಗೆ ಶ್ರೇಯಸ್ಸು ಉಂಟಾಗಲಿದೆ. ನಿನ್ನ ಮನಸ್ಸಿನಲ್ಲಿ ಬಯಸಿದುದೆಲ್ಲಾ ನಿನಗೆ ಸಿದ್ಧಿಸುತ್ತದೆ' ಎಂದು ಹೇಳಿದರು.

ಇತ್ಯೇವಮುಕ್ತಃ ಕುಶಿಕಃ ಪ್ರಹೃಷ್ಟೇನಾಂತರಾತ್ಮನಾ ।
ಪ್ರೋವಾಚ ಮುನಿಶಾರ್ದೂಲಮಿದಂ ವಚನಮರ್ಥವತ್ ॥೫೮॥

ಹೀಗೆ ಹೇಳಲ್ಪಟ್ಟ ಕುಶಿಕನು ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಆ ಮುನಿಶ್ರೇಷ್ಠರನ್ನು ಕುರಿತು ಅರ್ಥಭರಿತವಾದ ಈ ಮಾತನ್ನು ಆಡಿದನು.

ಕುಶಿಕಃ

ನ ಮೇ ಮನ್ಯುರ್ಮಹಾಭಾಗ ಪೂತೋಽಸ್ಮಿ ಭಗವಂಸ್ತ್ವಯಾ ।
ನ ಮೇ ಮನ್ಯುರ್ಧೂತಪಾಪ್ಮಾ ತಾರಿತಃ ಸ್ವಕುಲೇನ ಮೇ ॥೫೯॥

ಸಂವೃತ್ತೌ ಯೌವನಸ್ಥೌ ಶ್ವೋ ವಪುಷ್ಮಂತೌ ಬಲಾನ್ವಿತೌ ॥೬೦॥

ಕುಶಿಕ– ಮಹಾನುಭಾವರೇ, ನನಗೆ ಕೋಪವಿಲ್ಲ. ಪೂಜ್ಯರೇ, ನಾನು ಪವಿತ್ರನಾಗಿದ್ದೇನೆ. ಪಾಪಗಳನ್ನು ಕಳೆದುಕೊಂಡಿದ್ದೇನೆ. ನನ್ನ ಕುಲವು ನಿಮ್ಮಿಂದ

ಉದ್ಧರಿಸಲ್ಪಟ್ಟಿದೆ. ನಾವು ಯೌವನಸ್ಥರೂ, ಪೂರ್ಣ ಆರೋಗ್ಯವಂತರೂ, ಒಳ್ಳೆಯ ಶರೀರ ಮತ್ತು ಬಲವುಳ್ಳವರೂ ಆಗಿದ್ದೇವೆ.

ಪ್ರತೋದೇನ ವ್ರಣಾ ಯೇ ಮೇ ಸಭಾರ್ಯಸ್ಯ ಕೃತಾಸ್ತ್ವಯಾ ।
ತಾನ್ನ ಪಶ್ಯಾಮಿ ಗಾತ್ರೇಷು ಸ್ವಸ್ಥೋಽಸ್ಮಿ ಸಹ ಭಾರ್ಯಯಾ ॥೬೧॥

ನೀವು ಪತ್ನೀ ಸಹಿತನಾದ ನನಗೆ ಚಾವಟಿಯಿಂದ ಹೊಡೆದ ವ್ರಣಗಳು ಈಗ ಶರೀರದಲ್ಲಿ ಕಾಣಿಸುತ್ತಿಲ್ಲ. ನಾನು ಪತ್ನಿಯಿಂದ ಒಡಗೂಡಿ ಸುಖವಾಗಿದ್ದೇನೆ.

ಇಮಾಂ ಚ ದೇವೀಂ ಪಶ್ಯಾಮಿ ಮುನೇ ದಿವ್ಯಾಪ್ಸರೋಪಮಾಮ್ ।
ಶ್ರಿಯಾ ಪರಮಯಾ ಯುಕ್ತಾಂ ಯಥಾದೃಷ್ಟಾ ಮಯಾ ಪುರಾ ॥೬೨॥

ಎಲೈ ಋಷಿಗಳೇ, ಈ ನನ್ನ ರಾಣಿಯು ದಿವ್ಯ ಅಪ್ಸರೆಯಂತೆ ಇರುವುದನ್ನು ನೋಡುತ್ತಿದ್ದೇನೆ. ನಾನು ಹಿಂದೆ ನೋಡಿದಂತೆ ಅವಳು ಶ್ರೇಷ್ಠವಾದ ಕಾಂತಿಯಿಂದ ಕೂಡಿದವಳಾಗಿದ್ದಾಳೆ.

ತವ ಪ್ರಸಾದಾತ್ಸಂವೃತ್ತಮಿದಂ ಸರ್ವಂ ಮಹಾಮುನೇ ।
ನೈತಚ್ಚಿತ್ರಂ ತು ಭಗವಂಸ್ತ್ವಯಿ ಸತ್ಯಪರಾಕ್ರಮ ॥೬೩॥

ಎಲೈ ಮಹರ್ಷಿಗಳೇ, ಇವೆಲ್ಲವೂ ನಿಮ್ಮ ಅನುಗ್ರಹದಿಂದ ಉಂಟಾದುದು. ಪೂಜ್ಯರೇ, ಸತ್ಯಪರಾಕ್ರಮವುಳ್ಳವರೇ ನಿಮ್ಮಲ್ಲಿ ಇದು ಯಾವುದೂ ಆಶ್ಚರ್ಯಕರವಲ್ಲ' ಎಂದು ಹೇಳಿದನು.

ಭೀಷ್ಮಃ

ಇತ್ಯುಕ್ತಃ ಪ್ರತ್ಯುವಾಚೇದಂ ಚ್ಯವನಃ ಕುಶಿಕಂ ತದಾ ।
ಆಗಚ್ಛೇಥಾಃ ಸಭಾರ್ಯಶ್ಚ ತ್ವಮಿಹೇತಿ ನರಾಧಿಪ ॥೬೪॥

ಭೀಷ್ಮ- ರಾಜನು ಹೀಗೆ ಹೇಳಿದಾಗ ಚ್ಯವನರು ಅವನನ್ನು ಕುರಿತು- 'ಎಲೈ ರಾಜನೇ, ನಾಳೆಯ ದಿವಸ ನೀನು ನಿನ್ನ ಪತ್ನಿಯ ಜೊತೆಯಲ್ಲಿ ಬಾ' ಎಂದು ಹೇಳಿದರು.

ಇತ್ಯುಕ್ತಃ ಸಮನುಜ್ಞಾತೋ ರಾಜರ್ಷಿರಭಿವಾದ್ಯ ತಮ್ ।
ಪ್ರಯಯೌ ವಪುಷಾ ಯುಕ್ತೋ ನಗರಂ ದೇವರಾಜವತ್ ॥೬೫॥

ಹೀಗೆ ಹೇಳಿ ಅವರ ಅನುಮತಿಯನ್ನು ಪಡೆದ ರಾಜರ್ಷಿಯಾದ ಕುಶಿಕನು ಅವರಿಗೆ ನಮಸ್ಕಾರವನ್ನು ಮಾಡಿ ಬೆಳಗುತ್ತಿದ್ದಂತಹ ತನ್ನ ಶರೀರದಿಂದ ಯುಕ್ತನಾಗಿ ಇಂದ್ರನಂತೆ ನಗರವನ್ನು ಪ್ರವೇಶಿಸಿದನು.

ತತ ಏನಮುಪಾಜಗ್ಮುರಮಾತ್ಯಾಃ ಸಪುರೋಹಿತಾಃ ।
ಬಲಸ್ಥಾ ಗಣಿಕಾಯುಕ್ತಾಃ ಸರ್ವಾಃ ಪ್ರಕೃತಯಸ್ತಥಾ ॥೬೬॥

ಆಗ ಅವನ ಅಮಾತ್ಯರೂ, ಪುರೋಹಿತರೂ, ಸೈನಿಕರೂ, ಗಣಿಕೆಯರೂ, ಎಲ್ಲಾ ಪ್ರಜೆಗಳೂ ಅವನ ಸಮೀಪಕ್ಕೆ ಬಂದರು.

ತೈರ್ವೃತಃ ಕುಶಿಕೋ ರಾಜಾ ಶ್ರಿಯಾ ಪರಮಯಾ ಜ್ವಲನ್ ।
ಪ್ರವಿವೇಶ ಪುರಂ ಹೃಷ್ಟಃ ಪೂಜ್ಯಮಾನೋಽಥ ಬಂದಿಭಿಃ ॥೬೭॥

ಅವರಿಂದ ಸುತ್ತುವರಿಯಲ್ಪಟ್ಟ ಕುಶಿಕರಾಜನು ಬಂದಿಗಳಿಂದ ಪೂಜಿಸಲ್ಪಡುತ್ತಾ ಸಂತೋಷದಿಂದ ತನ್ನ ಪಟ್ಟಣವನ್ನು ಪ್ರವೇಶಿಸಿದನು.

ತತಃ ಪ್ರವಿಶ್ಯ ನಗರಂ ಕೃತ್ವಾ ಸರ್ವಾಹ್ನಿಕಕ್ರಿಯಾಃ ।
ಭುಕ್ತ್ವಾ ಸಭಾರ್ಯೋ ರಜನೀಮುವಾಸ ಸ ಮಹೀಪತಿಃ ॥೬೮॥

ರಾಜನು ನಗರವನ್ನು ಪ್ರವೇಶಿಸಿ ಹಗಲಲ್ಲಿ ಮಾಡಬೇಕಾದ ಎಲ್ಲಾ ಕಾರ್ಯಗಳನ್ನೂ ಮಾಡಿ ಭೋಜನವನ್ನು ಮಾಡಿ ಪತ್ನಿಯ ಜೊತೆಯಲ್ಲಿ ರಾತ್ರಿಯನ್ನು ಕಳೆದನು.

ತತಸ್ತು ತೌ ನವಮಭಿವೀಕ್ಷ್ಯ ಯೌವನಂ
ಪರಸ್ಪರಂ ವಿಗತಜರಾವಿವಾಮರೌ ।
ನನಂದತುಃ ಶಯನಗತೌ ವಪುರ್ಧರೌ
ಶ್ರಿಯಾ ಯುತೌ ದ್ವಿಜವರದತ್ತಯಾ ತಯಾ ॥೬೯॥

ಆಗ ಶಯನಗತರಾದ ಆ ರಾಜದಂಪತಿಗಳು ಒಳ್ಳೆಯ ದೇಹವನ್ನು ಹೊಂದಿದವರಾಗಿ ಹೊಸದಾದ ಯೌವನವನ್ನು ತಮ್ಮ ಶರೀರದಲ್ಲಿ ಕಾಣುತ್ತಾ ಜರೆಯಿಲ್ಲದ ಅಮರರಂತೆ ಋಷಿಶ್ರೇಷ್ಠರು ಕೊಟ್ಟ ವರದಿಂದ ಕಾಂತಿಯುಕ್ತರಾಗಿ ರಾತ್ರಿಯನ್ನು ಕಳೆದರು.

ಸ ಚಾಪ್ಯೃಷಿರ್ಭೃಗುಕುಲಕೀರ್ತಿವರ್ಧನಃ
ತಪೋಧನೋ ವನಮಭಿರಾಮಮೃದ್ಧಿಮತ್ ।
ಮನೀಷಯಾ ಬಹುವಿಧರತ್ನಭೂಷಿತಂ
ಸಸರ್ಜ ಯನ್ನಾಸ್ತಿ ಶತಕ್ರತೋರಪಿ ॥೭೦॥

ಭೃಗುಕುಲ ಕೀರ್ತಿವರ್ಧನರಾದ, ತಪೋಧನರಾದ ಚ್ಯವನ ಋಷಿಗಳೂ ಸಹ ಸಹಜವಾಗಿ ಸುಂದರವಾಗಿ ವೃದ್ಧಿಯಿಂದ ಕೂಡಿದ ಆ ವನವನ್ನು ತಮ್ಮ ಜ್ಞಾನ ಶಕ್ತಿಯಿಂದ ಇಂದ್ರನಿಗೂ ಇರದಂತಹ ಬಹುವಿಧ ರತ್ನಗಳಿಂದ ಭೂಷಿತವನ್ನಾಗಿ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಚ್ಯವನಕುಶಿಕಸಮಾಗಮೋ ನಾಮ
ತ್ರ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ನಾಲ್ಕನೆಯ ಅಧ್ಯಾಯ

ಪ್ರಾತಃಕಾಲದಲ್ಲಿ ರಾಜನಿಂದ ಚ್ಯವನರ ದರ್ಶನ. ವನದರ್ಶನ ಮತ್ತು ವಿಸ್ಮಯ.

ಭೀಷ್ಮಃ

ತತಃ ಸ ರಾಜಾ ರಾತ್ರ್ಯಂತೇ ಪ್ರತಿಬುದ್ಧೋ ಮಹಾಮನಾಃ ।
ಕೃತಪೂರ್ವಾಹ್ಣಿಕಃ ಪ್ರಾಯಾತ್ ಸಭಾರ್ಯಸ್ತದ್ವನಂ ಪ್ರತಿ ॥೧॥

ಭೀಷ್ಮ- ಅನಂತರ ಧೈರ್ಯಶಾಲಿಯಾದ ರಾಜನು ರಾತ್ರಿಯು ಕಳೆಯುತ್ತಿರಲು ಎದ್ದು ಪೂರ್ವಾಹ್ಣಿಕ ಕ್ರಿಯೆಗಳನ್ನು ಮಾಡಿ, ಪತ್ನಿಯ ಜೊತೆಯಲ್ಲಿ ಆ ವನಕ್ಕೆ ಹೊರಟನು.

ತತೋ ದದರ್ಶ ನೃಪತಿಃ ಪ್ರಾಸಾದಂ ಸರ್ವಕಾಂಚನಮ್ ।
ಮಣಿಸ್ತಂಭಸಹಸ್ರಾಢ್ಯಂ ಗಂಧರ್ವನಗರೋಪಮಮ್ ।
ತತ್ರ ದಿವ್ಯಾನಭಿಪ್ರಾಯಾನ್ ದದರ್ಶ ಕುಶಿಕಸ್ತದಾ ॥೨॥

ಆಗ ರಾಜನು ಸರ್ವಕಾಂಚನಮಯವಾದ, ಸಹಸ್ರ ಮಣಿಸ್ತಂಭಗಳಿಂದ ಕೂಡಿದ, ಗಂಧರ್ವನಗರ ಸದೃಶವಾದ, ದಿವ್ಯವಾದ ವಸ್ತುಗಳನ್ನು ಹೊಂದಿದ ಪ್ರಾಸಾದವನ್ನು ನೋಡಿದನು.

ಪರ್ವತಾನ್ ರಮ್ಯಸಾನೂಂಶ್ಚ ನಳಿನೀಶ್ಚ ಸಪಂಕಜಾಃ ।
ಚಿತ್ರಶಾಲಾಶ್ಚ ವಿವಿಧಾಸ್ತೋರಣಾನಿ ಚ ಭಾರತ ।
ಶಾದ್ವಲೋಪಚಿತಾಂ ಭೂಮಿಂ ತಥಾ ಕಾಂಚನಕುಟ್ಟಿಮಾಮ್ ॥೩॥

ಸಹಕಾರಾನ್ ಪ್ರಫುಲ್ಲಾಂಶ್ಚ ಕೇತಕೋದ್ದಾಲಕಾನ್ ಧವಾನ್ ।
ಅಶೋಕಾನ್ ಮುಚುಕುಂದಾಂಶ್ಚ ಫುಲ್ಲಾಂಶ್ಚೈವಾತಿಮುಕ್ತಕಾನ್ ॥೪॥

ಚಂಪಕಾಂಸ್ತಿಲಕಾನ್ ಭವ್ಯಾನ್ ಪನಸಾನ್ ವಂಜುಲಾನಪಿ ।
ಪುಷ್ಪಿತಾನ್ ಕರ್ಣಿಕಾರಾಂಶ್ಚ ತತ್ರ ತತ್ರ ದದರ್ಶ ಹ ॥೫॥

ಎಲೈ ಭಾರತನೇ, ರಮ್ಯ ಶಿಖರಗಳಿಂದ ಕೂಡಿದ ಸಣ್ಣ ಸಣ್ಣ ಪರ್ವತಗಳು, ಪದ್ಮ ಸರೋವರಗಳು, ಚಿತ್ರಶಾಲೆಗಳು, ವಿವಿಧವಾದ ತೋರಣಗಳು, ಮೃದುವಾದ ಭೂಮಿ, ಸುವರ್ಣಮಯವಾದ ವೇದಿಕೆಗಳು, ಅರಳಿದ ಚೂತವೃಕ್ಷಗಳು, ಕೇತಕ, ಉದ್ದಾಲಕ ಮತ್ತು ಧವ ವೃಕ್ಷಗಳು, ಅಶೋಕ ವೃಕ್ಷಗಳು, ಮುಚುಕುಂದ ವೃಕ್ಷಗಳು, ಹೂ ಅರಳಿದ ವೃಕ್ಷಗಳು, ಚಂಪಕ, ತಿಲಕ, ಭವ್ಯ, ಪನಸ, ವಂಜುಲ ವೃಕ್ಷಗಳು, ಪುಷ್ಪಿತವಾದ ಕರ್ಣಿಕಾರ ವೃಕ್ಷಗಳು- ಇವುಗಳನ್ನು ಅಲ್ಲಲ್ಲಿ ಅವನು ನೋಡಿದನು.

ಶ್ಯಾಮಾಂ ವಾರಣಪುಷ್ಪೀಂ ಚ ತಥಾಷ್ಟಾಪದಿಕಾಂ ಲತಾಮ್ ।
ತತ್ರ ತತ್ರ ಪರಿಕ್ಲೃಪ್ತಾಂ ದದರ್ಶ ಸ ಮಹೀಪತಿಃ ॥೬॥

ಕಪ್ಪು ಬಣ್ಣದ ವಾರಣ ಪುಷ್ಪಿ ಲತೆಯನ್ನು, ಅಷ್ಟಪಾದಿಕಾ ಲತೆಗಳನ್ನು ರಾಜನು ಅಲ್ಲಲ್ಲಿ ನೋಡಿದನು.

ವೃಕ್ಷಾನ್ ಪದ್ಮೋತ್ಪಲಧರಾನ್ ಸರ್ವರ್ತುಕುಸುಮಾಂಸ್ತಥಾ ।
ವಿಮಾನಚ್ಛಂದಕಾಂಶ್ಚಾಪಿ ಪ್ರಾಸಾದಾನ್ ಪದ್ಮಸನ್ನಿಭಾನ್ ॥೭॥

ಶೀತಲಾನಿ ಚ ತೋಯಾನಿ ಕ್ವಚಿದುಷ್ಣಾನಿ ಭಾರತ ।
ಆಸನಾನಿ ವಿಚಿತ್ರಾಣಿ ಶಯನಪ್ರವರಾಣಿ ಚ ॥೮॥

ಪರ್ಯಂಕಾನ್ ಸರ್ವಸೌವರ್ಣಾನ್ ಪರಾರ್ಧ್ಯಾಸ್ತರಣಾಸ್ಕೃತಾನ್ ।
ಭಕ್ಷ್ಯಭೋಜ್ಯಮನಂತಂ ಚ ತತ್ರ ತತ್ರೋಪಕಲ್ಪಿತಮ್ ॥೯॥

ವಾಣೀವಾದಾಂಥುಕಾಂಶ್ಚಾಪಿ ಶಾರಿಕಾಭೃಂಗರಾಜಕಾನ್ ।
ಕೋಕಿಲಾಂಥತಪತ್ರಾಂಶ್ಚ ಕೋಯಷ್ಟಿಮಕಕುಕ್ಕುಟಾನ್ ॥೧೦॥

ಮಯೂರಾನ್ ಕುಕ್ಕುಟಾಂಶ್ಚಾಪಿ ಪುತ್ರಕಾನ್ ಜೀವಜೀವಕಾನ್ ।
ಚಕೋರಾನ್ ವಾನರಾನ್ ಹಂಸಾನ್ ಸಾರಸಾಂಶ್ಚಕ್ರಸಾಹ್ವಯಾನ್ ॥೧೧॥

ಸಮಂತತಃ ಪ್ರಣದಿತಾನ್ ದದರ್ಶ ಸುಮನೋಹರಾನ್ ।

ಪದ್ಮೋತ್ಪಲಗಳನ್ನು ಧರಿಸಿದ ವೃಕ್ಷಗಳು, ಎಲ್ಲ ಋತುಗಳಲ್ಲಿಯೂ ಪುಷ್ಪಿತವಾದ ವೃಕ್ಷಗಳು, ಎತ್ತರವಾದ ಪದ್ಮವರ್ಣೋಪೇತವಾದ ಪ್ರಾಸಾದಗಳು, ಶೀತಲವಾದ ಜಲ, ಕೆಲವು ಕಡೆ ಉಷ್ಣಜಲ, ವಿಚಿತ್ರವಾದ ಆಸನಗಳು ಮತ್ತು ಶ್ರೇಷ್ಠವಾದ ಶಯನಗಳು, ಪೂರ್ಣವಾಗಿ ಸುವರ್ಣಮಯವಾದ ಮಂಚಗಳು, ಬೆಲೆ ಬಾಳುವ ಹೊದಿಕೆಗಳು, ಅಲ್ಲಲ್ಲಿ ಕಲ್ಪಿತವಾದ ಅನೇಕ ಭಕ್ಷ್ಯ-ಭೋಜ್ಯಗಳು, ಮನುಷ್ಯರ ವಾಣಿಯಲ್ಲಿ ಮಾತನಾಡುವ ಗಿಣಿಗಳು, ಸಾರಿಕ ಮತ್ತು ಭೃಂಗರಾಜ ಪಕ್ಷಿಗಳು, ಕೋಕಿಲ, ಶತಪತ್ರ, ಕೋಯಷ್ಟಿ, ಮಕ, ಕುಕ್ಕುಟ ಪಕ್ಷಿಗಳು, ನವಿಲುಗಳು, ಕುಕ್ಕುಟ ಪ್ರಭೇದಗಳು, ಪುತ್ರಕಗಳು, ಚಕೋರಗಳು, ಕಪಿಗಳು, ಹಂಸಗಳು, ಸಾರಸ, ಚಕ್ರಸ ಪಕ್ಷಿಗಳು- ಎಲ್ಲ ಕಡೆಗಳಲ್ಲಿಯೂ ಮನೋಹರ ನಾದವನ್ನು ಮಾಡುತ್ತಿರುವ ಇವುಗಳೆಲ್ಲವನ್ನೂ ಅವನು ನೋಡಿದನು.

ಕ್ವಚಿದಪ್ಸರಸಾಂ ಸಂಘಾನ್ ಗಂಧರ್ವಾಣಾಂ ಚ ಪಾರ್ಥಿವ ॥೧೨॥

ಕಾಂತಾಭಿರಪರಾಂಸ್ತತ್ರ ಪರಿಷ್ವಕ್ತಾನ್ ದದರ್ಶ ಹ ।
ನ ದದರ್ಶ ಚ ತಾನ್ ಭೂಯೋ ದದರ್ಶ ಚ ಪುನರ್ನೃಪಃ ॥೧೩॥

ಗೀತಧ್ವನಿಂ ಸುಮಧುರಂ ತಥೈವಾಧ್ಯಯನಧ್ವನಿಮ್ ।
ಹಂಸಾನ್ ಸುಮಧುರಾಂಶ್ಚಾಪಿ ತತ್ರ ಶುಶ್ರಾವ ಪಾರ್ಥಿವಃ ॥೧೪॥

ಕೆಲವು ಕಡೆ ಅಪ್ಸರೆಯರ ಸಮೂಹವನ್ನೂ, ಕೆಲವು ಕಡೆ ಗಂಧರ್ವರ ಸಮೂಹವನ್ನೂ, ಕೆಲವು ಕಡೆ ತಮ್ಮ ಕಾಂತೆಯರಿಂದ ಆಲಿಂಗಿತರಾದ ಗಂಧರ್ವರನ್ನೂ ಅವನು ನೋಡಿದನು. ಅವನು ಪುನಃ ನೋಡುವಾಗ ಅದಾವುದೂ ಯಾವುದೂ ಕಾಣಲಿಲ್ಲ. ಅತ್ಯಂತ ಮೃದುವಾದ ಗೀತಧ್ವನಿಯನ್ನೂ, ವೇದಾಧ್ಯಯನ ಧ್ವನಿಯನ್ನೂ, ಹಂಸ ಧ್ವನಿಗಳನ್ನೂ ಅವನು ಕೇಳಿದನು.

ತಂ ದೃಷ್ಟ್ವಾತ್ಯದ್ಭುತಂ ರಾಜಾ ಮನಸಾ ಚಿಂತಯತ್ತದಾ ।
ಸ್ವಪ್ನೋಽಯಂ ಚಿತ್ತವಿಭ್ರಂಶ ಉತಾಹೋ ಸತ್ಯಮೇವ ತು ॥೧೫॥

ಆ ಅದ್ಭುತವನ್ನು ನೋಡಿ ರಾಜನು ಮನಸ್ಸಿನಲ್ಲಿ ಇದೇನು ಸ್ವಪ್ನವೋ ಅಥವಾ ನನ್ನ ಮನಸ್ಸಿನ ಭ್ರಾಂತಿಯೋ ಅಥವಾ ಸತ್ಯವೋ ಎಂದು ಚಿಂತಿಸಿದನು.

ಅಹೋ ಸಹ ಶರೀರೇಣ ಪ್ರಾಪ್ತೋಽಸ್ಮಿ ಪರಮಾಂ ಗತಿಮ್ ।
ಉತ್ತರಾನ್ ವಾ ಕುರೂನ್ ಪುಣ್ಯಾನಥ ವಾಪ್ಯಮರಾವತೀಮ್ ॥೧೬॥

ಅಥವಾ ನಾನು ಶರೀರ ಸಹಿತನಾಗಿ ಪರಮಗತಿಯನ್ನು ಹೊಂದಿದ್ದೇನೆಯೋ ಅಥವಾ ಪವಿತ್ರವಾದ ಉತ್ತರಕುರು ಖಂಡಕ್ಕೆ ಬಂದಿದ್ದೇನೆಯೋ ಅಥವಾ ಇಂದ್ರನ ನಗರವಾದ ಅಮರಾವತಿಗೆ ಬಂದಿದ್ದೇನೆಯೋ.

ಕಿಂ ನ್ವಿದಂ ಮಹದಾಶ್ಚರ್ಯಂ ಸಂಪಶ್ಯಾಮೀತ್ಯಚಿಂತಯತ್ ।
ಏವಂ ಸಂಚಿಂತಯನ್ನೇವ ದದರ್ಶ ಮುನಿಪುಂಗವಮ್ ॥೧೭॥

ಇದೇನು ಮಹದಾಶ್ಚರ್ಯವನ್ನು ನೋಡುತ್ತಿದ್ದೇನೆ ಎಂದು ಚಿಂತಿಸಿದನು. ಅವನು ಹಾಗೆ ಯೋಚಿಸುತ್ತಿರುವಾಗಲೇ ಮುನಿಶ್ರೇಷ್ಠರಾದ ಚ್ಯವನರನ್ನು ನೋಡಿದನು.

ತಸ್ಮಿನ್ ವಿಮಾನೇ ಸೌವರ್ಣೇ ಮಣಿಸ್ತಂಭಸಮಾಕುಲೇ ।
ಮಹಾರ್ಹೇ ಶಯನೇ ದಿವ್ಯೇ ಶಯಾನಂ ಭೃಗುನಂದನಮ್ ॥೧೮॥

ಅಲ್ಲಿ ಮಣಿಸ್ತಂಭಗಳಿಂದ ನಿರ್ಮಿತವಾದ, ಸುವರ್ಣಮಯವಾದ ಒಂದು ಉಪ್ಪರಿಗೆಯ ಮನೆಯಲ್ಲಿ ಬೆಲೆ ಬಾಳುವ ದಿವ್ಯಶಯನದಲ್ಲಿ ಮಲಗಿರುವ ಭೃಗು ನಂದನರನ್ನು ನೋಡಿದನು.

ತಮಭ್ಯಯಾತ್ ಪ್ರಹರ್ಷೇಣ ನರೇಂದ್ರಃ ಸಹ ಭಾರ್ಯಯಾ ।
ಅಂತರ್ಹಿತಸ್ತತೋ ಭೂಯಶ್ಚ್ಯವನಃ ಶಯನಂ ಚ ತತ್ ॥೧೯॥

ಬಹಳ ಹರ್ಷದಿಂದ ಕೂಡಿದ ರಾಜನು ತನ್ನ ಪತ್ನಿಯ ಜೊತೆಯಲ್ಲಿ ವೇಗದಿಂದ ಅವರ ಕಡೆಗೆ ಸಾಗಿದನು. ಆಗ ಪುನಃ ಚ್ಯವನರೂ ಆ ಶಯನವೂ ಅಂತರ್ಧಾನವನ್ನು ಹೊಂದಿದವು.

ತತೋಽನ್ಯಸ್ಮಿನ್ ವನೋದ್ದೇಶೇ ಪುನರೇವ ದದರ್ಶ ತಮ್ ।
ಕೌಶ್ಯಾಂ ಬೃಸ್ಯಾಂ ಸಮಾಸೀನಂ ಜಪಮಾನಂ ಮಹಾವ್ರತಮ್ ।
ಏವಂ ಯೋಗಬಲಾದ್ ವಿಪ್ರೋ ಮೋಹಯಾಮಾಸ ಪಾರ್ಥಿವಮ್ ॥

ಅನಂತರ ಆ ವನದ ಇನ್ನೊಂದು ಪ್ರದೇಶದಲ್ಲಿ ದರ್ಭಾಸನದಲ್ಲಿ ಕುಳಿತು ಜಪವನ್ನು ಮಾಡುತ್ತಿದ್ದ ಮಹಾವ್ರತರಾದ ಅವರನ್ನು ಪುನಃ ನೋಡಿದನು. ಹೀಗೆ ಬ್ರಹ್ಮರ್ಷಿಗಳಾದ ಚ್ಯವನರು ಯೋಗಬಲದಿಂದ ರಾಜನನ್ನು ಮರುಳು ಮಾಡಿದರು.

ಕ್ಷಣೇನ ತದ್ವನಂ ಚೈವ ತೇ ಚೈವಾಪ್ಸರಸಾಂ ಗಣಾಃ ।
ಗಂಧರ್ವಾಃ ಪಾದಪಾಶ್ಚೈವ ಸರ್ವಮಂತರಧೀಯತ ॥೨೧॥

ಇನ್ನೊಂದು ಕ್ಷಣದಲ್ಲಿ ಆ ವನ, ಅಪ್ಸರೆಯ ಸಮೂಹಗಳು, ಗಂಧರ್ವರು, ವೃಕ್ಷಗಳು ಎಲ್ಲವೂ ಅಂತರ್ಧಾನವನ್ನು ಹೊಂದಿದವು.

ಗಂಗಾಕೂಲವನಂ ಚೈವ ದದರ್ಶ ಸ ಯಥಾಪುರಮ್ ।
ನಿಃಶಬ್ದಮಭವಚ್ಚಾಪಿ ಗಂಗಾಕೂಲಂ ಪುನರ್ನೃಪ ।
ಕುಶವಲ್ಮೀಕಭೂಯಿಷ್ಠಂ ಬಭೂವ ಚ ಯಥಾ ಪುರಾ ॥೨೨॥

ಮೊದಲಿನಂತೆಯೇ ಇದ್ದ ಗಂಗಾತೀರದ ವನವನ್ನು ಅವನು ನೋಡಿದನು. ಎಲೈ ರಾಜನೇ, ಆ ಗಂಗಾತೀರವು ಮೊದಲಿನಂತೆ ಕುಶವಲ್ಮೀಕಗಳಿಂದ ನಿಬಿಡವಾಗಿದ್ದು ನಿಶ್ಶಬ್ದವಾಯಿತು.

ತತಃ ಸ ರಾಜಾ ಕುಶಿಕಃ ಸಭಾರ್ಯಸ್ತೇನ ಕರ್ಮಣಾ ।
ವಿಸ್ಮಯಂ ಪರಮಂ ಪ್ರಾಪ್ತಸ್ತದ್ ದೃಷ್ಟ್ವಾ ಮಹದದ್ಭುತಮ್ ॥೨೩॥

ಆಗ ಪತ್ನೀ ಸಹಿತನಾದ ಕುಶಿಕರಾಜನು ಆ ಮಹದದ್ಭುತವಾದ ದೃಶ್ಯಗಳನ್ನು ನೋಡಿ ಋಷಿಗಳ ಕರ್ಮದಿಂದ ಬಹಳ ವಿಸ್ಮಯವನ್ನು ಹೊಂದಿದನು.

ತತಃ ಪ್ರೋವಾಚ ಕುಶಿಕೋ ಭಾರ್ಯಾಂ ಹರ್ಷಸಮನ್ವಿತಃ ।
ಪಶ್ಯ ಭದ್ರೇ ಯಥಾ ಭಾವಾಶ್ಚಿತ್ರಾ ದೃಷ್ಟಾಃ ಸುದುರ್ಲಭಾಃ ॥೨೪॥

ಪ್ರಸಾದಾದ್ ಭೃಗುಮುಖ್ಯಸ್ಯ ಕಿಮನ್ಯತ್ರ ತಪೋಬಲಾತ್ ।
ತಪಸಾ ತದವಾಪ್ಯಂ ಹಿ ಯನ್ನ ಶಕ್ಯಂ ಮನೋರಥೈಃ ॥೨೫॥

ದಿವ್ಯಾಭಿಪ್ರಾಯಸಂಯುಕ್ತಾನ್ ಪ್ರಾಸಾದಾದೀನ್ ವಿಲೋಕಯ ।
ತ್ರೈಲೋಕ್ಯರಾಜ್ಯಾದಪಿ ಹಿ ತಪ ಏವ ವಿಶಿಷ್ಯತೇ ।
ತಪಸಾ ಹಿ ಸುತಪ್ತೇನ ಕ್ರೀಡತ್ಯೇಷ ತಪೋಧನಃ ॥೨೬॥

ಆಗ ಕುಶಿಕನು ಹರ್ಷದಿಂದ ಕೂಡಿ ತನ್ನ ಪತ್ನಿಯನ್ನು ಕುರಿತು ಎಲೌ ಶುಭಸ್ವರೂಪಳೇ, ದುರ್ಲಭವಾದ ಮತ್ತು ವಿಚಿತ್ರವಾದ ಪದಾರ್ಥಗಳನ್ನು ನಾವು ನೋಡಿದುದನ್ನು ಗಮನಿಸು. ಭೃಗುಶ್ರೇಷ್ಠರಾದ ಚ್ಯವನರ ತಪೋಬಲ ಮತ್ತು ಅನುಗ್ರಹವನ್ನು ಬಿಟ್ಟು ಇದಕ್ಕೆ ಬೇರೆ ಕಾರಣವೇನಿದೆ? ಯಾವುದನ್ನು ಮನೋರಥಗಳಿಂದ ಹೊಂದಲು ಸಾಧ್ಯವಿಲ್ಲವೋ ಅದನ್ನು ತಪಸ್ಸಿನಿಂದ ಪಡೆಯಬಹುದು. ದಿವ್ಯ ಯೋಜನೆಗಳಿಂದ ಕೂಡಿದ ಪ್ರಾಸಾದಗಳನ್ನು ನೋಡು. ಮೂರು ಲೋಕದ ಆಧಿಪತ್ಯಕ್ಕಿಂತಲೂ ತಪಸ್ಸೇ ಶ್ರೇಷ್ಠವಾದುದು. ತಪೋಧನರಾದ ಚ್ಯವನರು ತಮ್ಮ ಶ್ರೇಷ್ಠವಾದ ತಪಸ್ಸಿನ ಬಲದಿಂದ ಆಟವಾಡುತ್ತಿದ್ದಾರೆ.

ಅಹೋ ಪ್ರಭಾವೋ ಬ್ರಹ್ಮರ್ಷೇಶ್ಚ್ಯವನಸ್ಯ ಮಹಾತ್ಮನಃ ।
ಇಚ್ಛನ್ನೇಷ ತಪೋವೀರ್ಯಾದನ್ಯಾಲ್ಲೋಕಾನ್ ಸೃಜೇದಪಿ ॥೨೭॥

ಬ್ರಾಹ್ಮಣಾ ಏವ ಜಾಯೇರನ್ ಪುಣ್ಯವಾಗ್ಬುದ್ಧಿಕರ್ಮಣಃ ।
ಉತ್ಸಹೇದಿಹ ಕರ್ತುಂ ಹಿ ಕೋಽನ್ಯೋ ವೈ ಚ್ಯವನಾದೃತೇ ॥೨೮॥

ಬ್ರಾಹ್ಮಣ್ಯಂ ದುರ್ಲಭಂ ಲೋಕೇ ರಾಜ್ಯಂ ಹಿ ಸುಲಭಂ ನರೈಃ ।
ಬ್ರಾಹ್ಮಣ್ಯಸ್ಯ ಪ್ರಭಾವಾದ್ಧಿ ರಥೇ ಯುಕ್ತೌ ಸ್ವಧುರ್ಯವತ್ ॥೨೯॥

ಮಹಾತ್ಮರಾದ ಬ್ರಹ್ಮರ್ಷಿಗಳಾದ ಚ್ಯವನರ ಪ್ರಭಾವವು ಎಂತಹದು! ಅವರು ಬಯಸಿದರೆ ತಮ್ಮ ತಪಸ್ಸಿನ ಪ್ರಭಾವದಿಂದ ಬೇರೆ ಲೋಕಗಳನ್ನೇ ಸೃಷ್ಟಿಸಿಯಾರು! ಬ್ರಾಹ್ಮಣರೇ ಪವಿತ್ರವಾದ ವಾಗ್ಬುದ್ಧಿ-ಕರ್ಮಗಳಿಂದ ಜನಿಸುವರು. ಚ್ಯವನರನ್ನು ಬಿಟ್ಟು ಬೇರೆ ಯಾವನು ಇಂತಹ ಕಾರ್ಯಗಳನ್ನು ಮಾಡಲು ಸಮರ್ಥನಾದಾನು? ಮನುಷ್ಯನು ರಾಜ್ಯವನ್ನು ಪಡೆಯುವುದು ಸುಲಭ. ಆದರೆ ಲೋಕದಲ್ಲಿ ಬ್ರಾಹ್ಮಣ್ಯವನ್ನು ಪಡೆಯುವುದು ಬಹಳ ಕಷ್ಟವಾದುದು. ಬ್ರಾಹ್ಮಣ್ಯದ ಪ್ರಭಾವದಿಂದಲೇ ನಾವಿಬ್ಬರೂ ರಥದಲ್ಲಿ ಅಶ್ವಗಳಂತೆ ಹೂಡಲ್ಪಟ್ಟೆವು (ಎಂದು ಚಿಂತಿಸಿದನು).

ಇತ್ಯೇವಂ ಚಿಂತಯಾನಃ ಸ ವಿದಿತಶ್ಚ್ಯವನಸ್ಯ ವೈ ।
ಸಂಪ್ರೇಕ್ಷ್ಯೋವಾಚ ಸ ನೃಪಂ ಕ್ಷಿಪ್ರಮಾಗಮ್ಯತಾಮಿತಿ ॥೩೦॥

ಹೀಗೆ ಚಿಂತಿಸುತ್ತಿರುವ ಅವನನ್ನು ತಿಳಿದು ಚ್ಯವನರು ಅವನನ್ನು ನೋಡಿ ಅವನನ್ನು ಕುರಿತು ಬೇಗ ಇಲ್ಲಿಗೆ ಬಾ ಎಂದು ಹೇಳಿದರು.

ಇತ್ಯುಕ್ತಃ ಸಹಭಾರ್ಯಸ್ತಮಭ್ಯಗಚ್ಛನ್ ಮಹಾಮುನಿಮ್ ।
ಶಿರಸಾ ವಂದನೀಯಂ ತಮವಂದತ ಸ ಪಾರ್ಥಿವಃ ॥೩೧॥

ಋಷಿಗಳಿಂದ ಹೀಗೆ ಹೇಳಲ್ಪಟ್ಟ ಕುಶಿಕನು ಪತ್ನೀ ಸಹಿತನಾಗಿ ಶೀಘ್ರವಾಗಿ ಆ ಮಹರ್ಷಿಗಳ ಬಳಿಗೆ ಹೋಗಿ ನಮಸ್ಕಾರಕ್ಕೆ ಅರ್ಹರಾದ ಅವರಿಗೆ ಶಿರಸಾ ಪ್ರಣಾಮವನ್ನು ಮಾಡಿದನು.

ತಸ್ಯಾಶಿಷಃ ಪ್ರಯುಜ್ಯಾಥ ಸ ಮುನಿಸ್ತಂ ನರಾಧಿಪಮ್ ।
ನಿಷೀದೇತ್ಯಬ್ರವೀದ್ಧೀಮಾನ್ ಸಾಂತ್ವಯನ್ ಪುರುಷರ್ಷಭ ॥೩೨॥

ಎಲೈ ಪುರುಷಶ್ರೇಷ್ಠನೇ, ಆ ಮೇಧಾವಿಗಳಾದ ಋಷಿಗಳು ರಾಜನಿಗೆ ಆಶೀರ್ವಾದಗಳನ್ನು ಉಚ್ಚರಿಸಿ ಸಮಾಧಾನ ಪಡಿಸುತ್ತಾ ಕುಳಿತುಕೋ ಎಂದು ಹೇಳಿದರು.

ತತಃ ಪ್ರಕೃತಿಮಾಪನ್ನೋ ಭಾರ್ಗವೋ ನೃಪತೇ ನೃಪಮ್ ।
ಉವಾಚ ಶ್ಲಕ್ಷ್ಣಯಾ ವಾಚಾ ತರ್ಪಯನ್ನಿವ ಭಾರತ ॥೩೩॥

ಎಲೈ ರಾಜನೇ, ಭಾರತನೇ, ಅನಂತರ ಚ್ಯವನರು ತಮ್ಮ ಸ್ವಾಭಾವಿಕ ಸ್ಥಿತಿಗೆ ಬಂದವರಾಗಿ ರಾಜನನ್ನು ಕುರಿತು ಮಧುರವಾದ ಮಾತುಗಳಿಂದ ಹೀಗೆ ಹೇಳಿದರು.

ರಾಜನ್ ಸಮ್ಯಗ್ ಜಿತಾನೀಹ ಪಂಚ ಪಂಚಸು ಯತ್ತ್ವಯಾ ।
ಮನಃಷಷ್ಠಾನೀಂದ್ರಿಯಾಣಿ ಕೃಚ್ಛ್ರಾನ್ಮುಕ್ತೋಽಸಿ ತೇನ ವೈ ॥೩೪॥

ಎಲೈ ರಾಜನೇ, ನೀನು ಪಂಚೇಂದ್ರಿಯಗಳನ್ನು ಅವುಗಳ ವಿಷಯವಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳ ವಿಷಯದಲ್ಲಿ ಚೆನ್ನಾಗಿ ಜಯಿಸಿದ್ದೀಯೆ. ಮನಸ್ಸೇ ಮೊದಲಾದ ಆರು ಜ್ಞಾನೇಂದ್ರಿಯಗಳನ್ನು ಜಯಿಸಿದ್ದೀಯೆ. ಆ ಕಾರಣದಿಂದ ನೀನು ಕಷ್ಟಗಳಿಂದ ನಿರ್ಮುಕ್ತನಾಗಿರುವಿ.

ಸಮ್ಯಗಾರಾಧಿತಃ ಪುತ್ರ ತ್ವಯಾಽಹಂ ವದತಾಂ ವರ ।
ನ ಹಿ ತೇ ವೃಜಿನಂ ಕಿಂಚಿತ್ ಸುಸೂಕ್ಷ್ಮಮಪಿ ವಿದ್ಯತೇ ॥೩೫॥

ಎಲೈ ಪುತ್ರನೇ, ಮಾತನಾಡುವವರಲ್ಲಿ ಶ್ರೇಷ್ಠನೇ, ನೀನು ನನ್ನನ್ನು ಚೆನ್ನಾಗಿ ಆರಾಧಿಸಿದ್ದೀಯೆ. ನಿನ್ನಲ್ಲಿ ಅತ್ಯಂತ ಅಲ್ಪವಾದ ಪಾಪವೂ (ದೋಷವೂ) ಇಲ್ಲ.

ಅನುಜಾನೀಹಿ ಮಾಂ ರಾಜನ್ ಗಮಿಷ್ಯಾಮಿ ಯಥಾಗತಮ್ ।
ಪ್ರೀತೋಽಸ್ಮಿ ತವ ರಾಜೇಂದ್ರ ವರಶ್ಚ ಪ್ರತಿಗೃಹ್ಯತಾಮ್ ॥೩೬॥

ರಾಜನೇ, ನನಗೆ ಅನುಮತಿಯನ್ನು ಕೊಡು. ನಾನು ಬಂದಂತೆಯೇ ಹೊರಟು ಹೋಗುವೆನು. ರಾಜೇಂದ್ರನೇ, ಪ್ರಸನ್ನನಾಗಿದ್ದೇನೆ. ವರವನ್ನು ಕೇಳು (ಎಂದು ಹೇಳಿದರು).

ಕುಶಿಕಃ

ಅಗ್ನಿಮಧ್ಯಗತೇನೇದಂ ಭಗವತ್ಸನ್ನಿಧೌ ಮಯಾ ।
ವರ್ತಿತಂ ಭೃಗುಶಾರ್ದೂಲ ಯನ್ನ ದಗ್ಧೋಽಸ್ಮಿ ತದ್ಬಹು ॥೩೭॥

ಕುಶಿಕ– ಎಲೈ ಭೃಗುಶಾರ್ದೂಲರೇ, ಪೂಜ್ಯರಾದ ನಿಮ್ಮ ಸನ್ನಿಧಿಯಲ್ಲಿ ನಾನು ಅಗ್ನಿಯ ಮಧ್ಯದಲ್ಲಿ ಇದ್ದಂತೆ ಇದ್ದೆನು. ನಾನು ದಗ್ಧನಾಗದಿರುವುದು ದೊಡ್ಡ ಸಂಗತಿ.

ಏಷ ಏವ ವರೋ ಮುಖ್ಯಃ ಪ್ರಾಪ್ತೋ ಮೇ ಭೃಗುನಂದನ ।
ಯತ್ಪ್ರೀತೋಽಸಿ ಸಮಾಚಾರಾತ್ ಕುಲಂ ಪೂತಂ ಮಮಾನಘ ॥೩೮॥

ಎಲೈ ಭೃಗುನಂದನರೇ, ಅನಘರೇ, ನೀವು ನನ್ನ ಆಚಾರದಿಂದ ಪ್ರಸನ್ನರಾಗಿರುವುದೇ ನಾನು ಪಡೆದಿರುವ ದೊಡ್ಡ ವರ. ನನ್ನ ಕುಲವು ಪವಿತ್ರವಾಗಿದೆ.

ಏಷ ಮೇಽನುಗ್ರಹೋ ವಿಪ್ರ ಜೀವಿತೇ ಚ ಪ್ರಯೋಜನಮ್ ।
ಏತದ್ರಾಜ್ಯಫಲಂ ಚೈವ ತಪಶ್ಚೈತತ್ ಪರಂ ಮಮ ॥೩೯॥

ಎಲೈ ಬ್ರಾಹ್ಮಣರೇ, ನೀವು ಮಾಡಿದ ಈ ಅನುಗ್ರಹವು ನನ್ನ ಜೀವನದ ಫಲ. ಈ ರಾಜ್ಯರೂಪವಾದ ಫಲ, ನನ್ನ ತಪೋರೂಪವಾದ ಫಲ ಎಲ್ಲವೂ ನಿಮ್ಮ ಅನುಗ್ರಹದಿಂದಲೇ.

ಯದಿ ತು ಪ್ರೀತಿಮಾನ್ ವಿಪ್ರ ಮಯಿ ತ್ವಂ ಭೃಗುನಂದನ ।
ಅಸ್ತಿ ಮೇ ಸಂಶಯಃ ಕಶ್ಚಿತ್ತನ್ಮೇ ವ್ಯಾಖ್ಯಾತುಮರ್ಹಸಿ ॥೪೦॥

ಎಲೈ ಭೃಗುನಂದನರೇ, ಬ್ರಾಹ್ಮಣರೇ, ನನ್ನಲ್ಲಿ ನಿಮಗೆ ಪ್ರೀತಿ ಇದ್ದರೆ ನನಗೆ ಒಂದು ಸಂಶಯವಿದೆ. ಅದನ್ನು ನೀವು ಪರಿಹರಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಚ್ಯವನಕುಶಿಕಸಂವಾದೇ ಚ್ಯವನಾನುಭಾವದರ್ಶನಂ ನಾಮ ಚತುರಶೀತಿತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೈದನೆಯ ಅಧ್ಯಾಯ

ಚ್ಯವನರಿಂದ ಕುಶಿಕನಿಗೆ ಬ್ರಾಹ್ಮಣ್ಯ ವರಲಾಭ.

ಚ್ಯವನಃ

ವರಶ್ಚ ಗೃಹ್ಯತಾಂ ಮತ್ತೋ ಯಶ್ಚ ತೇ ಸಂಶಯೋ ಹೃದಿ ।
ತಂ ಚ ಬ್ರೂಹಿ ನರಶ್ರೇಷ್ಠ ಸರ್ವಂ ಸಂಪಾದಯಾಮಿ ತೇ ॥೧॥

ಚ್ಯವನ– ನನ್ನಿಂದ ಒಂದು ವರವನ್ನೂ ಪಡೆದುಕೋ, ನಿನ್ನ ಮನಸ್ಸಿನಲ್ಲಿರುವ ಸಂಶಯವನ್ನೂ ಹೇಳು. ಎಲೈ ನರಶ್ರೇಷ್ಠನೇ, ನಾನು ನಿನಗೆ ಎಲ್ಲವನ್ನೂ ಸಾಧಿಸಿ ಕೊಡುತ್ತೇನೆ.

ಕುಶಿಕಃ

ಯದಿ ಪ್ರೀತೋಽಸಿ ಭಗವಂಸ್ತತೋ ಮೇ ವದ ಭಾರ್ಗವ ।
ಕಾರಣಂ ಶ್ರೋತುಮಿಚ್ಛಾಮಿ ಮದ್ಗೃಹೇ ವಾಸಕಾರಿತಮ್ ॥೨॥

ಕುಶಿಕ– ಎಲೈ ಭಾರ್ಗವರೇ, ಪೂಜ್ಯರೇ, ನೀವು ನನ್ನ ಮೇಲೆ ಪ್ರಸನ್ನರಾಗಿದ್ದರೆ ನನ್ನ ಗೃಹದಲ್ಲಿ ವಾಸ ಮಾಡುವುದಕ್ಕೆ ಕಾರಣವನ್ನು ಕೇಳಲು ಬಯಸುತ್ತೇನೆ.

ಶಯನಂ ಚೈಕಪಾರ್ಶ್ವೇನ ದಿವಸಾನೇಕವಿಂಶತಿಮ್ ।
ಅಕಿಂಚಿದುಕ್ತ್ವಾ ಗಮನಂ ಬಹಿಶ್ಚ ಮುನಿಪುಂಗವ ॥೩॥

ಅಂತರ್ಧಾನಮಕಸ್ಮಾಚ್ಚ ಪುನರೇವ ಚ ದರ್ಶನಮ್ ।
ಪುನಶ್ಚ ಶಯನಂ ವಿಪ್ರ ದಿವಸಾನೇಕವಿಂಶತಿಮ್ ॥೪॥

ತೈಲಾಭ್ಯಕ್ತಸ್ಯ ಗಮನಂ ಭೋಜನಂ ಚ ಗೃಹೇ ಮಮ ।
ಸಮುಪಾನೀಯ ವಿವಿಧಂ ಯದ್ದಗ್ಧಂ ಜಾತವೇದಸಾ ।
ನಿರ್ಯಾಣಂ ಚ ರಥೇನಾಶು ಸಹಸಾ ಯತ್ಕೃತಂ ತ್ವಯಾ ॥೫॥

ಧನಾನಾಂ ಚ ವಿಸರ್ಗಸ್ಯ ವನಸ್ಯಾಪಿ ಚ ದರ್ಶನಮ್ ।
ಪ್ರಾಸಾದಾನಾಂ ಬಹೂನಾಂ ಚ ಕಾಂಚನಾನಾಂ ಮಹಾಮುನೇ ॥೬॥

ಮಣಿವಿದ್ರುಮಪಾದಾನಾಂ ಪರ್ಯಂಕಾನಾಂ ಚ ದರ್ಶನಮ್ ।
ಪುನಶ್ಚಾದರ್ಶನಂ ತಸ್ಯ ಶ್ರೋತುಮಿಚ್ಛಾಮಿ ಕಾರಣಮ್ ॥೭॥

ಎಲೈ ಮುನಿಪುಂಗವರೇ, ಒಂದೇ ಮಗ್ಗುಲಿನಲ್ಲಿ ಇಪ್ಪತ್ತೊಂದು ದಿವಸಗಳ ಕಾಲ ಶಯನ, ಏನೂ ಮಾತನಾಡದೆ ಅಲ್ಲಿಂದ ಗಮನ, ಇದ್ದಕ್ಕಿದ್ದಂತೆಯೇ ಅಲ್ಲಿಂದ ಅಂತರ್ಧಾನ, ಪುನಃ ದರ್ಶನ, ಪುನಃ ಇಪ್ಪತ್ತೊಂದು ದಿನಗಳ ಕಾಲ ಶಯನ, ತೈಲಾಭ್ಯಂಗವನ್ನು ಮಾಡಿಕೊಂಡು ಗಮನ, ನನ್ನ ಗೃಹದಲ್ಲಿ ಭೋಜನ, ಭೋಜನಕ್ಕೆ ಇಟ್ಟಂತಹ ವಿವಿಧ ಸಾಮಗ್ರಿಗಳ ದಹನ, ಇದ್ದಕ್ಕಿದ್ದಂತೆಯೇ ನೀವು ಮಾಡಿದ ರಥದ ಪ್ರಯಾಣ, ಧನ ದಾನ, ವನದರ್ಶನ, ಅನೇಕ ಸುವರ್ಣಮಯವಾದ ಪ್ರಾಸಾದಗಳ ದರ್ಶನ, ಮಣಿಪ್ರವಾಳ ಪಾದಗಳಿರುವ ಪರ್ಯಂಕಗಳ ದರ್ಶನ, ಪುನಃ ಅದರ್ಶನ ಇವೆಲ್ಲದಕ್ಕೂ ಕಾರಣವನ್ನು ಕೇಳಲು ಬಯಸುತ್ತೇನೆ.

ಅತೀವ ಹ್ಯತ್ರ ಮುಹ್ಯಾಮಿ ಚಿಂತಯಾನೋ ದಿವಾನಿಶಮ್ ।
ನ ಚೈವಾತ್ರಾಧಿಗಚ್ಛಾಮಿ ಸರ್ವಸ್ಯಾಸ್ಯ ವಿನಿಶ್ಚಯಮ್ ।
ಏತದಿಚ್ಛಾಮಿ ಕಾರ್ತ್ಸ್ನ್ಯೇನ ಸತ್ಯಂ ಶ್ರೋತುಂ ತಪೋಧನ ॥೮॥

ಎಲೈ ತಪೋಧನರೇ, ಹಗಲೂ-ರಾತ್ರಿಯೂ ಚಿಂತಿಸಿದರೂ ಈ ವಿಷಯದಲ್ಲಿ ನನಗೆ ಏನೂ ತಿಳಿಯುತ್ತಿಲ್ಲ. ಈ ಎಲ್ಲದಕ್ಕೂ ಕಾರಣ-ನಿರ್ಣಯವನ್ನು ನಾನು ಮಾಡಲು ಸಾಧ್ಯವಾಗುತ್ತಿಲ್ಲ. ಇವೆಲ್ಲವನ್ನೂ ನಾನು ಸಂಪೂರ್ಣವಾಗಿ ಸತ್ಯವಾಗಿ ಕೇಳಲು ಬಯಸುತ್ತೇನೆ.

ಚ್ಯವನಃ

ಶೃಣು ಸರ್ವಮಶೇಷೇಣ ಯದಿದಂ ಯೇನ ಹೇತುನಾ ।
ನ ಹಿ ಶಕ್ಯಮನಾಖ್ಯಾತುಮೇವಂ ಪೃಷ್ಟೇನ ಪಾರ್ಥಿವ ॥೯॥

ಚ್ಯವನ– ಎಲೈ ರಾಜನೇ, ನಾನು ಏನು ಮಾಡಿದೆ, ಯಾವ ಕಾರಣಕ್ಕಾಗಿ ಮಾಡಿದೆ ಎಂಬುದೆಲ್ಲವನ್ನೂ ಸಮಗ್ರವಾಗಿ ಕೇಳು. ನಿನ್ನಂತಹವನು ಪ್ರಶ್ನೆ ಮಾಡಿದಾಗ ಉತ್ತರವನ್ನು ಹೇಳದಿರುವುದು ಸಾಧ್ಯವಿಲ್ಲ.

ಪಿತಾಮಹಸ್ಯ ವದತಃ ಪುರಾ ದೇವಸಮಾಗಮೇ ।
ಶ್ರುತವಾನಸ್ಮಿ ಯದ್ರಾಜಂಸ್ತನ್ಮೇ ನಿಗದತಃ ಶೃಣು ॥೧೦॥

ಬ್ರಹ್ಮದೇವರು ಹಿಂದೆ ದೇವಸಭೆಯಲ್ಲಿ ಮಾತನಾಡುವಾಗ ನಾನು ಏನನ್ನು ಕೇಳಿದೆನೋ ಅದನ್ನು ನಿನಗೆ ಹೇಳುತ್ತೇನೆ, ಕೇಳು.

ಬ್ರಹ್ಮಕ್ಷತ್ರವಿರೋಧೇನ ಭವಿತಾ ಕುಲಸಂಕರಃ ।
ಪೌತ್ರಸ್ತೇ ಭವಿತಾ ರಾಜಂಸ್ತೇಜೋವೀರ್ಯಸಮನ್ವಿತಃ ॥೧೧॥

ಬ್ರಾಹ್ಮಣ, ಕ್ಷತ್ರಿಯರ ವಿರೋಧದಿಂದ ಕುಲಸಾಂಕರ್ಯವು ಉಂಟಾಗುತ್ತದೆ. ನಿನಗೆ ತೇಜೋವೀರ್ಯ ಸಮನ್ವಿತನಾದ ಪೌತ್ರನು ಜನಿಸುವನು.

ತತಃ ಸ್ವಕುಲರಕ್ಷಾರ್ಥಮಹಂ ತ್ವಾ ಸಮುಪಾಗಮಮ್ ।
ಚಿಕೀರ್ಷನ್ ಕುಶಿಕೋಚ್ಛೇದಂ ಸಂದಿಧಕ್ಷುಃ ಕುಲಂ ತವ ॥೧೨॥

ಆದ್ದರಿಂದ ನಾನು ನನ್ನ ಕುಲವನ್ನು ರಕ್ಷಿಸುವ ಸಲುವಾಗಿ ಕುಶಿಕರನ್ನು ಸಂಪೂರ್ಣವಾಗಿ ದಹಿಸಿ ನಿನ್ನ ಕುಲನಾಶವನ್ನು ಮಾಡುವುದಕ್ಕಾಗಿ ನಿನ್ನ ಬಳಿಗೆ ಬಂದೆನು.

ತತೋಽಹಮಾಗಮ್ಯ ಪುರಾ ತ್ವಾಮವೋಚಂ ಮಹೀಪತೇ ।
ನಿಯಮಂ ಕಂಚಿದಾರಪ್ಸ್ಯೇ ಶು(ಶಿ)ಶ್ರೂಷಾ ಕ್ರಿಯತಾಮಿತಿ ॥೧೩॥

ಎಲೈ ರಾಜನೇ, ಹಾಗೆ ನಾನು ನಿನ್ನ ಬಳಿಗೆ ಬಂದು ಒಂದು ನಿಯಮವನ್ನು ಆರಂಭಿಸುವೆನು ನನ್ನ ಪರಿಚರ್ಯವನ್ನು ಮಾಡು ಎಂದು ಹೇಳಿದೆನು.

ನ ಚ ತೇ ದುಷ್ಕೃತಂ ಕಿಂಚಿದಹಮಾಸಾದಯಂ ಗೃಹೇ ।
ತೇನ ಜೀವಸಿ ರಾಜರ್ಷೇ ನ ಭವೇತ್ಥಾಸ್ತತೋಽನ್ಯಥಾ ॥೧೪॥

ಎಲೈ ರಾಜರ್ಷಿಯೇ, ನಾನು ನಿನ್ನ ಮನೆಯಲ್ಲಿ ನಿನ್ನಲ್ಲಿ ಒಂದು ಅಪರಾಧವನ್ನೂ ಕಾಣಲಿಲ್ಲ. ಆದ್ದರಿಂದ ನೀನು ಬದುಕಿದ್ದೀಯೆ. ಹಾಗಿಲ್ಲದಿದ್ದರೆ ನೀನು ಬದುಕಿರುತ್ತಿರಲಿಲ್ಲ.

ಏತಾಂ ಬುದ್ಧಿಂ ಸಮಾಸ್ಥಾಯ ದಿವಸಾನೇಕವಿಂಶತಿಮ್ ।
ಸುಪ್ತೋಽಸ್ಮಿ ಯದಿ ಮಾಂ ಕಶ್ಚಿದ್ ಬೋಧಯೇದಿತಿ ಪಾರ್ಥಿವ ॥೧೫॥

ಎಲೈ ರಾಜನೇ, ಇದೇ ಬುದ್ಧಿಯನ್ನು ಆಶ್ರಯಿಸಿ ನನ್ನನ್ನು ಯಾರಾದರೂ ಎಬ್ಬಿಸಿದರೆ ನಾನು ಕೋಪಗೊಂಡು ಶಾಪವನ್ನು ಕೊಡುವೆನೆಂದು ಭಾವಿಸಿ ಇಪ್ಪತ್ತೊಂದು ದಿವಸಗಳ ಕಾಲ ಮಲಗಿದೆನು.

ಯದಾ ತ್ವಯಾ ಸಭಾರ್ಯೇಣ ಸಂಸುಪ್ತೋ ನ ಪ್ರಬೋಧಿತಃ ।
ಅಹಂ ತದೈವ ತೇ ಪ್ರೀತೋ ಮನಸಾ ರಾಜಸತ್ತಮ ॥೧೬॥

ಎಲೈ ರಾಜಶ್ರೇಷ್ಠನೇ, ಪತ್ನೀ ಸಹಿತನಾದ ನೀನು ನನ್ನನ್ನು ಎಬ್ಬಿಸಲಿಲ್ಲ. ಆಗಲೇ ನಾನು ನನ್ನ ಮನಸ್ಸಿನಲ್ಲಿ ನಿನ್ನಲ್ಲಿ ಸಂತೋಷವನ್ನು ಹೊಂದಿದೆನು.

ಉತ್ಥಾಯ ಚಾಸ್ಮಿ ನಿಷ್ಕ್ರಾಂತೋ ಯದಿ ಮಾಂ ತ್ವಂ ಮಹೀಪತೇ ।
ಪೃಚ್ಛೇಃ ಕ್ವ ಯಾಸ್ಯಸೀತ್ಯೇವಂ ಶಪೇಯಂ ತ್ವಾಮಿತಿ ಪ್ರಭೋ ॥೧೭॥

ಎಲೈ ರಾಜನೇ, ಪ್ರಭುವೇ, ನಿದ್ರೆಯಿಂದ ಎದ್ದು ನಾನು ಹೊರಟೆ. ನೀನೇನಾದರೂ ಎಲ್ಲಿಗೆ ಹೋಗುವಿ ಎಂದು ಕೇಳಿದ್ದರೆ ನಿನಗೆ ಶಾಪವನ್ನು ಕೊಡಬೇಕೆಂದು ನನ್ನ ಅಭಿಪ್ರಾಯವಿದ್ದಿತು.

ಅಂತರ್ಹಿತಶ್ಚಾಸ್ಮಿ ಪುನಃ ಪುನರೇವ ಚ ತೇ ಗೃಹೇ ।
ಯೋಗಮಾಸ್ಥಾಯ ಸಂವಿಷ್ಟೋ ದಿವಸಾನೇಕವಿಂಶತಿಮ್ ॥೧೮॥

ನಿನ್ನ ಮನೆಯಲ್ಲಿ ನಾನು ಪುನಃ ಪುನಃ ಅಂತರ್ಧಾನವನ್ನು ಹೊಂದಿದೆ. ಯೋಗವನ್ನು ಅವಲಂಬಿಸಿ ಪುನಃ ಇಪ್ಪತ್ತೊಂದು ದಿನಗಳ ಕಾಲ ಮಲಗಿದೆ.

ಚ್ಯವನಃ

ಶೃಣು ಸರ್ವಮಶೇಷೇಣ ಯದಿದಂ ಯೇನ ಹೇತುನಾ ।
ನ ಹಿ ಶಕ್ಯಮನಾಖ್ಯಾತುಮೇವಂ ಪೃಷ್ಟೇನ ಪಾರ್ಥಿವ ॥೯॥

ಚ್ಯವನ– ಎಲೈ ರಾಜನೇ, ನಾನು ಏನು ಮಾಡಿದೆ, ಯಾವ ಕಾರಣಕ್ಕಾಗಿ ಮಾಡಿದೆ ಎಂಬುದೆಲ್ಲವನ್ನೂ ಸಮಗ್ರವಾಗಿ ಕೇಳು. ನಿನ್ನಂತಹವನು ಪ್ರಶ್ನೆ ಮಾಡಿದಾಗ ಉತ್ತರವನ್ನು ಹೇಳದಿರುವುದು ಸಾಧ್ಯವಿಲ್ಲ.

ಪಿತಾಮಹಸ್ಯ ವದತಃ ಪುರಾ ದೇವಸಮಾಗಮೇ ।
ಶ್ರುತವಾನಸ್ಮಿ ಯದ್ರಾಜಂಸ್ತನ್ಮೇ ನಿಗದತಃ ಶೃಣು ॥೧೦॥

ಬ್ರಹ್ಮದೇವರು ಹಿಂದೆ ದೇವಸಭೆಯಲ್ಲಿ ಮಾತನಾಡುವಾಗ ನಾನು ಏನನ್ನು ಕೇಳಿದೆನೋ ಅದನ್ನು ನಿನಗೆ ಹೇಳುತ್ತೇನೆ, ಕೇಳು.

ಬ್ರಹ್ಮಕ್ಷತ್ರವಿರೋಧೇನ ಭವಿತಾ ಕುಲಸಂಕರಃ ।
ಪೌತ್ರಸ್ತೇ ಭವಿತಾ ರಾಜಂಸ್ತೇಜೋವೀರ್ಯಸಮನ್ವಿತಃ ॥೧೧॥

ಬ್ರಾಹ್ಮಣ, ಕ್ಷತ್ರಿಯರ ವಿರೋಧದಿಂದ ಕುಲಸಾಂಕರ್ಯವು ಉಂಟಾಗುತ್ತದೆ. ನಿನಗೆ ತೇಜೋವೀರ್ಯ ಸಮನ್ವಿತನಾದ ಪೌತ್ರನು ಜನಿಸುವನು.

ತತಃ ಸ್ವಕುಲರಕ್ಷಾರ್ಥಮಹಂ ತ್ವಾ ಸಮುಪಾಗಮಮ್ ।
ಚಿಕೀರ್ಷನ್ ಕುಶಿಕೋಚ್ಛೇದಂ ಸಂದಿಧಕ್ಷುಃ ಕುಲಂ ತವ ॥೧೨॥

ಆದ್ದರಿಂದ ನಾನು ನನ್ನ ಕುಲವನ್ನು ರಕ್ಷಿಸುವ ಸಲುವಾಗಿ ಕುಶಿಕರನ್ನು ಸಂಪೂರ್ಣವಾಗಿ ದಹಿಸಿ ನಿನ್ನ ಕುಲನಾಶವನ್ನು ಮಾಡುವುದಕ್ಕಾಗಿ ನಿನ್ನ ಬಳಿಗೆ ಬಂದೆನು.

ತತೋಽಹಮಾಗಮ್ಯ ಪುರಾ ತ್ವಾಮವೋಚಂ ಮಹೀಪತೇ ।
ನಿಯಮಂ ಕಂಚಿದಾರಪ್ಸ್ಯೇ ಶು(ಶಿ)ಶ್ರೂಷಾ ಕ್ರಿಯತಾಮಿತಿ ॥೧೩॥

ಎಲೈ ರಾಜನೇ, ಹಾಗೆ ನಾನು ನಿನ್ನ ಬಳಿಗೆ ಬಂದು ಒಂದು ನಿಯಮವನ್ನು ಆರಂಭಿಸುವೆನು ನನ್ನ ಪರಿಚರ್ಯವನ್ನು ಮಾಡು ಎಂದು ಹೇಳಿದೆನು.

ನ ಚ ತೇ ದುಷ್ಕೃತಂ ಕಿಂಚಿದಹಮಾಸಾದಯಂ ಗೃಹೇ ।
ತೇನ ಜೀವಸಿ ರಾಜರ್ಷೇ ನ ಭವೇಥಾಸ್ತತೋಽನ್ಯಥಾ ॥೧೪॥

ಎಲೈ ರಾಜರ್ಷಿಯೇ, ನಾನು ನಿನ್ನ ಮನೆಯಲ್ಲಿ ನಿನ್ನಲ್ಲಿ ಒಂದು ಅಪರಾಧವನ್ನೂ ಕಾಣಲಿಲ್ಲ. ಆದ್ದರಿಂದ ನೀನು ಬದುಕಿದ್ದೀಯೆ. ಹಾಗಿಲ್ಲದಿದ್ದರೆ ನೀನು ಬದುಕಿರುತ್ತಿರಲಿಲ್ಲ.

ಏತಾಂ ಬುದ್ಧಿಂ ಸಮಾಸ್ಥಾಯ ದಿವಸಾನೇಕವಿಂಶತಿಮ್ ।
ಸುಪ್ತೋಽಸ್ಮಿ ಯದಿ ಮಾಂ ಕಶ್ಚಿದ್ ಬೋಧಯೇದಿತಿ ಪಾರ್ಥಿವ ॥೧೫॥

ಎಲೈ ರಾಜನೇ, ಇದೇ ಬುದ್ಧಿಯನ್ನು ಆಶ್ರಯಿಸಿ ನನ್ನನ್ನು ಯಾರಾದರೂ ಎಬ್ಬಿಸಿದರೆ ನಾನು ಕೋಪಗೊಂಡು ಶಾಪವನ್ನು ಕೊಡುವೆನೆಂದು ಭಾವಿಸಿ ಇಪ್ಪತ್ತೊಂದು ದಿವಸಗಳ ಕಾಲ ಮಲಗಿದೆನು.

ಯದಾ ತ್ವಯಾ ಸಭಾಯೇ೯ಣ ಸಂಸುಪ್ತೋ ನ ಪ್ರಬೋಧಿತಃ ।
ಅಹಂ ತದೈವ ತೇ ಪ್ರೀತೋ ಮನಸಾ ರಾಜಸತ್ತಮ ॥೧೬॥

ಎಲೈ ರಾಜಶ್ರೇಷ್ಠನೇ, ಪತ್ನೀ ಸಹಿತನಾದ ನೀನು ನನ್ನನ್ನು ಎಬ್ಬಿಸಲಿಲ್ಲ. ಆಗಲೇ ನಾನು ನನ್ನ ಮನಸ್ಸಿನಲ್ಲಿ ನಿನ್ನಲ್ಲಿ ಸಂತೋಷವನ್ನು ಹೊಂದಿದೆನು.

ಉತ್ಥಾಯ ಚಾಸ್ಮಿ ನಿಷ್ಕ್ರಾಂತೋ ಯದಿ ಮಾಂ ತ್ವಂ ಮಹೀಪತೇ ।
ಪೃಚ್ಛೇಃ ಕ್ವ ಯಾಸ್ಯಸೀತ್ಯೇವಂ ಶಪೇಯಂ ತ್ವಾಮಿತಿ ಪ್ರಭೋ ॥೧೭॥

ಎಲೈ ರಾಜನೇ, ಪ್ರಭುವೇ, ನಿದ್ರೆಯಿಂದ ಎದ್ದು ನಾನು ಹೊರಟೆ. ನೀನೇನಾದರೂ ಎಲ್ಲಿಗೆ ಹೋಗುವಿ ಎಂದು ಕೇಳಿದ್ದರೆ ನಿನಗೆ ಶಾಪವನ್ನು ಕೊಡಬೇಕೆಂದು ನನ್ನ ಅಭಿಪ್ರಾಯವಿದ್ದಿತು.

ಅಂತರ್ಹಿತಶ್ಚಾಸ್ಮಿ ಪುನಃ ಪುನರೇವ ಚ ತೇ ಗೃಹೇ ।
ಯೋಗಮಾಸ್ಥಾಯ ಸಂವಿಷ್ಟೋ ದಿವಸಾನೇಕವಿಂಶತಿಮ್ ॥೧೮॥

ನಿನ್ನ ಮನೆಯಲ್ಲಿ ನಾನು ಪುನಃ ಪುನಃ ಅಂತರ್ಧಾನವನ್ನು ಹೊಂದಿದೆ. ಯೋಗವನ್ನು ಅವಲಂಬಿಸಿ ಪುನಃ ಇಪ್ಪತ್ತೊಂದು ದಿನಗಳ ಕಾಲ ಮಲಗಿದೆ.

ಕ್ಷುಧಿತೋ ಮಾಮಸೂಯೇಥಾಃ ಶ್ರಮಾದ್ವೇತಿ ನರಾಧಿಪ ।
ಏತಾಂ ಬುದ್ಧಿ ಸಮಾಸ್ಥಾಯ ಕರ್ಶಿತೌ ವಾಂ ಮಯಾ ಕ್ಷುಧಾ ॥೧೯॥

ಎಲೈ ನರಾಧಿಪನೇ, ಹಸಿವಿನಿಂದ ಅಥವಾ ಶ್ರಮದಿಂದ ನನ್ನ ಮೇಲೆ ಅಸೂಯೆಯನ್ನು ಮಾಡಬಹುದು ಎಂಬ ಬುದ್ಧಿಯನ್ನು ಹೊಂದಿ ನಿಮ್ಮಿಬ್ಬರನ್ನೂ ನಾನು ಹಸಿವಿನಿಂದ ಬಳಲಿಸಿದೆ.

ನ ಚ ತೇಽಭೂತ್ಸೂಕ್ಷ್ಮೋಽಪಿ ಮನ್ಯುರ್ಮನಸಿ ಪಾರ್ಥಿವ ।
ಸಭಾರ್ಯಸ್ಯ ನರಶ್ರೇಷ್ಠ ತೇನ ತೇ ಪ್ರೀತಿಮಾನಹಮ್ ॥೨೦॥

ಎಲೈ ರಾಜನೇ, ನರಶ್ರೇಷ್ಠನೇ, ಪತ್ನೀ ಸಹಿತನಾದ ನಿನಗೆ ಮನಸ್ಸಿನಲ್ಲಿ ಅತ್ಯಲ್ಪವಾದ ಕೋಪವೂ ಉಂಟಾಗಲಿಲ್ಲ. ಅದರಿಂದ ನಾನು ನಿನ್ನಲ್ಲಿ ಸಂತೋಷವನ್ನು ಹೊಂದಿದೆ.

ಭೋಜನಂ ಚ ಸಮಾನಾಯ್ಯ ಯತ್ತದಾದೀಪಿತಂ ಮಯಾ ।
ಕ್ರುಧ್ಯೇಥಾ ಯದಿ ಮಾತ್ಸರ್ಯಾದಿತಿ ತನ್ಮರ್ಷಿತಂ ಚ ತೇ ॥೨೧॥

ಭೋಜನವನ್ನು ತರಿಸಿ ನೀನು ಮಾತ್ಸರ್ಯದಿಂದ ಕೋಪಗೊಳ್ಳಲಿ ಎಂದು ಅದನ್ನು ಅಗ್ನಿಗೆ ಸಮರ್ಪಿಸಿದೆ. ನೀನು ಕೋಪಗೊಳ್ಳದೆ ಅದನ್ನು ಸಹಿಸಿದೆ.

ತತೋಽಹಂ ರಥಮಾರುಹ್ಯ ತ್ವಾಮವೋಚಂ ನರಾಧಿಪ ।
ಸಭಾರ್ಯೋ ಮಾಂ ವಹಸ್ವೇತಿ ತಚ್ಚ ತ್ವಂ ಕೃತವಾಂಸ್ತಥಾ ॥೨೨॥

ಅವಿಶಂಕೋ ನರಪತೇ ಪ್ರೀತೋಽಹಂ ಚಾಪಿ ತೇನ ತೇ ।
ಧನೋತ್ಸರ್ಗೇಽಪಿ ಚ ಕೃತೇ ನ ತ್ವಾಂ ಕ್ರೋಧಃ ಪ್ರಧರ್ಷಯತ್ ॥೨೩॥

ಎಲೈ ನರಾಧಿಪನೇ, ಅನಂತರ ನಾನು ರಥವನ್ನೇರಿ ಪತ್ನೀ ಸಹಿತನಾದ ನೀನು ನನ್ನ ರಥವನ್ನು ಎಳೆದುಕೊಂಡು ಹೋಗು ಎಂದು ನಿನಗೆ ಹೇಳಿದೆ. ಎಲೈ ರಾಜನೇ, ಅದನ್ನೂ ನೀನು ನಿಶ್ಶಂಕೆಯಿಂದ ಮಾಡಿದೆ. ಅದರಿಂದಲೂ ನಾನು ನಿನಗೆ ಪ್ರಸನ್ನನಾಗಿದ್ದೇನೆ. ನಿನ್ನ ಹಣವನ್ನು ನಾನು ಬೇಕಾದಂತೆ ದಾನ ಮಾಡಿದರೂ ನಿನ್ನಲ್ಲಿ ಕ್ರೋಧವು ಆವರಿಸಲಿಲ್ಲ.

ತತಃ ಪ್ರೀತೇನ ತೇ ರಾಜನ್ ಪುನರೇತತ್ಕೃತಂ ತವ ।
ಸಭಾರ್ಯಸ್ಯ ವನಂ ಭೂಯಸ್ತದ್ವಿದ್ಧಿ ಮನುಜಾಧಿಪ ॥೨೪॥

ಎಲೈ ರಾಜನೇ, ಮನುಜಾಧಿಪನೇ, ಆಗ ಪ್ರಸನ್ನನಾದ ಪತ್ನೀ ಸಹಿತನಾದ ನಿನಗೆ ಈ ವರವನ್ನು ಸೃಷ್ಟಿಸಿದೆ ಎಂದು ತಿಳಿ.

ಪ್ರೀತ್ಯರ್ಥಂ ತವ ಚೈತನ್ಯೇ ಸ್ವರ್ಗಸಂದರ್ಶನಂ ಕೃತಮ್ ।
ಯತ್ ತೇ ವನೇಽಸ್ಮಿನ್ ನೃಪತೇ ದೃಷ್ಟಂ ದಿವ್ಯಂ ನಿದರ್ಶನಮ್ ॥೨೫॥

ನಿನ್ನಲ್ಲಿ ಸಂತೋಷಪಡಿಸುವ ಸಲುವಾಗಿ ನಿನಗೆ ಸ್ವರ್ಗದ ದರ್ಶನವನ್ನು ಮಾಡಿಸಿದೆ. ರಾಜನೇ, ನೀನು ಈ ವನದಲ್ಲಿ ಏನು ನೋಡಿದೆಯೋ ಅದೆಲ್ಲಾ ಸ್ವರ್ಗದ ಒಂದು ನಿದರ್ಶನ.

ಸ್ವರ್ಗೋದ್ದೇಶಸ್ತ್ವಯಾ ರಾಜನ್ ಸಶರೀರೇಣ ಪಾರ್ಥಿವ ।
ಮುಹೂರ್ತಮನುಭೂತೋಽಸೌ ಸಭಾರ್ಯೇಣ ನೃಪೋತ್ತಮ ॥೨೬॥

ಎಲೈ ನೃಪೋತ್ತಮನೇ, ನೀನು ಪತ್ನೀ ಸಹಿತನಾಗಿ ಒಂದು ಮುಹೂರ್ತದ ಕಾಲ ಸಶರೀರನಾಗಿ ಸ್ವರ್ಗ ಸುಖವನ್ನು ಅನುಭವಿಸಿದೆ.

ನಿದರ್ಶನಾರ್ಥಂ ತಪಸೋ ಧರ್ಮಸ್ಯ ಚ ನರಾಧಿಪ ।
ತಪೋಬ್ರಹ್ಮಬಲಂ ಜ್ಞಾತುಂ ತವಾಂತರ್ಹಿತಮತ್ರ ತತ್ ।
ತತ್ರ ಯಾಽಸೀತ್ ಸ್ಪೃಹಾ ರಾಜಂಸ್ತಚ್ಚಾಪಿ ವಿದಿತಂ ಮಮ ॥೨೭॥

ಎಲೈ ರಾಜನೇ, ತಪಸ್ಸಿನ ಮತ್ತು ಧರ್ಮದ ಬಲವನ್ನು ತೋರಿಸುವುದಕ್ಕಾಗಿ, ಬ್ರಾಹ್ಮಣ್ಯದ ಬಲವನ್ನು ತಿಳಿಸುವುದಕ್ಕಾಗಿ ನಾನು ಅಂತರ್ಧಾನವನ್ನು ಹೊಂದಿದೆ. ಎಲೈ ರಾಜನೇ, ನಿನ್ನ ಮನಸ್ಸಿನಲ್ಲಿ ಯಾವ ಆಸೆ ಇದ್ದಿತೋ ಅದು ನನಗೆ ತಿಳಿದಿದೆ.

ಬ್ರಾಹ್ಮಣ್ಯಂ ಕಾಂಕ್ಷಸೇ ಹಿ ತ್ವಂ ತಪಶ್ಚ ಪೃಥಿವೀಪತೇ ।
ಅವಮನ್ಯ ನರೇಂದ್ರತ್ವಂ ದೇವೇಂದ್ರತ್ವಂ ಚ ಪಾರ್ಥಿವ ॥೨೮॥

ಎಲೈ ಪೃಥಿವೀಪತಿಯೇ, ನೀನು ರಾಜತ್ವವನ್ನೂ, ಇಂದ್ರ ಪದವಿಯನ್ನೂ ತಿರಸ್ಕರಿಸಿ ಬ್ರಾಹ್ಮಣ್ಯವನ್ನು ಮತ್ತು ತಪಸ್ಸನ್ನು ಬಯಸುತ್ತಿದ್ದೀಯೆ.

ಏವಮೇತದ್ ಯಥಾತ್ಥ ತ್ವಂ ಬ್ರಾಹ್ಮಣ್ಯಂ ತಾತ ದುರ್ಲಭಮ್ ।
ಬ್ರಾಹ್ಮಣ್ಯೇ ಸತಿ ಚರ್ಷಿತ್ವಮೃಷಿತ್ವೇ ಚ ತಪಸ್ವಿತಾ ॥೨೯॥

ಎಲೈ ಪ್ರೀತಿಪಾತ್ರನೇ, ನೀನು ಹೇಳುವಂತೆ ಬ್ರಾಹ್ಮಣ್ಯವು ದುರ್ಲಭವಾದುದು. ಬ್ರಾಹ್ಮಣನಾದ ಮೇಲೆ ಋಷಿಯಾಗುವುದು, ಋಷಿಯಾದ ಮೇಲೆ ತಪಸ್ವಿಯಾಗುವುದು ಇನ್ನೂ ದುರ್ಲಭವಾದುದು.

ಭವಿಷ್ಯತ್ಯೇಷ ತೇ ಕಾಮಃ ಕುಶಿಕಾತ್ಕೌಶಿಕೋ ದ್ವಿಜಃ ।
ತೃತೀಯಂ ಪುರುಷಂ ಪ್ರಾಪ್ಯ ಬ್ರಾಹ್ಮಣತ್ವಂ ಗಮಿಷ್ಯತಿ ॥೩೦॥

ನಿನ್ನ ಈ ಆಸೆಯು ಪೂರ್ಣವಾಗುವುದು. ಕುಶಿಕನಾದ ನಿನ್ನಿಂದ ಕೌಶಿಕನಾದ ದ್ವಿಜನು ಜನಿಸಿ, ಅವನಿಂದ ಜನಿಸುವ ಪುರುಷನು ಬ್ರಾಹ್ಮಣ್ಯವನ್ನು ಹೊಂದುವನು.

ವಂಶಸ್ತೇ ಪಾರ್ಥಿವಶ್ರೇಷ್ಠ ಭೃಗೂಣಾಮೇವ ತೇಜಸಾ ।
ಪೌತ್ರಸ್ತೇ ಭವಿತಾ ವಿಪ್ರ ತಪಸ್ವೀ ಪಾವಕದ್ಯುತಿಃ ॥೩೧॥

ಎಲೈ ಪಾರ್ಥಿವಶ್ರೇಷ್ಠನೇ, ಭೃಗುಗಳ ತೇಜಸ್ಸಿನಿಂದ (ಅನುಗ್ರಹದಿಂದ) ನಿನ್ನ ವಂಶವು ಬ್ರಾಹ್ಮಣ್ಯವನ್ನು ಪಡೆಯುತ್ತದೆ. ನಿನ್ನ ಪೌತ್ರನು ತಪಸ್ವಿಯೂ, ಅಗ್ನಿಗೆ ಸಮಾನವಾದ ತೇಜಸ್ಸುಳ್ಳವನೂ ಆಗುವನು.

ಯಃ ಸ ದೇವಮನುಷ್ಯಾಣಾಂ ಭಯಮುತ್ಪಾದಯಿಷ್ಯತಿ ।
ತ್ರಯಾಣಾಂ ಚೈವ ಲೋಕಾನಾಂ ಸತ್ಯಮೇತದ್ ಬ್ರವೀಮಿ ತೇ ॥೩೨॥

ಅವನು ದೇವತೆಗಳಿಗೂ ಮತ್ತು ಮನುಷ್ಯರಿಗೂ ಮತ್ತು ಮೂರು ಲೋಕಗಳಿಗೂ ಭಯವನ್ನುಂಟು ಮಾಡುವನು. ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ವರಂ ಗೃಹಾಣ ರಾಜರ್ಷೇ ಯಸ್ತೇ ಮನಸಿ ವರ್ತತೇ ।
ತೀರ್ಥಯಾತ್ರಾಂ ಗಮಿಷ್ಯಾಮಿ ಪುರಾ ಕಾಲೋಽತಿವರ್ತತೇ ॥೩೩॥

ಎಲೈ ರಾಜರ್ಷಿಯೇ, ನಿನ್ನ ಮನಸ್ಸಿನಲ್ಲಿರುವ ವರವನ್ನು ನನ್ನಿಂದ ಕೇಳಿ ಪಡೆ. ತೀರ್ಥಯಾತ್ರೆಗೆ ಹೋಗುವೆನು. ಕಾಲವು ಮೀರುತ್ತಿದೆ.

ಕುಶಿಕಃ

ಏಷ ಏವ ವರೋ ಮೇಽದ್ಯ ಯತ್ತ್ವಂ ಪ್ರೀತೋ ಮಹಾಮುನೇ ।
ಭವತ್ವೇತದ್ಯಥಾತ್ಥ ತ್ವಂ ತಪಃ ಪೌತ್ರೇ ಮಮಾನಘ ।
ಬ್ರಾಹ್ಮಣ್ಯಂ ಮೇ ಕುಲಸ್ಯಾಸ್ತು ಭಗವನ್ನೇಷ ಮೇ ವರಃ ॥೩೪॥

ಕುಶಿಕ– ಎಲೈ ಮಹಾಮುನಿಯೇ, ನೀವು ಪ್ರಸನ್ನರಾಗಿರುವುದೇ ಈ ದಿನ ನನಗೆ ನೀಡಿದ ಶ್ರೇಷ್ಠವಾದ ವರ. ಎಲೈ ಅನಘರೇ, ನೀವು ಹೇಳಿದಂತೆಯೇ ಎಲ್ಲವೂ ಆಗಲಿ. ನನ್ನ ಪೌತ್ರನಿಗೆ ಅಂತಹ ತಪಸ್ಸಿರಲಿ. ನನ್ನ ಕುಲವು ಬ್ರಾಹ್ಮಣ್ಯವನ್ನು ಪಡೆಯಲಿ. ಪೂಜ್ಯರೇ ಇದೇ ನಾನು ಕೇಳುವ ವರ.

ಪುನಶ್ಚಾಖ್ಯಾತುಮಿಚ್ಛಾಮಿ ಭಗವನ್ ವಿಸ್ತರೇಣ ವೈ ।
ಕಥಮೇಷ್ಯತಿ ವಿಪ್ರತ್ವಂ ಕುಲಂ ಮೇ ಭೃಗುನಂದನ ।
ಕಶ್ಚಾಸೌ ಭವಿತಾ ಬಂಧುರ್ಮಮ ಕಶ್ಚಾಪಿ ಸಮ್ಮತಃ ॥೩೫॥

ಪೂಜ್ಯರೇ, ಪುನಃ ನಾನು ನಿಮ್ಮಿಂದ ಈ ವಿಷಯಗಳನ್ನು ವಿಸ್ತಾರವಾಗಿ ಕೇಳಲು ಬಯಸುತ್ತೇನೆ. ಎಲೈ ಭೃಗುನಂದನರೇ, ನನ್ನ ಕುಲವು ಹೇಗೆ ಬ್ರಾಹ್ಮಣ್ಯವನ್ನು ಹೊಂದುತ್ತದೆ? ನನಗೆ ಪೌತ್ರನಾಗಿ ಜನಿಸುವ ಬಂಧುವು ಯಾರು? ಅವನು ಯಾರಿಗೆ ಸಮ್ಮತನಾಗಿರುತ್ತಾನೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಚ್ಯವನಕುಶಿಕಸಂವಾದೇ ಕುಶಿಕಸ್ಯ
ಬ್ರಾಹ್ಮಣ್ಯವರಲಾಭೋ ನಾಮ ಪಂಚಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತಾರನೆಯ ಅಧ್ಯಾಯ

ಚ್ಯವನರಿಂದ ಕುಶಿಕನಿಗೆ ಪರಶುರಾಮರ ಉತ್ಪತ್ತಿಯನ್ನು ಹೇಳಿ ತೀರ್ಥಯಾತ್ರಾಗಮನ.

ಚ್ಯವನಃ

ಅವಶ್ಯಂ ಕಥನೀಯಂ ಮೇ ತವೈತನ್ನರಪುಂಗವ ।
ಯದರ್ಥಂ ತ್ವಾಹಮುಚ್ಛೇತ್ತುಂ ಸಂಪ್ರಾಪ್ತೋ ಮನುಜಾಧಿಪ ॥೧॥

ಚ್ಯವನ– ಎಲೈ ನರಪುಂಗವನೇ, ಮನುಜಾಧಿಪನೇ, ನಾನು ಯಾವ ಉದ್ದೇಶದಿಂದ ನಿನ್ನನ್ನು ನಿರ್ಮೂಲಗೊಳಿಸಲು ಬಂದೆನೆಂಬುದನ್ನು ಅವಶ್ಯವಾಗಿ ನಿನಗೆ ಹೇಳಬೇಕು.

ಭೃಗೂಣಾಂ ಕ್ಷತ್ರಿಯಾ ಯಾಜ್ಯಾ ನಿತ್ಯಮೇವ ಜನಾಧಿಪ ।
ತೇ ಚ ಭೇದಂ ಗಮಿಷ್ಯಂತಿ ದೈವಯುಕ್ತೇನ ಹೇತುನಾ ॥೨॥

ಎಲೈ ಜನಾಧಿಪನೇ, ಕ್ಷತ್ರಿಯರಿಗೆ ಯಾವಾಗಲೂ ಭೃಗು ವಂಶದವರು ಪುರೋಹಿತರು. ದೈವಸಂಕಲ್ಪಕ್ಕೆ ಅನುಸಾರವಾಗಿ ಭೃಗುಗಳಿಗೂ ಮತ್ತು ಕ್ಷತ್ರಿಯರಿಗೂ ವಿರೋಧ ಉಂಟಾಗುವುದು.

ಕ್ಷತ್ರಿಯಾಶ್ಚ ಭೃಗೂನ್ ಸರ್ವಾನ್ ವಧಿಷ್ಯಂತಿ ನರಾಧಿಪ ।
ಆ ಗರ್ಭಾದನುಕೃಂತಂತೋ ದೈವದಂಡನಿಪೀಡಿತಾಃ ॥೩॥

ಎಲೈ ನರಾಧಿಪನೇ, ದೈವದಂಡದಿಂದ ಪೀಡಿತರಾದ ಕ್ಷತ್ರಿಯರು ಗರ್ಭದ ಒಳಗಿರುವವರಿಂದ ಹಿಡಿದು ಎಲ್ಲಾ ಭೃಗುಗಳನ್ನೂ ಕೊಲ್ಲುವರು.

ತತ ಉತ್ಪತ್ಸ್ಯತೇಽಸ್ಮಾಕಂ ಕುಲೇ ಗೋತ್ರವಿವರ್ಧನಃ ।
ಔರ್ವೋ ನಾಮ ಮಹಾತೇಜಾ ಜ್ವಲನಾರ್ಕಸಮದ್ಯುತಿಃ ॥೪॥

ಆಗ ನಮ್ಮ ಭೃಗುಕುಲದಲ್ಲಿ ಗೋತ್ರವನ್ನು ಬೆಳೆಸುವ ಮಹಾತೇಜಸ್ವಿಯೂ, ಜ್ವಲಿಸುವ ಅಗ್ನಿಗೆ ಮತ್ತು ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳವನೂ ಆದ ಔರ್ವನೆಂಬುವನು ಜನಿಸುತ್ತಾನೆ.

ಸ ತ್ರೈಲೋಕ್ಯವಿನಾಶಾಯ ಕೋಪಾಗ್ನಿಂ ಜನಯಿಷ್ಯತಿ ।
ಮಹೀಂ ಸಪರ್ವತವನಾಂ ಯಃ ಕರಿಷ್ಯತಿ ಭಸ್ಮಸಾತ್ ॥೫॥

ಅವನು ಮೂರುಲೋಕದ ನಾಶಕ್ಕಾಗಿ ಕೋಪಾಗ್ನಿಯನ್ನು ಸೃಷ್ಟಿಸುವನು. ಅವನು ಪರ್ವತ-ವನ ಸಹಿತವಾದ ಭೂಮಿಯನ್ನು ಭಸ್ಮ ಮಾಡುವನು.

ಕಂಚಿತ್ಕಾಲಂ ತು ತಂ ವಹ್ನಿಂ ಸ ಏವ ಶಮಯಿಷ್ಯತಿ ।
ಸಮುದ್ರೇ ವಡವಾವಕ್ತ್ರೇ ಪ್ರಕ್ಷಿಪ್ಯ ಮುನಿಸತ್ತಮಃ ॥೬॥

ಮುನಿಶ್ರೇಷ್ಠನಾದ ಅವನು ಸ್ವಲ್ಪಕಾಲವಾದ ನಂತರ ಆ ಅಗ್ನಿಯನ್ನು ಸಮುದ್ರದಲ್ಲಿ ವಡವಾಮುಖದಲ್ಲಿ ಹಾಕಿ ತಾನೇ ಶಮನಗೊಳಿಸುವನು.

ಪುತ್ರಂ ತಸ್ಯ ಮಹಾಭಾಗಮೃಚೀಕಂ ಭೃಗುನಂದನಮ್ ।
ಸಾಕ್ಷಾತ್ಕೃತ್ಸ್ನೋ ಧನುರ್ವೇದಃ ಸಮುಪಸ್ಥಾಸ್ಯತೇऽನಘ ॥೭॥

ಅವನ ಪುತ್ರ ಭೃಗುನಂದನನೂ, ಮಹಾನುಭಾವನೂ ಆದ ಋಚೀಕ. ಎಲೈ ಅನಘನೇ, ಸಮಗ್ರವಾದ ಚತುರ್ವೇದವು ಅವನನ್ನು ಒಲೈಸಿ ಆಶ್ರಯಿಸುತ್ತದೆ.

ಕ್ಷತ್ರಿಯಾಣಾಮಭಾವಾಯ ದೈವಯುಕ್ತೇನ ಹೇತುನಾ ।
ಸ ತು ತಂ ಪ್ರತಿಗೃಹ್ಯೈವ ಪುತ್ರೇ ಸಂಕ್ರಾಮಯಿಷ್ಯತಿ ॥೮॥

ಜಮದಗ್ನೌ ಮಹಾಭಾಗೇ ತಪಸಾ ಭಾವಿತಾತ್ಮನಿ ।
ಸ ಚಾಪಿ ಭೃಗುಶಾರ್ದೂಲಸ್ತಂ ವೇದಂ ಧಾರಯಿಷ್ಯತಿ ॥೯॥

ದೈವ ಸಂಕಲ್ಪಕ್ಕೆ ಅನುಸಾರವಾಗಿ, ಕ್ಷತ್ರಿಯರ ವಿನಾಶಕ್ಕಾಗಿ ಅವನು ಆ ಧನುರ್ವೇದವನ್ನು ಸ್ವೀಕರಿಸಿ ತನ್ನ ಪುತ್ರನೂ, ಮಹಾನುಭಾವನೂ, ತಪಸ್ಸಿನಿಂದ ಶುದ್ಧವಾದ ಅಂತಃಕರಣವುಳ್ಳವನೂ ಆದ ಜಮದಗ್ನಿಗೆ ಅದನ್ನು ಉಪದೇಶಿಸುವನು. ಭೃಗುಶಾರ್ದೂಲನಾದ ಜಮದಗ್ನಿಯೂ ಸಹ ಆ ಧನುರ್ವೇದವನ್ನು ಧರಿಸುವನು.

ಕುಲಾತ್ತು ತವ ಧರ್ಮಾತ್ಮನ್ ಕನ್ಯಾಂ ಸೋऽಧಿಗಮಿಷ್ಯತಿ ।
ಉದ್ಭವನಾರ್ಥಂ ಭವತೋ ವಂಶಸ್ಯ ನೃಪಸತ್ತಮ ॥೧೦॥

ಎಲೈ ಧರ್ಮಾತ್ಮನೇ, ನೃಪಶ್ರೇಷ್ಠನೇ, ಅವನು ನಿನ್ನ ಕುಲವನ್ನು ಉದ್ಧಾರ ಮಾಡುವುದಕ್ಕಾಗಿ ನಿನ್ನ ಕುಲದಿಂದ ಬಂದ ಕನ್ಯೆಯನ್ನು ಸ್ವೀಕರಿಸುವನು.

ಗಾಧೇರ್ದುಹಿತರಂ ಪ್ರಾಪ್ಯ ಪೌತ್ರೀಂ ತವ ಮಹಾತಪಾಃ ।
ಬ್ರಾಹ್ಮಣಂ ಕ್ಷತ್ರಧರ್ಮಾಣಂ ರಾಮಮುತ್ಪಾದಯಿಷ್ಯತಿ ॥೧೧॥

ಮಹಾತಪಸ್ವಿಯಾದ ಅವನು ಗಾಧಿಯ ಪುತ್ರಿಯೂ, ನಿನ್ನ ಪೌತ್ರಿಯೂ ಆದ ಕನ್ಯೆಯನ್ನು ಪತ್ನಿಯಾಗಿ ಪಡೆದು ಕ್ಷತ್ರಿಯ ಧರ್ಮವನ್ನು ಹೊಂದಿದ ಬ್ರಾಹ್ಮಣನಾದ ಪರಶುರಾಮನನ್ನು ಪುತ್ರನಾಗಿ ಪಡೆಯುವನು.

ಕ್ಷತ್ರಿಯಂ ವಿಪ್ರಕರ್ಮಾಣಂ ಬೃಹಸ್ಪತಿಮಿವೌಜಸಾ ।
ವಿಶ್ವಾಮಿತ್ರಂ ತವ ಕುಲೇ ಗಾಧೇಃ ಪುತ್ರಂ ಸುಧಾರ್ಮಿಕಮ್ ।
ತಪಸಾ ಮಹತಾ ಯುಕ್ತಂ ಪ್ರದಾಸ್ಯತಿ ಮಹಾದ್ಯುತೇ ॥೧೨॥

ಎಲೈ ಮಹಾದ್ಯುತಿಯೇ, ವಿಪ್ರಕರ್ಮವನ್ನು ಮಾಡುವ ಕ್ಷತ್ರಿಯನಾದ ಮತ್ತು ಪರಾಕ್ರಮದಲ್ಲಿ ಬೃಹಸ್ಪತಿಗೆ ಸಮನಾದ ಗಾಧಿಯ ಪುತ್ರನಾದ ಅತ್ಯಂತ ಧಾರ್ಮಿಕನಾದ, ದೊಡ್ಡ ತಪಸ್ಸಿನಿಂದ ಯುಕ್ತನಾದ ವಿಶ್ವಾಮಿತ್ರನನ್ನು ನಿನ್ನ ಕುಲಕ್ಕೆ ಕೊಡುವನು.

ಸ್ತ್ರಿಯೌ ತು ಕಾರಣಂ ತತ್ರ ಪರಿವರ್ತೇ ಭವಿಷ್ಯತಃ ।
ಪಿತಾಮಹನಿಯೋಗಾದ್ ವೈ ನಾನ್ಯಥೈತದ್ ಭವಿಷ್ಯತಿ ॥೧೩॥

ಈ ಬ್ರಾಹ್ಮಣ-ಕ್ಷತ್ರಿಯ ಪರಿವರ್ತನೆಗೆ ಅಲ್ಲಿ ಸ್ತ್ರೀಯರು ಕಾರಣರಾಗುವರು. ಬ್ರಹ್ಮದೇವರ ಆಜ್ಞೆಯಂತೆ ಇದು ಬೇರೆ ರೀತಿಯಲ್ಲಿ ನಡೆಯಲಾರದು.

ತೃತೀಯೇ ಪುರುಷೇ ತುಭ್ಯಂ ಬ್ರಾಹ್ಮಣತ್ವಮುಪೈಷ್ಯತಿ ।
ಭವಿತಾ ತ್ವಂ ಚ ಸಂಬಂಧೀ ಭೃಗೂಣಾಂ ಭಾವಿತಾತ್ಮನಾಮ್ ॥೧೪॥

ನಿನ್ನಿಂದ ಮೂರನೆಯ ಪುರುಷನು ಬ್ರಾಹ್ಮಣ್ಯವನ್ನು ಹೊಂದುವನು. ನೀನೂ ಸಹ ಶುದ್ಧಮನಸ್ಕರಾದ ಭಾರ್ಗವರ ಸಂಬಂಧಿಯಾಗುವಿ.

ಭೀಷ್ಮಃ

ಕುಶಿಕಸ್ತು ಮುನೇರ್ವಾಕ್ಯಂ ಚ್ಯವನಸ್ಯ ಮಹಾತ್ಮನಃ ।
ಶ್ರುತ್ವಾ ಹೃಷ್ಟೋಽಭವದ್ ರಾಜಾ ವಾಕ್ಯಂ ಚೇದಮುವಾಚ ಹ ।
ಏವಮಸ್ತ್ವಿತಿ ಧರ್ಮಾತ್ಮಾ ತದಾ ಭರತಸತ್ತಮ ॥೧೫॥

ಭೀಷ್ಮ- ಎಲೈ ಭರತಸತ್ತಮನೇ, ಕುಶಿಕನಾದರೂ ಮಹಾತ್ಮರಾದ ಚ್ಯವನ ಋಷಿಗಳ ಮಾತನ್ನು ಕೇಳಿ ಸಂತೋಷಗೊಂಡು ಧರ್ಮಾತ್ಮನಾದ ಅವನು ಹಾಗೆಯೇ ಆಗಲಿ ಎಂದು ಹೇಳಿದನು.

ಚ್ಯವನಸ್ತು ಮಹಾತೇಜಾಃ ಪುನರೇವ ನರಾಧಿಪಮ್ ।
ವರಾರ್ಥಂ ಚೋದಯಾಮಾಸ ತಮುವಾಚ ಸ ಪಾರ್ಥಿವಃ ॥೧೬॥

ಮಹಾತೇಜಸ್ವಿಗಳಾದ ಚ್ಯವನರಾದರೂ ರಾಜನನ್ನು ಕುರಿತು ಪುನಃ ವರವನ್ನು ಕೇಳುವಂತೆ ಒತ್ತಾಯ ಮಾಡಿದರು. ಆಗ ರಾಜನು ಅವರನ್ನು ಕುರಿತು ಹೇಳಿದನು.

ಬಾಢಮೇವಂ ಗ್ರಹೀಷ್ಯಾಮಿ ಕಾಮಂ ತ್ವತ್ತೋ ಮಹಾಮುನೇ ।
ಬ್ರಹ್ಮಭೂತಂ ಕುಲಂ ಮೇಽಸ್ತು ಧರ್ಮೇ ಚಾಸ್ಯ ಮನೋ ಭವೇತ್ ॥

ಎಲೈ ಮಹರ್ಷಿಗಳೇ, ಒಳ್ಳೆಯದು. ನಿಮ್ಮಿಂದ ವರವನ್ನು ಪಡೆಯುವೆನು. ನಮ್ಮ ಕುಲಕ್ಕೆ ಬ್ರಾಹ್ಮಣ್ಯ ಉಂಟಾಗಲಿ ಮತ್ತು ಧರ್ಮದಲ್ಲಿ ಮನಸ್ಸುಂಟಾಗಲಿ (ಎಂದು ಹೇಳಿದನು).

ಏವಮುಕ್ತಸ್ತಥೇತ್ಯೇವಂ ಪ್ರತ್ಯುಕ್ತ್ವಾ ಚ್ಯವನೋ ಮುನಿಃ ।
ಅಭ್ಯನುಜ್ಞಾಯ ನೃಪತಿಂ ತೀರ್ಥಯಾತ್ರಾಂ ಯಯೌ ತದಾ ॥೧೮॥

ಹೀಗೆ ನೃಪತಿಯು ಹೇಳುತ್ತಿರಲು ಚ್ಯವನ ಮುನಿಗಳು ಹಾಗೆಯೇ ಆಗಲಿ ಎಂದು ಹೇಳಿ ಅವನಿಂದ ಅನುಮತಿಯನ್ನು ಪಡೆದು ತೀರ್ಥಯಾತ್ರೆಗೆ ಹೊರಟರು.

ಏತತ್ತೇ ಕಥಿತಂ ಸರ್ವಮಶೇಷೇಣ ಮಯಾ ನೃಪ ।
ಭೃಗೂಣಾಂ ಕುಶಿಕಾನಾಂ ಚ ಪ್ರತಿ ಸಂಬಂಧಕಾರಣಮ್ ॥೧೯॥

ಎಲೈ ರಾಜನೇ, ಭಾರ್ಗವರಿಗೂ ಮತ್ತು ಕುಶಿಕರಿಗೂ ಹೇಗೆ ಪರಸ್ಪರ ಸಂಬಂಧ ಉಂಟಾಯಿತು ಎಂಬುದನ್ನು ನಾನು ನಿನಗೆ ಸಮಗ್ರವಾಗಿ ತಿಳಿಸಿದ್ದೇನೆ.

ಯಥೋಕ್ತಂ ಮುನಿನಾ ಚಾಪಿ ತಥಾ ತದಭವನ್ನೃಪ ।
ಜನ್ಮ ರಾಮಸ್ಯ ಚ ಮುನೇರ್ವಿಶ್ವಾಮಿತ್ರಸ್ಯ ಚೈವ ಹ ॥೨೦॥

ಎಲೈ ಯುಧಿಷ್ಠಿರನೇ, ಚ್ಯವನರು ಹೇಳಿದಂತೆಯೇ ಪರಶುರಾಮರ ಉತ್ಪತ್ತಿಯೂ ಮತ್ತು ವಿಶ್ವಾಮಿತ್ರ ಋಷಿಗಳ ಉತ್ಪತ್ತಿಯೂ ಉಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಚ್ಯವನಕುಶಿಕಸಂವಾದೇ
ವಿಶ್ವಾಮಿತ್ರರಾಮಜನ್ಮಕಾರಣಕಥನಂ ನಾಮ ಷಡಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೇಳನೆಯ ಅಧ್ಯಾಯ

ಯಮನಿಯಮದಾನಫಲಗಳು.

ಯುಧಿಷ್ಠಿರಃ

ಮುಹ್ಯಾಮೀವ ನಿಶಮ್ಯಾದ್ಯ ಚಿಂತಯಾನಃ ಪುನಃ ಪುನಃ ।
ಹೀನಾಂ ಪಾರ್ಥಿವಸಂಘಾತೈಃ ಶ್ರೀಮದ್ಭಿಃ ಪೃಥಿವೀಮಿಮಾಮ್ ॥೧॥

ಯುಧಿಷ್ಠಿರ– ನಾನು ಶ್ರೀಮಂತರಾದ ಕ್ಷತ್ರಿಯ ಸಮೂಹದಿಂದ ರಹಿತವಾದ ಈ ಭೂಮಿಯನ್ನು ನೋಡಿ ಪುನಃ ಪುನಃ ಚಿಂತಿಸುತ್ತಾ ಈ ದಿನ ಮೋಹಕ್ಕೆ ಒಳಗಾಗುತ್ತಿದ್ದೇನೆ.

ಪ್ರಾಪ್ಯ ರಾಜ್ಯಾನಿ ಶತಶೋ ಮಹೀಂ ಜಿತ್ವಾಪಿ ಭಾರತ ।
ಕೋಟಿಶಃ ಪುರುಷಾನ್ ಹತ್ವಾ ಪರಿತಪ್ಯೇ ಪಿತಾಮಹ ॥೨॥

ಎಲೈ ಭಾರತನೇ, ಪಿತಾಮಹನೇ, ಭೂಮಿಯನ್ನು ಗೆದ್ದು ನೂರಾರು ರಾಜ್ಯಗಳನ್ನು ಪಡೆದರೂ ಕೋಟಿಗಟ್ಟಲೆ ಪುರುಷರನ್ನು ಕೊಂದು ಪರಿತಪಿಸುತ್ತಿದ್ದೇನೆ.

ಕಾ ನು ತಾಸಾಂ ವರಸ್ತ್ರೀಣಾಮವಸ್ಥಾऽದ್ಯ ಭವಿಷ್ಯತಿ ।
ಯಾ ಹೀನಾಃ ಪತಿಭಿಃ ಪುತ್ರೈರ್ಭ್ರಾತೃಭಿಸ್ತಥಾ ॥೩॥

ಪತಿಗಳಿಂದಲೂ, ಪುತ್ರರಿಂದಲೂ, ಸೋದರಮಾವಂದಿರಿಂದಲೂ, ಸಹೋದರರಿಂದಲೂ ಹೀನರಾದ ಸುಂದರ ಸ್ತ್ರೀಯರಿಗೆ ಈ ದಿನ ಎಂತಹ ಅವಸ್ಥೆಯು ಉಂಟಾಗುವುದು!

ವಯಂ ಹಿ ತಾನ್ ಗುರೂನ್ ಹತ್ವಾ ಜ್ಞಾತೀಂಶ್ಚ ಸುಹೃದೋಽಪಿ ಚ ।
ಅವಾಕ್‌ಶೀರ್ಷಾಃ ಪತಿಷ್ಯಾಮೋ ನರಕೇ ನಾತ್ರ ಸಂಶಯಃ ॥೪॥

ನಾವಾದರೂ ಆ ಗುರುಗಳನ್ನೂ, ಬಾಂಧವರನ್ನೂ, ಸುಹೃದರನ್ನೂ ಕೊಂದು ತಲೆಕೆಳಗಾಗಿ ನರಕದಲ್ಲಿ ಬೀಳುವೆವು. ಇದರಲ್ಲಿ ಸಂಶಯವಿಲ್ಲ.

ಶರೀರಂ ಯೋಕ್ತುಮಿಚ್ಛಾಮಿ ತಪಸೋಗ್ರೇಣ ಭಾರತ ।
ಉಪದಿಷ್ಟಮಿಹೇಚ್ಛಾಮಿ ತತ್ತ್ವತೋಽಹಂ ವಿಶಾಂಪತೇ ॥೫॥

ಎಲೈ ಭಾರತನೇ, ನಾನು ನನ್ನ ಶರೀರವನ್ನು ಉಗ್ರವಾದ ತಪಸ್ಸಿನಲ್ಲಿ ತೊಡಗಿಸಲು ಬಯಸುತ್ತೇನೆ. ಎಲೈ ರಾಜನೇ, ಈ ವಿಷಯದಲ್ಲಿ ನಿನ್ನ ಸತ್ಯವಾದ ಉಪದೇಶವನ್ನು ಕೇಳಲು ಬಯಸುತ್ತೇನೆ.

ವೈಶಂಪಾಯನಃ

ಯುಧಿಷ್ಠಿರಸ್ಯ ತದ್ವಾಕ್ಯಂ ಶ್ರುತ್ವಾ ಭೀಷ್ಮೋ ಮಹಾಮನಾಃ ।
ಪರೀಕ್ಷ್ಯ ನಿಪುಣಂ ಬುದ್ಧ್ಯಾ ಯುಧಿಷ್ಠಿರಮಭಾಷತ ॥೬॥

ವೈಶಂಪಾಯನ– ಯುಧಿಷ್ಠಿರನ ಆ ಮಾತನ್ನು ಕೇಳಿ ಧೈರ್ಯಶಾಲಿಗಳಾದ ಭೀಷ್ಮರು ಅವರ ಬುದ್ಧಿಯಿಂದ ವಿಷಯವನ್ನು ಚೆನ್ನಾಗಿ ಪರೀಕ್ಷಿಸಿ ಯುಧಿಷ್ಠಿರನನ್ನು ಕುರಿತು ಮಾತನಾಡಿದರು.

ಭೀಷ್ಮಃ

ರಹಸ್ಯಮದ್ಭುತಂ ಚೈವ ಶೃಣು ವಕ್ಷ್ಯಾಮಿ ಯತ್ ತ್ವಯಿ ।
ಯಾ ಗತಿಃ ಪ್ರಾಪ್ಯತೇ ಯೇನ ಪ್ರೇತ್ಯಭಾವೇಷು ಭಾರತ ॥೭॥

ಭೀಷ್ಮ– ಎಲೈ ಭಾರತನೇ, ಮರಣವನ್ನು ಹೊಂದಿದ ಮೇಲೆ ಯಾರು ಯಾವ ಗತಿಯನ್ನು ಹೊಂದುತ್ತಾರೆಂಬ ಅದ್ಭುತವಾದ ವಿಷಯವನ್ನು ಹೇಳುವೆನು, ಅದನ್ನು ನೀನು ಕೇಳುವವನಾಗು.

ತಪಸಾ ಪ್ರಾಪ್ಯತೇ ಸ್ವರ್ಗಸ್ತಪಸಾ ಪ್ರಾಪ್ಯತೇ ಯಶಃ ।
ಆಯುಃಪ್ರಕರ್ಷೋ ಭೋಗಾಶ್ಚ ಲಭ್ಯಂತೇ ತಪಸಾ ವಿಭೋ ॥೮॥

ತಪಸ್ಸಿನಿಂದ ಸ್ವರ್ಗಪ್ರಾಪ್ತಿಯಾಗುತ್ತದೆ, ಕೀರ್ತಿಪ್ರಾಪ್ತಿಯಾಗುತ್ತದೆ. ಎಲೈ ವಿಭುವೇ, ಆಯುಷ್ಯ ವೃದ್ಧಿ, ಭೋಗಗಳು ತಪಸ್ಸಿನಿಂದ ಲಭಿಸುತ್ತವೆ.

ಜ್ಞಾನಂ ವಿಜ್ಞಾನಮಾರೋಗ್ಯಂ ರೂಪಂ ಸಂಪತ್ ತಥೈವ ಚ ।
ಸೌಭಾಗ್ಯಂ ಚೈವ ತಪಸಾ ಪ್ರಾಪ್ಯತೇ ಭರತರ್ಷಭ ॥೯॥

ಎಲೈ ಭರತರ್ಷಭನೇ, ಜ್ಞಾನ, ವಿಜ್ಞಾನ, ಆರೋಗ್ಯ, ರೂಪ, ಐಶ್ವರ್ಯ, ಸೌಭಾಗ್ಯ ಎಲ್ಲವೂ ತಪಸ್ಸಿನಿಂದ ದೊರೆಯುತ್ತವೆ.

ಧನಂ ಪ್ರಾಪ್ನೋತಿ ತಪಸಾ ಮೌನಂ ಜ್ಞಾನಂ ಪ್ರಯಚ್ಛತಿ ।
ಉಪಭೋಗಾಂಸ್ತು ದಾನೇನ ಬ್ರಹ್ಮಚರ್ಯೇಣ ಜೀವಿತಮ್ ॥೧೦॥

ತಪಸ್ಸಿನಿಂದ ಧನವನ್ನು ಪಡೆಯುತ್ತಾನೆ. ಮೌನವು ಜ್ಞಾನವನ್ನು ಕೊಡುತ್ತವೆ. ದಾನವು ಉಪಭೋಗಗಳನ್ನೂ, ಬ್ರಹ್ಮಚರ್ಯವು ದೀರ್ಘಾಯುಷ್ಯವನ್ನೂ ಕೊಡುತ್ತವೆ.

ಅಹಿಂಸಾಯಾಃ ಫಲಂ ರೂಪಂ ದೀಕ್ಷಾಯಾ ಜನ್ಮ ವೈ ಕುಲೇ ।
ಫಲಮೂಲಾಶಿನಾಂ ರಾಜ್ಯಂ ಸ್ವರ್ಗಃ ಪರ್ಣಾಶಿನಾಂ ಭವೇತ್ ॥೧೧॥

ಅಹಿಂಸೆಯ ಫಲವು ರೂಪ. ದೀಕ್ಷೆಯ ಫಲವು ಸತ್ಕುಲದಲ್ಲಿ ಜನ್ಮ. ಫಲಮೂಲಗಳನ್ನು ಸ್ವೀಕರಿಸಿ ತಪಸ್ಸನ್ನು ಮಾಡುವವರಿಗೆ ರಾಜ್ಯವೂ ಮತ್ತು ಎಲೆಗಳನ್ನು ಆಹಾರವಾಗಿ ಸ್ವೀಕರಿಸಿ ತಪಸ್ಸನ್ನು ಮಾಡುವವರಿಗೆ ಸ್ವರ್ಗವೂ ಫಲವಾಗಿ ದೊರೆಯುತ್ತವೆ.

ಪಯೋಭಕ್ಷೋ ದಿವಂ ಯಾತಿ ಸ್ನಾನೇನ ದ್ರವಿಣಾಧಿಕಃ ।
ಗುರುಶು(ಶಿ)ಶ್ರೂಷಯಾ ವಿದ್ಯಾ ನಿತ್ಯಶ್ರಾದ್ಧೇನ ಸಂತತಿಃ ॥೧೨॥

ಕ್ಷೀರ ಪಾನ ಮಾಡಿ ತಪಸ್ಸನ್ನು ಮಾಡುವವನು ಸ್ವರ್ಗಕ್ಕೆ ಹೋಗುತ್ತಾನೆ. ಸ್ನಾನದಿಂದ ಅಧಿಕ ದ್ರವ್ಯಶಾಲಿಯಾಗುತ್ತಾನೆ. ಗುರುಶುಶ್ರೂಷೆಯಿಂದ ವಿದ್ಯೆಯನ್ನೂ, ನಿತ್ಯಶ್ರಾದ್ಧದಿಂದ ಸಂತತಿಯನ್ನೂ ಪಡೆಯುತ್ತಾನೆ.

ಗವಾಢ್ಯಃ ಶಾಕದೀಕ್ಷಾಭಿಃ ಸ್ವರ್ಗಮಾಹುಸ್ತೃಣಾಶನಾತ್ ।
ಸ್ತ್ರಿಯಸ್ತ್ರಿಷ್ಪವಣಸ್ನಾನಾದ್ ವಾಯುಂ ಪೀತ್ವಾ ಕ್ರತುಂ ಲಭೇತ್ ॥೧೩॥

ಶಾಕವ್ರತವನ್ನು ಮಾಡುವುದರಿಂದ ಗೋಸಂಪತ್ತಿಯನ್ನು ಪಡೆಯುತ್ತಾನೆ. ಹುಲ್ಲನ್ನು ತಿಂದು ತಪಸ್ಸನ್ನು ಮಾಡುವುದರಿಂದ ಸ್ವರ್ಗವನ್ನು ಪಡೆಯುತ್ತಾನೆಂದು ಹೇಳುತ್ತಾರೆ. ಮೂರು ಕಾಲದಲ್ಲಿಯೂ ಸ್ನಾನವನ್ನು ಪಡೆಯುವುದರಿಂದ ಒಳ್ಳೆಯ ಶೀಲವನ್ನು ಪಡೆಯುತ್ತಾನೆ. ವಾಯುಭಕ್ಷನಾಗಿ ತಪಸ್ಸನ್ನು ಮಾಡಿದರೆ ಯಾಗವನ್ನು ಮಾಡುವವನಾಗುತ್ತಾನೆ (ಯಾಗದಿಂದ ಉಂಟಾಗುವ ಫಲವನ್ನು ಪಡೆಯುತ್ತಾನೆ).

ನಿತ್ಯಸ್ನಾಯೀ ಭವೇದ್ ದಕ್ಷಃ ಸಂಧ್ಯೇ ತು ದ್ವೇ ಜಪನ್ ದ್ವಿಜಃ ।
ಮರುಂ ಸಾಧಯತೋ ರಾಜ್ಯಂ ನಾಕಪೃಷ್ಠಮನಾಶಕೇ ॥೧೪॥

ನಿತ್ಯವೂ ಸ್ನಾನವನ್ನು ಮಾಡುವವನು ದಕ್ಷನಾಗುತ್ತಾನೆ. ಎರಡು ಸಂಧ್ಯಾಕಾಲದಲ್ಲಿ ಜಪವನ್ನು ಮಾಡುವವನು ಬ್ರಾಹ್ಮಣನಾಗುತ್ತಾನೆ. ಮರುಭೂಮಿಯನ್ನು ಹದಗೊಳಿಸಿ ವ್ಯವಸಾಯವನ್ನು ಮಾಡುವವನು ರಾಜ್ಯವನ್ನು ಪಡೆಯುತ್ತಾನೆ. ಆಹಾರವನ್ನು ಸ್ವೀಕರಿಸದೆ ತಪಸ್ಸನ್ನು ಮಾಡುವವನು ಸ್ವರ್ಗವನ್ನು ಪಡೆಯುತ್ತಾನೆ.

ಸ್ಥಂಡಿಲೇ ಶಯಮಾನಾನಾಂ ಗೃಹಾಣಿ ಶಯನಾನಿ ಚ ।
ಚೀರವಲ್ಕಲವಾಸೋಭಿರ್ವಾಸಾಂಸ್ಯಾಭರಣಾನಿ ಚ ॥೧೫॥

ಭೂಮಿಯ ಮೇಲೆ ಮಲಗುವವನು ಗೃಹಗಳನ್ನು ಮತ್ತು ಶಯನಗಳನ್ನು ಪಡೆಯುತ್ತಾನೆ. ನಾರುಮಡಿ ಮತ್ತು ತೊಗಟೆಗಳನ್ನು ಉಡುವವನು ವಸ್ತ್ರಾಭರಣಗಳನ್ನು ಪಡೆಯುತ್ತಾನೆ.

ಶಯ್ಯಾಸನಾನಿ ಯಾನಾನಿ ಯೋಗಯುಕ್ತೇ ತಪೋಧನೇ ।
ಅಗ್ನಿಪ್ರವೇಶೇ ನಿಯತಂ ಬ್ರಹ್ಮಲೋಕೋ ವಿಧೀಯತೇ ॥೧೬॥

ಯೋಗಯುಕ್ತನಾದ ತಪಸ್ವಿಗೆ ಶಯ್ಯಾಸನ ಯಾನಗಳು ದೊರೆಯುತ್ತವೆ. ಅಗ್ನಿ ಪ್ರವೇಶ ಮಾಡುವವನಿಗೆ ನಿಶ್ಚಿತವಾಗಿ ಬ್ರಹ್ಮಲೋಕವು ದೊರೆಯುತ್ತದೆ.

ರಸಾನಾಂ ಪ್ರತಿಸಂಹಾರಾತ್ ಸೌಭಾಗ್ಯಮಿಹ ವಿಂದತಿ ।
ಆಮಿಷಪ್ರತಿಸಂಹಾರಾತ್ ಪ್ರಜಾಽಸ್ಯಾಯುಷ್ಮತೀ ಭವೇತ್ ॥೧೭॥

ರಸ ಪದಾರ್ಥಗಳನ್ನು ದಾನ ಮಾಡುವುದರಿಂದ ಈ ಲೋಕದಲ್ಲಿ ಸೌಭಾಗ್ಯವು ದೊರೆಯುತ್ತದೆ. ಮಾಂಸವನ್ನು ದಾನ ಮಾಡುವುದರಿಂದ ಅವನ ಪ್ರಜೆಗಳು ಆಯುಷ್ಯ ವೃದ್ಧಿಯನ್ನು ಪಡೆಯುತ್ತಾರೆ.

ಉದವಾಸಂ ವಸೇದ್ ಯಸ್ತು ಸ ನರಾಧಿಪತಿರ್ಭವೇತ್ ।
ಸತ್ಯವಾದೀ ನರಶ್ರೇಷ್ಠ ದೈವತೈಃ ಸಹ ಮೋದತೇ ॥೧೮॥

ನೀರಿನಲ್ಲಿ ವಾಸ ಮಾಡಿ ತಪಸ್ಸನ್ನು ಮಾಡುವವನು ರಾಜನಾಗುತ್ತಾನೆ. ಎಲೈ ನರಶ್ರೇಷ್ಠನೇ, ಸತ್ಯವನ್ನು ನುಡಿಯುವವನು ದೇವತೆಗಳ ಜೊತೆಯಲ್ಲಿ ಸಂತೋಷವನ್ನು ಪಡುತ್ತಾನೆ.

ಕೀರ್ತಿರ್ಭವತಿ ದಾನೇನ ತಥಾऽರೋಗ್ಯಮಹಿಂಸಯಾ ।
ದ್ವಿಜಶು(ಶಿ)ಶ್ರೂಷಯಾ ರಾಜ್ಯಂ ದ್ವಿಜತ್ವಂ ವಾಪಿ ಪುಷ್ಕಲಮ್ ॥೧೯॥

ದಾನದಿಂದ ಕೀರ್ತಿಯೂ, ಅಹಿಂಸೆಯಿಂದ ಆರೋಗ್ಯವೂ, ಬ್ರಾಹ್ಮಣರ ಸೇವೆಯಿಂದ ರಾಜ್ಯವೂ ಮತ್ತು ಶ್ರೇಷ್ಠವಾದ ದ್ವಿಜತ್ವವೂ ದೊರೆಯುತ್ತವೆ.

ಪಾನೀಯಸ್ಯ ಪ್ರದಾನೇನ ಕೀರ್ತಿರ್ಭವತಿ ಶಾಶ್ವತೀ ।
ಅನ್ನಪಾನಪ್ರದಾನೇನ ತೃಪ್ಯತೇ ಕಾಮಭೋಗತಃ ॥೨೦॥

ಜಲದಾನದಿಂದ ಶಾಶ್ವತವಾದ ಕೀರ್ತಿಯುಂಟಾಗುತ್ತದೆ. ಅನ್ನಪಾನಗಳ ದಾನದಿಂದ ತೃಪ್ತಿಯಾಗುವಷ್ಟು ಕಾಮಭೋಗವನ್ನು ಅನುಭವಿಸುತ್ತಾನೆ.

ಸಾಂತ್ವದಃ ಸರ್ವಭೂತಾನಾಂ ಸರ್ವಶೋಕೈರ್ವಿಮುಚ್ಯತೇ ।
ದೇವಶುಶ್ರೂಷಯಾ ರಾಜ್ಯಂ ದಿವ್ಯಂ ರೂಪಂ ನಿಗಚ್ಛತಿ ॥೨೧॥

ಎಲ್ಲ ಪ್ರಾಣಿಗಳಿಗೂ ಸಾಂತ್ವನವನ್ನು ಕೊಡುವವನು ಎಲ್ಲ ಶೋಕಗಳಿಂದಲೂ ನಿರ್ಮುಕ್ತನಾಗುತ್ತಾನೆ. ದೇವತಾ ಸೇವೆಯಿಂದ ರಾಜ್ಯವನ್ನೂ ಮತ್ತು ದಿವ್ಯರೂಪವನ್ನೂ ಪಡೆಯುತ್ತಾನೆ.

ದೀಪಾಲೋಕಪ್ರದಾನೇನ ಚಕ್ಷುಷ್ಮಾನ್ ಭವತೇ ನರಃ ।
ಪ್ರೇಕ್ಷಣೀಯಪ್ರದಾನೇನ ಸ್ಮೃತಿಂ ಮೇಧಾಂ ಚ ವಿಂದತಿ ॥೨೨॥

ಪ್ರಕಾಶಮಾನವಾದ ದೀಪ ಪ್ರದಾನದಿಂದ ಮನುಷ್ಯನು ಒಳ್ಳೆಯ ಚಕ್ಷುಸ್ಸನ್ನು ಪಡೆಯುತ್ತಾನೆ. ಸುಂದರವಾದ ವಸ್ತುಗಳ ದಾನದಿಂದ ಸ್ಮೃತಿಶಕ್ತಿಯನ್ನು ಮತ್ತು ಮೇಧಾಶಕ್ತಿಯನ್ನು ಪಡೆಯುತ್ತಾನೆ.

ಗಂಧಮಾಲ್ಯನಿವೃತ್ತ್ಯಾ ತು ಕೀರ್ತಿರ್ಭವತಿ ಪುಷ್ಕಳಾ ।
ಕೇಶಶ್ಮಶ್ರೂನ್ ಧಾರಯತಾಮಗ್ರ್ಯಾ ಭವತಿ ಸಂತತಿಃ ॥೨೩॥

ಗಂಧಮಾಲ್ಯಗಳ ದಾನದಿಂದ ಪುಷ್ಕಳವಾದ ಕೀರ್ತಿಯುಂಟಾಗುತ್ತದೆ. ಗಡ್ಡ-ಮೀಸೆಗಳನ್ನು ಧರಿಸಿದವರಿಗೆ ಶ್ರೇಷ್ಠವಾದ ಸಂತತಿಯುಂಟಾಗುತ್ತದೆ.

ಉಪವಾಸಂ ಚ ದೀಕ್ಷಾಂ ಚ ಅಭಿಷೇಕಂ ಚ ಪಾರ್ಥಿವ ।
ಕೃತ್ವಾ ದ್ವಾದಶ ವರ್ಷಾಣಿ ವೀರಸ್ಥಾನಾದ್ ವಿಶಿಷ್ಯತೇ ॥೨೪॥

ಎಲೈ ರಾಜನೇ, ಉಪವಾಸ (ಭೋಗದ ತ್ಯಾಗ), ದೀಕ್ಷೆ ಮತ್ತು ಸ್ನಾನಗಳನ್ನು ಹನ್ನೆರಡು ವರ್ಷ ಮಾಡಿದರೆ ಅದು ಯುದ್ಧದಲ್ಲಿ ವೀರ ಮರಣವನ್ನು ಪಡೆಯುವುದಕ್ಕಿಂತ ಅಧಿಕವಾದ ಸ್ಥಾನವನ್ನು ಕೊಡುತ್ತದೆ.

ದಾಸೀದಾಸಮಲಂಕಾರಾನ್ ಕ್ಷೇತ್ರಾಣಿ ಚ ಗೃಹಾಣಿ ಚ ।
ಬ್ರಹ್ಮದೇಯಾಂ ಸುತಾಂ ದತ್ತ್ವಾ ಪ್ರಾಪ್ನೋತಿ ಮನುಜರ್ಷಭ ॥೨೫॥

ಎಲೈ ರಾಜನೇ, ಬ್ರಾಹ್ಮಪದ್ಧತಿಯಲ್ಲಿ ವಿವಾಹ ಮಾಡಿ ಕನ್ಯೆಯನ್ನು ಬ್ರಾಹ್ಮಣನಿಗೆ ಕೊಟ್ಟು ದಾಸಿ-ದಾಸರನ್ನು, ಅಲಂಕಾರಗಳನ್ನು, ಕ್ಷೇತ್ರ ಮತ್ತು ಗೃಹಗಳನ್ನು ಪಡೆಯುತ್ತಾನೆ.

ಕ್ರತುಭಿಶ್ಚೋಪವಾಸೈಶ್ಚ ತ್ರಿದಿವಂ ಯಾತಿ ಭಾರತ ।
ಲಭತೇ ಚ ಚಿರಂ ಸ್ಥಾನಂ ಬಲಿಪುಷ್ಪಪ್ರದೋ ನರಃ ॥೨೬॥

ಕ್ರತುಗಳು, ಉಪವಾಸಗಳು ಇವುಗಳನ್ನು ಮಾಡಿದವನು ಸ್ವರ್ಗವನ್ನು ಪಡೆಯುತ್ತಾನೆ. ಆಹಾರವನ್ನು ಮತ್ತು ಪುಷ್ಪಗಳನ್ನು ದಾನ ಮಾಡುವವನು ಶಾಶ್ವತವಾದ ದಾನವನ್ನು ಹೊಂದುತ್ತಾನೆ.

ಸುವರ್ಣಶೃಂಗೈಸ್ತು ವಿಭೂಷಿತಾನಾಂ
ಗವಾಂ ಸಹಸ್ರಸ್ಯ ನರಃ ಪ್ರದಾತಾ ।

ಪ್ರಾಪ್ನೋತಿ ಪುಣ್ಯಂ ದಿವಿ ದೇವಲೋಕ-
ಮಿತ್ಯೇವಮಾಹುರ್ಮುನಿದೇವಸಂಘಾಃ ॥೨೭॥

ಸುವರ್ಣಶೃಂಗಗಳಿಂದ ಭೂಷಿತವಾದ ಸಹಸ್ರ ಗೋವುಗಳನ್ನು ದಾನ ಮಾಡುವ ಮನುಷ್ಯನು ಸ್ವರ್ಗದಲ್ಲಿ ಪವಿತ್ರವಾದ ದೇವಲೋಕವನ್ನು ಪಡೆಯುವನೆಂದು ಮುನಿ-ದೇವಸಮೂಹಗಳು ಹೇಳುತ್ತವೆ.

ಪ್ರಯಚ್ಛತೇ ಯಃ ಕಪಿಲಾಂ ಸಚೈಲಾಂ
ಕಾಂಸ್ಯೋಪದೋಹಾಂ ಕನಕಾಗ್ರಶೃಂಗೀಮ್ ।
ತೈಸ್ತೈರ್ಗುಣೈಃ ಕಾಮದುಘಾಽಸ್ಯ ಭೂತ್ವಾ
ನರಂ ಪ್ರದಾತಾರಮುಪೈತಿ ಸಾ ಗೌಃ ॥೨೮॥

ಯಾವನು ವಸ್ತ್ರ, ಕಂಚಿನಪಾತ್ರೆ ಮತ್ತು ಕನಕ ಶೃಂಗಾಗಳಿಂದ ಕೂಡಿದ ಕಪಿಲ ಧೇನುವನ್ನು ದಾನ ಮಾಡುತ್ತಾನೆಯೋ ಅವನಿಗೆ ಆ ಧೇನುವು ಆಯಾ ಗುಣಗಳಿಂದ ಕೂಡಿದ ಕಾಮಧೇನುವಾಗಿ ದಾನ ಮಾಡಿದವನ ಸಮೀಪಕ್ಕೆ ಬರುತ್ತದೆ.

ಯಾವಂತಿ ಲೋಮಾನಿ ಭವಂತಿ ಧೇನ್ವಾಃ
ತಾವತ್ಫಲಂ ಪ್ರಾಪ್ನುತೇ ಗೋಪ್ರದಾತಾ ।
ಪುತ್ರಾಂಶ್ಚ ಪೌತ್ರಾಂಶ್ಚ ಕುಲಂ ಚ ಸರ್ವಮ್
ಆಸಪ್ತಮಂ ತಾರಯತೇ ಪರತ್ರ ॥೨೯॥

ಗೋವಿನ ದೇಹದಲ್ಲಿ ಎಷ್ಟು ರೋಮಗಳಿರುತ್ತವೆಯೋ ಗೋದಾನವನ್ನು ಮಾಡುವವನು ಅಷ್ಟು ಫಲವನ್ನು ಪಡೆಯುತ್ತಾನೆ. ಈ ಲೋಕದಲ್ಲಿ ಪುತ್ರ-ಪೌತ್ರರನ್ನು ಪಡೆದು ಏಳು ತಲೆಗಳವರೆಗೆ ಪರಲೋಕದಲ್ಲಿ ತನ್ನ ಕುಲದ ಎಲ್ಲರನ್ನೂ ಉದ್ಧರಿಸುತ್ತಾನೆ.

ಸದಕ್ಷಿಣಾಂ ಕಾಂಚನಚಾರುಶೃಂಗೀಂ
ಕಾಂಸ್ಯೋಪದೋಹಾಂ ದ್ರವಿಣೋತ್ತರೀಯಾಮ್ ।
ಧೇನುಂ ತಿಲಾನಾಂ ದದತೋ ದ್ವಿಜಾಯ
ಲೋಕಾ ವಸೂನಾಂ ಸುಲಭಾ ಭವಂತಿ ॥೩೦॥

ದಕ್ಷಿಣೆ ಸಹಿತವಾದ ಸುವರ್ಣಮಯ ಅಲಂಕಾರದಿಂದ ಕೂಡಿದ ಶೃಂಗಗಳುಳ್ಳ, ಕಂಚಿನ ಪಾತ್ರೆಯನ್ನುಳ್ಳ, ಒಳ್ಳೆಯ ಉತ್ತರೀಯವನ್ನು ಹೊದಿಸಿದ ಗೋವನ್ನು ಮತ್ತು ತಿಲಗಳನ್ನು ಬ್ರಾಹ್ಮಣನಿಗೆ ಕೊಡುವವರಿಗೆ ವಸುಗಳ ಲೋಕವು ಅನಾಯಾಸದಿಂದ ದೊರೆಯುತ್ತದೆ.

ಸ್ವಕರ್ಮಭಿರ್ಮಾನವಂ ಸನ್ನಿಬದ್ಧಂ
ತೀವ್ರಾಂಧಕಾರೇ ನರಕೇ ಪತಂತಮ್ ।
ಮಹಾರ್ಣವೇ ನೌರಿವ ವಾಯುಯುಕ್ತಾ
ದಾನಂ ಗವಾಂ ತಾರಯತೇ ಪರತ್ರ ॥೩೧॥

ತನ್ನ ಕರ್ಮಗಳಿಂದ ನರಕದ ತೀವ್ರಾಂಧಕಾರದಲ್ಲಿ ಬಿದ್ದು ಕಟ್ಟಲ್ಪಟ್ಟ ಮನುಷ್ಯನನ್ನು ಮಹಾಸಮುದ್ರದಲ್ಲಿ ವಾಯುವಿನಿಂದ ಪ್ರೇರಿಸಲ್ಪಟ್ಟ ನಾವೆಯಂತೆ ಗೋದಾನವು ಪರಲೋಕದಲ್ಲಿ ದಾಟಿಸುತ್ತದೆ.

ಯೋ ಬ್ರಹ್ಮದೇಯಾಂ ತು ದದಾತಿ ಕನ್ಯಾಂ
ಭೂಮಿಪ್ರದಾನಂ ಚ ಕರೋತಿ ವಿಪ್ರೇ ।
ದದಾತಿ ಚಾನ್ನಂ ವಿಧಿವಚ್ಚ ಯಶ್ಚ
ಸ ಲೋಕಮಾಪ್ನೋತಿ ಪುರಂದರಸ್ಯ ॥೩೨॥

ಬ್ರಾಹ್ಮ ಪದ್ಧತಿಯಿಂದ ಕನ್ಯಾದಾನವನ್ನು ಮಾಡುವವನೂ, ಬ್ರಾಹ್ಮಣನಿಗೆ ಭೂಮಿ ಪ್ರದಾನವನ್ನು ಮಾಡುವವನೂ ಮತ್ತು ಬ್ರಾಹ್ಮಣನಿಗೆ ವಿಧಿಪ್ರಕಾರವಾಗಿ ಅನ್ನದಾನವನ್ನು ಮಾಡುವವನೂ ಸಹ ಇಂದ್ರಲೋಕವನ್ನು ಪಡೆಯುತ್ತಾರೆ.

ನೈವೇಶಿಕಂ ಸರ್ವಗುಣೋಪಪನ್ನಂ
ದದಾತಿ ವೈ ಯಸ್ತು ನರೋ ದ್ವಿಜಾಯ ।
ಸ್ವಾಧ್ಯಾಯಚಾರಿತ್ರಗುಣಾನ್ವಿತಾಯ
ತಸ್ಯಾಪಿ ಲೋಕಾಃ ಕುರುಷೂತ್ತರೇಷು ॥೩೩॥

ಯಾವ ಮನುಷ್ಯನು ಸ್ವಾಧ್ಯಾಯ ಚಾರಿತ್ರ್ಯ ಸಂಪನ್ನನಾದ ಬ್ರಾಹ್ಮಣನಿಗೆ ಸರ್ವೋಪಸ್ಕರಗಳಿಂದ ಸಹಿತವಾದ ಗೃಹವನ್ನು ದಾನ ಮಾಡುತ್ತಾನೆಯೋ ಅವನು ಉತ್ತರಕುರುದೇಶದಲ್ಲಿ ಜನ್ಮವನ್ನು ಪಡೆಯುತ್ತಾನೆ.

ಧುರ್ಯಪ್ರದಾನೇನ ಗವಾಂ ತಥಾಶ್ವಲ-
ಲೋ೯ಕಾನವಾಪ್ನೋತಿ ನರೋ ವಸೂನಾಮ್ ।
ಸ್ವರ್ಗಾಯ ಚಾಹುರ್ಹಿ ಹಿರಣ್ಯದಾನಂ
ತತೋ ವಿಶಿಷ್ಟಂ ಕನಕಪ್ರದಾನಮ್ ॥೩೪॥

ಭಾರವನ್ನು ಹೊರುವ ಎತ್ತುಗಳನ್ನು, ಗೋವುಗಳನ್ನು ಮತ್ತು ಅಶ್ವಗಳನ್ನು ದಾನ ಮಾಡುವವನು ವಸುಗಳ ಲೋಕವನ್ನು ಹೊಂದುತ್ತಾನೆ. ಹಿರಣ್ಯದಾನವು ಸ್ವರ್ಗಪ್ರಾಪ್ತಿಗೆ ಕಾರಣವೆಂದೂ, (ಆಭರಣರೂಪವಾದ) ಕನಕದಾನವು ಅದಕ್ಕಿಂತ ಶ್ರೇಷ್ಠವಾದುದೆಂದೂ ಹೇಳುತ್ತಾರೆ.

ಛತ್ರಪ್ರದಾನೇನ ಗೃಹಂ ವರಿಷ್ಠಂ
ಯಾನಂ ತಥೋಪಾನಹಸಂಪ್ರದಾನೇ ।
ವಸ್ತ್ರಪ್ರದಾನೇನ ಫಲಂ ಸುರೂಪಂ
ಗಂಧಪ್ರದಾನೇ ಸುರಭಿರ್ನರಃ ಸ್ಯಾತ್ ॥೩೫॥

ಛತ್ರದಾನದಿಂದ ಶ್ರೇಷ್ಠವಾದ ಗೃಹವನ್ನೂ, ಪಾದರಕ್ಷೆಗಳ ದಾನದಿಂದ ಯಾನವನ್ನೂ, ವಸ್ತ್ರಪ್ರದಾನದಿಂದ ಒಳ್ಳೆಯ ರೂಪವನ್ನೂ ಪಡೆಯುತ್ತಾನೆ. ಗಂಧಪ್ರದಾನದಿಂದ ಮನುಷ್ಯನು ಸುಗಂಧಯುಕ್ತನಾಗುತ್ತಾನೆ.

ಪುಷ್ಪೋಪಗಂ ವಾಥ ಫಲೋಪಗಂ ವಾ
ಯಃ ಪಾದಪಂ ಸ್ಪರ್ಶಯತೇ ದ್ವಿಜಾಯ ।
ಸ ಸ್ತ್ರೀಸಮೃದ್ಧಂ ಬಹುರತ್ನಪೂರ್ಣಂ
ಲಭತ್ಯಯತ್ನೋಪಗತಂ ಗೃಹಂ ವೈ ॥೩೬॥

ಸದ್ಯದಲ್ಲಿಯೇ ಪುಷ್ಪ-ಫಲವನ್ನು ಕೊಡಲಿರುವ ವೃಕ್ಷಗಳನ್ನು ಬ್ರಾಹ್ಮಣನಿಗೆ ದಾನ ಮಾಡುವವನು ಸ್ತ್ರೀಸಮೃದ್ಧವಾದ, ಬಹುರತ್ನಪೂರ್ಣವಾದ ಗೃಹವನ್ನು ತನ್ನ ಯತ್ನವಿಲ್ಲದೆಯೇ ಪಡೆಯುತ್ತಾನೆ.

ಭಕ್ಷಾನ್ನಪಾನೀಯರಸಪ್ರದಾತಾ
ಸರ್ವಾನವಾಪ್ನೋತಿ ರಸಾನ್ ಪ್ರಕಾಮಮ್ ।

ಪ್ರತಿಶ್ರಯಾಚ್ಛಾದನಸಂಪ್ರದಾತಾ
ಪ್ರಾಪ್ನೋತಿ ತಾನೇವ ನ ಸಂಶಯೋಽತ್ರ ॥೩೭॥

ಭಕ್ಷ್ಯ, ಅನ್ನಪಾನೀಯ ಮತ್ತು ರಸಗಳನ್ನು ಕೊಡುವವನು ಎಲ್ಲ ರಸಗಳನ್ನು ಹೇರಳವಾಗಿ ಪಡೆಯುತ್ತಾನೆ. ಮನೆಯನ್ನು ಮತ್ತು ವಸ್ತ್ರವನ್ನು ದಾನ ಮಾಡುವವನು ಶ್ರೇಷ್ಠವಾದ ಮನೆಯನ್ನು, ವಸ್ತ್ರವನ್ನು ಪಡೆಯುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಸ್ರಗ್ಧೂಪಗಂಧಾನ್ಯನುಲೇಪನಾನಿ
ಸ್ನಾನಾನಿ ಮಾಲ್ಯಾನಿ ಚ ಮಾನವೋ ಯಃ ।
ದದ್ಯಾದ್ ದ್ವಿಜೇಭ್ಯಃ ಸ ಭವೇದರೋಗ-
ಸ್ತಥಾಭಿರೂಪಶ್ಚ ನರೇಂದ್ರ ಲೋಕೇ ॥೩೮॥

ಯಾವ ಮನುಷ್ಯನು ಹೂ-ಮಾಲೆಗಳು, ಗಂಧಲೇಪ ಮತ್ತು ಅಡುಗೆ ಪಾತ್ರೆಗಳು, ಸಾಮಗ್ರಿಗಳು ಇವುಗಳನ್ನು ಬ್ರಾಹ್ಮಣರಿಗೆ ಕೊಡುತ್ತಾನೆಯೋ ಅವನು ಎಲೈ ನರೇಂದ್ರನೇ, ಲೋಕದಲ್ಲಿ ರೋಗರಹಿತನಾಗಿ ಒಳ್ಳೆಯ ರೂಪವನ್ನು ಹೊಂದುತ್ತಾನೆ.

ಬೀಜೈರಶೂನ್ಯಂ ಶಯನೈರುಪೇತಂ
ದದ್ಯಾದ್ ಗೃಹಂ ಯಃ ಪುರುಷೋ ದ್ವಿಜಾಯ ।
ಪುಣ್ಯಾಭಿರಾಮಂ ಬಹುರತ್ನಪೂರ್ಣಂ
ಲಭತ್ಯಧಿಷ್ಠಾನವರಂ ಸ ರಾಜನ್ ॥೩೯॥

ಶಯನಗಳಿಂದಲೂ ಮತ್ತು ಧಾನ್ಯಗಳಿಂದಲೂ ಪೂರ್ಣವಾದ ಗೃಹವನ್ನು ಯಾವನು ಬ್ರಾಹ್ಮಣನಿಗೆ ಕೊಡುತ್ತಾನೆಯೋ ಅವನು ಪುಣ್ಯವೂ, ಮನೋಹರವೂ, ಬಹುರತ್ನ ಪೂರ್ಣವೂ ಆದ ಶ್ರೇಷ್ಠವಾದ ಗೃಹವನ್ನು ಪಡೆಯುತ್ತಾನೆ.

ಸುಗಂಧಚಿತ್ರಾಸ್ತರಣೋಪಪನ್ನಂ
ದದ್ಯಾನ್ನರೋ ಯಃ ಶಯನಂ ದ್ವಿಜಾಯ ।
ರೂಪಾನ್ವಿತಾಂ ಪಕ್ಷವತೀಂ ಮನೋಜ್ಞಾಂ
ಭಾರ್ಯಾಮಯತ್ನೋಪಗತಾಂ ಲಭೇತ್ ಸಃ ॥೪೦॥

ಸುಗಂಧ ದ್ರವ್ಯಗಳಿಂದಲೂ, ಚಿತ್ರಾಸನದಿಂದಲೂ ಸಹಿತವಾದ ಹಾಸಿಗೆಯನ್ನು ಬ್ರಾಹ್ಮಣನಿಗೆ ಕೊಡುವವನು ಒಳ್ಳೆಯ ರೂಪದಿಂದ ಕೂಡಿದ, ಮನೋಹರಳಾದ, ಸತ್ಕುಲಪ್ರಸೂತಳಾದ ಭಾರ್ಯೆಯನ್ನು ಯತ್ನವಿಲ್ಲದೆಯೇ ಪಡೆಯುತ್ತಾನೆ.

ಪಿತಾಮಹಸ್ಯಾನುಚರೋ ವೀರಶಾಯೀ ಭವೇನ್ನರಃ ।
ನಾಧಿಕಂ ವಿದ್ಯತೇ ತಸ್ಮಾದಿತ್ಯಾಹುಃ ಪರಮರ್ಷಯಃ ॥೪೧॥

ಯುದ್ಧದಲ್ಲಿ ಮಡಿದು ಮಣಿಯುವವನು ಬ್ರಹ್ಮದೇವರ ಅನುಚರನಾಗುತ್ತಾನೆ. ಇದಕ್ಕಿಂತ ಶ್ರೇಷ್ಠವಾದ ಫಲವು ಯಾವುದೂ ಇಲ್ಲ ಎಂದು ಪರಮರ್ಷಿಗಳು ಹೇಳುತ್ತಾರೆ.

ಪುಸ್ತಕಂ ಚ ತಥಾ ಗಾವಃ ಕನ್ಯಾದಾನಂ ತಥೈವ ಚ ।
ಯೇ ನ ದಾಸ್ಯಂತಿ ಪುರುಷಾಸ್ತೇಷಾಂ ಸೌಖ್ಯಂ ಕುತೋ ಭವೇತ್ ॥೪೨॥

ಯಾವ ಮನುಷ್ಯರು ಪುಸ್ತಕವನ್ನಾಗಲೀ, ಗೋವುಗಳನ್ನಾಗಲೀ ಅಥವಾ ಕನ್ಯೆಯನ್ನಾಗಲೀ ದಾನ ಮಾಡುವುದಿಲ್ಲವೋ ಅವರಿಗೆ ಪರಲೋಕದಲ್ಲಿ ಸುಖವು ಎಲ್ಲಿಂದ ಬರಬೇಕು?

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಪ್ರೀತಾತ್ಮಾ ಕುರುನಂದನಃ ।
ನಾಶ್ರಮೇಽರೋಚಯದ್ ವಾಸಂ ವೀರಮಾರ್ಗಾಭಿಕಾಂಕ್ಷಯಾ ॥೪೩॥

ವೈಶಂಪಾಯನ– ಅವರ ಆ ಮಾತುಗಳನ್ನು ಕೇಳಿ ಸಂತೋಷಗೊಂಡ ಕುರುನಂದನನಾದ ಯುಧಿಷ್ಠಿರನು ವೀರ ಮಾರ್ಗವನ್ನು ಹೊಂದಲು ಬಯಸಿದನು. ಆಶ್ರಮ ವಾಸವನ್ನು ಬಯಸಲಿಲ್ಲ.

ತತೋ ಯುಧಿಷ್ಠಿರಃ ಪ್ರಾಹ ಪಾಂಡವಾನ್ ಭರತರ್ಷಭ ।
ಪಿತಾಮಹಸ್ಯ ಯದ್ವಾಕ್ಯಂ ತದ್ವೋ ರೋಚತ್ವಿತಿ ಪ್ರಭುಃ ॥೪೪॥

ಎಲೈ ಭರತರ್ಷಭನೇ, ಆಗ ಪ್ರಭುವಾದ ಯುಧಿಷ್ಠಿರನು ಪಾಂಡವರನ್ನು ಕುರಿತು ಪಿತಾಮಹನ ಮಾತುಗಳು ನಿಮಗೆ ಇಷ್ಟವಾಗಲಿ ಎಂದು ಹೇಳಿದನು.

ತತಸ್ತು ಪಾಂಡವಾಃ ಸರ್ವೇ ದ್ರೌಪದೀ ಚ ಯಶಸ್ವಿನೀ ।
ಯುಧಿಷ್ಠಿರಸ್ಯ ತದ್ವಾಕ್ಯಂ ಬಾಢಮಿತ್ಯಭ್ಯಪೂಜಯನ್ ॥೪೫॥

ಆಗ ಎಲ್ಲ ಪಾಂಡವರೂ ಮತ್ತು ಕೀರ್ತಿವಂತಳಾದ ದ್ರೌಪದಿಯು ಯುಧಿಷ್ಠಿರನ ಆ ವಾಕ್ಯವನ್ನು ಹಾಗೆಯೇ ಆಗಲಿ ಎಂದು ಹೇಳಿ ಗೌರವಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಬಹುದಾನಪ್ರಶಂಸಾನಾಮ
ಸಪ್ತಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆಂಟನೆಯ ಅಧ್ಯಾಯ

ಆರಾಮತಟಾಕಾದಿನಿರ್ಮಾಣಫಲ.

ಯುಧಿಷ್ಠಿರಃ

ಆರಾಮಾಣಾಂ ತಟಾಕಾನಾಂ ಯತ್ಫಲಂ ಕುರುಪುಂಗವ ।
ತದಹಂ ಶ್ರೋತುಮಿಚ್ಛಾಮಿ ತತ್ತ್ವತೋऽದ್ಯ ಭರತರ್ಷಭ ॥೧॥

ಯುಧಿಷ್ಠಿರ– ಎಲೈ ಕುರುಪುಂಗವನೇ, ಭರತರ್ಷಭನೇ, ಉದ್ಯಾನವನಗಳ ಮತ್ತು ತಟಾಕಗಳ ನಿರ್ಮಾಣದ ಫಲವನ್ನು ಈಗ ನಿನ್ನಿಂದ ಕೇಳಲು ಬಯಸುತ್ತೇನೆ.

ಭೀಷ್ಮಃ

ಸುಪ್ರದರ್ಶಾ ಬಲವತೀ ಚಿತ್ರಾ ಧಾತುವಿಭೂಷಿತಾ ।
ಉಪೇತಾ ಸರ್ವಭೂತೈಶ್ಚ ಶ್ರೇಷ್ಠಾ ಭೂಮಿರಿಹೋಚ್ಯತೇ ॥೨॥

ಭೀಷ್ಮ– ನೋಡಲು ಸುಂದರವಾಗಿದ್ದು, ಬಲಿಷ್ಠವೂ, ಅನೇಕ ಪ್ರಕಾರಗಳಿಂದ ವಿಚಿತ್ರವೂ, ಚಿನ್ನ-ಬೆಳ್ಳಿ-ತಾಮ್ರ-ಸೀಸಾ-ತವರ-ಪಾದರಸ-ಕಬ್ಬಿಣ ಈ ಧಾತುಗಳಿಂದ ವಿಭೂಷಿತವಾದುದೂ, ಎಲ್ಲ ರೀತಿಯ ಪ್ರಾಣಿಗಳಿಂದ ಕೂಡಿದುದೂ ಆದ ಭೂಮಿಯು ಶ್ರೇಷ್ಠವಾದುದೆಂದು ಹೇಳುತ್ತಾರೆ.

ತಸ್ಯಾಃ ಕ್ಷೇತ್ರವಿಶೇಷಾಶ್ಚ ತಟಾಕಾನಾಂ ಚ ಬಂಧನಮ್ ।
ಔದಕಾನಿ ಚ ಸರ್ವಾಣಿ ಪ್ರವಕ್ಷ್ಯಾಮ್ಯನುಪೂರ್ವಶಃ ॥೩॥

ಅದರಲ್ಲಿ ಉದ್ಯಾನಾದಿ ಕ್ಷೇತ್ರವಿಶೇಷಗಳನ್ನೂ, ತಟಾಕ ನಿರ್ಮಾಣವನ್ನೂ, ಎಲ್ಲ ರೀತಿಯ ಸರೋವರಾದಿ ನಿರ್ಮಾಣದ ಫಲವನ್ನೂ ಕ್ರಮವಾಗಿ ಹೇಳುವೆನು.

ತಟಾಕಾನಾಂ ಚ ವಕ್ಷ್ಯಾಮಿ ಕೃತಾನಾಂ ಚಾಪಿ ಯೇ ಗುಣಾಃ ।
ತ್ರಿಷು ಲೋಕೇಷು ಸರ್ವತ್ರ ಪೂಜನೀಯಸ್ತಟಾಕವಾನ್ ॥೪॥

ತಟಾಕ ನಿರ್ಮಾಣದಲ್ಲಿ ಇರುವ ಗುಣಗಳನ್ನು ಹೇಳುವೆನು. ತಟಾಕ ನಿರ್ಮಾಣ ಮಾಡುವವನು ಮೂರುಲೋಕಗಳಲ್ಲಿಯೂ ಪೂಜಿಸಲ್ಪಡುತ್ತಾನೆ.

ಅಥವಾ ಮಿತ್ರಸದನಂ ಮೈತ್ರಂ ಮಿತ್ರವಿವರ್ಧನಮ್ ।
ಕೀರ್ತಿಸಂಜನನಂ ಶ್ರೇಷ್ಠಂ ತಟಾಕಾನಾಂ ನಿವೇಶನಮ್ ॥೫॥

ತಟಾಕವು ಎಲ್ಲ ಪ್ರಾಣಿಗಳಿಗೂ ಸ್ನೇಹಿತನ ಮನೆಯಂತಿರುತ್ತದೆ. ಅದು ಸ್ನೇಹಮಯವಾದುದು ಮತ್ತು ಮಿತ್ರರನ್ನು ಹೆಚ್ಚಿಸುವಂತಹದು. ತಟಾಕವು ಶ್ರೇಷ್ಠವಾದ ಕೀರ್ತಿಯನ್ನು ತಂದುಕೊಡುತ್ತದೆ.

ಧರ್ಮಸ್ಯಾರ್ಥಸ್ಯ ಕಾಮಸ್ಯ ಫಲಮಾಹುರ್ಮನೀಷಿಣಃ ।
ತಟಾಕಸುಕೃತಂ ದೇಶೇ ಕ್ಷೇತ್ರಮೇಕಂ ಮಹಾಶ್ರಯಮ್ ॥೬॥

ತಟಾಕದಿಂದ ಕೂಡಿದ ದೇಶದಲ್ಲಿ ಎಲ್ಲ ಪ್ರಾಣಿಗಳಿಗೂ ಆಶ್ರಯವಾದ ಒಂದು ಉದ್ಯಾನ ನಿರ್ಮಾಣವು ಧರ್ಮಾರ್ಥಕಾಮಗಳಿಗೆ ಕಾರಣವಾಗುತ್ತದೆಂದು ಜ್ಞಾನಿಗಳು ಹೇಳುತ್ತಾರೆ.

ಚತುರ್ವಿಧಾನಾಂ ಭೂತಾನಾಂ ತಟಾಕಮುಪಲಕ್ಷಯೇತ್ ।
ತಟಾಕಾನಿ ಚ ಸರ್ವಾಣಿ ದಿಶಂತಿ ಶ್ರಿಯಮುತ್ತಮಾಮ್ ॥೭॥

ತಟಾಕವು ಜರಾಯುಜಾದಿ ನಾಲ್ಕು ವಿಧದ ಪ್ರಾಣಿಗಳಿಗೂ ಆಶ್ರಯವೆಂಬುದನ್ನು ಗಮನಿಸಬೇಕು. ಎಲ್ಲ ತಟಾಕಗಳೂ ಒಳ್ಳೆಯ ಸಂಪತ್ತನ್ನು ತಂದುಕೊಡುತ್ತವೆ.

ದೇವಾ ಮನುಷ್ಯಗಂಧರ್ವಾಃ ಪಿತರೋರಗರಾಕ್ಷಸಾಃ ।
ಸ್ಥಾವರಾಣಿ ಚ ಭೂತಾನಿ ಸಂಶ್ರಯಂತಿ ಜಲಾಶಯಮ್ ॥೮॥

ದೇವತೆಗಳೂ, ಮನುಷ್ಯರೂ, ಗಂಧರ್ವರೂ, ಪಿತೃಗಳೂ, ಸರ್ಪಗಳೂ, ರಾಕ್ಷಸರೂ, ಮರ-ಗಿಡಗಳೂ ಎಲ್ಲರೂ ಜಲಾಶಯವನ್ನು ಆಶ್ರಯಿಸುತ್ತಾರೆ.

ತಸ್ಮಾತ್ ತಾಂಸ್ತೇ ಪ್ರವಕ್ಷ್ಯಾಮಿ ತಟಾಕೇ ಯೇ ಗುಣಾಃ ಸ್ಮೃತಾಃ ।
ಯಾ ಚ ತತ್ರ ಫಲಾವಾಪ್ತಿರ್ಋಷಿಭಿಃ ಸಮುದಾಹೃತಾ ॥೯॥

ಆದ್ದರಿಂದ ತಟಾಕದಲ್ಲಿರುವ ಆ ಗುಣಗಳನ್ನೂ ತಟಾಕನಿರ್ಮಾಣದಿಂದ ಉಂಟಾಗುವ ಋಷಿಗಳಿಂದ ಹೇಳಲ್ಪಟ್ಟ ಫಲಪ್ರಾಪ್ತಿಯನ್ನೂ ನಿನಗೆ ಹೇಳುವೆನು.

ವರ್ಷಾಕಾಲೇ ತಟಾಕೇ ತು ಸಲಿಲಂ ಯಸ್ಯ ತಿಷ್ಠತಿ ।
ಅಗ್ನಿಹೋತ್ರಫಲಂ ತಸ್ಯ ಫಲಮಾಹುರ್ಮನೀಷಿಣಃ ॥೧೦॥

ಯಾವನು ನಿರ್ಮಿಸಿದ ತಟಾಕದಲ್ಲಿ ಮಳೆಗಾಲದಲ್ಲಿ ಜಲವಿರುತ್ತದೆಯೋ ಅವನಿಗೆ ಅಗ್ನಿಹೋತ್ರಫಲವು ಉಂಟಾಗುವುದೆಂದು ಜ್ಞಾನಿಗಳು ಹೇಳುತ್ತಾರೆ.

ಶರತ್ಕಾಲೇ ತು ಸಲಿಲಂ ತಟಾಕೇ ಯಸ್ಯ ತಿಷ್ಠತಿ ।
ಗೋಸಹಸ್ರಸ್ಯ ಸ ಪ್ರೇತ್ಯ ಲಭತೇ ಫಲಮುತ್ತಮಮ್ ॥೧೧॥

ಯಾವನು ನಿರ್ಮಿಸಿದ ಕೆರೆಯಲ್ಲಿ ಶರತ್ಕಾಲದಲ್ಲಿ ಜಲವಿರುತ್ತದೆಯೋ ಅವನು ಮರಣವನ್ನು ಹೊಂದಿ ಸಹಸ್ರಗೋದಾನ ಮಾಡಿದ ಶ್ರೇಷ್ಠವಾದ ಫಲವನ್ನು ಹೊಂದುತ್ತಾನೆ.

ಹೇಮಂತಕಾಲೇ ಸಲಿಲಂ ತಟಾಕೇ ಯಸ್ಯ ತಿಷ್ಠತಿ ।
ಸ ವೈ ಬಹುಸುವರ್ಣಸ್ಯ ಯಜ್ಞಸ್ಯ ಲಭತೇ ಫಲಮ್ ॥೧೨॥

ಯಾವನು ನಿರ್ಮಿಸಿದ ತಟಾಕದಲ್ಲಿ ಹೇಮಂತಕಾಲದಲ್ಲಿ ಜಲವಿರುತ್ತದೆಯೋ ಅವನು ಬಹುಸುವರ್ಣದಾನದಿಂದ ಕೂಡಿದ ಯಜ್ಞದ ಫಲವನ್ನು ಹೊಂದುತ್ತಾನೆ.

ಯಸ್ಯ ವೈ ಶೈಶಿರೇ ಕಾಲೇ ತಟಾಕೇ ಸಲಿಲಂ ಭವೇತ್ ।
ತಸ್ಯಾಗ್ನಿಷ್ಟೋಮಯಜ್ಞಸ್ಯ ಫಲಮಾಹುರ್ಮನೀಷಿಣಃ ॥೧೩॥

ಯಾರ ತಟಾಕದಲ್ಲಿ ಶಿಶಿರ ಕಾಲದಲ್ಲಿ ಜಲವಿರುತ್ತದೆಯೋ ಅವನಿಗೆ ಅಗ್ನಿಷ್ಟೋಮ ಯಾಗದ ಫಲವು ದೊರೆಯುವುದೆಂದು ಜ್ಞಾನಿಗಳು ಹೇಳುತ್ತಾರೆ.

ತಟಾಕಂ ಸುಕೃತಂ ಯಸ್ಯ ವಸಂತೇ ತು ಮಹಾಶ್ರಯಮ್ ।
ಅತಿರಾತ್ರಸ್ಯ ಯಜ್ಞಸ್ಯ ಫಲಂ ಸ ಸಮುಪಾಶ್ನುತೇ ॥೧೪॥

ಚೆನ್ನಾಗಿ ನಿರ್ಮಿಸಿದ ಯಾವನ ತಟಾಕವು ವಸಂತ ಕಾಲದಲ್ಲಿ ಎಲ್ಲ ಪ್ರಾಣಿಗಳಿಗೂ ಆಶ್ರಯವಾಗುತ್ತದೆಯೋ ಅವನು ಅತಿರಾತ್ರ ಯಾಗದ ಫಲವನ್ನು ಹೊಂದುತ್ತಾನೆ.

ನಿದಾಘಕಾಲೇ ಪಾನೀಯಂ ತಟಾಕೇ ಯಸ್ಯ ತಿಷ್ಠತಿ ।
ವಾಜಿಮೇಧಫಲಂ ತಸ್ಯ ಫಲಂ ವೈ ಮುನಯೋ ವಿದುಃ ॥೧೫॥

ಯಾವನ ತಟಾಕದಲ್ಲಿ ಬೇಸಿಗೆಯ ಕಾಲದಲ್ಲಿ ಜಲವಿರುತ್ತದೆಯೋ ಅವನು ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆಂದು ಋಷಿಗಳು ತಿಳಿದಿದ್ದಾರೆ.

ಸ ಕುಲಂ ತಾರಯೇತ್ ಸರ್ವಂ ಯಸ್ಯ ಖಾತೇ ಜಲಾಶಯೇ ।
ಗಾವಃ ಪಿಬಂತಿ ಸಲಿಲಂ ಸಾಧವಶ್ಚ ನರಾಃ ಸದಾ ॥೧೬॥

ಯಾವನು ನಿರ್ಮಿಸಿದ ತಟಾಕದಲ್ಲಿ ಗೋವುಗಳು ಮತ್ತು ಸಜ್ಜನರು ನೀರನ್ನು ಕುಡಿಯುತ್ತಾರೆಯೋ ಅವನು ತನ್ನ ಕುಲವೆಲ್ಲವನ್ನೂ ಉದ್ಧರಿಸುತ್ತಾನೆ.

ತಟಾಕೇ ಯಸ್ಯ ಗಾವಸ್ತು ಪಿಬಂತಿ ತೃಷಿತಾ ಜಲಮ್ ।
ಮೃಗಪಕ್ಷಿಮನುಷ್ಯಾಶ್ಚ ಸೋಽಶ್ವಮೇಧಫಲಂ ಲಭೇತ್ ॥೧೭॥

ಯಾವನ ತಟಾಕದಲ್ಲಿ ಬಾಯಾರಿದ ಗೋವುಗಳು ಮತ್ತು ಮೃಗ-ಪಕ್ಷಿ-ಮನುಷ್ಯರು ಜಲಪಾನವನ್ನು ಮಾಡುತ್ತಾರೆಯೋ ಅವನು ಅಶ್ವಮೇಧಫಲವನ್ನು ಹೊಂದುತ್ತಾನೆ.

ಯತ್ ಪಿಬಂತಿ ಜಲಂ ತತ್ರ ಸ್ನಾಯಂತೇ ವಿಶ್ರಮಂತಿ ಚ ।
ತಟಾಕೇ ಯಸ್ಯ ತತ್ಸರ್ವಂ ಪ್ರೇತ್ಯಾನಂತ್ಯಾಯ ಕಲ್ಪತೇ ॥೧೮॥

ತಟಾಕದಲ್ಲಿ ಜಲಪಾನ ಮಾಡುವುದು, ಸ್ನಾನ ಮಾಡುವುದು, ವಿಶ್ರಾಂತಿಯನ್ನು ಪಡೆಯುವುದು ಇವೆಲ್ಲವೂ ತಟಾಕ ನಿರ್ಮಾಣ ಮಾಡಿದವನ ಮರಣಾನಂತರದ ಅನಂತ ಸುಖಕ್ಕೆ ಕಾರಣವಾಗುತ್ತವೆ.

ದುರ್ಲಭಂ ಸಲಿಲಂ ತಾತ ವಿಶೇಷೇಣ ಪರತ್ರ ವೈ ।
ಪಾನೀಯಸ್ಯ ಪ್ರದಾನೇನ ಪ್ರೀತಿರ್ಭವತಿ ಶಾಶ್ವತೀ ॥೧೯॥

ಎಲೈ ಪ್ರೀತಿಪಾತ್ರನೇ, ಜಲವು ದುರ್ಲಭವಾದುದು ಅದರಲ್ಲಿಯೂ ಪರಲೋಕದಲ್ಲಿ ವಿಶೇಷವಾಗಿ ದುರ್ಲಭವಾದುದು. ಜಲದಾನವನ್ನು ಮಾಡುವುದರಿಂದ ಶಾಶ್ವತವಾದ ಸುಖವುಂಟಾಗುತ್ತದೆ.

ತಿಲಾನ್ ದದತ ಪಾನೀಯಂ ದೀಪಾನ್ ದದತ ಜಾಗೃತ ।
ಜ್ಞಾತಿಭಿಃ ಸಹ ಮೋದಧ್ವಮೇತತ್ಪ್ರೇತ್ಯ ಸುದುರ್ಲಭಮ್ ॥೨೦॥

ತಿಲದಾನವನ್ನು ಮಾಡಿ, ಜಲದಾನವನ್ನು, ದೀಪದಾನಗಳನ್ನು ಮಾಡಿ. ಈ ವಿಷಯದಲ್ಲಿ ಎಚ್ಚರಿಕೆಯಿಂದಿರಿ. ಬಂಧುಗಳೊಂದಿಗೆ ಸಂತೋಷದಿಂದಿರಿ. ಮರಣವನ್ನು ಹೊಂದಿದ ಮೇಲೆ ಇವೆಲ್ಲವೂ ದುರ್ಲಭವಾದವುಗಳು.

ಸರ್ವದಾನೈರ್ಗುರುತರಂ ಸರ್ವದಾನೈರ್ವಿಶಿಷ್ಯತೇ ।
ಪಾನೀಯಂ ನರಶಾರ್ದೂಲ ತಸ್ಮಾದ್ ದಾತವ್ಯಮೇವ ಹಿ ॥೨೧॥

ಎಲೈ ನರಶಾರ್ದೂಲನೇ, ಜಲದಾನವು ಎಲ್ಲ ದಾನಗಳಿಗಿಂತ ದೊಡ್ಡ ದಾನ ಮತ್ತು ಎಲ್ಲ ದಾನಗಳಿಗಿಂತಲೂ ಶ್ರೇಷ್ಠವಾದುದು. ಆದ್ದರಿಂದ ಅವಶ್ಯವಾಗಿ ಕೊಡಬೇಕು.

ಏವಮೇತತ್ ತಟಾಕಸ್ಯ ಕೀರ್ತಿತಂ ಫಲಮುತ್ತಮಮ್ ।
ಅತ ಊರ್ಧ್ವಂ ಪ್ರವಕ್ಷ್ಯಾಮಿ ವೃಕ್ಷಾಣಾಮವರೋಪಣಮ್ ॥೨೨॥

ಈ ರೀತಿಯಲ್ಲಿ ತಟಾಕನಿರ್ಮಾಣದ ಶ್ರೇಷ್ಠವಾದ ಫಲವನ್ನು ಹೇಳಿದ್ದೇನೆ. ಇನ್ನು ಮುಂದೆ ಮರಗಳನ್ನು ನೆಡುವುದರ ಫಲವನ್ನು ಹೇಳುವೆನು.

ಸ್ಥಾವರಾಣಾಂ ಚ ಭೂತಾನಾಂ ಜಾತಯಃ ಷಟ್ ಪ್ರಕೀರ್ತಿತಾಃ ।
ವೃಕ್ಷಗುಲ್ಮತಾವಲ್ಲ್ಯಸ್ತ್ವ ಕ್ಸಾರಾಸ್ಯಣಜಾತಯಃ ॥೨೩॥

ಸ್ಥಾವರಗಳ ಜಾತಿಗಳು ಆರು ಎಂದು ಹೇಳಲ್ಪಡುತ್ತವೆ. ಅವು ಮರಗಳು, ಪೊದೆಗಳು, ಮರಕ್ಕೆ ಹಬ್ಬುವ ಬಳ್ಳಿಗಳು, ನೆಲದ ಮೇಲೆ ಹರಡುವ ಬಳ್ಳಿಗಳು,

ಬೆನ್ನುಸಿಪ್ಪೆಯಲ್ಲಿಯೇ (ತೊಗಟೆಯಲ್ಲಿಯೇ) ಬಲವುಳ್ಳ ಬಿದಿರು ಮೊದಲಾದವುಗಳು ಮತ್ತು ತೃಣ ಜಾತಿಗೆ ಸೇರಿದ ಹುಲ್ಲು, ಭತ್ತ ಮೊದಲಾದವುಗಳು.

ಏತಾ ಜಾತ್ಯಸ್ತು ವೃಕ್ಷಾಣಾಂ ತೇಷಾಂ ರೋಪೇ ಗುಣಾಸ್ತ್ವಿಮೇ ।
ಕೀರ್ತಿಶ್ಚ ಮಾನುಷೇ ಲೋಕೇ ಪ್ರೇತ್ಯ ಚೈವ ಫಲಂ ಶುಭಮ್ ॥೨೪॥

ಇವು ವೃಕ್ಷಗಳ ಜಾತಿಗಳು. ಅವುಗಳನ್ನು ನೆಡುವುದರಿಂದ ಮನುಷ್ಯಲೋಕದಲ್ಲಿ ಕೀರ್ತಿ ಮತ್ತು ಮರಣಾನಂತರದಲ್ಲಿ ಶುಭ ಫಲಗಳು ಉಂಟಾಗುತ್ತವೆ.

ಲಭತೇ ನಾಮ ಲೋಕೇ ಚ ಪಿತೃಭಿಶ್ಚ ಮಹೀಯತೇ ।
ದೇವಲೋಕೇ ಗತಸ್ಯಾಪಿ ನಾಮ ತಸ್ಯ ನ ನಶ್ಯತಿ ॥೨೫॥

ಮನುಷ್ಯಲೋಕದಲ್ಲಿ ಒಳ್ಳೆಯ ಹೆಸರು. ಪಿತೃಗಳ ಜೊತೆಯಲ್ಲಿ ಪೂಜನೀಯತ್ವ. ದೇವಲೋಕಕ್ಕೆ ಹೋದರೆ ಮೇಲೆಯೇ ಕೀರ್ತಿಯ ನಾಶವಿಲ್ಲದಿರುವುದು (ಇವೆಲ್ಲ ಫಲಗಳು).

ಅತೀತಾನಾಗತೇ ಚೋಭೇ ಪಿತೃವಂಶಂ ಚ ಭಾರತ ।
ತಾರಯೇದ್ ವೃಕ್ಷರೋಪೀ ಚ ತಸ್ಮಾದ್ ವೃಕ್ಷಾಂಶ್ಚ ರೋಪಯೇತ್ ॥೨೬॥

ಎಲೈ ಭಾರತನೇ, ಮರಗಳನ್ನು ನೆಡುವವನು ತನ್ನ ಹಿಂದಿನ ಮತ್ತು ಮುಂದಿನ ಎರಡು ಪಿತೃವಂಶಗಳನ್ನೂ ಸಂಕಷ್ಟದಿಂದ ಪಾರುಮಾಡುತ್ತಾನೆ. ಆದ್ದರಿಂದ ಮರಗಳನ್ನು ನೆಡಬೇಕು.

ತಸ್ಯ ಪುತ್ರಾ ಭವಂತ್ಯೇತೇ ಪಾದಪಾ ನಾತ್ರ ಸಂಶಯಃ ।
ಪರಲೋಕಗತಃ ಸ್ವರ್ಗಂ ಲೋಕಾಂಶ್ಚಾಪ್ನೋತಿ ಸೋಽವ್ಯಯಾನ್ ॥೨೭॥

ತಾನು ನೆಟ್ಟ ಮರಗಳು ತನಗೆ ಪುತ್ರರಾಗುತ್ತಾರೆ, ಇದರಲ್ಲಿ ಸಂಶಯವಿಲ್ಲ. ಅಂತಹವನು ಪರಲೋಕಕ್ಕೆ ಹೋಗಿ ಶಾಶ್ವತವಾದ ಸ್ವರ್ಗಲೋಕವನ್ನು ಹೊಂದುತ್ತಾನೆ.

ಪುಷ್ಪೈಃ ಸುರಗಣಾನ್ ವೃಕ್ಷಾಃ ಫಲೈಶ್ಚಾಪಿ ತಥಾ ಪಿತೄನ್ ।
ಛಾಯಯಾ ಚಾತಿಥಿಂ ತಾತ ಪೂಜಯಂತಿ ಮಹೀರುಹಃ ॥೨೮॥

ಎಲೈ ಪ್ರೀತಿಪಾತ್ರನೇ, ವೃಕ್ಷಗಳು ಪುಷ್ಪಗಳಿಂದ ದೇವತೆಗಳನ್ನೂ, ಫಲಗಳಿಂದ ಪಿತೃಗಳನ್ನೂ, ನೆರಳಿನಿಂದ ಅತಿಥಿಯನ್ನೂ ಸತ್ಕರಿಸುತ್ತವೆ.

ಕಿನ್ನರೋರಗರಕ್ಷಾಂಸಿ ದೇವಗಂಧರ್ವಮಾನವಾಃ ।
ತಥಾ ಋಷಿಗಣಾಶ್ಚೈವ ಸಂಶ್ರಯಂತಿ ಮಹೀರುಹಾನ್ ॥೨೯॥

ಕಿನ್ನರರು, ಸರ್ಪಗಳು, ರಾಕ್ಷಸರು, ದೇವತೆಗಳು, ಗಂಧರ್ವರು, ಮನುಷ್ಯರು, ಋಷಿಗಳು ಎಲ್ಲರೂ ವೃಕ್ಷಗಳನ್ನು ಆಶ್ರಯಿಸುತ್ತಾರೆ.

ಪುಷ್ಪಿತಾಃ ಫಲವಂತಶ್ಚ ತರ್ಪಯಂತೀಹ ಮಾನವಾನ್ ।
ವೃಕ್ಷದಂ ಪುತ್ರವದ್ ವೃಕ್ಷಾಸ್ತಾರಯಂತಿ ಪರತ್ರ ತು ॥೩೦॥

ಫಲಪುಷ್ಪಗಳನ್ನು ಕೊಟ್ಟು ವೃಕ್ಷಗಳು ಮನುಷ್ಯರನ್ನು ಈ ಲೋಕದಲ್ಲಿ ಸಂತೋಷ ಪಡಿಸುತ್ತವೆ. ಮತ್ತು ಪರಲೋಕಕ್ಕೆ ಹೋದವನನ್ನು ಪುತ್ರನಂತೆ ದುಃಖದಿಂದ ಪಾರು ಮಾಡುತ್ತವೆ.

ತಸ್ಮಾತ್ ತಟಾಕೇ ಸದ್‌ವೃಕ್ಷಾಃ ರೋಪ್ಯಾಃ ಶ್ರೇಯೋರ್ಥಿನಾ ಸದಾ ।
ಪುತ್ರವತ್ ಪರಿಪಾಲ್ಯಾಶ್ಚ ಪುತ್ರಾಸ್ತೇ ಧರ್ಮತಃ ಸ್ಮೃತಾಃ ॥೩೧॥

ಆದ್ದರಿಂದ ಶ್ರೇಯೋರ್ಥಿಯಾದವನು ಯಾವಾಗಲೂ ತಟಾಕದಲ್ಲಿ ಒಳ್ಳೆಯ ಮರಗಳನ್ನು ನೆಡಬೇಕು. ಅವುಗಳನ್ನು ಪುತ್ರರಂತೆ ರಕ್ಷಿಸಬೇಕು. ಧರ್ಮದ ದೃಷ್ಟಿಯಿಂದ ಅವುಗಳು ಪುತ್ರರೇ ಸರಿ.

ತಟಾಕಕೃದ್ ವೃಕ್ಷರೋಪೀ ಇಷ್ಟಯಜ್ಞಶ್ಚ ಯೋ ದ್ವಿಜಃ ।
ಏತೇ ಸ್ವರ್ಗೇ ಮಹೀಯಂತೇ ಯೇ ಚಾನ್ಯೇ ಸತ್ಯವಾದಿನಃ ॥೩೨॥

ತಟಾಕನಿರ್ಮಾಣವನ್ನು ಮಾಡಿದವನು, ಮರಗಳನ್ನು ನೆಟ್ಟವನು, ಯಜ್ಞಗಳನ್ನು ಮಾಡಿದವನು, ಸತ್ಯವಚನವನ್ನು ನುಡಿಯುವವನು - ಇವರೆಲ್ಲರೂ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾರೆ.

ತಸ್ಮಾತ್ ತಟಾಕಂ ಕುರ್ವೀತ ಆರಾಮಾಂಶ್ಚೈವ ರೋಪಯೇತ್ ।
ಯಜೇಚ್ಚ ವಿವಿಧೈರ್ಯಜ್ಞೈಃ ಸತ್ಯಂ ಚ ಸತತಂ ವದೇತ್ ॥೩೩॥

ಆದ್ದರಿಂದ ತಟಾಕವನ್ನು ನಿರ್ಮಾಣ ಮಾಡಬೇಕು. ಉದ್ಯಾನವನ್ನು ಬೆಳೆಸಬೇಕು. ವಿವಿಧವಾದ ಯಜ್ಞವನ್ನು ಮಾಡಬೇಕು ಮತ್ತು ಸತತವಾಗಿ ಸತ್ಯವನ್ನು ನುಡಿಯಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಆರಾಮತಟಾಕಾದಿಪ್ರಶಂಸಾ ನಾಮ ಅಷ್ಟಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂಬತ್ತನೆಯ ಅಧ್ಯಾಯ

ಬ್ರಾಹ್ಮಣ ಪೂಜಾ ಪ್ರಶಂಸೆ

ಯುಧಿಷ್ಠಿರಃ

ಯಾನೀಮಾನಿ ಬಹಿರ್ವೇದ್ಯಾಂ ದಾನಾನಿ ಪರಿಚಕ್ಷತೇ ।
ತೇಭ್ಯೋ ವಿಶಿಷ್ಟಂ ಕಿಂ ದಾನಂ ಮತಂ ತೇ ಕುರುಪುಂಗವ ॥೧॥

ಕೌತೂಹಲಂ ಹಿ ಪರಮಂ ತತ್ರ ಮೇ ವರ್ತತೇ ಪ್ರಭೋ ।
ದಾತಾರಂ ದತ್ತಮನ್ವೇತಿ ಯದ್ದಾನಂ ತತ್ ಪ್ರಚಕ್ಷ್ವ ಮೇ ॥೨॥

ಯುಧಿಷ್ಠಿರ– ಎಲೈ ಕುರುಪುಂಗವನೇ, ವೇದಿಯ ಹೊರಭಾಗದಲ್ಲಿ ಯಾವ ದಾನಗಳು ಹೇಳಲ್ಪಡುತ್ತದೆಯೋ ಅವುಗಳಿಗಿಂತ ಶ್ರೇಷ್ಠ ದಾನವು ಯಾವುದೆಂದು ನಿನ್ನ ಅಭಿಪ್ರಾಯ? ಎಲೈ ಪ್ರಭುವೇ, ನನಗೆ ಈ ವಿಷಯದಲ್ಲಿ ಬಹಳ ಕುತೂಹಲವಿದೆ. ಯಾವ ದಾನವು ದಾತೃವನ್ನು ಹಿಂಬಾಲಿಸುತ್ತದೆಯೋ ಅದನ್ನು ನನಗೆ ಹೇಳು.

ಭೀಷ್ಮಃ

ಅಭಯಂ ಸರ್ವಭೂತೇಭ್ಯೋ ವ್ಯಸನೇ ಚಾಪ್ಯನುಗ್ರಹಮ್ ।
ಯಚ್ಚಾಭಿಲಷಿತಂ ದದ್ಯಾದ್ ತೃಷಿತಾಯಾಭಿಯಾಚತೇ ॥೩॥

ಭೀಷ್ಮ– ಸರ್ವಪ್ರಾಣಿಗಳಿಗೂ ಅಭಯ ದಾನ, ಕಷ್ಟದಲ್ಲಿರುವವರಿಗೆ ಸಹಾಯ, ಯಾಚನೆ ಮಾಡುವವರಿಗೆ ಅಪೇಕ್ಷಿತವಾದ ದಾನ, ಬಾಯಾರಿದವನಿಗೆ ಜಲದಾನ (ಇವು ಶ್ರೇಷ್ಠವಾದವುಗಳು).

ದತ್ತಂ ಮನ್ಯೇತ ಯದ್ದತ್ತ್ವಾ ತದ್ದಾನಂ ಶ್ರೇಷ್ಠಮುಚ್ಯತೇ ।
ದತ್ತಂ ದಾತಾರಮನ್ವೇತಿ ಯದ್ದಾನಂ ಭರತರ್ಷಭ ॥೪॥

ದಾನವನ್ನು ಕೊಟ್ಟು ಇದು ನನ್ನದಲ್ಲ ಎಂದು ತಿಳಿಯುವ ದಾನವು ಶ್ರೇಷ್ಠವಾದ ದಾನ. ಎಲೈ ಭರತರ್ಷಭನೇ, ಅಂತಹ ದಾನವು ದಾನ ಕೊಡುವವನನ್ನು ಹಿಂಬಾಲಿಸುತ್ತದೆ.

ಹಿರಣ್ಯದಾನಂ ಗೋದಾನಂ ಪೃಥಿವೀದಾನಮೇವ ಚ ।
ಏತಾನಿ ವೈ ಪವಿತ್ರಾಣಿ ತಾರಯಂತ್ಯಪಿ ದುಷ್ಕೃತಮ್ ॥೫॥

ಹಿರಣ್ಯದಾನ, ಗೋದಾನ ಮತ್ತು ಭೂದಾನ ಇವು ಪವಿತ್ರವಾದವುಗಳು ಮತ್ತು ದುಷ್ಕರ್ಮ ಮಾಡಿದವನನ್ನು ಉದ್ಧಾರ ಮಾಡುತ್ತವೆ.

ಏತಾನಿ ಪುರುಷವ್ಯಾಘ್ರ ಸಾಧುಭ್ಯೋ ದೇಹಿ ನಿತ್ಯದಾ ।
ದಾನಾನಿ ಹಿ ನರಂ ಪಾಪಾನ್ಮೋಕ್ಷಯಂತಿ ನ ಸಂಶಯಃ ॥೬॥

ಎಲೈ ಪುರುಷವ್ಯಾಘ್ರನೇ, ಇವುಗಳನ್ನು ಯಾವಾಗಲೂ ಸಜ್ಜನರಿಗೆ ಕೊಡು. ದಾನಗಳು ಮನುಷ್ಯನನ್ನು ಪಾಪದಿಂದ ನಿರ್ಮುಕ್ತಗೊಳಿಸುತ್ತವೆ. ಇದರಲ್ಲಿ ಸಂಶಯವಿಲ್ಲ.

ಯದ್ಯದಿಷ್ಟತಮಂ ಲೋಕೇ ಯಚ್ಚಾಸ್ಯ ದಯಿತಂ ಗೃಹೇ ।
ತತ್ತದ್ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ ॥೭॥

ತನಗೆ ಲೋಕದಲ್ಲಿ ಯಾವ ಯಾವುದು ಇಷ್ಟವೋ ಮತ್ತು ಮನೆಯಲ್ಲಿ ಯಾವುದು ಪ್ರೀತಿ ವಿಷಯವೋ ಅವೆಲ್ಲವನ್ನೂ ಗುಣವಂತನಾದವನಿಗೆ ನೀಡಿದರೆ ಅಕ್ಷಯ ಫಲವು ಲಭಿಸುತ್ತದೆ.

ಪ್ರಿಯಾಣಿ ಲಭತೇ ಲೋಕೇ ಪ್ರಿಯದಃ ಪ್ರಿಯಕೃತ್ ತಥಾ ।
ಪ್ರಿಯೋ ಭವತಿ ಭೂತಾನಾಮಿಹ ಚೈವ ಪರತ್ರ ಚ ॥೮॥

ಪ್ರಿಯವಾದ ವಸ್ತುವನ್ನು ದಾನ ಮಾಡಿ ಇನ್ನೊಬ್ಬರಿಗೆ ಪ್ರಿಯವನ್ನುಂಟು ಮಾಡುವವನು ಲೋಕದಲ್ಲಿ ಪ್ರಿಯವಸ್ತುಗಳನ್ನು ಪಡೆಯುತ್ತಾನೆ ಮತ್ತು ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಎಲ್ಲರಿಗೂ ಪ್ರಿಯನಾಗುತ್ತಾನೆ.

ಯಾಚಮಾನಮಭೀಮಾನಾದಾಶಾವಂತಮಕಿಂಚನಮ್ ।
ಯೋ ನಾರ್ಚತಿ ಯಥಾಶಕ್ತಿ ಸ ನೃಶಂಸೋ ಯುಧಿಷ್ಠಿರ ॥೯॥

ಎಲೈ ಯುಧಿಷ್ಠಿರನೇ, ದರಿದ್ರನಾಗಿ ಆಸೆಯಿಂದ ಕೂಡಿ ಯಾಚನೆ ಮಾಡುವವನನ್ನು ಯಾವನು ಅಹಂಕಾರದಿಂದ ತನ್ನ ಶಕ್ತಿಗೆ ಅನುಸಾರವಾಗಿ ಪೂಜಿಸುವುದಿಲ್ಲವೋ ಅವನು ಕ್ರೂರಿಯಾದವನು.

ಅಮಿತ್ರಮಪಿ ಚೇದ್ ದೀನಂ ಶರಣ್ಯೈಷಿಣಮಾಗತಮ್ ।
ವ್ಯಸನೇ ಯೋಽನುಗೃಹ್ಣಾತಿ ಸ ವೈ ಪುರುಷಸತ್ತಮಃ ॥೧೦॥

ಶತ್ರುವು ವ್ಯಸನದಲ್ಲಿ ಸಿಲುಕಿ ದೀನನಾಗಿ ಶರಣಾಗತನಾಗಿ ಬಂದರೆ ಅವನನ್ನೂ ಅನುಗ್ರಹಿಸುವವನು ಶ್ರೇಷ್ಠನಾದ ಪುರುಷ.

ಕೃಶಾಯ ಹ್ರೀಮತೇ ತಾತ ವೃತ್ತಿಕ್ಷೀಣಾಯ ಸೀದತೇ ।
ಅಪಹನ್ಯಾತ್ ಕ್ಷುಧಂ ಯಸ್ತು ನ ತೇನ ಪುರುಷಃ ಸಮಃ ॥೧೧॥

ಎಲೈ ಪ್ರೀತಿಪಾತ್ರನೇ, ಕೃಶನಾದವನೂ, ನಾಚಿಕೆಯುಳ್ಳವನೂ, ಜೀವನೋಪಾಯ ಕಳೆದುಕೊಂಡು ಕಷ್ಟಪಡುವವನೂ ಆದವನ ಹಸಿವನ್ನು ಯಾವನು ನೀಗಿಸುತ್ತಾನೆಯೋ ಅವನಿಗೆ ಸಮಾನನಾದ ಪುರುಷನಿಲ್ಲ.

ಹ್ರಿಯಾ ತು ನಿಯತಾನ್ ಸಾಧೂನ್ ಪುತ್ರದಾರೈಶ್ಚ ಕರ್ಶಿತಾನ್ ।
ಅಯಾಚಮಾನಾನ್ ಕೌಂತೇಯ ಸರ್ವೋಪಾಯೈರ್ನಿಮಂತ್ರಯ ॥೧೨॥

ಎಲೈ ಕೌಂತೇಯನೇ, ನಾಚಿಕೆಯಿಂದ ಹಿಂದುಳಿಯುವ, ಪತ್ನೀಪುತ್ರರ ಭಾರದಿಂದ ಬಳಲಿದ, ಯಾಚನೆ ಮಾಡದ ಸಜ್ಜನರನ್ನು ಎಲ್ಲ ಉಪಾಯಗಳಿಂದಲೂ ತಿಳಿದು ಅವರನ್ನು ಆಹ್ವಾನಿಸು.

ಆಶಿಷಂ ಯೇ ನ ದೇವೇಷು ನ ಮರ್ತ್ಯೇಷು ಚ ಕುರ್ವತೇ ।
ಅರ್ಹಂತೋ ನಿತ್ಯಸತ್ತ್ವಸ್ಥಾ ಯಥಾಲಬ್ಧೋಪಜೀವಿನಃ ॥೧೩॥

ಆಶೀವಿಷಸಮೇಭ್ಯಶ್ಚ ತೇಭ್ಯೋ ರಕ್ಷಸ್ವ ಭಾರತ ।
ತಾನ್ ಯುಕ್ತೈರುಪಜಿಜ್ಞಾಸ್ಯ ತಥಾ ದ್ವಿಜವರೋತ್ತಮಾನ್ ॥೧೪॥

ಕೃತೈರಾವಸಥೈರ್ನಿತ್ಯಂ ಸಪ್ರೇಷ್ಯೈಃ ಸಪರಿಚ್ಛದೈಃ ।
ನಿಮಂತ್ರಯೇಥಾಃ ಕೌರವ್ಯ ಸರ್ವಕಾಮಸುಖಾವಹೈಃ ॥೧೫॥

ಯದಿ ತೇ ಪ್ರತಿಗೃಹ್ಣೀಯುಃ ಶ್ರದ್ಧಾಪೂತಂ ಯುಧಿಷ್ಠಿರ ।
ಕಾರ್ಯಮಿತ್ಯೇವ ಮನ್ವಾನಾ ಧಾರ್ಮಿಕಾಃ ಪುಣ್ಯಕರ್ಮಿಣಃ ॥೧೬॥

ಯಾರು ದೇವತೆಗಳಲ್ಲಾಗಲೀ ಅಥವಾ ಮನುಷ್ಯರಲ್ಲಾಗಲೀ ಯಾವುದನ್ನೂ ಪ್ರಾರ್ಥಿಸುವುದಿಲ್ಲವೋ, ಯೋಗ್ಯರಾಗಿದ್ದರೂ ನಿತ್ಯವೂ ಧೈರ್ಯದಲ್ಲಿದ್ದು ಲಬ್ಧವಾದುದರಲ್ಲಿಯೇ ಜೀವನವನ್ನು ಮಾಡುತ್ತಾರೆಯೋ. ಸರ್ಪಸದೃಶರಾದ ಅಂತಹವರಿಂದ ನಿನ್ನನ್ನು ರಕ್ಷಿಸಿಕೋ. ಅಂತಹ ಬ್ರಾಹ್ಮಣೋತ್ತಮೋತ್ತಮರನ್ನು ನಿನ್ನಿಂದ ನಿಯುಕ್ತರಾದ ಸೇವಕರಿಂದ ತಿಳಿದು ಅವರನ್ನು ಉಪಸ್ಕರ ಸಹಿತವಾದ ಸೇವಕರಿಂದ ಕೂಡಿದ ಸರ್ವ ಕಾಮಗಳಿಂದ ಸುಖರೂಪವಾದ ಮನೆಗಳನ್ನು ನಿರ್ಮಾಣ ಮಾಡಿ ಅವರನ್ನು ಪ್ರತಿಗ್ರಹಕ್ಕಾಗಿ ಆಮಂತ್ರಿಸು. ಅವರು ಆ ಸ್ಥಿತಿಯಲ್ಲಿದ್ದರೂ ಸಹ ಪ್ರತಿಗ್ರಹವನ್ನು ಮಾಡುವುದಾದರೆ ಅದು ನಿನಗೆ ಶ್ರೇಯಸ್ಕರವಾದುದು (ಏಕೆಂದರೆ ಅಂತಹವರು ಪ್ರಾಯಶಃ ಯಾವ ದಾನವನ್ನೂ ಸ್ವೀಕರಿಸುವುದಿಲ್ಲ). ಎಲೈ ಯುಧಿಷ್ಠಿರನೇ, ಶ್ರದ್ಧೆಯಿಂದ ಕೊಡುವ ದಾನವನ್ನು ತೆಗೆದುಕೊಳ್ಳುವುದು ಒಂದು ಧಾರ್ಮಿಕ ಕಾರ್ಯ ಎಂದು ತಿಳಿದು ಪುಣ್ಯಕರ್ಮವನ್ನು ಮಾಡುವ ಅವರು ದಾನವನ್ನು ತೆಗೆದುಕೊಳ್ಳುವುದಾದರೆ ಅದು ಬಹಳ ಶ್ರೇಯಸ್ಕರವಾದುದು.

ವಿದ್ಯಾಸ್ನಾತಾ ವ್ರತಸ್ನಾತಾ ಯೇ ವ್ಯಪಾಶ್ರಿತ್ಯಜೀವಿನಃ ।
ಗೂಢಸ್ವಾಧ್ಯಾಯತಪಸೋ ಬ್ರಾಹ್ಮಣಾಃ ಸಂಶಿತವ್ರತಾಃ ॥೧೭॥

ತೇಷು ಶುದ್ಧೇಷು ದಾಂತೇಷು ಸ್ವದಾರನಿರತೇಷು ಚ ।
ಯತ್ಕರಿಷ್ಯಸಿ ಕಲ್ಯಾಣಂ ತತ್ ತ್ವಾ ಲೋಕೇಷು ಧಾಸ್ಯತಿ ॥೧೮॥

ವಿದ್ಯಾಪಾರಂಗತರಾಗಿ, ವ್ರತಪಾರಂಗತರಾಗಿ ಇನ್ನೊಬ್ಬರನ್ನು ಆಶ್ರಯಿಸಿ ಜೀವಿಸುವ, ರಹಸ್ಯವಾಗಿ ತಪಸ್ಸು ಮತ್ತು ಸ್ವಾಧ್ಯಾಯಗಳಲ್ಲಿ ಪ್ರವೃತ್ತರಾದ ಬ್ರಾಹ್ಮಣರು ಶ್ರೇಷ್ಠ ವ್ರತಧಾರಿಗಳು. ಅಂತಹ ಇಂದ್ರಿಯನಿಗ್ರಹವುಳ್ಳ, ಶುದ್ಧರಾದ, ತಮ್ಮ ಪತ್ನಿಯಲ್ಲಿ ನಿರತರಾದ ಬ್ರಾಹ್ಮಣರಿಗೆ ಯಾವ ಶುಭವನ್ನು ಮಾಡುವಿಯೋ ಅದು ನಿನಗೆ ಎಲ್ಲ ಲೋಕಗಳಲ್ಲಿಯೂ ಧಾರಣೆ, ಪೋಷಣೆಯನ್ನು ಮಾಡುತ್ತದೆ.

ಯಥಾऽಗ್ನಿಹೋತ್ರಂ ಸುಹುತಂ ಸಾಯಂ ಪ್ರಾತರ್ದ್ವಿಜಾತಿನಾ ।
ತಥಾ ಭವತಿ ದತ್ತಂ ವೈ ದ್ವಿಜೇಭ್ಯೋऽಥ ಕೃತಾತ್ಮನಾ ॥೧೯॥

ಬ್ರಾಹ್ಮಣನು ಪ್ರಾತಃಕಾಲ ಮತ್ತು ಸಾಯಂಕಾಲದಲ್ಲಿ ಮಾಡಿದ ಅಗ್ನಿಹೋತ್ರವು ರಕ್ಷಿಸುವಂತೆ ಒಳ್ಳೆಯ ಮನಸ್ಸಿನಿಂದ ಬ್ರಾಹ್ಮಣರಿಗೆ ಕೊಟ್ಟ ದಾನವು ರಕ್ಷಿಸುತ್ತದೆ.

ಏಷ ತೇ ವಿತತೋ ಯಜ್ಞಃ ಶ್ರದ್ಧಾಪೂತಃ ಸದಕ್ಷಿಣಃ ।
ವಿಶಿಷ್ಟಃ ಸರ್ವಯಜ್ಞೇಭ್ಯೋ ದದತಸ್ತಾತ ವರ್ತತಾಮ್ ॥೨೦॥

ಎಲೈ ಪ್ರೀತಿಪಾತ್ರನೇ, ಈ ವಿಸ್ತಾರವಾದ, ಶ್ರದ್ಧೆಯಿಂದ ಕೂಡಿದ, ಒಳ್ಳೆಯ ದಕ್ಷಿಣೆಯಿಂದ ಕೂಡಿದ, ಎಲ್ಲ ಯಜ್ಞಗಳಿಗಿಂತಲೂ ಶ್ರೇಷ್ಠವಾದ ದಾನಯಜ್ಞವು ನಿನ್ನಿಂದ ಯಾವಾಗಲೂ ನಡೆಯಲಿ.

ನಿವಾಪೋ ದಾನಸದೃಶಸ್ತಾದೃಶೇಷು ಯುಧಿಷ್ಠಿರ ।
ನಿವಪನ್ ಪೂಜಯಂಶ್ಚೈವ ತೇಷಾನ್ನಿರ್ಋಣ್ಯಂ ನಿಗಚ್ಛತಿ ॥೨೧॥

ಎಲೈ ಯುಧಿಷ್ಠಿರನೇ, ಅಂತಹ ಬ್ರಾಹ್ಮಣರಿಗೆ ದಾನವನ್ನು ಕೊಟ್ಟು ಪೂಜಿಸುವಾಗ ಕೃಷ್ಣಾರ್ಪಣವಾಗಿ ಬಿಡುವ ಜಲವೇ ಪಿತೃಋಣವನ್ನು ಪರಿಹರಿಸುತ್ತದೆ.

ಯ ಏವ ನೋ ನ ಕುಪ್ಯಂತಿ ನ ಲುಭ್ಯಂತಿ ತೃಣೇಷ್ವಪಿ ।
ತ ಏವ ನಃ ಪೂಜ್ಯತಮಾ ಯೇ ಚಾನ್ಯೇ ಪ್ರಿಯವಾದಿನಃ ॥೨೨॥

ಯಾರು ನಮ್ಮ ಮೇಲೆ ಕೋಪಗೊಳ್ಳುವುದಿಲ್ಲವೋ ಮತ್ತು ನಮ್ಮಿಂದ ತೃಣವನ್ನೂ ಆಶಿಸುವುದಿಲ್ಲವೋ ಮತ್ತು ಯಾರು ನಮಗೆ ಪ್ರಿಯವನ್ನೇ ನುಡಿಯುತ್ತಾರೆಯೋ ಅವರು ನಮಗೆ ಅತ್ಯಂತ ಪೂಜ್ಯರಾದವರು.

ಯೇ ನೋ ನ ಬಹು ಮನ್ಯಂತೇ ನ ಪ್ರವರ್ತಂತಿ ಚಾಪರೇ ।
ಪುತ್ರವತ್ ಪರಿಪಾಲ್ಯಾಸ್ತೇ ನಮಸ್ತೇಭ್ಯಸ್ತಥಾಭಯಮ್ ॥೨೩॥

ಯಾರು ದಾನವನ್ನು ಕೊಡುವ ನಮ್ಮನ್ನು ಒಲೈಸುವುದಿಲ್ಲವೋ, ಸ್ವತಃ ಪ್ರತಿಗ್ರಹಕ್ಕಾಗಿ ಪ್ರವೃತ್ತರಾಗುವುದಿಲ್ಲವೋ ಅವರನ್ನು ಪುತ್ರರಂತೆ ರಕ್ಷಿಸಬೇಕು. ಅವರಿಗೆ ನಮ್ಮ ನಮಸ್ಕಾರ ಮತ್ತು ನಮ್ಮಿಂದ ಅಭಯವು ಯಾವಾಗಲೂ ಇರಲಿ.

ಋತ್ವಿಕ್ಪುರೋಹಿತಾಚಾರ್ಯಾ ಮೃದುಬ್ರಹ್ಮಧರಾ ಹಿ ತೇ ।
ಕ್ಷತ್ರೇಣಾಪಿ ಹಿ ಸಂಸೃಷ್ಟಂ ತೇಜಃ ಶಾಮ್ಯತಿ ವೈ ದ್ವಿಜೇ ॥೨೪॥

ಅವರು ಋತ್ವಿಜರು, ಪುರೋಹಿತರು, ಆಚಾರ್ಯರು ಮತ್ತು ವೇದವನ್ನು ಧರಿಸಿದ ಮೃದುವಾದ ಬ್ರಾಹ್ಮಣರು. ಕ್ಷತ್ರಿಯ ತೇಜಸ್ಸು ಅಂತಹ ಬ್ರಾಹ್ಮಣರಲ್ಲಿ ಉಪಶಮನಗೊಳ್ಳುತ್ತದೆ.

ಅಸ್ತಿ ಮೇ ಬಲವಾನಸ್ಮಿ ರಾಜಾಸ್ಮೀತಿ ಯುಧಿಷ್ಠಿರ ।
ಬ್ರಾಹ್ಮಣಾನ್ ಮಾ ಸ್ಮ ಪರ್ಯಶ್ನೀರ್ವಾಸೋಭಿರಶನೇನ ಚ ॥೨೫॥

ಎಲೈ ಯುಧಿಷ್ಠಿರನೇ, ನಾನು ರಾಜನಾಗಿದ್ದೇನೆ, ಬಲಿಷ್ಠನಾಗಿದ್ದೇನೆ ಎಂದು ತಿಳಿದು ಬ್ರಾಹ್ಮಣರ ಎದುರಿಗೆ ಶ್ರೇಷ್ಠವಾದ ವಸ್ತ್ರವನ್ನು ಉಟ್ಟು, ಆಹಾರವನ್ನು ಸೇವಿಸಿ ಅವರನ್ನು ಅವಮಾನಗೊಳಿಸಬೇಡ.

ಯಚ್ಚೋಭಾರ್ಥಂ ಬಲಾರ್ಥಂ ವಾ ವಿತ್ತಮಸ್ತಿ ತವಾನಘ ।
ತೇನ ತೇ ಬ್ರಾಹ್ಮಣಾಃ ಪೂಜ್ಯಾಃ ಸ್ವಧರ್ಮಮನುತಿಷ್ಠತಾ ॥೨೬॥

ಎಲೈ ಅನಘನೇ, ಅಲಂಕಾರಕ್ಕಾಗಿ ಅಥವಾ ಬಲದ ವೃದ್ಧಿಗಾಗಿ ನಿನ್ನ ಬಳಿಯಲ್ಲಿ ಯಾವ ಧನವಿದೆಯೋ ಅದರಿಂದ ಸ್ವಧರ್ಮಾನುಷ್ಠಾನ ಮಾಡುವ ನೀನು ಬ್ರಾಹ್ಮಣರನ್ನು ಪೂಜಿಸು.

ನಮಸ್ಕಾರ್ಯಾಸ್ತ್ವಯಾ ವಿಪ್ರಾ ವರ್ತಮಾನಾ ಯಥಾತಥಮ್ ।
ಯಥಾಸುಖಂ ಯಥೋತ್ಸಾಹಂ ಲಲಂತು ತ್ವಯಿ ಪುತ್ರವತ್ ॥೨೭॥

ಯಾವುದೇ ಸ್ಥಿತಿಯಲ್ಲಿರುವ ಬ್ರಾಹ್ಮಣರು ನಿನ್ನಿಂದ ನಮಸ್ಕಾರಕ್ಕೆ ಅರ್ಹರಾದವರು. ಅವರು ತಮ್ಮ ಉತ್ಸಾಹ ಮತ್ತು ಮನೋಧರ್ಮಗಳಿಗೆ ಅನುಗುಣವಾಗಿ ನಿನ್ನ ಜೊತೆಯಲ್ಲಿ ನಿನ್ನನ್ನು ಪುತ್ರನಂತೆ ತಿಳಿದು ಸಂತೋಷದಿಂದಿರಲಿ.

ಕೋ ಹ್ಯನ್ಯಃ ಸುಪ್ರಸಾದಾನಾಂ ಸುಹೃದಾಮಲ್ಪತೋಷಿಣಾಮ್ ।
ವೃತ್ತಿಮರ್ಹತ್ಯುಪಕ್ಷೇಪ್ತುಂ ತ್ವದನ್ಯಃ ಕುರುಸತ್ತಮ ॥೨೮॥

ಎಲೈ ಕುರುಶ್ರೇಷ್ಠನೇ, ನಿನ್ನನ್ನು ಬಿಟ್ಟು ಬೇರೆ ಯಾವನು ತಾನೇ ಅತ್ಯಂತ ಪ್ರಸನ್ನರಾದ, ಸುಹೃದಯರಾದ, ಅಲ್ಪತೃಪ್ತರಾದ ಅಂತಹವರಿಗೆ ವೃತ್ತಿಯನ್ನು ಕಲ್ಪಿಸಿಕೊಟ್ಟಾನು!

ಯಥಾ ಪತ್ಯಾಶ್ರಯೋ ಧರ್ಮಃ ಸ್ತ್ರೀಣಾಂ ಲೋಕೇ ಸನಾತನಃ ।
ಸ ದೇವಃ ಸಾ ಗತಿರ್ನಾನ್ಯಾ ತಥಾಽಸ್ಮಾಕಂ ದ್ವಿಜಾತಯಃ ॥೨೯॥

ಲೋಕದಲ್ಲಿ ಪತಿಯನ್ನು ಆಶ್ರಯಿಸುವುದು ಸ್ತ್ರೀಯರಿಗೆ ಹೇಗೆ ಸನಾತನ ಧರ್ಮವೋ, ಅವಳಿಗೆ ಅವನೇ ದೇವರು, ಅವನೇ ಗತಿ, ಇನ್ನೊಂದು ಗತಿಯಿಲ್ಲವೋ ಅದರಂತೆ ನಮಗೆ ಬ್ರಾಹ್ಮಣರು.

ಯದಿ ನೋ ಬ್ರಾಹ್ಮಣಾಸ್ತಾತ ಸಂತ್ಯಜೇಯುರಪೂಜಿತಾಃ ।
ಪಶ್ಯಂತೋ ದಾರುಣಂ ಕರ್ಮ ಸತತಂ ಕ್ಷತ್ರಿಯೇ ಸ್ಥಿತಮ್ ॥೩೦॥

ಅವೇದಾನಾಮಕೀರ್ತೀನಾಮಲೋಕಾನಾಮಯಜ್ವನಾಮ್ ।
ಕೋಽಸ್ಮಾಕಂ ಜೀವಿತೇನಾರ್ಥಸ್ತದ್ಧಿ ನೋ ಬ್ರಾಹ್ಮಣಾಶ್ರಯಮ್ ॥೩೧॥

ಎಲೈ ಪ್ರೀತಿಪಾತ್ರನೇ, ಬ್ರಾಹ್ಮಣರು ನಮ್ಮಿಂದ ಸತ್ಕರಿಸಲ್ಪಡದೆ ನಮ್ಮ ಕ್ಷತ್ರಿಯ ಸಹಜವಾದ ದಾರುಣ ಕರ್ಮಗಳನ್ನು ನೋಡಿ ನಮ್ಮನ್ನು ಪರಿತ್ಯಜಿಸಿದರೆ ವೇದ ಹೀನರಾದ, ಕೀರ್ತಿಹೀನರಾದ, ಲೋಕಹೀನರಾದ ನಮಗೆ ಬದುಕಿ ಏನು ಪ್ರಯೋಜನವಿದೆ? ನಮ್ಮ ವೇದ, ಕೀರ್ತಿ, ಲೋಕಗಳು ಮತ್ತು ಯಾಗಗಳು ಎಲ್ಲವೂ ಬ್ರಾಹ್ಮಣರನ್ನು ಆಶ್ರಯಿಸಿವೆ.

ಅತ್ರ ತೇ ವರ್ತಯಿಷ್ಯಾಮಿ ಯಥಾ ಧರ್ಮಃ ಸನಾತನಃ ।
ರಾಜನ್ಯೋ ಬ್ರಾಹ್ಮಣಂ ರಾಜನ್ ಪುರಾ ಪರಿಚಚಾರ ಹ ।
ವೈಶ್ಯೋ ರಾಜನ್ಯಮಿತ್ಯೇವ ಶೂದ್ರೋ ವೈಶ್ಯಮಿತಿ ಶ್ರುತಿಃ ॥೩೨॥

ಸನಾತನಧರ್ಮವು ಹೇಗಿದ್ದಿತೆಂದು ನಾನು ನಿನಗೆ ಹೇಳುವೆನು. ಎಲೈ ರಾಜನೇ, ಹಿಂದೆ ಕ್ಷತ್ರಿಯನು ಬ್ರಾಹ್ಮಣನ ಪರಿಚರ್ಯವನ್ನು ಮಾಡುತ್ತಿದ್ದನು. ವೈಶ್ಯನು ಕ್ಷತ್ರಿಯನ ಪರಿಚರ್ಯೆಯನ್ನು ಮಾಡುತ್ತಿದ್ದನು. ಶೂದ್ರನು ವೈಶ್ಯನ ಪರಿಚರ್ಯೆಯನ್ನು ಮಾಡುತ್ತಿದ್ದನು ಎಂದು ಕೇಳಿದ್ದೇವೆ.

ದೂರಾಚ್ಛೂದ್ರೇಣೋಪಚರ್ಯೋ ಬ್ರಾಹ್ಮಣೋಽಗ್ನಿರಿವ ಜ್ವಲನ್ ।
ಸಂಸ್ಪರ್ಶಪರಿಚರ್ಯಸ್ತು ವೈಶ್ಯೇನ ಕ್ಷತ್ರಿಯೇಣ ಚ ॥೩೩॥

ಅಗ್ನಿಯಂತೆ ಜ್ವಲಿಸುವ ಬ್ರಾಹ್ಮಣನನ್ನು ಶೂದ್ರನು ದೂರದಿಂದಲೇ ಉಪಚರಿಸಬೇಕು. ವೈಶ್ಯ ಮತ್ತು ಕ್ಷತ್ರಿಯನು ಬ್ರಾಹ್ಮಣನನ್ನು ಸ್ಪರ್ಶ ಮಾಡಿ ಪರಿಚರ್ಯೆಯನ್ನು ಮಾಡುತ್ತಾನೆ.

ಮೃದುಭಾವಾನ್ ಸತ್ಯಶೀಲಾನ್ ಸತ್ಯಧರ್ಮಾನುಪಾಲಕಾನ್ ।
ಆಶೀವಿಷಾನಿವ ಕ್ರುದ್ಧಾಂಸ್ತಾನುಪಾಚರತ ದ್ವಿಜಾನ್ ॥೩೪॥

ಮೃದುಸ್ವಭಾವದ, ಸತ್ಯಶೀಲರಾದ, ಸತ್ಯಧರ್ಮಪಾಲಕರಾದ ಬ್ರಾಹ್ಮಣರನ್ನು ಕೋಪಗೊಂಡ ಸರ್ಪಗಳಂತೆ ಉಪಚರಿಸು.

ಅಪರೇಷಾಂ ಪರೇಷಾಂ ಚ ಪರೇಭ್ಯಶ್ಚೈವ ಯೇ ಪರೇ ।
ಕ್ಷತ್ರಿಯಾಣಾಂ ಪ್ರತಪತಾಂ ತೇಜಸಾ ಚ ಬಲೇನ ಚ ।
ಬ್ರಾಹ್ಮಣೇಷ್ವೇವ ಶಾಮ್ಯಂತಿ ತೇಜಾಂಸಿ ಚ ತಪಾಂಸಿ ಚ ॥೩೫॥

ತೇಜಸ್ಸು ಮತ್ತು ಬಲಗಳಿಂದ ಜ್ವಲಿಸುವ ಶ್ರೇಷ್ಠ-ಶ್ರೇಷ್ಠ ಕ್ಷತ್ರಿಯರ ತೇಜಸ್ಸು ಮತ್ತು ತಪಸ್ಸುಗಳೂ ಸಹ ಬ್ರಾಹ್ಮಣರನ್ನು ಹೊಂದಿ ಶಾಂತವಾಗುತ್ತವೆ.

ನ ಮೇ ಪಿತಾ ಪ್ರಿಯತರೋ ನ ತ್ವಂ ತಾತ ತಥಾ ಪ್ರಿಯಃ ।
ನ ಮೇ ಪಿತುಃ ಪಿತಾ ರಾಜನ್ನ ಚಾತ್ಮಾ ನ ಚ ಜೀವಿತಮ್ ॥೩೬॥

ತ್ವತ್ತಶ್ಚ ಮೇ ಪ್ರಿಯತರಃ ಪೃಥಿವ್ಯಾಂ ನಾಸ್ತಿ ಕಶ್ಚನ ।
ತ್ವತ್ತೋಽಪಿ ಮೇ ಪ್ರಿಯತರಾ ಬ್ರಾಹ್ಮಣಾ ಭರತರ್ಷಭ ॥೩೭॥

ಎಲೈ ಪ್ರೀತಿಪಾತ್ರನೇ, ನನಗೆ ತಂದೆಯೂ ಅಷ್ಟು ಪ್ರಿಯತರನಲ್ಲ. ಹಾಗೆ ನೀನೂ ಪ್ರಿಯನಲ್ಲ. ನನಗೆ ತಂದೆಯ ತಂದೆಯು ಪ್ರಿಯನಲ್ಲ. ನನಗೆ ನಾನೇ ಆಗಲಿ, ಜೀವವಾಗಲೀ ಪ್ರಿಯವಲ್ಲ. ಭೂಮಿಯಲ್ಲಿ ನನಗೆ ನಿನಗಿಂತ ಹೆಚ್ಚು ಪ್ರಿಯನಾದವನು ಯಾವನೂ ಇಲ್ಲ. ಎಲೈ ಭರತರ್ಷಭನೇ, ಆದರೆ ಬ್ರಾಹ್ಮಣರು ನಿನಗಿಂತಲೂ ಹೆಚ್ಚು ಪ್ರಿಯರಾದವರು.

ಬ್ರವೀಮಿ ಸತ್ಯಮೇತಚ್ಚ ಯಥಾಹಂ ಪಾಂಡುನಂದನ ।
ತೇನ ಸತ್ಯೇನ ಗಚ್ಛೇಯಂ ಲೋಕಾನ್ ಯತ್ರ ಸ ಶಂತನುಃ ॥೩೮॥

ಎಲೈ ಪಾಂಡುನಂದನನೇ, ನಾನು ನುಡಿಯುತ್ತಿರುವ ಈ ಮಾತು ಸತ್ಯವಾದರೆ ಆ ಸತ್ಯದಿಂದ ಶಂತನುವು ಇರುವ ಲೋಕಗಳಿಗೆ ಹೋದೇನು!

ಪಶ್ಯೇಯಂ ಚ ಸತಾಂ ಲೋಕಾಂಛುಚೀನ್ ಬ್ರಹ್ಮಪುರಸ್ಕೃತಾನ್ ।
ತತ್ರ ಮೇ ತಾತ ಗಂತವ್ಯಮಹ್ನಾಯ ಚ ಚಿರಾಯ ಚ ॥೩೯॥

ಬ್ರಾಹ್ಮಣರಿಂದ ಪುರಸ್ಕೃತವಾದ, ಸಜ್ಜನರು ಹೊಂದುವ, ಶುಭಲೋಕಗಳನ್ನು ಹೊಂದಿಯೇನು! ಎಲೈ ಪ್ರೀತಿಪಾತ್ರನೇ, ಅಂತಹ ಲೋಕಕ್ಕೆ ನಾನು ಶೀಘ್ರವಾಗಿ ಮತ್ತು ಶಾಶ್ವತವಾಗಿ ಹೋಗಬೇಕು.

ಸೋಽಹಮೇತಾದೃಶಾಲ್ಲೋಕಾನ್ ದೃಷ್ಟ್ವಾ ಭರತಸತ್ತಮ ।
ಯನ್ಮೇ ಕೃತಂ ಬ್ರಾಹ್ಮಣೇಷು ನ ತಪ್ಯೇ ತೇನ ಪಾರ್ಥಿವ ॥೪೦॥

ಎಲೈ ಭರತಶ್ರೇಷ್ಠನೇ, ನಾನು ಅಂತಹ ಲೋಕಗಳನ್ನು ನೋಡಿ ಬ್ರಾಹ್ಮಣರಿಗೆ ಮಾಡಿದ ಉಪಕಾರದ ವಿಷಯದಲ್ಲಿ ಎಂದೂ ಸಂತಾಪ ಪಡುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಏಕೋನನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತನೆಯ ಅಧ್ಯಾಯ

ಅತಿಥಿಯಜ್ಞ. ಪಾತ್ರವಿಮರ್ಶೆ.

ಯುಧಿಷ್ಠಿರಃ

ಯೌ ತು ಸ್ಯಾತಾಂ ಚರಣೇನೋಪಪನ್ನೌ
ಯೌ ವಿದ್ಯಯಾ ಸದೃಶೌ ಜನ್ಮನಾ ಚ ।
ತಾಭ್ಯಾಂ ದಾನಂ ಕತರಸ್ಮೈ ವಿಶಿಷ್ಟಮ್
ಅಯಾಚಮಾನಾಯ ಚ ಯಾಚತೇ ಚ ॥೧॥

ಯುಧಿಷ್ಠಿರ– ಇಬ್ಬರು ಬ್ರಾಹ್ಮಣರು ಸದಾಚಾರದಿಂದ ಸಹಿತರಾಗಿದ್ದು, ವಿದ್ಯೆಯಿಂದಲೂ, ಕುಲದಿಂದಲೂ ಸದೃಶರಾಗಿದ್ದು ಒಬ್ಬನು ಯಾಚಿಸುವವನು, ಇನ್ನೊಬ್ಬನು ಯಾಚಿಸದೆ ಇರುವವನೂ ಆದರೆ ಅವರಲ್ಲಿ ಯಾರಿಗೆ ಕೊಟ್ಟ ದಾನವು ಶ್ರೇಷ್ಠವಾದುದು?

ಭೀಷ್ಮಃ

ಶ್ರೇಯೋ ವೈ ಯಾಚತಃ ಪಾರ್ಥ ದತ್ತಮಾಹುರಯಾಚತೇ ।
ಅರ್ಹತ್ತಮೋ ವೈ ಧೃತಿಮಾನ್ ಕೃಪಣಾದಧೃತಾತ್ಮನಃ ॥೨॥

ಭೀಷ್ಮ– ಎಲೈ ಪಾರ್ಥನೇ, ಯಾಚಿಸುವವನಿಗಿಂತಲೂ, ಯಾಚಿಸದೆ ಇರುವವನಿಗೆ ಕೊಟ್ಟ ದಾನವು ಶ್ರೇಯಸ್ಕರವಾದುದು. ಮನೋಧೈರ್ಯವಿಲ್ಲದ ಕೃಪಣನಿಗಿಂತಲೂ, ಧೈರ್ಯಶಾಲಿಯಾದವನು ಹೆಚ್ಚು ಅರ್ಹನಾದವನು.

ಕ್ಷತ್ರಿಯೋ ರಕ್ಷಣಧೃತಿರ್ಬ್ರಾಹ್ಮಣೋऽನರ್ಥನಾಧೃತಿಃ ।
ಬ್ರಾಹ್ಮಣೋ ಧೃತಿಮಾನ್ ವಿದ್ವಾನ್ ದೇವಾನ್ ಪ್ರೀಣಾತಿ ತುಷ್ಟಿಮಾನ್ ॥

ಕ್ಷತ್ರಿಯನ ಧೈರ್ಯವೆಂದರೆ ರಕ್ಷಣೆ. ಬ್ರಾಹ್ಮಣನ ಧೈರ್ಯವೆಂದರೆ ಅಯಾಚನೆ. ವಿದ್ವಾಂಸನೂ, ಧೈರ್ಯಶಾಲಿಯೂ ಆದ ಬ್ರಾಹ್ಮಣನು ತೃಪ್ತಿಯಿಂದ ಇದ್ದು ದೇವತೆಗಳನ್ನು ಸಂತೋಷಪಡಿಸುತ್ತಾನೆ.

ಯಾಚ್ಞಾಮಾಹುರನೀಶಸ್ಯ ಅಭಿಭಾರಂ ಚ ಭಾರತ ।
ಉದ್ವೇಜಯತಿ ಯಾಚನ್ ಹಿ ಸದಾ ಭೂತಾನಿ ದಸ್ಯುವತ್ ॥೪॥

ಎಲೈ ಭಾರತನೇ, ಯಾಚನೆಯು ಮತ್ತು ಇನ್ನೊಬ್ಬರ ಬಳಿಗೆ ಹೋಗುವುದು ಅಸಮರ್ಥನಾದವನಿಗೆ ಎಂದು ಹೇಳಲ್ಪಡುತ್ತದೆ. ಯಾಚಿಸುವವನು ಕಳ್ಳನಂತೆ ಇನ್ನೊಬ್ಬರನ್ನು ಉದ್ವೇಗಕ್ಕೆ ಒಳಪಡಿಸುತ್ತಾನೆ.

ಮ್ರಿಯತೇ ಯಾಚಮಾನೋ ವೈ ತಮನು ಮ್ರಿಯತೇ ದದತ್ ।
ದದತ್ ಸಂಜೀವಯತ್ಯೇನಮಾತ್ಮಾನಂ ಚ ಯುಧಿಷ್ಠಿರ ॥೫॥

ಎಲೈ ಯುಧಿಷ್ಠಿರನೇ, ಯಾಚಿಸುವವನೂ ಮರಣವನ್ನು ಹೊಂದುತ್ತಾನೆ, ದಾನವನ್ನು ಮಾಡುವವನೂ ಮರಣವನ್ನು ಹೊಂದುತ್ತಾನೆ. ಆದರೆ ದಾನವನ್ನು

ಮಾಡುವವನು ಯಾಚಿಸುವವನನ್ನು ಉದ್ಧರಿಸುತ್ತಾನೆ, ತನ್ನನ್ನೂ ಉದ್ಧಾರ ಮಾಡಿಕೊಳ್ಳುತ್ತಾನೆ.

ಆನೃಶಂಸ್ಯಂ ಪರೋ ಧರ್ಮೋ ಯಾಚತೇ ಯತ್ ಪ್ರದೀಯತೇ ।
ಅಯಾಚತಃ ಸೀದಮಾನಾನ್ ಸರ್ವೋಪಾಯೈರ್ನಿಮಂತ್ರಯ ॥೬॥

ಯಾಚಿಸುವವನಿಗೆ ದಾನ ಮಾಡುವುದರಲ್ಲಿ ಶ್ರೇಷ್ಠವಾದ ದಯಾರೂಪವಾದ ಧರ್ಮವಿದೆ. ಸಂಕಟಕ್ಕೆ ಒಳಗಾದರೂ ಯಾಚನೆ ಮಾಡದಿರುವವರನ್ನು ನೀನು ಎಲ್ಲ ಉಪಾಯಗಳಿಂದ ತಿಳಿದು ನಿಮಂತ್ರಿಸು.

ಯದಿ ವೈ ತಾದೃಶಾ ರಾಷ್ಟ್ರೇ ವಸೇಯುಸ್ತೇ ದ್ವಿಜೋತ್ತಮಾಃ ।
ಭಸ್ಮಚ್ಛನ್ನಾನಿವಾಗ್ನೀಂಸ್ತಾನ್ ಬುಧ್ಯೇಥಾಸ್ತ್ವಂ ಪ್ರಯತ್ನತಃ ॥೭॥

ಅಂತಹ ಶ್ರೇಷ್ಠ ಬ್ರಾಹ್ಮಣರು ನಿನ್ನ ರಾಷ್ಟ್ರದಲ್ಲಿ ಬೂದಿ ಮುಚ್ಚಿದ ಅಗ್ನಿಯಂತೆ ವಾಸ ಮಾಡುತ್ತಿದ್ದರೆ ಪ್ರಯತ್ನಪಟ್ಟು ಅಂತಹವರು ಯಾರೆಂದು ತಿಳಿದುಕೋ.

ತಪಸಾ ದೀಪ್ಯಮಾನಾಸ್ತೇ ದಹೇಯುಃ ಪೃಥಿವೀಮಪಿ ।
ಪೂಜ್ಯಾ ಹಿ ಜ್ಞಾನವಿಜ್ಞಾನತಪೋಯೋಗಸಮನ್ವಿತಾಃ ॥೮॥

ತಪಸ್ಸಿನಿಂದ ಜ್ವಲಿಸುವ ಅವರು ಪೃಥಿವಿಯನ್ನೂ ಸುಟ್ಟಾರು. ಜ್ಞಾನ-ವಿಜ್ಞಾನ, ತಪೋಯೋಗ ಸಮನ್ವಿತರಾದ ಅವರು ಪೂಜನೀಯರಷ್ಟೆ?

ತೇಭ್ಯಃ ಪೂಜಾಂ ಪ್ರಯುಂಜೀಥಾ ಬ್ರಾಹ್ಮಣೇಭ್ಯಃ ಪರಂತಪ ।
ದದದ್ ಬಹುವಿಧಾನ್ ದಾಯಾನುಪಚ್ಛಂದಾನಯಾಚತಾಮ್ ॥೯॥

ಎಲೈ ಪರಂತಪನೇ, ಯಾಚನೆಯನ್ನು ಮಾಡದಿರುವ ಅಂತಹ ಬ್ರಾಹ್ಮಣರಿಗೆ ಅವರ ಅಭಿಪ್ರಾಯವನ್ನು ತಿಳಿದು ಅದಕ್ಕೆ ಅನುಗುಣವಾದ ಬಹುವಿಧವಾದ ದಾನಗಳನ್ನು ಕೊಟ್ಟು ಪೂಜಿಸುವವನಾಗು.

ಯದಗ್ನಿಹೋತ್ರೇ ಸುಹುತೇ ಸಾಯಂಪ್ರಾತರ್ಭವೇತ್ ಫಲಮ್ ।
ವಿದ್ಯಾವೇದವ್ರತವತಿ ತದ್ ದಾನಫಲಮುಚ್ಯತೇ ॥೧೦॥

ಪ್ರಾತಃಕಾಲ ಮತ್ತು ಸಾಯಂಕಾಲದಲ್ಲಿ ಚೆನ್ನಾಗಿ ಅಗ್ನಿಹೋತ್ರವನ್ನು ಮಾಡುವವನಿಗೆ ಯಾವ ಫಲವೋ, ವಿದ್ಯಾವ್ರತಧಾರಿಯಾದ ಬ್ರಾಹ್ಮಣನಿಗೆ ಕೊಟ್ಟ ದಾನವು ಅದೇ ಫಲವನ್ನು ಕೊಡುವುದೆಂದು ಹೇಳಲ್ಪಡುತ್ತದೆ.

ವಿದ್ಯಾವೇದವ್ರತಸ್ನಾತಾನವ್ಯಪಾಶ್ರಯಜೀವಿನಃ ।
ಗೂಢಸ್ವಾಧ್ಯಾಯತಪಸೋ ಬ್ರಾಹ್ಮಣಾನ್ ಸಂಶಿತವ್ರತಾನ್ ॥೧೧॥

ಕೃತೈರಾವಸಥೈರ್ಹ್ಯದ್ಯೈಃ ಸಪ್ರೇಷ್ಯೈಃ ಸಪರಿಚ್ಛದೈಃ ।
ನಿಮಂತ್ರಯೇಥಾಃ ಕೌಂತೇಯ ಕಾಮ್ಯೈಶ್ಚಾನ್ಯೈರ್ದ್ವಿಜೋತ್ತಮಾನ್ ॥೧೨॥

ಎಲೈ ಕೌಂತೆಯನೇ, ವಿದ್ಯಾವೇದವ್ರತಸ್ನಾತರಾಗಿ, ಇನ್ನೊಬ್ಬರನ್ನು ಆಶ್ರಯಿಸದೆ ಜೀವಿಸಿ, ಯಾರಿಗೂ ತಿಳಿಯದಂತೆ ಸ್ವಾಧ್ಯಾಯ ಮತ್ತು ತಪಸ್ಸುಗಳಲ್ಲಿ ನಿರತರಾಗಿ ಶ್ರೇಷ್ಠವಾದ ವ್ರತಧಾರಿಗಳಾದ ಬ್ರಾಹ್ಮಣರನ್ನು ನಿಮಂತ್ರಿಸಿ ಪರಿಷ್ಕೃತವಾದ ಮನೋಹರವಾದ, ಸೇವಕರಿಂದ ಸಹಿತವಾದ ಮನೆಗಳನ್ನು ಮತ್ತು ಉಳಿದ ಪದಾರ್ಥಗಳನ್ನು ಕೊಟ್ಟು ಪೂಜಿಸು.

ಅಪಿ ತೇ ಪ್ರತಿಗೃಹ್ಣೀಯುಃ ಶ್ರದ್ಧಾಪೂತಂ ಯುಧಿಷ್ಠಿರ ।
ಕಾರ್ಯಮಿತ್ಯೇವ ಮನ್ವಾನಾ ಧರ್ಮಜ್ಞಾಃ ಸೂಕ್ಷ್ಮದರ್ಶಿನಃ ॥೧೩॥

ಎಲೈ ಯುಧಿಷ್ಠಿರನೇ, ಅವರು ಧರ್ಮಜ್ಞರು ಮತ್ತು ಸೂಕ್ಷ್ಮದರ್ಶಿಗಳು. ಶ್ರದ್ಧೆಯಿಂದ ದಾನ ಮಾಡಿದುದನ್ನು ಪ್ರತಿಗ್ರಹ ಮಾಡುವುದು ಧರ್ಮವೆಂದು ತಿಳಿದು ಅವರು ತೆಗೆದುಕೊಂಡಾರು.

ಅಪಿ ತೇ ಬ್ರಾಹ್ಮಣಾ ಭುಕ್ತ್ವಾ ಗತಾಃ ಸೋದ್ಧರಣಾ ಗೃಹಾನ್ ।
ಯೇಷಾಂ ದಾರಾಃ ಪ್ರತೀಕ್ಷಂತೇ ಪರ್ಜನ್ಯಮಿವ ಕರ್ಷಕಾಃ ॥೧೪॥

ಯಾರ ಪತ್ನಿಯರು ಪತಿಯ ಆಗಮನವನ್ನು ಕರ್ಷಕರು ಮಳೆಯನ್ನು ನಿರೀಕ್ಷಿಸುವಂತೆ ನಿರೀಕ್ಷಿಸುತ್ತಾರೆಯೋ ಅಂತಹ ಬ್ರಾಹ್ಮಣರು ನಿನ್ನ ಮನೆಯಲ್ಲಿ ಭೋಜನವನ್ನು ಮಾಡಿ ತಮ್ಮ ಮನೆಗೆ ಬೇಕಾದ ಪದಾರ್ಥಗಳನ್ನು ತೆಗೆದುಕೊಂಡು ಹೋಗುತ್ತಾರೆಯೇ?

ಅನ್ನಾನಿ ಪ್ರಾತಃಸವನೇ ನಿಯತಾ ಬ್ರಹ್ಮಚಾರಿಣಃ ।
ಬ್ರಾಹ್ಮಣಾಸ್ತಾತ ಭುಂಜನಾಸ್ತೇತಾಗ್ನೀನ್ ಪ್ರೀಣಯಂತು ತೇ ॥೧೫॥

ಎಲೈ ಪ್ರೀತಿಪಾತ್ರನೇ, ನಿನ್ನ ಮನೆಯಲ್ಲಿ ಪ್ರಾತಃಕಾಲದಲ್ಲಿ ನಿಯಮಧಾರಿಗಳಾದ ಬ್ರಹ್ಮಚಾರಿ ಬ್ರಾಹ್ಮಣರು ಅನ್ನಗಳನ್ನು ಊಟ ಮಾಡಿ ನಿನ್ನ ತ್ರೇತಾಗ್ನಿಗಳನ್ನು ಸಂತೋಷ ಪಡಿಸಲಿ.

ಮಾಧ್ಯಂದಿನಂ ತೇ ಸವನಂ ದದತಸ್ತಾತ ವರ್ತತಾಮ್ ।
ಗಾ ಹಿರಣ್ಯಾನಿ ವಾಸಾಂಸಿ ತೇನೇಂದ್ರಃ ಪ್ರೀಯತಾಂ ತವ ॥೧೬॥

ಎಲೈ ಪ್ರೀತಿಪಾತ್ರನೇ, ಮಧ್ಯಾಹ್ನ ಕಾಲದಲ್ಲಿ (ಮಾಧ್ಯಂದಿನ ಸವನದ ಕಾಲದಲ್ಲಿ) ನಿನ್ನ ಮನೆಯಲ್ಲಿ ಗೋದಾನ, ಹಿರಣ್ಯದಾನ ಮತ್ತು ವಸ್ತ್ರದಾನಗಳು ನಡೆಯಲಿ. ಅದರಿಂದ ಇಂದ್ರನು ನಿನಗೆ ಪ್ರಸನ್ನನಾಗಲಿ.

ತೃತೀಯಂ ಸವನಂ ತತ್ತೇ ವೈಶ್ವದೇವಂ ಯುಧಿಷ್ಠಿರ ।
ಯದ್ ದೇವೇಭ್ಯಃ ಪಿತೃಭ್ಯಶ್ಚ ವಿಪ್ರೇಭ್ಯಶ್ಚ ಪ್ರಯಚ್ಛಸಿ ॥೧೭॥

ಅಹಿಂಸಾ ಸರ್ವಭೂತೇಭ್ಯಃ ಸಂವಿಭಾಗಶ್ಚ ಸರ್ವಶಃ ।
ದಮಸ್ತ್ಯಾಗೋ ಧೃತಿಃ ಸತ್ಯಂ ಭವತ್ವವಭೃಥಾಯ ತೇ ॥೧೮॥

ಎಲೈ ಯುಧಿಷ್ಠಿರನೇ, ಮೂರನೆಯ ಸಾಯಂ ಸವನವೇನಿದೆಯೋ ಆಗ ದೇವತೆಗಳಿಗೆ, ಪಿತೃಗಳಿಗೆ ಮತ್ತು ಬ್ರಾಹ್ಮಣರಿಗೆ ಏನು ಕೊಡುತ್ತೀಯೋ ಅವು ವಿಶ್ವೇದೇವ ಸಂಬಂಧಿಯಾದುದು. ಎಲ್ಲ ಪ್ರಾಣಿಗಳಲ್ಲಿಯೂ ಅಹಿಂಸೆ, ತನ್ನ ಸಂಪತ್ತನ್ನು ಹಂಚಿಕೊಂಡು ಭೋಗಿಸುವುದು, ಇಂದ್ರಿಯನಿಗ್ರಹ, ತ್ಯಾಗ, ಧೈರ್ಯ, ಸತ್ಯ ಇವು ನಿನಗೆ ಅವಭೃಥಸ್ನಾನವಾಗಲಿ.

ಏಷ ತೇ ವಿತತೋ ಯಜ್ಞಃ ಶ್ರದ್ಧಾಪೂತಃ ಸದಕ್ಷಿಣಃ ।
ವಿಶಿಷ್ಟಃ ಸರ್ವಯಜ್ಞೇಭ್ಯೋ ನಿತ್ಯಂ ತಾತ ಪ್ರವರ್ತತಾಮ್ ॥೧೯॥

ಈ ವಿಸ್ತಾರವಾದ, ದಕ್ಷಿಣಾ ಸಹಿತವಾದ, ಶ್ರದ್ಧೆಯಿಂದ ಕೂಡಿದ ನಿನ್ನ ಯಜ್ಞವು ಉಳಿದ ಎಲ್ಲಾ ಯಜ್ಞಗಳಿಗಿಂತಲೂ ಶ್ರೇಷ್ಠವಾಗುತ್ತದೆ. ಎಲೈ ಪ್ರೀತಿಪಾತ್ರನೇ, ಅಂತಹ ಯಜ್ಞವು ನಿತ್ಯವೂ ನಿನ್ನಿಂದ ನಡೆಯಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಪಾತ್ರಪರೀಕ್ಷಣಂ ನಾಮ ನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂದನೆಯ ಅಧ್ಯಾಯ

ರಾಜಧರ್ಮಗಳು

ಯುಧಿಷ್ಠಿರಃ

ದಾನಂ ಯಜ್ಞಕ್ರಿಯಾ ಚೇಹ ಕಿಂಸ್ವಿತ್ ಪ್ರೇತ್ಯ ಮಹಾಫಲಮ್ ।
ಕಸ್ಯ ಜ್ಯಾಯಃ ಫಲಂ ಪ್ರೋಕ್ತಂ ಕೀದೃಶೇಭ್ಯಃ ಕಥಂ ಕದಾ ॥೧॥

ಯುಧಿಷ್ಠಿರ– ದಾನ ಮತ್ತು ಯಜ್ಞ ಈ ಎರಡರಲ್ಲಿ ಮರಣಾನಂತರದಲ್ಲಿ ಯಾವುದರಲ್ಲಿ ಮಹಾಫಲವಿದೆ? ಅವುಗಳಲ್ಲಿ ಯಾವುದರ ಫಲವು ಶ್ರೇಷ್ಠವಾದುದು ಮತ್ತು ದಾನವನ್ನು ಕೊಡುವುದಾದರೆ ಎಂತಹವರಿಗೆ ಯಾವಾಗ ಕೊಟ್ಟ ದಾನವು ಶ್ರೇಷ್ಠವಾದ ಫಲವನ್ನು ಕೊಡುತ್ತದೆ?

ಏತದಿಚ್ಛಾಮಿ ವಿಜ್ಞಾತುಂ ಯಾಥಾತಥ್ಯೇನ ಭಾರತ ।
ವಿದ್ವನ್ ಜಿಜ್ಞಾಸಮಾನಾಯ ದಾನಧರ್ಮಾನ್ ಪ್ರಚಕ್ಷ್ವ ಮೇ ॥೨॥

ಎಲೈ ಭಾರತನೇ, ಇದನ್ನು ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ. ವಿದ್ವಾಂಸನೇ, ಇದನ್ನು ತಿಳಿಯಲು ಅಪೇಕ್ಷಿಸುವ ನನಗೆ ದಾನ-ಧರ್ಮಗಳನ್ನು ಹೇಳು.

ಅಂತರ್ವೇದ್ಯಾಂ ಚ ಯದ್ ದತ್ತಂ ಶ್ರದ್ಧಯಾ ಚಾನೃಶಂಸ್ಯತಃ ।
ಕಿಂ ಸ್ವಿನ್ನಿಶ್ರೇಯಸಂ ತಾತ ತನ್ಮೇ ಬ್ರೂಹಿ ಪಿತಾಮಹ ॥೩॥

ಯಜ್ಞದಲ್ಲಿ ಅಂತರ್ವೇದಿಯಲ್ಲಿ ಕೊಡುವ ದಾನ ಮತ್ತು ಶ್ರದ್ಧಾಪೂರ್ವಕವಾಗಿ ಮಾರ್ದವದಿಂದ ಬಹಿರ್ವೇದಿಯಲ್ಲಿ ಕೊಡುವ ದಾನ ಇವುಗಳಲ್ಲಿ ಯಾವುದು ನಿಶ್ರೇಯಸ್ಕರವೆಂದು ಪ್ರೀತಿಪಾತ್ರನೇ, ಪಿತಾಮಹನೇ, ನನಗೆ ಹೇಳು.

ಭೀಷ್ಮಃ

ರೌದ್ರಂ ಕರ್ಮ ಕ್ಷತ್ರಿಯಸ್ಯ ಸತತಂ ತಾತ ವರ್ತತೇ ।
ತಸ್ಯ ವೈತಾನಿಕಂ ಕರ್ಮ ದಾನಂ ಚೈವೇಹ ಪಾವನಮ್ ॥೪॥

ಭೀಷ್ಮ– ಪ್ರೀತಿಪಾತ್ರನೇ, ಕ್ಷತ್ರಿಯನೇ, ಯಾವಾಗಲೂ ಘೋರವಾದ ಕರ್ಮವೇ ಇರುತ್ತದೆ. ಅವನು ಯಜ್ಞ ಕರ್ಮ ಮತ್ತು ದಾನಗಳು ಇಲ್ಲಿ ಅವನನ್ನು ಪವಿತ್ರೀಕರಿಸುತ್ತದೆ.

ನ ತು ಪಾಪಕೃತಾಂ ರಾಜ್ಞಾಂ ಪ್ರತಿಗ್ರಹ್ಣಂತಿ ಸಾಧವಃ ।
ಏತಸ್ಮಾತ್ ಕಾರಣಾದ್ ಯಜ್ಞೈರ್ಯಜೇದ್ ರಾಜಾऽऽಪ್ತದಕ್ಷಿಣೈಃ ॥೫॥

ಪಾಪಿಷ್ಠರಾದ ರಾಜರು ಮಾಡಿದ ಯಜ್ಞಗಳನ್ನು ಸಜ್ಜನರು ಸ್ವೀಕರಿಸುವುದಿಲ್ಲ. ಆದ್ದರಿಂದ ನ್ಯಾಯದಿಂದ ಸಂಪಾದಿಸಿದ ಧನದಿಂದ ದಕ್ಷಿಣೆಯನ್ನು ಕೊಟ್ಟು ಯಜ್ಞಗಳನ್ನು ಮಾಡಬೇಕು.

ಅಥ ಚೇತ್ ಪ್ರತಿಗೃಹ್ಣೀಯುರ್ದದ್ಯಾದಹರಹರ್ನೃಪಃ ।
ಶ್ರದ್ಧಾಮಾಸ್ಥಾಯ ಪರಮಾಂ ಪಾವನಂ ಹ್ಯೇತದುತ್ತಮಮ್ ॥೬॥

ಆಗ ರಾಜನು ಪ್ರತಿದಿನವೂ ಶ್ರದ್ಧೆಯಿಂದ ಕೊಡುವ ದಾನಗಳನ್ನು ಬ್ರಾಹ್ಮಣರು ಸ್ವೀಕರಿಸಿದರೆ ಅದು ಬಹಳ ಶ್ರೇಷ್ಠವಾದುದು ಮತ್ತು ರಾಜನನ್ನು ಪವಿತ್ರಗೊಳಿಸುವುದು.

ಬ್ರಾಹ್ಮಣಾಂಸ್ತರ್ಪಯೇದ್ ದ್ರವ್ಯೈಸ್ತತೋ ಯಜ್ಞೇ ಯತವ್ರತಃ ।
ಮೈತ್ರಾನ್ ಸಾಧೂನ್ ವೇದವಿದಃ ಶೀಲವೃತ್ತತಪೋನ್ವಿತಾನ್ ॥೭॥

ಆದ್ದರಿಂದ ಯಜ್ಞದಲ್ಲಿ ದೀಕ್ಷೆಯುಳ್ಳವನಾಗಿ ರಾಜನು ಸ್ನೇಹಶೀಲರೂ, ಸಾಧುಗಳೂ, ವೇದಜ್ಞನೂ, ಶೀಲವೃತ್ತ-ತಪಸ್ಸಿನಿಂದ ಕೂಡಿದವರೂ ಆದ ಬ್ರಾಹ್ಮಣರನ್ನು ಸಂತೋಷ ಪಡಿಸಬೇಕು.

ಯತ್ಕೈತೇನ ಕರಿಷ್ಯಂತಿ ಕೃತಂ ತೇನ ಭವಿಷ್ಯತಿ ।
ಯಜ್ಞಾನ್ ಸಾಧಯ ಸಾಧುಭ್ಯಃ ಸ್ವಾದ್ವನ್ನಾನ್ ದಕ್ಷಿಣಾವತಃ ॥೮॥

ಎಲ್ಲಿ ದಾನ ಮತ್ತು ಯಜ್ಞಗಳಿಂದ ಬ್ರಾಹ್ಮಣರನ್ನು ಸಂತೋಷಪಡಿಸುತ್ತಾನೆಯೋ ಅಲ್ಲಿ ಎಲ್ಲವೂ ಸಂಪೂರ್ಣವಾಗುತ್ತದೆ. ಆದ್ದರಿಂದ ಯಜ್ಞಗಳನ್ನು ಮಾಡು. ಸಜ್ಜನರಿಗೆ ದಕ್ಷಿಣೆಯಿಂದ ಕೂಡಿದ ಸಾಧುಭೋಜನವನ್ನು ನೀಡು (ಲಕ್ಷಾಲಂಕಾರ).

ಇಷ್ಟೇ ದತ್ತೇ ಚ ಮನ್ಯೇಥಾ ಆತ್ಮಾನಂ ದಾನಕರ್ಮಣಾಮ್ ।
ಪೂಜಯೇಥಾ ಯಾಯಜೂಕಾಂಸ್ತವಾಪ್ಯಂಶೋ ಭವೇದ್ ಯಥಾ ॥೯॥

ದಾನವನ್ನು ಅಂಗವಾಗಿ ಹೊಂದಿದ ಯಜ್ಞವು ಮಾಡಲ್ಪಟ್ಟಾಗ, ದಾನವನ್ನು ಕೊಡುವಾಗ ಪರಮಾತ್ಮನನ್ನು ಚಿಂತಿಸಬೇಕು. ಋತ್ವಿಜರನ್ನು ಗೌರವಿಸಬೇಕು. ಆಗ ಅವರ ಪುಣ್ಯದ ಒಂದು ಭಾಗವು ನಿನಗೂ ಬರುತ್ತದೆ (ಲಕ್ಷಾಲಂಕಾರ).

ವಿದ್ವದ್ಭ್ಯಃ ಸಂಪ್ರದಾನೇನ ತತ್ರಾಪ್ಯಂಶೋಽಸ್ಯ ಪೂಜಯಾ ।
ಯಜ್ವಭ್ಯಶ್ಚಾಥ ವಿದ್ವದ್ಭ್ಯೋ ದತ್ತ್ವಾ ಲೋಕಂ ಪ್ರದಾಪಯೇತ್ ।
ಪ್ರದದ್ಯಾದ್ ಜ್ಞಾನದಾತೃಣಾಂ ಜ್ಞಾನದಾನಾಂಶಭಾಗ್ ಭವೇತ್ ॥೧೦॥

ವಿದ್ವಾಂಸರಿಗೆ ದಾನವನ್ನು ಮಾಡುವುದರಿಂದ ಮತ್ತು ಪೂಜೆಯನ್ನು ಮಾಡುವುದರಿಂದ ಅವರ ಪುಣ್ಯದ ಒಂದಂಶವು ದೊರೆಯುತ್ತದೆ. ಋತ್ವಿಜರಿಗೂ ಮತ್ತು ವಿದ್ವಾಂಸರಿಗೂ ಧನವನ್ನು ನೀಡಿ ಉಳಿದವರಿಗೆ ದಾನವನ್ನು ಮಾಡಿಸಬೇಕು. ಜ್ಞಾನವನ್ನು ಉಪದೇಶ ಮಾಡುವ ಆಚಾರ್ಯರಿಗೆ ದಕ್ಷಿಣೆಯನ್ನು ಕೊಡಬೇಕು. ಆಗ ಜ್ಞಾನದಾನದ ಪುಣ್ಯದಲ್ಲಿ ಒಂದಂಶವು ನಿನಗೂ ಬರುತ್ತದೆ.

ಪ್ರಜಾವತೋ ಭರೇಥಾಶ್ಚ ಬ್ರಾಹ್ಮಣಾನ್ ಬಹುಭಾರಿಣಃ ।
ಪ್ರಜಾವಾಂಸ್ತೇನ ಭವತಿ ಯಥಾ ಜನಯಿತಾ ತಥಾ ॥೧೧॥

ಬಹುಕುಟುಂಬಿಗಳಾದ ಪ್ರಜಾವಂತರಾದ ಬ್ರಾಹ್ಮಣರನ್ನು ಪೋಷಿಸು. ಅದರಿಂದ ಪ್ರಜಾಪತಿಯಾದ ಬ್ರಹ್ಮನಂತೆ ನೀನೂ ಪ್ರಜಾಪತಿಯಾಗುವಿ.

ಯಾವತೋ ವೈ ಸಾಧುಧರ್ಮಾನ್ ಸಂತಃ ಸಂವರ್ತಯಂತ್ಯುತ ।
ಸರ್ವೇ ತೇ ಚಾಪಿ ಭರ್ತವ್ಯಾ ನರಾ ಯೇ ಬಹುಭಾರಿಣಃ ॥೧೨॥

ಎಷ್ಟು ಸಜ್ಜನರು ನಿನ್ನ ರಾಜ್ಯದಲ್ಲಿ ಸದ್ಧರ್ಮಗಳನ್ನು ಪ್ರವೃತ್ತಿಸುತ್ತಾರೆಯೋ ಅವರೆಲ್ಲರನ್ನೂ ಮತ್ತು ದೊಡ್ಡ ಕುಟುಂಬವುಳ್ಳವರೆಲ್ಲರನ್ನೂ ಪೋಷಿಸುವವನಾಗು.

ಸಮೃದ್ಧಃ ಸಂಪ್ರಯಚ್ಛಸ್ವ ಬ್ರಾಹ್ಮಣೇಭ್ಯೋ ಯುಧಿಷ್ಠಿರ ।
ಧೇನೂರನಡುಹೋಽನ್ನಾನಿ ಚತ್ರಂ ವಾಸಾಂಸ್ಯುಪಾನಹೌ ॥೧೩॥

ಎಲೈ ಯುಧಿಷ್ಠಿರನೇ, ಸಮೃದ್ಧನಾದ ನೀನು ಬ್ರಾಹ್ಮಣರಿಗೆ ಗೋವುಗಳನ್ನೂ, ಎತ್ತುಗಳನ್ನೂ, ಅನ್ನ-ಛತ್ರ-ವಸ್ತ್ರ-ಪಾದರಕ್ಷೆಗಳನ್ನೂ ಕೊಡು.

ಆಜ್ಯಾನಿ ಯಜಮಾನೇಭ್ಯಸ್ತಥಾನ್ನಾದ್ಯಾನಿ ಭಾರತ ।
ಅಶ್ವವಂತಿ ಚ ಯಾನಾನಿ ವೇಶ್ಮಾನಿ ಶಯನಾನಿ ಚ ॥೧೪॥

ಎಲೈ ಭಾರತನೇ, ಯಾಗವನ್ನು ಮಾಡಿಸುವ ಋತ್ವಿಜರಿಗೆ ಆಜ್ಯವನ್ನೂ, ಅನ್ನವನ್ನೂ, ಅಶ್ವವು ಹೂಡಿದ ಯಾನಗಳನ್ನೂ, ಗೃಹ ಮತ್ತು ಶಯನಗಳನ್ನೂ ಕೊಡು.

ಏತೇ ದೇಯಾ ವೃಷ್ಟಿಮತೋ ಲಘೂಪಾಯಾಶ್ಚ ಭಾರತ ।
ಅಜುಗುಪ್ಸಾಂಶ್ಚ ವಿಜ್ಞಾಯ ಬ್ರಾಹ್ಮಣಾನ್ ವೃತ್ತಿಕರ್ಶಿತಾನ್ ॥೧೫॥

ಎಲೈ ಭಾರತನೇ, ಸಮೃದ್ಧಿಯುಳ್ಳ ರಾಜನಿಗೆ ಇವುಗಳನ್ನು ಕೊಡುವುದು ಬಹಳ ಸುಲಭವಾದುದು. ರಕ್ಷಣೆಯಿಲ್ಲದ, ಜೀವನವೃತ್ತಿಯಿಲ್ಲದೆ ಕರ್ಶಿತರಾದ ಬ್ರಾಹ್ಮಣರನ್ನು ತಿಳಿದು ಅವರಿಗೆ ಈ ದಾನಗಳನ್ನು ಕೊಡುವುದು ಬಹಳ ಸುಲಭ ಸಾಧ್ಯವಾದುದು.

ಉಪಚ್ಛನ್ನಂ ಪ್ರಕಾಶಂ ವಾ ವೃತ್ತ್ಯಾ ತಾನ್ ಪ್ರತಿಪಾದಯ ।
ರಾಜಸೂಯಾಶ್ವಮೇಧಾಭ್ಯಾಂ ಶ್ರೇಯಸ್ತತ್ಕ್ಷತ್ರಿಯಾನ್ ಪ್ರತಿ ॥೧೬॥

ಪ್ರಚ್ಛನ್ನವಾಗಿ ಅಥವಾ ಪ್ರಕಾಶವಾಗಿ ಅವರಿಗೆ ವೃತ್ತಿಯನ್ನು ನೀಡಿ ಅವರನ್ನು ರಕ್ಷಿಸು. ರಾಜಸೂಯ-ಅಶ್ವಮೇಧ ಯಾಗಗಳು ಕ್ಷತ್ರಿಯರಿಗೆ ಶ್ರೇಯಸ್ಕರವೆಂದು ವಿಹಿತವಾದವುಗಳು (ಲಕ್ಷಾಲಂಕಾರ).

ಏವಂ ಪಾಪೈರ್ವಿಮುಕ್ತಸ್ತ್ವಂ ಪೂತಃ ಸ್ವರ್ಗಮವಾಪ್ಸ್ಯಸಿ ।
ಸ್ರಂಸಯಿತ್ವಾ ಪುನಃ ಕೋಶಂ ಯದ್ರಾಷ್ಟ್ರಂ ಪಾಲಯಿಷ್ಯಸಿ ॥೧೭॥

ಹೀಗೆ ಮಾಡುವುದರಿಂದಲೂ ಮತ್ತು ಕೋಶದಲ್ಲಿರುವ ಧನವನ್ನು ವ್ಯಯಮಾಡಿ ರಾಷ್ಟ್ರದ ಪಾಲನೆಯನ್ನು ಮಾಡುವುದರಿಂದಲೂ ನೀನು ಪಾಪಗಳಿಂದ ವಿಮುಕ್ತನಾಗಿ ಪವಿತ್ರನಾಗಿ ಸ್ವರ್ಗವನ್ನು ಹೊಂದುವಿ.

ತತಶ್ಚ ಬ್ರಹ್ಮಭೂಯಸ್ತ್ವಮವಾಪ್ಸ್ಯಸಿ ಧನಾನಿ ಚ ।
ಆತ್ಮನಶ್ಚ ಪರೇಷಾಂ ಚ ವೃತ್ತಿಂ ಸಂರಕ್ಷ ಭಾರತ ॥೧೮॥

ಎಲೈ ಭಾರತನೇ, ಅದರಿಂದ ನೀನು ವೇದಜ್ಞಾನವನ್ನು ಮತ್ತು ಸಂಪತ್ತನ್ನು ಪಡೆಯುವಿ. ನಿನ್ನ ಮತ್ತು ಪರರ ವೃತ್ತಿಯನ್ನು ರಕ್ಷಿಸುವವನಾಗು.

ಪುತ್ರವಚ್ಚಾಪಿ ಭೃತ್ಯಾನ್ ಸ್ವಾನ್ ಪ್ರಜಾಶ್ಚ ಪರಿಪಾಲಯ ।
ಯೋಗಕ್ಷೇಮಶ್ಚ ತೇ ನಿತ್ಯಂ ಬ್ರಾಹ್ಮಣೇಷ್ವಸ್ತು ಭಾರತ ॥೧೯॥

ಎಲೈ ಭಾರತನೇ, ನಿನ್ನ ಪ್ರಜೆಗಳನ್ನು ಮತ್ತು ಭೃತ್ಯರನ್ನು ಸ್ವಂತ ಮಕ್ಕಳಂತೆ ಪರಿಪಾಲಿಸು. ಬ್ರಾಹ್ಮಣರ ಯೋಗಕ್ಷೇಮವನ್ನು ಯಾವಾಗಲೂ ನೋಡಿಕೋ.

ತದರ್ಥಂ ಜೀವಿತಂ ತೇಽಸ್ತು ಮಾ ತೇಭ್ಯೋಽಪ್ರತಿಪಾಲನಮ್ ।
ಅನರ್ಥೋ ಬ್ರಾಹ್ಮಣಸ್ಯೈಷ ಯದ್ ವಿತ್ತನಿಚಯೋ ಮಹಾನ್ ॥೨೦॥

ನಿನ್ನ ಜೀವನವು ಅವರ ಸಲುವಾಗಿ ಇರಲಿ. ನೀನು ಅವರನ್ನು ರಕ್ಷಿಸದಿರುವುದು ಬೇಡ. ಬ್ರಾಹ್ಮಣರ ಬಳಿ ಬಹಳ ಧನ ಸಂಗ್ರಹವಾದರೆ ಅದು ಅವನಿಗೆ ಅನರ್ಥಕಾರಿಯಾದುದು.

ಶ್ರಿಯಾ ಹ್ಯಭೀಕ್ಷ್ಣಂ ಸಂವಾಸೋ ದರ್ಪಯೇತ್ ಸಂಪ್ರಮೋಹಯೇತ್ ।
ಬ್ರಾಹ್ಮಣೇಷು ಪ್ರಮೂಢೇಷು ಧರ್ಮೋ ವಿಪ್ರಣಶೇದ್ ಧ್ರುವಮ್ ।
ಧರ್ಮಪ್ರಣಾಶೇ ಭೂತಾನಾಮಭಾವಃ ಸ್ಯಾನ್ನ ಸಂಶಯಃ ॥೨೧॥

ಸತತವಾಗಿ ಸಂಪತ್ತಿನ ಸಹವಾಸವು ದರ್ಪವನ್ನು ಮತ್ತು ಮೋಹವನ್ನು ತಂದುಕೊಡುತ್ತದೆ. ಬ್ರಾಹ್ಮಣರು ಮೂಢರಾದರೆ ಧರ್ಮವು ಶೀಘ್ರವಾಗಿ ನಾಶವನ್ನು ಹೊಂದುತ್ತದೆ. ಧರ್ಮವು ನಾಶವನ್ನು ಹೊಂದಿದರೆ ಎಲ್ಲ ಪ್ರಜೆಗಳ ನಾಶ ಉಂಟಾಗುವುದರಲ್ಲಿ ಸಂಶಯವಿಲ್ಲ.

ಯೋ ರಕ್ಷಿಭ್ಯಃ ಸಂಪ್ರದಾಯ ರಾಜಾ ರಾಷ್ಟ್ರಂ ವಿಲುಂಪತಿ ।
ಯಕ್ಷ್ಯೇ ರಾಷ್ಟ್ರಾದ್ ಧನಂ ತಸ್ಮಾದಾನಯಧ್ವಮಿತಿ ಬ್ರುವನ್ ॥೨೨॥

ಯಚ್ಚಾದಾಯ ತದಾಜ್ಞಪ್ತಂ ಭೀತಂ ದತ್ತಂ ಸುದಾರುಣಮ್ ।
ಯಜೇದ್ ರಾಜಾ ನ ತಂ ಯಜ್ಞಂ ಪ್ರಶಂಸಂತ್ಯಸ್ಯ ಸಾಧವಃ ॥೨೩॥

ಯಾವ ರಾಜನು ತನ್ನ ರಕ್ಷಕರಿಗೆ ನಾನು ಯಜ್ಞವನ್ನು ಮಾಡಬೇಕು, ನೀವು ಧನವನ್ನು ತನ್ನಿ ಎಂದು ಅವರ ಮೂಲಕವಾಗಿ ರಾಷ್ಟ್ರದ ಪ್ರಜೆಗಳ ಸಂಪತ್ತನ್ನು ದೋಚುತ್ತಾನೆಯೋ ಅಥವಾ ಪ್ರಜೆಗಳೇ ಅವನ ಆಜ್ಞೆಯನ್ನು ನೋಡಿ ಹೆದರಿ ಧನವನ್ನು ಕೊಡುತ್ತಾರೆಯೋ ಅದು ಅತ್ಯಂತ ಘೋರವಾದುದು. ಅಂತಹ ಧನದಿಂದ ರಾಜನು ಯಜ್ಞವನ್ನು ಮಾಡಬಾರದು. ಅದನ್ನು ಸಜ್ಜನರು ಪ್ರಶಂಸಿಸುವುದಿಲ್ಲ.

ಅಪೀಡಿತಾಃ ಸುಸಂವೃದ್ಧಾ ಯೇ ದದತ್ಯನುಕೂಲತಃ ।
ತಾದೃಶೇನಾಪ್ಯುಪಾಯೇನ ಯಷ್ಟವ್ಯಂ ನೋದ್ಯಮಾಹೃತೈಃ ॥೨೪॥

ಪ್ರಜೆಗಳಿಗೆ ಪೀಡೆಯನ್ನು ಮಾಡದೆ ಸಮೃದ್ಧರಾದ ಪ್ರಜೆಗಳು ತಾವಾಗಿಯೇ ಕೊಟ್ಟ ಧನರೂಪ ಸಾಧನದಿಂದ ಯಾಗವನ್ನು ಮಾಡಬೇಕು. ಬಲಾತ್ಕಾರದಿಂದ ಸೆಳೆದು ತಂದ ಧನದಿಂದ ಮಾಡಬಾರದು.

ಯದಾ ಪರಿನಿಷಿಚ್ಯೇತ ನಿಹಿತೋ ವೈ ಯಥಾವಿಧಿ ।
ತದಾ ರಾಜಾ ಮಹಾಯಜ್ಞೈರ್ಯಜೇತ ಬಹುದಕ್ಷಿಣೈಃ ॥೨೫॥

ಹಾಗೆ ಪ್ರಜೆಗಳು ತಾವಾಗಿಯೇ ಶಾಸ್ತ್ರಾನುಸಾರವಾಗಿ ಕೊಟ್ಟ ಧನವು ಯಾವಾಗ ಪೂರ್ಣವಾಗುತ್ತದೆಯೋ ಆಗ ರಾಜನು ಬಹುದಕ್ಷಿಣೆಯನ್ನು ಕೊಟ್ಟು ಮಹಾಯಜ್ಞವನ್ನು ಮಾಡಬೇಕು.

ವೃದ್ಧಬಾಲಧನಂ ರಕ್ಷ್ಯಮಂಧಸ್ಯ ಕೃಪಣಸ್ಯ ಚ ।
ನ ಖಾತಪೂರ್ವಂ ಕುರ್ವೀತ ನ ರುದಂತೀಧನಂ ಹರೇತ್ ॥೨೬॥

ವೃದ್ಧರ, ಬಾಲಕರ, ಅಂಧರ, ಕೃಪಣರ, ಅಳುತ್ತಿರುವ ಸ್ತ್ರೀಯರ ಧನವನ್ನು ತೆಗೆದುಕೊಳ್ಳಬಾರದು.

ಹೃತಂ ಕೃಪಣವಿತ್ತಂ ಹಿ ರಾಷ್ಟ್ರಂ ಹಂತಿ ನೃಪಶ್ರಿಯಮ್ ।
ದದ್ಯಾಚ್ಚ ಮಹತೋ ಭೋಗಾನ್ ಕ್ಷುದ್ಭಯಂ ಪ್ರಣುದೇತ್ ಸತಾಮ್ ॥

ಎಲೈ ರಾಜನೇ, ಕಾರ್ಪಣ್ಯದಲ್ಲಿದ್ದವರ ಧನವನ್ನು ತೆಗೆದುಕೊಂಡರೆ ಅದು ರಾಷ್ಟ್ರವನ್ನು ಮತ್ತು ಸಂಪತ್ತನ್ನು ವಿನಾಶಗೊಳಿಸುತ್ತದೆ. ಅಂತಹ ಕೃಪಣರಾದ ಸಜ್ಜನರಿಗೆ ಶ್ರೇಷ್ಠವಾದ ಭೋಗಗಳನ್ನು ನೀಡಿ ಅವರ ಹಸಿವಿನ ಭಯವನ್ನು ನೀಗಿಸಬೇಕು.

ಯೇಷಾಂ ಸ್ವದೂನಿ ಭೋಜ್ಯಾನಿ ಸಮವೇಕ್ಷ್ಯಂತಿ ಬಾಲಕಾಃ ।
ನಾಶ್ನಂತಿ ವಿಧಿವತ್ತಾನಿ ಕಿನ್ನು ಪಾಪತರಂ ತತಃ ॥೨೮॥

ಯಾರು ಊಟ ಮಾಡುವ ರುಚಿಕರವಾದ ಪದಾರ್ಥಗಳನ್ನು ಬಾಲಕರು ನೋಡುತ್ತಾರೆಯೋ ಮತ್ತು ಬಾಲಕರಿಗೆ ಅದು ಕೊಡಲ್ಪಡುವುದಿಲ್ಲವೋ ಭುಂಜಿಸುವವರಿಗೆ ಅದಕ್ಕಿಂತ ಹೆಚ್ಚು ಪಾಪಕರವಾದುದು ಯಾವುದಿದೆ?

ಯದಿ ತೇ ತಾದೃಶೋ ರಾಷ್ಟ್ರೇ ವಿದ್ವಾನ್ ಸೀದೇತ್ ಕ್ಷುಧಾ ದ್ವಿಜಃ ।
ಭ್ರೂಣಹತ್ಯಾಂ ಚ ಗಚ್ಛೇಥಾಃ ಕೃತ್ವಾ ಪಾಪಮಿವೋತ್ತಮಮ್ ॥೨೯॥

ನಿನ್ನ ರಾಜ್ಯದಲ್ಲಿ ವಿದ್ವಾಂಸನಾದ ಅಂತಹ ಒಬ್ಬ ಸದ್ಬ್ರಾಹ್ಮಣನು ಹಸಿವಿನಿಂದ ಬಳಲುತ್ತಿದ್ದರೆ ದೊಡ್ಡ ಪಾಪವನ್ನು ಮಾಡಿದವನಂತೆ ನಿನಗೆ ಭ್ರೂಣಹತ್ಯಾ ದೋಷವು ಬರುತ್ತದೆ.

ಧಿಕ್ ತಸ್ಯ ಜೀವಿತಂ ರಾಜ್ಞೋ ರಾಷ್ಟ್ರೇ ಯಸ್ಯಾವಸೀದತಿ ।
ದ್ವಿಜೋಽನ್ಯೋ ವಾ ಮನುಷ್ಯೋಽಪಿ ಶಿಬಿರಾಹ ವಚೋ ಯಥಾ ॥

ಶಿಬಿಯು ಹೇಳಿದಂತೆ ಯಾವ ರಾಜನ ರಾಷ್ಟ್ರದಲ್ಲಿ ಬ್ರಾಹ್ಮಣನೇ ಆಗಲಿ ಬೇರೆ ಮನುಷ್ಯನೇ ಆಗಲಿ ಹಸಿವಿನಿಂದ ಸಂಕಟಪಡುತ್ತಾನೆಯೋ ಅಂತಹ ರಾಜನಿಗೆ ಧಿಕ್ಕಾರವಿರಲಿ.

ಯಸ್ಯ ಸ್ಮ ವಿಷಯೇ ರಾಜ್ಞಃ ಸ್ನಾತಕಃ ಸೀದತಿ ಕ್ಷುಧಾ ।
ಅವೃದ್ಧಿಮೇತಿ ತದ್ ರಾಷ್ಟ್ರಂ ವಿಂದತೇ ಸಹರಾಜಕಮ್ ॥೩೧॥

ಯಾವ ರಾಜನ ರಾಷ್ಟ್ರದಲ್ಲಿ ವೇದವಿದ್ಯಾಪಾರಂಗತನಾದ ಬ್ರಾಹ್ಮಣನು ಹಸಿವಿನಿಂದ ಕಂಗೆಡುತ್ತಾನೆಯೋ ಅವನ ರಾಷ್ಟ್ರವು ವೃದ್ಧಿಯನ್ನು ಹೊಂದುವುದಿಲ್ಲ ಮತ್ತು ಶತ್ರುಗಳ ವಶವಾಗುತ್ತದೆ.

ಕ್ರೋಶಂತ್ಯೋ ಯಸ್ಯ ವೈ ರಾಷ್ಟ್ರಾದ್ ಹ್ರಿಯಂತೇ ತರಸಾ ಸ್ತ್ರಿಯಃ ।
ಕ್ರೋಶತಾಂ ಪತಿಪುತ್ರಾಣಾಂ ಮೃತೋಽಸೌ ನ ಚ ಜೀವತಿ ॥೩೨॥

ಯಾವನ ರಾಷ್ಟ್ರದಲ್ಲಿ ಪತಿ-ಪುತ್ರರು ದುಃಖದಿಂದ ಕಿರುಚುತ್ತಿರುವಾಗ ಸ್ತ್ರೀಯರು ಬಲಾತ್ಕಾರದಿಂದ ಎಳೆಯಲ್ಪಡುತ್ತಾರೆಯೋ ಅಂತಹ ರಾಜನು ಸತ್ತವನು. ಅವನು ಬದುಕಿಲ್ಲ.

ಅರಕ್ಷಿತಾರಂ ಹರ್ತಾರಂ ವಿಲೋಪ್ತಾರಮದಾಯಕಮ್ ।
ತಂ ಸ್ಮ ರಾಜಕಲಿಂ ಹನ್ಯುಃ ಪ್ರಜಾಃ ಸಂಭೂಯ ನಿರ್ಘೃಣಮ್ ॥೩೩॥

ಪ್ರಜೆಗಳ ಧನವನ್ನು ತೆಗೆದುಕೊಂಡು ಅವರನ್ನು ರಕ್ಷಿಸದಿರುವ, ದಾನವನ್ನು ಕೊಡದಿರುವ, ಧರ್ಮವಿಲೋಪವನ್ನು ಮಾಡುವ, ದಯಾರಹಿತನಾದ ರಾಜರೂಪನಾದ ಕಲಿಯನ್ನು ಪ್ರಜೆಗಳು ಒಟ್ಟಿಗೆ ಸೇರಿ ಕೊಂದಾರು!

ಅಹಂ ವೋ ರಕ್ಷಿತೇತ್ಯುಕ್ತ್ವಾ ಯೋ ನ ರಕ್ಷತಿ ಭೂಮಿಪಃ ।
ಸ ಸಂಹತ್ಯ ನಿಹಂತವ್ಯಃ ಶ್ವೇವ ಸೋನ್ಮಾದ ಆತುರಃ ॥೩೪॥

ಯಾವ ರಾಜನು ನಾನು ನಿಮ್ಮನ್ನು ರಕ್ಷಿಸುತ್ತೇನೆ ಎಂದು ಹೇಳಿ ರಕ್ಷಿಸುವುದಿಲ್ಲವೋ ಅವನನ್ನು ರೋಗ ಹಿಡಿದ ಹುಚ್ಚುನಾಯಿಯನ್ನು ಕೊಂದಂತೆ ಎಲ್ಲರೂ ಒಟ್ಟಾಗಿ ಕೊಲ್ಲಬೇಕು.

ಪಾಪಂ ಕುರ್ವಂತಿ ಯತ್ಕಿಂಚಿತ್ ಪ್ರಜಾ ರಾಜ್ಞಾ ಹ್ಯರಕ್ಷಿತಾಃ ।
ಚತುರ್ಥಂ ತಸ್ಯ ಪಾಪಸ್ಯ ರಾಜಾ ಭಾರತ ವಿಂದತಿ ॥೩೫॥

ಎಲೈ ಭಾರತನೇ, ರಾಜನಿಂದ ರಕ್ಷಿಸಲ್ಪಡದ ಪ್ರಜೆಗಳು ಯಾವ ಪಾಪವನ್ನು ಮಾಡುತ್ತಾರೆಯೋ ಆ ಪಾಪದ ನಾಲ್ಕನೆಯ ಒಂದು ಭಾಗವು ರಾಜನನ್ನು ಸೇರುತ್ತದೆ.

ಅಪ್ಯಾಹುಃ ಸರ್ವಮೇವೇತಿ ಭೂಯೋಽರ್ಧಮಿತಿ ನಿಶ್ಚಯಃ ।
ಚತುರ್ಥಂ ಮತಮಸ್ಮಾಕಂ ಮನೋಃ ಶ್ರುತ್ವಾಽನುಶಾಸನಮ್ ॥೩೬॥

ಕೆಲವರು ಪೂರ್ಣವಾಗಿ ಪಾಪವು ರಾಜನಿಗೆ ಬರುತ್ತದೆ ಎಂದು ಹೇಳುತ್ತಾರೆ. ಇನ್ನು ಕೆಲವರು ಅರ್ಧಭಾಗ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಮನುವಿನ ಅನುಶಾಸನದಂತೆ ನನ್ನ ಅಭಿಪ್ರಾಯ ನಾಲ್ಕನೆಯ ಒಂದು ಭಾಗವು ಬರುತ್ತದೆ ಎಂಬುದಾಗಿ.

ಶುಭಂ ವಾ ಯತ್ಕುರ್ವಂತಿ ಪ್ರಜಾ ರಾಜ್ಞಾ ಸುರಕ್ಷಿತಾಃ ।
ಚತುರ್ಥಂ ತಸ್ಯ ಪುಣ್ಯಸ್ಯ ರಾಜಾ ಚಾಪ್ನೋತಿ ಭಾರತ ॥೩೭॥

ರಾಜನಿಂದ ಚೆನ್ನಾಗಿ ರಕ್ಷಿಸಲ್ಪಟ್ಟ ಪ್ರಜೆಗಳು ಸದ್ಧರ್ಮವನ್ನು ಮಾಡಿದರೂ ಆ ಪುಣ್ಯದ ನಾಲ್ಕನೆಯ ಒಂದು ಭಾಗವು ರಾಜನಿಗೆ ಸೇರುತ್ತದೆ.

ಜೀವಂತಂ ತ್ವಾನುಜೀವಂತು ಪ್ರಜಾಃ ಸರ್ವಾ ಯುಧಿಷ್ಠಿರ ।
ಪರ್ಜನ್ಯಮಿವ ಭೂತಾನಿ ಮಹಾದ್ರುಮಮಿವ ದ್ವಿಜಾಃ ॥೩೮॥

ಎಲೈ ಯುಧಿಷ್ಠಿರನೇ, ಎಲ್ಲಾ ಪ್ರಾಣಿಗಳೂ ಪರ್ಜನ್ಯವನ್ನು ಅವಲಂಬಿಸುವಂತೆ, ಪಕ್ಷಿಗಳು ಮಹಾವೃಕ್ಷವನ್ನು ಅವಲಂಬಿಸುವಂತೆ, ಜೀವಿಸುವ ನಿನ್ನನ್ನು ಅವಲಂಬಿಸಿ ಎಲ್ಲಾ ಪ್ರಜೆಗಳೂ ಜೀವಿಸಲಿ.

ಕುಬೇರಮಿವ ರಕ್ಷಾಂಸಿ ಶತಕ್ರತುಮಿವಾಮರಾಃ ।
ಜ್ಞಾತಯಸ್ತ್ವಾನುಜೀವಂತು ಸುಹೃದಶ್ಚ ಪರಂತಪ ॥೩೯॥

ಎಲೈ ಪರಂತಪನೇ, ರಾಕ್ಷಸರು ಕುಬೇರನನ್ನು ಆಶ್ರಯಿಸಿದಂತೆ, ದೇವತೆಗಳು ಇಂದ್ರನನ್ನು ಆಶ್ರಯಿಸಿದಂತೆ, ಸುಹೃದರು ಮತ್ತು ಬಂಧುಗಳು ನಿನ್ನನ್ನು ಆಶ್ರಯಿಸಿ ಜೀವಿಸಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ರಾಜಧರ್ಮಾನುವರ್ಣನಂ ನಾಮ
ಏಕನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆರಡನೆಯ ಅಧ್ಯಾಯ

ಭೂಮಿದಾನ ಪ್ರಶಂಸೆ

ಯುಧಿಷ್ಠಿರಃ

ಇದಂ ದೇಯಮಿದಂ ದೇಯಮಿತೀಯಂ ಶ್ರುತಿಚೋದನಾ ।
ಬಹುದೇಯಾಶ್ಚ ರಾಜಾನಃ ಕಿಂ ಸ್ವಿದ್ ದೇಯಮನುತ್ತಮಮ್ ॥೧॥

ಯುಧಿಷ್ಠಿರ– ಇದನ್ನು ಕೊಡಬೇಕು, ಇದನ್ನು ಕೊಡಬೇಕು ಎಂದು ಶ್ರುತಿಯ ಚೋದನೆ ಇದೆ. ರಾಜರು ಬಹಳ ವಸ್ತುಗಳನ್ನು ಕೊಡಬೇಕು. ದಾನ ಮಾಡುವ ವಸ್ತುಗಳಲ್ಲಿ ಅತ್ಯಂತ ಶ್ರೇಷ್ಠವಾದುದು ಯಾವುದು?

ಭೀಷ್ಮಃ

ಅತಿ ದಾನಾನಿ ಸರ್ವಾಣಿ ಪೃಥಿವೀದಾನಮುಚ್ಯತೇ ।
ಅಚಲಾ ಹ್ಯಕ್ಷಯಾ ಭೂಮಿರ್ದೋಗ್ಧ್ರೀ ಕಾಮಾನನುತ್ತಮಾನ್ ॥೨॥

ಭೀಷ್ಮ– ಎಲ್ಲ ದಾನಗಳಲ್ಲಿಯೂ ಭೂದಾನವು ಅತ್ಯಂತ ಶ್ರೇಷ್ಠವಾದುದು. ಭೂಮಿಯು ಸ್ಥಿರವಾದುದು, ನಾಶ ಹೊಂದದಿರುವುದು ಮತ್ತು ಶ್ರೇಷ್ಠವಾದ ಕಾಮವನ್ನು ಕೊಡುವಂತಹದು.

ದೋಗ್ಧ್ರೀ ವಾಸಾಂಸಿ ರತ್ನಾನಿ ಪಶೂನ್ವ್ರೀಹಿಯವಾಂಸ್ತಥಾ ।
ಭೂಮಿದಃ ಸರ್ವಭೂತೇಷು ಶಾಶ್ವತೀರೇಧತೇ ಸಮಾಃ ॥೩॥

ವಸ್ತ್ರಗಳು, ರತ್ನಗಳು, ಪಶುಗಳು, ವ್ರೀಹಿಯವಗಳು ಎಲ್ಲವನ್ನೂ ಭೂಮಿಯು ಕೊಡುತ್ತದೆ. ಭೂಮಿಯನ್ನು ದಾನ ಮಾಡುವವನು ಬಹುಕಾಲದವರೆಗೆ ಎಲ್ಲ ಭೂತಗಳಲ್ಲಿಯೂ ಸಮೃದ್ಧಿಯನ್ನು ಹೊಂದುತ್ತಾನೆ.

ಯಾವದ್ ಭೂಮೇರಾಯುರಿಹ ತಾವದ್ ಭೂಮಿದ ಏಧತೇ ।
ನ ಭೂಮಿದಾನಾದಸ್ತೀಹ ಪರಂ ಕಿಂಚಿದ್ ಯುಧಿಷ್ಠಿರ ॥೪॥

ಭೂಮಿಯ ಆಯುಸ್ಸು ಎಷ್ಟಿದೆಯೋ ಅಷ್ಟು ಕಾಲ ಭೂಮಿಯನ್ನು ದಾನ ಮಾಡಿದವನು ಅಭಿವೃದ್ಧಿಯನ್ನು ಹೊಂದುತ್ತಾನೆ. ಎಲೈ ಯುಧಿಷ್ಠಿರನೇ, ಭೂಮಿ ದಾನಕ್ಕಿಂತ ಶ್ರೇಷ್ಠವಾದ ದಾನವು ಯಾವುದೂ ಇಲ್ಲ.

ಅಪ್ಯಲ್ಪಂ ಪ್ರದದುಃ ಪೂರ್ವೇ ಪೃಥಿವ್ಯಾ ಇತಿ ನಃ ಶ್ರುತಮ್ ।
ಭೂಮಿಮೇತೇ ದದುಃ ಸರ್ವೇ ಯೇ ಭೂಮಿಂ ಭುಂಜತೇ ಜನಾಃ ॥೫॥

ಪ್ರಾಚೀನರು ಸ್ವಲ್ಪ ಭೂಮಿಯನ್ನಾದರೂ ದಾನ ಮಾಡುತ್ತಿದ್ದರು ಎಂದು ನಾವು ಕೇಳಿದ್ದೇವೆ. ಈಗ ಭೂಮಿಯನ್ನು ಭೋಗಿಸುತ್ತಿರುವವರೆಲ್ಲರೂ ಹಿಂದೆ ಭೂಮಿಯನ್ನು ದಾನ ಮಾಡಿದವರು.

ಸ್ವಕರ್ಮೈವೋಪಜೀವಂತಿ ನರಾ ಇಹ ಪರತ್ರ ಚ ।
ಭೂಮಿರ್ಭೂತಿರ್ಮಹಾದೇವೀ ದಾತಾರಂ ಕುರುತೇ ಪ್ರಿಯಮ್ ॥೬॥

ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಪುರುಷರು ತಾವು ಮಾಡಿದ ಕರ್ಮದ ಫಲವನ್ನೇ ಉಪಜೀವಿಸುತ್ತಾರೆ. ಐಶ್ವರ್ಯಪ್ರದಳಾದ ಮಹಾದೇವಿಯಾದ ಭೂಮಿಯು ಭೂದಾನ ಮಾಡುವವನನ್ನು ಪ್ರಿಯನನ್ನಾಗಿ ಮಾಡಿಕೊಳ್ಳುತ್ತಾಳೆ.

ಯ ಏತಾಂ ದಕ್ಷಿಣಾಂ ದದ್ಯಾದಕ್ಷಯಾಂ ಪೃಥಿವೀಪತಿಃ ।
ಪುನರ್ನರತ್ವಂ ಸಂಪ್ರಾಪ್ಯ ಭವೇತ್ ಸ ಪೃಥಿವೀಪತಿಃ ॥೭॥

ಯಾವ ರಾಜನು ದಕ್ಷಿಣೆ ಸಹಿತವಾಗಿ ಈ ಅಕ್ಷಯವಾದ ಭೂಮಿಯನ್ನು ದಾನ ಮಾಡುತ್ತಾನೆಯೋ ಅವನು ಪುನಃ ಮನುಷ್ಯನಾಗಿ ಹುಟ್ಟಿ ರಾಜನಾಗುತ್ತಾನೆ.

ಯಥಾ ದಾನಂ ತಥಾ ಭೋಗ ಇತಿ ಧರ್ಮೇಷು ನಿಶ್ಚಯಃ ।
ಸಂಗ್ರಾಮೇ ವಾ ತನುಂ ಜಹ್ಯಾದ್ ದದ್ಯಾದ್ವಾ ಪೃಥಿವೀಮಿಮಾಮ್॥೮॥

ಇತ್ಯೇತಾಂ ಕ್ಷತ್ರಬಂಧೂನಾಂ ವದಂತಿ ಪರಮಾಶಿಷಮ್ ।
ಪುನಾತಿ ದತ್ತಾ ಪೃಥಿವೀ ದಾತಾರಮಿತಿ ಶುಶ್ರುಮ ॥೯॥

ಮನುಷ್ಯನು ದಾನಕ್ಕೆ ಅನುಗುಣವಾದ ಭೋಗವನ್ನು ಅನುಭವಿಸುತ್ತಾನೆ ಎಂಬುದು ಧರ್ಮನಿಶ್ಚಯ. ಕ್ಷತ್ರಿಯರಿಗೆ ಶ್ರೇಷ್ಠವಾದ ಆಶೀರ್ವಾದವನ್ನು ಮಾಡುವವರು ರಣರಂಗದಲ್ಲಿ ಶರೀರವನ್ನು ಪರಿತ್ಯಜಿಸಿ ಅಥವಾ ಭೂಮಿಯನ್ನು ದಾನ ಮಾಡಿ ಎಂದು ಹೇಳುತ್ತಾರೆ. ದಾನ ಮಾಡಿದ ಭೂಮಿಯು ದಾತೃವನ್ನು ಪವಿತ್ರೀಕರಿಸುತ್ತದೆ ಎಂದು ಕೇಳಿದ್ದೇವೆ.

ಅಪಿ ಪಾಪಸಮಾಚಾರಂ ಬ್ರಹ್ಮಘ್ನಮಪಿ ವಾऽನೃತಮ್ ।
ಸೈವ ಪಾಪಂ ಪಾವಯತಿ ಸೈವ ಪಾಪಾತ್ ಪ್ರಮೋಚಯೇತ್ ॥೧೦॥

ಪಾಪವನ್ನು ಮಾಡಿದವನನ್ನು, ಬ್ರಹ್ಮಹತ್ಯೆಯನ್ನು ಮಾಡಿದವನನ್ನು, ಅನೃತ ಭಾಷಿಯನ್ನು ದಾನ ಮಾಡಿದ ಭೂಮಿಯು ಶುದ್ಧನನ್ನಾಗಿ ಮಾಡಿ ಪಾಪದಿಂದ ವಿಮುಕ್ತನನ್ನಾಗಿ ಮಾಡುತ್ತದೆ.

ಅಪಿ ಪಾಪಕೃತಾಂ ರಾಜ್ಞಾಂ ಪ್ರತಿಗೃಹ್ಣಂತಿ ಸಾಧವಃ ।
ಪೃಥಿವೀಂ ನಾನ್ಯದಿಚ್ಛಂತಿ ಪಾವನಂ ಜನನೀ ಯಥಾ ॥೧೧॥

ರಾಜರು ಪಾಪಕರ್ಮಿಗಳಾದರೂ ಸಜ್ಜನರು ತಾಯಿಯು ಪವಿತ್ರವಾದುದನ್ನೇ ಬಯಸುವಂತೆ ಅವರಿಂದ ಭೂದಾನವನ್ನು ಪಡೆಯಲು ಬಯಸುತ್ತಾರೆ.

ನಾಮಾಸ್ಯಾಃ ಪ್ರಿಯದತ್ತೇತಿ ಗುಹ್ಯಂ ದೇವ್ಯಾಃ ಸನಾತನಮ್ ।
ದಾನಂ ಚಾಪ್ಯಥ ಚಾದಾನಂ ನಾಮಾಸ್ಯಾಃ ಪರಮಂ ಪ್ರಿಯಮ್ ।
ತಸ್ಮಾತ್ಪ್ರಾಪ್ಯೈವ ಪೃಥಿವೀಂ ದದ್ಯಾದ್ವಿಪ್ರಾಯ ಪಾರ್ಥಿವಃ ॥೧೨॥

ಭೂದೇವಿಗೆ ಪ್ರಿಯದತ್ತಾ ಎಂಬುದು ಸನಾತನವಾದ ರಹಸ್ಯವಾದ ನಾಮ. ಹಾಗೆಯೇ ದಾನ ಮತ್ತು ಆದಾನ (ಸ್ವೀಕಾರ) ಎಂಬ ಶಬ್ದಗಳು ಅವಳಿಗೆ ಪರಮ ಪ್ರಿಯವಾದವುಗಳು. ಆದ್ದರಿಂದ ರಾಜನು ಭೂಮಿಯನ್ನು ಸಂಪಾದಿಸಿ ಅದನ್ನು ಬ್ರಾಹ್ಮಣರಿಗೆ ದಾನವನ್ನು ಮಾಡಬೇಕು.

ಯ ಏತಾಂ ವಿದುಷೇ ದದ್ಯಾತ್ ಪೃಥಿವೀಂ ಪೃಥಿವೀಪತಿಃ ।
ಪೃಥಿವ್ಯಾಮೇತದಿಷ್ಟಂ ಸ ರಾಜ್ಯಾದ್ ರಾಜ್ಯಮಿತೋ ವ್ರಜೇತ್ ।
ಪುನಶ್ಚ ಜನನಂ ಪ್ರಾಪ್ಯ ರಾಜೈವ ಸ್ಯಾನ್ನ ಸಂಶಯಃ ॥೧೩॥

ಯಾವ ರಾಜನು ವಿದ್ವಾಂಸನಾದವನಿಗೆ ಭೂಮಿಯನ್ನು ದಾನ ಮಾಡುತ್ತಾನೆಯೋ ಅವನು ರಾಜ್ಯದಿಂದ ರಾಜ್ಯಕ್ಕೆ ಹೋಗುತ್ತಾನೆ. ಭೂಮಿಯಲ್ಲಿ ಇದು ಇಷ್ಟವಾದುದು. ಎಂದರೆ ಪುನಃ ಜನಿಸಿ ಅವನು ರಾಜನೇ ಆಗುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ.

ನಾಭೂಮಿಪತಿನಾ ಭೂಮಿರಧಿಷ್ಠೇಯಾ ಕಥಂಚನ ।
ನ ವಾ ಪಾತ್ರೇಣ ವಾ ಗೂಹೇದಂತರ್ಧಾನೇನ ವಾ ಚರೇತ್ ।
ಯೇ ಚಾನ್ಯೇ ಭೂಮಿಮಿಚ್ಛೇಯುಃ ಕುರ್ಯುರೇವಮಸಂಶಯಮ್ ॥

ತನ್ನದಲ್ಲದ ಭೂಮಿಯಲ್ಲಿ ತಾನು ವಾಸ ಮಾಡಬಾರದು. ಅಥವಾ ಅಲ್ಲಿ ತನ್ನನ್ನು ವಸ್ತ್ರದಿಂದ ಮುಚ್ಚಿಕೊಂಡು ಅಥವಾ ಯಾರಿಗೂ ಕಾಣದಂತೆ, ತಿಳಿಯದಂತೆ ಸಂಚರಿಸಲೂ ಬಾರದು. ಹಾಗೆ ಮಾಡಿದರೆ ಭೂಮಿಯನ್ನು ಬಯಸುವ ಇನ್ನೊಬ್ಬರೂ ಹಾಗೆಯೇ ಮಾಡಿ ಯಾರು ಇದರಲ್ಲಿ ಸಂಶಯವಿಲ್ಲ.

ಯಃ ಸಾಧೋರ್ಭೂಮಿಮಾದತ್ತೇ ನ ಭೂಮಿಂ ವಿಂದತೇ ತು ಸಃ ।
ಭೂಮಿಂ ತು ದತ್ತ್ವಾ ಸಾಧುಭ್ಯೋ ವಿಂದತೇ ಭೂಮಿಮೇವ ಹಿ ।
ಪ್ರೇತ್ಯೇಹ ಚ ಸ ಧರ್ಮಾತ್ಮಾ ಸಂಪ್ರಾಪ್ನೋತಿ ಮಹದ್ಯಶಃ ॥೧೫॥

ಯಾವನು ಸಜ್ಜನನ ಭೂಮಿಯನ್ನು ಅಪಹರಿಸುತ್ತಾನೆಯೋ ಅವನು ಭೂಮಿಯನ್ನು ಪಡೆಯುವುದಿಲ್ಲ. ಸಜ್ಜನರಿಗೆ ಭೂದಾನ ಮಾಡಿದವನು ಭೂಮಿಯನ್ನು ಪಡೆಯುತ್ತಾನೆ. ಮತ್ತು ಧರ್ಮಾತ್ಮನಾದ ಅವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಮಹಾಕೀರ್ತಿಯನ್ನು ಪಡೆಯುತ್ತಾನೆ.

ಯಸ್ಯ ವಿಪ್ರಾನುಶಾಸಂತಿ ಸಾಧೋರ್ಭೂಮಿಂ ಸದೈವ ಹಿ ।
ನ ತಸ್ಯ ಶತ್ರವೋ ರಾಜನ್ ಪ್ರಶಾಸಂತಿ ವಸುಂಧರಾಮ್ ॥೧೬॥

ಯಾವ ಸಜ್ಜನನಾದ ರಾಜನ ಭೂಮಿಯನ್ನು ವಿಪ್ರರು ಆಳುತ್ತಾರೆಯೋ ಆ ರಾಜನ ಭೂಮಿಯು ಶತ್ರುಗಳಿಗೆ ವಶವಾಗುವುದಿಲ್ಲ.

ಯತ್ ಕಿಂಚಿತ್ ಪುರುಷಃ ಪಾಪಂ ಕುರುತೇ ವೃತ್ತಿಕರ್ಶಿತಃ ।
ಅಪಿ ಗೋಚರ್ಮಮಾತ್ರೇಣ ಭೂಮಿದಾನೇನ ಪೂಯತೇ ॥೧೭॥

ವ್ಯಕ್ತಿಹೀನನಾದ ಮನುಷ್ಯನು ಏನು ಪಾಪವನ್ನು ಮಾಡಿದ್ದರೂ ಗೋಚರ್ಮದಷ್ಟಾದರೂ ಭೂಮಿಯನ್ನು ದಾನ ಮಾಡುವುದರಿಂದ ಪರಿಶುದ್ಧನಾಗುತ್ತಾನೆ.

ಯೇಽಪಿ ಸಂಕೀರ್ಣಕರ್ಮಾಣೋ ರಾಜಾನೋ ರೌದ್ರಕರ್ಮಿಣಃ ।
ತೇಭ್ಯಃ ಪವಿತ್ರಮಾಖ್ಯೇಯಂ ಭೂಮಿದಾನಮನುತ್ತಮಮ್ ॥೧೮॥

ಯಾವ ರಾಜರು ಘೋರಕರ್ಮಗಳನ್ನೂ, ಶುಭಾಶುಭಕರ್ಮಗಳನ್ನೂ ಮಾಡುತ್ತಾರೆಯೋ ಅವರಿಗೆ ಭೂಮಿದಾನವು ಶ್ರೇಷ್ಠವೆಂದು ಹೇಳಬೇಕು.

ಅಲ್ಪಾಂತರಮಿದಂ ಶಶ್ವತ್ ಪುರಾಣಾ ಮೇನಿರೇ ಜನಾಃ ।
ಯೋ ಯಜೇದಶ್ವಮೇಧೇನ ದದ್ಯಾದ್ ವಾ ಸಾಧವೇ ಮಹೀಮ್ ॥

ಪುರಾಣವನ್ನು ತಿಳಿದವರು ಅಶ್ವಮೇಧಯಾಗವನ್ನು ಮಾಡುವುದಕ್ಕೂ ಮತ್ತು ಸತ್ಪುರುಷರಿಗೆ ಭೂಮಿದಾನ ಮಾಡುವುದಕ್ಕೂ ಇರುವ ಅಂತರವು ಅಲ್ಪವೆಂದು ಯಾವಾಗಲೂ ತಿಳಿಯುತ್ತಾರೆ.

ಅಪಿ ಚೇತ್‌ಸುಕೃತಂ ಕೃತ್ವಾ ಶಂಕೇರನ್ನಪಿ ಪಂಡಿತಾಃ ।
ಅಶಂಕ್ಯಮೇಕಮೇವೈತದ್ ಭೂಮಿದಾನಮನುತ್ತಮಮ್ ॥೨೦॥

ಪುಣ್ಯವನ್ನು ಮಾಡಿದ್ದರೂ ಸಹ ಪಂಡಿತರು ಶಂಕಿಸಬಹುದು. ಶ್ರೇಷ್ಠವಾದ ಭೂಮಿದಾನವನ್ನು ಮಾಡಿದವನನ್ನು ಶಂಕಿಸಲೂ ಸಾಧ್ಯವಿಲ್ಲ.

ಸುವರ್ಣಂ ರಜತಂ ವಸ್ತ್ರಂ ಮಣಿಮುಕ್ತಾವಸೂನಿ ಚ ।
ಸರ್ವಮೇತನ್ಮಹಾಪ್ರಾಜ್ಞ ದದಾತಿ ವಸುಧಾಂ ದದತ್ ॥೨೧॥

ಎಲೈ ಮಹಾಪ್ರಾಜ್ಞನೇ, ಭೂಮಿಯನ್ನು ದಾನ ಮಾಡುವವನು ಸುವರ್ಣ, ರಜತ, ವಸ್ತ್ರ, ಮಣಿ, ಮುತ್ತು, ಧನ ಎಲ್ಲವನ್ನೂ ದಾನ ಮಾಡಿದವನಾಗುತ್ತಾನೆ.

ತಪೋ ಯಜ್ಞಃ ಶ್ರುತಂ ಶೀಲಮಲೋಭಃ ಸತ್ಯಸಂಧತಾ ।
ಗುರುದೈವತಪೂಜಾ ಚ ನಾತಿವರ್ತಂತಿ ಭೂಮಿದಮ್ ॥೨೨॥

ತಪಸ್ಸು, ಯಜ್ಞ, ವಿದ್ಯೆ, ಶೀಲ, ಅಲೋಭ, ಸತ್ಯಸಂಧತೆ, ಗುರುದೇವತಾ ಪೂಜೆ ಇದರ ಯಾವ ಫಲವೂ ಭೂಮಿದಾನವನ್ನು ಮಾಡಿದವನನ್ನು ಮೀರಿ ಹೋಗುವುದಿಲ್ಲ.

ಭರ್ತುರ್ನಿಶ್ರೇಯಸೇ ಯುಕ್ತಾಸ್ತ್ಯಕ್ತಾತ್ಮಾನೋ ರಣೇ ಹತಾಃ ।
ಬ್ರಹ್ಮಲೋಕಗತಾಃ ಸಿದ್ಧಾ ನಾತಿಕ್ರಾಮಂತಿ ಭೂಮಿದಮ್ ॥೨೩॥

ಸ್ವಾಮಿಯ ಶ್ರೇಯಸ್ಸಿನಲ್ಲಿ ನಿರತರಾಗಿ ರಣರಂಗದಲ್ಲಿ ಹತರಾಗಿ ಶರೀರ ತ್ಯಾಗವನ್ನು ಮಾಡಿ ಬ್ರಹ್ಮಲೋಕಕ್ಕೆ ಹೋದ ಸಿದ್ಧರೂ ಸಹ ಭೂಮಿದಾನವನ್ನು ಮಾಡಿದವನನ್ನು ಮೀರುವುದಿಲ್ಲ.

ಯಥಾ ಜನಿತ್ರೀ ಕ್ಷೀರೇಣ ಸ್ವಪುತ್ರಂ ಭರತೇ ಸದಾ ।
ಅನುಗೃಹ್ಣಾತಿ ದಾತಾರಂ ತಥಾ ಸರ್ವರಸೈರ್ಮಹೀ ॥೨೪॥

ತಾಯಿಯು ತನ್ನ ಪುತ್ರನನ್ನು ಕ್ಷೀರದಿಂದ ಪೋಷಿಸುವಂತೆ ಭೂಮಿಯು ತನ್ನನ್ನು ದಾನ ಕೊಡುವವರನ್ನು ಎಲ್ಲ ರಸಗಳಿಂದಲೂ ಅನುಗ್ರಹಿಸುತ್ತದೆ.

ಮೃತ್ಯೋರ್ವೈ ಕಿಂಕರೋ ದಂಡಸ್ತಾಪೋ ವಹ್ನೇಃ ಸುದಾರುಣಃ ।
ಘೋರಾಶ್ಚ ವಾರುಣಾಃ ಪಾಶಾ ನೋಪಸರ್ಪಂತಿ ಭೂಮಿದಮ್ ॥೨೫॥

ಮೃತ್ಯು ಕಿಂಕರರಾಗಲೀ, ಯಮದಂಡವಾಗಲೀ, ಭಯಂಕರವಾದ ವಹ್ನಿ ತಾಪವಾಗಲೀ, ಘೋರವಾದ ವರುಣನ ಪಾಶವಾಗಲೀ ಭೂಮಿ ದಾನ ಮಾಡಿದವನ ಸಮೀಪಕ್ಕೆ ಬರುವುದಿಲ್ಲ.

ಪಿತೄಂಶ್ಚ ಪಿತೃಲೋಕಸ್ಥಾನ್ ದೇವಲೋಕೇ ಚ ದೇವತಾಃ ।
ಸಂತರ್ಪಯತಿ ಶಾಂತಾತ್ಮಾ ಯೋ ದದಾತಿ ವಸುಂಧರಾಮ್ ॥೨೬॥

ಭೂದಾನವನ್ನು ಕೊಡುವ ಶಾಂತಾತ್ಮನಾದವನು ಪಿತೃಲೋಕದಲ್ಲಿರುವ ಪಿತೃಗಳನ್ನೂ, ದೇವಲೋಕದಲ್ಲಿರುವ ದೇವತೆಗಳನ್ನೂ ತೃಪ್ತಿಪಡಿಸುತ್ತಾನೆ.

ಕೃಶಾಯ ಮ್ರಿಯಮಾಣಾಯ ವೃತ್ತಿಮ್ಲಾನಾಯ ಸೀದತೇ ।
ಭೂಮಿಂ ವೃತ್ತಿಕರೀಂ ದತ್ತ್ವಾ ಸತ್ರೀ ಭವತಿ ಮಾನವಃ ॥೨೭॥

ಕೃಶನೂ, ಮರಣಾವಸ್ಥೆಯಲ್ಲಿರುವವನೂ, ಜೀವನೋಪಾಯವಿಲ್ಲದೆ ಸಂಕಟ ಪಡುತ್ತಿರುವವನೂ ಆದವನಿಗೆ ಜೀವನೋಪಾಯವನ್ನು ಕಲ್ಪಿಸುವ ಭೂಮಿಯನ್ನು ಕೊಟ್ಟವನು ಯಾಗ ಮಾಡಿದ ಫಲವನ್ನು ಹೊಂದುತ್ತಾನೆ.

ಯಥಾ ಧಾವತಿ ಗೌರ್ವತ್ಸಂ ಕ್ಷೀರಮಭ್ಯುತ್ಸ್ರಜತ್ಯುತ ।
ಏವಮೇವ ಮಹಾಭಾಗ ಭೂಮಿರ್ಭವತಿ ಭೂಮಿದಮ್ ॥೨೮॥

ಹೇಗೆ ಧೇನುವು ಕರುವಿನ ಕಡೆಗೆ ಧಾವಿಸಿ ಕ್ಷೀರವನ್ನು ಸುರಿಸುತ್ತದೆಯೋ ಎಲೈ ಮಹಾಭಾಗನೇ, ಅದರಂತೆ ಭೂಮಿಯನ್ನು ದಾನ ಮಾಡುವವನ ವಿಷಯದಲ್ಲಿ ಭೂಮಿಯು ನಡೆದುಕೊಳ್ಳುತ್ತದೆ.

ಹಲಕೃಷ್ಟಾಂ ಮಹೀಂ ದತ್ತ್ವಾ ಸಬೀಜಾಂ ಸಫಲಾಮಪಿ ।
ಉದೀರ್ಣಂ ವಾಪಿ ಶರಣಂ ತಥಾ ಭವತಿ ಕಾಮದಃ ॥೨೯॥

ಉತ್ತು, ಬಿತ್ತಿ, ಬೀಜ ಮತ್ತು ಫಲ ಸಹಿತವಾದ ಭೂಮಿಯನ್ನು ಮತ್ತು ಶ್ರೇಷ್ಠವಾದ ಗೃಹವನ್ನು ಕೊಡುವವನು ತನ್ನ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸಿಕೊಂಡು ತಾನೂ ಹಾಗೆಯೇ ಆಗುತ್ತಾನೆ.

ಬ್ರಾಹ್ಮಣಂ ವೃತ್ತಸಂಪನ್ನಮಾಹಿತಾಗ್ನಿಂ ಶುಚಿವ್ರತಮ್ ।
ನರಃ ಪ್ರತಿಗ್ರಾಹ್ಯ ಮಹೀಂ ನ ಯಾತಿ ಯಮಸಾದನಮ್ ॥೩೦॥

ಶೀಲಸಂಪನ್ನನೂ, ಆಹಿತಾಗ್ನಿಯೂ, ಶುಚಿವ್ರತನೂ ಆದ ಬ್ರಾಹ್ಮಣನಿಗೆ ಭೂದಾನವನ್ನು ಮಾಡುವ ಮನುಷ್ಯನು ಯಮಪಟ್ಟಣಕ್ಕೆ ಹೋಗುವುದಿಲ್ಲ.

ಯಥಾ ಚಂದ್ರಮಸೋ ವೃದ್ಧಿರಹನ್ಯಹನಿ ಜಾಯತೇ ।
ತಥಾ ಭೂಮಿಕೃತಂ ದಾನಂ ಸಸ್ಯೇ ಸಸ್ಯೇ ವಿವರ್ಧತೇ ॥೩೧॥

ಹೇಗೆ ದಿನದಿನಕ್ಕೆ ಚಂದ್ರನಲ್ಲಿ ವೃದ್ಧಿಯುಂಟಾಗುತ್ತದೆಯೋ ಹಾಗೆ ಭೂಮಿದಾನವು ಸಸ್ಯ-ಸಸ್ಯಗಳಲ್ಲಿ ಅಭಿವೃದ್ಧಿಯನ್ನು ಉಂಟುಮಾಡುತ್ತದೆ.

ಅತ್ರ ಗಾಥಾ ಭೂಮಿಗೀತಾಃ ಕೀರ್ತಯಂತಿ ಪುರಾವಿದಃ ।
ಯಾಃ ಶ್ರುತ್ವಾ ಜಾಮದಗ್ನ್ಯೇನ ದತ್ತಾ ಭೂಃ ಕಾಶ್ಯಪಾಯ ವೈ ॥೩೨॥

ಯಾವ ಗೀತೆಗಳನ್ನು ಕೇಳಿ ಪರಶುರಾಮರು ಕಾಶ್ಯಪರಿಗೆ ಭೂಮಿಯನ್ನು ದಾನ ಮಾಡಿದರೋ ಅಂತಹ ಭೂಮಿಯು ಹಾಡಿದ ಗೀತೆಗಳನ್ನು ಪ್ರಾಚೀನ ಇತಿಹಾಸವನ್ನು ತಿಳಿದವರು ಹೇಳುತ್ತಾರೆ.

ಮಾಮೇವಾದತ್ತ ಮಾಂ ದತ್ತ ಮಾಂ ದತ್ತ್ವಾ ಮಾಮವಾಪ್ಸ್ಯಥ ।
ಅಸ್ಮಿನ್ ಲೋಕೇ ಪರೇ ಚೈವ ತತಶ್ಚಾಜನನೇ ಪುನಃ ॥೩೩॥

ನನ್ನನ್ನೇ ಸ್ವೀಕಾರ ಮಾಡಿ, ನನ್ನನ್ನೇ ದಾನವನ್ನಾಗಿ ಕೊಡಿ, ಪುನಃ ನನ್ನನ್ನೇ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಹೊಂದುವವರಾಗಿ. ಪುನಃ ಜನನರಹಿತರಾದ ಮೋಕ್ಷದಲ್ಲಿಯೂ ನನ್ನನ್ನು ಹೊಂದುವವರಾಗಿ.

ಯ ಇಮಾಂ ವ್ಯಾಹೃತಿಂ ವೇದ ಬ್ರಾಹ್ಮಣೋ ಬ್ರಹ್ಮಸಂಶ್ರಿತಃ ।
ಶ್ರಾದ್ಧಸ್ಯ ಹೂಯಮಾನಸ್ಯ ಬ್ರಹ್ಮಭೂಯಂ ಸ ಗಚ್ಛತಿ ॥೩೪॥

ಯಾವ ಬ್ರಾಹ್ಮಣನು ವೇದನಿಷ್ಠನಾಗಿ ಭೂಮಿಯು ಹಾಡಿದ ಈ ಗೀತೆಯನ್ನು ತಿಳಿದು ಶ್ರಾದ್ಧಸಮಯದಲ್ಲಿ ಅದನ್ನು ಹೇಳುತ್ತಾನೆಯೋ ಅವನು ಜೀವನ್ಮುಕ್ತನಾಗುವನು.

ಕೃತ್ಯಾನಾಮಭಿಶಸ್ತಾನಾಂ ದುರಿಷ್ಟಶಮನಂ ಮಹತ್ ।
ಪ್ರಾಯಶ್ಚಿತ್ತಮಹಂ ಕೃತ್ವಾ ಪುನಾತ್ಯುಭಯತೋ ದಶ ॥೩೫॥

ಶತ್ರುಗಳು ಮಾಡುವ ವಾಮಾಚಾರ ಪ್ರಯೋಗಗಳಿಂದ ಉಂಟಾದ ದೊಡ್ಡ ದುರಿಷ್ಟವನ್ನು ಭೂದಾನವು ಶಮನ ಮಾಡುತ್ತದೆ. ಭೂದಾನ ರೂಪವಾದ ಪ್ರಾಯಶ್ಚಿತ್ತ ಮಹೋತ್ಸವವನ್ನು ಮಾಡಿಕೊಂಡವನು ಎರಡು ಕುಲದ ಹತ್ತು ತಲೆಯವರನ್ನು ಪವಿತ್ರೀಕರಿಸುತ್ತಾನೆ.

ಪುನಾತಿ ಯ ಇದಂ ವೇದ ವೇದ ಚಾಹಂ ತಥೈವ ಚ ।
ಪ್ರಕೃತಿಃ ಸರ್ವಭೂತಾನಾಂ ಭೂಮಿರ್ಯೆ ಶಾಶ್ವತೀ ಮತಾ ॥೩೬॥

ಯಾರು ಈ ಭೂಮಿಯು ಹಾಡಿದ ಗೀತೆಯನ್ನು ತಿಳಿಯುತ್ತಾನೆಯೋ ಅವನೂ ಸಹ ಉಭಯ ಪಕ್ಷದ ಹತ್ತು ತಲೆಮಾರಿನವರನ್ನು ಪವಿತ್ರೀಕರಿಸುತ್ತಾನೆ. ನಾನೂ ಸಹ ಅದನ್ನು ತಿಳಿದಿದ್ದೇನೆ (ಇದು ಭೀಷ್ಮರ ಮಾತು). ಶಾಶ್ವತವಾದ ಕಾಲದಲ್ಲಿ ಎಲ್ಲ ಜೀವರಿಗೂ ಭೂಮಿಯು ಮೂಲಳಾದವಳು.

ಅಭಿಷಿಚ್ಯೈವ ನೃಪತಿಂ ಶ್ರಾವಯೇದಿಮಮಾಗಮಮ್ ।
ಯಥಾ ಶ್ರುತ್ವಾ ಮಹೀಂ ದದ್ಯಾನ್ನಾದದ್ಯಾತ್ಸಾಧುತಶ್ಚ ತಾಮ್ ॥೩೭॥

ರಾಜನಿಗೆ ಅಭಿಷೇಕವನ್ನು ಮಾಡಿ ಈ ಗೀತೆಯ ಜ್ಞಾನವನ್ನು ಉಪದೇಶಿಸಬೇಕು. ಅದರಿಂದ ಅವನು ಭೂದಾನವನ್ನು ಮಾಡಿಯಾನು ಮತ್ತು ಸಜ್ಜನರ ಭೂಮಿಯನ್ನು ಅಪಹರಿಸದೆ ಇದ್ದಾನು.

ಸೋಽಯಂ ಕೃತ್ಸ್ನೋ ಬ್ರಾಹ್ಮಣಾರ್ಥೋ ರಾಜಾರ್ಥಶ್ಚಾಪ್ಯಸಂಶಯಮ್
ರಾಜಾ ಹಿ ಧರ್ಮಕುಶಲಃ ಪ್ರಥಮಂ ಭೂತಿಲಕ್ಷಣಮ್ ॥೩೮॥

ಈ ಸಮಗ್ರವಾದ ಭೂದಾನ ಪ್ರಕರಣವೆಲ್ಲವೂ ರಾಜನಿಗೆ ಮತ್ತು ಬ್ರಾಹ್ಮಣರಿಗೆ ಸೇರಿದುದು ಎಂಬುದರಲ್ಲಿ ಸಂಶಯವಿಲ್ಲ. ರಾಜನೇ ಧರ್ಮಕುಶಲನಾದವನು ಮತ್ತು ಐಶ್ವರ್ಯಶ್ರೇಷ್ಠ ಪ್ರತಿನಿಧಿಯಾದವನು.

ಅಥ ಯೇಷಾಮಧರ್ಮಜ್ಞೋ ರಾಜಾ ಭವತಿ ನಾಸ್ತಿಕಃ ।
ನ ತೇ ಸುಖಂ ಪ್ರಬುಧ್ಯಂತೇ ನ ಸುಖಂ ಪ್ರಸ್ವಪಂತಿ ಚ ॥೩೯॥

ಯಾರಿಗೆ ಅಧರ್ಮಿಷ್ಠನೂ, ನಾಸ್ತಿಕನೂ ರಾಜನಾಗುತ್ತಾನೆಯೋ ಅವರು ಸುಖವಾಗಿ ಮಲಗುವುದಿಲ್ಲ ಮತ್ತು ಸುಖವಾಗಿ ಎಚ್ಚರಗೊಳ್ಳುವುದಿಲ್ಲ.

ಸದಾ ಭವಂತಿ ಚೋದ್ವಿಗ್ನಾಸ್ತಸ್ಯ ದುಶ್ಚರಿತೈರ್ನರಾಃ ।
ಯೋಗಕ್ಷೇಮಾ ಹಿ ಬಹವೋ ರಾಷ್ಟ್ರಂ ನಾಸ್ಯಾವಿಶಂತಿ ತತ್ ॥೪೦॥

ಅವರು ರಾಜನ ದುಶ್ಚರಿತೆಗಳಿಂದ ಯಾವಾಗಲೂ ಉದ್ವಿಗ್ನರಾಗಿರುತ್ತಾರೆ. ಅಂತಹ ರಾಷ್ಟ್ರಕ್ಕೆ ಉಂಟಾಗಬೇಕಾದ ಯೋಗಕ್ಷೇಮಗಳು ಯಾವುವೂ ಉಂಟಾಗುವುದಿಲ್ಲ.

ಅಥ ಯೇಷಾಂ ಪುನಃ ಪ್ರಾಜ್ಞೋ ರಾಜಾ ಭವತಿ ಧಾರ್ಮಿಕಃ ।
ಸುಖಂ ತೇ ಪ್ರತಿಬುಧ್ಯಂತೇ ಸುಸುಖಂ ಪ್ರಸ್ವಪಂತಿ ಚ ॥೪೧॥

ಯಾರಿಗೆ ರಾಜನು ಧಾರ್ಮಿಕನೂ ಮತ್ತು ಪ್ರಾಜ್ಞನೂ ಆಗಿರುತ್ತಾನೆಯೋ ಅವರು ಸುಖದಿಂದ ಮಲಗಿ ಸುಖದಿಂದ ಏಳುತ್ತಾರೆ.

ತಸ್ಯ ರಾಜ್ಞಃ ಶುಭೈರಾರ್ಯೈಃ ಕರ್ಮಭಿರ್ನಿರ್ವೃತಾಃ ಪ್ರಜಾಃ ।
ಯೋಗಕ್ಷೇಮೇಣ ವೃಷ್ಟ್ಯಾ ಚ ವಿವರ್ಧಂತೇ ಸ್ವಕರ್ಮಭಿಃ ॥೪೨॥

ಆ ರಾಜನ ಉದಾತ್ತವಾದ ಶುಭಕರ್ಮಗಳಿಂದ ಸಂತೋಷಗೊಂಡ ಪ್ರಜೆಗಳು ಯೋಗಕ್ಷೇಮಗಳಿಂದಲೂ, ಮಳೆಯಿಂದಲೂ, ತಮ್ಮ ಕರ್ಮಗಳಿಂದಲೂ ಅಭಿವೃದ್ಧಿಯನ್ನು ಹೊಂದುತ್ತಾರೆ.

ಸ ಕುಲೀನಃ ಸ ಪುರುಷಃ ಸ ಬಂಧುಃ ಸ ಚ ಪುಣ್ಯಕೃತ್ ।
ಸ ದಾತಾ ಸ ಚ ವಿಕ್ರಾಂತೋ ಯೋ ದದಾತಿ ವಸುಂಧರಾಮ್ ॥೪೩॥

ಯಾವನು ಭೂದಾನವನ್ನು ಮಾಡುತ್ತಾನೆಯೋ ಅವನೇ ಕುಲೀನನಾದವನು, ಅವನೇ ಪುರುಷನೆನಿಸಿಕೊಳ್ಳುವವನು, ಅವನೇ ಬಂಧು, ಅವನೇ ಪುಣ್ಯಕಾರಿ, ಅವನೇ ದಾನವನ್ನು ಮಾಡಿದವನು, ಅವನೇ ಪರಾಕ್ರಮಶಾಲಿಯಾದವನು.

ಆದಿತ್ಯಾ ಇವ ದೀಪ್ಯಂತೇ ತೇಜಸಾ ಭುವಿ ಮಾನವಾಃ ।
ದದಂತಿ ವಸುಧಾಂ ಸ್ಫೀತಾಂ ಯೇ ವೇದವಿದುಷಿ ದ್ವಿಜೇ ॥೪೪॥

ಯಾವ ಮಾನವರು ವೇದವಿದ್ವಾಂಸನಾದ ಬ್ರಾಹ್ಮಣನಿಗೆ ಪರಿಶುದ್ಧವಾದ ಭೂಮಿಯನ್ನು ದಾನ ಮಾಡುತ್ತಾರೆಯೋ ಅವರು ತೇಜಸ್ಸಿನಿಂದ ಭೂಮಿಯಲ್ಲಿ ಸೂರ್ಯನಂತೆ ಬೆಳಗುತ್ತಾರೆ.

ಯಥಾ ಬೀಜಾನಿ ರೋಹಂತಿ ಪ್ರಕೀರ್ಣಾನಿ ಮಹೀತಳೇ ।
ತಥಾ ಕಾಮಾಃ ಪ್ರರೋಹಂತಿ ಭೂಮಿದಾನಸಮಾರ್ಜಿತಾಃ ॥೪೫॥

ಭೂಮಿಯಲ್ಲಿ ಚೆಲ್ಲಾಡಿದ ಬೀಜಗಳು ಬೆಳೆಯುವಂತೆ ಭೂಮಿದಾನದಿಂದ ಉಂಟಾದ ಕಾಮಗಳು (ಶುಭ ಪದಾರ್ಥಗಳು) ಅಭಿವೃದ್ಧಿಯನ್ನು ಹೊಂದುತ್ತವೆ.

ಆದಿತ್ಯೋ ವರುಣೋ ವಿಷ್ಣುರ್ಬ್ರಹ್ಮಾ ಸೋಮೋ ಹುತಾಶನಃ ।
ಶೂಲಪಾಣಿಶ್ಚ ಭಗವಾನ್ ಪ್ರತಿನಂದಂತಿ ಭೂಮಿದಮ್ ॥೪೬॥

ಭೂದಾನವನ್ನು ಮಾಡುವವನನ್ನು ಸೂರ್ಯ, ವರುಣ, ವಿಷ್ಣು, ಬ್ರಹ್ಮಾ, ಚಂದ್ರ, ಅಗ್ನಿ, ಪೂಜ್ಯನಾದ ಶೂಲಪಾಣಿಯಾದ ಈಶ್ವರ ಇವರು ಅಭಿನಂದಿಸುತ್ತಾರೆ.

ಭೂಮೌ ಜಾಯಂತಿ ಪುರುಷಾ ಭೂಮೌ ನಿಷ್ಠಾಂ ವ್ರಜಂತಿ ಚ ।
ಚತುರ್ವಿಧೋ ಹಿ ಲೋಕೋಽಯಂ ಯೋಽಯಂ ಭೂಮಿಗುಣಾತ್ಮಕಃ ॥

ಪುರುಷರು ಭೂಮಿಯಲ್ಲಿ ಜನಿಸಿರುತ್ತಾರೆ. ಭೂಮಿಯಲ್ಲೇ ಲಯವನ್ನು ಹೊಂದುತ್ತಾರೆ. ಜರಾಯುಜಾದಿ ನಾಲ್ಕು ವಿಧವಾದ ಈ ಪ್ರಾಣಿವರ್ಗವು ಭೂಮಿಯ ಗುಣಗಳನ್ನೇ ಹೊಂದಿರುತ್ತದೆ.

ಏಷಾ ಮಾತಾ ಪಿತಾ ಚೈವ ಜಗತಃ ಪೃಥಿವೀಪತೇ ।
ನಾನಯಾ ಸದೃಶಂ ಭೂತಂ ಕಿಂಚಿದಸ್ತಿ ಜನಾಧಿಪ ॥೪೮॥

ಎಲೈ ರಾಜನೇ, ಜನಾಧಿಪತಿಯೇ, ಈ ಭೂಮಿಯು ಜಗತ್ತಿನ ತಾಯಿ, ಅವಳೇ ತಂದೆ. ಅವಳಿಗೆ ಸದೃಶವಾದ ಭೂತವು ಇನ್ನೊಂದು ಇಲ್ಲ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಬೃಹಸ್ಪತೇಶ್ಚ ಸಂವಾದಮಿಂದ್ರಸ್ಯ ಚ ಯುಧಿಷ್ಠಿರ ॥೪೯॥

ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿಯೂ ಸಹ ಹಿಂದೆ ಬೃಹಸ್ಪತಿಗೂ ಮತ್ತು ಇಂದ್ರನಿಗೂ ನಡೆದ ಸಂವಾದ ರೂಪವಾದ ಇತಿಹಾಸವನ್ನು ಹೇಳುತ್ತಾರೆ.

ಇಷ್ಟ್ವಾ ಕ್ರತುಶತೇನಾಥ ಮಹತಾ ದಕ್ಷಿಣಾವತಾ ।
ಮಘವಾ ವಾಗ್ವಿದಾಂಶ್ರೇಷ್ಠಂ ಪಪ್ರಚ್ಛೇದಂ ಬೃಹಸ್ಪತಿಮ್ ॥೫೦॥

ಭಗವನ್ ಕೇನ ದಾನೇನ ಸ್ವರ್ಗತಃ ಸುಖಮೇಧತೇ ।
ಯದಕ್ಷಯಂ ಮಹಾರ್ಘಂ ಚ ತದ್ ಬ್ರೂಹಿ ವದತಾಂವರ ॥೫೧॥

ಬಹಳ ದಕ್ಷಿಣೆಗಳಿಂದ ಕೂಡಿದ ದೊಡ್ಡದಾದ ನೂರು ಯಾಗಗಳನ್ನು ಮಾಡಿ ಇಂದ್ರನು ಮಾತನ್ನು ತಿಳಿದವರಲ್ಲಿ ಶ್ರೇಷ್ಠರಾದ ಬೃಹಸ್ಪತಿಯನ್ನು ಕುರಿತು- 'ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ, ಪೂಜ್ಯನೇ, ಯಾವ ದಾನದಿಂದ ಸ್ವರ್ಗದಲ್ಲಿ ಸುಖವನ್ನು ಹೊಂದುತ್ತಾನೆ. ಯಾವ ದಾನವು ಅಕ್ಷಯವಾದುದು ಮತ್ತು ಮಹಾಬೆಲೆ ಬಾಳುವಂತಹದು ಎಂದು ಹೇಳಿ' ಎಂದು ಪ್ರಶ್ನೆ ಮಾಡಿದನು.

ಇತ್ಯುಕ್ತಃ ಸ ಸುರೇಂದ್ರೇಣ ತತೋ ದೇವಪುರೋಹಿತಃ ।
ಬೃಹಸ್ಪತಿರ್ಮಹಾತೇಜಾಃ ಪ್ರತ್ಯುವಾಚ ಶತಕ್ರತುಮ್ ॥೫೨॥

ಸುರೇಂದ್ರನಿಂದ ಹೀಗೆ ಪ್ರಶ್ನೆ ಮಾಡಲ್ಪಟ್ಟ ದೇವಪುರೋಹಿತರೂ, ಮಹಾತೇಜಸ್ವಿಗಳೂ ಆದ ಬೃಹಸ್ಪತಿಗಳು ಇಂದ್ರನನ್ನು ಕುರಿತು ಉತ್ತರವನ್ನು ನೀಡಿದರು.

ಸುವರ್ಣದಾನಂ ಗೋದಾನಂ ಭೂಮಿದಾನಂ ಚ ವೃತ್ರಹನ್ ।
ವಿದ್ಯಾದಾನಂ ಚ ಕನ್ಯಾನಾಂ ದಾನಂ ಪಾಪಹರಂ ಪರಮ್ ।
ದದದೇತಾನ್ ಮಹಾಪ್ರಾಜ್ಞಃ ಸರ್ವಪಾಪೈಃ ಪ್ರಮುಚ್ಯತೇ ॥೫೩॥

ಎಲೈ ವೃತ್ರಹಂತಕನೇ, ಸುವರ್ಣದಾನ, ಗೋದಾನ, ಭೂಮಿದಾನ, ವಿದ್ಯಾದಾನ, ಕನ್ಯಾದಾನ ಇವೆಲ್ಲವೂ ಶ್ರೇಷ್ಠವಾದ ಪಾಪಪರಿಹಾರಕಗಳು. ಈ ದಾನವನ್ನು ಕೊಡುವ ಮಹಾಪ್ರಾಜ್ಞನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ನ ಭೂಮಿದಾನಾದ್ ದೇವೇಂದ್ರ ಪರಂ ಕಿಂಚಿದಿತಿ ಪ್ರಭೋ ।
ವಿಶಿಷ್ಟಮಿತಿ ಮನ್ಯಾಮಿ ಯಥಾ ಪ್ರಾಹುರ್ಮನೀಷಿಣಃ ॥೫೪॥

ಎಲೈ ದೇವೇಂದ್ರನೇ, ಪ್ರಭುವೇ, ಜ್ಞಾನಿಗಳು ಹೇಳುವಂತೆ ಭೂಮಿದಾನವು ಬಹಳ ಶ್ರೇಷ್ಠವಾದುದು. ಭೂಮಿದಾನಕ್ಕಿಂತಲೂ ಶ್ರೇಷ್ಠವಾದ ದಾನವು ಇನ್ನೊಂದು ಇಲ್ಲವೆಂದು ನಾನು ತಿಳಿಯುತ್ತೇನೆ.

ಯೇ ಶೂರಾ ನಿಹತಾ ಯುದ್ಧೇ ಸ್ವರ್ಯಾತಾ ದಾನಗೃದ್ಧಿನಃ ।
ಸರ್ವೇ ತೇ ವಿಬುಧಶ್ರೇಷ್ಠ ನಾತಿಕ್ರಾಮಂತಿ ಭೂಮಿದಮ್ ॥೫೫॥

ಎಲೈ ಬುಧಶ್ರೇಷ್ಠನೇ, ಯುದ್ಧದಲ್ಲಿ ಹತರಾಗಿ ಸ್ವರ್ಗಕ್ಕೆ ಹೋದವರು, ವಿವಿಧ ದಾನಗಳನ್ನು ಆಸೆಯಿಂದ ಮಾಡಿ ಸ್ವರ್ಗಕ್ಕೆ ಹೋದವರು ಎಲ್ಲರೂ ಭೂಮಿದಾನ ಮಾಡಿದವನನ್ನು ಮೀರಿ ಹೋಗುವುದಿಲ್ಲ.

ಭರ್ತುರ್ನಿಶ್ರೇಯಸೇ ಯುಕ್ತಾಸ್ಯಕ್ತಾತ್ಮಾನೋ ರಣೇ ಹತಾಃ ।
ಬ್ರಹ್ಮಲೋಕಗತಾಃ ಶೂರಾ ನಾತಿಕ್ರಾಮಂತಿ ಭೂಮಿದಮ್ ॥೫೬॥

ತಮ್ಮ ಸ್ವಾಮಿಯ ಶ್ರೇಯಸ್ಸಿನಲ್ಲಿ ನಿರತರಾಗಿ, ಅದೇ ಉದ್ಯೋಗದಲ್ಲಿದ್ದು, ರಣರಂಗದಲ್ಲಿ ಹತರಾಗಿ ಶರೀರ ತ್ಯಾಗವನ್ನು ಮಾಡಿ ಬ್ರಹ್ಮಲೋಕವನ್ನು ಹೊಂದಿದ ಶೂರರೂ ಭೂಮಿದಾನವನ್ನು ಮಾಡಿದವನನ್ನು ಮೀರಿ ಹೋಗುವುದಿಲ್ಲ.

ಪಂಚ ಪೂರ್ವಾದಿಪುರುಷಾಃ ಷಟ್ ಯೇ ವಸುಧಾಂ ಗತಾಃ ।
ಏಕಾದಶ ದದದ್ ಭೂಮಿಂ ಪರಿತ್ರಾತೀಹ ಮಾನವಃ ॥೫೭॥

ಭೂಮಿಯನ್ನು ದಾನ ಮಾಡುವ ಮಾನವನು ಐದು ಮಂದಿ ಪೂರ್ವ ಪುರುಷರನ್ನು ಮತ್ತು ಭೂಮಿಗೆ ಬಂದ ಆರು ತಲೆಮಾರಿನವರನ್ನು ಒಟ್ಟು ತನ್ನ ಕುಲದ ಹನ್ನೊಂದು ತಲೆಗಳನ್ನು ರಕ್ಷಿಸುತ್ತಾನೆ.

ರತ್ನೋಪಕೀರ್ಣಾಂ ವಸುಧಾಂ ಯೋ ದದಾತಿ ಪುರಂದರ ।
ಏಕಾದಶ ಪರಿತ್ರಾತಾ ಭೂಮಿಂ ವೃತ್ತಿಕರೀಂ ದದತ್ ॥೫೮॥

ಎಲೈ ಪುರಂದರನೇ, ರತ್ನಪೂರ್ಣವಾದ ಭೂಮಿಯನ್ನು ಅಥವಾ ಜೀವನೋಪಾಯಕ್ಕೆ ಕಾರಣವಾದ ಭೂಮಿಯನ್ನು ಯಾವನು ಕೊಡುತ್ತಾನೆಯೋ ಅವನು ಹನ್ನೊಂದು ತಲೆಮಾರಿನವರನ್ನು ರಕ್ಷಿಸುತ್ತಾನೆ.

ರತ್ನಾವಕೀರ್ಣಾಂ ಸಫಲಾಂ ಸಗೃಹಾಂ ದೀಪಸಂಯುತಾಮ್ ।
ದತ್ವಾ ಸ್ವರ್ಗೇ ಪರಂ ಕಾಲಂ ಕ್ರೀಡಿತ್ವಾ ನೃಪತಿರ್ಭವೇತ್ ।
ಸ ಮುಕ್ತಃ ಸರ್ವಕುಷ್ಠೈಃ ಸ್ವರ್ಗಲೋಕೇ ಮಹೀಯತೇ ॥೫೯॥

ರತ್ನಗಳು ಇರುವ ಫಲಸಹಿತವಾದ ದೀಪಗಳಿಂದ ಸಹಿತವಾದ, ಗೃಹ ಸಹಿತವಾದ ಭೂಮಿಯನ್ನು ದಾನ ಮಾಡಿದವನು ಸ್ವರ್ಗಲೋಕದಲ್ಲಿ ಬಹುಕಾಲ ಕ್ರೀಡಿಸಿ ಪುನಃ ರಾಜನಾಗುತ್ತಾನೆ. ಅವನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಸ್ವರ್ಗಲೋಕದಲ್ಲಿ ಗೌರವಿಸಲ್ಪಡುತ್ತಾನೆ.

ಮಹೀಂ ಸ್ಫೀತಾಂ ದದದ್ರಾಜಾ ಸರ್ವಕಾಮಗುಣಾನ್ವಿತಾಮ್ ।
ರಾಜಾಧಿರಾಜೋ ಭವತಿ ತದ್ಧಿ ದಾನಮನುತ್ತಮಮ್ ॥೬೦॥

ಸರ್ವಕಾಮಗುಣಗಳಿಂದ ಕೂಡಿದ ಪರಿಶುದ್ಧವಾದ ಭೂಮಿಯನ್ನು ದಾನ ಮಾಡುವ ರಾಜನು ರಾಜಾಧಿರಾಜನಾಗುತ್ತಾನೆ. ಆ ದಾನವೇ ಶ್ರೇಷ್ಠವಾದುದಷ್ಟೆ.

ಸರ್ವಕಾಮಸಮಾಯುಕ್ತಾಂ ಕಾಶ್ಯಪೀಂ ಯಃ ಪ್ರಯಚ್ಛತಿ ।
ಸರ್ವಭೂತಾನಿ ಮನ್ಯಂತೇ ಮಾಂ ದದಾತೀತಿ ವಾಸವ ॥೬೧॥

ಸರ್ವಕಾಮಯುಕ್ತವಾದ ಭೂಮಿಯನ್ನು ದಾನವನ್ನು ಮಾಡಿದರೆ ಎಲೈ ಇಂದ್ರನೇ, ಪಂಚಭೂತಗಳಲ್ಲಿ ಉಳಿದ ನಾಲ್ಕು ಭೂತಗಳೂ ಸಹ ನನ್ನನ್ನು ದಾನ ಮಾಡುತ್ತಿದ್ದಾನೆ ಎಂದು ತಿಳಿಯುತ್ತವೆ.

ಸರ್ವಕಾಮದುಘಾಂ ಧೇನುಂ ಸರ್ವಕಾಮಪುರೋಗಮಾಮ್ ।
ದದಾತಿ ಯಃ ಸಹಸ್ರಾಕ್ಷ ಸ ಸ್ವರ್ಗಂ ಯಾತಿ ಮಾನವಃ ॥೬೨॥

ಸರ್ವಕಾಮಗಳನ್ನು ಕೊಡುವ, ಪುಷ್ಟಿಯನ್ನುಂಟು ಮಾಡುವ, ಸರ್ವಕಾಮಗಳಲ್ಲಿ ಮುಂಭಾಗದಲ್ಲಿರುವ ಭೂಮಿಯನ್ನು ಯಾವ ಮಾನವನು ದಾನ ಮಾಡುತ್ತಾನೆಯೋ ಅವನು ಸ್ವರ್ಗಕ್ಕೆ ಹೋಗುತ್ತಾನೆ.

ಮಧುಸರ್ಪಿಃಪ್ರವಾಹಿನ್ಯಃ ಪಯೋದಧಿವಹಾಸ್ತಥಾ ।
ಸರಿತಸ್ತರ್ಪಯಂತೀಹ ಸುರೇಂದ್ರ ವಸುಧಾಪ್ರದಮ್ ॥೬೩॥

ಎಲೈ ಸುರೇಂದ್ರನೇ, ಭೂದಾನವನ್ನು ಮಾಡುವವನನ್ನು ಜೇನು, ಘೃತ, ಹಾಲು, ಮೊಸರು ಹರಿಯುವ ಹೊಳೆಗಳು ತೃಪ್ತಿಪಡಿಸುತ್ತವೆ.

ಭೂಮಿಪ್ರದಾನಾನ್ನೃಪತಿರ್ಮುಚ್ಯತೇ ರಾಜಕಿಲ್ಬಿಷಾತ್ ।
ಸ್ವನಿರ್ಜಿತಾಂ ಸ್ವಯಂಕ್ರೀತಾಂ ಭೃತಾಂ ವಾ ಚಾರ್ಪಯೇನ್ನೃಪ ।
ನ ಹಿ ಭೂಮಿಪ್ರದಾನೇನ ದಾನಮನ್ಯದ್ ವಿಶಿಷ್ಯತೇ ॥೬೪॥

ಭೂಮಿಪ್ರದಾನವನ್ನು ಮಾಡುವುದರಿಂದ ರಾಜನು ತನ್ನ ಪಾಪಗಳಿಂದ ನಿರ್ಮುಕ್ತನಾಗುತ್ತಾನೆ. ತಾನು ಸಂಪಾದಿಸಿದ ಅಥವಾ ಕ್ರಯಕ್ಕೆ ತೆಗೆದುಕೊಂಡ ಅಥವಾ ಸ್ವತಃ ತನ್ನ ಬಳಿ ಇದ್ದ ಭೂಮಿಯನ್ನು ರಾಜನು ದಾನ ಮಾಡಬೇಕು. ಭೂಮಿದಾನಕ್ಕಿಂತ ವಿಶಿಷ್ಟವಾದ ದಾನವು ಇನ್ನೊಂದಿಲ್ಲ.

ದದಾತಿ ಯಃ ಸಮುದ್ರಾಂತಾಂ ಪೃಥಿವೀಂ ಶಸ್ತ್ರನಿರ್ಜಿತಾಮ್ ।
ತಂ ಜನಾಃ ಕಥಯಂತೀಹ ಯಾವದ್ ಧರತಿ ಗೌರಿಯಮ್ ॥೬೫॥

ಶಸ್ತ್ರದಿಂದ ಜಯಿಸಿ ಸಮುದ್ರಾಂತವಾದ ಭೂಮಿಯನ್ನು ದಾನ ಮಾಡುವವನನ್ನು ಈ ಭೂಮಿಯು ಇರುವವರೆಗೂ ಜನರು ಪ್ರಶಂಸಿಸುತ್ತಾರೆ.

ಪುಣ್ಯಾಮೃದ್ಧರಸಾಂ ಭೂಮಿಂ ಯೋ ದದಾತಿ ಪುರಂದರ ।
ನ ತಸ್ಯ ಲೋಕಾಃ ಕ್ಷೀಯಂತೇ ಭೂಮಿದಾನಗುಣಾರ್ಜಿತಾಃ ॥೬೬॥

ಎಲೈ ಪುರಂದರನೇ, ಪವಿತ್ರವೂ, ರಸಸಮೃದ್ಧವೂ ಆದ ಭೂಮಿಯನ್ನು ದಾನ ಮಾಡುವವನ ಭೂಮಿದಾನದಿಂದ ಉಂಟಾದ ಗುಣಗಳಿಂದ ಸಂಪಾದಿಸಲ್ಪಟ್ಟ ಲೋಕಗಳು ಅವನಿಗೆ ನಾಶವನ್ನು ಹೊಂದುವುದಿಲ್ಲ.

ಸರ್ವಥಾ ಪಾರ್ಥಿವೇನೇಹ ಸತತಂ ಭೂತಿಮಿಚ್ಛತಾ ।
ಭೂರ್ದೇಯಾ ವಿಧಿವಚ್ಚಕ್ರ ಪಾತ್ರೇ ಸುಖಮಭೀಪ್ಸತಾ ॥೬೭॥

ಎಲೈ ರಾಜನೇ, ವೈಭವವನ್ನು ಬಯಸುವ, ಸುಖವನ್ನು ಬಯಸುವ ರಾಜನು ಸರ್ವಪ್ರಕಾರವಾಗಿ ವಿಧಿಗೆ ಅನುಗುಣವಾಗಿ ಪಾತ್ರರಲ್ಲಿ ಭೂದಾನವನ್ನು ಮಾಡಬೇಕು.

ಅಪಿ ಕೃತ್ವಾ ನರಃ ಪಾಪಂ ಭೂಮಿಂ ದತ್ತ್ವಾ ದ್ವಿಜಾತಯೇ ।
ಸಮುತ್ಸೃಜತಿ ತತ್ಪಾಪಂ ಜೀರ್ಣಾಂ ತ್ವಚಮಿವೋರಗಃ ॥೬೮॥

ಪಾಪವನ್ನು ಮಾಡಿದ ಪುರುಷನೂ ಸಹ ಬ್ರಾಹ್ಮಣರಿಗೆ ದಾನವನ್ನು ಮಾಡಿ ಸರ್ಪವು ಪೊರೆಯನ್ನು ಕಳಚಿದಂತೆ ಆ ಪಾಪವನ್ನು ತ್ಯಜಿಸುತ್ತಾನೆ.

ಸಾಗರಾನ್ ಸರಿತಃ ಶೈಲಾನ್ ಕಾನನಾನಿ ಚ ಸರ್ವಶಃ ।
ಸರ್ವಮೇತನ್ನರಃ ಶಕ್ರ ದದಾತಿ ವಸುಧಾಂ ದದತ್ ॥೬೯॥

ಎಲೈ ಇಂದ್ರನೇ, ಭೂದಾನವನ್ನು ಮಾಡುವವನು ಸಾಗರಗಳು, ಪರ್ವತಗಳು, ಕಾನನಗಳು ಎಲ್ಲವನ್ನೂ ದಾನ ಮಾಡುತ್ತಾನೆ.

ತಡಾಗಾನ್ಯುದಪಾನಾನಿ ಸ್ರೋತಾಂಸಿ ಚ ಸರಾಂಸಿ ಚ ।
ತಡಾಕಾದನ್ಯಪಾನಾನಿ ಬೀಜಾನಿ ಚ ಫಲಾನಿ ಚ ।
ಸ್ನೇಹಾನ್‌ಸರ್ವರಸಾಂಶ್ಚೈವ ದದಾತಿ ವಸುಧಾಂ ದದತ್ ॥೭೦॥

ತಟಾಕಗಳು, ಸರೋವರಗಳು, ಚಿಲುಮೆಗಳು, ಕೆರೆಗಳು, ಕುಂಟೆಗಳು, ಬೀಜಗಳು, ಫಲಗಳು, ಸರ್ವರಸಗಳು, ತೈಲಾದಿಗಳು ಎಲ್ಲವನ್ನೂ ಭೂದಾನ ಮಾಡುವವನು ಕೊಡುತ್ತಾನೆ.

ಓಷಧೀರ್ವೀರ್ಯಸಂಪನ್ನಾ ನಗಾನ್ ಪುಷ್ಪಫಲಾನ್ವಿತಾನ್ ।
ಕಾನನೋಪಲಶೈಲಾಂಶ್ಚ ದದಾತಿ ವಸುಧಾಂ ದದತ್ ॥೭೧॥

ವೀರ್ಯಸಂಪನ್ನವಾದ ಓಷಧಿಗಳು, ಫಲಪುಷ್ಪಭರಿತವಾದ ವೃಕ್ಷಗಳು, ಕಾನನಗಳು, ಶಿಲೆಗಳು, ಪರ್ವತಗಳು ಎಲ್ಲವನ್ನೂ ಭೂದಾನ ಮಾಡುವವನು ಕೊಡುತ್ತಾನೆ.

ಅಗ್ನಿಷ್ಟೋಮಪ್ರಭೃತಿಭಿರಿಷ್ಟ್ವಾ ಚ ಸಾಪ್ತದಕ್ಷಿಣೈಃ ।
ನ ತತ್ಫಲಮವಾಪ್ನೋತಿ ಭೂಮಿದಾನಾದ್ ಯದಶ್ನುತೇ ॥೭೨॥

ಭೂಮಿದಾನದಿಂದ ಯಾವ ಫಲ ಉಂಟಾಗುತ್ತದೆಯೋ ಅಂತಹ ಫಲವು ಬಹಳ ದಕ್ಷಿಣೆಯನ್ನು ಕೊಟ್ಟು ಮಾಡಿದ ಅಗ್ನಿಷ್ಟೋಮ ಮೊದಲಾದ ಯಾಗಗಳಿಂದ ದೊರೆಯುವುದಿಲ್ಲ.

ದಾತಾ ದಶಾನುಗೃಹ್ಣಾತಿ ದಶ ಹಂತಿ ತಥಾ ಕ್ಷಿಪನ್ ।
ಪೂರ್ವದತ್ತಾಂ ಹರನ್ ಭೂಮಿಂ ನರಕಾಯೋಪಗಚ್ಛತಿ ॥೭೩॥

ಭೂಮಿಯನ್ನು ದಾನವನ್ನು ಮಾಡುವವನು ತನ್ನ ವಂಶದ ಹತ್ತು ತಲೆಗಳನ್ನು ಉದ್ಧಾರ ಮಾಡುತ್ತಾನೆ. ಹಾಗೆಯೇ ಭೂಮಿಯನ್ನು ಅಪಹರಿಸುವವನು ಹತ್ತು ತಲೆಗಳನ್ನು ವಿನಾಶಗೊಳಿಸುತ್ತಾನೆ. ಮೊದಲು ದಾನ ಮಾಡಿದ ಭೂಮಿಯನ್ನು ಹಿಂದಕ್ಕೆ ತೆಗೆದುಕೊಳ್ಳುವವನು ನರಕಕ್ಕೆ ಹೋಗುತ್ತಾನೆ.

ನ ದದಾತಿ ಪ್ರತಿಶ್ರುತ್ಯ ದತ್ತ್ವಾ ವಾ ಹರತೇ ತು ಯಃ ।
ಸ ಬದ್ಧೋ ವಾರುಣೈಃ ಪಾಶೈಸ್ತಪ್ಯತೇ ಮೃತ್ಯುಶಾಸನಾತ್ ॥೭೪॥

ಯಾವನು ಭೂದಾನವನ್ನು ಕೊಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ ಕೊಡುವುದಿಲ್ಲವೋ ಅಥವಾ ಕೊಟ್ಟು ಹಿಂದಕ್ಕೆ ತೆಗೆದುಕೊಳ್ಳುತ್ತಾನೆಯೋ ಅವನು ವರುಣಪಾಶದಿಂದ ಬದ್ಧನಾಗಿ ಯಮನ ಶಾಸನದಂತೆ ನರಕದಲ್ಲಿ ತಾಪಕ್ಕೆ ಈಡಾಗುತ್ತಾನೆ.

ಆಹಿತಾಗ್ನಿಂ ಸದಾಯಜ್ಞಂ ಕೃಶಭೃತ್ಯಂ ಪ್ರಿಯಾತಿಥಿಮ್ ।
ಯೇ ಭರಂತಿ ದ್ವಿಜಶ್ರೇಷ್ಠಂ ನೋಪಸರ್ಪಂತಿ ತೇ ಯಮಮ್ ॥೭೫॥

ಆಹಿತಾಗ್ನಿಯೂ, ಯಜ್ಞಶೀಲನೂ, ಅಲ್ಪಭೃತ್ಯರುಳ್ಳವನೂ, ಅತಿಥಿ ಪ್ರಿಯನೂ ಆದ ದ್ವಿಜಶ್ರೇಷ್ಠನನ್ನು ಯಾರು ಪೂಜಿಸುತ್ತಾರೆಯೋ ಅವರು ಯಮನ ಬಳಿಗೆ ಹೋಗುವುದಿಲ್ಲ.

ಬ್ರಾಹ್ಮಣೇಷ್ವೃಣಭೂತಂ ಸ್ಯಾತ್ ಪಾರ್ಥಿವಸ್ಯ ಪುರಂದರ ।
ಇತರೇಷಾಂ ತು ವರ್ಣಾನಾಂ ತಾರಯೇತ್ ಕೃಶದುರ್ಬಲಾನ್ ॥೭೬॥

ಎಲೈ ಪುರಂದರನೇ, ಬ್ರಾಹ್ಮಣರಿಗೆ ಕೊಟ್ಟ ದಾನವು ಅವರಲ್ಲಿ ಋಣರೂಪವಾಗಿ ಇರುತ್ತದೆ. ಉಳಿದವರಿಗೆ ಕೊಟ್ಟ ಭೂದಾನವು ಕೃಶರೂ, ದುರ್ಬಲರೂ ಆದವರನ್ನು ಸಂಕಟದಿಂದ ಪಾರುಮಾಡುತ್ತದೆ.

ನಾಚ್ಛಿಂದ್ಯಾತ್ ಸ್ಪರ್ಶಿತಾಂ ಭೂಮಿಂ ಪರೇಣ ತ್ರಿದಶಾಧಿಪ ।
ಬ್ರಾಹ್ಮಣಾಯ ಸುರಶ್ರೇಷ್ಠ ಕೃಶಭೃತ್ಯಾಯ ಕಶ್ಚನ ॥೭೭॥

ಎಲೈ ಸ್ವರ್ಗಾಧಿಪತಿಯೇ, ಸುರಶ್ರೇಷ್ಠನೇ, ಅಲ್ಪಭೃತ್ಯರನ್ನುಳ್ಳ ಬ್ರಾಹ್ಮಣನಿಗೆ ಇನ್ನೊಬ್ಬನು ದಾನ ಮಾಡಿದ ಭೂಮಿಯನ್ನು ಎಂದೂ ಅಪಹರಿಸಬಾರದು.

ಅಥಾಶ್ರು ಪತಿತಂ ತೇಷಾಂ ದೀನಾನಾಮವಸೀದತಾಮ್ ।
ಬ್ರಾಹ್ಮಣಾನಾಂ ಹೃತೇ ಕ್ಷೇತ್ರೇ ಹನ್ಯಾತ್ ತ್ರಿಪುರುಷಂ ಕುಲಮ್ ॥೭೮॥

ಬ್ರಾಹ್ಮಣರ ಭೂಮಿಯನ್ನು ಅಪಹರಿಸಿದರೆ ದೀನರೂ, ಕಷ್ಟದಲ್ಲಿರುವವರೂ ಆದ ಅವರ ಕಣ್ಣಿನಿಂದ ಕೆಳಗೆ ಬಿದ್ದ ನೀರು ಆ ಕುಲದ ಮೂರು ಪುರುಷರನ್ನು ಕೊಲ್ಲುತ್ತದೆ.

ಭೂಮಿಪಾಲಂ ಚ್ಯುತಂ ರಾಷ್ಟ್ರಾದ್ಯಸ್ತು ಸಂಸ್ಥಾಪಯೇತ್ ಪುನಃ ।
ತಸ್ಯ ವಾಸಃ ಸಹಸ್ರಾಕ್ಷ ನಾಕಪೃಷ್ಠೇ ಮಹೀಯತೇ ॥೭೯॥

ಯಾವನು ರಾಷ್ಟ್ರಚ್ಯುತನಾದ ರಾಜನನ್ನು ಪುನಃ ಆ ರಾಷ್ಟ್ರದಲ್ಲಿ ಸ್ಥಾಪಿಸುತ್ತಾನೆಯೋ, ಎಲೈ ಸಹಸ್ರಾಕ್ಷನೇ, ಅವನ ವಾಸಸ್ಥಾನವು ಸ್ವರ್ಗದಲ್ಲಿ ಪೂಜಿಸಲ್ಪಡುತ್ತದೆ.

ಇಕ್ಷುಭಿಃ ಸಂತತಾಂ ಭೂಮಿಂ ಯವಗೋಧೂಮಸಂಕುಲಾಮ್ ।
ಗೋಶ್ವವಾಹನಸಂಪೂರ್ಣಾಂ ಬಾಹುವೀರ್ಯಸಮಾರ್ಜಿತಾಮ್ ॥೮೦॥

ನಿಧಿಗರ್ಭಾಂ ದದದ್ ಭೂಮಿಂ ಸರ್ವರತ್ನಪರಿಚ್ಛದಾಮ್ ।
ಅಕ್ಷಯಾನ್‌ಲಭತೇ ಲೋಕಾನ್ ಭೂಮಿಸತ್ರಂ ಹಿ ತಸ್ಯ ತತ್ ॥೮೧॥

ಯಾವ ರಾಜನು ತನ್ನ ಬಾಹುಪರಾಕ್ರಮದಿಂದ ಸಂಪಾದಿಸಿದ ಕಬ್ಬು, ಗೋದಿ, ಯವ ಮೊದಲಾದವುಗಳಿಂದ ತುಂಬಿದ ಗೋವು, ಅಶ್ವ ಮೊದಲಾದ ವಾಹನಗಳಿಂದ ತುಂಬಿದ ನಿಧಿ ಇರುವ, ಸರ್ವರತ್ನಗಳ ಹೊದಿಕೆಯಂತಿರುವ ಭೂಮಿಯನ್ನು ದಾನ ಮಾಡುತ್ತಾನೆಯೋ ಅವನು ಅಕ್ಷಯವಾದ ಲೋಕವನ್ನು ಪಡೆಯುತ್ತಾನೆ. ಅದು ಅವನಿಗೆ ಭೂಮಿ ಯಜ್ಞ ಎಂದು ಕರೆಯಲ್ಪಡುತ್ತದೆ.

ವಿಧೂಯ ಕಲುಷಂ ಸರ್ವಂ ವಿರಜಾಃ ಸಮ್ಮತಃ ಸತಾಮ್ ।
ಲೋಕೇ ಮಹೀಯತೇ ಸದ್ಭಿರ್ಯೋ ದದಾತಿ ವಸುಂಧರಾಮ್ ।
ವಿಮುಕ್ತಃ ಸರ್ವಪಾಪೇಭ್ಯಃ ಸ್ವರ್ಗಲೋಕೇ ಮಹೀಯತೇ ॥೮೨॥

ಭೂದಾನವನ್ನು ಮಾಡುವವನು ತನ್ನ ದೋಷಗಳೆಲ್ಲವನ್ನೂ ತ್ಯಜಿಸಿ ನಿರ್ದುಷ್ಟನಾಗಿ, ಸಜ್ಜನರಿಗೆ ಸಮ್ಮತನಾಗಿ ಈ ಲೋಕದಲ್ಲಿ ಸಜ್ಜನರಿಂದ ಗೌರವಿಸಲ್ಪಡುತ್ತಾನೆ ಮತ್ತು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗಿ ಸ್ವರ್ಗಲೋಕದಲ್ಲಿಯೂ ಗೌರವಿಸಲ್ಪಡುತ್ತಾನೆ.

ಯಥಾಪ್ಸು ಪತಿತಃ ಶಕ್ರ ತೈಲಬಿಂದುರ್ವಿಸರ್ಪತಿ ।
ತಥಾ ಭೂಮಿಕೃತಂ ದಾನಂ ಸಸ್ಯೇ ಸಸ್ಯೇ ವಿಸರ್ಪತಿ ॥೮೩॥

ಎಲೈ ಇಂದ್ರನೇ, ನೀರಿನಲ್ಲಿ ಬಿದ್ದ ತೈಲಬಿಂದುವು ಹರಡಿಕೊಳ್ಳುವಂತೆ ಭೂಮಿ ದಾನದ ಫಲವು ಸಸ್ಯ-ಸಸ್ಯಗಳಲ್ಲಿಯೂ ಹರಡಿಕೊಳ್ಳುತ್ತದೆ.

ಯೇ ರಣಾಗ್ರೇ ಮಹೀಪಾಲಾಃ ಶೂರಾಃ ಸಮಿತಿಶೋಭನಾಃ ।
ವಧ್ಯಂತೇಽಭಿಮುಖಾಃ ಶಕ್ರ ಬ್ರಹ್ಮಲೋಕಂ ವ್ರಜಂತಿ ತೇ ॥೮೪॥

ಎಲೈ ಇಂದ್ರನೇ, ಯುದ್ಧದಲ್ಲಿ ಶೋಭಿಸುವ ಯಾವ ರಾಜರು ಶೂರರಾಗಿ ರಣರಂಗದಲ್ಲಿ ಶತ್ರುಗಳಿಗೆ ಅಭಿಮುಖವಾಗಿ ಮರಣವನ್ನು ಹೊಂದುತ್ತಾರೆಯೋ ಅವರು ಬ್ರಹ್ಮಲೋಕಕ್ಕೆ ಹೋಗುತ್ತಾರೆ.

ನೃತ್ಯಗೀತಪರಾ ನಾರ್ಯೋ ದಿವ್ಯಮಾಲ್ಯವಿಭೂಷಿತಾಃ ।
ಉಪತಿಷ್ಠಂತಿ ದೇವೇಂದ್ರ ಸದಾ ಭೂಮಿಪ್ರದಂ ದಿವಿ ॥೮೫॥

ಎಲೈ ದೇವೇಂದ್ರನೇ, ಭೂಮಿದಾನ ಮಾಡುವವನನ್ನು ಸ್ವರ್ಗದಲ್ಲಿ ದಿವ್ಯ ಅಲಂಕಾರ ಮಾಲೆಗಳಿಂದ ಭೂಷಿತರಾದ, ನೃತ್ಯಗೀತ ಕುಶಲರಾದ ನಾರಿಯರು ಪರಿಚರಿಸುತ್ತಾರೆ.

ಮೋದತೇ ಚ ಸುಖಂ ಸ್ವರ್ಗೇ ದೇವಗಂಧರ್ವಪೂಜಿತಃ ।
ಯೋ ದದಾತಿ ಮಹೀಂ ಸಮ್ಯಗ್‌ವಿಧಿನೇಹ ದ್ವಿಜಾತಯೇ ॥೮೬॥

ಯಾವನು ವಿಧಿಗೆ ಅನುಸಾರವಾಗಿ ದ್ವಿಜರಿಗೆ ಭೂದಾನವನ್ನು ಮಾಡುತ್ತಾನೆಯೋ ಅವನು ಸ್ವರ್ಗದಲ್ಲಿ ದೇವ-ಗಂಧರ್ವರಿಂದ ಪೂಜಿತನಾಗಿ ಸಂತೋಷಪಡುತ್ತಾನೆ.

ಶತಮಪ್ಸರಸಶ್ಚೈವ ದಿವ್ಯಮಾಲ್ಯವಿಭೂಷಿತಾಃ ।
ಉಪತಿಷ್ಠಂತಿ ದೇವೇಂದ್ರ ಸದಾ ಭೂಮಿಪ್ರದಂ ನರಮ್ ॥೮೭॥

ಶಂಖಂ ಭದ್ರಾಸನಂ ಛತ್ರಂ ವರಾಶ್ವಾ ವರವಾರಣಾಃ ।
ಭೂಮಿಪ್ರದಾನಾತ್ ಪುಷ್ಪಾಣಿ ಹಿರಣ್ಯನಿಚಯಾಸ್ತಥಾ ॥೮೮॥

ಆಜ್ಞಾ ಸದಾऽಪ್ರತಿಹತಾ ಜಯಶಬ್ದೋ ಭವತ್ಯಥ ।
ಭೂಮಿದಾನಸ್ಯ ಪುಷ್ಪಾಣಿ ಫಲಂ ಸ್ವರ್ಗಃ ಪುರಂದರ ॥೮೯॥

ಎಲೈ ದೇವೇಂದ್ರನೇ, ಭೂಮಿದಾನ ಮಾಡುವ ಮನುಷ್ಯನನ್ನು ದಿವ್ಯಮಾಲೆಗಳಿಂದ ಭೂಷಿತರಾದ ನೂರು ಅಪ್ಸರೆಯರು ಪೂಜಿಸುತ್ತಾರೆ. ಶಂಖ, ಶ್ರೇಷ್ಠವಾದ ಆಸನ, ಛತ್ರ, ಶ್ರೇಷ್ಠವಾದ ಅಶ್ವಗಳು ಮತ್ತು ಗಜಗಳು, ಚಿನ್ನದ ರಾಶಿಗಳು, ಅಪ್ರತಿಹತವಾದ ಆಜ್ಞೆ, ಜಯಶಬ್ದ ಎಲ್ಲವೂ ಭೂಮಿಪ್ರದಾನದಿಂದ ಉಂಟಾಗುತ್ತದೆ. ಎಲೈ ಪುರಂದರನೇ, ಇವು ಭೂಮಿದಾನದ ಪುಷ್ಪಗಳು. ಸ್ವರ್ಗವು ಫಲರೂಪವಾದುದು.

ಹಿರಣ್ಯಪುಷ್ಪಾಶ್ಚೌಷಧ್ಯಃ ಕುಶಕಾಂಚನಶಾದ್ವಲಾಃ ।
ಅಮೃತಪ್ರಸವಾಂ ಭೂಮಿಂ ಪ್ರಾಪ್ನೋತಿ ಪುರುಷೋ ದದತ್ ॥೯೦॥

ಭೂದಾನ ಮಾಡುವ ಪುರುಷನು ಸುವರ್ಣಪುಷ್ಪಗಳಿಂದ ಕೂಡಿದ ಓಷಧಿಗಳನ್ನೂ, ಕುಶಕಾಂಚನಗಳಿಂದ ಮೃದುವಾದ ಅಮೃತವನ್ನೂ ಸುರಿಸುವ ಭೂಮಿಯನ್ನು ಪಡೆಯುತ್ತಾನೆ.

ನಾಸ್ತಿ ಭೂಮಿಸಮಂ ದಾನಂ ನಾಸ್ತಿ ಮಾತೃಸಮೋ ಗುರುಃ ।
ನಾಸ್ತಿ ಸತ್ಯಸಮೋ ಧರ್ಮೋ ನಾಸ್ತಿ ದಾನಸಮೋ ನಿಧಿಃ ॥೯೧॥

ಭೂಮಿಗೆ ಸಮವಾದ ದಾನವಿಲ್ಲ. ತಾಯಿಗೆ ಸಮವಾದ ಗುರುವಿಲ್ಲ. ಸತ್ಯಕ್ಕೆ ಸಮವಾದ ಧರ್ಮವಿಲ್ಲ. ದಾನಕ್ಕೆ ಸಮವಾದ ನಿಧಿ ಇಲ್ಲ.

ಭೀಷ್ಮಃ

ಏತದಾಂಗಿರಸಾಚ್ಛ್ರುತ್ವಾ ವಾಸವೋ ವಸುಧಾಮಿಮಾಮ್ ।
ವಸುರತ್ನಸಮಾಕೀರ್ಣಾಂ ದದಾವಾಂಗಿರಸೇ ತದಾ ॥೯೨॥

ಭೀಷ್ಮ– ಇಂದ್ರನು ಆಂಗೀರಸರಿಂದ ಈ ಉಪದೇಶವನ್ನು ಕೇಳಿ ವಸುರತ್ನ ಪೂರ್ಣವಾದ ಈ ಭೂಮಿಯನ್ನು ಆಂಗಿರಸರಿಗೇ ದಾನ ಮಾಡಿದನು.

ಯ ಇಮಂ ಶ್ರಾವಯೇಚ್ಛ್ರಾದ್ಧೇ ಭೂಮಿದಾನಸ್ಯ ಸಂಸ್ತವಮ್ ।
ನ ತಸ್ಯ ರಕ್ಷಸಾಂ ಭಾಗೋ ನಾಸುರಾಣಾಂ ಭವತ್ಯುತ ॥೯೩॥

ಯಾವ ಪುರುಷನು ಶ್ರಾದ್ಧಕಾಲದಲ್ಲಿ ಈ ಭೂದಾನದ ಪ್ರಶಂಸೆಯನ್ನು ಶ್ರವಣ ಮಾಡಿಸುತ್ತಾನೆಯೋ ಅಂತಹವನು ಮಾಡಿದ ಶ್ರಾದ್ಧವು ರಾಕ್ಷಸರ ಅಥವಾ ಅಸುರರ ಭಾಗವಾಗುವುದಿಲ್ಲ.

ಅಕ್ಷಯಂ ಚ ಭವೇದ್ ದತ್ತಂ ಪಿತೃಭ್ಯಸ್ತನ್ನ ಸಂಶಯಃ ।
ತಸ್ಮಾಚ್ಛ್ರಾದ್ಧೇಷ್ವಿದಂ ವಿಪ್ರೋ ಭುಂಜತಃ ಶ್ರಾವಯೇದ್ ದ್ವಿಜಾನ್ ॥೯೪॥

ಅವನು ಪಿತೃಗಳಿಗೆ ನೀಡಿದುದು ಅಕ್ಷಯವಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಆದ್ದರಿಂದ ಶ್ರಾದ್ಧದಲ್ಲಿ ಬ್ರಾಹ್ಮಣರು ಭೋಜನವನ್ನು ಮಾಡುವಾಗ ಬ್ರಾಹ್ಮಣನು ಇದನ್ನು ಶ್ರವಣ ಮಾಡಿಸಬೇಕು.

ಇತ್ಯೇತತ್ಸರ್ವದಾನಾನಾಂ ಶ್ರೇಷ್ಠಮುಕ್ತಂ ತವಾನಘ ।
ಮಯಾ ಭರತಶಾರ್ದೂಲ ಕಿಂ ಭೂಯಃ ಶ್ರೋತುಮಿಚ್ಛಸಿ ॥೯೫॥

ಎಲೈ ಅನಘನೇ, ಎಲ್ಲ ದಾನಗಳಲ್ಲೂ ಶ್ರೇಷ್ಠವಾದ ಈ ದಾನವನ್ನು ನಾನು ಹೇಳಿದ್ದೇನೆ. ಎಲೈ ಭರತಶಾರ್ದೂಲನೇ, ಇನ್ನೂ ಏನನ್ನು ಕೇಳಲು ಬಯಸುವಿ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಭೂಮಿದಾನಸ್ತವೋ ನಾಮ
ದ್ವಿನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ಮೂರನೆಯ ಅಧ್ಯಾಯ

ಅನ್ನದಾನದ ಪ್ರಶಂಸೆ

ಯುಧಿಷ್ಠಿರಃ

ಕಾನಿ ದಾನಾನಿ ಲೋಕೇऽಸ್ಮಿನ್ ದಾತುಕಾಮೋ ಮಹೀಪತಿಃ ।
ಗುಣಾಧಿಕೇಭ್ಯೋ ವಿಪ್ರೇಭ್ಯೋ ದದ್ಯಾದ್ ಭರತಸತ್ತಮ ॥೧॥

ಯುಧಿಷ್ಠಿರ– ಎಲೈ ಭರತಶ್ರೇಷ್ಠನೇ, ಈ ಲೋಕದಲ್ಲಿ ದಾನವನ್ನು ಕೊಡಲು ಬಯಸುವ ರಾಜನು ಯಾವ ದಾನಗಳನ್ನು ಗುಣಾಧಿಕರಾದ ಬ್ರಾಹ್ಮಣರಿಗೆ ಕೊಡಬೇಕು?

ಕೇನ ತುಷ್ಯಂತಿ ತೇ ಸದ್ಯಸ್ತುಷ್ಟಾಃ ಕಿಂ ಪ್ರದಿಶಂತ್ಯುತ ।
ಶಂಸ ಮೇ ತನ್ಮಹಾಬಾಹೋ ಫಲಂ ಪುಣ್ಯಕೃತಂ ಮಹತ್ ॥೨॥

ಆ ಬ್ರಾಹ್ಮಣರು ಯಾವುದರಿಂದ ತಕ್ಷಣವೇ ಸಂತುಷ್ಟರಾಗುತ್ತಾರೆ? ಅದರಿಂದ ಅವರು ಏನನ್ನು ಕೊಡುತ್ತಾರೆ? ಎಲೈ ಮಹಾಬಾಹುವೇ, ಪುಣ್ಯದಿಂದ ಉಂಟಾಗುವ ಮಹಾಫಲವನ್ನು ನನಗೆ ಹೇಳು.

ದತ್ತಂ ಕಿಂಫಲವದ್ ರಾಜನ್ನಿಹ ಲೋಕೇ ಪರತ್ರ ಚ ।
ಭವತಃ ಶ್ರೋತುಮಿಚ್ಛಾಮಿ ತನ್ಮೇ ವಿಸ್ತರತೋ ವದ ॥೩॥

ಎಲೈ ರಾಜನೇ, ಮಾಡಿದ ದಾನವು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಯಾವ ಫಲವನ್ನು ಕೊಡುತ್ತದೆ ಎಂದು ನಿನ್ನಿಂದ ಕೇಳಲು ಬಯಸುತ್ತೇನೆ. ಅದನ್ನು ನನಗೆ ವಿಸ್ತಾರವಾಗಿ ಹೇಳು.

ಭೀಷ್ಮಃ

ಇಮಮರ್ಥಂ ಪುರಾ ಪೃಷ್ಟೋ ನಾರದೋ ದೇವದರ್ಶನಃ ।
ಯದುಕ್ತವಾನಸೌ ತನ್ಮೇ ಗದತಃ ಶೃಣು ಭಾರತ ॥೪॥

ಭೀಷ್ಮ– ನಾನು ಹಿಂದೆ ಪ್ರಶ್ನೆ ಮಾಡಿದಾಗ ದೇವದರ್ಶನಿಗಳಾದ ನಾರದರು ಯಾವ ವಿಷಯವನ್ನು ಹೇಳಿದರೋ ಅದನ್ನು ನಿನಗೆ ತಿಳಿಸುತ್ತೇನೆ. ಎಲೈ ಭಾರತನೇ, ಅದನ್ನು ಕೇಳು.

ನಾರದಃ

ಅನ್ನಮೇವ ಪ್ರಶಂಸಂತಿ ದೇವಾಃ ಸರ್ಷಿಗಣಾಃ ಪುರಾ ।
ಲೋಕತಂತ್ರಂ ಹಿ ಯಜ್ಞಾಶ್ಚ ಸರ್ವಮನ್ನೇ ಪ್ರತಿಷ್ಠಿತಮ್ ॥೫॥

ನಾರದ– ದೇವತೆಗಳು ಮತ್ತು ಋಷಿಗಣಗಳು ಮೊದಲಿನಿಂದಲೂ ಅನ್ನವನ್ನೇ ಪ್ರಶಂಸೆ ಮಾಡುತ್ತಾರೆ. ಲೋಕಯಾತ್ರೆ ಮತ್ತು ಯಜ್ಞಗಳು ಅನ್ನದಲ್ಲಿಯೇ ಪ್ರತಿಷ್ಠಿತವಾಗಿವೆ.

ಅನ್ನೇನ ಸದೃಶಂ ದಾನಂ ನ ಭೂತಂ ನ ಭವಿಷ್ಯತಿ ।
ತಸ್ಮಾದನ್ನಂ ವಿಶೇಷೇಣ ದಾತುಮಿಚ್ಛಂತಿ ಮಾನವಾಃ ॥೬॥

ಅನ್ನಕ್ಕೆ ಸದೃಶವಾದ ದಾನವು ಹಿಂದೆ ಇರಲಿಲ್ಲ ಮತ್ತು ಮುಂದೆ ಇರುವುದಿಲ್ಲ. ಆದ್ದರಿಂದ ಮನುಷ್ಯರು ವಿಶೇಷವಾಗಿ ಅನ್ನದಾನವನ್ನು ಮಾಡಲು ಬಯಸುತ್ತಾರೆ.

ಅನ್ನಮೂರ್ಜಸ್ಕರಂ ಲೋಕೇ ಪ್ರಾಣಾಶ್ಚಾನ್ನೇ ಪ್ರತಿಷ್ಠಿತಾಃ ।
ಅನ್ನೇನ ಧಾರ್ಯತೇ ಸರ್ವಂ ವಿಶ್ವಂ ಜಗದಿದಂ ಪ್ರಭೋ ॥೭॥

ಲೋಕದಲ್ಲಿ ಅನ್ನವು ಬಲಪ್ರದವಾದುದು. ಪ್ರಾಣಗಳೂ ಅನ್ನದಲ್ಲಿ ಪ್ರತಿಷ್ಠಿತವಾಗಿವೆ. ಎಲೈ ಪ್ರಭುವೇ, ಈ ಸಮಸ್ತವಾದ ಜಗತ್ತೆಲ್ಲವೂ ಅನ್ನದಿಂದಲೇ ಧರಿಸಲ್ಪಡುತ್ತದೆ.

ಅನ್ನಾದ್ ಗೃಹಸ್ಥಾ ಲೋಕೇಽಸ್ಮಿನ್ ಭಿಕ್ಷವಸ್ತತ ಏವ ಚ ।
ಅನ್ನಾತ್ ಪ್ರಭವತಿ ಪ್ರಾಣಃ ಪ್ರತ್ಯಕ್ಷಂ ನಾತ್ರ ಸಂಶಯಃ ॥೮॥

ಈ ಲೋಕದಲ್ಲಿ ಗೃಹಸ್ಥರು, ಭಿಕ್ಷುಗಳು ಅನ್ನದಿಂದಲೇ ಜೀವಿಸುತ್ತಾರೆ. ಅನ್ನದಿಂದ ಪ್ರಾಣ ಉಂಟಾಗುವುದು ಪ್ರತ್ಯಕ್ಷವಾಗಿದೆ. ಇದರಲ್ಲಿ ಸಂಶಯವಿಲ್ಲ.

ಕುಟುಂಬಂ ಪೀಡಯಿತ್ವಾಽಪಿ ಬ್ರಾಹ್ಮಣಾಯ ಮಹಾತ್ಮನೇ ।
ದಾತವ್ಯಂ ಭಿಕ್ಷವೇ ಚಾನ್ನಮಾತ್ಮನೋ ಭೂತಿಮಿಚ್ಛತಾ ॥೯॥

ಕುಟುಂಬಕ್ಕೆ ಪೀಡೆಯುಂಟಾದರೂ ಸಹ ಬ್ರಾಹ್ಮಣನೂ, ಮಹಾತ್ಮನೂ ಆದ ಭಿಕ್ಷುವಿಗೆ ತನ್ನ ಏಳಿಗೆಯನ್ನು ಅಪೇಕ್ಷಿಸುವವನು ಅನ್ನವನ್ನು ಕೊಡಬೇಕು.

ಬ್ರಾಹ್ಮಣಾಯಾಭಿರೂಪಾಯ ಯೋ ದದ್ಯಾದನ್ನಮರ್ಥಿನೇ ।
ನಿದಧಾತಿ ನಿಧಿಂ ಶ್ರೇಷ್ಠಂ ಪಾರಲೌಕಿಕಮಾತ್ಮನಃ ॥೧೦॥

ಯಾವನು ಅನ್ನವನ್ನು ಯಾಚಿಸುವ ಯೋಗ್ಯನಾದ ಬ್ರಾಹ್ಮಣನಿಗೆ ಅನ್ನದಾನವನ್ನು ಮಾಡುತ್ತಾನೆಯೋ ಅವನು ತನಗೆ ಪರಲೋಕದಲ್ಲಿ ಶ್ರೇಷ್ಠವಾದ ನಿಧಿಯನ್ನು ಸ್ಥಾಪಿಸಿ ಕೊಳ್ಳುತ್ತಾನೆ.

ಶ್ರಾಂತಮಧ್ವನಿ ವರ್ತಂತಂ ವೃದ್ಧಮರ್ಹಮುಪಸ್ಥಿತಮ್ ।
ಅರ್ಚಯೇದ್ ಭೂತಿಮನ್ವಿಚ್ಛನ್ ಗೃಹಸ್ಥೋ ಗೃಹಮಾಗತಮ್ ॥೧೧॥

ಐಶ್ವರ್ಯವನ್ನು ಬಯಸುವ ಗೃಹಸ್ಥನು ದಣಿದ, ಮಾರ್ಗದಲ್ಲಿ ಇರುವ, ವೃದ್ಧನಾದ, ಯೋಗ್ಯನಾದ, ಮನೆಗೆ ಬಂದ, ಬ್ರಾಹ್ಮಣನನ್ನು ಅರ್ಚಿಸಬೇಕು.

ಕ್ರೋಧಮುತ್ಪತಿತಂ ಹಿತ್ವಾ ಸುಶೀಲೋ ವೀತಮತ್ಸರಃ ।
ಅನ್ನದಃ ಪ್ರಾಪ್ನುತೇ ರಾಜನ್ ದಿವಿ ಚೇಹ ಚ ಯತ್ಸುಖಮ್ ॥೧೨॥

ಎಲೈ ರಾಜನೇ, ಉಂಟಾಗಬಹುದಾದ ಕ್ರೋಧವನ್ನು ತ್ಯಜಿಸಿ, ಒಳ್ಳೆಯ ನಡತೆಯನ್ನು ಹೊಂದಿ ಮಾತ್ಸರ್ಯರಹಿತನಾಗಿ ಅನ್ನವನ್ನು ಕೊಡುವವನು ಈ ಲೋಕದಲ್ಲಿಯೂ ಸ್ವರ್ಗದಲ್ಲಿಯೂ ಸುಖವನ್ನು ಹೊಂದುತ್ತಾನೆ.

ನಾವಮನ್ಯೇದಭಿಗತಂ ನ ಪ್ರಣುದ್ಯಾತ್ ಕಥಂಚನ ।
ಅಪಿ ಶ್ವಪಾಕೇ ಶುನಿ ವಾ ನ ದಾನಂ ವಿಪ್ರಣಶ್ಯತಿ ॥೧೩॥

ಮನೆಗೆ ಬಂದ ಅಭ್ಯಾಗತನನ್ನು ಅವಮಾನ ಮಾಡಬಾರದು. ಹಿಂದಕ್ಕೆ ಕಳುಹಿಸಬಾರದು. ಶ್ವಪಾಕನಿಗೆ ಶ್ವಾನಕ್ಕೆ ನೀಡಿದ ಅನ್ನವೂ ಸಹ ಫಲವನ್ನು ಕೊಡದೆ ನಾಶವನ್ನು ಹೊಂದುವುದಿಲ್ಲ.

ಯೋ ದದ್ಯಾದಪರಿಕ್ಲಿಷ್ಟಮನ್ನಮಧ್ವನಿ ವರ್ತತೇ ।
ಶ್ರಾಂತಾಯಾದೃಷ್ಟಪೂರ್ವಾಯ ಸ ಮಹದ್ಧರ್ಮಮಾಪ್ನುಯಾತ್ ॥೧೪॥

ಯಾವನು ದಾರಿಹೋಕನಾದ, ಬಳಲಿದ, ಅಪರಿಚಿತನಾದ ವ್ಯಕ್ತಿಗೆ ಪರಿಕ್ಲೇಶ ರಹಿತನಾಗಿ ಅನ್ನವನ್ನು ಕೊಡುತ್ತಾನೆಯೋ ಅವನು ಶ್ರೇಷ್ಠವಾದ ಧರ್ಮವನ್ನು ಸಂಪಾದಿಸುತ್ತಾನೆ.

ಪಿತೄನ್ ದೇವಾನೃಷೀನ್ ವಿಪ್ರಾನತಿಥೀಂಶ್ಚ ಜನಾಧಿಪ ।
ಯೋ ನರಃ ಪ್ರೀಣಯತ್ಯನ್ನೈಸ್ತಸ್ಯ ಪುಣ್ಯಫಲಂ ಮಹತ್ ॥೧೫॥

ಎಲೈ ಜನಾಧಿಪನೇ, ಯಾವ ಮನುಷ್ಯನು ಪಿತೃಗಳನ್ನೂ, ದೇವತೆಗಳನ್ನೂ, ಋಷಿಗಳನ್ನೂ, ಬ್ರಾಹ್ಮಣರನ್ನೂ, ಅತಿಥಿಗಳನ್ನೂ ಅನ್ನದಿಂದ ಸಂತೋಷ ಪಡಿಸುತ್ತಾನೆಯೋ ಅವನ ಪುಣ್ಯಫಲವು ಬಹಳ ದೊಡ್ಡದಾದುದು.

ಕೃತ್ವಾಪಿ ಪಾಪಕಂ ಕರ್ಮ ಯೋ ದದ್ಯಾದನ್ನಮರ್ಥಿನೇ ।
ಬ್ರಾಹ್ಮಣಾಯ ವಿಶೇಷೇಣ ನ ಸ ಪಾಪೇನ ಯುಜ್ಯತೇ ॥೧೬॥

ಪಾಪಕರ್ಮವನ್ನು ಮಾಡಿದವನೂ ಸಹ ಬೇಡಿ ಬಂದವನಿಗೆ ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣನಿಗೆ ಅನ್ನವನ್ನು ನೀಡಿದರೆ ಅವನು ಪಾಪದಿಂದ ಯುಕ್ತನಾಗುವುದಿಲ್ಲ.

ಬ್ರಾಹ್ಮಣೇಷ್ವಕ್ಷಯಂ ದಾನಮನ್ನಂ ಶೂದ್ರೇ ಮಹಾಫಲಮ್ ।
ಅನ್ನದಾನಂ ಚ ಶೂದ್ರೇ ಚ ಬ್ರಾಹ್ಮಣೇ ಚ ವಿಶಿಷ್ಯತೇ ॥೧೭॥

ಬ್ರಾಹ್ಮಣನಿಗೆ ಕೊಟ್ಟ ಅನ್ನದಾನವು ಅಕ್ಷಯವಾಗುತ್ತದೆ. ಶೂದ್ರನಿಗೆ ಕೊಟ್ಟ ಅನ್ನವು ಮಹಾಫಲವನ್ನು ಕೊಡುತ್ತದೆ. ಶೂದ್ರನಿಗೂ ಮತ್ತು ಬ್ರಾಹ್ಮಣನಿಗೂ ಅನ್ನದಾನ ಮಾಡುವುದು ಬಹಳ ಶ್ರೇಷ್ಠವಾದುದು.

ನ ಪೃಚ್ಛೇದ್ ಗೋತ್ರಚರಣಂ ಸ್ವಾಧ್ಯಾಯಂ ದೇಶಮೇವ ವಾ ।
ಭಿಕ್ಷಿತೋ ಬ್ರಾಹ್ಮಣೇನೇಹ ಜನ್ಮ ವಾऽನ್ನಂ ಪ್ರಯಾಚಿತಃ ॥೧೮॥

ಬ್ರಾಹ್ಮಣನು ಅನ್ನವನ್ನು ಯಾಚಿಸಿದಾಗ ಅವನ ಗೋತ್ರವನ್ನಾಗಲೀ, ಜನ್ಮವನ್ನಾಗಲೀ, ಆಚಾರವನ್ನಾಗಲೀ, ಸ್ವಾಧ್ಯಾಯವನ್ನಾಗಲೀ, ದೇಶವನ್ನಾಗಲೀ ಪ್ರಶ್ನಿಸಬಾರದು.

ಅನ್ನದಸ್ಯಾನ್ನವೃಕ್ಷಾಶ್ಚ ಸರ್ವಕಾಮಫಲಾನ್ವಿತಾಃ ।
ಭವಂತೀಹಾಥ ವಾऽಮುತ್ರ ನೃಪತೇ ನಾತ್ರ ಸಂಶಯಃ ॥೧೯॥

ಎಲೈ ರಾಜನೇ, ಅನ್ನವನ್ನು ಕೊಡುವವನಿಗೆ ಈ ಲೋಕದಲ್ಲಿಯಾಗಲೀ ಅಥವಾ ಪರಲೋಕದಲ್ಲಿಯಾಗಲೀ ಕಾಮಿತವಾದ ಸರ್ವಫಲವನ್ನು ಕೊಡುವ, ಅನ್ನವನ್ನು ಕೊಡುವ ಕಲ್ಪವೃಕ್ಷಗಳು ಉಂಟಾಗುವುದರಲ್ಲಿ ಸಂಶಯವಿಲ್ಲ.

ಆಶಂಸಂತೇ ಹಿ ಪಿತರಃ ಸುವೃಷ್ಟಿಮಿವ ಕರ್ಷಕಾಃ ।
ಅಸ್ಮಾಕಮಪಿ ಪುತ್ರೋ ವಾ ಪೌತ್ರೋ ವಾऽನ್ನಂ ಪ್ರದಾಸ್ಯತಿ ॥೨೦॥

ಕೃಷಿಕರು ಒಳ್ಳೆಯ ಮಳೆಯನ್ನು ಬಯಸಿದಂತೆ ಪಿತೃಗಳು ನಮ್ಮ ಪುತ್ರನಾಗಲೀ ಅಥವಾ ಪೌತ್ರನಾಗಲೀ ಅನ್ನದಾನವನ್ನು ಮಾಡುವನೆಂದು ಆಶಿಸುತ್ತಾರೆ.

ಬ್ರಾಹ್ಮಣೋ ಹಿ ಮಹದ್ಭೂತಂ ಸ್ವಯಂ ದೇಹೀತಿ ಯಾಚತೇ ।
ಅಕಾಮೋ ವಾ ಸಕಾಮೋ ವಾ ದತ್ತ್ವಾ ಪುಣ್ಯಮವಾಪ್ನುಯಾತ್ ॥೨೧॥

ಬ್ರಾಹ್ಮಣನು ಒಂದು ಮಹಾಚೇತನ. ತಾನಾಗಿಯೇ ಬಂದು ದೇಹಿ ಎಂದು ಕೇಳುವ ಬ್ರಾಹ್ಮಣನಿಗೆ ಇಷ್ಟವಿರಲಿ, ಇಲ್ಲದಿರಲಿ ಅನ್ನವನ್ನು ಕೊಟ್ಟರೆ ಪುಣ್ಯಪ್ರಾಪ್ತಿಯಾಗುತ್ತದೆ.

ಬ್ರಾಹ್ಮಣಃ ಸರ್ವಭೂತಾನಾಮತಿಥಿಃ ಪ್ರಸೃತಾಗ್ರಭುಕ್ ।
ವಿಪ್ರಾ ಯಮಭಿಗಚ್ಛಂತಿ ಭಿಕ್ಷಮಾಣಾ ಗೃಹಂ ಸದಾ ॥೨೨॥

ಸತ್ಕೃತಾಶ್ಚ ನಿವರ್ತಂತೇ ತದತೀವ ಪ್ರವರ್ಧತೇ ।
ಮಹಾಭೋಗೇ ಕುಲೇ ಜನ್ಮ ಪ್ರೇತ್ಯ ಪ್ರಾಪ್ನೋತಿ ಭಾರತ ॥೨೩॥

ಮೊದಲು ಭೋಜನ ಮಾಡುವ ಬ್ರಾಹ್ಮಣನು ಸರ್ವಭೂತಗಳಿಗೂ ಅತಿಥಿಯಾಗುತ್ತಾನೆ. ಯಾರ ಮನೆಗೆ ಬ್ರಾಹ್ಮಣನು ಹೋಗಿ ಅನ್ನವನ್ನು ಯಾಚಿಸಿ ಅಲ್ಲಿ ಸತ್ಕಾರವನ್ನು ಪಡೆದು ಹಿಂದಿರುಗುತ್ತಾನೆಯೋ ಆ ಮನೆಯು ಅಭಿವೃದ್ಧಿಯನ್ನು ಹೊಂದುತ್ತದೆ. ಎಲೈ ಭಾರತನೇ, ಆ ಅನ್ನದಾತನು ಮರಣವನ್ನು ಹೊಂದಿದ ಮೇಲೆ ಮಹಾಭೋಗವನ್ನು ಹೊಂದಿದ ವಂಶದಲ್ಲಿ ಜನ್ಮವನ್ನು ಪಡೆಯುತ್ತಾನೆ.

ದತ್ತ್ವಾ ತ್ವನ್ನಂ ನರೋ ಲೋಕೇ ತಥಾ ಸ್ಥಾನಮನುತ್ತಮಮ್ ।
ಮೃಷ್ಟಮೃಷ್ಟಾನ್ನದಾಯೀ ತು ಸ್ವರ್ಗೇ ವಸತಿ ಸತ್ಕೃತಃ ॥೨೪॥

ಲೋಕದಲ್ಲಿ ಅನ್ನವನ್ನು ಕೊಡುವ ಮನುಷ್ಯನು ಶ್ರೇಷ್ಠವಾದ ಸ್ಥಾನವನ್ನು ಪಡೆಯುತ್ತಾನೆ. ಅತ್ಯಂತ ಮೃಷ್ಟಾನ್ನವನ್ನು ಕೊಡುವ ಮನುಷ್ಯನು ಸ್ವರ್ಗದಲ್ಲಿ ಸತ್ಕರಿಸಲ್ಪಟ್ಟು ವಾಸಿಸುತ್ತಾನೆ.

ಸತ್ಕೃತಾಚ್ಚ ವಿವರ್ಧಂತೇ ಸಗೃಹೇಣಾಭಿವರ್ಧತೇ ।
ಸ್ವರ್ಗತೋ ದೀರ್ಘಕಾಲೇನ ಮಹಾಭೋಗಂ ಕುಲಂ ಭವೇತ್ ।
ಅನ್ನದಃ ಪಶುಮಾನ್ ಪುತ್ರೀ ಧನವಾನ್ ಭೋಗವಾನಪಿ ॥೨೫॥

ಅನ್ನದಃ ಪ್ರಾಣದೋ ಲೋಕೇ ಸರ್ವದಃ ಪ್ರೋಚ್ಯತೇ ತು ಸಃ ॥೨೬॥

ಸತ್ಕಾರ್ಯಗಳಿಂದ ಅಭಿವೃದ್ಧಿಯನ್ನು ಹೊಂದುತ್ತಾರೆ. ಅವನ ಮನೆಯೂ ಅಭಿವೃದ್ಧಿಯನ್ನು ಹೊಂದುತ್ತದೆ. ಅವನು ದೀರ್ಘಕಾಲ ಸ್ವರ್ಗದಲ್ಲಿ ವಾಸಿಸುತ್ತಾನೆ.

ಕುಲಕ್ಕೂ ಮಹಾಭೋಗ ಉಂಟಾಗುತ್ತದೆ. ಅನ್ನದಾನವನ್ನು ಮಾಡುವವನು ಪಶುಗಳನ್ನೂ, ಪುತ್ರರನ್ನೂ, ಧನಗಳನ್ನೂ ಮತ್ತು ಭೋಗವನ್ನೂ ಹೊಂದುತ್ತಾನೆ. ಲೋಕದಲ್ಲಿ ಅನ್ನದಾನವನ್ನು ಮಾಡುವವನು ಪ್ರಾಣದಾನವನ್ನು ಮಾಡುವವನು ಎಂದು ಹೇಳಲ್ಪಡುತ್ತಾನೆ. ಪ್ರಾಣದಾನವನ್ನು ಮಾಡುವವನು ಸರ್ವದಾನ ಮಾಡುವವನು ಎಂದು ಹೇಳಲ್ಪಡುತ್ತಾನೆ.

ಅನ್ನಂ ಹಿ ದತ್ತ್ವಾತಿಥಯೇ ಬ್ರಾಹ್ಮಣಾಯ ಯಥಾವಿಧಿ ।
ಪ್ರದಾತಾ ಸುಖಮಾಪ್ನೋತಿ ದೇವೈಶ್ಚಾಪ್ಯಭಿಪೂಜ್ಯತೇ ॥೨೭॥

ಅತಿಥಿಯಾದ ಬ್ರಾಹ್ಮಣನಿಗೆ ವಿಧಿಪೂರ್ವಕವಾಗಿ ಅನ್ನದಾನವನ್ನು ಮಾಡಿದವನು ಸುಖವನ್ನು ಹೊಂದುತ್ತಾನೆ ಮತ್ತು ದೇವತೆಗಳಿಂದಲೂ ಪೂಜಿಸಲ್ಪಡುತ್ತಾನೆ.

ಬ್ರಾಹ್ಮಣೋ ಹಿ ಮಹದ್ಭೂತಂ ಕ್ಷೇತ್ರಂ ಚರತಿ ಪಾದವತ್ ।
ಉಪ್ಯತೇ ತತ್ರ ಯದ್ ಬೀಜಂ ತದ್ಧಿ ಪುಣ್ಯಫಲಂ ಮಹತ್ ॥೨೮॥

ಬ್ರಾಹ್ಮಣನೆಂದರೆ ದೊಡ್ಡ ಚೇತನ. ಅದು ಪಾದಗಳುಳ್ಳ ಚಲಿಸುವ ಹೊಲದಂತೆ. ಅಲ್ಲಿ ಬಿತ್ತಿದ ದಾನ ಎಂಬ ಬೀಜವು ದೊಡ್ಡ ಪುಣ್ಯ ಎಂಬ ಫಲವನ್ನು ಕೊಡುತ್ತದೆ.

ಪ್ರತ್ಯಕ್ಷಂ ಪ್ರೀತಿಜನನಂ ಭೋಕ್ತೃದಾತ್ರೋರ್ಭವತ್ಯುತ ।
ಸರ್ವಾಣ್ಯನ್ಯಾನಿ ದಾನಾನಿ ಪರೋಕ್ಷಫಲವಂತ್ಯುತ ॥೨೯॥

ಮತ್ತು ಅನ್ನದಾನವು ದಾತೃವಿಗೂ ಮತ್ತು ಭೋಕ್ತೃವಿಗೂ ಪ್ರತ್ಯಕ್ಷವಾಗಿ ಸಂತೋಷವನ್ನುಂಟು ಮಾಡುತ್ತದೆ. ಉಳಿದ ಎಲ್ಲಾ ದಾನಗಳ ಫಲವು ಪರೋಕ್ಷವಾದದು.

ಅನ್ನಾದ್ಧಿ ಪ್ರಸವಂ ವಿದ್ಧಿ ರತಿಮನ್ನಾದ್ಧಿ ಭಾರತ ।
ಧರ್ಮಾರ್ಥಾವನ್ನತೋ ವಿದ್ಧಿ ರೋಗನಾಶಂ ತಥಾಽನ್ನತಃ ॥೩೦॥

ಎಲೈ ಭಾರತನೇ, ಅನ್ನದಿಂದ ಸಂತತಿ, ಅನ್ನದಿಂದ ರತಿಸುಖವೆಂದು ತಿಳಿ. ಹಾಗೆಯೇ ಅನ್ನದಿಂದ ಧರ್ಮಾರ್ಥಗಳು ಮತ್ತು ಅನ್ನದಿಂದ ರೋಗನಾಶವೆಂದೂ ತಿಳಿ.

ಅನ್ನಂ ಹ್ಯಮೃತಮಿತ್ಯಾಹ ಪುರಾಕಲ್ಪೇ ಪ್ರಜಾಪತಿಃ ।
ಅನ್ನಂ ಭುವಂ ದಿವಂ ಖಂ ಚ ಸರ್ವಮನ್ನೇ ಪ್ರತಿಷ್ಠಿತಮ್ ॥೩೧॥

ಪೂರ್ವಸೃಷ್ಟಿಯಲ್ಲಿ ಪ್ರಜಾಪತಿಯು ಅನ್ನವನ್ನು ಅಮೃತವೆಂದು ಹೇಳಿದನು. ಭೂಮಿ, ಸ್ವರ್ಗ, ಅಂತರಿಕ್ಷ ಎಲ್ಲವೂ ಅನ್ನವೇ (ಎಂದರೆ) ಎಲ್ಲವೂ ಅನ್ನದಲ್ಲಿ ಪ್ರತಿಷ್ಠಿತವಾಗಿವೆ.

ಅನ್ನಪ್ರಣಾಶೇ ಭಿದ್ಯಂತೇ ಶರೀರೇ ಪಂಚ ಧಾತವಃ ।
ಬಲಂ ಬಲವತೋಽಪೀಹ ಪ್ರಣಶ್ಯತ್ಯನ್ನಹಾನಿತಃ ॥೩೨॥

ಅನ್ನವು ನಾಶ ಹೊಂದಿದರೆ ಶರೀರದಲ್ಲಿರುವ ಪಂಚಧಾತುಗಳು ನಾಶವನ್ನು ಹೊಂದುತ್ತವೆ. ಬಲಶಾಲಿಯ ಬಲವೂ ಸಹ ಅನ್ನಹಾನಿಯಿಂದ ನಾಶವನ್ನು ಹೊಂದುತ್ತವೆ.

ಆವಾಹಾಶ್ಚ ವಿವಾಹಾಶ್ಚ ಯಜ್ಞಾಶ್ಚಾನ್ನಮೃತೇ ತಥಾ ।
ನ ವರ್ತಂತೇ ನರಶ್ರೇಷ್ಠ ಬ್ರಹ್ಮ ಚಾತ್ರ ಪ್ರಲೀಯತೇ ॥೩೩॥

ಎಲೈ ನರಶ್ರೇಷ್ಠನೇ, ದೇವತಾ ಆವಾಹನಗಳು, ವಿವಾಹಗಳು, ಯಜ್ಞಗಳು ಅನ್ನವಿಲ್ಲದೆ ನಡೆಯುವುದಿಲ್ಲ. ಅನ್ನವಿಲ್ಲದಿದ್ದರೆ ವೇದವೂ ಲಯವನ್ನು ಹೊಂದುತ್ತದೆ (ಲಕ್ಷಾಲಂಕಾರ).

ಅನ್ನತಃ ಸರ್ವಮೇತದ್ಧಿ ಯತ್ ಕಿಂಚಿತ್ ಸ್ಥಾಣು ಜಂಗಮಮ್ ।
ತ್ರಿಷು ಲೋಕೇಷು ಧರ್ಮಾರ್ಥಮನ್ನಂ ದೇಯಮತೋ ಬುಧೈಃ ॥೩೪॥

ಸ್ಥಾವರ-ಜಂಗಮವಾದ ಈ ಪ್ರಾಣಿ ಸಮೂಹವು ಏನಿದೆಯೋ ಅದೆಲ್ಲವೂ ಅನ್ನದಿಂದಲೇ ಉಂಟಾಗಿದೆ. ವಿವೇಕಿಗಳಾದವರು ಮೂರುಲೋಕಗಳಲ್ಲಿಯೂ ಕೂಡ ಧರ್ಮಾರ್ಥವಾಗಿ ಅನ್ನವನ್ನು ಕೊಡಬೇಕು.

ಅನ್ನದಸ್ಯ ಮನುಷ್ಯಸ್ಯ ಬಲಮೋಜೋ ಯಶಃ ಸುಖಮ್ ।
ಕೀರ್ತಿಶ್ಚ ವರ್ಧತೇ ಶಶ್ವತ್ ತ್ರಿಷು ಲೋಕೇಷು ಪಾರ್ಥಿವ ॥೩೫॥

ಎಲೈ ರಾಜನೇ, ಅನ್ನವನ್ನು ದಾನ ಮಾಡುವ ಮನುಷ್ಯನಿಗೆ ಬಲ, ಓಜಸ್ಸು, ಕೀರ್ತಿ ಸುಖಗಳು ಹೆಚ್ಚುತ್ತವೆ. ಮೂರು ಲೋಕಗಳಲ್ಲಿ ಶಾಶ್ವತವಾದ ಕೀರ್ತಿಯುಂಟಾಗುತ್ತದೆ.

ರೋಗನಾಶೋ ಮನಸ್ತುಷ್ಟಿಃ ಸಮಾಧಿಸ್ತೇಜ ಉತ್ತಮಮ್ ।
ತ್ರೈಲೋಕ್ಯಮನ್ನೇ ವಿಧೃತಂ ಧಾತವಶ್ಚಾನ್ನಜಾ ಸ್ಮೃತಾಃ ॥೩೬॥

ಸಂಸ್ಕಾರಾಃ ಸಂ ವಿವಾದಶ್ಚ ಸ್ವಧಾ ಯಜ್ಞೋನ್ನಮುತ್ತಮಮ್ ।
ವೇದಶಾಸ್ತ್ರಾಣಿ ಧರ್ಮಾಶ್ಚ ವಿನಾऽನ್ನಂ ಸಂಪ್ರಲೀಯತೇ ॥೩೭॥

ರೋಗನಾಶ, ಮನಸ್ಸಂತೋಷ, ಸಮಾಧಾನ, ಉತ್ತಮವಾದ ತೇಜಸ್ಸು, ಮೂರುಲೋಕಗಳು ಎಲ್ಲವೂ ಅನ್ನದಿಂದ ನಿಯಂತ್ರಿಸಲ್ಪಟ್ಟಿವೆ. ಶರೀರ ಧಾತುಗಳೂ ಸಹ ಅನ್ನದಿಂದಲೇ ಉಂಟಾಗುತ್ತವೆ ಎಂದು ಹೇಳಲ್ಪಡುತ್ತದೆ. ಸಂಸ್ಕಾರಗಳು, ಸಂಭಾಷಣೆಗಳು, ಸ್ವಧಾಕಾರಗಳು, ಯಜ್ಞ ಎಲ್ಲವೂ ಶ್ರೇಷ್ಠವಾದ ಅನ್ನವನ್ನು ಅವಲಂಬಿಸಿವೆ. ಅನ್ನವಿಲ್ಲದಿದ್ದರೆ ವೇದಶಾಸ್ತ್ರಗಳು ಮತ್ತು ಧರ್ಮಗಳು ಅದರ್ಶನವನ್ನು ಹೊಂದುತ್ತವೆ.

ಮೇಘೇಷ್ವಂಭಃ ಸನ್ನಿಧತ್ತೇ ಪ್ರಾಣಾನಾಂ ಪವನಃ ಶಿವಃ ।
ತಚ್ಚ ಮೇಘಗತಂ ವಾರಿ ಶಕ್ರೋ ವರ್ಷತಿ ಭಾರತ ॥೩೮॥

ಪ್ರಾಣಗಳಿಗೆ ಮಂಗಳಕರನಾದ ವಾಯುವು ಮೇಘಗಳಲ್ಲಿ ನೀರನ್ನು ತಂದಿಡುತ್ತಾನೆ. ಎಲೈ ಭಾರತನೇ, ಮೇಘದಲ್ಲಿರುವ ನೀರನ್ನು ಇಂದ್ರನು ಮಳೆಯ ರೂಪದಲ್ಲಿ ಸುರಿಸುತ್ತಾನೆ.

ಆದತ್ತೇ ಚ ರಸಂ ಭೌಮಮಾದಿತ್ಯಃ ಸ್ವಗಭಸ್ತಿಭಿಃ ।
ವಾಯುರಾದಿತ್ಯತಸ್ತಾಂಶ್ಚ ರಸಾನ್ ದೇವಃ ಪ್ರವರ್ಷತಿ ॥೩೯॥

ಸೂರ್ಯನು ತನ್ನ ಕಿರಣಗಳಿಂದ ಭೂಮಿಯ ರಸವನ್ನು ಹೀರುತ್ತಾನೆ. ವಾಯುವು ಆದಿತ್ಯನಿಂದ ಆ ರಸವನ್ನು ತೆಗೆದುಕೊಂಡು ಮಳೆಯಾಗಿ ಸುರಿಸುತ್ತಾನೆ.

ತದ್ ಯದಾ ಮೇಘತೋ ವಾರಿ ಪತಿತಂ ಭವತಿ ಕ್ಷಿತೌ ।
ತದಾ ವಸುಮತೀ ದೇವೀ ಸ್ನಿಗ್ಧಾ ಭವತಿ ಭಾರತ ॥೪೦॥

ಎಲೈ ಭಾರತನೇ, ಮೇಘಗಳಿಂದ ಜಲವು ಭೂಮಿಯ ಮೇಲೆ ಬಿದ್ದಾಗ ಭೂದೇವಿಯು ಮೃದುವಾಗುತ್ತಾಳೆ.

ತತಃ ಸಸ್ಯಾನಿ ರೋಹಂತಿ ಯೇನ ವರ್ತಯತೇ ಜಗತ್ ।
ಮಾಂಸಮೇದೋಸ್ಥಿಶುಕ್ರಾಣಾಂ ಪ್ರಾದುರ್ಭಾವಸ್ತತಃ ಪುನಃ ॥೪೧॥

ಅದರಿಂದ ಸಸ್ಯಗಳು ಬೆಳೆಯುತ್ತವೆ. ಅದರಿಂದ ಜಗತ್ತು ಮುಂದೆ ಸಾಗುತ್ತದೆ. ಮಾಂಸ, ಮೇದಸ್ಸು, ಅಸ್ಥಿ, ಶುಕ್ರ ಇದೆಲ್ಲದರ ಉತ್ಪತ್ತಿಯೂ ಅನ್ನದಿಂದಲೇ ಆಗುತ್ತದೆ.

ಸಂಭವಂತಿ ತತಃ ಶುಕ್ರಾತ್ ಪ್ರಾಣಿನಃ ಪೃಥಿವೀಪತೇ ।
ಅಗ್ನೀಷೋಮೌ ಹಿ ತಚ್ಛುಕ್ರಂ ಪ್ರಜನಃ ಪುಷ್ಯತಶ್ಚ ಹ ॥೪೨॥

ಎಲೈ ರಾಜನೇ, ಶುಕ್ರದಿಂದ ಪ್ರಜೆಗಳು ಜನಿಸುತ್ತಾರೆ. ಅಗ್ನಿ ಮತ್ತು ಚಂದ್ರರು ಆ ಶುಕ್ರವನ್ನು ಉತ್ಪತ್ತಿ ಮಾಡುತ್ತಾರೆ. ಅನ್ನದಿಂದ ಪುಷ್ಟನಾದವನಿಗೆ ಸಂತತಿ ಉಂಟಾಗುವುದಷ್ಟೆ?

ಏವಮನ್ನಂ ಚ ಸೂರ್ಯಶ್ಚ ಪವನಃ ಶುಕ್ರಮೇವ ಚ ।
ಏಕ ಏವ ಸ್ಮೃತೋ ರಾಶಿರ್ಯತೋ ಭೂತಾನಿ ಜಜ್ಞಿರೇ ॥೪೩॥

ಹೀಗೆ ಅನ್ನ, ಸೂರ್ಯ, ವಾಯು ಮತ್ತು ಶುಕ್ರ (ವೀರ್ಯ) ಎಲ್ಲವೂ ಒಂದೇ ಗುಂಪಿಗೆ ಸೇರಿದವು. ಅವುಗಳಿಂದ ಪ್ರಾಣಿಗಳು ಜನಿಸುತ್ತವೆ.

ಪ್ರಾಣಾನ್ ದದಾತಿ ಭೂತಾನಾಂ ತೇಜಶ್ಚ ಭರತರ್ಷಭ ।
ಗೃಹಮಭ್ಯಾಗತಾಯಾಶು ಯೋ ದದ್ಯಾದನ್ನಮರ್ಥಿನೇ ॥೪೪॥

ಎಲೈ ಭರತಶ್ರೇಷ್ಠನೇ, ಯಾವನು ಮನೆಗೆ ಬಂದು ಬೇಡುವವನಿಗೆ ಅನ್ನವನ್ನು ಕೊಡುತ್ತಾನೆಯೋ ಅವನು ಜೀವರಿಗೆ ಪ್ರಾಣಗಳನ್ನೂ, ತೇಜಸ್ಸನ್ನೂ ಕೊಡುತ್ತಾನೆ.

ಭೀಷ್ಮಃ

ನಾರದೇನೈವಮುಕ್ತೋಽಹಮದಾಮನ್ನಂ ಸದಾ ನೃಪ ।
ಅನಸೂಯುಸ್ತ್ವಮಪ್ಯನ್ನಂ ತಸ್ಮಾದ್ ದೇಹಿ ಗತಜ್ವರಃ ॥೪೫॥

ಭೀಷ್ಮ– ನಾರದರಿಂದ ಹೀಗೆ ಹೇಳಲ್ಪಟ್ಟ ನಾನು ಎಲೈ ರಾಜನೇ, ಯಾವಾಗಲೂ ಯಾವ ಅಸೂಯೆಯೂ ಇಲ್ಲದೆ ಅನ್ನದಾನವನ್ನು ಮಾಡಿದೆ. ಆದ್ದರಿಂದ ನೀನೂ ಸಹ ನಿಶ್ಶಂಕೆಯಿಂದ ಅನ್ನದಾನವನ್ನು ಮಾಡುವವನಾಗು.

ದತ್ತ್ವಾ ತ್ವನ್ನಂ ವಿಧಿವದ್ ರಾಜನ್ ವಿಪ್ರೇಭ್ಯಸ್ತ್ವಮಪಿ ಪ್ರಭೋ ।
ಯಥಾವದನುರೂಪೇಭ್ಯಸ್ತತಃ ಸ್ವರ್ಗಮವಾಪ್ಸ್ಯಸಿ ॥೪೬॥

ಎಲೈ ರಾಜನೇ, ಪ್ರಭುವೇ, ಅನುರೂಪರಾದ ಬ್ರಾಹ್ಮಣರಿಗೆ ವಿಧಿವತ್ತಾಗಿ ಅನ್ನದಾನವನ್ನು ಮಾಡಿ ನೀನು ಅನಂತರ ಸ್ವರ್ಗವನ್ನು ಹೊಂದುವಿ.

ಅನ್ನದಾನಾ ಹಿ ಯೇ ಲೋಕಾಸ್ತಾಂಸ್ತ್ವಂ ಶೃಣು ನರಾಧಿಪ ।
ಭವನಾನಿ ಪ್ರಕಾಶಂತೇ ದಿವಿ ತೇಷಾಂ ಮಹಾತ್ಮನಾಮ್ ।
ನಾನಾಸಂಸ್ಥಾನರೂಪಾಣಿ ನಾನಾಸ್ತಂಭಾನ್ವಿತಾನಿ ಚ ॥೪೭॥

ಚಂದ್ರಮಂಡಲಶುಭ್ರಾಣಿ ಕಿಂಕಿಣೀಜಾಲವಂತಿ ಚ ।
ತರುಣಾದಿತ್ಯವರ್ಣಾನಿ ಸ್ಥಾವರಾಣಿ ಚರಾಣಿ ಚ ॥೪೮॥

ಎಲೈ ನರಾಧಿಪನೇ, ಅನ್ನದಾತರಿಗೆ ಉಂಟಾಗುವ ಲೋಕಗಳನ್ನು ಕೇಳು. ಆ ಮಹಾತ್ಮರ ಭವನಗಳು ಸ್ವರ್ಗದಲ್ಲಿ ಶೋಭಿಸುತ್ತವೆ. ಅವು ಅನೇಕ ವಿಧವಾದ ಆಕಾರ, ರೂಪ ಮತ್ತು ನಾನಾ ಸ್ತಂಭಗಳಿಂದ ಕೂಡಿರುತ್ತವೆ. ಚಂದ್ರಮಂಡಲದಂತೆ ಶುಭ್ರವಾಗಿ, ಅನೇಕ ಕಿಂಕಿಣಿಗಳ ಜಾಲದಿಂದ ಆವೃತವಾಗಿ, ಉದಯಿಸುವ ಸೂರ್ಯನ ಬಣ್ಣವನ್ನು ಹೊಂದಿ, ಚಲಿಸಲೂ ಮತ್ತು ಚಲಿಸದಿರಲೂ ಸಮರ್ಥವಾಗಿರುತ್ತವೆ.

ಅನೇಕಶತಭೌಮಾನಿ ಸಾಂತರ್ಜಲವನಾನಿ ಚ ।
ವೈಡೂರ್ಯಾರ್ಕಪ್ರಕಾಶಾನಿ ರೌಪ್ಯರುಗ್ಮಮಯಾನಿ ಚ ॥೪೯॥

ಸರ್ವಕಾಮಫಲಾಶ್ಚಾಪಿ ವೃಕ್ಷಾ ಭವನಸಂಸ್ಥಿತಾಃ ।
ವಾಪ್ಯೋ ವೀಥ್ಯಃ ಸಭಾಃ ಕೂಪಾ ದೀರ್ಘಿಕಾಶ್ಚೈವ ಸರ್ವಶಃ ॥೫೦॥

ಘೋಷವಂತಿ ಚ ಯಾನಾನಿ ಯುಕ್ತಾನ್ಯಥ ಸಹಸ್ರಶಃ ।
ಭಕ್ಷ್ಯಭೋಜ್ಯಮಯಾಃ ಶೈಲಾ ವಾಸಾಂಸ್ಯಾಭರಣಾನಿ ಚ ॥೫೧॥

ಕ್ಷೀರಂ ಸ್ರವಂತ್ಯಃ ಸರಿತಸ್ತಥಾ ಚೈವಾನ್ನಪರ್ವತಾಃ ।
ಪ್ರಾಸಾದಾಃ ಪಾಂಡರಾಭ್ರಾಭಾಃ ಶಯ್ಯಾಶ್ಚ ಕನಕೋಜ್ಜ್ವಲಾಃ ।
ತಾನನ್ನದಾಃ ಪ್ರಪದ್ಯಂತೇ ತಸ್ಮಾದನ್ನಪ್ರದೋ ಭವ ॥೫೨॥

ಆ ಭವನಗಳು ಸುವರ್ಣರಜತಮಯವಾಗಿದ್ದು, ಅಂತರ್ಜಲ ಮತ್ತು ವನಗಳಿರುವ ನೂರಾರು ಭೂಪ್ರದೇಶಗಳಿಂದ ಸುತ್ತುವರಿಯಲ್ಪಟ್ಟು ವೈಢೂರ್ಯ ಮತ್ತು ಸೂರ್ಯನ ಪ್ರಕಾಶವನ್ನು ಹೊಂದಿರುತ್ತವೆ. ಆ ಗೃಹದ ಸಮೀಪದಲ್ಲಿರುವ ವೃಕ್ಷಗಳು ಕಾಮಿತವಾದ ಸರ್ವಪದಾರ್ಥಗಳನ್ನೂ ಕೊಡುತ್ತವೆ. ವಾಪಿಗಳು, ವೀಥಿಗಳು, ಸಭೆಗಳು, ಕೂಪಗಳು ಮತ್ತು ದೀರ್ಘಿಕೆಗಳು (ಸಣ್ಣ ಸರೋವರಗಳು) ಎಲ್ಲ ಕಡೆಗಳಲ್ಲಿಯೂ ಇರುತ್ತವೆ. ಒಳ್ಳೆಯ ಘೋಷದಿಂದ ಕೂಡಿರುವ ಸಹಸ್ರಾರು ವಾಹನಗಳಿರುತ್ತವೆ. ಭಕ್ಷ್ಯ-ಭೋಜ್ಯಮಯವಾದ ಪರ್ವತಗಳು, ವಸ್ತ್ರಗಳು ಮತ್ತು ಆಭರಣಗಳು ಇರುತ್ತವೆ. ಕ್ಷೀರವಾಹಿನಿಯಾದ ನದಿಗಳು, ಅನ್ನಪರ್ವತಗಳು, ಶ್ವೇತಾಭ್ರವರ್ಣದ ಪ್ರಾಸಾದಗಳು, ಕನಕೋಜ್ವಲವಾದ ಶಯನಗಳು ಇರುತ್ತವೆ. ಅನ್ನದಾತನು ಇವೆಲ್ಲವನ್ನೂ ಪಡೆಯುತ್ತಾನೆ. ಆದ್ದರಿಂದ ನೀನು ಅನ್ನದಾನವನ್ನು ಮಾಡುವವನಾಗು.

ಏತೇ ಲೋಕಾಃ ಪುಣ್ಯಕೃತಾಮನ್ನದಾನಾಂ ಮಹಾತ್ಮನಾಮ್ ।
ತಸ್ಮಾದನ್ನಂ ವಿಶೇಷೇಣ ದಾತವ್ಯಂ ಮಾನವೈರ್ಭುವಿ ॥೫೩॥

ಇವು ಮಹಾತ್ಮರಾದ ಅನ್ನದಾತರಿಗೆ ಪುಣ್ಯದಿಂದ ಉಂಟಾಗುವ ಲೋಕಗಳು. ಆದ್ದರಿಂದ ಭೂಮಿಯಲ್ಲಿ ಮಾನವರು ವಿಶೇಷವಾಗಿ ಅನ್ನದಾನವನ್ನು ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಅನ್ನದಾನಪ್ರಶಂಸಾ ನಾಮ
ತ್ರಿನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ನಾಲ್ಕನೆಯ ಅಧ್ಯಾಯ

ನಕ್ಷತ್ರಯೋಗದಲ್ಲಿ ದಾನಫಲ

ಯುಧಿಷ್ಠಿರಃ

ಶ್ರುತಂ ಮೇ ಭವತೋ ವಾಕ್ಯಮನ್ನದಾನಸ್ಯ ಯೋ ವಿಧಿಃ ।
ನಕ್ಷತ್ರಯೋಗಸ್ಯೇದಾನೀಂ ದಾನಕಲ್ಪಂ ಬ್ರವೀಹಿ ಮೇ ॥೧॥

ಯುಧಿಷ್ಠಿರ– ಅನ್ನದಾನದ ವಿಷಯದಲ್ಲಿ ನಿನ್ನ ಮಾತನ್ನು ನಾನು ಕೇಳಿದೆನು. ನಕ್ಷತ್ರಯೋಗಗಳಲ್ಲಿ ದಾನ ಮಾಡುವ ವಿಧಿಗಳನ್ನು ಈಗ ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ದೇವಕ್ಯಾಶ್ಚೈವ ಸಂವಾದಂ ದೇವರ್ಷೇರ್ನಾರದಸ್ಯ ಚ ॥೨॥

ಭೀಷ್ಮ– ಈ ವಿಷಯದಲ್ಲಿಯೂ ಸಹ ದೇವಕಿಗೂ ಮತ್ತು ನಾರದರಿಗೂ ನಡೆದ ಸಂವಾದರೂಪವಾದ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ದ್ವಾರಕಾಮನುಸಂಪ್ರಾಪ್ತಂ ನಾರದಂ ದೇವದರ್ಶನಮ್ ।
ಪಪ್ರಚ್ಛೈನಂ ತತಃ ಪ್ರಶ್ನಂ ದೇವಕೀ ಧರ್ಮದರ್ಶಿನೀ ॥೩॥

ದೇವದರ್ಶನರಾದ ನಾರದರು ದ್ವಾರಕೆಗೆ ಬಂದಾಗ ಧರ್ಮದರ್ಶಿನಿಯಾದ ದೇವಕಿಯು ಅವರನ್ನು ಈ ಪ್ರಶ್ನೆಯನ್ನು ಕೇಳಿದಳು.

ತಸ್ಯಾಃ ಸಂಪೃಚ್ಛಮಾನಾಯಾ ದೇವರ್ಷಿರ್ನಾರದಸ್ತದಾ ।
ಆಚಷ್ಟ ವಿಧಿವತ್‌ಸರ್ವಂ ಯತ್‌ತಚ್ಛೃಣು ವಿಶಾಂಪತೇ ॥೪॥

ಅವಳ ಪ್ರಶ್ನೆಗೆ ಉತ್ತರವಾಗಿ ದೇವರ್ಷಿಗಳಾದ ನಾರದರು ವಿಧಿಯುಕ್ತವಾಗಿ ಎಲ್ಲವನ್ನೂ ಹೇಳಿದರು. ಎಲೈ ರಾಜನೇ, ಅದನ್ನು ನೀನು ಕೇಳು.

ನಾರದಃ

ಕೃತ್ತಿಕಾಸು ಮಹಾಭಾಗೇ ಪಾಯಸೇನ ಸಸರ್ಪಿಷಾ ।
ಸಂತರ್ಪ್ಯ ಬ್ರಾಹ್ಮಣಾನ್ ಸಾಧೂಲ್ಲೋಕಾನಾಪ್ನೋತ್ಯನುತ್ತಮಾನ್ ॥೫॥

ನಾರದ– ಎಲೈ ಮಹಾನುಭಾವಳೇ, ಕೃತ್ತಿಕಾ ನಕ್ಷತ್ರದಲ್ಲಿ ಘೃತಮಿಶ್ರಿತವಾದ ಪಾಯಸದಿಂದ ಸಜ್ಜನರಾದ ಬ್ರಾಹ್ಮಣರನ್ನು ತೃಪ್ತಿಪಡಿಸಿ ಶ್ರೇಷ್ಠವಾದ ಲೋಕವನ್ನು ಹೊಂದುತ್ತಾನೆ.

ರೋಹಿಣ್ಯಾಂ ಪ್ರಥಿತೈರ್ಮಾಂಸೈರ್ಮಾಷೈರನ್ನೇನ ಸರ್ಪಿಷಾ ।
ಪಯೋಽನುಪಾನಂ ದಾತವ್ಯಮಾನೃಣ್ಯಾರ್ಥಂ ದ್ವಿಜಾತಯೇ ॥೬॥

ರೋಹಿಣಿ ನಕ್ಷತ್ರದಲ್ಲಿ ಬ್ರಾಹ್ಮಣರಿಗೆ ಋಣಮುಕ್ತನಾಗುವ ಸಲುವಾಗಿ ಪ್ರಸಿದ್ಧವಾದ ಮಾಂಸವನ್ನು, ಉದ್ದನ್ನು, ಘೃತ ಸಹಿತವಾದ ಅನ್ನವನ್ನು, ಕ್ಷೀರಾನುಪಾನವನ್ನು ಕೊಡಬೇಕು.

ದೋಗ್ಧ್ರೀಂ ದತ್ತ್ವಾ ಸವತ್ಸಾಂ ತು ನಕ್ಷತ್ರೇ ಸೋಮದೈವತೇ ।
ಗಚ್ಛಂತಿ ಮಾನುಷಾಲ್ಲೋಕಾತ್ ಸ್ವರ್ಗಲೋಕಮನುತ್ತಮಮ್ ॥೭॥

ಸೋಮದೇವತವಾದ ಮೃಗಶಿರಾ ನಕ್ಷತ್ರದಲ್ಲಿ ಕರುವಿನಿಂದ ಸಹಿತವಾದ ಹಾಲು ಕರೆಯುವ ಹಸುವನ್ನು ದಾನ ಮಾಡಿ ಮನುಷ್ಯಲೋಕವನ್ನೂ, ಅನಂತರ ಶ್ರೇಷ್ಠವಾದ ಸ್ವರ್ಗಲೋಕವನ್ನೂ ಹೊಂದುತ್ತಾರೆ.

ಆರ್ದ್ರಾಯಾಂ ಕೃಸರಂ ದತ್ತ್ವಾ ತೈಲಮಿಶ್ರಮುಪೋಷಿತಃ ।
ನರಸ್ತರತಿ ದುರ್ಗಾಣಿ ಕ್ಷುರಧಾರಾಂಶ್ಚ ಪರ್ವತಾನ್ ॥೮॥

ಆರ್ದ್ರಾ ನಕ್ಷತ್ರದಲ್ಲಿ ಉಪವಾಸವನ್ನು ಮಾಡಿ ತೈಲಮಿಶ್ರಿತವಾದ ಚಿತ್ರಾನ್ನವನ್ನು ದಾನ ಮಾಡುವ ಮನುಷ್ಯನು ಕ್ಷುರಧಾರೆಯಂತೆ ತೀಕ್ಷ್ಣವಾದ, ಪರ್ವತಪ್ರಾಯವಾದ ಕಷ್ಟಗಳನ್ನು ದಾಟುತ್ತಾರೆ.

ಪೂಪಾನ್ ಪುನರ್ವಸೌ ದತ್ತ್ವಾ ತಥೈವಾನ್ನಾನಿ ಶೋಭನೇ ।
ಯಶಸ್ವೀ ರೂಪಸಂಪನ್ನೋ ಬಹ್ವನ್ನೇ ಜಾಯತೇ ಕುಲೇ ॥೯॥

ಎಲೈ ಶೋಭನೆಯೇ, ಪುನರ್ವಸು ನಕ್ಷತ್ರದಲ್ಲಿ ಅಪೂಪಗಳನ್ನು ಮತ್ತು ಅನ್ನಗಳನ್ನು ದಾನ ಮಾಡಿದವನು ಕೀರ್ತಿವಂತನೂ, ರೂಪಸಂಪನ್ನನೂ ಆಗಿ ಸಮೃದ್ಧವಾದ ಅನ್ನವಿರುವ ಕುಲದಲ್ಲಿ ಜನಿಸುತ್ತಾನೆ.

ಪುಷ್ಯೇ ತು ಕನಕಂ ದತ್ತ್ವಾ ಕೃತಂ ಚಾಕೃತಮೇವ ಚ ।
ಅನಾಲೋಕೇಷು ಲೋಕೇಷು ಸೋಮವತ್ ಸ ವಿರಾಜತೇ ॥೧೦॥

ಪುಷ್ಯ ನಕ್ಷತ್ರದಲ್ಲಿ ಆಭರಣರೂಪವಾದ ಅಥವಾ ಗಟ್ಟಿಯ ರೂಪವಾದ ಸುವರ್ಣವನ್ನು ದಾನ ಮಾಡುವವನು ಪ್ರಕಾಶರಹಿತವಾದ ಲೋಕಗಳಲ್ಲಿಯೂ ಚಂದ್ರನಂತೆ ಪ್ರಕಾಶಯುಕ್ತನಾಗಿ ಶೋಭಿಸುತ್ತಾನೆ.

ಆಶ್ಲೇಷಾಯಾಂ ತು ಯೋ ರೂಪ್ಯಮೃಷಭಂ ವಾ ಪ್ರಯಚ್ಛತಿ ।
ಸ ಸರ್ವಭಯನಿರ್ಮುಕ್ತಃ ಶಾತ್ರವಾನಧಿತಿಷ್ಠತಿ ॥೧೧॥

ಆಶ್ಲೇಷಾ ನಕ್ಷತ್ರದಲ್ಲಿ ಯಾವನು ರಜತವನ್ನಾಗಲೀ, ವೃಷಭವನ್ನಾಗಲೀ ದಾನ ಮಾಡುತ್ತಾನೆಯೋ ಅವನು ಎಲ್ಲ ಭಯಗಳಿಂದಲೂ ನಿರ್ಮುಕ್ತನಾಗಿ ಶತ್ರುಗಳನ್ನು ಮೆಟ್ಟಿನಿಲ್ಲುತ್ತಾನೆ.

ಮಘಾಸು ತಿಲಪೂರ್ಣಾನಿ ವರ್ಧಮಾನಾನಿ ಮಾನವಃ ।
ಪ್ರದಾಯ ಪುತ್ರಪಶುಮಾನಿಹ ಪ್ರೇತ್ಯ ಚ ಮೋದತೇ ॥೧೨॥

ಮಘಾ ನಕ್ಷತ್ರದಲ್ಲಿ ತಿಲಪೂರ್ಣವಾದ ಪಾತ್ರೆಗಳನ್ನು ಕೊಡುವ ಮನುಷ್ಯನು ಈ ಲೋಕದಲ್ಲಿ ಪುತ್ರ-ಪಶುಗಳನ್ನು ಹೊಂದಿ ಮರಣಾನಂತರದಲ್ಲಿ ಸ್ವರ್ಗದಲ್ಲಿ ಸುಖ ಪಡುತ್ತಾನೆ.

ಫಲ್ಗುನೀಪೂರ್ವಸಮಯೇ ಬ್ರಾಹ್ಮಣಾನಾಮುಪೋಷಿತಃ ।
ಭಕ್ಷಾನ್ ಫಾಣಿತಸಂಯುಕ್ತಾನ್ ದತ್ತ್ವಾ ಸೌಭಾಗ್ಯಮೃಚ್ಛತಿ ॥೧೩॥

ಪೂರ್ವಫಲ್ಗುನೀ ನಕ್ಷತ್ರದಲ್ಲಿ ಉಪವಾಸವನ್ನು ಮಾಡಿ ಬ್ರಾಹ್ಮಣರಿಗೆ ಗುಡ ಮಿಶ್ರಿತವಾದ ಭಕ್ಷಗಳನ್ನು ಕೊಡುವವನು ಸೌಭಾಗ್ಯವನ್ನು ಹೊಂದುತ್ತಾನೆ.

ಘೃತಕ್ಷೀರಸಮಾಯುಕ್ತಂ ವಿಧಿವತ್ ಷಷ್ಟಿಕೌದನಮ್ ।
ಉತ್ತರಾವಿಷಯೇ ದತ್ತ್ವಾ ಸ್ವರ್ಗಲೋಕೇ ಮಹೀಯತೇ ॥೧೪॥

ಉತ್ತರಾ ನಕ್ಷತ್ರದಲ್ಲಿ ಘೃತ-ಕ್ಷೀರ ಮಿಶ್ರಿತವಾದ ಜವೆಗೋಧಿಯ ಅನ್ನವನ್ನು ಕೊಡುವವನು ಸ್ವರ್ಗಲೋಕದಲ್ಲಿ ಶೋಭಿಸುತ್ತಾನೆ (ಲಕ್ಷಾಲಂಕಾರ).

ಯದ್ಯತ್ ಪ್ರದೀಯತೇ ದಾನಮುತ್ತರಾವಿಷಯೇ ನರೈಃ ।
ಮಹಾಫಲಮನಂತಂ ಚ ಭವತೀತಿ ವಿನಿಶ್ಚಯಃ ॥೧೫॥

ಉತ್ತರಾ ನಕ್ಷತ್ರದಲ್ಲಿ ಮನುಷ್ಯನು ಯಾವ ಯಾವ ದಾನವನ್ನು ಕೊಡುತ್ತಾನೆಯೋ ಅವೆಲ್ಲವೂ ಅನಂತವಾದ ಮಹಾಫಲವುಳ್ಳವುಗಳಾಗುತ್ತವೆ ಎಂಬುದು ನಿಶ್ಚಿತವಾದುದು.

ಹಸ್ತೇ ಹಸ್ತಿರಥಂ ದತ್ತ್ವಾ ಚತುರ್ಯುಕ್ತಮುಪೋಷಿತಃ ।
ಪ್ರಾಪ್ನೋತಿ ಪರಮಾಲ್ಲೋಕಾನ್ ಪುಣ್ಯಕಾಮಸಮನ್ವಿತಾನ್ ॥೧೬॥

ಹಸ್ತಾ ನಕ್ಷತ್ರದಲ್ಲಿ ಉಪವಾಸವನ್ನು ಮಾಡಿ ನಾಲ್ಕು ವಾಹಗಳಿಂದ ಕೂಡಿದ ಹಸ್ತಿರಥವನ್ನು ದಾನ ಮಾಡಿದವನು ಪುಣ್ಯಕಾಮಸಮನ್ವಿತವಾದ ಶ್ರೇಷ್ಠ ಲೋಕವನ್ನು ಹೊಂದುತ್ತಾನೆ.

ಚಿತ್ರಾಯಾಮೃಷಭಂ ದತ್ತ್ವಾ ಪುಣ್ಯಾನ್ ಗಂಧಾಂಶ್ಚ ಭಾರತ ।
ಚರತ್ಯಪ್ಸರಸಾಂ ಲೋಕೇ ರಮತೇ ನಂದನೇ ತಥಾ ॥೧೭॥

ಎಲೈ ಭಾರತನೇ, ಚಿತ್ತಾ ನಕ್ಷತ್ರದಲ್ಲಿ ವೃಷಭವನ್ನು ಮತ್ತು ಸುವರ್ಣವನ್ನು ದಾನ ಮಾಡುವವನು ಅಪ್ಸರೆಯರ ಲೋಕದಲ್ಲಿ ಸಂಚರಿಸಿ ನಂದನವನದಲ್ಲಿ ಸಂತೋಷ ಪಡುತ್ತಾನೆ.

ಸ್ವಾತಾವಥ ಧನಂ ದತ್ತ್ವಾ ಯದಿಷ್ಟತಮಮಾತ್ಮನಃ ।
ಪ್ರಾಪ್ನೋತಿ ಲೋಕಾನ್ ಸ ಶುಭಾನಿಹ ಚೈವ ಮಹದ್ಯಶಃ ॥೧೮॥

ಸ್ವಾತಿ ನಕ್ಷತ್ರದಲ್ಲಿ ತನಗೆ ಇಷ್ಟವಾದ ಧನವನ್ನು ಕೊಡುವ ಮನುಷ್ಯನು ಈ ಲೋಕದಲ್ಲಿ ದೊಡ್ಡ ಕೀರ್ತಿಯನ್ನೂ ಮತ್ತು ಮರಣಾನಂತರದಲ್ಲಿ ಶುಭಲೋಕವನ್ನೂ ಪಡೆಯುತ್ತಾನೆ.

ವಿಶಾಖಾಯಾಮನಡ್ವಾಹಂ ಧೇನುಂ ದತ್ತ್ವಾ ಚ ದುಗ್ಧದಾಮ್ ।
ಸಪ್ರಾಸಂಗಂ ಚ ಶಕಟಂ ಸಧಾನ್ಯಂ ವಸ್ತ್ರಸಂಯುತಮ್ ॥೧೯॥

ಪಿತೄನ್ ದೇವಾಂಶ್ಚ ಪ್ರೀಣಾತಿ ಪ್ರೇತ್ಯ ಚಾನಂತ್ಯಮಶ್ನುತೇ ।
ನ ಚ ದುರ್ಗಾಣ್ಯವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೨೦॥

ವಿಶಾಖಾ ನಕ್ಷತ್ರದಲ್ಲಿ ಎತ್ತನ್ನೂ, ಹಾಲನ್ನು ಕರೆಯುವ ಹಸುವನ್ನೂ, ಧಾನ್ಯ ಸಹಿತವಾದ, ವಸ್ತ್ರದಿಂದ ಆವೃತವಾದ, ಪಾತ್ರೆಗಳಿಂದ ಕೂಡಿದ, ಗಾಡಿಯನ್ನು ದಾನ ಮಾಡುವವನು ಪಿತೃಗಳನ್ನೂ ಮತ್ತು ದೇವತೆಗಳನ್ನೂ ಸಂತೋಷಪಡಿಸುತ್ತಾನೆ. ಮರಣಾನಂತರದಲ್ಲಿ ಅಂತ್ಯವಿಲ್ಲದ ಶುಭಲೋಕವನ್ನು ಪಡೆಯುತ್ತಾನೆ. ಕಷ್ಟಗಳನ್ನು ಹೊಂದುವುದಿಲ್ಲ. ಸ್ವರ್ಗಲೋಕಕ್ಕೆ ಹೋಗುತ್ತಾನೆ.

ದತ್ತ್ವಾ ಯಥೋಕ್ತಂ ವಿಪ್ರೇಭ್ಯೋ ವೃತ್ತಿಮಿಷ್ಟಾಂ ಸ ವಿಂದತಿ ।
ನರಕಾದೀಂಶ್ಚ ಸಂಕ್ಲೇಶಾನ್ ನಾಪ್ನೋತೀತಿ ವಿನಿಶ್ಚಯಃ ॥೨೧॥

ವಿಧಿಯುಕ್ತವಾಗಿ ಬ್ರಾಹ್ಮಣರಿಗೆ ದಾನ ಮಾಡುವವನು ತನಗೆ ಇಷ್ಟವಾದ ವೃತ್ತಿಯನ್ನು ಹೊಂದುತ್ತಾನೆ. ನರಕಾದಿ ದುಃಖವನ್ನು ಅನುಭವಿಸುವುದಿಲ್ಲ ಎಂಬುದು ನಿಶ್ಚಿತವಾದುದು.

ಅನುರಾಧಾಸು ಪ್ರಾವಾರಂ ವಸ್ತ್ರಾಂತರಮುಪೋಷಿತಃ ।
ದತ್ತ್ವಾ ಯುಗಶತಂ ಚಾಪಿ ನರಃ ಸ್ವರ್ಗೇ ಮಹೀಯತೇ ॥೨೨॥

ಅನುರಾಧ ನಕ್ಷತ್ರದಲ್ಲಿ ಉಪವಾಸವನ್ನು ಮಾಡಿ ಅಂತರವಸ್ತ್ರಸಹಿತವಾದ ವಸ್ತ್ರವನ್ನು ಕೊಡುವವನು ಸ್ವರ್ಗಲೋಕದಲ್ಲಿ ನೂರು ಯುಗಗಳ ಕಾಲ ಸತ್ಕರಿಸಲ್ಪಡುತ್ತಾನೆ.

ಕಾಲಶಾಕಂ ತು ವಿಪ್ರೇಭ್ಯೋ ದತ್ತ್ವಾ ಮರ್ತ್ಯಃ ಸಮೂಲಕಮ್ ।
ಜ್ಯೇಷ್ಠಾಯಾಮೃದ್ಧಿಮಿಷ್ಟಾಂ ವೈ ಗತಿಮಿಷ್ಟಾಂ ಚ ವಿಂದತಿ ॥೨೩॥

ಜ್ಯೇಷ್ಠಾ ನಕ್ಷತ್ರದಲ್ಲಿ ಗೆಡ್ಡೆ-ಗೆಣಸುಗಳಿಂದ ಸಹಿತವಾದ ಕಾಲಶಾಕವನ್ನು ಬ್ರಾಹ್ಮಣರಿಗೆ ದಾನ ಮಾಡುವ ಮನುಷ್ಯನು ತನಗೆ ಇಷ್ಟವಾದ ಸಮೃದ್ಧಿಯನ್ನು ಮತ್ತು ಇಷ್ಟವಾದ ಗತಿಯನ್ನು ಹೊಂದುತ್ತಾನೆ.

ಮೂಲೇ ಮೂಲಫಲಂ ದತ್ತ್ವಾ ಬ್ರಾಹ್ಮಣೇಭ್ಯಃ ಸಮಾಹಿತಃ ।
ಪಿತೄನ್ ಪ್ರೀಣಯತೇ ಚಾಪಿ ಗತಿಮಿಷ್ಟಾಂ ಚ ಗಚ್ಛತಿ ॥೨೪॥

ಮೂಲಾನಕ್ಷತ್ರದಲ್ಲಿ ಬ್ರಾಹ್ಮಣರಿಗೆ ಸಮಾಧಾನದಿಂದ ಗೆಡ್ಡೆ-ಗೆಣಸುಗಳನ್ನು ಅಥವಾ ಫಲಗಳನ್ನು ಕೊಡುವ ಮಾನವನು ಪಿತೃಗಳನ್ನು ಸಂತೋಷಪಡಿಸುತ್ತಾನೆ ಮತ್ತು ಇಷ್ಟವಾದ ಗತಿಯನ್ನು ಹೊಂದುತ್ತಾನೆ.

ಅಥ ಪೂರ್ವಾಸ್ವಾಷಾಢಾಸು ದಧಿಪಾತ್ರಾಣ್ಯುಪೋಷಿತಃ ।
ಕುಲವೃತ್ತೋಪಸಂಪನ್ನೇ ಬ್ರಾಹ್ಮಣೇ ವೇದಪಾರಗೇ ।
ಪ್ರದಾಯ ಜಾಯತೇ ಪ್ರೇತ್ಯ ಕುಲೇ ಸುಬಹುಗೋಕುಲೇ ॥೨೫॥

ಅನಂತರ ಪೂರ್ವಾಷಾಢಾ ನಕ್ಷತ್ರದಲ್ಲಿ ಉಪವಾಸವನ್ನು ಮಾಡಿ ದಧಿಪಾತ್ರೆಗಳನ್ನು ಕುಲವೃತ್ತ ಸಂಪನ್ನನೂ, ವೇದಪಾರಂಗತನೂ ಆದ ಬ್ರಾಹ್ಮಣನಿಗೆ ದಾನವನ್ನು ಮಾಡಿ ಮರಣವನ್ನು ಹೊಂದಿದ ಮೇಲೆ ಬಹುಗೋಸಮೂಹವಿರುವ ಕುಲದಲ್ಲಿ ಜನಿಸುತ್ತಾನೆ.

ಉದಮಂಥಂ ಸಸರ್ಪಿಷ್ಕಂ ಪ್ರಭೂತಮಧುಫಾಣಿತಮ್ ।
ದತ್ತ್ವೋತ್ತರಾಸ್ವಷಾಢಾಸು ಸರ್ವಕಾಮಾನವಾಪ್ನುಯಾತ್ ॥೨೬॥

ಉತ್ತರಾಷಾಢಾ ನಕ್ಷತ್ರದಲ್ಲಿ ಘೃತಸಹಿತವಾದ ಉದಮಂಥವನ್ನು ಬಹಳವಾದ ಜೇನು ಮತ್ತು ಬೆಲ್ಲದ ರಸವನ್ನು ಕೊಟ್ಟವನು ಎಲ್ಲ ಕಾಮಗಳನ್ನೂ ಹೊಂದುತ್ತಾನೆ.

ದುಗ್ಧಂ ತ್ವಭಿಜಿತೇ ಯೋಗೇ ದತ್ತ್ವಾ ಮಧುಘೃತಾಪ್ಲುತಮ್ ।
ಧರ್ಮನಿತ್ಯೋ ಮನೀಷಿಭ್ಯಃ ಸ್ವರ್ಗಲೋಕೇ ಮಹೀಯತೇ ॥೨೭॥

ಅಭಿಜಿತ್ ನಕ್ಷತ್ರದಲ್ಲಿ ಮಧು-ಘೃತಗಳಿಂದ ಪೂರ್ಣವಾಗಿ ಮಿಶ್ರಿತವಾದ ಕ್ಷೀರವನ್ನು ದಾನ ಮಾಡಿದವನು ಧರ್ಮನಿತ್ಯನಾಗಿ ಸ್ವರ್ಗಲೋಕದಲ್ಲಿ ವಿವೇಕಿಗಳಿಂದ ಸತ್ಕರಿಸಲ್ಪಡುತ್ತಾನೆ.

ಶ್ರವಣೇ ಕಂಬಲಂ ದತ್ತ್ವಾ ವಸ್ತ್ರಾಂತರಿತಮೇವ ಚ ।
ಶ್ವೇತೇನ ಯಾತಿ ಯಾನೇನ ಸರ್ವಲೋಕಾನಸಂವೃತಾನ್ ॥೨೮॥

ಶ್ರವಣಾ ನಕ್ಷತ್ರದಲ್ಲಿ ಅಂತರ್ವಸ್ತ್ರ ಸಹಿತವಾದ ಕಂಬಳಿಯನ್ನು ದಾನ ಮಾಡುವವನು ಶ್ವೇತಯಾನದಿಂದ ತೆರೆದಿರುವ ಸರ್ವಲೋಕಗಳಿಗೂ ಹೋಗುತ್ತಾನೆ.

ಗೋಪ್ರಯುಕ್ತಂ ಧನಿಷ್ಠಾಸು ಯಾನಂ ದತ್ತ್ವಾ ಸಮಾಹಿತಃ ।
ವಸ್ತ್ರರಶ್ಮಿಧರಂ ಸದ್ಯಃ ಪ್ರೇತ್ಯ ರಾಜ್ಯಂ ಪ್ರಪದ್ಯತೇ ॥೨೯॥

ಧನಿಷ್ಠಾ ನಕ್ಷತ್ರದಲ್ಲಿ ಗೋವುಗಳು ಎಳೆಯುವ ಹಗ್ಗಗಳನ್ನು ಮತ್ತು ವಸ್ತ್ರವನ್ನು ಹೊಂದಿದ, ಯಾನವನ್ನು ಸಮಾಧಾನದಿಂದ ನೀಡುವವನು ತಕ್ಷಣದಲ್ಲಿಯೇ ಮರಣವನ್ನು ಹೊಂದಿ ರಾಜ್ಯವನ್ನು ಪಡೆಯುತ್ತಾನೆ.

ಗಂಧಾನ್ ಶತಭಿಷಗ್ಯೋಗೇ ದತ್ತ್ವಾ ಸಾಗುರುಚಂದನಾನ್ ।
ಪ್ರಾಪ್ನೋತ್ಯಪ್ಸರಸಾಂ ಲೋಕಾನ್ ಪ್ರೇತ್ಯ ಗಂಧಾಂಶ್ಚ ಶಾಶ್ವತಾನ್ ॥೩೦॥

ಅಗರು ಚಂದನ ಮಿಶ್ರಿತವಾದ ಗಂಧವನ್ನು ಶತಭಿಷಾ ನಕ್ಷತ್ರದಲ್ಲಿ ಕೊಡುವವನು ಮರಣವನ್ನು ಹೊಂದಿದ ಮೇಲೆ ಅಪ್ಸರೆಯರ ಲೋಕವನ್ನು ಮತ್ತು ಸುಗಂಧಗಳನ್ನು ಶಾಶ್ವತವಾಗಿ ಪಡೆಯುತ್ತಾನೆ.

ಪೂರ್ವಭಾದ್ರಪದಾಯೋಗೇ ರಾಜಮಾಷಾನ್ ಪ್ರದಾಯ ತು ।
ಸರ್ವಭಕ್ಷಫಲೋಪೇತಃ ಸ ವೈ ಪ್ರೇತ್ಯ ಸುಖೀ ಭವೇತ್ ॥೩೧॥

ಪೂರ್ವಾಭಾದ್ರ ನಕ್ಷತ್ರದಲ್ಲಿ ರಾಜಮಾಷಗಳನ್ನು (ಹಲಸಂದೆ) ಕೊಡುವವನು ಮರಣವನ್ನು ಹೊಂದಿದ ಮೇಲೆ ಸರ್ವಭಕ್ಷಫಲೋಪೇತನಾಗಿ ಸುಖಿಯಾಗಿರುತ್ತಾನೆ.

ಔರಭ್ರಮುತ್ತರಾಯೋಗೇ ಯಸ್ತು ಮಾಂಸಂ ಪ್ರಯಚ್ಛತಿ ।
ಸ ಪಿತೄನ್ ಪ್ರೀಣಯತಿ ವೈ ಪ್ರೇತ್ಯ ಚಾನಂತ್ಯಮಶ್ನುತೇ ॥೩೨॥

ಉತ್ತರಾಭಾದ್ರ ನಕ್ಷತ್ರದಲ್ಲಿ ಪಶುವಿಶೇಷದ (ಕುರಿಯ) ಮಾಂಸವನ್ನು ಕೊಡುವವನು ಪಿತೃಗಳನ್ನು ಸಂತೋಷಪಡಿಸುತ್ತಾನೆ. ಮರಣವನ್ನು ಹೊಂದಿ ಅನಂತ ಸುಖವನ್ನು ಪಡೆಯುತ್ತಾನೆ.

ಕಾಂಸ್ಯೋಪದೋಹನಾಂ ಧೇನುಂ ರೇವತ್ಯಾಂ ಯಃ ಪ್ರಯಚ್ಛತಿ ।
ಸಾ ಪ್ರೇತ್ಯ ಕಾಮಾನಾದಾಯ ದಾತಾರಮುಪತಿಷ್ಠತಿ ॥೩೩॥

ರೇವತಿ ನಕ್ಷತ್ರದಲ್ಲಿ ಕಂಚಿನ ಪಾತ್ರೆಯಿಂದ ಸಹಿತವಾದ ಧೇನುವನ್ನು ದಾನ ಮಾಡುವವನಿಗೆ ಮರಣಾನಂತರದಲ್ಲಿ ಆ ಧೇನುವು ಅವನಿಗೆ ಇಷ್ಟವಾದ ಸುಖ ಪದಾರ್ಥಗಳನ್ನು ತೆಗೆದುಕೊಂಡು ಅವನ ಬಳಿಗೆ ಬರುತ್ತದೆ.

ರಥಮಶ್ವಸಮಾಯುಕ್ತಂ ದತ್ತ್ವಾ ಶ್ವಿನ್ಯಾಂ ನರೋತ್ತಮಃ ।
ಹಸ್ತ್ಯಶ್ವರಥಸಂಪನ್ನೇ ವರ್ಚಸ್ವೀ ಜಾಯತೇ ಕುಲೇ ॥೩೪॥

ಅಶ್ವಿನೀ ನಕ್ಷತ್ರದಲ್ಲಿ ಅಶ್ವಸಹಿತವಾದ ರಥವನ್ನು ಕೊಡುವ ನರಶ್ರೇಷ್ಠನು ಗಜಾಶ್ವ-ರಥ ಸಂಪನ್ನವಾದ ಕುಲದಲ್ಲಿ ವರ್ಚಸ್ವಿಯಾಗಿ ಜನಿಸುತ್ತಾನೆ.

ಭರಣೀಷು ದ್ವಿಜಾತಿಭ್ಯಸ್ತಿಲಧೇನುಂ ಪ್ರದಾಯ ವೈ ।
ಗಾಃ ಸುಪ್ರಭೂತಾಃ ಪ್ರಾಪ್ನೋತಿ ನರಃ ಪ್ರೇತ್ಯ ಯಶಸ್ತಥಾ ॥೩೫॥

ಭರಣೀ ನಕ್ಷತ್ರದಲ್ಲಿ ಬ್ರಾಹ್ಮಣರಿಗೆ ತಿಲಧೇನುವನ್ನು ಕೊಡುವವನು ಬಹಳ ಗೋವುಗಳನ್ನು ಹೊಂದುತ್ತಾನೆ. ಮರಣವನ್ನು ಹೊಂದಿ ಬಹಳ ಕೀರ್ತಿಯನ್ನು ಪಡೆಯುತ್ತಾನೆ.

ಭೀಷ್ಮಃ

ಇತ್ಯೇಷ ಲಕ್ಷಣೋದ್ದೇಶಃ ಪ್ರೋಕ್ತೋ ನಕ್ಷತ್ರಯೋಗತಃ ।
ದೇವಕ್ಯಾ ನಾರದೇನೇಹ ಸಾ ಸ್ವಸ್ರಾಭ್ಯೋಬ್ರವೀದಿದಮ್ ॥೩೬॥

ಭೀಷ್ಮ- ಇದು ನಾರದರು ದೇವಕಿಗೆ ಹೇಳಿದ ನಕ್ಷತ್ರಯೋಗದಲ್ಲಿ ಮಾಡುವ ದಾನದ ಫಲ. ದೇವಕಿಯು ಇದನ್ನು ತನ್ನ ಸೊಸೆಯರಿಗೆ ಹೇಳಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ನಕ್ಷತ್ರಯೋಗೇ ದಾನಫಕಥನಂ ನಾಮ ಚತುರ್ನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೈದನೆಯ ಅಧ್ಯಾಯ

ಕಾಂಚನಾದಿ ದಾನದ ಫಲ.

ಭೀಷ್ಮಃ

ಸರ್ವಾನ್ ಕಾಮಾನ್ ಪ್ರಯಚ್ಛಂತಿ ಯೇ ಪ್ರಯಚ್ಛಂತಿ ಕಾಂಚನಮ್ ।
ಇತ್ಯೇವಂ ಭಗವಾನತ್ರಿಃ ಪಿತಾಮಹಸುತೋಽಬ್ರವೀತ್ ॥೧॥

ಭೀಷ್ಮ- ಯಾರು ಸುವರ್ಣದಾನವನ್ನು ಮಾಡುತ್ತಾರೆಯೋ ಅವರು ಸರ್ವ ದಾನವನ್ನೂ ಮಾಡುತ್ತಾರೆ ಎಂದು ಬ್ರಹ್ಮದೇವರ ಮಕ್ಕಳಾದ ಪೂಜ್ಯರಾದ ಅತ್ರಿಗಳು ಹೇಳಿದರು.

ಪವಿತ್ರಂ ಶುಚ್ಯಥಾಯುಷ್ಯಂ ಪಿತೄಣಾಮಕ್ಷಯಂ ಚ ತತ್ ।
ಸುವರ್ಣಂ ಮನುಜೇಂದ್ರೇಣ ಹರಿಶ್ಚಂದ್ರೇಣ ಕೀರ್ತಿತಮ್ ॥೨॥

ಸುವರ್ಣವು ಪವಿತ್ರವಾದುದು, ಶುಚಿಯಾದುದು, ಆಯುಷ್ಯಪ್ರದವಾದುದು ಮತ್ತು ಪಿತೃಗಳಿಗೆ ಅಕ್ಷಯವಾದ ಫಲವನ್ನೂ ಉಂಟುಮಾಡುವಂತಹದು ಎಂದು ಮನುಜೇಂದ್ರನಾದ ಹರಿಶ್ಚಂದ್ರನು ಹೇಳಿದ್ದಾನೆ.

ಪಾನೀಯದಾನಂ ಪರಮಂ ದಾನಾನಾಂ ಮನುರಬ್ರವೀತ್ ।
ತಸ್ಮಾದ್ ವಾಪೀಶ್ಚ ಕೂಪಾಂಶ್ಚ ತಡಾಗಾನಿ ಚ ಖಾನಯೇತ್ ॥೩॥

ಪಾನೀಯದಾನವು ದಾನಗಳಲ್ಲಿ ಶ್ರೇಷ್ಠವಾದುದೆಂದು ಮನುವು ಹೇಳಿದ್ದಾನೆ. ಆದ್ದರಿಂದ ವಾಪಿಗಳನ್ನೂ, ಕೂಪಗಳನ್ನೂ (ಸೇದುವ ಬಾವಿಗಳನ್ನು ಮತ್ತು ನೆಲ ಬಾವಿಗಳನ್ನು) ಮತ್ತು ತಟಾಕಗಳನ್ನೂ ತೋಡಿಸಬೇಕು.

ಅರ್ಧಂ ಪಾಪಸ್ಯ ಹರತಿ ಪುರುಷಸ್ಯೇಹ ಕರ್ಮಣಃ ।
ಕೂಪಃ ಪ್ರವೃತ್ತಪಾನೀಯಃ ಸುಪ್ರವೃತ್ತಶ್ಚ ನಿತ್ಯಶಃ ॥೪॥

ನಿರ್ಮಾಣ ಮಾಡಿದ ಬಾವಿಯಲ್ಲಿ ಜಲವು ಬಂದು ಜನರು ನಿತ್ಯವೂ ಅದನ್ನು ಉಪಯೋಗಿಸಿದರೆ ಅದು ಬಾವಿಯನ್ನು ತೋಡಿಸಿದ ಪುರುಷನ ದುಷ್ಕರ್ಮಗಳ ಅರ್ಧ ಪಾಪವನ್ನು ಪರಿಹರಿಸುತ್ತದೆ.

ಸರ್ವಂ ತಾರಯತೇ ವಂಶಂ ಯಸ್ಯ ಖಾತೇ ಜಲಾಶಯೇ ।
ಗಾವಃ ಪಿಬಂತಿ ವಿಪ್ರಾಶ್ಚ ಸಾಧವಶ್ಚ ನರಾಃ ಸದಾ ॥೫॥

ಯಾವನು ತೋಡಿಸಿದ ಜಲಾಶಯದಲ್ಲಿ ಗೋವುಗಳು, ಬ್ರಾಹ್ಮಣರು ಮತ್ತು ಸಜ್ಜನರು ಯಾವಾಗಲೂ ನೀರನ್ನು ಕುಡಿಯುತ್ತಾರೆಯೋ ಅವನ ವಂಶವೆಲ್ಲವೂ ಅದರಿಂದ ದಾಟಿಸಲ್ಪಡುತ್ತದೆ.

ನಿದಾಘಕಾಲೇ ಪಾನೀಯಂ ಯಸ್ಯ ತಿಷ್ಠತ್ಯವಾರಿತಮ್ ।
ಸ ದುರ್ಗಂ ವಿಷಮಂ ಕೃಚ್ಛ್ರಂ ನ ಕದಾಚಿದವಾಪ್ನುತೇ ॥೬॥

ಯಾವನ ಬಾವಿಯಲ್ಲಿ ಬೇಸಿಗೆ ಕಾಲದಲ್ಲಿ ಬತ್ತಿಹೋಗದ ನೀರಿರುತ್ತದೆಯೋ ಅವನು ದಾಟಲು ಅಸಾಧ್ಯವಾದ ವಿಷಮವಾದ ಕಷ್ಟ ಪರಿಸ್ಥಿತಿಯನ್ನು ಎಂದೂ ಹೊಂದುವುದಿಲ್ಲ.

ಬೃಹಸ್ಪತೇರ್ಭಗವತಃ ಪೂಷ್ಣಶ್ಚೈವ ಭಗಸ್ಯ ಚ ।
ಅಶ್ವಿನೋಶ್ಚೈವ ವಹ್ನೇಶ್ಚ ಪ್ರೀತಿರ್ಭವತಿ ಸರ್ಪಿಷಾ ॥೭॥

ಘೃತವು ಪೂಜ್ಯನಾದ ಬೃಹಸ್ಪತಿಗೂ, ಪೂಷಣನಿಗೂ, ಭಗನಿಗೂ, ಅಶ್ವಿನಿಗಳಿಗೂ ಮತ್ತು ವಹ್ನಿಗೂ ಸಂತೋಷದಾಯಕವಾದುದು.

ಪರಮಂ ಭೇಷಜಂ ಹ್ಯೇತದ್ ಯಜ್ಞಾನಾಮೇತದುತ್ತಮಮ್ ।
ರಸಾನಾಮುತ್ತಮಂ ಚೈತತ್ ಫಲಾನಾಂ ಚೈತದುತ್ತಮಮ್ ॥೮॥

ಘೃತವು ಶ್ರೇಷ್ಠವಾದ ಔಷಧಿ. ಯಜ್ಞಗಳಲ್ಲಿ ಇದು ಶ್ರೇಷ್ಠವಾದುದು. ರಸಗಳಲ್ಲಿ ಶ್ರೇಷ್ಠವಾದುದು ಮತ್ತು ಫಲಗಳಲ್ಲಿ ಶ್ರೇಷ್ಠವಾದುದು.

ಫಲಕಾಮೋ ಯಶಸ್ಕಾಮಃ ಪುಷ್ಟಿಕಾಮಶ್ಚ ನಿತ್ಯದಾ ।
ಘೃತಂ ದದ್ಯಾದ್ ದ್ವಿಜಾತಿಭ್ಯಃ ಪುರುಷಃ ಶುಚಿರಾತ್ಮವಾನ್ ॥೯॥

ಫಲ, ಕೀರ್ತಿ ಮತ್ತು ಪುಷ್ಟಿಗಳನ್ನು ಅಪೇಕ್ಷಿಸುವ ಶುಚಿಯೂ, ಜಿತೇಂದ್ರಿಯನೂ ಆದ ಪುರುಷನು ಬ್ರಾಹ್ಮಣರಿಗೆ ನಿತ್ಯವೂ ಘೃತವನ್ನು ಕೊಡಬೇಕು.

ಘೃತಂ ಮಾಸೇ ಆಶ್ವಯುಜೇ ವಿಪ್ರೇಭ್ಯೋ ಯಃ ಪ್ರಯಚ್ಛತಿ ।
ತಸ್ಮೈ ಪ್ರಯಚ್ಛತೋ ರೂಪಂ ಪ್ರೀತೌ ದೇವಾವಿಹಾಶ್ವಿನೌ ॥೧೦॥

ಯಾವನು ಆಶ್ವಯುಜ ಮಾಸದಲ್ಲಿ ಬ್ರಾಹ್ಮಣರಿಗೆ ಘೃತವನ್ನು ಕೊಡುತ್ತಾನೆಯೋ ಅವನಿಗೆ ಅಶ್ವಿನೀದೇವತೆಗಳು ಪ್ರಸನ್ನರಾಗಿ ಇಲ್ಲಿ ಒಳ್ಳೆಯ ರೂಪವನ್ನು ಕೊಡುತ್ತಾರೆ.

ಪಾಯಸಂ ಸರ್ಪಿಷಾ ಮಿಶ್ರಂ ದ್ವಿಜೇಭ್ಯೋ ಯಃ ಪ್ರಯಚ್ಛತಿ ।
ಗೃಹಂ ತಸ್ಯ ನ ರಕ್ಷಾಂಸಿ ಧರ್ಷಯಂತಿ ಕದಾಚನ ॥೧೧॥

ಯಾವನು ಘೃತಮಿಶ್ರಿತವಾದ ಪಾಯಸವನ್ನು ಬ್ರಾಹ್ಮಣರಿಗೆ ಕೊಡುತ್ತಾನೆಯೋ ಅವನ ಮನೆಯನ್ನು ರಾಕ್ಷಸರು ಎಂದೂ ಪ್ರವೇಶಿಸಿ ಕೆಡಿಸುವುದಿಲ್ಲ.

ಪಿಪಾಸಯಾ ನ ಮ್ರಿಯತೇ ಸೋಪಚ್ಛಂದಶ್ಚ ದೃಶ್ಯತೇ ।
ನ ಪ್ರಾಪ್ನುಯಾಚ್ಚ ವ್ಯಸನಂ ಕರಕಾನ್ ಯಃ ಪ್ರಯಚ್ಛತಿ ॥೧೨॥

ಯಾವನು ಜಲಪೂರ್ಣವಾದ ಕಮಂಡಲುಗಳನ್ನು ಬ್ರಾಹ್ಮಣರಿಗೆ ಕೊಡುತ್ತಾನೆಯೋ ಅವನು ಬಾಯಾರಿಕೆಯಿಂದ ಮರಣವನ್ನು ಹೊಂದುವುದಿಲ್ಲ. ಅವನು ಅಪೇಕ್ಷಿಸಿದ ವಸ್ತುಗಳು ಅವನ ಬಳಿಯಲ್ಲಿ ಯಾವಾಗಲೂ ಕಂಡುಬರುತ್ತವೆ ಮತ್ತು ವ್ಯಸನಕ್ಕೆ ಸಿಲುಕುವುದಿಲ್ಲ.

ಪ್ರಯತೋ ಬ್ರಾಹ್ಮಣಾಗ್ರೇಭ್ಯಃ ಶ್ರದ್ಧಯಾ ಪರಯಾ ಯುತಃ ।
ಉಪಸ್ಪರ್ಶನಡ್‌ಭಾಗಂ ಲಭತೇ ಪುರುಷಃ ಸದಾ ॥೧೩॥

ಯಾವನು ಪರಮ ಶ್ರದ್ಧೆಯಿಂದ ಕೂಡಿದ ಶ್ರೇಷ್ಠರಾದ ಬ್ರಾಹ್ಮಣರಿಗೆ ದಾನ ಮಾಡಿ ವಿನಯದಿಂದ ಅವರ ಜೊತೆಯಲ್ಲಿ ನಡೆದುಕೊಳ್ಳುತ್ತಾನೆಯೋ ಅವನಿಗೆ ಪುನಃ ಆ ದಾನದ ಆರನೆಯ ಒಂದುಭಾಗದ ಪುಣ್ಯವು ಲಭಿಸುತ್ತದೆ.

ಯಃ ಸಾಧನಾರ್ಥಂ ಕಾಷ್ಠಾನಿ ಬ್ರಾಹ್ಮಣೇಭ್ಯಃ ಪ್ರಯಚ್ಛತಿ ।
ಪ್ರತಾಪಾರ್ಥಂ ಚ ರಾಜೇಂದ್ರ ವೃತ್ತವದ್ಭ್ಯಃ ಸದಾ ನರಃ ॥೧೪॥

ಸಿಧ್ಯಂತ್ಯರ್ಥಾಃ ಸದಾ ತಸ್ಯ ಕಾರ್ಯಾಣಿ ವಿವಿಧಾನಿ ಚ ।
ಉಪರ್ಯುಪರಿ ಶತ್ರೂಣಾಂ ವಪುಷಾ ದೀಪ್ಯತೇ ಚ ಸಃ ॥೧೫॥

ಎಲೈ ರಾಜೇಂದ್ರನೇ, ಯಾವನು ಒಳ್ಳೆಯ ನಡತೆಯುಳ್ಳ ಬ್ರಾಹ್ಮಣರಿಗೆ ಯಜ್ಞಾದಿ ಸಾಧನಕ್ಕಾಗಿ ಅಥವಾ ಪಾಕಾದಿಗಳಿಗಾಗಿ ಕಟ್ಟಿಗೆಯನ್ನು ಕೊಡುತ್ತಾನೆಯೋ ಅವನಿಗೆ ಯಾವಾಗಲೂ ವಿವಿಧವಾದ ಕಾರ್ಯಗಳು ಮತ್ತು ಅರ್ಥಗಳು ಸಿದ್ಧಿಸುತ್ತವೆ. ಶತ್ರುಗಳ ಮೇಲೆ ಅವನು ತನ್ನ ದೇಹದಿಂದ ಜ್ವಲಿಸುತ್ತಾ ನಿಲ್ಲುತ್ತಾನೆ.

ಭಗವಾಂಶ್ಚಾಸ್ಯ ಸುಪ್ರೀತೋ ವಹ್ನಿರ್ಭವತಿ ನಿತ್ಯಶಃ ।
ನ ತಂ ತ್ಯಜಂತೇ ಪಶವಃ ಸಂಗ್ರಾಮೇ ಚ ಜಯತ್ಯಪಿ ॥೧೬॥

ಪೂಜ್ಯನಾದ ಅಗ್ನಿಯು ಅವನಿಗೆ ಸದಾ ಸುಪ್ರೀತನಾಗುತ್ತಾನೆ. ಪಶುಗಳು ಅವನನ್ನು ತ್ಯಜಿಸುವುದಿಲ್ಲ. ಯುದ್ಧದಲ್ಲಿ ಜಯಶೀಲನಾಗುತ್ತಾನೆ.

ಪುತ್ರಾಂಶ್ಚ್ರಿಯಂ ಚ ಲಭತೇ ಯಶ್ಛತ್ರಂ ಸಂಪ್ರಯಚ್ಛತಿ ।
ಚಕ್ಷುರ್ವ್ಯಾಧಿಂ ನ ಲಭತೇ ಯಜ್ಞಭಾಗಮಥಾಶ್ನುತೇ ॥೧೭॥

ಛತ್ರಿಯನ್ನು ದಾನ ಮಾಡುವವನು ಪುತ್ರರನ್ನು ಮತ್ತು ಸಂಪತ್ತನ್ನು ಪಡೆಯುತ್ತಾನೆ. ನೇತ್ರವ್ಯಾಧಿಯನ್ನು ಪಡೆಯುವುದಿಲ್ಲ. ಯಜ್ಞಭಾಗವನ್ನು ಪಡೆಯುತ್ತಾನೆ.

ನಿದಾಘಕಾಲೇ ವರ್ಷೇ ವಾ ಯಶ್ಛತ್ರಂ ಸಂಪ್ರಯಚ್ಛತಿ ।
ನಾಸ್ಯ ಕಶ್ಚಿನ್ಮನೋದಾಹಃ ಕದಾಚಿದಪಿ ಜಾಯತೇ ।
ಕೃಚ್ಛ್ರಾತ್ ಸ ವಿಷಮಾಚ್ಚೈವ ವಿಪ್ರಮೋಕ್ಷಮವಾಪ್ನುತೇ ॥೧೮॥

ಬೇಸಿಗೆ ಕಾಲದಲ್ಲಾಗಲೀ, ಮಳೆಗಾಲದಲ್ಲಾಗಲೀ ಯಾವನು ಛತ್ರಿಯನ್ನು ದಾನ ಮಾಡುತ್ತಾನೆಯೋ ಅವನ ಮನಸ್ಸಿಗೆ ಎಂದೂ ಯಾವ ದಾಹವೂ ಉಂಟಾಗುವುದಿಲ್ಲ. ಕಷ್ಟಕರವಾದ ವಿಷಮ ಪರಿಸ್ಥಿತಿಯಿಂದಲೂ ಅವನು ಬಿಡುಗಡೆಯನ್ನು ಹೊಂದುತ್ತಾನೆ.

ಪ್ರದಾನಂ ಸರ್ವದಾನಾನಾಂ ಶಕಟಸ್ಯ ವಿಶಿಷ್ಯತೇ ।
ಏವಮಾಹ ಮಹಾಭಾಗಃ ಶಾಂಡಿಲ್ಯೋ ಭಗವಾನೃಷಿಃ ॥೧೯॥

ಎಲ್ಲ ದಾನಗಳಿಗಿಂತ ಶಕಟದಾನವು ಶ್ರೇಷ್ಠವಾದುದು ಎಂದು ಮಹಾನುಭಾವರಾದ ಪೂಜ್ಯರಾದ ಶಾಂಡಿಲ್ಯ ಋಷಿಗಳು ಹೇಳಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ
ಬಹುದಾನಸ್ತುತಿರ್ನಾಮ ಪಂಚನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತಾರನೆಯ ಅಧ್ಯಾಯ

ತಿಲಾದಿದಾನಫಲ

ಯುಧಿಷ್ಠಿರಃ

ದಹ್ಯಮಾನಾಯ ವಿಪ್ರಾಯ ಯಃ ಪ್ರಯಚ್ಛತ್ಯುಪಾನಹೌ ।
ಯತ್ಫಲಂ ತಸ್ಯ ಭವತಿ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಬೇಸಿಗೆಯಲ್ಲಿ ನಡೆದು ಪಾದಗಳು ಸುಡುವ ವಿಪ್ರನಿಗೆ ಪಾದರಕ್ಷೆಯನ್ನು ಕೊಟ್ಟರೆ ಯಾವ ಫಲವು ಉಂಟಾಗುವುದೋ ಅದನ್ನು ನನಗೆ ಹೇಳು.

ಭೀಷ್ಮಃ

ಉಪಾನಹೌ ಪ್ರಯಚ್ಛೇದ್ ಯೋ ಬ್ರಾಹ್ಮಣೇಭ್ಯಃ ಸಮಾಹಿತಃ ।
ಮರ್ದತೇ ಕಂಟಕಾನ್ ಸರ್ವಾನ್ ವಿಷಮಾನ್ ನಿಸ್ತರತ್ಯಪಿ ।
ಸ ಶತ್ರೂಣಾಮುಪರಿ ಚ ಸಂತಿಷ್ಠತಿ ಯುಧಿಷ್ಠಿರ ॥೨॥

ಭೀಷ್ಮ– ಬ್ರಾಹ್ಮಣರಿಗೆ ಶ್ರದ್ಧೆಯಿಂದ ಪಾದರಕ್ಷೆಗಳನ್ನು ದಾನ ಮಾಡುವವನು ತನಗೆ ಬರುವ ಎಲ್ಲ ಆಪತ್ತುಗಳನ್ನೂ ಮರ್ದಿಸುತ್ತಾನೆ. ವಿಷಮ ಪರಿಸ್ಥಿತಿಗಳನ್ನು ದಾಟುತ್ತಾನೆ. ಎಲೈ ಯುಧಿಷ್ಠಿರನೇ, ಅವನು ಶತ್ರುಗಳನ್ನು ಮೆಟ್ಟಿ ನಿಲ್ಲುತ್ತಾನೆ.

ಯಾನಂ ಚಾಶ್ವತರೀಯುಕ್ತಂ ತಸ್ಯ ಶುಭ್ರಂ ವಿಶಾಂಪತೇ ।
ಉಪತಿಷ್ಠತಿ ಕೌಂತೇಯ ರೂಪ್ಯಕಾಂಚನಭೂಷಣಮ್ ।
ಶಕಟಂ ದಮ್ಯಸಂಯುಕ್ತಂ ದತ್ತಂ ಭವತಿ ಚೈವ ಹಿ ॥೩॥

ಎಲೈ ರಾಜನೇ, ಕೌಂತೇಯನೇ, ಅವನಿಗೆ ಸುವರ್ಣ ರಜತ ಭೂಷಿತವಾದ ಹೇಸರಗತ್ತೆಯನ್ನು ಹೂಡಿದ ಶುಭ್ರವಾದ ಯಾನವು ದೊರೆಯುತ್ತದೆ. ಪಳಗಿದ ವಾಹಗಳನ್ನುಳ್ಳ ಗಾಡಿಯು ಅವನಿಗೆ ಕೊಡಲ್ಪಡುತ್ತದೆ.

ಯುಧಿಷ್ಠಿರಃ

ಯತ್ಫಲಂ ತಿಲದಾನೇ ಚ ಭೂಮಿದಾನೇ ಚ ಕೀರ್ತಿತಮ್ ।
ಗೋಪ್ರದಾನೇಽನ್ನದಾನೇ ಚ ಭೂಯಸ್ತದ್ ಬ್ರೂಹಿ ಕೌರವ ॥೪॥

ಯುಧಿಷ್ಠಿರ– ಎಲೈ ಕೌರವನೇ, ತಿಲದಾನ ಮತ್ತು ಭೂಮಿದಾನ ಫಲಗಳನ್ನು ಹೇಳಿದ್ದೀರಿ. ಗೋದಾನ ಮತ್ತು ಅನ್ನದಾನದ ಫಲವನ್ನು ಇನ್ನೂ ಹೇಳುವವನಾಗು.

ಭೀಷ್ಮಃ

ಶೃಣುಷ್ವ ಮಮ ಕೌಂತೇಯ ತಿಲದಾನಸ್ಯ ಯತ್ಫಲಮ್ ।
ನಿಶಮ್ಯ ಚ ಯಥಾನ್ಯಾಯಂ ಪ್ರಯಚ್ಛ ಕುರುಸತ್ತಮ ॥೫॥

ಭೀಷ್ಮ– ಎಲೈ ಕೌಂತೇಯನೇ, ತಿಲದಾನದ ಫಲವನ್ನು ನನ್ನಿಂದ ಕೇಳು. ಎಲೈ ಕುರುಶ್ರೇಷ್ಠನೇ, ಕೇಳಿದ ಮೇಲೆ ವಿಧಿಯುಕ್ತವಾಗಿ ದಾನವನ್ನು ಮಾಡು.

ಪಿತೄಣಾಂ ಪ್ರಥಮಂ ಭೋಜ್ಯಂ ತಿಲಾಃ ಸೃಷ್ಟಾಃ ಸ್ವಯಂಭುವಾ ।
ತಿಲದಾನೇನ ವೈ ತಸ್ಮಾತ್ ಪಿತೃಪಕ್ಷಃ ಪ್ರಮೋದತೇ ॥೬॥

ಬ್ರಹ್ಮದೇವರು ಪಿತೃಗಳಿಗೆ ಶ್ರೇಷ್ಠವಾದ ಆಹಾರವಾಗಿ ತಿಲವನ್ನು ಸೃಷ್ಟಿಮಾಡಿದ್ದಾರೆ. ಆದ್ದರಿಂದ ತಿಲದಾನದಿಂದ ಪಿತೃಗಳು ಸಂತೋಷಪಡುತ್ತಾರೆ.

ಮಾಘಮಾಸೇ ತಿಲಾನ್ ಯಸ್ತು ಬ್ರಾಹ್ಮಣೇಭ್ಯಃ ಪ್ರಯಚ್ಛತಿ ।
ಸರ್ವಸತ್ತ್ವಸಮಾಕೀರ್ಣಂ ನರಕಂ ಸ ನ ಪಶ್ಯತಿ ॥೭॥

ಮಾಘಮಾಸದಲ್ಲಿ ಬ್ರಾಹ್ಮಣರಿಗೆ ತಿಲದಾನವನ್ನು ಮಾಡುವವನು ಸರ್ವ ಪ್ರಾಣಿಗಳಿಂದ ತುಂಬಿದ ನರಕವನ್ನು ನೋಡುವುದಿಲ್ಲ.

ಸರ್ವಕಾಮೈಃ ಸ ಯಜತೇ ಯಸ್ತಿಲೈರ್ಯಜತೇ ಪಿತೄನ್ ।
ನ ಚಾಕಾಮೇನ ದಾತವ್ಯಂ ತಿಲಶ್ರಾದ್ಧಂ ಕಥಂಚನ ॥೮॥

ತಿಲಗಳಿಂದ ಪಿತೃಗಳನ್ನು ಪೂಜಿಸುವವನು ಅವರನ್ನು ಎಲ್ಲ ಕಾಮ್ಯ ಪದಾರ್ಥಗಳಿಂದಲೂ ಪೂಜಿಸಿದವನಾಗುತ್ತಾನೆ. ನಿಷ್ಕಾಮನಾದವನು ಎಂದೂ ತಿಲಶ್ರಾದ್ಧವನ್ನು ಮಾಡಬಾರದು.

ಮಹರ್ಷೇಃ ಕಶ್ಯಪಸ್ಯೈತೇ ಗಾತ್ರೇಭ್ಯಃ ಪ್ರಸೃತಾಸ್ತಿಲಾಃ ।
ತತೋ ದಿವ್ಯಂ ಗತಾ ಭಾವಂ ಪ್ರದಾನೇಷು ತಿಲಾಃ ಪ್ರಭೋ ॥೯॥

ತಿಲಗಳು ಮಹರ್ಷಿಗಳಾದ ಕಶ್ಯಪರ ದೇಹದಿಂದ ಹೊರಬಂದವು. ಎಲೈ ಪ್ರಭುವೇ, ಆದ್ದರಿಂದ ಅವು ದಾನಗಳಲ್ಲಿ ಶ್ರೇಷ್ಠತ್ವವನ್ನು ಹೊಂದಿದವು.

ಪೌಷ್ಟಿಕಾ ರೂಪದಾಶ್ಚೈವ ತಥಾ ಪಾಪವಿನಾಶನಾಃ ।
ತಸ್ಮಾತ್ ಸರ್ವಪ್ರದಾನೇಭ್ಯಸ್ತಿಲದಾನಂ ವಿಶಿಷ್ಯತೇ ॥೧೦॥

ಅವು ಪುಷ್ಟಿಯನ್ನೂ, ರೂಪವನ್ನೂ ಕೊಡುವಂತಹವುಗಳು, ಪಾಪಪರಿಹಾರಕಗಳು. ಆದ್ದರಿಂದ ಎಲ್ಲ ದಾನಗಳಿಗಿಂತಲೂ ತಿಲದಾನವು ಶ್ರೇಷ್ಠವಾದುದು.

ಆಪಸ್ತಂಬಶ್ಚ ಮೇಧಾವೀ ಶಂಖಶ್ಚ ಲಿಖಿತಸ್ತಥಾ ।
ಮಹರ್ಷಿರ್ಗೌತಮಶ್ಚಾಪಿ ತಿಲದಾನೈರ್ದಿವಂ ಗತಾಃ ॥೧೧॥

ಮೇಧಾವಿಗಳಾದ ಆಪಸ್ತಂಬರು, ಶಂಖ-ಲಿಖಿತರು, ಮಹರ್ಷಿಗಳಾದ ಗೌತಮರು ಎಲ್ಲರೂ ತಿಲದಾನದಿಂದ ಸ್ವರ್ಗಕ್ಕೆ ಹೋದರು.

ತಿಲಹೋಮಪರಾ ವಿಪ್ರಾಃ ಸರ್ವೇ ಸಂಯತಮೈಥುನಾಃ ।
ಸಮಾ ಗವ್ಯೇನ ಹವಿಷಾ ಪ್ರವೃತ್ತಿಷು ಚ ಸಂಸ್ಥಿತಾಃ ॥೧೨॥

ಮೈಥುನದ ವಿಷಯದಲ್ಲಿ ನಿಯಮದಿಂದಿದ್ದು ತಿಲಹೋಮ ಪರಾಯಣರಾದ ಎಲ್ಲ ವಿಪ್ರರು ಗೋಘೃತರೂಪವಾದ ಹವಿಸ್ಸಿನಿಂದ ಹೋಮವನ್ನು ಮಾಡಿದವರಿಗೆ ಸಮಾನರಾಗಿರುತ್ತಾರೆ.

ಸರ್ವೇಷಾಮೇವ ದಾನಾನಾಂ ತಿಲದಾನಂ ಪರಂ ಸ್ಮೃತಮ್ ।
ಅಕ್ಷಯಂ ಸರ್ವದಾನಾನಾಂ ತಿಲದಾನಮಿಹೋಚ್ಯತೇ ॥೧೩॥

ಎಲ್ಲ ದಾನಗಳಲ್ಲಿ ತಿಲದಾನವು ಶ್ರೇಷ್ಠವೆಂದು ಹೇಳಲ್ಪಡುತ್ತದೆ. ಸರ್ವದಾನಗಳಲ್ಲಿ ಅದು ಅಕ್ಷಯದಾನವೆಂದು ಹೇಳಲ್ಪಡುತ್ತದೆ.

ಉತ್ಪನ್ನೇ ಚ ಪುರಾ ಹವ್ಯೇ ಕುಶಿಕರ್ಷಿಃ ಪರಂತಪ ।
ತಿಲೈರಗ್ನಿತ್ರಯಂ ಹುತ್ವಾ ಪ್ರಾಪ್ತವಾನ್ ಗತಿಮುತ್ತಮಾಮ್ ॥೧೪॥

ಎಲೈ ಪರಂತಪನೇ, ಹಿಂದೆ ಹವ್ಯ-ದ್ರವ್ಯಗಳು ಉತ್ಪನ್ನವಾದಾಗ ವಿಶ್ವಾಮಿತ್ರರು ತಿಲಗಳಿಂದ ಮೂರು ಅಗ್ನಿಗಳಲ್ಲಿಯೂ ಹೋಮವನ್ನು ಮಾಡಿ ಶ್ರೇಷ್ಠವಾದ ಗತಿಯನ್ನು ಪಡೆದರು.

ಇತಿ ಪ್ರೋಕ್ತಂ ಕುರುಶ್ರೇಷ್ಠ ತಿಲದಾನಮನುತ್ತಮಮ್ ।
ವಿಧಾನಂ ಯೇನ ವಿಧಿನಾ ತಿಲಾನಾಮಿಹ ಶಸ್ಯತೇ ॥೧೫॥

ಎಲೈ ಕುರುಶ್ರೇಷ್ಠನೇ, ಶ್ರೇಷ್ಠವಾದ ತಿಲದಾನವನ್ನೂ ಯಾವ ವಿಧಾನದಿಂದ ತಿಲಗಳು ಶ್ರೇಷ್ಠವಾದವು ಎಂಬುದನ್ನೂ ಈ ರೀತಿಯಲ್ಲಿ ನಿನಗೆ ಹೇಳಿದ್ದೇನೆ.

ಅತ ಊರ್ಧ್ವಂ ನಿಬೋಧೇದಂ ದೇವಾನಾಂ ಯಷ್ಟುಮಿಚ್ಛತಾಮ್ ।
ಸಮಾಗಮಂ ಮಹಾರಾಜ ಬ್ರಹ್ಮಣಾ ವೈ ಸ್ವಯಂಭುವಾ ॥೧೬॥

ಎಲೈ ಮಹಾರಾಜನೇ, ಇನ್ನು ಮುಂದೆ ಯಜ್ಞವನ್ನು ಮಾಡಲು ಇಚ್ಛಿಸಿದ ದೇವತೆಗಳಿಗೂ ಮತ್ತು ಬ್ರಹ್ಮದೇವರಿಗೂ ಉಂಟಾದ ಸಮಾಗಮವನ್ನು ಕೇಳು.

ದೇವಾಃ ಸಮೇತ್ಯ ಬ್ರಹ್ಮಾಣಂ ಭೂಮಿಭಾಗೇ ಯಿಯಕ್ಷವಃ ।
ಶುಭಂ ದೇಶಮಯಾಚಂತ ಯಜೇಮ ಇತಿ ಪಾರ್ಥಿವ ॥೧೭॥

ಭೂಮಿಯ ಒಂದು ಭಾಗದಲ್ಲಿ ಯಾಗವನ್ನು ಮಾಡಲು ಬಯಸಿದ ದೇವತೆಗಳು ಬ್ರಹ್ಮದೇವರನ್ನು ಸಮೀಪಿಸಿ ನಾವು ಯಜ್ಞವನ್ನು ಮಾಡಬೇಕು ಎಂದು ಒಂದು ಶುಭ ದೇಶವನ್ನು ಯಾಚಿಸಿದರು.

ದೇವಾಃ

ಭಗವಂಸ್ತ್ವಂ ಪ್ರಭುರ್ಭೂಮೇಃ ಸರ್ವಸ್ಯ ತ್ರಿದಿವಸ್ಯ ಚ ।
ಯಜೇಮಹಿ ಮಹಾಭಾಗ ಯಜ್ಞಂ ಭವದನುಜ್ಞಯಾ ।
ನಾನನುಜ್ಞಾತಭೂಮಿರ್ಹಿ ಯಜ್ಞಸ್ಯ ಫಲಮಶ್ನುತೇ ॥೧೮॥

ದೇವತೆಗಳು– ಪೂಜ್ಯನೇ, ನೀನು ಭೂಮಿಗೂ, ಸರ್ವಸ್ವರ್ಗಕ್ಕೂ ಅಧಿಪತಿಯಾದವನು. ಮಹಾನುಭಾವನೇ, ನಿನ್ನ ಅನುಜ್ಞೆಯಿಂದ ಯಜ್ಞವನ್ನು ಮಾಡುವೆವು. ಅನುಜ್ಞಾತವಲ್ಲದ ಭೂಮಿಯಲ್ಲಿ ಮಾಡಿದ ಯಜ್ಞವು ಫಲವನ್ನು ಕೊಡುವುದಿಲ್ಲ.

ತ್ವಂ ಹಿ ಸರ್ವಸ್ಯ ಜಗತಃ ಸ್ಥಾವರಸ್ಯ ಚರಸ್ಯ ಚ ।
ಪ್ರಭುರ್ಭವಸಿ ತಸ್ಮಾತ್ ತ್ವಂ ಸಮನುಜ್ಞಾತುಮರ್ಹಸಿ ॥೧೯॥

ನೀನು ಸ್ಥಾವರ-ಜಂಗಮಾತ್ಮಕವಾದ ಸರ್ವಪ್ರಪಂಚಕ್ಕೂ ಪ್ರಭುವಾದವನು. ಆದ್ದರಿಂದ ನೀನು ಅನುಮತಿಯನ್ನು ಕೊಡಬೇಕು.

ಬ್ರಹ್ಮಾ

ದದಾಮಿ ಮೇದಿನೀಭಾಗಂ ಭವದ್ಭ್ಯೋಽಹಂ ಸುರರ್ಷಭಾಃ ।
ಯಸ್ಮಿನ್ ದೇಶೇ ಕರಿಷ್ಯಧ್ವಂ ಯಜ್ಞಂ ಕಾಶ್ಯಪನಂದನಾಃ ॥೨೦॥

ಬ್ರಹ್ಮಾ– ಎಲೈ ಕಾಶ್ಯಪಪುತ್ರರೇ, ಸುರಶ್ರೇಷ್ಠರೇ, ಯಾವ ದೇಶದಲ್ಲಿ ನೀವು ಯಜ್ಞವನ್ನು ಮಾಡುವಿರೋ ಅಂತಹ ಭೂವಿಭಾಗವನ್ನು ನಿಮಗೆ ಕೊಡುತ್ತೇನೆ.

ದೇವಾಃ

ಭಗವನ್ ಕೃತಕಾಮಾಃ ಸ್ಮೋ ಯಕ್ಷ್ಯಾಮಸ್ತಾ ಪ್ತದಕ್ಷಿಣೈಃ ।
ಇಮಂ ತು ದೇಶಂ ಮುನಯಃ ಪರ್ಯುಪಾಸಂತ ನಿತ್ಯದಾ ॥೨೧॥

ದೇವತೆಗಳು– ಪೂಜ್ಯನೇ, ನಾವು ಭೂರಿದಕ್ಷಿಣೆಯುಳ್ಳ ಯಾಗವನ್ನು ಮಾಡಲು ಬಯಸಿದ್ದೇವೆ. ಈ ಹಿಮಾಲಯದ ಪ್ರದೇಶದಲ್ಲಿ ಋಷಿಗಳು ನಿತ್ಯವೂ ವಾಸಿಸಿದರು.

ಭೀಷ್ಮಃ

ತತೋಽಗಸ್ತ್ಯಶ್ಚ ಕಣ್ವಶ್ಚ ಭೃಗುರತ್ರಿರ್ವ್ಯಷಾಕಪಿಃ ।
ಅಸಿತೋ ದೇವಲಶ್ಚೈವ ದೇವಯಜ್ಞಮುಪಾಗಮನ್ ॥೨೨॥

ಭೀಷ್ಮ– ಆಗ ಅಗಸ್ತ್ಯರು, ಕಣ್ವರು, ಭೃಗು, ಅತ್ರಿ, ವೃಷಾಕಪಿಗಳು, ಅಸಿತರು, ದೇವಲರು ಆ ದೇವಯಜ್ಞಕ್ಕೆ ಬಂದರು.

ತತೋ ದೇವಾ ಮಹಾತ್ಮಾನ ಈಜಿರೇ ಯಜ್ಞಮಚ್ಯುತ ।
ತಥಾ ಸಮಾಪಯಾಮಾಸುರ್ಯಥಾಕಾಲಂ ಸುರರ್ಷಭಾಃ ॥೨೩॥

ಎಲೈ ಅಚ್ಯುತನೇ, ಆಗ ಮಹಾತ್ಮರಾದ ದೇವತೆಗಳು ಯಜ್ಞವನ್ನು ಮಾಡಿ ಯೋಗ್ಯವಾದ ಕಾಲದಲ್ಲಿ ಯಜ್ಞವನ್ನು ಸಮಾಪ್ತಿಗೊಳಿಸಿದರು.

ತ ಇಷ್ಟಯಜ್ಞಾಸ್ತ್ರಿದಶಾ ಹಿಮವತ್ಯಚಲೋತ್ತಮೇ ।
ಷಷ್ಠಮಂಶಂ ಕ್ರತೋಸ್ತಸ್ಯ ಭೂಮಿದಾನಂ ಪ್ರಚಕ್ರಿರೇ ॥೨೪॥

ಯಜ್ಞವನ್ನು ಮಾಡಿದ ಆ ದೇವತೆಗಳು ಶ್ರೇಷ್ಠವಾದ ಹಿಮಾಲಯ ಪರ್ವತದಲ್ಲಿ ಯಜ್ಞವನ್ನು ಮಾಡಿದ ಭೂಮಿಯ ಆರನೆಯ ಒಂದು ಭಾಗದಷ್ಟು ಭೂಮಿಯ ದಾನವನ್ನು ಮಾಡಿದರು.

ಪ್ರಾದೇಶಮಾತ್ರಂ ಭೂಮೇಸ್ತು ಯೋ ದದ್ಯಾದನುಪಸ್ಕೃತಮ್ ।
ನ ಸೀದತಿ ಸ ಕೃಚ್ಛ್ರೇಷು ನ ಚ ದುರ್ಗಾಣ್ಯವಾಪ್ನುತೇ ॥೨೫॥

ಒಂದು ಗೇಣಿನಷ್ಟು ಅಗಲದ ಸಹಜವಾದ ಭೂಮಿಯನ್ನು ದಾನವನ್ನು ಮಾಡಿದವನು ಕಷ್ಟಗಳಲ್ಲಿ ಅವನತಿಯನ್ನು ಹೊಂದುವುದಿಲ್ಲ ಮತ್ತು ವಿಷಮ ಪರಿಸ್ಥಿತಿಯನ್ನು ಹೊಂದುವುದಿಲ್ಲ.

ಶೀತವಾತಾತಪಸಹಾಂ ಗೃಹಭೂಮಿಂ ಸುಸಂಸ್ಕೃತಾಮ್ ।
ಪ್ರದಾಯ ಸುರಲೋಕಸ್ಥಃ ಪುಣ್ಯಾಂತೇಽಪಿ ನ ಚಾಲ್ಯತೇ ॥೨೬॥

ಬಿಸಿಲು, ಚಳಿ, ಗಾಳಿಗಳನ್ನು ಸಹಿಸುವ ಸುಸಂಸ್ಕೃತವಾದ ಗೃಹಭೂಮಿಯನ್ನು ದಾನವನ್ನು ಮಾಡುವವನು ಸುರಲೋಕವನ್ನು ಹೊಂದಿ ಪುಣ್ಯವು ಕ್ಷೀಣಿಸಿದರೂ ಅಲ್ಲಿಂದ ಅಲುಗಾಡುವುದಿಲ್ಲ.

ಮುದಿತೋ ವಸತೇ ಪ್ರಾಜ್ಞಃ ಶಕ್ರೇಣ ಸಹ ಪಾರ್ಥಿವ ।
ಪ್ರತಿಶ್ರಯಪ್ರದಾತಾ ಚ ಸೋಽಪಿ ಸ್ವರ್ಗೇ ಮಹೀಯತೇ ॥೨೭॥

ಎಲೈ ಪಾರ್ಥಿವನೇ, ಗೃಹವನ್ನು ದಾನ ಮಾಡುವ ಪ್ರಾಜ್ಞನು ಇಂದ್ರನ ಜೊತೆಯಲ್ಲಿ ಸಂತೋಷದಿಂದ ವಾಸಿಸುತ್ತಾನೆ. ಅವನೂ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ಅಧ್ಯಾಪಕಕುಲೇ ಜಾತಃ ಶ್ರೋತ್ರಿಯೋ ನಿಯತೇಂದ್ರಿಯಃ ।
ಗೃಹೇ ಯಸ್ಯ ವಸೇತ್ ತುಷ್ಟಃ ಪ್ರಧಾನಂ ಲೋಕಮಶ್ನುತೇ ॥೨೮॥

ಯಾವನು ದಾನಕೊಟ್ಟ ಗೃಹದಲ್ಲಿ ಅಧ್ಯಾಪಕ ಕುಲದಲ್ಲಿ ಜನಿಸಿದ ಶ್ರೋತ್ರಿಯನೂ, ನಿಯತೇಂದ್ರಿಯನೂ ಆದ ಬ್ರಾಹ್ಮಣನು ವಾಸ ಮಾಡುತ್ತಾನೆಯೋ ಅಂತಹವನು ಪ್ರಧಾನವಾದ ಲೋಕವನ್ನು ಹೊಂದುತ್ತಾನೆ.

ತಥಾ ಗವಾರ್ಥೇ ಶರಣಂ ಶೀತವರ್ಷಸಹಂ ಮಹತ್ ।
ಆಸಪ್ತಮಂ ತಾರಯತಿ ಕುಲಂ ಭರತಸತ್ತಮ ॥೨೯॥

ಎಲೈ ಭರತಶ್ರೇಷ್ಠನೇ, ಹಾಗೆಯೇ ಗೋವುಗಳ ಸಲುವಾಗಿ ಚಳಿ, ಮಳೆಗಳನ್ನು ಸಹಿಸುವ ದೊಡ್ಡ ಶಾಲೆಯನ್ನು (ಕೊಟ್ಟಿಗೆಯನ್ನು) ಕಟ್ಟಿಸುವವನು ಏಳು ತಲೆಗಳವರೆಗೆ ತನ್ನ ಕುಲವನ್ನು ಉದ್ಧರಿಸುತ್ತಾನೆ.

ಕ್ಷೇತ್ರಭೂಮಿಂ ದದಲ್ಲೋಕೇ ಪುತ್ರ ಶ್ರಿಯಮವಾಪ್ನುಯಾತ್ ।
ರತ್ನಭೂಮಿಂ ಪ್ರದತ್ತ್ವಾ ತು ಕುಲವಂಶಂ ವಿವರ್ಧಯೇತ್ ॥೩೦॥

ಎಲೈ ಪುತ್ರನೇ, ಉಳುವ ಭೂಮಿಯನ್ನು ಕೊಡುವವನು ಲೋಕದಲ್ಲಿ ಸಂಪತ್ತನ್ನು ಹೊಂದುತ್ತಾನೆ. ರತ್ನಸಹಿತವಾದ ಭೂಮಿಯನ್ನು ದಾನ ಮಾಡುವವನು ತನ್ನ ಕುಲವನ್ನು ಮತ್ತು ವಂಶವನ್ನು ಅಭಿವೃದ್ಧಿ ಪಡಿಸುತ್ತಾನೆ.

ನ ಚೋಷರಾಂ ನ ನಿರ್ದಗ್ಧಾಂ ಮಹೀಂ ದದ್ಯಾತ್ ಕಥಂಚನ ।
ನ ಶ್ಮಶಾನಪರೀತಾಂ ಚ ನ ಚ ಪಾಪನಿಷೇವಿತಾಮ್ ॥೩೧॥

ಬಂಜರು ಭೂಮಿಯನ್ನಾಗಲೀ, ಸುಟ್ಟಭೂಮಿಯನ್ನಾಗಲೀ, ಸ್ಮಶಾನದಿಂದ ಸುತ್ತುವರಿಯಲ್ಪಟ್ಟ ಭೂಮಿಯನ್ನಾಗಲೀ, ದುಷ್ಟರು ವಾಸಿಸುವ ಭೂಮಿಯನ್ನಾಗಲೀ ಎಂದೂ ದಾನವನ್ನು ಮಾಡಬಾರದು.

ಪಾರಕ್ಯೇ ಭೂಮಿದೇಶೇ ತು ಪಿತ್ರ್ಯಾಣಾಂ ನಿರ್ವಪೇತ್ ತು ಯಃ ।
ತದ್ಭೂಮಿಸ್ವಾಮಿಪಿತೃಭಿಃ ಶ್ರಾದ್ಧಕರ್ಮ ವಿಹನ್ಯತೇ ॥೩೨॥

ಇನ್ನೊಬ್ಬರ ಭೂಮಿದೇಶದಲ್ಲಿ ಪಿತೃಶ್ರಾದ್ಧವನ್ನು ಮಾಡಿದರೆ ಆ ಭೂಮಿಯ ಒಡೆಯನ ಪಿತೃಗಳು ಆ ಶ್ರಾದ್ಧಕರ್ಮವನ್ನು ವಿನಾಶಗೊಳಿಸುತ್ತಾರೆ.

ತಸ್ಮಾತ್ ಕ್ರೀತ್ವಾ ಮಹೀಂ ದದ್ಯಾತ್ ಸ್ವಲ್ಪಾಮಪಿ ವಿಚಕ್ಷಣಃ ।
ಪಿಂಡಃ ಪಿತೃಭ್ಯೋ ದತ್ತೋ ವೈ ತಸ್ಯಾಂ ಭವತಿ ಶಾಶ್ವತಃ ॥೩೩॥

ಆದ್ದರಿಂದ ವಿವೇಕಿಯಾದವನು ಸ್ವಲ್ಪ ಭೂಮಿಯನ್ನಾದರೂ ಕ್ರಯಕ್ಕೆ ತೆಗೆದುಕೊಂಡು ದಾನವನ್ನು ಕೊಡಬೇಕು. ಆ ಭೂಮಿಯಲ್ಲಿ ಪಿತೃಗಳಿಗೆ ಕೊಟ್ಟ ಪಿಂಡವು ಶಾಶ್ವತವಾಗುತ್ತದೆ.

ಅಟವೀಪರ್ವತಾಶ್ಚೈವ ನದೀತೀರ್ಥಾನಿ ಯಾನಿ ಚ ।
ಸರ್ವಾಣ್ಯಸ್ವಾಮಿಕಾನ್ಯಾಹುರ್ನ ಹಿ ತತ್ರ ಪರಿಗ್ರಹಃ ॥೩೪॥

ಕಾಡು, ಪರ್ವತಗಳು, ನದಿಗಳು, ತೀರ್ಥಗಳು ಇವೆಲ್ಲವೂ ಸ್ವಾಮಿರಹಿತವಾದುದು ಎಂದು ಹೇಳುತ್ತಾರೆ. ಅದನ್ನು ಯಾರೂ ದಾನ ಮಾಡುವಂತಿಲ್ಲ ಮತ್ತು ಪ್ರತಿಗ್ರಹ ಮಾಡುವಂತೆಯೂ ಇಲ್ಲ.

ಇತ್ಯೇತದ್ಭೂಮಿದಾನಸ್ಯ ಫಲಮುಕ್ತಂ ವಿಶಾಂಪತೇ ।
ಅತಃ ಪರಂ ತು ಗೋದಾನಂ ಕೀರ್ತಯಿಷ್ಯಾಮಿ ತೇಽನಘ ॥೩೫॥

ಎಲೈ ರಾಜನೇ, ಈ ರೀತಿಯಲ್ಲಿ ನಾನು ಭೂಮಿದಾನದ ಫಲವನ್ನು ಹೇಳಿದೆನು. ಎಲೈ ಅನಘನೇ, ಇನ್ನು ಮುಂದೆ ಗೋದಾನದ ಫಲವನ್ನು ಹೇಳುವೆನು.

ಶೀತವಾತಾತಪಸಹಾಂ ಗೃಹಭೂಮಿಂ ಸುಸಂಸ್ಕೃತಾಮ್ ।
ಪ್ರದಾಯ ಸುರಲೋಕಸ್ಥಃ ಪುಣ್ಯಾಂತೇಽಪಿ ನ ಚಾಲ್ಯತೇ ॥೨೬॥

ಬಿಸಿಲು, ಚಳಿ, ಗಾಳಿಗಳನ್ನು ಸಹಿಸುವ ಸುಸಂಸ್ಕೃತವಾದ ಗೃಹಭೂಮಿಯನ್ನು ದಾನವನ್ನು ಮಾಡುವವನು ಸುರಲೋಕವನ್ನು ಹೊಂದಿ ಪುಣ್ಯವು ಕ್ಷೀಣಿಸಿದರೂ ಅಲ್ಲಿಂದ ಅಲುಗಾಡುವುದಿಲ್ಲ.

ಮುದಿತೋ ವಸತೇ ಪ್ರಾಜ್ಞಃ ಶಕ್ರೇಣ ಸಹ ಪಾರ್ಥಿವ ।
ಪ್ರತಿಶ್ರಯಪ್ರದಾತಾ ಚ ಸೋಽಪಿ ಸ್ವರ್ಗೇ ಮಹೀಯತೇ ॥೨೭॥

ಎಲೈ ಪಾರ್ಥಿವನೇ, ಗೃಹವನ್ನು ದಾನ ಮಾಡುವ ಪ್ರಾಜ್ಞನು ಇಂದ್ರನ ಜೊತೆಯಲ್ಲಿ ಸಂತೋಷದಿಂದ ವಾಸಿಸುತ್ತಾನೆ. ಅವನೂ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ಅಧ್ಯಾಪಕಕುಲೇ ಜಾತಃ ಶ್ರೋತ್ರಿಯೋ ನಿಯತೇಂದ್ರಿಯಃ ।
ಗೃಹೇ ಯಸ್ಯ ವಸೇತ್ ತುಷ್ಟಃ ಪ್ರಧಾನಂ ಲೋಕಮಶ್ನುತೇ ॥೨೮॥

ಯಾವನು ದಾನಕೊಟ್ಟ ಗೃಹದಲ್ಲಿ ಅಧ್ಯಾಪಕ ಕುಲದಲ್ಲಿ ಜನಿಸಿದ ಶ್ರೋತ್ರಿಯನೂ, ನಿಯತೇಂದ್ರಿಯನೂ ಆದ ಬ್ರಾಹ್ಮಣನು ವಾಸ ಮಾಡುತ್ತಾನೆಯೋ ಅಂತಹವನು ಪ್ರಧಾನವಾದ ಲೋಕವನ್ನು ಹೊಂದುತ್ತಾನೆ.

ತಥಾ ಗವಾರ್ಥೇ ಶರಣಂ ಶೀತವರ್ಷಸಹಂ ಮಹತ್ ।
ಆಸಪ್ತಮಂ ತಾರಯತಿ ಕುಲಂ ಭರತಸತ್ತಮ ॥೨೯॥

ಎಲೈ ಭರತಶ್ರೇಷ್ಠನೇ, ಹಾಗೆಯೇ ಗೋವುಗಳ ಸಲುವಾಗಿ ಚಳಿ, ಮಳೆಗಳನ್ನು ಸಹಿಸುವ ದೊಡ್ಡ ಶಾಲೆಯನ್ನು (ಕೊಟ್ಟಿಗೆಯನ್ನು) ಕಟ್ಟಿಸುವವನು ಏಳು ತಲೆಗಳವರೆಗೆ ತನ್ನ ಕುಲವನ್ನು ಉದ್ಧರಿಸುತ್ತಾನೆ.

ಕ್ಷೇತ್ರಭೂಮಿಂ ದದಲ್ಲೋಕೇ ಪುತ್ರ ಶ್ರಿಯಮವಾಪ್ನುಯಾತ್ ।
ರತ್ನಭೂಮಿಂ ಪ್ರದತ್ತ್ವಾ ತು ಕುಲವಂಶಂ ವಿವರ್ಧಯೇತ್ ॥೩೦॥

ಎಲೈ ಪುತ್ರನೇ, ಉಳುವ ಭೂಮಿಯನ್ನು ಕೊಡುವವನು ಲೋಕದಲ್ಲಿ ಸಂಪತ್ತನ್ನು ಹೊಂದುತ್ತಾನೆ. ರತ್ನಸಹಿತವಾದ ಭೂಮಿಯನ್ನು ದಾನ ಮಾಡುವವನು ತನ್ನ ಕುಲವನ್ನು ಮತ್ತು ವಂಶವನ್ನು ಅಭಿವೃದ್ಧಿ ಪಡಿಸುತ್ತಾನೆ.

ನ ಚೋಷರಾಂ ನ ನಿರ್ದಗ್ಧಾಂ ಮಹೀಂ ದದ್ಯಾತ್ ಕಥಂಚನ ।
ನ ಶ್ಮಶಾನಪರೀತಾಂ ಚ ನ ಚ ಪಾಪನಿಷೇವಿತಾಮ್ ॥೩೧॥

ಬಂಜರು ಭೂಮಿಯನ್ನಾಗಲೀ, ಸುಟ್ಟಭೂಮಿಯನ್ನಾಗಲೀ, ಸ್ಮಶಾನದಿಂದ ಸುತ್ತುವರಿಯಲ್ಪಟ್ಟ ಭೂಮಿಯನ್ನಾಗಲೀ, ದುಷ್ಟರು ವಾಸಿಸುವ ಭೂಮಿಯನ್ನಾಗಲೀ ಎಂದೂ ದಾನವನ್ನು ಮಾಡಬಾರದು.

ಪಾರಕ್ಯೇ ಭೂಮಿದೇಶೇ ತು ಪಿತೄಣಾಂ ನಿರ್ವಪೇತ್ ತು ಯಃ ।
ತದ್ಭೂಮಿಸ್ವಾಮಿಪಿತೃಭಿಃ ಶ್ರಾದ್ಧಕರ್ಮ ವಿಹನ್ಯತೇ ॥೩೨॥

ಇನ್ನೊಬ್ಬರ ಭೂಮಿದೇಶದಲ್ಲಿ ಪಿತೃಶ್ರಾದ್ಧವನ್ನು ಮಾಡಿದರೆ ಆ ಭೂಮಿಯ ಒಡೆಯನ ಪಿತೃಗಳು ಆ ಶ್ರಾದ್ಧಕರ್ಮವನ್ನು ವಿನಾಶಗೊಳಿಸುತ್ತಾರೆ.

ತಸ್ಮಾತ್ ಕ್ರೀತ್ವಾ ಮಹೀಂ ದದ್ಯಾತ್ ಸ್ವಲ್ಪಾಮಪಿ ವಿಚಕ್ಷಣಃ ।
ಪಿಂಡಃ ಪಿತೃಭ್ಯೋ ದತ್ತೋ ವೈ ತಸ್ಯಾಂ ಭವತಿ ಶಾಶ್ವತಃ ॥೩೩॥

ಆದ್ದರಿಂದ ವಿವೇಕಿಯಾದವನು ಸ್ವಲ್ಪ ಭೂಮಿಯನ್ನಾದರೂ ಕ್ರಯಕ್ಕೆ ತೆಗೆದುಕೊಂಡು ದಾನವನ್ನು ಕೊಡಬೇಕು. ಆ ಭೂಮಿಯಲ್ಲಿ ಪಿತೃಗಳಿಗೆ ಕೊಟ್ಟ ಪಿಂಡವು ಶಾಶ್ವತವಾಗುತ್ತದೆ.

ಅಟವೀಪರ್ವತಾಶ್ಚೈವ ನದೀತೀರ್ಥಾನಿ ಯಾನಿ ಚ ।
ಸರ್ವಾಣ್ಯಸ್ವಾಮಿಕಾನ್ಯಾಹುರ್ನ ಹಿ ತತ್ರ ಪರಿಗ್ರಹಃ ॥೩೪॥

ಕಾಡು, ಪರ್ವತಗಳು, ನದಿಗಳು, ತೀರ್ಥಗಳು ಇವೆಲ್ಲವೂ ಸ್ವಾಮಿರಹಿತವಾದುದು ಎಂದು ಹೇಳುತ್ತಾರೆ. ಅದನ್ನು ಯಾರೂ ದಾನ ಮಾಡುವಂತಿಲ್ಲ ಮತ್ತು ಪ್ರತಿಗ್ರಹ ಮಾಡುವಂತೆಯೂ ಇಲ್ಲ.

ಇತ್ಯೇತದ್ಭೂಮಿದಾನಸ್ಯ ಫಲಮುಕ್ತಂ ವಿಶಾಂಪತೇ ।
ಅತಃ ಪರಂ ತು ಗೋದಾನಂ ಕೀರ್ತಯಿಷ್ಯಾಮಿ ತೇಽನಘ ॥೩೫॥

ಎಲೈ ರಾಜನೇ, ಈ ರೀತಿಯಲ್ಲಿ ನಾನು ಭೂಮಿದಾನದ ಫಲವನ್ನು ಹೇಳಿದೆನು. ಎಲೈ ಅನಘನೇ, ಇನ್ನು ಮುಂದೆ ಗೋದಾನದ ಫಲವನ್ನು ಹೇಳುವೆನು.

ಗಾವೋऽಧಿಕಾಸ್ತಪಸ್ವಿಭ್ಯೋ ಯಸ್ಮಾತ್ ಸರ್ವೇಭ್ಯ ಏವ ಚ ।
ತಸ್ಮಾನ್ಮಹೇಶ್ವರೋ ದೇವಸ್ತಪಸ್ತಾಭಿಃ ಸಮಾಸ್ಥಿತಃ ॥೩೬॥

ಗೋವುಗಳು ಎಲ್ಲಾ ತಪಸ್ವಿಗಳಿಗಿಂತಲೂ ಶ್ರೇಷ್ಠವಾದ ಕಾರಣದಿಂದ ದೇವನಾದ ಮಹೇಶ್ವರನು ಅವುಗಳ ಜೊತೆಯಲ್ಲಿ ಇರುತ್ತಾನೆ.

ಬ್ರಹ್ಮಲೋಕೇ ವಸಂತ್ಯೇತಾಃ ಸೋಮೇನ ಸಹ ಭಾರತ ।
ಆಸಾಂ ಬ್ರಹ್ಮರ್ಷಯಃ ಸಿದ್ಧಾಃ ಪ್ರಾರ್ಥಯಂತಿ ಪರಾಂ ಗತಿಮ್ ॥೩೭॥

ಎಲೈ ಭಾರತನೇ, ಇವು ಬ್ರಹ್ಮಲೋಕದಲ್ಲಿ ಚಂದ್ರನ ಜೊತೆಯಲ್ಲಿ ಇರುತ್ತವೆ. ಬ್ರಹ್ಮರ್ಷಿಗಳು ಮತ್ತು ಸಿದ್ಧರು ಗೋವುಗಳಿಗೆ ಉಂಟಾಗುವ ಶ್ರೇಷ್ಠ ಗತಿಯನ್ನು ಪ್ರಾರ್ಥಿಸುತ್ತಾರೆ.

ಪಯಸಾ ಹವಿಷಾ ದಧ್ನಾ ಶಕೃತಾಪ್ಯಥ ಚರ್ಮಣಾ ।
ಅಸ್ಥಿಭಿಶ್ಚೋಪಕುರ್ವಂತಿ ಶೃಂಗೈರ್ವಾಲೈಶ್ಚ ಭಾರತ ॥೩೮॥

ಎಲೈ ಭಾರತನೇ, ಗೋವುಗಳು ಹಾಲಿನಿಂದಲೂ, ಹವಿಸ್ಸಿನಿಂದಲೂ, ಮೊಸರಿನಿಂದಲೂ, ಗೋಮಯದಿಂದಲೂ, ಚರ್ಮದಿಂದಲೂ, ಅಸ್ಥಿಗಳಿಂದಲೂ, ಕೊಂಬಿನಿಂದಲೂ, ಬಾಲಗಳಿಂದಲೂ ಮನುಷ್ಯರಿಗೆ ಉಪಕಾರವನ್ನು ಮಾಡುತ್ತವೆ.

ನಾಸಾಂ ಶೀತಾತಪೌ ಸ್ಯಾತಾಂ ಸದೈತಾಃ ಕರ್ಮ ಕುರ್ವತೇ ।
ನ ವರ್ಷಂ ವಿಷಮಂ ವಾಪಿ ದುಃಖಮಾಸಾಂ ಭವತ್ಯುತ ॥೩೯॥

ಅವು ಚಳಿ-ಬಿಸಿಲುಗಳನ್ನು ಗಮನಿಸುವುದಿಲ್ಲ. ಯಾವಾಗಲೂ ದುಡಿಯುತ್ತವೆ. ಮಳೆಗಾಲವಾಗಲೀ, ವಿಷಮಪರಿಸ್ಥಿತಿಯಾಗಲೀ ಅವುಗಳಿಗೆ ದುಃಖವನ್ನು ಉಂಟು ಮಾಡುವುದಿಲ್ಲ.

ಬ್ರಾಹ್ಮಣೈಃ ಸಹಿತಾ ಯಾಂತಿ ತಸ್ಮಾತ್ ಪರತರಂ ಪದಮ್ ।
ಏಕಂ ಗೋಬ್ರಾಹ್ಮಣಂ ತಸ್ಮಾತ್ ಪ್ರವದಂತಿ ಮನೀಷಿಣಃ ॥೪೦॥

ಅವು ಬ್ರಾಹ್ಮಣರ ಜೊತೆಯಲ್ಲಿ ಹೋಗುತ್ತವೆ. ಆದ್ದರಿಂದ ಬಹಳ ಶ್ರೇಷ್ಠವಾದವುಗಳು. ಆದ್ದರಿಂದ ಪ್ರಾಜ್ಞರು ಗೋವುಗಳು ಮತ್ತು ಬ್ರಾಹ್ಮಣರು ಒಂದೇ ಎಂದು ಹೇಳುತ್ತಾರೆ.

ರಂತಿದೇವಸ್ಯ ಯಜ್ಞೇ ತಾಃ ಪಶುತ್ವೇನೋಪಕಲ್ಪಿತಾಃ ।
ತತಶ್ಚರ್ಮಣ್ವತೀ ರಾಜನ್ ಗೋಚರ್ಮಭ್ಯಃ ಪ್ರವರ್ತಿತಾ ॥೪೧॥

ರಂತಿದೇವನ ಯಜ್ಞದಲ್ಲಿ ಅವುಗಳನ್ನು ಪಶುಗಳಾಗಿ ಕಲ್ಪಿಸಲಾಯಿತು. ಎಲೈ ರಾಜನೇ, ಆಗ ಅವುಗಳ ಚರ್ಮದಿಂದ ಚರ್ಮಣ್ವತೀ ನದಿಯು ಪ್ರವೃತ್ತವಾಯಿತು.

ಪಶುತ್ವಾಚ್ಚ ವಿನಿರ್ಮುಕ್ತಾಃ ಪ್ರದಾನಾಯೋಪಕಲ್ಪಿತಾಃ ।
ತಾ ಇಮಾ ವಿಪ್ರಮುಖ್ಯೇಭ್ಯೋ ಯೋ ದದಾತಿ ಮಹೀಪತೇ ।
ನಿಸ್ತರೇದಾಪದಂ ಕೃಚ್ಛ್ರಾಂ ವಿಷಮಸ್ಥೋऽಪಿ ಪಾರ್ಥಿವ ॥೪೨॥

ಅನಂತರ ಅವು ಪಶುತ್ವವನ್ನು ತೊರೆದು ದಾನಕ್ಕೆ ಶ್ರೇಷ್ಠವಾದ ವಸ್ತುಗಳಾದವು. ಎಲೈ ರಾಜನೇ, ಅಂತಹ ಈ ಗೋವುಗಳನ್ನು ಶ್ರೇಷ್ಠ ಬ್ರಾಹ್ಮಣರಿಗೆ ದಾನವನ್ನು ಮಾಡುವವನು ವಿಷಮ ಪರಿಸ್ಥಿತಿಗೆ ಸಿಕ್ಕಿದರೂ ಎಲ್ಲ ಆಪತ್ತುಗಳನ್ನೂ, ಕಷ್ಟಗಳನ್ನೂ ದಾಟುತ್ತಾನೆ.

ಗವಾಂ ಸಹಸ್ರದಃ ಪ್ರೇತ್ಯ ನರಕಂ ನ ಪ್ರಪಶ್ಯತಿ ।
ಸರ್ವತ್ರ ವಿಜಯಂ ಚಾಪಿ ಲಭತೇ ಮನುಜಾಧಿಪ ॥೪೩॥

ಸಹಸ್ರ ಗೋದಾನವನ್ನು ಮಾಡುವವನು ಮರಣಾನಂತರದಲ್ಲಿ ನರಕವನ್ನು ನೋಡುವುದಿಲ್ಲ. ಎಲೈ ಮನುಜಾಧಿಪನೇ, ಅವನು ಎಲ್ಲ ಕಡೆಗಳಲ್ಲಿಯೂ ಜಯವನ್ನೇ ಪಡೆಯುತ್ತಾನೆ.

ಅಮೃತಂ ವೈ ಗವಾಂ ಕ್ಷೀರಮಿತ್ಯಾಹ ತ್ರಿದಶಾಧಿಪಃ ।
ತಸ್ಮಾದ್ ದದಾತಿ ಯೋ ಧೇನುಮಮೃತಂ ಸ ಪ್ರಯಚ್ಛತಿ ॥೪೪॥

ಸ್ವರ್ಗಾಧಿಪತಿಯಾದ ಇಂದ್ರನು ಗೋವುಗಳ ಕ್ಷೀರವನ್ನು ಅಮೃತವೆಂದು ಹೇಳಿದೆನು. ಆದ್ದರಿಂದ ಗೋದಾನ ಮಾಡುವವನು ಅಮೃತದಾನವನ್ನು ಮಾಡುತ್ತಾನೆ.

ಅಗ್ನೀನಾಮವ್ಯಯಂ ಹ್ಯೇತದ್ ಹೌಮ್ಯಂ ವೇದವಿದೋ ವಿದುಃ ।
ತಸ್ಮಾದ್ ದದಾತಿ ಯೋ ಧೇನುಂ ಸ ಹೌಮ್ಯಂ ಸಂಪ್ರಯಚ್ಛತಿ ॥೪೫॥

ವೇದವಿದ್ವಾಂಸರು ಕ್ಷೀರವನ್ನು ಅಗ್ನಿಗಳಿಗೆ ಶಾಶ್ವತವಾದ ಹವಿಸ್ಸೆಂದು ತಿಳಿಯುತ್ತಾರೆ. ಆದ್ದರಿಂದ ಯಾವನು ಗೋದಾನವನ್ನು ಮಾಡುತ್ತಾನೆಯೋ ಅವನು ಹೋಮ ದ್ರವ್ಯವನ್ನು ದಾನ ಮಾಡುತ್ತಾನೆ.

ಸ್ವರ್ಗೋ ವೈ ಮೂರ್ತಿಮಾನೇಷ ವೃಷಭಂ ಯೋ ಗವಾಂ ಪತಿಮ್ ।
ವಿಪ್ರೇ ಗುಣಯುತೇ ದದ್ಯಾತ್ ಸ ವೈ ಸ್ವರ್ಗೇ ಮಹೀಯತೇ ॥೪೬॥

ವೃಷಭವು ಶರೀರವನ್ನು ಧರಿಸಿದ ಸ್ವರ್ಗ. ಗೋವುಗಳಿಗೆ ಪತಿಯಾದ ವೃಷಭವನ್ನು ಯಾರು ಗುಣವಂತನಾದ ಬ್ರಾಹ್ಮಣನಿಗೆ ದಾನ ಮಾಡುತ್ತಾನೆಯೋ ಅವನು ಸ್ವರ್ಗದಲ್ಲಿ ಸತ್ಕರಿಸಲ್ಪಡುತ್ತಾನೆ.

ಪ್ರಾಣಾ ವೈ ಪ್ರಾಣಿನಾಮೇತೇ ಪ್ರೋಚ್ಯಂತೇ ಭರತರ್ಷಭ ।
ತಸ್ಮಾದ್ ದದಾತಿ ಯೋ ಧೇನುಂ ಪ್ರಾಣಾನ್ ವೈ ಸ ಪ್ರಯಚ್ಛತಿ ॥೪೭॥

ಎಲೈ ಭರತಶ್ರೇಷ್ಠನೇ, ಗೋವುಗಳನ್ನು ಪ್ರಾಣಿಗಳ ಪ್ರಾಣವೆಂದು ಹೇಳುತ್ತಾರೆ. ಆದ್ದರಿಂದ ಗೋದಾನವನ್ನು ಮಾಡುವವನು ಪ್ರಾಣದಾನವನ್ನು ಮಾಡುತ್ತಾನೆ.

ಗಾವಃ ಶರಣ್ಯಾ ಭೂತಾನಾಮಿತಿ ವೇದವಿದೋ ವಿದುಃ ।
ತಸ್ಮಾದ್ ದದಾತಿ ಯೋ ಧೇನುಂ ಶರಣಂ ಸಂಪ್ರಯಚ್ಛತಿ ॥೪೮॥

ಗೋವುಗಳು ಪ್ರಾಣಿಗಳಿಗೆ ಆಶ್ರಯವನ್ನು ಕೊಡುವಂತಹವು ಎಂದು ವೇದಜ್ಞರು ತಿಳಿದಿದ್ದಾರೆ. ಆದ್ದರಿಂದ ಗೋದಾನವನ್ನು ಮಾಡುವವನು ಗೃಹದಾನವನ್ನು ಮಾಡುವವನಾಗುತ್ತಾನೆ.

ನ ವಧಾರ್ಥಂ ಪ್ರದಾತವ್ಯಾ ನ ಕೀನಾಶೇ ನ ನಾಸ್ತಿಕೇ ।
ಗೋಜೀವಿನೇ ನ ದಾತವ್ಯಾ ತಥಾ ಗೌಃ ಪುರುಷರ್ಷಭ ॥೪೯॥

ಎಲೈ ಪುರುಷಶ್ರೇಷ್ಠನೇ, ಗೋವುಗಳನ್ನು ವಧೆಗಾಗಿ ಕಟುಕರಿಗಾಗಲೀ, ದುಡಿಯುವ ಕೃಷಿಕರಿಗಾಗಲೀ, ನಾಸ್ತಿಕನಿಗಾಗಲೀ, ಗೋವನ್ನು ದುಡಿಸಿ ಜೀವನವನ್ನು ಮಾಡುವವನಿಗಾಗಲೀ ಕೊಡಬಾರದು.

ದದಾತಿ ತಾದೃಶಾನಾಂ ವೈ ನರೋ ಗಾಃ ಪಾಪಕರ್ಮಣಾಮ್ ।
ಅಕ್ಷಯಂ ನರಕಂ ಯಾತೀತ್ಯೇವಮಾಹುರ್ಮನೀಷಿಣಃ ॥೫೦॥

ಅಂತಹ ಪಾಪಕರ್ಮಿಗಳಿಗೆ ಗೋದಾನವನ್ನು ಮಾಡುವವನು ಶಾಶ್ವತವಾದ ನರಕವನ್ನು ಹೊಂದುತ್ತಾನೆ ಎಂದು ಜ್ಞಾನಿಗಳು ಹೇಳುತ್ತಾರೆ.

ನ ಕೃಶಾಂ ನಾಪವತ್ಸಾಂ ವಾ ವಂಧ್ಯಾಂ ರೋಗಾನ್ವಿತಾಂ ತಥಾ ।
ನ ವ್ಯಂಗಾಂ ನ ಪರಿಶ್ರಾಂತಾಂ ದದ್ಯಾದ್ ಗಾಂ ಬ್ರಾಹ್ಮಣಾಯ ವೈ ॥

ಬ್ರಾಹ್ಮಣನಿಗೆ ಕೃಶವಾದ ಅಥವಾ ಕರು ಇಲ್ಲದ ಅಥವಾ ಬಂಜೆಯಾದ ಅಥವಾ ರೋಗದಿಂದ ಕೂಡಿದ ಅಥವಾ ಅಂಗವಿಹೀನವಾದ ಅಥವಾ ಬಳಲಿದ ಗೋವನ್ನು ದಾನ ಮಾಡಬಾರದು.

ದಶಗೋಸಹಸ್ರದಃ ಸಮ್ಯಕ್ ಶಕ್ರೇಣ ಸಹ ಮೋದತೇ ।
ಅಕ್ಷಯಾನ್ ಲಭತೇ ಲೋಕಾನ್ ನರಃ ಶತಸಹಸ್ರದಃ ॥೫೨॥

ಹತ್ತು ಸಹಸ್ರ ಗೋದಾನವನ್ನು ಮಾಡುವವನು ಇಂದ್ರನ ಜೊತೆಯಲ್ಲಿ ಸಂತೋಷ ಪಡುತ್ತಾನೆ. ಲಕ್ಷ ಗೋದಾನವನ್ನು ಮಾಡುವವನು ಅಕ್ಷಯ ಲೋಕಗಳನ್ನು ಪಡೆಯುತ್ತಾನೆ.

ಇತ್ಯೇತದ್ ಗೋಪ್ರದಾನಂ ಚ ತಿಲದಾನಂ ಚ ಕೀರ್ತಿತಮ್ ।
ತಥಾ ಭೂಮಿಪ್ರದಾನಂ ಚ ಶೃಣುಷ್ವಾನ್ಯೇ ಚ ಭಾರತ ॥೫೩॥

ಈ ರೀತಿಯಲ್ಲಿ ನಾನು ಗೋದಾನ ಮತ್ತು ತಿಲದಾನದ ಫಲವನ್ನು ಹೇಳಿದ್ದೇನೆ. ಎಲೈ ಭಾರತನೇ, ಇನ್ನು ಭೂಮಿಪ್ರದಾನವನ್ನು ಹೇಳುತ್ತೇನೆ, ಅದನ್ನು ಕೇಳು.

ಅನ್ನದಾನಂ ಪ್ರಧಾನಂ ಹಿ ಕೌಂತೇಯ ಪರಿಚಕ್ಷತೇ ।
ಅನ್ನಸ್ಯ ಹಿ ಪ್ರದಾನೇನ ರಂತಿದೇವೋ ದಿವಂ ಗತಃ ॥೫೪॥

ಎಲೈ ಕೌಂತೇಯನೇ, ಅನ್ನದಾನವು ಪ್ರಧಾನವಾದುದೆಂದು ಹೇಳುತ್ತಾರೆ. ಅನ್ನದಾನದಿಂದಲೇ ರಂತಿದೇವನು ಸ್ವರ್ಗಕ್ಕೆ ಹೋದನಷ್ಟೆ?

ಶ್ರಾಂತಾಯ ಕ್ಷುಧಿತಾಯಾನ್ನಂ ಯಃ ಪ್ರಯಚ್ಛತಿ ಭೂಮಿಪ ।
ಸ್ವಾಯಂಭುವಂ ಮಹಾಭಾಗಂ ಸ ಪಶ್ಯತಿ ನರಾಧಿಪ ॥೫೫॥

ಎಲೈ ರಾಜನೇ, ದಣಿದು ಹಸಿದವನಿಗೆ ಅನ್ನವನ್ನು ಕೊಡುವವನು ಮಹಾನುಭಾವರಾದ ಬ್ರಹ್ಮದೇವರನ್ನು ನೋಡುತ್ತಾನೆ.

ನ ಹಿರಣ್ಯೈರ್ನ ವಾಸೋಭಿರ್ನಾಶ್ವದಾನೇನ ಭಾರತ ।
ಪ್ರಾಪ್ನುವಂತಿ ನರಾಃ ಶ್ರೇಯೋ ಯಥೇಹಾನ್ನಪ್ರದಾಃ ಪ್ರಭೋ ॥೫೬॥

ಎಲೈ ಭಾರತನೇ, ಪ್ರಭುವೇ, ಅನ್ನದಾನದಿಂದ ಮಾನವರು ಎಂತಹ ಶ್ರೇಯಸ್ಸನ್ನು ಹೊಂದುತ್ತಾರೋ ಅಂತಹ ಶ್ರೇಯಸ್ಸನ್ನು ಹಿರಣ್ಯದಾನದಿಂದಾಗಲೀ, ವಸ್ತ್ರದಾನದಿಂದಾಗಲೀ, ಅಶ್ವದಾನದಿಂದಾಗಲೀ ಪಡೆಯುವುದಿಲ್ಲ.

ಅನ್ನಂ ವೈ ಪರಮಂ ದ್ರವ್ಯಮನ್ನಂ ಶ್ರೀಶ್ಚ ಪರಾ ಮತಾ ।
ಅನ್ನಾತ್ ಪ್ರಾಣಃ ಪ್ರಭವತಿ ತೇಜೋ ವೀರ್ಯಂ ಬಲಂ ತಥಾ ॥೫೭॥

ಅನ್ನವು ಶ್ರೇಷ್ಠವಾದ ದ್ರವ್ಯ. ಅನ್ನವು ಶ್ರೇಷ್ಠವಾದ ಸಂಪತ್ತು. ಅನ್ನದಿಂದ ಪ್ರಾಣವು ಉಂಟಾಗುತ್ತದೆ. ತೇಜಸ್ಸು, ವೀರ್ಯ ಮತ್ತು ಬಲಗಳು ಅನ್ನದಿಂದ ಉಂಟಾಗುತ್ತವೆ.

ಸದ್ಭ್ಯೋ ದದಾತಿ ಯಶ್ಚಾನ್ನಂ ಸದೈಕಾಗ್ರಮನಾ ನರಃ ।
ನ ಸ ದುರ್ಗಾಣ್ಯವಾಪ್ನೋತೀತ್ಯೇವಮಾಹ ಪರಾಶರಃ ॥೫೮॥

ಯಾವ ಮನುಷ್ಯನು ಏಕಾಗ್ರಚಿತ್ತದಿಂದ ಸಜ್ಜನರಿಗೆ ಅನ್ನದಾನವನ್ನು ಮಾಡುತ್ತಾನೆಯೋ ಅವನು ಕಷ್ಟವನ್ನು ಹೊಂದುವುದಿಲ್ಲ ಎಂದು ಪರಾಶರರು ಹೇಳಿದ್ದಾರೆ.

ಅರ್ಚಯಿತ್ವಾ ಯಥಾನ್ಯಾಯಂ ದೇವೇಭ್ಯೋಽನ್ನಂ ನಿವೇದಯೇತ್ ।
ಯದನ್ನೋ ಹಿ ನರೋ ರಾಜಂಸ್ತದನ್ನಾಸ್ತಸ್ಯ ದೇವತಾಃ ॥೫೯॥

ದೇವತಾ ಪೂಜೆಯನ್ನು ಮಾಡಿ ವಿಧ್ಯುಕ್ತವಾಗಿ ದೇವತೆಗಳಿಗೆ ಅನ್ನವನ್ನು ನಿವೇದನೆ ಮಾಡಬೇಕು. ಮನುಷ್ಯನಿಗೆ ಯಾವ ಅನ್ನವು ವಿಹಿತವಾಗಿದೆಯೋ ದೇವತೆಗಳು ಅವನಿಂದ ಆ ಅನ್ನವನ್ನು ಸ್ವೀಕರಿಸುತ್ತಾರೆ.

ಕೌಮುದ್ಯಾಂ ಶುಕ್ಲಪಕ್ಷೇ ತು ಯೋಽನ್ನದಾನಂ ಕರೋತ್ಯುತ ।
ಸ ಸಂತರತಿ ದುರ್ಗಾಣಿ ಪ್ರೇತ್ಯ ಚಾನಂತ್ಯಮಶ್ನುತೇ ॥೬೦॥

ಕಾರ್ತಿಕ ಮಾಸದ ಶುಕ್ಲಪಕ್ಷದಲ್ಲಿ ಅನ್ನದಾನವನ್ನು ಮಾಡುವವನು ಕಷ್ಟಗಳನ್ನು ದಾಟಿ, ಮರಣವನ್ನು ಹೊಂದಿದ ಮೇಲೆ ಅನಂತ ಸುಖವನ್ನು ಪಡೆಯುತ್ತಾನೆ.

ಅಭುಕ್ತ್ವಾ ತ್ವತಿಥಯೇ ಚಾನ್ನಂ ಪ್ರಯಚ್ಛೇದ್ ಯಃ ಸಮಾಹಿತಃ ।
ಸ ವೈ ಬ್ರಹ್ಮವಿದಾಂ ಲೋಕಾನ್ ಪ್ರಾಪ್ನುಯಾದ್ ಭರತರ್ಷಭ ॥೬೧॥

ತಾನು ಉಪವಾಸದಿಂದ ಇದ್ದು, ಅತಿಥಿಗೆ ಅನ್ನದಾನವನ್ನು ಮಾಡುವವನು ಎಲೈ ಭರತರ್ಷಭನೇ, ಬ್ರಹ್ಮಜ್ಞಾನಿಗಳ ಲೋಕವನ್ನು ಹೊಂದುತ್ತಾನೆ.

ಸುಕೃಚ್ಛ್ರಮಾಪದಂ ಪ್ರಾಪ್ತಶ್ಚಾನ್ನದಃ ಪುರುಷಸ್ತರೇತ್ ।
ಪಾಪಂ ತರತಿ ಚೈವೇಹ ದುಷ್ಕೃತಂ ಚಾಪಕರ್ಷತಿ ॥೬೨॥

ಎಂತಹ ಕಷ್ಟಕ್ಕೆ ಸಿಲುಕಿದ್ದರೂ ಮನುಷ್ಯನು ಅನ್ನದಾನವನ್ನು ಮಾಡಿದರೆ ಆ ಕಷ್ಟವನ್ನು ದಾಟುತ್ತಾನೆ. ಪಾಪವನ್ನು ಮತ್ತು ದುಷ್ಕರ್ಮವನ್ನೂ ಕಳೆದುಕೊಳ್ಳುತ್ತಾನೆ.

ಇತ್ಯೇತದನ್ನದಾನಸ್ಯ ತಿಲದಾನಸ್ಯ ಚೈವ ಹ ।
ಭೂಮಿದಾನಸ್ಯ ಚ ಫಲಂ ಗೋದಾನಸ್ಯ ಚ ಕೀರ್ತಿತಮ್ ॥೬೩॥

ಈ ರೀತಿಯಲ್ಲಿ ನಾನು ನಿನಗೆ ಅನ್ನದಾನದ, ತಿಲದಾನದ, ಭೂಮಿದಾನದ ಮತ್ತು ಗೋದಾನದ ಫಲವನ್ನು ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋಭೂತಿಲದಾನ್ನದಾನಪ್ರಶಂಸಾನಾಮ
ಷಣ್ಣವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೇಳನೆಯ ಅಧ್ಯಾಯ

ಜಲದಾನಫಲ

ಯುಧಿಷ್ಠಿರಃ

ಶ್ರುತಂ ದಾನಫಲಂ ತಾತ ಯತ್ತ್ವಯಾ ಪರಿಕೀರ್ತಿತಮ್ ।
ಅನ್ನಂ ತು ತೇ ವಿಶೇಷೇಣ ಪ್ರಶಸ್ತಮಿಹ ಭಾರತ ॥೧॥

ಪಾನೀಯದಾನಂ ಪರಮಂ ಕಥಂ ಚೇಹ ಮಹಾಫಲಮ್ ।
ಇತ್ಯೇತಚ್ಛ್ರೋತುಮಿಚ್ಛಾಮಿ ವಿಸ್ತರೇಣ ಪಿತಾಮಹ ॥೨॥

ಯುಧಿಷ್ಠಿರ– ಎಲೈ ಭಾರತನೇ, ಪ್ರೀತಿಪಾತ್ರನೇ, ನೀನು ಹೇಳಿದ ದಾನದ ಫಲಗಳನ್ನು ಕೇಳಿದೆನು. ಅನ್ನದಾನವು ಬಹಳ ಪ್ರಶಸ್ತವಾದುದು ಎಂದು ಹೇಳಿದ್ದೀಯೆ. ಎಲೈ ಪಿತಾಮಹನೇ, ಪಾನೀಯ ದಾನವು ಹೇಗೆ ಮಹಾಫಲವನ್ನು ಕೊಡುತ್ತದೆ ಎಂದು ವಿಸ್ತಾರವಾಗಿ ಕೇಳಲು ಬಯಸುತ್ತೇನೆ.

ಭೀಷ್ಮಃ

ಹಂತ ತೇ ವರ್ತಯಿಷ್ಯಾಮಿ ಯಥಾವದ್ ಭರತರ್ಷಭ ।
ಗದತಸ್ತನ್ಮಮಾದ್ಯೇಹ ಶೃಣು ಸತ್ಯಪರಾಕ್ರಮ ।
ಪಾನೀಯದಾನಾತ್ ಪ್ರಭೃತಿ ಸರ್ವಂ ವಕ್ಷ್ಯಾಮಿ ತೇಽನಘ ॥೩॥

ಭೀಷ್ಮ– ಭರತಶ್ರೇಷ್ಠನೇ, ಸಂತೋಷ. ನಿನಗೆ ಯಥಾರ್ಥವಾಗಿ ಹೇಳುತ್ತೇನೆ. ಸತ್ಯಪರಾಕ್ರಮನೇ, ನಾನು ಹೇಳುವಂತೆ ನನ್ನ ಮಾತನ್ನು ಕೇಳು. ಎಲೈ ಅನಘನೇ, ಜಲದಾನದಿಂದ ಹಿಡಿದು ಎಲ್ಲವನ್ನೂ ನಿನಗೆ ಹೇಳುವೆನು.

ಯದನ್ನಂ ಯಚ್ಚ ಪಾನೀಯಂ ಸಂಪ್ರದಾಯಾಶ್ನುತೇ ನರಃ ।
ನ ತಸ್ಮಾತ್ ಪರಮಂ ದಾನಂ ಕಿಂಚಿದಸ್ತೀತಿ ಮೇ ಮತಿಃ ॥೪॥

ಮನುಷ್ಯನು ಅನ್ನದಾನವನ್ನು ಮತ್ತು ಜಲದಾನವನ್ನು ಮಾಡಿ ಏನನ್ನು ಪಡೆಯುತ್ತಾನೆಯೋ (ಅದನ್ನು ಬೇರೆ ದಾನದಿಂದ ಪಡೆಯುವುದಿಲ್ಲ). ಆ ಕಾರಣದಿಂದ ಅನ್ನ-ಜಲದಾನಗಳಿಗಿಂತ ಶ್ರೇಷ್ಠವಾದ ದಾನವು ಇನ್ನೊಂದಿಲ್ಲ ಎಂದು ನನ್ನ ಅಭಿಪ್ರಾಯ.

ಅನ್ನಾತ್ ಪ್ರಾಣಭೃತಸ್ತಾತ ಪ್ರವರ್ತಂತೇ ಹಿ ಸರ್ವಶಃ ।
ತಸ್ಮಾದನ್ನಂ ಪರಂ ಲೋಕೇ ಸರ್ವದಾನೇಷು ಕಥ್ಯತೇ ।
ತಸ್ಮಿನ್ ಭವತಿ ಪಾನೀಯಂ ಸರ್ವದಾನಾತ್ ಪರಂ ತತಃ ॥೫॥

ಎಲೈ ಪ್ರೀತಿಪಾತ್ರನೇ, ಅನ್ನದಿಂದ ಎಲ್ಲಾ ಪ್ರಾಣಿಗಳೂ ಪ್ರವೃತ್ತಿಯನ್ನು ಮಾಡುತ್ತವೆ. ಆದ್ದರಿಂದ ಲೋಕದಲ್ಲಿ ಅನ್ನದಾನವು ಎಲ್ಲ ದಾನಗಳಿಗಿಂತ ಶ್ರೇಷ್ಠವೆಂದು

ಹೇಳಲ್ಪಡುತ್ತದೆ. ಅನ್ನದಾನದಲ್ಲಿ ಪಾನೀಯವೂ ಸೇರಿಕೊಂಡಿದೆ. ಆದ್ದರಿಂದ ಜಲದಾನವೂ ಶ್ರೇಷ್ಠವಾಗುತ್ತದೆ.

ಅನ್ನಾದ್ ಬಲಂ ಚ ತೇಜಶ್ಚ ಪ್ರಾಣಿನಾಂ ವರ್ಧತೇ ಸದಾ ।
ಅನ್ನದಾನಮತಸ್ತಸ್ಮಾಚ್ಛ್ರೇಷ್ಠಮಾಹ ಪ್ರಜಾಪತಿಃ ॥೬॥

ಅನ್ನದಿಂದ ಪ್ರಾಣಿಗಳ ಬಲವು ಮತ್ತು ತೇಜಸ್ಸು ಹೆಚ್ಚುತ್ತವೆ. ಆದ್ದರಿಂದ ಅನ್ನದಾನವು ಶ್ರೇಷ್ಠವೆಂದು ಪ್ರಜಾಪತಿಯು ಹೇಳಿದ್ದಾನೆ.

ಸಾವಿತ್ರ್ಯಾ ಹ್ಯಪಿ ಕೌಂತೇಯ ಶ್ರುತಂ ತೇ ವಚನಂ ಶುಭಮ್ ।
ಯತಶ್ಚೈತದ್ ಯಥಾ ಚೈತದ್ ದೇವಸತ್ರೇ ಮಹಾಮತೇ ॥೭॥

ಎಲೈ ಕೌಂತೇಯನೇ, ಮಹಾಮತಿಯೇ, ದೇವಸತ್ರದಲ್ಲಿ ಸಾವಿತ್ರಿಯು ಅನ್ನದಾನವನ್ನು ಏಕೆ ಮಾಡಬೇಕು ಹೇಗೆ ಮಾಡಬೇಕು ಎಂದು ಹೇಳಿದ ಶುಭವಚನಗಳನ್ನು ನೀನು ಕೇಳಿದ್ದೀಯೆ.

ಅನ್ನೇ ದತ್ತೇ ನರೇಣೇಹ ಪ್ರಾಣಾ ದತ್ತಾ ಭವಂತ್ಯುತ ।
ಪ್ರಾಣದಾನಾದ್ಧಿ ಪರಮಂ ನ ದಾನಮಿಹ ವಿದ್ಯತೇ ॥೮॥

ಮನುಷ್ಯನು ಅನ್ನದಾನವನ್ನು ಮಾಡಿದರೆ ಪ್ರಾಣದಾನವನ್ನು ಮಾಡಿದಂತಾಗುತ್ತದೆ. ಪ್ರಾಣದಾನಕ್ಕಿಂತ ಶ್ರೇಷ್ಠವಾದ ದಾನವು ಯಾವುದೂ ಇಲ್ಲವಷ್ಟೆ?

ಶ್ರುತಂ ಹಿ ತೇ ಮಹಾಬಾಹೋ ಲೋಮಶಸ್ಯಾಪಿ ತದ್ವಚಃ ।
ಪ್ರಾಣಾನ್ ದತ್ತ್ವಾ ಕಪೋತಾಯ ಯತ್‌ಪ್ರಾಪ್ತಂ ಶಿಬಿನಾ ಪುರಾ ॥೯॥

ಎಲೈ ಮಹಾಬಾಹುವೇ, ಲೋಮಶರು ಹೇಳಿದ, ಶಿಬಿಯು ಕಪೋತಕ್ಕೆ ಪ್ರಾಣವನ್ನು ಕೊಟ್ಟುಸಂಪಾದಿಸಿದ, ಪುಣ್ಯದ ಕಥೆಗಳನ್ನು ನೀನು ಕೇಳಿದ್ದೀಯಷ್ಟೆ?

ತಾಂ ಗತಿಂ ಲಭತೇ ದತ್ತ್ವಾ ದ್ವಿಜಸ್ಯಾನ್ನಂ ವಿಶಾಂಪತೇ ।
ಗತಿಂ ವಿಶಿಷ್ಟಾಂ ಗಚ್ಛಂತಿ ಪ್ರಾಣದಾ ಇತಿ ನಃ ಶ್ರುತಮ್ ॥೧೦॥

ಎಲೈ ರಾಜನೇ, ಬ್ರಾಹ್ಮಣನಿಗೆ ಅನ್ನದಾನವನ್ನು ಮಾಡಿದರೆ ಅಂತಹ ಗತಿಯು ಲಭ್ಯವಾಗುತ್ತದೆ. ಪ್ರಾಣದಾನವನ್ನು ಮಾಡುವವರಿಗೆ ವಿಶಿಷ್ಟವಾದ ಗತಿಯುಂಟಾಗುವುದೆಂದು ನಾವು ಕೇಳಿದ್ದೇವೆ.

ಅನ್ನಂ ಚಾಪಿ ಪ್ರಭವತಿ ಪಾನೀಯಾತ್ ಕುರುಸತ್ತಮ ।
ನೀರಜಾತೇನ ಹಿ ವಿನಾ ನ ಕಿಂಚಿತ್ ಸಂಪ್ರವರ್ತತೇ ॥೧೧॥

ಎಲೈ ಕುರುಶ್ರೇಷ್ಠನೇ, ಆ ಅನ್ನವಾದರೂ ಜಲದಿಂದ ಉಂಟಾಗುತ್ತದೆ. ಜಲದಿಂದ ಹುಟ್ಟಿದುದನ್ನು ಬಿಟ್ಟು ಯಾವುದೂ ಪ್ರವೃತ್ತವಾಗುವುದಿಲ್ಲ.

ನೀರಜಾತಶ್ಚ ಭಗವಾನ್ ಸೋಮೋ ಗ್ರಹಗಣೇಶ್ವರಃ ।
ಅಮೃತಂ ಚ ಸುಧಾ ಚೈವ ಸ್ವಾಹಾ ಚೈವ ವಷಟ್‌ತಥಾ ॥೧೨॥

ಗ್ರಹಗಣೇಶ್ವರನಾದ ಪೂಜ್ಯನಾದ ಚಂದ್ರನು ನೀರಿನಿಂದ ಜನಿಸಿದ್ದಾನೆ. ಅಮೃತ, ಸುಧಾ, ಸ್ವಾಹಾ ಮತ್ತು ವಷಟ್‌ಕಾರಗಳು ನೀರಿನಿಂದ ಜನಿಸಿವೆ.

ಅನ್ನೌಷಧ್ಯೋ ಮಹಾರಾಜ ವೀರುಧಶ್ಚ ಜಲೋದ್ಭವಾಃ ।
ಯತಃ ಪ್ರಾಣಭೃತಾಂ ಪ್ರಾಣಾಃ ಸಂಭವಂತಿ ವಿಶಾಂಪತೇ ॥೧೩॥

ಎಲೈ ಮಹಾರಾಜನೇ, ಅನ್ನಗಳು, ಓಷಧಿಗಳು, ಲತೆಗಳು ನೀರಿನಿಂದ ಜನಿಸಿವೆ. ಎಲೈ ರಾಜನೇ, ಅನ್ನೌಷಧಿ ಲತೆಗಳಿಂದ ಮನುಷ್ಯನ ಪ್ರಾಣವು ಧರಿಸಲ್ಪಡುತ್ತದೆ.

ದೇವಾನಾಮಮೃತಂ ಚಾನ್ನಂ ನಾಗಾನಾಂ ಚ ಸುಧಾ ತಥಾ ।
ಪಿತೃಣಾಂ ಚ ಸ್ವಧಾ ಪ್ರೋಕ್ತಾ ಪಶೂನಾಂ ಚಾಪಿ ವೀರುಧಃ ॥೧೪॥

ದೇವತೆಗಳಿಗೆ ಅಮೃತವು ಅನ್ನ. ನಾಗಗಳಿಗೆ ಕ್ಷೀರವು ಅನ್ನ. ಪಿತೃಗಳಿಗೆ ಸ್ವಧೆಯು ಅನ್ನ. ಪಶುಗಳಿಗೆ ತೃಣಲತಾದಿಗಳು ಅನ್ನ.

ಅನ್ನಮೇವ ಮನುಷ್ಯಾಣಾಂ ಪ್ರಾಣಾನಾಹುರ್ಮನೀಷಿಣಃ ।
ತಚ್ಚ ಸರ್ವಂ ನರವ್ಯಾಘ್ರ ಪಾನೀಯಾತ್ ಸಂಪ್ರವರ್ತತೇ ॥೧೫॥

ಮನುಷ್ಯರಿಗೆ ಅನ್ನವೇ ಪ್ರಾಣವೆಂದು ಜ್ಞಾನಿಗಳು ಹೇಳುತ್ತಾರೆ. ಎಲೈ ನರವ್ಯಾಘ್ರನೇ, ಅವೆಲ್ಲವೂ ಜಲದಿಂದ ಉಂಟಾಗುತ್ತವೆ.

ತಸ್ಮಾತ್ ಪಾನೀಯದಾನಾದ್ ವೈ ನ ಪರಂ ವಿದ್ಯತೇ ಕ್ವಚಿತ್ ।
ತಚ್ಚ ದದ್ಯಾನ್ನರೋ ನಿತ್ಯಂ ಯ ಇಚ್ಛೇದ್ ಭೂತಿಮಾತ್ಮನಃ ॥೧೬॥

ಆದ್ದರಿಂದ ಜಲದಾನಕ್ಕಿಂತಲೂ ಶ್ರೇಷ್ಠವಾದ ದಾನವು ಇನ್ನೊಂದಿಲ್ಲ. ತನಗೆ ಶ್ರೇಯಸ್ಸನ್ನು ಅಪೇಕ್ಷಿಸುವ ಪುರುಷನು ನಿತ್ಯವೂ ಜಲದಾನವನ್ನು ಮಾಡಬೇಕು.

ಧನ್ಯಂ ಯಶಸ್ಯಮಾಯುಷ್ಯಂ ಜಲದಾನಂ ವಿಶಾಂಪತೇ ।
ಶತ್ರೂಂಶ್ಚಾಪ್ಯಧಿ ಕೌಂತೇಯ ಸದಾ ತಿಷ್ಠತಿ ತೋಯದಃ ॥೧೭॥

ಎಲೈ ರಾಜನೇ, ಜಲದಾನವು ಬಲಪ್ರದವಾದುದು, ಕೀರ್ತಿಪ್ರದವಾದುದು ಮತ್ತು ಆಯುಃಪ್ರದವಾದುದು. ಕೌಂತೇಯನೇ, ಜಲದಾನವನ್ನು ಮಾಡುವವನು ಶತ್ರುಗಳನ್ನು ಮೆಟ್ಟಿನಿಲ್ಲುತ್ತಾನೆ.

ಸರ್ವಕಾಮಾನವಾಪ್ನೋತಿ ಕೀರ್ತಿಂ ಚೈವೇಹ ಶಾಶ್ವತೀಮ್ ।
ಪ್ರೇತ್ಯ ಚಾನಂತ್ಯಮಾಪ್ನೋತಿ ಪಾಪೇಭ್ಯಶ್ಚ ಪ್ರಮುಚ್ಯತೇ ॥೧೮॥

ಸರ್ವಕಾಮಗಳನ್ನೂ ಹೊಂದುತ್ತಾನೆ. ಈ ಲೋಕದಲ್ಲಿ ಶಾಶ್ವತವಾದ ಕೀರ್ತಿಯನ್ನು ಹೊಂದುತ್ತಾನೆ. ಮರಣವನ್ನು ಹೊಂದಿದ ಮೇಲೆ ಅನಂತ ಸುಖವನ್ನು ಪಡೆಯುತ್ತಾನೆ ಮತ್ತು ಪಾಪಗಳಿಂದ ಮುಕ್ತನಾಗುತ್ತಾನೆ.

ತೋಯದೋ ಮನುಜವ್ಯಾಘ್ರ ಸ್ವರ್ಗಂ ಗತ್ವಾ ಮಹಾದ್ಯುತೇ ।
ಅಕ್ಷಯಾನ್ ಸಮವಾಪ್ನೋತಿ ಲೋಕಾನಿತ್ಯಬ್ರವೀನ್ಮನುಃ ॥೧೯॥

ಎಲೈ ಮಹಾದ್ಯುತಿಯೇ, ಮನುಜವ್ಯಾಘ್ರನೇ, ಜಲದಾನ ಮಾಡಿದವನು ಸ್ವರ್ಗಕ್ಕೆ ಹೋಗಿ ಅಕ್ಷಯಲೋಕಗಳನ್ನು ಪಡೆಯುತ್ತಾನೆ ಎಂದು ಮನುವು ಹೇಳಿದ್ದಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಜದಾನಪ್ರಶಂಸನಂ ನಾಮ
ಸಪ್ತನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆಂಟನೆಯ ಅಧ್ಯಾಯ

ತಿಲಾದಿದಾನಪ್ರಶಂಸೆ - ಯಮದೂತನ ಆಚಾತುರ್ಯ.

ಯುಧಿಷ್ಠಿರಃ

ತಿಲಾನಾಂ ಕೀದೃಶಂ ದಾನಮಥ ದೀಪಸ್ಯ ಚೈವ ಹ ।
ಅನ್ನಾನಾಂ ವಾಸಸಾಂ ಚೈವ ಭೂಯ ಏವ ಬ್ರವೀಹಿ ಮೇ ॥೧॥

ಯುಧಿಷ್ಠಿರ– ತಿಲದಾನವನ್ನು ಹೇಗೆ ಮಾಡಬೇಕು? ದೀಪದಾನ, ಅನ್ನದಾನ ಮತ್ತು ವಸ್ತ್ರದಾನದ ವಿಧಿಯನ್ನು ಪುನಃ ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಬ್ರಾಹ್ಮಣಸ್ಯ ಚ ಸಂವಾದಂ ಯಮಸ್ಯ ಚ ಯುಧಿಷ್ಠಿರ ॥೨॥

ಭೀಷ್ಮ– ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿಯೂ ಯಮನಿಗೂ ಮತ್ತು ಒಬ್ಬ ಬ್ರಾಹ್ಮಣನಿಗೂ ನಡೆದ, ಸಂವಾದರೂಪವಾದ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಮಧ್ಯದೇಶೇ ಮಹಾನ್ ಗ್ರಾಮೋ ಬ್ರಾಹ್ಮಣಾನಾಂ ಬಭೂವ ಹ ।
ಗಂಗಾಯಮುನಯೋರ್ಮಧ್ಯೇ ಯಾಮುನಸ್ಯ ಗಿರೇರಧಃ ॥೩॥

ಪರ್ಣಶಾಲೇತಿ ವಿಖ್ಯಾತೋ ರಮಣೀಯೋ ನರಾಧಿಪ ।
ವಿದ್ವಾಂಸಸ್ತತ್ರ ಭೂಯಿಷ್ಠಾ ಬ್ರಾಹ್ಮಣಾಶ್ಚಾವಸಂಸ್ತದಾ ॥೪॥

ಮಧ್ಯ ಪ್ರದೇಶದಲ್ಲಿ ಗಂಗಾ-ಯಮುನೆ ನದಿಗಳ ಮಧ್ಯದಲ್ಲಿ, ಯಾಮುನ ಪರ್ವತದ ತಪ್ಪಲಿನಲ್ಲಿ ಬ್ರಾಹ್ಮಣರ ಒಂದು ದೊಡ್ಡ ಗ್ರಾಮವಿದ್ದಿತು. ಎಲೈ ರಾಜನೇ, ಪರ್ಣಶಾಲೆ ಎಂದು ಪ್ರಖ್ಯಾತವಾದ ಆ ಗ್ರಾಮವು ರಮಣೀಯವಾಗಿದ್ದಿತು. ಆ ಗ್ರಾಮದಲ್ಲಿ ಹೆಚ್ಚಾಗಿ ವಿದ್ವಾಂಸರಾದ ಬ್ರಾಹ್ಮಣರೇ ವಾಸವಾಗಿದ್ದರು.

ಅಥ ಪ್ರಾಹ ಯಮಃ ಕಂಚಿತ್ ಪುರುಷಂ ಕೃಷ್ಣವಾಸಸಮ್ ।
ರಕ್ತಾಕ್ಷಮೂರ್ಧ್ವರೋಮಾಣಂ ಕಾಕಜಂಘಾಕ್ಷಿನಾಸಿಕಮ್ ॥೫॥

ತಥೈವ ಗಾಃ ಪ್ರಶಂಸಂತಿ ನ ಚ ದೇಯಂ ತತಃ ಪರಮ್ ।
ಸನ್ನಿಕೃಷ್ಟಫಲಾಸ್ತಾ ಹಿ ಲಘ್ವರ್ಥಾಶ್ಚ ಯುಧಿಷ್ಠಿರ ।
ಮಾತರಃ ಸರ್ವಭೂತಾನಾಂ ಗಾವಃ ಸರ್ವಸುಖಪ್ರದಾಃ ॥೬॥

ಹಾಗೆಯೇ ಗೋವನ್ನು ಪ್ರಶಂಸೆ ಮಾಡುತ್ತಾರೆ. ಗೋವುಗಳಿಗಿಂತ ಶ್ರೇಷ್ಠವಾದ ದಾನ ಕೊಡಬೇಕಾದ ವಸ್ತುವು ಇನ್ನೊಂದಿಲ್ಲ. ಎಲೈ ಯುಧಿಷ್ಠಿರನೇ, ಗೋವುಗಳ ದಾನವನ್ನು ಕೊಡುವುದು ಸುಲಭವಾದುದು ಮತ್ತು ಶೀಘ್ರವಾಗಿ ಫಲವನ್ನು ಕೊಡುವಂತಹದು. ಗೋವುಗಳು ಸರ್ವಪ್ರಾಣಿಗಳಿಗೆ ತಾಯಿಯರಾಗಿದ್ದು ಸರ್ವಸುಖವನ್ನು ಕೊಡುತ್ತವೆ.

ವೃದ್ಧಿಮಾಕಾಂಕ್ಷತಾ ನಿತ್ಯಂ ಗಾವಃ ಕಾರ್ಯಾಃ ಪ್ರದಕ್ಷಿಣಾಃ ।
ಮಂಗಲಾಯತನಂ ದೇವ್ಯಸ್ತಸ್ಮಾತ್ ಪೂಜ್ಯಾಃ ಸದೈವ ಹಿ ।
ಸಂತಾಡ್ಯಾ ನ ತು ಪಾದೇನ ಗವಾಂ ಮಧ್ಯೇ ಚ ನ ವ್ರಜೇತ್ ॥೭॥

ಸಮೃದ್ಧಿಯನ್ನು ಅಪೇಕ್ಷಿಸುವವನು ನಿತ್ಯವೂ ಗೋವುಗಳಿಗೆ ಪ್ರದಕ್ಷಿಣೆಯನ್ನು ಮಾಡಬೇಕು. ಗೋಮಾತೆಯರು ಸರ್ವಮಂಗಳಗಳಿಗೆ ಆಶ್ರಯರಾದವರು. ಆದ್ದರಿಂದ ಯಾವಾಗಲೂ ಪೂಜಿಸಬೇಕು. ಗೋವುಗಳನ್ನು ಪಾದದಿಂದ ಒದೆಯಬಾರದು. ಗೋವುಗಳ ಮಧ್ಯದಲ್ಲಿ ನಡೆದು ಹೋಗಬಾರದು.

ಪ್ರಚೋದನಂ ದೇವಕೃತಂ ಗವಾಂ ಕರ್ಮಸು ವರ್ತತಾಮ್ ।
ಪೂರ್ವಮೇವಾಕ್ಷರಂ ನಾನ್ಯದಭಿಧೇಯಂ ಕಥಂಚನ ॥೮॥

ವ್ಯವಸಾಯ ಮಾಡುವ ಗೋವುಗಳ ಪ್ರೇರಣೆಯು ದೇವತೆಗಳಿಂದ ನಡೆಯುತ್ತದೆ. ಕೆಲಸ ಮಾಡುವಾಗ ಅವುಗಳಿಗೆ ಮೊದಲನೆಯ ಒಂದು ಅಕ್ಷರವನ್ನು ಮಾತ್ರ ಹೇಳಬೇಕು. ಬೇರೆ ಏನನ್ನೂ ಹೇಳಬಾರದು (ಕೆಲಸ ಮಾಡುವಾಗ ಸಾಮಾನ್ಯವಾಗಿ ಗೋವುಗಳನ್ನು ಮತ್ತು ವೃಷಭಗಳನ್ನು ಬೈಯ್ಯುವುದುಂಟು. ಹಾಗೆ ಮಾಡದೆ ಅವುಗಳಿಗೆ ಪ್ರಿಯವಾದ 'ಬಾ, ಯಾ, ಗೋ' ಎಂಬ ಇತ್ಯಾದಿ ಒಂದೇ ಅಕ್ಷರವನ್ನು ಹೇಳಿ ಅವುಗಳನ್ನು ಕಾರ್ಯದಲ್ಲಿ ಪ್ರಚೋದಿಸಬೇಕು- ಲಕ್ಷಾಲಂಕಾರ).

ಪ್ರಚಾರೇ ವಾ ನಿಪಾನೇ ವಾ ಬುಧೋ ನೋದ್ವೇಜಯೇತ ಗಾಃ ।
ತೃಷಿತಾ ಹ್ಯಭಿವೀಕ್ಷಂತ್ಯೋ ನರಂ ಹನ್ಯುಃ ಸಬಾಂಧವಮ್ ॥೯॥

ಗೋವುಗಳು ಹುಲ್ಲನ್ನು ತಿನ್ನುವಾಗ ಅಥವಾ ನೀರನ್ನು ಕುಡಿಯುವಾಗ ವಿವೇಕಿಯಾದವನು ಅವುಗಳಿಗೆ ಭಯವನ್ನು ಉಂಟುಮಾಡಬಾರದು. ಬಾಯಾರಿದ ಗೋವುಗಳು ಭಯದಿಂದ ಮನುಷ್ಯನನ್ನು ನೋಡಿದರೆ ಅವು ಬಾಂಧವರಿಂದ ಸಹಿತರಾದ ಮನುಷ್ಯನನ್ನು ಕೊಂದಾವು.

ಪಿತೃಸದ್ಮಾನಿ ಸತತಂ ದೇವತಾಯತನಾನಿ ಚ ।
ಪೂಯಂತೇ ಶಕೃತಾ ಯಾಸಾಂ ಪೂತಂ ಕಿಮಧಿಕಂ ತತಃ ॥೧೦॥

ಯಾವ ಗೋವುಗಳ ಗೋಮಯದಿಂದ ದೇವಾಲಯಗಳು ಮತ್ತು ಶ್ಮಶಾನಗಳು ಪವಿತ್ರವಾಗುತ್ತವೆಯೋ ಅಂತಹ ಗೋವುಗಳಿಗಿಂತ ಅಧಿಕವಾದುದು ಯಾವುದಿದೆ?

ಗ್ರಾಸಮುಷ್ಟಿಂ ಪರಗವೇ ದದ್ಯಾತ್ ಸಂವತ್ಸರಂ ತು ಯಃ ।
ಅಕೃತ್ವಾ ಸ್ವಯಮಾಹಾರಂ ವ್ರತಂ ತತ್ ಸಾರ್ವಕಾಮಿಕಮ್ ॥೧೧॥

ಯಾವನು ತಾನು ಆಹಾರವನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ಇನ್ನೊಬ್ಬನ ಗೋವಿಗೆ ಒಂದು ಹಿಡಿ ಹುಲ್ಲನ್ನು ಒಂದು ವರ್ಷದ ಕಾಲ ಕೊಡುತ್ತಾನೆಯೋ ಅದಕ್ಕೆ ಸರ್ವಕಾಮಫಲಪ್ರದವಾದ ವ್ರತವೆಂದು ಹೆಸರು.

ಸ ಹಿ ಪುತ್ರಾನ್ ಯಶೋಽರ್ಥಂ ಚ ಶ್ರಿಯಂ ಚಾಪ್ಯಧಿಗಚ್ಛತಿ ।
ನಾಶಯತ್ಯಶುಭಂ ಚೈವ ದುಃಸ್ವಪ್ನಂ ಚ ವ್ಯಪೋಹತಿ ॥೧೨॥

ಅವನು ಪುತ್ರರನ್ನೂ, ಕೀರ್ತಿಯನ್ನೂ, ಧನವನ್ನೂ, ಸಂಪತ್ತನ್ನೂ ಪಡೆಯುತ್ತಾನೆ. ಅಶುಭವನ್ನೂ ಮತ್ತು ದುಃಸ್ವಪ್ನ ಫಲವನ್ನೂ ನಾಶ ಮಾಡುತ್ತಾನೆ.

ಯುಧಿಷ್ಠಿರಃ

ದೇಯಾಃ ಕಿಂಲಕ್ಷಣಾ ಗಾವಃ ಕಾಶ್ಚಾಪಿ ಪರಿವರ್ಜಯೇತ್ ।
ಕೀದೃಶಾಯ ಪ್ರದಾತವ್ಯಾ ನ ದೇಯಾಃ ಕೀದೃಶಾಯ ಚ ॥೧೩॥

ಯುಧಿಷ್ಠಿರ– ಎಂತಹ ಲಕ್ಷಣವುಳ್ಳ ಗೋವುಗಳನ್ನು ಕೊಡಬೇಕು? ಎಂತಹ ಗೋವುಗಳನ್ನು ಕೊಡಬಾರದು? ಎಂತಹವನಿಗೆ ಕೊಡಬೇಕು? ಮತ್ತು ಎಂತಹವನಿಗೆ ಕೊಡಬಾರದು?

ಭೀಷ್ಮಃ

ಅಸದ್‌ವೃತ್ತಾಯ ಪಾಪಾಯ ಲುಬ್ಧಾಯಾನೃತವಾದಿನೇ ।
ಹವ್ಯಕವ್ಯವ್ಯಪೇತಾಯ ನ ದೇಯಾ ಗೌಃ ಕಥಂಚನ ॥೧೪॥

ಭೀಷ್ಮ- ದುರ್ನಡತೆಯುಳ್ಳ, ಪಾಪಿಷ್ಠನಾದ, ಲೋಭಿಯಾದ, ಅನೃತಭಾಷಿಯಾದ, ಹವ್ಯ-ಕವ್ಯರಹಿತನಾದ ಮನುಷ್ಯನಿಗೆ ಎಂದೂ ಗೋದಾನವನ್ನು ಮಾಡಬಾರದು.

ಭಿಕ್ಷವೇ ಬಹುಪುತ್ರಾಯ ಶ್ರೋತ್ರಿಯಾಯಾಹಿತಾಗ್ನಯೇ ।
ದತ್ತ್ವಾ ದಶಗವಾಂ ದಾತಾ ಲೋಕಾನಾಪ್ನೋತ್ಯನುತ್ತಮಾನ್ ॥೧೫॥

ಬಹುಪುತ್ರರನ್ನು ಹೊಂದಿದ, ಆಹಿತಾಗ್ನಿಯಾದ, ಯಾಚಿಸುವ ಶ್ರೋತ್ರಿಯನಿಗೆ ಹತ್ತು ಗೋವುಗಳನ್ನು ದಾನ ಮಾಡುವವನು ಶ್ರೇಷ್ಠವಾದ ಲೋಕಗಳನ್ನು ಪಡೆಯುತ್ತಾನೆ.

ಯಂ ಚೈವ ಧರ್ಮಂ ಕುರುತೇ ತಸ್ಯ ಪುಣ್ಯಫಲಂ ಚ ಯತ್ ।
ಸರ್ವಸ್ಯೈವಾಂಶಭಾಗ್ ದಾತಾ ತನ್ನಿಮಿತ್ತಂ ಪ್ರವೃತ್ತಯಃ ॥೧೬॥

ದಾನವನ್ನು ಸ್ವೀಕಾರ ಮಾಡುವವನು ಯಾವ ಧರ್ಮವನ್ನು ಮಾಡುತ್ತಾನೆಯೋ ಅವೆಲ್ಲದರ ಪುಣ್ಯಫಲದ ಒಂದು ಅಂಶಗಳನ್ನು ದಾನವನ್ನು ಕೊಟ್ಟವನು ಪಡೆಯುತ್ತಾನೆ. ಅವನು ದಾನ ಕೊಟ್ಟುದುದರಿಂದಲೇ ಸ್ವೀಕಾರ ಮಾಡಿದವನ ಧರ್ಮಪ್ರವೃತ್ತಿಯು ಉಂಟಾಗುತ್ತದೆ.

ಜುಹೋತಿ ಯದ್ ಭೋಜಯತಿ ಯದ್ ದದಾತಿ ಗವಾಂ ರಸೈಃ ।
ಅರ್ಧಸ್ಯ ದಶಭಾಗ್ ದಾತಾ ತನ್ನಿವೃತ್ತಪ್ರವೃತ್ತಯೇ ॥೧೭॥

ಪ್ರತಿಗೃಹವನ್ನು ಮಾಡಿದವನು ಮಾಡುವ ಹೋಮ, ಗೋರಸಗಳಿಂದ ಮಾಡುವ ಹೋಮ, ಭೋಜನ, ದಾನ ಇವುಗಳೆಲ್ಲದರ ಹತ್ತನೆಯ ಒಂದು ಭಾಗವನ್ನು ದಾನ ಮಾಡಿದವನು ಪಡೆಯುತ್ತಾನೆ.

ಯಶ್ಚೈನಮುತ್ಪಾದಯತಿ ಯಶ್ಚೈನಂ ತ್ರಾಯತೇ ಭಯಾತ್ ।
ಯಶ್ಚಾಸ್ಯ ಕುರುತೇ ವೃತ್ತಿಂ ಸರ್ವೇ ತೇ ಪಿತರಸ್ತ್ರಯಃ ॥೧೮॥

ಸಾಕ್ಷಾತ್ ಜನಕನಾದವನು, ಭಯದಿಂದ ರಕ್ಷಿಸುವವನು, ಜೀವನೋಪಾಯವನ್ನು ಕಲ್ಪಿಸಿಕೊಡುವವನು ಈ ಮೂವರೂ ಪಿತೃಗಳೆಂದು ಹೇಳಲ್ಪಡುತ್ತಾರೆ.

ಕಲ್ಮಷಂ ಗುರುಶುಶ್ರೂಷಾ ಹಂತಿ ಮಾನೋ ಮಹದ್ಯಶಃ ।
ಅಪುತ್ರತಾಂ ತ್ರಯಃ ಪುತ್ರಾ ಅವೃತ್ತಿಂ ದಶ ಧೇನವಃ ॥೧೯॥

ಗುರುಶುಶ್ರೂಷೆಯು ದೋಷಗಳನ್ನು ಪರಿಹರಿಸುತ್ತದೆ. ಅಹಂಕಾರವು ಕೀರ್ತಿಯನ್ನು ವಿನಾಶಗೊಳಿಸುತ್ತದೆ. ಅಪುತ್ರತ್ವವನ್ನು ಮೂವರು ಪುತ್ರರು ಪರಿಹರಿಸುತ್ತಾರೆ. ಜೀವನೋಪಾಯ ರಾಹಿತ್ಯವನ್ನು ಹತ್ತು ಗೋವುಗಳು ಪರಿಹರಿಸುತ್ತವೆ.

ವೇದಾಂತನಿಷ್ಠಸ್ಯ ಬಹುಶ್ರುತಸ್ಯ
ಪ್ರಜ್ಞಾನತೃಪ್ತಸ್ಯ ಜಿತೇಂದ್ರಿಯಸ್ಯ ।
ಶಿಷ್ಟಸ್ಯ ದಾಂತಸ್ಯ ಯತಸ್ಯ ಚೈವ
ಭೂತೇಷು ನಿತ್ಯಂ ಪ್ರಿಯವಾದಿನಶ್ಚ ॥೨೦॥

ಯಃ ಕ್ಷುದ್ಭಯಾದ್ವೈ ನ ವಿಕರ್ಮ ಕುರ್ಯಾತ್
ಮೃದುರ್ದಾಂತಶ್ಚಾತಿಥೇಯಶ್ಚ ನಿತ್ಯಮ್ ।
ವೃತ್ತಿಂ ವಿಪ್ರಾಯಾತಿಸೃಜೇತ ತಸ್ಮೈ
ಯಸ್ತುಲ್ಯಶೀಲಶ್ಚ ಸಪುತ್ರದಾರಃ ॥೨೧॥

ವೇದಾಂತನಿಷ್ಠನೂ, ಬಹುವಿದ್ಯಾಸಂಪನ್ನನೂ, ಜ್ಞಾನತೃಪ್ತನೂ, ಜಿತೇಂದ್ರಿಯನೂ, ಶಿಷ್ಟನೂ, ಇಂದ್ರಿಯನಿಗ್ರಹವುಳ್ಳವನೂ, ವ್ರತಧಾರಿಯೂ, ಎಲ್ಲರಿಗೂ ಪ್ರಿಯವಾಗಿ ಮಾತನಾಡುವವನೂ, ಹಸಿವಿನ ಭಯದಿಂದ ದುಷ್ಕರ್ಮವನ್ನು ಮಾಡದವನೂ, ಮೃದುವೂ, ಯಾವಾಗಲೂ ಅತಿಥಿ ಪ್ರಿಯನೂ, ವಿಪ್ರರಿಗೆ ಜೀವನೋಪಾಯವನ್ನು ಕಲ್ಪಿಸಿಕೊಡುವವನೂ ಆದವನಿಗೆ ಅಂತಹವನೇ ಆದ ಪುತ್ರ-ಪತ್ನೀ ಸಹಿತನಾದ ಬ್ರಾಹ್ಮಣನು ಗೋವನ್ನು ದಾನ ಮಾಡಬೇಕು.

ಶುಭೇ ಪಾತ್ರೇ ಯೇ ಗುಣಾ ಗೋಪ್ರದಾನೇ
ತಾವಾನ್ ದೋಷೋ ಬ್ರಾಹ್ಮಣಸ್ವಾಪಹಾರೇ ।
ಸರ್ವಾವಸ್ಥಂ ಬ್ರಾಹ್ಮಣಸ್ವಾಪಹಾರೋ
ದಾರಾಶ್ಚೈಷಾಂ ದೂರತೋ ವರ್ಜನೀಯಾಃ ॥೨೨॥

ಯೋಗ್ಯವಾದ ಪಾತ್ರನಲ್ಲಿ ಗೋದಾನ ಮಾಡಿದರೆ ಎಷ್ಟು ಗುಣಗಳಿವೆಯೋ ಬ್ರಾಹ್ಮಣರ ಸ್ವತ್ತನ್ನು ಅಪಹಾರ ಮಾಡಿದರೆ ಅಷ್ಟೇ ದೋಷಗಳಿವೆ. ಯಾವ ಅವಸ್ಥೆಯಲ್ಲಿಯೂ ಬ್ರಾಹ್ಮಣಸ್ವತ್ತನ್ನು ಅಪಹರಿಸಬಾರದು. ಅವರ ಪತ್ನಿಯಿಂದ ಯಾವಾಗಲೂ ದೂರದಲ್ಲಿರಬೇಕು.

ಯುಧಿಷ್ಠಿರಃ

ಬ್ರಾಹ್ಮಣಸ್ವಾಪಹಾರೇಣ ಕಿಯಾನ್ ದೋಷೋ ಭವನ್ಮತ ।
ಬ್ರಹ್ಮಸ್ವಮುಚ್ಯತೇ ಕಿಂ ವಾ ತನ್ಮೇ ಬ್ರೂಹಿ ಪಿತಾಮಹ ॥೨೩॥

ಯುಧಿಷ್ಠಿರ– ಬ್ರಾಹ್ಮಣನ ಸ್ವತ್ತನ್ನು ಅಪಹಾರ ಮಾಡಿದರೆ ಎಷ್ಟು ದೋಷ ಉಂಟಾಗುತ್ತದೆ? ಬ್ರಹ್ಮಸ್ವವನ್ನು ಏನೆಂದು ಕರೆಯುತ್ತಾರೆ? ಪಿತಾಮಹನೇ, ಅದನ್ನು ಹೇಳು.

ಭೀಷ್ಮಃ

ವಿಪ್ರದಾರೇ ಪರಹೃತೇ ವಿಪ್ರಸ್ವನಿಚಯೇ ತಥಾ ।
ಪರಿತ್ರಾಯಂತಿ ಶಕ್ತಾಸ್ತು ನಮಸ್ತೇಭ್ಯೋ ಮೃತಾಸ್ತು ವಾ ॥೨೪॥

ಭೀಷ್ಮ– ಬ್ರಾಹ್ಮಣರ ಪತ್ನಿಯು ಅಥವಾ ಬ್ರಾಹ್ಮಣರ ಧನವು ಅಪಹೃತವಾದರೆ ಶಕ್ತರಾದ ಯಾರು ಅವರನ್ನು ರಕ್ಷಿಸುತ್ತಾರೋ ಅವರು ಆ ಪ್ರಯತ್ನದಲ್ಲಿ ಮೃತರಾಗಿದ್ದರೂ ಜೀವಿಸಿದ್ದರೂ ಅವರಿಗೆ ನಮಸ್ಕಾರ.

ನ ಪಾಲಯಂತಿ ನಿಹತಾ ಯೇ ತಾನ್ ವೈವಸ್ವತೋ ಯಮಃ ।
ದಂಡಯನ್ ಭರ್ತ್ಸಯನ್ನಿತ್ಯಂ ನಿರಯೇಭ್ಯೋ ನ ಮುಂಚತಿ ॥೨೫॥

ಕಷ್ಟಕ್ಕೆ ಒಳಗಾದ ಬ್ರಾಹ್ಮಣರನ್ನು ಯಾವನು ರಕ್ಷಿಸುವುದಿಲ್ಲವೋ ಅವನನ್ನು ವೈವಸ್ವತನಾದ ಯಮನು ನಿತ್ಯವೂ ಶಿಕ್ಷಿಸುತ್ತಾ, ಗದರಿಸುತ್ತಾ ನರಕದಿಂದ ಹೋಗಲು ಬಿಡುವುದೇ ಇಲ್ಲ.

ತಥಾ ಗವಾಂ ಪರಿತ್ರಾಣೇ ಪೀಡನೇ ಚ ಶುಭಾಶುಭೇ ।
ವಿಪ್ರಗೋಷು ವಿಶೇಷೇಣ ರಕ್ಷಿತೇಷು ಹೃತೇಷು ವಾ ॥೨೬॥

ಈ ರೀತಿಯಲ್ಲಿ ಗೋವುಗಳ ರಕ್ಷಣೆ ಮತ್ತು ಪೀಡನದಲ್ಲಿ ಶುಭಾಶುಭ ಫಲಗಳಿವೆ. ಅದರಲ್ಲಿಯೂ ಬ್ರಾಹ್ಮಣರ ಗೋವುಗಳು ರಕ್ಷಿಸಲ್ಪಟ್ಟರೆ ಅಥವಾ ಅಪಹರಿಸಲ್ಪಟ್ಟರೆ ವಿಶೇಷವಾದ ಗುಣದೋಷಗಳು ಉಂಟಾಗುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋದಾನಕ್ಷಣಕಥನಂ ನಾಮ
ಏಕೋನಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರನೆಯ ಅಧ್ಯಾಯ

ಗೋದಾನ-ನೃಗೋಪಾಖ್ಯಾನ

ಭೀಷ್ಮಃ

ಅತ್ರೈವ ಕೀರ್ತ್ಯತೇ ಸದ್ಭಿರ್ಬ್ರಾಹ್ಮಣಸ್ವಾಭಿಮರ್ಶನೇ ।
ನೃಗೇಣ ಸುಮಹತ್‌ಕೃಚ್ಛ್ರಂ ಯದವಾಪ್ತಂ ಕುರೂದ್ವಹ ॥೧॥

ಭೀಷ್ಮ- ಎಲೈ ಕುರೂದ್ವಹನೇ, ಬ್ರಾಹ್ಮಣ ಸ್ವಾಪಹಾರದ ಈ ವಿಷಯದಲ್ಲಿ ಸಜ್ಜನರು ನೃಗ ಮಹಾರಾಜನು ಹೊಂದಿದ ಬಹಳ ಕಷ್ಟದ ಅವಸ್ಥೆಯನ್ನು ಹೇಳುತ್ತಾರೆ.

ನಿವಿಶಂತ್ಯಾಂ ಪುರಾ ಪಾರ್ಥ ದ್ವಾರವತ್ಯಾಮಿತಿ ಶ್ರುತಿಃ ।
ಅದೃಶ್ಯತ ಮಹಾಕೂಪಸ್ತೃಣವೀರುತ್ಸಮಾವೃತಃ ॥೨॥

ಎಲೈ ಪಾರ್ಥನೇ, ಸಮುದ್ರದಲ್ಲಿ ಪ್ರವೇಶಿಸಿರುವ (ದ್ವೀಪವಾಗಿರುವ) ದ್ವಾರಾವತಿಯಲ್ಲಿ ತೃಣ-ಲತೆಗಳಿಂದ ಮುಚ್ಚಲ್ಪಟ್ಟ ಒಂದು ದೊಡ್ಡ ಕೂಪವು ಕಂಡುಬಂದಿತು ಎಂದು ನಾವು ಕೇಳಿದ್ದೇವೆ.

ಪ್ರಯತ್ನಂ ತತ್ರ ಕುರ್ವಾಣಾಸ್ತಸ್ಮಾತ್ ಕೂಪಾಜ್ಜಲಾರ್ಥಿನಃ ।
ಶ್ರಮೇಣ ಮಹತಾ ಯುಕ್ತಾಸ್ತಸ್ಮಿಂಸ್ತೋಯೇ ಸುಸಂವೃತೇ ॥೩॥

ಆ ಕೂಪದಿಂದ ನೀರನ್ನು ಪಡೆಯಲು ಬಯಸಿದವರು ಅದು ಚೆನ್ನಾಗಿ ಮುಚ್ಚಿ ಹೋದುದರಿಂದ ಪ್ರಯತ್ನವನ್ನು ಪಟ್ಟರೂ ಬಹಳ ಶ್ರಮವನ್ನು ಹೊಂದಿದರು.

ದದೃಶುಸ್ತೇ ಮಹಾಕಾಯಂ ಕೃಕಲಾಸಮವಸ್ಥಿತಮ್ ।
ತಸ್ಯ ಚೋದ್ಧರಣೇ ಯತ್ನಮಕುರ್ವಂಸ್ತೇ ಸಹಸ್ರಶಃ ॥೪॥

ಅವರು ಬಾವಿಯಲ್ಲಿ ಬಗ್ಗಿ ನೋಡಿದಾಗ ದೊಡ್ಡ ಶರೀರವುಳ್ಳ ಒಂದು ಕೃಕಲಾಸವು (ಓತೀಕೇತ) ಇರುವುದು ಕಂಡುಬಂದಿತು. ಅದನ್ನು ಎತ್ತಲು ಅವರು ಸಹಸ್ರಾರು ಪ್ರಯತ್ನವನ್ನು ಮಾಡಿದರು.

ಪ್ರಗ್ರಹೈಶ್ಚರ್ಮಪಟ್ಟೈಶ್ಚ ತಂ ಬದ್ಧ್ವಾ ಪರ್ವತೋಪಮಮ್ ।
ನಾಶಕ್ನುವನ್ ಸಮುದ್ಧರ್ತುಂ ತತೋ ಜಗ್ಮುರ್ಜನಾರ್ದನಮ್ ॥೫॥

ಹಗ್ಗಗಳಿಂದಲೂ, ಚರ್ಮಪಟ್ಟಿಗಳಿಂದಲೂ ಕಟ್ಟಿದರೂ ಪರ್ವತದಂತಿದ್ದ ಅದನ್ನು ಮೇಲಕ್ಕೆತ್ತಲು ಸಾಧ್ಯವಾಗದೆ ಅವರು ಜನಾರ್ದನನ ಬಳಿಗೆ ಹೋದರು.

ಖಮಾವೃತ್ಯೋದಪಾನಸ್ಯ ಕೃಕಲಾಸಃ ಸ್ಥಿತೋ ಮಹಾನ್ ।
ತಸ್ಯ ನಾಸ್ತಿ ಸಮುದ್ಧರ್ತೇತ್ಯಥ ಕೃಷ್ಣೇ ನ್ಯವೇದಯನ್ ॥೬॥

ಬಾವಿಯ ಒಳಗಿನ ಅವಕಾಶವನ್ನೆಲ್ಲ ತುಂಬಿಕೊಂಡು ಒಂದು ದೊಡ್ಡ ಕೃಕಲಾಸವು ಇದೆ. ಅದನ್ನು ಎತ್ತುವವನು ಯಾರೂ ಇಲ್ಲ ಎಂದು ಕೃಷ್ಣನಿಗೆ ನಿವೇದಿಸಿದರು.

ಸ ವಾಸುದೇವೇನ ಸಮುದ್ಧೃತಶ್ಚ
ಪೃಷ್ಟಶ್ಚ ಕಾಮಾನ್ನಿಜಗಾದ ರಾಜಾ ।
ನೃಗಸ್ತದಾತ್ಮಾನಮಥೋ ನ್ಯವೇದಯತ್
ಪುರಾತನಂ ಯಜ್ಞಸಹಸ್ರಯಾಜಿನಮ್ ॥೭॥

ಆ ಕೃಕಲಾಸವು ವಾಸುದೇವನಾದ ಕೃಷ್ಣನಿಂದ ಮೇಲಕ್ಕೆತ್ತಲ್ಪಟ್ಟಿತು. ಕೃಷ್ಣನಿಂದ ಪ್ರಶ್ನೆಯನ್ನು ಮಾಡಲ್ಪಟ್ಟ ಆ ನೃಗರಾಜನು ಮಾತನಾಡಿದನು. ತನ್ನನ್ನು ಸಹಸ್ರಯಜ್ಞವನ್ನು ಮಾಡಿದ ಪುರಾತನನಾದ ನೃಗರಾಜನೆಂದು ನಿವೇದಿಸಿದನು.

ತಥಾ ಬ್ರುವಾಣಂ ತು ತಮಾಹ ಮಾಧವಃ
ಶುಭಂ ತ್ವಯಾ ಕರ್ಮ ಕೃತಂ ನ ಪಾಪಕಮ್ ।
ಕಥಂ ಭವಾನ್ ದುರ್ಗತಿಮೀದೃಶೀಂ ಗತೋ
ನರೇಂದ್ರ ತದ್ ಬ್ರೂಹಿ ಕಿಮೇತದೀದೃಶಮ್ ॥೮॥

ಹಾಗೆ ಮಾತನಾಡಿದ ಅವನನ್ನು ಕುರಿತು ಮಾಧವನು ನೀನು ಶುಭಕರ್ಮವನ್ನೇ ಮಾಡಿದ್ದೀಯೆ. ಪಾಪಕರ್ಮವನ್ನು ಮಾಡಿಲ್ಲ. ಇಂತಹ ದುರ್ಗತಿಯನ್ನು ಹೇಗೆ ಪಡೆದೆ? ಎಲೈ ನರೇಂದ್ರನೇ, ಈ ದುರ್ಗತಿಯು ಹೇಗೆ ಪ್ರಾಪ್ತವಾಯಿತು ಎಂದು ಹೇಳು ಎಂದು ಹೇಳಿದನು.

ಶತಂ ಸಹಸ್ರಾಣಿ ಶತಂ ಗವಾಂ ಪುನಃ
ಪುನಃ ಶತಾನ್ಯಷ್ಟ ಶತಾಯುತಾನಿ ।
ತ್ವಯಾ ಪುರಾ ದತ್ತಮಿತೀಹ ಶುಶ್ರುಮ
ನೃಪ ದ್ವಿಜೇಭ್ಯಃ ಕ್ವ ನು ತದ್‌ಗತಂ ತವ ॥೯॥

ನೀನು ಮೂರು ಸಹಸ್ರ ಗೋವುಗಳನ್ನು ಪುನಃ ನೂರು ಗೋವುಗಳನ್ನು, ಪುನಃ ಎಂಟುನೂರು ಗೋವುಗಳನ್ನು, ಪುನಃ ನೂರು ಅಯುತ (ಹತ್ತು ಲಕ್ಷ) ಗೋವುಗಳನ್ನು ಹಿಂದೆ ದಾನ ಮಾಡಿದ್ದೀಯೆಂದು ನಾವು ಬ್ರಾಹ್ಮಣರಿಂದ ಕೇಳಿದ್ದೇವೆ. ಎಲೈ ರಾಜನೇ, ನಿನ್ನ ಆ ಪುಣ್ಯವೆಲ್ಲವೂ ಎಲ್ಲಿಗೆ ಹೋಯಿತು ಎಂದು ಕೇಳಿದನು.

ನೃಗಸ್ತತೋಽಬ್ರವೀತ್ ಕೃಷ್ಣಂ ಬ್ರಾಹ್ಮಣಸ್ಯಾಗ್ನಿಹೋತ್ರಿಣಃ ।
ಪ್ರೋಷಿತಸ್ಯ ಪರಿಭ್ರಷ್ಟಾ ಗೌರೇಕಾ ಮಮ ಗೋಧನೇ ॥೧೦॥

ಆಗ ನೃಗನು ಕೃಷ್ಣನನ್ನು ಕುರಿತು ಹೀಗೆ ಹೇಳಿದನು- ಅಗ್ನಿಹೋತ್ರಿಯಾದ ಒಬ್ಬ ಬ್ರಾಹ್ಮಣನು ಪ್ರವಾಸಕ್ಕೆ ಹೋಗಿದ್ದಾಗ ಅವನ ಒಂದು ಹಸುವು ತಪ್ಪಿಸಿಕೊಂಡು ನನ್ನ ಗೋವುಗಳಲ್ಲಿ ಸೇರಿತು.

ಗವಾಂ ಸಹಸ್ರೇ ಸಂಖ್ಯಾತಾ ತದಾ ಸಾ ಪಶುಪೈರ್ಮಮ ।
ಸಾ ಬ್ರಾಹ್ಮಣಾಯ ಮೇ ದತ್ತಾ ಪ್ರೇತ್ಯಾರ್ಥಮಭಿಕಾಂಕ್ಷತಾ ॥೧೧॥

ನನ್ನ ಪಶುಪಾಲಕರು ಸಹಸ್ರ ಗೋವುಗಳನ್ನು ಎಣಿಸುವಾಗ ಅದನ್ನೂ ಸೇರಿಸಿಕೊಂಡು ಎಣಿಸಿದರು. ನಾನು ಮರಣೋತ್ತರ ಕಾಲದಲ್ಲಿ ಪುಣ್ಯಫಲವನ್ನು ಅನುಭವಿಸಲು ಆಶಿಸಿ ಆ ಗೋವನ್ನು ಇನ್ನೊಬ್ಬ ಬ್ರಾಹ್ಮಣನಿಗೆ ದಾನ ಮಾಡಿದೆ.

ಅಪಶ್ಯತ್ ಪರಿಮಾರ್ಗಂಶ್ಚ ತಾಂ ಯಾಂ ಪರಗೃಹೇ ದ್ವಿಜಃ ।
ಮಮೇಯಮಿತಿ ಚೋವಾಚ ಬ್ರಾಹ್ಮಣೋ ಯಸ್ಯ ಸಾಽಭವತ್ ॥೧೨॥

ತಥೈವ ಗಾಃ ಪ್ರಶಂಸಂತಿ ನ ಚ ದೇಯಂ ತತಃ ಪರಮ್ ।
ಸನ್ನಿಕೃಷ್ಟಫಲಾಸ್ತಾ ಹಿ ಲಘ್ವರ್ಥಾಶ್ಚ ಯುಧಿಷ್ಠಿರ ।
ಮಾತರಃ ಸರ್ವಭೂತಾನಾಂ ಗಾವಃ ಸರ್ವಸುಖಪ್ರದಾಃ ॥೬॥

ಹಾಗೆಯೇ ಗೋವನ್ನು ಪ್ರಶಂಸೆ ಮಾಡುತ್ತಾರೆ. ಗೋವುಗಳಿಗಿಂತ ಶ್ರೇಷ್ಠವಾದ ದಾನ ಕೊಡಬೇಕಾದ ವಸ್ತುವು ಇನ್ನೊಂದಿಲ್ಲ. ಎಲೈ ಯುಧಿಷ್ಠಿರನೇ, ಗೋವುಗಳ ದಾನವನ್ನು ಕೊಡುವುದು ಸುಲಭವಾದುದು ಮತ್ತು ಶೀಘ್ರವಾಗಿ ಫಲವನ್ನು ಕೊಡುವಂತಹದು. ಗೋವುಗಳು ಸರ್ವಪ್ರಾಣಿಗಳಿಗೆ ತಾಯಿಯರಾಗಿದ್ದು ಸರ್ವಸುಖವನ್ನು ಕೊಡುತ್ತವೆ.

ವೃದ್ಧಿಮಾಕಾಂಕ್ಷತಾ ನಿತ್ಯಂ ಗಾವಃ ಕಾರ್ಯಾಃ ಪ್ರದಕ್ಷಿಣಾಃ ।
ಮಂಗಲಾಯತನಂ ದೇವ್ಯಸ್ತಸ್ಮಾತ್ ಪೂಜ್ಯಾಃ ಸದೈವ ಹಿ ।
ಸಂತಾಡ್ಯಾ ನ ತು ಪಾದೇನ ಗವಾಂ ಮಧ್ಯೇ ಚ ನ ವ್ರಜೇತ್ ॥೭॥

ಸಮೃದ್ಧಿಯನ್ನು ಅಪೇಕ್ಷಿಸುವವನು ನಿತ್ಯವೂ ಗೋವುಗಳಿಗೆ ಪ್ರದಕ್ಷಿಣೆಯನ್ನು ಮಾಡಬೇಕು. ಗೋಮಾತೆಯರು ಸರ್ವಮಂಗಳಗಳಿಗೆ ಆಶ್ರಯರಾದವರು. ಆದ್ದರಿಂದ ಯಾವಾಗಲೂ ಪೂಜಿಸಬೇಕು. ಗೋವುಗಳನ್ನು ಪಾದದಿಂದ ಒದೆಯಬಾರದು. ಗೋವುಗಳ ಮಧ್ಯದಲ್ಲಿ ನಡೆದು ಹೋಗಬಾರದು.

ಪ್ರಚೋದನಂ ದೇವಕೃತಂ ಗವಾಂ ಕರ್ಮಸು ವರ್ತತಾಮ್ ।
ಪೂರ್ವಮೇವಾಕ್ಷರಂ ನಾನ್ಯದಭಿಧೇಯಂ ಕಥಂಚನ ॥೮॥

ವ್ಯವಸಾಯ ಮಾಡುವ ಗೋವುಗಳ ಪ್ರೇರಣೆಯು ದೇವತೆಗಳಿಂದ ನಡೆಯುತ್ತದೆ. ಕೆಲಸ ಮಾಡುವಾಗ ಅವುಗಳಿಗೆ ಮೊದಲನೆಯ ಒಂದು ಅಕ್ಷರವನ್ನು ಮಾತ್ರ ಹೇಳಬೇಕು. ಬೇರೆ ಏನನ್ನೂ ಹೇಳಬಾರದು (ಕೆಲಸ ಮಾಡುವಾಗ ಸಾಮಾನ್ಯವಾಗಿ ಗೋವುಗಳನ್ನು ಮತ್ತು ವೃಷಭಗಳನ್ನು ಬೈಯ್ಯುವುದುಂಟು. ಹಾಗೆ ಮಾಡದೆ ಅವುಗಳಿಗೆ ಪ್ರಿಯವಾದ 'ಬಾ, ಯಾ, ಗೋ' ಎಂಬ ಇತ್ಯಾದಿ ಒಂದೇ ಅಕ್ಷರವನ್ನು ಹೇಳಿ ಅವುಗಳನ್ನು ಕಾರ್ಯದಲ್ಲಿ ಪ್ರಚೋದಿಸಬೇಕು- ಲಕ್ಷಾಲಂಕಾರ).

ಪ್ರಚಾರೇ ವಾ ನಿಪಾನೇ ವಾ ಬುಧೋ ನೋದ್ವೇಜಯೇತ ಗಾಃ ।
ತೃಷಿತಾ ಹ್ಯಭಿವೀಕ್ಷಂತ್ಯೋ ನರಂ ಹನ್ಯುಃ ಸಬಾಂಧವಮ್ ॥೯॥

ಗೋವುಗಳು ಹುಲ್ಲನ್ನು ತಿನ್ನುವಾಗ ಅಥವಾ ನೀರನ್ನು ಕುಡಿಯುವಾಗ ವಿವೇಕಿಯಾದವನು ಅವುಗಳಿಗೆ ಭಯವನ್ನು ಉಂಟುಮಾಡಬಾರದು. ಬಾಯಾರಿದ ಗೋವುಗಳು ಭಯದಿಂದ ಮನುಷ್ಯನನ್ನು ನೋಡಿದರೆ ಅವು ಬಾಂಧವರಿಂದ ಸಹಿತರಾದ ಮನುಷ್ಯನನ್ನು ಕೊಂದಾವು.

ಪಿತೃಸದ್ಮಾನಿ ಸತತಂ ದೇವತಾಯತನಾನಿ ಚ ।
ಪೂಯಂತೇ ಶಕೃತಾ ಯಾಸಾಂ ಪೂತಂ ಕಿಮಧಿಕಂ ತತಃ ॥೧೦॥

ಯಾವ ಗೋವುಗಳ ಗೋಮಯದಿಂದ ದೇವಾಲಯಗಳು ಮತ್ತು ಶ್ಮಶಾನಗಳು ಪವಿತ್ರವಾಗುತ್ತವೆಯೋ ಅಂತಹ ಗೋವುಗಳಿಗಿಂತ ಅಧಿಕವಾದುದು ಯಾವುದಿದೆ?

ಗ್ರಾಸಮುಷ್ಟಿಂ ಪರಗವೇ ದದ್ಯಾತ್ ಸಂವತ್ಸರಂ ತು ಯಃ ।
ಅಕೃತ್ವಾ ಸ್ವಯಮಾಹಾರಂ ವ್ರತಂ ತತ್ ಸಾರ್ವಕಾಮಿಕಮ್ ॥೧೧॥

ಯಾವನು ತಾನು ಆಹಾರವನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ಇನ್ನೊಬ್ಬನ ಗೋವಿಗೆ ಒಂದು ಹಿಡಿ ಹುಲ್ಲನ್ನು ಒಂದು ವರ್ಷದ ಕಾಲ ಕೊಡುತ್ತಾನೆಯೋ ಅದಕ್ಕೆ ಸರ್ವಕಾಮಫಲಪ್ರದವಾದ ವ್ರತವೆಂದು ಹೆಸರು.

ಸ ಹಿ ಪುತ್ರಾನ್ ಯಶೋಽರ್ಥಂ ಚ ಶ್ರಿಯಂ ಚಾಪ್ಯಧಿಗಚ್ಛತಿ ।
ನಾಶಯತ್ಯಶುಭಂ ಚೈವ ದುಃಸ್ವಪ್ನಂ ಚ ವ್ಯಪೋಹತಿ ॥೧೨॥

ಅವನು ಪುತ್ರರನ್ನೂ, ಕೀರ್ತಿಯನ್ನೂ, ಧನವನ್ನೂ, ಸಂಪತ್ತನ್ನೂ ಪಡೆಯುತ್ತಾನೆ. ಅಶುಭವನ್ನೂ ಮತ್ತು ದುಃಸ್ವಪ್ನ ಫಲವನ್ನೂ ನಾಶ ಮಾಡುತ್ತಾನೆ.

ಯುಧಿಷ್ಠಿರಃ

ದೇಯಾಃ ಕಿಂಲಕ್ಷಣಾ ಗಾವಃ ಕಾಶ್ಚಾಪಿ ಪರಿವರ್ಜಯೇತ್ ।
ಕೀದೃಶಾಯ ಪ್ರದಾತವ್ಯಾ ನ ದೇಯಾಃ ಕೀದೃಶಾಯ ಚ ॥೧೩॥

ಯುಧಿಷ್ಠಿರ– ಎಂತಹ ಲಕ್ಷಣವುಳ್ಳ ಗೋವುಗಳನ್ನು ಕೊಡಬೇಕು? ಎಂತಹ ಗೋವುಗಳನ್ನು ಕೊಡಬಾರದು? ಎಂತಹವನಿಗೆ ಕೊಡಬೇಕು? ಮತ್ತು ಎಂತಹವನಿಗೆ ಕೊಡಬಾರದು?

ಭೀಷ್ಮಃ

ಅಸದ್‌ವೃತ್ತಾಯ ಪಾಪಾಯ ಲುಬ್ಧಾಯಾನೃತವಾದಿನೇ ।
ಹವ್ಯಕವ್ಯವ್ಯಪೇತಾಯ ನ ದೇಯಾ ಗೌಃ ಕಥಂಚನ ॥೧೪॥

ಭೀಷ್ಮ- ದುರ್ನಡತೆಯುಳ್ಳ, ಪಾಪಿಷ್ಠನಾದ, ಲೋಭಿಯಾದ, ಅನೃತಭಾಷಿಯಾದ, ಹವ್ಯ-ಕವ್ಯರಹಿತನಾದ ಮನುಷ್ಯನಿಗೆ ಎಂದೂ ಗೋದಾನವನ್ನು ಮಾಡಬಾರದು.

ಭಿಕ್ಷವೇ ಬಹುಪುತ್ರಾಯ ಶ್ರೋತ್ರಿಯಾಯಾಹಿತಾಗ್ನಯೇ ।
ದತ್ತ್ವಾ ದಶಗವಾಂ ದಾತಾ ಲೋಕಾನಾಪ್ನೋತ್ಯನುತ್ತಮಾನ್ ॥೧೫॥

ಬಹುಪುತ್ರರನ್ನು ಹೊಂದಿದ, ಆಹಿತಾಗ್ನಿಯಾದ, ಯಾಚಿಸುವ ಶ್ರೋತ್ರಿಯನಿಗೆ ಹತ್ತು ಗೋವುಗಳನ್ನು ದಾನ ಮಾಡುವವನು ಶ್ರೇಷ್ಠವಾದ ಲೋಕಗಳನ್ನು ಪಡೆಯುತ್ತಾನೆ.

ಯಂ ಚೈವ ಧರ್ಮಂ ಕುರುತೇ ತಸ್ಯ ಪುಣ್ಯಫಲಂ ಚ ಯತ್ ।
ಸರ್ವಸ್ಯೈವಾಂಶಭಾಗ್ ದಾತಾ ತನ್ನಿಮಿತ್ತಂ ಪ್ರವೃತ್ತಯಃ ॥೧೬॥

ದಾನವನ್ನು ಸ್ವೀಕಾರ ಮಾಡುವವನು ಯಾವ ಧರ್ಮವನ್ನು ಮಾಡುತ್ತಾನೆಯೋ ಅವೆಲ್ಲದರ ಪುಣ್ಯಫಲದ ಒಂದು ಅಂಶಗಳನ್ನು ದಾನವನ್ನು ಕೊಟ್ಟವನು ಪಡೆಯುತ್ತಾನೆ. ಅವನು ದಾನ ಕೊಟ್ಟುದುದರಿಂದಲೇ ಸ್ವೀಕಾರ ಮಾಡಿದವನ ಧರ್ಮಪ್ರವೃತ್ತಿಯು ಉಂಟಾಗುತ್ತದೆ.

ಜುಹೋತಿ ಯದ್ ಭೋಜಯತಿ ಯದ್ ದದಾತಿ ಗವಾಂ ರಸೈಃ ।
ಅರ್ಧಸ್ಯ ದಶಭಾಗ್ ದಾತಾ ತನ್ನಿವೃತ್ತಪ್ರವೃತ್ತಯೇ ॥೧೭॥

ಪ್ರತಿಗೃಹವನ್ನು ಮಾಡಿದವನು ಮಾಡುವ ಹೋಮ, ಗೋರಸಗಳಿಂದ ಮಾಡುವ ಹೋಮ, ಭೋಜನ, ದಾನ ಇವುಗಳೆಲ್ಲದರ ಹತ್ತನೆಯ ಒಂದು ಭಾಗವನ್ನು ದಾನ ಮಾಡಿದವನು ಪಡೆಯುತ್ತಾನೆ.

ಯಶ್ಚೈನಮುತ್ಪಾದಯತಿ ಯಶ್ಚೈನಂ ತ್ರಾಯತೇ ಭಯಾತ್ ।
ಯಶ್ಚಾಸ್ಯ ಕುರುತೇ ವೃತ್ತಿಂ ಸರ್ವೇ ತೇ ಪಿತರಸ್ತ್ರಯಃ ॥೧೮॥

ಸಾಕ್ಷಾತ್ ಜನಕನಾದವನು, ಭಯದಿಂದ ರಕ್ಷಿಸುವವನು, ಜೀವನೋಪಾಯವನ್ನು ಕಲ್ಪಿಸಿಕೊಡುವವನು ಈ ಮೂವರೂ ಪಿತೃಗಳೆಂದು ಹೇಳಲ್ಪಡುತ್ತಾರೆ.

ಕಲ್ಮಷಂ ಗುರುಶುಶ್ರೂಷಾ ಹಂತಿ ಮಾನೋ ಮಹದ್ಯಶಃ ।
ಅಪುತ್ರತಾಂ ತ್ರಯಃ ಪುತ್ರಾ ಅವೃತ್ತಿಂ ದಶ ಧೇನವಃ ॥೧೯॥

ಗುರುಶುಶ್ರೂಷೆಯು ದೋಷಗಳನ್ನು ಪರಿಹರಿಸುತ್ತದೆ. ಅಹಂಕಾರವು ಕೀರ್ತಿಯನ್ನು ವಿನಾಶಗೊಳಿಸುತ್ತದೆ. ಅಪುತ್ರತ್ವವನ್ನು ಮೂವರು ಪುತ್ರರು ಪರಿಹರಿಸುತ್ತಾರೆ. ಜೀವನೋಪಾಯ ರಾಹಿತ್ಯವನ್ನು ಹತ್ತು ಗೋವುಗಳು ಪರಿಹರಿಸುತ್ತವೆ.

ವೇದಾಂತನಿಷ್ಠಸ್ಯ ಬಹುಶ್ರುತಸ್ಯ
ಪ್ರಜ್ಞಾನತೃಪ್ತಸ್ಯ ಜಿತೇಂದ್ರಿಯಸ್ಯ ।
ಶಿಷ್ಟಸ್ಯ ದಾಂತಸ್ಯ ಯತಸ್ಯ ಚೈವ
ಭೂತೇಷು ನಿತ್ಯಂ ಪ್ರಿಯವಾದಿನಶ್ಚ ॥೨೦॥

ಯಃ ಕ್ಷುದ್ಭಯಾದ್ವೈ ನ ವಿಕರ್ಮ ಕುರ್ಯಾತ್
ಮೃದುರ್ದಾಂತಶ್ಚಾತಿಥೇಯಶ್ಚ ನಿತ್ಯಮ್ ।
ವೃತ್ತಿಂ ವಿಪ್ರಾಯಾತಿಸೃಜೇತ ತಸ್ಮೈ
ಯಸ್ತುಲ್ಯಶೀಲಶ್ಚ ಸಪುತ್ರದಾರಃ ॥೨೧॥

ವೇದಾಂತನಿಷ್ಠನೂ, ಬಹುವಿದ್ಯಾಸಂಪನ್ನನೂ, ಜ್ಞಾನತೃಪ್ತನೂ, ಜಿತೇಂದ್ರಿಯನೂ, ಶಿಷ್ಟನೂ, ಇಂದ್ರಿಯನಿಗ್ರಹವುಳ್ಳವನೂ, ವ್ರತಧಾರಿಯೂ, ಎಲ್ಲರಿಗೂ ಪ್ರಿಯವಾಗಿ ಮಾತನಾಡುವವನೂ, ಹಸಿವಿನ ಭಯದಿಂದ ದುಷ್ಕರ್ಮವನ್ನು ಮಾಡದವನೂ, ಮೃದುವೂ, ಯಾವಾಗಲೂ ಅತಿಥಿ ಪ್ರಿಯನೂ, ವಿಪ್ರರಿಗೆ ಜೀವನೋಪಾಯವನ್ನು ಕಲ್ಪಿಸಿಕೊಡುವವನೂ ಆದವನಿಗೆ ಅಂತಹವನೇ ಆದ ಪುತ್ರ-ಪತ್ನೀ ಸಹಿತನಾದ ಬ್ರಾಹ್ಮಣನು ಗೋವನ್ನು ದಾನ ಮಾಡಬೇಕು.

ಶುಭೇ ಪಾತ್ರೇ ಯೇ ಗುಣಾ ಗೋಪ್ರದಾನೇ
ತಾವಾನ್ ದೋಷೋ ಬ್ರಾಹ್ಮಣಸ್ವಾಪಹಾರೇ ।
ಸರ್ವಾವಸ್ಥಂ ಬ್ರಾಹ್ಮಣಸ್ವಾಪಹಾರೋ
ದಾರಾಶ್ಚೈಷಾಂ ದೂರತೋ ವರ್ಜನೀಯಾಃ ॥೨೨॥

ಯೋಗ್ಯವಾದ ಪಾತ್ರನಲ್ಲಿ ಗೋದಾನ ಮಾಡಿದರೆ ಎಷ್ಟು ಗುಣಗಳಿವೆಯೋ ಬ್ರಾಹ್ಮಣರ ಸ್ವತ್ತನ್ನು ಅಪಹಾರ ಮಾಡಿದರೆ ಅಷ್ಟೇ ದೋಷಗಳಿವೆ. ಯಾವ ಅವಸ್ಥೆಯಲ್ಲಿಯೂ ಬ್ರಾಹ್ಮಣಸ್ವತ್ತನ್ನು ಅಪಹರಿಸಬಾರದು. ಅವರ ಪತ್ನಿಯಿಂದ ಯಾವಾಗಲೂ ದೂರದಲ್ಲಿರಬೇಕು.

ಯುಧಿಷ್ಠಿರಃ

ಬ್ರಾಹ್ಮಣಸ್ವಾಪಹಾರೇಣ ಕಿಯಾನ್ ದೋಷೋ ಭವನ್ಮತ ।
ಬ್ರಹ್ಮಸ್ವಮುಚ್ಯತೇ ಕಿಂ ವಾ ತನ್ಮೇ ಬ್ರೂಹಿ ಪಿತಾಮಹ ॥೨೩॥

ಯುಧಿಷ್ಠಿರ– ಬ್ರಾಹ್ಮಣನ ಸ್ವತ್ತನ್ನು ಅಪಹಾರ ಮಾಡಿದರೆ ಎಷ್ಟು ದೋಷ ಉಂಟಾಗುತ್ತದೆ? ಬ್ರಹ್ಮಸ್ವವನ್ನು ಏನೆಂದು ಕರೆಯುತ್ತಾರೆ? ಪಿತಾಮಹನೇ, ಅದನ್ನು ಹೇಳು.

ಭೀಷ್ಮಃ

ವಿಪ್ರದಾರೇ ಪರಹೃತೇ ವಿಪ್ರಸ್ವನಿಚಯೇ ತಥಾ ।
ಪರಿತ್ರಾಯಂತಿ ಶಕ್ತಾಸ್ತು ನಮಸ್ತೇಭ್ಯೋ ಮೃತಾಸ್ತು ವಾ ॥೨೪॥

ಭೀಷ್ಮ– ಬ್ರಾಹ್ಮಣರ ಪತ್ನಿಯು ಅಥವಾ ಬ್ರಾಹ್ಮಣರ ಧನವು ಅಪಹೃತವಾದರೆ ಶಕ್ತರಾದ ಯಾರು ಅವರನ್ನು ರಕ್ಷಿಸುತ್ತಾರೋ ಅವರು ಆ ಪ್ರಯತ್ನದಲ್ಲಿ ಮೃತರಾಗಿದ್ದರೂ ಜೀವಿಸಿದ್ದರೂ ಅವರಿಗೆ ನಮಸ್ಕಾರ.

ನ ಪಾಲಯಂತಿ ನಿಹತಾ ಯೇ ತಾನ್ ವೈವಸ್ವತೋ ಯಮಃ ।
ದಂಡಯನ್ ಭರ್ತ್ಸಯನ್ನಿತ್ಯಂ ನಿರಯೇಭ್ಯೋ ನ ಮುಂಚತಿ ॥೨೫॥

ಕಷ್ಟಕ್ಕೆ ಒಳಗಾದ ಬ್ರಾಹ್ಮಣರನ್ನು ಯಾವನು ರಕ್ಷಿಸುವುದಿಲ್ಲವೋ ಅವನನ್ನು ವೈವಸ್ವತನಾದ ಯಮನು ನಿತ್ಯವೂ ಶಿಕ್ಷಿಸುತ್ತಾ, ಗದರಿಸುತ್ತಾ ನರಕದಿಂದ ಹೋಗಲು ಬಿಡುವುದೇ ಇಲ್ಲ.

ತಥಾ ಗವಾಂ ಪರಿತ್ರಾಣೇ ಪೀಡನೇ ಚ ಶುಭಾಶುಭೇ ।
ವಿಪ್ರಗೋಷು ವಿಶೇಷೇಣ ರಕ್ಷಿತೇಷು ಹೃತೇಷು ವಾ ॥೨೬॥

ಈ ರೀತಿಯಲ್ಲಿ ಗೋವುಗಳ ರಕ್ಷಣೆ ಮತ್ತು ಪೀಡನದಲ್ಲಿ ಶುಭಾಶುಭ ಫಲಗಳಿವೆ. ಅದರಲ್ಲಿಯೂ ಬ್ರಾಹ್ಮಣರ ಗೋವುಗಳು ರಕ್ಷಿಸಲ್ಪಟ್ಟರೆ ಅಥವಾ ಅಪಹರಿಸಲ್ಪಟ್ಟರೆ ವಿಶೇಷವಾದ ಗುಣದೋಷಗಳು ಉಂಟಾಗುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋದಾನಕ್ಷಣಕಥನಂ ನಾಮ
ಏಕೋನಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರನೆಯ ಅಧ್ಯಾಯ

ಗೋದಾನ-ನೃಗೋಪಾಖ್ಯಾನ

ಭೀಷ್ಮಃ

ಅತ್ರೈವ ಕೀರ್ತ್ಯತೇ ಸದ್ಭಿರ್ಬ್ರಾಹ್ಮಣಸ್ವಾಭಿಮರ್ಶನೇ ।
ನೃಗೇಣ ಸುಮಹತ್‌ಕೃಚ್ಛ್ರಂ ಯದವಾಪ್ತಂ ಕುರೂದ್ವಹ ॥೧॥

ಭೀಷ್ಮ- ಎಲೈ ಕುರೂದ್ವಹನೇ, ಬ್ರಾಹ್ಮಣ ಸ್ವಾಪಹಾರದ ಈ ವಿಷಯದಲ್ಲಿ ಸಜ್ಜನರು ನೃಗ ಮಹಾರಾಜನು ಹೊಂದಿದ ಬಹಳ ಕಷ್ಟದ ಅವಸ್ಥೆಯನ್ನು ಹೇಳುತ್ತಾರೆ.

ನಿವಿಶಂತ್ಯಾಂ ಪುರಾ ಪಾರ್ಥ ದ್ವಾರವತ್ಯಾಮಿತಿ ಶ್ರುತಿಃ ।
ಅದೃಶ್ಯತ ಮಹಾಕೂಪಸ್ತೃಣವೀರುತ್ಸಮಾವೃತಃ ॥೨॥

ಎಲೈ ಪಾರ್ಥನೇ, ಸಮುದ್ರದಲ್ಲಿ ಪ್ರವೇಶಿಸಿರುವ (ದ್ವೀಪವಾಗಿರುವ) ದ್ವಾರಾವತಿಯಲ್ಲಿ ತೃಣ-ಲತೆಗಳಿಂದ ಮುಚ್ಚಲ್ಪಟ್ಟ ಒಂದು ದೊಡ್ಡ ಕೂಪವು ಕಂಡುಬಂದಿತು ಎಂದು ನಾವು ಕೇಳಿದ್ದೇವೆ.

ಪ್ರಯತ್ನಂ ತತ್ರ ಕುರ್ವಾಣಾಸ್ತಸ್ಮಾತ್ ಕೂಪಾಜ್ಜಲಾರ್ಥಿನಃ ।
ಶ್ರಮೇಣ ಮಹತಾ ಯುಕ್ತಾಸ್ತಸ್ಮಿಂಸ್ತೋಯೇ ಸುಸಂವೃತೇ ॥೩॥

ಆ ಕೂಪದಿಂದ ನೀರನ್ನು ಪಡೆಯಲು ಬಯಸಿದವರು ಅದು ಚೆನ್ನಾಗಿ ಮುಚ್ಚಿ ಹೋದುದರಿಂದ ಪ್ರಯತ್ನವನ್ನು ಪಟ್ಟರೂ ಬಹಳ ಶ್ರಮವನ್ನು ಹೊಂದಿದರು.

ದದೃಶುಸ್ತೇ ಮಹಾಕಾಯಂ ಕೃಕಲಾಸಮವಸ್ಥಿತಮ್ ।
ತಸ್ಯ ಚೋದ್ಧರಣೇ ಯತ್ನಮಕುರ್ವಂಸ್ತೇ ಸಹಸ್ರಶಃ ॥೪॥

ಅವರು ಬಾವಿಯಲ್ಲಿ ಬಗ್ಗಿ ನೋಡಿದಾಗ ದೊಡ್ಡ ಶರೀರವುಳ್ಳ ಒಂದು ಕೃಕಲಾಸವು (ಓತೀಕೇತ) ಇರುವುದು ಕಂಡುಬಂದಿತು. ಅದನ್ನು ಎತ್ತಲು ಅವರು ಸಹಸ್ರಾರು ಪ್ರಯತ್ನವನ್ನು ಮಾಡಿದರು.

ಪ್ರಗ್ರಹೈಶ್ಚರ್ಮಪಟ್ಟೈಶ್ಚ ತಂ ಬದ್ಧ್ವಾ ಪರ್ವತೋಪಮಮ್ ।
ನಾಶಕ್ನುವನ್ ಸಮುದ್ಧರ್ತುಂ ತತೋ ಜಗ್ಮುರ್ಜನಾರ್ದನಮ್ ॥೫॥

ಹಗ್ಗಗಳಿಂದಲೂ, ಚರ್ಮಪಟ್ಟಿಗಳಿಂದಲೂ ಕಟ್ಟಿದರೂ ಪರ್ವತದಂತಿದ್ದ ಅದನ್ನು ಮೇಲಕ್ಕೆತ್ತಲು ಸಾಧ್ಯವಾಗದೆ ಅವರು ಜನಾರ್ದನನ ಬಳಿಗೆ ಹೋದರು.

ಖಮಾವೃತ್ಯೋದಪಾನಸ್ಯ ಕೃಕಲಾಸಃ ಸ್ಥಿತೋ ಮಹಾನ್ ।
ತಸ್ಯ ನಾಸ್ತಿ ಸಮುದ್ಧರ್ತೇತ್ಯಥ ಕೃಷ್ಣೇ ನ್ಯವೇದಯನ್ ॥೬॥

ಬಾವಿಯ ಒಳಗಿನ ಅವಕಾಶವನ್ನೆಲ್ಲ ತುಂಬಿಕೊಂಡು ಒಂದು ದೊಡ್ಡ ಕೃಕಲಾಸವು ಇದೆ. ಅದನ್ನು ಎತ್ತುವವನು ಯಾರೂ ಇಲ್ಲ ಎಂದು ಕೃಷ್ಣನಿಗೆ ನಿವೇದಿಸಿದರು.

ಸ ವಾಸುದೇವೇನ ಸಮುದ್ಧೃತಶ್ಚ
ಪೃಷ್ಟಶ್ಚ ಕಾಮಾನ್ನಿಜಗಾದ ರಾಜಾ ।
ನೃಗಸ್ತದಾತ್ಮಾನಮಥೋ ನ್ಯವೇದಯತ್
ಪುರಾತನಂ ಯಜ್ಞಸಹಸ್ರಯಾಜಿನಮ್ ॥೭॥

ಆ ಕೃಕಲಾಸವು ವಾಸುದೇವನಾದ ಕೃಷ್ಣನಿಂದ ಮೇಲಕ್ಕೆತ್ತಲ್ಪಟ್ಟಿತು. ಕೃಷ್ಣನಿಂದ ಪ್ರಶ್ನೆಯನ್ನು ಮಾಡಲ್ಪಟ್ಟ ಆ ನೃಗರಾಜನು ಮಾತನಾಡಿದನು. ತನ್ನನ್ನು ಸಹಸ್ರಯಜ್ಞವನ್ನು ಮಾಡಿದ ಪುರಾತನನಾದ ನೃಗರಾಜನೆಂದು ನಿವೇದಿಸಿದನು.

ತಥಾ ಬ್ರುವಾಣಂ ತು ತಮಾಹ ಮಾಧವಃ
ಶುಭಂ ತ್ವಯಾ ಕರ್ಮ ಕೃತಂ ನ ಪಾಪಕಮ್ ।
ಕಥಂ ಭವಾನ್ ದುರ್ಗತಿಮೀದೃಶೀಂ ಗತೋ
ನರೇಂದ್ರ ತದ್ ಬ್ರೂಹಿ ಕಿಮೇತದೀದೃಶಮ್ ॥೮॥

ಹಾಗೆ ಮಾತನಾಡಿದ ಅವನನ್ನು ಕುರಿತು ಮಾಧವನು ನೀನು ಶುಭಕರ್ಮವನ್ನೇ ಮಾಡಿದ್ದೀಯೆ. ಪಾಪಕರ್ಮವನ್ನು ಮಾಡಿಲ್ಲ. ಇಂತಹ ದುರ್ಗತಿಯನ್ನು ಹೇಗೆ ಪಡೆದೆ? ಎಲೈ ನರೇಂದ್ರನೇ, ಈ ದುರ್ಗತಿಯು ಹೇಗೆ ಪ್ರಾಪ್ತವಾಯಿತು ಎಂದು ಹೇಳು ಎಂದು ಹೇಳಿದನು.

ಶತಂ ಸಹಸ್ರಾಣಿ ಶತಂ ಗವಾಂ ಪುನಃ
ಪುನಃ ಶತಾನ್ಯಷ್ಟ ಶತಾಯುತಾನಿ ।
ತ್ವಯಾ ಪುರಾ ದತ್ತಮಿತೀಹ ಶುಶ್ರುಮ
ನೃಪ ದ್ವಿಜೇಭ್ಯಃ ಕ್ವ ನು ತದ್‌ಗತಂ ತವ ॥೯॥

ನೀನು ಮೂರು ಸಹಸ್ರ ಗೋವುಗಳನ್ನು ಪುನಃ ನೂರು ಗೋವುಗಳನ್ನು, ಪುನಃ ಎಂಟುನೂರು ಗೋವುಗಳನ್ನು, ಪುನಃ ನೂರು ಅಯುತ (ಹತ್ತು ಲಕ್ಷ) ಗೋವುಗಳನ್ನು ಹಿಂದೆ ದಾನ ಮಾಡಿದ್ದೀಯೆಂದು ನಾವು ಬ್ರಾಹ್ಮಣರಿಂದ ಕೇಳಿದ್ದೇವೆ. ಎಲೈ ರಾಜನೇ, ನಿನ್ನ ಆ ಪುಣ್ಯವೆಲ್ಲವೂ ಎಲ್ಲಿಗೆ ಹೋಯಿತು ಎಂದು ಕೇಳಿದನು.

ನೃಗಸ್ತತೋಽಬ್ರವೀತ್ ಕೃಷ್ಣಂ ಬ್ರಾಹ್ಮಣಸ್ಯಾಗ್ನಿಹೋತ್ರಿಣಃ ।
ಪ್ರೋಷಿತಸ್ಯ ಪರಿಭ್ರಷ್ಟಾ ಗೌರೇಕಾ ಮಮ ಗೋಧನೇ ॥೧೦॥

ಆಗ ನೃಗನು ಕೃಷ್ಣನನ್ನು ಕುರಿತು ಹೀಗೆ ಹೇಳಿದನು- ಅಗ್ನಿಹೋತ್ರಿಯಾದ ಒಬ್ಬ ಬ್ರಾಹ್ಮಣನು ಪ್ರವಾಸಕ್ಕೆ ಹೋಗಿದ್ದಾಗ ಅವನ ಒಂದು ಹಸುವು ತಪ್ಪಿಸಿಕೊಂಡು ನನ್ನ ಗೋವುಗಳಲ್ಲಿ ಸೇರಿತು.

ಗವಾಂ ಸಹಸ್ರೇ ಸಂಖ್ಯಾತಾ ತದಾ ಸಾ ಪಶುಪೈರ್ಮಮ ।
ಸಾ ಬ್ರಾಹ್ಮಣಾಯ ಮೇ ದತ್ತಾ ಪ್ರೇತ್ಯಾರ್ಥಮಭಿಕಾಂಕ್ಷತಾ ॥೧೧॥

ನನ್ನ ಪಶುಪಾಲಕರು ಸಹಸ್ರ ಗೋವುಗಳನ್ನು ಎಣಿಸುವಾಗ ಅದನ್ನೂ ಸೇರಿಸಿಕೊಂಡು ಎಣಿಸಿದರು. ನಾನು ಮರಣೋತ್ತರ ಕಾಲದಲ್ಲಿ ಪುಣ್ಯಫಲವನ್ನು ಅನುಭವಿಸಲು ಆಶಿಸಿ ಆ ಗೋವನ್ನು ಇನ್ನೊಬ್ಬ ಬ್ರಾಹ್ಮಣನಿಗೆ ದಾನ ಮಾಡಿದೆ.

ಅಪಶ್ಯತ್ ಪರಿಮಾರ್ಗಂಶ್ಚ ತಾಂ ಯಾಂ ಪರಗೃಹೇ ದ್ವಿಜಃ ।
ಮಮೇಯಮಿತಿ ಚೋವಾಚ ಬ್ರಾಹ್ಮಣೋ ಯಸ್ಯ ಸಾಽಭವತ್ ॥೧೨॥

ಮೊದಲನೆಯ ಬ್ರಾಹ್ಮಣನು ತನ್ನ ಗೋವನ್ನು ಹುಡುಕುತ್ತಾ ಅದು ಪರಗೃಹದಲ್ಲಿರುವುದನ್ನು ನೋಡಿದನು. ಆ ಗೋವಿನ ಒಡೆಯನಾದ ಅವನು ಇದು ನನ್ನದು ಎಂದು ಹೇಳಿದನು.

ತಾವುಭೌ ಸಮನುಪ್ರಾಪ್ತೌ ವಿವದಂತೌ ಭೃಶಜ್ವರೌ ।
ಭವಾನ್ ದಾತಾ ಭವಾನ್ ಹರ್ತೇತ್ಯಥ ತೌ ಮಾಂ ತದೋಚತುಃ ॥

ಆ ಇಬ್ಬರು ಕೋಪದಿಂದ ವಿವಾದ ಮಾಡುತ್ತಾ ನನ್ನ ಬಳಿಗೆ ಬಂದರು. ನೀನು ದತ್ತಾಪಹಾರವನ್ನು ಮಾಡಿದ್ದೀಯೆ ಎಂದು ಅವರಿಬ್ಬರೂ ನನಗೆ ಹೇಳಿದರು.

ಶತೇನ ಶತಸಂಖ್ಯೇನ ಗವಾಂ ವಿನಿಮಯೇನ ವೈ ।
ಯಾಚೇ ಪ್ರತಿಗ್ರಹೀತಾರಂ ಸ ತು ಮಾಮಬ್ರವೀದಿದಮ್ ॥೧೪॥

ನಾನು ಹತ್ತು ಸಾವಿರ ಗೋವುಗಳನ್ನು ತೆಗೆದುಕೊಂಡು ಆ ಗೋವನ್ನು ವಿನಿಮಯ ಮಾಡಿಕೊಂಡು ಕೊಡು ಎಂದು ಪ್ರತಿಗ್ರಹೀತೃವಾದ ಎರಡನೆಯ ಬ್ರಾಹ್ಮಣನಿಗೆ ಬೇಡಿದೆನು. ಅವನು ನನ್ನನ್ನು ಕುರಿತು ಹೀಗೆ ಹೇಳಿದನು.

ದೇಶಕಾಲೋಪಸಂಪನ್ನಾ ದೋಗ್ಧ್ರೀ ಕ್ಷಾಂತಾऽತಿವತ್ಸಲಾ ।
ಸ್ವಾದುಕ್ಷೀರಪ್ರದಾ ಧನ್ಯಾ ಮಮ ನಿತ್ಯಂ ನಿವೇಶನೇ ॥೧೫॥

ದೇಶಕಾಲಗಳಿಗೆ ಯೋಗ್ಯವಾದ, ಹಾಲನ್ನು ಕರೆಯುವ, ಸಾಧು ಸ್ವಭಾವವುಳ್ಳ, ಕರುವಿನ ಮೇಲೆ ಬಹಳ ಪ್ರೀತಿಯುಳ್ಳ, ಮೃದುವಾದ, ಕ್ಷೀರಪ್ರದವಾದ ಈ ಗೋವು ನನ್ನ ಮನೆಯಲ್ಲಿ ಯಾವಾಗಲೂ ಧನ್ಯವಾಗಿರಲಿ.

ಕೃಶಂ ಚ ಭರತೇ ಯಾ ಗೌರ್ಮಮ ಪುತ್ರಮಪಸ್ತನಮ್ ।
ನ ಸಾ ಶಕ್ಯಾ ಮಯಾ ಹಾತುಮಿತ್ಯುಕ್ತ್ವಾ ಸ ಜಗಾಮ ಹ ॥೧೬॥

ತಾಯಿಯ ಸ್ತನ್ಯವಿಲ್ಲದಿರುವ ನನ್ನ ಕೃಶನಾದ ಪುತ್ರನನ್ನು ಯಾವ ಗೋವು ಪೋಷಿಸುತ್ತಿದೆಯೋ ಆ ಗೋವನ್ನು ನಾನು ಬಿಡಲಾರೆ ಎಂದು ಹೇಳಿ ಅವನು ಹೊರಟು ಹೋದನು.

ಹಾಗೆ ಮಾತನಾಡಿದ ಅವನನ್ನು ಕುರಿತು ಮಾಧವನು ನೀನು ಶುಭಕರ್ಮವನ್ನೇ ಮಾಡಿದ್ದೀಯೆ. ಪಾಪಕರ್ಮವನ್ನು ಮಾಡಿಲ್ಲ. ಇಂತಹ ದುರ್ಗತಿಯನ್ನು ಹೇಗೆ ಪಡೆದೆ? ಎಲೈ ನರೇಂದ್ರನೇ, ಈ ದುರ್ಗತಿಯು ಹೇಗೆ ಪ್ರಾಪ್ತವಾಯಿತು ಎಂದು ಹೇಳು ಎಂದು ಹೇಳಿದನು.

ಶತಂ ಸಹಸ್ರಾಣಿ ಶತಂ ಗವಾಂ ಪುನಃ
ಪುನಃ ಶತಾನ್ಯಷ್ಟ ಶತಾಯುತಾನಿ ।
ತ್ವಯಾ ಪುರಾ ದತ್ತಮಿತೀಹ ಶುಶ್ರುಮ
ನೃಪ ದ್ವಿಜೇಭ್ಯಃ ಕ್ವ ನು ತದ್‌ಗತಂ ತವ ॥೯॥

ನೀನು ಮೂರು ಸಹಸ್ರ ಗೋವುಗಳನ್ನು ಪುನಃ ನೂರು ಗೋವುಗಳನ್ನು, ಪುನಃ ಎಂಟುನೂರು ಗೋವುಗಳನ್ನು, ಪುನಃ ನೂರು ಅಯುತ (ಹತ್ತು ಲಕ್ಷ) ಗೋವುಗಳನ್ನು ಹಿಂದೆ ದಾನ ಮಾಡಿದ್ದೀಯೆಂದು ನಾವು ಬ್ರಾಹ್ಮಣರಿಂದ ಕೇಳಿದ್ದೇವೆ. ಎಲೈ ರಾಜನೇ, ನಿನ್ನ ಆ ಪುಣ್ಯವೆಲ್ಲವೂ ಎಲ್ಲಿಗೆ ಹೋಯಿತು ಎಂದು ಕೇಳಿದನು.

ನೃಗಸ್ತತೋಽಬ್ರವೀತ್ ಕೃಷ್ಣಂ ಬ್ರಾಹ್ಮಣಸ್ಯಾಗ್ನಿಹೋತ್ರಿಣಃ ।
ಪ್ರೋಷಿತಸ್ಯ ಪರಿಭ್ರಷ್ಟಾ ಗೌರೇಕಾ ಮಮ ಗೋಧನೇ ॥೧೦॥

ಆಗ ನೃಗನು ಕೃಷ್ಣನನ್ನು ಕುರಿತು ಹೀಗೆ ಹೇಳಿದನು- ಅಗ್ನಿಹೋತ್ರಿಯಾದ ಒಬ್ಬ ಬ್ರಾಹ್ಮಣನು ಪ್ರವಾಸಕ್ಕೆ ಹೋಗಿದ್ದಾಗ ಅವನ ಒಂದು ಹಸುವು ತಪ್ಪಿಸಿಕೊಂಡು ನನ್ನ ಗೋವುಗಳಲ್ಲಿ ಸೇರಿತು.

ಗವಾಂ ಸಹಸ್ರೇ ಸಂಖ್ಯಾತಾ ತದಾ ಸಾ ಪಶುಪೈರ್ಮಮ ।
ಸಾ ಬ್ರಾಹ್ಮಣಾಯ ಮೇ ದತ್ತಾ ಪ್ರೇತ್ಯಾರ್ಥಮಭಿಕಾಂಕ್ಷತಾ ॥೧೧॥

ನನ್ನ ಪಶುಪಾಲಕರು ಸಹಸ್ರ ಗೋವುಗಳನ್ನು ಎಣಿಸುವಾಗ ಅದನ್ನೂ ಸೇರಿಸಿಕೊಂಡು ಎಣಿಸಿದರು. ನಾನು ಮರಣೋತ್ತರ ಕಾಲದಲ್ಲಿ ಪುಣ್ಯಫಲವನ್ನು ಅನುಭವಿಸಲು ಆಶಿಸಿ ಆ ಗೋವನ್ನು ಇನ್ನೊಬ್ಬ ಬ್ರಾಹ್ಮಣನಿಗೆ ದಾನ ಮಾಡಿದೆ.

ಅಪಶ್ಯತ್ ಪರಿಮಾರ್ಗಂಶ್ಚ ತಾಂ ಯಾಂ ಪರಗೃಹೇ ದ್ವಿಜಃ ।
ಮಮೇಯಮಿತಿ ಚೋವಾಚ ಬ್ರಾಹ್ಮಣೋ ಯಸ್ಯ ಸಾಽಭವತ್ ॥೧೨॥

ಮೊದಲನೆಯ ಬ್ರಾಹ್ಮಣನು ತನ್ನ ಗೋವನ್ನು ಹುಡುಕುತ್ತಾ ಅದು ಪರಗೃಹದಲ್ಲಿರುವುದನ್ನು ನೋಡಿದನು. ಆ ಗೋವಿನ ಒಡೆಯನಾದ ಅವನು ಇದು ನನ್ನದು ಎಂದು ಹೇಳಿದನು.

ತಾವುಭೌ ಸಮನುಪ್ರಾಪ್ತೌ ವಿವದಂತೌ ಭೃಶಜ್ವರೌ ।
ಭವಾನ್ ದಾತಾ ಭವಾನ್ ಹರ್ತೇತ್ಯಥ ತೌ ಮಾಂ ತದೋಚತುಃ ॥

ಆ ಇಬ್ಬರು ಕೋಪದಿಂದ ವಿವಾದ ಮಾಡುತ್ತಾ ನನ್ನ ಬಳಿಗೆ ಬಂದರು. ನೀನು ದತ್ತಾಪಹಾರವನ್ನು ಮಾಡಿದ್ದೀಯೆ ಎಂದು ಅವರಿಬ್ಬರೂ ನನಗೆ ಹೇಳಿದರು.

ಶತೇನ ಶತಸಂಖ್ಯೇನ ಗವಾಂ ವಿನಿಮಯೇನ ವೈ ।
ಯಾಚೇ ಪ್ರತಿಗ್ರಹೀತಾರಂ ಸ ತು ಮಾಮಬ್ರವೀದಿದಮ್ ॥೧೪॥

ನಾನು ಹತ್ತು ಸಾವಿರ ಗೋವುಗಳನ್ನು ತೆಗೆದುಕೊಂಡು ಆ ಗೋವನ್ನು ವಿನಿಮಯ ಮಾಡಿಕೊಂಡು ಕೊಡು ಎಂದು ಪ್ರತಿಗ್ರಹೀತೃವಾದ ಎರಡನೆಯ ಬ್ರಾಹ್ಮಣನಿಗೆ ಬೇಡಿದೆನು. ಅವನು ನನ್ನನ್ನು ಕುರಿತು ಹೀಗೆ ಹೇಳಿದನು.

ದೇಶಕಾಲೋಪಸಂಪನ್ನಾ ದೋಗ್ಧ್ರೀ ಕ್ಷಾಂತಾऽತಿವತ್ಸಲಾ ।
ಸ್ವಾದುಕ್ಷೀರಪ್ರದಾ ಧನ್ಯಾ ಮಮ ನಿತ್ಯಂ ನಿವೇಶನೇ ॥೧೫॥

ದೇಶಕಾಲಗಳಿಗೆ ಯೋಗ್ಯವಾದ, ಹಾಲನ್ನು ಕರೆಯುವ, ಸಾಧು ಸ್ವಭಾವವುಳ್ಳ, ಕರುವಿನ ಮೇಲೆ ಬಹಳ ಪ್ರೀತಿಯುಳ್ಳ, ಮೃದುವಾದ, ಕ್ಷೀರಪ್ರದವಾದ ಈ ಗೋವು ನನ್ನ ಮನೆಯಲ್ಲಿ ಯಾವಾಗಲೂ ಧನ್ಯವಾಗಿರಲಿ.

ಕೃಶಂ ಚ ಭರತೇ ಯಾ ಗೌರ್ಮಮ ಪುತ್ರಮಪಸ್ತನಮ್ ।
ನ ಸಾ ಶಕ್ಯಾ ಮಯಾ ಹಾತುಮಿತ್ಯುಕ್ತ್ವಾ ಸ ಜಗಾಮ ಹ ॥೧೬॥

ತಾಯಿಯ ಸ್ತನ್ಯವಿಲ್ಲದಿರುವ ನನ್ನ ಕೃಶನಾದ ಪುತ್ರನನ್ನು ಯಾವ ಗೋವು ಪೋಷಿಸುತ್ತಿದೆಯೋ ಆ ಗೋವನ್ನು ನಾನು ಬಿಡಲಾರೆ ಎಂದು ಹೇಳಿ ಅವನು ಹೊರಟು ಹೋದನು.

ತತಸ್ತಮಪರಂ ವಿಪ್ರಂ ಯಾಚೇ ವಿನಿಮಯೇನ ವೈ ।
ಗವಾಂ ಶತಸಹಸ್ರಂ ವೈ ತತ್ಕೃತೇ ಗೃಹ್ಯತಾಮಿತಿ ॥೧೭॥

ಆಗ ನಾನು ಮೊದಲನೆಯ ಇನ್ನೊಬ್ಬ ಬ್ರಾಹ್ಮಣನಿಗೆ ಆ ಗೋವಿನ ಬದಲಾಗಿ ಒಂದು ಲಕ್ಷ ಗೋವನ್ನು ತೆಗೆದುಕೊಂಡು ವಿನಿಮಯ ಮಾಡಿಕೋ ಎಂದು ಹೇಳಿದೆನು.

ಬ್ರಾಹ್ಮಣಃ

ನ ರಾಜ್ಞಾಂ ಪ್ರತಿಗೃಹ್ಣಾಮಿ ಶಕ್ತೋಽಹಂ ಸ್ವಸ್ಯ ಮಾರ್ಗಣೇ ।
ಸೈವ ಗೌರ್ದೀಯತಾಂ ಶೀಘ್ರಂ ಮಮೇತಿ ಮಧುಸೂದನ ॥೧೮॥

ಬ್ರಾಹ್ಮಣ– ಎಲೈ ಮಧುಸೂದನನೇ, ನಾನು ರಾಜನಿಂದ ಇನ್ನು ದಾನವನ್ನೂ ಸ್ವೀಕರಿಸುವುದಿಲ್ಲ. ನನ್ನ ಜೀವನೋಪಾಯವನ್ನು ಹುಡುಕುವುದರಲ್ಲಿ ನಾನು ಸಮರ್ಥನಾಗಿದ್ದೇನೆ. ಅದೇ ಗೋವನ್ನು ನನಗೆ ಶೀಘ್ರವಾಗಿ ಹಿಂದಕ್ಕೆ ಕೊಡು ಎಂದು ಹೇಳಿದನು.

ರುಗ್ಮಮಶ್ವಾಂಶ್ಚ ದದತೋ ರಜತಂ ಸ್ಯಂದನಾಂಸ್ತಥಾ ।
ನ ಜಗ್ರಾಹ ಯಯೌ ಚಾಪಿ ತದಾ ಸ ಬ್ರಾಹ್ಮಣರ್ಷಭಃ ॥೧೯॥

ನಾನು ಸುವರ್ಣವನ್ನು, ಅಶ್ವಗಳನ್ನು, ರಜತಗಳನ್ನು, ರಥಗಳನ್ನು ಕೊಡುತ್ತೇನೆ ಎಂದು ಹೇಳಿದರೂ ಆ ಬ್ರಾಹ್ಮಣನು ಸ್ವೀಕರಿಸದೆ ಹಾಗೆಯೇ ಹೊರಟು ಹೋದನು.

ಏತಸ್ಮಿನ್ನೇವ ಕಾಲೇ ತು ಚೋದಿತಃ ಕಾಲಧರ್ಮಣಾ ।
ಪಿತೃಲೋಕಮಹಂ ಪ್ರಾಪ್ಯ ಧರ್ಮರಾಜಮುಪಾಗಮಮ್ ॥೨೦॥

ಆ ಕಾಲದಲ್ಲಿ ನಾನು ಕಾಲಧರ್ಮದಿಂದ ಪ್ರಚೋದಿತನಾಗಿ ಮೃತ್ಯುವಶನಾಗಿ ಪಿತೃಲೋಕಕ್ಕೆ ಬಂದು ಧರ್ಮರಾಜನ ಬಳಿಯಲ್ಲಿ ಹೋದೆನು.

ಯಮಸ್ತು ಪೂಜಯಿತ್ವಾ ಮಾಂ ತತೋ ವಚನಮಬ್ರವೀತ್ ।
ನಾಂತಃ ಸಂಖ್ಯಾಯತೇ ರಾಜಂಸ್ತವ ಪುಣ್ಯಸ್ಯ ಕರ್ಮಣಃ ॥೨೧॥

ಅಸ್ತಿ ಚೈವ ಕೃತಂ ಪಾಪಮಜ್ಞಾನಾತ್ ತದಪಿ ತ್ವಯಾ ।
ಚರಸ್ವ ಪಾಪಂ ಪಶ್ಚಾದ್ವಾ ಪೂರ್ವಂ ವಾ ತ್ವಂ ಯಥೇಚ್ಛಸಿ ॥೨೨॥

ರಕ್ಷಿತಾಸ್ಮೀತಿ ಚೋಕ್ತಂ ತೇ ಪ್ರತಿಜ್ಞಾ ಚಾನೃತಾ ತವ ।
ಬ್ರಾಹ್ಮಣಸ್ವಸ್ಯ ಚಾದಾನಂ ತ್ರಿವಿಧಸ್ತೇ ವ್ಯತಿಕ್ರಮಃ ॥೨೩॥

ಅವನು ನನ್ನನ್ನು ಪೂಜಿಸಿ ನನ್ನನ್ನು ಕುರಿತು- 'ರಾಜನೇ, ನೀನು ಮಾಡಿದ ಪುಣ್ಯಕರ್ಮಗಳಿಗೆ ಕೊನೆಯೇ ಕಾಣುವುದಿಲ್ಲ. ನೀನು ಅಜ್ಞಾನದಿಂದ ಮಾಡಿದ ಒಂದು ಪಾಪವು ಮಾತ್ರ ಇದೆ. ನೀನು ಪಾಪದ ಫಲವನ್ನು ಮೊದಲು ಅನುಭವಿಸುತ್ತೀಯೋ ಅಥವಾ ಪುಣ್ಯದ ಫಲವನ್ನು ಮೊದಲು ಅನುಭವಿಸುತ್ತೀಯೋ? ಹೇಗೆ ಇಚ್ಛಿಸುತ್ತೀಯೆ? ಪ್ರಜೆಗಳನ್ನು ರಕ್ಷಿಸುತ್ತೇನೆಂದು ಹೇಳಿ ರಕ್ಷಿಸಲಿಲ್ಲ. ದಾನವನ್ನು ಕೊಡುವಾಗ ನಿನಗೆ ಕೊಡುತ್ತೇನೆ ಎಂದು ಪ್ರತಿಜ್ಞೆ ಮಾಡಿ ನೀಡಿದೆ. ಆ ಪ್ರತಿಜ್ಞೆ ಸುಳ್ಳಾಯಿತು ಮತ್ತು ಬ್ರಾಹ್ಮಣಸ್ವವನ್ನು ಅಪಹಾರ ಮಾಡಿದೆ. ಹೀಗೆ ನಿನ್ನ ದೋಷವು ಮೂರುವಿಧವಾಗಿದೆ' ಎಂದು ಹೇಳಿದನು.

ಪೂರ್ವಂ ಕೃಚ್ಛ್ರಂ ಚರಿಷ್ಯೇಽಹಂ ಪಶ್ಚಾಚ್ಚುಭಮಿತಿ ಪ್ರಭೋ ।
ಧರ್ಮರಾಜಂ ಬ್ರುವನ್ನೇವಂ ಪತಿತೋಽಸ್ಮಿ ಮಹೀತಳೇ ॥೨೪॥

ನಾನು ಧರ್ಮರಾಜನನ್ನು ಕುರಿತು- 'ಪ್ರಭುವೇ, ನಾನು ಕಷ್ಟವನ್ನು ಮೊದಲು ಅನುಭವಿಸುತ್ತೇನೆ. ಅನಂತರ ಸುಖವನ್ನು ಅನುಭವಿಸುತ್ತೇನೆ' ಎಂದು ಹೇಳುತ್ತಿರುವಾಗಲೇ ಭೂಮಿಯಲ್ಲಿ ಕೃಕಲಾಸನಾಗಿ ಬಿದ್ದೆನು.

ಅಶ್ರೌಷಂ ಪ್ರಚ್ಯುತಶ್ಚಾಹಂ ಯಮಸ್ಯೋಚ್ಚೈಃ ಪ್ರಭಾಷತಃ ।
ವಾಸುದೇವಃ ಸಮುದ್ಧರ್ತಾ ಭವಿತಾ ತೇ ಜನಾರ್ದನಃ ॥೨೫॥

ಪೂರ್ಣೇ ವರ್ಷಸಹಸ್ರಾಂತೇ ಕ್ಷೀಣೇ ಕರ್ಮಣಿ ದುಷ್ಕೃತೇ ।
ಪ್ರಾಪ್ಸ್ಯಸೇ ಶಾಶ್ವತಾಲ್ಲೋಕಾನ್ ಜಿತಾನ್ ಸ್ವೇನೈವ ಕರ್ಮಣಾ ॥೨೬॥

ಭೂಮಿಗೆ ಬಿದ್ದ ನಾನು ಯಮನು ಗಟ್ಟಿಯಾದ ಸ್ವರದಲ್ಲಿ ಹೇಳಿದ ಜನಾರ್ದನನಾದ ವಾಸುದೇವನು ನಿನ್ನನ್ನು ಉದ್ಧಾರ ಮಾಡುವನು. ಒಂದು ಸಹಸ್ರವರ್ಷಗಳು ಪೂರ್ಣವಾಗಿ ನಿನ್ನ ದುಷ್ಕರ್ಮವು ನಾಶವಾದ ಮೇಲೆ ನಿನ್ನ ಶುಭಕರ್ಮದಿಂದ ಜಿತವಾದ ಶಾಶ್ವತವಾದ ಲೋಕವನ್ನು ಹೊಂದುವಿ ಎಂಬ ಮಾತನ್ನು ಕೇಳಿದೆ.

ಕೂಪೇऽऽತ್ಮಾನಮಧಃಶೀರ್ಷಮಪಶ್ಯಂ ಪತಿತಂ ಚ ಹ ।
ತಿರ್ಯಗ್ಯೋನಿಮನುಪ್ರಾಪ್ತಂ ನ ತು ಮಾಮಜಹಾತ್ ಸ್ಮೃತಿಃ ॥೨೭॥

ನಾನು ಕೂಪದಲ್ಲಿ ತಿರ್ಯಗ್ಯೋನಿಯನ್ನು ಹೊಂದಿ ತಲೆಕೆಳಕಾಗಿ ಬಿದ್ದಿರುವುದನ್ನು ಗಮನಿಸಿದೆನು. ನನಗೆ ಹಿಂದಿನ ಸ್ಮೃತಿಯು ಅಳಸಿಹೋಗಲಿಲ್ಲ.

ತ್ವಯಾ ತು ತಾರಿತೋऽಸ್ಮ್ಯದ್ಯ ಕಿಮನ್ಯತ್ರ ತಪೋಬಲಾತ್ ।
ಅನುಜಾನೀಹಿ ಮಾಂ ಕೃಷ್ಣ ಗಚ್ಛೇಯಂ ದಿವಮದ್ಯ ವೈ ॥೨೮॥

ಈ ದಿನ ನಿನ್ನಿಂದ ಉದ್ಧರಿಸಲ್ಪಟ್ಟಿದ್ದೇನೆ. ತಪಸ್ಸಿನ ಬಲವನ್ನು ಬಿಟ್ಟು ಬೇರೆ ಯಾವ ಬಲವಿದೆ! ಎಲೈ ಕೃಷ್ಣನೇ, ಅನುಮತಿಯನ್ನು ಕೊಡು. ನಾನು ಸ್ವರ್ಗಕ್ಕೆ ಹೋದೇನು ಎಂದು ಹೇಳಿದನು.

ಭೀಷ್ಮಃ

ಅನುಜ್ಞಾತಃ ಸ ಕೃಷ್ಣೇನ ನಮಸ್ಕೃತ್ಯ ಜನಾರ್ದನಮ್ ।
ವಿಮಾನಂ ದಿವ್ಯಮಾಸ್ಥಾಯ ಯಯೌ ದಿವಮರಿಂದಮ ॥೨೯॥

ಭೀಷ್ಮ– ಎಲೈ ಅರಿಂದಮನೇ, ಕೃಷ್ಣನಿಂದ ಅನುಮತಿಯನ್ನು ಪಡೆದು ಅವನು ಅವನಿಗೆ ನಮಸ್ಕರಿಸಿ ವಿಮಾನವನ್ನು ಏರಿ ಸ್ವರ್ಗಕ್ಕೆ ಹೊರಟು ಹೋದನು.

ತತಸ್ತಸ್ಮಿನ್ ದಿವಂ ಪ್ರಾಪ್ತೇ ನೃಗೇ ಭರತಸತ್ತಮ ।
ವಾಸುದೇವ ಇಮಂ ಶ್ಲೋಕಂ ಜಗಾದ ಕುರುನಂದನ ॥೩೦॥

ಬ್ರಾಹ್ಮಣಸ್ವಂ ನ ಹರ್ತವ್ಯಂ ಪುರುಷೇಣ ವಿಜಾನತಾ ।
ಬ್ರಾಹ್ಮಣಸ್ವಂ ಹೃತಂ ಹಂತಿ ನೃಗಂ ಬ್ರಾಹ್ಮಣಗೌರಿವ ॥೩೧॥

ಎಲೈ ಭರತಶ್ರೇಷ್ಠನೇ, ಕುರುನಂದನನೇ, ನೃಗನು ಸ್ವರ್ಗಕ್ಕೆ ಹೋದಮೇಲೆ ವಾಸುದೇವನು ವಿವೇಕಿಯಾದ ಪುರುಷನು ಬ್ರಾಹ್ಮಣ ಸ್ವತ್ತನ್ನು ಅಪಹರಿಸಬಾರದು. ಬ್ರಾಹ್ಮಣನ ಗೋವು ನೃಗನನ್ನು ವಿನಾಶಗೊಳಿಸಿದಂತೆ ಅಪಹರಿಸಲ್ಪಟ್ಟ ಬ್ರಾಹ್ಮಣರ ಸ್ವತ್ತು ವಿನಾಶವನ್ನುಂಟು ಮಾಡುತ್ತದೆ ಎಂಬ ಶ್ಲೋಕವನ್ನು ಹೇಳಿದನು.

ಸತಾಂ ಸಮಾಗಮಃ ಸದ್ಭಿರ್ನಾಫಲಃ ಪಾರ್ಥ ವಿದ್ಯತೇ ।
ವಿಮುಕ್ತಂ ನರಕಾತ್ ಪಶ್ಯ ನೃಗಂ ಸಾಧುಸಮಾಗಮಾತ್ ॥೩೨॥

ಎಲೈ ಪಾರ್ಥನೇ, ಸಜ್ಜನರ ಸಮಾಗಮವು ಎಂದೂ ನಿಸ್ಫಲವಾಗುವುದಿಲ್ಲ. ಸಜ್ಜನರ ಸಹವಾಸದಿಂದ ನೃಗನು ನರಕದಿಂದ ಮುಕ್ತನಾದುದನ್ನು ನೋಡು.

ಪ್ರದಾನಂ ಫಲವತ್ ತತ್ರ ದ್ರೋಹಸ್ತತ್ರ ತಥಾऽಫಲಃ ।
ಅಪಚಾರಂ ಗವಾಂ ತಸ್ಮಾದ್ ವರ್ಜಯೇತ ಯುಧಿಷ್ಠಿರ ॥೩೩॥

ಗೋವುಗಳ ದಾನವು ಪ್ರಶಸ್ತವಾದ ಫಲವನ್ನು ಕೊಡುವಂತಹದು. ಅವುಗಳಿಗೆ ಮಾಡಿದ ದ್ರೋಹವು ಅದಕ್ಕೆ ವಿರುದ್ಧವಾದ ಫಲವನ್ನು ಕೊಡುವಂತಹದು. ಎಲೈ ಯುಧಿಷ್ಠಿರನೇ, ಆದ್ದರಿಂದ ಗೋವುಗಳಿಗೆ ಎಂದೂ ಅಪಚಾರವನ್ನು ಮಾಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ನೃಗೋಪಾಖ್ಯಾನಂ ನಾಮ ಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂದನೆಯ ಅಧ್ಯಾಯ

ಗೋದಾನ- ನಾಚಿಕೇತೋಪಾಖ್ಯಾನ

ಯುಧಿಷ್ಠಿರಃ

ದತ್ತಾನಾಂ ಫಲಸಂಪ್ರಾಪ್ತಿಂ ಗವಾಂ ಪ್ರಬ್ರೂಹಿ ಮೇऽನಘ ।
ವಿಸ್ತರೇಣ ಮಹಾಬಾಹೋ ನ ಹಿ ತೃಪ್ಯಾಮಿ ಕಥ್ಯತಾಮ್ ॥೧॥

ಯುಧಿಷ್ಠಿರ– ಎಲೈ ಅನಘನೇ, ಮಹಾಬಾಹುವೇ, ಗೋದಾನದ ಫಲಪ್ರಾಪ್ತಿಯನ್ನು ವಿಸ್ತಾರವಾಗಿ ಹೇಳು. ನಿನ್ನ ಮಾತನ್ನು ಕೇಳಿ ನಾನು ತೃಪ್ತಿಯನ್ನೇ ಹೊಂದುತ್ತಿಲ್ಲ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಋಷೇರುದ್ದಾಲಕೇರ್ವಾಕ್ಯಂ ನಾಚಿಕೇತಸ್ಯ ಚೋಭಯೋಃ ॥೨॥

ಭೀಷ್ಮ– ಈ ವಿಷಯದಲ್ಲೂ ಸಹ ಉದ್ದಾಲಕಿ ಋಷಿಗೂ ನಾಚಿಕೇತನಿಗೂ ನಡೆದ ಸಂವಾದ ರೂಪವಾದ ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ.

ಋಷಿರುದ್ದಾಲಕಿರ್ದೀಕ್ಷಾಮುಪಗಮ್ಯ ತತಃ ಸುತಮ್ ।
ತ್ವಂ ಮಾಮುಪಚರಸ್ವೇತಿ ನಾಚಿಕೇತಮಭಾಷತ ।
ಸಮಾಪ್ತೇ ನಿಯಮೇ ತಸ್ಮಿನ್ ಮಹರ್ಷಿಃ ಪುತ್ರಮಬ್ರವೀತ್ ॥೩॥

ಉಪಸ್ಪರ್ಶನಸಕ್ತಸ್ಯ ಸ್ವಾಧ್ಯಾಯನಿರತಸ್ಯ ಚ ।
ಇಧ್ಮಾ ದರ್ಭಾಃ ಸುಮನಸಃ ಕಲಶಶ್ಚಾಭಿತೋ ಜಲಮ್ ।
ವಿಸೃತಂ ಮೇ ತದಾದಾಯ ನದೀತೀರಾದಿಹಾವ್ರಜ ॥೪॥

ಉದ್ದಾಲಕಿ ಋಷಿಯು ದೀಕ್ಷೆಯನ್ನು ಧರಿಸಿ ಪುತ್ರನಾದ ನಾಚಿಕೇತನನ್ನು ಕುರಿತು ನನಗೆ ಪರಿಚರ್ಯೆಯನ್ನು ಮಾಡು ಎಂದು ಹೇಳಿದರು. ಆ ದೀಕ್ಷೆಯು ಸಮಾಪ್ತವಾದ ಮೇಲೆ ಮಹರ್ಷಿಗಳು ಪುತ್ರನನ್ನು ಕುರಿತು ಸ್ವಾಧ್ಯಾಯನಿರತನಾಗಿ ಸ್ನಾನವನ್ನು ಮಾಡುತ್ತಾ ನಾನು ನದೀ ತೀರದಲ್ಲಿಯೇ ಕಟ್ಟಿಗೆಗಳನ್ನೂ, ಪುಷ್ಪಗಳನ್ನೂ, ದರ್ಭೆಗಳನ್ನೂ, ಕಲಶಗಳನ್ನೂ ಮರೆತುಬಿಟ್ಟೆನು. ಅವುಗಳನ್ನು ತೆಗೆದುಕೊಂಡು ಇಲ್ಲಿಗೆ ಬಾ ಎಂದು ಹೇಳಿದರು.

ಗತ್ವಾಽನವಾಪ್ಯ ತತ್ಸರ್ವಂ ನದೀವೇಗಸಮಾಪ್ಲುತಮ್ ।
ನ ಪಶ್ಯಾಮಿ ತದಿತ್ಯೇವಂ ಪಿತರಂ ಸೋಽಬ್ರವೀನ್ಮುನಿಃ ॥೫॥

ಕ್ಷುತ್ತಿಪಾಸಾಶ್ರಮಾವಿಷ್ಟೋ ಮುನಿರುದ್ದಾಲಕಿಸ್ತದಾ ।
ಯಮಂ ಪಶ್ಯೇತಿ ತಂ ಪುತ್ರಮಶಪತ್ ಸ ಮಹಾತಪಾಃ ॥೬॥

ನಾಚಿಕೇತನು ನದಿ ಸಮೀಪಕ್ಕೆ ಹೋಗಿ ಅವೆಲ್ಲವೂ ನದಿಯ ವೇಗದಿಂದ ಕೊಚ್ಚಿಕೊಂಡು ಹೋಗಿದ್ದುದರಿಂದ ಅವುಗಳನ್ನು ಕಾಣದೆ ಹಿಂದಿರುಗಿ ಬಂದು ತಂದೆಯನ್ನು ಕುರಿತು ಯಾವುದೂ ಅಲ್ಲಿ ಕಾಣುತ್ತಿಲ್ಲ ಎಂದು ಹೇಳಿದನು. ಆಗ ಹಸಿವು, ನೀರಡಿಕೆ ಮತ್ತು ಆಯಾಸದಿಂದ ಕೂಡಿದ ಮಹಾತಪಸ್ವಿಗಳಾದ ಉದ್ದಾಲಕಿ ಋಷಿಗಳು ಯಮವನ್ನು ನೋಡು ಎಂದು ಪುತ್ರನಿಗೆ ಶಾಪವನ್ನು ನೀಡಿದರು.

ತಥಾ ಸ ಪಿತ್ರಾಽಭಿಹತೋ ವಾಗ್ವಜ್ರೇಣ ಕೃತಾಂಜಲಿಃ ।
ಪ್ರಸೀದೇತಿ ಬ್ರುವನ್ನೇವ ಗತಸತ್ತ್ವೋಽಪತದ್ ಭುವಿ ॥೭॥

ತಂದೆಯಿಂದ ಅಂತಹ ವಾಗ್ವಜ್ರದಿಂದ ಪ್ರಹರಿಸಲ್ಪಟ್ಟ ನಾಚಿಕೇತನು ಕೈಗಳನ್ನು ಮುಗಿದು ಪ್ರಸನ್ನರಾಗಿ ಎಂದು ಹೇಳುತ್ತಿರುವಾಗಲೇ ಪ್ರಾಣಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದನು.

ನಾಚಿಕೇತಂ ಪಿತಾ ದೃಷ್ಟ್ವಾ ಪತಿತಂ ದುಃಖಮೂರ್ಚ್ಛಿತಃ ।
ಕಿಂ ಮಯಾ ಕೃತಮಿತ್ಯುಕ್ತ್ವಾ ನಿಪಪಾತ ಮಹೀತಳೇ ॥೮॥

ನಾಚಿಕೇತನು ಭೂಮಿಯ ಮೇಲೆ ಬಿದ್ದುದನ್ನು ನೋಡಿದ ತಂದೆಯು ದುಃಖ ಮೂರ್ಛಿತನಾಗಿ ನಾನು ಎಂತಹ ಕೆಲಸವನ್ನು ಮಾಡಿದೆ ಎಂದು ಅವರೂ ಭೂಮಿಯ ಮೇಲೆ ಬಿದ್ದರು.

ತಸ್ಯ ದುಃಖಪರೀತಸ್ಯ ಸ್ವಂ ಪುತ್ರಮುಪಗೂಹತಃ ।
ವ್ಯತೀತಂ ತದಹಃಶೇಷಂ ಸಾ ಚೋಗ್ರಾ ತತ್ರ ಶರ್ವರೀ ॥೯॥

ದುಃಖದಿಂದ ಪೂರ್ಣವಾಗಿ ಆವೃತರಾಗಿ ತಮ್ಮ ಪುತ್ರನನ್ನು ಆಲಿಂಗಿಸಿಕೊಂಡ ಅವರಿಗೆ ಆ ಹಗಲಿನ ಉಳಿದ ಭಾಗವೂ, ಆ ಉಗ್ರವಾದ ರಾತ್ರಿಯೂ ಹಾಗೆಯೇ ಕಳೆಯಿತು.

ಪಿತ್ರೈಣಾಶ್ರುಪ್ರಪಾತೇನ ನಾಚಿಕೇತಃ ಕುರೂದ್ವಹ ।
ಪ್ರಾಸ್ಪಂದಚ್ಛಯನೇ ಕೌಶ್ಯೇ ವೃಷ್ಟ್ಯಾ ಸಸ್ಯಮಿವಾಪ್ಲುತಮ್ ॥೧೦॥

ಎಲೈ ಕುರೂದ್ವಹನೇ, ತಂದೆಯ ಅಶ್ರುಪಾತದಿಂದ ದರ್ಭಾಸನದಲ್ಲಿ ಮಲಗಿದ್ದ ನಾಚಿಕೇತನು ಮಳೆಯಿಂದ ತೊಯ್ದ ಸಸಿಗಳು ಏಳುವಂತೆ ಅಲುಗಾಡಿ ಮೇಲೆದ್ದನು.

ಸ ಪರ್ಯಪೃಚ್ಛತ್ತಂ ಪುತ್ರಂ ಶ್ಲಾಘ್ಯಂ ಪ್ರತ್ಯಾಗತಂ ಪುನಃ ।
ದಿವ್ಯೈರ್ಗಂಧೈಃ ಸಮಾದಿಗ್ಧಂ ಕ್ಷೀಣಸ್ವಪ್ನಮಿವೋತ್ಥಿತಮ್ ॥೧೧॥

ದಿವ್ಯಗಂಧಗಳಿಂದ ಲೇಪಿತನಾಗಿ ಸ್ವಪ್ನದಿಂದ ಎದ್ದವನಂತೆ ಹಿಂದಿರುಗಿ ಬಂದ ಶ್ಲಾಘನೀಯನಾದ ತನ್ನ ಪುತ್ರನನ್ನು ಕುರಿತು ತಂದೆಯು ಪುನಃ ಪ್ರಶ್ನೆಯನ್ನು ಮಾಡಿದನು.

ಅಪಿ ಪುತ್ರ ಜಿತಾ ಲೋಕಾಃ ಶುಭಾಸ್ತೇ ಸ್ವೇನ ಕರ್ಮಣಾ ।
ದಿಷ್ಟ್ಯಾ ಚಾಸಿ ಪುನಃ ಪ್ರಾಪ್ತೋ ನ ಹಿ ತೇ ಮಾನುಷಂ ವಪುಃ ॥೧೨॥

ಎಲೈ ಪುತ್ರನೇ, ನಿನ್ನ ಶುಭಕರ್ಮಗಳಿಂದ ನೀನು ಲೋಕಗಳನ್ನು ಜಯಿಸಿದ್ದೀಯೆ. ದೇವರ ದಯೆಯಿಂದ ನೀನು ಪುನಃ ಹಿಂದಿರುಗಿದ್ದೀಯೆ. ನಿನ್ನ ದೇಹವು ಮನುಷ್ಯ ದೇಹದಂತೆ ಕಾಣುತ್ತಿಲ್ಲ.

ಪ್ರತ್ಯಕ್ಷದರ್ಶೀ ಸರ್ವಸ್ಯ ಪಿತ್ರಾ ಪೃಷ್ಟೋ ಮಹಾತ್ಮನಾ ।
ಅನರ್ಥಂ ತಂ ಪಿತುರ್ಮಧ್ಯೇ ಮಹರ್ಷೀಣಾಂ ನ್ಯವೇದಯತ್ ॥೧೩॥

ಮಹಾತ್ಮರಾದ ತಂದೆಯಿಂದ ಹೀಗೆ ಕೇಳಲ್ಪಟ್ಟ ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದ ನಚಿಕೇತನು ಮಹರ್ಷಿಗಳ ಮಧ್ಯದಲ್ಲಿ ತಾನು ನೋಡಿದುದಕ್ಕೆ ಅನುಗುಣವಾಗಿ ತಂದೆಗೆ ಎಲ್ಲವನ್ನೂ ನಿವೇದಿಸಿದನು.

ಕುರ್ವನ್ ಭವಚ್ಛಾಸನಮಾಶು ಯಾತೋ
ಽಹಂ ವಿಶಾಲಾಂ ರುಚಿರಪ್ರಭಾವಾಮ್ ।
ವೈವಸ್ವತೀಂ ಪ್ರಾಪ್ಯ ಸಭಾಮಪಶ್ಯಂ
ಸಹಸ್ರಶೋ ಯೋಜನಹೈಮಭೌಮಾಮ್ ॥೧೪॥

ನಿಮ್ಮ ಆಜ್ಞೆಯನ್ನು ಪಾಲಿಸುತ್ತಾ ನಾನು ವಿಶಾಲವೂ, ಮನೋಹರ ಸಾಮರ್ಥ್ಯ ಉಳ್ಳದ್ದೂ ಆದ ಯಮಪಟ್ಟಣಕ್ಕೆ ಹೋಗಿ ಅಲ್ಲಿ ಸಹಸ್ರಾರು ಯೋಜನದಷ್ಟು ಸುವರ್ಣಭೂಮಿಯಲ್ಲಿದ್ದ ವಿಶಾಲವಾದ ಸಭೆಯನ್ನು ನೋಡಿದೆನು.

ದೃಷ್ಟ್ವೈವ ಮಾಮಭಿಮುಖಮಾಪತಂತಂ
ಗೃಹಂ ನಿವೇದ್ಯಾಸನಮಾದಿದೇಶ ।
ವೈವಸ್ವತೋಽರ್ಘ್ಯಾದಿಭಿರರ್ಹಣೈಶ್ಚ
ಭವತ್ಕೃತೇ ಪೂಜಯಾಮಾಸ ಮಾಂ ಸಃ ॥೧೫॥

ತಮ್ಮ ಎದುರಿಗೆ ಬರುತ್ತಿದ್ದ ನನ್ನನ್ನು ನೋಡಿದ ಕೂಡಲೇ ಯಮದೇವರು ತಮ್ಮ ಮನೆಯನ್ನು ನನಗೆ ನಿವೇದಿಸಿ ಆಸನವನ್ನು ನೀಡಿದರು. ಯಮದೇವರು ನಿಮ್ಮ ಮೇಲಿನ ಗೌರವದಿಂದ ನನ್ನನ್ನು ಅರ್ಘ್ಯಾದಿ ಪೂಜಾ ಸಾಮಗ್ರಿಗಳಿಂದ ಪೂಜಿಸಿದರು.

ತತಸ್ತ್ವಹಂ ತಂ ಶನಕೈರವೋಚಂ
ವೃತಂ ಸದಸ್ಯೈರಭಿಪೂಜ್ಯಮಾನಮ್ ।

ಮೊದಲನೆಯ ಬ್ರಾಹ್ಮಣನು ತನ್ನ ಗೋವನ್ನು ಹುಡುಕುತ್ತಾ ಅದು ಪರಗೃಹದಲ್ಲಿರುವುದನ್ನು ನೋಡಿದನು. ಆ ಗೋವಿನ ಒಡೆಯನಾದ ಅವನು ಇದು ನನ್ನದು ಎಂದು ಹೇಳಿದನು.

ತಾವುಭೌ ಸಮನುಪ್ರಾಪ್ತೌ ವಿವದಂತೌ ಭೃಶಜ್ವರೌ ।
ಭವಾನ್ ದಾತಾ ಭವಾನ್ ಹರ್ತೇತ್ಯಥ ತೌ ಮಾಂ ತದೋಚತುಃ ॥

ಆ ಇಬ್ಬರು ಕೋಪದಿಂದ ವಿವಾದ ಮಾಡುತ್ತಾ ನನ್ನ ಬಳಿಗೆ ಬಂದರು. ನೀನು ದತ್ತಾಪಹಾರವನ್ನು ಮಾಡಿದ್ದೀಯೆ ಎಂದು ಅವರಿಬ್ಬರೂ ನನಗೆ ಹೇಳಿದರು.

ಶತೇನ ಶತಸಂಖ್ಯೇನ ಗವಾಂ ವಿನಿಮಯೇನ ವೈ ।
ಯಾಚೇ ಪ್ರತಿಗ್ರಹೀತಾರಂ ಸ ತು ಮಾಮಬ್ರವೀದಿದಮ್ ॥೧೪॥

ನಾನು ಹತ್ತು ಸಾವಿರ ಗೋವುಗಳನ್ನು ತೆಗೆದುಕೊಂಡು ಆ ಗೋವನ್ನು ವಿನಿಮಯ ಮಾಡಿಕೊಂಡು ಕೊಡು ಎಂದು ಪ್ರತಿಗ್ರಹೀತೃವಾದ ಎರಡನೆಯ ಬ್ರಾಹ್ಮಣನಿಗೆ ಬೇಡಿದೆನು. ಅವನು ನನ್ನನ್ನು ಕುರಿತು ಹೀಗೆ ಹೇಳಿದನು.

ದೇಶಕಾಲೋಪಸಂಪನ್ನಾ ದೋಗ್ಧ್ರೀ ಕ್ಷಾಂತಾऽತಿವತ್ಸಲಾ ।
ಸ್ವಾದುಕ್ಷೀರಪ್ರದಾ ಧನ್ಯಾ ಮಮ ನಿತ್ಯಂ ನಿವೇಶನೇ ॥೧೫॥

ದೇಶಕಾಲಗಳಿಗೆ ಯೋಗ್ಯವಾದ, ಹಾಲನ್ನು ಕರೆಯುವ, ಸಾಧು ಸ್ವಭಾವವುಳ್ಳ, ಕರುವಿನ ಮೇಲೆ ಬಹಳ ಪ್ರೀತಿಯುಳ್ಳ, ಮೃದುವಾದ, ಕ್ಷೀರಪ್ರದವಾದ ಈ ಗೋವು ನನ್ನ ಮನೆಯಲ್ಲಿ ಯಾವಾಗಲೂ ಧನ್ಯವಾಗಿರಲಿ.

ಕೃಶಂ ಚ ಭರತೇ ಯಾ ಗೌರ್ಮಮ ಪುತ್ರಮಪಸ್ತನಮ್ ।
ನ ಸಾ ಶಕ್ಯಾ ಮಯಾ ಹಾತುಮಿತ್ಯುಕ್ತ್ವಾ ಸ ಜಗಾಮ ಹ ॥೧೬॥

ತಾಯಿಯ ಸ್ತನ್ಯವಿಲ್ಲದಿರುವ ನನ್ನ ಕೃಶನಾದ ಪುತ್ರನನ್ನು ಯಾವ ಗೋವು ಪೋಷಿಸುತ್ತಿದೆಯೋ ಆ ಗೋವನ್ನು ನಾನು ಬಿಡಲಾರೆ ಎಂದು ಹೇಳಿ ಅವನು ಹೊರಟು ಹೋದನು.

ತತಸ್ತಮಪರಂ ವಿಪ್ರಂ ಯಾಚೇ ವಿನಿಮಯೇನ ವೈ ।
ಗವಾಂ ಶತಸಹಸ್ರಂ ವೈ ತತ್ಕತೇ ಗೃಹ್ಯತಾಮಿತಿ ॥೧೭॥

ಆಗ ನಾನು ಮೊದಲನೆಯ ಇನ್ನೊಬ್ಬ ಬ್ರಾಹ್ಮಣನಿಗೆ ಆ ಗೋವಿನ ಬದಲಾಗಿ ಒಂದು ಲಕ್ಷ ಗೋವನ್ನು ತೆಗೆದುಕೊಂಡು ವಿನಿಮಯ ಮಾಡಿಕೋ ಎಂದು ಹೇಳಿದೆನು.

ಬ್ರಾಹ್ಮಣಃ

ನ ರಾಜ್ಞಾಂ ಪ್ರತಿಗೃಹ್ಣಾಮಿ ಶಕ್ತೋಽಹಂ ಸ್ವಸ್ಯ ಮಾರ್ಗಣೇ ।
ಸೈವ ಗೌರ್ದೀಯತಾಂ ಶೀಘ್ರಂ ಮಮೇತಿ ಮಧುಸೂದನ ॥೧೮॥

ಬ್ರಾಹ್ಮಣ– ಎಲೈ ಮಧುಸೂದನನೇ, ನಾನು ರಾಜನಿಂದ ಇನ್ನು ದಾನವನ್ನೂ ಸ್ವೀಕರಿಸುವುದಿಲ್ಲ. ನನ್ನ ಜೀವನೋಪಾಯವನ್ನು ಹುಡುಕುವುದರಲ್ಲಿ ನಾನು ಸಮರ್ಥನಾಗಿದ್ದೇನೆ. ಅದೇ ಗೋವನ್ನು ನನಗೆ ಶೀಘ್ರವಾಗಿ ಹಿಂದಕ್ಕೆ ಕೊಡು ಎಂದು ಹೇಳಿದನು.

ರುಗ್ಮಮಶ್ವಾಂಶ್ಚ ದದತೋ ರಜತಂ ಸ್ಯಂದನಾಂಸ್ತಥಾ ।
ನ ಜಗ್ರಾಹ ಯಯೌ ಚಾಪಿ ತದಾ ಸ ಬ್ರಾಹ್ಮಣರ್ಷಭಃ ॥೧೯॥

ನಾನು ಸುವರ್ಣವನ್ನು, ಅಶ್ವಗಳನ್ನು, ರಜತಗಳನ್ನು, ರಥಗಳನ್ನು ಕೊಡುತ್ತೇನೆ ಎಂದು ಹೇಳಿದರೂ ಆ ಬ್ರಾಹ್ಮಣನು ಸ್ವೀಕರಿಸದೆ ಹಾಗೆಯೇ ಹೊರಟು ಹೋದನು.

ಏತಸ್ಮಿನ್ನೇವ ಕಾಲೇ ತು ಚೋದಿತಃ ಕಾಲಧರ್ಮಣಾ ।
ಪಿತೃಲೋಕಮಹಂ ಪ್ರಾಪ್ಯ ಧರ್ಮರಾಜಮುಪಾಗಮಮ್ ॥೨೦॥

ಆ ಕಾಲದಲ್ಲಿ ನಾನು ಕಾಲಧರ್ಮದಿಂದ ಪ್ರಚೋದಿತನಾಗಿ ಮೃತ್ಯುವಶನಾಗಿ ಪಿತೃಲೋಕಕ್ಕೆ ಬಂದು ಧರ್ಮರಾಜನ ಬಳಿಯಲ್ಲಿ ಹೋದೆನು.

ಯಮಸ್ತು ಪೂಜಯಿತ್ವಾ ಮಾಂ ತತೋ ವಚನಮಬ್ರವೀತ್ ।
ನಾಂತಃ ಸಂಖ್ಯಾಯತೇ ರಾಜಂಸ್ತವ ಪುಣ್ಯಸ್ಯ ಕರ್ಮಣಃ ॥೨೧॥

ಅಸ್ತಿ ಚೈವ ಕೃತಂ ಪಾಪಮಜ್ಞಾನಾತ್ ತದಪಿ ತ್ವಯಾ ।
ಚರಸ್ವ ಪಾಪಂ ಪಶ್ಚಾದ್ವಾ ಪೂರ್ವಂ ವಾ ತ್ವಂ ಯಥೇಚ್ಛಸಿ ॥೨೨॥

ರಕ್ಷಿತಾಸ್ಮೀತಿ ಚೋಕ್ತಂ ತೇ ಪ್ರತಿಜ್ಞಾ ಚಾನೃತಾ ತವ ।
ಬ್ರಾಹ್ಮಣಸ್ವಸ್ಯ ಚಾದಾನಂ ತ್ರಿವಿಧಸ್ತೇ ವ್ಯತಿಕ್ರಮಃ ॥೨೩॥

ಅವನು ನನ್ನನ್ನು ಪೂಜಿಸಿ ನನ್ನನ್ನು ಕುರಿತು- 'ರಾಜನೇ, ನೀನು ಮಾಡಿದ ಪುಣ್ಯಕರ್ಮಗಳಿಗೆ ಕೊನೆಯೇ ಕಾಣುವುದಿಲ್ಲ. ನೀನು ಅಜ್ಞಾನದಿಂದ ಮಾಡಿದ ಒಂದು ಪಾಪವು ಮಾತ್ರ ಇದೆ. ನೀನು ಪಾಪದ ಫಲವನ್ನು ಮೊದಲು ಅನುಭವಿಸುತ್ತೀಯೋ ಅಥವಾ ಪುಣ್ಯದ ಫಲವನ್ನು ಮೊದಲು ಅನುಭವಿಸುತ್ತೀಯೋ? ಹೇಗೆ ಇಚ್ಛಿಸುತ್ತೀಯೆ? ಪ್ರಜೆಗಳನ್ನು ರಕ್ಷಿಸುತ್ತೇನೆಂದು ಹೇಳಿ ರಕ್ಷಿಸಲಿಲ್ಲ. ದಾನವನ್ನು ಕೊಡುವಾಗ ನಿನಗೆ ಕೊಡುತ್ತೇನೆ ಎಂದು ಪ್ರತಿಜ್ಞೆ ಮಾಡಿ ನೀಡಿದೆ. ಆ ಪ್ರತಿಜ್ಞೆ ಸುಳ್ಳಾಯಿತು ಮತ್ತು ಬ್ರಾಹ್ಮಣಸ್ವವನ್ನು ಅಪಹಾರ ಮಾಡಿದೆ. ಹೀಗೆ ನಿನ್ನ ದೋಷವು ಮೂರುವಿಧವಾಗಿದೆ' ಎಂದು ಹೇಳಿದನು.

ಪೂರ್ವಂ ಕೃಚ್ಛ್ರಂ ಚರಿಷ್ಯೇಽಹಂ ಪಶ್ಚಾಚ್ಛುಭಮಿತಿ ಪ್ರಭೋ ।
ಧರ್ಮರಾಜಂ ಬ್ರುವನ್ನೇವಂ ಪತಿತೋಽಸ್ಮಿ ಮಹೀತಳೇ ॥೨೪॥

ನಾನು ಧರ್ಮರಾಜನನ್ನು ಕುರಿತು- 'ಪ್ರಭುವೇ, ನಾನು ಕಷ್ಟವನ್ನು ಮೊದಲು ಅನುಭವಿಸುತ್ತೇನೆ. ಅನಂತರ ಸುಖವನ್ನು ಅನುಭವಿಸುತ್ತೇನೆ' ಎಂದು ಹೇಳುತ್ತಿರುವಾಗಲೇ ಭೂಮಿಯಲ್ಲಿ ಕೃಕಲಾಸನಾಗಿ ಬಿದ್ದೆನು.

ಅಶ್ರೌಷಂ ಪ್ರಚ್ಯುತಶ್ಚಾಹಂ ಯಮಸ್ಯೋಚ್ಚೈಃ ಪ್ರಭಾಷತಃ ।
ವಾಸುದೇವಃ ಸಮುದ್ಧರ್ತಾ ಭವಿತಾ ತೇ ಜನಾರ್ದನಃ ॥೨೫॥

ಪೂರ್ಣೇ ವರ್ಷಸಹಸ್ರಾಂತೇ ಕ್ಷೀಣೇ ಕರ್ಮಣಿ ದುಷ್ಕೃತೇ ।
ಪ್ರಾಪ್ಸ್ಯಸೇ ಶಾಶ್ವತಾಲ್ಲೋಕಾನ್ ಜಿತಾನ್ ಸ್ವೇನೈವ ಕರ್ಮಣಾ ॥೨೬॥

ಭೂಮಿಗೆ ಬಿದ್ದ ನಾನು ಯಮನು ಗಟ್ಟಿಯಾದ ಸ್ವರದಲ್ಲಿ ಹೇಳಿದ ಜನಾರ್ದನನಾದ ವಾಸುದೇವನು ನಿನ್ನನ್ನು ಉದ್ಧಾರ ಮಾಡುವನು. ಒಂದು ಸಹಸ್ರವರ್ಷಗಳು ಪೂರ್ಣವಾಗಿ ನಿನ್ನ ದುಷ್ಕರ್ಮವು ನಾಶವಾದ ಮೇಲೆ ನಿನ್ನ ಶುಭಕರ್ಮದಿಂದ ಜಿತವಾದ ಶಾಶ್ವತವಾದ ಲೋಕವನ್ನು ಹೊಂದುವಿ ಎಂಬ ಮಾತನ್ನು ಕೇಳಿದೆ.

ಕೂಪೇऽऽತ್ಮಾನಮಧಃಶೀರ್ಷಮಪಶ್ಯಂ ಪತಿತಂ ಚ ಹ ।
ತಿರ್ಯಗ್ಯೋನಿಮನುಪ್ರಾಪ್ತಂ ನ ತು ಮಾಮಜಹಾತ್ ಸ್ಮೃತಿಃ ॥೨೭॥

ನಾನು ಕೂಪದಲ್ಲಿ ತಿರ್ಯಗ್ಯೋನಿಯನ್ನು ಹೊಂದಿ ತಲೆಕೆಳಕಾಗಿ ಬಿದ್ದಿರುವುದನ್ನು ಗಮನಿಸಿದೆನು. ನನಗೆ ಹಿಂದಿನ ಸ್ಮೃತಿಯು ಅಳಸಿಹೋಗಲಿಲ್ಲ.

ತ್ವಯಾ ತು ತಾರಿತೋऽಸ್ಮ್ಯದ್ಯ ಕಿಮನ್ಯತ್ರ ತಪೋಬಲಾತ್ ।
ಅನುಜಾನೀಹಿ ಮಾಂ ಕೃಷ್ಣ ಗಚ್ಛೇಯಂ ದಿವಮದ್ಯ ವೈ ॥೨೮॥

ಈ ದಿನ ನಿನ್ನಿಂದ ಉದ್ಧರಿಸಲ್ಪಟ್ಟಿದ್ದೇನೆ. ತಪಸ್ಸಿನ ಬಲವನ್ನು ಬಿಟ್ಟು ಬೇರೆ ಯಾವ ಬಲವಿದೆ! ಎಲೈ ಕೃಷ್ಣನೇ, ಅನುಮತಿಯನ್ನು ಕೊಡು. ನಾನು ಸ್ವರ್ಗಕ್ಕೆ ಹೋದೇನು ಎಂದು ಹೇಳಿದನು.

ಭೀಷ್ಮಃ

ಅನುಜ್ಞಾತಃ ಸ ಕೃಷ್ಣೇನ ನಮಸ್ಕೃತ್ಯ ಜನಾರ್ದನಮ್ ।
ವಿಮಾನಂ ದಿವ್ಯಮಾಸ್ಥಾಯ ಯಯೌ ದಿವಮರಿಂದಮ ॥೨೯॥

ಭೀಷ್ಮ– ಎಲೈ ಅರಿಂದಮನೇ, ಕೃಷ್ಣನಿಂದ ಅನುಮತಿಯನ್ನು ಪಡೆದು ಅವನು ಅವನಿಗೆ ನಮಸ್ಕರಿಸಿ ವಿಮಾನವನ್ನು ಏರಿ ಸ್ವರ್ಗಕ್ಕೆ ಹೊರಟು ಹೋದನು.

ತತಸ್ತಸ್ಮಿನ್ ದಿವಂ ಪ್ರಾಪ್ತೇ ನೃಗೇ ಭರತಸತ್ತಮ ।
ವಾಸುದೇವ ಇಮಂ ಶ್ಲೋಕಂ ಜಗಾದ ಕುರುನಂದನ ॥೩೦॥

ಬ್ರಾಹ್ಮಣಸ್ವಂ ನ ಹರ್ತವ್ಯಂ ಪುರುಷೇಣ ವಿಜಾನತಾ ।
ಬ್ರಾಹ್ಮಣಸ್ವಂ ಹೃತಂ ಹಂತಿ ನೃಗಂ ಬ್ರಾಹ್ಮಣಗೌರಿವ ॥೩೧॥

ಎಲೈ ಭರತಶ್ರೇಷ್ಠನೇ, ಕುರುನಂದನನೇ, ನೃಗನು ಸ್ವರ್ಗಕ್ಕೆ ಹೋದಮೇಲೆ ವಾಸುದೇವನು ವಿವೇಕಿಯಾದ ಪುರುಷನು ಬ್ರಾಹ್ಮಣ ಸ್ವತ್ತನ್ನು ಅಪಹರಿಸಬಾರದು. ಬ್ರಾಹ್ಮಣನ ಗೋವು ನೃಗನನ್ನು ವಿನಾಶಗೊಳಿಸಿದಂತೆ ಅಪಹರಿಸಲ್ಪಟ್ಟ ಬ್ರಾಹ್ಮಣರ ಸ್ವತ್ತು ವಿನಾಶವನ್ನುಂಟು ಮಾಡುತ್ತದೆ ಎಂಬ ಶ್ಲೋಕವನ್ನು ಹೇಳಿದನು.

ಸತಾಂ ಸಮಾಗಮಃ ಸದ್ಭಿರ್ನಾಫಲಃ ಪಾರ್ಥ ವಿದ್ಯತೇ ।
ವಿಮುಕ್ತಂ ನರಕಾತ್ ಪಶ್ಯ ನೃಗಂ ಸಾಧುಸಮಾಗಮಾತ್ ॥೩೨॥

ಎಲೈ ಪಾರ್ಥನೇ, ಸಜ್ಜನರ ಸಮಾಗಮವು ಎಂದೂ ನಿಸ್ಫಲವಾಗುವುದಿಲ್ಲ. ಸಜ್ಜನರ ಸಹವಾಸದಿಂದ ನೃಗನು ನರಕದಿಂದ ಮುಕ್ತನಾದುದನ್ನು ನೋಡು.

ಪ್ರದಾನಂ ಫಲವತ್ ತತ್ರ ದ್ರೋಹಸ್ತತ್ರ ತಥಾऽಫಲಃ ।
ಅಪಚಾರಂ ಗವಾಂ ತಸ್ಮಾದ್ ವರ್ಜಯೇತ ಯುಧಿಷ್ಠಿರ ॥೩೩॥

ಗೋವುಗಳ ದಾನವು ಪ್ರಶಸ್ತವಾದ ಫಲವನ್ನು ಕೊಡುವಂತಹದು. ಅವುಗಳಿಗೆ ಮಾಡಿದ ದ್ರೋಹವು ಅದಕ್ಕೆ ವಿರುದ್ಧವಾದ ಫಲವನ್ನು ಕೊಡುವಂತಹದು. ಎಲೈ ಯುಧಿಷ್ಠಿರನೇ, ಆದ್ದರಿಂದ ಗೋವುಗಳಿಗೆ ಎಂದೂ ಅಪಚಾರವನ್ನು ಮಾಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ನೃಗೋಪಾಖ್ಯಾನಂ ನಾಮ ಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂದನೆಯ ಅಧ್ಯಾಯ

ಗೋದಾನ- ನಾಚಿಕೇತೋಪಾಖ್ಯಾನ

ಯುಧಿಷ್ಠಿರಃ

ದತ್ತಾನಾಂ ಫಲಸಂಪ್ರಾಪ್ತಿಂ ಗವಾಂ ಪ್ರಬ್ರೂಹಿ ಮೇऽನಘ ।
ವಿಸ್ತರೇಣ ಮಹಾಬಾಹೋ ನ ಹಿ ತೃಪ್ಯಾಮಿ ಕಥ್ಯತಾಮ್ ॥೧॥

ಯುಧಿಷ್ಠಿರ- ಎಲೈ ಅನಘನೇ, ಮಹಾಬಾಹುವೇ, ಗೋದಾನದ ಫಲಪ್ರಾಪ್ತಿಯನ್ನು ವಿಸ್ತಾರವಾಗಿ ಹೇಳು. ನಿನ್ನ ಮಾತನ್ನು ಕೇಳಿ ನಾನು ತೃಪ್ತಿಯನ್ನೇ ಹೊಂದುತ್ತಿಲ್ಲ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಋಷೇರುದ್ದಾಲಕೇರ್ವಾಕ್ಯಂ ನಾಚಿಕೇತಸ್ಯ ಚೋಭಯೋಃ ॥೨॥

ಭೀಷ್ಮ- ಈ ವಿಷಯದಲ್ಲೂ ಸಹ ಉದ್ದಾಲಕಿ ಋಷಿಗೂ ನಾಚಿಕೇತನಿಗೂ ನಡೆದ ಸಂವಾದ ರೂಪವಾದ ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ.

ಋಷಿರುದ್ದಾಲಕಿರ್ದೀಕ್ಷಾಮುಪಗಮ್ಯ ತತಃ ಸುತಮ್ ।
ತ್ವಂ ಮಾಮುಪಚರಸ್ವೇತಿ ನಾಚಿಕೇತಮಭಾಷತ ।
ಸಮಾಪ್ತೇ ನಿಯಮೇ ತಸ್ಮಿನ್ ಮಹರ್ಷಿಃ ಪುತ್ರಮಬ್ರವೀತ್ ॥೩॥

ಉಪಸ್ಪರ್ಶನಸಕ್ತಸ್ಯ ಸ್ವಾಧ್ಯಾಯನಿರತಸ್ಯ ಚ ।
ಇಧ್ಮಾ ದರ್ಭಾಃ ಸುಮನಸಃ ಕಲಶಶ್ಚಾಭಿತೋ ಜಲಮ್ ।
ವಿಸೃತಂ ಮೇ ತದಾದಾಯ ನದೀತೀರಾದಿಹಾವ್ರಜ ॥೪॥

ಉದ್ದಾಲಕಿ ಋಷಿಯು ದೀಕ್ಷೆಯನ್ನು ಧರಿಸಿ ಪುತ್ರನಾದ ನಾಚಿಕೇತನನ್ನು ಕುರಿತು ನನಗೆ ಪರಿಚರ್ಯೆಯನ್ನು ಮಾಡು ಎಂದು ಹೇಳಿದರು. ಆ ದೀಕ್ಷೆಯು ಸಮಾಪ್ತವಾದ ಮೇಲೆ ಮಹರ್ಷಿಗಳು ಪುತ್ರನನ್ನು ಕುರಿತು ಸ್ವಾಧ್ಯಾಯನಿರತನಾಗಿ ಸ್ನಾನವನ್ನು ಮಾಡುತ್ತಾ ನಾನು ನದೀ ತೀರದಲ್ಲಿಯೇ ಕಟ್ಟಿಗೆಗಳನ್ನೂ, ಪುಷ್ಪಗಳನ್ನೂ, ದರ್ಭೆಗಳನ್ನೂ, ಕಲಶಗಳನ್ನೂ ಮರೆತುಬಿಟ್ಟೆನು. ಅವುಗಳನ್ನು ತೆಗೆದುಕೊಂಡು ಇಲ್ಲಿಗೆ ಬಾ ಎಂದು ಹೇಳಿದರು.

ಗತ್ವಾಽನವಾಪ್ಯ ತತ್ಸರ್ವಂ ನದೀವೇಗಸಮಾಪ್ಲುತಮ್ ।
ನ ಪಶ್ಯಾಮಿ ತದಿತ್ಯೇವಂ ಪಿತರಂ ಸೋಽಬ್ರವೀನ್ಮುನಿಃ ॥೫॥

ಕ್ಷುತ್ತಿಪಾಸಾಶ್ರಮಾವಿಷ್ಟೋ ಮುನಿರುದ್ದಾಲಕಿಸ್ತದಾ ।
ಯಮಂ ಪಶ್ಯೇತಿ ತಂ ಪುತ್ರಮಶಪತ್ ಸ ಮಹಾತಪಾಃ ॥೬॥

ನಾಚಿಕೇತನು ನದಿ ಸಮೀಪಕ್ಕೆ ಹೋಗಿ ಅವೆಲ್ಲವೂ ನದಿಯ ವೇಗದಿಂದ ಕೊಚ್ಚಿಕೊಂಡು ಹೋಗಿದ್ದುದರಿಂದ ಅವುಗಳನ್ನು ಕಾಣದೆ ಹಿಂದಿರುಗಿ ಬಂದು ತಂದೆಯನ್ನು ಕುರಿತು ಯಾವುದೂ ಅಲ್ಲಿ ಕಾಣುತ್ತಿಲ್ಲ ಎಂದು ಹೇಳಿದನು. ಆಗ ಹಸಿವು, ನೀರಡಿಕೆ ಮತ್ತು ಆಯಾಸದಿಂದ ಕೂಡಿದ ಮಹಾತಪಸ್ವಿಗಳಾದ ಉದ್ದಾಲಕಿ ಋಷಿಗಳು ಯಮವನ್ನು ನೋಡು ಎಂದು ಪುತ್ರನಿಗೆ ಶಾಪವನ್ನು ನೀಡಿದರು.

ತಥಾ ಸ ಪಿತ್ರಾಽಭಿಹತೋ ವಾಗ್ವಜ್ರೇಣ ಕೃತಾಂಜಲಿಃ ।
ಪ್ರಸೀದೇತಿ ಬ್ರುವನ್ನೇವ ಗತಸತ್ತ್ವೋಽಪತದ್ ಭುವಿ ॥೭॥

ತಂದೆಯಿಂದ ಅಂತಹ ವಾಗ್ವಜ್ರದಿಂದ ಪ್ರಹರಿಸಲ್ಪಟ್ಟ ನಾಚಿಕೇತನು ಕೈಗಳನ್ನು ಮುಗಿದು ಪ್ರಸನ್ನರಾಗಿ ಎಂದು ಹೇಳುತ್ತಿರುವಾಗಲೇ ಪ್ರಾಣಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಬಿದ್ದನು.

ನಾಚಿಕೇತಂ ಪಿತಾ ದೃಷ್ಟ್ವಾ ಪತಿತಂ ದುಃಖಮೂರ್ಚ್ಛಿತಃ ।
ಕಿಂ ಮಯಾ ಕೃತಮಿತ್ಯುಕ್ತ್ವಾ ನಿಪಪಾತ ಮಹೀತಳೇ ॥೮॥

ನಾಚಿಕೇತನು ಭೂಮಿಯ ಮೇಲೆ ಬಿದ್ದುದನ್ನು ನೋಡಿದ ತಂದೆಯು ದುಃಖ ಮೂರ್ಛಿತನಾಗಿ ನಾನು ಎಂತಹ ಕೆಲಸವನ್ನು ಮಾಡಿದೆ ಎಂದು ಅವರೂ ಭೂಮಿಯ ಮೇಲೆ ಬಿದ್ದರು.

ತಸ್ಯ ದುಃಖಪರೀತಸ್ಯ ಸ್ವಂ ಪುತ್ರಮುಪಗೂಹತಃ ।
ವ್ಯತೀತಂ ತದಹಃಶೇಷಂ ಸಾ ಚೋಗ್ರಾ ತತ್ರ ಶರ್ವರೀ ॥೯॥

ದುಃಖದಿಂದ ಪೂರ್ಣವಾಗಿ ಆವೃತರಾಗಿ ತಮ್ಮ ಪುತ್ರನನ್ನು ಆಲಿಂಗಿಸಿಕೊಂಡ ಅವರಿಗೆ ಆ ಹಗಲಿನ ಉಳಿದ ಭಾಗವೂ, ಆ ಉಗ್ರವಾದ ರಾತ್ರಿಯೂ ಹಾಗೆಯೇ ಕಳೆಯಿತು.

ಪಿತ್ರ್ಯೇಣಾಶ್ರುಪ್ರಪಾತೇನ ನಾಚಿಕೇತಃ ಕುರೂದ್ವಹ ।
ಪ್ರಾಸ್ಪಂದಚ್ಛಯನೇ ಕೌಶ್ಯೇ ವೃಷ್ಟ್ಯಾ ಸಸ್ಯಮಿವಾಪ್ಲುತಮ್ ॥೧೦॥

ಎಲೈ ಕುರೂದ್ವಹನೇ, ತಂದೆಯ ಅಶ್ರುಪಾತದಿಂದ ದರ್ಭಾಸನದಲ್ಲಿ ಮಲಗಿದ್ದ ನಾಚಿಕೇತನು ಮಳೆಯಿಂದ ತೊಯ್ದ ಸಸಿಗಳು ಏಳುವಂತೆ ಅಲುಗಾಡಿ ಮೇಲೆದ್ದನು.

ಸ ಪರ್ಯಪೃಚ್ಛತ್ತಂ ಪುತ್ರಂ ಶ್ಲಾಘ್ಯಂ ಪ್ರತ್ಯಾಗತಂ ಪುನಃ ।
ದಿವ್ಯೈರ್ಗಂಧೈಃ ಸಮಾದಿಗ್ಧಂ ಕ್ಷೀಣಸ್ವಪ್ನಮಿವೋತ್ಥಿತಮ್ ॥೧೧॥

ದಿವ್ಯಗಂಧಗಳಿಂದ ಲೇಪಿತನಾಗಿ ಸ್ವಪ್ನದಿಂದ ಎದ್ದವನಂತೆ ಹಿಂದಿರುಗಿ ಬಂದ ಶ್ಲಾಘನೀಯನಾದ ತನ್ನ ಪುತ್ರನನ್ನು ಕುರಿತು ತಂದೆಯು ಪುನಃ ಪ್ರಶ್ನೆಯನ್ನು ಮಾಡಿದನು.

ಅಪಿ ಪುತ್ರ ಜಿತಾ ಲೋಕಾಃ ಶುಭಾಸ್ತೇ ಸ್ವೇನ ಕರ್ಮಣಾ ।
ದಿಷ್ಟ್ಯಾ ಚಾಸಿ ಪುನಃ ಪ್ರಾಪ್ತೋ ನ ಹಿ ತೇ ಮಾನುಷಂ ವಪುಃ ॥೧೨॥

ಎಲೈ ಪುತ್ರನೇ, ನಿನ್ನ ಶುಭಕರ್ಮಗಳಿಂದ ನೀನು ಲೋಕಗಳನ್ನು ಜಯಿಸಿದ್ದೀಯೆ. ದೇವರ ದಯೆಯಿಂದ ನೀನು ಪುನಃ ಹಿಂದಿರುಗಿದ್ದೀಯೆ. ನಿನ್ನ ದೇಹವು ಮನುಷ್ಯ ದೇಹದಂತೆ ಕಾಣುತ್ತಿಲ್ಲ.

ಪ್ರತ್ಯಕ್ಷದರ್ಶೀ ಸರ್ವಸ್ಯ ಪಿತ್ರಾ ಪೃಷ್ಟೋ ಮಹಾತ್ಮನಾ ।
ಅನ್ವರ್ಥಂ ತಂ ಪಿತುರ್ಮಧ್ಯೇ ಮಹರ್ಷೀಣಾಂ ನ್ಯವೇದಯತ್ ॥೧೩॥

ಮಹಾತ್ಮರಾದ ತಂದೆಯಿಂದ ಹೀಗೆ ಕೇಳಲ್ಪಟ್ಟ ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದ ನಚಿಕೇತನು ಮಹರ್ಷಿಗಳ ಮಧ್ಯದಲ್ಲಿ ತಾನು ನೋಡಿದುದಕ್ಕೆ ಅನುಗುಣವಾಗಿ ತಂದೆಗೆ ಎಲ್ಲವನ್ನೂ ನಿವೇದಿಸಿದನು.

ಕುರ್ವನ್ ಭವಚ್ಛಾಸನಮಾಶು ಯಾತೋ
ಽಹಂ ವಿಶಾಲಾಂ ರುಚಿರಪ್ರಭಾವಾಮ್ ।
ವೈವಸ್ವತೀಂ ಪ್ರಾಪ್ಯ ಸಭಾಮಪಶ್ಯಂ
ಸಹಸ್ರಶೋ ಯೋಜನಹೈಮಭೌಮಾಮ್ ॥೧೪॥

ನಿಮ್ಮ ಆಜ್ಞೆಯನ್ನು ಪಾಲಿಸುತ್ತಾ ನಾನು ವಿಶಾಲವೂ, ಮನೋಹರ ಸಾಮರ್ಥ್ಯ ಉಳ್ಳದ್ದೂ ಆದ ಯಮಪಟ್ಟಣಕ್ಕೆ ಹೋಗಿ ಅಲ್ಲಿ ಸಹಸ್ರಾರು ಯೋಜನದಷ್ಟು ಸುವರ್ಣಭೂಮಿಯಲ್ಲಿದ್ದ ವಿಶಾಲವಾದ ಸಭೆಯನ್ನು ನೋಡಿದೆನು.

ದೃಷ್ಟ್ವೈವ ಮಾಮಭಿಮುಖಿಮಾಪತಂತಂ
ಗೃಹಂ ನಿವೇದ್ಯಾಸನಮಾದಿದೇಶ ।
ವೈವಸ್ವತೋಽರ್ಘ್ಯಾದಿಭಿರರ್ಹಣೈಶ್ಚ
ಭವತ್ಕೃತೇ ಪೂಜಯಾಮಾಸ ಮಾಂ ಸಃ ॥೧೫॥

ತಮ್ಮ ಎದುರಿಗೆ ಬರುತ್ತಿದ್ದ ನನ್ನನ್ನು ನೋಡಿದ ಕೂಡಲೇ ಯಮದೇವರು ತಮ್ಮ ಮನೆಯನ್ನು ನನಗೆ ನಿವೇದಿಸಿ ಆಸನವನ್ನು ನೀಡಿದರು. ಯಮದೇವರು ನಿಮ್ಮ ಮೇಲಿನ ಗೌರವದಿಂದ ನನ್ನನ್ನು ಅರ್ಘ್ಯಾದಿ ಪೂಜಾ ಸಾಮಗ್ರಿಗಳಿಂದ ಪೂಜಿಸಿದರು.

ತತಸ್ತ್ವಹಂ ತಂ ಶನಕೈರವೋಚಂ
ವೃತಂ ಸದಸ್ಯೈರಭಿಪೂಜ್ಯಮಾನಮ್ ।

ದಾನೇನ ತಾತ ಪ್ರಯತೋಽಭೂಃ ಸದೈವ
ವಿಶೇಷತೋ ಗೋಪ್ರದಾನಂ ಚ ಕುರ್ಯಾಃ ॥೪೪॥

ಧರ್ಮರಾಜನು ನನ್ನನ್ನು ಕುರಿತು ದ್ವಿಜರ್ಷಿಯೇ, ಪ್ರೀತಿಪಾತ್ರನೇ, ದಾನದಲ್ಲಿ ಯಾವಾಗಲೂ ಆಸಕ್ತನಾಗಿರುವಿ. ವಿಶೇಷವಾಗಿ ಗೋದಾನವನ್ನು ಮಾಡು ಎಂದು ಸಂತೋಷದಿಂದ ಪುನಃ ಪುನಃ ಹೇಳಿದನು.

ಶುದ್ಧೋ ಹ್ಯಥೋರ್ ನಾವಮನ್ಯಸ್ವ ಧರ್ಮಾನ್
ಪಾತ್ರೇ ದೇಯಂ ದೇಶಕಾಲೋಪಪನ್ನೇ ।
ತಸ್ಮಾದ್ ಗಾವಸ್ತೇ ನಿತ್ಯಮೇವ ಪ್ರದೇಯಾ
ಮಾ ಭೂಚ್ಚ ತೇ ಸಂಶಯಃ ಕಶ್ಚಿದತ್ರ ॥೪೫॥

ಗೋವೆನ್ನುವುದು ಪರಿಶುದ್ಧವಾದ ವಸ್ತು. ಧರ್ಮವನ್ನು ಅವಮಾನಗೊಳಿಸಬೇಡ. ದೇಶಕಾಲವು ಉಪಪನ್ನವಾದಾಗ ಪಾತ್ರನಿಗೆ ದಾನವನ್ನು ಮಾಡಬೇಕು. ಆದ್ದರಿಂದ ನೀನು ಯಾವಾಗಲೂ ಗೋದಾನವನ್ನು ಮಾಡು. ಈ ವಿಷಯದಲ್ಲಿ ಸಂಶಯವನ್ನು ಪಡಬೇಡ.

ಏತಾಃ ಪುರಾ ಅದದನ್ನಿತ್ಯಮೇವ
ಶಾಂತಾತ್ಮಾನೋ ದಾನಪಥೇ ನಿವಿಷ್ಟಾಃ ।
ತಪಾಂಸ್ಯುಗ್ರಾಣ್ಯಪ್ರತಿಶಂಕಮಾನಾಃ
ತೇ ವೈ ದಾನಂ ಪ್ರದದುಶ್ಚಾಪಿ ಶಕ್ಯಾ ॥೪೬॥

ಇಲ್ಲಿ ಕಾಣುತ್ತಿರುವ ಶಾಂತಮನಸ್ಸುಳ್ಳವರೂ, ದಾನ ಮಾರ್ಗದಲ್ಲಿ ನಿರತರಾದವರೂ, ಉಗ್ರವಾದ ತಪಸ್ಸಿನಲ್ಲಿ ನಿಶ್ಶಂಕೆಯಿಂದ ಪ್ರವೃತ್ತರಾದವರೂ ಆದ ಇವರು ತಮ್ಮ ಶಕ್ತಿ ಇದ್ದಷ್ಟು ದಾನವನ್ನು ಕೊಟ್ಟಿದ್ದಾರೆ.

ಕಾಲೇ ಶಕ್ಯಾ ಮತ್ಸರಂ ವರ್ಜಯಿತ್ವಾ
ಶುದ್ಧಾತ್ಮಾನಃ ಶ್ರದ್ದಿನಃ ಪುಣ್ಯಶೀಲಾಃ ।
ದತ್ತ್ವಾ ತಪ್ತ್ವಾ ಲೋಕಮಮುಂ ಪ್ರಪನ್ನಾ
ದೇದೀಪ್ಯಂತೇ ಪುಣ್ಯಶೀಲಾಶ್ಚ ನಾಕೇ ॥೪೭॥

ಯೋಗ್ಯವಾದ ಕಾಲದಲ್ಲಿ ಮತ್ಸರವನ್ನು ಬಿಟ್ಟು ಶುದ್ಧಾತ್ಮರಾಗಿ, ಶ್ರದ್ಧಾಯುಕ್ತರಾಗಿ, ಪುಣ್ಯಶೀಲರಾಗಿ ತಮ್ಮ ಶಕ್ತಿ ಇದ್ದಷ್ಟು ದಾನವನ್ನು ಮಾಡಿ, ತಪಸ್ಸನ್ನು ಮಾಡಿ ಈ ಲೋಕಕ್ಕೆ ಬಂದು ವಿರಾಜಿಸುತ್ತಿದ್ದಾರೆ. ಪುಣ್ಯಶೀಲರಾದ ಇವರು ಸ್ವರ್ಗದಲ್ಲಿಯೂ ವಿರಾಜಿಸುತ್ತಾರೆ.

ಏತದ್ ದಾನಂ ನ್ಯಾಯಲಬ್ಧಂ ದ್ವಿಜೇಭ್ಯಃ
ಪಾತ್ರೇ ದತ್ತಂ ಪ್ರಾಪಣೀಯಂ ಪರೀಕ್ಷ್ಯ ।
ಕಾಮ್ಯಾಷ್ಟಮ್ಯಾಂ ವರ್ತಿತವ್ಯಂ ದಶಾಹಂ
ರಸೈರ್ಗವಾಂ ಶಕೃತಾ ಪ್ರಸ್ನವೈರ್ವಾ ॥೪೮॥

ನ್ಯಾಯಮಾರ್ಗದಲ್ಲಿ ಲಬ್ಧವಾದ ಈ ಗೋವನ್ನು ಬ್ರಾಹ್ಮಣರಿಗೆ ದಾನ ಕೊಡಬೇಕು. ಪಾತ್ರವನ್ನು ಪರೀಕ್ಷೆ ಮಾಡಿ ಬ್ರಾಹ್ಮಣರಿಗೆ ಕೊಡಬೇಕಾದುದು. ಹತ್ತು ದಿವಸ ಗೋರಸಗಳಿಂದ ಅಥವಾ ಗೋಮಯದಿಂದ ಅಥವಾ ಗೋಮೂತ್ರದಿಂದ ಜೀವಿಸಿ ಕಾಮ್ಯಾಷ್ಟಮಿಯ (ಕಾರ್ತಿಕಮಾಸದ ಅಷ್ಟಮಿ) ದಿವಸ ಗೋದಾನವನ್ನು ಮಾಡಬೇಕು.

ವೇದವ್ರತೀ ಸ್ಯಾದ್ ವೃಷಭಪ್ರದಾತಾ
ವೇದಾವಾಪ್ತಿರ್ಗೋರ್ಯುಗಸ್ಯ ಪ್ರದಾನೇ ।
ತೀರ್ಥಾವಾಪ್ತಿರ್ಗೋರ್ಪ್ರಯುಕ್ತಪ್ರದಾನೇ
ಪಾಪೋತ್ಸರ್ಗಃ ಕಪಿಲಾಯಾಃ ಪ್ರದಾನೇ ॥೪೯॥

ವೃಷಭದಾನವನ್ನು ಮಾಡಿದವನು ವೇದನಿರತನಾಗುತ್ತಾನೆ. ಎರಡು ಗೋವುಗಳನ್ನು ದಾನ ಮಾಡುವವನಿಗೆ ವೇದದ ಪ್ರಾಪ್ತಿಯಾಗುತ್ತದೆ. ಗೋವಿನಿಂದ ಉಂಟಾದ ರಸಗಳನ್ನು ದಾನ ಮಾಡಿದರೆ ತೀರ್ಥಕ್ಷೇತ್ರ ಪ್ರಾಪ್ತಿಯಾಗುತ್ತದೆ. ಕಪಿಲ ಗೋವನ್ನು ದಾನ ಮಾಡಿದರೆ ಪಾಪಗಳು ಪರಿಹಾರವಾಗುತ್ತವೆ.

ಗಾಮಪ್ಯೇಕಾಂ ಕಪಿಲಾಂ ಸಂಪ್ರದಾಯ
ನ್ಯಾಯೋಪೇತಾಂ ಕಲ್ಮಷಾದ್ ವಿಪ್ರಮುಚ್ಯೇತ್ ।
ಗವಾಂ ರಸಾತ್ ಪರಮಂ ನಾಸ್ತಿ ಕಿಂಚಿದ್
ಗವಾಂ ದಾನಂ ಸುಮಹತ್ ತದ್ ವದಂತಿ ॥೫೦॥

ನ್ಯಾಯದಿಂದ ಲಬ್ಧವಾದ ಒಂದು ಕಪಿಲಗೋವನ್ನಾದರೂ ದಾನ ಮಾಡಿದವನು ಎಲ್ಲ ಪಾಪಗಳಿಂದ ಮತ್ತು ದೋಷಗಳಿಂದ ನಿರ್ಮುಕ್ತನಾಗುತ್ತಾನೆ. ಗೋರಸಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಆದ್ದರಿಂದ ಗೋದಾನವನ್ನು ಅತ್ಯಂತ ಶ್ರೇಷ್ಠವಾದುದು ಎಂದು ಹೇಳುತ್ತಾರೆ.

ಗಾವೋ ಲೋಕಾನ್ ಧಾರಯಂತಿ ಕ್ಷರಂತ್ಯೋ
ಗಾವಶ್ಚಾನ್ನಂ ಸಂಜನಯಂತಿ ಲೋಕೇ ।
ಯಸ್ತಜ್ಜಾನನ್ನ ಗವಾಂ ಹಾರ್ದಮೇತಿ
ಸ ವೈ ಗಂತಾ ನಿರಯಂ ಪಾಪಚೇತಾಃ ॥೫೧॥

ಗೋವುಗಳು ಕ್ಷೀರವನ್ನು ಸ್ರವಿಸಿ ಲೋಕಗಳನ್ನು ಪಾಲಿಸುತ್ತವೆ. ಗೋವುಗಳು ಲೋಕದಲ್ಲಿ ಅನ್ನವನ್ನು (ಧಾನ್ಯವನ್ನು) ಉತ್ಪಾದಿಸುತ್ತವೆ. ಇದನ್ನು ತಿಳಿದ ಯಾವನು ಗೋವುಗಳಲ್ಲಿ ಪ್ರೀತಿಯನ್ನು ಮಾಡುವುದಿಲ್ಲವೋ ಅಂತಹ ಪಾಪಚೇತನನು ನರಕಕ್ಕೆ ಹೋಗುತ್ತಾನೆ.

ಯತ್ತೇ ದಾತುಂ ಗೋಸಹಸ್ರಂ ಶತಂ ವಾ
ಶತಾರ್ಧಂ ವಾ ದಶ ವಾ ಸಾಧುವತ್ಸಾಃ ।
ಅಪ್ಯೇಕಾಂ ವಾ ಸಾಧವೇ ಬ್ರಾಹ್ಮಣಾಯ
ಸಾಽಸ್ಯಾಮುಷ್ಮಿನ್ ಪುಣ್ಯತೀರ್ಥಾ ನದೀ ವೈ ॥೫೨॥

ನಿನಗೆ ಒಳ್ಳೆಯ ಕರುಗಳಿಂದ ಕೂಡಿದ ಸಹಸ್ರಗೋವುಗಳನ್ನಾಗಲೀ, ನೂರು ಗೋವುಗಳನ್ನಾಗಲೀ, ಐವತ್ತು ಗೋವುಗಳನ್ನಾಗಲೀ ಅಥವಾ ಹತ್ತು ಗೋವುಗಳನ್ನಾಗಲೀ ಕೊಡಲು ಸಾಧ್ಯವಿಲ್ಲದಿದ್ದರೆ ಒಂದು ಗೋವನ್ನಾದರೂ ಸಾಧುಬ್ರಾಹ್ಮಣನಿಗೆ ಕೊಡಬೇಕು. ಆ ಗೋವು ಪರಲೋಕದಲ್ಲಿ ಅವನಿಗೆ ಪುಣ್ಯಜಲವುಳ್ಳ ನದಿಯಾಗುತ್ತದೆ.

ಪ್ರಾಪ್ಯ ಪುಷ್ಟ್ಯಾ ಲೋಕಸಂರಕ್ಷಣೇನ
ಗಾವಸ್ತುಲ್ಯಾಃ ಸೂರ್ಯಪಾದ್ಯೈಃ ಪೃಥಿವ್ಯಾಮ್ ।
ಶಬ್ದಶ್ಚೈಕಃ ಸಂತತಿಶ್ಚೋಪಭೋಗಃ
ತಸ್ಮಾದ್ ಗೋದಃ ಸೂರ್ಯ ಇವಾಭಿಭಾತಿ ॥೫೩॥

ಸರ್ವತ್ರ ಸಂಚಾರ ಮಾಡುವುದರಿಂದ, ಪುಷ್ಟಿಯನ್ನು ಉಂಟುಮಾಡುವುದರಿಂದ, ಲೋಕಸಂರಕ್ಷಣೆಯನ್ನು ಮಾಡುವುದರಿಂದ ಗೋವುಗಳು ಭೂಮಿಯಲ್ಲಿ ಸೂರ್ಯ ಕಿರಣಗಳಿಗೆ ಸಮಾನವಾದವುಗಳು. ಗೋ ಎಂಬ ಶಬ್ದವು ಒಂದೇ. ಗೋ ಎಂದರೆ ಕಿರಣವೆಂದೂ, ಗೋವು ಎಂದೂ ಎರಡು ಅರ್ಥವಿದೆ. ಮನುಷ್ಯನ ಸಂತತಿ ಮತ್ತು ಉಪಭೋಗಗಳು ಗೋವನ್ನು ಅವಲಂಬಿಸಿವೆ. ಆದ್ದರಿಂದ ಗೋದಾನ ಮಾಡುವವನು ಸೂರ್ಯನಂತೆ ವಿರಾಜಿಸುತ್ತಾನೆ.

ಗುರುಂ ಶಿಷ್ಯೋ ವರಯೇದ್ ಗೋಪ್ರದಾನೇ
ಸ ವೈ ವಕ್ತಾ ನಿಯತಂ ಸ್ವರ್ಗದಾತಾ ।
ವಿಧಿಜ್ಞಾನಾಂ ಸುಮಹಾನೇಷ ಧರ್ಮೋ
ವಿಧಿಂ ಹ್ಯಾದ್ಯಂ ವಿಧಯಃ ಸಂಶ್ರಯಂತಿ ॥೫೪॥

ಶಿಷ್ಯನು ಗೋದಾನವನ್ನು ಮಾಡುವಾಗ ಗುರುವನ್ನೇ ಪೂಜಿಸಬೇಕು. ಏಕೆಂದರೆ ಅವನೇ ನಿಯತವಾಗಿ ಜ್ಞಾನೋಪದೇಶವನ್ನು ಮಾಡಿ ಸ್ವರ್ಗವನ್ನು ಕೊಡುವವನು. ವಿಧಿಯನ್ನು ತಿಳಿದವನಿಗೆ ಗೋದಾನವು ಅತ್ಯಂತ ಶ್ರೇಷ್ಠವಾದ ಧರ್ಮ. ಉಳಿದ ವಿಧಿಗಳು ಶ್ರೇಷ್ಠವಾದ ವಿಧಿಯನ್ನು ಅನುಸರಿಸುತ್ತವೆ.

ಏತದ್ ದಾನಂ ನ್ಯಾಯಲಬ್ಧಂ ದ್ವಿಜೇಭ್ಯಃ
ಪಾತ್ರೇ ದತ್ತ್ವಾ ಪ್ರಾಪಯೇಥಾಃ ಪರೀಕ್ಷ್ಯ ।
ತ್ವಯ್ಯಾಶಂಸಂತ್ಯಮರಾ ಮಾನವಾಶ್ಚ
ವಯಂ ಚಾಪಿ ಪ್ರಸೃತೇ ಪುಣ್ಯಶೀಲಾಃ ॥೫೫॥

ನ್ಯಾಯಲಬ್ಧವಾದ ಈ ದಾನವನ್ನು ಪಾತ್ರನಾದ ಬ್ರಾಹ್ಮಣನಿಗೆ ಪರೀಕ್ಷೆ ಮಾಡಿ ಕೊಡುವವನಾಗು. ಪುಣ್ಯಶೀಲರಾದ ಮಾನವರು ಮತ್ತು ದೇವತೆಗಳು ನೀನು ಇಂತಹ ದಾನವನ್ನು ಕೊಡುವಿ ಎಂದು ಆಶಂಸಿಸುತ್ತಾರೆ (ಎಂದು ಯಮನು ಹೇಳಿದನು).

ಇತ್ಯುಕ್ತೋಽಹಂ ಧರ್ಮರಾಜ್ಞಾ ಮಹರ್ಷೇ
ಧರ್ಮಾತ್ಮಾನಂ ಶಿರಸಾಭಿಪ್ರಣಮ್ಯ ।
ಅನುಜ್ಞಾತಸ್ತೇನ ವೈವಸ್ವತೇನ
ಪ್ರತ್ಯಾಗಮಂ ಭಗವತ್ಪಾದಮೂಲಮ್ ॥೫೬॥

ಎಲೈ ಮಹರ್ಷಿಯೇ, ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ನಾನು ಧರ್ಮಾತ್ಮನಾದ ಅವನಿಗೆ ಶಿರಸಾ ಪ್ರಣಾಮವನ್ನು ಮಾಡಿ ವಿವಸ್ವಾನ್ ಎಂಬ ಸೂರ್ಯನ ಪುತ್ರನಾದ ಅವನಿಂದ ಅನುಮತಿಯನ್ನು ಪಡೆದು ನಿಮ್ಮ ಪಾದದ ಸಮೀಪಕ್ಕೆ ಹಿಂದಿರುಗಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ನುಶಾಸನಪರ್ವಣಿ ದಾನಧರ್ಮೇ ನಚಿಕೇತಧರ್ಮರಾಜಸಂವಾದೋನಾಮ
ಏಕಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎರಡನೆಯ ಅಧ್ಯಾಯ

ಗೋದಾನ - ಬ್ರಹ್ಮದೇವರನ್ನು ಕುರಿತು ಇಂದ್ರನಿಂದ ಪ್ರಶ್ನೆ.

ಯುಧಿಷ್ಠಿರಃ

ಉಕ್ತಂ ವೈ ಗೋಪ್ರದಾನಂ ತೇ ನಾಚಿಕೇತಮೃಷಿಂ ಪ್ರತಿ ।
ಮಾಹಾತ್ಮ್ಯಮಪಿ ಚೈವೋಕ್ತಮುದ್ದೇಶೇನ ಗವಾಂ ಪ್ರಭೋ ॥೧॥

ಯುಧಿಷ್ಠಿರ– ಪ್ರಭುವೇ, ನೀನು ನಾಚಿಕೇತ ವಿಷಯ ಸಂಬಂಧಿಸಿದ ಗೋಪ್ರದಾನವನ್ನೂ ಮತ್ತು ಗೋವುಗಳ ಮಹಿಮೆಯನ್ನೂ ಹೇಳಿದ್ದೀಯೆ.

ನೃಗೇಣ ಚ ಯಥಾ ದುಃಖಮನುಭೂತಂ ಮಹಾತ್ಮನಾ ।
ಏಕಾಪರಾಧಾದಜ್ಞಾನಾತ್ ಪಿತಾಮಹ ಮಹಾಮತೇ ॥೨॥

ಎಲೈ ಪಿತಾಮಹನೇ, ಮಹಾಮತಿಯೇ, ಮಹಾತ್ಮನಾದ ನೃಗನು ಅಜ್ಞಾನದಿಂದ ಮಾಡಿದ ಒಂದು ಅಪರಾಧದಿಂದ ಹೇಗೆ ದುಃಖವನ್ನು ಅನುಭವಿಸಿದನೆಂದು ಹೇಳಿದ್ದೀಯೆ.

ದ್ವಾರವತ್ಯಾಂ ಯಥಾ ಚಾಸೌ ನಿವಿಶಂತ್ಯಾಂ ಸಮುದ್ಧತಃ ।
ಮೋಕ್ಷಹೇತುರಭೂತ್ ಕೃಷ್ಣಸ್ತದಪ್ಯವಧೃತಂ ಮಯಾ ॥೩॥

ಸಮುದ್ರದಲ್ಲಿರುವ ದ್ವಾರಾವತಿಯಲ್ಲಿ ಹೇಗೆ ಅವನು ಎತ್ತಲ್ಪಟ್ಟನು ಅವನ ಮೋಕ್ಷಕ್ಕೆ ಹೇಗೆ ಕೃಷ್ಣನು ಕಾರಣನಾದನು ಎಲ್ಲವನ್ನೂ ನಾನು ಕೇಳಿದೆನು.

ಕಿಂ ತ್ವಸ್ತಿ ಮಮ ಸಂದೇಹೋ ಗವಾಂ ಲೋಕಂ ಪ್ರತಿ ಪ್ರಭೋ ।
ತತ್ತ್ವತಃ ಶ್ರೋತುಮಿಚ್ಛಾಮಿ ಗೋದಾ ಯತ್ರ ವಿಶಂತ್ಯುತ ॥೪॥

ಎಲೈ ಪ್ರಭುವೇ, ಆದರೆ ನನಗೆ ಗೋಲೋಕದ ವಿಷಯದಲ್ಲಿ ಒಂದು ಸಂದೇಹವಿದೆ. ಗೋದಾನ ಮಾಡುವವರು ಹೋಗುವ ಗೋಲೋಕವನ್ನು ಸರಿಯಾಗಿ ತಿಳಿದುಕೊಳ್ಳಲು ಬಯಸುತ್ತೇನೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಥಾಪೃಚ್ಛತ್ ಪದ್ಮಯೋನಿಮೇತದೇವ ಶತಕ್ರತುಃ ॥೫॥

ಭೀಷ್ಮ– ಈ ವಿಷಯದಲ್ಲೂ ಸಹ ಶತಕ್ರತುವಾದ ಇಂದ್ರನು ಪದ್ಮಯೋನಿಗಳಾದ ಬ್ರಹ್ಮದೇವರನ್ನು ಕುರಿತು ಇದೇ ಪ್ರಶ್ನೆಗಳನ್ನು ಕೇಳಿದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಶಕ್ರಃ

ಸ್ವರ್ಗೋಕವಾಸಿನಾಂ ಲಕ್ಷ್ಮೀಮಭಿಭೂಯ ಸ್ವಯಾ ತ್ವಿಷಾ ।
ಗೋಲೋಕವಾಸಿನಃ ಪಶ್ಯೇ ವ್ರಜತಃ ಸಂಶಯೋಽತ್ರ ಮೇ ॥೬॥

ಇಂದ್ರ– ಸ್ವರ್ಗನಿವಾಸಿಗಳ ಸಂಪತ್ತನ್ನು ತಮ್ಮ ಕಾಂತಿಯಿಂದ ತಿರಸ್ಕರಿಸಿ ಗೋಲೋಕ ವಾಸಿಗಳು ಮುಂದೆ ಹೋಗುವುದನ್ನು ನೋಡುತ್ತಿದ್ದೇನೆ. ನನಗೆ ಈ ವಿಷಯದಲ್ಲಿ ಸಂಶಯವಿದೆ.

ಕೀದೃಶಾ ಭಗವಲ್ಲೋಕಾ ಗವಾಂ ತದ್ ಬ್ರೂಹಿ ಮೇಽನಘ ।
ಯಾನಾವಸಂತಿ ದಾತಾರ ಏತದಿಚ್ಛಾಮಿ ವೇದಿತುಮ್ ॥೭॥

ಎಲೈ ಅನಘರೇ, ಪೂಜ್ಯರೇ, ಗೋದಾನವನ್ನು ಮಾಡಿದವರು ಹೋಗಿ ವಾಸಿಸುವ ಲೋಕಗಳು ಯಾವ ರೀತಿ ಇರುತ್ತವೆ ಎಂಬುದನ್ನು ತಿಳಿಯಲು ಬಯಸುತ್ತೇನೆ.

ಕೀದೃಶಾಃ ಕಿಂಫಲಾಃ ಕಸ್ತಿತ್ ಪರಮಸ್ತತ್ರ ವೈ ಗುಣಃ ।
ಕಥಂ ಚ ಪುರುಷಾಸ್ತತ್ರ ಗಚ್ಛಂತಿ ವಿಗತಜ್ವರಾಃ ॥೮॥

ಅವು ಹೇಗಿರುತ್ತವೆ? ಅವುಗಳಲ್ಲಿ ಯಾವ ಫಲವಿದೆ? ಅವುಗಳಲ್ಲಿರುವ ಶ್ರೇಷ್ಠವಾದ ಗುಣಗಳೇನು? ಪುರುಷರು ಹೇಗೆ ನಿಶ್ಚಿಂತೆಯಿಂದ ಅಲ್ಲಿಗೆ ಹೋಗುತ್ತಾರೆ?

ಕಿಯತ್ಕಾಲಂ ಪ್ರದಾನಸ್ಯ ದಾತಾ ಚ ಫಲಮಶ್ನುತೇ ।
ಕಥಂ ಬಹುವಿಧಂ ದಾನಂ ಸ್ಯಾದಲ್ಪಮಪಿ ವಾ ಕಥಮ್ ॥೯॥

ಗೋದಾನ ಮಾಡುವವನು ಎಷ್ಟು ಕಾಲದವರೆಗೆ ಅದರ ಫಲವನ್ನು ಅನುಭವಿಸುತ್ತಾನೆ? ದಾನವು ಮಹತ್ತಾಗುವುದು ಅಥವಾ ಅಲ್ಪವಾಗುವುದು ಹೇಗೆ?

ಬಹ್ವೀನಾಂ ಕೀದೃಶಂ ದಾನಮಲ್ಪಾನಾಂ ವಾಪಿ ಕೀದೃಶಮ್ ।
ಅದತ್ತ್ವಾ ಗೋಪ್ರದಾಃ ಸಂತಿ ಕೇನ ವಾ ತಚ್ಚ ಶಂಸ ಮೇ ॥೧೦॥

ಬಹುಗೋವುಗಳನ್ನು ಕೊಡುವ ಪ್ರಕಾರವು ಯಾವುದು? ಅಲ್ಪ ಗೋವುಗಳನ್ನು ಕೊಡುವ ಪ್ರಕಾರವು ಯಾವುದು? ಗೋದಾನವನ್ನು ಮಾಡದೆ ಗೋದಾನದ ಫಲವನ್ನು ಹೇಗೆ ಹೊಂದಬಹುದು? ಎಲ್ಲವನ್ನೂ ನನಗೆ ಹೇಳಿ.

ಕಥಂ ಚ ಬಹುದಾತಾ ಸ್ಯಾದಲ್ಪದಾತ್ರಾ ಸಮಃ ಪ್ರಭೋ ।
ಅಲ್ಪಪ್ರದಾತಾ ಬಹುದಃ ಕಥಂ ಚ ಸ್ಯಾದಿಹೇಶ್ವರ ॥೧೧॥

ಎಲೈ ಪ್ರಭುವೇ, ಬಹುದಾನವನ್ನು ಮಾಡಿದವನು ಅಲ್ಪದಾನವನ್ನು ಮಾಡಿದವನಿಗೆ ಹೇಗೆ ಸಮನಾಗುತ್ತಾನೆ? ಎಲೈ ಈಶ್ವರನೇ, ಅಲ್ಪಪ್ರದಾನವನ್ನು ಮಾಡಿದವನು ಹೇಗೆ ಬಹುಪ್ರದಾನವನ್ನು ಮಾಡಿದವನಿಗೆ ಸಮಾನನಾಗುತ್ತಾನೆ?

ಕೀದೃಶೀ ದಕ್ಷಿಣಾ ಚೈವ ಗೋಪ್ರದಾನೇ ವಿಶಿಷ್ಯತೇ ।
ಏತತ್ ತಥ್ಯೇನ ಭಗವನ್ ಮಮ ಶಂಸಿತುಮರ್ಹಸಿ ॥೧೨॥

ಗೋದಾನದಲ್ಲಿ ಎಂತಹ ದಕ್ಷಿಣೆಯು ಶ್ರೇಷ್ಠವಾದುದು? ಪೂಜ್ಯರೇ, ಇದೆಲ್ಲವನ್ನೂ ಯಥಾರ್ಥವಾಗಿ ನನಗೆ ಹೇಳಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬ್ರಹ್ಮೇಂದ್ರಸಂವಾದೇ
ಇಂದ್ರಪಶ್ನೋನಾಮ ದ್ವ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂರನೆಯ ಅಧ್ಯಾಯ

ಗೋದಾನ - ಬ್ರಹ್ಮನ ಉತ್ತರ.

ಬ್ರಹ್ಮಾ

ಯೋಽಯಂ ಪ್ರಶ್ನಸ್ತ್ವಯಾ ಪೃಷ್ಟೋ ಗೋಪ್ರದಾನಾಧಿಕಾರವಾನ್ ।
ನಾಸ್ಯ ಪ್ರಷ್ಟಾಽಸ್ತಿ ಲೋಕೇಽಸ್ಮಿಂಸ್ತ್ವತ್ತೋಽನ್ಯೋ ಹಿ ಶತಕ್ರತೋ ॥೧॥

ಬ್ರಹ್ಮಾ– ಶತಕ್ರತುವೇ, ನೀನು ಗೋದಾನ ವಿಷಯದಲ್ಲಿ ಯಾವ ಪ್ರಶ್ನೆಯನ್ನು ಕೇಳಿದೆಯೋ ಅಂತಹ ಪ್ರಶ್ನೆಯನ್ನು ಕೇಳುವವರು ಲೋಕದಲ್ಲಿ ನಿನ್ನನ್ನು ಬಿಟ್ಟು ಇನ್ನೊಬ್ಬನಿಲ್ಲ.

ಸಂತಿ ನಾನಾವಿಧಾ ಲೋಕಾ ಯಾಂಸ್ತ್ವಂ ಶಕ್ರ ನ ಪಶ್ಯಸಿ ।
ಪಶ್ಯಾಮಿ ಯಾನಹಂ ಲೋಕಾನೇಕಪತ್ನ್ಯಶ್ಚ ಯಾಃ ಸ್ತ್ರಿಯಃ ॥೨॥

ಎಲೈ ಇಂದ್ರನೇ, ನೀನು ನೋಡದಿರುವ ನಾನಾವಿಧವಾದ ದಿವ್ಯಲೋಕಗಳಿವೆ. ನಾನು ಆ ಲೋಕಗಳನ್ನು ನೋಡುತ್ತೇನೆ. ಪತಿವ್ರತೆಯರಾದ ಸ್ತ್ರೀಯರೂ ನೋಡುತ್ತಾರೆ.

ಕರ್ಮಭಿಶ್ಚಾಪಿ ಸುಶುಭೈಃ ಸುವ್ರತಾ ಋಷಯಸ್ತಥಾ ।
ಸಶರೀರಾ ಹಿ ತಾನ್ ಯಾಂತಿ ಬ್ರಾಹ್ಮಣಾಃ ಶುಭವೃತ್ತಯಃ ॥೩॥

ಒಳ್ಳೆಯ ಕರ್ಮಗಳನ್ನು ಮಾಡುವ ಮತ್ತು ಒಳ್ಳೆಯ ವ್ರತವನ್ನು ಧರಿಸಿದ ಋಷಿಗಳು, ಶುಭವಾದ ಆಚಾರವುಳ್ಳ ಬ್ರಾಹ್ಮಣರು ಶರೀರ ಸಹಿತರಾಗಿ ಆ ಲೋಕಗಳಿಗೆ ಹೋಗುತ್ತಾರೆ.

ಶರೀರನ್ಯಾಸಮೋಕ್ಷೇಣ ಮನಸಾ ನಿರ್ಮಲೇನ ಚ ।
ಸ್ವಪ್ನಭೂತಾಂಶ್ಚ ತಾಲ್ಲೋಕಾನ್ ಪಶ್ಯಂತೀಹಾಪಿ ಸುವ್ರತಾಃ ॥೪॥

ಶರೀರಾಭಿಮಾನವನ್ನು ತ್ಯಾಗ ಮಾಡಿದ, ನಿರ್ಮಲವಾದ ಮನಸ್ಸುಳ್ಳ, ಒಳ್ಳೆಯ ವ್ರತವನ್ನು ಧರಿಸಿದ ಪುರುಷರು ಇಲ್ಲಿಂದಲೇ ಸ್ವಪ್ನಪ್ರಾಯವಾದ (ಸ್ವಪ್ನ ಸುಂದರವಾದ) ಆ ಲೋಕಗಳನ್ನು ನೋಡುತ್ತಾರೆ.

ತೇ ತು ಲೋಕಾಃ ಸಹಸ್ರಾಕ್ಷ ಶೃಣು ಯಾದೃಗ್ಗುಣಾನ್ವಿತಾಃ ।
ನ ತತ್ರ ಕ್ರಮತೇ ಕಾಲೋ ನ ಜರಾ ನ ಚ ಪಾಪಕಮ್ ।
ತಥಾಽನ್ಯನ್ನಾಶುಭಂ ಕಿಂಚಿನ್ನ ವ್ಯಾಧಿಸ್ತತ್ರ ನ ಕ್ಲಮಃ ॥೫॥

ಎಲೈ ಸಹಸ್ರಾಕ್ಷನೇ, ಆ ಲೋಕಗಳು ಎಂತಹ ಗುಣಗಳಿಂದ ಕೂಡಿವೆ ಎಂಬುದನ್ನು ಕೇಳು. ಅಲ್ಲಿ ಕಾಲವು ಪರಿಣಾಮವನ್ನು ಮಾಡುವುದಿಲ್ಲ, ಮುಪ್ಪಿಲ್ಲ, ಪಾಪಕರ್ಮಗಳಿಲ್ಲ, ಬೇರೆ ಅಶುಭವಾದುದು ಇಲ್ಲ, ವ್ಯಾಧಿ ಇಲ್ಲ, ದಣಿವಿಲ್ಲ.

ಯದ್ಯಚ್ಚ ಗಾವೋ ಮನಸಾ ತಸ್ಮಿನ್ ವಾಂಛಂತಿ ವಾಸವ ।
ತತ್‌ಸರ್ವಂ ಪ್ರಾಪಯಂತಿ ಸ್ಮ ಮಮ ಪ್ರತ್ಯಕ್ಷದರ್ಶನಾತ್ ।
ಕಾಮಗಾಃ ಕಾಮಚಾರಿಣ್ಯಃ ಕಾಮಾತ್ ಕಾಮಾಂಶ್ಚ ಭುಂಜತೇ ॥೬॥

ಎಲೈ ವಾಸವನೇ, ಅಲ್ಲಿ ಗೋವುಗಳು ಮನಸ್ಸಿನಲ್ಲಿ ಏನೇನು ಬಯಸುತ್ತವೆಯೋ ಅವೆಲ್ಲವನ್ನೂ ಹೊಂದುತ್ತವೆ. ತಮ್ಮ ಮನಸ್ಸಿಗೆ ಬಂದಂತೆ ಸಂಚರಿಸಿ ಮೇಯುತ್ತಾ ಶ್ರೇಷ್ಠವಾದ ಕಾಮ್ಯಗಳನ್ನು ಹೊಂದುತ್ತವೆ. ಇದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ.

ವಾಪ್ಯಃ ಸರಾಂಸಿ ಸರಿತೋ ವಿವಿಧಾನಿ ವನಾನಿ ಚ ।
ಗೃಹಾಣಿ ಪರ್ವತಾಶ್ಚೈವ ಯಾವದ್ ದ್ರವ್ಯಂ ಚ ಕಿಂಚನ ॥೭॥

ಬಾವಿಗಳು, ಸರೋವರಗಳು, ನದಿಗಳು, ವಿವಿಧವಾದ ವನಗಳು, ಗೃಹಗಳು, ಪರ್ವತಗಳು ಮತ್ತು ಉತ್ತಮ ದ್ರವ್ಯಗಳು ಅಲ್ಲಿರುತ್ತವೆ.

ಮನೋಜ್ಞಂ ಸರ್ವಭೂತೇಭ್ಯಃ ಸರ್ವಂ ತತ್ರ ಪ್ರದೃಶ್ಯತೇ ।
ಈದೃಶಾನ್ ವಿದ್ಧಿ ತಾಲ್ಲೋಕಾನ್ನಾಸ್ತಿ ಲೋಕಸ್ತತೋಽಧಿಕಃ ॥೮॥

ಎಲ್ಲ ಪ್ರಾಣಿಗಳಿಗೂ ಮನೋಜ್ಞವಾದ ಎಲ್ಲ ವಸ್ತುಗಳೂ ಅಲ್ಲಿ ಕಂಡುಬರುತ್ತವೆ. ಆ ಲೋಕಗಳು ಈ ರೀತಿಯಲ್ಲಿರುತ್ತವೆ ಎಂದು ತಿಳಿ. ಅವುಗಳಿಗಿಂತ ಶ್ರೇಷ್ಠವಾದ ಲೋಕವಿಲ್ಲ.

ತತ್ರ ಸರ್ವಸಹಾಃ ಕ್ಷಾಂತಾ ವತ್ಸಲಾ ಗುರುವರ್ತಿನಃ ।
ಅಹಂಕಾರೈರ್ವಿರಹಿತಾ ಯಾಂತಿ ಶಕ್ರ ನರೋತ್ತಮಾಃ ॥೯॥

ಎಲೈ ಶಕ್ರನೇ, ಅಲ್ಲಿ ಶೀತೋಷ್ಣ ದ್ವಂದ್ವಗಳನ್ನೂ, ಮಾನಾಪಮಾನವನ್ನೂ ಸಹಿಸುವ ಕ್ಷಮಾಶೀಲರಾದ, ವಾತ್ಸಲ್ಯಪೂರ್ಣರಾದ, ಗುರುಶುಶ್ರೂಷೆಯನ್ನು ಮಾಡುವ, ಅಹಂಕಾರ ರಹಿತರಾದ ಶ್ರೇಷ್ಠ ಮನುಷ್ಯರು ಹೋಗುತ್ತಾರೆ.

ಯಃ ಸರ್ವಮಾಂಸಾನಿ ನ ಭಕ್ಷಯೀತ
ಪುಮಾನ್ ಸದಾ ಯಾವದಂತಾಯ ಯುಕ್ತಃ ।
ಮಾತಾಪಿತ್ರೋರರ್ಚಿತಾ ಸತ್ಯಯುಕ್ತಃ
ಶುಶ್ರೂಷಿತಾ ಬ್ರಾಹ್ಮಣಾನಾಮನಿಂದ್ಯಃ ॥೧೦॥

ಅಕ್ರೋಧನೋ ಗೋಷು ತಥಾ ದ್ವಿಜೇಷು
ಧರ್ಮೇ ರತೋ ಗುರುಶುಶ್ರೂಷಕಶ್ಚ ।
ಯಾವಜ್ಜೀವಂ ಸತ್ಯವೃತ್ತೇ ರತಶ್ಚ
ದಾನೇ ರತೋ ಯಃ ಕ್ಷಮೀ ಚಾಪರಾಧೇ ॥೧೧॥

ಮೃದುರ್ದಾಂತೋ ದೇವಪರಾಯಣಶ್ಚ
ಸರ್ವಾತಿಥಿಶ್ಚಾಪಿ ತಥಾ ದಯಾವಾನ್ ।
ಈದೃಗ್ಗುಣೋ ಮಾನವಃ ಸಂಪ್ರಯಾತಿ
ಲೋಕಂ ಗವಾಂ ಶಾಶ್ವತಂ ಚಾವ್ಯಯಂ ಚ ॥೧೨॥

ಎಲ್ಲ ಮಾಂಸಗಳನ್ನು ತ್ಯಜಿಸಿದವನು, ಜೀವನದ ಕೊನೆಯವರೆಗೆ ಒಳ್ಳೆಯ ವ್ರತವನ್ನು ಧರಿಸಿದವನು, ತಂದೆ-ತಾಯಿಗಳ ಸೇವೆಯನ್ನು ಮಾಡಿದವನು, ಸತ್ಯವಚನ ಯುಕ್ತನಾದವನು, ಬ್ರಾಹ್ಮಣರ ಸೇವೆಯನ್ನು ಮಾಡುವವನು, ಅನಿಂದಿತನಾದವನು, ಗೋ-ಬ್ರಾಹ್ಮಣರಲ್ಲಿ ಕ್ರೋಧವನ್ನು ಮಾಡದವನು, ಧರ್ಮದಲ್ಲಿ ರತನಾದವನು, ಗುರುಗಳ ಶುಶ್ರೂಷೆಯನ್ನು ಮಾಡುವವನು, ಜೀವಿಸುವವರೆಗೂ ಶುಭ ನಡತೆಯಲ್ಲಿ ನಿರತನಾದವನು, ದಾನದಲ್ಲಿ ರತನಾದವನು, ಅಪರಾಧ ಮಾಡಿದವರನ್ನು ಕ್ಷಮಿಸುವವನು, ಮೃದುಸ್ವಭಾವದವನು, ಇಂದ್ರಿಯನಿಗ್ರಹವುಳ್ಳವನು, ದೇವತೆಗಳಲ್ಲಿ ಭಕ್ತಿಯುಳ್ಳವನು, ಸರ್ವಾತಿಥಿಯಾದವನು, ದಯಾಯುಕ್ತನಾದವನು - ಇಂತಹ ಮನುಷ್ಯನು ಶಾಶ್ವತವೂ ಮತ್ತು ಅವ್ಯಯವೂ ಆದ ಗೋಲೋಕಕ್ಕೆ ಹೋಗುತ್ತಾನೆ.

ನ ಪಾರದಾರೀ ಪಶ್ಯತಿ ಲೋಕಮೇನಂ
ನ ವೈ ಗುರುಘ್ನೋ ನ ಮೃಷಾಪ್ರಲಾಪೀ ।
ಸದಾऽಪವಾದೀ ಬ್ರಾಹ್ಮಣಃ ಶಾಂತವೇದೋ
ದೋಷೈರನ್ಯೈರ್ಯಶ್ಚ ಯುಕ್ತೋ ದುರಾತ್ಮಾ ॥೧೩॥

ಪರಪತ್ನಿಯರ ಸ್ವರ್ಶವನ್ನು ಮಾಡುವವನು, ಗುರುಹತ್ಯೆಯನ್ನು ಮಾಡುವವವನು, ಅನೃತವನ್ನು ನುಡಿಯುವವನು, ಯಾವಾಗಲೂ ನಿಂದಿಸುವವನು, ವೇದಾಧ್ಯಯನ ಮಾಡದ ಬ್ರಾಹ್ಮಣ, ಇನ್ನೂ ಬೇರೆ ದೋಷದಿಂದ ಕೂಡಿ ದುಷ್ಟನಾದವನು ಆ ಲೋಕಗಳನ್ನು ನೋಡುವುದಿಲ್ಲ.

ನ ಮಿತ್ರಧ್ರುಗ್ ನೈಕೃತಿಕಃ ಕೃತಘ್ನಃ
ಶಠೋऽನೃಜುರ್ಧರ್ಮವಿದ್ವೇಷಕಶ್ಚ ।
ನ ಬ್ರಹ್ಮಹಾ ಮನಸಾಪಿ ಪ್ರಪಶ್ಯೇದ್
ಗವಾಂ ಲೋಕಂ ಪುಣ್ಯಕೃತಾಂ ನಿವಾಸಮ್ ॥೧೪॥

ಮಿತ್ರದ್ರೋಹವನ್ನು ಮಾಡಿದವನು, ಮೋಸಗಾರನಾದವನು, ಕೃತಘ್ನನಾದವನು, ದುರಹಂಕಾರಿಯಾದವನು, ಆರ್ಜವವಿಲ್ಲದವನು, ಧರ್ಮದ್ವೇಷಿಯಾದವನು, ಬ್ರಹ್ಮಹತ್ಯೆಯನ್ನು ಮಾಡಿದವನು ಪುಣ್ಯಕರ್ಮಿಗಳ ನಿವಾಸಸ್ಥಾನವಾದ ಗೋಲೋಕವನ್ನು ಮನಸ್ಸಿನಿಂದಲೂ ನೋಡುವುದಿಲ್ಲ.

ಏತತ್ ತೇ ಸರ್ವಮಾಖ್ಯಾತಂ ನೈಪುಣೇನ ಸುರೇಶ್ವರ ।
ಗೋಪ್ರದಾನರತಾನಾಂ ತು ಫಲಂ ಶೃಣು ಶತಕ್ರತೋ ॥೧೫॥

ಎಲೈ ಸುರೇಶ್ವರನೇ, ಇದೆಲ್ಲವನ್ನೂ ನಿನಗೆ ಸೂಕ್ಷ್ಮವಾಗಿ ಹೇಳಿದ್ದೇನೆ. ಎಲೈ ಶತಕ್ರತುವೇ, ಗೋಪ್ರದಾನದಲ್ಲಿ ನಿರತರಾದವರಿಗೆ ದೊರೆಯುವ ಫಲವನ್ನು ಕೇಳು.

ದಾಯಾದ್ಯಲಬ್ಧೈರರ್ಥೈರ್ಯೋ ಗಾಃ ಕ್ರೀತ್ವಾ ಸಂಪ್ರಯಚ್ಛತಿ ।
ಧರ್ಮಾರ್ಜಿತಧನಕ್ರೀತಾನ್ ಸ ಲೋಕಾನಶ್ನುತೇऽಕ್ಷಯಾನ್ ॥೧೬॥

ಪಿತ್ರಾರ್ಜಿತವಾದ ಧನದಿಂದ ಯಾವನು ಗೋವುಗಳನ್ನು ಕ್ರಯ ಮಾಡಿ ದಾನ ಮಾಡುತ್ತಾನೆಯೋ ಅವನು ಧರ್ಮದಿಂದ ಸಂಪಾದಿಸಿದ ಧನದಿಂದ ಕ್ರಯ ಮಾಡಿದಂತಹ ಅಕ್ಷಯ ಲೋಕಗಳನ್ನು ಹೊಂದುತ್ತಾನೆ.

ಯೋ ವೈ ದ್ಯೂತೇ ಧನಂ ಜಿತ್ವಾ ಗಾಃ ಕ್ರೀತ್ವಾ ಸಂಪ್ರಯಚ್ಛತಿ ।
ಸ ದಿವ್ಯಮಯುತಂ ಶಕ್ರ ವರ್ಷಾಣಾಂ ಫಲಮಶ್ನುತೇ ॥೧೭॥

ಯಾವನು ದ್ಯೂತದಲ್ಲಿ ಧನವನ್ನು ಗೆದ್ದು ಗೋವುಗಳನ್ನು ಕ್ರಯಮಾಡಿ ದಾನ ಮಾಡುತ್ತಾನೆಯೋ ಅವನು ಹತ್ತು ಸಹಸ್ರ ವರ್ಷಗಳ ಕಾಲ ದಿವ್ಯಫಲವನ್ನು ಅನುಭವಿಸುತ್ತಾನೆ.

ದಾಯಾದ್ಯಾ ಯಸ್ಯ ವೈ ಗಾವೋ ನ್ಯಾಯಪೂರ್ವೈರುಪಾರ್ಜಿತಾಃ ।
ಪ್ರದತ್ತಾಸ್ತಾಃ ಪ್ರದಾತೃಣಾಂ ಸಂಭವಂತ್ಯಕ್ಷಯಾ ಧ್ರುವಾಃ ॥೧೮॥

ಯಾರಿಗೆ ಗೋವುಗಳು ಪಿತೃವಿನ ಆಸ್ತಿಯಾಗಿ ಬಂದಿವೆಯೋ ಮತ್ತು ಯಾವ ಗೋವುಗಳನ್ನು ನ್ಯಾಯಪೂರ್ವಕವಾದ ಧನದಿಂದ ಗಳಿಸಿದ್ದಾರೆಯೋ ಅಂತಹ ಗೋವುಗಳನ್ನು ದಾನ ಮಾಡುವವರಿಗೆ ಅಕ್ಷಯವೂ, ಶಾಶ್ವತವೂ ಆದ ಲೋಕಗಳು ಉಂಟಾಗುತ್ತದೆ.

ಪ್ರತಿಗೃಹ್ಯ ಚ ಯೋ ದದ್ಯಾದ್ ಗಾಃ ಸುಶುದ್ಧೇನ ಚೇತಸಾ ।
ತಸ್ಯಾಪೀಹಾಕ್ಷಯಾಲ್ಲೋಕಾನ್ ಧ್ರುವಾನ್ ವಿದ್ಧಿ ಶಚೀಪತೇ ॥೧೯॥

ಎಲೈ ಶಚೀಪತಿಯೇ, ಯಾವನು ತನಗೆ ದಾನವಾಗಿ ಬಂದ ಗೋವುಗಳನ್ನು ಶುದ್ಧವಾದ ಮನಸ್ಸಿನಿಂದ ದಾನ ಮಾಡುತ್ತಾನೆಯೋ ಅವನಿಗೂ ಸಹ ಶಾಶ್ವತವೂ, ಅಕ್ಷಯವೂ ಆದ ಲೋಕಗಳು ದೊರೆಯುತ್ತವೆ ಎಂದು ತಿಳಿ.

ಜನ್ಮಪ್ರಭೃತಿ ಸತ್ಯಂ ಚ ಯೋ ಬ್ರೂಯಾನ್ನಿಯತೇಂದ್ರಿಯಃ ।
ಗುರುದ್ವಿಜಸಹಃ ಕ್ಷಾಂತಸ್ತಸ್ಯ ಗೋಭಿಃ ಸಮಾ ಗತಿಃ ॥೨೦॥

ಯಾವನು ಸತ್ಯವಚನನಾಗಿರುತ್ತಾನೆಯೋ, ನಿಯತೇಂದ್ರಿಯನೋ, ಗುರುಗಳನ್ನೂ ಬ್ರಾಹ್ಮಣರನ್ನೂ ಸಹಿಸಿಕೊಳ್ಳುತ್ತಾನೆಯೋ, ಕ್ಷಮಾಗುಣಯುಕ್ತನಾಗಿರುತ್ತಾನೆಯೋ ಅವನಿಗೆ ಗೋವುಗಳಿಗೆ (ಗೋದಾನ ಮಾಡಿದವನಿಗೆ) ಉಂಟಾದ ಸದ್ಗತಿಯೇ ಉಂಟಾಗುತ್ತದೆ.

ನ ಜಾತು ಬ್ರಾಹ್ಮಣೋ ವಾಚ್ಯೋ ಯದವಾಚ್ಯಂ ಶಚೀಪತೇ ।
ಮನಸಾ ಗೋಷು ನ ದ್ರುಹ್ಯೇದ್ ಗೋವೃತ್ತಿರ್ಗೋನುಕಂಪಕಃ ॥೨೧॥

ಸತ್ಯೇ ಧರ್ಮೇ ಚ ನಿರತಸ್ತಸ್ಯ ಶಕ್ರ ಫಲಂ ಶೃಣು ।
ಗೋಸಹಸ್ರೇಣ ಸಮಿತಾ ತಸ್ಯ ಧೇನುರ್ಭವತ್ಯುತ ॥೨೨॥

ಎಲೈ ಶಚೀಪತಿಯೇ, ಬ್ರಾಹ್ಮಣನಿಗೆ ಎಂದೂ ಆಡಬಾರದ ಮಾತುಗಳನ್ನು ಆಡದೆ ಗೋವುಗಳಿಗೆ ಮನಸ್ಸಿನಿಂದಲೂ ದ್ರೋಹವನ್ನು ಮಾಡದೆ, ಗೋವುಗಳ ಮೇಲೆ ಅನುಕಂಪವನ್ನು ಹೊಂದಿ, ಗೋವೃತ್ತಿಯನ್ನು ಮಾಡಿ (ಗೋವ್ರತವನ್ನು ಧರಿಸಿ), ಸತ್ಯದಲ್ಲಿಯೂ, ಧರ್ಮದಲ್ಲಿಯೂ ನಿರತನಾದವನ ಫಲವನ್ನು ಕೇಳು. ಎಲೈ ಶಕ್ರನೇ, ಅವನು ದಾನ ಮಾಡುವ ಒಂದೊಂದು ಧೇನುವೂ ಸಹಸ್ರ ಧೇನುವಿಗೆ ಸಮವಾಗುತ್ತದೆ.

ಕ್ಷತ್ರಿಯಸ್ಯ ಗುಣೈರೇಭಿರನ್ವಿತಸ್ಯ ಫಲಂ ಶೃಣು ।
ತಸ್ಯಾಪಿ ಶತತುಲ್ಯಾ ಗೌರ್ಭವತೀತಿ ವಿನಿಶ್ಚಯಃ ॥೨೩॥

ಇಂತಹ ಗುಣಗಳಿಂದ ಕೂಡಿದ ಕ್ಷತ್ರಿಯನ ದಾನ ಫಲವನ್ನು ಕೇಳು. ಅವನಿಗೂ ಸಹ ಒಂದೊಂದು ಗೋವೂ ನೂರು ಗೋವುಗಳಿಗೆ ಸಮವಾಗುತ್ತದೆ ಎಂಬುದು ನಿಶ್ಚಿತವಾದುದು.

ವೈಶ್ಯಸ್ಯೈತೇ ಯದಿ ಗುಣಾಸ್ತಸ್ಯ ಪಂಚಾಶತಂ ಭವೇತ್ ।
ಶೂದ್ರಸ್ಯಾಪಿ ವಿನೀತಸ್ಯ ಚತುರ್ಭಾಗಫಲಂ ಸ್ಮೃತಮ್ ॥೨೪॥

ವೈಶ್ಯನಲ್ಲಿ ಈ ಗುಣವಿದ್ದರೆ ಆ ಒಂದೊಂದು ಗೋವೂ ಐವತ್ತು ಗೋವುಗಳಿಗೆ ಸಮವಾಗುತ್ತದೆ. ವಿನಯಶಾಲಿಯಾದ ಶೂದ್ರನಿಗೆ ಅದರ ನಾಲ್ಕನೆಯ ಒಂದು ಭಾಗದ ಫಲವು ದೊರೆಯುತ್ತದೆ.

ಏತಚ್ಚೈವಂ ಯೋऽನುತಿಷ್ಠೇತ ಯುಕ್ತಃ
ಸತ್ಯೇನ ಯುಕ್ತೋ ಗುರುಶುಶ್ರೂಷಯಾ ಚ ।
ದಾಂತಃ ಕ್ಷಾಂತೋ ದೇವತಾರ್ಚೀ ಪ್ರಶಾಂತಃ
ಶುಚಿರ್ಬುದ್ಧೋ ಧರ್ಮಶೀಲೋऽನಹಂವಾಕ್ ॥೨೫॥

ಮಹತ್ಫಲಂ ಪ್ರಾಪ್ನುತೇ ಸ ದ್ವಿಜಾಯ
ದತ್ತ್ವಾ ದೋಗ್ಧ್ರೀಂ ವಿಧಿನಾನೇನ ಧೇನುಮ್ ।
ನಿತ್ಯಂ ದದ್ಯಾದೇಕಭಕ್ತಃ ಸದಾ ಚ
ಸತ್ಯೇ ಸ್ಥಿತೋ ಗುರುಶುಶ್ರೂಷಿತಾ ಚ ॥೨೬॥

ಇದೆಲ್ಲವನ್ನೂ ಹೀಗೆ ಅನುಷ್ಠಾನ ಮಾಡಿ ಸತ್ಯವಚನದಿಂದಲೂ, ಗುರು ಶುಶ್ರೂಷೆಯಿಂದಲೂ ಕೂಡಿದವನಾಗಿ, ಇಂದ್ರಿಯನಿಗ್ರಹವನ್ನೂ, ಕ್ಷಮಾಗುಣವನ್ನೂ ಹೊಂದಿ ದೇವತಾರ್ಚನೆಯನ್ನು ಮಾಡುವವನಾಗಿ ಪ್ರಶಾಂತನೂ, ಶುಚಿಯೂ, ವಿವೇಕ ಉಳ್ಳವನೂ ಧರ್ಮಶೀಲನೂ, ಅಹಂಕಾರದ ಮಾತುಗಳನ್ನು ಆಡದವನೂ ಆದವನು ಈ ವಿಧಿಯಿಂದ ಬ್ರಾಹ್ಮಣನಿಗೆ ಹಾಲನ್ನು ಕರೆಯುವ ಹಸುವನ್ನು ದಾನ ಮಾಡಿ ಮಹಾಫಲವನ್ನು ಪಡೆಯುತ್ತಾನೆ. ನಿತ್ಯವೂ ಏಕಭಕ್ತನಾಗಿ (ಒಂದೇ ಹೊತ್ತು ಭೋಜನ ಮಾಡುವವನಾಗಿ) ಸದಾ ಸತ್ಯದಲ್ಲಿ ರತನಾಗಿ ಗುರುಶುಶ್ರೂಷೆಯನ್ನು ಮಾಡುವವನು ಯಾವಾಗಲೂ ಗೋದಾನವನ್ನು ಮಾಡಬೇಕು (ಅಂತಹವನು ಮಹಾಫಲವನ್ನು ಹೊಂದುತ್ತಾನೆ).

ವೇದಾಧ್ಯಾಯೀ ಗೋಷು ಯೋ ಭಕ್ತಿಮಾಂಶ್ಚ
ನಿತ್ಯಂ ದೃಷ್ಟ್ವಾ ಯೋಽಭಿನಂದೇತ ಗಾಶ್ಚ ।
ಆ ಜಾತಿತೋ ಯಶ್ಚ ಗವಾಂ ನಮೇತ
ಇದಂ ಫಲಂ ಶಕ್ರ ನಿಬೋಧ ತಸ್ಯ ॥೨೭॥

ವೇದಾಧ್ಯಯನವನ್ನು ಮಾಡಿ, ಗೋವುಗಳಲ್ಲಿ ಯಾವಾಗಲೂ ಭಕ್ತಿಯನ್ನು ಹೊಂದಿ, ಗೋವುಗಳನ್ನು ನೋಡಿ ಯಾವಾಗಲೂ ಸಂತೋಷಪಡುತ್ತಾ, ಜನ್ಮದಾರಭ್ಯ ಗೋವುಗಳಿಗೆ ನಮಸ್ಕಾರ ಮಾಡುವವನು ಎಲೈ ಶಕ್ರನೇ, ಈ ಫಲವನ್ನು ಹೊಂದುವನೆಂದು ತಿಳಿ.

ಯತ್ ಸ್ಯಾದಿಷ್ಟ್ವಾ ರಾಜಸೂಯೇ ಫಲಂ ತು
ಯತ್ ಸ್ಯಾದಿಷ್ಟ್ವಾ ಬಹುನಾ ಕಾಂಚನೇನ ।
ಏತತ್ತುಲ್ಯಂ ಫಲಮಸ್ಯಾಹುರಗ್ರ್ಯಂ
ಸರ್ವೇ ಸಂತಸ್ತ್ವೃಷಯೋ ಯೇ ಚ ಸಿದ್ಧಾಃ ॥೨೮॥

ರಾಜಸೂಯ ಯಾಗವನ್ನು ಮಾಡಿದರೆ ಏನು ಫಲವೋ, ಬಹು ಸುವರ್ಣ ದಾನವನ್ನು ಮಾಡಿ ಯಾಗವನ್ನು ಮಾಡಿದರೆ ಏನು ಫಲವೋ, ಅದಕ್ಕೆ ಸಮನಾದ ಶ್ರೇಷ್ಠವಾದ ಫಲವು ಗೋದಾನ ಮಾಡಿದವನಿಗೆ ಬರುವುದೆಂದು ಎಲ್ಲ ಸಜ್ಜನರೂ, ಋಷಿಗಳೂ ಮತ್ತು ಸಿದ್ಧರೂ ಹೇಳುತ್ತಾರೆ.

ಯೋಽಗ್ರಂ ಭಕ್ತಾನ್ ಕಿಂಚಿದಪ್ರಾಶ್ಯ ದದ್ಯಾದ್
ಗೋಭ್ಯೋ ನಿತ್ಯಂ ಗೋವ್ರತೀ ಸತ್ಯವಾದೀ ।
ಶಾಂತೋ ಬುದ್ಧೋ ಗೋಸಹಸ್ರಸ್ಯ ಪುಣ್ಯಂ
ಸಂವತ್ಸರೇಣಾಪ್ನುಯಾತ್ ಪುಣ್ಯಶೀಲಃ ॥೨೯॥

ಯಾವನು ತಾನು ಏನನ್ನೂ ತಿನ್ನುವುದಕ್ಕಿಂತ ಮೊದಲೇ ನಿತ್ಯವೂ ಗೋವುಗಳಿಗೆ ಗೋಗ್ರಾಸವನ್ನು ಕೊಟ್ಟು ಗೋವ್ರತವನ್ನು ಧರಿಸುತ್ತಾನೆಯೋ, ಸತ್ಯವನ್ನು ನುಡಿಯುತ್ತಾನೆಯೋ, ಶಾಂತನೂ, ವಿವೇಕಿಯೂ, ಪುಣ್ಯಶೀಲನೂ ಆದ ಅವನು ಒಂದು ಸಂವತ್ಸರದ ಕಾಲ ಹೀಗೆ ಮಾಡಿದರೆ (ಪ್ರತ್ಯಕ್ಷ ಗೋದಾನ ಮಾಡದಿದ್ದರೂ) ಸಹಸ್ರ ಗೋದಾನ ಮಾಡಿದ ಪುಣ್ಯವನ್ನು ಪಡೆಯುತ್ತಾನೆ.

ಯ ಏಕಂ ಭಕ್ತಮಶ್ನೀಯಾದ್ ದದ್ಯಾದೇಕಂ ಗವಾಂ ಚ ಯತ್ ।
ದಶ ವರ್ಷಾಣ್ಯನಂತಾನಿ ಗೋವ್ರತೀ ಗೋನುಕಂಪಕಃ ॥೩೦॥

ಯಾವನು ಗೋವುಗಳಲ್ಲಿ ಅನುಕಂಪವನ್ನು ಹೊಂದಿ ಏಕಭಕ್ತನಾಗಿ ಗೋವುಗಳಿಗೆ ಗ್ರಾಸವನ್ನು ಹತ್ತುವರ್ಷಗಳ ಕಾಲ ಕೊಟ್ಟು ಗೋವ್ರತವನ್ನು ಧರಿಸುತ್ತಾನೆಯೋ ಅವನು ಅನಂತ ಸುಖವನ್ನು ಪಡೆಯುತ್ತಾನೆ.

ಏಕೇನೈವ ಚ ಭಕ್ತೇನ ಯಃ ಕ್ರೀತ್ವಾ ಗಾಂ ಪ್ರಯಚ್ಛತಿ ।
ಯಾವಂತಿ ತಸ್ಯ ಪ್ರೋಕ್ತಾನಿ ದಿವಸಾನಿ ಶತಕ್ರತೋ ।
ತಾವಚ್ಛತಾನಾಂ ಸ ಗವಾಂ ಫಲಮಾಪ್ನೋತಿ ಶಾಶ್ವತಮ್ ॥೩೧॥

ಎಲೈ ಶತಕ್ರತುವೇ, ಯಾವನು ಒಂದೇ ಹೊತ್ತು ಊಟ ಮಾಡಿ ಉಳಿದ ಧನದಿಂದ ಗೋವನ್ನು ಕ್ರಯ ಮಾಡಿ ದಾನ ಮಾಡುತ್ತಾನೆಯೋ ಅವನು ಎಷ್ಟು ದಿನಗಳವರೆಗೆ ಹೀಗೆ ಮಾಡಿರುತ್ತಾನೆಯೋ ಅಷ್ಟು ನೂರು ವರ್ಷಗಳ ಕಾಲ ನಿತ್ಯವೂ ಗೋದಾನ ಮಾಡಿದ ಶಾಶ್ವತವಾದ ಫಲವನ್ನು ಹೊಂದುತ್ತಾನೆ.

ಬ್ರಾಹ್ಮಣಸ್ಯ ಫಲಂ ಹೀದಂ ಕ್ಷತ್ರಿಯೇಽಭಿಹಿತಂ ಶೃಣು ।
ಪಂಚವಾರ್ಷಿಕಮೇತತ್ತು ಕ್ಷತ್ರಿಯಸ್ಯ ಫಲಂ ಸ್ಮೃತಮ್ ।
ತತೋಽರ್ಧೇನ ತು ವೈಶ್ಯಸ್ಯ ಶೂದ್ರೋ ವೈಶ್ಯಾರ್ಧತಃ ಸ್ಮೃತಃ ॥೩೨॥

ಇದು ಬ್ರಾಹ್ಮಣನಿಗೆ ದೊರೆಯುವ ಫಲ. ಕ್ಷತ್ರಿಯನಿಗೆ ದೊರೆಯುವ ಫಲವನ್ನು ಕೇಳು. ಕ್ಷತ್ರಿಯನಿಗೆ ಐದು ವರ್ಷಗಳ ಕಾಲ ವ್ರತವನ್ನು ಮಾಡಿದರೆ ಈ ಫಲವೆಂದು ಹೇಳಲ್ಪಡುತ್ತದೆ. ಅದರ ಅರ್ಧದಷ್ಟು ವೈಶ್ಯನಿಗೆ, ವೈಶ್ಯನ ಅರ್ಧದಷ್ಟು ಶೂದ್ರನಿಗೆ ಫಲವೆಂದು ಹೇಳಲ್ಪಡುತ್ತದೆ.

ಯಶ್ಚಾತ್ಮವಿಕ್ರಯಂ ಕೃತ್ವಾ ಗಾಃ ಕ್ರೀತ್ವಾ ಸಂಪ್ರಯಚ್ಛತಿ ।
ಯಾವತೀಃ ಸ್ಪರ್ಶಯೇದ್ಗಾ ವೈ ತಾವತ್ತು ಫಲಮಶ್ನುತೇ ।
ಲೋಮ್ನಿ ಲೋಮ್ನಿ ಮಹಾಭಾಗ ಲೋಕಾಶ್ಚಾಸ್ಯಾಕ್ಷಯಾಃ ಸ್ಮೃತಾಃ ॥೩೩॥

ಯಾವನು ತನ್ನನ್ನೇ ಮಾರಿಕೊಂಡು ಬಂದ ಧನದಿಂದ ಗೋವುಗಳನ್ನು ಕ್ರಯ ಮಾಡಿ ದಾನ ಮಾಡುತ್ತಾನೆಯೋ ಅವನು ಎಷ್ಟು ಗೋದಾನ ಮಾಡುತ್ತಾನೆಯೋ ಅಷ್ಟು ಫಲವನ್ನು ಹೊಂದುತ್ತಾನೆ. ಎಲೈ ಮಹಾನುಭಾವನೇ, ಆ ಗೋವುಗಳಲ್ಲಿ ಇರುವ ಲೋಮಗಳ ಸಂಖ್ಯೆಗೆ ಸಮಾನವಾದ ವರ್ಷಗಳ ಕಾಲದವರೆಗೂ ಅಕ್ಷಯ ಲೋಕವನ್ನು ಹೊಂದುತ್ತಾನೆ.

ಸಂಗ್ರಾಮೇಷ್ವರ್ಜಯಿತ್ವಾ ತು ಯೋ ವೈ ಗಾಃ ಸಂಪ್ರಯಚ್ಛತಿ ।
ಆತ್ಮವಿಕ್ರಯತುಲ್ಯಾಸ್ತಾಃ ಶಾಶ್ವತಾ ವಿದ್ಧಿ ಕೌಶಿಕ ॥೩೪॥

ಯುದ್ಧದಲ್ಲಿ ಗೆದ್ದು ಸಂಪಾದಿಸಿದ ಗೋವುಗಳನ್ನು ಯಾವನು ದಾನ ಮಾಡುತ್ತಾನೆಯೋ ಎಲೈ ಕೌಶಿಕನೇ, ಅವನ ಆ ದಾನವು ಆತ್ಮವಿಕ್ರಯವನ್ನು ಮಾಡಿಕೊಂಡು ಮಾಡಿದ ಗೋದಾನಕ್ಕೆ ಸಮನಾಗಿ ಶಾಶ್ವತವಾದ ಫಲವನ್ನು ಕೊಡುತ್ತದೆ ಎಂದು ತಿಳಿ.

ಅಲಾಭೇ ಯೋ ಗವಾಂ ದದ್ಯಾತ್ ತಿಲಧೇನುಂ ಯತವ್ರತಃ ।
ದುರ್ಗಾತ್ ಸ ತಾರಿತೋ ಧೇನ್ವಾ ಕ್ಷೀರನದ್ಯಾಂ ಪ್ರಮೋದತೇ ॥೩೫॥

ಗೋವುಗಳು ದೊರೆಯದಿದ್ದರೆ ಯಾವನು ನಿಯತವ್ರತನಾಗಿ ತಿಲಧೇನುವನ್ನು ದಾನ ಮಾಡುತ್ತಾನೆಯೋ ಅಂತಹವನನ್ನು ಆ ಧೇನುವು ಕಷ್ಟಗಳಿಂದ ದಾಟಿಸಿ ಅವನು ಕ್ಷೀರನದಿಯಲ್ಲಿ ಸಂತೋಷಪಡುವಂತೆ ಮಾಡುತ್ತದೆ.

ನ ತ್ವೇವಾಸಾಂ ದಾನಮಾತ್ರಂ ಪ್ರಶಸ್ತಂ
ಪಾತ್ರಂ ಕಾಲೋ ಗೋವಿಶೇಷೋ ವಿಧಿಶ್ಚ ।
ಕಾಲಜ್ಞಾನಂ ವಿಪ್ರ ಗವಾಂತರಂ ಹಿ
ದುಃಖಂ ಹಾತುಂ ಪಾವಕಾದಿತ್ಯಭೂತಮ್ ॥೩೬॥

ಕೇವಲ ಗೋವುಗಳ ದಾನವಷ್ಟೇ ಪ್ರಶಸ್ತವಲ್ಲ. ಪಾತ್ರವನ್ನೂ, ಕಾಲವನ್ನೂ, ಗೋ ವಿಶೇಷವನ್ನೂ, ಗೋದಾನ ಮಾಡುವ ವಿಧಿಯನ್ನೂ ತಿಳಿದು ಮಾಡಬೇಕು. ಎಲೈ ಇಂದ್ರನೇ, ಅಗ್ನಿ-ಸೂರ್ಯರ ಭಯದಿಂದ ಗೋವುಗಳನ್ನು ರಕ್ಷಿಸುವಂತಹ ಗೋಶಾಲೆಯನ್ನು ಕಟ್ಟಿಸಿಕೊಡಬೇಕು.

ಸ್ವಾಧ್ಯಾಯಾಢ್ಯಂ ಶುದ್ಧಯೋನಿಂ ಪ್ರಶಾಂತಂ
ವೈತಾನಸ್ಥಂ ಪಾಪಭೀರುಂ ಕೃತಜ್ಞಮ್ ।
ಗೋಷು ಕ್ಷಾಂತಂ ನಾತಿತೀಕ್ಷ್ಣಂ ಶರಣ್ಯಂ
ವೃತ್ತಿಗ್ಲಾನಂ ತಾದೃಶಂ ಪಾತ್ರಮಾಹುಃ ॥೩೭॥

ಸ್ವಾಧ್ಯಾಯಶೀಲನಾದವನು, ಶುದ್ಧಕುಲದಲ್ಲಿ ಜನಿಸಿದವನು, ಪ್ರಶಾಂತನಾದವನು, ಹೋಮಾದಿ ನಿರತನಾದವನು, ಪಾಪಭೀರುವಾದವನು, ಕೃತಜ್ಞನಾದವನು, ಗೋವುಗಳಲ್ಲಿ ಕ್ಷಮೆಯುಳ್ಳವನು, ತೀಕ್ಷ್ಣಸ್ವಭಾವವಿಲ್ಲದವನು, ಶರಣಾಗತರಾದವರನ್ನು ರಕ್ಷಿಸುವವನು, ಜೀವನೋಪಾಯವಿಲ್ಲದವನು- ಅಂತಹವನು ಗೋದಾನಕ್ಕೆ ಯೋಗ್ಯನಾದ ಪಾತ್ರನೆಂದು ಹೇಳುತ್ತಾರೆ.

ವೃತ್ತಿಗ್ಲಾನೇ ಸೀದತಿ ಚಾತಿಮಾತ್ರಂ
ಕೃಷ್ಯರ್ಥಂ ವಾ ಹೋಮಹೇತೋಃ ಪ್ರಸೂತ್ಯಾಮ್ ।
ಗುರ್ವರ್ಥಂ ವಾ ಬಾಲಸಂವೃದ್ಧಯೇ ವಾ
ಧೇನುಂ ದದ್ಯಾದ್ ದೇಶಕಾಲೇ ವಿಶಿಷ್ಟೇ ॥೩೮॥

ಜೀವನೋಪಾಯವಿಲ್ಲದೆ ಬಹಳವಾಗಿ ಬಳಲಿದವನಿಗೆ ಅಥವಾ ಕೃಷಿಯನ್ನು ಮಾಡುವ ಸಲುವಾಗಿ ಅಥವಾ ಹೋಮವನ್ನು ಮಾಡುವ ಸಲುವಾಗಿ ಅಥವಾ ಪುತ್ರೋತ್ಸವ ನಿಮಿತ್ತವಾಗಿ ಅಥವಾ ಗುರುಗಳ ಹಿತಕ್ಕಾಗಿ ಅಥವಾ ಮಕ್ಕಳನ್ನು ಪೋಷಿಸುವುದಕ್ಕಾಗಿ ವಿಶಿಷ್ಟವಾದ ದೇಶಕಾಲಗಳಲ್ಲಿ ಗೋದಾನವನ್ನು ಮಾಡಬೇಕು.

ಅಂತರ್ಜಾತಾಃ ಸುಕ್ರಯಜ್ಞಾನಲಬ್ಧಾಃ
ಪ್ರಾಣೈಃ ಕ್ರೀತಾಸ್ತೇಜಸಾ ಯೌತಕಾಶ್ಚ ।
ಕೃಚ್ಛ್ರೋತ್ಸೃಷ್ಟಾಃ ಪೋಷಣಾಭ್ಯಾಗತಾಶ್ಚ
ದ್ವಾರೈರೇತೈರ್ಗೋವಿಶೇಷಾಃ ಪ್ರಶಸ್ತಾಃ ॥೩೯॥

ಮನೆಯಲ್ಲೇ ಜನಿಸಿದ, ಒಳ್ಳೆಯ ಕ್ರಯವನ್ನು ಕೊಟ್ಟುಕೊಂಡುಕೊಂಡ, ಜ್ಞಾನಕ್ಕೆ ಉಡುಗೊರೆಯಾಗಿ ಬಂದ, ಪ್ರಾಣದಿಂದಲೂ ಪರಾಕ್ರಮದಿಂದಲೂ ಕ್ರಯಮಾಡಿದ, ಬಳುವಳಿಯಾಗಿ ಬಂದ, ಯಜಮಾನನಿಂದ ಸಾಕಲಾರದೆ ತ್ಯಜಿಸಲ್ಪಟ್ಟುಪೋಷಣಕ್ಕಾಗಿ ಬಳಿಗೆ ಬಂದ ತನ್ನ ಇಂತಹ ದ್ವಾರಗಳಿಂದ ಬಂದ ಗೋವಿಶೇಷಗಳು ಪ್ರಶಸ್ತವಾದವುಗಳು.

ಬಲಾನ್ವಿತಾಃ ಶೀಲವಯೋಪಪನ್ನಾಃ
ಸರ್ವಾಃ ಪ್ರಶಂಸಂತಿ ಸುಗಂಧವತ್ಯಃ ।
ಯಥಾ ಹಿ ಗಂಗಾ ಸರಿತಾಂ ವರಿಷ್ಠಾ
ತಥಾರ್ಜುನೀನಾಂ ಕಪಿಲಾ ವರಿಷ್ಠಾ ॥೪೦॥

ಬಲದಿಂದ ಕೂಡಿದ, ಒಳ್ಳೆಯ ಶೀಲ ಮತ್ತು ವಯಸ್ಸಿನಿಂದ ಕೂಡಿದ, ಒಳ್ಳೆಯ ಗಂಧವುಳ್ಳ ಗೋವುಗಳನ್ನು ಎಲ್ಲರೂ ಪ್ರಶಂಸೆ ಮಾಡುತ್ತಾರೆ. ಹೇಗೆ ಗಂಗೆಯು ಎಲ್ಲ ನದಿಗಳಲ್ಲೂ ಶ್ರೇಷ್ಠಳೋ ಅದರಂತೆ ಗೋವುಗಳಲ್ಲಿ ಕಪಿಲಾ ಗೋವು ಶ್ರೇಷ್ಠವಾದುದು.

ತಿಸ್ರೋ ರಾತ್ರೀಸ್ತ್ವದ್ಭಿರುಪೋಷ್ಯ ಭೂಮೌ
ತೃಪ್ತಾ ಗಾವಸ್ತರ್ಪಿತೇಭ್ಯಃ ಪ್ರದೇಯಾಃ ।
ವತ್ಸೈಃ ಪುಷ್ಟೈಃ ಕ್ಷೀರಪೈಃ ಸುಪ್ರಚಾರಾ-
ಸ್ತ್ರ್ಯಹಂ ದತ್ತ್ವಾ ಗೋರಸೈರ್ವರ್ತಿತವ್ಯಮ್ ॥೪೧॥

ಮೂರು ರಾತ್ರಿಗಳ ಕಾಲ ವಿಶೇಷವಾಗಿ ಹುಲ್ಲು-ನೀರು ಇರುವ ಜಾಗಗಳಲ್ಲಿ ಗೋವುಗಳು ವಾಸ ಮಾಡುವಂತೆ ಮಾಡಿ ಚೆನ್ನಾಗಿ ಆಹಾರವನ್ನು ಸ್ವೀಕರಿಸಿದ ಆ ಗೋವುಗಳನ್ನು ಪುಷ್ಟವಾದ ಮತ್ತು ಹಾಲು ಕುಡಿಯುವ ಕರುಗಳ ಜೊತೆಯಲ್ಲಿ ತೃಪ್ತರಾದ ಬ್ರಾಹ್ಮಣರಿಗೆ ದಾನವನ್ನು ಮಾಡಿ ಮೂರು ದಿವಸಗಳ ಕಾಲ ಗೋರಸವನ್ನೇ ಆಹಾರವಾಗಿ ಸ್ವೀಕರಿಸಬೇಕು.

ದತ್ತ್ವಾ ಧೇನುಂ ಸುವ್ರತಾಂ ಸಾಧುವತ್ಸಾಂ
ಕಲ್ಯಾಣವೃತ್ತಾಮಪಲಾಯಿನೀಂ ಚ ।
ಯಾವಂತಿ ಲೋಮಾನಿ ಭವಂತಿ ತಸ್ಯಾಃ
ತಾವಂತಿ ವರ್ಷಾಣಿ ವಸತ್ಯಮುತ್ರ ॥೪೨॥

ಒಳ್ಳೆಯ ಶೀಲವುಳ್ಳ, ಸಾಧುವಾದ ಕರುವುಳ್ಳ, ಓಡಿ ಹೋಗದಿರುವ ಧೇನುವನ್ನು ದಾನ ಮಾಡಿದವನು ಆ ಗೋವಿನ ದೇಹದಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ವರ್ಷಗಳ ಕಾಲ ಪರಲೋಕದಲ್ಲಿ ವಾಸಿಸುತ್ತಾನೆ.

ತಥಾನಡ್ವಾಹಂ ಬ್ರಾಹ್ಮಣಾಯಾಥ ಧುರ್ಯಂ
ದತ್ತ್ವಾ ಯುವಾನಂ ಬಲಿನಂ ವಿನೀತಮ್ ।
ಹಲಸ್ಯ ವೋಢಾರಮನಂತವೀರ್ಯಂ
ಪ್ರಾಪ್ನೋತಿ ಲೋಕಾನ್ ದಶಧೇನುದಸ್ಯ ॥೪೩॥

ಹಾಗೆಯೇ ತರುಣವೂ, ಬಲಿಷ್ಠವೂ, ಪಳಗಿದುದೂ, ಉಳಲು ಸಮರ್ಥವಾದುದೂ, ಬಲಶಕ್ತಿಯುಳ್ಳದುದೂ ಆದ ಎತ್ತನ್ನು ಬ್ರಾಹ್ಮಣನಿಗೆ ದಾನ ಮಾಡಿದವನು ಹತ್ತು ಗೋದಾನವನ್ನು ಮಾಡಿದವನು ಹೊಂದುವ ಲೋಕಗಳನ್ನು ಹೊಂದುತ್ತಾನೆ.

ಕಾಂತಾರೇ ಬ್ರಾಹ್ಮಣಾನ್ ಗಾಶ್ಚ ಯಃ ಪರಿತ್ರಾತಿ ಕೌಶಿಕ ।
ಕ್ಷೇಮೇಣ ಚ ವಿಮುಚ್ಯೇತ ತಸ್ಯ ಪುಣ್ಯಫಲಂ ಶೃಣು ।
ಅಶ್ವಮೇಧಕ್ರತೋಸ್ತುಲ್ಯಂ ಫಲಂ ಭವತಿ ಶಾಶ್ವತಮ್ ॥೪೪॥

ಎಲೈ ಕೌಶಿಕನೇ, ಕಾಡಿನಲ್ಲಿ ಗೋವುಗಳನ್ನು ಮತ್ತು ಬ್ರಾಹ್ಮಣರನ್ನು ರಕ್ಷಿಸಿ, ಕ್ಷೇಮವನ್ನುಂಟು ಮಾಡಿ ಅವುಗಳನ್ನು ಕಷ್ಟದಿಂದ ಪಾರುಮಾಡುವವನು ಪಡೆಯುವ ಪುಣ್ಯಫಲಗಳನ್ನು ಕೇಳು. ಅವನಿಗೆ ಶಾಶ್ವತವಾದ ಅಶ್ವಮೇಧಯಾಗದ ಫಲವು ದೊರೆಯುತ್ತದೆ.

ಮೃತ್ಯುಕಾಲೇ ಸಹಸ್ರಾಕ್ಷ ಯಾಂ ವೃತ್ತಿಮನುಕಾಂಕ್ಷತೇ ।
ಲೋಕಾನ್ ಬಹುವಿಧಾನ್ ದಿವ್ಯಾನ್ ಯದ್ವಾಸ್ಯ ಹೃದಿ ವರ್ತತೇ ॥೪೫॥

ತತ್ಸರ್ವಂ ಸಮವಾಪ್ನೋತಿ ಕರ್ಮಣಾ ತೇನ ಮಾನವಃ ।
ಗೋಭಿಶ್ಚ ಸಮನುಜ್ಞಾತಃ ಸರ್ವತ್ರ ಸ ಮಹೀಯತೇ ॥೪೬॥

ಎಲೈ ಸಹಸ್ರಾಕ್ಷನೇ, ಮರಣಕಾಲದಲ್ಲಿ ಅವನು ಯಾವ ವೃತ್ತಿಯನ್ನು ಬಯಸುತ್ತಾನೆಯೋ ಅಥವಾ ಎಂತಹ ದಿವ್ಯಲೋಕಗಳನ್ನು ಬಯಸುತ್ತಾನೆಯೋ ಅಥವಾ ಮನಸ್ಸಿನಲ್ಲಿ ಬೇರೆ ಏನು ಆಸೆ ಇದೆಯೋ ಅವನು ತಾನು ಮಾಡಿದ ಕರ್ಮಗಳಿಂದ ಅವೆಲ್ಲವನ್ನೂ ಹೊಂದುತ್ತಾನೆ. ಗೋವುಗಳಿಂದ ಆಶೀರ್ವದಿಸಲ್ಪಟ್ಟು ಅವನು ಎಲ್ಲ ಕಡೆಯಲ್ಲಿಯೂ ಪೂಜಿಸಲ್ಪಡುತ್ತಾನೆ.

ಯಸ್ತ್ವೇತೇನೈವ ವಿಧಿನಾ ಗಾಂ ವನೇಷ್ವನುಗಚ್ಛತಿ ।
ತೃಣಗೋಮಯಪರ್ಣಾಶೀ ನಿಃಸ್ಪೃಹೋ ನಿಯತಃ ಶುಚಿಃ ॥೪೭॥

ಅಕಾಮಂ ತೇನ ವಸ್ತವ್ಯಂ ಮುದಿತೇನ ಶತಕ್ರತೋ ।
ಮಮ ಲೋಕೇ ಸುರೈಃ ಸಾರ್ಧಂ ಲೋಕೇ ಯತ್ರಾಪಿ ಚೇಚ್ಛತಿ ॥೪೮॥

ಯಾರು ಇದೇ ರೀತಿಯಿಂದ ತೃಣ, ಗೋಮಯ ಮತ್ತು ಎಲೆಗಳನ್ನು ತಿನ್ನುತ್ತಾ ನಿಸ್ಪೃಹನಾಗಿ ನಿಯತನಾಗಿ, ಶುಚಿಯಾಗಿ ಕಾಡಿನಲ್ಲಿ ಗೋವುಗಳನ್ನು ರಕ್ಷಿಸಲು ಹಿಂಬಾಲಿಸುತ್ತಾನೆಯೋ - ಎಲೈ ಶತಕ್ರತುವೇ, ಅಂತಹ ನಿಷ್ಕಾಮನೆಯಿಂದ ಸಂತೋಷದಿಂದ ಬದುಕುವ ಅವನು ನನ್ನ ಲೋಕದಲ್ಲಿ ದೇವತೆಗಳ ಜೊತೆಯಲ್ಲಿ ಇರುತ್ತಾನೆ ಅಥವಾ ಅವನು ಇಷ್ಟಪಡುವ ಲೋಕಗಳಿಗೆ ಹೋಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ತ್ರ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಾಲ್ಕನೆಯ ಅಧ್ಯಾಯ

ಗೋ ಅಪಹಾರದ ಫಲ

ಇಂದ್ರಃ

ಜಾನನ್ ಯೋ ಗಾಮಪಹರೇದ್ ವಿಕ್ರೀಯಾऽದ್ವಾರ್ಥಕಾರಣಾತ್ ।
ಏತದ್ ವಿಜ್ಞಾತುಮಿಚ್ಛಾಮಿ ಕಾ ನು ತಸ್ಯ ಗತಿರ್ಭವೇತ್ ॥೧॥

ಇಂದ್ರ– ಬುದ್ಧಿಪೂರ್ವಕವಾಗಿ ಯಾವನು ಗೋವನ್ನು ಅಪಹರಿಸುತ್ತಾನೆಯೋ ಅಥವಾ ಧನದ ಪ್ರಾಪ್ತಿಗಾಗಿ ಯಾವನು ಮಾರುತ್ತಾನೆಯೋ ಅವನಿಗೆ ಎಂತಹ ಗತಿಯಾಗುವುದೆಂದು ನಾನು ತಿಳಿಯಲು ಬಯಸುತ್ತೇನೆ.

ಬ್ರಹ್ಮಾ

ಭಕ್ಷಾರ್ಥಂ ವಿಕ್ರಯಾರ್ಥಂ ವಾ ಯೇऽಪಹಾರಂ ಹಿ ಕುರ್ವತೇ ।
ದಾನಾರ್ಥಂ ವಾ ಬ್ರಾಹ್ಮಣಾಯ ತತ್ರೇದಂ ಶ್ರೂಯತಾಂ ಫಲಮ್ ॥೨॥

ಬ್ರಹ್ಮಾ– ಆಹಾರಕ್ಕಾಗಿ (ಭಕ್ಷಿಸುವುದಕ್ಕಾಗಿ) ಅಥವಾ ಮಾರುವುದಕ್ಕಾಗಿ ಅಥವಾ ಬ್ರಾಹ್ಮಣನಿಗೆ ಕೊಡುವುದಕ್ಕಾಗಿ ಯಾರು ಗೋವನ್ನು ಅಪಹರಿಸುತ್ತಾರೆಯೋ ಅವರಿಗೆ ಉಂಟಾಗುವ ಈ ಫಲವನ್ನು ಕೇಳು.

ವಿಕ್ರಯಾರ್ಥಂ ಹಿ ಯೋ ಹಿಂಸ್ಯಾದ್ ಭಕ್ಷಯೇದ್ವಾ ನಿರಂಕುಶಃ ।
ಘಾತಯಾನಂ ಹಿ ಪುರುಷಂ ಯೇऽನುಮನ್ಯೇಯುರರ್ಥಿನಃ ॥೩॥

ಘಾತಕಃ ಖಾದಕೋ ವಾಪಿ ತಥಾ ಯಶ್ಚಾನುಮನ್ಯತೇ ।
ಯಾವಂತಿ ತಸ್ಯಾ ಲೋಮಾನಿ ತಾವದ್ ವರ್ಷಾಣಿ ಮಜ್ಜತಿ ॥೪॥

ಮಾರುವುದಕ್ಕೋಸ್ಕರ ಯಾವನು ಹಿಂಸೆಯನ್ನು ಮಾಡುತ್ತಾನೆಯೋ ಅಥವಾ ಗೋವನ್ನು ನಿಶ್ಶಂಕೆಯಿಂದ ಭಕ್ಷಿಸುತ್ತಾನೆಯೋ ಅಂತಹ ಸಂದರ್ಭದಲ್ಲಿ ಗೋಹತ್ಯೆಯನ್ನು ಮಾಡುವವನೂ, ಗೋಮಾಂಸವನ್ನು ಭಕ್ಷಿಸುವವನೂ, ಅದನ್ನು ಅನುಮೋದಿಸುವವನೂ ಸಹ ಗೋವಿನ ರೋಮದಷ್ಟು ವರ್ಷಗಳ ಕಾಲ ನರಕದಲ್ಲಿ ಮುಳುಗುತ್ತಾನೆ.

ಯೇ ದೋಷಾ ಯಾದೃಶಾಶ್ಚೈವ ದ್ವಿಜಯಜ್ಞೋಪಘಾತಕೇ ।
ವಿಕ್ರಯೇ ಚಾಪಹಾರೇ ಚ ತೇ ದೋಷಾ ವೈ ಸ್ಮೃತಾಃ ಪ್ರಭೋ ॥೫॥

ಎಲೈ ಪ್ರಭುವೇ, ಬ್ರಾಹ್ಮಣನ ಯಜ್ಞವನ್ನು ತಡೆದರೆ ಎಂತಹ ದೋಷವೋ ಅವೇ ದೋಷಗಳು ಗೋವನ್ನು ಮಾರಿದರೆ ಅಥವಾ ಅಪಹರಿಸಿದರೆ ಉಂಟಾಗುತ್ತವೆ.

ಅಪಹೃತ್ಯ ತು ಯೋ ಗಾಂ ವೈ ಬ್ರಾಹ್ಮಣಾಯ ಪ್ರಯಚ್ಛತಿ ।
ಯಾವದ್ದಾನೇ ಫಲಂ ತಸ್ಯಾಸ್ತಾವನ್ನಿರಯಮೃಚ್ಛತಿ ॥೬॥

ಕಳ್ಳತನವನ್ನು ಮಾಡಿ ಯಾವನು ಬ್ರಾಹ್ಮಣನಿಗೆ ಗೋದಾನವನ್ನು ಮಾಡುತ್ತಾನೆಯೋ ಅವನು ದಾನವನ್ನು ಮಾಡಿದರೆ ಎಷ್ಟು ವರ್ಷಗಳ ಕಾಲ ಫಲವಿದೆಯೋ ಅಷ್ಟು ವರ್ಷಗಳ ಕಾಲ ನರಕದಲ್ಲಿರುತ್ತಾನೆ.

ಸುವರ್ಣಂ ದಕ್ಷಿಣಾಮಾಹುರ್ಗೋಪ್ರದಾನೇ ಮಹಾದ್ಯುತೇ ।
ಸುವರ್ಣಂ ಪರಮಂ ಹ್ಯುಕ್ತಂ ದಕ್ಷಿಣಾರ್ಥಮಸಂಶಯಮ್ ॥೭॥

ಎಲೈ ಮಹಾದ್ಯುತಿಯೇ, ಗೋದಾನ ಕಾಲದಲ್ಲಿ ಸುವರ್ಣವನ್ನು ದಾನವಾಗಿ ಕೊಡಬೇಕೆಂದು ಹೇಳುತ್ತಾರೆ. ದಕ್ಷಿಣೆಗಳಲ್ಲಿ ಸುವರ್ಣವೇ ಅತ್ಯಂತ ಶ್ರೇಷ್ಠವಾದುದು. ಇದರಲ್ಲಿ ಸಂಶಯವಿಲ್ಲ.

ಗೋಪ್ರದಾನಂ ತಾರಯತೇ ಸಪ್ತ ಪೂರ್ವಾಂಸ್ತಥಾ ಪರಾನ್ ।
ಸುವರ್ಣಂ ದಕ್ಷಿಣಾಂ ದತ್ತ್ವಾ ತಾವದ್ ದ್ವಿಗುಣಮುಚ್ಯತೇ ॥೮॥

ಗೋದಾನವು ಹಿಂದಿನ ಏಳು ತಲೆಗಳನ್ನು ಮತ್ತು ಮುಂದಿನ ಏಳು ತಲೆಗಳನ್ನು ದಾಟಿಸುತ್ತದೆ. ಸುವರ್ಣದಕ್ಷಿಣೆಯನ್ನು ಕೊಟ್ಟರೆ ಅದರ ಎರಡರಷ್ಟು ಫಲ ಉಂಟಾಗುತ್ತದೆ.

ಸುವರ್ಣಂ ಪರಮಂ ದಾನಂ ಸುವರ್ಣಂ ದಕ್ಷಿಣಾ ಪರಾ ।
ಸುವರ್ಣಂ ಪಾವನಂ ಶಕ್ರ ಪಾವನಾನಾಂ ಪರಂ ಸ್ಮೃತಮ್ ॥೯॥

ಸುವರ್ಣದಾನವು ಶ್ರೇಷ್ಠವಾದ ದಾನ. ಸುವರ್ಣದಕ್ಷಿಣೆಯು ಶ್ರೇಷ್ಠವಾದ ದಕ್ಷಿಣೆ. ಎಲೈ ಶಕ್ರನೇ, ಸುವರ್ಣವು ಪವಿತ್ರವಾದುದು ಮತ್ತು ಪವಿತ್ರವಾದ ವಸ್ತುಗಳಲ್ಲಿ ಶ್ರೇಷ್ಠವಾದುದು ಎಂದು ಹೇಳಲ್ಪಡುತ್ತದೆ.

ಕುಲಾನಾಂ ಪಾವನಂ ಪ್ರಾಹುರ್ಜಾತರೂಪಂ ಶತಕ್ರತೋ ।
ಏಷಾ ಮೇ ದಕ್ಷಿಣಾ ಪ್ರೋಕ್ತಾ ಸಮಾಸೇನ ಮಹಾದ್ಯುತೇ ॥೧೦॥

ಎಲೈ ಶತಕ್ರತುವೇ, ಸುವರ್ಣರೂಪವಾದ ದಕ್ಷಿಣೆಯು ಕುಲಗಳನ್ನು ಪವಿತ್ರೀಕರಿಸುತ್ತದೆ ಎಂದು ಹೇಳುತ್ತಾರೆ. ಎಲೈ ಮಹಾದ್ಯುತಿಯೇ, ನಾನು ನಿನಗೆ ಸಂಕ್ಷೇಪವಾಗಿ ದಕ್ಷಿಣೆಯ ವಿಷಯವನ್ನು ಹೇಳಿದ್ದೇನೆ.

ಭೀಷ್ಮಃ

ಏತತ್ ಪಿತಾಮಹೇನೋಕ್ತಮಿಂದ್ರಾಯ ಭರತರ್ಷಭ ।
ಇಂದ್ರೋ ದಶರಥಾಯಾಹ ರಾಮಾಯಾಹ ಪಿತಾ ತಥಾ ॥೧೧॥

ಭೀಷ್ಮ- ಎಲೈ ಭರತಶ್ರೇಷ್ಠನೇ, ಇದನ್ನು ಪಿತಾಮಹರಾದ ಬ್ರಹ್ಮದೇವರು ಇಂದ್ರನಿಗೆ ಹೇಳಿದರು. ಇಂದ್ರನು ದಶರಥನಿಗೂ, ದಶರಥನು ರಾಮನಿಗೂ ಹೇಳಿದನು.

ರಾಘವೋಽಪಿ ಪ್ರಿಯಭ್ರಾತ್ರೇ ಲಕ್ಷ್ಮಣಾಯ ಯಶಸ್ವಿನೇ ।
ಋಷಿಭ್ಯೋ ಲಕ್ಷ್ಮಣೇನೋಕ್ತಮರಣ್ಯೇ ವಸತಾ ವಿಭೋ ॥೧೨॥

ಎಲೈ ವಿಭುವೇ, ರಾಘವನೂ ಸಹ ತನ್ನ ಪ್ರಿಯ ಸಹೋದರನೂ, ಕೀರ್ತಿವಂತನೂ ಆದ ಲಕ್ಷ್ಮಣನಿಗೆ ಹೇಳಿದನು. ಲಕ್ಷ್ಮಣನು ಅರಣ್ಯದಲ್ಲಿ ವಾಸ ಮಾಡುತ್ತಾ ಋಷಿಗಳಿಗೆ ಹೇಳಿದನು.

ಪಾರಂಪರ್ಯಾಗತಂ ಚೇದಮೃಷಯಃ ಸಂಶಿತವ್ರತಾಃ ।
ದುರ್ಧರಂ ಧಾರಯಾಮಾಸೂ ರಾಜಾನಶ್ಚೈವ ಧಾರ್ಮಿಕಾಃ ।
ಉಪಾಧ್ಯಾಯೇನ ಗದಿತಂ ಮಮ ಚೇದಂ ಯುಧಿಷ್ಠಿರ ॥೧೩॥

ಪರಂಪರೆಯಿಂದ ಬಂದ ಧರಿಸಲು ಕಷ್ಟವಾದ ಈ ಜ್ಞಾನವನ್ನು ಒಳ್ಳೆಯ ವ್ರತಧಾರಿಗಳಾದ ಮತ್ತು ಧಾರ್ಮಿಕರಾದ ಋಷಿಗಳು ಮತ್ತು ರಾಜರು ಧರಿಸಿದರು. ಎಲೈ ಯುಧಿಷ್ಠಿರನೇ, ನನ್ನ ಗುರುಗಳು ನನಗೆ ಇದನ್ನು ಹೇಳಿದರು.

ಯ ಇದಂ ಬ್ರಾಹ್ಮಣೋ ನಿತ್ಯಂ ವದೇದ್ ಬ್ರಾಹ್ಮಣಸಂಸದಿ ।
ಯಜ್ಞೇಷು ಗೋಪ್ರದಾನೇಷು ದ್ವಯೋರಪಿ ಸಮಾಗಮೇ ॥೧೪॥

ತಸ್ಯ ಲೋಕಾಃ ಕಿಲಾಕ್ಷಯ್ಯಾ ದೈವತ್ಯೈಃ ಸಹ ನಿತ್ಯದಾ ।
ಇತಿ ಬ್ರಹ್ಮಾ ಸ ಭಗವಾನುವಾಚ ಪರಮೇಶ್ವರಃ ॥೧೫॥

ಯಾವ ಬ್ರಾಹ್ಮಣನು ಇದನ್ನು ಬ್ರಾಹ್ಮಣ ಸಭೆಯಲ್ಲಿ ಅಥವಾ ಯಜ್ಞಗಳಲ್ಲಿ ಅಥವಾ ಗೋಪ್ರದಾನ ಕಾಲದಲ್ಲಿ ಅಥವಾ ಇಬ್ಬರು ಸಮಾಗಮವನ್ನು ಹೊಂದಿದಾಗ ನಿತ್ಯವೂ ಹೇಳುತ್ತಾನೆಯೋ ಅವನ ಲೋಕಗಳು ದೇವತೆಗಳ ಜೊತೆಯಲ್ಲಿ ಯಾವಾಗಲೂ ಅಕ್ಷಯವಾಗಿರುತ್ತವೆ ಎಂದು ಪರಮಪ್ರಭುಗಳೂ, ಪೂಜ್ಯರೂ ಆದ ಬ್ರಹ್ಮದೇವರು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬ್ರಹ್ಮೇಂದ್ರಸಂವಾದೇ ಗೋದಾನಪ್ರಶಂಸಾನಾಮ ಚತುರಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐದನೆಯ ಅಧ್ಯಾಯ

ವ್ರತನಿಯಮಫಲ

ಯುಧಿಷ್ಠಿರಃ

ವಿಸ್ರಂಭಿತೋಽಹಂ ಭವತಾ ಧರ್ಮಾನ್ ಪ್ರವದತಾ ವಿಭೋ ।
ಪ್ರವಕ್ಷ್ಯಾಮಿ ತು ಸಂದೇಹಂ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ವಿಭುವೇ, ಧರ್ಮವನ್ನು ನೀನು ಹೇಳುತ್ತಿರುವಂತೆ ನನಗೆ ವಿಶ್ವಾಸವುಂಟಾಗುತ್ತಿದೆ. ಎಲೈ ಪಿತಾಮಹನೇ, ನನ್ನ ಸಂಶಯವನ್ನು ಹೇಳುತ್ತೇನೆ, ಅದನ್ನು ಪರಿಹರಿಸು.

ವ್ರತಾನಾಂ ಕಿಂ ಫಲಂ ಪ್ರೋಕ್ತಂ ಕೀದೃಶಂ ವಾ ಮಹಾದ್ಯುತೇ ।
ನಿಯಮಾನಾಂ ಫಲಂ ಕಿಂ ಚ ಸ್ವಧೀತಸ್ಯ ಚ ಕಿಂ ಫಲಮ್ ॥೨॥

ಮಹಾದ್ಯುತಿಯೇ, ವ್ರತಗಳಿಗೆ ಯಾವ ಮತ್ತು ಎಂತಹ ಫಲ? ನಿಯಮಗಳಿಗೆ ಏನು ಫಲ? ಅಧ್ಯಯನಕ್ಕೆ ಏನು ಫಲ?

ದಮಸ್ಯೇಹ ಫಲಂ ಕಿಂ ಚ ವೇದಾನಾಂ ಧಾರಣೇ ಚ ಕಿಮ್ ।
ಅಧ್ಯಾಪನೇ ಫಲಂ ಕಿಂ ಚ ಸರ್ವಮಿಚ್ಛಾಮಿ ವೇದಿತುಮ್ ॥೩॥

ಈ ಲೋಕದಲ್ಲಿ ದಮಕ್ಕೆ ಫಲವೇನು? ವೇದಧಾರಣೆಯನ್ನು ಮಾಡಿದುದರ ಫಲವೇನು? ಅಧ್ಯಾಪನ ಮಾಡಿದುದರ ಫಲವೇನು? ನಾನು ಎಲ್ಲವನ್ನೂ ತಿಳಿಯಲು ಬಯಸುತ್ತೇನೆ.

ಅಪ್ರತಿಗ್ರಾಹಕೇ ಕಿಂ ಚ ಫಲಂ ಲೋಕೇ ಪಿತಾಮಹ ।
ತಸ್ಯ ಕಿಂ ಚ ಫಲಂ ದೃಷ್ಟಂ ಶ್ರುತಂ ಯಃ ಸಂಪ್ರಯಚ್ಛತಿ ॥೪॥

ಎಲೈ ಪಿತಾಮಹನೇ, ಲೋಕದಲ್ಲಿ ಪ್ರತಿಗ್ರಹ ಮಾಡದಿರುವವನಿಗೆ ಏನು ಫಲ? ಯಾವನು ದಾನವನ್ನು ಕೊಡುತ್ತಾನೆಯೋ ಅವನಿಗೆ ದೃಷ್ಟವಾದ ಮತ್ತು ಶ್ರುತವಾದ ಫಲವು ಯಾವುದು?

ಸ್ವಕರ್ಮನಿರತಾನಾಂ ಚ ಶೂರಾಣಾಂ ಚಾಪಿ ಕಿಂ ಫಲಮ್ ।
ಸತ್ಯೇ ಚ ಕಿಂ ಫಲಂ ಪ್ರೋಕ್ತಂ ಬ್ರಹ್ಮಚರ್ಯೇ ಚ ಕಿಂ ಫಲಮ್ ॥೫॥

ಸ್ವಕರ್ಮನಿರತನಾದ ಶೂರನಿಗೆ ಯಾವ ಫಲ? ಸತ್ಯಕ್ಕೆ ಯಾವ ಫಲ? ಬ್ರಹ್ಮಚರ್ಯಕ್ಕೆ ಯಾವ ಫಲ?

ಪಿತೃಶುಶ್ರೂಷಣೇ ಕಿಂ ಚ ಮಾತೃಶುಶ್ರೂಷಣೇ ತಥಾ ।
ಆಚಾರ್ಯಗುರುಶುಶ್ರೂಷಾಸ್ವನುಕ್ರೋಶಾನುಕಂಪನೇ ॥೬॥

ಪಿತೃಸೇವೆಗೆ ಯಾವ ಫಲ? ಮಾತೃಸೇವೆಗೆ ಯಾವ ಫಲ? ಆಚಾರ್ಯ ಗುರು ಶುಶ್ರೂಷೆಗೂ, ದಯೆ ಮತ್ತು ಭೂತೋಪಕಾರಗಳಿಗೂ ಯಾವ ಫಲ?

ಏತತ್ಸರ್ವಮಶೇಷೇಣ ಪಿತಾಮಹ ಯಥಾತಥಮ್ ।
ವೇತ್ತುಮಿಚ್ಛಾಮಿ ಧರ್ಮಜ್ಞ ಪರಂ ಕೌತೂಹಲಂ ಹಿ ಮೇ ॥೭॥

ಎಲೈ ಪಿತಾಮಹನೇ, ಧರ್ಮಜ್ಞನೇ, ಇದೆಲ್ಲವನ್ನೂ ನಾನು ಸರಿಯಾಗಿ ತಿಳಿದುಕೊಳ್ಳಲು ಇಚ್ಛಿಸುತ್ತೇನೆ. ಈ ವಿಷಯಗಳಲ್ಲಿ ನನಗೆ ಬಹಳ ಕುತೂಹಲವಿದೆ.

ತಸ್ಯ ಲೋಕಾಃ ಕಿಲಾಕ್ಷಯ್ಯಾ ದೈವತೈಃ ಸಹ ನಿತ್ಯದಾ ।
ಇತಿ ಬ್ರಹ್ಮಾ ಸ ಭಗವಾನುವಾಚ ಪರಮೇಶ್ವರಃ ॥೧೫॥

ಯಾವ ಬ್ರಾಹ್ಮಣನು ಇದನ್ನು ಬ್ರಾಹ್ಮಣ ಸಭೆಯಲ್ಲಿ ಅಥವಾ ಯಜ್ಞಗಳಲ್ಲಿ ಅಥವಾ ಗೋಪ್ರದಾನ ಕಾಲದಲ್ಲಿ ಅಥವಾ ಇಬ್ಬರು ಸಮಾಗಮವನ್ನು ಹೊಂದಿದಾಗ ನಿತ್ಯವೂ ಹೇಳುತ್ತಾನೆಯೋ ಅವನ ಲೋಕಗಳು ದೇವತೆಗಳ ಜೊತೆಯಲ್ಲಿ ಯಾವಾಗಲೂ ಅಕ್ಷಯವಾಗಿರುತ್ತವೆ ಎಂದು ಪರಮಪ್ರಭುಗಳೂ, ಪೂಜ್ಯರೂ ಆದ ಬ್ರಹ್ಮದೇವರು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಬ್ರಹ್ಮೇಂದ್ರಸಂವಾದೇ ಗೋದಾನಪ್ರಶಂಸಾನಾಮ ಚತುರಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐದನೆಯ ಅಧ್ಯಾಯ

ವ್ರತನಿಯಮಫಲ

ಯುಧಿಷ್ಠಿರಃ

ವಿಸ್ರಂಭಿತೋऽಹಂ ಭವತಾ ಧರ್ಮಾನ್ ಪ್ರವದತಾ ವಿಭೋ ।
ಪ್ರವಕ್ಷ್ಯಾಮಿ ತು ಸಂದೇಹಂ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ವಿಭುವೇ, ಧರ್ಮವನ್ನು ನೀನು ಹೇಳುತ್ತಿರುವಂತೆ ನನಗೆ ವಿಶ್ವಾಸವುಂಟಾಗುತ್ತಿದೆ. ಎಲೈ ಪಿತಾಮಹನೇ, ನನ್ನ ಸಂಶಯವನ್ನು ಹೇಳುತ್ತೇನೆ, ಅದನ್ನು ಪರಿಹರಿಸು.

ವ್ರತಾನಾಂ ಕಿಂ ಫಲಂ ಪ್ರೋಕ್ತಂ ಕೀದೃಶಂ ವಾ ಮಹಾದ್ಯುತೇ ।
ನಿಯಮಾನಾಂ ಫಲಂ ಕಿಂ ಚ ಸ್ವಧೀತಸ್ಯ ಚ ಕಿಂ ಫಲಮ್ ॥೨॥

ಮಹಾದ್ಯುತಿಯೇ, ವ್ರತಗಳಿಗೆ ಯಾವ ಮತ್ತು ಎಂತಹ ಫಲ? ನಿಯಮಗಳಿಗೆ ಏನು ಫಲ? ಅಧ್ಯಯನಕ್ಕೆ ಏನು ಫಲ?

ದಮಸ್ಯೇಹ ಫಲಂ ಕಿಂ ಚ ವೇದಾನಾಂ ಧಾರಣೇ ಚ ಕಿಮ್ ।
ಅಧ್ಯಾಪನೇ ಫಲಂ ಕಿಂ ಚ ಸರ್ವಮಿಚ್ಛಾಮಿ ವೇದಿತುಮ್ ॥೩॥

ಈ ಲೋಕದಲ್ಲಿ ದಮಕ್ಕೆ ಫಲವೇನು? ವೇದಧಾರಣೆಯನ್ನು ಮಾಡಿದುದರ ಫಲವೇನು? ಅಧ್ಯಾಪನ ಮಾಡಿದುದರ ಫಲವೇನು? ನಾನು ಎಲ್ಲವನ್ನೂ ತಿಳಿಯಲು ಬಯಸುತ್ತೇನೆ.

ಅಪ್ರತಿಗ್ರಾಹಕೇ ಕಿಂ ಚ ಫಲಂ ಲೋಕೇ ಪಿತಾಮಹ ।
ತಸ್ಯ ಕಿಂ ಚ ಫಲಂ ದೃಷ್ಟಂ ಶ್ರುತಂ ಯಃ ಸಂಪ್ರಯಚ್ಛತಿ ॥೪॥

ಎಲೈ ಪಿತಾಮಹನೇ, ಲೋಕದಲ್ಲಿ ಪ್ರತಿಗ್ರಹ ಮಾಡದಿರುವವನಿಗೆ ಏನು ಫಲ? ಯಾವನು ದಾನವನ್ನು ಕೊಡುತ್ತಾನೆಯೋ ಅವನಿಗೆ ದೃಷ್ಟವಾದ ಮತ್ತು ಶ್ರುತವಾದ ಫಲವು ಯಾವುದು?

ಸ್ವಕರ್ಮನಿರತಾನಾಂ ಚ ಶೂರಾಣಾಂ ಚಾಪಿ ಕಿಂ ಫಲಮ್ ।
ಸತ್ಯೇ ಚ ಕಿಂ ಫಲಂ ಪ್ರೋಕ್ತಂ ಬ್ರಹ್ಮಚರ್ಯೇ ಚ ಕಿಂ ಫಲಮ್ ॥೫॥

ಸ್ವಕರ್ಮನಿರತನಾದ ಶೂರನಿಗೆ ಯಾವ ಫಲ? ಸತ್ಯಕ್ಕೆ ಯಾವ ಫಲ? ಬ್ರಹ್ಮಚರ್ಯಕ್ಕೆ ಯಾವ ಫಲ?

ಪಿತೃಶುಶ್ರೂಷಣೇ ಕಿಂ ಚ ಮಾತೃಶುಶ್ರೂಷಣೇ ತಥಾ ।
ಆಚಾರ್ಯಗುರುಶುಶ್ರೂಷಾಸ್ವನುಕ್ರೋಶಾನುಕಂಪನೇ ॥೬॥

ಪಿತೃಸೇವೆಗೆ ಯಾವ ಫಲ? ಮಾತೃಸೇವೆಗೆ ಯಾವ ಫಲ? ಆಚಾರ್ಯ ಗುರು ಶುಶ್ರೂಷೆಗೂ, ದಯೆ ಮತ್ತು ಭೂತೋಪಕಾರಗಳಿಗೂ ಯಾವ ಫಲ?

ಏತತ್ಸರ್ವಮಶೇಷೇಣ ಪಿತಾಮಹ ಯಥಾತಥಮ್ ।
ವೇತ್ತುಮಿಚ್ಛಾಮಿ ಧರ್ಮಜ್ಞ ಪರಂ ಕೌತೂಹಲಂ ಹಿ ಮೇ ॥೭॥

ಎಲೈ ಪಿತಾಮಹನೇ, ಧರ್ಮಜ್ಞನೇ, ಇದೆಲ್ಲವನ್ನೂ ನಾನು ಸರಿಯಾಗಿ ತಿಳಿದುಕೊಳ್ಳಲು ಇಚ್ಛಿಸುತ್ತೇನೆ. ಈ ವಿಷಯಗಳಲ್ಲಿ ನನಗೆ ಬಹಳ ಕುತೂಹಲವಿದೆ.

ಭೀಷ್ಮಃ

ಯೋ ವ್ರತಂ ವೈ ಯಥೋದ್ದಿಷ್ಟಂ ತಥಾ ಸಂಪ್ರತಿಪದ್ಯತೇ ।
ಅಖಂಡಂ ಸಮ್ಯಗಾರಬ್ಧಂ ತಸ್ಯ ಲೋಕಾಃ ಸನಾತನಾಃ ॥೮॥

ಭೀಷ್ಮ– ಯಾವನು ಶಾಸ್ತ್ರವಿಧಿಗೆ ಅನುಸಾರವಾಗಿ ವ್ರತವನ್ನು ಪ್ರಾರಂಭಿಸಿ ಮಧ್ಯದಲ್ಲಿ ಬಿಡದೆ ಪೂರ್ಣಗೊಳಿಸುತ್ತಾನೆಯೋ ಅವನಿಗೆ ಸನಾತನ ಲೋಕಗಳು ದೊರಕುತ್ತವೆ.

ನಿಯಮಾನಾಂ ಫಲಂ ರಾಜನ್ ಪ್ರತ್ಯಕ್ಷಮಿಹ ದೃಶ್ಯತೇ ।
ನಿಯಮಾನಾಂ ಕ್ರತೂನಾಂ ಚ ತ್ವಯಾऽವಾಪ್ತಮಿದಂ ಫಲಮ್ ॥೯॥

ಎಲೈ ರಾಜನೇ, ನಿಯಮಗಳ ಫಲವು ಈ ಲೋಕದಲ್ಲಿ ಪ್ರತ್ಯಕ್ಷವಾಗಿಯೇ ಕಾಣುತ್ತದೆ. ನಿನ್ನ ನಿಯಮಗಳಿಗೆ ಮತ್ತು ಯಾಗಗಳಿಗೆ ಫಲವಾಗಿ ಇದನ್ನು (ಈ ಜಯವನ್ನು) ನೀನು ಪಡೆದಿರುವಿಯಷ್ಟೆ?

ಸ್ವಧೀತಸ್ಯಾಪಿ ಚ ಫಲಂ ದೃಶ್ಯತೇऽಮುತ್ರ ಚೇಹ ಚ ।
ಇಹಲೋಕೇऽರ್ಥವಾನ್ ನಿತ್ಯಂ ಬ್ರಹ್ಮಲೋಕೇ ಚ ಮೋದತೇ ॥೧೦॥

ಅಧ್ಯಯನದ ಫಲವೂ ಈ ಲೋಕದಲ್ಲಿಮತ್ತು ಪರಲೋಕದಲ್ಲಿಕಂಡುಬರುತ್ತದೆ. ಈ ಲೋಕದಲ್ಲಿ ಸಂಪದ್ಯುಕ್ತನಾಗಿ ಬ್ರಹ್ಮಲೋಕದಲ್ಲಿ ನಿತ್ಯವೂ ಸಂಪದ್ಭರಿತನಾಗಿ ಇರುತ್ತಾನೆ.

ದಮಸ್ಯ ತು ಫಲಂ ರಾಜನ್ ಶೃಣು ತ್ವಂ ವಿಸ್ತರೇಣ ಮೇ ।
ದಾಂತಾಃ ಸರ್ವತ್ರ ಸುಖಿನೋ ದಾಂತಾಃ ಸರ್ವತ್ರ ನಿರ್ವೃತಾಃ ॥೧೧॥

ಎಲೈ ರಾಜನೇ, ದಮದ ಫಲವನ್ನು ವಿಸ್ತಾರವಾಗಿ ಕೇಳು. ದಾಂತರು ಎಂದರೆ ಇಂದ್ರಿಯನಿಗ್ರಹವುಳ್ಳವರು. ಯಾವಾಗಲೂ ಸುಖವಾಗಿರುತ್ತಾರೆ. ಎಲ್ಲ ವಿಷಯಗಳಲ್ಲಿಯೂ ತೃಪ್ತರಾಗಿರುತ್ತಾರೆ.

ಯತ್ರೇಚ್ಛಾಗಾಮಿನೋ ದಾಂತಾಃ ಸರ್ವಶತ್ರುನಿಷೂದನಾಃ ।
ಪ್ರಾರ್ಥಯಂತಿ ಚ ಯದ್ ದಾಂತಾ ಲಭಂತೇ ತನ್ನ ಸಂಶಯಃ ॥೧೨॥

ದಾಂತರು ತಮ್ಮ ಇಚ್ಛೆಗೆ ಬಂದ ಕಡೆಗೆ ಹೋಗುತ್ತಾರೆ. ಸರ್ವಶತ್ರುಗಳನ್ನೂ ನಿವಾರಿಸುತ್ತಾರೆ. ದಾಂತರು ಏನನ್ನು ಪ್ರಾರ್ಥಿಸುತ್ತಾರೆಯೋ ಅದನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಯುಜ್ಯಂತೇ ಸರ್ವಕಾಮೈರ್ಹಿ ದಾಂತಾಃ ಸರ್ವತ್ರ ಪಾಂಡವ ।
ಸ್ವರ್ಗೇ ತಥಾ ಪ್ರಮೋದಂತೇ ತಪಸಾ ವಿಕ್ರಮೇಣ ಚ ॥೧೩॥

ಎಲೈ ಪಾಂಡವನೇ, ದಾಂತರು ಈ ಲೋಕದಲ್ಲಿ ಎಲ್ಲ ಕಡೆಗಳಲ್ಲಿಯೂ, ಎಲ್ಲ ಕಾಮಗಳಿಂದಲೂ ಪೂಜಿಸಲ್ಪಡುತ್ತಾರೆ. ಹಾಗೆಯೇ ತಮ್ಮ ತಪಸ್ಸು ಮತ್ತು ವಿಕ್ರಮದಿಂದ ಸ್ವರ್ಗದಲ್ಲಿ ಸುಖವನ್ನು ಅನುಭವಿಸುತ್ತಾರೆ.

ದಾನೈರ್ಯಜ್ಞೈಶ್ಚ ವಿವಿಧೈರ್ಯಥಾ ದಾಂತಾಃ ಕ್ಷಮಾನ್ವಿತಾಃ ।
ದಾತಾ ಕುಪ್ಯತಿ ನೋ ದಾಂತಸ್ತಸ್ಮಾದ್ ದಾನಾತ್ ಪರೋ ದಮಃ ॥೧೪॥

ದಾಂತರು ಕ್ಷಮೆಯಿಂದ ಕೂಡಿದವರಾಗಿ ವಿವಿಧವಾದ ದಾನ ಮತ್ತು ಯಜ್ಞಗಳಿಂದ (ಶ್ರೇಷ್ಠ ಫಲವನ್ನು ಪಡೆಯುತ್ತಾರೆ). ದಾನ ಮಾಡುವವನು ಕೋಪಗೊಳ್ಳುತ್ತಾನೆ ಆದರೆ ದಾಂತನು ಕೋಪಗೊಳ್ಳುವುದಿಲ್ಲ. ಆದ್ದರಿಂದ ದಾನಕ್ಕಿಂತಲೂ ದಮವು ಶ್ರೇಷ್ಠವಾದುದು.

ಯಸ್ತು ದದ್ಯಾದಕುಪ್ಯನ್ ಹಿ ತಸ್ಯ ಲೋಕಾಃ ಸನಾತನಾಃ ।
ಕ್ರೋಧೋ ಹಂತಿ ಹಿ ಯದ್ ದಾನಂ ತಸ್ಮಾದ್ ದಾನಾತ್ ಪರೋ ದಮಃ ॥

ಯಾವನು ಕೋಪಗೊಳ್ಳದೆ ದಾನವನ್ನು ಕೊಡುತ್ತಾನೆಯೋ ಅವನಿಗೆ ಸನಾತನ ಲೋಕಗಳು ದೊರೆಯುತ್ತವೆ. ಕ್ರೋಧವು ದಾನದ ಫಲವನ್ನು ವಿನಾಶಗೊಳಿಸುತ್ತದೆ. ಆದ್ದರಿಂದ ದಾನಕ್ಕಿಂತಲೂ ದಮವು ಶ್ರೇಷ್ಠವಾದುದು.

ಅದೃಶ್ಯಾನಿ ಮಹಾರಾಜ ಸ್ಥಾನಾನ್ಯಯುತಶೋ ದಿವಿ ।
ಋಷಯಃ ಸರ್ವಲೋಕೇಷು ಯಾನೀತೋ ಯಾಂತಿ ದೇವತಾಃ ॥೧೬॥

ಎಲೈ ಮಹಾರಾಜನೇ, ನಿನಗೆ ಅದೃಶ್ಯವಾದ ಸ್ಥಾನಗಳು ದೇವಲೋಕದಲ್ಲಿ ಸಾವಿರಾರು ಗಟ್ಟಲೆ ಇವೆ. ಸರ್ವಲೋಕಗಳಲ್ಲಿ ಋಷಿಗಳು ಮತ್ತು ದೇವತೆಗಳು ಇಲ್ಲಿಂದ ಅಂತಹ ಸ್ಥಳಕ್ಕೆ ಹೋಗುತ್ತಾರೆ.

ದಮೇನ ಯಾನಿ ನೃಪತೇ ಗಚ್ಛಂತಿ ಪರಮರ್ಷಯಃ ।
ಕಾಮಯಾನಾ ಮಹತ್ಸ್ಥಾನಂ ತಸ್ಮಾದ್ ದಾನಾತ್ ಪರೋ ದಮಃ ॥

ಎಲೈ ರಾಜನೇ, ಶ್ರೇಷ್ಠರಾದ ಋಷಿಗಳು ದೊಡ್ಡ ಸ್ಥಾನವನ್ನು ಬಯಸಿ ದಮದಿಂದ ಆ ಸ್ಥಾನವನ್ನು ಹೊಂದುತ್ತಾರೆ. ಆದ್ದರಿಂದ ದಾನಕ್ಕಿಂತಲೂ ದಮವು ಶ್ರೇಷ್ಠವಾದುದು.

ವಿದ್ಯಾದಾನಾತ್ ಪರಂ ನಾಸ್ತಿ ವೇದವಿದ್ಯಾ ಮಹಾಫಲಾ ।
ಅಧ್ಯಾಪಕಃ ಪರಿಕ್ಲೇಶಾದಕ್ಷಯಂ ಫಲಮಶ್ನುತೇ ।
ವಿಧಿವತ್ ಪಾವಕಂ ಹುತ್ವಾ ಬಹ್ಮಲೋಕೇ ನರಾಧಿಪ ॥೧೮॥

ವಿದ್ಯಾದಾನಕ್ಕಿಂತಲೂ ಶ್ರೇಷ್ಠವಾದ ದಾನವಿಲ್ಲ. ಅದರಲ್ಲಿಯೂ ವೇದವಿದ್ಯೆಯು ಮಹಾಫಲಪ್ರದವಾದುದು. ಅಧ್ಯಾಪಕನು ಶಿಷ್ಯನಿಗೆ ಕಷ್ಟಪಟ್ಟು ಉಪದೇಶ ಮಾಡುವುದರಿಂದ ಅಕ್ಷಯವಾದ ಫಲವನ್ನು ಹೊಂದುತ್ತಾನೆ. ಎಲೈ ರಾಜನೇ, ವಿಧಿಗೆ ಅನುಗುಣವಾಗಿ ಅಗ್ನಿಯಲ್ಲಿ ಹೋಮ ಮಾಡುವವನು ಬ್ರಹ್ಮಲೋಕದಲ್ಲಿ ಇರುತ್ತಾನೆ.

ಅಧೀತ್ಯಾಪಿ ಹಿ ಯೋ ವೇದಾನ್ ನ್ಯಾಯವಿದ್ಭ್ಯಃ ಪ್ರಯಚ್ಛತಿ ।
ಗುರುಕರ್ಮಪ್ರಶಂಸೀ ಚ ಸೋಽಪಿ ಸ್ವರ್ಗೇ ಮಹೀಯತೇ ॥೧೯॥

ವೇದಗಳನ್ನು ಅಧ್ಯಯನ ಮಾಡಿ, ನ್ಯಾಯಮಾರ್ಗದಲ್ಲಿ ನಡೆಯುವ ಶಿಷ್ಯರಿಗೆ ಯಾವನು ಉಪದೇಶ ಮಾಡುತ್ತಾನೆಯೋ, ಯಾವನು ಇನ್ನೊಬ್ಬನು ಮಾಡಿದ ದೊಡ್ಡ ಕಾರ್ಯವನ್ನು ಪ್ರಶಂಸೆ ಮಾಡುತ್ತಾನೆಯೋ ಅವನೂ ಸಹ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ಕ್ಷತ್ರಿಯೋಽಧ್ಯಯನೇ ಯುಕ್ತೋ ಯಜನೇ ದಾನಕರ್ಮಣಿ ।
ಯುದ್ಧೇ ಯಶ್ಚ ಪರಿತ್ರಾತಾ ಸೋಽಪಿ ಸ್ವರ್ಗೇ ಮಹೀಯತೇ ॥೨೦॥

ಅಧ್ಯಯನ, ಯಜನ ಮತ್ತು ದಾನದಲ್ಲಿ ನಿರತರಾದ ಹಾಗೆಯೇ ಯುದ್ಧದಲ್ಲಿ ಪ್ರಜೆಗಳನ್ನು ರಕ್ಷಿಸುವ ಕ್ಷತ್ರಿಯನೂ ಸಹ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ವೈಶ್ಯಃ ಸ್ವಕರ್ಮನಿರತಃ ಪ್ರದಾನಾಲ್ಲಭತೇ ಮಹತ್ ।
ಶೂದ್ರಃ ಸ್ವಕರ್ಮನಿರತಃ ಸ್ವರ್ಗಂ ಶುಶ್ರೂಷಯಾಽರ್ಚತಿ ॥೨೧॥

ಸ್ವಕರ್ಮನಿರತನಾದ ವೈಶ್ಯನು ದಾನ ಮಾಡುವುದರಿಂದ ದೊಡ್ಡ ಫಲವನ್ನು ಪಡೆಯುತ್ತಾನೆ. ಸ್ವಕರ್ಮದಲ್ಲಿ ನಿರತನಾದ ಶೂದ್ರನು ಉತ್ತಮವರ್ಣದವರ ಶುಶ್ರೂಷೆಯಿಂದ ಸ್ವರ್ಗವನ್ನು ಪಡೆಯುತ್ತಾನೆ.

ಶೂರಾ ಬಹುವಿಧಾಃ ಪ್ರೋಕ್ತಾಸ್ತೇಷಾಮರ್ಥಾಂಶ್ಚ ಮೇ ಶೃಣು ।
ಶೂರಾನ್ವಯಾನಾಂ ನಿರ್ದಿಷ್ಟಂ ಫಲಂ ಶೂರಸ್ಯ ಚೈವ ಹ ॥೨೨॥

ಅನೇಕ ವಿಧವಾದ ಶೂರರಿದ್ದಾರೆ. ಅಂತಹವರ ಫಲವನ್ನೂ ಸಹ ನನ್ನಿಂದ ಕೇಳು. ಶೂರರ ಕುಲಗಳಿಗೆ ನಿರ್ದಿಷ್ಟವಾದ ಫಲವು ಶೂರರಿಗೂ ಬರುತ್ತದೆ.

ಯಜ್ಞಶೂರಾ ದಮೇ ಶೂರಾಃ ಸತ್ಯಶೂರಾಸ್ತಥಾಪರೇ ।
ಯುದ್ಧಶೂರಾಸ್ತಥೈವೋಕ್ತಾ ದಾನಶೂರಾಶ್ಚ ಮಾನವಾಃ ॥೨೩॥

ಮಾನವರು ಯಜ್ಞಶೂರರೂ, ದಮಶೂರರೂ, ಇನ್ನು ಕೆಲವರು ಸತ್ಯಶೂರರೂ, ಯುದ್ಧಶೂರರೂ ಹಾಗೆಯೇ ದಾನಶೂರರೂ ಇರುತ್ತಾರೆ.

ಬುದ್ಧಿಶೂರಾಸ್ತಥೈವಾನ್ಯೇ ಕ್ಷಮಾಶೂರಾಸ್ತಥಾಪರೇ ।
ಆರ್ಜವೇ ಚ ತಥಾ ಶೂರಾಃ ಶಮೇ ವರ್ತಂತಿ ಮಾನವಾಃ ॥೨೪॥

ಕೆಲವರು ಬುದ್ಧಿಶೂರರು, ಕೆಲವರು ಕ್ಷಮಾಶೂರರು, ಕೆಲವರು ಆರ್ಜವ ಶೂರರು, ಇನ್ನು ಕೆಲವರು ಭಗವನ್ನಿಷ್ಠೆಯಲ್ಲಿ ಶೂರರು.

ತೈಸ್ತೈಸ್ತು ನಿಯಮೈಃ ಶೂರಾ ಬಹವಃ ಸಂತಿ ಚಾಪರೇ ।
ವೇದಾಧ್ಯಯನಶೂರಾಶ್ಚ ಶೂರಾಶ್ಚಾಧ್ಯಾಪನೇ ರತಾಃ ॥೨೫॥

ಆಯಾ ನಿಯಮಗಳಲ್ಲಿ ಶೂರರಾದ ಇನ್ನೂ ಅನೇಕರು ಇದ್ದಾರೆ. ವೇದಾಧ್ಯಯನದಲ್ಲಿ ಶೂರರು, ಅಧ್ಯಾಪನದಲ್ಲಿ ಶೂರರು (ಇರುತ್ತಾರೆ).

ಗುರುಶುಶ್ರೂಷಯಾ ಶೂರಾಃ ಪಿತೃಶುಶ್ರೂಷಯಾऽಪರೇ ।
ಮಾತೃಶುಶ್ರೂಷಯಾ ಶೂರಾ ಭೈಕ್ಷ್ಯಶೂರಾಸ್ತಥಾऽಪರೇ ॥೨೬॥

ಗುರುಶುಶ್ರೂಷೆಯಲ್ಲಿ ಶೂರರು, ಪಿತೃಶುಶ್ರೂಷೆಯಲ್ಲಿ ಶೂರರು, ಮಾತೃ ಶುಶ್ರೂಷೆಯಲ್ಲಿ ಶೂರರು, ಇನ್ನು ಕೆಲವರು ಭೈಕ್ಷ್ಯವೃತ್ತಿಯಲ್ಲಿ ಶೂರರು.

ಸಾಂಖ್ಯಶೂರಾಶ್ಚ ಬಹವೋ ಯೋಗಶೂರಾಸ್ತಥಾऽಪರೇ ।
ಅರಣ್ಯೇ ಗೃಹವಾಸೇ ಚ ಶೂರಾಶ್ಚಾತಿಥಿಪೂಜನೇ ।
ಸರ್ವೇ ಯಾಂತಿ ಪರಾಲ್ಲೋಕಾನ್ ಸ್ವಕರ್ಮಫಲನಿರ್ಜಿತಾನ್ ॥೨೭॥

ಕೆಲವರು ಸಾಂಖ್ಯಶಾಸ್ತ್ರದಲ್ಲಿ ಶೂರರು, ಕೆಲವರು ಯೋಗದಲ್ಲಿ ಶೂರರು, ಕೆಲವರು ಅರಣ್ಯಶೂರರು, ಕೆಲವರು ಗೃಹಸ್ಥಾಶ್ರಮ ಶೂರರು, ಕೆಲವರು ಅತಿಥಿ ಪೂಜನೆಯಲ್ಲಿ ಶೂರರು. ಇವರೆಲ್ಲರೂ ತಮ್ಮ ಕರ್ಮಗಳ ಫಲವಾಗಿ ಸಂಪಾದಿಸಿದ ಶ್ರೇಷ್ಠವಾದ ಲೋಕವನ್ನು ಹೊಂದುತ್ತಾರೆ.

ಧಾರಣಂ ಸರ್ವವೇದಾನಾಂ ಸರ್ವತೀರ್ಥಾವಗಾಹನಮ್ ।
ಸತ್ಯಂ ಚ ಬ್ರುವತೋ ನಿತ್ಯಂ ಸಮಂ ವಾ ಸ್ಯಾನ್ನ ವಾ ಸಮಮ್ ॥೨೮॥

ಸರ್ವವೇದಗಳ ಧಾರಣೆ, ಸರ್ವತೀರ್ಥಸ್ನಾನ ಇವು ನಿತ್ಯವೂ ಸತ್ಯವನ್ನು ನುಡಿಯುವುದಕ್ಕೆ ಸಮಾನವಾಗಬಹುದು ಅಥವಾ ಆಗದಿರಬಹುದು.

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ ॥೨೯॥

ಸಹಸ್ರ ಅಶ್ವಮೇಧಗಳನ್ನು ಮತ್ತು ಸತ್ಯವಚನವನ್ನು ತಕ್ಕಡಿಯಲ್ಲಿ ತೂಗಿದರೂ ಸಹಸ್ರ ಅಶ್ವಮೇಧಗಳಿಗಿಂತ ಸತ್ಯವೇ ಭಾರವಾಗುತ್ತದೆ (ಶ್ರೇಷ್ಠವಾಗುತ್ತದೆ).

ಸತ್ಯೇನ ಸೂರ್ಯಸ್ತಪತಿ ಸತ್ಯೇನಾಗ್ನಿಃ ಪ್ರದೀಪ್ಯತೇ ।
ಸತ್ಯೇನ ಮಾರುತೋ ವಾತಿ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥೩೦॥

ಸೂರ್ಯನು ಸತ್ಯದಿಂದ ತಾಪವನ್ನು ಕೊಡುತ್ತಾನೆ. ಅಗ್ನಿಯು ಸತ್ಯದಿಂದ ಉರಿಯುತ್ತಾನೆ. ವಾಯುವು ಸತ್ಯದಿಂದ ಬೀಸುತ್ತಾನೆ. ಎಲ್ಲವೂ ಸತ್ಯದಲ್ಲಿ ಪ್ರತಿಷ್ಠಿತವಾಗಿವೆ.

ಸತ್ಯೇನ ದೇವಾನ್ ಪ್ರೀಣಾತಿ ಪಿತೄನ್ ವೈ ಬ್ರಾಹ್ಮಣಾಂಸ್ತಥಾ ।
ಸತ್ಯಮಾಹುಃ ಪರಂ ಧರ್ಮಂ ತಸ್ಮಾತ್‌ಸತ್ಯಂ ನ ಲಂಘಯೇತ್ ॥೩೧॥

ಸತ್ಯದಿಂದ ದೇವತೆಗಳನ್ನೂ, ಪಿತೃಗಳನ್ನೂ ಮತ್ತು ಬ್ರಾಹ್ಮಣರನ್ನೂ ಸಂತೋಷಪಡಿಸುತ್ತಾನೆ. ಸತ್ಯವನ್ನು ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ. ಆದ್ದರಿಂದ ಸತ್ಯವನ್ನು ಮೀರಬಾರದು.

ಮುನಯಃ ಸತ್ಯನಿರತಾ ಮುನಯಃ ಸತ್ಯವಿಕ್ರಮಾಃ ।
ಮುನಯಃ ಸತ್ಯಶಪಥಾಸ್ತಸ್ಮಾತ್ ಸತ್ಯಂ ವಿಶಿಷ್ಯತೇ ।
ಸತ್ಯವಂತಃ ಸ್ವರ್ಗಲೋಕೇ ಮೋದಂತೇ ಭರತರ್ಷಭ ॥೩೨॥

ಋಷಿಗಳು ಸತ್ಯನಿರತರಾದವರು. ಸತ್ಯವಾದ ಪರಾಕ್ರಮವುಳ್ಳವರು. ಸತ್ಯವಾದ ಶಪಥವುಳ್ಳವರು. ಆದ್ದರಿಂದ ಸತ್ಯವು ಶ್ರೇಷ್ಠವೆನಿಸುತ್ತದೆ. ಎಲೈ ಭರತರ್ಷಭನೇ, ಸತ್ಯವಂತನಾದವರು ಸ್ವರ್ಗಲೋಕದಲ್ಲಿ ಸುಖಪಡುತ್ತಾರೆ.

ದಮಃ ಸತ್ಯಫಲಾವಾಪ್ತಿರುಕ್ತಾ ಸರ್ವಾತ್ಮನಾ ಮಯಾ ।
ಅಸಂಶಯಂ ವಿನೀತಾತ್ಮಾ ಸರ್ವಃ ಸ್ವರ್ಗೇ ಮಹೀಯತೇ ॥೩೩॥

ದಮ ಮತ್ತು ಸತ್ಯದ ಫಲ ಪ್ರಾಪ್ತಿಯು ನನ್ನಿಂದ ವಿಸ್ತಾರವಾಗಿ ಹೇಳಲ್ಪಟ್ಟಿದೆ. ವಿನಯವುಳ್ಳ ಸರ್ವಪುರುಷನೂ ನಿಸ್ಸಂಶಯವಾಗಿ ಸ್ವರ್ಗದಲ್ಲಿ ಸತ್ಕರಿಸಲ್ಪಡುತ್ತಾನೆ.

ಬ್ರಹ್ಮಚರ್ಯಸ್ಯ ತು ಗುಣಾನ್ ಶೃಣು ಮೇ ವಸುಧಾಧಿಪ ।
ಆಜನ್ಮಮರಣಾದ್ ಯಸ್ತು ಬ್ರಹ್ಮಚಾರೀ ಭವೇದಿಹ ।
ನ ತಸ್ಯ ಕಿಂಚಿದಪ್ರಾಪ್ಯಮಿತಿ ವಿದ್ಧಿ ಜನಾಧಿಪ ॥೩೪॥

ಎಲೈ ವಸುಧಾಧಿಪನೇ, ಬ್ರಹ್ಮಚರ್ಯಗುಣಗಳನ್ನು ನನ್ನಿಂದ ಕೇಳು. ಯಾವನು ಜನನದಿಂದ ಹಿಡಿದು ಮರಣದವರೆಗೆ ಈ ಲೋಕದಲ್ಲಿ ಬ್ರಹ್ಮಚಾರಿಯಾಗಿರುತ್ತಾನೆಯೋ ಎಲೈ ಜನಾಧಿಪನೇ, ಅವನು ಪಡೆಯಲಾದುದು ಯಾವುದೂ ಇಲ್ಲವೆಂದು ತಿಳಿ.

ಬಹ್ವ್ಯಃ ಕೋಟ್ಯಸ್ತ್ವೃಷೀಣಾಂ ತು ಬಹ್ಮಲೋಕೇ ವಸಂತ್ಯುತ ।
ಸತ್ಯೇ ರತಾನಾಂ ಸತತಂ ದಾಂತಾನಾಮೂರ್ಧ್ವರೇತಸಾಮ್ ॥೩೫॥

ಸತ್ಯದಲ್ಲಿ ರತರಾದ, ಸತತವಾಗಿ ದಮವನ್ನು ಹೊಂದಿದ, ಊರ್ಧ್ವರೇತಸ್ಕರಾದ ಅನೇಕ ಕೋಟಿ ಋಷಿಗಳು ಬ್ರಹ್ಮಲೋಕದಲ್ಲಿ ವಾಸ ಮಾಡುತ್ತಾರೆ.

ಬ್ರಹ್ಮಚರ್ಯಂ ದಹೇದ್ ರಾಜನ್ ಸರ್ವಪಾಪಾನ್ಯುಪಾಸಿತಮ್ ।
ಬ್ರಾಹ್ಮಣೇನ ವಿಶೇಷೇಣ ಬ್ರಾಹ್ಮಣೋ ಹ್ಯಗ್ನಿರುಚ್ಯತೇ ॥೩೬॥

ಎಲೈ ರಾಜನೇ, ಬ್ರಹ್ಮಚರ್ಯವನ್ನು ಪಾಲಿಸಿದರೆ, ಅದರಲ್ಲೂ ವಿಶೇಷವಾಗಿ ಬ್ರಾಹ್ಮಣನಿಂದ ಪಾಲಿಸಲ್ಪಟ್ಟರೆ ಅದು ಎಲ್ಲ ಪಾಪಗಳನ್ನೂ ದಹಿಸುತ್ತದೆ. ಬ್ರಾಹ್ಮಣನು ಅಗ್ನಿ ಎಂದು ಕರೆಯುತ್ತಾರೆ.

ಪ್ರತ್ಯಕ್ಷಂ ಚ ತವಾಪ್ಯೇತದ್ ಬ್ರಾಹ್ಮಣೇಷು ತಪಸ್ವಿಷು ।
ಬಿಭೇತಿ ಹಿ ಯಥಾ ಶಕ್ರೋ ಬ್ರಹ್ಮಚಾರಿಪ್ರಧರ್ಷಿತಃ ।
ತದ್ ಬ್ರಹ್ಮಚರ್ಯಸ್ಯ ಫಲಮೃಷೀಣಾಮಿಹ ದೃಶ್ಯತೇ ॥೩೭॥

ತಪಸ್ವಿಗಳಾದ ಬ್ರಾಹ್ಮಣರಲ್ಲಿ ಬ್ರಹ್ಮಚಾರಿಯಿಂದ ಅವಮಾನಕ್ಕೊಳಗಾದ ಇಂದ್ರನು ಹೇಗೆ ಹೆದರಿ ನಡೆದುಕೊಳ್ಳುತ್ತಾನೆಂಬುದು ನಿನಗೂ ಪ್ರತ್ಯಕ್ಷವಾದ ವಿಷಯ. ಆದ್ದರಿಂದ ಋಷಿಗಳ ಬ್ರಹ್ಮಚರ್ಯಫಲವು ಪ್ರತ್ಯಕ್ಷವಾಗಿ ಕಂಡುಬರುತ್ತದೆ.

ಮಾತಾಪಿತ್ರೋಃ ಪೂಜನೇ ಯೋ ಧರ್ಮಸ್ತಮಪಿ ಮೇ ಶೃಣು ।
ಶುಶ್ರೂಷತೇ ಯಃ ಪಿತರಂ ನ ಚಾಸೂಯೇತ್ ಕಥಂಚನ ।
ಮಾತರಂ ವಾऽನಹಂವಾದೀ ಗುರುಮಾಚಾರ್ಯಮೇವ ಚ ॥೩೮॥

ತಸ್ಯ ರಾಜನ್ ಫಲಂ ವಿದ್ಧಿ ಸ್ವರ್ಗಲೋಕೇ ಸ್ಥಾನಮುತ್ತಮಮ್ ।
ನ ಚ ಪಶ್ಯೇತ ನರಕಂ ಗುರುಶುಶ್ರೂಷುರಾತ್ಮವಾನ್ ॥೩೯॥

ಮಾತಾಪಿತೃಗಳ ಪೂಜೆಯಿಂದ ಯಾವ ಧರ್ಮವು ಉಂಟಾಗುತ್ತದೆ ಎಂಬುದನ್ನು ನನ್ನಿಂದ ಕೇಳು. ಯಾವನು ಅಸೂಯಾ ರಹಿತನಾಗಿ ತಂದೆಯನ್ನೂ, ಅಹಂಕಾರ ರಹಿತನಾಗಿ ತಾಯಿಯನ್ನೂ, ಗುರುವನ್ನೂ ಮತ್ತು ಆಚಾರ್ಯನನ್ನೂ ಪೂಜಿಸುತ್ತಾನೆಯೋ ಎಲೈ ರಾಜನೇ, ಅವನಿಗೆ ಸ್ವರ್ಗಲೋಕದಲ್ಲಿ ಶ್ರೇಷ್ಠವಾದ ಸ್ಥಾನವಿದೆ ಎಂದು ತಿಳಿ. ಗುರುಶುಶ್ರೂಷೆಯನ್ನು ಮಾಡಿದ ಧೈರ್ಯಶಾಲಿಯು ನರಕವನ್ನು ನೋಡಲಾರ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಸತ್ಯಸ್ತುತಿರ್ನಾಮ ಪಂಚಾಧಿಕಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಆರನೆಯ ಅಧ್ಯಾಯ

ಗೋದಾನ ವಿಧಿ

ಯುಧಿಷ್ಠಿರಃ

ವಿಧಿಂ ಗವಾಂ ಪರಮಹಂ ಶ್ರೋತುಮಿಚ್ಛಾಮಿ ತತ್ತ್ವತಃ ।
ಯೇನ ತಾನ್ ಶಾಶ್ವತಾಲ್ಲೋಕಾನಖಿಲಾನಶ್ನುವೀಮಹಿ ॥೧॥

ಯುಧಿಷ್ಠಿರ– ಯಾವ ವಿಧಿಯನ್ನು ಅನುಸರಿಸಿದರೆ ಎಲ್ಲಾ ಶಾಶ್ವತವಾದ ಲೋಕಗಳನ್ನು ನಾವು ಹೊಂದುವೆವೋ ಅಂತಹ ಗೋದಾನದ ವಿಧಿಯನ್ನು ಸರಿಯಾಗಿ ತಿಳಿದುಕೊಳ್ಳಲು ಬಯಸುತ್ತೇನೆ.

ಭೀಷ್ಮಃ

ನ ಗೋದಾನಾತ್ ಪರಂ ಕಿಂಚಿದ್ ವಿದ್ಯತೇ ವಸುಧಾಧಿಪ ।
ಗೌರ್ಹಿ ನ್ಯಾಯಾಗತಾ ದತ್ತಾ ಸದ್ಯಸ್ತಾರಯತೇ ಕುಲಮ್ ॥೨॥

ಭೀಷ್ಮ– ಎಲೈ ರಾಜನೇ, ಗೋದಾನಕ್ಕಿಂತಲೂ ಶ್ರೇಷ್ಠವಾದ ದಾನವಿಲ್ಲ. ನ್ಯಾಯದಿಂದ ಸಂಪಾದಿಸಿ ದಾನ ಮಾಡಿದ ಗೋವು ತಕ್ಷಣದಲ್ಲಿಯೇ ಆ ಕುಲವನ್ನು ಸಂಕಟದಿಂದ ಪಾರುಮಾಡುತ್ತದೆ.

ಸತಾಮರ್ಥೇ ಸಮ್ಯಗುತ್ಪಾದಿತೋ ಯಃ
ಸ ವೈ ಕ್ಲೃಪ್ತಃ ಸಮ್ಯಗಿಷ್ಟಃ ಪ್ರಜಾಭ್ಯಃ ।
ತಸ್ಮಾತ್ ಪೂರ್ವಂ ಹ್ಯಾದಿಕಾಲೇ ಪ್ರವೃತ್ತಂ
ಗವಾಂ ದಾನೇ ಶೃಣು ರಾಜನ್ ವಿಧಿಂ ಮೇ ॥೩॥

ಸಜ್ಜನರ ಸಲುವಾಗಿ ಸರಿಯಾಗಿ ನಿಷ್ಕರ್ಷಿಸಲ್ಪಟ್ಟ ವಿಧಿಯು ಏನಿದೆಯೋ ಅದೇ ಪ್ರಜೆಗಳಿಗೆ ಇಷ್ಟವಾದುದು ಮತ್ತು ಹಿತವಾದುದು. ಎಲೈ ರಾಜನೇ, ಆದ್ದರಿಂದ ಪೂರ್ವದಲ್ಲೇ ಋಷಿಗಳು ವಿಚಾರ ಮಾಡಿ ನಿರ್ಣಯಿಸಿದ ಆ ಗೋದಾನ ವಿಧಿಯನ್ನು ಕೇಳು.

ಪುರಾ ಗೋಷೂಪನೀತಾಸು ಗೋಷು ಸಂದಿಗ್ಧದರ್ಶಿನಾ ।
ಮಾಂಧಾತ್ರಾ ಪ್ರಕೃತಂ ಪ್ರಶ್ನಂ ಬೃಹಸ್ಪತಿರಭಾಷತ ॥೪॥

ದಾನವನ್ನು ಕೊಡಲು ಗೋವುಗಳು ತನ್ನ ಬಳಿಗೆ ತರಲ್ಪಡುತ್ತಿರಲು ದಾನದ ವಿಧಿಯ ವಿಷಯದಲ್ಲಿ ಸಂಶಯವನ್ನು ಹೊಂದಿದ ಮಾಂಧಾತೃವು ನೀನು ಕೇಳಿದ ಈ ಪ್ರಶ್ನೆಯನ್ನೇ ಬೃಹಸ್ಪತಿಗಳನ್ನು ಕೇಳಲಾಗಿ ಬೃಹಸ್ಪತಿಗಳು ಮಾತನಾಡಿದರು.

ದ್ವಿಜಾತಿಮಭಿಸತೃತ್ಯ ಶ್ವಃ ಕಾಲಮಭಿವೇದ್ಯ ಚ ।
ಪ್ರದಾನಾರ್ಥೇ ನಿಯುಂಜೀತ ರೋಹಿಣೀಂ ನಿಯತವ್ರತಃ ॥೫॥

ಬ್ರಾಹ್ಮಣನನ್ನು ಕರೆದು ಪೂಜಿಸಿ ಮರುದಿನ ಗೋದಾನದ ಸಮಯವನ್ನು ಹೇಳಿ ನಿಯತವ್ರತನಾಗಿ ಕೆಂಪು ಬಣ್ಣದ ಹಸುವನ್ನು ದಾನಕ್ಕಾಗಿ ಸಿದ್ಧಪಡಿಸಬೇಕು.

ಆಹ್ವಾನಂ ಚ ಪ್ರಯುಂಜೀತ ಸಮಂಗೇ ಬಹುಲೇತಿ ಚ ।
ಪ್ರವಿಶ್ಯ ಚ ಗವಾಂ ಮಧ್ಯಮಿಮಾಂ ಶ್ರುತಿಮುದಾಹರೇತ್ ॥೬॥

ಆ ಗೋವನ್ನು ಸಮಂಗೇ, ಬಹುಲೇ (ಚೆನ್ನಾದ ಅವಯವವುಳ್ಳವಳೇ, ಸಮೃದ್ಧಳಾದವಳೇ) ಎಂದು ಸಂಬೋಧಿಸಿ ಗೋವುಗಳ ಮಧ್ಯವನ್ನು ಪ್ರವೇಶಿಸಿ ಈ ಶ್ರುತಿಯನ್ನು ಹೇಳಬೇಕು.

ಗೌರ್ಮೇ ಮಾತಾ ಗೋವೃಷಭಃ ಪಿತಾ ಮೇ
ದಿವಂ ಶರ್ಮ ಜಗತೀ ಮೇ ಪ್ರತಿಷ್ಠಾ ।
ಪ್ರಪದ್ಯೈವಂ ಶರ್ಮರೀಮುಷ್ಯ ಗೋಷು
ಮುನಿರ್ವಾಣೀಮುತ್ಸೃಜೇದ್ ಗೋಪ್ರದಾನೇ ॥೭॥

ಗೋವು ನನ್ನ ತಾಯಿ, ವೃಷಭವು ನನ್ನ ತಂದೆ. ನನಗೆ ಐಹಿಕ ಸುಖಕ್ಕೂ, ಸ್ವರ್ಗ ಸುಖಕ್ಕೂ ಮತ್ತು ಜಗತ್ತಿಗೂ ಗೋ-ವೃಷಭಗಳೇ ಆಧಾರವಾಗಿವೆ (ಎಂದು ಹೇಳಬೇಕು). ಈ ರೀತಿಯಲ್ಲಿ ಶರಣಾಗತನಾಗಿ ಗೋವುಗಳ ಮಧ್ಯದಲ್ಲಿಯೇ ರಾತ್ರಿಯಲ್ಲಿ ವಾಸ ಮಾಡಿ ಗೋಪ್ರದಾನ ಕಾಲದಲ್ಲಿಯೂ ಗೋವು ನನ್ನ ತಾಯಿ ಇತ್ಯಾದಿ ಮಾತನ್ನೇ ಹೇಳಬೇಕು.

ಸ ತಾಮೇಕಾಂ ನಿಶಾಂ ಗೋಭಿಃ ಸಮಸಖ್ಯಃ ಸಮವ್ರತಃ ।
ಏಕಾತ್ಮ್ಯಗಮನಾತ್ ಸದ್ಯಃ ಕಲ್ಮಷಾದ್ ವಿಪ್ರಮುಚ್ಯತೇ ॥೮॥

ಅವನು ಒಂದು ರಾತ್ರಿ ಗೋವುಗಳ ಜೊತೆಯಲ್ಲಿ ಸಮಾನವಾದ ಸ್ನೇಹವನ್ನು ಹೊಂದಿ, ಸಮಾನವಾದ ವ್ರತವನ್ನು ಧರಿಸಿ ಗೋವುಗಳ ಜೊತೆಯಲ್ಲಿ ಐಕಾತ್ಮ್ಯವನ್ನು ಹೊಂದಿ ಎಲ್ಲ ದೋಷಗಳಿಂದಲೂ ದೂರನಾಗುತ್ತಾನೆ.

ಉತ್ಸೃಷ್ಟವೃಷವತ್ ಸಾ ಹಿ ಪ್ರದೇಯಾ ಸೂರ್ಯದರ್ಶನೇ ।
ತ್ರಿವಿಧಂ ಪ್ರತಿಪತ್ತವ್ಯಮರ್ಥವಾದಾಶಿಷಃ ಸ್ತವಾಃ ॥೯॥

ಸೂರ್ಯೋದಯ ಕಾಲದಲ್ಲಿ ಆ ಗೋವನ್ನು ಸ್ವತಂತ್ರವಾಗಿ ಬಿಟ್ಟ ಕರುವಿನೊಂದಿಗೆ ದಾನ ಮಾಡಬೇಕು. ಮೂರುವಿಧವಾದ ಅರ್ಥವಾದಗಳನ್ನು ಆಶೀರ್ವಚನಗಳನ್ನು ಮತ್ತು ಸ್ತೋತ್ರಗಳನ್ನು ಹೇಳಬೇಕು.

ಊರ್ಜಸ್ವಿನ್ಯೂರ್ಜವಹಾಶ್ಚ ಯಜ್ಞಾಃ
ಗರ್ಭೋಽಮೃತಸ್ಯ ಜಗತಶ್ಚ ಪ್ರತಿಷ್ಠಾ ।
ಕ್ಷಿತೌ ರಾಧಃಪ್ರಭವಃ ಶಶ್ವದೇವ
ಪ್ರಾಜಾಪತ್ಯಾಃ ಸರ್ವಮಿತ್ಯರ್ಥವಾದಃ ॥೧೦॥

ಎಲೌ ದೇವಾನ್ನವನ್ನು ಧರಿಸಿದವಳೇ ಯಜ್ಞಗಳೆಲ್ಲವೂ ದೇವಾನ್ನದಿಂದ ನಡೆಯತಕ್ಕವುಗಳು. ನೀನು ಗರ್ಭದಲ್ಲಿ ಅಮೃತವನ್ನು ಧರಿಸಿದ್ದೀಯೆ. ಜಗತ್ತಿಗೆ ಆಧಾರಭೂತಳಾಗಿದ್ದೀಯೆ. ಭೂಮಿಯಲ್ಲಿ ಸಂಪತ್ತಿಗೆ ಯಾವಾಗಲೂ ಕಾರಣಳಾಗಿದ್ದೀಯೆ. ನೀವೆಲ್ಲರೂ ಪ್ರಜಾಪತಿಯ ಮಕ್ಕಳು ಎಂಬುದು ಅರ್ಥವಾದ.

ಗಾವೋ ಮಮೈನಃ ಪ್ರಣುದಂತು ಸೌರ್ಯಾ-
ಸ್ತಥಾ ಸೌಮ್ಯಾಃ ಸ್ವರ್ಗಯಾನಾಯ ಸಂತು ।
ಆಮ್ನಾತಾ ಮೇ ದದತೀರಾಶ್ರಯಂತು
ತಥಾನುಕ್ತಾಃ ಸಂತು ಸರ್ವಾಶಿಷೋ ಮೇ ॥೧೧॥

ಗೋವುಗಳು ನನ್ನ ಪಾಪಗಳನ್ನು ಕಳೆಯಲಿ. ಸೂರ್ಯನಂತೆ, ಚಂದ್ರನಂತೆ ಪ್ರಕಾಶಮಾನವಾದ ಗೋವುಗಳು ನಾನು ಸ್ವರ್ಗಕ್ಕೆ ಪ್ರಯಾಣ ಮಾಡಲು ಸಹಾಯಕ-ಗಳಾಗಲಿ. ಸರ್ವಾಭೀಷ್ಟವನ್ನು ಕೊಡುವ ಗೋವುಗಳು ನನ್ನನ್ನು ಆಶ್ರಯಿಸಲಿ. ನಾನು ಕೇಳಿದ ಅಥವಾ ಕೇಳದಿದ್ದ ಎಲ್ಲಾ ಶುಭಗಳು ನನಗೆ ಉಂಟಾಗಲಿ (ಎಂದು ಆಶೀರ್ವಚನ).

ಶೇಷೋತ್ಸರ್ಗೇ ಕರ್ಮಭಿರ್ದೇಹಮೋಕ್ಷೇ
ಸರಸ್ವತ್ಯಃ ಶ್ರೇಯಸಿ ಸಂಪ್ರವೃತ್ತಾಃ ।
ಯೂಯಂ ನಿತ್ಯಂ ಪುಣ್ಯಕರ್ಮೋಪವಾಹ್ಯಾ
ದಿಶಧ್ವಂ ಮೇ ಗತಿಮಿಷ್ಟಾಂ ಪ್ರಪನ್ನಃ ॥೧೨॥

ಎಲೈ ಗೋವುಗಳೇ, ದೇಹತ್ಯಾಗವನ್ನು ಮಾಡಿದ ಮೇಲೆ ಮಾಡುವ ಉತ್ತರ ಕ್ರಿಯೆಗಳಲ್ಲಿ ವೃಷೋತ್ಸರ್ಗವನ್ನು ಮಾಡಿದಾಗ ದೇಹತ್ಯಾಗವನ್ನು ಮಾಡಿದ ಜೀವನಿಗೆ ನೀವು ಶ್ರೇಯಸ್ಸಿನ ದೊಡ್ಡ ಪ್ರವಾಹವನ್ನೇ ಹರಿಸುವಿರಿ. ನೀವು ಯಾವಾಗಲೂ ಪುಣ್ಯಕರ್ಮಗಳಿಂದಲೇ ಮುಂದೆ ಸಾಗುವವರು. ನಿಮ್ಮನ್ನು ಶರಣು ಹೊಂದಿದ ನನಗೆ ನೀವು ಇಷ್ಟವಾದ ಗತಿಯನ್ನು ಪಾಲಿಸಿ (ಇದು ಸ್ತವ).

ಯಾ ವೈ ಯೂಯಂ ಸೋಽಹಮದ್ಯೈಕಭಾವೋ
ಯುಷ್ಮಾನ್ ದತ್ತ್ವಾ ಚಾಹಮಾತ್ಮಪ್ರದಾತಾ ।
ಮನಶ್ಚ್ಯುತಾ ಮನಏವೋಪಪನ್ನಾಃ
ಸಂಧುಕ್ಷಧ್ವಂ ಸೌಮ್ಯರೂಪೋಗ್ರರೂಪಾಃ ॥೧೩॥

ಈ ದಿನ ನಿಮ್ಮ ಜೊತೆಯಲ್ಲಿ ನಾನು ಏಕಭಾವವನ್ನು ಹೊಂದಿದ್ದೇನೆ. ಆದ್ದರಿಂದ ನಿಮ್ಮನ್ನು ಕೊಟ್ಟರೆ ನನ್ನನ್ನೇ ಕೊಟ್ಟಂತೆ. ಯಜಮಾನನಿಂದ ಮನಃಪೂರ್ವಕವಾಗಿ ದಾನ ಮಾಡಲ್ಪಟ್ಟ ನಿಮ್ಮಿಂದ ಪ್ರೀತಿಪೂರ್ವಕವಾಗಿ ಸ್ವೀಕಾರ ಮಾಡಲ್ಪಟ್ಟ ಭಕ್ತರಿಗೆ ಸೌಮ್ಯ ರೂಪವನ್ನೂ, ಹಿಂಸಕರಿಗೆ ಉಗ್ರರೂಪವನ್ನು ಹೊಂದಿದ ನೀವು ನಮಗೆ ಬೇಕಾದ ಇಷ್ಟಾರ್ಥಗಳನ್ನು ಸುರಿಸಿ.

ಏವಂ ತಸ್ಯಾಗ್ರೇ ಪೂರ್ವಮರ್ಧಂ ವದೇತ
ಗವಾಂ ದಾತಾ ವಿಧಿವತ್ ಪೂರ್ವದೃಷ್ಟಮ್ ।
ಪ್ರತಿಬ್ರೂಯಾಚ್ಛೇಷಮರ್ಧಂ ದ್ವಿಜಾತಿಃ
ಪ್ರತಿಗ್ರಹ್ಣನ್ ವೈ ಗೋಪ್ರದಾನೇ ವಿಧಿಜ್ಞಃ ॥೧೪॥

ಹೀಗೆ ಗೋದಾನ ಮಾಡುವವನು ಹಿಂದಿನ ಶ್ಲೋಕದ ಮೊದಲನೆಯ ಅರ್ಧಭಾಗವನ್ನು ಪೂರ್ವಾಭಿಮುಖವಾಗಿ ನಿಂತು ವಿಧಿಗೆ ಅನುಗುಣವಾಗಿ

ಹೇಳಬೇಕು. ಮುಂದಿನ ಅರ್ಧಭಾಗವನ್ನು ಗೋಪ್ರದಾನ ವಿಧಿಯನ್ನು ತಿಳಿದ ಗೋವನ್ನು ಪ್ರತಿಗೃಹಿಸುವ ಬ್ರಾಹ್ಮಣನು ಹೇಳಬೇಕು.

ಗಾಂ ದದಾನೀತಿ ವಕ್ತವ್ಯಮರ್ಘ್ಯವಸ್ತ್ರವಸುಪ್ರದಃ ।
ಊಧಸ್ಯಾ ಭರಿತವ್ಯಾ ಚ ವೈಷ್ಣವೀತಿ ಚ ಚೋದಯೇತ್ ॥೧೫॥

ಅರ್ಘ್ಯ , ವಸ್ತ್ರ, ಧನಗಳನ್ನು ಕೊಡುವ ಗೋದಾನಿಯು ನಾನು ಗೋವನ್ನು ದಾನ ಮಾಡುತ್ತೇನೆ ಎಂದು ಹೇಳಿ ಊಧಸ್ಯಾ , ಭರಿತವ್ಯಾ , ವೈಷ್ಣವೀ ಎಂದು ಆ ಗೋವನ್ನು ಕರೆಯಬೇಕು.

ನಾಮ ಸಂಕೀರ್ತಯೇತ್ ತಸ್ಯಾ ಯಥಾಸಂಖ್ಯೋತ್ತರಂ ಸ ವೈ ।
ಫಲಂ ಷಡ್ವಿಂಶದಷ್ಟೌ ಚ ಸಹಸ್ರಾಣಿ ಚ ವಿಂಶತಿಃ ॥೧೬॥

ಆ ಗೋವಿನ ವಿಶೇಷ ನಾಮವಿದ್ದರೆ ಅದನ್ನೂ ಹೇಳಬೇಕು. ದಾನ ಮಾಡುವ ಗೋವಿಗೆ ಅರ್ಘ್ಯಾದಿಗಳನ್ನು ಕೊಡುವುದರಿಂದ ಮೂವತ್ತಾರು ಸಾವಿರ ವರ್ಷಗಳ ಕಾಲವೂ, ವಸ್ತ್ರವನ್ನು ಕೊಡುವುದರಿಂದ ಎಂಟು ಸಾವಿರ ವರ್ಷಗಳ ಕಾಲವೂ, ದಕ್ಷಿಣೆಯಾಗಿ ಸುವರ್ಣವನ್ನು ಕೊಡುವುದರಿಂದ ಇಪ್ಪತ್ತು ಸಾವಿರ ವರ್ಷಗಳ ಕಾಲವೂ ದಾನ ಮಾಡುವವನು ಪುಣ್ಯಫಲವನ್ನು ಹೊಂದುತ್ತಾನೆ.

ಏವಮೇತಾನ್ ಗುಣಾನ್ ವೃದ್ಧಾನ್ ಗವಾದೀನಾಂ ಯಥಾಕ್ರಮಮ್ ।
ಗೋಪ್ರದಾತಾ ಸಮಾಪ್ನೋತಿ ಸಮಸ್ತಾನಷ್ಟಮೇ ಕ್ರಮೇ ॥೧೭॥

ಈ ರೀತಿಯಲ್ಲಿ ಗೋಪ್ರದಾನವನ್ನು ಮಾಡುವವನು ಇಂತಹ ಗೋವಿನ ಗುಣಗಳನ್ನು ಯಥಾಕ್ರಮವಾಗಿ ಸಮೃದ್ಧವಾಗಿ ದಾನವನ್ನು ಸ್ವೀಕರಿಸುವವನ ಎಂಟನೆಯ ಹೆಜ್ಜೆಯಲ್ಲಿ ಪಡೆಯುತ್ತಾನೆ.

ಗೋದಃ ಶೀಲೀ ನಿರ್ಭಯಶ್ಚಾರ್ಘದಾತಾ
ನ ಸ್ಯಾದ್ ದುಃಖೀ ವಸುದಾತಾ ಚ ಕಾಮೀ ।
ಊಧಸ್ಯೋಢಾ ಭಾರತ ಯಶ್ಚ ವಿದ್ವಾನ್
ವ್ಯಾಖ್ಯಾತಾಸ್ತೇ ವೈಷ್ಣವಾಶ್ಚಂದ್ರಲೋಕಾಃ ॥೧೮॥

ಗೋದಾನ ಮಾಡುವವನು ಶೀಲವಂತನಾಗಿರಬೇಕು, ನಿರ್ಭಯನಾಗಿರಬೇಕು. ಗೋವನ್ನು ಕೊಡಲಾಗದೆ ಗೋವಿನ ಬೆಲೆಯನ್ನು ಕೊಡುವವನು ದುಃಖಿಯಾಗುವುದಿಲ್ಲ. ಗೋವಿನ ಜೊತೆಯಲ್ಲಿ ದಕ್ಷಿಣೆಯನ್ನು ಕೊಡುವವನು ಅಪೇಕ್ಷಿತವಾದ ವಸ್ತುವನ್ನು ಹೊಂದುತ್ತಾನೆ. ಎಲೈ ಭಾರತನೇ, ಕೆಚ್ಚಲಿನ ತುಂಬಾ ಕ್ಷೀರವನ್ನು ತುಂಬಿಕೊಂಡಿರುವ ಗೋವಿನ ಮಹಿಮೆಯನ್ನು ಚೆನ್ನಾಗಿ ತಿಳಿದವನು ಪ್ರಕಾಶಮಾನವಾದ (ಪ್ರಖ್ಯಾತವಾದ) ವೈಷ್ಣವಲೋಕಗಳಿಗೂ, ಚಂದ್ರಲೋಕಗಳಿಗೂ ಹೋಗುತ್ತಾನೆ.

ಗಾ ವೈ ದತ್ತ್ವಾ ಗೋವ್ರತೀ ಸ್ಯಾತ್ತ್ರಿರಾತ್ರಂ
ನಿಶಾಂ ಚೈಕಾಂ ಸಂವಸೇತೇಹ ತಾಭಿಃ ।
ಕಾಮ್ಯಾಷ್ಟಮ್ಯಾಂ ವರ್ತಿತವ್ಯಂ ತ್ರಿರಾತ್ರಂ
ರಸೈರ್ವಾ ಗೋಃ ಶಕೃತಾ ಪ್ರಸ್ನವೈರ್ವಾ ॥೧೯॥

ಗೋದಾನವನ್ನು ಮಾಡಿ ಮೂರು ರಾತ್ರಿ ಗೋವ್ರತವನ್ನು ಧರಿಸಬೇಕು. ಒಂದು ರಾತ್ರಿ ಗೋವುಗಳ ಜೊತೆಯಲ್ಲಿ ವಾಸ ಮಾಡಬೇಕು. ಕಾಮ್ಯಾಷ್ಟಮಿಯ ಸಂದರ್ಭದಲ್ಲಿ (ಕಾರ್ತಿಕ ಶುಕ್ಲ ಅಷ್ಟಮೀ) ಮೂರು ರಾತ್ರಿ ಗೋರಸಗಳಿಂದಾಗಲೀ ಅಥವಾ ಗೋಮಯದಿಂದಾಗಲೀ ಅಥವಾ ಗೋಮಯದಿಂದ ಬಂದ ಧಾನ್ಯಗಳಿಂದಾಗಲೀ ಜೀವಿಸಬೇಕು.

ವೇದವ್ರತೀ ಸ್ಯಾದ್ ವೃಷಭಪ್ರದಾತಾ
ವೇದಾವಾಪ್ತಿರ್ಗೋಯುಗಸ್ಯ ಪ್ರದಾನೇ ।
ತಥಾ ಗವಾಂ ವಿಧಿಮಾಸಾದ್ಯ ಯಜ್ವಾ
ಲೋಕಾನಗ್ರ್ಯಾನ್ ವಿಂದತೇ ನಾವಿಧಿಜ್ಞಃ ॥೨೦॥

ವೃಷಭವನ್ನು ದಾನ ಮಾಡುವವನು ವೇದವ್ರತನಾಗುತ್ತಾನೆ. ಎರಡು ಗೋದಾನವನ್ನು ಮಾಡುವವನು ವೇದವನ್ನು ಪಡೆಯುತ್ತಾನೆ. ಹಾಗೆಯೇ ಗೋದಾನದ ವಿಧಿಯನ್ನು ತಿಳಿದು ಯಾಗವನ್ನು ಮಾಡುವವನು ಶ್ರೇಷ್ಠವಾದ ಲೋಕವನ್ನು ಪಡೆಯುತ್ತಾನೆ. ಗೋದಾನದ ವಿಧಿಯನ್ನು ತಿಳಿಯದವನು ಪಡೆಯುವುದಿಲ್ಲ.

ಕಾಮಾನ್ ಸರ್ವಾನ್ ಪಾರ್ಥಿವಾನೇಕಸಂಸ್ಥಾನ್
ಯೋ ವೈ ದದ್ಯಾತ್ ಕಾಮದುಘಾಂ ಚ ಧೇನುಮ್ ।

ಸಮ್ಯಕ್ ತಾಃ ಸ್ಯುರ್ಹವ್ಯಕವ್ಯೈಘವತ್ಯಃ
ತಾಸಾಮುಕ್ಷ್ಣಾಂ ಜ್ಯಾಯಸಾಂ ಸಂಪ್ರದಾನಮ್ ॥೨೧॥

ಯಾವನು ಕೇಳುದುದನ್ನೆಲ್ಲಾ ಕೊಡುವ ಧೇನುವನ್ನು ದಾನ ಮಾಡುತ್ತಾನೆಯೋ ಎಲೈ ಪಾರ್ಥಿವನೇ, ಅವನು ಎಲ್ಲಾ ಕಾಮಗಳನ್ನು ಹೊಂದಿ ಸಂಸ್ಥಾನವನ್ನು ಪಡೆಯುತ್ತಾನೆ. ದಾನ ಮಾಡಲ್ಪಟ್ಟ ಗೋವುಗಳು ಹವ್ಯಕವ್ಯದ ಪ್ರವಾಹವನ್ನೇ ಪ್ರವರ್ತಿಸುತ್ತವೆ. ಅಂತಹ ಶ್ರೇಷ್ಠವಾದ ಗೋವುಗಳ ಮತ್ತು ವೃಷಭಗಳ ಸಂಪ್ರದಾನವು (ಶ್ಲಾಘನೀಯವಾದುದು).

ನ ಚಾಶಿಷ್ಯಾಯಾವ್ರತಾಯೋಪಕುರ್ಯಾತ್
ನಾಶ್ರದ್ದಧಾನಾಯ ನ ವಕ್ರಬುದ್ಧಯೇ ।
ಗುಹ್ಯೋ ಹ್ಯಯಂ ಸರ್ವಲೋಕಸ್ಯ ಧರ್ಮೋ
ನೇಮಂ ಧರ್ಮಂ ಯತ್ರ ತತ್ರ ಪ್ರಜಲ್ಪೇತ್ ॥೨೨॥

ಈ ಗೋದಾನದ ವಿಧಿಯನ್ನು ಶಿಷ್ಯನಲ್ಲದವನಿಗೆ, ವ್ರತವನ್ನು ಮಾಡದವನಿಗೆ, ಶ್ರದ್ಧೆ ಇಲ್ಲದವನಿಗೆ, ವಕ್ರಬುದ್ಧಿಯುಳ್ಳವನಿಗೆ ಉಪದೇಶ ಮಾಡಬಾರದು. ಇದು ಅತ್ಯಂತ ರಹಸ್ಯವೂ ಮತ್ತು ಸರ್ವಲೋಕಧಾರಕವೂ ಆದುದು. ಈ ಧರ್ಮವನ್ನು ಎಲ್ಲೆಂದರಲ್ಲಿ ಹೇಳಬಾರದು.

ಸಂತಿ ಲೋಕೇ ಶ್ರದ್ದಧಾನಾ ಮನುಷ್ಯಾಃ
ಸಂತಿ ಕ್ಷುದ್ರಾ ರಾಕ್ಷಸಾ ಮಾನುಷೇಷು ।
ಯೇಷಾಂ ದಾನಂ ದೀಯಮಾನಂ ಹ್ಯನಿಷ್ಟಂ
ನಾಸ್ತಿಕ್ಯಂ ಚಾಪ್ಯಾಶ್ರಯಂತೇ ಹ್ಯಪುಣ್ಯಾಃ ॥೨೩॥

ಲೋಕದಲ್ಲಿ ಶ್ರದ್ಧೆಯುಳ್ಳ ಪುರುಷರೂ ಇದ್ದಾರೆ. ಕ್ಷುದ್ರರಾದ ರಾಕ್ಷಸರೂ ಮನುಷ್ಯರಲ್ಲಿ ಇದ್ದಾರೆ. ಅಂತಹ ಅಯೋಗ್ಯರಿಗೆ ಗೋವನ್ನಾಗಲೀ, ಗೋದಾನದ ವಿಧಿಯನ್ನಾಗಲೀ ದಾನವನ್ನು ಮಾಡಿದರೆ ಅನಿಷ್ಟವೂ, ನಾಸ್ತಿಕ್ಯವೂ ಮತ್ತು ಪಾಪಗಳೂ ಬಂದು ಸೇರುತ್ತವೆ.

ಬಾರ್ಹಸ್ಪತ್ಯಂ ವಾಕ್ಯಮೇತನ್ನಿಶಮ್ಯ
ಯೇ ರಾಜಾನೋ ಗೋಪ್ರದಾನಾನಿ ಕೃತ್ವಾ ।

ಲೋಕಾನ್ ಪ್ರಾಪ್ತಾಃ ಪುಣ್ಯಶೀಲಾಃ ಸುವೃತ್ತಾಃ
ತಾನ್ ಮೇ ರಾಜನ್ ಕೀರ್ತ್ಯಮಾನಾನ್ ನಿಬೋಧ ॥೨೪॥

ಬೃಹಸ್ಪತ್ಯಾಚಾರ್ಯರ ಈ ಮಾತನ್ನು ಕೇಳಿ ಯಾವ ಪುಣ್ಯಶೀಲರಾದ, ಸತ್ವವೃತ್ತಿಯುಳ್ಳ ರಾಜರು ಗೋದಾನವನ್ನು ಮಾಡಿ ಶುಭಲೋಕಗಳನ್ನು ಪಡೆದರೋ ಎಲೈ ರಾಜನೇ, ಅಂತಹವರನ್ನು ನಾನು ಹೇಳುತ್ತೇನೆ, ಕೇಳು.

ಉಶೀನರೋ ವಿಶ್ವಗಶ್ವೋ ನೃಗಶ್ಚ
ಭಗೀರಥೋ ವಿಶ್ರುತೋ ಯೌವನಾಶ್ವಃ ।
ಮಾಂಧಾತಾ ವೈ ಮುಚುಕುಂದಶ್ಚ ರಾಜಾ
ಭೂರಿದ್ಯುಮ್ನೋ ನೈಷಧಃ ಸೋಮಕಶ್ಚ ॥೨೫॥

ಪುರೂರವಾ ಭರತಶ್ಚಕ್ರವರ್ತೀ
ಯಸ್ಯಾನ್ವಯೇ ಭಾರತಾಃ ಸರ್ವ ಏವ ।
ತಥಾ ವೀರೋ ದಾಶರಥಿಶ್ಚ ರಾಮೋ
ಯೇ ಚಾಪ್ಯನ್ಯೇ ವಿಶ್ರುತಾಃ ಕೀರ್ತಿಮಂತಃ ॥೨೬॥

ಉಶೀನರ, ವಿಶ್ವಗಶ್ವ, ನೃಗ, ಭಗೀರಥ, ಪ್ರಖ್ಯಾತನಾದ ಯೌವನಾಶ್ವನಾದ ಮಾಂಧಾತ, ಮುಚುಕುಂದ, ಭೂರಿದ್ಯುಮ್ನ, ನೈಷಧ (ನಳ), ಸೋಮಕ, ಪುರೂರವ, ಯಾರ ವಂಶದಲ್ಲಿ ಎಲ್ಲಾ ಕುರುಪಾಂಡವರು ಬಂದಿದ್ದಾರೆಯೋ ಅಂತಹ ಭರತ ಚಕ್ರವರ್ತಿ, ವೀರನಾದ ದಾಶರಥಿ ರಾಮ, ಇನ್ನೂ ಎಷ್ಟೋ ಮಂದಿ ಕೀರ್ತಿವಂತರಾದ ರಾಜರು (ಇವರುಗಳು ಪುಣ್ಯಲೋಕವನ್ನು ಪಡೆದಿದ್ದಾರೆ).

ತಥಾ ರಾಜಾ ಪೃಥುಕರ್ಮಾ ದಿಲೀಪೋ
ದಿವಂ ಪ್ರಾಪ್ತೋ ಗೋಪ್ರದಾನೇ ವಿಧಿಜ್ಞಃ ।
ಯಜ್ಞೈರ್ದಾನೈಸ್ತಪಸಾ ರಾಜಧರ್ಮೈಃ
ಮಾಂಧಾತಾऽಭೂದ್ ಗೋಪ್ರದಾನೈಶ್ಚ ಯುಕ್ತಃ ॥೨೭॥

ಹಾಗೆಯೇ ಮಹತ್ಕರ್ಮಗಳನ್ನು ಮಾಡಿದ ರಾಜನಾದ ದಿಲೀಪನು ಗೋಪ್ರದಾನದ ವಿಧಿಯನ್ನು ತಿಳಿದು ಸ್ವರ್ಗವನ್ನು ಹೊಂದಿದನು. ಯಜ್ಞಗಳನ್ನೂ, ದಾನಗಳನ್ನೂ,

ತಪಸ್ಸನ್ನೂ ಮಾಡಿ ರಾಜಧರ್ಮಗಳಿಂದ ಕೂಡಿದ ಮಾಂಧಾತೃವು ಗೋಪ್ರದಾನವನ್ನು ಮಾಡಿ ಪುಣ್ಯಭರಿತನಾದನು.

ತಸ್ಮಾತ್ ಪಾರ್ಥ ತ್ವಮಪೀಮಾಂ ಮಯೋಕ್ತಾಂ
ಬಾರ್ಹಸ್ಪತೀಂ ಭಾರತೀಂ ಧಾರಯಸ್ವ ।
ದ್ವಿಜಾಗ್ರ್ಯೇಭ್ಯಃ ಸಂಪ್ರಯಚ್ಛ ಪ್ರತೀತೋ
ಗಾಃ ಪುಣ್ಯಾ ವೈ ಪ್ರಾಪ್ಯ ರಾಜ್ಯಂ ಕುರೂಣಾಮ್ ॥೨೮॥

ಎಲೈ ಪಾರ್ಥನೇ, ಆದ್ದರಿಂದ ನೀನೂ ಸಹ ನಾನು ಹೇಳಿದ ಬೃಹಸ್ಪತ್ಯಾಚಾರ್ಯರ ಈ ಮಾತೆಲ್ಲವನ್ನೂ ಮನಸ್ಸಿನಲ್ಲಿ ಧರಿಸು. ಕುರುಗಳ ರಾಜ್ಯವನ್ನು ಪಡೆದು ಸಂತೋಷದಿಂದ ಶ್ರೇಷ್ಠರಾದ ದ್ವಿಜರಿಗೆ ಪವಿತ್ರವಾದ ಗೋವನ್ನು ದಾನ ಮಾಡು.

ವೈಶಂಪಾಯನಃ

ತಥಾ ಸರ್ವಂ ಕೃತವಾನ್ ಧರ್ಮರಾಜೋ
ಭೀಷ್ಮೇಣೋಕ್ತೋ ವಿಧಿವದ್ ಗೋಪ್ರದಾನೇ ।
ಸ ಮಾಂಧಾತುರ್ದೇವದೇವೋಪದಿಷ್ಟಂ
ಸಮ್ಯಗ್ಧರ್ಮಂ ಧಾರಯಾಮಾಸ ರಾಜಾ ॥೨೯॥

ವೈಶಂಪಾಯನ– ಭೀಷ್ಮರು ಗೋಪ್ರದಾನವನ್ನು ಯಾವ ವಿಧಿಯಿಂದ ಮಾಡಬೇಕೆಂದು ಹೇಳಿದರೋ ಹಾಗೆಯೇ ಧರ್ಮರಾಜನು ವಿಧಿಗೆ ಅನುಸಾರವಾಗಿ ಎಲ್ಲವನ್ನೂ ಮಾಡಿದನು. ಅವನು (ಧರ್ಮರಾಜನು) ಮಾಂಧಾತೃವಿಗೆ ದೇವಗುರುವಾದ ಬೃಹಸ್ಪತಿಗಳು ಹೇಳಿದಂತೆ ಗೋಧರ್ಮವನ್ನು ಆಚರಣೆ ಮಾಡಿ ಪುಣ್ಯವನ್ನು ಧರಿಸಿದನು.

ಇತಿ ನೃಪ ಸತತಂ ಗವಾಂ ಪ್ರದಾನೇ
ಯವಶಕಲಾನ್ ಸಹ ಗೋಮಯೈಃ ಪಿಬಾನಃ ।
ಕ್ಷಿತಿತಳಶಯನಃ ಶಿಖೀ ಯತಾತ್ಮಾ
ವೃಷ ಇವ ರಾಜವೃಷಸ್ತದಾ ಬಭೂವ ॥೩೦॥

ಎಲೈ ರಾಜನೇ, ಈ ಮಾತುಗಳನ್ನು ಕೇಳಿ ಧರ್ಮರಾಜನು ಸತತವಾಗಿ ಗೋಪ್ರದಾನದಲ್ಲಿ ಆಸಕ್ತನಾಗಿ ಗೋಮಯದಲ್ಲಿ ಬಂದ ಯವಶಕಲಗಳನ್ನು

ಗೋಮಯದ ಜೊತೆಯಲ್ಲಿ ಪಾನ ಮಾಡಿ ಜೀವನವನ್ನು ನಡೆಸುತ್ತಾ ಭೂಮಿಯ ಮೇಲೆ ಮಲಗಿ, ಶಿಖೆಯನ್ನು ಧರಿಸಿ, ಜಿತವಾದ ಮನಸ್ಸುಳ್ಳವನಾಗಿ ವೃಷಭದಂತೆ ಆಗ ಅವನು ರಾಜವೃಷನಾದನು.

ಸ ನೃಪತಿರಭವತ್ ಸದೈವ ತಾಭ್ಯಃ
ಪ್ರಯತಮನಾ ಹ್ಯಭಿಸಂಸ್ತುವಂಶ್ಚ ಗಾ ವೈ ।
ನೃಪಧುರಿ ಚ ನ ಗಾಮಯುಂಕ್ತ ಭೂಯಃ
ತುರಗವರೈರಗಮಚ್ಚ ಯತ್ರ ತತ್ರ ॥೩೧॥

ಅವನು (ಧರ್ಮರಾಜನು) ಜಿತಮನಸ್ಕನಾಗಿ ಯಾವಾಗಲೂ ತನ್ನ ತಮ್ಮಂದಿರಿಗೆ ಗೋವುಗಳ ಸ್ತೋತ್ರವನ್ನು ಹೇಳುವವನಾಗಿ ರಾಜಕಾರ್ಯದಲ್ಲಿ ಪುನಃ ಯಾವ ಗೋವನ್ನೂ ತೊಡಗಿಸಲಿಲ್ಲ. ಅಲ್ಲಲ್ಲಿಗೆ ಹೋಗುವಾಗ ಶ್ರೇಷ್ಠವಾದ ಅಶ್ವಗಳಿಂದಲೇ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋದಾನವ್ರತವರ್ಣನಂ ನಾಮ
ಷಡಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಏಳನೆಯ ಅಧ್ಯಾಯ

ಪುನಃ ವಿಸ್ತಾರವಾಗಿ ಗೋದಾನ ಮಹಿಮೆ.

ವೈಶಂಪಾಯನಃ

ತತೋ ಯುಧಿಷ್ಠಿರೋ ರಾಜಾ ಭೂಯಃ ಶಾಂತನವಂ ನೃಪ ।
ಗೋದಾನೇ ವಿಸ್ತರಂ ಧೀಮಾನ್ ಪಪ್ರಚ್ಛ ವಿನಯಾನ್ವಿತಃ ॥೧॥

ವೈಶಂಪಾಯನ– ಎಲೈ ಜನಮೇಜಯನೇ, ಅನಂತರ ಮೇಧಾವಿಯಾದ ಯುಧಿಷ್ಠಿರ ರಾಜನು ವಿನಯದಿಂದ ಕೂಡಿದವನಾಗಿ ಶಂತನು ಪುತ್ರನಾದ ಭೀಷ್ಮರನ್ನು ಕುರಿತು ಗೋದಾನದ ವಿಸ್ತಾರವನ್ನು ಕುರಿತು ಪ್ರಶ್ನೆ ಮಾಡಿದನು.

ಯುಧಿಷ್ಠಿರಃ

ಗೋಪ್ರದಾನೇ ಗುಣಾನ್ ಸಮ್ಯಕ್ ಪುನಃ ಪ್ರಬ್ರೂಹಿ ಭಾರತ ।
ನ ಹಿ ತೃಪ್ಯಾಮ್ಯಹಂ ವೀರ ಶೃಣ್ವಾನೋऽಮೃತಮೀದೃಶಮ್ ॥೨॥

ಯುಧಿಷ್ಠಿರ– ಎಲೈ ಭಾರತನೇ, ಗೋದಾನದ ಗುಣಗಳನ್ನು ಪುನಃ ಚೆನ್ನಾಗಿ ಹೇಳು. ಎಲೈ ವೀರನೇ, ಇಂತಹ ಅಮೃತವನ್ನು ಕೇಳುತ್ತಿರುವ ನಾನು ತೃಪ್ತಿಯನ್ನೇ ಹೊಂದುತ್ತಿಲ್ಲ.

ವೈಶಂಪಾಯನಃ

ಇತ್ಯುಕ್ತೋ ಧರ್ಮರಾಜೇನ ತದಾ ಶಾಂತನವೋ ನೃಪ ।
ಸಮ್ಯಗಾಹ ಗುಣಾಂಸ್ತಸ್ಮೈ ಗೋಪ್ರದಾನಸ್ಯ ಕೇವಲಾನ್ ॥೩॥

ವೈಶಂಪಾಯನ– ಎಲೈ ರಾಜನೇ, ಧರ್ಮರಾಜನಿಂದ ಹೀಗೆ ಹೇಳಲ್ಪಟ್ಟ ಭೀಷ್ಮರು ಗೋದಾನದ ಶ್ರೇಷ್ಠವಾದ ಗುಣಗಳನ್ನು ಅವನಿಗೆ ಚೆನ್ನಾಗಿ ಹೇಳಿದರು.

ಭೀಷ್ಮಃ

ವತ್ಸಲಾಂ ಗುಣಸಂಪನ್ನಾಂ ತರುಣೀಂ ವಸ್ತ್ರಸಂವೃತಾಮ್ ।
ದತ್ತ್ವೈದೃಶೀಂ ಗಾಂ ವಿಪ್ರಾಯ ಸರ್ವಪಾಪೈಃ ಪ್ರಮುಚ್ಯತೇ ॥೪॥

ಭೀಷ್ಮ– ವತ್ಸಸಹಿತವಾದ, ಸಾಧುಗುಣದಿಂದ ಕೂಡಿದ, ಚಿಕ್ಕವಯಸ್ಸಿನ, ವಸ್ತ್ರ ಸಂವೃತವಾದ ಗೋವನ್ನು ವಿಪ್ರನಿಗೆ ದಾನ ಮಾಡಿದರೆ ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ಅಸುರ್ಯಾ ನಾಮ ತೇ ಲೋಕಾ ಗಾಂ ದತ್ತ್ವಾ ತತ್ರ ಗಚ್ಛತಿ ।
ಪೀತೋದಕಾಂ ಜಗ್ಧತೃಣಾಂ ನಷ್ಟದುಗ್ಧಾಂ ನಿರಿಂದ್ರಿಯಾಮ್ ॥೫॥

ಇನ್ನು ನೀರು ಕುಡಿಯಲಾಗದ, ಹುಲ್ಲು ತಿನ್ನಲಾಗದ, ಹಾಲನ್ನು ಕೊಡಲಾಗದ, ಇಂದ್ರಿಯಗಳನ್ನು ಕಳೆದುಕೊಂಡಿರುವ ಗೋವನ್ನು ಕೊಟ್ಟರೆ ದುಃಖಮಯವಾದ ಅಸುರ್ಯ ಎಂಬ ಲೋಕಗಳಿಗೆ ಹೋಗುತ್ತಾನೆ.

ಜರೋಗ್ರಾಮುಪಯುಕ್ತಾರ್ಥಾಂ ಜೀರ್ಣಾಂ ಕೂಪಮಿವಾಜಲಮ್ ।
ದತ್ತ್ವಾ ತಮಃ ಪ್ರವಿಶತಿ ದ್ವಿಜಂ ಕ್ಲೇಶೇನ ಯೋಜಯೇತ್ ॥೬॥

ಮುದಿಯಾದ, ಕ್ರೂರವಾದ, ಉಪಯೋಗವಿಲ್ಲದ, ಬಡಕಲಾದ, ನೀರಿಲ್ಲದ ಬಾವಿಯಂತಿರುವ ಗೋವನ್ನು ದಾನ ಮಾಡಿದರೆ ಸ್ವೀಕರಿಸುವವನನ್ನು ಕ್ಲೇಶಗಳಿಗೆ ಗುರಿಮಾಡುತ್ತಾನೆ ಮತ್ತು ತಾನು ತಮಸ್ಸನ್ನು ಪ್ರವೇಶಿಸುತ್ತಾನೆ.

ದುಷ್ಟಾ ರುಷ್ಟಾ ವ್ಯಾಧಿತಾ ದುರ್ಬಲಾ ವಾ
ನ ದಾತವ್ಯಾ ಯಾಶ್ಚ ಮೂಲ್ಯೈರದತ್ತೈಃ ।
ಕ್ಲೇಶೈರ್ವಿಪ್ರಂ ಯೋಽಫಲೈಃ ಸಂಯುನಕ್ತಿ
ತಸ್ಯಾವೀರ್ಯಾಶ್ಚಾಫಲಾಶ್ಚೈವ ಲೋಕಾಃ ॥೭॥

ದುಷ್ಟವಾದ, ರೋಷದಿಂದ ಕೂಡಿದ, ವ್ಯಾಧಿಯಿಂದ ಕೂಡಿದ ಅಥವಾ ದುರ್ಬಲವಾದ ಗೋವನ್ನು ದಾನ ಮಾಡಬಾರದು. ಮೌಲ್ಯವನ್ನು ಕೊಡದೆ ಅಪಹರಿಸಿದ ಗೋವನ್ನು ದಾನ ಮಾಡಬಾರದು. ಯಾವನು ನಿಷ್ಪಯೋಜನವಾದ ಗೋವನ್ನು ಕೊಟ್ಟು ಬ್ರಾಹ್ಮಣನನ್ನು ಕ್ಲೇಶಕ್ಕೆ ಗುರಿಮಾಡುತ್ತಾನೆಯೋ ಅವನು ದುಷ್ಫಲವಾದ ಯಾವ ಸಾಮರ್ಥ್ಯವೂ ಇಲ್ಲದ ಲೋಕಗಳನ್ನು ಹೊಂದುತ್ತಾನೆ.

ಬಲಾನ್ವಿತಾಃ ಶೀಲವಯೋಪಪನ್ನಾಃ
ಸರ್ವಾಃ ಪ್ರಶಂಸಂತಿ ಸುಗಂಧವತ್ಯಃ ।
ಯಥಾ ಹಿ ಗಂಗಾ ಸರಿತಾಂ ವರಿಷ್ಠಾ
ತಥಾರ್ಜುನೀನಾಂ ಕಪಿಲಾ ವರಿಷ್ಠಾ ॥೮॥

ಬಲದಿಂದ ಕೂಡಿದವುಗಳೂ, ಶೀಲ ಮತ್ತು ವಯಸ್ಸಿನಿಂದ ಕೂಡಿದವುಗಳೂ, ಒಳ್ಳೆಯ ಗಂಧದಿಂದ ಕೂಡಿದವುಗಳೂ ಆದ ಎಲ್ಲಾ ಗೋವುಗಳನ್ನೂ ಪ್ರಶಂಸೆ ಮಾಡುತ್ತಾರೆ. ಹೇಗೆ ಗಂಗೆಯು ಎಲ್ಲಾ ನದಿಗಳಲ್ಲಿ ಶ್ರೇಷ್ಠವೋ ಅದರಂತೆ ಎಲ್ಲಾ ಗೋವುಗಳಲ್ಲಿ ಕಪಿಲ ಗೋವು ಶ್ರೇಷ್ಠವಾದುದು.

ಯುಧಿಷ್ಠಿರಃ

ಕಸ್ಮಾತ್ ಸಮಾನೇ ಬಹುಲಪ್ರದಾನೇ
ಸದ್ಭಿಃ ಪ್ರಶಸ್ತಂ ಕಪಿಲಾಪ್ರದಾನಮ್ ।
ವಿಶೇಷಮಿಚ್ಛಾಮಿ ಮಹಾನುಭಾವ
ಶ್ರೋತುಂ ಸಮರ್ಥೋ ಹಿ ಭವಾನ್ ಪ್ರವಕ್ತುಮ್ ॥೯॥

ಯುಧಿಷ್ಠಿರ– ಎಲ್ಲ ಗೋವುಗಳ ಪ್ರದಾನವೂ ಸಮಾನವಾಗಿರುವಾಗ ಸಜ್ಜನರು ಕಪಿಲ ಗೋದಾನವನ್ನೇ ಏಕೆ ಪ್ರಶಂಸಿಸುತ್ತಾರೆ? ಎಲೈ ಮಹಾನುಭಾವನೇ, ಅದರಲ್ಲಿರುವ ವಿಶೇಷವನ್ನು ಕೇಳಲು ಬಯಸುತ್ತೇನೆ. ನೀನು ಅದಕ್ಕೆ ಉತ್ತರವನ್ನು ಕೊಡಲು ಸಮರ್ಥನಾಗಿದ್ದೀಯೆ.

ಭೀಷ್ಮಃ

ವೃದ್ಧಾನಾಂ ಬ್ರುವತಾಂ ತಾತ ಶ್ರುತಂ ಮೇ ಯತ್ ಪ್ರಭಾಷಸೇ ।
ವಕ್ಷ್ಯಾಮಿ ತದಶೇಷೇಣ ರೋಹಿಣ್ಯೋ ನಿರ್ಮಿತಾ ಯಥಾ ॥೧೦॥

ಭೀಷ್ಮ– ಎಲೈ ಪ್ರೀತಿಪಾತ್ರನೇ, ನೀನು ಕೇಳಿದ ಪ್ರಶ್ನೆಯ ವಿಷಯದಲ್ಲಿ ವೃದ್ಧರು ಮಾತನಾಡುವುದನ್ನು ಕೇಳಿದ್ದೇನೆ. ಗೋವುಗಳು ಹೇಗೆ ನಿರ್ಮಿತವಾದವು ಎಂಬ ಎಲ್ಲಾ ವಿಷಯವನ್ನೂ ನಿನಗೆ ಹೇಳುವೆನು.

ಪ್ರಜಾಃ ಸೃಜೇತಿ ವ್ಯಾದಿಷ್ಟಃ ಪೂರ್ವಂ ದಕ್ಷಃ ಸ್ವಯಂಭುವಾ ।
ಅಸೃಜದ್ ವೃತ್ತಿಮೇವಾಗ್ರೇ ಪ್ರಜಾನಾಂ ಹಿತಕಾಮ್ಯಯಾ ॥೧೧॥

ಪ್ರಜೆಗಳನ್ನು ಸೃಷ್ಟಿಸು ಎಂದು ಬ್ರಹ್ಮದೇವರಿಂದ ಆದೇಶವನ್ನು ಪಡೆದ ದಕ್ಷನು ಪ್ರಜೆಗಳ ಹಿತವನ್ನು ಬಯಸಿ ಮೊದಲು ಪ್ರಜೆಗಳ ವೃತ್ತಿಯನ್ನೇ (ಜೀವನೋಪಾಯವನ್ನೇ) ಸೃಷ್ಟಿಸಿದನು.

ಯಥಾ ಹ್ಯಮೃತಮಾಶ್ರಿತ್ಯ ವರ್ತಯಂತಿ ದಿವೌಕಸಃ ।
ತಥಾ ವೃತ್ತಿಂ ಸಮಾಶ್ರಿತ್ಯ ವರ್ತಯಂತಿ ಪ್ರಜಾ ವಿಭೋ ॥೧೨॥

ಎಲೈ ವಿಭುವೇ, ಹೇಗೆ ದೇವತೆಗಳು ಅಮೃತವನ್ನು ಆಶ್ರಯಿಸಿ ಜೀವಿಸುತ್ತಾರೋ ಅದರಂತೆ ಪ್ರಜೆಗಳು ವೃತ್ತಿಯನ್ನು ಅವಲಂಬಿಸಿ ಜೀವಿಸುತ್ತಾರೆ.

ಅಚರೇಭ್ಯಶ್ಚ ಭೂತೇಭ್ಯಶ್ಚರಾಃ ಶ್ರೇಷ್ಠಾಸ್ತತೋ ನರಾಃ ।
ಬ್ರಾಹ್ಮಣಾಶ್ಚ ತತಃ ಶ್ರೇಷ್ಠಾಸ್ತೇಷು ಯಜ್ಞಾಃ ಪ್ರತಿಷ್ಠಿತಾಃ ॥೧೩॥

ಚಲಿಸದಿರುವ ಪ್ರಾಣಿಗಳಿಗಿಂತಲೂ ಚಲಿಸುವ ಪ್ರಾಣಿಗಳು ಶ್ರೇಷ್ಠವಾದವು. ಅವುಗಳಲ್ಲಿ ಮನುಷ್ಯರು ಶ್ರೇಷ್ಠನಾದವರು. ಅವರಲ್ಲಿ ಬ್ರಾಹ್ಮಣರು ಶ್ರೇಷ್ಠರಾದವರು. ಆ ಬ್ರಾಹ್ಮಣರಲ್ಲಿ ಯಜ್ಞಗಳು ಪ್ರತಿಷ್ಠಿತವಾಗಿವೆ.

ಯಜ್ಞೈರಾಪ್ಯಾಯತೇ ಸೋಮಃ ಸ ಚ ಗೋಷು ಪ್ರತಿಷ್ಠಿತಃ ।
ಸರ್ವೇ ದೇವಾಃ ಪ್ರಮೋದಂತೇ ಪೂರ್ವವೃತ್ತಾಸ್ತತಃ ಪ್ರಜಾಃ ॥೧೪॥

ಯಜ್ಞಗಳಿಂದ ಸೋಮರಸವು ಅಭಿವೃದ್ಧಿಯನ್ನು ಹೊಂದುತ್ತದೆ. ಅದು ಗೋವುಗಳಲ್ಲಿ ಪ್ರತಿಷ್ಠಿತವಾಗಿದೆ. ಅದರಿಂದ ಎಲ್ಲ ದೇವತೆಗಳೂ ಸಂತೋಷ ಪಡುತ್ತಾರೆ. ಆದ್ದರಿಂದ ಮೊದಲು ವೃತ್ತಿಯ ಸೃಷ್ಟಿ ಅನಂತರ ಪ್ರಜೆಗಳ ಸೃಷ್ಟಿ.

ತತಃ ಪ್ರಜಾಸು ಸೃಷ್ಟಾಸು ದಕ್ಷಾದ್ಯೈಃ ಕ್ಷುಧಿತಾಃ ಪ್ರಜಾಃ ।
ಪ್ರಜಾಪತಿಮುಪಾಧಾವನ್ ವಿನಿಶ್ಚಿತ್ಯ ಚತುರ್ಮುಖಮ್ ॥೧೫॥

ದಕ್ಷಾದಿಗಳಿಂದ ಪ್ರಜೆಗಳ ಸೃಷ್ಟಿಯಾದ ಮೇಲೆ ಹಸಿವಿನಿಂದ ಬಳಲಿದ ಪ್ರಜೆಗಳು ತಮ್ಮ ಕಷ್ಟಪರಿಹಾರಕನು ಚತುರ್ಮುಖನೇ ಎಂದು ನಿಶ್ಚಯಿಸಿ ಅವನ ಬಳಿಗೆ ಓಡಿದರು.

ಏತಾನ್ಯೇವ ತು ಭೂತಾನಿ ಪ್ರಾಕ್ರೋಶನ್ ವೃತ್ತಿಕಾಂಕ್ಷಯಾ ।
ವೃತ್ತಿದಂ ಚಾನ್ವಪದ್ಯಂತ ತೃಷಿತಾಃ ಪಿತೃಮಾತೃವತ್ ॥೧೬॥

ಈ ಪ್ರಜೆಗಳೇ ಜೀವನೋಪಾಯವನ್ನು ಹೊಂದಲು ಬಯಸಿ ಕಿರುಚಿದರು. ಬಾಯಾರಿದ ಮಕ್ಕಳು ತಂದೆ-ತಾಯಿಗಳ ಬಳಿಗೆ ಹೋಗುವಂತೆ ವೃತ್ತಿಯನ್ನು ಕಲ್ಪಿಸುವ ಬ್ರಹ್ಮದೇವರ ಬಳಿಗೆ ಹೋದರು.

ಇತೀದಂ ಮನಸಾ ಗತ್ವಾ ಪ್ರಜಾಸರ್ಗಾರ್ಥಮಾತ್ಮನಃ ।
ಪ್ರಜಾಪತಿರ್ಬಲಾಧಾನಮಮೃತಂ ಪ್ರಾಪಿಬತ್ ತದಾ ॥೧೭॥

ತನ್ನ ಪ್ರಜೆಗಳ ಸೃಷ್ಟಿರೂಪವಾದ ಈ ವಿಷಯವನ್ನು ಮನಸ್ಸಿನಲ್ಲಿ ಚಿಂತಿಸಿ ಪ್ರಜಾಪತಿಯಾದ ಬ್ರಹ್ಮದೇವರು ಬಲವನ್ನು ವೃದ್ಧಿಸುವ ಅಮೃತವನ್ನು ಪಾನ ಮಾಡಿದರು.

ಸ ಗತಸ್ತಸ್ಯ ತೃಪ್ತಿಂ ತು ಗಂಧಂ ಸುರಭಿಮುದ್ಗಿರನ್ ।
ದದರ್ಶೋದ್ಗಾರಸಂವೃತ್ತಾಂ ಸುರಭಿಂ ಮುಖಜಾಂ ಸುತಾಮ್ ॥೧೮॥

ಅವರಿಗೆ ಅದರಿಂದ ತೃಪ್ತಿಯಾಯಿತು. ಅವರು ತಮ್ಮ ಮುಖದಿಂದ ಸುರಭಿಯಾದ ಗಂಧವನ್ನು ಹೊರಸೂಸಿದರು. (ತೇಗಿದರು) ಸುರಭಿ ಗಂಧವು ಬಂದಾಗ ಅದರ ಜೊತೆಯಲ್ಲಿ ಬಂದ ಪುತ್ರಿಯಾದ ಸುರಭಿ ಧೇನುವನ್ನು ನೋಡಿದರು.

ಸಾಸೃಜತ್ ಸೌರಭೇಯೀಸ್ತು ಸುರಭಿರ್ಲೋಕಮಾತರಃ ।
ಸುವರ್ಣವರ್ಣಾಃ ಕಪಿಲಾಃ ಪ್ರಜಾನಾಂ ವೃತ್ತಿಧೇನವಃ ॥೧೯॥

ಆ ಸುರಭಿಯು ಲೋಕಮಾತರಳಾದ, ಚಿನ್ನದ ಬಣ್ಣವನ್ನು ಹೊಂದಿದ, ಪ್ರಜೆಗಳ ಜೀವನೋಪಾಯವನ್ನು ಕಲ್ಪಿಸುವ ಕಪಿಲ ಗೋವುಗಳನ್ನು ಸೃಷ್ಟಿಸಿದಳು.

ತಾಸಾಮಮೃತವರ್ಣಾನಾಂ ಕ್ಷರಂತೀನಾಂ ಸಮಂತತಃ ।
ಬಭೂವಾಮೃತಜಃ ಫೇನಃ ಸ್ರವಂತೀನಾಮಿವೋರ್ಮಿಜಃ ॥೨೦॥

ಅಮೃತವರ್ಣದ ಆ ಗೋವುಗಳು ಎಲ್ಲ ಕಡೆಯಲ್ಲೂ ಕ್ಷೀರವನ್ನು ಸುರಿಸುತ್ತಿರಲು ಹರಿಯುವ ನದಿಗಳ ಅಲೆಗಳಿಂದ ನೊರೆಯುಂಟಾಗುವಂತೆ ಕ್ಷೀರದಿಂದ ನೊರೆ ಉಂಟಾಯಿತು.

ಸ ವತ್ಸಮುಖವಿಭ್ರಷ್ಟೋ ಭವಸ್ಯ ಭುವಿ ತಿಷ್ಠತಃ ।
ಶಿರಸ್ಯವಾಪ ತತ್ಕ್ರುದ್ಧಃ ಸ ತದೋದ್ವೀಕ್ಷತ ಪ್ರಭುಃ ।
ಲಲಾಟಪ್ರಭವೇನಾಕ್ಷ್ಣಾ ರೋಹಿಣೀಃ ಪ್ರದಹನ್ನಿವ ॥೨೧॥

ಕ್ಷೀರವನ್ನು ಪಾನ ಮಾಡುವ ವತ್ಸಗಳ ಬಾಯಿಂದ ಕೆಳಗೆ ಬಿದ್ದ ನೊರೆಯು ಭೂಮಿಯಲ್ಲಿದ್ದ ಶಿವನ ತಲೆಯ ಮೇಲೆ ಬಿದ್ದಿತು. ಪ್ರಭುವಾದ ಶಿವನು ಕೋಪಗೊಂಡು ಹಣೆಗಣ್ಣಿನಿಂದ ಗೋವುಗಳನ್ನು ದಹಿಸುವಂತೆ ನೋಡಿದನು.

ತತ್ತೇಜಸ್ತು ತತೋ ರೌದ್ರಂ ಕಪಿಲಾ ಗಾ ವಿಶಾಂಪತೇ ।
ನಾನಾವರ್ಣತ್ವಮನಯನ್ಮೇಘಾನಿವ ದಿವಾಕರಃ ॥೨೨॥

ಎಲೈ ರಾಜನೇ, ಶಿವನ ಆ ಉಗ್ರವಾದ ತೇಜಸ್ಸು ಕಪಿಲ ಗೋವನ್ನು ಸೂರ್ಯನು ಮೇಘಗಳನ್ನು ನಾನಾವರ್ಣಗಳಿಂದ ಕೂಡಿದವುಗಳನ್ನಾಗಿ ಮಾಡುವಂತೆ ನಾನಾ ವರ್ಣಗಳಿಂದ ಕೂಡಿದವುಗಳನ್ನಾಗಿ ಮಾಡಿತು.

ಯಾಸ್ತು ತಸ್ಮಾದಪಕ್ರಮ್ಯ ಸೋಮಮೇವಾಭಿಸಂಶ್ರಿತಾಃ ।
ಯಥೋತ್ಪನ್ನಾಃ ಸ್ವವರ್ಣಾಸ್ತಾ ನೀತಾ ನಾನ್ಯವರ್ಣತಾಮ್ ॥೨೩॥

ಯಾವ ಗೋವುಗಳು ಅಲ್ಲಿಂದ ಹೊರಟು ಚಂದ್ರನನ್ನೇ ಆಶ್ರಯಿಸಿದವೋ ಅವು ಜನನ ಸಮಯದಲ್ಲಿದ್ದಂತೆ ತಮ್ಮ ಸುವರ್ಣವರ್ಣವನ್ನೇ ಉಳಿಸಿಕೊಂಡವು. ಅವುಗಳಿಗೆ ವರ್ಣವ್ಯತ್ಯಾಸವಾಗಲಿಲ್ಲ.

ಅಥ ಕ್ರುದ್ಧಂ ಮಹಾದೇವಂ ಪ್ರಜಾಪತಿರಭಾಷತ ।
ಅಮೃತೇನಾವಸಿಕ್ತಸ್ತ್ವಂ ನೋಚ್ಛಿಷ್ಟಂ ವಿದ್ಯತೇ ಗವಾಮ್ ॥೨೪॥

ಆಗ ಪ್ರಜಾಪತಿಗಳಾದ ಬ್ರಹ್ಮದೇವರು ರುದ್ರದೇವರನ್ನು ಕುರಿತು ನೀನು ಅಮೃತದಿಂದ ತೊಯ್ಸಲ್ಪಟ್ಟಿದ್ದೀಯೆ. ಗೋವುಗಳಲ್ಲಿ ಯಾವ ಉಚ್ಛಿಷ್ಟವೂ ಇರುವುದಿಲ್ಲ.

ಯಥಾ ಹ್ಯಮೃತಮಾದಾಯ ಸೋಮೋ ವಿಷ್ಯಂದತೇ ಪುನಃ ।
ತಥಾ ಕ್ಷೀರಂ ಕ್ಷರಂತ್ಯೇತಾ ರೋಹಿಣ್ಯೋಽಮೃತಸಂಭವಾಃ ॥೨೫॥

ಹೇಗೆ ಚಂದ್ರನು ಅಮೃತವನ್ನು ಸ್ವೀಕಾರ ಮಾಡಿ ಪುನಃ ಅಮೃತವನ್ನು ಕೊಡುತ್ತಾನೆಯೋ ಹಾಗೆಯೇ ಅಮೃತದಿಂದ ಉದಯಿಸಿದ ಈ ಧೇನುಗಳು ಕ್ಷೀರವನ್ನು ಸ್ರವಿಸುತ್ತವೆ.

ನ ದುಷ್ಯತ್ಯನಿಲೋ ನಾಗ್ನಿರ್ನ ಸುವರ್ಣಂ ನ ಚೋದಧಿಃ ।
ನಾಮೃತೇನಾಮೃತಂ ಪೀತಂ ವತ್ಸಪೀತಾ ನ ವತ್ಸಲಾ ॥೨೬॥

ಅಗ್ನಿಗಾಗಲೀ, ವಾಯುವಿಗಾಗಲೀ, ಸುವರ್ಣಕ್ಕಾಗಲೀ, ಸಮುದ್ರಕ್ಕಾಗಲೀ ದೋಷ ಉಂಟಾಗುವುದಿಲ್ಲ. ಪಾನ ಮಾಡಿದ ಅಮೃತದಿಂದ ಅಮೃತಕ್ಕೆ ದೋಷ ಉಂಟಾಗುವುದಿಲ್ಲ. ಕರುವು ಹಾಲು ಕುಡಿಯುವುದರಿಂದ ಹಾಲಿಗೆ ಉಚ್ಛಿಷ್ಟ ದೋಷ ಉಂಟಾಗುವುದಿಲ್ಲ. ಕರುವು ಹಾಲನ್ನು ಕುಡಿದ ಹಸುವಿಗೂ ದೋಷ ವುಂಟಾಗುವುದಿಲ್ಲ.

ಇಮಾಲ್ಲೋಕಾನ್ ಭರಿಷ್ಯಂತಿ ಹವಿಷಾ ಪ್ರಸ್ನವೇನ ಚ ।
ಆಸಾಮೈಶ್ವರ್ಯಮಶ್ನೀಹಿ ಸರ್ವಾಮೃತಮಯಂ ಶುಭಮ್ ॥೨೭॥

ತಾವು ಕೊಡುವ ಹವಿಸ್ಸಿನಿಂದಲೂ ಮತ್ತು ಸಂತತಿಯಿಂದಲೂ ಗೋವುಗಳು ಈ ಲೋಕಗಳನ್ನು ಪೋಷಿಸುತ್ತವೆ. ಇವುಗಳ ಸರ್ವಾಮೃತಮಯವಾದ, ಶುಭವಾದ ಐಶ್ವರ್ಯವನ್ನು (ಕ್ಷೀರಾದಿಗಳನ್ನು) ಭೋಗಿಸುವವನಾಗು (ಎಂದು ಹೇಳಿದನು).

ವೃಷಭಂ ಚ ದದೌ ತಸ್ಮೈ ಸಹ ತಾಭಿಃ ಪ್ರಜಾಪತಿಃ ।
ಪ್ರಸಾದಯಾಮಾಸ ಮನಸ್ತೇನ ರುದ್ರಸ್ಯ ಭಾರತ ॥೨೮॥

ಎಲೈ ಭಾರತನೇ, ಪ್ರಜಾಪತಿಯು ಆ ಗೋವುಗಳ ಜೊತೆಯಲ್ಲಿ ಅವನಿಗೆ ಒಂದು ವೃಷಭವನ್ನೂ ಕೊಟ್ಟನು. ಅದರಿಂದ ರುದ್ರನ ಮನಸ್ಸನ್ನು ಸಂತೋಷಪಡಿಸಿದನು.

ಪ್ರೀತಶ್ಚಾಪಿ ಮಹಾದೇವಶ್ಚಕಾರ ವೃಷಭಂ ತದಾ ।
ಧ್ವಜಂ ಚ ವಾಹನಂ ಚೈವ ತಸ್ಮಾತ್ ಸ ವೃಷಭಧ್ವಜಃ ॥೨೯॥

ಪ್ರಸನ್ನನಾದ ಮಹಾದೇವನು ಆಗ ವೃಷಭವನ್ನು ಧ್ವಜವನ್ನಾಗಿಯೂ ಮತ್ತು ವಾಹನವನ್ನಾಗಿಯೂ ಮಾಡಿಕೊಂಡನು. ಆದ್ದರಿಂದ ಅವನು ವೃಷಭಧ್ವಜನಾದನು.

ತತೋ ದೇವೈರ್ಮಹಾದೇವಸ್ತದಾ ಪಶುಪತಿಃ ಕೃತಃ ।
ಈಶ್ವರಃ ಸ ಗವಾಂ ಮಧ್ಯೇ ವೃಷಾಂಕ ಇತಿ ಚೋಚ್ಯತೇ ॥೩೦॥

ಆಗ ದೇವತೆಗಳೆಲ್ಲರೂ ಸೇರಿ ರುದ್ರದೇವನನ್ನು ಪಶುಪತಿಯನ್ನಾಗಿ ಮಾಡಿದರು. ಗೋವುಗಳ ಮಧ್ಯದಲ್ಲಿರುವ ಗೋವುಗಳಿಗೆ ಒಡೆಯನಾದ ಅವನು ವೃಷಾಂಕ ಎಂದು ಕರೆಯಲ್ಪಡುತ್ತಾನೆ.

ಏವಮವ್ಯಗ್ರವರ್ಣಾನಾಂ ಕಪಿಲಾನಾಂ ಮಹೌಜಸಾಮ್ ।
ಪ್ರದಾನೇ ಪ್ರಥಮಃ ಕಲ್ಪಃ ಸರ್ವಾಸಾಮೇವ ಕೀರ್ತಿತಃ ॥೩೧॥

ಈ ರೀತಿಯಲ್ಲಿ ಮಹಾಸಾಮರ್ಥ್ಯವುಳ್ಳ, ಶ್ರೇಷ್ಠವಾದ ಬಣ್ಣವುಳ್ಳ ಕಪಿಲ ಗೋವುಗಳ ದಾನವನ್ನು ಮಾಡಿದರೆ ಅದು ಎಲ್ಲ ಗೋವುಗಳ ದಾನಕ್ಕಿಂತಲೂ ಶ್ರೇಷ್ಠವಾದ ದಾನವೆಂದು ಹೇಳಲ್ಪಡುತ್ತದೆ.

ಲೋಕಜ್ಯೇಷ್ಠಾ ಲೋಕವೃತ್ತಿಪ್ರವೃತ್ತಾ
ರುದ್ರೋಪೇತಾಃ ಸೋಮವಿಷ್ಯಂದಭೂತಾಃ ।
ಸೌಮ್ಯಾಃ ಪುಣ್ಯಾಃ ಕಾಮದಾಃ ಪ್ರಾಣದಾಶ್ಚ
ಗಾ ವೈ ದತ್ತ್ವಾ ಸರ್ವಕಾಮಪ್ರದಃ ಸ್ಯಾತ್ ॥೩೨॥

ಗೋವುಗಳು ಲೋಕಕ್ಕೆ ಹಿರಿದಾದವು. ಲೋಕದ ವೃತ್ತಿಗಾಗಿ ಪ್ರವೃತ್ತವಾದವುಗಳು. ರುದ್ರನ ಸನ್ನಿಧಾನಕ್ಕೆ ಪಾತ್ರವಾದವುಗಳು. ಅಮೃತದ ಪ್ರವಾಹಕ್ಕೆ ಮಾರ್ಗವಾದವುಗಳು. ಶಾಂತಸ್ವಭಾವದವುಗಳು, ಪುಣ್ಯಪ್ರದವಾದವುಗಳು, ಕಾಮಪ್ರದವಾದವುಗಳು ಮತ್ತು ಪ್ರಾಣಪ್ರದವಾದವುಗಳು. ಅಂತಹ ಗೋವನ್ನು ದಾನ ಮಾಡುವವನು ಸರ್ವ ಕಾಮಗಳನ್ನೂ ದಾನ ಮಾಡಿದವನಾಗುತ್ತಾನೆ.

ಇಮಂ ಗವಾಂ ಪ್ರಭವವಿಧಾನಮುತ್ತಮಂ
ಪಠನ್ ಸದಾ ಶುಚಿರತಿಮಂಗಲಪ್ರಿಯಃ ।
ವಿಮುಚ್ಯತೇ ಕಲಿಕಲುಷೇಣ ಮಾನವಃ
ಪ್ರಿಯಂ ಸುತಾನ್ ಪಶುಧನಮಾಪ್ನುಯಾತ್ ತಥಾ ॥೩೩॥

ಗೋವುಗಳ ಶ್ರೇಷ್ಠವಾದ ಈ ಉತ್ಪತ್ತಿ ವಿಧಾನವನ್ನು ಶುಚಿಯಾಗಿ ಬಹಳ ಮಂಗಲ ಪ್ರಿಯನಾಗಿ ಸದಾ ಪಠಿಸುವ ಮನುಷ್ಯನು ಕಲಿಯ ದೋಷದಿಂದ ನಿರ್ಮುಕ್ತನಾಗುತ್ತಾನೆ. ಪ್ರಿಯರನ್ನೂ, ಪುತ್ರರನ್ನೂ, ಪಶುವನ್ನೂ, ಧನವನ್ನೂ ಪಡೆಯುತ್ತಾನೆ.

ಹವ್ಯಂ ಕವ್ಯಂ ತರ್ಪಣಂ ಶಾಂತಿಕರ್ಮ
ಯಾನಂ ವಾಸೋ ವೃದ್ಧಬಾಲಸ್ಯ ಪುಷ್ಟಿಮ್ ।
ಏತಾನ್ ಸರ್ವಾನ್ ಗೋಪ್ರದಾನೇ ಗುಣಾನ್ ವೈ
ದಾತಾ ರಾಜನ್ನಾಪ್ನುಯಾದ್ ವೈ ಸದೈವ ॥೩೪॥

ಹವ್ಯ, ಕವ್ಯ, ತರ್ಪಣ, ಶಾಂತಿಕರ್ಮ, ವಾಹನ, ವಸ್ತ್ರ, ವೃದ್ಧಬಾಲರ ಪುಷ್ಟಿ- ಎಲೈ ರಾಜನೇ, ಗೋದಾನ ಮಾಡುವವನು ಈ ಎಲ್ಲಾ ಗುಣಗಳನ್ನು ಯಾವಾಗಲೂ ಪಡೆಯುತ್ತಾನೆ.

ವೈಶಂಪಾಯನಃ

ಪಿತಾಮಹಸ್ಯಾಥ ನಿಶಮ್ಯ ವಾಕ್ಯಂ
ರಾಜಾ ಸಹ ಭ್ರಾತೃಭಿರಾಜಮೀಢಃ ।
ಸೌವರ್ಣಕಾಂಸ್ಯೋಪದುಹಾಸ್ತತೋ ಗಾಃ
ಪಾರ್ಥೋ ದದೌ ಬ್ರಾಹ್ಮಣಸತ್ತಮೇಭ್ಯಃ ॥೩೫॥

ವೈಶಂಪಾಯನ– ಪಿತಾಮಹರಾದ ಭೀಷ್ಮರ ವಾಕ್ಯವನ್ನು ತನ್ನ ಸಹೋದರರ ಜೊತೆ ಕೇಳಿದ ಅಜಮೀಢನಾದ ಧರ್ಮರಾಜನು ಶ್ರೇಷ್ಠರಾದ ಬ್ರಾಹ್ಮಣರಿಗೆ ಸುವರ್ಣ ಮತ್ತು ಕಂಚಿನಿಂದ ಮಾಡಿದ ಪಾತ್ರೆಗಳ ಜೊತೆಯಲ್ಲಿ ಗೋವುಗಳನ್ನು ದಾನ ಮಾಡಿದನು.

ತಥೈವ ತೇಭ್ಯೋಽಭಿದದೌ ದ್ವಿಜೇಭ್ಯೋ
ಗವಾಂ ಸಹಸ್ರಾಣಿ ಶತಾನಿ ಚೈವ ।
ಯಜ್ಞಾನ್ ಸಮುದ್ದಿಶ್ಯ ಚ ದಕ್ಷಿಣಾರ್ಥೇ
ಲೋಕಾನ್ ವಿಜೇತುಂ ಪರಮಾಂ ಚ ಕೀರ್ತಿಮ್ ॥೩೬॥

ಬ್ರಾಹ್ಮಣರ ಯಜ್ಞಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಒಳ್ಳೆಯ ಲೋಕಗಳನ್ನು ಜಯಿಸಲು ಮತ್ತು ಶ್ರೇಷ್ಠವಾದ ಕೀರ್ತಿಯನ್ನು ಪಡೆಯಲು ಅಂತಹ ಬ್ರಾಹ್ಮಣರಿಗೆ ಸಹಸ್ರ ಗೋವುಗಳನ್ನೂ, ನೂರು ಗೋವುಗಳನ್ನೂ ದಾನ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕಪಿಲಾಪ್ರದಾನವರ್ಣನಂ ನಾಮ
ಸಪ್ತಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಟನೆಯ ಅಧ್ಯಾಯ

ಗೋಮಹಿಮೆ – ಸೌದಾಸ-ವಸಿಷ್ಠ ಸಂವಾದ.

ಭೀಷ್ಮಃ

ಏತಸ್ಮಿನ್ನೇವ ಕಾಲೇ ತು ವಸಿಷ್ಠಮೃಷಿಸತ್ತಮಮ್ ।
ಇಕ್ಷ್ವಾಕುವಂಶಜೋ ರಾಜಾ ಸೌದಾಸೋ ದದತಾಂ ವರಃ ॥೧॥

ಸರ್ವಲೋಕಚರಂ ಸಿದ್ಧಂ ಬ್ರಹ್ಮಕೋಶಂ ಸನಾತನಮ್ ।
ಪುರೋಹಿತಮಿದಂ ಪ್ರಷ್ಟುಮಭಿವಾದ್ಯೋಪಚಕ್ರಮೇ ॥೨॥

ಭೀಷ್ಮ– ಈ ಕಾಲದಲ್ಲಿಯೇ ಸರ್ವಲೋಕ ಸಂಚಾರಿಗಳಾದ, ಸಿದ್ಧರಾದ, ವೇದನಿಧಿಗಳಾದ, ಸನಾತನರಾದ, ಪುರೋಹಿತರಾದ, ಋಷಿಶ್ರೇಷ್ಠರಾದ ವಸಿಷ್ಠರನ್ನು

ಇಕ್ಷ್ವಾಕುವಂಶದಲ್ಲಿ ಜನಿಸಿದ, ದಾನ ಮಾಡುವವರಲ್ಲಿ ಶ್ರೇಷ್ಠನಾದ ಸೌದಾಸ ರಾಜನು ನಮಸ್ಕರಿಸಿ ಪ್ರಶ್ನೆ ಮಾಡಲು ಪ್ರಾರಂಭಿಸಿದನು.

ಸೌದಾಸಃ

ತ್ರೈಲೋಕ್ಯೇ ಭಗವನ್ ಕಿಂಸ್ವಿತ್ ಪವಿತ್ರಂ ಕಥ್ಯತೇಽನಘ ।
ಯತ್ಕೀರ್ತಯನ್ ಸದಾ ಮರ್ತ್ಯಃ ಪ್ರಾಪ್ನುಯಾತ್ ಪುಣ್ಯಮುತ್ತಮಮ್ ॥

ಸೌದಾಸ– ಪೂಜ್ಯರೇ, ಅನಘರೇ, ಯಾವುದನ್ನು ಚಿಂತಿಸಿದರೆ ಮನುಷ್ಯನು ಯಾವಾಗಲೂ ಶ್ರೇಷ್ಠವಾದ ಪುಣ್ಯವನ್ನು ಹೊಂದಬಹುದೋ ಅಂತಹ ಮೂರು ಲೋಕಗಳಲ್ಲಿಯೂ ಪವಿತ್ರವಾದ ವಸ್ತುವು ಯಾವುದೆಂದು ಹೇಳಲ್ಪಡುತ್ತದೆ?

ಭೀಷ್ಮಃ

ತಸ್ಮೈ ಪ್ರೋವಾಚ ವಚನಂ ಪ್ರಣತಾಯ ಹಿತಂ ತದಾ ।
ಗವಾಮುಪನಿಷದ್ ವಿದ್ವಾನ್ ನಮಸ್ಕೃತ್ಯ ಗವಾಂ ಶುಚಿಃ ॥೪॥

ಭೀಷ್ಮ– ಆಗ ನಮಸ್ಕರಿಸಿದ ಅವನನ್ನು ಕುರಿತು ವಿದ್ವಾಂಸರಾದ ವಸಿಷ್ಠರು ಶುಚಿಯಾಗಿ ಗೋವುಗಳಿಗೆ ನಮಸ್ಕರಿಸಿ ಅವನ ಹಿತವನ್ನು ಉದ್ದೇಶಿಸಿ ಗೋಮಹಿಮೆಯನ್ನು ಹೇಳಿದರು.

ಗಾವಃ ಸುರಭಿಗಂಧಿನ್ಯಸ್ತಥಾ ಗುಗ್ಗುಲುಗಂಧಿಕಾಃ ।
ಗಾವಃ ಪ್ರತಿಷ್ಠಾ ಭೂತಾನಾಂ ಗಾವಃ ಸ್ವಸ್ತ್ಯಯನಂ ಮಹತ್ ॥೫॥

ಗೋವುಗಳು ಸುರಭಿಗಂಧವುಳ್ಳವು, ಗುಗ್ಗುಲಗಂಧವುಳ್ಳವು. ಗೋವುಗಳು ಪ್ರಾಣಿಗಳಿಗೆ ಆಶ್ರಯಭೂತವಾದವು ಮತ್ತು ದೊಡ್ಡ ಮಂಗಳಗಳಿಗೆ ಆಶ್ರಯವಾದವು.

ಗಾವೋ ಭೂತಂ ಭವಿಷ್ಯಚ್ಚ ಗಾವಃ ಪುಷ್ಟಿಃ ಸನಾತನೀ ।
ಗಾವೋ ಲಕ್ಷ್ಮ್ಯಾಸ್ತಥಾ ಮೂಲಂ ಗೋಷು ದತ್ತಂ ನ ನಶ್ಯತಿ ।
ಅನ್ನಂ ಹಿ ಸತತಂ ಗಾವೋ ದೇವಾನಾಂ ಪರಮಂ ಹವಿಃ ॥೬॥

ಭೂತಭವಿಷ್ಯತ್‌ಗಳು ಗೋವುಗಳನ್ನು ಅವಲಂಬಿಸಿವೆ. ಸನಾತನವಾದ ಪುಷ್ಟಿಯು ಗೋವುಗಳಿಂದ ಉಂಟಾಗುತ್ತದೆ. ಗೋವುಗಳು ಸಂಪತ್ತಿಗೆ ಮೂಲವಾದವುಗಳು.

ಅವುಗಳಿಗೆ ಕೊಟ್ಟುದುದು ನಾಶವನ್ನು ಹೊಂದುವುದಿಲ್ಲ. ಗೋವುಗಳು ಸತತವಾಗಿ ದೇವತೆಗಳಿಗೆ ಹವಿಸ್ಸಿನ ರೂಪವಾದ ಶ್ರೇಷ್ಠವಾದ ಅನ್ನ.

ಸ್ವಾಹಾಕಾರವಷಟ್‌ಕಾರೌ ಗೋಷು ನಿತ್ಯಂ ಪ್ರತಿಷ್ಠಿತೌ ।
ಗಾವೋ ಯಜ್ಞಸ್ಯ ಹಿ ಫಲಂ ಗೋಷು ಯಜ್ಞಾಃ ಪ್ರತಿಷ್ಠಿತಾಃ ॥೭॥

ಗೋವುಗಳಲ್ಲಿ ಸ್ವಾಹಾಕಾರ, ವಷಟ್‌ಕಾರಗಳು ಯಾವಾಗಲೂ ಪ್ರತಿಷ್ಠಿತವಾಗಿವೆ. ಗೋವುಗಳು ಯಜ್ಞದ ಫಲ ಮತ್ತು ಯಜ್ಞಕ್ಕೆ ಆಧಾರವಾದವುಗಳು.

ಸಾಯಂ ಪ್ರಾತಶ್ಚ ಸತತಂ ಹೋಮಕಾಲೇ ಮಹಾಮತೇ ।
ಗಾವೋ ದದತಿ ವೈ ಹೋಮ್ಯಮೃಷಿಭ್ಯಃ ಪುರುಷರ್ಷಭ ॥೮॥

ಎಲೈ ಮಹಾಮತಿಯೇ, ಪುರುಷಶ್ರೇಷ್ಠನೇ, ಸಾಯಂಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಗೋವುಗಳು ಋಷಿಗಳಿಗೆ ಸತತವಾಗಿ ಹೋಮಕಾಲದಲ್ಲಿ ಹೋಮದ್ರವ್ಯವನ್ನು ಕೊಡುತ್ತವೆ.

ಕಾನಿಚಿದ್ ಯಾನಿ ದುರ್ಗಾಣಿ ದುಷ್ಕೃತಾನಿ ಕೃತಾನಿ ಚ ।
ತರಂತಿ ಚೈವ ಪಾಪ್ಮಾನಂ ಧೇನುಂ ಯೇ ದದತಿ ಪ್ರಭೋ ॥೯॥

ಎಲೈ ಪ್ರಭುವೇ, ಯಾರು ಗೋವನ್ನು ದಾನ ಮಾಡುತ್ತಾರೆಯೋ ಅವರು ದಾಟಲು ಅಸಾಧ್ಯವಾದ ತಾವು ಮಾಡಿದ ಎಷ್ಟೋ ದುಷ್ಕರ್ಮಗಳನ್ನು ಮತ್ತು ಪಾಪಗಳನ್ನು ದಾಟುತ್ತಾರೆ.

ಏಕಾಂ ಚ ದಶಗುರ್ದದ್ಯಾದ್ ದಶ ದದ್ಯಾಚ್ಚ ಗೋಶತೀ ।
ಶತಂ ಸಹಸ್ರಗುರ್ದದ್ಯಾತ್ ಸರ್ವೇ ತುಲ್ಯಫಲಾ ಹಿ ತೇ ॥೧೦॥

ಹತ್ತು ಗೋವುಗಳನ್ನು ಹೊಂದಿದವನು ಒಂದನ್ನು ದಾನ ಮಾಡಬೇಕು. ನೂರು ಗೋವನ್ನು ಹೊಂದಿದವನು ಹತ್ತು ಗೋವುಗಳನ್ನು ದಾನ ಮಾಡಬೇಕು. ಸಹಸ್ರ ಗೋವುಗಳನ್ನು ಹೊಂದಿದವನು ನೂರು ಗೋವುಗಳನ್ನು ದಾನ ಮಾಡಬೇಕು. ಅವರೆಲ್ಲರಿಗೂ ಸಮಾನವಾದ ಫಲವು ದೊರಕುತ್ತದೆ.

ಅನಾಹಿತಾಗ್ನಿಃ ಶತಗುರಯಜ್ವಾ ಚ ಸಹಸ್ರಗುಃ ।
ಸಮೃದ್ಧೋ ಯಶ್ಚ ಕೀನಾಶೋ ನಾರ್ಘಮರ್ಹಂತಿ ತೇ ತ್ರಯಃ ॥೧೧॥

ನೂರು ಗೋವುಗಳನ್ನು ಹೊಂದಿ ಅಗ್ನಿಯ ಆಧಾನವನ್ನು ಮಾಡದವನು, ಸಹಸ್ರ ಗೋವುಗಳನ್ನು ಹೊಂದಿ ಯಾಗವನ್ನು ಮಾಡದವನು, ಸಂಪತ್ತನ್ನು ಹೊಂದಿ ಲೋಭ ಹೊಂದಿದವನು - ಈ ಮೂರು ಜನರು ಯಾವ ಬೆಲೆಯೂ ಇಲ್ಲದವರು.

ಕಪಿಲಾಂ ಯೇ ಪ್ರಯಚ್ಛಂತಿ ಸವತ್ಸಾಂ ಕಾಂಸ್ಯದೋಹನಾಮ್ ।
ಸುವ್ರತಾಂ ವಸ್ತ್ರಸಂವೀತಾಮುಭೌ ಲೋಕೌ ಜಯಂತಿ ತೇ ॥೧೨॥

ಯಾರು ಕರುವಿನಿಂದ ಮತ್ತು ಕಂಚಿನ ಪಾತ್ರೆಯಿಂದ ಸಹಿತವಾದ ಒಳ್ಳೆಯ ಶೀಲವುಳ್ಳ ವಸ್ತ್ರವು ಹೊದಿಸಲ್ಪಟ್ಟ ಕಪಿಲ ಗೋವನ್ನು ದಾನ ಮಾಡುತ್ತಾರೆಯೋ ಅವರು ಈ ಲೋಕ ಮತ್ತು ಪರಲೋಕಗಳೆರಡನ್ನೂ ಜಯಿಸುತ್ತಾರೆ.

ಯುವಾನಮಿಂದ್ರಿಯೋಪೇತಂ ಶತೇನ ಸಹ ಯೂಥಪಮ್ ।
ಗವೇಂದ್ರಂ ಬ್ರಾಹ್ಮಣೇಂದ್ರಾಯ ಭೂರಿಶೃಂಗಮಲಂಕೃತಮ್ ॥೧೩॥

ವೃಷಭಂ ಯೇ ಪ್ರಯಚ್ಛಂತಿ ಶ್ರೋತ್ರಿಯಾಯ ಪರಂತಪ ।
ಐಶ್ವರ್ಯಂ ತೇಽಭಿಜಾಯಂತೇ ಜಾಯಮಾನಾಃ ಪುನಃ ಪುನಃ ॥೧೪॥

ಎಲೈ ಪರಂತಪನೇ, ಯಾರು ತರುಣವಯಸ್ಸಿನಿಂದ ಕೂಡಿದ, ಇಂದ್ರಿಯ ಪಾಟವವುಳ್ಳ, ನೂರು ಗೋವುಗಳಿಗೆ ಪತಿಯಾದ, ದೊಡ್ಡ ಕೊಂಬುಗಳನ್ನು ಹೊಂದಿರುವ, ಅಲಂಕೃತವಾದ, ಶ್ರೇಷ್ಠವಾದ ವೃಷಭವನ್ನು ಶ್ರೋತ್ರಿಯನಾದ ಬ್ರಾಹ್ಮಣ ಶ್ರೇಷ್ಠನಿಗೆ ದಾನ ಮಾಡುತ್ತಾರೆಯೋ ಅವರು ಪುನಃ ಪುನಃ ಹುಟ್ಟುವಾಗಲೆಲ್ಲಾ ಐಶ್ವರ್ಯವಂತರಾಗಿಯೇ ಹುಟ್ಟುತ್ತಾರೆ.

ನಾಕೀರ್ತಯಿತ್ವಾ ಗಾಃ ಸುಪ್ಯಾನ್ನಾಸ್ಮೃತ್ಯ ಪುನರುತ್ಪತೇತ್ ।
ಸಾಯಂ ಪ್ರಾತರ್ನಮಸ್ಯೇಚ್ಚ ಗಾಸ್ತತಃ ಪುಷ್ಟಿಮಾಪ್ನುಯಾತ್ ॥೧೫॥

ಗೋವುಗಳ ಕೀರ್ತನೆಯನ್ನು ಮಾಡದೆ ಮಲಗಬಾರದು. ಗೋವುಗಳನ್ನು ಸ್ಮರಣೆ ಮಾಡದೆ ಶಯನದಿಂದ ಏಳಬಾರದು. ಗೋವುಗಳಿಗೆ ಸಾಯಂಕಾಲದಲ್ಲಿಯೂ ಮತ್ತು ಪ್ರಾತಃಕಾಲದಲ್ಲಿಯೂ ನಮಸ್ಕರಿಸಬೇಕು. ಅದರಿಂದ ಪುಷ್ಟಿಯುಂಟಾಗುತ್ತದೆ.

ಗವಾಂ ಮೂತ್ರಪುರೀಷಸ್ಯ ನೋದ್ವಿಜೇತ ಕದಾಚನ ।
ನ ಚಾಸಾಂ ಮಾಂಸಮಶ್ನೀಯಾದ್ ಗವ್ಯಾಂ ವೃಷ್ಟಿಂ ತಥಾಶ್ನುತೇ ॥೧೬॥

ಗೋವುಗಳ ಗೋಮಯ ಮತ್ತು ಮೂತ್ರಗಳಿಗೆ ಎಂದೂ ಅಸಹ್ಯ ಪಡಬಾರದು. ಅವುಗಳ ಮಾಂಸವನ್ನು ಭಕ್ಷಿಸಬಾರದು. ಅಂತಹವನು ಗೋ ಮತ್ತು ಗೋರಸಗಳ ಸಮೃದ್ಧಿಯನ್ನು ಪಡೆಯುತ್ತಾನೆ.

ಗಾಶ್ಚ ಸಂಕೀರ್ತಯೇನ್ನಿತ್ಯಂ ನಾವಮನ್ಯೇತ ಗಾಸ್ತಥಾ ।
ಅನಿಷ್ಟಂ ಸ್ವಪ್ನಮಾವೀಕ್ಷ್ಯ ಗಾಂ ನರಃ ಸಂಪ್ರಕೀರ್ತಯೇತ್ ॥೧೭॥

ಯಾವಾಗಲೂ ಗೋವುಗಳನ್ನು ಪ್ರಶಂಸಿಸಬೇಕು, ಅವಮಾನ ಮಾಡಬಾರದು. ಅನಿಷ್ಟವಾದ ಸ್ವಪ್ನವನ್ನು ನೋಡಿದರೆ ಮನುಷ್ಯನು ಎದ್ದು ಗೋವುಗಳ ಪ್ರಶಂಸೆಯನ್ನು ಮಾಡಬೇಕು.

ಗೋಮಯೇನ ಸದಾ ಸ್ನಾಯಾದ್ ಗೋಕರೀಷೇ ಚ ಸಂವಿಶೇತ್ ।
ಶ್ಲೇಷ್ಮಮೂತ್ರಪುರೀಷಾಣಿ ಪ್ರತಿಘಾತಂ ಚ ವರ್ಜಯೇತ್ ॥೧೮॥

ಗೋಮಯವನ್ನು ಲೇಪಿಸಿಕೊಂಡು ಸ್ನಾನವನ್ನು ಮಾಡಬೇಕು. ಗೋವಿನ ಒಣಗಿದ ಸೆಗಣಿಯ ಮೇಲೆ ಕುಳಿತುಕೊಳ್ಳಬೇಕು. ಗೋವಿನ ಮೇಲೆ ಶ್ಲೇಷ್ಮ, ಮೂತ್ರಪೌರುಷಗಳನ್ನು ವಿಸರ್ಜನೆ ಮಾಡಬಾರದು. ಗೋವುಗಳನ್ನು ಹೊಡೆಯಬಾರದು.

ಸಾರ್ದ್ರಚರ್ಮಣಿ ಭುಂಜೀತ ನಿರೀಕ್ಷನ್ ವಾರುಣೀಂ ದಿಶಮ್ ।
ವಾಗ್ಯತಃ ಸರ್ಪಿಷಾ ಭೂಮೌ ಗವ್ಯಾಂ ವೃಷ್ಟಿಂ ತಥಾಶ್ನತೇ ॥೧೯॥

ಆರ್ದ್ರವಾದ ಗೋಚರ್ಮದ ಮೇಲೆ ಪಶ್ಚಿಮಾಭಿಮುಖವಾಗಿ ಕುಳಿತು ಮೌನದಿಂದ ಘೃತಸಹಿತವಾದ ಅನ್ನವನ್ನು ಭೂಮಿಯಲ್ಲಿ ಬಡಿಸಿಕೊಂಡು ಭುಂಜಿಸಬೇಕು. ಗೋಸಂಬಂಧಿಯಾದ ಸಮೃದ್ಧಿಯನ್ನು ಅದರಿಂದ ಪಡೆಯುತ್ತಾನೆ.

ಘೃತೇನ ಜುಹುಯಾದಗ್ನಿಂ ಘೃತೇನ ಸ್ವಸ್ತಿ ವಾಚಯೇತ್ ।
ಘೃತಂ ದದ್ಯಾದ್ ಘೃತಂ ಪ್ರಾಶೇದ್ ಗವ್ಯಾಂ ವೃಷ್ಟಿಂ ತಥಾಶ್ನತೇ ॥೨೦॥

ಅಗ್ನಿಯಲ್ಲಿ ಘೃತದಿಂದ ಹೋಮ ಮಾಡಬೇಕು. ಘೃತದಿಂದ ಸ್ವಸ್ತಿವಾಚನ ಮಾಡಿಸಬೇಕು. ಘೃತವನ್ನು ದಾನ ಕೊಡಬೇಕು. ಘೃತವನ್ನು ಭುಂಜಿಸಬೇಕು. ಆಗ ಗೋಸಂಬಂಧಿಯಾದ ಸಮೃದ್ಧಿಯು ಉಂಟಾಗುತ್ತದೆ.

ಗೋಮತ್ಯಾ ವಿದ್ಯಯಾ ಧೇನುಂ ತಿಲಾನಾಮಭಿಮಂತ್ರ್ಯ ಯಃ ।
ರಸರತ್ನಮಯೀಂ ದದ್ಯಾನ್ನ ಸ ಶೋಚೇತ್ ಕೃತಾಕೃತೇ ॥೨೧॥

ಗೋಮತಿ (ಗೋಮಾನ್ ಅಗ್ನಿ, ಇಮಾನ್ ಅಶ್ಮಿ) ಎಂಬ ಮಂತ್ರದಿಂದ ತಿಲಧೇನುವನ್ನು ಅಭಿಮಂತ್ರಿಸಿ ಅಥವಾ ರಸಮಯವಾದ, ರತ್ನಮಯವಾದ ಧೇನುವನ್ನು ಅಭಿಮಂತ್ರಿಸಿ ದಾನವನ್ನು ಮಾಡುವವನು ಏನು ಮಾಡಿದರೂ, ಏನು ಮಾಡದಿದ್ದರೂ ಶೋಕ ಪಡುವುದಿಲ್ಲ.

ಗಾವೋ ಮಾಮುಪತಿಷ್ಠಂತು ಹೇಮಶೃಂಗಾಃ ಪಯೋಮುಚಃ ।
ಸುರಭ್ಯಃ ಸೌರಭೇಯಾಶ್ಚ ಸರಿತಃ ಸಾಗರಂ ಯಥಾ ॥೨೨॥

ಚಿನ್ನದ ಕೊಂಬುಗಳುಳ್ಳ, ಹಾಲನ್ನು ಕೊಡುವ ಸುರಭಿಗಳೂ, ಸುರಭಿಯ ಸಂತಾನವೂ, ಆದ ಗೋವುಗಳು ನದಿಗಳು ಸಮುದ್ರದ ಕಡೆಗೆ ಬರುವಂತೆ ನನ್ನ ಸಮೀಪಕ್ಕೆ ಬರಲಿ.

ಗಾವಃ ಪಶ್ಯಂತು ಮಾಂ ನಿತ್ಯಂ ಗಾವಃ ಪಶ್ಯಾಮ್ಯಹಂ ತದಾ ।
ಗಾವೋಽಸ್ಮಾಕಂ ವಯಂ ತಾಸಾಂ ಯತೋ ಗಾವಸ್ತತೋ ವಯಮ್ ॥

ಗೋವುಗಳು ಯಾವಾಗಲೂ ನನ್ನನ್ನು ನೋಡಲಿ. ನಾನು ಗೋವುಗಳನ್ನು ಯಾವಾಗಲೂ ನೋಡುತ್ತೇನೆ. ಗೋವುಗಳು ನಮ್ಮವು. ನಾವು ಗೋವುಗಳಿಗೆ ಸೇರಿದವರು. ಎಲ್ಲಿ ಗೋವುಗಳಿವೆಯೋ ಅಲ್ಲಿ ನಾವಿದ್ದೇವೆ.

ಏವಂ ರಾತ್ರೌ ದಿವಾ ಚೈವ ಸಮೇಷು ವಿಷಮೇಷು ಚ ।
ಮಹಾಭಯೇಷು ಚ ನರಃ ಕೀರ್ತಯನ್ ಮುಚ್ಯತೇ ಭಯಾತ್ ॥೨೪॥

ಈ ರೀತಿಯಲ್ಲಿ ಹಗಲಿನಲ್ಲಿ ಮತ್ತು ರಾತ್ರಿಯಲ್ಲಿ ಸಮ ಪರಿಸ್ಥಿತಿಯಲ್ಲಿ ಮತ್ತು ವಿಷಮಪರಿಸ್ಥಿತಿಯಲ್ಲಿ ಮತ್ತು ಮಹಾಭಯದ ಸಂದರ್ಭದಲ್ಲಿ ಕೀರ್ತಿಸುವ ಮನುಷ್ಯನು ಭಯದಿಂದ ನಿರ್ಮುಕ್ತನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ಗೋಮಾಹಾತ್ಮ್ಯವರ್ಣನಂ
ನಾಮ ಅಷ್ಟಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಎಂಟನೆಯ ಅಧ್ಯಾಯ ಮುಗಿಯಿತು.

ನೂರ ಒಂಬತ್ತನೆಯ ಅಧ್ಯಾಯ

ಗೋದಾನಫಲ-ವಸಿಷ್ಠರ ಉಪದೇಶ.

ವಸಿಷ್ಠಃ

ಶತಂ ವರ್ಷಸಹಸ್ರಾಣಾಂ ತಪಸ್ತಪ್ತಂ ಸುದುಶ್ಚರಮ್ ।
ಗೋಭಿಃ ಪೂರ್ವಮಿಸೃಷ್ಟಾಭಿರ್ಗಚ್ಛೇಮ ಶ್ರೇಷ್ಠತಾಮಿತಿ ॥೧॥

ವಸಿಷ್ಠರು– ಮೊದಲು ಸೃಷ್ಟಿಸಲ್ಪಟ್ಟ ಗೋವುಗಳು ನಾವು ಶ್ರೇಷ್ಠತೆಯನ್ನು ಪಡೆಯಬೇಕೆಂದು ಉದ್ದೇಶಿಸಿ ನೂರು ಸಹಸ್ರವರ್ಷಗಳ ಕಾಲ ದುಷ್ಕರವಾದ ತಪಸ್ಸನ್ನು ಮಾಡಿದವು.

ಲೋಕೇಽಸ್ಮಿನ್ ದಕ್ಷಿಣಾನಾಂ ಚ ಸರ್ವಾಸಾಂ ವಯಮುತ್ತಮಾಃ ।
ಭವೇಮ ನ ಚ ಲಿಪ್ಯೇಮ ದೋಷೇಣೇತಿ ಪರಂತಪ ॥೨॥

ಈ ಲೋಕದಲ್ಲಿ ನಾವು ಎಲ್ಲ ದಕ್ಷಿಣೆಗಳಿಗಿಂತಲೂ ಉತ್ತಮ ದಕ್ಷಿಣೆಯಾಗಬೇಕು. ಎಲೈ ಪರಂತಪನೇ, ನಾವು ಯಾವ ದೋಷದಿಂದಲೂ ಲಿಪ್ತರಾಗಬಾರದು.

ಸ ಏವ ಚೇತಸಾ ತೇನ ಹತೋ ಲಿಪ್ಯೇತ ಸರ್ವದಾ ।
ಶಕೃತಾ ಚ ಪವಿತ್ರಾರ್ಥಂ ಕುರ್ವೀರನ್ ದೇವಮಾನುಷಾಃ ॥೩॥

ನಮ್ಮನ್ನು ದುಷ್ಟಬುದ್ಧಿಯಿಂದ ನೋಡುವವನು ದೋಷಗಳ ಲೇಪವನ್ನು ಹೊಂದಬೇಕು. ದೇವತೆಗಳು ಮತ್ತು ಮನುಷ್ಯರು ಪಾವಿತ್ರ್ಯಕ್ಕಾಗಿ ನಮ್ಮ ಗೋಮಯವನ್ನು ಉಪಯೋಗಿಸಬೇಕು.

ತಥಾ ಸರ್ವಾಣಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಪ್ರದಾತಾರಶ್ಚ ಗೋಲೋಕಾನ್ ಗಚ್ಛೇಯುರಿತಿ ಮಾನದ ॥೪॥

ಎಲೈ ಮಾನದನೇ, ಹಾಗೆಯೇ ನಮ್ಮನ್ನು ಸತ್ಕರಿಸುವ ಸ್ಥಾವರ-ಜಂಗಮ ಪ್ರಾಣಿಗಳೆಲ್ಲವೂ ಮತ್ತು ಗೋದಾನ ಮಾಡುವವರೂ ಗೋಲೋಕವನ್ನು ಪಡೆಯಬೇಕು.

ತಾಭ್ಯೋ ವರಂ ದದೌ ಬ್ರಹ್ಮಾ ತಪಸೋಽಂತೇ ಸ್ವಯಂ ಪ್ರಭುಃ ।
ಏವಂ ಭವತ್ವಿತಿ ವಿಭುರ್ಲೋಕಾಂಸ್ತಾರಯತೇತಿ ಚ ॥೫॥

ಪ್ರಭುವೂ, ವಿಭುವೂ ಆದ ಬ್ರಹ್ಮದೇವರು ತಪಸ್ಸಿನ ಕೊನೆಯಲ್ಲಿ ವರವನ್ನು ಕೊಟ್ಟು ಹಾಗೆಯೇ ಆಗಲಿ ಎಂದು ಹೇಳಿ ನೀವು ಲೋಕಗಳನ್ನು ದಾಟಿಸಿ ಎಂದು ಹೇಳಿದರು.

ಉತ್ತಸ್ಥುಃ ಸಿದ್ಧಿಕಾಮಾಸ್ತಾ ಭೂತಭವ್ಯಸ್ಯ ಮಾತರಃ ।
ತಪಸೋಽಂತೇ ಮಹಾರಾಜ ಗಾವೋ ಲೋಕಪರಾಯಣಾಃ ॥೬॥

ಲೋಕಕ್ಕೆ ಆಧಾರಭೂತವಾದ, ಭೂತ ಮತ್ತು ಭವಿಷ್ಯ ಪ್ರಾಣಿಗಳ ಮಾತೃಗಳಾದ ಗೋವುಗಳು ಎಲೈ ಮಹಾರಾಜನೇ, ತಪಸ್ಸಿನ ಅಂತ್ಯದಲ್ಲಿ ಸಿದ್ಧಿಯನ್ನು ಬಯಸಿ ಮೇಲೆದ್ದವು.

ತಸ್ಮಾದ್ ಗಾವೋ ಮಹಾಭಾಗಾಃ ಪವಿತ್ರಂ ಪರಮುಚ್ಯತೇ ।
ತಥೈವ ಸರ್ವಭೂತಾನಾಂ ಗಾವಸ್ತಿಷ್ಠಂತಿ ಮೂರ್ಧನಿ ॥೭॥

ಆದ್ದರಿಂದ ಗೋವುಗಳು ಮಹಾಭಾಗ್ಯವನ್ನು ಪಡೆದಿರುವಂತಹವುಗಳು. ಬಹಳ ಪವಿತ್ರವಾದವುಗಳು. ಹಾಗೆಯೇ ಅವು ಎಲ್ಲ ಪ್ರಾಣಿಗಳ ಶಿರಸ್ಸಿನಲ್ಲಿ (ಶ್ರೇಷ್ಠವಾಗಿ) ನಿಲ್ಲುತ್ತವೆ.

ಸಮಾನವತ್ಸಾಂ ಕಪಿಲಾಂ ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಂ ಬ್ರಹ್ಮಲೋಕೇ ಮಹೀಯತೇ ॥೮॥

ಅನುರೂಪವಾದ ಕರ್ಮವನ್ನು ಹೊಂದಿರುವ ಹಾಲನ್ನು ಕೊಡುವ, ಒಳ್ಳೆಯ ಶೀಲವನ್ನು ಹೊಂದಿದ, ವಸ್ತ್ರದಿಂದ ಆಚ್ಛಾದಿತವಾದ ಕಪಿಲಧೇನುವನ್ನು ದಾನ ಮಾಡುವವನು ಬ್ರಹ್ಮಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ರೋಹಿಣೀಂ ತುಲ್ಯವತ್ಸಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಂ ಸೂರ್ಯಲೋಕೇ ಮಹೀಯತೇ ॥೯॥

ಅನುರೂಪವಾದ ಕರುವನ್ನುಹೊಂದಿರುವ, ಹಾಲನ್ನು ಕರೆಯುವ, ಒಳ್ಳೆಯ ಶೀಲವನ್ನು ಹೊಂದಿರುವ, ವಸ್ತ್ರಾಚ್ಛಾದಿತವಾದ ಕೆಂಪು ಹಸುವನ್ನು ದಾನ ಕೊಡುವವನು ಸೂರ್ಯಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಸಮಾನವತ್ಸಾಂ ಶಬಲಾಂ ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಂ ಸೋಮಲೋಕೇ ಮಹೀಯತೇ ॥೧೦॥

ಅನುರೂಪವಾದ ಕರುವನ್ನು ಹೊಂದಿರುವ, ಹಾಲನ್ನು ಕರೆಯುವ, ಒಳ್ಳೆಯ ಶೀಲವುಳ್ಳ, ವಸ್ತ್ರದಿಂದ ಆಚ್ಛಾದಿತವಾದ ಅನೇಕ ವರ್ಣಗಳಿರುವ ಧೇನುವನ್ನು ದಾನ ಮಾಡುವವನು ಚಂದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಸಮಾನವತ್ಸಾಂ ಶ್ವೇತಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಮಿಂದ್ರಲೋಕೇ ಮಹೀಯತೇ ॥೧೧॥

ಅನುರೂಪವಾದ ಕರುವನ್ನು ಹೊಂದಿರುವ, ಹಾಲನ್ನು ಕರೆಯುವ, ಒಳ್ಳೆಯ ಶೀಲವುಳ್ಳ, ವಸ್ತ್ರದಿಂದ ಆಚ್ಛಾದಿತವಾದ ಶ್ವೇತಗೋವನ್ನು ದಾನ ಮಾಡುವವನು ಇಂದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಸಮಾನವತ್ಸಾಂ ಕೃಷ್ಣಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಮಗ್ನಿಲೋಕೇ ಮಹೀಯತೇ ॥೧೨॥

ಅನುರೂಪವಾದ ಕರುವನ್ನು ಹೊಂದಿರುವ, ಹಾಲನ್ನು ಕರೆಯುವ, ಒಳ್ಳೆಯ ಶೀಲವುಳ್ಳ, ವಸ್ತ್ರದಿಂದ ಆಚ್ಛಾದಿತವಾದ ಕಪ್ಪುವರ್ಣದ ಧೇನುವನ್ನು ದಾನ ಮಾಡುವವನು ಅಗ್ನಿ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಸಮಾನವತ್ಸಾಂ ಧೂಮ್ರಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಂ ಯಾಮ್ಯಲೋಕೇ ಮಹೀಯತೇ ॥೧೩॥

ಅನುರೂಪವಾದ ಕರುವನ್ನು ಹೊಂದಿರುವ, ಹಾಲನ್ನು ಕರೆಯುವ, ಒಳ್ಳೆಯ ಶೀಲವುಳ್ಳ, ವಸ್ತ್ರದಿಂದ ಆಚ್ಛಾದಿತವಾದ ಧೂಮವರ್ಣದ ಧೇನುವನ್ನು ದಾನ ಮಾಡುವವನು ಯಮನ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಅಪಾಂ ಫೇನಸವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ವಾರುಣಂ ಲೋಕಮಶ್ನುತೇ ॥೧೪॥

ಅನುರೂಪವಾದ ಕರುವನ್ನು ಹೊಂದಿರುವ, ಹಾಲನ್ನು ಕರೆಯುವ, ಒಳ್ಳೆಯ ಶೀಲವುಳ್ಳ, ವಸ್ತ್ರದಿಂದ ಆಚ್ಛಾದಿತವಾದ ನೀರಿನ ನೊರೆಯ ಬಣ್ಣದ ಗೋವನ್ನು ದಾನ ಮಾಡುವವನು ವರುಣ ಲೋಕವನ್ನು ಹೊಂದುತ್ತಾನೆ.

ವಾತರೇಣುಸವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ವಾಯುಲೋಕೇ ಮಹೀಯತೇ ॥೧೫॥

ಕರುವಿನಿಂದ ಮತ್ತು ಕಂಚಿನ ಪಾತ್ರೆಯಿಂದ ಕೂಡಿದ, ವಸ್ತ್ರಾಚ್ಛಾದಿತವಾದ, ಗಾಳಿಯಲ್ಲಿನ ಕಣಗಳಿಗೆ ಸಮಾನವಾದ ವರ್ಣವುಳ್ಳ ಗೋವನ್ನು ದಾನ ಮಾಡುವವನು ವಾಯುಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಹಿರಣ್ಯವರ್ಣಾಂ ಪಿಂಗಾಕ್ಷೀಂ ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ಕೌಬೇರಂ ಲೋಕಮಶ್ನುತೇ ॥೧೬॥

ಕರುವಿನಿಂದ ಮತ್ತು ಕಂಚಿನ ಪಾತ್ರೆಯಿಂದ ಸಹಿತವಾದ, ಸುವರ್ಣವರ್ಣದ, ಕಂದುಬಣ್ಣದ ಕಣ್ಣುಗಳುಳ್ಳ, ವಸ್ತ್ರಾಚ್ಛಾದಿತವಾದ ಗೋವನ್ನು ದಾನ ಮಾಡಿ ಕುಬೇರನ ಲೋಕವನ್ನು ಹೊಂದುತ್ತಾನೆ.

ಪಲಾಲಧೂಮ್ರವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ಪಿತೃಲೋಕೇ ಮಹೀಯತೇ ॥೧೭॥

ಕರುವಿನಿಂದ ಮತ್ತು ಕಂಚಿನ ಕರೆಯುವ ಪಾತ್ರೆಯಿಂದ ಸಹಿತವಾದ, ವಸ್ತ್ರದಿಂದ ಆಚ್ಛಾದಿತವಾದ, ಹುಲ್ಲಿನಿಂದ ಉಂಟಾದ ಧೂಮದ ವರ್ಣದ ಸಮಾನವಾದ ಬಣ್ಣವುಳ್ಳ ಗೋವನ್ನು ದಾನ ಮಾಡಿ ಪಿತೃಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಸವತ್ಸಾಂ ಪೀವರೀಂ ದತ್ತ್ವಾ ಶಿತಿಕಂಠಾಮಲಂಕೃತಾಮ್ ।
ವೈಶ್ವದೇವಮಸಂಬಾಧಂ ಸ್ಥಾನಂ ಶ್ರೇಷ್ಠಂ ಪ್ರಪದ್ಯತೇ ॥೧೮॥

ಕರುವಿನಿಂದ ಸಹಿತವಾದ, ಕಪ್ಪು ಕಂಠವನ್ನುಳ್ಳ, ಅಲಂಕೃತವಾದ, ಪುಷ್ಟವಾದ ಗೋವನ್ನು ದಾನ ಮಾಡುವವನು ಜಲಸಂಬಾಧವಿಲ್ಲದಿರುವ ಶ್ರೇಷ್ಠವಾದ ವಿಶ್ವೇದೇವತೆಗಳ ಲೋಕವನ್ನು ಹೊಂದುತ್ತಾನೆ.

ಸಮಾನವತ್ಸಾಂ ಗೌರೀಂ ತು ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಂ ವಸೂನಾಂ ಲೋಕಮಶ್ನುತೇ ॥೧೯॥

ಅನುರೂಪವಾದ ಕರುವನ್ನು ಹೊಂದಿರುವ, ಹಾಲನ್ನು ಕರೆಯುವ, ಒಳ್ಳೆಯ ಶೀಲವುಳ್ಳ, ವಸ್ತ್ರದಿಂದ ಆಚ್ಛಾದಿತವಾದ ಗೌರವರ್ಣದ (ಬಿಳಿ) ಗೋವನ್ನು ದಾನ ಮಾಡುವವನು ವಸುಗಳ ಲೋಕವನ್ನು ಪಡೆಯುತ್ತಾನೆ.

ಪಾಂಡುಕಂಬಲವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ಸಾಧ್ಯಾನಾಂ ಲೋಕಮಶ್ನುತೇ ॥೨೦॥

ಕರುವಿನಿಂದ ಮತ್ತು ಕಂಚಿನ ಪಾತ್ರೆಯಿಂದ ಸಹಿತವಾದ, ವಸ್ತ್ರದಿಂದ ಆಚ್ಛಾದಿತವಾದ, ಬಿಳಿಯ ಕಂಬಳಿ ಬಣ್ಣದ ಗೋವನ್ನು ದಾನ ಮಾಡುವವನು ಸಾಧ್ಯರ ಲೋಕವನ್ನು ಹೊಂದುತ್ತಾನೆ.

ವೈರಾಟಪೃಷ್ಠಮುಕ್ಷಾಣಂ ಸರ್ವರತ್ನೈರಲಂಕೃತಮ್ ।
ಪ್ರದಾಯ ಮರುತಾಂ ಲೋಕಾನಜರಾನ್ ಪ್ರತಿಪದ್ಯತೇ ॥೨೧॥

ವಿಶಾಲವಾದ ಪೃಷ್ಠಭಾಗವುಳ್ಳ, ಎಲ್ಲ ರತ್ನಗಳಿಂದಲೂ ಅಲಂಕೃತವಾದ ಹೋರಿಯನ್ನು ಕೊಡುವವನು ನಾಶವಾಗದ ಮರುತ್ತಗಳ ಲೋಕವನ್ನು ಹೊಂದುತ್ತಾನೆ.

ವತ್ಸೋಪಪನ್ನಾಂ ನೀಲಾಂಗಾಂ ಸರ್ವರತ್ನಸಮನ್ವಿತಾಮ್ ।
ಗಂಧರ್ವಾಪ್ಸರಸಾಂ ಲೋಕಾನ್ ದತ್ತ್ವಾ ಪ್ರಾಪ್ನೋತಿ ಮಾನವಃ ॥೨೨॥

ಕರುವಿನಿಂದ ಕೂಡಿದ, ಸರ್ವರತ್ನ ಸಮನ್ವಿತವಾದ ನೀಲವರ್ಣದ ಗೋವನ್ನು ದಾನ ಮಾಡುವ ಮನುಷ್ಯನು ಗಂಧರ್ವರ ಮತ್ತು ಅಪ್ಸರೆಯರ ಲೋಕಕ್ಕೆ ಹೋಗುತ್ತಾನೆ.

ಶಿತಿಕಂಠಮನಡ್ವಾಹಂ ಸರ್ವರತ್ನೈರಲಂಕೃತಮ್ ।
ದತ್ತ್ವಾ ಪ್ರಜಾಪತೇರ್ಲೋಕಾನ್ ವಿಶೋಕಃ ಪ್ರತಿಪದ್ಯತೇ ॥೨೩॥

ಸರ್ವರತ್ನಗಳಿಂದ ಅಲಂಕೃತವಾದ ಕಪ್ಪುಬಣ್ಣದ ಕಂಠವುಳ್ಳ ಎತ್ತನ್ನು ದಾನ ಮಾಡಿದವನು ಶೋಕರಹಿತನಾಗಿ ಪ್ರಜಾಪತಿಯ ಲೋಕವನ್ನು ಹೊಂದುತ್ತಾನೆ.

ಗೋಪ್ರದಾನರತೋ ಯಾತಿ ಭಿತ್ತ್ವಾ ಜಲದಸಂಚಯಾನ್ ।
ವಿಮಾನೇನಾರ್ಕವರ್ಣೇನ ದಿವಿ ರಾಜನ್ ವಿರಾಜತಾ ॥೨೪॥

ಎಲೈ ರಾಜನೇ, ಗೋದಾನದಲ್ಲಿ ನಿರತನಾದವನು ಶೋಭಿಸುವ ಸೂರ್ಯವರ್ಣದ ವಿಮಾನದಲ್ಲಿ ಕುಳಿತು ಆಕಾಶದಲ್ಲಿ ಮೋಡಗಳ ಸಮೂಹವನ್ನು ಭೇದಿಸಿ ಮುಂದೆ ಸಾಗುತ್ತಾನೆ.

ತಂ ಚಾರುವೇಷಾಃ ಸುಶ್ರೋಣ್ಯಃ ಸಹಸ್ರಂ ವರಯೋಷಿತಃ ।
ರಮಯಂತಿ ನರಶ್ರೇಷ್ಠ ಗೋಪ್ರದಾನರತಂ ನರಮ್ ॥೨೫॥

ಗೋದಾನದಲ್ಲಿ ನಿರತನಾದ ಮನುಷ್ಯನನ್ನು ಒಳ್ಳೆಯ ವೇಷವನ್ನು ಧರಿಸಿದ, ಸುಂದರ ನಿತಂಬವುಳ್ಳ ಸಹಸ್ರ ಸುಂದರ ಸ್ತ್ರೀಯರು ಸಂತೋಷಪಡಿಸುತ್ತಾರೆ.

ವೀಣಾನಾಂ ವಲ್ಗಿತಾನಾಂ ಚ ನೂಪುರಾಣಾಂ ಚ ಶಿಂಜಿತೈಃ ।
ಹಾಸ್ಯೈಶ್ಚ ಹರಿಣಾಕ್ಷೀಣಾಂ ಪ್ರಸುಪ್ತಃ ಪ್ರತಿಬೋಧ್ಯತೇ ॥೨೬॥

ವೀಣೆಗಳ, ವಲ್ಗಿಕಗಳ ಮತ್ತು ನೂಪುರಗಳ ಝಣಾತ್ಕಾರದಿಂದಲೂ, ಹರಿಣಾಕ್ಷಿಗಳ ಹಾಸಗಳಿಂದಲೂ ಅವನು ನಿದ್ರೆಯಲ್ಲಿ ಎಬ್ಬಿಸಲ್ಪಡುತ್ತಾನೆ.

ಯಾವಂತಿ ಲೋಮಾನಿ ಭವಂತಿ ಧೇನ್ವಾಃ
ತಾವಂತಿ ವರ್ಷಾಣಿ ಮಹೀಯತೇ ಸಃ ।
ಸ್ವರ್ಗಾಚ್ಚ್ಯುತಶ್ಚಾಪಿ ತತೋ ನೃಲೋಕೇ
ಕುಲೇ ಸಮುತ್ಪತ್ಸ್ಯತಿ ಗೋಮಿನಾಂ ಸಃ ॥೨೭॥

ಗೋವಿನ ದೇಹದಲ್ಲಿ ಎಷ್ಟು ರೋಮಗಳಿರುತ್ತವೆಯೋ ಅಷ್ಟು ವರ್ಷಗಳ ಕಾಲ ಅವನು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ. ಸ್ವರ್ಗದಿಂದ ಕೆಳಗೆ ಭೂಲೋಕಕ್ಕೆ ಬಂದರೂ ಸಹ ಗೋಸಂಪತ್ತನ್ನು ಹೊಂದಿದವರ ವಂಶದಲ್ಲಿಯೇ ಪುನಃ ಜನ್ಮವನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋದಾನಫಲಕೀರ್ತನಂ ನಾಮ
ನವಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತನೆಯ ಅಧ್ಯಾಯ

ಗೋಮಹಿಮೆ-ವಸಿಷ್ಠರ ವಚನ.

ವಸಿಷ್ಠಃ

ಘೃತಕ್ಷೀರಪ್ರದಾ ಗಾವೋ ಘೃತಯೋನ್ಯೋ ಘೃತೋದ್ಭವಾಃ ।
ಘೃತನದ್ಯೋ ಘೃತಾವರ್ತಾಸ್ತಾ ಮೇ ಸಂತು ಸದಾ ಗೃಹೇ ॥೧॥

ವಸಿಷ್ಠರು– ಗೋವುಗಳು ಕ್ಷೀರವನ್ನು ಕೊಡುವಂತಹವುಗಳು. ಅವು ಘೃತದಿಂದ ಜನಿಸಿವೆ. ಅವು ಘೃತನದಿಗಳು ಮತ್ತು ಘೃತದ ಸುಳಿಗಳು. ಅಂತಹ ಗೋವುಗಳು ಯಾವಾಗಲೂ ನನ್ನ ಮನೆಯಲ್ಲಿ ಇರಲಿ.

ಘೃತಂ ಮೇ ಹೃದಯೇ ನಿತ್ಯಂ ಘೃತಂ ನಾಭ್ಯಾಂ ಪ್ರತಿಷ್ಠಿತಮ್ ।
ಘೃತಂ ಸರ್ವೇಷು ಗಾತ್ರೇಷು ಘೃತಂ ಮೇ ಮನಸಿ ಸ್ಥಿತಮ್ ॥೨॥

ನನ್ನ ಹೃದಯದಲ್ಲಿ ಯಾವಾಗಲೂ ಘೃತವಿದೆ. ಘೃತವು ನನ್ನ ನಾಭಿಯಲ್ಲಿ ಪ್ರತಿಷ್ಠಿತವಾಗಿದೆ. ಘೃತವು ನನ್ನ ಸರ್ವಶರೀರದಲ್ಲಿದೆ. ಘೃತವು ನನ್ನ ಮನಸ್ಸಿನಲ್ಲಿದೆ.

ಗಾವೋ ಮಮಾಗ್ರತೋ ನಿತ್ಯಂ ಗಾವಃ ಪೃಷ್ಠತ ಏವ ಚ ।
ಗಾವೋ ಮೇ ಸರ್ವತಶ್ಚೈವ ಗವಾಂ ಮಧ್ಯೇ ವಸಾಮ್ಯಹಮ್ ॥೩॥

ಗೋವುಗಳು ನನ್ನ ಮುಂಭಾಗದಲ್ಲಿ ಇರಲಿ. ನನ್ನ ಹಿಂಭಾಗದಲ್ಲಿ ಇರಲಿ. ನನ್ನ ಸುತ್ತಲೂ ಇರಲಿ. ನಾನು ಗೋವುಗಳ ಮಧ್ಯೆ ವಾಸಿಸುತ್ತೇನೆ.

ಇತ್ಯಾಚಮ್ಯ ಜಪೇತ್ ಸಾಯಂ ಪ್ರಾತಶ್ಚ ಪುರುಷಃ ಸದಾ ।
ಯದಹ್ನಾ ಕುರುತೇ ಪಾಪಂ ತಸ್ಮಾತ್ ಸ ಪರಿಮುಚ್ಯತೇ ॥೪॥

ಎಂಬ ಈ ಮಂತ್ರವನ್ನು ಪುರುಷನು ಆಚಮನವನ್ನು ಮಾಡಿ ಸಾಯಂಕಾಲದಲ್ಲಿ, ಪ್ರಾತಃಕಾಲದಲ್ಲಿ ಜಪಿಸಬೇಕು. ಇದರಿಂದ ಹಗಲಿನಲ್ಲಿ ಮಾಡಿದ ಪಾಪವನ್ನು ಸಾಯಂಕಾಲದಲ್ಲಿಯೂ, ರಾತ್ರಿಯಲ್ಲಿ ಮಾಡಿದ ಪಾಪವನ್ನು ಹಗಲಿನಲ್ಲಿಯೂ ಪರಿಹರಿಸಿಕೊಳ್ಳುತ್ತಾನೆ.

ಪ್ರಾಸಾದಾ ಯತ್ರ ಸೌವರ್ಣಾ ವಸೋರ್ಧಾರಾ ಚ ಯತ್ರ ಸಾ ।
ಗಂಧರ್ವಾಪ್ಸರಸೋ ಯತ್ರ ತತ್ರ ಯಾಂತಿ ಸಹಸ್ರದಾಃ ॥೫॥

ಸಹಸ್ರ ಗೋವುಗಳನ್ನು ದಾನ ಮಾಡುವವನು ಸುವರ್ಣಮಯವಾದ ಪ್ರಾಸಾದಗಳಿರುವ ಗಂಗೆಯ ಪ್ರವಾಹವಿರುವ ಗಂಧರ್ವಾಪ್ಸರೆಯರು ವಾಸಿಸುವ ಲೋಕಕ್ಕೆ ಹೋಗುತ್ತಾನೆ.

ನವನೀತಪಂಕಾಃ ಕ್ಷೀರೋದಾ ದಧಿಶೈವಾಲಸಂಕುಲಾಃ ।
ವಹಂತಿ ಯತ್ರ ನದ್ಯೋ ವೈ ತತ್ರ ಯಾಂತಿ ಸಹಸ್ರದಾಃ ॥೬॥

ಸಹಸ್ರ ಗೋದಾನ ಮಾಡುವವನು ಎಲ್ಲಿ ಬೆಣ್ಣೆ ರೂಪವಾದ ಪಂಕವನ್ನೂ, ಕ್ಷೀರರೂಪವಾದ ಜಲವನ್ನೂ, ದಧಿರೂಪವಾದ ನಿಬಿಡವಾದ ಶೈವಲವನ್ನೂ (ಹಾವಸೆ-ಪಾಚಿ) ನದಿಗಳು ತೆಗೆದುಕೊಂಡು ಪ್ರವಹಿಸುತ್ತವೆಯೋ ಅಲ್ಲಿಗೆ ಹೋಗುತ್ತಾನೆ.

ಗವಾಂ ಶತಸಹಸ್ರಂ ತು ಯಃ ಪ್ರಯಚ್ಛೇದ್ ಯಥಾವಿಧಿ ।
ಪರಾಮೃದ್ಧಿಮವಾಪ್ಯಾಥ ಸ ಗೋಲೋಕೇ ಮಹೀಯತೇ ॥೭॥

ಒಂದು ಲಕ್ಷ ಗೋವುಗಳನ್ನು ವಿಧಿಪ್ರಕಾರವಾಗಿ ದಾನ ಮಾಡುವವನು ಬಹಳ ಸಮೃದ್ಧಿಯನ್ನು ಪಡೆದು ಗೋಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ದಶ ಚೋಭಯತಃ ಪ್ರೇತ್ಯ ಮಾತಾಪಿತ್ರೋಃ ಪಿತಾಮಹಾನ್ ।
ದಧಾತಿ ಸುಕೃತಾಲ್ಲೋಕಾನ್ ಪುನಾತಿ ಚ ಕುಲಂ ನರಃ ॥೮॥

ಅವನು ತನ್ನ ಹಿಂದಿನ ಹತ್ತು ಜನ್ಮಗಳ ಉಭಯಕುಲದ ಮಾತಾ-ಪಿತೃಗಳನ್ನೂ, ಪಿತಾಮಹರನ್ನೂ ಪುಣ್ಯಲೋಕಗಳಲ್ಲಿ ಇರಿಸುತ್ತಾನೆ. ತನ್ನ ಕುಲವನ್ನು ಪವಿತ್ರಗೊಳಿಸುತ್ತಾನೆ.

ಧೇನ್ವಾಃ ಪ್ರಮಾಣೇನ ಸಮಪ್ರಮಾಣಾಂ
ಧೇನುಂ ತಿಲಾನಾಮಪಿ ಚ ಪ್ರದಾಯ ।
ಪಾನೀಯದಾತಾ ಚ ಯಮಸ್ಯ ಲೋಕೇ
ನ ಯಾತನಾಂ ಕಾಂಚಿದುಪೈತಿ ತತ್ರ ॥೯॥

ಗೋವಿನ ಸಮಾನಪ್ರಮಾಣ ತಿಲಧೇನುವನ್ನು ದಾನ ಮಾಡಿ ಜಲದಾನವನ್ನು ಮಾಡುವವನು ಯಮಲೋಕದಲ್ಲಿ ಯಾವ ಯಾತನೆಯನ್ನೂ ಹೊಂದುವುದಿಲ್ಲ.

ಪವಿತ್ರಮಗ್ರ್ಯಂ ಜಗತಃ ಪ್ರತಿಷ್ಠಾ
ದಿವೌಕಸಾಂ ಮಾತರೋऽಥಾಪ್ರಮೇಯಾಃ ।
ಅನ್ವಾಲಭೇದ್ ದಕ್ಷಿಣತೋ ವ್ರಜೇಚ್ಚ
ದದ್ಯಾಚ್ಚ ಪಾತ್ರೇ ಪ್ರಸಮೀಕ್ಷ್ಯ ಕಾಲಮ್ ॥೧೦॥

ಗೋವುಗಳು ಬಹಳ ಪವಿತ್ರವಾದವುಗಳು, ಜಗತ್ತಿಗೆ ಆಧಾರಭೂತವಾದವುಗಳು. ದೇವತೆಗಳಿಗೂ ಮಾತೃಸ್ಥಾನದಲ್ಲಿ ಇರುವಂತಹವುಗಳು. ತಿಳಿಯಲು ಅಸಾಧ್ಯವಾದ ಮಹಿಮೆಯನ್ನು ಹೊಂದಿರುವಂತಹವುಗಳು. ಅವುಗಳನ್ನು ಸ್ಪರ್ಶಿಸಬೇಕು. ಬಲಕ್ಕೆ ಮಾಡಿಕೊಂಡು ನಡೆಯಬೇಕು. ಒಳ್ಳೆಯ ಕಾಲದಲ್ಲಿ ಪಾತ್ರರಿಗೆ ದಾನ ಮಾಡಬೇಕು.

ಧೇನುಂ ಸವತ್ಸಾಂ ಕಪಿಲಾಂ ಭೂರಿಶೃಂಗಾಂ
ಕಾಂಸ್ಯೋಪದೋಹಾಂ ವಸನೋತ್ತರೀಯಾಮ್ ।
ಪ್ರದಾಯ ತಾಂ ಗಾಹತಿ ದುರ್ವಿಗಾಹ್ಯಾಂ
ಯಾಮ್ಯಾಂ ಸಭಾಂ ವೀತಭಯೋ ಮನುಷ್ಯಃ ॥೧೧॥

ಕರುವಿನಿಂದ ಸಹಿತವಾದ, ದೊಡ್ಡ ಕೊಂಬುಗಳಿರುವ, ವಸ್ತ್ರದ ಉತ್ತರೀಯವನ್ನು ಹೊದಿಸಿದ ಕಪಿಲಧೇನುವನ್ನು ಕಂಚಿನ ಪಾತ್ರೆಯ ಜೊತೆಯಲ್ಲಿ ದಾನವನ್ನು ಮಾಡುವವನು ಪ್ರವೇಶಿಸಲು ಅಸಾಧ್ಯವಾದ ಯಮಸಭೆಯನ್ನು ನಿರ್ಭಯವಾಗಿ ಪ್ರವೇಶಿಸುತ್ತಾನೆ.

ಸುರೂಪಾ ಬಹುರೂಪಾಶ್ಚ ವಿಶ್ವರೂಪಾಶ್ಚ ಮಾತರಃ ।
ಗಾವೋ ಮಾಮುಪತಿಷ್ಠಂತಾಮಿತಿ ನಿತ್ಯಂ ಪ್ರಕೀರ್ತಯೇತ್ ॥೧೨॥

ಸುರೂಪ, ಬಹುರೂಪ, ವಿಶ್ವರೂಪ ಎಂದು ಕರೆಯಲ್ಪಡುವ ತಾಯಿಗಳಾದ ಗೋವುಗಳು ಯಾವಾಗಲೂ ನನ್ನ ಸಮೀಪದಲ್ಲಿರಲಿ ಎಂದು ನಿತ್ಯವೂ ಕೀರ್ತಿಸಬೇಕು.

ನಾತಃ ಪುಣ್ಯತರಂ ದಾನಂ ನಾತಃ ಪುಣ್ಯತರಂ ಫಲಮ್ ।
ನಾತೋ ವಿಶಿಷ್ಟಂ ಲೋಕೇಷು ಭೂತಂ ಭವಿತುಮರ್ಹತಿ ॥೧೩॥

ಗೋದಾನಕ್ಕಿಂತ ಪುಣ್ಯತರವಾದ ದಾನವಿಲ್ಲ. ಗೋದಾನ ಫಲಕ್ಕಿಂತ ಪುಣ್ಯತರವಾದ ಫಲವಿಲ್ಲ. ಲೋಕದಲ್ಲಿ ಗೋವುಗಳಿಗಿಂತ ಶ್ರೇಷ್ಠವಾದ ವಸ್ತುವು ಯಾವುದೂ ಇರಲು ಸಾಧ್ಯವಿಲ್ಲ.

ತ್ವಚಾ ಲೋಮ್ನಾಽಥ ಶೃಂಗೈಶ್ಚ ವಾಲೈಃ ಕ್ಷೀರೇಣ ಮೇದಸಾ ।
ಯಜ್ಞಂ ವಹಂತಿ ಸಂಭೂಯ ಕಿಮಸ್ಯಭ್ಯಧಿಕಂ ತತಃ ॥೧೪॥

ಗೋವುಗಳು ಒಟ್ಟಾಗಿ ತಮ್ಮ ಚರ್ಮದಿಂದಲೂ, ರೋಮದಿಂದಲೂ, ಕೊಂಬಿನಿಂದಲೂ, ಬಾಲದಿಂದಲೂ, ಕ್ಷೀರದಿಂದಲೂ ಮತ್ತು ಘೃತದಿಂದಲೂ ಯಜ್ಞವನ್ನು ನಿರ್ವಾಹ ಮಾಡುತ್ತವೆ. ಗೋವುಗಳಿಗಿಂತ ಶ್ರೇಷ್ಠವಾದುದು ಯಾವುದಿದೆ?

ಯಯಾ ಸರ್ವಮಿದಂ ವ್ಯಾಪ್ತಂ ಜಗತ್ಸ್ಥಾವರಜಂಗಮಮ್ ।
ತಾಂ ಧೇನುಂ ಶಿರಸಾ ವಂದೇ ಭೂತಭವ್ಯಸ್ಯ ಮಾತರಮ್ ॥೧೫॥

ಯಾವ ಗೋವು ಸ್ಥಾವರ-ಜಂಗಮಾತ್ಮಕವಾದ ಈ ಸರ್ವಜಗತ್ತನ್ನು ವ್ಯಾಪಿಸಿದೆಯೋ ಅಂತಹ ಭೂತ-ಭವಿಷ್ಯತ್-ವರ್ತಮಾನ ಕಾಲದ ವಸ್ತುಗಳಿಗೆ ತಾಯಿಯಾದ ಗೋವನ್ನು ಶಿರಸಾ ನಮಸ್ಕರಿಸುತ್ತೇನೆ.

ಗುಣವಚನಸಮುಚ್ಚಯೈಕದೇಶೋ
ನೃವರ ಮಯೈಷ ಗವಾಂ ಪ್ರಕೀರ್ತಿತಸ್ತೇ ।
ನ ಹಿ ಪರಮಿಹ ದಾನಮಸ್ತಿ ಗೋಭ್ಯೋ
ಭವತಿ ನ ಚಾಪಿ ಪರಾಯಣಂ ತಥಾನ್ಯತ್ ॥೧೬॥

ಎಲೈ ನರಶ್ರೇಷ್ಠನೇ, ನಾನು ಗೋವುಗಳ ಗುಣಸಮೂಹದ ಅಲ್ಪಭಾಗವನ್ನು ಮಾತ್ರ ನಿನಗೆ ಹೇಳಿದ್ದೇನೆ. ಗೋದಾನಕ್ಕಿಂತ ಶ್ರೇಷ್ಠವಾದ ದಾನವು ಇನ್ನೊಂದು ಇಲ್ಲ. ಗೋವುಗಳಿಗಿಂತ ಶ್ರೇಷ್ಠವಾದ ಆಶ್ರಯವೂ ಇನ್ನೊಂದಿಲ್ಲ.

ಭೀಷ್ಮಃ

ಪರಮಿದಮಿತಿ ಭೂಮಿಪೋ ವಿಚಿಂತ್ಯ
ಪ್ರವರಮೃಷೇರ್ವಚನಂ ತತೋ ಮಹಾತ್ಮಾ ।

ವ್ಯಸೃಜತ ನಿಯತಾತ್ಮವಾನ್ ದ್ವಿಜೇಭ್ಯಃ
ಸುಬಹು ಚ ಗೋಧನಮಾಪ್ತವಾಂಶ್ಚ ಲೋಕಾನ್ ॥೧೭॥

ಭೀಷ್ಮ– ಮಹಾತ್ಮನಾದ ಸೌದಾಸರಾಜನು ಈ ಋಷಿವಚನಗಳು ಬಹಳ ಶ್ರೇಷ್ಠವೆಂದು ಚಿಂತಿಸಿ ಮನೋಜಯವನ್ನು ಹೊಂದಿದವನಾಗಿ ಬ್ರಾಹ್ಮಣರಿಗೆ ಬಹಳ ಗೋಧನವನ್ನು ದಾನ ಮಾಡಿ ಒಳ್ಳೆಯ ಲೋಕಗಳನ್ನು ಪಡೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋದಾನಮಹಿಮಕಥನಂ ನಾಮ
ದಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

ಗೋ ಮಹಿಮೆ – ವ್ಯಾಸ-ಶುಕ ಸಂವಾದ

ಯುಧಿಷ್ಠಿರಃ

ಪವಿತ್ರಾಣಾಂ ಪವಿತ್ರಂ ಯಚ್ಛ್ರೇಷ್ಠಂ ಲೋಕೇ ಚ ಯದ್ಭವೇತ್ ।
ಪಾವನಂ ಪರಮಂ ಚೈವ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಎಲೈ ಪಿತಾಮಹನೇ, ಲೋಕದಲ್ಲಿ ಪವಿತ್ರವಾದುದಕ್ಕಿಂತ ಯಾವುದು ಪವಿತ್ರವೋ, ಯಾವುದು ಶ್ರೇಷ್ಠವೋ, ಯಾವುದು ಪರಮ ಪಾವನವೋ ಅದನ್ನು ನನಗೆ ಹೇಳು.

ಭೀಷ್ಮಃ

ಗಾವೋ ಮಹಾರ್ಘಾಃ ಪುಣ್ಯಾಶ್ಚ ತಾರಯಂತಿ ಚ ಮಾನವಾನ್ ।
ಧಾರಯಂತಿ ಪ್ರಜಾಶ್ಚೇಮಾಃ ಪಯಸಾ ಹವಿಷಾ ತಥಾ ॥೨॥

ಭೀಷ್ಮ– ಗೋವುಗಳು ದೊಡ್ಡವಸ್ತುಗಳು, ಪುಣ್ಯಪ್ರದವಾದವುಗಳು. ಮನುಷ್ಯರನ್ನು ಕಷ್ಟದಿಂದ ಪಾರುಮಾಡುತ್ತವೆ. ಕ್ಷೀರದಿಂದಲೂ ಮತ್ತು ಹವಿಸ್ಸಿನಿಂದಲೂ ಈ ಪ್ರಜೆಗಳನ್ನು ಪೋಷಿಸುತ್ತವೆ.

ನ ಹಿ ಪುಣ್ಯತಮಂ ಕಿಂಚಿದ್ ಗೋಭ್ಯೋ ಭರತಸತ್ತಮ ।
ಏತಾಃ ಪವಿತ್ರಾಃ ಪುಣ್ಯಾಶ್ಚ ತ್ರಿಷು ಲೋಕೇಷ್ವನುತ್ತಮಾಃ ॥೩॥

ಎಲೈ ಭರತಶ್ರೇಷ್ಠನೇ, ಗೋವುಗಳಿಗಿಂತ ಪುಣ್ಯತಮವಾದುದು ಯಾವುದೂ ಇಲ್ಲ. ಇವು ಪವಿತ್ರವೂ, ಪುಣ್ಯಪ್ರದವೂ ಮತ್ತು ಮೂರುಲೋಕದಲ್ಲೂ ಶ್ರೇಷ್ಠವಾದವುಗಳು.

ದೇವಾನಾಮುಪರಿಷ್ಟಾಚ್ಚ ಗಾವಃ ಪ್ರತಿವಸಂತಿ ವೈ ।
ದತ್ತಾ ಚ್ಚೈತಾ ನರಪತೇ ಯಾಂತಿ ಸ್ವರ್ಗಂ ಮನೀಷಿಣಃ ॥೪॥

ಗೋವುಗಳು ದೇವತೆಗಳ (ದೇವಲೋಕದ) ಮೇಲ್ಭಾಗದಲ್ಲಿ ವಾಸಮಾಡುತ್ತವೆ. ಎಲೈ ರಾಜನೇ, ಮೇಧಾವಿಗಳು ಗೋವುಗಳನ್ನು ದಾನ ಮಾಡಿ ಸ್ವರ್ಗಕ್ಕೆ ಹೋಗುತ್ತಾರೆ.

ಮಾಂಧಾತಾ ಯೌವನಾಶ್ವಶ್ಚ ಯಯಾತಿರ್ನಹುಷಸ್ತಥಾ ।
ಗಾವೋ ದದಂತಃ ಸತತಂ ಸಹಸ್ರಶತಸಮ್ಮಿತಾಃ ।
ಗತಾಃ ಪರಮಕಂ ಸ್ಥಾನಂ ದೇವೈರಪಿ ಸುದುರ್ಲಭಮ್ ॥೫॥

ಅಪಿ ಚಾತ್ರ ಪುರಾವೃತ್ತಂ ಕಥಯಿಷ್ಯಾಮಿ ತೇಽನಘ ॥೬॥

ಯುವನಾಶ್ವನ ಪುತ್ರನಾದ ಮಾಂಧಾತ, ಯಯಾತಿ, ನಹುಷ ಇವರು ಲಕ್ಷಾಂತರ ಗೋವುಗಳನ್ನು ಸತತವಾಗಿ ದಾನ ಮಾಡಿ ದೇವತೆಗಳಿಗೂ ಅತ್ಯಂತ ದುರ್ಲಭವಾದ ಶ್ರೇಷ್ಠವಾದ ಸ್ಥಾನವನ್ನು ಹೊಂದಿದರು. ಎಲೈ ಅನಘನೇ, ಈ ವಿಷಯದಲ್ಲಿ ಹಿಂದೆ ನಡೆದ ಒಂದು ಸಂವಾದವನ್ನು ನಿನಗೆ ಹೇಳುವೆನು.

ಋಷೀಣಾಮುತ್ತಮಂ ಧೀಮಾನ್ ಕೃಷ್ಣದ್ವೈಪಾಯನಂ ಶುಕಃ ।
ಅಭಿವಾದ್ಯಾಹ್ನಿಕಂ ಕೃತ್ವಾ ಶುಚಿಃ ಪ್ರಯತಮಾನಸಃ ।
ಪಿತರಂ ಪರಿಪಪ್ರಚ್ಛ ದೃಷ್ಟಲೋಕಪರಾವರಮ್ ॥೭॥

ಶುಕಾಚಾರ್ಯರು ಶುಚಿಯಾಗಿ, ಜಿತಮನಸ್ಕರಾಗಿ ಆಹ್ನಿಕವನ್ನು ಮಾಡಿ ತಂದೆಯೂ ಪರಾವರಲೋಕಗಳನ್ನು ನೋಡಿದವರೂ, ಶ್ರೇಷ್ಠ ಋಷಿಗಳೂ ಆದ ಕೃಷ್ಣದ್ವೈಪಾಯನರನ್ನು ಧರ್ಮಗಳನ್ನು ಕುರಿತು ಪ್ರಶ್ನೆ ಮಾಡಿದರು.

ಕೋ ಯಜ್ಞಃ ಸರ್ವಯಜ್ಞಾನಾಂ ವರಿಷ್ಠ ಉಪಲಕ್ಷ್ಯತೇ ।
ಕಿಂ ಚ ಕೃತ್ವಾ ಪರಂ ಸ್ವರ್ಗಂ ಪ್ರಾಪ್ನುವಂತಿ ಮನೀಷಿಣಃ ॥೮॥

ಯಾವ ಯಜ್ಞವು ಎಲ್ಲ ಯಜ್ಞಗಳಿಗಿಂತಲೂ ಶ್ರೇಷ್ಠವೆಂದು ಹೇಳಲ್ಪಡುತ್ತದೆ? ಏನನ್ನು ಮಾಡಿ ಮೇಧಾವಿಗಳಾದವರು ಶ್ರೇಷ್ಠವಾದ ಸ್ವರ್ಗವನ್ನು ಹೊಂದುತ್ತಾರೆ?

ಕೇನ ದೇವಾಃ ಪವಿತ್ರೇಣ ಸ್ವರ್ಗಮಶ್ನಂತಿ ವಾ ವಿಭೋ ।
ಕಿಂ ಚ ಯಜ್ಞಸ್ಯ ಯಜ್ಞತ್ವಂ ಕ್ವ ಚ ಯಜ್ಞಃ ಪ್ರತಿಷ್ಠಿತಃ ॥೯॥

ಎಲೈ ವಿಭುವೇ, ಯಾವ ಪವಿತ್ರಕಾರ್ಯದಿಂದ ದೇವತೆಗಳು ಸ್ವರ್ಗಸುಖವನ್ನು ಅನುಭವಿಸುತ್ತಾರೆ? ಯಜ್ಞವು ಯಜ್ಞವಾಗುವುದು ಹೇಗೆ? ಯಜ್ಞವು ಎಲ್ಲಿ ಪ್ರತಿಷ್ಠಿತವಾಗಿದೆ?

ದಾನಾನಾಮುತ್ತಮಂ ಕಿಂ ಚ ಕಿಂ ಚ ಸತ್ರಮತಃ ಪರಮ್ ।
ಪವಿತ್ರಾಣಾಂ ಪವಿತ್ರಂ ಚ ಯತ್ತದ್ ಬ್ರೂಹಿ ಮಮಾನಘ ॥೧೦॥

ಶ್ರೇಷ್ಠವಾದ ದಾನವು ಯಾವುದು? ಶ್ರೇಷ್ಠವಾದ ಸತ್ರವು ಯಾವುದು? ಎಲೈ ಅನಘರೇ, ಪವಿತ್ರವಾದ ವಸ್ತುಗಳಿಗಿಂತಲೂ ಪವಿತ್ರವಾದುದು ಯಾವುದು ಎಂದು ನನಗೆ ಹೇಳಿ (ಎಂದು ಕೇಳಿದರು).

ಏತಚ್ಛ್ರುತ್ವಾ ತು ವಚನಂ ವ್ಯಾಸಃ ಪರಮಧರ್ಮವಿತ್ ।
ಪುತ್ರಾಯಾಕಥಯತ್ ಸರ್ವಂ ತತ್ತ್ವೇನ ಭರತರ್ಷಭ ॥೧೧॥

ಈ ಮಾತುಗಳನ್ನು ಕೇಳಿದ ಪರಮಧರ್ಮಜ್ಞರಾದ ವ್ಯಾಸರು ಎಲೈ ಭರತರ್ಷಭನೇ, ತಮ್ಮ ಪುತ್ರನಿಗೆ ಎಲ್ಲವನ್ನೂ ಯಥಾರ್ಥವಾಗಿ ಹೇಳಿದರು.

ವ್ಯಾಸಃ

ಗಾವಃ ಪ್ರತಿಷ್ಠಾ ಭೂತಾನಾಂ ತಥಾ ಗಾವಃ ಪರಾಯಣಮ್ ।
ಗಾವಃ ಪುಣ್ಯಾಃ ಪವಿತ್ರಾಶ್ಚ ಪಾವನಂ ಧರ್ಮ ಏವ ಚ ॥೧೨॥

ವ್ಯಾಸರು– ಗೋವುಗಳು ಎಲ್ಲಪ್ರಾಣಿಗಳಿಗೂ ಆಧಾರಭೂತವಾದವುಗಳು. ಅವು ಶ್ರೇಷ್ಠವಾದ ಆಶ್ರಯ. ಗೋವುಗಳು ಪುಣ್ಯಪ್ರದವಾದವುಗಳು, ಸ್ವತಃ ಪವಿತ್ರವಾದವುಗಳು. ಪಾವನಧರ್ಮಸ್ವರೂಪವಾದವುಗಳು.

ಪೂರ್ವಮಾಸನ್ನಶೃಂಗಾ ವೈ ಗಾವ ಇತ್ಯನುಶುಶ್ರುಮಃ ।
ಶೃಂಗಾರ್ಥೇ ಸಮುಪಾಸಂತ ತಾಃ ಕಿಲ ಪ್ರಭುಮವ್ಯಯಮ್ ॥೧೩॥

ಹಿಂದೆ ಗೋವುಗಳಿಗೆ ಶೃಂಗವಿರಲಿಲ್ಲವೆಂದು ನಾವು ಕೇಳಿದ್ದೇವೆ. ಅವುಗಳು ಶೃಂಗವನ್ನು ಪಡೆಯುವ ಸಲುವಾಗಿ ಶಾಶ್ವತರಾದ ಪ್ರಭುಗಳಾದ ಬ್ರಹ್ಮದೇವರನ್ನು ಉಪಾಸನೆ ಮಾಡಿದವು.

ತತೋ ಬ್ರಹ್ಮಾ ತು ಗಾಃ ಪ್ರಾಯಮುಪವಿಷ್ಟಾಃ ಸಮೀಕ್ಷ್ಯ ಹ ।
ಈಪ್ಸಿತಂ ಪ್ರದದೌ ತಾಭ್ಯೋ ಗೋಭ್ಯಃ ಪ್ರತ್ಯೇಕಶಃ ಪ್ರಭುಃ ॥೧೪॥

ಬ್ರಹ್ಮದೇವರು ಪ್ರಾಯೋಪವೇಶಕ್ಕೆ ಕುಳಿತ ಗೋವುಗಳನ್ನು ನೋಡಿ ಅವುಗಳಿಗೆ ಪ್ರತ್ಯೇಕವಾಗಿ ಅಭೀಷ್ಟವಾದ ವರವನ್ನು ಕೊಟ್ಟರು.

ತಾಸಾಂ ಶೃಂಗಾಣ್ಯಜಾಯಂತ ಯಸ್ಯಾ ಯಾದೃಗ್‌ಮನೋಗತಮ್ ।
ನಾನಾವರ್ಣಾಃ ಶೃಂಗವಂತ್ಯಸ್ತಾ ವ್ಯರೋಚಂತ ಪುತ್ರಕ ॥೧೫॥

ಅವುಗಳಿಗೆ ತಮ ತಮಗೆ ಬೇಕಾದಂತಹ ಶೃಂಗಗಳು ಹುಟ್ಟಿದವು. ಎಲೈ ಪುತ್ರನೇ, ಅನೇಕ ವರ್ಣದ ಶೃಂಗಗಳನ್ನು ಹೊಂದಿ ಗೋವುಗಳು ಶೋಭಿಸಿದವು.

ಬ್ರಹ್ಮಣಾ ವರದತ್ತಾಸ್ತಾ ಹವ್ಯಕವ್ಯಪ್ರದಾಃ ಶುಭಾಃ ।
ಪುಣ್ಯಾಃ ಪವಿತ್ರಾಃ ಸುಭಗಾ ದಿವ್ಯಸಂಸ್ಥಾನಲಕ್ಷಣಾಃ ।
ಗಾವಸ್ತೇಜೋ ಮಹದ್ ದಿವ್ಯಂ ಗವಾಂ ದಾನಂ ಪ್ರಶಸ್ಯತೇ ॥೧೬॥

ಬ್ರಹ್ಮದೇವರಿಂದ ವರವನ್ನು ಪಡೆದ ಆ ಗೋವುಗಳು ಹವ್ಯಕವ್ಯಗಳನ್ನು ನಡೆಸಿಕೊಡುತ್ತವೆ. ಅವು ಪುಣ್ಯವಾದವುಗಳು, ಶುಭವಾದವುಗಳು, ಪವಿತ್ರವಾದವುಗಳು, ಸುಂದರವಾದವುಗಳು, ದಿವ್ಯರೂಪವನ್ನು ಧರಿಸಿದವುಗಳು. ಗೋವುಗಳೇ ದೊಡ್ಡ ದಿವ್ಯವಾದ ತೇಜಸ್ಸು, ಗೋದಾನವು ಪ್ರಶಸ್ತವಾದುದು.

ಯೇ ಚೈತಾಃ ಸಂಪ್ರಯಚ್ಛಂತಿ ಸಾಧವೋ ವೀತಮತ್ಸರಾಃ ।
ತೇ ವೈ ಸುಕೃತಿನಃ ಪ್ರೋಕ್ತಾಃ ಸರ್ವದಾನಪ್ರದಾಶ್ಚ ತೇ ।
ಗವಾಂ ಲೋಕಂ ತಥಾ ಪುಣ್ಯಮಾಪ್ನುವಂತಿ ಚ ತೇಽನಘ ॥೧೭॥

ಯಾವ ಸಾಧುಗಳು ಮಾತ್ಸರ್ಯರಹಿತರಾಗಿ ಗೋದಾನವನ್ನು ಮಾಡುತ್ತಾರೆಯೋ ಅವರು ಪುಣ್ಯವಂತರು ಮತ್ತು ಸರ್ವದಾನವನ್ನು ನೀಡಿದವರು ಎಂದು ಹೇಳಲ್ಪಡುತ್ತಾರೆ. ಎಲೈ ಅನಘನೇ, ಮತ್ತು ಅವರು ಪವಿತ್ರವಾದ ಗೋಲೋಕವನ್ನು ಹೊಂದುತ್ತಾರೆ.

ಯತ್ರ ವೃಕ್ಷಾ ಮಧುಫಲಾ ದಿವ್ಯಪುಷ್ಪಫಲೋಪಗಾಃ ।
ಪುಷ್ಪಾಣಿ ಚ ಸುಗಂಧೀನಿ ದಿವ್ಯಾನಿ ದ್ವಿಜಸತ್ತಮ ॥೧೮॥

ಎಲೈ ದ್ವಿಜಶ್ರೇಷ್ಠನೇ, ಅಲ್ಲಿ ಮಧುರಫಲಗಳನ್ನು ಹೊಂದಿರುವ, ಯಾವಾಗಲೂ ದಿವ್ಯವಾದ ಪುಷ್ಪಫಲಗಳನ್ನು ಧರಿಸಿರುವ ವೃಕ್ಷಗಳಿರುತ್ತವೆ. ದಿವ್ಯವಾದ ಸುಗಂಧಯುಕ್ತವಾದ ಪುಷ್ಪಗಳಿರುತ್ತವೆ.

ಸರ್ವಾ ಮಣಿಮಯೀ ಭೂಮಿಃ ಸೂಕ್ಷ್ಮಕಾಂಚನವಾಲುಕಾ ।
ಸರ್ವತ್ರ ಸುಖಸಂಸ್ಪರ್ಶಾ ನಿಷ್ಪಂಕಾ ನೀರಜಾ ಶುಭಾ ॥೧೯॥

ಭೂಮಿ ಎಲ್ಲವೂ ಮಣಿಮಯವಾಗಿದ್ದು ಚಿನ್ನದ ಪುಡಿಯಂತಹ ಸಣ್ಣ ಮರಳುಗಳಿಂದ ಕೂಡಿದೆ. ಎಲ್ಲಕಡೆಯಲ್ಲಿಯೂ ಸುಖಸ್ಪರ್ಶವುಳ್ಳದ್ದಾಗಿ ಕೆಸರಿನಿಂದಲೂ, ಧೂಳಿನಿಂದಲೂ ರಹಿತವಾಗಿ ಶುಭವಾಗಿವೆ.

ರಕ್ತೋತ್ಪಲವನೈಶ್ಚೈವ ಮಣಿದಂಡೈರ್ಹಿರಣ್ಮಯೈಃ ।
ತರುಣಾದಿತ್ಯಸಂಕಾಶೈರ್ಭಾಂತಿ ತತ್ರ ಜಲಾಶಯಾಃ ॥೨೦॥

ಅಲ್ಲಿ ಜಲಾಶಯಗಳು ಮಣಿಮಯವಾದ ನಾಳವನ್ನು ಹೊಂದಿರುವ, ಉದಯಿಸುವ ಸೂರ್ಯನ ಪ್ರಭೆಯನ್ನು ಹೊಂದಿರುವ, ಸುವರ್ಣಮಯವಾದ ರಕ್ತೋತ್ಪಲಗಳಿಂದ ಕೂಡಿದ ವನಗಳಿಂದ ಶೋಭಿಸುತ್ತವೆ.

ಮಹಾರ್ಹಮಣಿಪತ್ರೈಶ್ಚ ಕಾಂಚನಪ್ರಭಕೇಸರೈಃ ।
ನೀಲೋತ್ಪಲವಿಮಿಶ್ರೈಶ್ಚ ಸರೋಭಿರ್ಬಹುಪಂಕಜೈಃ ॥೨೧॥

ಬೆಲೆಬಾಳುವ ಮಣಿಮಯವಾದ ದಳಗಳನ್ನುಳ್ಳ, ಚಿನ್ನದ ಪ್ರಭೆಯನ್ನು ಹೊಂದಿರುವ ಕೇಸರಗಳನ್ನು ಹೊಂದಿದ, ನೀಲೋತ್ಪಲಗಳಿಂದ ಮಿಶ್ರಿತವಾದ, ಅನೇಕ ಕಮಲಗಳಿಂದ ಕೂಡಿದ ಸರೋವರಗಳಿಂದ ಶೋಭಿಸುತ್ತದೆ.

ಕರವೀರವನೈಃ ಫುಲ್ಲೈಃ ಸಹಸ್ರಾವರ್ತಸಂವೃತೈಃ ।
ಸಂತಾನಕವನೈಃ ಫುಲ್ಲೈರ್ವೃಕ್ಷೈಶ್ಚ ಸಮಲಂಕೃತಾ ॥೨೨॥

ಅರಳಿದ ಪುಷ್ಪವುಳ್ಳ ಕರವೀರವನಗಳಿಂದಲೂ, ಸಹಸ್ರಾವರ್ತ ವೃಕ್ಷಗಳಿಂದ ಕೂಡಿದ ಸಂತಾನಕವೃಕ್ಷದ ವನಗಳಿಂದಲೂ, ಅರಳಿದ ಪುಷ್ಪವುಳ್ಳ ಬೇರೆ ವೃಕ್ಷಗಳಿಂದಲೂ ಭೂಮಿಯು ಅಲ್ಲಿ ಅಲಂಕೃತವಾಗಿದೆ.

ನಿರ್ಮಲಾಭಿಶ್ಚ ಮುಕ್ತಾಭಿರ್ಮಣಿಭಿಶ್ಚ ಮಹಾಧನೈಃ ।
ಉದ್ಧೂತಪುಳಿನಾಸ್ತತ್ರ ಜಾತರೂಪೈಶ್ಚ ನಿಮ್ನಗಾಃ ॥೨೩॥

ಅಲ್ಲಿ ನದಿಗಳು ನಿರ್ಮಲವಾದ ಮುತ್ತುಗಳಿಂದಲೂ, ಮಹಾಬೆಲೆಬಾಳುವ ಮಣಿಗಳಿಂದಲೂ, ಸುವರ್ಣಗಳಿಂದಲೂ ಮಿಶ್ರಿತವಾದ ಮರಳುಗಳನ್ನು ಹೊಂದಿ ಹರಿಯುತ್ತವೆ.

ಸರ್ವರತ್ನಮಯೈಶ್ಚಿತ್ರೈರವಗಾಢಾ ನಗೋತ್ತಮೈಃ ।
ಜಾತರೂಪಮಯೈಶ್ಚಾನ್ಯೈ ರ್ಹುತಾಶನಸಮಪ್ರಭೈಃ ॥೨೪॥

ಸರ್ವರತ್ನಮಯವಾದ, ವಿಚಿತ್ರವಾದ ಶ್ರೇಷ್ಠ ಪರ್ವತಗಳಿಂದಲೂ, ಬೇರೆ ಅಗ್ನಿ ಸಮಾನಕಾಂತಿಯುಳ್ಳ ಸುವರ್ಣಮಯವಾದ ಪರ್ವತಗಳಿಂದಲೂ ಆ ಭೂಮಿಯು ನಿಬಿಡವಾಗಿದೆ.

ಸೌವರ್ಣಗಿರಯಸ್ತತ್ರ ಮಣಿರತ್ನಶಿಲೋಚ್ಚಯಾಃ ।
ಸರ್ವರತ್ನಮಯೈರ್ಭಾಂತಿ ಶೃಂಗೈಶ್ಚಾರುಭಿರುಚ್ಚ್ರಿತೈಃ ॥೨೫॥

ಅಲ್ಲಿರುವ ಸುವರ್ಣಪರ್ವತಗಳು ಮಣಿಮಯವಾದ ಮತ್ತು ರತ್ನಮಯವಾದ ಕೋಡುಗಳನ್ನು ಹೊಂದಿ ಸರ್ವರತ್ನಮಯವಾದ ಎತ್ತರವಾದ ಅನೇಕ ಶಿಖರಗಳಿಂದ ಶೋಭಿಸುತ್ತವೆ.

ನಿತ್ಯಪುಷ್ಪಫಲಾಸ್ತತ್ರ ನಗಾಃ ಪತ್ರರಥಾಕುಲಾಃ ।
ದಿವ್ಯಗಂಧರಸೈಃ ಪುಷ್ಪೈಃ ಫಲೈಶ್ಚ ಭರತರ್ಷಭ ॥೨೬॥

ಎಲೈ ಭರತರ್ಷಭನೇ, ಅಲ್ಲಿರುವ ವೃಕ್ಷಗಳು ನಿತ್ಯವೂ ಪುಷ್ಪಫಲಗಳಿಂದ ಕೂಡಿ ಪಕ್ಷಿಗಳಿಂದಲೂ, ದಿವ್ಯಗಂಧರಸವುಳ್ಳ ಪುಷ್ಪಗಳಿಂದಲೂ ಮತ್ತು ಫಲಗಳಿಂದಲೂ ತುಂಬಿರುತ್ತವೆ.

ರಮಂತೇ ಪುಣ್ಯಕರ್ಮಾಣಸ್ತತ್ರ ನಿತ್ಯಂ ಯುಧಿಷ್ಠಿರ ।
ಸರ್ವಕಾಮಸಮೃದ್ಧಾರ್ಥಾ ನಿಃಶೋಕಾ ಗತಮನ್ಯವಃ ॥೨೭॥

ಎಲೈ ಯುಧಿಷ್ಠಿರನೇ, ಅಲ್ಲಿ ಪುಣ್ಯಕರ್ಮವನ್ನು ಮಾಡಿದವರು ಸರ್ವಕಾಮಿತ ಪದಾರ್ಥಗಳನ್ನು ಸಮೃದ್ಧವಾಗಿ ಪಡೆದು ಶೋಕರಹಿತರಾಗಿ, ಕೋಪರಹಿತರಾಗಿ ನಿತ್ಯವೂ ಸಂತೋಷಪಡುತ್ತಾರೆ.

ವಿಮಾನೇಷು ವಿಚಿತ್ರೇಷು ರಮಣೀಯೇಷು ಭಾರತ ।
ಮೋದಂತೇ ಪುಣ್ಯಕರ್ಮಾಣೋ ವಿಹರಂತೋ ಯಶಸ್ವಿನಃ ॥೨೮॥

ಎಲೈ ಭಾರತನೇ, ವಿಚಿತ್ರವಾದ ಉಪ್ಪರಿಗೆ ಮನೆಗಳಲ್ಲಿ ಪುಣ್ಯಕರ್ಮವನ್ನು ಮಾಡಿದ ಕೀರ್ತಿವಂತರಾದ ಪುರುಷರು ವಿಹಾರವನ್ನು ಮಾಡಿ ಸಂತೋಷ ಪಡುತ್ತಾರೆ.

ಉಪಕ್ರೀಡಂತಿ ತಾನ್ ರಾಜನ್ ಶುಭಾಶ್ಚಾಪ್ಸರಸಾಂ ಗಣಾಃ ।
ಏತಾಲ್ಲೋಕಾನವಾಪ್ನೋತಿ ಗಾಂ ದತ್ತ್ವಾ ವೈ ಯುಧಿಷ್ಠಿರ ॥೨೯॥

ಎಲೈ ರಾಜನೇ, ಅಪ್ಸರೆಯರ ಶುಭವಾದ ಸಮೂಹಗಳು ಅವರ ಬಳಿ ಆಟವಾಡುತ್ತವೆ. ಎಲೈ ಯುಧಿಷ್ಠಿರನೇ, ಗೋದಾನ ಮಾಡಿದವನು ಇಂತಹ ಲೋಕವನ್ನು ಪಡೆಯುತ್ತಾನೆ.

ಯಾಸಾಮಧಿಪತಿಃ ಪೂಷಾ ಮಾರುತೋ ಬಲವಾನ್ ಬಲೀ ।
ಐಶ್ವರ್ಯೇ ವರುಣೋ ರಾಜಾ ತಾ ಮಾಂ ಪಾಂತು ಯುಗಂಧರಾಃ ॥

ಯಾವ ಗೋವುಗಳಿಗೆ ಪೂಷದೇವತೆಯು ಅಧಿಪತಿಯೋ, ಬಲಿಷ್ಠನಾದ ವಾಯುವು ರಕ್ಷಕನೋ, ಯಾರ ಐಶ್ವರ್ಯಕ್ಕೆ ರಾಜನಾದ ವರುಣನು ಅಧಿಪತಿಯೋ ಅಂತಹ ಯುಗಂಧರರೂಪವಾದ ಗೋವುಗಳು ನನ್ನನ್ನು ರಕ್ಷಿಸಲಿ.

ಸುರೂಪಾ ಬಹುರೂಪಾಶ್ಚ ವಿಶ್ವರೂಪಾಶ್ಚ ಮಾತರಃ ।
ಪ್ರಾಜಾಪತ್ಯಾ ಇತಿ ಬ್ರಹ್ಮನ್ ಜಪೇನ್ನಿತ್ಯಂ ಯತವ್ರತಃ ॥೩೧॥

ಎಲೈ ಬ್ರಾಹ್ಮಣನೇ, ಸುರೂಪ, ಬಹುರೂಪ, ವಿಶ್ವರೂಪ ಎಂಬ ಪ್ರಭೇದದಿಂದ ಕೂಡಿದ ಲೋಕಮಾತೆಗಳಾದ ಗೋವುಗಳು ಪ್ರಜಾಪತಿಯ ಪುತ್ರಿಯರು ಎಂದು ನಿತ್ಯವೂ ವ್ರತಶೀಲರಾಗಿ ಜಪಿಸಬೇಕು.

ಗಾಸ್ತು ಶುಶ್ರೂಷತೇ ಯಶ್ಚ ಸಮನ್ವೇತಿ ಚ ಸರ್ವಶಃ ।
ತಸ್ಮೈ ತುಷ್ಟಾಃ ಪ್ರಯಚ್ಛಂತಿ ವರಾನಪಿ ಸುದುರ್ಲಭಾನ್ ॥೩೨॥

ಯಾವನು ಗೋವುಗಳ ಸೇವೆಯನ್ನು ಮಾಡುತ್ತಾನೆಯೋ, ಎಲ್ಲ ಕಡೆಗಳಲ್ಲಿಯೂ ಅವುಗಳನ್ನು ಹಿಂಬಾಲಿಸುತ್ತಾನೆಯೋ ಅವನಿಗೆ ಸಂತುಷ್ಟವಾದ ಗೋವುಗಳು ಅತ್ಯಂತ ದುರ್ಲಭವಾದ ವರಗಳನ್ನು ಕೊಡುತ್ತವೆ.

ನ ದ್ರುಹ್ಯೇನ್ಮನಸಾ ಚಾಪಿ ಗೋಷು ತಾ ಹಿ ಸುಖಪ್ರದಾಃ ।
ಅರ್ಚಯೇತ ಸದಾ ಚೈವ ನಮಸ್ಕಾರೈಶ್ಚ ಪೂಜಯೇತ್ ।
ದಾಂತಃ ಪ್ರೀತಮನಾ ನಿತ್ಯಂ ಗವಾಂ ವೃಷ್ಟಿಂ ತಥಾಶ್ನುತೇ ॥೩೩॥

ಗೋವುಗಳಿಗೆ ಮನಸ್ಸಿನಲ್ಲಿಯೂ ದ್ರೋಹವನ್ನು ಮಾಡಬಾರದು. ಅವುಗಳು ಸುಖಪ್ರದವಾದವುಗಳು. ಯಾವಾಗಲೂ ಅವುಗಳನ್ನು ಅರ್ಚಿಸಿ ನಮಸ್ಕರಿಸಿ ಪೂಜಿಸಬೇಕು. ಇಂದ್ರಿಯನಿಗ್ರಹ ಹೊಂದಿ ಸಂತೋಷದಿಂದ ನಿತ್ಯವೂ ಹೀಗೆ ಮಾಡುವವನು ಗೋಸಮೃದ್ಧಿಯನ್ನು ಹೊಂದುತ್ತಾನೆ.

ಯೇನ ದೇವಾಃ ಪವಿತ್ರೇಣ ಭುಂಜತೇ ಲೋಕಮುತ್ತಮಮ್ ।
ಯತ್ಪವಿತ್ರಂ ಪವಿತ್ರಾಣಾಂ ತದ್ ಘೃತಂ ಶಿರಸಾ ವಹೇತ್ ॥೩೪॥

ಯಾವ ಪವಿತ್ರವಾದ ಗೋದಾನದಿಂದ ದೇವತೆಗಳು ಶ್ರೇಷ್ಠವಾದ ಲೋಕಗಳನ್ನು ಅನುಭವಿಸುತ್ತಾರೆಯೋ, ಯಾವುದು ಪವಿತ್ರಗಳಿಗಿಂತಲೂ ಪವಿತ್ರವೋ ಅಂತಹ ಗೋವುಗಳಿಂದ ಉಂಟಾದ ಘೃತವನ್ನು ಶಿರಸ್ಸಿನಲ್ಲಿ ಧರಿಸಬೇಕು.

ಘೃತೇನ ಜುಹುಯಾದಗ್ನಿಂ ಘೃತೇನ ಸ್ವಸ್ತಿ ವಾಚಯೇತ್ ।
ಘೃತಂ ಪ್ರಾಶೇದ್ ಘೃತಂ ದದ್ಯಾದ್ ಗವಾಂ ವೃಷ್ಟಿಂ ತಥಾಶ್ನುತೇ ॥೩೫॥

ಅಗ್ನಿಗೆ ಘೃತದಿಂದ ಹೋಮವನ್ನು ಮಾಡಬೇಕು. ಸ್ವಸ್ತಿವಾಚನವನ್ನು ಘೃತದಿಂದ ಮಾಡಿಸಬೇಕು. ಘೃತವನ್ನು ಪಾನ ಮಾಡಬೇಕು. ದಾನ ಮಾಡಬೇಕು. ಅಂತಹವನು ಗೋಸಮೃದ್ಧಿಯನ್ನು ಹೊಂದುತ್ತಾನೆ.

ತ್ರ್ಯಹಮುಷ್ಣಂ ಪಿಬೇನ್ಮೂತ್ರಂ ತ್ರ್ಯಹಮುಷ್ಣಂ ಪಿಬೇತ್ ಪಯಃ ।
ಗವಾಮುಷ್ಣಂ ಪಯಃ ಪೀತ್ವಾ ತ್ರ್ಯಹಮುಷ್ಣಂ ಘೃತಂ ಪಿಬೇತ್ ।
ತ್ರ್ಯಹಮುಷ್ಣಂ ಘೃತಂ ಪೀತ್ವಾ ವಾಯುಭಕ್ಷೋ ಭವೇತ್ ತ್ರ್ಯಹಮ್ ॥

ಮೂರುದಿವಸ ಬಿಸಿಯಾದ ಗೋಮೂತ್ರವನ್ನು ಪಾನ ಮಾಡಬೇಕು. ಮೂರು ದಿವಸ ಬಿಸಿಯಾದ ಕ್ಷೀರವನ್ನು ಪಾನ ಮಾಡಬೇಕು. ಬಿಸಿಯಾದ ಕ್ಷೀರಪಾನ ಮಾಡಿದ ನಂತರ ಮೂರು ದಿವಸ ಬಿಸಿಯಾದ ತುಪ್ಪವನ್ನು ಪಾನ ಮಾಡಬೇಕು. ಬಿಸಿಯಾದ ತುಪ್ಪವನ್ನು ಪಾನ ಮಾಡಿ ಅನಂತರ ಮೂರು ದಿನ ಕೇವಲ ವಾಯುಭಕ್ಷನಾಗಿರಬೇಕು.

ನಿರ್ಹೃತೈಶ್ಚ ಯವೈರ್ಗೋಭಿರ್ಮಾಸಂ ಪ್ರಸೃತಯಾವಕಃ ।
ಬ್ರಹ್ಮಹತ್ಯಾಸಮಂ ಪಾಪಂ ಸರ್ವಮೇತೇನ ಶುದ್ಧ್ಯತಿ ॥೩೭॥

ಅನಂತರ ಒಂದು ತಿಂಗಳ ಕಾಲ ಗೋವುಗಳಿಗೆ ಗೋದಿಯನ್ನು ಕೊಟ್ಟು ಗೋಮಯದಲ್ಲಿ ಬಂದ ಗೋದಿಗಳ ಕಾಳುಗಳಿಂದ ಗಂಜಿಯನ್ನು ಮಾಡಿ ಅದರಿಂದ ಜೀವಿಸಬೇಕು. ಈ ವ್ರತವು ಬ್ರಹ್ಮಹತ್ಯೆಗೆ ಸಮವಾದ ಎಲ್ಲ ಪಾಪಗಳನ್ನೂ ಪರಿಹರಿಸಿ ಶುದ್ಧಗೊಳಿಸುತ್ತದೆ.

ಪರಾಭವಾರ್ಥಂ ದೈತ್ಯಾನಾಂ ದೇವೈಃ ಶೌಚಮಿದಂ ಕೃತಮ್ ।
ದೇವತ್ವಮಪಿ ಚ ಪ್ರಾಪ್ತಾಃ ಸಂಸಿದ್ಧಾಶ್ಚ ಮಹಾಬಲಾಃ ॥೩೮॥

ದೈತ್ಯರನ್ನು ಪರಾಭವಗೊಳಿಸಲು ದೇವತೆಗಳು ಈ ವ್ರತವನ್ನು ಮಾಡಿದರು. ದೈತ್ಯರನ್ನು ಪರಾಭವಗೊಳಿಸಿ, ಜೊತೆಗೆ ದೇವತ್ವವನ್ನೂ ಹೊಂದಿ ಸಂಸಿದ್ಧರೂ, ಮಹಾಬಲರೂ ಆದರು.

ಗಾವಃ ಪವಿತ್ರಾಃ ಪುಣ್ಯಾಶ್ಚ ಪಾವನಂ ಪರಮಂ ಮಹತ್ ।
ತಾಶ್ಚ ದತ್ತ್ವಾ ದ್ವಿಜಾತಿಭ್ಯೋ ನರಃ ಸ್ವರ್ಗಮುಪಾಶ್ನುತೇ ॥೩೯॥

ಗೋವುಗಳು ಪವಿತ್ರವಾದವುಗಳು, ಪುಣ್ಯಪ್ರದವಾದವುಗಳು, ಪರಮ ಪಾವನವಾದವುಗಳು. ಬ್ರಾಹ್ಮಣರಿಗೆ ಅವುಗಳನ್ನು ದಾನ ಮಾಡುವ ಮನುಷ್ಯನು ಸ್ವರ್ಗವನ್ನು ಹೊಂದುತ್ತಾನೆ.

ಗವಾಂ ಮಧ್ಯೇ ಶುಚಿರ್ಭೂತ್ವಾ ಗೋಮತೀಂ ಮನಸಾ ಜಪೇತ್ ।
ಪೂತಾಭಿರದ್ಭಿರಾಚಮ್ಯ ಶುಚಿರ್ಭವತಿ ನಿರ್ಮಲಃ ॥೪೦॥

ಗೋವುಗಳ ಮಧ್ಯದಲ್ಲಿಯೇ ಶುಚಿಯಾಗಿ ನಿಂತು ಗೋಮತೀ ಮಂತ್ರವನ್ನು ಮನಸ್ಸಿನಲ್ಲಿ ಜಪಿಸಬೇಕು. ಅನಂತರ ಪವಿತ್ರವಾದ ನೀರಿನಿಂದ ಆಚಮನ ಮಾಡಿ ಮನುಷ್ಯನು ನಿರ್ಮಲನಾಗಿ ಶುಚಿಯಾಗುತ್ತಾನೆ.

ಅಗ್ನಿಮಧ್ಯೇ ಗವಾಂ ಮಧ್ಯೇ ಬ್ರಾಹ್ಮಣಾನಾಂ ಚ ಸಂಸದಿ ।
ವಿದ್ಯಾವೇದವ್ರತಸ್ನಾತಾ ಬ್ರಾಹ್ಮಣಾಃ ಪುಣ್ಯಕರ್ಮಿಣಃ ॥೪೧॥

ಅಧ್ಯಾಪಯೇರನ್ ಶಿಷ್ಯಾನ್ ವೈ ಗೋಮತೀಂ ಯಜ್ಞಸಮ್ಮಿತಾಮ್ ।
ತ್ರಿರಾತ್ರೋಪೋಷಿತಃ ಶ್ರುತ್ವಾ ಗೋಮತೀಂ ಲಭತೇ ವರಮ್ ॥೪೨॥

ಯಜ್ಞಕ್ಕೆ ಸಮವಾದ ಗೋಮತೀ ಮಂತ್ರವನ್ನು ಪುಣ್ಯಕರ್ಮಿಗಳಾದ, ವಿದ್ಯಾ ವೇದ ವ್ರತಗಳಲ್ಲಿ ಸ್ನಾತರಾದ ಬ್ರಾಹ್ಮಣರು ಅಗ್ನಿಮಧ್ಯದಲ್ಲಿ, ಗೋಮಧ್ಯದಲ್ಲಿ, ಬ್ರಾಹ್ಮಣರ ಮಧ್ಯದಲ್ಲಿ ಶಿಷ್ಯರಿಗೆ ಉಪದೇಶ ಮಾಡಬೇಕು. ಮೂರು ರಾತ್ರಿ ಉಪವಾಸವನ್ನು ಮಾಡಿ ಗೋಮತೀ ಮಂತ್ರವನ್ನು ಶ್ರವಣ ಮಾಡುವವನು ಅಭೀಷ್ಟವಾದ ವರಗಳನ್ನು ಪಡೆಯುತ್ತಾನೆ.

ಪುತ್ರಕಾಮಶ್ಚ ಲಭತೇ ಪುತ್ರಂ ಧನಮಥಾಪಿ ಚ ।
ಪತಿಕಾಮಾ ಚ ಭರ್ತಾರಂ ಸರ್ವಕಾಮಾಂಶ್ಚ ಮಾನವಃ ।
ಗಾವಸ್ತುಷ್ಟಾಃ ಪ್ರಯಚ್ಛಂತಿ ಸೇವಿತಾ ವೈ ನ ಸಂಶಯಃ ॥೪೩॥

ಪುತ್ರಕಾಮನಾದವನು ಪುತ್ರನನ್ನು ಮತ್ತು ಧನವನ್ನು ಪಡೆಯುತ್ತಾನೆ. ಪತಿಕಾಮನೆಯುಳ್ಳ ಕನ್ಯೆಯು ಪತಿಯನ್ನು ಪಡೆಯುತ್ತಾಳೆ. ಮನುಷ್ಯನು ಎಲ್ಲ ಕಾಮಗಳನ್ನೂ ಪಡೆಯುತ್ತಾನೆ. ಗೋವುಗಳನ್ನು ಸೇವೆ ಮಾಡಿದರೆ ಅವು ಸಂತೋಷದಿಂದ ಎಲ್ಲವನ್ನೂ ಕೊಡುತ್ತವೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಏವಮೇತಾ ಮಹಾಭಾಗಾ ಯಜ್ಞಿಯಾಃ ಸರ್ವಕಾಮದಾಃ ।
ರೋಹಿಣ್ಯ ಇತಿ ಜಾನೀಹಿ ನೈತಾಭ್ಯೋ ವಿದ್ಯತೇ ಪರಮ್ ॥೪೪॥

ಈ ರೀತಿಯಲ್ಲಿ ಈ ಗೋವುಗಳು ಮಹಾಭಾಗ್ಯವಂತವಾದವುಗಳು, ಯಜ್ಞ ಪ್ರವರ್ತಕವಾದವುಗಳು, ಸರ್ವಕಾಮಪ್ರದವಾದವುಗಳು ಎಂದು ತಿಳಿ. ಇವುಗಳಿಗಿಂತ ಶ್ರೇಷ್ಠವಾದುದು ಇನ್ನೊಂದಿಲ್ಲ.

ಇತ್ಯುಕ್ತಃ ಸ ಮಹಾತೇಜಾಃ ಶುಕಃ ಪಿತ್ರಾ ಮಹಾತ್ಮನಾ ।
ಪೂಜಯಾಮಾಸ ಗಾ ನಿತ್ಯಂ ತಸ್ಮಾತ್ ತ್ವಮಪಿ ಪೂಜಯ ॥೪೫॥

ಎಲೈ ಯುಧಿಷ್ಠಿರನೇ, ಮಹಾತ್ಮರಾದ ತಂದೆಯಿಂದ ಹೀಗೆ ಉಪದೇಶಿಸಲ್ಪಟ್ಟ ಮಹಾತೇಜಸ್ವಿಗಳಾದ ಶುಕಾಚಾರ್ಯರು ನಿತ್ಯವೂ ಗೋಪೂಜೆಯನ್ನು ಮಾಡಿದರು. ಆದ್ದರಿಂದ ನೀನೂ ಸಹ ಗೋವನ್ನು ಪೂಜಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವ್ಯಾಸಶುಕಸಂವಾದೋ ನಾಮ
ಏಕಾದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೆರಡನೆಯ ಅಧ್ಯಾಯ

ಗೋಲೋಕಸ್ಥಿತಿ

ಯುಧಿಷ್ಠಿರಃ

ಸುರಾಣಾಮಸುರಾಣಾಂ ಚ ಭೂತಾನಾಂ ಚ ಪಿತಾಮಹ ।
ಪ್ರಭುಃ ಸ್ರಷ್ಟಾ ಚ ಭಗವಾನ್ ಮುನಿಭಿಃ ಸ್ತೂಯತೇ ಭುವಿ ॥೧॥

ತಸ್ಯೋಪರಿ ಕಥಂ ಹ್ಯೇಷ ಗೋಲೋಕಃ ಸ್ಥಾನತಾಂ ಗತಃ ।
ಸಂಶಯೋ ಮೇ ಮಹಾನೇಷ ತನ್ಮೇ ವ್ಯಾಖ್ಯಾತುಮರ್ಹಸಿ ॥೨॥

ಯುಧಿಷ್ಠಿರ– ಎಲೈ ಪಿತಾಮಹನೇ, ದೇವತೆಗಳನ್ನೂ, ಅಸುರರನ್ನೂ ಮತ್ತು ಎಲ್ಲಾ ಪ್ರಾಣಿಗಳನ್ನು ಸೃಷ್ಟಿಮಾಡುವವರು ಮತ್ತು ಅವರಿಗೆ ಪ್ರಭುವಾದವರು ಪೂಜ್ಯರಾದ ಬ್ರಹ್ಮದೇವರು ಎಂದು ಭೂಮಿಯಲ್ಲಿ ಋಷಿಗಳಿಂದ ಸ್ತೋತ್ರ ಮಾಡಲ್ಪಡುತ್ತಾರೆ. ಈ

ಗೋಲೋಕವು ಅವರ ಮೇಲೆ ಹೇಗೆ ಸ್ಥಾನವನ್ನು ಹೊಂದಿತು? ನನಗೆ ಈ ವಿಷಯದಲ್ಲಿ ದೊಡ್ಡ ಸಂಶಯವಿದೆ. ಅದನ್ನು ಪರಿಹರಿಸಬೇಕು.

ಭೀಷ್ಮಃ

ಮನೋವಾಗ್ಬುದ್ಧಯಸ್ತಾವದೇಕಸ್ಥಾಃ ಕುರು ಸತ್ತಮ ।
ತತೋ ಮೇ ಶೃಣು ಕಾರ್ತ್ಸ್ನ್ಯೇನ ಗೋಮಹಾಭಾಗ್ಯಮುತ್ತಮಮ್ ॥

ಭೀಷ್ಮ- ಎಲೈ ಶ್ರೇಷ್ಠನೇ, ಮನೋವಾಗ್ಬುದ್ಧಿಗಳನ್ನು ಒಂದು ಕಡೆಯಲ್ಲಿ ನಿಲ್ಲಿಸಿ ಅನಂತರ ನಾನು ಹೇಳುವ ಗೋವುಗಳ ಶ್ರೇಷ್ಠವಾದ ಮಹಾಭಾಗ್ಯವನ್ನು ಪೂರ್ಣವಾಗಿ ಕೇಳುವವನಾಗು.

ಪುಣ್ಯಂ ಯಶಸ್ಯಮಾಯುಷ್ಯಂ ತಥಾ ಸ್ವಸ್ತ್ಯಯನಂ ಮಹತ್ ।
ಕೀರ್ತಿರ್ವಿಹರತಾಂ ಲೋಕೇ ಗವಾಂ ಯೋಗೇ ತು ಭಕ್ತಿಮಾನ್ ॥೪॥

ಈ ಆಖ್ಯಾನವು ಗೋವುಗಳಲ್ಲಿ ಭಕ್ತಿಯುಳ್ಳವನಿಗೆ ಪುಣ್ಯವನ್ನೂ, ಕೀರ್ತಿಯನ್ನೂ, ಆಯುಷ್ಯವನ್ನೂ, ದೊಡ್ಡ ಮಂಗಳವನ್ನೂ ತಂದುಕೊಡುತ್ತದೆ. ಗಂಧರ್ವಾದಿ ವಿಹರಿಸುವ ಲೋಕದಲ್ಲಿಯೂ ಕೀರ್ತಿಯುಂಟಾಗುತ್ತದೆ.

ಶ್ರೂಯತೇ ಹಿ ಪುರಾಣೇಷು ಮಹರ್ಷೀಣಾಂ ಮಹಾತ್ಮನಾಮ್ ।
ಸಂಸ್ಥಾನೇ ಸರ್ವಲೋಕಾನಾಂ ದೇವಾನಾಂ ಚಾಪಿ ಸಂಭವೇ ॥೫॥

ದೇವತಾರ್ಥೇऽಮೃತಾರ್ಥೇ ಚ ಯಜ್ಞಾರ್ಥೇ ಚೈವ ಭಾರತ ।
ಸುರಭಿರ್ನಾಮ ವಿಖ್ಯಾತಾ ರೋಹಿಣೀ ಕಾಮರೂಪಿಣೀ ॥೬॥

ಸಂಕಲ್ಪ್ಯ ಮನಸಾ ಪೂರ್ವಂ ರೋಹಿಣೀ ಹ್ಯಮೃತಾನನಾ ।
ಘೋರಂ ತಪಃ ಸಮಾಸ್ಥಾಯ ನಿರ್ಮಿತಾ ವಿಶ್ವಕರ್ಮಣಾ ॥೭॥

ಪುರಾಣಗಳಲ್ಲಿ ಈ ವಿಷಯವು ಕೇಳಿಬರುತ್ತದೆ. ಮಹಾತ್ಮರಾದ ಮಹರ್ಷಿಗಳ ಸಂಸ್ಥಾಪನೆಗೋಸ್ಕರವಾಗಿ ಸರ್ವಲೋಕಗಳ ಮತ್ತು ದೇವತೆಗಳ ಉತ್ಪತ್ತಿಗಾಗಿ, ದೇವತೆಗಳ ಸಲುವಾಗಿ, ಅಮೃತದ ಸಲುವಾಗಿ, ಯಜ್ಞಗಳ ಸಲುವಾಗಿ, ಸುರಭಿ ಎಂಬ ಪ್ರಖ್ಯಾತಳಾದ ಕಾಮರೂಪವನ್ನು ಧರಿಸಿ ಧೇನುವನ್ನು ಎಲ್ಲವನ್ನೂ ಸೃಷ್ಟಿಸುವ

ಬ್ರಹ್ಮದೇವರು ಘೋರ ತಪಸ್ಸನ್ನು ಆಚರಿಸಿ ಮನಸ್ಸಿನಿಂದ ಸಂಕಲ್ಪವನ್ನು ಮಾಡಿ ಮುಖದಲ್ಲಿ ಅಮೃತವನ್ನು ಹೊಂದಿದ್ದ ಅವಳನ್ನು ಸೃಷ್ಟಿ ಮಾಡಿದರು (ಕಾಮ ರೂಪಿಣಿಯಾದುದರಿಂದ ಅವಳಿಗೆ ಗೋರೂಪವೂ, ಕನ್ಯಾರೂಪವೂ ಇದೆ).

ಪುರುಷಂ ಚಾಸೃಜದ್ ಭೂಯಸ್ತೇಜಸಾ ತಪಸಾ ಚ ಹ ।
ದೇದೀಪ್ಯಮಾನಂ ವಪುಷಾ ಸಮಿದ್ಧಮಿವ ಪಾವಕಮ್ ॥೮॥

ಪುನಃ ಬ್ರಹ್ಮದೇವರು ತಮ್ಮ ತೇಜಸ್ಸಿನಿಂದಲೂ, ತಪಸ್ಸಿನಿಂದಲೂ ಜ್ವಲಿಸುವ ಅಗ್ನಿಯಂತೆ ತನ್ನ ದೇಹದಿಂದ ಪ್ರಕಾಶಿಸುವ ಪುರುಷನನ್ನು ಸೃಷ್ಟಿಸಿದರು.

ಸೋಽಪಶ್ಯದ್ ದಿವ್ಯರೂಪಾಂ ತಾಂ ಸುರಭಿಂ ರೋಹಿಣೀಂ ತದಾ ।
ದೃಷ್ಟ್ವೈವ ಚಾತಿವಿಮನಾಃ ಸೋಽಭವತ್ ಕಾಮಮೋಹಿತಃ ॥೯॥

ಆ ಪುರುಷನು ದಿವ್ಯರೂಪವನ್ನು ಧರಿಸಿದ ಆ ರೋಹಿಣಿಯಾದ ಸುರಭಿ ಕನ್ಯೆಯನ್ನು ನೋಡಿದನು. ನೋಡಿದ ತಕ್ಷಣವೇ ಮನಸ್ಸಿನ ಸ್ಥೈರ್ಯವನ್ನು ಕಳೆದುಕೊಂಡು ಅವಳಲ್ಲಿ ಅವನು ಕಾಮಮೋಹಿತನಾದನು.

ತಂ ಕಾಮಾರ್ತಮಥೋ ಜ್ಞಾತ್ವಾ ಸ್ವಯಂ ಭೂಲೋಕಭಾವನಃ ।
ಮಾಽಽರ್ತೋ ಭವ ತಥಾ ಚೈಷ ಭಗವಾನಭ್ಯಭಾಷತ ॥೧೦॥

ಭೂಲೋಕವನ್ನು ಸೃಷ್ಟಿಸಿದ ಪೂಜ್ಯರಾದ ಈ ಬ್ರಹ್ಮದೇವರು ಕಾಮಾರ್ತನಾದ ಅವನನ್ನು ನೋಡಿ ಅವನಿಗೆ ಆರ್ತನಾಗಬೇಡ ಎಂದು ಹೇಳಿದರು.

ತತಃ ಸ ಭಗವಾಂಸ್ತತ್ರ ಮಾರ್ತಂಡ ಇತಿ ವಿಶ್ರುತಃ ।
ಚಕಾರ ನಾಮ ತಂ ದೃಷ್ಟ್ವಾ ತಸ್ಯಾರ್ತೀಭಾವಮುತ್ತಮಮ್ ॥೧೧॥

ಅನಂತರ ಪ್ರಖ್ಯಾತರಾದ ಪೂಜ್ಯರಾದ ಬ್ರಹ್ಮದೇವರು ಅವನ ಆರ್ತಭಾವವನ್ನು ನೋಡಿ ಅವನಿಗೆ ಮಾರ್ತಂಡ ಎಂದು ನಾಮಕರಣ ಮಾಡಿದರು.

ಸೋಽದದಾದ್ ಭಗವಾಂಸ್ತಸ್ಮೈ ಮಾರ್ತಂಡಾಯ ಮಹಾತ್ಮನೇ ।
ಸುರೂಪಾಂ ಸುರಭಿಂ ಕನ್ಯಾಂ ತಪಸ್ತೇಜೋಮಯೀಂ ಶುಭಾಮ್ ॥

ಪೂಜ್ಯರಾದ ಬ್ರಹ್ಮದೇವರು ಮಹಾತ್ಮನಾದ ಮಾರ್ತಂಡನಿಗೆ ಸುರೂಪಳಾದ, ಶುಭಳಾದ, ತಪಸ್ಸಾರರೂಪಳಾದ ಸುರಭಿಯನ್ನು ಕೊಟ್ಟರು.

ಯಥಾ ಮಯೈಷಾ ಚೋದ್ಭೂತಸ್ತ್ವಂ ಚೈವೈಷಾ ಚ ರೋಹಿಣೀ ।
ಮೈಥುನಂ ಗತವಂತೌ ಚ ತಥಾ ಚೋತ್ಪತ್ಸ್ಯತಿ ಪ್ರಜಾ ॥೧೩॥

ಪ್ರಜಾ ಭವಿಷ್ಯತೇ ಪುಣ್ಯಾ ಪವಿತ್ರಂ ಪರಮಂ ಚ ವಾಮ್ ।
ನ ಚಾಪ್ಯಗಮ್ಯಾಗಮನಾದ್ ದೋಷಂ ಪ್ರಾಪ್ಸ್ಯಸಿ ಕರ್ಹಿಚಿತ್ ॥೧೪॥

ನೀನು ನನ್ನಿಂದ ಜನಿಸಿದಂತೆಯೇ ಈ ರೋಹಿಣಿಯೂ (ಸುರಭಿ) ನನ್ನಿಂದ ಜನಿಸಿದ್ದಾಳೆ. ನೀನು ಮೈಥುನವನ್ನು ಮಾಡಿ ಪ್ರಜೆಗಳನ್ನು ಪಡೆ. ನಿಮಗೆ ಶ್ರೇಷ್ಠವಾದ, ಪವಿತ್ರವಾದ ಪುಣ್ಯಪ್ರದರಾದ ಪ್ರಜೆಗಳು ಜನಿಸುತ್ತಾರೆ. ನಿನಗೆ ಅಗಮ್ಯಾಗಮನ ದೋಷವು ಬರುವುದಿಲ್ಲ.

ತ್ವತ್ಪ್ರಜಾಸಂಭವಂ ಕ್ಷೀರಂ ಭವಿಷ್ಯತಿ ಪರಂ ಹವಿಃ ।
ಯಜ್ಞೇಷು ಚಾಜ್ಯಭಾಗಾನಾಂ ತ್ವತ್ಪ್ರಜಾಮೂಲಜೋ ವಿಧಿಃ ॥೧೫॥

ನಿಮ್ಮ ಪ್ರಜೆಗಳಿಂದ ಉಂಟಾಗುವ ಕ್ಷೀರವು ಶ್ರೇಷ್ಠವಾದ ಹವಿಸ್ಸಾಗುವುದು. ಯಜ್ಞಗಳಲ್ಲಿ ಆಜ್ಯಭಾಗಗಳಿಗೆ ನಿಮ್ಮ ಪ್ರಜೆಗಳಿಂದ ಬಂದ ಆಜ್ಯವೇ ವಿಹಿತವಾಗುವುದು.

ಪ್ರಜಾಶಿಶ್ರೂಷವಶ್ಚೈವ ಯೇ ಭವಿಷ್ಯಂತಿ ರೋಹಿಣೀ ।
ತವ ತೇನೈವ ಪುಣ್ಯೇನ ಗೋಲೋಕಂ ಯಾಂತು ಮಾನವಾಃ ॥೧೬॥

ಎಲೌ ರೋಹಿಣಿಯೇ, ಯಾರು ನಿನ್ನ ಪ್ರಜೆಗಳ ಸೇವೆಯನ್ನು ಮಾಡುವರೋ ಆ ಮಾನವರು ಆ ಪುಣ್ಯದಿಂದ ಗೋಲೋಕಕ್ಕೆ ಹೋಗುವವರಾಗಲಿ.

ಇದಂ ಪವಿತ್ರಂ ಪರಮಮೃಷಭಂ ನಾಮ ಕರ್ಹಿಚಿತ್ ।
ಯದ್ವೈ ಜ್ಞಾತ್ವಾ ದ್ವಿಜಾ ಲೋಕೇ ಮೋಕ್ಷ್ಯಂತೇ ಯೋನಿಸಂಕರಾತ್ ॥

ಈ ಆಖ್ಯಾನವು ಶ್ರೇಷ್ಠವಾದುದು ಮತ್ತು ಪವಿತ್ರವಾದುದು. ಇದು ವೃಷಭ ಎಂದು ಹೇಳಲ್ಪಡುತ್ತದೆ. ಇದನ್ನು ತಿಳಿದ ಬ್ರಾಹ್ಮಣರು ಯೋನಿಸಂಕರ ದೋಷದಿಂದ ಮುಕ್ತರಾಗುತ್ತಾರೆ.

ಏತತ್ಕಿಯಾಃ ಪ್ರಪತ್ಸ್ಯಂತೇ ಮಂತ್ರಬ್ರಾಹ್ಮಣಸಂಸ್ಕೃತಾಃ ।
ದೇವತಾನಾಂ ಪಿತೄಣಾಂ ಚ ಹವ್ಯಕವ್ಯಪುರೋಗಮಾಃ ॥೧೮॥

ದೇವತೆಗಳನ್ನು, ಪಿತೃಗಳನ್ನು ಉದ್ದೇಶಿಸಿ ಮಾಡುವ ಹವ್ಯಕವ್ಯ ಮೊದಲಾದ ಕ್ರಿಯೆಗಳಲ್ಲೆವೂ ಪ್ರಜೆಗಳಿಂದ ಮಂತ್ರಬ್ರಾಹ್ಮಣ ಸಂಸ್ಕೃತಗಳಾಗಿ (ನಿಮ್ಮ ಸಹಕಾರದಿಂದ) ಮಾಡಲ್ಪಡುತ್ತವೆ.

ತತ ಏತೇನ ಪುಣ್ಯೇನ ಪ್ರಜಾಸ್ತವ ತು ರೋಹಿಣಿ ।
ಊರ್ಧ್ವಂ ಮಮಾಪಿ ಲೋಕಸ್ಯ ವತ್ಸ್ಯಂತೇ ನಿರುಪದ್ರವಾಃ ॥೧೯॥

ಎಲೌ ರೋಹಿಣಿಯೇ, ಈ ಪುಣ್ಯದಿಂದ ನಿನ್ನ ಪ್ರಜೆಗಳು ನನ್ನ ಲೋಕಕ್ಕಿಂತ ಮೇಲಿನ ಸ್ಥಾನದಲ್ಲಿ ಯಾವ ಉಪದ್ರವವೂ ಇಲ್ಲದೆ ವಾಸ ಮಾಡುತ್ತಾರೆ.

ಭದ್ರಂ ತೇಭ್ಯಶ್ಚ ಭದ್ರಂ ತೇ ಯೇ ಪ್ರಜಾಸು ಭವಂತಿ ವೈ ।
ಯುಗಂಧರಾಶ್ಚ ತೇ ಪುತ್ರಾಃ ಸಂತು ಲೋಕಸ್ಯ ಧಾರಣೇ ॥೨೦॥

ನಿನ್ನ ಪ್ರಜೆಗಳಿಗೆ ಮಂಗಳವಾಗಲಿ. ನಿನ್ನ ಪ್ರಜೆಗಳ ಸೇವೆಯನ್ನೂ ಮಾಡುವವರಿಗೆ ಮಂಗಳವಾಗಲಿ. ಯುಗಂಧರರೆನಿಸುವ ನಿನ್ನ ಪುತ್ರರು ಲೋಕಧಾರಣೆಯನ್ನು ಮಾಡುವವರಾಗಲಿ.

ಯಾನ್ ಯಾನ್ ಕಾಮಯಸೇ ಲೋಕಾಂಸ್ತಾಲ್ಲೋಕಾನನುಯಾಸ್ಯಸಿ ।
ಸರ್ವದೇವಗಣಾಶ್ಚೈವ ತವ ಯಾಸ್ಯಂತಿ ಪುತ್ರತಾಮ್ ।
ತವ ಸ್ತನಸಮುದ್ಭೂತಂ ಪಿಬಂತೋऽಮೃತಮುತ್ತಮಮ್ ॥೨೧॥

ನೀನು ಬಯಸಿದ ಲೋಕಗಳನ್ನೆಲ್ಲಾ ನೀನು ಹೊಂದುವಿ. ಎಲ್ಲ ದೇವತೆಗಳು ನಿನ್ನ ಪ್ರಜೆಗಳಿಂದ ಉದ್ಭವಿಸಿದ ಶ್ರೇಷ್ಠವಾದ ಅಮೃತವನ್ನು ಪಾನ ಮಾಡಿ ನಿನ್ನ ಪುತ್ರರಾಗುವರು.

ಏವಮೇತಾನ್ ವರಾನ್ ಸರ್ವಾನಗೃಹ್ಣಾತ್ ಸುರಭಿಸ್ತದಾ ।
ಬ್ರುವತಃ ಸರ್ವಲೋಕೇಶಾನ್ನಿರ್ವೃತಿಂ ಚಾಗಮತ್ ಪರಾಮ್ ॥೨೨॥

ಈ ರೀತಿಯಲ್ಲಿ ಸುರಭಿಯು ಆಗ ಸರ್ವಲೋಕೇಶ್ವರನಾದ ಬ್ರಹ್ಮನಿಂದ ಎಲ್ಲ ವರಗಳನ್ನೂ ಸ್ವೀಕರಿಸಿ ಶ್ರೇಷ್ಠವಾದ ತೃಪ್ತಿಯನ್ನು ಹೊಂದಿದಳು.

ಸೃಷ್ಟ್ವಾ ಪ್ರಜಾಶ್ಚ ವಿಪುಲಾ ಲೋಕಸಂಧಾರಣಾಯ ವೈ ।
ಬ್ರಹ್ಮಣಾ ಸಮನುಜ್ಞಾತಾ ಸುರಭಿರ್ಲೋಕಮಾವಿಶತ್ ॥೨೩॥

ಲೋಕವನ್ನು ಧರಿಸುವ ವಿಪುಲರಾದ ಪ್ರಜೆಗಳನ್ನು ಸೃಷ್ಟಿಸಿ ಬ್ರಹ್ಮದೇವರ ಅನುಮತಿಯನ್ನು ಪಡೆದು ಸುರಭಿಯು ಆ ಲೋಕವನ್ನು ಪ್ರವೇಶಿಸಿದಳು.

ಏವಂ ವರಪ್ರದಾನೇನ ಸ್ವಯಂಭೋರೇವ ಭಾರತ ।
ಉಪರಿಷ್ಟಾದ್ ಗವಾಂ ಲೋಕಂ ಪ್ರೋಕ್ತಂ ತೇ ಸರ್ವಮಾದಿತಃ ॥೨೪॥

ಎಲೈ ಭಾರತನೇ, ಹೀಗೆ ಬ್ರಹ್ಮದೇವರ ವರಪ್ರದಾನದಿಂದ ಗೋಲೋಕವು ಬ್ರಹ್ಮಲೋಕಕ್ಕಿಂತ ಮೇಲ್ಭಾಗದಲ್ಲಿದೆ. ನಾನು ಎಲ್ಲವನ್ನೂ ಮೊದಲಿನಿಂದಲೂ ನಿನಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ದ್ವಾದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿಮೂರನೆಯ ಅಧ್ಯಾಯ

ಸುರಭಿಯ ಸಂತತಿ

ಯುಧಿಷ್ಠಿರಃ

ಸುರಭೇಃ ಕಾಃ ಪ್ರಜಾಃ ಪೂರ್ವಂ ಮಾರ್ತಾಂಡಾದಭವನ್ ಪುರಾ ।
ಏತನ್ಮೇ ಶಂಸ ತತ್ತ್ವೇನ ಗೋಷು ಮೇ ಪ್ರೀಯತೇ ಮನಃ ॥೧॥

ಯುಧಿಷ್ಠಿರ– ಸುರಭಿಗೆ ಮಾರ್ತಾಂಡನಿಂದ ಮೊದಲು ಯಾವ ಪ್ರಜೆಗಳು ಜನಿಸಿದರು? ಈ ವಿಷಯವನ್ನು ನನಗೆ ಸರಿಯಾಗಿ ಹೇಳಿ. ಗೋವುಗಳ ವಿಷಯದಲ್ಲಿ ನನ್ನ ಮನಸ್ಸು ಬಹಳ ಸಂತೋಷಪಡುತ್ತದೆ.

ಭೀಷ್ಮಃ

ಶೃಣು ನಾಮಾನಿ ದಿವ್ಯಾನಿ ಗೋಮಾತ್ಯಾಣಾಂ ವಿಶೇಷತಃ ।
ಯಾಭಿರ್ವ್ಯಾಪ್ತಾಸ್ತ್ರಯೋ ಲೋಕಾಃ ಕಲ್ಯಾಣೇಭಿರ್ಜನಾಧಿಪ ॥೨॥

ಭೀಷ್ಮ– ಎಲೈ ಜನಾಧಿಪನೇ, ಯಾವ ಗೋಮಾತೆಯರಿಂದ ಮೂರು ಲೋಕಗಳೂ ತುಂಬಿ ಹೋದವೋ ಅಂತಹ ಗೋಮಾತೆಯರ ದಿವ್ಯನಾಮಗಳನ್ನು ಕೇಳು.

ಸುರಭ್ಯಃ ಪ್ರಥಮೋದ್ಭೂತಾ ಯಾಶ್ಚ ಸ್ಯುಃ ಪ್ರಥಮಾಃ ಪ್ರಜಾಃ ।
ಮಯೋಚ್ಯಮಾನಾಃ ಶೃಣು ತಾಃ ಪ್ರಾಪ್ಸ್ಯಸೇ ವಿಪುಲಂ ಯಶಃ ॥೩॥

ಸುರಭಿಯಿಂದ ಮೊದಲು ಜನಿಸಿದ ಪ್ರಜೆಗಳು ಯಾರು ಎಂಬುದನ್ನು ನನ್ನಿಂದ ಕೇಳು. ಅದರಿಂದ ವಿಪುಲವಾದ ಕೀರ್ತಿಯನ್ನು ಹೊಂದುವಿ.

ತಪ್ತ್ವಾ ತಪೋ ಘೋರತಪಾಃ ಸುರಭಿರ್ದೀಪ್ತತೇಜಸೀ ।
ಸುಷಾವೈಕಾದಶ ಸುತಾನ್ ರುದ್ರಾ ಯೇ ಛಂದಸಿ ಸ್ತುತಾಃ ॥೪॥

ಘೋರ ತಪಸ್ಸನ್ನು ಮಾಡುವ, ದೀಪ್ತವಾದ ತೇಜಸ್ಸುಳ್ಳ ಸುರಭಿಯು ತಪಸ್ಸನ್ನು ಮಾಡಿ ಏಕಾದಶ ರುದ್ರರನ್ನು ಪುತ್ರರನ್ನಾಗಿ ಪಡೆದಳು. ಅವರು ವೇದದಲ್ಲಿ ರುದ್ರರೆಂದು ಹೇಳಲ್ಪಡುತ್ತಾರೆ.

ಅಜೈಕಪಾದಹಿರ್ಬುಧ್ನ್ಯಸ್ತ್ರ್ಯಂಬಕಶ್ಚ ಮಹಾಯಶಾಃ ।
ವೃಷಾಕಪಿಶ್ಚ ಶಂಭುಶ್ಚ ಕಪಾಲೀ ರೈವತಸ್ತಥಾ ॥೫॥

ಹರಶ್ಚ ಬಹುರೂಪಶ್ಚ ಉಗ್ರ ಉಗ್ರೋಽಥ ವೀರ್ಯವಾನ್ ।
ತಸ್ಯ ಚೈವಾತ್ಮಜಃ ಶ್ರೀಮಾನ್ ವಿಶ್ವರೂಪೋ ಮಹಾಯಶಾಃ ॥೬॥

ಅಜೈಕಪಾತ್, ಅಹಿರ್ಬುಧ್ನ್ಯ, ತ್ರ್ಯಂಬಕ, ಮಹಾಯಶ, ವೃಷಾಕಪಿ, ಶಂಭು, ಕಪಾಲಿ, ರೈವತ, ಹರ, ಬಹುರೂಪ, ಉಗ್ರ. ವೀರಶಾಲಿಯಾದ ಉಗ್ರನು ಮಹಾಕೀರ್ತಿವಂತನಾದ, ಕಾಂತಿಯುಕ್ತನಾದ ವಿಶ್ವರೂಪನನ್ನು ಪುತ್ರನನ್ನಾಗಿ ಪಡೆದನು.

ಏಕಾದಶೈತೇ ಕಥಿತಾಃ ರುದ್ರಾಸ್ತೇ ನಾಮ ನಾಮತಃ ।
ಮಹಾತ್ಮಾನೋ ಮಹಾಯೋಗಾಸ್ತೇಜೋಯುಕ್ತಾ ಮಹಾಬಲಾಃ ॥೭॥

ನಾನು ಈ ಏಕಾದಶ ರುದ್ರರನ್ನು ಅವರ ನಾಮಗಳಿಂದ ಹೇಳಿದ್ದೇನೆ. ಅವರೆಲ್ಲರೂ ಮಹಾತ್ಮರು, ಮಹಾಯೋಗಿಗಳು, ತೇಜೋಯುಕ್ತರಾದವರು ಮತ್ತು ಮಹಾಬಲ ಉಳ್ಳವರು.

ಏತೇ ವರಿಷ್ಠಜನ್ಮಾನೋ ದೇವಾನಾಂ ಬ್ರಹ್ಮವಾದಿನಾಮ್ ।
ವಿಪ್ರಾಣಾಂ ಪ್ರಕೃತಿರ್ಲೋಕೇ ಏತ ಏವ ಹಿ ವಿಶ್ರುತಾಃ ॥೮॥

ಬ್ರಹ್ಮವಾದಿಗಳಾದ ದೇವತೆಗಳಲ್ಲಿ ಇವರು ಶ್ರೇಷ್ಠ ಜನ್ಮವನ್ನು ಹೊಂದಿದವರು. ಲೋಕದಲ್ಲಿ ಇವರೇ ಬ್ರಾಹ್ಮಣರಿಗೆ ಮೂಲವೆಂದು ವಿಖ್ಯಾತರಾಗಿದ್ದಾರೆ.

ಏತ ಏಕಾದಶ ಪ್ರೋಕ್ತಾಃ ರುದ್ರಾಸ್ತ್ರಿಭುವನೇಶ್ವರಾಃ ।
ಶತಂ ತ್ವೇತತ್ಸಮಾಖ್ಯಾತಂ ಶತರುದ್ರಂ ಮಹಾತ್ಮನಾಮ್ ॥೯॥

ಆದ್ದರಿಂದ ತ್ರಿಭುವನೇಶ್ವರರಾದ ಇವರು ಏಕಾದಶ ರುದ್ರರೆಂದು ಕರೆಯಲ್ಪಡುತ್ತಾರೆ. ಈ ಮಹಾತ್ಮರ ಮೂರು ನಾಮಗಳು ಶತರುದ್ರರೆಂದು ವೇದದಲ್ಲಿ ಹೇಳಲ್ಪಡುತ್ತದೆ.

ಸುಷುವೇ ಪ್ರಥಮಾಂ ಕನ್ಯಾಂ ಸುರಭಿಃ ಪೃಥಿವೀಂ ತದಾ ।
ವಿಶ್ವಕಾಮದುಘಾ ಧೇನುರ್ಯಾ ಧಾರಯತಿ ದೇಹಿನಃ ॥೧೦॥

ಸರ್ವಕಾಮಗಳನ್ನೂ ಕೊಡುವ ಮತ್ತು ಎಲ್ಲ ಪ್ರಜೆಗಳನ್ನೂ ಪೋಷಿಸುವ ಧೇನುವಾದ ಸುರಭಿಯು ಪ್ರಥಮ ಕನ್ಯಾ ಪ್ರಜೆಯಾಗಿ ಪೃಥಿವಿಯನ್ನು ಪಡೆದಳು.

ಸುತಂ ಗೋಬ್ರಾಹ್ಮಣಂ ರಾಜನ್ನೇಕಮಿತ್ಯಭಿಧೀಯತೇ ।
ಗೋಬ್ರಾಹ್ಮಣಸ್ಯ ಜನನೀ ಸುರಭಿಃ ಪರಿಕೀರ್ತ್ಯತೇ ॥೧೧॥

ಎಲೈ ರಾಜನೇ, ಪುತ್ರರಾದ, ಗೋ ಮತ್ತು ಬ್ರಾಹ್ಮಣರನ್ನು ಒಂದೇ ಎಂದು ಕರೆಯುತ್ತಾರೆ. ಸುರಭಿಯೇ ಗೋಬ್ರಾಹ್ಮಣರ ಜನನಿ ಎಂದು ಹೇಳಲ್ಪಡುತ್ತಾಳೆ.

ಸೃಷ್ಟ್ವಾ ತು ಪ್ರಥಮಂ ರುದ್ರಾನ್ ವರದಾನ್ ಬ್ರಹ್ಮಸಂಭವಾನ್ ।
ಪಶ್ಚಾತ್ ಪ್ರಭುಂ ಗ್ರಹಪತಿಂ ಸುಷುವೇ ಲೋಕಸಮ್ಮತಮ್ ॥೧೨॥

ಮೊದಲು ವರಪ್ರದರೂ, ವೇದಪ್ರವರ್ತಕರೂ ಆದ ರುದ್ರರನ್ನು ಸೃಷ್ಟಿಸಿ ಸುರಭಿಯು ಅನಂತರ ಲೋಕಸಮ್ಮತನೂ, ಗ್ರಹಪತಿಯೂ ಆದ ಚಂದ್ರನನ್ನು ಪಡೆದರು.

ಸೋಮರಾಜಾನಮಮೃತಂ ಯಜ್ಞಸರ್ವಸ್ವಮುತ್ತಮಮ್ ।
ಓಷಧೀನಾಂ ರಸಾನಾಂ ಚ ದೇವಾನಾಂ ಜೀವಿತಸ್ಯ ಚ ॥೧೩॥

ಚಂದ್ರನು ಸೋಮರಾಜನೆಂದೂ, ಅಮೃತನೆಂದೂ ಕರೆಯಲ್ಪಡುತ್ತಾನೆ. ಶ್ರೇಷ್ಠವಾದ ಯಜ್ಞವೆಲ್ಲವೂ ಅವನನ್ನು ಅವಲಂಬಿಸಿದೆ. ಓಷಧಿಗಳಿಗೆ, ರಸಗಳಿಗೆ, ದೇವತೆಗಳಿಗೆ ಮತ್ತು ಮನುಷ್ಯರ ಜೀವನಕ್ಕೆ ಅವನು ಅಧಿಪತಿಯಾದವನು.

ತತಃ ಶ್ರಿಯಂ ಚ ಮೇಧಾಂ ಚ ಕೀರ್ತಿಂ ದೇವೀಂ ಸರಸ್ವತೀಮ್ ।
ಚತಸ್ರಃ ಸುಷುವೇ ಕನ್ಯಾ ಯೋಗೇಷು ನಿಯತಾಃ ಸ್ಥಿತಾಃ ॥೧೪॥

ಅನಂತರ ಸುರಭಿಯು ಶ್ರೀ, ಮೇಧಾ, ಕೀರ್ತಿ ಮತ್ತು ಸರಸ್ವತೀ ಎಂಬ ಯೋಗನಿಷ್ಠರಾದ ನಾಲ್ಕು ಕನ್ಯೆಯರನ್ನು ಪ್ರಸವಿಸಿದಳು.

ಏತಾಃ ಸೃಷ್ಟ್ವಾ ಪ್ರಜಾ ಏಷಾ ಸುರಭಿಃ ಕಾಮರೂಪಿಣೀ ।
ಸುಷುವೇ ಪರಮಾಂ ಭೂಯೋ ದಿವ್ಯಾ ಗೋಮಾತರಃ ಶುಭಾಃ ॥೧೫॥

ಈ ಕನ್ಯೆಯರನ್ನು ಪಡೆದ ಕಾಮರೂಪಿಣಿಯಾದ ಈ ಸುರಭಿಯು ಪುನಃ ದಿವ್ಯವಾದ ಮತ್ತು ಶುಭವಾದ ಗೋಮಾತೆಯರನ್ನು ಪ್ರಸವಿಸಿದಳು.

ಪುಣ್ಯಾಂ ಮಾಯಾಂ ಮಧುಶ್ಚ್ಯೋತಾಂ ಶಿವಾಂ ಶೀಘ್ರಾಂ ಸರಿದ್ವರಾಮ್ ।
ಹಿರಣ್ಯವರ್ಣಾಂ ಸುಭಗಾಂ ಗವ್ಯಾಂ ಪೃಶ್ನೀಂ ಕುಥಾವತೀಮ್ ॥೧೬॥

ಅಂಗಾವತೀಂ ಘೃತವತೀಂ ದಧಿಕ್ಷೀರಪಯೋವತೀಮ್ ।
ಅಮೋಘಾಂ ಸುರಸಾಂ ಸತ್ಯಾಂ ರೇವತೀಂ ಮಾರುತೀಂ ರಸಾಮ್ ॥

ಅಜಾಂ ಚ ಸಿಕತಾಂ ಚೈವ ಶುದ್ಧಧೂಮಾಮಧಾರಿಣೀಮ್ ।
ಜೀವಾಂ ಪ್ರಾಣವತೀಂ ಧನ್ಯಾಂ ಶುದ್ಧಾಂ ಧೇನುಂ ಧನಾವಹಾಮ್ ॥

ಇಂದ್ರಾಮೃದ್ಧಿಂ ಚ ಶಾಂತಿಂ ಚ ಶಾಂತಪಾಪಾಂ ಸರಿದ್ವರಾಮ್ ।
ಚತ್ವಾರಿಂಶತಮೇಕಾಂ ಚ ಧನ್ಯಾಸ್ತಾ ದಿವಿ ಪೂಜಿತಾಃ ॥೧೯॥

ಪುಣ್ಯಾ, ಮಾಯಾ, ಮಧುಶ್ಚ್ಯೋತಾ, ಶಿವಾ, ಶೀಘ್ರಾ, ಸರಿದ್ವರಾ, ಹಿರಣ್ಯವರ್ಣಾ, ಸುಭಗಾ, ಗವ್ಯಾ, ಪೃಶ್ನೀ, ಕುಥಾವತೀ, ಅಂಗಾವತೀ, ಘೃತವತೀ, ದಧಿಮತೀ, ಕ್ಷೀರವತೀ, ಪಯೋವತೀ, ಅಮೋಘಾ, ಸುರಸಾ, ಸತ್ಯಾ, ರೇವತೀ, ಮಾರುತೀ, ರಸಾ, ಅಜಾ, ಸಿಕತಾ, ಶುದ್ಧಧೂಮಾ, ಅಧಾರಿಣೀ, ಜೀವಾ, ಪ್ರಾಣವತೀ, ಧನ್ಯಾ, ಶುದ್ಧಾ, ಧೇನು, ಧನಾವಹಾ, ಇಂದ್ರಾ, ಋದ್ಧಿ ಶಾಂತಿ, ಶಾಂತಪಾಪಾ, ಸರಿದ್ವರಾ - ಈ ನಲವತ್ತೊಂದು ಕನ್ಯೆಯರು ಧನ್ಯರು ಮತ್ತು ದೇವಲೋಕದಲ್ಲಿ ಪೂಜಿತರಾದವರು.

ಭೂಯೋ ಜಜ್ಞೇ ಸುರಭ್ಯಾಶ್ಚ ಶ್ರೀಮಾಂಶ್ಚಂದ್ರಾಂಶುಸಪ್ರಭಃ ।
ವೃಷೋ ದಕ್ಷ ಇತಿ ಖ್ಯಾತಃ ಕಂಠೇ ಮಣಿತಳಪ್ರಭಃ ॥೨೦॥

ಪುನಃ ಸುರಭಿಯಲ್ಲಿ ಚಂದ್ರನಿಗೆ ಸಮಾನವಾದ ಕಾಂತಿಯುಳ್ಳ, ಕಾಂತಿಯುಕ್ತನಾದ ಶ್ರೇಷ್ಠನಾದ ದಕ್ಷನು ಕಂಠದಲ್ಲಿ ಮಣಿಯ ಪ್ರಭೆಯನ್ನು ಹೊಂದಿ ವೃಷಭನಾಗಿ ಜನಿಸಿದನು.

ಸ್ರಗ್ವೀ ಕಕುದ್ಮಾನ್ ದ್ಯುತಿಮಾನ್ ಮೃಣಾಲಸದೃಶಪ್ರಭಃ ।
ಸುರಭ್ಯನುಮತೇ ದತ್ತೋ ಧ್ವಜೋ ಮಾಹೇಶ್ವರಸ್ತು ಸಃ ॥೨೧॥

ಅವನು ಹೂಮಾಲೆಯನ್ನು ಹಾಕಿಕೊಂಡು ಎತ್ತರದ ಭುಜವನ್ನು ಹೊಂದಿ ಕಾಂತಿಯುಕ್ತನಾಗಿ ಬಿಸನಾಳಕ್ಕೆ ಸಮಾನವಾಗಿದ್ದನು. ಸುರಭಿಯ ಅಭಿಪ್ರಾಯದಂತೆ ಅವನನ್ನು ಮಹೇಶ್ವರನಿಗೆ ಧ್ವಜವಾಗಿ ಕೊಡಲ್ಪಟ್ಟಿತು.

ಸುರಭ್ಯಃ ಕಾಮರೂಪಿಣ್ಯೋ ಗಾವಃ ಪುಣ್ಯಾರ್ಥಮುತ್ತಮಾಃ ।
ಆದಿತ್ಯೇಭ್ಯೋ ವಸುಭ್ಯಶ್ಚ ವಿಶ್ವೇಭ್ಯಶ್ಚ ದದುರ್ವರಾನ್ ॥೨೨॥

ಕಾಮರೂಪಿಣಿಯರಾದ ಸುರಭಿ ಧೇನುಗಳು ಪುಣ್ಯದ ಸಲುವಾಗಿ ಎಲ್ಲಾ ವಸು-ರುದ್ರಾದಿತ್ಯರಿಗೆ ವರಗಳನ್ನು ಕೊಟ್ಟವು.

ಸುರಭಿಸ್ತು ತಪಸ್ತಪ್ತ್ವಾ ಸುಷುವೇ ಗಾಸ್ತತಃ ಪುನಃ ।
ಯಾ ದತ್ತಾ ಲೋಕಪಾಲಾನಾಮಿಂದ್ರಾದೀನಾಂ ಯುಧಿಷ್ಠಿರ ॥೨೩॥

ಎಲೈ ಯುಧಿಷ್ಠಿರನೇ, ಸುರಭಿಯು ತಪಸ್ಸನ್ನು ಮಾಡಿ ಪುನಃ ಗೋವುಗಳನ್ನು ಪಡೆದಳು. ಆ ಗೋವುಗಳು ಲೋಕಪಾಲಕರಾದ ಇಂದ್ರಾದಿಗಳಿಗೆ ಕೊಡಲ್ಪಟ್ಟವು.

ಸುಷ್ಟುತಾಂ ಕಪಿಲಾಂ ಚೈವ ರೋಹಿಣೀಂ ಚ ಯಶಸ್ವಿನೀಮ್ ।
ಸರ್ವಕಾಮದುಘಾಂ ಚೈವ ಮರುತಾಂ ಕಾಮರೂಪಿಣೀಮ್ ॥೨೪॥

ಗಾವ್ಯೋ ಮೃಷ್ಟದುಘಾ ಹ್ಯೇತಾಶ್ಚತಸ್ರೋಽಮೃತಸಂಸ್ಕೃತಾಃ ।
ಯಾಸಾಂ ಭೂತ್ವಾ ಪುರಾ ವತ್ಸಾಃ ಪಿಬಂತ್ಯಮೃತಮುತ್ತಮಮ್ ॥೨೫॥

ಸುಷ್ಟುತಾ, ಕಪಿಲಾ, ಕೀರ್ತಿವಂತಳಾದ ರೋಹಿಣಿ, ಕಾಮರೂಪವನ್ನು ಹೊಂದಿದ ಸರ್ವಕಾಮದುಘಾ - ಈ ನಾಲ್ಕು ಗೋವುಗಳನ್ನು ಪಡೆದಳು. ಈ ನಾಲ್ಕು ಗೋವುಗಳು ಶ್ರೇಷ್ಠವಾದ ವಸ್ತುಗಳನ್ನು ಕರೆಯುವವುಗಳಾಗಿ ಅಮೃತದಿಂದ ಸತ್ಕರಿಸಲ್ಪಟ್ಟವು. ದೇವತೆಗಳು ಅವುಗಳಿಗೆ ಮಕ್ಕಳಾಗಿ ಅವುಗಳ ಅಮೃತಪ್ರಾಯವಾದ ಶ್ರೇಷ್ಠವಾದ ಕ್ಷೀರವನ್ನು ಪಾನ ಮಾಡುತ್ತಾರೆ.

ಸುಷ್ಟುತಾಂ ದೇವರಾಜಾಯ ವಾಸವಾಯ ಮಹಾತ್ಮನೇ ।
ಕಪಿಲಾಂ ಧರ್ಮರಾಜಾಯ ವರುಣಾಯ ಚ ರೋಹಿಣೀಮ್ ॥೨೬॥

ಸರ್ವಕಾಮದುಘಾಂ ಧೇನುಂ ರಾಜ್ಞೇ ವೈಶ್ರವಣಾಯ ಚ ।
ಇತ್ಯೇತಾ ಲೋಕಮಹಿತಾ ವಿಶ್ರುತಾ ಸುರಭೇಃ ಪ್ರಜಾಃ ॥೨೭॥

ಸುಷ್ಟುತಾ ಎಂಬ ಗೋವನ್ನು ದೇವರಾಜನಾದ ಮತ್ತು ಮಹಾತ್ಮನಾದ ಇಂದ್ರನಿಗೂ, ಕಪಿಲಾ ಗೋವನ್ನು ಧರ್ಮರಾಜನಿಗೂ, ರೋಹಿಣಿ ಎಂಬ ಗೋವನ್ನು ವರುಣನಿಗೂ, ಸರ್ವಕಾಮದುಘಾ ಎಂಬ ಧೇನುವನ್ನು ಕುಬೇರನಿಗೂ ಕೊಟ್ಟರು. ಇವು ಲೋಕ ಪೂಜಿತವಾದ ಪ್ರಖ್ಯಾತವಾದ ಸುರಭಿಯ ಪ್ರಜೆಗಳು.

ಏತಾಸಾಂ ಪ್ರಜಯಾ ಪೂರ್ಣಾ ಪೃಥಿವೀ ಮುನಿಪುಂಗವ ।
ಗೋಭ್ಯಃ ಪ್ರಭವತೇ ಸರ್ವಂ ಯತ್ಕಿಂಚಿದಿಹ ಶೋಭನಮ್ ॥೨೮॥

ಎಲೈ ಮುನಿಪುಂಗವನೇ, ಇವುಗಳ ಸಂತತಿಯಿಂದ ಭೂಮಿಯು ಪೂರ್ಣವಾಗಿ ತುಂಬಿಹೋಗಿದೆ. ಈ ಲೋಕದಲ್ಲಿ ಯಾವ ಮಂಗಳಕಾರ್ಯವಾದರೂ ಅದು ಗೋವುಗಳಿಂದ ಪ್ರವರ್ತಿಸಲ್ಪಡುತ್ತದೆ.

ಸುರಭ್ಯಪತ್ಯಮಿತ್ಯೇತನ್ನಾಮತಸ್ತೇऽನುಪೂರ್ವಶಃ ।
ಕೀರ್ತಿತಂ ಬ್ರೂಹಿ ರಾಜೇಂದ್ರ ಕಿಂ ಭೂಯಃ ಕಥಯಾಮಿ ತೇ ॥೨೯॥

ಸುರಭಿಯ ಪುತ್ರ-ಪುತ್ರಿಯರ ನಾಮವನ್ನು ಕ್ರಮವಾಗಿ ನಿನಗೆ ಹೇಳಿದ್ದೇನೆ. ಎಲೈ ರಾಜೇಂದ್ರನೇ, ಇನ್ನೂ ಏನು ಹೇಳಲಿ ಎಂದು ನೀನು ಹೇಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಸುರಭಿಸಂತತಿವರ್ಣನಂ ನಾಮ
ತ್ರಯೋದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾಲ್ಕನೆಯ ಅಧ್ಯಾಯ

ಸುರಭಿಯ ಶರೀರದಲ್ಲಿ ಸರ್ವದೇವತೆಗಳ ಪ್ರವೇಶ.

ಯುಧಿಷ್ಠಿರಃ

ಸುರಭ್ಯಾಸ್ತು ತದಾ ದೇವ್ಯಾಃ ಕೀರ್ತಿರ್ಲಕ್ಷ್ಮೀಃ ಸರಸ್ವತೀ ।
ಮೇಧಾ ಚ ಪ್ರವರಾ ದೇವೀ ಯಾಶ್ಚತಸ್ರೋऽಭಿವಿಶ್ರುತಾಃ ॥೧॥

ಪೃಥಗ್ಭೋಭ್ಯಃ ಕಿಮೇತಾಃ ಸ್ಯುರುತಾಹೋ ಗೋಷು ಸಂಶ್ರಿತಾಃ ।
ದೇವಾಃ ಕೇ ವಾऽऽಶ್ರಿತಾ ಗೋಷು ತನ್ಮೇ ಬ್ರೂಹಿ ಪಿತಾಮಹ ॥೨॥

ಯುಧಿಷ್ಠಿರ– ಸುರಭಿಯಿಂದ ಹೊರಬಂದ ಕೀರ್ತಿ, ಲಕ್ಷ್ಮೀ, ಸರಸ್ವತೀ, ಮೇಧಾ ಎಂಬ ಪ್ರಖ್ಯಾತರಾದ ಈ ನಾಲ್ಕು ದೇವಿಯರು ಇವರು ಗೋವುಗಳಿಗಿಂತ ಭಿನ್ನರಾದವರೋ ಅಥವಾ ಗೋವುಗಳನ್ನು ಆಶ್ರಯಿಸಿಕೊಂಡಿರುವವರೋ? ಎಲೈ ಪಿತಾಮಹನೇ, ಗೋವುಗಳಲ್ಲಿ ಯಾವ ದೇವತೆಗಳು ಆಶ್ರಯಿಸಿಕೊಂಡಿರುವವರೆಂದು ನನಗೆ ಹೇಳು.

ಭೀಷ್ಮಃ

ಯಂ ದೇವಂ ಸಂಶ್ರಿತಾ ಗಾವಸ್ತಂ ದೇವಂ ದೇವಸಂಜ್ಞಿತಮ್ ।
ಯದ್ಯದ್ದೇವಾಶ್ರಿತಂ ದೈವಂ ತತ್ತದ್ದೈವಂ ದ್ವಿಜಾ ವಿದುಃ ॥೩॥

ಸರ್ವೇಷಾಮೇವ ದೇವಾನಾಂ ಪೂರ್ವಂ ಕಿಲ ಸಮುದ್ಭವೇ ।
ಅಮೃತಾರ್ಥೇ ಸುರಪತಿಃ ಸುರಭಿಂ ಸಮುಪಸ್ಥಿತಃ ॥೪॥

ಭೀಷ್ಮ– ಗೋವುಗಳು ಯಾವ ದೇವತೆಯನ್ನು ಆಶ್ರಯಿಸಿರುತ್ತಾರೋ ಅವನನ್ನು ಗೋವುಗಳು ಆಶ್ರಯಿಸಿದ ಕಾರಣದಿಂದ ದೇವ ಎಂದು ಹೇಳುತ್ತಾರೆ. ದೇವಾಶ್ರಿತವಾದುದು ಏನೇನಿದೆಯೋ ಅದನ್ನು ದೈವವೆಂದು ಬ್ರಾಹ್ಮಣರು ಹೇಳುತ್ತಾರೆ. ಹಿಂದೆ ಎಲ್ಲ ದೇವತೆಗಳ ಉತ್ಪತ್ತಿಯ ಕಾಲದಲ್ಲಿ ಸುರಪತಿಯಾದ ದೇವೇಂದ್ರನು ಅಮೃತದ ಸಲುವಾಗಿ ಸುರಭಿಯನ್ನು ಸಮೀಪಿಸಿದನು.

ಇಂದ್ರಃ

ಇಚ್ಛೇಯಮಮೃತಂ ದತ್ತಂ ತ್ವಯಾ ದೇವಿ ರಸಾಧಿಕಮ್ ।
ತತ್ತ್ವತ್ಪ್ರಸಾದಾಚ್ಛಿವಂ ಮಹ್ಯಮಮರತ್ವಂ ಭವೇದಿತಿ ॥೫॥

ಇಂದ್ರ– ಎಲೌ ದೇವಿಯೇ, ನಿನ್ನಿಂದ ನಾನು ಶ್ರೇಷ್ಠ ರಸಗಳನ್ನು ಹೊಂದಿರುವ ಅಮೃತವನ್ನು ಪಡೆಯಲು ಇಚ್ಛಿಸುತ್ತೇನೆ. ನಿನ್ನ ಅನುಗ್ರಹದಿಂದ ನನಗೆ ಮಂಗಳವು ಮತ್ತು ಅಮರತ್ವವು ಉಂಟಾದೀತು.

ಸುರಭಿಃ

ವತ್ಸೋ ಭೂತ್ವಾ ಸುರಪತೇ ಪಿಬಸ್ವ ಪ್ರಸ್ರವಂ ಮಮ ।
ತತೋऽऽಮರತ್ವಮಪಿ ತತ್ಸ್ವಾನಮೈಂದ್ರಮವಾಪ್ಸ್ಯಸಿ ॥೬॥

ನ ಚ ತೇ ವೃತ್ರಹನ್ ಯುದ್ಧೇ ವ್ಯಥಾऽರಿಭ್ಯೋ ಭವಿಷ್ಯತಿ ।
ಬಲಾರ್ಥಮಾತ್ಮನಃ ಶಕ್ರ ಪ್ರಸ್ರವಂ ಪಿಬ ಮೇ ವಿಭೋ ॥೭॥

ಸುರಭಿ– ಎಲೈ ಸುರಪತಿಯೇ, ನೀನು ವತ್ಸನಾಗಿ ನನ್ನ ಕ್ಷೀರವನ್ನು ಕುಡಿ. ಅನಂತರ ಅಮರತ್ವವನ್ನೂ, ಇಂದ್ರಪದವಿಯನ್ನೂ ಪಡೆಯುವಿ. ಎಲೈ ವೃತ್ರಹಂತಕನೇ, ನಿನಗೆ

ಯುದ್ಧದಲ್ಲಿ ಶತ್ರುಗಳಿಂದ ವ್ಯಥೆಯುಂಟಾಗುವುದಿಲ್ಲ. ಎಲೈ ಇಂದ್ರನೇ, ವಿಭುವೇ, ನೀನು ಬಲವನ್ನು ಸಂಪಾದಿಸಲು ನನ್ನ ಕ್ಷೀರವನ್ನು ಪಾನ ಮಾಡು.

ಭೀಷ್ಮಃ

ತತೋಽಧಯತ್ಸ್ತನಂ ತಸ್ಯಾಃ ಸುರಭ್ಯಾಃ ಸುರಸತ್ತಮಃ ।
ಅಮರತ್ವಂ ಸುರೂಪತ್ವಂ ಬಲಂ ಚ ಪದಮುತ್ತಮಮ್ ॥೮॥

ಪುರಂದರೋಽಮೃತಂ ಪೀತ್ವಾ ಪ್ರಹೃಷ್ಟಃ ಸಮುಪಸ್ಥಿತಃ ।
ಪುತ್ರೋಽಹಂ ತವ ಭದ್ರಂ ತೇ ಬ್ರೂಹಿ ಕಿಂ ಕರವಾಣಿ ತೇ ॥೯॥

ಭೀಷ್ಮ– ಅನಂತರ ಸುರಶ್ರೇಷ್ಠನಾದ ಇಂದ್ರನು ಸುರಭಿಯ ಸ್ತನದಿಂದ ಉಂಟಾದ ಸ್ತನ್ಯವನ್ನು ಪಾನ ಮಾಡಿ ಅಮರತ್ವವನ್ನೂ, ಒಳ್ಳೆಯ ರೂಪವನ್ನೂ, ಬಲವನ್ನೂ ಮತ್ತು ಇಂದ್ರಪದವಿಯನ್ನೂ ಹೊಂದಿದನು. ಪುರಂದರನು ಅಮೃತವನ್ನು ಪಾನ ಮಾಡಿ ಸಂತೋಷದಿಂದ ಕೂಡಿದವನಾಗಿ ಸುರಭಿಯನ್ನು ಕುರಿತು- 'ಎಲೌ ಮಂಗಳಸ್ವರೂಪಳೇ, ನಾನು ನಿನ್ನ ಪುತ್ರ. ನಿನಗೆ ಏನು ಮಾಡಲಿ ಎಂದು ಹೇಳು' ಎಂದು ಕೇಳಿದನು.

ಸುರಭಿಃ

ಕೃತಂ ಪುತ್ರ ತ್ವಯಾ ಸರ್ವಮುಪಯಾಹಿ ತ್ರಿವಿಷ್ಟಪಮ್ ।
ಪಾಲಯಸ್ವ ಸುರಾನ್ ಸರ್ವಾನ್ ಜಹಿ ಯೇ ಸುರಶತ್ರವಃ ॥೧೦॥

ಸುರಭಿ– ಪುತ್ರನೇ, ನೀನು ಎಲ್ಲವನ್ನೂ ಮಾಡಿದ್ದೀಯೆ. ಸ್ವರ್ಗಕ್ಕೆ ಹಿಂದಿರುಗು. ಎಲ್ಲ ದೇವತೆಗಳನ್ನು ಪಾಲಿಸು. ದೇವಶತ್ರುಗಳನ್ನು ಸೋಲಿಸುವವನಾಗು.

ನ ಚ ಗೋಬ್ರಾಹ್ಮಣೇಽವಜ್ಞಾ ಕಾರ್ಯಾ ತೇ ಶಾಂತಿಮಿಚ್ಛತಾ ।
ಗೋಬ್ರಾಹ್ಮಣಸ್ಯ ನಿಃಶ್ವಾಸಃ ಶೋಷಯೇದಪಿ ದೇವತಾಃ ॥೧೧॥

ಶಾಂತಿಯನ್ನು ಬಯಸುವ ನೀನು ಎಂದೂ ಗೋಬ್ರಾಹ್ಮಣರಿಗೆ ಅವಮಾನವನ್ನು ಮಾಡಬೇಡ. ಗೋಬ್ರಾಹ್ಮಣರ ನಿಟ್ಟುಸಿರು ದೇವತೆಗಳನ್ನೂ ಒಣಗಿಸುತ್ತದೆ.

ಗೋಬ್ರಾಹ್ಮಣಪ್ರಿಯೋ ನಿತ್ಯಂ ಸ್ವಸ್ತಿಶಬ್ದಮುದಾಹರನ್ ।
ಪೃಥಿವ್ಯಾಮಂತರಿಕ್ಷೇ ಚ ನಾಕಪೃಷ್ಠೇ ಚ ವಿಕ್ರಮೇತ್ ॥೧೨॥

ನಿತ್ಯವೂ ಗೋಬ್ರಾಹ್ಮಣರಿಗೆ ಪ್ರಿಯನಾಗಿ ಒಳ್ಳೆಯ ಮಾತುಗಳನ್ನು ಆಡುತ್ತಾ ಭೂಮಿಯಲ್ಲಿ, ಅಂತರಿಕ್ಷದಲ್ಲಿ ಮತ್ತು ಸ್ವರ್ಗದಲ್ಲಿ ಪರಾಕ್ರಮವನ್ನು ಮಾಡಬೇಕು.

ಯಚ್ಚ ತೇಽನ್ಯದ್ ಭವೇತ್ ಕೃತ್ಯಂ ತನ್ಮೇ ಬ್ರೂಯಾಃ ಸಮಾಸತಃ ।
ತತ್ತೇ ಸರ್ವಂ ಕರಿಷ್ಯಾಮಿ ಸತ್ಯೇನೈತದ್ ಬ್ರವೀಮಿ ತೇ ॥೧೩॥

ನಿನಗೆ ಆಗಬೇಕಾದ ಬೇರೆ ಏನಾದರೂ ಕಾರ್ಯವಿದ್ದರೆ ಅದನ್ನೂ ನನಗೆ ಸಂಕ್ಷೇಪವಾಗಿ ಹೇಳು. ಅವೆಲ್ಲವನ್ನೂ ನಾನು ಮಾಡುವೆನು. ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ಇಂದ್ರಃ

ಇಚ್ಛೇಯಂ ಗೋಷು ನಿಯತಂ ವಸ್ತುಂ ದೇವಿ ಬ್ರವೀಮಿ ತೇ ।
ಏಭಿಃ ಸುರಗಣೈಃ ಸಾರ್ಧಂ ಮಮಾನುಗ್ರಹಮಾಚರ ॥೧೪॥

ಇಂದ್ರ– ಎಲೌ ದೇವಿಯೇ, ನಾನು ಈ ದೇವತೆಗಳ ಸಮೂಹದ ಜೊತೆಯಲ್ಲಿ ಯಾವಾಗಲೂ ಗೋವುಗಳಲ್ಲಿ ವಾಸಿಸಬೇಕೆಂದು ನನ್ನ ಇಚ್ಛೆ ಎಂದು ನಿನಗೆ ಹೇಳುತ್ತಿದ್ದೇನೆ. ನನಗೆ ಅನುಗ್ರಹವನ್ನು ಮಾಡು.

ಸುರಭಿಃ

ಗವಾಂ ಶರೀರಂ ಪ್ರತ್ಯಕ್ಷಮೇತತ್ ಕೌಶಿಕ ಲಕ್ಷಯೇ ।
ಯೋ ಯತ್ರೋತ್ಸಹತೇ ವಸ್ತುಂ ಸ ತತ್ರ ವಸತಾಂ ಸುರಃ ॥೧೫॥

ಸರ್ವಂ ಪವಿತ್ರಂ ಪರಮಂ ಗವಾಂ ಗಾತ್ರಂ ಸುಪೂಜಿತಮ್ ।
ತಥಾ ಕುರುಷ್ವ ಭದ್ರಂ ತೇ ಯಯಾ ತ್ವಂ ಶಕ್ರ ಮನ್ಯಸೇ ॥೧೬॥

ಸುರಭಿ– ಎಲೈ ಇಂದ್ರನೇ, ಗೋವಿನ ಈ ಶರೀರವು ಪ್ರತ್ಯಕ್ಷವಾಗಿ ಕಂಡುಬರುತ್ತಿದೆ. ಯಾವ ದೇವತೆಗೆ ಎಲ್ಲಿ ವಾಸಮಾಡಲು ಇಷ್ಟವೋ ಅವನು ಅಲ್ಲಿ ಪ್ರವೇಶಿಸಿ ವಾಸಿಸಲಿ.

ಗೋವಿನ ಎಲ್ಲ ಶರೀರವೂ ಶ್ರೇಷ್ಠವಾದುದು, ಪವಿತ್ರವಾದುದು ಮತ್ತು ಅತ್ಯಂತ ಪೂಜಿತವಾದುದು. ಎಲೈ ಶಕ್ರನೇ, ನಿನಗೆ ಮಂಗಳವಾಗಲಿ. ನೀನು ಬಯಸಿದಂತೆ ಮಾಡು.

ಭೀಷ್ಮಃ

ತಸ್ಯಾಸ್ತದ್ವಚನಂ ಶ್ರುತ್ವಾ ಸುರಭ್ಯಾಃ ಸುರಸತ್ತಮಃ ।
ಸಹ ಸರ್ವೈಃ ಸುರಗಣೈರಭಜತ್ ಸೌರಭೀಂ ಪ್ರಜಾಮ್ ॥೧೭॥

ಭೀಷ್ಮ– ಸುರಶ್ರೇಷ್ಠನಾದ ಇಂದ್ರನು ಸುರಭಿಯ ಆ ಮಾತುಗಳನ್ನು ಕೇಳಿ ಎಲ್ಲ ಸುರಗಣಗಳ ಜೊತೆಯಲ್ಲಿ ಸುರಭಿಯ ಸಂತತಿಯನ್ನು ಪ್ರವೇಶಿಸಿದನು.

ಶೃಂಗೇ ವಕ್ತ್ರೇ ಚ ಜಿಹ್ವಾಯಾಂ ದೇವರಾಜಃ ಸಮಾವಿಶತ್ ।
ಸರ್ವಚ್ಛಿದ್ರೇಷು ಪವನಃ ಪಾದೇಷು ಮರುತಾಂ ಗಣಾಃ ॥೧೮॥

ಕೊಂಬುಗಳಲ್ಲಿ, ವದನದಲ್ಲಿ ಮತ್ತು ನಾಲಿಗೆಯಲ್ಲಿ ದೇವರಾಜನಾದ ಇಂದ್ರನು ಪ್ರವೇಶಿಸಿದನು. ಸರ್ವಚ್ಛಿದ್ರಗಳಲ್ಲಿ ವಾಯುವೂ, ಪಾದಗಳಲ್ಲಿ ಮರುದ್ಗಣಗಳೂ ಪ್ರವೇಶಿಸಿದವು.

ಕಕುದಂ ಸರ್ವಗೋ ರುದ್ರಃ ಕುಕ್ಷೌ ಚೈವ ಹುತಾಶನಃ ।
ಸರಸ್ವತೀಂ ಸ್ತನೇಷ್ವಗ್ರ್ಯಾ ಶ್ರೀಃ ಪುರೀಷೇ ಜಗತ್ಪ್ರಿಯಾ ॥೧೯॥

ಸರ್ವತ್ರ ವ್ಯಾಪ್ತನಾದ ರುದ್ರನು ಹಿಣಿಲನ್ನು ಪ್ರವೇಶಿಸಿದನು. ಅಗ್ನಿಯು ಕುಕ್ಷಿಯನ್ನೂ, ಶ್ರೇಷ್ಠಳಾದ ಸರಸ್ವತಿಯು ಸ್ತನಗಳನ್ನೂ, ಜಗತ್‌ಪ್ರಿಯಳಾದ ಲಕ್ಷ್ಮಿಯು ಗೋಮಯವನ್ನೂ ಪ್ರವೇಶಿಸಿದರು.

ಮೂತ್ರೇ ಕೀರ್ತಿಃ ಸುಮಹತೀ ಮೇಧಾ ಪಯಸಿ ಶಾಶ್ವತೀ ।
ವಕ್ತ್ರೇ ಸೋಮಶ್ಚ ವೈ ದೇವೋ ಹೃದಯೇ ಭಗವಾನ್ ಯಮಃ ॥೨೦॥

ಗೋಮೂತ್ರದಲ್ಲಿ ಬಹಳ ದೊಡ್ಡವಳಾದ ಕೀರ್ತಿಯೂ, ಶೀಲದಲ್ಲಿ ಶಾಶ್ವತಳಾದ ಮೇಧಾ ದೇವಿಯೂ, ಮುಖದಲ್ಲಿ ಚಂದ್ರನೂ, ಹೃದಯದಲ್ಲಿ ಪೂಜ್ಯನಾದ ಯಮನೂ ಪ್ರವೇಶಿಸಿದರು.

ಧರ್ಮಃ ಪುಚ್ಛೇ ಕ್ರಿಯಾ ಲೋಮ್ನಿ ಭಾಸ್ಕರಶ್ಚಕ್ಷುಷೀ ಶ್ರಿತಃ ।
ಸಿದ್ಧಾ ಸಂಧಿಷು ಸಿದ್ಧಿಶ್ಚ ತಪಸ್ತೇಜಶ್ಚ ಚೇಷ್ಟನೇ ॥೨೧॥

ಧರ್ಮ ಮತ್ತು ಕ್ರಿಯೆಗಳು ಪುಚ್ಛದಲ್ಲಿ ಮತ್ತು ಲೋಮಗಳಲ್ಲಿ ಪ್ರವೇಶಿಸಿದವು. ಸೂರ್ಯನು ಚಕ್ಷುಸ್ಸುಗಳಲ್ಲಿ ಪ್ರವೇಶಿಸಿದನು. ಸಿದ್ಧರು ಮತ್ತು ಸಿದ್ಧಿಗಳು ಸಂಧಿಗಳಲ್ಲಿ ಪ್ರವೇಶಿಸಿದರು. ಜಪ ಮತ್ತು ತೇಜಸ್ಸುಗಳು ಕ್ರಿಯೆಗಳಲ್ಲಿ ಪ್ರವೇಶಿಸಿದವು.

ಏವಂ ಸರ್ವೇ ಸುರಗಣಾ ನಿಯತಾ ಗಾತ್ರವರ್ತ್ಮಸು ।
ಮಹತೀ ದೇವತಾ ಗಾವೋ ಬ್ರಾಹ್ಮಣೈಃ ಪರಿಸಂಸ್ಕೃತಾಃ ॥೨೨॥

ಹೀಗೆ ಎಲ್ಲ ದೇವತಾಗಣಗಳು ಗೋವಿನ ಶರೀರ ಮಾರ್ಗಗಳಲ್ಲಿ ನಿಯತವಾಗಿವೆ. ಆದ್ದರಿಂದ ದೊಡ್ಡ ದೇವತೆಯಾದ ಗೋವು ಬ್ರಾಹ್ಮಣರಿಂದ ಪೂಜಿಸಲ್ಪಡುತ್ತದೆ.

ಗಾಮಾಶ್ರಯಂತಿ ಸಹಿತಾ ದೇವಾ ಹಿ ಪ್ರಭವಿಷ್ಣವಃ ।
ಕಿಮನ್ಯತ್ ಸರ್ವಕಾಮೇನ ನ ವಿದಧ್ಯಾದ್ ಭಗವಾನ್ ಪ್ರಿಯಮ್ ॥

ಅಭಿವೃದ್ಧಿಯನ್ನು ಅಪೇಕ್ಷಿಸುವ ದೇವತೆಗಳು ಒಟ್ಟಾಗಿ ಗೋವನ್ನು ಆಶ್ರಯಿಸಿರುತ್ತಾರೆ. ಇವುಗಳಿಗೆ ಭಗವಂತನು ಸರ್ವರೀತಿಯಿಂದ ಯಾವ ಪ್ರಿಯವನ್ನು ಮಾಡಬೇಕು?

ಭಾವತಃ ಪರಯಾ ಭಕ್ಯಾ ಪೂಜಯಸ್ವ ನರೇಶ್ವರ ।
ಗಾವಸ್ತು ಪರಮಂ ಲೋಕೇ ಪವಿತ್ರಂ ಪಾವನಂ ಹವಿಃ ॥೨೪॥

ಎಲೈ ನರೇಶ್ವರನೇ, ಒಳ್ಳೆಯ ಭಾವದಿಂದ ಮತ್ತು ಭಕ್ತಿಯಿಂದ ಗೋವುಗಳನ್ನು ಪೂಜಿಸು. ಗೋವುಗಳೇ ಶ್ರೇಷ್ಠವಾದ ಲೋಕಗಳಿಗೂ, ಪವಿತ್ರವಾದ ಹವಿಸ್ಸಿಗೂ ಕಾರಣವಾದವುಗಳು.

ನಿಪಾತ್ಯ ಭರ್ಜಿತಂ ಸ್ವರ್ಗಾದ್ ಭಾರ್ಗವಃ ಫೇನಪಃ ಕಿಲ ।
ಸ್ವರ್ಗೋಃ ಪ್ರಾಣಾನ್ ಪುನರ್ಲಬ್ಧ್ವಾ ಪ್ರೀತೋ ಗೋಲೋಕಮಾಶ್ರಿತಃ ॥

ಫೇನವನ್ನು ಪಾನ ಮಾಡುವ ಭಾರ್ಗವನು ಸ್ವರ್ಗಲೋಕದಿಂದ ಭೂಮಿಗೆ ಬಿದ್ದು ತಾನು ಪಾಲಿಸಿದ ಗೋವಿನಿಂದಲೇ ತಿವಿತ ಮತ್ತು ತುಳಿತಗಳಿಂದ ಘಾಸಿಗೆ ಒಳಗಾಗಿ,

ಸ್ವರ್ಗದಿಂದ ಬಂದ ಗೋವುಗಳಿಂದ ಪುನಃ ಪ್ರಾಣಗಳನ್ನು ಪಡೆದು ಸಂತೋಷದಿಂದ ಗೋಲೋಕಕ್ಕೆ ಹೋದನು (ಲಕ್ಷಾಲಂಕಾರ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ದೇವಾನಾಂ ಸುರಭಿಶರೀರಪ್ರವೇಶೋ ನಾಮ ಚತುರ್ದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೈದನೆಯ ಅಧ್ಯಾಯ

ಫೇನಪೋಪಾಖ್ಯಾನ ಆರಂಭ.

ಯುಧಿಷ್ಠಿರಃ

ಕಃ ಫೇನಪೇತಿ ನಾಮಾಸೌ ಕಥಂ ವಾ ಭಕ್ಷಿತಃ ಪುರಾ ।
ಮೃತ ಉಜ್ಜೀವಿತಃ ಕಸ್ಮಾತ್ ಕಥಂ ಗೋಲೋಕಮಾಶ್ರಿತಃ ॥೧॥

ಯುಧಿಷ್ಠಿರ– ಫೇನಪನೆಂಬುವನು ಯಾರು? ಅವನು ಹಿಂದೆ ಹೇಗೆ ಗೋವುಗಳಿಂದ ಘಾಸಿಗೊಳಿಸಲ್ಪಟ್ಟನು? ಮೃತನಾದ ಅವನು ಹೇಗೆ ಪುನಃ ಪ್ರಾಣಗಳನ್ನು ಪಡೆದನು? ಮತ್ತು ಗೋಲೋಕಕ್ಕೆ ಹೇಗೆ ಹೋದನು?

ವಿರುದ್ಧೇ ಮಾನುಷೇ ಲೋಕೇ ತಥಾ ಸಮಯವರ್ತ್ಮಸು ।
ಋತೇ ದೈವಂ ಹಿ ದುಷ್ಪ್ರಾಪಂ ಮಾನುಷೇಷು ವಿಶೇಷತಃ ।
ಸಂಶಯೋ ಮೇ ಮಹಾನತ್ರ ತನ್ಮೇ ವ್ಯಾಖ್ಯಾತುಮರ್ಹಸಿ ॥೨॥

ದೇವತೆಗಳನ್ನು ಬಿಟ್ಟು ದೇವತಾ ಸ್ವಭಾವಕ್ಕೆ ವಿರುದ್ಧವಾದ ಮನುಷ್ಯಲೋಕದಲ್ಲಿ ಬೇರೆ ಬೇರೆ ಮಾರ್ಗಗಳಲ್ಲಿ ಸಂಚರಿಸುವವರಿಗೆ ಗೋಲೋಕವನ್ನು ಹೊಂದುವುದು ಅಶಕ್ಯವಾದುದು. ನನಗೆ ಈ ವಿಷಯದಲ್ಲಿ ಸಂಶಯವಿದೆ. ಅದನ್ನು ಪರಿಹರಿಸಬೇಕು.

ಭೀಷ್ಮಃ

ಶ್ರೂಯತೇ ಭಾರ್ಗವೇ ವಂಶೇ ಸುಮಿತ್ರೋ ನಾಮ ಭಾರತ ।
ವೇದಾಧ್ಯಯನಸಂಪನ್ನೋ ವಿಪುಲೇ ತಪಸಿ ಸ್ಥಿತಃ ॥೩॥

ವಾನಪ್ರಸ್ಥಾಶ್ರಮೇ ಯುಕ್ತಃ ಸ್ವಕರ್ಮನಿರತಃ ಸದಾ ।
ವಿನಯಾಚಾರತತ್ತ್ವಜ್ಞಃ ಸರ್ವಧರ್ಮಾರ್ಥಕೋವಿದಃ ॥೪॥

ಯತ್ತಸ್ತ್ರಿಷವಣಸ್ನಾಯೀ ಸಂಧ್ಯೋಪಾಸನತತ್ಪರಃ ।
ಅಗ್ನಿಹೋತ್ರರತಃ ಕ್ಷಾಂತೋ ಜಪನ್ ಜುಹ್ವಚ್ಚ ನಿತ್ಯದಾ ॥೫॥

ಪಿತೄನ್ ದೇವಾಂಶ್ಚ ನಿಯತಮತಿಥೀಂಶ್ಚೈವ ಪೂಜಯನ್ ।
ಪ್ರಾಣಸಂಧಾರಣಾರ್ಥಂ ಚ ಯತ್ಕಿಂಚಿದುಪಹಾರಯನ್ ॥೬॥

ಭೀಷ್ಮ– ಎಲೈ ಭಾರತನೇ, ಭಾರ್ಗವವಂಶದಲ್ಲಿ ಸುಮಿತ್ರನೆಂಬ ಋಷಿ ಇದ್ದನು. ಅವನು ವೇದಾಧ್ಯಯನ ಸಂಪನ್ನನಾಗಿ ದೊಡ್ಡ ತಪಸ್ಸಿನಲ್ಲಿ ನಿರತನಾಗಿದ್ದನು. ವಾನಪ್ರಸ್ಥಾಶ್ರಮವನ್ನು ಸಂಪಾದನೆ ಮಾಡಿ ಯಾವಾಗಲೂ ತನ್ನ ಕರ್ಮದಲ್ಲಿ ನಿರತನಾಗಿದ್ದನು. ವಿನಯಾಚಾರಗಳ ತತ್ತ್ವವನ್ನು ತಿಳಿದವನೂ, ಸರ್ವಧರ್ಮಾರ್ಥ ಕೋವಿದನೂ ಆಗಿದ್ದನು. ಮೂರುಕಾಲದಲ್ಲಿ ಸ್ನಾನವನ್ನು ಮಾಡಿ ಸಂಧ್ಯೋಪಾಸನೆಯನ್ನು ಮಾಡುವುದರಲ್ಲಿ ತತ್ಪರನಾಗಿದ್ದನು. ಅಗ್ನಿಹೋತ್ರ ದೀಕ್ಷೆಯನ್ನು ಹೊಂದಿ ಕ್ಷಮಾಗುಣ ಯುಕ್ತನಾಗಿ ಯಾವಾಗಲೂ ಜಪಹೋಮಗಳನ್ನು ಮಾಡುತ್ತಿದ್ದನು. ಪಿತೃಗಳನ್ನೂ, ದೇವತೆಗಳನ್ನೂ ಮತ್ತು ಅತಿಥಿಗಳನ್ನೂ ನಿಯತವಾಗಿ ಪೂಜಿಸುತ್ತಿದ್ದನು. ಪ್ರಾಣಗಳನ್ನು ಉಳಿಸಿಕೊಳ್ಳುವ ಸಲುವಾಗಿ ಏನಾದರೂ ಅಲ್ಪಾಹಾರವನ್ನು ಸೇವಿಸುತ್ತಿದ್ದನು.

ಗಿರಿಸ್ತ್ರಿಖರೋ ನಾಮ ಯತಃ ಪ್ರಭವತೇ ನದೀ ।
ಕುಲಹೇತಿ ಪುರಾಣೇಷು ವಿಶ್ರುತಾ ರುದ್ರನಿರ್ಮಿತಾ ॥೭॥

ತಸ್ಯಾಸ್ತೀರೇ ಸಮೇ ದೇಶೇ ಪುಷ್ಪಮಾಲಾಸಮಾಕುಲೇ ।
ವನ್ಯೌಷಧಿದ್ರುಮೋಪೇತೇ ನಾನಾಪಕ್ಷಿಮೃಗಾಯುತೇ ॥೮॥

ವ್ಯಪೇತದಂಶಮಶಕೇ ಧ್ವಾಂಕ್ಷಗೃಧ್ರೈರಸೇವಿತೇ ।
ಕೃಷ್ಣದರ್ಭತೃಣಪ್ರಾಯೇ ಸುರಮ್ಯೇ ಜ್ಯೋತಿರಶ್ಮಿನಿ ॥೯॥

ಸರ್ವೋನ್ನತೈಃ ಸಮೈಃ ಶ್ಯಾಮೈರ್ಯಾಜ್ಞೀಯೈಸ್ತರುಭಿರ್ವೃತೇ ।
ತತ್ರಾಶ್ರಮಪದಂ ಪುಣ್ಯಂ ಭೃಗೂಣಾಮಭವತ್ ಪುರಾ ॥೧೦॥

ಕಪ್ಪಾದ ದರ್ಭೆಹುಲ್ಲುಗಳು ಹೆಚ್ಚಾಗಿ ಬೆಳೆದಿರುವ ಅತ್ಯಂತ ಮನೋಹರವಾದ, ಪ್ರಕಾಶಮಾನವಾದ, ಎತ್ತರವಾದ, ಯಾಜ್ಞೀಯ ವೃಕ್ಷಗಳಿಂದ ಕೂಡಿದ ಸಮತಟ್ಟಾದ ಸೊಳ್ಳೆ-ನೊಣ ಮುಂತಾದವುಗಳಿಲ್ಲದ ಹದ್ದು ಕಾಗೆಗಳಿಂದ ಸೇವಿಸಲ್ಪಡದ ದೇಶದಲ್ಲಿ ಹಿಂದೆ ಭೃಗುಗಳ ಪವಿತ್ರವಾದ ಆಶ್ರಮವು ಇದ್ದಿತು.

ಉವಾಸ ತತ್ರ ನಿಯತಃ ಸುಮಿತ್ರೋ ನಾಮ ಭಾರ್ಗವಃ ।
ಯಥೋದ್ದಿಷ್ಟೇನ ಪೂರ್ವೇಷಾಂ ಭೃಗೂಣಾಂ ಸಾಧುವರ್ತ್ಮನಾಮ್ ॥

ಅಲ್ಲಿ ನಿಯಮಸಂಪನ್ನನಾದ ಸುಮಿತ್ರನೆಂಬ ಭಾರ್ಗವನು ಪೂರ್ವಜರಾದ ಭೃಗುಗಳು ಉಪದೇಶಿಸಿದ ಸನ್ಮಾರ್ಗದಲ್ಲಿ ನಡೆಯುತ್ತಾ ವಾಸಿಸುತ್ತಿದ್ದನು.

ತಸ್ಮಾ ಆಂಗಿರಸಃ ಕಶ್ಚಿದ್ ದದೌ ಗಾಂ ಶಕ್ವರೀಂ ಶುಭಾಮ್ ।
ವರ್ಷಾಸು ಪಶ್ಚಿಮೇ ಮಾಸಿ ಪೌರ್ಣಮಾಸ್ಯಾಂ ಶುಚಿವ್ರತಃ ॥೧೨॥

ಅವನಿಗೆ ಆಂಗಿರಸ ಗೋತ್ರದ ಒಬ್ಬ ಬ್ರಾಹ್ಮಣನು ವರ್ಷಾಕಾಲದ ಎರಡನೆಯ ಮಾಸದ ಪೌರ್ಣಮೆಯಂದು (ಭಾದ್ರಪದ ಪೌರ್ಣಮಾಸ್ಯ) ಶುಚಿವ್ರತನಾಗಿ ಶುಭವಾದ ಒಂದು ಗೋವನ್ನು ದಾನ ಮಾಡಿದನು.

ಸ ತಾಂ ಲಬ್ಧ್ವಾ ಧರ್ಮಶೀಲಶ್ಚಿಂತಯಾಮಾಸ ತತ್ಪರಃ ।
ಸುಮಿತ್ರಃ ಪರಯಾ ಭಕ್ತ್ಯಾ ಜನನೀಮಿವ ಮಾತರಮ್ ॥೧೩॥

ಧರ್ಮಶೀಲನಾದ ಸುಮಿತ್ರನು ಅದನ್ನು ಪಡೆದು ಶ್ರೇಷ್ಠವಾದ ಭಕ್ತಿಯಿಂದ ಜನ್ಮಕೊಟ್ಟ ತಾಯಿಯಂತೆ ಅದರಲ್ಲಿ ಆಸಕ್ತನಾಗಿ ಅದನ್ನೇ ಚಿಂತಿಸಿದನು.

ತೇನ ಸಂಧುಕ್ಷ್ಯಮಾಣಾ ಸಾ ರೋಹಿಣೀ ಕಾಮಚಾರಿಣೀ ।
ವಿವೃದ್ಧಿಮಗಮಚ್ಛ್ರೇಷ್ಠಾ ಪ್ರಾಣತಶ್ಚ ಸುದರ್ಶನಾ ॥೧೪॥

ಅವನಿಂದ ಪೋಷಿಸಲ್ಪಟ್ಟ, ಮನಸ್ಸಿಗೆ ಬಂದ ಕಡೆ ತಿರುಗುವ, ಆ ಧೇನುವು ಬಹಳ ಬೇಗ ಬೆಳೆದು ಒಳ್ಳೆಯ ಮನೋಹರವಾದ ರೂಪವನ್ನು ಹೊಂದಿತು.

ಸಿರಾವಿಮುಕ್ತಪಾರ್ಶ್ವಾಂತಾ ವಿಪುಲಾಂ ಕಾಂತಿಮುದ್ವಹತ್ ।
ಶ್ಯಾಮಪಾರ್ಶ್ವಾಂತಪೃಷ್ಠಾಂತಾ ಸುರಭಿರ್ಮಧುಪಿಂಗಲಾ ॥೧೫॥

ಪಾರ್ಶ್ವಗಳಿಂದ ನರನಾಳಗಳು ಅಡಗಿ ವಿಪುಲವಾದ ಕಾಂತಿಯನ್ನು ಹೊಂದಿ ಶ್ಯಾಮವರ್ಣದ ಪಾರ್ಶ್ವಗಳನ್ನೂ, ತುಂಬಿದ ಪೃಷ್ಠಗಳನ್ನೂ ಹೊಂದಿ ಮಧುಪಿಂಗಲ ವರ್ಣವನ್ನೂ, ಸುಗಂಧವನ್ನೂ ಹೊಂದಿದ್ದಿತು.

ಬೃಹತೀ ಸೂಕ್ಷ್ಮರೋಮಾಂತಾ ರೂಪೋದಗ್ರಾ ತನುತ್ವಚಾ ।
ಕೃಷ್ಣಪುಚ್ಛಾ ಶ್ವೇತವಕ್ತ್ರಾ ಸಮವೃತ್ತಪಯೋಧರಾ ॥೧೬॥

ಪೃಷ್ಠೋನ್ನತಾ ಪೂರ್ವನತಾ ಶಂಕುಕರ್ಣೀ ಸುಲೋಚನಾ ।
ದೀರ್ಘಜಿಹ್ವಾ ಹ್ರಸ್ವಶೃಂಗೀ ಸಂಪೂರ್ಣದಶನಾಂತರಾ ॥೧೭॥

ಮಾಂಸಾಧಿಕಗಲಾಂತಾ ಸಾ ಪ್ರಸನ್ನಾ ಶುಭದರ್ಶನಾ ।
ನಿತ್ಯಂ ಶಮಯುತಾ ಸ್ನಿಗ್ಧಾ ಸಂಪೂರ್ಣೋದಾತ್ತನಿಸ್ವನಾ ॥೧೮॥

ಪ್ರಾಜಾಪತ್ಯೈ ರ್ಗವಾಂ ನಿತ್ಯಂ ಪ್ರಶಸ್ತೈರ್ಲಕ್ಷಣೈರ್ಯುತಾ ।
ಯೌವನಸ್ಥೇವ ವನಿತಾ ಶುಶುಭೇ ರೂಪಶೋಭಯಾ ॥೧೯॥

ದೊಡ್ಡ ಶರೀರ, ಸಣ್ಣ ರೋಮಗಳು, ಶ್ರೇಷ್ಠವಾದ ರೂಪ, ಮೃದುವಾದ ಚರ್ಮ, ಕಪ್ಪು ಬಣ್ಣದ ಬಾಲ, ಬಿಳಿಯ ಮುಖ, ಸಮಾನವಾಗಿ ದುಂಡಾದ ಮೊಲೆಗಳು, ಎತ್ತರವಾದ ಪೃಷ್ಠಭಾಗ, ತಗ್ಗಾದ ಮುಂಭಾಗ, ತ್ರಿಕೋಣಾಕಾರವಾದ ಕಿವಿಗಳು, ಒಳ್ಳೆಯ ಕಣ್ಣುಗಳು, ದೀರ್ಘವಾದ ನಾಲಿಗೆ, ಹ್ರಸ್ವವಾದ ಕೊಂಬುಗಳು, ಬಾಯಲ್ಲಿ ಸಂಪೂರ್ಣವಾಗಿ ತುಂಬಿದ ದಂತಗಳು, ಮಾಂಸಾಧಿಕವಾದ ಗಂಗೆದೊಗಲು ಇವುಗಳಿಂದ ಕೂಡಿ ನೋಡುವುದಕ್ಕೆ ಮಂಗಳವಾದ ಆ ಧೇನುವು ಯಾವಾಗಲೂ ಪ್ರಸನ್ನವಾಗಿ ಶಾಂತಿಯಿಂದಲೂ, ಸ್ನೇಹದಿಂದಲೂ ಕೂಡಿ ಪೂರ್ಣವಾದ ಉದಾತ್ತವಾದ ಧ್ವನಿಯಿಂದ ಕೂಡಿದ್ದಿತು. ಪ್ರಾಜಾಪತ್ಯಗೋವಿನ ಎಲ್ಲ ಶುಭಲಕ್ಷಣಗಳನ್ನೂ ಹೊಂದಿದ್ದಿತು. ಯೌವನದಲ್ಲಿರುವ ವನಿತೆಯಂತೆ ತನ್ನ ರೂಪದ ಕಾಂತಿಯಿಂದ ಶೋಭಿಸುತ್ತಿದ್ದಿತು.

ವೃಷೇಣೋಪಗತಾ ಸಾ ತು ಕಲ್ಯಾ ಮಧುರದರ್ಶನಾ ।
ಮಿಥುನಂ ಜನಯಾಮಾಸ ತುಲ್ಯರೂಪಮಿವಾತ್ಮನಃ ॥೨೦॥

ಮಧುರದರ್ಶನವನ್ನು ಹೊಂದಿದ್ದ, ಪ್ರಶಸ್ತವಾದ ಆ ಗೋವು ಒಂದು ವೃಷಭದ ಸಂಸರ್ಗವನ್ನು ಮಾಡಿ ತನಗೆ ಸದೃಶವಾದ ರೂಪವನ್ನು ಹೊಂದಿದ್ದ ಎರಡು ಕರುಗಳನ್ನು ಸಂಪಾದಿಸಿತು.

ಸಂವರ್ಧಯಾಮಾಸ ಸ ತಾಂ ಸವತ್ಸಾಂ ಭಾರ್ಗವೋ ಋಷಿಃ ।
ತಯೋಃ ಪ್ರಜಾಧಿಸಂಸರ್ಗಾತ್ ಸಹಸ್ರಂ ಚ ಗವಾಮಭೂತ್ ॥೨೧॥

ಭಾರ್ಗವ ಋಷಿಯು ವತ್ಸಗಳಿಂದ ಸಹಿತವಾದ ಆ ಧೇನುವನ್ನು ಪೋಷಿಸಿದನು. ಹೀಗೆ ಅವುಗಳ ಸಂತತಿಯು ಬೆಳೆದು ಸಹಸ್ರ ಗೋವುಗಳಾದವು.

ಗವಾಂ ಜಾತಿಸಹಸ್ರಾಣಿ ಸಂಭೂತಾನಿ ಪರಸ್ಪರಮ್ ।
ಋಷಭಾಣಾಂ ಚ ರಾಜೇಂದ್ರ ನೈವಾಂತಃ ಪ್ರತಿದೃಶ್ಯತೇ ॥೨೨॥

ಎಲೈ ರಾಜೇಂದ್ರನೇ, ಆ ಗೋವುಗಳ ಮತ್ತು ವೃಷಭಗಳ ಪರಸ್ಪರ ಸಮಾಗಮದಿಂದ ಸಹಸ್ರಾರು ಜಾತಿಯ ಗೋವುಗಳು ಜನಿಸಿದವು. ಅವುಗಳಿಗೆ ಅಂತವೇ ಕಾಣುತ್ತಿರಲಿಲ್ಲ.

ತೈರಾಶ್ರಮಪದಂ ರಮ್ಯಮರಣ್ಯಂ ಚೈವ ಸರ್ವಶಃ ।
ಸಮಾಕುಲಂ ಸಮಭವನ್ಮೇಘೈರಿವ ನಭಃಸ್ಥಲಮ್ ॥೨೩॥

ಕಾನಿಚಿತ್ ಪದ್ಮವರ್ಣಾನಿ ಕಿಂಶುಕಾಭಾನಿ ಕಾನಿಚಿತ್ ।
ರುಗ್ಮವರ್ಣಾನಿ ಚಾನ್ಯಾನಿ ಚಂದ್ರಾಂಶುಸದೃಶಾನಿ ಚ ॥೨೪॥

ತಥಾ ರಾಜತವರ್ಣಾನಿ ಕಾನಿಚಿಲ್ಲೋಹಿತಾನಿ ವೈ ।
ನೀಲಲೋಹಿತತಾಮ್ರಾಣಿ ಕೃಷ್ಣಾನಿ ಕಪಿಲಾನಿ ಚ ।
ನಾನಾರಾಗವಿಚಿತ್ರಾಣಿ ಯೂಥಾನಿ ಬಹುಲಾನಿ ಚ ॥೨೫॥

ಮೇಘಗಳಿಂದ ನಭಸ್ಥಳವು ನಿಬಿಡವಾದಂತೆ ಆ ಗೋವುಗಳಿಂದ ಆ ಸುಂದರವಾದ ಅರಣ್ಯ ಮತ್ತು ಆಶ್ರಮಸ್ಥಾನವು ತುಂಬಿಹೋಯಿತು. ಕೆಲವು ಗೋವುಗಳು ಪದ್ಮ ವರ್ಣದವುಗಳು, ಕೆಲವು ಮುತ್ತುಗದ ಹೂವಿನ ಬಣ್ಣವನ್ನು ಹೊಂದಿದವು, ಕೆಲವು ಚಿನ್ನದ ಬಣ್ಣವನ್ನೂ, ಕೆಲವು ಚಂದ್ರಕಿರಣಗಳಿಗೆ ಸಮಾನವಾದ ಬಣ್ಣವನ್ನೂ, ಇನ್ನು ಕೆಲವು ಬೆಳ್ಳಿಯ ಬಣ್ಣವನ್ನೂ, ಇನ್ನು ಕೆಲವು ಕೆಂಪುಬಣ್ಣವನ್ನೂ, ಇನ್ನು ಕೆಲವು ನೀಲ, ಲೋಹಿತ, ತಾಮ್ರ, ಕೃಷ್ಣ, ಕಪಿಲ ಬಣ್ಣಗಳನ್ನೂ ಹೊಂದಿ ಅನೇಕ ಬಣ್ಣಗಳಿಂದ ವಿಚಿತ್ರವಾಗಿ ಕಾಣುತ್ತಿದ್ದ ಅನೇಕ ಗೋವಿನ ಗುಂಪುಗಳು ಅಲ್ಲಲ್ಲಿ ಕಂಡುಬಂದವು.

ನ ಚ ಕ್ಷೀರಂ ಘೃತಂ ಸ್ನೇಹಾದ್ ವತ್ಸಾನಾಮುಪಜೀವತಿ ।
ಭಾರ್ಗವಃ ಕೇವಲಂ ಚಾಸೀದ್ ಗವಾಂ ಪ್ರಾಣಯನೇ ರತಃ ॥೨೬॥

ಭಾರ್ಗವನು ಕರುಗಳ ಮೇಲಿನ ಪ್ರೀತಿಯಿಂದ ಗೋವುಗಳ ಕ್ಷೀರವನ್ನಾಗಲೀ ಅಥವಾ ಘೃತವನ್ನಾಗಲೀ ಸೇವಿಸುತ್ತಿರಲಿಲ್ಲ. ಗೋವುಗಳನ್ನು ಅಲ್ಲಿಂದಿಲ್ಲಿಗೆ ಕರೆದುಕೊಂಡು ಹೋಗುವುದರಲ್ಲಿಮಾತ್ರ ನಿರತನಾಗಿದ್ದನು.

ತಥಾ ಶುಶ್ರೂಷತಸ್ತಸ್ಯ ಗವಾಂ ಹಿತಮವೇಕ್ಷತಃ ।
ವ್ಯತೀಯಾತ್ ಸುಮಹಾನ್ ಕಾಲೋ ವತ್ಸೋಚ್ಛಿಷ್ಟೇನ ವರ್ತತಃ ॥೨೭॥

ಹಾಗೆಯೇ ಗೋವುಗಳ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕರುಗಳ ಬಾಯಿಂದ ಬಂದ ಹಾಲಿನ ನೊರೆಯನ್ನು ಮಾತ್ರ ಆಹಾರವಾಗಿ ಸೇವಿಸುತ್ತಿದ್ದ ಗೋವುಗಳ ಸೇವೆಯನ್ನು ಮಾಡುತ್ತಿದ್ದ ಅವನಿಗೆ ಬಹಳ ಕಾಲವು ಕಳೆದು ಹೋಯಿತು.

ಕ್ಷುತ್ಪಿಪಾಸಾಪರಿಶ್ರಾಂತಃ ಸತತಂ ಪ್ರಸ್ರವಂ ಗವಾಮ್ ।
ವತ್ಸೈರುಚ್ಛಿಷ್ಟಮುದಿತಂ ಬಹುಕ್ಷೀರತಯಾ ಬಹು ॥೨೮॥

ಪೀತವಾಂಸ್ತೇನ ನಾಮಾಸ್ಯ ಫೇನಪೇತ್ಯಭಿವಿಶ್ರುತಮ್ ।
ಭಾರ್ಗವಸ್ಯಾಭಿನಿಷ್ಪನ್ನಮೇವಂ ನಾಮ ಯುಧಿಷ್ಠಿರ ॥೨೯॥

ಹಸಿವು ಮತ್ತು ಬಾಯಾರಿಕೆಗಳಿಂದ ಬಳಲಿದ ಅವನು ಗೋವುಗಳಿಗೆ ಬಹಳ ಕ್ಷೀರವಿದ್ದುದರಿಂದ ಕರುಗಳ ಬಾಯಿಂದ ಬಂದ ಬಹುಕ್ಷೀರ ನೊರೆಯನ್ನು ಪಾನ ಮಾಡುತ್ತಿದ್ದನು. ಅದರಿಂದ ಅವನಿಗೆ ಫೇನಪ (ನೊರೆಯನ್ನು ಕುಡಿಯುವವನು) ಎಂಬ ಹೆಸರು ಪ್ರಖ್ಯಾತವಾಯಿತು. ಎಲೈ ಯುಧಿಷ್ಠಿರನೇ, ಭಾರ್ಗವ ಮುನಿಗೆ ಫೇನಪ ಎಂಬ ನಾಮವು ಈ ರೀತಿಯಾಗಿ ಬಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಭಾರ್ಗವಸ್ಯ ಫೇನಪನಾಮಲಾಭಪ್ರಕಾರಕಥನಂ
ನಾಮ ಪಂಚಾದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಧುರದರ್ಶನವನ್ನು ಹೊಂದಿದ್ದ, ಪ್ರಶಸ್ತವಾದ ಆ ಗೋವು ಒಂದು ವೃಷಭದ ಸಂಸರ್ಗವನ್ನು ಮಾಡಿ ತನಗೆ ಸದೃಶವಾದ ರೂಪವನ್ನು ಹೊಂದಿದ್ದ ಎರಡು ಕರುಗಳನ್ನು ಸಂಪಾದಿಸಿತು.

ಸಂವರ್ಧಯಾಮಾಸ ಸ ತಾಂ ಸವತ್ಸಾಂ ಭಾರ್ಗವೋ ಋಷಿಃ ।
ತಯೋಃ ಪ್ರಜಾಧಿಸಂಸರ್ಗಾತ್ ಸಹಸ್ರಂ ಚ ಗವಾಮಭೂತ್ ॥೨೧॥

ಭಾರ್ಗವ ಋಷಿಯು ವತ್ಸಗಳಿಂದ ಸಹಿತವಾದ ಆ ಧೇನುವನ್ನು ಪೋಷಿಸಿದನು. ಹೀಗೆ ಅವುಗಳ ಸಂತತಿಯು ಬೆಳೆದು ಸಹಸ್ರ ಗೋವುಗಳಾದವು.

ಗವಾಂ ಜಾತಿಸಹಸ್ರಾಣಿ ಸಂಭೂತಾನಿ ಪರಸ್ಪರಮ್ ।
ಋಷಭಾಣಾಂ ಚ ರಾಜೇಂದ್ರ ನೈವಾಂತಃ ಪ್ರತಿದೃಶ್ಯತೇ ॥೨೨॥

ಎಲೈ ರಾಜೇಂದ್ರನೇ, ಆ ಗೋವುಗಳ ಮತ್ತು ವೃಷಭಗಳ ಪರಸ್ಪರ ಸಮಾಗಮದಿಂದ ಸಹಸ್ರಾರು ಜಾತಿಯ ಗೋವುಗಳು ಜನಿಸಿದವು. ಅವುಗಳಿಗೆ ಅಂತವೇ ಕಾಣುತ್ತಿರಲಿಲ್ಲ.

ತೈರಾಶ್ರಮಪದಂ ರಮ್ಯಮರಣ್ಯಂ ಚೈವ ಸರ್ವಶಃ ।
ಸಮಾಕುಲಂ ಸಮಭವನ್ಮೇಘೈರಿವ ನಭಃಸ್ಥಲಮ್ ॥೨೩॥

ಕಾನಿಚಿತ್ ಪದ್ಮವರ್ಣಾನಿ ಕಿಂಶುಕಾಭಾನಿ ಕಾನಿಚಿತ್ ।
ರುಗ್ಮವರ್ಣಾನಿ ಚಾನ್ಯಾನಿ ಚಂದ್ರಾಂಶುಸದೃಶಾನಿ ಚ ॥೨೪॥

ತಥಾ ರಾಜತವರ್ಣಾನಿ ಕಾನಿಚಿಲ್ಲೋಹಿತಾನಿ ವೈ ।
ನೀಲಲೋಹಿತತಾಮ್ರಾಣಿ ಕೃಷ್ಣಾನಿ ಕಪಿಲಾನಿ ಚ ।
ನಾನಾರಾಗವಿಚಿತ್ರಾಣಿ ಯೂಥಾನಿ ಬಹುಲಾನಿ ಚ ॥೨೫॥

ಮೇಘಗಳಿಂದ ನಭಸ್ಥಳವು ನಿಬಿಡವಾದಂತೆ ಆ ಗೋವುಗಳಿಂದ ಆ ಸುಂದರವಾದ ಅರಣ್ಯ ಮತ್ತು ಆಶ್ರಮಸ್ಥಾನವು ತುಂಬಿಹೋಯಿತು. ಕೆಲವು ಗೋವುಗಳು ಪದ್ಮ ವರ್ಣದವುಗಳು, ಕೆಲವು ಮುತ್ತುಗದ ಹೂವಿನ ಬಣ್ಣವನ್ನು ಹೊಂದಿದವು, ಕೆಲವು ಚಿನ್ನದ ಬಣ್ಣವನ್ನೂ, ಕೆಲವು ಚಂದ್ರಕಿರಣಗಳಿಗೆ ಸಮಾನವಾದ ಬಣ್ಣವನ್ನೂ, ಇನ್ನು ಕೆಲವು ಬೆಳ್ಳಿಯ ಬಣ್ಣವನ್ನೂ, ಇನ್ನು ಕೆಲವು ಕೆಂಪುಬಣ್ಣವನ್ನೂ, ಇನ್ನು ಕೆಲವು ನೀಲ, ಲೋಹಿತ, ತಾಮ್ರ, ಕೃಷ್ಣ, ಕಪಿಲ ಬಣ್ಣಗಳನ್ನೂ ಹೊಂದಿ ಅನೇಕ ಬಣ್ಣಗಳಿಂದ ವಿಚಿತ್ರವಾಗಿ ಕಾಣುತ್ತಿದ್ದ ಅನೇಕ ಗೋವಿನ ಗುಂಪುಗಳು ಅಲ್ಲಲ್ಲಿ ಕಂಡುಬಂದವು.

ನ ಚ ಕ್ಷೀರಂ ಘೃತಂ ಸ್ನೇಹಾದ್ ವತ್ಸಾನಾಮುಪಜೀವತಿ ।
ಭಾರ್ಗವಃ ಕೇವಲಂ ಚಾಸೀದ್ ಗವಾಂ ಪ್ರಾಣಯನೇ ರತಃ ॥೨೬॥

ಭಾರ್ಗವನು ಕರುಗಳ ಮೇಲಿನ ಪ್ರೀತಿಯಿಂದ ಗೋವುಗಳ ಕ್ಷೀರವನ್ನಾಗಲೀ ಅಥವಾ ಘೃತವನ್ನಾಗಲೀ ಸೇವಿಸುತ್ತಿರಲಿಲ್ಲ. ಗೋವುಗಳನ್ನು ಅಲ್ಲಿಂದಿಲ್ಲಿಗೆ ಕರೆದುಕೊಂಡು ಹೋಗುವುದರಲ್ಲಿ ಮಾತ್ರ ನಿರತನಾಗಿದ್ದನು.

ತಥಾ ಶುಶ್ರೂಷತಸ್ತಸ್ಯ ಗವಾಂ ಹಿತಮವೇಕ್ಷತಃ ।
ವ್ಯತೀಯಾತ್ ಸುಮಹಾನ್ ಕಾಲೋ ವತ್ಸೋಚ್ಛಿಷ್ಟೇನ ವರ್ತತಃ ॥೨೭॥

ಹಾಗೆಯೇ ಗೋವುಗಳ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕರುಗಳ ಬಾಯಿಂದ ಬಂದ ಹಾಲಿನ ನೊರೆಯನ್ನು ಮಾತ್ರ ಆಹಾರವಾಗಿ ಸೇವಿಸುತ್ತಿದ್ದ ಗೋವುಗಳ ಸೇವೆಯನ್ನು ಮಾಡುತ್ತಿದ್ದ ಅವನಿಗೆ ಬಹಳ ಕಾಲವು ಕಳೆದು ಹೋಯಿತು.

ಕ್ಷುತ್ಪಿಪಾಸಾಪರಿಶ್ರಾಂತಃ ಸತತಂ ಪ್ರಸ್ರವಂ ಗವಾಮ್ ।
ವತ್ಸೈರುಚ್ಛಿಷ್ಟಮುದಿತಂ ಬಹುಕ್ಷೀರತಯಾ ಬಹು ॥೨೮॥

ಪೀತವಾಂಸ್ತೇನ ನಾಮಾಸ್ಯ ಫೇನಪೇತ್ಯಭಿವಿಶ್ರುತಮ್ ।
ಭಾರ್ಗವಸ್ಯಾಭಿನಿಷ್ಪನ್ನಮೇವಂ ನಾಮ ಯುಧಿಷ್ಠಿರ ॥೨೯॥

ಹಸಿವು ಮತ್ತು ಬಾಯಾರಿಕೆಗಳಿಂದ ಬಳಲಿದ ಅವನು ಗೋವುಗಳಿಗೆ ಬಹಳ ಕ್ಷೀರವಿದ್ದುದರಿಂದ ಕರುಗಳ ಬಾಯಿಂದ ಬಂದ ಬಹುಕ್ಷೀರ ನೊರೆಯನ್ನು ಪಾನ ಮಾಡುತ್ತಿದ್ದನು. ಅದರಿಂದ ಅವನಿಗೆ ಫೇನಪ (ನೊರೆಯನ್ನು ಕುಡಿಯುವವನು) ಎಂಬ ಹೆಸರು ಪ್ರಖ್ಯಾತವಾಯಿತು. ಎಲೈ ಯುಧಿಷ್ಠಿರನೇ, ಭಾರ್ಗವ ಮುನಿಗೆ ಫೇನಪ ಎಂಬ ನಾಮವು ಈ ರೀತಿಯಾಗಿ ಬಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಭಾರ್ಗವಸ್ಯ ಫೇನಪನಾಮಲಾಭಪ್ರಕಾರಕಥನಂ
ನಾಮ ಪಂಚಾದಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾರನೆಯ ಅಧ್ಯಾಯ

ಗೋವುಗಳ ಸಂವಾದ. ಭಾರ್ಗವನನ್ನು ವಧಿಸಲು ನಿರ್ಧಾರ.

ಭೀಷ್ಮಃ

ಕದಾಚಿತ್ ಕಾಮರೂಪಿಣ್ಯೋ ಗಾವಃ ಸ್ತ್ರೀವೇಷಮಾಸ್ಥಿತಾಃ ।
ಹ್ರದೇ ಕ್ರೀಡಂತಿ ಸಂಹೃಷ್ಟಾ ಗಾಯಂತ್ಯಃ ಪುಣ್ಯಲಕ್ಷಣಾಃ ॥೧॥

ದದೃಶುಸ್ತಸ್ಯ ಗಾವೋ ವೈ ವಿಸ್ಮಯೋತ್ಫುಲ್ಲಲೋಚನಾಃ ।
ಊಚುಶ್ಚ ಕಾ ಯೂಯಮಿತಿ ಸ್ತ್ರಿಯೋ ಮಾನುಷಯಾ ಗಿರಾ ॥೨॥

ಭೀಷ್ಮ– ಒಮ್ಮೆ ಕಾಮರೂಪವನ್ನು ಹೊಂದಿದ ಪುಣ್ಯಶಾಲಿಯಾದ ಗೋವುಗಳು ಸ್ತ್ರೀವೇಷವನ್ನು ಧರಿಸಿ ಸಂತೋಷದಿಂದ ಒಂದು ಸರೋವರದಲ್ಲಿ ಹಾಡುತ್ತಾ ಆಟವಾಡುತ್ತಿದ್ದರು. ಅದನ್ನು ಆಶ್ಚರ್ಯದ ಕಣ್ಣುಗಳುಳ್ಳ ಗೋವುಗಳು ನೋಡಿ ಆ ಸ್ತ್ರೀಯರನ್ನು ಕುರಿತು ಮನುಷ್ಯವಾಣಿಯಿಂದ ನೀವು ಯಾರು ಎಂದು ಪ್ರಶ್ನೆ ಮಾಡಿದವು.

ಸ್ತ್ರಿಯಃ

ಗಾವ ಏವ ವಯಂ ಸರ್ವಾ ಕರ್ಮಭಿಃ ಶೋಭನೈರ್ಯುತಾಃ ।
ಸರ್ವಾ ಸ್ತ್ರೀವೇಷಧಾರಿಣ್ಯೋ ಯಥಾಕಾಮಂ ಚರಾಮಹೇ ॥೩॥

ಸ್ತ್ರೀಯರು– ನಾವೆಲ್ಲರೂ ಸತ್ಕರ್ಮಗಳನ್ನು ಮಾಡಿದ ಗೋವುಗಳು. ಎಲ್ಲರೂ ಸ್ತ್ರೀವೇಷವನ್ನು ಧರಿಸಿ ನಮ್ಮ ಮನಸ್ಸಿಗೆ ಬಂದಂತೆ ಸಂಚರಿಸುತ್ತೇವೆ.

ಗಾವಃ

ಗವಾಂ ಗಾವಃ ಪರಂ ದೈವಂ ಗವಾಂ ಗಾವಃ ಪರಾ ಗತಿಃ ।
ಕಥಯಧ್ವಮಿಹಾಸ್ಮಾಕಂ ಕೇನ ವಃ ಸುಕೃತಾಂ ಗತಿಃ ॥೪॥

ಗೋವುಗಳು– ಗೋವುಗಳಿಗೆ ಗೋವುಗಳೇ ಶ್ರೇಷ್ಠದೇವತೆ. ಗೋವುಗಳೇ ಶ್ರೇಷ್ಠವಾದ ಗತಿ. ನಿಮಗೆ ಯಾವ ಕರ್ಮದಿಂದ ಪುಣ್ಯಶಾಲಿಗಳ ಗತಿಯುಂಟಾಯಿತು ಎಂದು ನಮಗೆ ಹೇಳಿ.

ಸ್ತ್ರಿಯಃ

ಅಸ್ಮಾಕಂ ಹವಿಷಾ ದೇವಾ ಬ್ರಾಹ್ಮಣಾಸ್ತರ್ಪಿತಾಸ್ತಥಾ ।
ಕವ್ಯೇನ ಪಿತರಶ್ಚೈವ ಹವ್ಯೇನಾಗ್ನಿಶ್ಚ ತರ್ಪಿತಃ ॥೫॥

ಸ್ತ್ರೀಯರು– ನಮ್ಮ ಹವಿಸ್ಸಿನಿಂದ ದೇವತೆಗಳು ಮತ್ತು ಬ್ರಾಹ್ಮಣರು ತೃಪ್ತಿಯನ್ನು ಹೊಂದುತ್ತಾರೆ. ಕವ್ಯದಿಂದ ಪಿತೃಗಳು, ಹವ್ಯದಿಂದ ಅಗ್ನಿಯು ತೃಪ್ತಿಯನ್ನು ಹೊಂದುತ್ತಾನೆ.

ಪ್ರಜಯಾ ಚ ತಥಾಽಸ್ಮಾಕಂ ಕೃಷಿರಭ್ಯುದ್ಧತಾ ಸದಾ ।
ಶಕಟೈಶ್ಚಾಪಿ ಸಂಯುಕ್ತಾ ದಶವಾಹಶತೇನ ವೈ ॥೬॥

ನಮ್ಮ ಸಂತತಿಯಿಂದ ಕೃಷಿಯು ಅಭಿವೃದ್ಧಿಯನ್ನು ಹೊಂದುತ್ತದೆ. ಹತ್ತು ಜನರನ್ನು, ನೂರು ಜನರನ್ನು ಎಳೆಯುವ ಗಾಡಿಗಳಲ್ಲಿ ಅವುಗಳನ್ನು ಹೂಡುತ್ತಾರೆ.

ತದೇತೈಃ ಸುಕೃತೈಃ ಸ್ಫೀತೈರ್ವಯಂ ಯಾಶ್ಚೈವ ನಃ ಪ್ರಜಾಃ ।
ಗೋಲೋಕಮನುಸಂಪ್ರಾಪ್ತಾ ಯಃ ಪರಃ ಕಾಮಗೋಚರಃ ॥೭॥

ಇಂತಹ ಪರಿಶುದ್ಧವಾದ ಸತ್ಕರ್ಮಗಳಿಂದ ನಾವು ಮತ್ತು ನಮ್ಮ ಸಂತತಿಯು ನಮ್ಮ ಇಚ್ಛೆಯಂತೆ ಸಂಚರಿಸಬಹುದಾದ ಶ್ರೇಷ್ಠವಾದ ಗೋಲೋಕವನ್ನು ಪಡೆದಿದ್ದೇವೆ.

ಯೂಯಂ ತು ಸರ್ವಾ ರೋಹಿಣ್ಯಃ ಸಪ್ರಜಾಃ ಸಹಪುಂಗವಾಃ ।
ಅಧೋಗಾಮಿನ್ಯ ಇತ್ಯೇವ ಪಶ್ಯಾಮೋ ದಿವ್ಯಚಕ್ಷುಷಾ ॥೮॥

ನಿಮ್ಮ ಪ್ರಜೆಗಳಿಂದ ಮತ್ತು ಸಂಗತವಾದ ವೃಷಭಗಳಿಂದ ಕೂಡಿದ ಗೋವುಗಳಾದ ನೀವೆಲ್ಲರೂ ಅಧೋಗತಿಯನ್ನು ಹೊಂದುತ್ತೀರಿ ಎಂದು ನಾವು ದಿವ್ಯದೃಷ್ಟಿಯಿಂದ ನೋಡುತ್ತಿದ್ದೇವೆ.

ಗಾವಃ

ಏವಂ ಗವಾಂ ಪರಂ ದೈವಂ ಗಾವ ಏವ ಪರಾಯಣಮ್ ।
ಸ್ವಪಕ್ಷ್ಯಾಸ್ತಾರಣೀಯಾ ವಃ ಶರಣಾಯ ಗತಾ ವಯಮ್ ॥೯॥

ಕಿಮಸ್ಮಾಭಿಃ ಕರಣೀಯಂ ವರ್ತಿತವ್ಯಂ ಕಥಂಚನ ।
ಪ್ರಾಪ್ನುಯಾಮ ಚ ಗೋಲೋಕಂ ಭವಾಮ ನ ಚ ಗರ್ಹಿತಾಃ ॥೧೦॥

ಗೋವುಗಳು– ಈ ರೀತಿಯಲ್ಲಿ ಗೋವುಗಳಿಗೆ ಗೋವುಗಳೇ ಶ್ರೇಷ್ಠದೇವತೆ ಮತ್ತು ಶ್ರೇಷ್ಠವಾದ ಆಶ್ರಯ. ನಿಮ್ಮ ಗುಂಪಿಗೆ ಸೇರಿದ ನಮ್ಮನ್ನು ದಾಟಿಸಬೇಕು. ನಾವು ನಿಮಗೆ ಶರಣಾಗತರಾಗಿದ್ದೇವೆ. ನಾವು ಹೇಗೆ ನಿಂದಿತರಾಗುವುದಿಲ್ಲ ಮತ್ತು ಹೇಗೆ ಗೋಲೋಕವನ್ನು ಪಡೆಯುತ್ತೇವೆ?

ಸ್ತ್ರಿಯಃ

ವರ್ತತೇ ರಂತಿದೇವಸ್ಯ ಸತ್ರಂ ವರ್ಷಸಹಸ್ರಕಮ್ ।
ತತ್ರ ತಸ್ಯ ನೃಪಸ್ಯಾಶು ಪಶುತ್ವಮುಪಗಚ್ಛತ ॥೧೧॥

ತತಸ್ತಸ್ಯೋಪಯೋಗೇನ ಪಶುತ್ವೇ ಯಜ್ಞಸಂಸ್ಕೃತಾಃ ।
ಗೋಲೋಕಾನ್ ಪ್ರಾಪ್ಸ್ಯಥ ಶುಭಾಂಸ್ತೇನ ಪುಣ್ಯೇನ ಸಂಯುತಾಃ॥೧೨॥

ಸ್ತ್ರೀಯರು– ರಂತಿದೇವನು ಸಹಸ್ರವರ್ಷ ಪರ್ಯಂತವಾಗಿ ಸತ್ರಯಾಗವನ್ನು ನಡೆಸುತ್ತಿದ್ದಾನೆ. ನೀವು ಆ ರಾಜನ ಬಳಿಗೆ ಶೀಘ್ರವಾಗಿ ಹೋಗಿ ಅವನ ಯಜ್ಞಪಶುಗಳಾಗಿ. ಅವನು ನಿಮ್ಮನ್ನು ಯಜ್ಞದಲ್ಲಿ ಪಶುಗಳಾಗಿ ಉಪಯೋಗಿಸಿದರೆ ಯಜ್ಞದಿಂದ ಸಂಸ್ಕೃತರಾದ ನೀವು ಶುಭಪುಣ್ಯದಿಂದ ಯುಕ್ತರಾಗಿ ಗೋಲೋಕವನ್ನು ಹೊಂದುವಿರಿ.

ಭೀಷ್ಮಃ

ಏತತ್ ತಾಸಾಂ ವಚಃ ಶ್ರುತ್ವಾ ಗವಾಂ ಸಂಹೃಷ್ಟಮಾನಸಾಃ ।
ಗಮನಾಯ ಮನಶ್ಚಕ್ರುರೌತ್ಸುಕ್ಯಂ ಚಾಗಮನ್ ಪರಮ್ ॥೧೩॥

ಭೀಷ್ಮ– ಆ ಸ್ತ್ರೀರೂಪದ ಗೋವುಗಳ ಈ ಮಾತನ್ನು ಕೇಳಿ ಗೋವುಗಳು ಮನಸ್ಸಿನಲ್ಲಿ ಸಂತೋಷಗೊಂಡು ರಂತಿದೇವನ ಬಳಿಗೆ ಹೋಗಲು ಅಪೇಕ್ಷಿಸಿದವು. ಬಹಳ ಉತ್ಸುಕತೆಯನ್ನು ಹೊಂದಿದವು.

ನ ಹಿ ನೋ ಭಾರ್ಗವೋ ದಾತಾ ಪಶುತ್ವೇನೋಪಯೋಜನಮ್ ।
ಯಜ್ಞಸ್ತಸ್ಯ ನರೇಂದ್ರಸ್ಯ ವರ್ತತೇ ಧರ್ಮತಸ್ತಥಾ ॥೧೪॥

ಭಾರ್ಗವನು ನಮ್ಮನ್ನು ಯಜ್ಞದಲ್ಲಿ ಪಶುವಾಗಿ ಉಪಯೋಗಿಸುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಆ ನರೇಂದ್ರನ ಯಜ್ಞವಾದರೂ ಧರ್ಮದಿಂದ ನಡೆಯುತ್ತಿದೆ.

ವಯಂ ನ ಚಾನನುಜ್ಞಾತಾಃ ಶಕ್ತಾ ಗಂತುಂ ಕಥಂಚನ ।
ಅವೋಚನ್ನಥ ತತ್ರತ್ಯಾ ಭಾರ್ಗವೋ ವಧ್ಯತಾಮಯಮ್ ॥೧೫॥

ನಾವಾದರೂ ಭಾರ್ಗವನ ಅನುಮತಿ ಇಲ್ಲದೆ ಅಲ್ಲಿಗೆ ಹೋಗಲಾರೆವು (ಎಂದು ಚಿಂತಿಸಿದವು). ಆಗ ಅಲ್ಲಿದ್ದ ಕೆಲವು ಗೋವುಗಳು ಈ ಭಾರ್ಗವವನ್ನು ಕೊಲ್ಲೋಣ ಎಂದು ಹೇಳಿದವು.

ಏತತ್ ಸರ್ವಾ ರೋಚಯತ ನ ಹಿ ಶಕ್ಯಮತೋಽನ್ಯಥಾ ।
ಲೋಕಾನ್ ಪ್ರಾಪ್ತುಂ ಸಹಾಸ್ಮಾಭಿರ್ನಿಶ್ಚಯಃ ಕ್ರಿಯತಾಮಯಮ್ ॥೧೬॥

ಈ ಸಲಹೆಯನ್ನು ಎಲ್ಲರೂ ಒಪ್ಪಿ ಅದನ್ನು ಬಿಟ್ಟು ನಾವು ಬೇರೆ ರೀತಿಯಲ್ಲಿ ಇಲ್ಲಿಂದ ಹೋಗುವುದಾಗಲೀ, ಎಲ್ಲರೂ ಒಟ್ಟಿಗೆ ಶುಭಲೋಕವನ್ನು ಹೊಂದುವುದಾಗಲೀ ಸಾಧ್ಯವಿಲ್ಲ. ಎಲ್ಲರೂ ಸೇರಿ ಈ ನಿಶ್ಚಯವನ್ನು ಮಾಡಿ (ಎಂದು ಹೇಳಿದವು).

ನ ತು ತಾಸಾಂ ಸಮೇತಾನಾಂ ಕಾಚಿದ್ ಘೋರೇಣ ಚಕ್ಷುಷಾ ।
ಶಕ್ನೋತಿ ಭಾರ್ಗವಂ ದ್ರಷ್ಟುಂ ಸತೃತೇನೋಪಸಂಯುತಾ ॥೧೭॥

ಅಲ್ಲಿ ಸೇರಿದ ಗೋವುಗಳಲ್ಲಿ ಎಲ್ಲವೂ ಭಾರ್ಗವನಿಂದ ಸತ್ಕರಿಸಲ್ಪಟ್ಟು ಯಾವ ಗೋವೂ ಸಹ ಭಾರ್ಗವನನ್ನು ಘೋರವಾದ ದೃಷ್ಟಿಯಿಂದ ನೋಡಲು ಸಾಧ್ಯವಾಗಲಿಲ್ಲ.

ಅಥ ಪದ್ಮಸವರ್ಣಾಭಾ ಭಾಸ್ಕರಾಂಶುಸಮಪ್ರಭಾಃ ।
ಜಪಾಲೋಹಿತತಾಮ್ರಾಕ್ಷ್ಯೋ ನಿರ್ಮಾಂಸಕಠಿನಾನನಾಃ ॥೧೮॥

ರೋಹಿಣ್ಯಃ ಕಪಿಲಾಃ ಪ್ರಾಹುಃ ಸರ್ವಾಸಾಂ ವೈ ಸಮಕ್ಷತಃ ।
ಮೇಘಸ್ತನಿತನಿರ್ಘೋಷಾಸ್ತೇಜೋಭಿರಭಿರಂಜಿತಾಃ ॥೧೯॥

ವಯಂ ಹಿ ತಂ ವಧಿಷ್ಯಾಮಃ ಸುಮಿತ್ರಂ ನಾತ್ರ ಸಂಶಯಃ ।
ಸುಕೃತಂ ಪೃಷ್ಠತಃ ಕೃತ್ವಾ ಕಿಂ ನಃ ಶ್ರೇಯೋ ವಿಧಾಸ್ಯಥ ॥೨೦॥

ಆಗ ಪದ್ಮಕಾಂತಿಯನ್ನು ಹೊಂದಿದ್ದ, ಸೂರ್ಯಕಿರಣಗಳಂತಹ ಪ್ರಭೆಯನ್ನು ಹೊಂದಿದ್ದ, ದಾಸವಾಳ ಬಣ್ಣದಂತಹ ಕೆಂಪುಬಣ್ಣವುಳ್ಳ, ಮಾಂಸರಹಿತವಾದ,

ಕಠಿನವಾದ ಮುಖವುಳ್ಳ ಕಪಿಲಧೇನುಗಳು ಉಳಿದ ಎಲ್ಲಾ ಧೇನುಗಳ ಸಮಕ್ಷಮದಲ್ಲಿ ಮೇಘಗರ್ಜನೆಯಂತಹ ಧ್ವನಿಯನ್ನು ಹೊಂದಿ, ತೇಜೋಯುಕ್ತವಾಗಿ ನಾವು ಸುಮಿತ್ರನು ಮಾಡಿದ ಉಪಕಾರವನ್ನು ಹಿಂದೆ ತಳ್ಳಿ, ಅವನನ್ನು ಕೊಲ್ಲುವೆವು. ಇದರಲ್ಲಿ ಸಂಶಯವಿಲ್ಲ. ನೀವು ನಮಗೆ ಯಾವ ಶ್ರೇಯಸ್ಸನ್ನು ಉಂಟುಮಾಡುತ್ತೀರಿ ಎಂದು ಕೇಳಿದವು.

ಗಾವಃ

ಕಪಿಲಾ ಸರ್ವವರ್ಣೇಷು ಪ್ರಧಾನತ್ವಮವಾಪ್ಸ್ಯಥ ।
ಗವಾಂ ಶತಫಲಾಚ್ಚೈಕಾಂ ದತ್ತ್ವಾ ಫಲಮವಾಪ್ಸ್ಯತಿ ॥೨೧॥

ಗೋವುಗಳು– ಕಪಿಲಗೋವುಗಳಾದ ನೀವು ಎಲ್ಲ ಗೋವುಗಳಲ್ಲಿ ಪ್ರಧಾನ್ಯವನ್ನೂ ಹೊಂದುವವರಾಗಿ. ನೂರು ಗೋವುಗಳನ್ನು ದಾನ ಮಾಡಿದ ಫಲವು ಒಂದೇ ಕಪಿಲಗೋವನ್ನು ದಾನ ಮಾಡುವುದರಿಂದ ಉಂಟಾಗಲಿ.

ಭೀಷ್ಮಃ

ಏತದ್ ಗವಾಂ ವಚಃ ಶ್ರುತ್ವಾ ಕಪಿಲಾ ಹೃಷ್ಟಮಾನಸಾಃ ।
ಚಕ್ರುಃ ಸರ್ವಾ ಭಾರ್ಗವಸ್ಯ ಸುಮಿತ್ರಸ್ಯ ವಧೇ ಮತಿಮ್ ॥೨೨॥

ಭೀಷ್ಮ– ಗೋವುಗಳ ಈ ಮಾತನ್ನು ಕೇಳಿ ಕಪಿಲಗೋವುಗಳು ಸಂತೋಷದಿಂದ ಕೂಡಿದ ಮನಸ್ಸುಳ್ಳವುಗಳಾಗಿ ಅವೆಲ್ಲವೂ ಭಾರ್ಗವನಾದ ಸುಮಿತ್ರನ ವಧೆಯನ್ನು ಮಾಡುವುದಾಗಿ ನಿಶ್ಚಯಿಸಿದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಭಾರ್ಗವವಧನಿಶ್ಚಯೋ ನಾಮ
ಷೋಡಶಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೇಳನೆಯ ಅಧ್ಯಾಯ

ಗೋಮಾತೆಯರಿಂದ ಭಾರ್ಗವನ ರಕ್ಷಣೆ.

ಭೀಷ್ಮಃ

ಯಾಸ್ತು ಗೋಮಾತರಸ್ತಸ್ಯ ಕಾಮಚಾರಿಣ್ಯ ಆಗತಾಃ ।
ಸಮೀಪಂ ಹಿ ಸುಮಿತ್ರಸ್ಯ ಕೃತಜ್ಞಾಃ ಸಮುಪಸ್ಥಿತಾಃ ॥೧॥

ಭೀಷ್ಮ– ಸ್ವರ್ಗದಿಂದ ಬಂದ ಕಾಮಚಾರಿಗಳಾದ ಗೋಮಾತೆಯರು ಕೃತಜ್ಞತೆಯಿಂದ ಸುಮಿತ್ರನ ಸಮೀಪಕ್ಕೆ ಬಂದವು.

ಅಭಿಪ್ರಶಸ್ಯ ಚೈವಾಹುಸ್ತಮೃಷಿಂ ಪುಣ್ಯದರ್ಶನಾಃ ।
ಗೋಲೋಕಾದಾಗತಾ ವೇದ ಋಷೇ ಗೋಮಾತರೋ ವಯಮ್ ॥೨॥

ಸುಪ್ರೀತಾಃ ಸ್ಮ ವರಂ ಗೃಹ್ಣ ಯಮಿಚ್ಛಸಿ ಮಹಾಮುನೇ ।
ಯದ್ಧಿ ಗೋಷು ಪರಾಂ ಬುದ್ಧಿಂ ಕೃತವಾನಸಿ ನಿತ್ಯದಾ ॥೩॥

ಪುಣ್ಯದರ್ಶನರಾದ ಆ ಗೋಮಾತೆಯರು ಆ ಋಷಿಯನ್ನು ಹೊಗಳಿ- 'ಎಲೈ ಋಷಿಯೇ, ನಾವು ಗೋಲೋಕದಿಂದ ಬಂದ ಗೋಮಾತೆಯರು. ಮಹಾಮುನಿಯೇ, ನೀನು ಯಾವಾಗಲೂ ಗೋವುಗಳಲ್ಲಿ ಹೊಂದಿದ ಶ್ರೇಷ್ಠವಾದ ಬುದ್ಧಿಯ ಕಾರಣದಿಂದಾಗಿ ನಾವು ಸಂತೋಷಗೊಂಡಿದ್ದೇವೆ. ನೀನು ಬಯಸಿದ ವರವನ್ನು ಕೇಳು' ಎಂದು ಹೇಳಿದವು.

ಸುಮಿತ್ರಃ

ಪ್ರೀತೋಽಸ್ಮ್ಯನುಗೃಹೀತೋಽಸ್ಮಿ ಯನ್ಮಾಂ ಗೋಮಾತರಃ ಶುಭಾಃ ।
ಸುಪ್ರೀತಮನಸಃ ಸರ್ವಾಸ್ತಿಷ್ಠಂತೇ ಚ ವರಪ್ರದಾಃ ॥೪॥

ಭವೇದ್ ಗೋಷ್ವೇವ ಮೇ ಭಕ್ತಿರ್ಯಥೈವಾದ್ಯ ತಥಾ ಸದಾ ।
ಗೋಘ್ನಾಶ್ಚೈವಾವಸೀದಂತು ನರಾ ಬ್ರಹ್ಮದ್ವಿಷಶ್ಚ ಯೇ ॥೫॥

ಸುಮಿತ್ರ– ಪವಿತ್ರರಾದ ಗೋಮಾತೆಯರೆಲ್ಲರೂ ಸಂತೋಷಗೊಂಡ ಮನಸ್ಸಿನಿಂದ ವರಪ್ರದರಾಗಿ ನನ್ನ ಬಳಿ ಇರುವುದರಿಂದ ನಾನು ಸಂತುಷ್ಟನಾಗಿದ್ದೇನೆ ಮತ್ತು ಅನುಗೃಹೀತನಾಗಿದ್ದೇನೆ. ಈ ದಿನ ನನಗಿರುವಂತೆ ಯಾವಾಗಲೂ ಗೋವುಗಳಲ್ಲಿ ಭಕ್ತಿ ಇರಲಿ. ಗೋಹತ್ಯೆಯನ್ನು ಮಾಡುವವರು ನಾಶವನ್ನು ಹೊಂದಲಿ. ಬ್ರಹ್ಮದ್ವೇಷಿಗಳು ನಾಶವನ್ನು ಹೊಂದಲಿ.

ಗೋಮಾತರಃ

ಏವಮೇತದೃಷಿಶ್ರೇಷ್ಠ ಹಿತಂ ವದಸಿ ನಃ ಪ್ರಿಯಮ್ ।
ಏಹಿ ಗಚ್ಛ ಸಹಾಸ್ಮಾಭಿರ್ಗೋಲೋಕಮೃಷಿಸತ್ತಮ ॥೬॥

ಗೋಮಾತೆಯರು– ಎಲೈ ಋಷಿಶ್ರೇಷ್ಠನೇ, ನೀನು ಈ ರೀತಿಯಾಗಿ ನಮಗೆ ಹಿತವೂ, ಪ್ರಿಯವೂ ಆದ ಮಾತನ್ನೇ ಆಡುತ್ತಿದ್ದೀಯೆ. ಎಲೈ ಋಷಿಸತ್ತಮನೇ, ನಮ್ಮ ಜೊತೆಯಲ್ಲಿ ಗೋಲೋಕಕ್ಕೆ ಬಾ.

ಸುಮಿತ್ರಃ

ಯೂಯಮಿಷ್ಟಾಂ ಗತಿಂ ಯಾಂತು ನ ಹ್ಯಹಂ ಗಂತುಮುತ್ಸಹೇ ।
ಇಮಾ ಗಾವಃ ಸಮುತ್ಸೃಜ್ಯ ತಪಸ್ವಿನ್ಯೋ ಮಮ ಪ್ರಿಯಾಃ ॥೭॥

ಸುಮಿತ್ರ– ನಿಮಗಿಷ್ಟವಾದ ಕಡೆಗೆ ನೀವು ಹೋಗಿ. ನಾನು ನನಗೆ ಪ್ರಿಯವಾದ, ಶೋಚನೀಯವಾದ ಈ ಗೋವುಗಳನ್ನು ಬಿಟ್ಟು ಬರಲು ಇಷ್ಟಪಡುವುದಿಲ್ಲ.

ಭೀಷ್ಮಃ

ತಾಸ್ತು ತಸ್ಯ ವಚಃ ಶ್ರುತ್ವಾ ಕಪಿಲಾನಾಂ ಸುದಾರುಣಮ್ ।
ನಿನ್ಯುಸ್ತಮೃಷಿಮುತ್ಕ್ಷಿಪ್ಯ ಭಾರ್ಗವಂ ನಭ ಉದ್ವಹನ್ ॥೮॥

ಭೀಷ್ಮ– ಗೋಮಾತೆಯರು ಕಪಿಲಗೋವುಗಳ ದಾರುಣವಾದ ಮಾತುಗಳನ್ನು ಕೇಳಿ ಆ ಋಷಿಶ್ರೇಷ್ಠನಾದ ಭಾರ್ಗವನನ್ನು ಆಕಾಶಕ್ಕೆ ಎತ್ತಿಕೊಂಡು ಹೋದರು.

ಕಳೇವರಂ ತು ತತ್ರೈವ ತಸ್ಯ ಸನ್ನ್ಯಸ್ಯ ಮಾತರಃ ।
ನಿಷ್ಕೃಷ್ಯ ಕರಣಂ ಯೋಗಾದಾನಯನ್ ಭಾರ್ಗವಸ್ಯ ವೈ ॥೯॥

ಗೋಮಾತೆಯರು ಅವನ ಶರೀರವನ್ನು ಅಲ್ಲಿಯೇ ಬಿಟ್ಟು ತಮ್ಮ ಯೋಗಶಕ್ತಿಯಿಂದ ಭಾರ್ಗವನ ಸೂಕ್ಷ್ಮಶರೀರವನ್ನು ಎಳೆದುಕೊಂಡು ಹೊರಟರು.

ಸರ್ವಂ ಚಾಸ್ಯ ತದಾಚಖ್ಯುಃ ಕಪಿಲಾನಾಂ ವಿಚೇಷ್ಟಿತಮ್ ।
ಯದರ್ಥಂ ಹರಣಂ ಗೋಭಿರ್ಗೋಲೋಕಂ ಲೋಕಮಾತರಃ ॥೧೦॥

ಅವರು ಅವನಿಗೆ ಕಪಿಲ ಗೋವುಗಳ ಎಲ್ಲ ಅಭಿಪ್ರಾಯವನ್ನೂ, ಲೋಕ ಮಾತೆಯರಾದ ತಾವು ಗೋವುಗಳ ಜೊತೆಯಲ್ಲಿ ಗೋಲೋಕಕ್ಕೆ ಕರೆದುಕೊಂಡು ಹೋಗುವ ಕಾರಣವನ್ನೂ ಹೇಳಿದರು.

ತತಸ್ತು ಕಪಿಲಾಸ್ತತ್ರ ತಸ್ಯ ದೃಷ್ಟ್ವಾ ಕಳೇವರಮ್ ।
ತಥಾಪ್ರತಿಜ್ಞಂ ಶೃಂಗೈಶ್ಚ ಖುರೈಶ್ಚಾಪ್ಯವಚೂರ್ಣಯನ್ ॥೧೧॥

ಆಗ ಕಪಿಲ ಗೋವುಗಳು ಅಲ್ಲಿ ಬಿದ್ದಿದ್ದ ಭಾರ್ಗವನ ಶರೀರವನ್ನು ನೋಡಿ ತಾವು ಮೊದಲು ಪ್ರತಿಜ್ಞೆಯನ್ನು ಮಾಡಿದಂತೆ ಕೊಂಬುಗಳಿಂದಲೂ ಮತ್ತು ಗೊರಸುಗಳಿಂದಲೂ ಅದನ್ನು ಪುಡಿ ಮಾಡಿದವು.

ತತಃ ಸಂಛಿದ್ಯ ಬಹುಧಾ ಭಾರ್ಗವಂ ನೃಪಸತ್ತಮ ।
ಯಯುರ್ಯತ್ರೇತರಾ ಗಾವಸ್ತಚ್ಚ ಸರ್ವಂ ನ್ಯವೇದಯನ್ ॥೧೨॥

ಎಲೈ ನೃಪಶ್ರೇಷ್ಠನೇ, ಅನಂತರ ಭಾರ್ಗವನ ದೇಹವನ್ನು ಬಹಳವಾಗಿ ಪುಡಿ ಮಾಡಿ ಬೇರೆ ಗೋವುಗಳಿದ್ದಲ್ಲಿಗೆ ಹೋಗಿ ಎಲ್ಲವನ್ನೂ ನಿವೇದಿಸಿದವು.

ಅಥ ಗೋಮಾತೃಭಿಃ ಶಪ್ತಾಸ್ತಾ ಗಾವಃ ಪೃಥಿವೀಚರಾಃ ।
ಅಮೇಧ್ಯವದನಾಃ ಕ್ಷಿಪ್ರಂ ಭವಧ್ವಂ ಬ್ರಹ್ಮಘಾತಕಾಃ ॥೧೩॥

ಆಗ ಪೃಥಿವಿಯಲ್ಲಿ ಚಲಿಸುವ ಆ ಗೋವುಗಳಿಗೆ ಗೋಮಾತೆಯರು ಬ್ರಹ್ಮಹತ್ಯೆಯನ್ನು ಮಾಡಿದ ನೀವು ಶೀಘ್ರವಾಗಿ ಅಮೇಧ್ಯಮುಖವುಳ್ಳವರಾಗಿ ಎಂದು ಶಾಪವನ್ನು ನೀಡಿದರು.

ಏವಂ ಕೃತಜ್ಞಾ ಗಾವೋ ಹಿ ಯಥಾ ಗೋಮಾತರೋ ನೃಪ ।
ಋಷಿಶ್ಚ ಪ್ರಾಪ್ತವಾಲ್ಲೋಕಂ ಗಾವಶ್ಚ ಪರಿಮೋಕ್ಷಿತಾಃ ॥೧೪॥

ಹೀಗೆ ಗೋವುಗಳು ಗೋಮಾತೆಯರಂತೆ ಕೃತಜ್ಞವಾದವುಗಳು. ಭಾರ್ಗವ ಋಷಿಯೂ, ಗೋಲೋಕವನ್ನು ಹೊಂದಿದನು. ಗೋವುಗಳೂ ಬಿಡಿಸಲ್ಪಟ್ಟವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಭಾರ್ಗವಸ್ಯ ಗೋಲೋಕಪ್ರಾಪ್ತಿರ್ನಾಮ
ಸಪ್ತದಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೆಂಟನೆಯ ಅಧ್ಯಾಯ

ರಂತಿದೇವನ ಯಜ್ಞದಲ್ಲಿ ಗೋವುಗಳ ವಿನಿಯೋಗ ಮತ್ತು ಅವುಗಳಿಗೆ ಸದ್ಗತಿ. ಭಾರ್ಗವೋಪಾಖ್ಯಾನ ಸಮಾಪ್ತಿ.

ಭೀಷ್ಮಃ

ತಾ ಗಾವೋ ರಂತಿದೇವಸ್ಯ ಗತ್ವಾ ಯಜ್ಞಂ ಮನೀಷಿಣಃ ।
ಆತ್ಮಾನಂ ಜ್ಞಾಪಯಾಮಾಸುರ್ಮಹರ್ಷೀಣಾಂ ಸಮಕ್ಷತಃ ॥೧॥

ರಂತಿದೇವಸ್ತತೋ ರಾಜಾ ಪ್ರಯತಃ ಪ್ರಾಂಜಲಿಃ ಶುಚಿಃ ।
ಉವಾಚ ಗಾವಃ ಪ್ರಣತಃ ಕಿಮಾಗಮನಮಿತ್ಯಪಿ ॥೨॥

ಭೀಷ್ಮ– ಆ ಗೋವುಗಳು ಮೇಧಾವಿಯಾದ ರಂತಿದೇವನ ಯಜ್ಞದ ಬಳಿಗೆ ಹೋಗಿ ಋಷಿಗಳ ಬಳಿಯಲ್ಲಿ ತಮ್ಮನ್ನು ನಿವೇದಿಸಿಕೊಂಡವು. ರಾಜನಾದ ರಂತಿದೇವನು ಆಗ ಶುಚಿಯಾಗಿ ಕೈಗಳನ್ನು ಮುಗಿದು ಶ್ರದ್ಧೆಯಿಂದ ಕೂಡಿ ಗೋವುಗಳಿಗೆ ನಮಸ್ಕಾರವನ್ನು ಮಾಡಿ ನಿಮ್ಮ ಆಗಮನದ ಉದ್ದೇಶವೇನು ಎಂದು ಕೇಳಿದನು.

ಗಾವಃ

ಇಚ್ಛಾಮಸ್ತವ ರಾಜೇಂದ್ರ ಸತ್ರೇಽಸ್ಮಿನ್ ವಿನಿಯೋಜನಮ್ ।
ಪಶುತ್ವಮುಪಸಂಪ್ರಾಪ್ತುಂ ಪ್ರಸಾದಂ ಕರ್ತುಮರ್ಹಸಿ ॥೩॥

ಗೋವುಗಳು– ಎಲೈ ರಾಜೇಂದ್ರನೇ, ನಿನ್ನ ಯಾಗದಲ್ಲಿ ನಾವು ವಿನಿಯೋಗವನ್ನು ಹೊಂದಲು ಬಯಸುತ್ತೇವೆ. ನಾವು ಯಜ್ಞಪಶುತ್ವವನ್ನು ಹೊಂದಲು ಬಯಸುತ್ತೇವೆ. ನೀನು ಅನುಗ್ರಹಿಸಬೇಕು.

ರಂತಿದೇವಃ

ನಾಸ್ಮಿ ಶಕ್ತೋ ಗವಾಂ ಘಾತಂ ಕರ್ತುಂ ಶತಸಹಸ್ರಶಃ ।
ಘಾತಯಿತ್ವಾ ತ್ವಹಂ ಯುಷ್ಮಾನ್ ಕಥಮಾತ್ಮಾನಮುದ್ಧರೇ ॥೪॥

ಯಃ ಪಶುತ್ವೇನ ಸಂಯೋಜ್ಯ ಯುಷ್ಮಾನ್ ಸ್ವರ್ಗಂ ನಯೇದಿಹ ।
ಆತ್ಮಾನಂ ಚೈವ ತಪಸಾ ಗಾವಃ ಸಮುಪಗಮ್ಯತಾಮ್ ॥೫॥

ರಂತಿದೇವ– ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಗೋಹತ್ಯೆಯನ್ನು ಮಾಡಲು ನಾನು ಶಕ್ತನಲ್ಲ. ನಿಮ್ಮನ್ನು ಹತ್ಯೆ ಮಾಡಿದರೆ ನಾನು ನನ್ನನ್ನು ಹೇಗೆ ಉದ್ಧರಿಸಿಕೊಳ್ಳುವೆನು? ಎಲೈ ಗೋವುಗಳೇ, ಯಾವನು ನಿಮ್ಮನ್ನು ಪಶುಗಳನ್ನಾಗಿ ಸಂಯೋಜಿಸಿ ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾನೆಯೋ ಮತ್ತು ತಪಸ್ಸಿನಿಂದ ತನ್ನನ್ನು ಉದ್ಧರಿಸಿಕೊಳ್ಳುತ್ತಾನೆಯೋ ಅಂತಹವನ ಬಳಿಗೆ ಹೋಗಿ.

ಗಾವಃ

ಅಸ್ಮಾಕಂ ತಾರಣೇ ಯುಕ್ತೋ ಧರ್ಮಾತ್ಮಾ ತಪಸಿ ಸ್ಥಿತಃ ।
ಶ್ರುತೋಽಸ್ಮಾಭಿರ್ಭವಾನ್ ರಾಜನ್ ತತಸ್ತು ಸ್ವಯಮಾಗತಾಃ ॥೬॥

ಗೋವುಗಳು– ಎಲೈ ರಾಜನೇ, ನಮ್ಮನ್ನು ಉದ್ಧರಿಸಲು ಶಕ್ತನಾದ ಧರ್ಮಾತ್ಮನೂ, ತಪಸ್ವಿಯೂ ಆದವನು ನೀನೇ ಎಂದು ಕೇಳಿದ್ದೇವೆ. ಆದ್ದರಿಂದ ನಾವಾಗಿಯೇ ನಿನ್ನ ಬಳಿಗೆ ಬಂದಿದ್ದೇವೆ.

ರಂತಿದೇವಃ

ಮಮ ಸತ್ರೇ ಪಶುತ್ವಂ ವೋ ಯದ್ಯೇವಂ ಹಿ ಮನೀಷಿತಮ್ ।
ಸಮಯೇನಾಹಮೇತೇನ ಜುಹುಯಾಂ ವೋ ಹುತಾಶನೇ ॥೭॥

ಕದಾಚಿದ್ ಯದಿ ವಃ ಕಾಚಿದಕಾಮಾ ವಿನಿಯುಜ್ಯತೇ ।
ತದಾ ಸಮಾಪ್ತಿಃ ಸತ್ರಸ್ಯ ಗವಾಂ ಸ್ಯಾದಿತಿ ನೈಷ್ಠಿಕೀ ॥೮॥

ರಂತಿದೇವ– ನಿಮಗೆ ಹೀಗೆ ನನ್ನ ಸತ್ರದಲ್ಲಿ ಪಶುವಾಗುವುದು ಇಷ್ಟವಾದರೆ ನಾನು ಒಂದು ನಿಬಂಧನೆಯ ಮೇಲೆ ನಿಮ್ಮನ್ನು ಅಗ್ನಿಯಲ್ಲಿ ಹೋಮ ಮಾಡುತ್ತೇನೆ. ನಿಮ್ಮಲ್ಲಿ ಯಾರಾದರೂ ಯಾವಾಗಲಾದರೂ ಒಮ್ಮೆ ಪಶುತ್ವವನ್ನು ಬಯಸದಿದ್ದರೆ ಆಗ ಖಂಡಿತವಾಗಿ ಗೋಸತ್ರಯಾಗದ ಸಮಾಪ್ತಿಯಾಗುತ್ತದೆ.

ಗಾವಃ

ಏವಮಸ್ತು ಮಹಾರಾಜ ಯಥಾ ತ್ವಂ ಪ್ರಬ್ರವೀಷಿ ನಃ ।
ಅಕಾಮಾ ಸ್ಯುರ್ಯದಾ ಗಾವಸ್ತದಾ ಸತ್ರಂ ಸಮಾಪ್ಯತಾಮ್ ॥೯॥

ಗೋವುಗಳು– ಎಲೈ ಮಹಾರಾಜನೇ, ನೀನು ನಮಗೆ ಹೇಳುವಂತೆಯೇ ಆಗಲಿ. ಗೋವುಗಳು ಯಾವಾಗ ಪಶುತ್ವದ ಆಸೆಯನ್ನು ತೊರೆಯುತ್ತವೆಯೋ ಆಗ ಯಜ್ಞವು ಸಮಾಪ್ತಿಗೊಳ್ಳಲಿ.

ಭೀಷ್ಮಃ

ತತಃ ಪ್ರವೃತ್ತೇ ಗೋಸತ್ರೇ ರಂತಿದೇವಸ್ಯ ಧೀಮತಃ ।
ಗೋಸಹಸ್ರಾಣ್ಯಹರಹರ್ನಿಯುಜ್ಯಂತೇ ಶಮಿತೃಭಿಃ ॥೧೦॥

ಭೀಷ್ಮ– ಅನಂತರ ಮೇಧಾವಿಯಾದ ರಂತಿದೇವನ ಗೋಸತ್ರವು ಪ್ರವೃತ್ತವಾಗುತ್ತಿರಲು ಶಮಿತೃಗಳು (ಯಜ್ಞಪಶುವನ್ನು ವಧೆ ಮಾಡುವವರು) ಪ್ರತಿದಿನವೂ ಸಹಸ್ರಗೋವುಗಳನ್ನು ಯಜ್ಞಕ್ಕಾಗಿ ಉಪಯೋಗಿಸಿದರು.

ಏವಂ ಬಹೂನಿ ವರ್ಷಾಣಿ ವ್ಯತೀತಾನಿ ನರಾಧಿಪ ।
ಗವಾಂ ವೈ ವಧ್ಯಮಾನಾನಾಂ ನ ಚಾಂತಃ ಪ್ರತ್ಯದೃಶ್ಯತ ॥೧೧॥

ಎಲೈ ರಾಜನೇ, ಹೀಗೆ ಅನೇಕ ವರ್ಷಗಳು ಕಳೆದವು. ವಧಿಸಲ್ಪಡುವ ಗೋವುಗಳಿಗೆ ಕೊನೆಯೇ ಕಾಣಲಿಲ್ಲ.

ಗವಾಂ ಚರ್ಮಸಹಸ್ರೈಸ್ತು ರಾಶಯಃ ಪರ್ವತೋಪಮಾಃ ।
ಬಭೂವುಃ ಕುರುಶಾರ್ದೂಲ ಬಹುಧಾ ಮೇಘಸನ್ನಿಭಾಃ ॥೧೨॥

ಎಲೈ ಕುರುಶಾರ್ದೂಲನೇ, ಗೋವುಗಳ ಸಹಸ್ರಾರು ಚರ್ಮಗಳ ರಾಶಿಗಳು ಮೇಘದ ಕಾಂತಿಯನ್ನು ಹೊಂದಿ ಪರ್ವತದಂತಾದವು.

ಮೇದಃಕ್ಲೇದವಹಾ ಚೈವ ಪ್ರಾವರ್ತತ ಮಹಾನದೀ ।
ಅದ್ಯಾಪಿ ಭುವಿ ವಿಖ್ಯಾತಾ ನದೀ ಚರ್ಮಣ್ವತೀ ಶುಭಾ ॥೧೩॥

ಗೋವುಗಳ ಮೇದಸ್ಸು ಮತ್ತು ರಕ್ತವು ಮಹಾನದಿಯ ರೂಪದಲ್ಲಿ ಹರಿಯಲು ಪ್ರಾರಂಭವಾಯಿತು. ಆ ಶುಭವಾದ ನದಿಯು ಈಗಲೂ ಭೂಮಿಯಲ್ಲಿ ಚರ್ಮಣ್ವತೀ ಎಂದೇ ಪ್ರಖ್ಯಾತವಾಗಿದೆ.

ತದಾ ಕದಾಚಿತ್ ಸ್ವಂ ವತ್ಸಂ ಗೌರುಪಾಮಂತ್ರ್ಯ ದುಃಖಿತಾ ।
ಏಹಿ ವತ್ಸ ಸ್ತನಂ ಪಿಬ ಮಾ ತ್ವಂ ಪಶ್ಚಾತ್ ಕ್ಷುಧಾರ್ದಿತಃ ॥೧೪॥

ತಪ್ಸ್ಯಸೇ ವಿಮನಾ ದುಃಖಂ ಘಾತಿತಾಯಾಂ ಮಯಿ ಧ್ರುವಮ್ ।
ಏತೇ ಹ್ಯಾಯಾಂತಿ ಚಂಡಾಲಾಃ ಸಶಸ್ತ್ರಾ ಮಾಂ ಜಿಘಾಂಸವಃ ॥೧೫॥

ಆಗ ಒಮ್ಮೆ ಒಂದು ಹಸುವು ದುಃಖದಿಂದ ತನ್ನ ಕರುವನ್ನು ಕರೆದು ವತ್ಸ ಬಾ, ನನ್ನ ಸ್ತನವನ್ನು ಪಾನ ಮಾಡು. ಅನಂತರ ಹಸಿವಿನಿಂದ ಖೇದಗೊಂಡು ದುಃಖಪಡಬೇಡ. ನನ್ನನ್ನು ಕೊಂದಮೇಲೆ ಖಂಡಿತವಾಗಿ ನಿನಗೆ ದುಃಖವಾಗುತ್ತದೆ. ಈ ಚಂಡಾಲರು ಕೈಯಲ್ಲಿ ಶಸ್ತ್ರವನ್ನು ಹಿಡಿದು ನನ್ನನ್ನು ಕೊಲ್ಲಲು ಬರುತ್ತಿದ್ದಾರೆ ಎಂದು ಹೇಳಿತು.

ಅಥ ಶುಶ್ರಾವ ತಾಂ ವಾಣೀಂ ಮಾನುಷೀಂ ಸಮುದಾಹೃತಾಮ್ ।
ರಂತಿದೇವೋ ಮಹಾರಾಜ ತತಸ್ತಾಂ ಸಮವಾರಯತ್ ॥೧೬॥

ಎಲೈ ಮಹಾರಾಜನೇ, ಮನುಷ್ಯರ ವಾಣಿಯಿಂದ ಆಡಿದ ಆ ಮಾತುಗಳನ್ನು ರಂತಿದೇವನು ಕೇಳಿ, ಶೀಘ್ರವಾಗಿ ಆ ಗೋವನ್ನು ತಡೆದನು.

ಸ್ಥಾಪಯಾಮಾಸ ಗೋಸತ್ರಮಥ ತಂ ಪಾರ್ಥಿವರ್ಷಭಃ ।
ಸತ್ರೋತ್ಸೃಷ್ಟಾಃ ಪರಿತ್ಯಕ್ತಾ ಗಾವೋಽನ್ಯಾ ಸಮುಪಾಶ್ರಿತಾಃ ॥೧೭॥

ಅನಂತರ ಆ ಪಾರ್ಥಿವಶ್ರೇಷ್ಠನು ಗೋಸತ್ರವನ್ನು ಅಲ್ಲಿಗೆ ನಿಲ್ಲಿಸಿದನು. ಸತ್ರದಲ್ಲಿ ಉಪಯೋಗಿಸದೆ ಪರಿತ್ಯಕ್ತವಾದ ಬೇರೆ ಗೋವುಗಳು ಅವನ ಬಳಿ ಹಾಗೆಯೇ ಉಳಿದವು.

ಯಾಸ್ತಸ್ಯ ಗಾವೋ ನಿಹತಾಃ ಗಾವೋ ಯಜ್ಞೇ ಮಹಾತ್ಮನಃ ।
ತಾ ಗೋಲೋಕಮುಪಾಜಗ್ಮುಃ ಪ್ರೋಕ್ಷಿತಾ ಬ್ರಹ್ಮವಾದಿಭಿಃ ॥೧೮॥

ಆ ಮಹಾತ್ಮನ ಯಜ್ಞದಲ್ಲಿ ಹತವಾದ ಗೋವುಗಳು ಬ್ರಹ್ಮವಾದಿಗಳಿಂದ ಮಂತ್ರಗಳಿಂದ ಪ್ರೋಕ್ಷಿಸಲ್ಪಟ್ಟು ಗೋಲೋಕವನ್ನು ಸೇರಿದವು.

ರಂತಿದೇವೋಽಪಿ ರಾಜರ್ಷಿರಿಷ್ಟ್ವಾ ಯಜ್ಞಂ ಯಥಾವಿಧಿ ।
ತತಃ ಸಖ್ಯಂ ಸುರಪತೇಸ್ತ್ರಿದಿವಂ ಚಾಕ್ಷಯಂ ಯಯೌ ॥೧೯॥

ರಾಜರ್ಷಿಯಾದ ರಂತಿದೇವನೂ ಕೂಡ ವಿಧಿಪ್ರಕಾರವಾಗಿ ಯಜ್ಞವನ್ನು ಮಾಡಿ ಇಂದ್ರನ ಸಖ್ಯವನ್ನು ಸಂಪಾದಿಸಿ ಅಕ್ಷಯವಾದ ಸ್ವರ್ಗಕ್ಕೆ ಹೋದನು.

ಫೇನಪೋ ದಿವಿ ಗೋಲೋಕೇ ಮುಮುದೇ ಶಾಶ್ವತೀಃ ಸಮಾಃ ।
ಅವಶಿಷ್ಟಾಶ್ಚ ಯಾ ಗಾವಸ್ತಾ ಬಭೂವುರ್ವನೇಚರಾಃ ॥೨೦॥

ಫೇನಪನಾದ ಭಾರ್ಗವನು ಸ್ವರ್ಗದಲ್ಲಿ ಗೋಲೋಕದಲ್ಲಿ ಬಹುಕಾಲದವರೆಗೆ ಸಂತೋಷದಿಂದ ಇದ್ದನು. ಉಳಿದ ಗೋವುಗಳು ಭೂಮಿಯಲ್ಲಿ ಕಾಡಿನಲ್ಲಿ ತಿರುಗಾಡಿದವು.

ಫೇನಪಾಖ್ಯಾನಮೇತತ್ ತೇ ಗವಾಂ ಮಾಹಾತ್ಮ್ಯಮೇವ ಚ ।
ಕಥಿತಂ ಪಾವನಂ ಪುಣ್ಯಂ ಕೃಷ್ಣದ್ವೈಪಾಯನೇರಿತಮ್ ॥೨೧॥

ನಾನು ಕೃಷ್ಣದ್ವೈಪಾಯನರು ಹೇಳಿದ ಈ ಪವಿತ್ರವಾದ, ಪುಣ್ಯವಾದ ಫೇನಪಾಖ್ಯಾನವನ್ನು ಮತ್ತು ಗೋವಿನ ಮಾಹಾತ್ಮ್ಯೆಯನ್ನು ನಿನಗೆ ಹೇಳಿದ್ದೇನೆ.

ನಾರಾಯಣೋಽಪಿ ಭಗವಾನ್ ದೃಷ್ಟ್ವಾ ಗೋಷು ಪರಂ ಯಶಃ ।
ಶು(ಶಿ)ಶ್ರೂಷಾಂ ಪರಮಾಂ ಚಕ್ರೇ ಭಕ್ತಿಂ ಚ ಭರತರ್ಷಭ ॥೨೨॥

ಭಗವಂತನಾದ ನಾರಾಯಣನೂ ಸಹ ಗೋವುಗಳ ಮಾಹಾತ್ಮೆಯನ್ನು ನೋಡಿ ಗೋವುಗಳ ಸೇವೆಯನ್ನು ಮತ್ತು ಗೋವಿನಲ್ಲಿ ಭಕ್ತಿಯನ್ನು ಮಾಡಿದನು.

ತಸ್ಮಾತ್ ತ್ವಮಪಿ ರಾಜೇಂದ್ರ ಗಾ ವೈ ಪೂಜಯ ಭಾರತ ।
ದ್ವಿಜೇಭ್ಯಶ್ಚೈವ ಸತತಂ ಪ್ರಯಚ್ಛ ಕುರುಸತ್ತಮ ॥೨೩॥

ಎಲೈ ರಾಜೇಂದ್ರನೇ, ಆದ್ದರಿಂದ ನೀನೂ ಸಹ ಗೋವುಗಳನ್ನು ಪೂಜಿಸು. ಎಲೈ ಭಾರತನೇ, ಕುರುಶ್ರೇಷ್ಠನೇ, ಬ್ರಾಹ್ಮಣರಿಗೆ ಸತತವಾಗಿ ಗೋದಾನವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಭಾರ್ಗವೋಪಾಖ್ಯಾನಸಮಾಪ್ತಿರ್ನಾಮ
ಅಷ್ಟಾದಶಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತೊಂಬತ್ತನೆಯ ಅಧ್ಯಾಯ

ಗೋಮಹಿಮೆ. ಶ್ರೇಷ್ಠದಾನ ವಿಷಯದಲ್ಲಿ ವ್ಯಾಸ-ಶುಕ ಸಂವಾದ.

ಯುಧಿಷ್ಠಿರಃ

ಪವಿತ್ರಾಣಾಂ ಪವಿತ್ರಂ ಯಚ್ಛ್ರೇಷ್ಠಂ ಲೋಕೇಷು ಪೂಜಿತಮ್ ।
ಮಹಾವ್ರತಂ ಮಹಾಭಾಗ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ- ಎಲೈ ಮಹಾನುಭಾವನೇ, ಪಿತಾಮಹನೇ, ಪವಿತ್ರವಾದವುಗಳಲ್ಲಿ ಪವಿತ್ರವಾದ, ಲೋಕದಲ್ಲಿ ಪೂಜಿತವಾದ, ಶ್ರೇಷ್ಠವಾದ ಮಹಾವ್ರತವನ್ನು ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪಿತುಃ ಪುತ್ರಸ್ಯ ಸಂವಾದಂ ವ್ಯಾಸಸ್ಯ ಚ ಶುಕಸ್ಯ ಚ ॥೨॥

ಭೀಷ್ಮ- ಈ ವಿಷಯದಲ್ಲಿಯೂ ಸಹ ತಂದೆ-ಮಗನಾದ ವ್ಯಾಸ-ಶುಕರಿಗೆ ನಡೆದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಋಷೀಣಾಮುತ್ತಮಂ ಕೃಷ್ಣಂ ಭಾವಿತಾತ್ಮಾನಮಚ್ಯುತಮ್ ।
ಪಾರಂಪರ್ಯವಿಶೇಷಜ್ಞಂ ಸರ್ವಶಾಸ್ತ್ರಾರ್ಥಕೋವಿದಮ್ ॥೩॥

ಕೃತಶೌಚಃ ಶುಕಸ್ತತ್ರ ಕೃತಜಪ್ಯಃ ಕೃತಾಹ್ನಿಕಃ ।
ಪರಂ ನಿಯಮಮಾಸ್ಥಾಯ ಪರಂ ಧರ್ಮಮುಪಾಶ್ರಿತಃ ॥೪॥

ಪ್ರಣಮ್ಯ ಶಿರಸಾ ವ್ಯಾಸಂ ಸೂಕ್ಷ್ಮತತ್ತ್ವಾರ್ಥದರ್ಶಿನಮ್ ।
ಶುಕಃ ಪಪ್ರಚ್ಛ ವೈ ಪ್ರಶ್ನಂ ದಾನಧರ್ಮಕುತೂಹಲಃ ॥೫॥

ಋಷಿಗಳಲ್ಲಿ ಶ್ರೇಷ್ಠರಾದ, ಪರಿಶುದ್ಧ ಮನಸ್ಸುಳ್ಳ, ಅಚ್ಯುತರಾದ, ಸಂಪ್ರದಾಯ ವಿಶೇಷಗಳನ್ನು ತಿಳಿದ, ಸರ್ವಶಾಸ್ತ್ರಾರ್ಥಕೋವಿದರಾದ, ಸರ್ವತತ್ವಾರ್ಥ ನಿಶ್ಚಯವುಳ್ಳ ವೇದವ್ಯಾಸರನ್ನು ಕುರಿತು ಬಹಳ ನಿಯಮವನ್ನು ಆಚರಿಸುವ, ಶ್ರೇಷ್ಠವಾದ ಧರ್ಮವನ್ನು ಅನುಸರಿಸುವ ಶುಕರು ಸ್ನಾನವನ್ನು ಮಾಡಿ ಶುಚಿಯಾಗಿ ಆಹ್ನಿಕ ಮತ್ತು ಜಪಗಳನ್ನು ಮುಗಿಸಿ, ಶಿರಸಾ ಪ್ರಣಾಮವನ್ನು ಮಾಡಿ ದಾನಧರ್ಮಗಳಲ್ಲಿ ಕುತೂಹಲವನ್ನು ಹೊಂದಿ ಪ್ರಶ್ನೆಯನ್ನು ಮಾಡಿದರು.

ಬಹುಚಿತ್ರಾಣಿ ದಾನಾನಿ ಬಹುಶಃ ಶಂಸಸೇ ಮುನೇ ।
ಮಹಾರ್ಥಂ ಪಾವನಂ ಪುಣ್ಯಂ ಕಿಂಸ್ವಿದ್ ದಾನಂ ಮಹಾಫಲಮ್ ॥೬॥

ಎಲೈ ಋಷಿಗಳೇ, ನೀವು ವಿಚಿತ್ರವಾದ ಅನೇಕ ದಾನಗಳನ್ನು ಅನೇಕ ಬಾರಿ ಹೊಗಳುತ್ತಿದ್ದೀರಿ. ಮಹಾಫಲಪ್ರದವೂ, ಪವಿತ್ರವೂ, ಪುಣ್ಯಪ್ರದವೂ ಆದ ದಾನವು ಯಾವುದು?

ಕೇನ ದುರ್ಗಾಣಿ ತರತಿ ಕೇನ ದುರ್ಗಾನವಾಪ್ನುತೇ ।
ಕೇನ ವಾ ಮಹದಾಪ್ನೋತಿ ಇಹ ಲೋಕೇ ಪರತ್ರ ಚ ॥೭॥

ಯಾವ ದಾನದಿಂದ ಕಷ್ಟಗಳನ್ನು ದಾಟುತ್ತಾನೆ? ಯಾವ ದಾನಗಳಿಂದ ಪಡೆಯಲು ಅಸಾಧ್ಯವಾದ ದೇವಲೋಕವನ್ನು ಹೊಂದುತ್ತಾನೆ? ಯಾವ ದಾನದಿಂದ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಮಹತ್ವವನ್ನು ಪಡೆಯುತ್ತಾನೆ? (ಲಕ್ಷಾಲಂಕಾರ).

ಕೇ ವಾ ಯಜ್ಞಸ್ಯ ವೋಢಾರಃ ಕೇಷು ಯಜ್ಞಃ ಪ್ರತಿಷ್ಠಿತಃ ।
ಕಿಂಚ ಯಜ್ಞಸ್ಯ ಯಜ್ಞತ್ವಂ ಕಿಂಚ ಯಜ್ಞಸ್ಯ ಭೇಷಜಮ್ ।
ಯಜ್ಞಾನಾಮುತ್ತಮಂ ಕಿಂಚ ತದ್ ಭವಾನ್ ಪ್ರಬ್ರವೀತು ಮೇ ॥೮॥

ಯಜ್ಞವನ್ನು ನಿರ್ವಹಿಸುವವರು ಯಾರು? ಯಜ್ಞವು ಯಾರಲ್ಲಿ ಪ್ರತಿಷ್ಠಿತವಾಗಿದೆ? ಯಜ್ಞವೆಂದರೇನು? ಯಜ್ಞಕ್ಕೆ ಯಾವ ಔಷಧಿ ಇದೆ? ಯಜ್ಞಗಳಲ್ಲಿ ಯಾವುದು ಶ್ರೇಷ್ಠವಾದುದು? ಇದನ್ನು ನೀವು ನನಗೆ ಹೇಳಬೇಕು.

ಭೀಷ್ಮಃ

ಸ ತಸ್ಮೈ ಭಜಮಾನಾಯ ಜಾತಕೌತೂಹಲಾಯ ಚ ।
ವ್ಯಾಸೋ ವ್ರತನಿಧಿಃ ಪ್ರಾಹ ಗವಾಮಿದಮನುತ್ತಮಮ್ ॥೯॥

ಭೀಷ್ಮ– ವ್ರತನಿಧಿಗಳಾದ ವ್ಯಾಸರು ಕುತೂಹಲದಿಂದ ತಮ್ಮನ್ನು ಭಜಿಸಿ ಪ್ರಶ್ನೆ ಮಾಡುತ್ತಿದ್ದ ಶುಕರನ್ನು ಕುರಿತು ಶ್ರೇಷ್ಠವಾದ ಈ ಗೋದಾನವನ್ನು ಹೇಳಿದರು.

ಧನ್ಯಂ ಯಶಸ್ಯಮಾಯುಷ್ಯಂ ಲೋಕೇ ಶ್ರುತಿಸುಖಾವಹಮ್ ।
ಯತ್ ಪವಿತ್ರಂ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಮ್ ॥೧೦॥

ಸರ್ವಪಾಪಪ್ರಶಮನಂ ತತ್ ಸಮಾಸೇನ ಮೇ ಶೃಣು ॥೧೧॥

ಧನ್ಯವೂ, ಕೀರ್ತಿಪ್ರದವೂ, ಆಯುಃಪ್ರದವೂ ಲೋಕದಲ್ಲಿ ಶ್ರವಣದಿಂದ ಸುಖವನ್ನು ಕೊಡುವುದೂ ಆದ, ಪವಿತ್ರಗಳಲ್ಲಿ ಪವಿತ್ರವಾದ, ಮಂಗಳಗಳಲ್ಲಿ ಮಂಗಳವಾದ, ಸರ್ವಪಾಪ ಪರಿಹಾರಕವಾದ ವಿಷಯವನ್ನು ಸಂಕ್ಷೇಪವಾಗಿ ನನ್ನಿಂದ ಕೇಳು.

ಯದಿದಂ ತಿಷ್ಠತೇ ಲೋಕೇ ಜಗತ್ ಸ್ಥಾವರಜಂಗಮಮ್ ।
ಗಾವಸ್ತಾಃ ಪ್ರಾಪ್ಯ ತಿಷ್ಠಂತೇ ಗೋಲೋಕೇ ಪುಣ್ಯದರ್ಶನಾಃ ॥೧೨॥

ಸ್ಥಾವರ-ಜಂಗಮಾತ್ಮಕವಾದ ಈ ಲೋಕವು ಏನಿದೆಯೋ ಗೋವುಗಳು ಅವುಗಳನ್ನು ಗೋಲೋಕದಲ್ಲಿ ಹೊಂದಿ ಪುಣ್ಯದರ್ಶನಗಳಾಗಿ ಬದುಕಿವೆ.

ಮಾತರಃ ಸರ್ವಭೂತಾನಾಂ ವಿಶ್ವಸ್ಯ ಜಗತಶ್ಚ ಹ ।
ರುದ್ರಾಣಾಮಥ ಸಾಧ್ಯಾನಾಂ ಗಾವ ಏವ ತು ಮಾತರಃ ॥೧೩॥

ಗೋವುಗಳೇ ಎಲ್ಲ ಪ್ರಾಣಿಗಳಿಗೂ, ಎಲ್ಲ ಜಗತ್ತಿಗೂ, ರುದ್ರರಿಗೂ, ಸಾಧ್ಯರಿಗೂ ಮಾತೆಯರು.

ರುದ್ರಾಣಾಂ ಮಾತರೋ ಹ್ಯೇತಾ ಆದಿತ್ಯಾನಾಂ ಸ್ವಸಾ ಸ್ಮೃತಾಃ ।
ವಸೂನಾಂ ಚ ದುಹಿತ್ರ ಯಸ್ತಾ ಬ್ರಹ್ಮಸಂತಾನಮೂಲಜಾಃ ॥೧೪॥

ಇವು ರುದ್ರರ ತಾಯಿಯರು, ಸೂರ್ಯನ ತಂಗಿಯರು, ವಸುಗಳ ಪುತ್ರಿಯರು ಮತ್ತು ಬ್ರಹ್ಮಸಂತತಿಯಲ್ಲಿ ಬಂದವರು ಎಂದು ಹೇಳಲ್ಪಡುತ್ತದೆ.

ಯಾಸಾಮಧಿಪತಿಃ ಪೂಷಾ ಮರುತೋ ಬಾಲಬಂಧನಾಃ ।
ಐಶ್ವರ್ಯಂ ವರುಣೋ ರಾಜಾ ವಿಶ್ವೇದೇವಾ ಸಮಾಶ್ರಿತಾಃ ॥೧೫॥

ಅವುಗಳಿಗೆ ಪೂಷಾ ದೇವತೆಯು ಅಧಿಪತಿ. ಬಾಲದಲ್ಲಿ ವಾಯುದೇವನಿದ್ದಾನೆ. ಅವುಗಳ ಐಶ್ವರ್ಯದಲ್ಲಿ ವರುಣನಿದ್ದಾನೆ. ವಿಶ್ವೇದೇವತೆಗಳು ಎಲ್ಲ ದೇಹದಲ್ಲಿ ಇದ್ದಾರೆ.

ಯ ಏವಂ ವೇದ ತಾ ಗಾವೋ ಮಾತರೋ ದೇವಪೂಜಿತಾಃ ।
ಸ ವಿಪ್ರೋ ಬ್ರಹ್ಮಲೋಕಾಯ ಗವಾಂ ಲೋಕಾಯ ವಾ ಧ್ರುವಃ ॥೧೬॥

ಯಾವನು ಹೀಗೆ ಗೋವುಗಳು ದೇವತೆಗಳೆಂದು ಪೂಜಿಸುತ್ತಾನೆಯೋ, ತಾಯಿಯರು ಎಂದು ತಿಳಿಯುತ್ತಾನೆಯೋ ಅಂತಹ ಬ್ರಾಹ್ಮಣನು ಬ್ರಹ್ಮಲೋಕಕ್ಕಾಗಲೀ ಗೋಲೋಕಕ್ಕಾಗಲೀ ನಿಶ್ಚಿತವಾಗಿ ಹೋಗುತ್ತಾನೆ.

ಗಾವಸ್ತು ನಾವಮನ್ಯೇತ ಕರ್ಮಣಾ ಮನಸಾ ಗಿರಾ ।
ಗವಾಂ ಸ್ಥಾನಂ ಪರಂ ಲೋಕೇ ಪ್ರಾರ್ಥಯೇದ್ ಯಃ ಪರಾಂ ಗತಿಮ್।
ನ ಪದ್ಭ್ಯಾಂ ತಾಡಯೇದ್ ಗಾವೋ ನ ದಂಡೇನ ನ ಮುಷ್ಟಿನಾ ॥೧೭॥

ಗೋವುಗಳನ್ನು ಕರ್ಮದಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ ಅವಮಾನಗೊಳಿಸಬಾರದು. ಯಾವನು ಶ್ರೇಷ್ಠವಾದ ಗತಿಯನ್ನು ಬಯಸುತ್ತಾನೆಯೋ ಅವನಿಗೆ (ಅನುಷ್ಠಾನವನ್ನು ಮಾಡಲು) ಗೋವುಗಳ ಸ್ಥಾನವು (ಗೋಶಾಲೆಯು) ಶ್ರೇಷ್ಠವಾದುದು. ಗೋವುಗಳನ್ನು ಪಾದದಿಂದಾಗಲೀ, ಮುಷ್ಟಿಯಿಂದಾಗಲೀ ಅಥವಾ ದಂಡದಿಂದಾಗಲೀ ಹೊಡೆಯಬಾರದು.

ಇಮಾಂ ವಿದ್ಯಾಮುಪಾಶ್ರಿತ್ಯ ಪಾವನೀಂ ಬ್ರಹ್ಮನಿರ್ಮಿತಾಮ್ ।
ಮಾತೄಣಾಮನುಪಾತೇ ಚ ನ ಗೋಮಧ್ಯೇ ನ ಗೋವ್ರಜೇ ॥೧೮॥

ನರೋ ಮೂತ್ರಪುರೀಷಸ್ಯ ದೃಷ್ಟ್ವಾ ಕುರ್ಯಾದ್ ವಿಸರ್ಜನಮ್ ॥೧೯॥

ಬ್ರಹ್ಮದೇವರಿಂದ ಬೋಧಿಸಲ್ಪಟ್ಟ ಪವಿತ್ರವಾದ ಈ ವಿದ್ಯೆಯನ್ನು ತಿಳಿದು ಆಶ್ರಯಿಸಿದವನು ತಾಯಿಯರಾದ ಅವುಗಳ ಮಾರ್ಗದಲ್ಲಿ ಅಥವಾ ಗೋವುಗಳ ಮಧ್ಯದಲ್ಲಿ ಅಥವಾ ಗೋವುಗಳ ಸಮೂಹದಲ್ಲಿ ಮೂತ್ರ-ಮಲ ವಿಸರ್ಜನೆಯನ್ನು ಮಾಡಬಾರದು.

ಶುದ್ಧಾಶ್ಚಂದನಶೀತಾಂಗ್ಯಶ್ಚಂದ್ರರಶ್ಮಿಸಮಪ್ರಭಾಃ ।
ಸೌಮ್ಯಾಃ ಸುರಭ್ಯಃ ಸುಭಗಾ ಗಾವೋ ಗುಗ್ಗುಳುಗಂಧಯಃ ॥೨೦॥

ಗೋವುಗಳು ಶುದ್ಧವಾದವುಗಳು, ಚಂದನದಂತೆ ತಂಪಾದ ಅವಯವವುಳ್ಳವು. ಚಂದ್ರನ ಕಿರಣದಂತೆ ಕಾಂತಿಯನ್ನು ಹೊಂದಿರುವಂತಹವುಗಳು. ಸೌಮ್ಯ ಸ್ವಭಾವವನ್ನು ಹೊಂದಿರುವಂತಹವುಗಳು. ಸುಗಂಧವನ್ನೂ, ಸೌಮ್ಯರೂಪವನ್ನೂ, ಕೆಲವು ಗೋವುಗಳು ಗುಗ್ಗುಳ ಗಂಧವನ್ನೂ ಹೊಂದಿರುವಂತಹವುಗಳು.

ಸರ್ವೇ ದೇವಾವಿಶನ್ ಗಾವಃ ಸಮುದ್ರಮಿವ ಸಿಂಧವಃ ।
ದಿವಂ ಚೈವಾಂತರಿಕ್ಷಂ ಚ ಗವಾಂ ವ್ಯುಷ್ಟಿಂ ಸಮಶ್ನುತೇ ॥೨೧॥

ಸಮುದ್ರವನ್ನು ನದಿಗಳು ಪ್ರವೇಶಿಸುವಂತೆ ಎಲ್ಲ ದೇವತೆಗಳೂ, ದ್ಯುಲೋಕವೂ ಮತ್ತು ಅಂತರಿಕ್ಷಲೋಕವೂ ಗೋವುಗಳನ್ನು ಪ್ರವೇಶಿಸಿದರು. ಇದನ್ನು ತಿಳಿದವರು ಗೋಸಮೃದ್ಧಿಯನ್ನು ಹೊಂದುತ್ತಾರೆ.

ದಧಿನಾ ಜುಹುಯಾದಗ್ನಿಂ ದಧಿನಾ ಸ್ವಸ್ತಿ ವಾಚಯೇತ್ ।
ದಧಿ ದದ್ಯಾಚ್ಚ ಪ್ರಾಶೇತ ಗವಾಂ ವ್ಯುಷ್ಟಿಂ ಸಮಶ್ನುತೇ ॥೨೨॥

ಮೊಸರಿನಿಂದ ಹೋಮವನ್ನು ಮಾಡಬೇಕು, ಸ್ವಸ್ತಿವಾಚನವನ್ನು ಮಾಡಿಸಬೇಕು. ದಧಿಯನ್ನು ದಾನ ಕೊಡಬೇಕು. ದಧಿಯನ್ನು ಪ್ರಾಶನ ಮಾಡಬೇಕು. ಇದರಿಂದ ಗೋಸಮೃದ್ಧಿಯು ಉಂಟಾಗುತ್ತದೆ.

ಘೃತೇನ ಜುಹುಯಾದಗ್ನಿಂ ಘೃತೇನ ಸ್ವಸ್ತಿ ವಾಚಯೇತ್ ।
ಘೃತಮಾಲಭ್ಯ ಪ್ರಾಶ್ನೀಯಾದ್ ಗವಾಂ ವ್ಯುಷ್ಟಿಂ ಸಮಶ್ನುತೇ ॥೨೩॥

ಘೃತದಿಂದ ಅಗ್ನಿಯಲ್ಲಿ ಹೋಮವನ್ನು ಮಾಡಬೇಕು. ಘೃತದಿಂದ ಸ್ವಸ್ತಿವಾಚನವನ್ನು ಮಾಡಿಸಬೇಕು. ಘೃತವನ್ನು ಪಾನಮಾಡಬೇಕು. ಇದರಿಂದ ಗೋಸಮೃದ್ಧಿಯು ಉಂಟಾಗುತ್ತದೆ.

ಗಾವಃ ಸಂಜೀವನಾ ಯಾಸ್ತು ಗಾವೋ ದಾನಮನುತ್ತಮಮ್ ।
ತಾಃ ಪುಣ್ಯಗೋಪಾಃ ಸುಫಲಾ ಭಜಮಾನಂ ಭಜಂತು ಮಾಮ್ ॥೨೪॥

ಯಾವ ಗೋವುಗಳು ಜೀವನಪ್ರದವಾಗಿವೆಯೋ, ಯಾವ ಗೋದಾನವು ಶ್ರೇಷ್ಠವಾದ ದಾನವಾಗಿದೆಯೋ ಅಂತಹ ಪುಣ್ಯವನ್ನು ರಕ್ಷಿಸುವ, ಒಳ್ಳೆಯ ಫಲವನ್ನು ಕೊಡುವ ಗೋವುಗಳು ಅವುಗಳನ್ನು ಭಜಿಸುವ ನನ್ನನ್ನು ಭಜಿಸಲಿ (ಎಂದು ಪ್ರಾರ್ಥಿಸಬೇಕು).

ಯೇನ ದೇವಾಃ ಪವಿತ್ರೇಣ ಸ್ವರ್ಗಲೋಕಮಿತೋ ಗತಾಃ ।
ತತ್ ಪವಿತ್ರಂ ಪವಿತ್ರಾಣಾಂ ಮಮ ಮೂರ್ಧ್ನಿ ಪ್ರತಿಷ್ಠಿತಮ್ ॥೨೫॥

ಯಾವ ಪವಿತ್ರಗಳಲ್ಲಿ ಪವಿತ್ರವಾದ ವಸ್ತುವಿನಿಂದ ದೇವತೆಗಳು ಇಲ್ಲಿಂದ ಸ್ವರ್ಗಲೋಕಕ್ಕೆ ಹೋದರೋ ಅಂತಹ ಪವಿತ್ರವಾದ ಗೋವುಗಳು ಯಾವಾಗಲೂ ನನ್ನ ತಲೆಯ ಮೇಲೆ ಇರಲಿ.

ವೀಣಾಮೃದಂಗಪಣವಾ ಗವಾಂ ಗಾತ್ರಂ ಪ್ರತಿಷ್ಠಿತಾಃ ।
ಕ್ರೀಡಾರತಿವಿಹಾರಾರ್ಥೇ ತ್ರಿಷು ಲೋಕೇಷು ವರ್ತತೇ ॥೨೬॥

ಗೋವುಗಳ ಕ್ರೀಡೆಗಾಗಿ, ಸಂತೋಷಕ್ಕಾಗಿ, ವಿಹಾರಕ್ಕಾಗಿ ಮಂತ್ರಪೂರ್ವಕವಾಗಿ ಸ್ಥಾಪಿಸಲ್ಪಟ್ಟ ವೀಣೆ, ಮೃದಂಗ, ಪಣವಗಳು ಮೂರುಲೋಕಗಳಲ್ಲಿಯೂ ಇವೆ.

ನ ತತ್ರ ದೇವಾ ವರ್ತಂತೇ ನಾಗ್ನಿಹೋತ್ರಾಣಿ ಜುಹ್ವತಿ ।
ನ ಯಜ್ಞೈರಿಜ್ಯತೇ ಚಾತ್ರ ಯತ್ರ ಗೌರ್ವೈ ನ ದುಹ್ಯತೇ ॥೨೭॥

ಎಲ್ಲಿ ಗೋವು ಹಾಲು ಕರೆಯುವುದಿಲ್ಲವೋ ಅಲ್ಲಿ ದೇವತೆಗಳು ಇರುವುದಿಲ್ಲ. ಅಗ್ನಿಹೋತ್ರವು ನಡೆಯುವುದಿಲ್ಲ ಮತ್ತು ಯಜ್ಞಗಳೂ ನಡೆಯುವುದಿಲ್ಲ.

ಕ್ಷೀರಂ ದಧಿ ಘೃತಂ ಯಾಸಾಂ ರಸಾನಾಮುತ್ತಮೋ ರಸಃ ।
ಅಮೃತಪ್ರಭವಾ ಗಾವಃ ತ್ರೈಲೋಕ್ಯಂ ಯೇನ ಜೀವತಿ ॥೨೮॥

ಯಾವ ಗೋವುಗಳ ದಧಿ, ಘೃತ, ಕ್ಷೀರಗಳು ರಸಗಳಲ್ಲಿ ಉತ್ತಮವಾದ ರಸವೋ ಅಂತಹ ಅಮೃತವನ್ನು ಕೊಡುವ ಗೋವುಗಳಿಂದ ಮೂರುಲೋಕವೂ ಜೀವಿಸುತ್ತದೆ.

ಇಡಾಮಾಹೂಯ ಧೇನುಂ ಚ ಸವತ್ಸಾಂ ಯಜ್ಞಮಾತರಮ್ ।
ಉಪಾಹ್ವಯಂತಿ ಯಂ ವಿಪ್ರಾ ಗಾವೋ ಯಜ್ಞಹವಿಷ್ಕೃತಾಃ ॥೨೯॥

ಅನ್ನಪ್ರದವಾದ, ವತ್ಸಸಹಿತವಾದ, ಯಜ್ಞಮಾತೃವಾದ ಗೋವನ್ನು ಯಜ್ಞದಲ್ಲಿ ಆಹ್ವಾನಿಸುತ್ತಾರೆ. ಗೋವುಗಳು ಯಜ್ಞದ ಹವಿಸ್ಸಿಗೆ ಕಾರಣವಾದವುಗಳು.

ಯಾ ಮೇಧ್ಯಾ ಪ್ರಥಮಂ ಕರ್ಮ ಇಯಂ ಧೇನುಃ ಸರಸ್ವತೀ ।
ಪೌರ್ಣಮಾಸ್ಯೇನ ವತ್ಸೇನ ಕಾಮಂ ಕಾಮಗುಣಾನ್ವಿತಾ ॥೩೦॥

ಪೂರ್ಣವಾಗಿ ಹತ್ತು ತಿಂಗಳು ತುಂಬಿದ ಕರುವಿನಿಂದ ಸಹಿತವಾದ ಧೇನುವು ಶ್ರೇಷ್ಠವಾದ ಯಜ್ಞಾದಿಕರ್ಮೋಪಯೋಗಿ. ಅಂತಹ ಧೇನುವನ್ನು ಸರಸ್ವತೀ ಎಂದು

ಹೇಳುತ್ತಾರೆ. ಬಯಸುವ ಎಲ್ಲಾ ಗುಣಗಳಿಂದ ಕೂಡಿದ ಆ ಧೇನುವು ಎಲ್ಲ ಕಾಮಗಳನ್ನೂ ಕೊಡುತ್ತದೆ (ಲಕ್ಷಾಲಂಕಾರ).

ಯತ್ರ ಸರ್ವಮಿದಂ ಪ್ರೋತಂ ಯತ್ ಕಿಂಚಿತ್ ಜಂಗಮಂ ಜಗತ್ ।
ಸಾ ಗೌರ್ವೈ ಪ್ರಥಮಾ ಪುಣ್ಯಾ ಸರ್ವಭೂತಹಿತೇ ರತಾ ॥೩೧॥

ಈ ಜಂಗಮವಾದ ಪ್ರಪಂಚವು ಯಾವುದನ್ನು ಆಶ್ರಯಿಸಿಕೊಂಡಿದೆ ಎಂದರೆ ಅದು ಗೋವು. ಅದು ಶ್ರೇಷ್ಠವಾದ, ಪುಣ್ಯಪ್ರದವಾದ, ಸರ್ವಭೂತಹಿತದಲ್ಲಿ ರತವಾದ ವಸ್ತು.

ಧಾರಣಾಃ ಪಾವನಾಃ ಪುಣ್ಯಾ ಭಾವನಾ ಭೂತಭಾವನಾಃ ।
ಗಾವೋ ಮಾಮಭಿರಕ್ಷಂತು ಇಹ ಲೋಕೇ ಪರತ್ರ ಚ ॥೩೨॥

ಲೋಕವನ್ನು ಧರಿಸುವ, ಪವಿತ್ರೀಕರಿಸುವ, ಪುಣ್ಯವನ್ನು ಕೊಡುವ, ಶುದ್ಧಿಯನ್ನು ಉಂಟುಮಾಡುವ, ಪ್ರಾಣಿಗಳನ್ನು ಸೃಷ್ಟಿಸುವ ಗೋವುಗಳು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ನನ್ನನ್ನು ರಕ್ಷಿಸಲಿ.

ಏಷ ಯಜ್ಞಃ ಸಹೋಪಾಂಗಃ ಸ್ವಿಷ್ಟಶ್ಚೈವ ಸದಕ್ಷಿಣಃ ।
ವೇದಾ ಸಹೋಪನಿಷದೋ ಗವಾಂ ರೂಪೇ ಪ್ರತಿಷ್ಠಿತಾಃ ॥೩೩॥

ಅಂಗಗಳಿಂದ ಕೂಡಿ ಒಳ್ಳೆಯ ದಕ್ಷಿಣೆಯಿಂದ ಕೂಡಿದ ಈ ಯಜ್ಞ, ಉಪನಿಷತ್ ಸಹಿತವಾದ ವೇದಗಳು ಎಲ್ಲವೂ ಗೋವಿನ ಶರೀರದಲ್ಲಿ ಪ್ರತಿಷ್ಠಿತವಾಗಿವೆ.

ಏತತ್ ತಾತ ಮಯಾ ಪ್ರೋಕ್ತಂ ಗವಾಮಿಹ ಪರಂ ಮತಮ್ ।
ಸರ್ವತಃ ಶ್ರಾವಯೇನ್ನಿತ್ಯಂ ಪ್ರಯತೋ ಬ್ರಹ್ಮಸಂಸದಿ ॥೩೪॥

ಎಲೈ ಪ್ರೀತಿಪಾತ್ರನೇ, ನಾನು ಗೋವಿನ ವಿಷಯದಲ್ಲಿ ಹೇಳಿದುದು ಅತ್ಯಂತ ಶ್ರೇಷ್ಠವಾದುದು ಎಂದು ತಿಳಿಯಲ್ಪಡುತ್ತದೆ. ಈ ಗೋಮಹಿಮೆಯನ್ನು ಬ್ರಾಹ್ಮಣರ ಸಭೆಯಲ್ಲಿ ಶ್ರದ್ಧೆಯಿಂದ ನಿತ್ಯವೂ ಶ್ರವಣ ಮಾಡಿಸಬೇಕು.

ಶ್ರುತ್ವಾ ಲಭೇತ ತಾನ್ ಲೋಕಾನ್ ಯೇ ಮಯಾ ಪರಿಕೀರ್ತಿತಾಃ ।
ಶ್ರಾವಯಿತ್ವಾಽಪಿ ಪ್ರೀತಾತ್ಮಾ ಲೋಕಾಂಸ್ತಾನ್ ಪ್ರತಿಪದ್ಯತೇ ॥೩೫॥

ಶ್ರದ್ಧೆಯಿಂದ ಕೇಳುವವನು ನಾನು ಹೇಳಿದ ಎಲ್ಲಾ ಫಲಗಳನ್ನೂ ಪಡೆಯುತ್ತಾನೆ. ಸಂತೋಷದಿಂದ ಶ್ರವಣ ಮಾಡಿಸುವವನೂ ಸಹ ಆ ಲೋಕಗಳನ್ನು ಹೊಂದುತ್ತಾನೆ.

ಧೇನುಮೇಕಾಂ ಸದಾ ದದ್ಯಾದಹನ್ಯಹನಿ ಪಾವನೀಮ್ ।
ತತ್ತಥಾ ಪ್ರಾಪ್ನುಯಾದ್ ವಿಪ್ರಃ ಪಠನ್ ವೈ ಗೋಮತೀಂ ಸದಾ ॥೩೬॥

ಪ್ರತಿದಿವಸವೂ ಪವಿತ್ರವಾದ ಒಂದು ಧೇನುವನ್ನಾದರೂ ದಾನ ಮಾಡಬೇಕು. ಸ್ವೀಕಾರ ಮಾಡುವವನೂ ಸಹ ಗೋಮಹಿಮೆಯ ಕಥೆಯನ್ನು ಹೇಳುತ್ತಾ ಸ್ವೀಕಾರ ಮಾಡಬೇಕು (ಲಕ್ಷಾಲಂಕಾರ).

ಅಥ ಧೇನುರ್ನ ವಿದ್ಯೇತ ತಿಲಧೇನುಮನುತ್ತಮಾಮ್ ।
ದದ್ಯಾದ್ ಗೋಮತಿಕಲ್ಪೇನ ತಾಂ ಧೇನುಂ ಸರ್ವಪಾವನೀಮ್ ॥೩೭॥

ಒಂದು ಪಕ್ಷ ಧೇನುವು ಇಲ್ಲದಿದ್ದರೆ ಶ್ರೇಷ್ಠವಾದ, ಸರ್ವಪಾವನವಾದ ತಿಲ ಧೇನುವನ್ನಾದರೂ ಗೋಮತೀ ಮಂತ್ರ ಉಚ್ಚಾರಪೂರ್ವಕವಾಗಿ ದಾನ ಮಾಡಬೇಕು.

ಆಹ್ನಿಕಂ ಗೋಮತೀಂ ನಿತ್ಯಂ ಯಃ ಪಠೇತ ಸದಾ ನರಃ ।
ಸರ್ವಪಾಪಾತ್ ಪ್ರಮುಚ್ಯೇತ ಪ್ರಯತಾತ್ಮಾ ಯ ಆಚರೇತ್ ॥೩೮॥

ಯಾವ ಮನುಷ್ಯನು ಆಹ್ನಿಕದಂತೆ ನಿತ್ಯವೂ ಗೋಮತೀ ಮಂತ್ರವನ್ನು ಪಠಿಸುತ್ತಾನೆಯೋ ಅಂತಹ ಶ್ರದ್ಧಾಳುವಾದ ಮನುಷ್ಯನು ಎಲ್ಲ ಪಾಪಗಳಿಂದಲೂ ನಿರ್ಮುಕ್ತನಾಗುವನು.

ಘೃತಂ ವಾ ನಿತ್ಯಮಾಲಭ್ಯ ಪ್ರಾಶ್ಯ ವಾ ಗೋಮತೀಂ ಜಪೇತ್ ।
ಸ್ನಾತ್ವಾ ವಾ ಗೋಕರೀಷೇಣ ಪಠನ್ ಪಾಪಾತ್ ಪ್ರಮುಚ್ಯತೇ ॥೩೯॥

ಘೃತವನ್ನು ನಿತ್ಯವೂ ಪಡೆದು ಪ್ರಾಶನವನ್ನು ಮಾಡಿ, ಗೋಮತೀ ಮಂತ್ರವನ್ನು ಜಪಿಸಬೇಕು. ಅಥವಾ ಗೋಮಯವನ್ನು ಲೇಪಿಸಿಕೊಂಡು ಸ್ನಾನವನ್ನು ಮಾಡಿ ಪಠಿಸುವವನು ಪಾಪಗಳಿಂದ ನಿರ್ಮುಕ್ತನಾಗುತ್ತಾನೆ.

ಮನಸಾ ಗೋಮತೀಂ ಜಪ್ಯೇದ್ ಗೋಮತ್ಯಾ ನಿತ್ಯಮಾಹ್ನಿಕಮ್ ।
ನ ತ್ವೇವ ದಿವಸಂ ಕುರ್ಯಾದ್ ವ್ಯರ್ಥಂ ಗೋಮತಿಪಾಠಕಃ ॥೪೦॥

ಗೋಮತಿಯನ್ನು ಮನಸ್ಸಿನಲ್ಲಿ ಜಪಿಸಬೇಕು. ಗೋಮತೀಮಂತ್ರವನ್ನು ಹೇಳಿ ನಿತ್ಯವೂ ಆಹ್ನಿಕವನ್ನು ಮಾಡಬೇಕು. ಗೋಮತಿಯನ್ನು ಜಪಿಸುವವನು ದಿವಸವನ್ನು ವ್ಯರ್ಥವಾಗಿ ಕಳೆಯಬಾರದು.

ಗೋಮತೀಂ ಜಪಮಾನಾ ಹಿ ದೇವಾ ದೇವತ್ವಮಾಪ್ನುವನ್ ।
ಋಷಿತ್ವಮೃಷಯಶ್ಚಾಪಿ ಗೋಮತ್ಯಾ ಸರ್ವಮಾಪ್ನುವನ್ ॥೪೧॥

ದೇವತೆಗಳು ಗೋಮತಿಯ ಜಪವನ್ನು ಮಾಡಿಯೇ ದೇವತ್ವವನ್ನು ಹೊಂದಿದರು. ಋಷಿಗಳೂ ಸಹ ಗೋಮತಿಯ ಜಪದಿಂದ ಋಷಿತ್ವವನ್ನೂ ಮತ್ತು ಸರ್ವಕಾಮಗಳನ್ನು ಹೊಂದಿದರು.

ಬದ್ಧೋ ಬಂಧಾತ್ ಪ್ರಮುಚ್ಯೇತ ಕೃಚ್ಛ್ರಾನ್ಮುಚ್ಯೇತ ಸಂಕಟಾತ್ ।
ಗೋಮತೀಂ ಸೇವತೇ ಯಸ್ತು ಲಭತೇ ಪ್ರಿಯಸಂಗಮಮ್ ॥೪೨॥

ಗೋಮತಿಯ ಸೇವೆಯನ್ನು ಮಾಡುವ ಬದ್ಧನಾದವನು ಬಂಧದಿಂದ ಮುಕ್ತನಾಗುತ್ತಾನೆ. ಕಷ್ಟದಲ್ಲಿರುವವನು ಕಷ್ಟದಿಂದ ಮುಕ್ತನಾಗುತ್ತಾನೆ ಮತ್ತು ಪ್ರಿಯಸಂಗಮವನ್ನು ಹೊಂದುತ್ತಾನೆ.

ಭೀಷ್ಮಃ

ಏತತ್ ಪವಿತ್ರಂ ಕಾರ್ತ್ಸ್ನ್ಯೇನ ಏತದ್ ವ್ರತಮನುತ್ತಮಮ್ ।
ಏತತ್ತು ಪೃಥಿವೀಪಾಲ ಪಾವನಂ ಶೃಣ್ವತಾಂ ಸದಾ ॥೪೩॥

ಭೀಷ್ಮ– ಇದು ಪೂರ್ಣವಾಗಿ ಪವಿತ್ರವಾದುದು. ಇದು ಶ್ರೇಷ್ಠವಾದ ವ್ರತ. ಎಲೈ ರಾಜನೇ, ಇದನ್ನು ಕೇಳುವವರಿಗೆ ಬಹಳ ಪಾವಿತ್ರ್ಯವನ್ನು ಉಂಟುಮಾಡುವಂತಹದು.

ಪುತ್ರಕಾಮಾಶ್ಚ ಯೇ ಕೇಚಿದ್ ಧನಕಾಮಾಶ್ಚ ಮಾನವಾಃ ।
ಅಧ್ವಾನೇ ಚೋರವೈರಿಭ್ಯೋ ಮುಚ್ಯತೇ ಗೋಮತೀಂ ಪಠನ್ ॥೪೪॥

ಪುತ್ರಕಾಮರಾದವರು ಪುತ್ರರನ್ನೂ, ಧನಕಾಮರಾದ ಮಾನವರು ಧನವನ್ನೂ ಪಡೆಯುತ್ತಾರೆ. ದಾರಿಯಲ್ಲಿ ಹೋಗುವವರು ಗೋಮತಿಯನ್ನು ಪಠಿಸಿ ಚೋರರಿಂದಲೂ, ವೈರಿಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ.

ಪೂರ್ವವೈರಾನುಬಂಧೇಷು ರಣೇ ಚಾಪ್ಯಾತತಾಯಿನಃ ।
ಲಭತೇ ಜಯಮೇವಾಶು ಸದಾ ಗೋಮತಿಪಾಠತಃ ॥೪೫॥

ಪೂರ್ವವೈರದ ನಿಮಿತ್ತದಿಂದಾಗಿ ರಣರಂಗದಲ್ಲಿ ಶಸ್ತ್ರವನ್ನು ಹಿಡಿದು ಯುದ್ಧವನ್ನು ಮಾಡುವ ಕ್ಷತ್ರಿಯನು ಗೋಮತಿಯ ಪಾಠವನ್ನು ಮಾಡಿದರೆ ಶೀಘ್ರವಾಗಿ ಯಾವಾಗಲೂ ಜಯವನ್ನೇ ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ವ್ಯಾಸಶುಕಸಂವಾದೋ ನಾಮ
ಏಕೋನವಿಂಶತ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತನೆಯ ಅಧ್ಯಾಯ

ಕಪಿಲೋಪಜೀವನವಿಷಯದಲ್ಲಿ ವ್ಯಾಸ-ಶುಕ ಸಂವಾದ.

ಶುಕಃ

ಕ್ಷತ್ರಿಯಾಶ್ಚೈವ ಶೂದ್ರಾಶ್ಚ ಮಂತ್ರಹೀನಾಶ್ಚ ಯೇ ದ್ವಿಜಾಃ ।
ಕಪಿಲಾಮುಪಜೀವಂತಿ ಕಥಮೇತತ್ ಪಿತರ್ಭವೇತ್ ॥೧॥

ಶುಕ– ಕ್ಷತ್ರಿಯರು, ಶೂದ್ರರು ಮತ್ತು ಮಂತ್ರಹೀನರಾದ ಬ್ರಾಹ್ಮಣರು ಕಪಿಲ ಗೋವನ್ನು ಉಪಜೀವಿಸುತ್ತಾರೆ. ತಂದೆಯೇ, ಇದು ಹೇಗಾಗುತ್ತದೆ?

ವ್ಯಾಸಃ

ಕ್ಷತ್ರಿಯಾಶ್ಚೈವ ಶೂದ್ರಾಶ್ಚ ಮಂತ್ರಹೀನಾಶ್ಚ ಯೇ ದ್ವಿಜಾಃ ।
ಕಪಿಲಾಮುಪಜೀವಂತಿ ತೇಷಾಂ ವಕ್ಷ್ಯಾಮಿ ನಿರ್ಣಯಮ್ ॥೨॥

ವ್ಯಾಸರು– ಕ್ಷತ್ರಿಯರು, ಶೂದ್ರರು, ಮಂತ್ರಹೀನರಾದ ಬ್ರಾಹ್ಮಣರು ಕಪಿಲ ಗೋವನ್ನು ಉಪಜೀವಿಸುತ್ತಾರೆ. ಅವರ ವಿಷಯದಲ್ಲಿ ನಿರ್ಣಯವನ್ನು ಹೇಳುವೆನು.

ಕಪಿಲಾಸ್ತೂತ್ತಮಾ ಲೋಕೇ ಗೋಷು ಚೈವೋತ್ತಮಾ ಮತಾಃ ।
ತಾಸಾಂ ದಾತಾ ಲಭೇತ್ ಸ್ವರ್ಗಂ ವಿಧಿನಾ ಯಶ್ಚ ಸೇವತೇ ॥೩॥

ಕಪಿಲಗೋವುಗಳು ಗೋವುಗಳಲ್ಲಿಯೂ ಶ್ರೇಷ್ಠವಾದವುಗಳು ಮತ್ತು ಲೋಕದಲ್ಲಿಯೂ ಶ್ರೇಷ್ಠವಾದವುಗಳು. ಯಾವನು ವಿಧಿಗೆ ಅನುಸಾರವಾಗಿ ಅವುಗಳನ್ನು ದಾನ ಮಾಡುತ್ತಾನೆಯೋ, ವಿಧಿಗೆ ಅನುಸಾರವಾಗಿ ಅವುಗಳ ಸೇವೆಯನ್ನು ಮಾಡುತ್ತಾನೆಯೋ ಅವನು ಸ್ವರ್ಗವನ್ನು ಹೊಂದುತ್ತಾನೆ.

ಸ್ಪೃಶೇತ ಕಪಿಲಾಂ ಯಸ್ತು ದಂಡೇನ ಚರಣೇನ ವಾ ।
ತೇನ ಸ್ಪರ್ಶನಮಾತ್ರೇಣ ನರಕಾಯೋಪಪದ್ಯತೇ ॥೪॥

ಯಾವನು ಕಪಿಲೆಯನ್ನು ದಂಡದಿಂದಾಗಲೀ, ಪಾದದಿಂದಾಗಲೀ ಮುಟ್ಟುತ್ತಾನೆಯೋ ಅವನು ಸ್ಪರ್ಶಮಾತ್ರದಿಂದ ನರಕವನ್ನು ಹೊಂದುತ್ತಾನೆ.

ಮಂತ್ರೇಣ ಯುಂಜ್ಯಾತ್ ಕಪಿಲಾಂ ಮಂತ್ರೇಣೈವ ಪ್ರಮುಂಚತೇ ।
ಮಂತ್ರಹೀನಂ ತು ಯೋ ಯುಂಜ್ಯಾತ್ ಕೃಮಿಯೋನೌ ಪ್ರಸೂಯತೇ ॥

ಕಪಿಲಗೋವನ್ನು ಮಂತ್ರದಿಂದಲೇ ಕಟ್ಟಬೇಕು, ಮಂತ್ರದಿಂದಲೇ ಬಿಚ್ಚಬೇಕು. ಮಂತ್ರಹೀನವಾಗಿ ಕಟ್ಟುವವನು ಕ್ರಿಮಿಯಾಗಿ ಜನಿಸುತ್ತಾನೆ.

ಪ್ರಹಾರಹತಮರ್ಮಾಂಗಾ ದುಃಖೇನ ಚ ಜಡೀಕೃತಾ ।
ಪದಾನಿ ಯಾವದ್ ಗಚ್ಛೇತ ತಾವಲ್ಲೋಕಾನ್ ಕೃಮಿರ್ಭವೇತ್ ॥೬॥

ಮರ್ಮಾಂಗಗಳಲ್ಲಿ ಏಟುಗಳನ್ನು ತಿಂದು ದುಃಖದಿಂದ ಜಡವಾದ ಕಪಿಲ ಗೋವು ಎಷ್ಟು ಹೆಜ್ಜೆಗಳನ್ನು ಇಡುತ್ತದೆಯೋ ಅಷ್ಟು ಲೋಕಗಳಲ್ಲಿ ಕ್ರಿಮಿಯಾಗುತ್ತಾನೆ.

ಯಾವಚ್ಚ ಬಿಂದವಸ್ತಸ್ಯಾಃ ಶೋಣಿತಸ್ಯ ಕ್ಷಿತಿಂ ಗತಾಃ ।
ತಾವದ್ ವರ್ಷಸಹಸ್ರಾಣಿ ನರಕಂ ಪ್ರತಿಪದ್ಯತೇ ॥೭॥

ಪ್ರಹಾರವನ್ನು ತಿಂದ ಕಪಿಲಗೋವಿನ ರಕ್ತದ ಎಷ್ಟು ಬಿಂದುಗಳು ಭೂಮಿಯಲ್ಲಿ ಬೀಳುತ್ತವೆಯೋ ಅಷ್ಟು ಸಹಸ್ರ ವರ್ಷಗಳ ಕಾಲ ನರಕವನ್ನು ಹೊಂದುತ್ತಾನೆ.

ಮಂತ್ರೇಣ ಯುಂಜ್ಯಾತ್ ಕಪಿಲಾಂ ಮಂತ್ರೇಣ ವಿನಿಯೋಜಯೇತ್ ।
ಮಂತ್ರಹೀನೈರನುಯುತೋ ಮಜ್ಜಯೇತ್ ತಮಸಿ ಪ್ರಭೋ ॥೮॥

ಕಪಿಲ ಗೋವನ್ನು ಮಂತ್ರದಿಂದ ಕಟ್ಟಬೇಕು. ಮಂತ್ರದಿಂದ ವಿನಿಯೋಗಿಸಬೇಕು. ಎಲೈ ಪ್ರಭುವೇ, ಮಂತ್ರಹೀನರಾದವರು ಕಪಿಲಗೋವಿನ ಜೊತೆಯಲ್ಲಿ ವ್ಯವಹರಿಸಿದರೆ ಅವರು ತಮಸ್ಸಿನಲ್ಲಿ ಮುಳುಗುತ್ತಾರೆ.

ಕಪಿಲಾಂ ಯೇಽಪಿ ಜೀವಂತಿ ಬುದ್ಧಿಮೋಹಾನ್ವಿತಾ ನರಾಃ ।
ತೇಽಪಿ ವರ್ಷಸಹಸ್ರಾಣಿ ಪತಂತಿ ನರಕೇ ನೃಪ ॥೯॥

ಎಲೈ ರಾಜನೇ, ಯಾವ ಮಾನವರು ಬುದ್ಧಿಮೋಹದಿಂದ ಕಪಿಲಗೋವಿನಿಂದ ದುಡಿಸಿ ಜೀವಿಸುತ್ತಾರೆಯೋ ಅವರೂ ಸಹ ಸಹಸ್ರಾರು ವರ್ಷಗಳ ಕಾಲ ನರಕದಲ್ಲಿ ಬೀಳುತ್ತಾರೆ.

ಅಥ ನ್ಯಾಯೇನ ಯೇ ವಿಪ್ರಾಃ ಕಪಿಲಾಮುಪಯುಂಜತೇ ।
ತಸ್ಮಿನ್ ಲೋಕೇ ಪ್ರಮೋದಂತೇ ಲೋಕಾಶ್ಚೈಷಾಮನಾಮಯಾಃ ॥೧೦॥

ವಿಧಿನಾ ಯೇ ನ ಕುರ್ವಂತಿ ಶೂದ್ರಾಂಸ್ತಾನುಪಧಾರಯ ॥೧೧॥

ಇನ್ನು ಕಪಿಲಗೋವನ್ನು ನ್ಯಾಯಕ್ಕೆ ಅನುಗುಣವಾಗಿ ಉಪಯೋಗಿಸುವ ಬ್ರಾಹ್ಮಣರು ನಿರ್ದುಷ್ಟವಾದ ಲೋಕಗಳನ್ನು ಹೊಂದಿ ಅಲ್ಲಿ ಸಂತೋಷಪಡುತ್ತಾರೆ. ವಿಧಿಗೆ ಅನುಗುಣವಾಗಿ ಮಾಡದಿರುವವರನ್ನು ನೀನು ಶೂದ್ರರೆಂದು ಗಮನಿಸುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕಪಿಲೋಪಜೀವನಂ ನಾಮ
ವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೊಂದನೆಯ ಅಧ್ಯಾಯ

ಕಪಿಲ ಗೋವಿನ ಶ್ರೇಷ್ಠತ್ವದ ಕಥನ.

ಶುಕಃ

ನಾನಾವರ್ಣೈರುಪೇತಾನಾಂ ಗವಾಂ ಕಿಂ ಮುನಿಸತ್ತಮ ।
ಕಪಿಲಾಃ ಸರ್ವವರ್ಣೇಷು ವರಿಷ್ಠತ್ವಮವಾಪ್ನುವನ್ ॥೧॥

ಶುಕ– ಎಲೈ ಮುನಿಶ್ರೇಷ್ಠರೇ, ಗೋವುಗಳು ನಾನಾ ವರ್ಣಗಳಿಂದ ಕೂಡಿರುವಾಗ ಕಪಿಲವರ್ಣದ ಗೋವುಗಳೇ ಹೇಗೆ ಸರ್ವವರ್ಣಗಳಲ್ಲಿ ಶ್ರೇಷ್ಠತ್ವವನ್ನು ಹೊಂದಿದವು?

ವ್ಯಾಸಃ

ಶೃಣು ಪುತ್ರ ಯಥಾ ಗೋಷು ವರಿಷ್ಠಾಃ ಕಪಿಲಾಃ ಸ್ಮೃತಾಃ ।
ಕಪಿಲತ್ವಂ ಚ ಸಂಪ್ರಾಪ್ತಾಃ ಪೂಜ್ಯಾಶ್ಚ ಸತತಂ ನೃಷು ॥೨॥

ವ್ಯಾಸರು– ಪುತ್ರನೇ, ಕಪಿಲ ಗೋವುಗಳು ಗೋವುಗಳಲ್ಲಿ ಹೇಗೆ ಶ್ರೇಷ್ಠವಾದವು? ಕಪಿಲತ್ವವನ್ನು ಹೇಗೆ ಹೊಂದಿದವು ಮತ್ತು ಹೇಗೆ ಸತತವಾಗಿ ಪೂಜ್ಯವಾದವು ಎಂಬುದನ್ನು ಕೇಳು.

ಅಗ್ನೀಃ ಪುರಾऽಪಚಕ್ರಾಮ ದೇವೇಭ್ಯ ಇತಿ ನಃ ಶ್ರುತಮ್ ।
ದೇವೇಭ್ಯೋ ಮಾಂ ಧಾದಯತ ಶರಣ್ಯಾಃ ಶರಣಂ ಗತಮ್ ॥೩॥

ಹಿಂದೆ ಅಗ್ನಿಯು ದೇವತೆಗಳಿಂದ ಹೊರಬಂದನೆಂದು ನಾವು ಕೇಳಿದ್ದೇವೆ. ಅವನು ಗೋವುಗಳನ್ನು ಕುರಿತು ನಾನು ನಿಮಗೆ ಶರಣಾಗತನಾಗಿದ್ದೇನೆ. ಶರಣವತ್ಸಲರಾದ ನೀವು ದೇವತೆಗಳಿಂದ ನನ್ನನ್ನು ಮುಚ್ಚಿಡಿ ಎಂದು ಕೇಳಿದನು.

ಊಚುಸ್ತಾಃ ಸಹಿತಾಸ್ತತ್ರ ಸ್ವಾಗತಂ ತವ ಪಾವಕ ।
ಇಹ ಗುಪ್ತಸ್ತ್ವಮಸ್ಮಾಭಿರ್ನ ದೇವೈರುಪಲಪ್ಸ್ಯಸೇ ॥೪॥

ಆ ಗೋವುಗಳೆಲ್ಲವೂ ಒಟ್ಟಾಗಿ ಅಗ್ನಿಯೇ ನಿನಗೆ ಸ್ವಾಗತ. ಇಲ್ಲಿ ನೀನು ನಮ್ಮಿಂದ ಅಡಗಿಸಲ್ಪಡುವಾಗ ದೇವತೆಗಳಿಗೆ ನೀನು ಸಿಗುವುದಿಲ್ಲ ಎಂದು ಹೇಳಿದವು.

ಅಥ ದೇವಾ ವಿವಿತ್ಸಂತಃ ಪಾವಕಂ ಪರಿಚಕ್ರಮುಃ ।
ಗೋಷು ಗುಪ್ತಂ ಚ ವಿಜ್ಞಾಯ ತಾಃ ಕ್ಷಿಪ್ರಮುಪತಸ್ಥಿರೇ ॥೫॥

ಅನಂತರ ದೇವತೆಗಳು ಅಗ್ನಿಯನ್ನು ತಿಳಿಯಲು ಇಚ್ಛಿಸಿ ಎಲ್ಲ ಕಡೆಯಲ್ಲಿಯೂ ಸಂಚಾರ ಮಾಡಿದರು. ಅವನು ಗೋವುಗಳಲ್ಲಿ ಅಡಗಿದ್ದಾನೆಂದು ತಿಳಿದು ಅವರು ಶೀಘ್ರವಾಗಿ ಗೋವುಗಳನ್ನು ಸ್ತೋತ್ರ ಮಾಡಿದರು.

ಯುಷ್ಮಾಸು ನಿವಸತ್ಯಗ್ನಿರಿತಿ ಗಾಃ ಸಮಚೋಚುದನ್ ।
ಪ್ರಕಾಶ್ಯತಾಂ ಹುತವಹೋ ಲೋಕಾನ್ ನ ಚ್ಛೇತ್ತುಮರ್ಹಥ ॥೬॥

ಏವಮಸ್ತಿ ತ್ವನುಜ್ಞಾಯ ಪಾವಕಂ ಸಮದರ್ಶಯನ್ ॥೭॥

ಅಗ್ನಿಯು ನಿಮ್ಮಲ್ಲಿ ವಾಸ ಮಾಡುತ್ತಿದ್ದಾನೆ. ಅವನನ್ನು ಪ್ರಕಾಶಕ್ಕೆ ತನ್ನಿ. ನೀವು ಲೋಕಗಳನ್ನು ವಿನಾಶಗೊಳಿಸಬಾರದು ಎಂದು ಗೋವುಗಳಿಗೆ ಒತ್ತಾಯ ಮಾಡಿದರು. ಗೋವುಗಳು ಹಾಗೆಯೇ ಆಗಲಿ ಎಂದು ಹೇಳಿ ಅಗ್ನಿಯನ್ನು ತೋರಿಸಿದವು.

ಅಧಿಗಮ್ಯ ಪಾವಕಂ ತುಷ್ಟಾಸ್ತೇ ದೇವಾಃ ಸದ್ಯ ಏವ ತು ।
ಅಗ್ನಿಂ ಪ್ರಚೋದಯಾಮಾಸುಃ ಕ್ರಿಯತಾಂ ಗೋಷ್ವನುಗ್ರಹಃ ॥೮॥

ಅಗ್ನಿಯನ್ನು ಪಡೆದ ದೇವತೆಗಳು ಸಂತೋಷಗೊಂಡು ಅಗ್ನಿಯನ್ನು ಕುರಿತು ಗೋವುಗಳಿಗೆ ಅನುಗ್ರಹವನ್ನು ಮಾಡು ಎಂದು ಒತ್ತಾಯ ಮಾಡಿದರು.

ಗವಾಂ ತು ಯಾಸಾಂ ಗಾತ್ರೇಷು ಪಾವಕಃ ಸಮವಸ್ಥಿತಃ ।
ಕಪಿಲತ್ವಮನುಪ್ರಾಪ್ತಾಃ ಸರ್ವಶ್ರೇಷ್ಠತ್ವಮೇವ ಚ ।
ಮಹಾಫಲತ್ವಂ ಲೋಕೇ ಚ ದದೌ ತಾಸಾಂ ಹುತಾಶನಃ ॥೯॥

ಯಾವ ಗೋವುಗಳಲ್ಲಿ ಅಗ್ನಿಯು ಅಡಗಿ ಕುಳಿತಿದ್ದನೋ ಆ ಗೋವುಗಳು ಕಪಿಲ ವರ್ಣವನ್ನೂ, ಸರ್ವಶ್ರೇಷ್ಠತ್ವವನ್ನೂ ಹೊಂದಿದವು. ಅಗ್ನಿಯು ಅವುಗಳಿಗೆ ಮಹಾಫಲತ್ವವನ್ನೂ ಕೊಟ್ಟನು.

ತಸ್ಮಾದ್ಧಿ ಸರ್ವವರ್ಣಾನಾಂ ಕಪಿಲಾಂ ಗಾಂ ಪ್ರದಾಪಯ ।
ಶ್ರೋತ್ರಿಯಾಯ ಪ್ರಶಾಂತಾಯ ಪ್ರಯತಾಯಾಗ್ನಿಹೋತ್ರಿಣೇ ॥೧೦॥

ಆದ್ದರಿಂದ ಎಲ್ಲ ವರ್ಣಗಳಲ್ಲಿ ಕಪಿಲವರ್ಣದ ಗೋವುಗಳನ್ನೇ ನೀನು ಶ್ರೋತ್ರಿಯನಾದ, ಪ್ರಶಾಂತನಾದ, ಇಂದ್ರಿಯನಿಗ್ರಹವುಳ್ಳ ಅಗ್ನಿಹೋತ್ರಿಗೆ ದಾನ ಮಾಡಿಸು.

ಯಾವಂತಿ ರೋಮಾಣಿ ಭವಂತಿ ಧೇನ್ವಾ
ಯುಗಾನಿ ತಾವಂತಿ ಪುನಾತಿ ದಾತ್ಯಾನ್ ।
ಪ್ರತಿಗ್ರಹೀತ್ಯಾಂಶ್ಚ ಪುನಾತಿ ದತ್ತಾ
ಶಿಷ್ಟೇ ತು ಗೌರ್ವೈ ಪ್ರತಿಪಾದನೇನ ॥೧೧॥

ಗೋವಿನ ದೇಹದಲ್ಲಿ ಎಷ್ಟು ರೋಮವಿರುತ್ತದೆಯೋ ಅಷ್ಟು ಯುಗಗಳ ಕಾಲ ಗೋವುಗಳು ದಾನ ಮಾಡುವವನನ್ನು ಪವಿತ್ರೀಕರಿಸುತ್ತದೆ. ಶಿಷ್ಟನಾದವನಿಗೆ ಗೋವನ್ನು ದಾನ ಮಾಡಿದರೆ ಗೋದಾನವನ್ನು ಸ್ವೀಕರಿಸುವವನನ್ನೂ ಸಹ ಪವಿತ್ರೀಕರಿಸುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕಪಿಲಾಶ್ರೈಷ್ಯಕಥನಂ ನಾಮ
ಏಕವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೆರಡನೆಯ ಅಧ್ಯಾಯ

ಕಪಿಲ ಗೋವುಗಳ ಪ್ರಭೇದ. ಅವುಗಳನ್ನು ಪೀಡಿಸಿದರೆ ಉಂಟಾಗುವ ಅನರ್ಥ.

ಶುಕಃ

ಕೇನ ವರ್ಣವಿಭಾಗೇನ ವಿಜ್ಞೇಯಾ ಕಪಿಲಾ ಭವೇತ್ ।
ಕತಿ ವಾ ಲಕ್ಷಣಾನ್ಯಸ್ಯ ದೃಷ್ಟಾನಿ ಮುನಿಭಿಃ ಪುರಾ ॥೧॥

ಶುಕ– ಯಾವ ವರ್ಣವಿಭಾಗದಿಂದ ಕಪಿಲೆಯನ್ನು ತಿಳಿಯಬೇಕು? ಕಪಿಲ ಗೋವುಗಳಲ್ಲಿ ಮುನಿಗಳು ಹಿಂದೆ ಎಷ್ಟು ಲಕ್ಷಣಗಳನ್ನು ನೋಡಿದ್ದಾರೆ?

ವ್ಯಾಸಃ

ಶೃಣು ತಾತ ಯಥಾ ಗೋಷು ವಿಜ್ಞೇಯಾ ಕಪಿಲಾ ಭವೇತ್ ॥೨॥

ನೇತ್ರಯೋಃ ಶೃಂಗಯೋಶ್ಚೈವ ಖುರೇಷು ವೃಷಣೇಷು ಚ ।
ಕರ್ಣತೋ ಘ್ರಾಣತಶ್ಚಾಪಿ ಷಡ್‌ವಿಧಾಃ ಕಪಿಲಾಃ ಸ್ಮೃತಾಃ ॥೩॥

ವ್ಯಾಸರು– ಪ್ರೀತಿಪಾತ್ರನೇ, ಗೋವುಗಳಲ್ಲಿ ಕಪಿಲ ಗೋವನ್ನು ತಿಳಿಯುವ ರೀತಿಯನ್ನು ಕೇಳು. ನೇತ್ರಗಳಲ್ಲಿ ಕಪಿಲವರ್ಣದಿಂದ ಕೂಡಿರುವುದು, ಶೃಂಗಗಳಲ್ಲಿ ಕಪಿಲ ವರ್ಣದಿಂದ ಕೂಡಿರುವುದು, ಗೊರಸುಗಳಲ್ಲಿ ಕಪಿಲ ವರ್ಣದಿಂದ ಕೂಡಿರುವುದು, ಹೋರಿಯಲ್ಲಿ ವೃಷಣವಿರುವ ಸ್ಥಾನದಲ್ಲಿ ಕಪಿಲ ವರ್ಣದಿಂದ ಕೂಡಿರುವುದು, ಕರ್ಣ ಪ್ರದೇಶದಲ್ಲಿ ಕಪಿಲ ವರ್ಣದಿಂದ ಕೂಡಿರುವುದು, ಘ್ರಾಣ ಪ್ರದೇಶದಲ್ಲಿ ಕಪಿಲ ವರ್ಣದಿಂದ ಕೂಡಿರುವುದು ಎಂದು ಕಪಿಲ ಗೋವುಗಳು ಆರು ವಿಧವಾಗಿರುತ್ತವೆ.

ಏತೇಷಾಂ ಲಕ್ಷಣಾನಾಂ ತು ಯದ್ಯೇಕಮಪಿ ದೃಶ್ಯತೇ ।
ಕಪಿಲಾಂ ತಾಂ ವಿಜಾನೀಯಾದ್ ಏವಮಾಹುರ್ಮನೀಷಿಣಃ ॥೪॥

ಈ ಲಕ್ಷಣಗಳಲ್ಲಿ ಯಾವುದಾದರೂ ಒಂದು ಲಕ್ಷಣವಿದ್ದರೂ ಅವುಗಳನ್ನು ಕಪಿಲ ಗೋವೆಂದು ತಿಳಿಯಬೇಕೆಂದು ಜ್ಞಾನಿಗಳು ಹೇಳುತ್ತಾರೆ.

ಆಗ್ನೇಯೀ ನೇತ್ರಕಪಿಲಾ ಖುರೈರ್ಮಾಹೇಶ್ವರೀ ಭವೇತ್ ।
ಗ್ರೀವಾಯಾಂ ವೈಷ್ಣವೀ ಜ್ಞೇಯಾ ಪೂಷ್ಣೋ ಘ್ರಾಣಾದಜಾಯತ ॥೫॥

ಕರ್ಣತಸ್ತು ವಸಂತೇನ ಸ್ವಯೋನಿಮಭಿಜಾಯತೇ ।
ಗಾಯತ್ರ್ಯಾ ಶ್ಚ ವೃಷಣಯೋರುತ್ಪತ್ತಿಃ ಷಡ್ಗುಣಾ ಸ್ಮೃತಾ ॥೬॥

ನೇತ್ರಕಪಿಲೆಯು ಅಗ್ನಿಯಿಂದ ಹುಟ್ಟಿದುದು. ಖುರ ಕಪಿಲೆಯು ಮಹೇಶ್ವರನಿಂದ ಹುಟ್ಟಿದುದು. ಗ್ರೀವಾ ಕಪಿಲೆಯು ವಿಷ್ಣುವಿನಿಂದ ಜನಿಸಿದೆ. ಘ್ರಾಣ ಕಪಿಲೆಯು ಪೂಷಣನಿಂದ ಜನಿಸಿದೆ ಎಂದು ತಿಳಿಯಬೇಕು. ಕರ್ಣ ಕಪಿಲೆಯು ವಸಂತನಿಂದ ತನ್ನ ಯೋನಿಯಲ್ಲಿ ಹುಟ್ಟುತ್ತದೆ. ವೃಷಣ ಕಪಿಲೆಯು ಗಾಯತ್ರಿಯಿಂದ ಉಂಟಾಗುತ್ತದೆ. ಹೀಗೆ ಕಪಿಲೆಗಳು ಆರು ಗುಣಗಳಿಂದ ಕೂಡಿರುತ್ತವೆ.

ಏವಂ ಗಾವಶ್ಚ ವಿಪ್ರಾಶ್ಚ ಗಾಯತ್ರೀ ಸತ್ಯಮೇವ ಚ ।
ವಸಂತಶ್ಚ ಸುವರ್ಣಂ ಚ ಏಕತಃ ಸಮಜಾಯತ ॥೭॥

ಈ ರೀತಿಯಲ್ಲಿ ಉಳಿದ ಗೋವುಗಳು, ವಿಪ್ರರು, ಗಾಯತ್ರೀ, ಸತ್ಯ, ವಸಂತ ಮತ್ತು ಸುವರ್ಣ ಒಂದು ಭಾಗದಿಂದ ಜನಿಸಿದವು. ಕಪಿಲೆಯೊಂದೇ ಇನ್ನೊಂದು ಭಾಗದಿಂದ ಜನಿಸಿತು. ಆದ್ದರಿಂದ ಒಂದು ಕಪಿಲೆಯು ವಿಪ್ರಾದಿ ಪಂಚಕಕ್ಕೆ ಸಮಾನವಾದುದು (ಲಕ್ಷಾಲಂಕಾರ).

ನೇತ್ರಯೋಃ ಕಪಿಲಾಯಾಸ್ತು ವಾಹಯೇತ ದುಹೇತ ವಾ ।
ಸ ಪಾಪಕರ್ಮಾ ನರಕಂ ಪ್ರತಿಷ್ಠಾಂ ಪ್ರತಿಪದ್ಯತೇ ॥೮॥

ನೇತ್ರ ಕಪಿಲೆಯು ಭಾರವನ್ನು ಹೊರುವಂತೆ ಮಾಡಿದರೆ ಅಥವಾ ಅದರಿಂದ ಹಾಲನ್ನು ಕರೆದರೆ ಪಾಪಕರ್ಮವನ್ನು ಮಾಡುವ ಅಂತಹ ಪುರುಷನು ನರಕದಲ್ಲಿ ನೆಲೆಸುತ್ತಾನೆ.

ನರಕಾದ್ ವಿಪ್ರಮುಕ್ತಸ್ತು ತಿರ್ಯಗ್ಯೋನಿಂ ನಿಷೇವತೇ ।
ಯದಾ ಲಭೇತ ಮಾನುಷ್ಯೇ ಜಾತ್ಯಂಧೋ ಜಾಯತೇ ನರಃ ॥೯॥

ನರಕದಿಂದ ಹೊರಬಂದವನು ನೀಚಯೋನಿಯನ್ನು ಹೊಂದುತ್ತಾನೆ. ಮನುಷ್ಯ ಜನ್ಮವು ಬಂದಾಗ ಅವನು ಹುಟ್ಟುಕುರುಡನಾಗಿ ಜನಿಸುತ್ತಾನೆ.

ಶೃಂಗಯೋಃ ಕಪಿಲಾಂ ಯಸ್ತು ವಾಹಯೇತ ದುಹೇತ ವಾ ।
ತಿರ್ಯಗ್ಯೋನಿಂ ಸ ಲಭತೇ ಜಾಯಮಾನಃ ಪುನಃ ಪುನಃ ॥೧೦॥

ಶೃಂಗ ಕಪಿಲೆಯನ್ನು ಯಾವನು ಭಾರವನ್ನು ಹೊರುವಂತೆ ಮಾಡುತ್ತಾನೆಯೋ ಅಥವಾ ಅದರಿಂದ ಹಾಲನ್ನು ಕರೆಯುತ್ತಾನೆಯೋ ಅವನು ಪುನಃ ಪುನಃ ಹುಟ್ಟಿದರೋ ಅವನು ತಿರ್ಯಗ್ಯೋನಿಯನ್ನೇ ಪಡೆಯುತ್ತಾನೆ.

ಖುರೇಷು ಕಪಿಲಾಂ ಯಸ್ತು ವಾಹಯೇತ ದುಹೇತ ವಾ ।
ತಮಸ್ಯಪಾರೇ ಮಜ್ಜೇತ ಧನಹೀನೋ ನರಾಧಮಃ ॥೧೧॥

ಖರಕಪಿಲೆಯನ್ನು ಯಾವನು ಭಾರ ಹೊರುವಂತೆ ಮಾಡುತ್ತಾನೆಯೋ ಅಥವಾ ಅದರ ಹಾಲನ್ನು ಕರೆಯುತ್ತಾನೆಯೋ ಅಂತಹ ನರಾಧಮನು ಈ ಲೋಕದಲ್ಲಿ ಧನಹೀನನಾಗಿ ಪರಲೋಕದಲ್ಲಿ ಅಪಾರವಾದ ತಮಸ್ಸಿನಲ್ಲಿ ಮುಳುಗುತ್ತಾನೆ.

ಕಪಿಲಾಂ ವಾಲಧಾನೇಷು ವಾಹಯೇತ ದುಹೇತ ವಾ ।
ನಿರಾಶ್ರಯಃ ಸದಾ ಚೈವ ಜಾಯತೇ ಯದಿ ಚೇತ್ ಕ್ರಿಮಿಃ ॥೧೨॥

ವೃಷಣ ಪ್ರದೇಶದಲ್ಲಿ ಕಪಿಲೆಯನ್ನು ಯಾವನು ಭಾರ ಹೊರುವಂತೆ ಮಾಡುತ್ತಾನೆಯೋ ಅಥವಾ ಅದರ ಹಾಲನ್ನು ಕರೆಯುತ್ತಾನೆಯೋ ಅವನು ಯಾವಾಗಲೂ ನಿರಾಶ್ರಯನಾಗುತ್ತಾನೆ. ಪುನಃ ಹುಟ್ಟಿದರೆ ಕ್ರಿಮಿಯಾಗಿ ಹುಟ್ಟುತ್ತಾನೆ.

ಕರ್ಣೇನ ಕಪಿಲಾಂ ಯಸ್ತು ಜಾನನ್ನಪ್ಯುಪಜೀವತಿ ।
ಸಹಸ್ರಶಃ ಕ್ರಿಮಿರ್ಭೂತ್ವಾ ಮಾನುಷ್ಯಂ ಪ್ರಾಪ್ನುಯಾದಥ ।
ಚಂಡಾಲಃ ಪಾಪಕರ್ಮಾ ವಾ ಜಾಯತೇ ಸ ನರಾಧಮಃ ॥೧೩॥

ಕರ್ಣ ಕಪಿಲೆಯನ್ನು ಯಾವನು ತಿಳಿದೂ ಉಪಜೀವಿಸುತ್ತಾನೆಯೋ ಅವನು ಸಾವಿರ ಬಾರಿ ಕ್ರಿಮಿಯಾಗಿ ಹುಟ್ಟಿ ಅನಂತರ ಮನುಷ್ಯನಾಗುತ್ತಾನೆ. ಆ ನರಾಧಮನು ಮನುಷ್ಯನಾದರೂ ಚಂಡಾಲನಾಗಿ ಅಥವಾ ಪಾಪಯೋನಿಯಲ್ಲಿ ಜನ್ಮವನ್ನು ಹೊಂದುತ್ತಾನೆ.

ಘ್ರಾಣೇನ ಕಪಿಲಾಂ ಯಸ್ತು ಪ್ರಮಾದಾದುಪಜೀವತಿ ।
ಸೋಽಪಿ ವರ್ಷಸಹಸ್ರಾಣಿ ತಿರ್ಯಗ್ಯೋನೌ ಪ್ರಜಾಯತೇ ॥೧೪॥

ವ್ಯಾಧಿಗ್ರಸ್ತೋ ಜಡೋ ರೋಗೀ ಭವೇನ್ಮಾನುಷ್ಯಮಾಗತಃ ॥೧೫॥

ಘ್ರಾಣ ಕಪಿಲೆಯನ್ನು ಯಾವನು ಪ್ರಮಾದದಿಂದ ಉಪಜೀವಿಸುತ್ತಾನೆಯೋ ಅವನು ಸಹಸ್ರ ವರ್ಷಗಳ ಕಾಲ ತಿರ್ಯಗ್ಯೋನಿಯಲ್ಲಿ ಜನಿಸುತ್ತಾನೆ ಮತ್ತು ಮನುಷ್ಯತ್ವವನ್ನು ಹೊಂದಿದಾಗ ವ್ಯಾಧಿಗ್ರಸ್ತನೂ, ಬುದ್ಧಿಹೀನನೂ ಮತ್ತು ರೋಗಿಯೂ ಆಗುತ್ತಾನೆ.

ಮಧುಸರ್ಪಿಃಸುಗಂಧಾಸ್ತು ಕಪಿಲಾಃ ಶಾಸ್ತ್ರತಃ ಸ್ಮೃತಾಃ ।
ಏತಾಃ ಸಮುಪಜೀವೇತ ಸೋಽಪಿ ತಿರ್ಯಕ್ಷು ಜಾಯತೇ ॥೧೬॥

ಕಪಿಲ ಗೋವುಗಳು ಜೇನಿನ ಮತ್ತು ತುಪ್ಪದ ಸುಗಂಧವನ್ನು ಹೊಂದಿರುತ್ತವೆ ಎಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ. ಯಾವನು ಇವುಗಳನ್ನು ಉಪಜೀವಿಸುತ್ತಾನೆಯೋ ಅವನೂ ತಿರ್ಯಗ್ಯೋನಿಯಲ್ಲಿ ಜನಿಸುತ್ತಾನೆ.

ಸ್ಥಾವರತ್ವಮನುಪ್ರಾಪ್ತೋ ಯದಿ ಮಾನುಷ್ಯತಾಂ ಲಭೇತ್ ।
ಅಲ್ಪಾಯುಃ ಸ ಭವೇಜ್ಜಾತೋ ಹೀನವರ್ಣಕುಲೋದ್ಭವಃ ॥೧೭॥

ಅನಂತರ ವೃಕ್ಷಾದಿ ಜನ್ಮವನ್ನು ಹೊಂದಿ, ಅನಂತರ ಮನುಷ್ಯತ್ವವನ್ನು ಹೊಂದಿದರೂ ಹೀನವರ್ಣಕುಲಗಳಲ್ಲಿ ಹುಟ್ಟಿ ಅಲ್ಪಾಯುಷ್ಯವುಳ್ಳವನಾಗುತ್ತಾನೆ.

ಯೇ ತು ಪಾಪಾ ಹ್ಯಸೂಯಂತೇ ಕಪಿಲಾಂ ವಾಹಯಂತಿ ಚ ।
ನಿರಯೇಷು ಪ್ರತಿಷ್ಠಂತೇ ಯಾವದಾಭೂತಸಂಪ್ಲವಮ್ ॥೧೮॥

ಯಾವ ಪಾಪಿಗಳು ಕಪಿಲೆಗೆ ಭಾರವನ್ನು ಹೊರಿಸುತ್ತಾರೋ ಅವರು ಪ್ರಳಯ ಕಾಲದವರೆಗೆ ನರಕದಲ್ಲಿಯೇ ಇರುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕಪಿಲಾಪ್ರಭೇದವರ್ಣನಂ ನಾಮ
ದ್ವಾವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತೆರಡನೆಯ ಅಧ್ಯಾಯಮುಗಿಯಿತು.

★ ★ ★ ★ ★

ನೂರ ಇಪ್ಪತ್ಮೂರನೆಯ ಅಧ್ಯಾಯ

ಶ್ರೀ-ಗೋಸಂವಾದ

ಯುಧಿಷ್ಠಿರಃ

ಮಯಾ ಗವಾಂ ಪುರೀಷಂ ವೈ ಶ್ರಿಯಾ ಜುಷ್ಟಮಿತಿ ಶ್ರುತಮ್ ।
ಏತದಿಚ್ಛಾಮ್ಯಹಂ ಶ್ರೋತುಂ ಸಂಶಯೋಽತ್ರ ಹಿ ಮೇ ಮಹಾನ್ ॥೧॥

ಯುಧಿಷ್ಠಿರ– ನಾನು ಲಕ್ಷ್ಮಿಯು ಗೋವುಗಳ ಸಗಣಿಯನ್ನು ಆಶ್ರಯಿಸಿದಳೆಂದು ಕೇಳಿದ್ದೇನೆ. ಈ ವಿಷಯದಲ್ಲಿ ನನಗೆ ದೊಡ್ಡ ಸಂಶಯವಿದೆ. ಇದನ್ನು ನಿನ್ನಿಂದ ಕೇಳಲು ಬಯಸುತ್ತೇನೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಗೋಭಿರ್ನ್ಯಪೇಹ ಸಂವಾದಂ ಶ್ರಿಯಾ ಭರತಸತ್ತಮ ॥೨॥

ಶ್ರೀಃ ಕೃತ್ವೇಹ ವಪುಃ ಕಾಂತಂ ಗೋಮಧ್ಯಂ ಪ್ರವಿವೇಶ ಹ ।
ಗಾವೋಽಥ ವಿಸ್ಮಿತಾಸ್ತಸ್ಯಾ ದೃಷ್ಟ್ವಾ ರೂಪಸ್ಯ ಸಂಪದಮ್ ॥೩॥

ಭೀಷ್ಮ– ಎಲೈ ಭರತಸತ್ತಮನೇ, ಈ ವಿಷಯದಲ್ಲಿಯೂ ಗೋವುಗಳಿಗೂ ಮತ್ತು ಶ್ರೀದೇವಿಗೂ ನಡೆದ ಸಂವಾದರೂಪವಾದ ಪುರಾತನ ಇತಿಹಾಸವನ್ನು ಹೇಳುತ್ತಾರೆ. ಲಕ್ಷ್ಮಿಯು ಒಂದು ಸುಂದರರೂಪವನ್ನು ತೆಗೆದುಕೊಂಡು ಗೋವುಗಳ ಮಧ್ಯದಲ್ಲಿ ಪ್ರವೇಶಿಸಿದಳು. ಗೋವುಗಳು ಅವಳ ರೂಪಸಂಪತ್ತನ್ನು ನೋಡಿ ವಿಸ್ಮಯಗೊಂಡವು.

ಗಾವಃ

ಕಾಽಸಿ ದೇವಿ ಕುತೋ ವಾ ತ್ವಂ ರೂಪೇಣಾಪ್ರತಿಮಾ ಭುವಿ ।
ವಿಸ್ಮಿತಾಃ ಸ್ಮ ಮಹಾಭಾಗೇ ತವ ರೂಪಸ್ಯ ಸಂಪದಾ ॥೪॥

ಇಚ್ಛಾಮಸ್ತ್ವಾಂ ವಯಂ ಜ್ಞಾತುಂ ಕಾ ತ್ವಂ ಕ್ವ ಚ ಗಮಿಷ್ಯಸಿ ।
ತತ್ತ್ವೇನ ಚ ಸುವರ್ಣಾಭೇ ಸರ್ವಮೇತದ್ ಬ್ರವೀಹಿ ನಃ ॥೫॥

ಗೋವುಗಳು– ಎಲೌ ದೇವಿಯೇ, ನೀನು ಯಾರು? ಭೂಮಿಯಲ್ಲಿ ರೂಪದಲ್ಲಿ ಅಸದೃಶಳಾದ ನೀನು ಎಲ್ಲಿಂದ ಬಂದೆ? ಮಹಾನುಭಾವಳೇ, ನಿನ್ನ ರೂಪಸಂಪತ್ತಿನಿಂದ ನಾವು ವಿಸ್ಮಿತರಾಗಿದ್ದೇವೆ. ನೀನು ಯಾರು ಮತ್ತು ಎಲ್ಲಿಗೆ ಹೋಗುವಿ ಎಂದು ತಿಳಿಯಲು ನಾವು ಬಯಸುತ್ತೇವೆ. ಎಲೌ ಸುವರ್ಣಕಾಂತಿಯುಳ್ಳವಳೇ, ಇದೆಲ್ಲವನ್ನೂ ನಮಗೆ ಸರಿಯಾಗಿ ಹೇಳು.

ಶ್ರೀಃ

ಲೋಕಕಾಂತಾಽಸ್ಮಿ ಭದ್ರಂ ವಃ ಶ್ರೀರ್ನಾಮ್ನೇಹ ಪರಿಶ್ರುತಾ ।
ಮಯಾ ದೈತ್ಯಾಃ ಪರಿತ್ಯಕ್ತಾ ವಿನಷ್ಟಾಃ ಶಾಶ್ವತೀಃ ಸಮಾಃ ॥೬॥

ಶ್ರೀದೇವಿ– ನಿಮಗೆ ಮಂಗಳವಾಗಲಿ. ನಾನು ಲೋಕಪ್ರಿಯಳಾಗಿದ್ದೇನೆ. ಶ್ರೀ ಎಂಬ ಹೆಸರಿನಿಂದ ಪ್ರಖ್ಯಾತಳಾಗಿದ್ದೇನೆ. ನನ್ನಿಂದ ಪರಿತ್ಯಕ್ತರಾದ ದೈತ್ಯರು ಶಾಶ್ವತ ಕಾಲದಲ್ಲಿ ವಿನಷ್ಟರಾದರು.

ಇಂದ್ರೋ ವಿವಸ್ವಾನ್ ಸೋಮಶ್ಚ ವಿಷ್ಣುರಾಪೋಽಗ್ನಿರೇವ ಚ ।
ಮಯಾಽಭಿಪನ್ನಾ ಋಧ್ಯಂತೇ ಋಷಯೋ ದೇವತಾಸ್ತಥಾ ॥೭॥

ಇಂದ್ರ, ಸೂರ್ಯ, ಚಂದ್ರ, ವಿಷ್ಣು, ವರುಣ, ಅಗ್ನಿ ಇವರು, ಹಾಗೆಯೇ ಋಷಿಗಳು ಮತ್ತು ದೇವತೆಗಳು ನನ್ನ ಸನ್ನಿಧಾನದಿಂದ ಸಮೃದ್ಧಿಯನ್ನು ಹೊಂದುತ್ತಾರೆ.

ಯಾಂಶ್ಚ ದ್ವಿಷ್ಯಾಮ್ಯಹಂ ಗಾವಸ್ತೇ ವಿನಶ್ಯಂತಿ ಸರ್ವಶಃ ।
ಧರ್ಮಾರ್ಥಕಾಮಹೀನಾಶ್ಚ ತೇ ಭವಂತ್ಯಸುಖಾನ್ವಿತಾಃ ॥೮॥

ಎಲೈ ಗೋವುಗಳೇ, ನಾನು ಯಾರನ್ನು ದ್ವೇಷಿಸುತ್ತೇನೆಯೋ ಅವರು ಸರ್ವ ಪ್ರಕಾರದಿಂದ ವಿನಾಶವನ್ನು ಹೊಂದುತ್ತಾರೆ. ಅವರು ಧರ್ಮಾರ್ಥಕಾಮ ಹೀನರಾಗಿ ದುಃಖದಿಂದ ಕೂಡಿರುತ್ತಾರೆ.

ಏವಂಪ್ರಭಾವಾಂ ಮಾಂ ಗಾವೋ ವಿಜಾನೀತ ಸುಖಪ್ರದಾಮ್ ।
ಇಚ್ಛಾಮಿ ಚಾಪಿ ಯುಷ್ಮಾಸು ವಸ್ತುಂ ಸರ್ವಾಸು ನಿತ್ಯದಾ ।
ಆಗತಾ ಪ್ರಾರ್ಥಯಾನಾಹಂ ಶ್ರೀಮುಷ್ಟಾ ಭವತಾದ್ಯ ವೈ ॥೯॥

ಎಲೌ ಗೋವುಗಳೇ, ಸುಖಪ್ರದಳಾದ ನನ್ನನ್ನು ಇಂತಹ ಸಾಮರ್ಥ್ಯವುಳ್ಳವಳು ಎಂದು ತಿಳಿಯಿರಿ. ನಿಮ್ಮೆಲ್ಲರಲ್ಲೂ ನಾನು ಯಾವಾಗಲೂ ವಾಸಮಾಡಲು ಇಚ್ಛಿಸುತ್ತೇನೆ. ನಿಮ್ಮನ್ನು ಪ್ರಾರ್ಥನೆ ಮಾಡುತ್ತಾ ಬಂದಿದ್ದೇನೆ. ಈ ದಿನ ನೀವು ಶ್ರೀಸನ್ನಿಧಾನಕ್ಕೆ ಪಾತ್ರರಾಗಿ.

ಗಾವಃ

ಅಧ್ರುವಾಂ ಚಂಚಲಂ ಚ ತ್ವಾಂ ಸಾಮಾನ್ಯಾಂ ಬಹುಭಿಃ ಸಹ ।
ನ ತ್ವಾಮಿಚ್ಛಾಮ ಭದ್ರಂ ತೇ ಗಮ್ಯತಾಂ ಯತ್ರ ರೋಚತೇ ॥೧೦॥

ವಪುಷ್ಮಂತ್ಯೋ ವಯಂ ಸರ್ವಾಃ ಕಿಮಸ್ಮಾಕಂ ತ್ವಯಾಽದ್ಯ ವೈ ।
ಯತ್ರೇಷ್ಟಂ ಗಮ್ಯತಾಂ ತತ್ರ ಕೃತಕಾರ್ಯಾ ವಯಂ ತ್ವಯಾ ॥೧೧॥

ಗೋವುಗಳು– ನೀನು ಅಧ್ರುವಳು, ಚಂಚಲಳಾದವಳು ಮತ್ತು ಅನೇಕರ ಜೊತೆಯಲ್ಲಿ ಸಾಧಾರಣಳಾದವಳು. ನಿನಗೆ ಶುಭವಾಗಲಿ. ನಾವು ನಿನ್ನನ್ನು

ಬಯಸುವುದಿಲ್ಲ. ನಿನಗೆ ಇಷ್ಟಬಂದ ಕಡೆಗೆ ಹೋಗು. ನಮಗೆಲ್ಲರಿಗೂ ಒಳ್ಳೆಯ ಶರೀರವಿದೆ. ನಿನ್ನಿಂದ ನಮಗೆ ಈ ದಿನ ಆಗಬೇಕಾದುದೇನು? ನಿನ್ನ ಇಷ್ಟ ಬಂದಲ್ಲಿಗೆ ಹೋಗು. ನಿನ್ನಿಂದ ಆಗಬೇಕಾದ ಕಾರ್ಯವು ಏನೂ ಇಲ್ಲ.

ಶ್ರೀಃ

ಕಿಮೇತದ್ ಧಕ್ಷಣಂ ಗಾವೋ ಯನ್ಮಾಂ ನೇಹಾಭ್ಯನಂದಥ ।
ನ ಮಾಂ ಸಂಪ್ರತಿ ಗೃಹ್ಣೀಥ ಕಸ್ಮಾದ್ವೈ ದುರ್ಲಭಾಂ ಸತೀಮ್ ॥೧೨॥

ಶ್ರೀದೇವಿ– ಗೋವುಗಳೇ, ಇಲ್ಲಿ ನನ್ನನ್ನು ಅಭಿನಂದಿಸದೆ ಏಕೆ ಇಂತಹ ದಹಿಸುವ ಮಾತುಗಳನ್ನು ಆಡುತ್ತಿದ್ದೀರಿ? ದುರ್ಲಭಳೂ, ಪತಿವ್ರತೆಯೂ ಆದ ನನ್ನನ್ನು ನೀವು ಏಕೆ ಸ್ವೀಕರಿಸುವುದಿಲ್ಲ?

ಸತ್ಯಶ್ಚ ಲೋಕವಾದೋಽಯಂ ಲೋಕೇ ಚರತಿ ಸುವ್ರತಾಃ ।
ಸ್ವಯಂ ಪ್ರಾಪ್ತೇ ಪರಿಭವೋ ಭವತೀತಿ ವಿನಿಶ್ಚಯಃ ॥೧೩॥

ಎಲೌ ಒಳ್ಳೆಯ ವ್ರತವುಳ್ಳವರೇ, ತಾನಾಗಿಯೇ ಬಂದರೆ ಅವಮಾನವಾಗುವುದು ನಿಶ್ಚಿತ ಎಂದು ಲೋಕದಲ್ಲಿ ಪ್ರಚಾರದಲ್ಲಿರುವ ಈ ಲೋಕವಾದವು ಸತ್ಯವಾದುದು.

ಮಹದುಗ್ರಂ ತಪಃ ಕೃತ್ವಾ ಮಾಂ ನಿಷೇವಂತಿ ಮಾನವಾಃ ।
ದೇವದಾನವಗಂಧರ್ವಾಃ ಪಿಶಾಚೋರಗರಾಕ್ಷಸಾಃ ॥೧೪॥

ದೊಡ್ಡ ಉಗ್ರ ತಪಸ್ಸನ್ನು ಮಾಡಿ ಮಾನವರು, ದೇವ-ದಾನವ-ಗಂಧರ್ವರು, ಪಿಶಾಚ-ಸರ್ಪ-ರಾಕ್ಷಸರು ನನ್ನ ಸೇವೆಯನ್ನು ಮಾಡುತ್ತಾರೆ.

ಕ್ಷಮಮೇತದ್ಧಿ ವೋ ಗಾವಃ ಪ್ರತಿಗೃಹ್ಣೀತ ಮಾಮಿಹ ।
ನಾವಮನ್ಯಾ ಹ್ಯಹಂ ಸೌಮ್ಯಾಸ್ತ್ರಿಲೋಕ್ಯೇ ಸಚರಾಚರೇ ॥೧೫॥

ಎಲೌ ಗೋವುಗಳೇ, ನನಗೆ ಆಶ್ರಯವನ್ನು ಕೊಡಲು ನೀವು ಸಮರ್ಥರಾಗಿದ್ದೀರಿ. ನೀವು ನಮ್ಮನ್ನು ಸ್ವೀಕರಿಸಿ. ಎಲೌ ಸೌಮ್ಯರೇ, ಚರಾಚರ ಪ್ರಾಣಿಗಳಿಂದ ಸೇರಿದ ಮೂರು ಲೋಕಗಳಲ್ಲಿಯೂ ನಾನು ಅವಮಾನಕ್ಕೆ ಅರ್ಹಳಾದವಳಲ್ಲ.

ಗಾವಃ

ನಾವಮನ್ಯಾಮಹೇ ದೇವಿ ನ ತ್ವಾಂ ಪರಿಭವಾಮಹೇ ।
ಅಧ್ರುವಾ ಚಲಚಿತ್ತಾऽಸಿ ತತಸ್ತ್ವಾಂ ವರ್ಜಯಾಮಹೇ ॥೧೬॥

ಬಹುನಾऽತ್ರ ಕಿಮುಕ್ತೇನ ಗಮ್ಯತಾಂ ಯತ್ರ ವಾಂಛಸಿ ।
ವಪುಷ್ಮತ್ಯೋ ವಯಂ ಸರ್ವಾಃ ಕಿಮಸ್ಮಾಕಂ ತ್ವಯಾऽನಘೇ ॥೧೭॥

ಗೋವುಗಳು– ಎಲೌ ದೇವಿಯೇ, ನಾವು ನಿನಗೆ ಅವಮಾನವನ್ನು ಮಾಡುತ್ತಿಲ್ಲ. ಸೋಲನ್ನು ಉಂಟುಮಾಡುತ್ತಿಲ್ಲ. ನೀನು ಚಂಚಲಳಾದವಳು ಮತ್ತು ಚಂಚಲ ಚಿತ್ತವುಳ್ಳವಳೆಂದು ನಿನ್ನನ್ನು ಪರಿತ್ಯಜಿಸುತ್ತಿದ್ದೇವೆ. ಬಹಳ ಮಾತುಗಳನ್ನಾಡಿ ಏನು ಪ್ರಯೋಜನ? ನಿನಗೆ ಇಷ್ಟಬಂದಲ್ಲಿಗೆ ಹೋಗು. ನಮ್ಮೆಲ್ಲರಿಗೂ ಒಳ್ಳೆಯ ಶರೀರವಿದೆ. ಎಲೌ ಅನಘೆಯೇ, ನಮಗೆ ನಿನ್ನಿಂದ ಆಗಬೇಕಾದುದು ಏನು?

ಶ್ರೀಃ

ಅವಜ್ಞಾತಾ ಭವಿಷ್ಯಾಮಿ ಸರ್ವಲೋಕೇಷು ಮಾನದಾಃ ।
ಪ್ರತ್ಯಾಖ್ಯಾನೇನ ಯುಷ್ಮಾಭಿಃ ಪ್ರಸಾದಃ ಕ್ರಿಯತಾಮಿತಿ ॥೧೮॥

ಶ್ರೀದೇವಿ– ಎಲೌ ಮಾನದರೇ, ನೀವು ನಿರಾಕರಣೆಯನ್ನು ಮಾಡಿದರೆ ನಾನು ಎಲ್ಲ ಲೋಕಗಳಲ್ಲಿಯೂ ಅವಮಾನಕ್ಕೊಳಗಾಗುವೆನು. ಆದ್ದರಿಂದ ಪ್ರಸನ್ನರಾಗಿ.

ಮಹಾಭಾಗಾ ಭವತ್ಯೋ ವೈ ಶರಣ್ಯಾಃ ಶರಣಾಗತಾಮ್ ।
ಪರಿತ್ರಾಯಂತು ಮಾಂ ನಿತ್ಯಂ ಭಜಮಾನಾಮನಿಂದಿತಾಮ್ ।
ಮಾನನಾಂ ತ್ವಹಮಿಚ್ಛಾಮಿ ಭವತ್ಯಃ ಸತತಂ ಶುಭಾಃ ॥೧೯॥

ನೀವು ಮಹಾನುಭಾವರು, ಶರಣವತ್ಸಲರಾದವರು. ಶರಣಾಗತಳಾದ, ನಿತ್ಯವೂ ನಿಮ್ಮನ್ನು ಸೇವಿಸುವ ಅನಿಂದಿತಳಾದ ನನ್ನನ್ನು ರಕ್ಷಿಸಿ. ಎಲೌ ಪೂಜ್ಯರೇ, ಸತತವಾಗಿ ಶುಭರಾದವರೇ, ನಾನು ನಿಮ್ಮಿಂದ ಸಮ್ಮಾನವನ್ನು ಇಚ್ಛಿಸುತ್ತೇನೆ.

ಅಪ್ಯೇಕಾಂಗೇ ತು ವೋ ವಸ್ತುಮಿಚ್ಛಾಮಿ ಚ ಸುಕುತ್ಸಿತೇ ।
ನ ವೋऽಸ್ತಿ ಕುತ್ಸಿತಂ ಕಿಂಚಿದಂಗೇಷ್ವಾಲಕ್ಷ್ಯತೇऽನಘಾಃ ॥೨೦॥

ನಿಮ್ಮ ಅತ್ಯಂತ ಕುತ್ಸಿತವಾದ ಒಂದು ಅವಯವದಲ್ಲಾದರೂ ವಾಸ ಮಾಡಲು ಇಚ್ಛಿಸುತ್ತೇನೆ. ಎಲೌ ಅನಘರೇ, ನಿಮ್ಮ ಅಂಗಗಳಲ್ಲಿ ಯಾವುದೂ ಕುತ್ಸಿತವಾಗಿರುವುದು ಕಂಡುಬರುವುದಿಲ್ಲ.

ಪುಣ್ಯಾಃ ಪವಿತ್ರಾಃ ಸುಭಗಾ ಮಮಾದೇಶಂ ಪ್ರಯಚ್ಛತ ।
ವಸೇಯಂ ಯತ್ರ ಚಾಂಗೇಽಹಂ ತನ್ಮೇ ವ್ಯಾಖ್ಯಾತುಮರ್ಹಥ ॥೨೧॥

ಪುಣ್ಯಪ್ರದರೇ, ಪವಿತ್ರರಾದವರೇ, ಸೌಭಾಗ್ಯವಂತರೇ, ನನಗೆ ಆದೇಶವನ್ನು ನೀಡಿ. ನಾನು ನಿಮ್ಮ ಯಾವ ಅವಯವದಲ್ಲಿ ಇರಬಹುದೆಂದು ನನಗೆ ನೀವು ಹೇಳಬೇಕು.

ಭೀಷ್ಮಃ

ಏವಮುಕ್ತಾಸ್ತು ತಾ ಗಾವಃ ಶುಭಾಃ ಕರುಣವತ್ಸಲಾಃ ।
ಸಮ್ಮಂತ್ರ್ಯ ಸಹಿತಾಃ ಸರ್ವಾಃ ಶ್ರಿಯಮೂಚುರ್ನರಾಧಿಪ ॥೨೨॥

ಭೀಷ್ಮ– ಎಲೈ ನರಾಧಿಪನೇ, ಹೀಗೆ ಹೇಳಲ್ಪಟ್ಟ ಸಾಧುಸ್ವರೂಪದ ಮತ್ತು ಕರುಣವತ್ಸಲರಾದ ಆ ಗೋವುಗಳು ಒಟ್ಟಿಗೆ ವಿಚಾರ ಮಾಡಿ ಎಲ್ಲವೂ ಲಕ್ಷ್ಮಿಯನ್ನು ಕುರಿತು ಹೇಳಿದವು.

ಅವಶ್ಯಂ ಮಾನನಾ ಕಾರ್ಯಾ ತವಾಸ್ಮಾಭಿರ್ಯಶಸ್ವಿನಿ ।
ಶಕೃನ್ಮೂತ್ರೇ ನಿವಸ ನಃ ಪುಣ್ಯಮೇತದ್ಧಿ ನಃ ಶುಭೇ ॥೨೩॥

ಎಲೌ ಯಶಸ್ವಿನಿಯೇ, ನಿನಗೆ ಅವಶ್ಯವಾಗಿ ನಾವು ಮರ್ಯಾದೆಯನ್ನು ಮಾಡಬೇಕು. ನೀನು ನಮ್ಮ ಮಲ-ಮೂತ್ರಗಳಲ್ಲಿ ವಾಸ ಮಾಡು. ಎಲೌ ಶುಭಳಾದವಳೇ, ಇದು ನಮಗೆ ಪುಣ್ಯಪ್ರದವಾದುದು.

ಶ್ರೀಃ

ದಿಷ್ಟ್ಯಾ ಪ್ರಸಾದೋ ಯುಷ್ಮಾಭಿಃ ಕೃತೋ ಮೇಽನುಗ್ರಹಾತ್ಮಕಃ ।
ಏವಂ ಭವತು ಭದ್ರಂ ವಃ ಪೂಜಿತಾಽಸ್ಮಿ ಸುಖಪ್ರದಾಃ ॥೨೪॥

ಶ್ರೀ– ದೇವರದಯದಿಂದ ನೀವು ನನಗೆ ಅನುಗ್ರಹರೂಪವಾದ ಪ್ರಸಾದವನ್ನು ಮಾಡಿದ್ದೀರಿ. ಹಾಗೆಯೇ ಆಗಲಿ. ನಿಮಗೆ ಮಂಗಳವಾಗಲಿ. ಎಲೌ ಸುಖಪ್ರದರೇ, ನಿಮ್ಮಿಂದ ನಾನು ಪೂಜಿಸಲ್ಪಟ್ಟಿದ್ದೇನೆ.

ಭೀಷ್ಮಃ

ಏವಂ ಕೃತ್ವಾ ತು ಸಮಯಂ ಶ್ರೀರ್ಗೋಭಿಃ ಸಹ ಭಾರತ ।
ಪಶ್ಯಂತೀನಾಂ ತತಸ್ತಾಸಾಂ ತತ್ರೈವಾಂತರಧೀಯತ ॥೨೫॥

ಏತದ್ ಗೋಶಕೃತಃ ಪುತ್ರ ಮಾಹಾತ್ಮ್ಯಂ ತೇऽನುವರ್ಣಿತಮ್ ।
ಮಾಹಾತ್ಮ್ಯಂ ಚ ಗವಾಂ ಭೂಯಃ ಶ್ರೂಯತಾಂ ಗದತೋ ಮಮ ॥

ಭೀಷ್ಮ– ಎಲೈ ಭಾರತನೇ, ಹೀಗೆ ಲಕ್ಷ್ಮಿಯು ಗೋವುಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು ಗೋವುಗಳು ನೋಡುತ್ತಿರುವಂತೆಯೇ ಅಲ್ಲಿಯೇ ಅಂತರ್ಧಾನವನ್ನು ಹೊಂದಿದಳು. ಎಲೈ ಪುತ್ರನೇ, ಗೋಮಯದ ಈ ಮಾಹಾತ್ಮ್ಯವನ್ನು ನಿನಗೆ ವರ್ಣಿಸಿದ್ದೇನೆ. ಗೋವುಗಳ ಮಾಹಾತ್ಮ್ಯವನ್ನು ಇನ್ನೂ ವರ್ಣಿಸುತ್ತೇನೆ. ಅದನ್ನು ನೀನು ನನ್ನಿಂದ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋಶಕೃನ್ಮಹಿಮವರ್ಣನಂ ನಾಮ
ತ್ರಯೋವಿಂಶತ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

ಗೋಲೋಕ ವಿಷಯದಲ್ಲಿ ಬ್ರಹ್ಮೇಂದ್ರರ ಸಂವಾದ.

ಭೀಷ್ಮಃ

ಯೇ ಚ ಗಾಃ ಸಂಪ್ರಯಚ್ಛಂತಿ ಹುತಶಿಷ್ಟಾಶಿನಶ್ಚ ಯೇ ।
ತೇಷಾಂ ಸತ್ರಾಣಿ ಯಜ್ಞಾಶ್ಚ ನಿತ್ಯಮೇವ ಯುಧಿಷ್ಠಿರ ॥೧॥

ಭೀಷ್ಮ– ಎಲೈ ಯುಧಿಷ್ಠಿರನೇ, ಯಾರು ಗೋದಾನವನ್ನು ಮಾಡುತ್ತಾರೆಯೋ ಮತ್ತು ಯಜ್ಞಶೇಷವನ್ನು ಭುಂಜಿಸುತ್ತಾರೆಯೋ ಅವರು ನಿತ್ಯವೂ ಎಲ್ಲ ಸತ್ರಗಳನ್ನೂ ಮತ್ತು ಯಜ್ಞಗಳನ್ನೂ ಮಾಡಿದಂತೆಯೇ.

ಋತೇ ದಧಿಘೃತೇನೇಹ ನ ಯಜ್ಞಃ ಸಂಪ್ರವರ್ತತೇ ।
ತೇನ ಯಜ್ಞಸ್ಯ ಯಜ್ಞತ್ವಮತೋಮೂಲಂ ಚ ಲಕ್ಷ್ಯತೇ ॥೨॥

ದಧಿ-ಘೃತಗಳಿಲ್ಲದೆ ಯಜ್ಞಗಳು ನೆರವೇರುವುದಿಲ್ಲ. ದಧಿ-ಘೃತಗಳಿಂದ ಯಜ್ಞವು ನಿಷ್ಪನ್ನವಾಗುತ್ತದೆ. ಆದ್ದರಿಂದ ಯಜ್ಞಗಳಿಗೆ ದಧಿ-ಘೃತಗಳು ಮೂಲವೆಂದು ತಿಳಿದು ಬರುತ್ತದೆ.

ದಾನಾನಾಮಪಿ ಸರ್ವೇಷಾಂ ಗವಾಂ ದಾನಂ ಪ್ರಶಸ್ಯತೇ ।
ಗಾವಃ ಶ್ರೇಷ್ಠಾಃ ಪವಿತ್ರಾಶ್ಚ ಪಾವನಂ ಹ್ಯೇತದುತ್ತಮಮ್ ॥೩॥

ಎಲ್ಲ ದಾನಗಳಲ್ಲಿಯೂ ಗೋದಾನವು ಶ್ರೇಷ್ಠವಾದುದು. ಗೋವುಗಳು ಪವಿತ್ರವಾದವುಗಳು ಮತ್ತು ಶ್ರೇಷ್ಠವಾದವುಗಳು. ಆದ್ದರಿಂದ ಗೋದಾನವು ಪರಮ ಪವಿತ್ರವಾದುದು.

ಪುಷ್ಟ್ಯರ್ಥಮೇತಾಃ ಸೇವೇತ ಶಾಂತ್ಯರ್ಥಮಪಿ ಚೈವ ಹ ।
ಪಯೋ ದಧಿ ಘೃತಂ ಯಾಸಾಂ ಸರ್ವಪಾಪಪ್ರಮೋಚನಮ್ ॥೪॥

ಪೌಷ್ಟಿಕಕರ್ಮಗಳಿಗಾಗಿ ಮತ್ತು ಶಾಂತಿಕರ್ಮಗಳಿಗಾಗಿ ಗೋವುಗಳನ್ನು ಸೇವಿಸಬೇಕು. ಅವುಗಳ ಕ್ಷೀರ-ದಧಿ-ಘೃತಗಳು ಎಲ್ಲ ಪಾಪಗಳನ್ನೂ ಪರಿಹರಿಸುತ್ತವೆ.

ಗಾವಸ್ತೇಜಃ ಪರಂ ಪ್ರೋಕ್ತಮಿಹ ಲೋಕೇ ಪರತ್ರ ಚ ।
ನ ಗೋಭ್ಯಃ ಪರಮಂ ಕಿಂಚಿತ್ ಪವಿತ್ರಂ ಪುರುಷರ್ಷಭ ॥೫॥

ಗೋವುಗಳು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಶ್ರೇಷ್ಠವಾದ ತೇಜಸ್ಸೆಂದು ಹೇಳಲ್ಪಡುತ್ತವೆ. ಎಲೈ ಪುರುಷಶ್ರೇಷ್ಠನೇ, ಗೋವುಗಳಿಗಿಂತಲೂ ಪವಿತ್ರವಾದುದು ಇನ್ನೊಂದಿಲ್ಲ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪಿತಾಮಹಸ್ಯ ಸಂವಾದಮಿಂದ್ರಸ್ಯ ಚ ಯುಧಿಷ್ಠಿರ ॥೬॥

ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿಯೂ ಸಹ ಬ್ರಹ್ಮದೇವರಿಗೂ ಮತ್ತು ಇಂದ್ರನಿಗೂ ನಡೆದ ಸಂವಾದ ರೂಪವಾದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಪರಾಭೂತೇಷು ದೈತ್ಯೇಷು ಶಕ್ರೇ ತ್ರಿಭುವನೇಶ್ವರೇ ।
ಪ್ರಜಾಃ ಸಮುದಿತಾಃ ಸರ್ವಾಃ ಸತ್ಯಧರ್ಮಪರಾಯಣಾಃ ॥೭॥

ಅಥರ್ಷಯಃ ಸಗಂಧರ್ವಾಃ ಕಿನ್ನರೋರಗರಾಕ್ಷಸಾಃ ।
ದೇವಾಸುರಸುಪರ್ಣಾಶ್ಚ ಪ್ರಜಾನಾಂ ಪತಯಸ್ತಥಾ ।
ಪರ್ಯುಪಾಸಂತ ಕೌರವ್ಯ ಕದಾಚಿದ್ ವೈ ಪಿತಾಮಹಮ್ ॥೮॥

ದೈತ್ಯರು ಪರಾಜಿತರಾಗಿ ಇಂದ್ರನು ಮೂರುಲೋಕಗಳಿಗೆ ಅಧಿಪತಿಯಾದ ಮೇಲೆ ಸತ್ಯಧರ್ಮಪರಾಯಣರಾದ ಪ್ರಜೆಗಳೆಲ್ಲರೂ ಒಟ್ಟುಸೇರಿದರು. ಎಲೈ ಕೌರವ್ಯನೇ, ಆಗ ಋಷಿಗಳು, ಗಂಧರ್ವರು, ಕಿನ್ನರೋರಗ-ರಾಕ್ಷಸರು, ದೇವಾಸುರ-ಸುಪರ್ಣರು, ಪ್ರಜಾಪತಿಗಳು, ಬ್ರಹ್ಮದೇವರನ್ನು ಓಲೈಸಿದರು.

ನಾರದಃ ಪರ್ವತಶ್ಚೈವ ವಿಶ್ವಾವಸುಹಹಾಹುಹೂ ।
ದಿವ್ಯತಾನೇಷು ಗಾಯಂತಃ ಪರ್ಯುಪಾಸಂತ ತಂ ಪ್ರಭುಮ್ ॥೯॥

ನಾರದ, ಪರ್ವತ, ವಿಶ್ವಾವಸು, ಹಹಾ-ಹುಹೂ ಇವರು ದಿವ್ಯವಾದ ಗಾನ ಮಾಡುತ್ತಾ ಪ್ರಭುವಾದ ಬ್ರಹ್ಮದೇವರನ್ನು ಸೇವಿಸಿದರು.

ತತ್ರ ದಿವ್ಯಾನಿ ಪುಷ್ಪಾಣಿ ಪ್ರಾವಹತ್ ಪವನಸ್ತಥಾ ।
ಆಜಹ್ರುರ್ಋತವಶ್ಚಾಪಿ ಸುಗಂಧೀನಿ ಪೃಥಕ್‌ಪೃಥಕ್ ॥೧೦॥

ಅಲ್ಲಿಗೆ ವಾಯುವು ದಿವ್ಯಪುಷ್ಪಗಳನ್ನು ಹಾರಿಸಿಕೊಂಡು ಬಂದನು. ಋತುಗಳೂ ಸಹ ಬೇರೆ ಬೇರೆಯಾಗಿ ಸುಗಂಧಯುಕ್ತ ಪುಷ್ಪಗಳನ್ನು ತಂದವು.

ತಸ್ಮಿನ್ ದೇವಸಮಾವಾಯೇ ಸರ್ವಭೂತಸಮಾಗಮೇ ।
ದಿವ್ಯವಾದಿತ್ರಸಂಘುಷ್ಟೇ ದಿವ್ಯಸ್ತ್ರೀಚಾರಣಾವೃತೇ ।
ಇಂದ್ರಃ ಪಪ್ರಚ್ಛ ದೇವೇಶಮಭಿವಾದ್ಯ ಪ್ರಣಮ್ಯ ಚ ॥೧೧॥

ದೇವಸಮೂಹವೂ, ಸರ್ವಭೂತಸಮೂಹವೂ ಇದ್ದ ದಿವ್ಯವಾದ್ಯ ಸಂಗೀತಗಳಿಂದ ಕೂಡಿದ, ದಿವ್ಯಸ್ತ್ರೀ-ಚಾರಣರಿಂದ ಕೂಡಿದ ಆ ಸಭೆಯಲ್ಲಿ ದೇವೇಶನಾದ ಇಂದ್ರನು ಬ್ರಹ್ಮದೇವರಿಗೆ ನಮಸ್ಕರಿಸಿ ಪ್ರಶ್ನೆಯನ್ನು ಮಾಡಿದನು.

ದೇವಾನಾಂ ಭಗವನ್ ಕಸ್ಮಾಲ್ಲೋಕೇಶಾನಾಂ ಪಿತಾಮಹ ।
ಉಪರಿಷ್ಟಾದ್ ಗವಾಂ ಲೋಕ ಏತದಿಚ್ಛಾಮಿ ವೇದಿತುಮ್ ॥೧೨॥

ಎಲೈ ಪಿತಾಮಹನೇ, ಪೂಜ್ಯನೇ, ಗೋಲೋಕವು ಯಾವ ಕಾರಣದಿಂದ ಲೋಕೇಶ್ವರರಾದ ದೇವತೆಗಳ ಲೋಕದ ಮೇಲೆ ಇದೆ? ಇದನ್ನು ತಿಳಿಯಲು ಬಯಸುತ್ತೇನೆ.

ಕಿಂ ತಪೋ ಬ್ರಹ್ಮಚರ್ಯಂ ವಾ ಗೋಭಿಃ ಕೃತಮಿಹೇಶ್ವರ ।
ದೇವಾನಾಮುಪರಿಷ್ಟಾದ್ ಯದ್ ವಸಂತ್ಯರಜಸಃ ಸುಖಮ್ ॥೧೩॥

ಎಲೈ ಈಶ್ವರನೇ, ದೇವತೆಗಳಿಗಿಂತ ಮೇಲ್ಭಾಗದಲ್ಲಿ ಯಾವ ದೋಷವೂ ಇಲ್ಲದೆ ಸುಖವಾಗಿ ವಾಸಿಸುವುದಕ್ಕೆ ಗೋವುಗಳು ಯಾವ ತಪಸ್ಸನ್ನು ಅಥವಾ ಬ್ರಹ್ಮಚರ್ಯವನ್ನು ಮಾಡಿದವು?

ತತಃ ಪ್ರೋವಾಚ ತಂ ಬ್ರಹ್ಮಾ ಶಕ್ರಂ ಬಲನಿಸೂದನಮ್ ।
ಅವಜ್ಞಾತಾಸ್ತ್ವಯಾ ನಿತ್ಯಂ ಗಾವೋ ಬಲನಿಸೂದನ ॥೧೪॥

ತೇನ ತ್ವಮಾಸಾಂ ಮಾಹಾತ್ಮ್ಯಂ ನ ವೇತ್ಥ ಶೃಣು ತತ್ತ್ವತೋ ।
ಗವಾಂ ಪ್ರಭಾವಂ ಪರಮಂ ಮಾಹಾತ್ಮ್ಯಂ ಚ ಸುರರ್ಷಭ ॥೧೫॥

ಆಗ ಬ್ರಹ್ಮದೇವರು ಬಲನಿಸೂದನನಾದ ಇಂದ್ರನನ್ನು ಕುರಿತು ಮಾತನಾಡಿದರು. ಎಲೈ ಬಲನಿಸೂದನನೇ, ನೀನು ಯಾವಾಗಲೂ ಗೋವುಗಳನ್ನು ತಿರಸ್ಕರಿಸಿದ್ದೀಯೆ. ಆದ್ದರಿಂದ ಗೋವುಗಳ ಮಾಹಾತ್ಮ್ಯವನ್ನು ತಿಳಿದಿಲ್ಲ. ಎಲೈ ಪ್ರಭುವೇ, ಸುರಪತಿಯೇ, ಗೋವುಗಳ ಸಾಮರ್ಥ್ಯವನ್ನೂ ಮತ್ತು ಶ್ರೇಷ್ಠವಾದ ಮಾಹಾತ್ಮ್ಯವನ್ನೂ ಕೇಳು.

ಯಜ್ಞಾಂಗಂ ಕಥಿತಾ ಗಾವೋ ಯಜ್ಞ ಏವ ಚ ವಾಸವ ।
ಏತಾಭಿಶ್ಚಾಪ್ಯತೇ ಯಜ್ಞೋ ನ ಪ್ರವರ್ತೇತ್ ಕಥಂಚನ ॥೧೬॥

ಎಲೈ ವಾಸವನೇ, ಗೋವುಗಳು ಯಜ್ಞಾಂಗವೆಂದು ಹೇಳಲ್ಪಡುತ್ತವೆ. ಅವೇ ಯಜ್ಞಗಳೂ ಸಹ. ಗೋವುಗಳಿಲ್ಲದೆ ಯಾವ ಯಜ್ಞವೂ ಯಾವ ರೀತಿಯಿಂದಲೂ ನಡೆಯುವುದಿಲ್ಲ.

ಧಾರಯಂತಿ ಪ್ರಜಾಶ್ಚೈವ ಪಯಸಾ ಹವಿಷಾ ತಥಾ ।
ಏತಾಸಾಂ ತನಯಾಶ್ಚಾಪಿ ಕೃಷಿಯೋಗಮುಪಾಸತೇ ॥೧೭॥

ಹಾಗೆಯೇ ತಮ್ಮ ಹಾಲಿನಿಂದಲೂ ಮತ್ತು ಹವಿಸ್ಸಿನಿಂದಲೂ ಅವು ಪ್ರಜೆಗಳನ್ನು ಪೋಷಿಸುತ್ತವೆ. ಇವುಗಳ ಪುತ್ರರೂ ಸಹ ಕೃಷಿಯೋಗದಲ್ಲಿ ತೊಡಗಿರುತ್ತಾರೆ.

ಜನಯಂತಿ ಚ ಧಾನ್ಯಾನಿ ಬೀಜಾನಿ ವಿವಿಧಾನಿ ಚ ।
ತತೋ ಯಜ್ಞಾಃ ಪ್ರವರ್ತಂತೇ ಹವ್ಯಂ ಕವ್ಯಂ ಚ ಸರ್ವಶಃ ॥೧೮॥

ಅವರು ಧಾನ್ಯಗಳನ್ನೂ, ವಿವಿಧ ಬೀಜಗಳನ್ನೂ ಉತ್ಪಾದಿಸುತ್ತಾರೆ. ಅವುಗಳಿಂದ ಯಜ್ಞಗಳೂ, ಹವ್ಯಕವ್ಯಗಳೂ ಎಲ್ಲ ಕಡೆಗಳಲ್ಲಿಯೂ ನಡೆಯುತ್ತವೆ.

ಪಯೋ ದಧಿ ಘೃತಂ ಚೈವ ಪುಣ್ಯಾಶ್ಚೈತಾಃ ಸುರಾಧಿಪ ।
ವಹಂತಿ ವಿವಿಧಾನ್ ಭಾರಾನ್ ಕ್ಷುತ್ತೃಷ್ಣಾಪರಿಪೀಡಿತಾಃ ॥೧೯॥

ಎಲೈ ಸುರಾಧಿಪನೇ, ಗೋವುಗಳು ಪಯೋ-ದಧಿ-ಘೃತಗಳನ್ನೂ ಕೊಡುತ್ತವೆ. ಅವು ಪವಿತ್ರವಾದವುಗಳು. ಗೋವುಗಳ ಪುತ್ರರು ಹಸಿವು-ನೀರಡಿಕೆಯಿಂದ ಪೀಡಿತರಾಗಿ ವಿವಿಧವಾದ ಭಾರವನ್ನು ಹೊರುತ್ತಾರೆ.

ಮುನೀಂಶ್ಚ ಧಾರಯಂತೀಹ ಪ್ರಜಾಶ್ಚೈವಾಪಿ ಕರ್ಮಣಾ ।
ವಾಸವಾಕೂಟವಾಹಿನ್ಯಃ ಕರ್ಮಣಾ ಸುಕೃತೇನ ಚ ।
ಉಪರಿಷ್ಟಾತ್ ತತೋಽಸ್ಮಾಕಂ ವಸಂತ್ಯೇತಾಃ ಸದೈವ ಹಿ ॥೨೦॥

ಗೋವುಗಳು ಋಷಿಗಳನ್ನೂ ಮತ್ತು ಪ್ರಜೆಗಳನ್ನೂ ಧರಿಸಿ ಪೋಷಿಸುತ್ತವೆ. ಎಲೈ ಇಂದ್ರನೇ, ಮೋಸವಿಲ್ಲದೆ ಭಾರಗಳನ್ನು ಎಳೆಯುತ್ತವೆ. ತಮ್ಮ ಕರ್ಮದಿಂದಲೂ ಮತ್ತು ಪುಣ್ಯದಿಂದಲೂ ಗೋವುಗಳು ನಮ್ಮ ಲೋಕಕ್ಕಿಂತ ಮೇಲ್ಭಾಗದಲ್ಲಿ ವಾಸ ಮಾಡುತ್ತವೆ.

ಏತತ್ ತೇ ಕಾರಣಂ ಶಕ್ರ ನಿವಾಸಕೃತಮದ್ಯ ವೈ ।
ಗವಾಂ ದೇವೋಪರಿಷ್ಟಾದ್ಧಿ ಸಮಾಖ್ಯಾತಂ ಶತಕ್ರತೋ ॥೨೧॥

ಎಲೈ ಶತಕ್ರತುವೇ, ನೀನು ಕೇಳಿದ ನಿವಾಸದ ಪ್ರಶ್ನೆಗೆ ಇದು ಉತ್ತರ. ಆದ್ದರಿಂದ ಎಲೈ ಶಕ್ರನೇ, ಗೋವುಗಳ ಸ್ಥಾನವು ದೇವತೆಗಳ ಸ್ಥಾನದ ಮೇಲ್ಭಾಗದಲ್ಲಿದೆ ಎಂದು ಹೇಳಲ್ಪಡುತ್ತದೆ.

ಏತಾ ಹಿ ವರದತ್ತಾಶ್ಚ ವರದಾಶ್ಚೈವ ವಾಸವ ।
ಸೌರಭ್ಯಃ ಪುಣ್ಯಕರ್ಮಿಣ್ಯಃ ಪಾವನಾಃ ಶುಭಲಕ್ಷಣಾಃ ॥೨೨॥

ಎಲೈ ಇಂದ್ರನೇ, ಇವು ವರಗಳನ್ನು ಸ್ವೀಕರಿಸಿವೆ ಮತ್ತು ವರಗಳನ್ನು ಕೊಡುತ್ತವೆ. ಗೋವುಗಳು ಪುಣ್ಯಕರ್ಮಗಳನ್ನು ಮಾಡುತ್ತವೆ, ಪವಿತ್ರವಾಗಿರುತ್ತವೆ ಮತ್ತು ಶುಭಲಕ್ಷಣಗಳನ್ನು ಹೊಂದಿರುತ್ತವೆ.

ಯದರ್ಥಂ ಗಾ ಗತಾಶ್ಚೈವಂ ಸೌರಭ್ಯಃ ಸುರಸತ್ತಮ ।
ತಚ್ಚ ಮೇ ಶೃಣು ಕಾರ್ತ್ಸ್ನ್ಯೇನ ವದತೋ ಬಲಸೂದನ ॥೨೩॥

ಎಲೈ ಸುರಶ್ರೇಷ್ಠನೇ, ಬಲಸೂದನನೇ, ಗೋವುಗಳು ಯಾವ ಕಾರಣದಿಂದ ಉನ್ನತ ಸ್ಥಿತಿಯನ್ನು ಪಡೆದವು ಎಂಬುದನ್ನು ಸಮಗ್ರವಾಗಿ ನನ್ನಿಂದ ಕೇಳು.

ಪುರಾ ದೇವಯುಗೇ ತಾತ ದೈತ್ಯೇಂದ್ರೇಷು ಮಹಾತ್ಮಸು ।
ತ್ರೀಲ್ಲೋಕಾನನುಶಾಸತ್ಸು ವಿಷ್ಣೌ ಗರ್ಭತ್ವಮಾಗತೇ ॥೨೪॥

ಅದಿತ್ಯಾಸ್ತಪ್ಯಮಾನಾಯಾಸ್ತಪೋ ಘೋರಂ ಸುದುಶ್ಚರಮ್ ।
ಪುತ್ರಾರ್ಥಮಮರಶ್ರೇಷ್ಠ ಪಾದೇನೈಕೇನ ನಿತ್ಯದಾ ॥೨೫॥

ತಾಂ ತು ದೃಷ್ಟ್ವಾ ಮಹಾದೇವೀಂ ತಪ್ಯಮಾನಾಂ ಮಹತ್ತಪಃ ।
ದಕ್ಷಸ್ಯ ದುಹಿತಾ ದೇವೀ ಸುರಭಿರ್ನಾಮ ನಾಮತಃ ॥೨೬॥

ಅತಪ್ಯತ ತಪೋ ಘೋರಂ ಹೃಷ್ಟಾ ಧರ್ಮಪರಾಯಣಾ ।
ಕೈಲಾಸಶಿಖರೇ ರಮ್ಯೇ ದೇವಗಂಧರ್ವಸೇವಿತೇ ॥೨೭॥

ಪ್ರೀತಿಪಾತ್ರನೇ, ಹಿಂದೆ ದೇವಯುಗದಲ್ಲಿ ಮಹಾತ್ಮರಾದ ದೈತ್ಯೇಂದ್ರರು ಮೂರು ಲೋಕಗಳನ್ನೂ ಆಳುತ್ತಿರಲು ವಿಷ್ಣುವು ಗೂಢನಾಗಿರಲು, ಅದಿತಿಯು ತನ್ನ ಪುತ್ರರ ಸಲುವಾಗಿ ಒಂದು ಪಾದದ ಮೇಲೆ ನಿಂತು ಘೋರವೂ, ಸುದುಶ್ಚರವೂ ಆದ ತಪಸ್ಸನ್ನು ಮಾಡುತ್ತಿರಲು ಆ ಮಹಾದೇವಿಯು ತಪಸ್ಸನ್ನು ಮಾಡುತ್ತಿರುವುದನ್ನು ನೋಡಿ ದಕ್ಷನ ಪುತ್ರಿಯಾದ ಧರ್ಮಪರಾಯಣೆಯಾದ ಸುರಭಿಯೂ ಮನೋಹರವಾದ, ದೇವಗಂಧರ್ವಸೇವಿತವಾದ ಕೈಲಾಸ ಶಿಖರದಲ್ಲಿ ಘೋರವಾದ ತಪಸ್ಸನ್ನು ಮಾಡಿದಳು.

ವ್ಯತಿಷ್ಠದೇಕಪಾದೇನ ಪರಮಂ ಯೋಗಮಾಸ್ಥಿತಾ ।
ದಶ ವರ್ಷಸಹಸ್ರಾಣಿ ದಶ ವರ್ಷಶತಾನಿ ಚ ॥೨೮॥

ಶ್ರೇಷ್ಠವಾದ ಯೋಗವನ್ನು ಅವಲಂಬಿಸಿ, ಒಂದು ಪಾದದ ಮೇಲೆ ನಿಂತು ಹತ್ತುಸಾವಿರ ವರ್ಷಗಳು ಮತ್ತು ಹತ್ತು ನೂರು ವರ್ಷಗಳ ಕಾಲ ತಪಸ್ಸನ್ನು ಮಾಡಿದಳು.

ಸಂತಪ್ತಾಸ್ತಪಸಾ ತಸ್ಯಾ ದೇವಾಃ ಸರ್ಷಿಮಹೋರಗಾಃ ।
ತತ್ರ ಗತ್ವಾ ಮಯಾ ಸಾರ್ಧಂ ಪರ್ಯುಪಾಸಂತ ತಾಂ ಶುಭಾಮ್ ॥

ಅವಳ ತಪಸ್ಸಿನಿಂದ ಸಂತಪ್ತರಾದ ದೇವತೆಗಳು, ಋಷಿಗಳು ಮತ್ತು ಮಹೋರಗಗಳು ನನ್ನ ಜೊತೆಯಲ್ಲಿ ಅವಳ ಬಳಿಗೆ ಹೋಗಿ ಶುಭಳಾದ ಅವಳನ್ನು ಉಪಾಸನೆ ಮಾಡಿದರು.

ಅಥಾಹಮಬ್ರುವಂ ತತ್ರ ದೇವೀಂ ತಾಂ ತಪಸಾऽನ್ವಿತಾಮ್ ।
ಕಿಮರ್ಥಂ ತಪ್ಯತೇ ದೇವಿ ತಪೋ ಘೋರಮನಿಂದಿತೇ ॥೩೦॥

ಪ್ರೀತಸ್ತೇऽಹಂ ಮಹಾಭಾಗೇ ತಪಸಾऽನೇನ ಶೋಭನೇ ।
ವರಯಸ್ವ ವರಂ ದೇವಿ ದಾತಾಸ್ಮೀತಿ ಪುರಂದರ ॥೩೧॥

ಎಲೈ ಪುರಂದರನೇ, ಆಗ ನಾನು ತಪೋನಿಷ್ಠಳಾದ ಆ ದೇವಿಯನ್ನು ಕುರಿತು- 'ದೇವಿಯೇ, ಅನಿಂದಿತೆಯೇ, ಏಕೆ ಘೋರವಾದ ತಪಸ್ಸನ್ನು ಆಚರಿಸುತ್ತಿದ್ದೀಯೆ? ಮಹಾನುಭಾವಳೇ, ನಾನು ನಿನ್ನ ತಪಸ್ಸಿನಿಂದ ಪ್ರಸನ್ನನಾಗಿದ್ದೇನೆ. ಎಲೌ ಶೋಭನೆಯೇ, ದೇವಿಯೇ, ವರವನ್ನು ಕೇಳು. ನಾನು ಕೊಡುವೆನು' ಎಂದು ಹೇಳಿದೆನು.

ಸುರಭೀ

ವರೇಣ ಭಗವನ್ ಮಹ್ಯಂ ಕೃತಂ ಲೋಕಪಿತಾಮಹ ।
ಏಷ ಏವ ವರೋ ಮೇऽದ್ಯ ಯತ್‌ಪ್ರೀತೋऽಸಿ ಮಮಾನಘ ॥೩೨॥

ಸುರಭೀ– ಪೂಜ್ಯನೇ, ಲೋಕಪಿತಾಮಹನೇ, ನನಗೆ ವರವು ಬೇಕಾಗಿಲ್ಲ. ಅನಘನೇ, ನೀನು ಈ ದಿನ ಪ್ರಸನ್ನನಾಗಿರುವುದೇ ನನಗೆ ದೊಡ್ಡ ವರ.

ಬ್ರಹ್ಮಾ

ತಾಮೇವಂ ಬ್ರುವತೀಂ ದೇವೀಂ ಸುರಭೀಂ ತ್ರಿದಶೇಶ್ವರ ।
ಪ್ರತ್ಯಬ್ರುವಂ ಯದ್ ದೇವೇಂದ್ರ ತನ್ನಿಬೋಧ ಶಚೀಪತೇ ॥೩೩॥

ಬ್ರಹ್ಮಾ– ಎಲೈ ತ್ರಿದಶೇಶ್ವರನೇ, ಶಚೀಪತಿಯೇ, ಹೀಗೆ ಹೇಳುತ್ತಿದ್ದ ದೇವಿಯಾದ ಸುರಭಿಯನ್ನು ಕುರಿತು ನಾನು ಪುನಃ ಮಾತನಾಡಿದೆನು. ಎಲೈ ದೇವೇಂದ್ರನೇ, ಅದನ್ನು ಕೇಳು.

ಅಲೋಭಕಾಮ್ಯಯಾ ದೇವಿ ತಪಸಾ ಚ ಶುಭೇನ ತೇ ।
ಪ್ರಸನ್ನೋಽಹಂ ವರಂ ತಸ್ಮಾದಮರತ್ವಂ ದದಾನಿ ತೇ ॥೩೪॥

ಎಲೌ ದೇವಿಯೇ, ಯಾವ ಕಾಮವೂ ಅಥವಾ ಲೋಭವೂ ಇಲ್ಲದೆ ನೀನು ಮಾಡಿದ ಶುಭವಾದ ತಪಸ್ಸಿನಿಂದ ನಾನು ಪ್ರಸನ್ನನಾಗಿದ್ದೇನೆ. ಆದ್ದರಿಂದ ನಿನಗೆ ಅಮರತ್ವವನ್ನು ವರವಾಗಿ ಕೊಡುವೆನು.

ತ್ರಯಾಣಾಮಪಿ ಲೋಕಾನಾಮುಪರಿಷ್ಟಾನ್ನಿವತ್ಸ್ಯಸಿ ।
ಮತ್ಪ್ರಸಾದಾಚ್ಚ ವಿಖ್ಯಾತೋ ಗೋಲೋಕಃ ಸ ಭವಿಷ್ಯತಿ ॥೩೫॥

ನೀನು ಮೂರುಲೋಕಗಳಿಗಿಂತಲೂ ಮೇಲ್ಭಾಗದಲ್ಲಿರುವ ಲೋಕದಲ್ಲಿ ವಾಸಿಸುವಿ. ನನ್ನ ಅನುಗ್ರಹದಿಂದ ಅದು ಗೋಲೋಕವೆಂದು ಪ್ರಸಿದ್ಧವಾಗುತ್ತದೆ.

ಮಾನುಷೇಷು ಚ ಕುರ್ವಾಣಾಃ ಪ್ರಜಾಃ ಕರ್ಮ ಸುತಾಸ್ತವ ।
ನಿವತ್ಸ್ಯಂತಿ ಮಹಾಭಾಗೇ ಸರ್ವಾ ದುಹಿತರಶ್ಚ ತೇ ॥೩೬॥

ಎಲೌ ಮಹಾನುಭಾವಳೇ, ಮನುಷ್ಯಲೋಕದಲ್ಲಿ ಮನುಷ್ಯರಿಗಾಗಿ ದುಡಿಯುವ ನಿನ್ನ ಪುತ್ರರು ಮತ್ತು ಪುತ್ರಿಯರು ಆ ಲೋಕದಲಿ ವಾಸಮಾಡುವರು.

ಮನಸಾ ಚಿಂತಿತಾ ಭೋಗಾಸ್ತ್ವಯಾ ವೈ ದಿವ್ಯಮಾನುಷಾಃ ।
ಯಚ್ಚ ಸ್ವರ್ಗಸುಖಂ ದೇವಿ ತತ್ ತೇ ಸಂಪತ್ಸ್ಯತೇ ಶುಭೇ ॥೩೭॥

ಎಲೌ ದೇವಿಯೇ, ಶುಭಳಾದವಳೇ, ನೀನು ಮನಸ್ಸಿನಲ್ಲಿ ಚಿಂತಿಸಿದ ದೇವಲೋಕದ ಮತ್ತು ಮನುಷ್ಯಲೋಕದ ಭೋಗಗಳೆಲ್ಲವೂ ಮತ್ತು ಸ್ವರ್ಗಸುಖವೂ ನಿನಗೆ ಉಂಟಾಗುವುದು (ಎಂದು ಹೇಳಿದೆನು).

ತಸ್ಯಾ ಲೋಕಾಃ ಸಹಸ್ರಾಕ್ಷ ಸರ್ವಕಾಮಸಮನ್ವಿತಾಃ ।
ನ ತತ್ರ ಕ್ರಮತೇ ಮೃತ್ಯುರ್ನ ಜರಾ ನ ಚ ಪಾವಕಃ ।
ನ ದೈನ್ಯಂ ನಾಶುಭಂ ಕಿಂಚಿದ್ ವಿದ್ಯತೇ ತತ್ರ ವಾಸವ ॥೩೮॥

ಎಲೈ ಇಂದ್ರನೇ, ಗೋವುಗಳ ಲೋಕಗಳು ಸರ್ವಕಾಮಸಮನ್ವಿತವಾಗಿವೆ. ಅಲ್ಲಿ ಮೃತ್ಯುವಾಗಲೀ, ಜರೆಯಾಗಲೀ, ಅಗ್ನಿಭಯವಾಗಲೀ ಇಲ್ಲ. ಎಲೈ ವಾಸವನೇ, ಅಲ್ಲಿ ಸ್ವಲ್ಪವಾದರೂ ದೈನ್ಯವಾಗಲೀ, ಅಶುಭವಾಗಲೀ ಇಲ್ಲ.

ತತ್ರ ದಿವ್ಯಾನ್ಯರಣ್ಯಾನಿ ದಿವ್ಯಾನಿ ಭವನಾನಿ ಚ ।
ವಿಮಾನಾನಿ ಚ ಯುಕ್ತಾನಿ ಕಾಮಗಾನಿ ಚ ವಾಸವ ॥೩೯॥

ಎಲೈ ವಾಸವನೇ, ದಿವ್ಯವಾದ ಅರಣ್ಯಗಳು ಮತ್ತು ದಿವ್ಯವಾದ ಭವನಗಳು ಇವೆ. ಇಚ್ಛೆ ಬಂದ ಕಡೆಗೆ ಹೋಗುವ ಸಿದ್ಧವಾದ ವಿಮಾನಗಳು ಇವೆ.

ವ್ರತೈಶ್ಚ ವಿವಿಧೈಃ ಪುಣ್ಯೈಸ್ತಥಾ ತೀರ್ಥಾನುಸೇವನಾತ್ ।
ತಪಸಾ ಮಹತಾ ಚೈವ ಸುಕೃತೇನ ಚ ಕರ್ಮಣಾ ।
ಶಕ್ಯಃ ಸಮಾಸಾದಯಿತುಂ ಗೋಲೋಕಃ ಪುಷ್ಕರೇಕ್ಷಣ ॥೪೦॥

ಎಲೈ ಪುಷ್ಕರೇಕ್ಷಣನೇ, ಪವಿತ್ರವಾದ ನಾನಾವಿಧವಾದ ವ್ರತಗಳಿಂದಲೂ, ತೀರ್ಥಯಾತ್ರೆಯಿಂದಲೂ, ದೊಡ್ಡ ತಪಸ್ಸಿನಿಂದಲೂ ಮತ್ತು ಶುಭಕರ್ಮಗಳಿಂದಲೂ ಗೋಲೋಕಕ್ಕೆ ಹೋಗಲು ಸಾಧ್ಯ.

ಏತತ್ ತೇ ಸರ್ವಮಾಖ್ಯಾತಂ ಮಯಾ ಶಕ್ರಾನುಪೃಚ್ಛತೇ ।
ನ ತೇ ಪರಿಭವಃ ಕಾರ್ಯೋ ಗವಾಮರಿನಿಷೂದನ ॥೪೧॥

ಎಲೈ ಶಕ್ರನೇ, ನಿನ್ನ ಪ್ರಶ್ನೆಗೆ ಉತ್ತರವಾಗಿ ನಾನು ಎಲ್ಲವನ್ನೂ ಹೇಳಿದ್ದೇನೆ. ಎಲೈ ಶತ್ರುನಿಷೂದನನೇ, ನೀನು ಗೋವುಗಳನ್ನು ಅವಮಾನಗೊಳಿಸಬಾರದು.

ಭೀಷ್ಮಃ

ಏತಚ್ಛ್ರುತ್ವಾ ಸಹಸ್ರಾಕ್ಷಃ ಪೂಜಯಾಮಾಸ ನಿತ್ಯದಾ ।
ಗಾಶ್ಚಕ್ರೇ ಬಹುಮಾನಂ ಚ ತಾಸು ನಿತ್ಯಂ ಯುಧಿಷ್ಠಿರ ॥೪೨॥

ಭೀಷ್ಮ- ಇದನ್ನು ಕೇಳಿ ಸಹಸ್ರಾಕ್ಷನಾದ ಇಂದ್ರನು ನಿತ್ಯವೂ ಗೋವುಗಳನ್ನು ಪೂಜಿಸಿದನು. ಎಲೈ ಯುಧಿಷ್ಠಿರನೇ, ಗೋವುಗಳಲ್ಲಿ ನಿತ್ಯವೂ ಬಹುಮಾನವನ್ನು ತಾಳಿದನು.

ಏತತ್ತೇ ಸರ್ವಮಾಖ್ಯಾತಂ ಪಾವನಂ ಚ ಮಹಾದ್ಯುತೇ ।
ಪವಿತ್ರಂ ಪರಮಂ ಚಾಪಿ ಗವಾಂ ಮಾಹಾತ್ಮ್ಯಮುತ್ತಮಮ್ ।
ಕೀರ್ತಿತಂ ಪುರುಷವ್ಯಾಘ್ರ ಸರ್ವಪಾಪವಿನಾಶನಮ್ ॥೪೩॥

ಎಲೈ ಮಹಾದ್ಯುತಿಯೇ, ಪವಿತ್ರವಾದ ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಗೋವುಗಳ ಶ್ರೇಷ್ಠವಾದ ಮಾಹಾತ್ಮ್ಯವು ಪರಮಪವಿತ್ರವಾದುದು. ಎಲೈ ಪುರುಷವ್ಯಾಘ್ರನೇ, ಇದನ್ನು ಕೀರ್ತನೆ ಮಾಡಿದರೆ ಸರ್ವಪಾಪಗಳೂ ಪರಿಹಾರವನ್ನು ಹೊಂದುತ್ತವೆ.

ಯ ಇದಂ ಕಥಯೇನ್ನಿತ್ಯಂ ಬ್ರಾಹ್ಮಣೇಭ್ಯಃ ಸಮಾಹಿತಃ ।
ಹವ್ಯಕವ್ಯೇಷು ಯಜ್ಞೇಷು ಪಿತೃಕಾರ್ಯೇಷು ಚೈವ ಹ ।
ಸಾರ್ವಕಾಮಿಕಮಕ್ಷಯ್ಯಂ ಪಿತೄಂಸ್ತಸ್ಯೋಪತಿಷ್ಠತಿ ॥೪೪॥

ಯಾವನು ಸಮಾಹಿತರಾಗಿ ಹವ್ಯ-ಕವ್ಯಗಳಲ್ಲಿಯೂ, ಯಜ್ಞಗಳಲ್ಲಿಯೂ, ಪಿತೃಕಾರ್ಯದಲ್ಲಿಯೂ ಇದನ್ನು ಯಾವಾಗಲೂ ಬ್ರಾಹ್ಮಣರಿಗೆ ಶ್ರವಣ ಮಾಡಿಸುತ್ತಾನೆಯೋ ಅವನು ಮಾಡಿದ ಕರ್ಮಗಳೆಲ್ಲವೂ ಎಲ್ಲ ಕಾಮ್ಯಗಳನ್ನೂ ಕೊಡುತ್ತವೆ ಮತ್ತು ಅವನ ಪಿತೃಗಳನ್ನು ತಲುಪುತ್ತದೆ.

ಗೋಷು ಭಕ್ತಶ್ಚ ಲಭತೇ ಯದ್ಯದಿಚ್ಛತಿ ಮಾನವಃ ।
ಸ್ತ್ರಿಯೋಽಪಿ ಭಕ್ತಾ ಯಾ ಗೋಷು ತಾಶ್ಚ ಕಾಮಾನವಾಪ್ನುಯುಃ ॥೪೫॥

ಗೋವುಗಳಲ್ಲಿ ಭಕ್ತಿಯುಳ್ಳವನು ಬಯಸಿದುದೆಲ್ಲವನ್ನೂ ಪಡೆಯುತ್ತಾನೆ. ಗೋವುಗಳಲ್ಲಿ ಭಕ್ತಿಯುಳ್ಳ ಸ್ತ್ರೀಯರೂ ಸಹ ತಾವು ಬಯಸಿದುದನ್ನು ಪಡೆಯುತ್ತಾರೆ.

ಪುತ್ರಾರ್ಥೀ ಲಭತೇ ಪುತ್ರಂ ಕನ್ಯಾ ಪತಿಮವಾಪ್ನುಯಾತ್ ।
ಧನಾರ್ಥೀ ಲಭತೇ ವಿತ್ತಂ ಧರ್ಮಾರ್ಥೀ ಧರ್ಮಮಾಪ್ನುಯಾತ್ ॥೪೬॥

ಪುತ್ರನನ್ನು ಅಪೇಕ್ಷಿಸುವವನು ಪುತ್ರನನ್ನು ಪಡೆಯುತ್ತಾನೆ. ಕನ್ಯೆಯು ಪತಿಯನ್ನು ಪಡೆಯುತ್ತಾಳೆ. ಧನವನ್ನು ಬಯಸುವವನು ಧನವನ್ನು ಪಡೆಯುತ್ತಾನೆ. ಧರ್ಮವನ್ನು ಬಯಸುವವನು ಧರ್ಮವನ್ನು ಹೊಂದುತ್ತಾನೆ.

ವಿದ್ಯಾರ್ಥೀ ಪ್ರಾಪ್ನುಯಾದ್ ವಿದ್ಯಾಂ ಸುಖಾರ್ಥೀ ಪ್ರಾಪ್ನುಯಾತ್ ಸುಖಮ್।
ನ ಕಿಂಚಿದ್ ದುರ್ಲಭಂ ಚೈವ ಗವಾಂ ಭಕ್ತಸ್ಯ ಭಾರತ ॥೪೭॥

ವಿದ್ಯಾರ್ಥಿಯು ವಿದ್ಯೆಯನ್ನೂ, ಸುಖಾರ್ಥಿಯು ಸುಖವನ್ನೂ ಪಡೆಯುತ್ತಾನೆ. ಎಲೈ ಭಾರತನೇ, ಗೋವುಗಳಲ್ಲಿ ಭಕ್ತಿಯುಳ್ಳವನಿಗೆ ಯಾವುದೂ ದುರ್ಲಭವಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಗೋಲೋಕಮಾಹಾತ್ಮ್ಯಕಥನಂ ನಾಮ
ಚತುರ್ವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೈದನೆಯ ಅಧ್ಯಾಯ

ಸುವರ್ಣೋತ್ಪತ್ತಿ ಮತ್ತು ಸುವರ್ಣದಕ್ಷಿಣೆ

ಯುಧಿಷ್ಠಿರಃ

ಉಕ್ತಂ ಪಿತಾಮಹೇನೇದಂ ಗವಾಂ ದಾನಮನುತ್ತಮಮ್ ।
ವಿಶೇಷೇಣ ನರೇಂದ್ರಾಣಾಮಿತಿ ಧರ್ಮಮವೇಕ್ಷತಾಮ್ ॥೧॥

ಯುಧಿಷ್ಠಿರ– ಬ್ರಹ್ಮದೇವರಿಂದ ವಿಶೇಷವಾಗಿ ಧರ್ಮಿಷ್ಠರಾದ ರಾಜರನ್ನು ಗಮನಿಸಿ ಶ್ರೇಷ್ಠವಾದ ಈ ಗೋದಾನವನ್ನು ಹೇಳಲ್ಪಟ್ಟಿದೆ.

ರಾಜ್ಯಂ ಹಿ ಸತತಂ ದುಃಖಮಾಶ್ರಮಾಶ್ಚ ಸುದುರ್ವಿದಾಃ ।
ಪರಿವಾರೇಣ ವೈ ದುಃಖಂ ದುರ್ಧರಂ ಚಾಕೃತಾತ್ಮಭಿಃ ।
ಭೂಯಿಷ್ಠಂ ಚ ನರೇಂದ್ರಾಣಾಂ ವಿದ್ಯತೇ ನ ಶುಭಾ ಗತಿಃ ॥೨॥

ರಾಜ್ಯವು ಯಾವಾಗಲೂ ದುಃಖದಾಯಕವಾದುದು. ಆಶ್ರಮವನ್ನು ತಿಳಿಯುವುದು ಕಷ್ಟಸಾಧ್ಯವಾದುದು. ಪರಿವಾರದಿಂದಲೂ ದುಃಖವುಂಟಾಗುವುದು. ಅದನ್ನು

ಮನೋಧೈರ್ಯವಿಲ್ಲದವರು ಧರಿಸಲು ಸಾಧ್ಯವಿಲ್ಲ. ರಾಜರಿಗೆ ಹೆಚ್ಚಾಗಿ ಶುಭಗತಿಯು ಇರುವುದಿಲ್ಲ.

ಪೂಯಂತೇ ತೇऽತ್ರ ನಿಯತಂ ಪ್ರಯಚ್ಛಂತೋ ವಸುಂಧರಾಮ್ ।
ಪೂರ್ವಂ ಚ ಕಥಿತಾ ಧರ್ಮಾಸ್ತ್ವಯಾ ಮೇ ಕುರುನಂದನ ॥೩॥

ಅವರು ಭೂದಾನವನ್ನು ಮಾಡಿದರೆ ಇಲ್ಲಿ ನಿಯಮೇನ ಶುದ್ಧರಾಗುತ್ತಾರೆ. ಎಲೈ ಕುರುನಂದನನೇ, ಹಿಂದೆ ನೀನು ನನಗೆ ಧರ್ಮಗಳನ್ನು ಹೇಳಿದ್ದೀಯೆ.

ಏವಮೇವ ಗವಾಮುಕ್ತಂ ಪ್ರದಾನಂ ತೇ ನೃಗೇಣ ಹ ।
ಋಷಿಣಾ ನಾಚಿಕೇತೇನ ಪೂರ್ವಮೇವ ನಿದರ್ಶಿತಮ್ ॥೪॥

ಹಾಗೆಯೇ ನೃಗನು ಮಾಡಿದ ಗೋದಾನವನ್ನೂ, ನಾಚಿಕೇತ ಋಷಿಯ ನಿದರ್ಶನವನ್ನೂ ಹೇಳಿದ್ದೀಯೆ.

ವೇದೋಪನಿಷದೇ ಚೈವ ಸರ್ವಕರ್ಮಸು ದಕ್ಷಿಣಾ ।
ಸರ್ವಕ್ರತುಷು ಚೋದ್ದಿಷ್ಟಂ ಭೂಮಿರ್ಗಾವೋऽಥ ಕಾಂಚನಮ್ ॥೫॥

ವೇದೋಪನಿಷತ್ತುಗಳಲ್ಲಿ ಎಲ್ಲ ಕರ್ಮಗಳಲ್ಲಿಯೂ, ಎಲ್ಲ ಭೂಮಿ, ಗೋವು ಮತ್ತು ಸುವರ್ಣವೆಂಬುದು ದಕ್ಷಿಣೆಯೆಂದು ನಿರ್ದಿಷ್ಟವಾಗಿದೆ.

ತತ್ರ ಶ್ರುತಿಸ್ತು ಪರಮಾ ಸುವರ್ಣಂ ದಕ್ಷಿಣೇತಿ ವೈ ।
ಏತದಿಚ್ಛಾಮ್ಯಹಂ ಶ್ರೋತುಂ ಪಿತಾಮಹ ಯಥಾತಥಮ್ ॥೬॥

ಈ ವಿಷಯದಲ್ಲಿ ಸುವರ್ಣವು ದಕ್ಷಿಣೆ ಎಂಬ ಶ್ರೇಷ್ಠವಾದ ಶ್ರುತಿಯು ಇದೆ. ಎಲೈ ಪಿತಾಮಹನೇ, ಇದನ್ನು ಸರಿಯಾಗಿ ಕೇಳಲು ಬಯಸುತ್ತೇನೆ.

ಕಿಂ ಸುವರ್ಣಂ ಕಥಂ ಜಾತಂ ಕಸ್ಮಿನ್ ಕಾಲೇ ಕಿಮಾತ್ಮಕಮ್ ।
ಕಿಂ ದಾನಂ ಕಿಂ ಫಲಂ ಚೈವ ಕಸ್ಮಾಚ್ಚ ಪರಮುಚ್ಯತೇ ॥೭॥

ಸುವರ್ಣ ಯಾವುದು? ಅದು ಯಾವ ಕಾಲದಲ್ಲಿ ಹೇಗೆ ಜನಿಸಿತು? ಅದರ ಸ್ವರೂಪವು ಎಂತಹದು? ಅದನ್ನು ದಾನ ಮಾಡುವ ರೀತಿ ಹೇಗೆ? ಅದರ ಫಲವೇನು? ಏತಕ್ಕೆ ಅದನ್ನು ಶ್ರೇಷ್ಠವೆಂದು ಹೇಳುತ್ತಾರೆ?

ಕಸ್ಮಾದ್ ದಾನಂ ಸುವರ್ಣಸ್ಯ ಪೂಜಯಂತಿ ಮನೀಷಿಣಃ ।
ಕಸ್ಮಾಚ್ಚ ದಕ್ಷಿಣಾರ್ಥಂ ತದ್ ಯಜ್ಞಕರ್ಮಸು ಶಸ್ಯತೇ ॥೮॥

ಜ್ಞಾನಿಗಳು ಏಕೆ ಸುವರ್ಣದಾನವನ್ನು ಪೂಜಿಸುತ್ತಾರೆ? ಯಾವ ಕಾರಣದಿಂದ ಯಜ್ಞಗಳಲ್ಲಿ ಅದು ದಕ್ಷಿಣೆ ಎಂದು ಹೇಳಲ್ಪಡುತ್ತದೆ?

ಕಸ್ಮಾಚ್ಚ ಪಾವನಂ ಶ್ರೇಷ್ಠಂ ಭೂಮೇರ್ಗೋಭ್ಯಶ್ಚ ಕಾಂಚನಮ್ ।
ಪರಮಂ ದಕ್ಷಿಣಾರ್ಥೇ ಚ ತದ್ ಬ್ರವೀಹಿ ಪಿತಾಮಹ ॥೯॥

ಎಲೈ ಪಿತಾಮಹನೇ, ಸುವರ್ಣವು ಯಾವ ಕಾರಣದಿಂದ ಭೂಮಿಗಿಂತಲೂ ಮತ್ತು ಗೋವುಗಳಿಗಿಂತಲೂ ಪವಿತ್ರ ಮತ್ತು ಶ್ರೇಷ್ಠವಾದುದು ಮತ್ತು ದಕ್ಷಿಣೆಯ ವಿಷಯದಲ್ಲಿ ಶ್ರೇಷ್ಠವಾಯಿತು ಎಂದು ಹೇಳು.

ಭೀಷ್ಮಃ

ಶೃಣು ರಾಜನ್ನವಹಿತೋ ಬಹುಕಾರಣವಿಸ್ತರಮ್ ।
ಜಾತರೂಪಸಮುತ್ಪತ್ತಿಮನುಭೂತಂ ಚ ಯನ್ಮಯಾ ॥೧೦॥

ಭೀಷ್ಮ– ಎಲೈ ರಾಜನೇ, ಅನೇಕ ಕಾರಣಗಳಿಂದ ವಿಸ್ತಾರವಾಗಿರುವ ಈ ಸುವರ್ಣದ ಉತ್ಪತ್ತಿಯ ಕಥೆಯನ್ನೂ ಮತ್ತು ನನ್ನ ಅನುಭವವನ್ನೂ ಅವಧಾನದಿಂದ ಕೇಳು.

ಪಿತಾ ಮಮ ಮಹಾತೇಜಾಃ ಶಂತನುರ್ನಿಧನಂ ಗತಃ ।
ತಸ್ಯ ದಿತ್ಸುರಹಂ ಶ್ರಾದ್ಧಂ ಗಂಗಾದ್ವಾರಮುಪಾಗಮಮ್ ॥೧೧॥

ಮಹಾತೇಜಸ್ವಿಯಾದ ನನ್ನ ತಂದೆಯಾದ ಶಂತನುವು ಮೃತನಾದನು. ಅವನಿಗೆ ಶ್ರಾದ್ಧವನ್ನು ಕೊಡಲು ಬಯಸಿ ನಾನು ಗಂಗಾದ್ವಾರಕ್ಕೆ ಹೋದೆನು.

ತತ್ರಾಗಮ್ಯ ಪಿತುಃ ಪುತ್ರ ಶ್ರಾದ್ಧಕರ್ಮ ಸಮಾರಭಮ್ ।
ಮಾತಾ ಮೇ ಜಾಹ್ನವೀ ಚೈವ ಸಾಹಾಯ್ಯಮಕರೋತ್ ತದಾ ॥೧೨॥

ಎಲೈ ಪುತ್ರನೇ, ಅಲ್ಲಿಗೆ ಹೋಗಿ ತಂದೆಯ ಸಲುವಾಗಿ ಶ್ರಾದ್ಧಕರ್ಮವನ್ನು ಪ್ರಾರಂಭಿಸಿದೆನು. ನನ್ನ ತಾಯಿಯಾದ ಗಂಗೆಯು ಆಗ ನನಗೆ ಸಹಾಯವನ್ನು ಮಾಡಿದಳು.

ತತೋऽಗ್ರತಸ್ತಪಃಸಿದ್ಧಾನುಪವೇಶ್ಯ ಬಹೂನೃಷೀನ್ ।
ತೋಯಪ್ರದಾನಾತ್ ಪ್ರಭೃತಿ ಕಾರ್ಯಾಣ್ಯಹಮಥಾರಭಮ್ ॥೧೩॥

ಅನಂತರ ನಾನು ತಪಃಸಿದ್ಧರಾದ ಅನೇಕ ಋಷಿಗಳನ್ನು ಎದುರಿಗೆ ಕುಳ್ಳಿರಿಸಿ ಜಲದಾನದಿಂದ ಹಿಡಿದು ಎಲ್ಲ ಕಾರ್ಯಗಳನ್ನೂ ಆರಂಭಿಸಿದೆನು.

ತತ್ಸಮಾಪ್ಯ ಯಥೋದ್ದಿಷ್ಟಂ ಪೂರ್ವಕರ್ಮ ಸಮಾಹಿತಃ ।
ದಾತುಂ ನಿರ್ವಪಣಂ ಸಮ್ಯಗ್ಯಥಾವದಹಮಾರಭಮ್ ॥೧೪॥

ಉದ್ದೇಶಕ್ಕನುಸಾರವಾಗಿ ಆ ಪೂರ್ವಕರ್ಮಗಳನ್ನು ಮುಗಿಸಿ ಸಮಾಧಾನದಿಂದ ಸರಿಯಾಗಿ ಪಿಂಡಪ್ರದಾನವನ್ನು ಮಾಡಲು ನಾನು ಉಪಕ್ರಮಿಸಿದೆನು.

ತತಸ್ತಂ ದರ್ಭವಿನ್ಯಾಸಂ ಭಿತ್ತ್ವಾ ಸುರುಚಿರಾಂಗದಃ ।
ಪ್ರಲಂಬಾಭರಣೋ ಬಾಹುರುದತಿಷ್ಠದ್ ವಿಶಾಂಪತೇ ॥೧೫॥

ಎಲೈ ರಾಜನೇ, ಆಗ ಪಿಂಡಪ್ರದಾನಕ್ಕಾಗಿ ಹರಡಿದ ದರ್ಭೆಯನ್ನು ಭೇದಿಸಿ ಒಳ್ಳೆಯ ಅಂಗದವನ್ನೂ ಮತ್ತು ಲಂಬಿಸುವ ಆಭರಣಗಳನ್ನೂ ಹೊಂದಿದ ಬಾಹುವು ಮೇಲೆದ್ದಿತು.

ತಮುತ್ಥಿತಮಹಂ ದೃಷ್ಟ್ವಾ ಪರಂ ವಿಸ್ಮಯಮಾಗಮಮ್ ।
ಪ್ರತಿಗ್ರಹೀತಾ ಸಾಕ್ಷಾನ್ಮೇ ಪಿತೇತಿ ಭರತರ್ಷಭ ॥೧೬॥

ಎಲೈ ಭರತರ್ಷಭನೇ, ಅದನ್ನು ನೋಡಿ ನನ್ನ ತಂದೆಯೇ ಸಾಕ್ಷಾತ್ತಾಗಿ ಸ್ವೀಕರಿಸುತ್ತಿದ್ದಾನೆ ಎಂದು ನನಗೆ ಬಹಳ ವಿಸ್ಮಯವಾಯಿತು.

ತತೋ ಮೇ ಪುನರೇವಾಸೀತ್ ಸಂಜ್ಞಾ ಸಂಚಿಂತ್ಯ ಶಾಸ್ತ್ರತಃ ।
ನಾಯಂ ವೇದೇಷು ವಿಹಿತೋ ವಿಧಿರ್ಹಸ್ತ ಇತಿ ಪ್ರಭೋ ।
ಪಿಂಡೋ ದೇಯೋ ನರೇಣೇಹ ತತೋ ಮತಿರಭೂನ್ಮಮ ॥೧೭॥

ಆಗ ಪುನಃ ಶಾಸ್ತ್ರಕ್ಕನುಸಾರವಾಗಿ ಚಿಂತಿಸಿ, ಎಲೈ ಪ್ರಭುವೇ, ವೇದಗಳಲ್ಲಿ ಹಸ್ತದಲ್ಲಿ ಪಿಂಡಪ್ರದಾನ ಮಾಡುವುದು ವಿಹಿತವಾಗಿಲ್ಲ ಎಂದು ನನಗೆ ಜ್ಞಾನೋದಯವಾಯಿತು.

ಸಾಕ್ಷಾನ್ನೇಹ ಮನುಷ್ಯಸ್ಯ ಪಿತರೋಽಂತರ್ಹಿತಾಃ ಕ್ವಚಿತ್ ।
ಗೃಹ್ಣಂತಿ ವಿಹಿತಂ ತ್ವೇವಂ ಪಿಂಡೋ ದೇಯಃ ಕುಶೇಷ್ವಿತಿ ॥೧೮॥

ಅಂತರ್ಧಾನ ಹೊಂದಿದ ಪಿತೃಗಳು ಮನುಷ್ಯನು (ಪುತ್ರನು) ಕೊಟ್ಟ ಪಿಂಡಗಳನ್ನು ಸಾಕ್ಷಾತ್ತಾಗಿ ಸ್ವೀಕರಿಸುವುದಿಲ್ಲ. ಪಿಂಡವನ್ನು ಕುಶಗಳ ಮೇಲೆಯೇ ಕೊಡಬೇಕು ಎಂಬ ಬುದ್ಧಿಯುಂಟಾಯಿತು.

ತತೋಽಹಂ ತದನಾದೃತ್ಯ ಪಿತುರ್ಹಸ್ತನಿದರ್ಶನಮ್ ।
ಶಾಸ್ತ್ರಪ್ರಮಾಣಾತ್ ಸೂಕ್ಷ್ಮಂ ತು ವಿಧಿಂ ಪಾರ್ಥಿವ ಸಂಸ್ಮರನ್ ॥೧೯॥

ತತೋ ದರ್ಭೇಷು ತತ್ಸರ್ವಮದದಂ ಭರತರ್ಷಭ ।
ಶಾಸ್ತ್ರಮಾರ್ಗಾನುಸಾರೇಣ ತದ್ವಿದ್ಧಿ ಮನುಜರ್ಷಭ ॥೨೦॥

ಆಗ ನಾನು ತಂದೆಯು ತೋರಿಸಿದ ಆ ಹಸ್ತವನ್ನು ತಿರಸ್ಕರಿಸಿ ಶಾಸ್ತ್ರ ಪ್ರಮಾಣವನ್ನೂ, ಸೂಕ್ಷ್ಮವಾದ ವಿಧಿಯನ್ನೂ ಸ್ಮರಿಸಿ ಎಲೈ ಭರತರ್ಷಭನೇ, ದರ್ಭೆಯಲ್ಲಿ ಅದೆಲ್ಲವನ್ನೂ ನೀಡಿದೆನು. ಎಲೈ ಮನುಜಶ್ರೇಷ್ಠನೇ, ಅದು ಶಾಸ್ತ್ರ ಮಾರ್ಗಕ್ಕೆ ಅನುಸಾರವೆಂದು ತಿಳಿ.

ತತಃ ಸೋಽಂತರ್ಹಿತೋ ಬಾಹುಃ ಪಿತುರ್ಮಮ ನರಾಧಿಪ ।
ತತೋ ಮಾಂ ದರ್ಶಯಾಮಾಸುಃ ಸ್ವಪ್ನಾಂತೇ ಪಿತರಸ್ತದಾ ॥೨೧॥

ಎಲೈ ನರಾಧಿಪನೇ, ಆಗ ನನ್ನ ತಂದೆಯ ಬಾಹುವು ಅದೃಶ್ಯವಾಯಿತು. ಅನಂತರ ಸ್ವಪ್ನದಲ್ಲಿ ನನ್ನ ಪಿತೃಗಳು ನನಗೆ ಹೀಗೆ ತೋರಿಸಿದರು.

ಪ್ರೀಯಮಾಣಾಸ್ತು ಮಾಮೂಚುಃ ಪ್ರೀತಾಃ ಸ್ಮ ಭರತರ್ಷಭ ।
ವಿಜ್ಞಾನೇನ ತವಾನೇನ ಯನ್ನ ಮುಹ್ಯಸಿ ಧರ್ಮತಃ ॥೨೨॥

ಎಲೈ ಭರತಶ್ರೇಷ್ಠನೇ, ಸಂತೋಷಗೊಂಡ ಅವರು ನಿನ್ನ ಇಂತಹ ಜ್ಞಾನದಿಂದ ನಾವು ಪ್ರಸನ್ನರಾಗಿದ್ದೇವೆ. ಏಕೆಂದರೆ ನೀನು ಧರ್ಮದ ವಿಷಯದಲ್ಲಿ ಭ್ರಾಂತನಾಗಲಿಲ್ಲ.

ತ್ವಯಾ ಹಿ ಕುರ್ವತಾ ಶಾಸ್ತ್ರಂ ಪ್ರಮಾಣಮಿಹ ಪಾರ್ಥಿವ ।
ಆತ್ಮಾ ಧರ್ಮಃ ಶ್ರುತಂ ವೇದಾಃ ಪಿತರಶ್ಚ ಮಹರ್ಷಿಭಿಃ ॥೨೩॥

ಸಾಕ್ಷಾತ್ಪಿತಾಮಹೋ ಬ್ರಹ್ಮಾ ಗುರವೋಽಥ ಪ್ರಜಾಪತಿಃ ।
ಪ್ರಮಾಣಮುಪನೀತಾ ವೈ ಸ್ಥಿತಿಶ್ಚ ನ ವಿಚಾಲಿತಾ ॥೨೪॥

ಎಲೈ ರಾಜನೇ, ನೀನು ನಿನ್ನ ಆಚರಣೆಗೆ ಶಾಸ್ತ್ರವನ್ನು ಪ್ರಮಾಣವಾಗಿ ಮಾಡಿಕೊಂಡು ನಿನ್ನನ್ನು, ಧರ್ಮ, ವಿದ್ಯೆ, ವೇದ, ಪಿತೃಗಳು, ಮಹರ್ಷಿಗಳು, ಸಾಕ್ಷಾತ್ ಪಿತಾಮಹನಾದ ಬ್ರಹ್ಮ, ಗುರುಗಳು, ಪ್ರಜಾಪತಿ ಎಲ್ಲರನ್ನೂ ಪ್ರಮಾಣವಾಗಿ ಸ್ವೀಕರಿಸಿದೆ ಮತ್ತು ನಿನ್ನ ಧರ್ಮದ ಸ್ಥಿತಿಯೂ ವಿಚಲಿತವಾಗಲಿಲ್ಲ.

ತದಿದಂ ಸಮ್ಯಗಾರಬ್ಧಂ ತ್ವಯಾಽದ್ಯ ಭರತರ್ಷಭ ।
ಕಿಂ ತು ಭೂಮೇರ್ಗವಾಂ ಚಾರ್ಥೇ ಸುವರ್ಣಂ ದೀಯತಾಮಿತಿ ॥೨೫॥

ಎಲೈ ಭರತರ್ಷಭನೇ, ಆದ್ದರಿಂದ ಈ ದಿನ ನೀನು ಸರಿಯಾಗಿ ಆರಂಭಿಸಿದ್ದೀಯೆ. ಆದರೆ ಭೂಮಿಯ ಅಥವಾ ಗೋವಿನ ಸಲುವಾಗಿ ಸುವರ್ಣವನ್ನು ದಕ್ಷಿಣೆಯಾಗಿ ಕೊಡು.

ಏವಂ ವಯಂ ಚ ಧರ್ಮಶ್ಚ ಸರ್ವೇ ಚಾಸ್ಮತ್ಪಿತಾಮಹಾಃ ।
ಪಾವಿತಾ ವೈ ಭವಿಷ್ಯಂತಿ ಪಾವನಂ ಪರಮಂ ಹಿ ತತ್ ॥೨೬॥

ಹೀಗೆ ಮಾಡಿದರೆ ನಾವು, ನಮ್ಮ ಪಿತಾಮಹರು ಮತ್ತು ಧರ್ಮವು ಪವಿತ್ರರಾಗುತ್ತೇವೆ. ಅಂತಹ ದಾನವು ಪರಮಪವಿತ್ರವಾದುದು.

ದಶ ಪೂರ್ವಾನ್ ದಶ ಪರಾಂಸ್ತಥಾ ಸಂತಾರಯಂತಿ ತೇ ।
ಸುವರ್ಣಂ ಯೇ ಪ್ರಯಚ್ಛಂತಿ ಏವಂ ಮೇ ಪಿತರೋಽಬ್ರುವನ್ ॥೨೭॥

ಸುವರ್ಣವನ್ನು ದಾನ ಮಾಡುವವರು ಹಿಂದಿನ ಹತ್ತು ತಲೆಗಳನ್ನು ಮತ್ತು ಮುಂದಿನ ಹತ್ತು ತಲೆಗಳನ್ನು ಕಷ್ಟದಿಂದ ಮತ್ತು ನರಕದಿಂದ ಪಾರುಮಾಡುತ್ತಾರೆ ಎಂದು ಸ್ವಪ್ನದಲ್ಲಿ ಪಿತೃಗಳು ನನಗೆ ಹೇಳಿದರು.

ತತೋಽಹಂ ವಿಸ್ಮಿತೋ ರಾಜನ್ ಪ್ರತಿಬುದ್ಧೋ ವಿಶಾಂಪತೇ ।
ಸುವರ್ಣದಾನೇಽಕರವಂ ಮತಿಂ ಭರತಸತ್ತಮ ॥೨೮॥

ಎಲೈ ರಾಜನೇ, ಭರತಶ್ರೇಷ್ಠನೇ, ಅನಂತರ ನಾನು ಎದ್ದು ವಿಸ್ಮಿತನಾಗಿ ಸುವರ್ಣದಾನವನ್ನು ಮಾಡಲು ನಿಶ್ಚಯಿಸಿದೆ.

ಇತಿಹಾಸಮಿಮಂ ಚಾಪಿ ಶೃಣು ರಾಜನ್ ಪುರಾತನಮ್ ।
ಜಾಮದಗ್ನ್ಯಂ ಪ್ರತಿ ವಿಭೋ ಧನ್ಯಮಾಯುಷ್ಯಮೇವ ಚ ॥೨೯॥

ಎಲೈ ರಾಜನೇ, ವಿಭುವೇ, ಪರಶುರಾಮನ ವಿಷಯದಲ್ಲಿ ನಡೆದ ಧನ್ಯವೂ, ಆಯುಃಪ್ರದವೂ ಆದ ಪುರಾತನವಾದ ಈ ಇತಿಹಾಸವನ್ನು ಕೇಳು.

ಜಾಮದಗ್ನ್ಯೇನ ರಾಮೇಣ ತೀವ್ರರೋಷಾನ್ವಿತೇನ ವೈ ।
ತ್ರಿಃಸಪ್ತಕೃತ್ವಃ ಪೃಥಿವೀ ಕೃತಾ ನಿಃಕ್ಷತ್ರಿಯಾ ಪುರಾ ॥೩೦॥

ತೀವ್ರರೋಷಾನ್ವಿತರಾದ ಜಮದಗ್ನಿ ಪುತ್ರರಾದ ಪರಶುರಾಮರು ಹಿಂದೆ ಇಪ್ಪತ್ತೊಂದು ಬಾರಿ ಭೂಮಿಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿದರು.

ತತೋ ಜಿತ್ವಾ ಮಹೀಂ ಕೃತ್ಸ್ನಾಂ ರಾಮೋ ರಾಜೀವಲೋಚನಃ ।
ಆಜಹಾರ ಕ್ರತುಂ ವೀರೋ ಬ್ರಹ್ಮಕ್ಷತ್ರೇಣ ಪೂಜಿತಮ್ ॥೩೧॥

ವಾಜಿಮೇಧಂ ಮಹಾರಾಜ ಸರ್ವಕಾಮಸಮನ್ವಿತಮ್ ।
ಪಾವನಂ ಸರ್ವಭೂತಾನಾಂ ತೇಜೋದ್ಯುತಿವಿವರ್ಧನಮ್ ॥೩೨॥

ಅನಂತರ ರಾಜೀವ ಲೋಚನರಾದ ಪರಶುರಾಮರು ಸಮಸ್ತವಾದ ಭೂಮಿಯನ್ನು ಗೆದ್ದು ವೀರರಾದ ಅವರು ಬ್ರಾಹ್ಮಣರಿಂದಲೂ, ಕ್ಷತ್ರಿಯರಿಂದಲೂ ಪೂಜಿತವಾದ ಸರ್ವಕಾಮ ಸಮನ್ವಿತವಾದ, ಪವಿತ್ರವಾದ, ಸರ್ವಭೂತಗಳಿಗೂ ತೇಜಸ್ಸನ್ನು ಮತ್ತು ಕಾಂತಿಯನ್ನು ಹೆಚ್ಚಿಸುವ ಅಶ್ವಮೇಧ ಯಾಗವನ್ನು ಮಾಡಿದರು.

ವಿಪಾಪ್ಮಾಽಪಿ ಸ ತೇಜಸ್ವೀ ತೇನ ಕ್ರತುಫಲೇನ ವೈ ।
ನೈವಾತ್ಮನೋಽಥ ಲಘುತಾಂ ಜಾಮದಗ್ನ್ಯೋಽಭ್ಯಗಚ್ಛತ ॥೩೩॥

ಪಾಪರಹಿತನಾದರೂ ತೇಜಸ್ವಿಯಾದ ಪರಶುರಾಮರು ಅಂತಹ ಕ್ರತುಫಲವನ್ನು ಹೊಂದಿ ತಮ್ಮ ಮನಸ್ಸಿನಲ್ಲಿದ್ದ ಭಾರವು ಕಡಿಮೆಯಾಯಿತೆಂದು ಭಾವಿಸಲಿಲ್ಲ.

ಸಾಕ್ಷಾತ್ಪಿತಾಮಹೋ ಬ್ರಹ್ಮಾ ಗುರವೋಽಥ ಪ್ರಜಾಪತಿಃ ।
ಪ್ರಮಾಣಮುಪನೀತಾ ವೈ ಸ್ಥಿತಿಶ್ಚ ನ ವಿಚಾಲಿತಾ ॥೨೪॥

ಎಲೈ ರಾಜನೇ, ನೀನು ನಿನ್ನ ಆಚರಣೆಗೆ ಶಾಸ್ತ್ರವನ್ನು ಪ್ರಮಾಣವಾಗಿ ಮಾಡಿಕೊಂಡು ನಿನ್ನನ್ನು, ಧರ್ಮ, ವಿದ್ಯೆ, ವೇದ, ಪಿತೃಗಳು, ಮಹರ್ಷಿಗಳು, ಸಾಕ್ಷಾತ್ ಪಿತಾಮಹನಾದ ಬ್ರಹ್ಮ, ಗುರುಗಳು, ಪ್ರಜಾಪತಿ ಎಲ್ಲರನ್ನೂ ಪ್ರಮಾಣವಾಗಿ ಸ್ವೀಕರಿಸಿದೆ ಮತ್ತು ನಿನ್ನ ಧರ್ಮದ ಸ್ಥಿತಿಯೂ ವಿಚಲಿತವಾಗಲಿಲ್ಲ.

ತದಿದಂ ಸಮ್ಯಗಾರಬ್ಧಂ ತ್ವಯಾಽದ್ಯ ಭರತರ್ಷಭ ।
ಕಿಂ ತು ಭೂಮೇರ್ಗವಾಂ ಚಾರ್ಥೇ ಸುವರ್ಣಂ ದೀಯತಾಮಿತಿ ॥೨೫॥

ಎಲೈ ಭರತರ್ಷಭನೇ, ಆದ್ದರಿಂದ ಈ ದಿನ ನೀನು ಸರಿಯಾಗಿ ಆರಂಭಿಸಿದ್ದೀಯೆ. ಆದರೆ ಭೂಮಿಯ ಅಥವಾ ಗೋವಿನ ಸಲುವಾಗಿ ಸುವರ್ಣವನ್ನು ದಕ್ಷಿಣೆಯಾಗಿ ಕೊಡು.

ಏವಂ ವಯಂ ಚ ಧರ್ಮಶ್ಚ ಸರ್ವೇ ಚಾಸ್ಮತ್ಪಿತಾಮಹಾಃ ।
ಪಾವಿತಾ ವೈ ಭವಿಷ್ಯಂತಿ ಪಾವನಂ ಪರಮಂ ಹಿ ತತ್ ॥೨೬॥

ಹೀಗೆ ಮಾಡಿದರೆ ನಾವು, ನಮ್ಮ ಪಿತಾಮಹರು ಮತ್ತು ಧರ್ಮವು ಪವಿತ್ರರಾಗುತ್ತೇವೆ. ಅಂತಹ ದಾನವು ಪರಮಪವಿತ್ರವಾದುದು.

ದಶ ಪೂರ್ವಾನ್ ದಶ ಪರಾಂಸ್ತಥಾ ಸಂತಾರಯಂತಿ ತೇ ।
ಸುವರ್ಣಂ ಯೇ ಪ್ರಯಚ್ಛಂತಿ ಏವಂ ಮೇ ಪಿತರೋಽಬ್ರುವನ್ ॥೨೭॥

ಸುವರ್ಣವನ್ನು ದಾನ ಮಾಡುವವರು ಹಿಂದಿನ ಹತ್ತು ತಲೆಗಳನ್ನು ಮತ್ತು ಮುಂದಿನ ಹತ್ತು ತಲೆಗಳನ್ನು ಕಷ್ಟದಿಂದ ಮತ್ತು ನರಕದಿಂದ ಪಾರುಮಾಡುತ್ತಾರೆ ಎಂದು ಸ್ವಪ್ನದಲ್ಲಿ ಪಿತೃಗಳು ನನಗೆ ಹೇಳಿದರು.

ತತೋಽಹಂ ವಿಸ್ಮಿತೋ ರಾಜನ್ ಪ್ರತಿಬುದ್ಧೋ ವಿಶಾಂಪತೇ ।
ಸುವರ್ಣದಾನೇಽಕರವಂ ಮತಿಂ ಭರತಸತ್ತಮ ॥೨೮॥

ಎಲೈ ರಾಜನೇ, ಭರತಶ್ರೇಷ್ಠನೇ, ಅನಂತರ ನಾನು ಎದ್ದು ವಿಸ್ಮಿತನಾಗಿ ಸುವರ್ಣದಾನವನ್ನು ಮಾಡಲು ನಿಶ್ಚಯಿಸಿದೆ.

ಇತಿಹಾಸಮಿಮಂ ಚಾಪಿ ಶೃಣು ರಾಜನ್ ಪುರಾತನಮ್ ।
ಜಾಮದಗ್ನ್ಯಂ ಪ್ರತಿ ವಿಭೋ ಧನ್ಯಮಾಯುಷ್ಯಮೇವ ಚ ॥೨೯॥

ಎಲೈ ರಾಜನೇ, ವಿಭುವೇ, ಪರಶುರಾಮನ ವಿಷಯದಲ್ಲಿ ನಡೆದ ಧನ್ಯವೂ, ಆಯುಃಪ್ರದವೂ ಆದ ಪುರಾತನವಾದ ಈ ಇತಿಹಾಸವನ್ನು ಕೇಳು.

ಜಾಮದಗ್ನ್ಯೇನ ರಾಮೇಣ ತೀವ್ರರೋಷಾನ್ವಿತೇನ ವೈ ।
ತ್ರಿಃಸಪ್ತಕೃತ್ವಃ ಪೃಥಿವೀ ಕೃತಾ ನಿಃಕ್ಷತ್ರಿಯಾ ಪುರಾ ॥೩೦॥

ತೀವ್ರರೋಷಾನ್ವಿತರಾದ ಜಮದಗ್ನಿ ಪುತ್ರರಾದ ಪರಶುರಾಮರು ಹಿಂದೆ ಇಪ್ಪತ್ತೊಂದು ಬಾರಿ ಭೂಮಿಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿದರು.

ತತೋ ಜಿತ್ವಾ ಮಹೀಂ ಕೃತ್ಸ್ನಾಂ ರಾಮೋ ರಾಜೀವಲೋಚನಃ ।
ಆಜಹಾರ ಕ್ರತುಂ ವೀರೋ ಬ್ರಹ್ಮಕ್ಷತ್ರೇಣ ಪೂಜಿತಮ್ ॥೩೧॥

ವಾಜಿಮೇಧಂ ಮಹಾರಾಜ ಸರ್ವಕಾಮಸಮನ್ವಿತಮ್ ।
ಪಾವನಂ ಸರ್ವಭೂತಾನಾಂ ತೇಜೋದ್ಯುತಿವಿವರ್ಧನಮ್ ॥೩೨॥

ಅನಂತರ ರಾಜೀವ ಲೋಚನರಾದ ಪರಶುರಾಮರು ಸಮಸ್ತವಾದ ಭೂಮಿಯನ್ನು ಗೆದ್ದು ವೀರರಾದ ಅವರು ಬ್ರಾಹ್ಮಣರಿಂದಲೂ, ಕ್ಷತ್ರಿಯರಿಂದಲೂ ಪೂಜಿತವಾದ ಸರ್ವಕಾಮ ಸಮನ್ವಿತವಾದ, ಪವಿತ್ರವಾದ, ಸರ್ವಭೂತಗಳಿಗೂ ತೇಜಸ್ಸನ್ನು ಮತ್ತು ಕಾಂತಿಯನ್ನು ಹೆಚ್ಚಿಸುವ ಅಶ್ವಮೇಧ ಯಾಗವನ್ನು ಮಾಡಿದರು.

ವಿಪಾಪ್ಮಾಽಪಿ ಸ ತೇಜಸ್ವೀ ತೇನ ಕ್ರತುಫಲೇನ ವೈ ।
ನೈವಾತ್ಮನೋಽಥ ಲಘುತಾಂ ಜಾಮದಗ್ನ್ಯೋಽಭ್ಯಗಚ್ಛತ ॥೩೩॥

ಪಾಪರಹಿತನಾದರೂ ತೇಜಸ್ವಿಯಾದ ಪರಶುರಾಮರು ಅಂತಹ ಕ್ರತುಫಲವನ್ನು ಹೊಂದಿ ತಮ್ಮ ಮನಸ್ಸಿನಲ್ಲಿದ್ದ ಭಾರವು ಕಡಿಮೆಯಾಯಿತೆಂದು ಭಾವಿಸಲಿಲ್ಲ.

ಸ ತು ಕ್ರತುವರೇಣೇಷ್ಟ್ವಾ ಮಹಾತ್ಮಾ ದಕ್ಷಿಣಾವತಾ ।
ಪಪ್ರಚ್ಛಾಗಮಸಂಪನ್ನಾನೃಷೀನ್ ದೇವಾಂಶ್ಚ ಭಾರ್ಗವಃ ॥೩೪॥

ಪಾವನಂ ಯತ್ ಪರಂ ನೃಣಾಮುಗ್ರೇ ಕರ್ಮಣಿ ವರ್ತತಾಮ್ ।
ತದುಚ್ಯತಾಂ ಮಹಾಭಾಗಾ ಇತಿ ಜಾತಘೃಣೋಽಬ್ರವೀತ್ ।
ಇತ್ಯುಕ್ತಾ ವೇದಶಾಸ್ತ್ರಜ್ಞಾಸ್ತೇ ತಮೂಚುರ್ಮಹರ್ಷಯಃ ॥೩೫॥

ಮಹಾತ್ಮರಾದ ಆ ಭಾರ್ಗವರು ಶ್ರೇಷ್ಠವಾದ ಅಂತಹ ಯಾಗವನ್ನು ಮಾಡಿ ಆಗಮ ಸಂಪನ್ನರಾದ ಋಷಿಗಳನ್ನು ಮತ್ತು ದೇವತೆಗಳನ್ನು ಕುರಿತು ಕರ್ಮವನ್ನು ಮಾಡುವ ಮನುಷ್ಯರಿಗೆ ಯಾವುದು ಶ್ರೇಷ್ಠ ರೀತಿಯಲ್ಲಿ ಪವಿತ್ರೀಕರಿಸುತ್ತದೆ? ಎಲೈ ಮಹಾನುಭಾವರೇ ಅದನ್ನು ಹೇಳಿ ಎಂದು ಮನುಷ್ಯರ ಮೇಲಿನ ದಯೆಯಿಂದ ಕೇಳಿದರು. ಹೀಗೆ ಹೇಳಲ್ಪಟ್ಟ ವೇದಶಾಸ್ತ್ರಜ್ಞರಾದ ಆ ಮಹರ್ಷಿಗಳು ಅವರನ್ನು ಕುರಿತು ಹೇಳಿದರು.

ವಸಿಷ್ಠಃ

ದೇವತಾಸ್ತೇ ಪ್ರಯಚ್ಛಂತಿ ಸುವರ್ಣಂ ಯೇ ದದತ್ಯುತ ।
ಅಗ್ನಿರ್ಹಿ ದೇವತಾಃ ಸರ್ವಾಃ ಸುವರ್ಣಂ ಚ ತದಾತ್ಮಕಮ್ ॥೩೬॥

ತಸ್ಮಾತ್ಸುವರ್ಣಂ ದದತಾ ದತ್ತಾಃ ಸರ್ವಾಶ್ಚ ದೇವತಾಃ ।
ಭವಂತಿ ಪುರುಷವ್ಯಾಘ್ರ ನ ಹ್ಯತಃ ಪರಮಂ ವಿದುಃ ॥೩೭॥

ವಸಿಷ್ಠ– ಯಾರು ಸುವರ್ಣವನ್ನು ದಾನ ಮಾಡುತ್ತಾರೆಯೋ ಅವರು ದೇವತೆಗಳನ್ನೇ ದಾನ ಮಾಡುತ್ತಾರೆ. ಅಗ್ನಿಯು ಸರ್ವದೇವತಾ ಸನ್ನಿಧಾನಕ್ಕೆ ಪಾತ್ರನಾದವನು. ಸುವರ್ಣವಾದರೂ ಅಗ್ನಿಸ್ವರೂಪವನ್ನು ಹೊಂದಿರುವಂತಹದು. ಎಲೈ ಪುರುಷವ್ಯಾಘ್ರನೇ, ಆದ್ದರಿಂದ ಸುವರ್ಣವನ್ನು ದಾನ ಮಾಡುವವನು ಎಲ್ಲ ದೇವತೆಗಳನ್ನೂ ದಾನ ಮಾಡುತ್ತಾನೆ. ಆದ್ದರಿಂದ ಜ್ಞಾನಿಗಳು ಅದಕ್ಕಿಂತ ಶ್ರೇಷ್ಠವಾದುದನ್ನು ತಿಳಿಯುವುದಿಲ್ಲ.

ಭೂಯ ಏವ ಚ ಮಾಹಾತ್ಮ್ಯಂ ಸುವರ್ಣಸ್ಯ ನಿಬೋಧ ಮೇ ।
ಗದತೋ ಮಮ ವಿಪ್ರರ್ಷೇ ಸರ್ವಶಸ್ತ್ರಭೃತಾಂವರ ॥೩೮॥

ಎಲೈ ವಿಪ್ರರ್ಷಿಯೇ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೇ, ನಾನು ಹೇಳುವ ಸುವರ್ಣ ಮಹಿಮೆಯನ್ನು ನನ್ನಿಂದ ಇನ್ನೂ ಕೇಳುವವನಾಗು.

ಮಯಾ ಶ್ರುತಮಿದಂ ಪೂರ್ವಂ ಪುರಾಣೇ ಭೃಗುನಂದನ ।
ಪ್ರಜಾಪತೇಃ ಕಥಯತೋ ಮನೋಃ ಸ್ವಾಯಂಭುವಸ್ಯ ವೈ ॥೩೯॥

ಶೂಲಪಾಣೇರ್ಭಗವತೋ ರುದ್ರಸ್ಯ ಚ ಮಹಾತ್ಮನಃ ।
ಗಿರೌ ಹಿಮವತಿ ಶ್ರೇಷ್ಠೇ ತದಾ ಭೃಗುಕುಲೋದ್ವಹ ॥೪೦॥

ಎಲೈ ಭೃಗುನಂದನನೇ, ಭೃಗುಕುಲೋದ್ವಹನೇ, ಹಿಂದೆ ಶ್ರೇಷ್ಠವಾದ ಹಿಮಾಲಯ ಪರ್ವತದಲ್ಲಿ ಪ್ರಜಾಪತಿಯಾದ ಬ್ರಹ್ಮನು ಸ್ವಾಯಂಭುವ ಮನುವಿಗೂ, ಮಹಾತ್ಮನಾದ ಭಗವಂತನಾದ ಶೂಲಪಾಣಿಯಾದ ರುದ್ರನಿಗೂ ಈ ವಿಷಯವನ್ನು ಹೇಳುವಾಗ ನಾನೂ ಕೇಳಿದೆನು.

ದೇವ್ಯಾ ವಿವಾಹೇ ನಿರ್ವೃತ್ತೇ ರುದ್ರಾಣ್ಯಾ ಭೃಗುನಂದನ ।
ಸಮಾಗಮೇ ಭಗವತೋ ದೇವ್ಯಾ ಸಹ ಮಹಾತ್ಮನಃ ।
ತತಃ ಸರ್ವೇ ಸಮುದ್ವಿಗ್ನಾ ಭಗವಂತಮುಪಾಗಮನ್ ॥೪೧॥

ಎಲೈ ಭೃಗುನಂದನನೇ, ಪಾರ್ವತಿದೇವಿಯ ವಿವಾಹವು ಮುಗಿದು ಮಹಾತ್ಮನಾದ ಶಿವನು ದೇವಿಯ ಜೊತೆಯಲ್ಲಿ ಸಮಾಗಮವನ್ನು ಹೊಂದುತ್ತಿರಲು ಎಲ್ಲರೂ ಉದ್ವಿಗ್ನರಾಗಿ ಮಹಾದೇವನ ಬಳಿಗೆ ಬಂದರು.

ತೇ ಮಹಾದೇವಮಾಸೀನಂ ದೇವೀಂ ಚ ವರದಾಮುಮಾಮ್ ।
ಪ್ರಸಾದ್ಯ ಶಿರಸಾ ಸರ್ವೇ ರುದ್ರಮೂಚುರ್ಭೃಗೂದ್ವಹ ॥೪೨॥

ಎಲೈ ಭೃಗೂದ್ವಹನೇ, ಅವರು ಕುಳಿತಿದ್ದ ಮಹಾದೇವನನ್ನೂ ಮತ್ತು ವರಪ್ರದಳಾದ ಉಮಾದೇವಿಯನ್ನೂ ಶಿರಸಾ ನಮಸ್ಕರಿಸಿ ಸಂತೋಷ ಪಡಿಸಿ ಎಲ್ಲರೂ ರುದ್ರನನ್ನು ಕುರಿತು ಹೇಳಿದರು.

ಅಯಂ ಸಮಾಗಮೋ ದೇವ ದೇವ್ಯಾ ಸಹ ತವಾನಘ ।
ತಪಸ್ವಿನಸ್ತಪಸ್ವಿನ್ಯಾ ತೇಜಸ್ವಿನ್ಯಾSತಿತೇಜಸಃ ।
ಅಮೋಘತೇಜಾಸ್ತ್ವಂ ದೇವ ದೇವೀ ಚೇಯಮುಮಾ ತಥಾ ॥೪೩॥

ಎಲೈ ಅನಘನೇ, ನಿನ್ನ ಮತ್ತು ದೇವಿಯ ಸಮಾಗಮವು ತಪಸ್ವಿಗೆ ತಪಸ್ವಿನಿಯ ಮತ್ತು ಅತಿ ತೇಜಸ್ವಿಗೆ ತೇಜಸ್ವಿನಿಯ ಸಮಾಗಮರೂಪವಾಗಿದೆ. ಎಲೈ ದೇವನೇ, ನೀನು ಅಮೋಘವಾದ ತೇಜಸ್ಸುಳ್ಳವನು. ಉಮಾದೇವಿಯೂ ಹಾಗೆಯೇ.

ಅಪತ್ಯಂ ಯುವಯೋರ್ದೇವ ಬಲವದ್ ಭವಿತಾ ಪ್ರಭೋ ।
ತನ್ನೂನಂ ತ್ರಿಷು ಲೋಕೇಷು ನ ಕಿಂಚಿಚ್ಛೇಷಯಿಷ್ಯತಿ ॥೪೪॥

ಎಲೈ ಪ್ರಭುವೇ, ನಿಮಗೆ ಜನಿಸುವ ಪುತ್ರನು ಬಹಳ ಬಲಿಷ್ಠನಾಗಿರುವನು. ಅವನು ಖಂಡಿತವಾಗಿ ಮೂರುಲೋಕಗಳಲ್ಲಿ ಏನನ್ನೂ ಉಳಿಸುವುದಿಲ್ಲ.

ತದೇಭ್ಯಃ ಪ್ರಣತೇಭ್ಯಸ್ತ್ವಂ ದೇವೇಭ್ಯಃ ಪೃಥುಲೋಚನ ।
ವರಂ ಪ್ರಯಚ್ಛ ಲೋಕೇಶ ತ್ರೈಲೋಕ್ಯಹಿತಕಾಮ್ಯಯಾ ।
ಅಪತ್ಯಾರ್ಥಂ ನಿಗೃಹ್ಣೀಷ್ವ ತೇಜೋ ಜ್ವಲಿತಮುತ್ತಮಮ್ ॥೪೫॥

ಎಲೈ ವಿಸ್ತಾರವಾದ ಕಣ್ಣುಳ್ಳವನೇ, ಲೋಕೇಶನೇ, ಆದ್ದರಿಂದ ನಿನಗೆ ನಮಸ್ಕಾರ ಮಾಡಿದ ದೇವತೆಗಳಾದ ಈ ನಮಗೆ ಮೂರುಲೋಕಗಳಿಗೆ ಹಿತವನ್ನು ಮಾಡುವ ದೃಷ್ಟಿಯಿಂದ ವರವನ್ನು ಕೊಡು. ಪುತ್ರನನ್ನು ಪಡೆಯುವ ಸಲುವಾಗಿ ಜ್ವಲಿಸುತ್ತಿರುವ ನಿನ್ನ ಶ್ರೇಷ್ಠವಾದ ವೀರ್ಯ ರೂಪವಾದ ತೇಜಸ್ಸನ್ನು ತಡೆದುಹಿಡಿದುಕೋ ಎಂದು ಹೇಳಿದರು.

ಇತಿ ತೇಷಾಂ ಕಥಯತಾಂ ಭಗವಾನ್ ಗೋವೃಷಧ್ವಜಃ ।
ಏವಮಸ್ತ್ವಿತಿ ದೇವಾಂಸ್ತಾನ್ ವಿಪ್ರರ್ಷೇ ಪ್ರತ್ಯಭಾಷತ ॥೪೬॥

ದೇವತೆಗಳು ಹೀಗೆ ಹೇಳುತ್ತಿರಲು ಎಲೈ ವಿಪ್ರರ್ಷಿಯೇ, ಭಗವಂತನಾದ ವೃಷಭಧ್ವಜನು ದೇವತೆಗಳನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದನು.

ಇತ್ಯುಕ್ತ್ವಾ ಚೋರ್ಧ್ವಮನಯತ್ ತದ್ ರೇತೋ ವೃಷವಾಹನಃ ।
ಊರ್ಧ್ವರೇತಾಃ ಸಮಭವತ್ ತತಃಪ್ರಭೃತಿ ಚಾಪಿ ಸಃ ॥೪೭॥

ಹೀಗೆ ಹೇಳಿ ತನ್ನ ರೇತಸ್ಸನ್ನು ವೃಷವಾಹನನಾದ ಅವನು ಊರ್ಧ್ವಮುಖವನ್ನಾಗಿ ಮಾಡಿಕೊಂಡನು. ಅಂದಿನಿಂದ ಅವನು ಊರ್ಧ್ವರೇತಸ್ಕನಾದನು.

ರುದ್ರಾಣೀ ತು ತತಃ ಕ್ರುದ್ಧಾ ಪ್ರಜೋಚ್ಛೇದೇ ತಥಾ ಕೃತೇ ।
ದೇವಾನಥಾಬ್ರವೀತ್ ತತ್ರ ಸ್ತ್ರೀಭಾವಾತ್ ಪರುಷಂ ವಚಃ ॥೪೮॥

ತನಗೆ ಜನಿಸಲಿರುವ ಪ್ರಜೆಯ ಪ್ರತಿಬಂಧದಿಂದ ಉಂಟಾದ ಕೋಪದಿಂದಲೂ, ಸ್ತ್ರೀ ಸ್ವಭಾವದಿಂದಲೂ ದೇವಿಯಾದ ಪಾರ್ವತಿಯು ದೇವತೆಗಳನ್ನು ಕುರಿತು ಉಗ್ರವಾದ ಮಾತುಗಳನ್ನು ಆಡಿದಳು.

ಯಸ್ಮಾದಪತ್ಯಕಾಮೋ ವೈ ಭರ್ತಾ ಮೇ ವಿನಿವರ್ತಿತಃ ।
ತಸ್ಮಾತ್ ಸರ್ವೇ ಸುರಾ ಯೂಯಮನಪತ್ಯಾ ಭವಿಷ್ಯಥ ॥೪೯॥

ಪುತ್ರನನ್ನು ಪಡೆಯಲು ಬಯಸಿದ ನನ್ನ ಪತಿಯನ್ನು ನೀವು ಹಿಂದಿರುಗಿಸಿದುದರಿಂದ ಎಲ್ಲೆ ದೇವತೆಗಳೇ, ನೀವೆಲ್ಲರೂ ಪುತ್ರಹೀನರಾಗಿ.

ಪ್ರಜೋಚ್ಛೇದೋ ಮಮ ಕೃತೋ ಯಸ್ಮಾದ್ ಯುಷ್ಮಾಭಿರದ್ಯ ವೈ ।
ತಸ್ಮಾತ್ ಪ್ರಜಾ ವಃ ಖಗಮಾಃ ಸರ್ವೇಷಾಂ ನ ಭವಿಷ್ಯತಿ ॥೫೦॥

ಎಲ್ಲೆ ಆಕಾಶಸಂಚಾರಿಗಳೇ, ನೀವು ಈ ದಿನ ನನಗೆ ಪ್ರಜಾನಾಶವನ್ನು ಮಾಡಿದ ಕಾರಣದಿಂದ ನಿಮಗೂ ಪ್ರಜೆಗಳು ಜನಿಸುವುದಿಲ್ಲ (ಎಂದು ಹೇಳಿದಳು).

ಪಾವಕಸ್ತು ನ ತತ್ರಾಸೀಚ್ಛಾಪಕಾಲೇ ಭೃಗೂದ್ವಹ ।
ದೇವಾ ದೇವ್ಯಾಸ್ತಥಾ ಶಾಪಾದನಪತ್ಯಾಸ್ತದಾऽಭವನ್ ॥೫೧॥

ಎಲ್ಲೆ ಭೃಗೂದ್ವಹನೇ, ಆ ಶಾಪಕಾಲದಲ್ಲಿ ಅಗ್ನಿಯು ಮಾತ್ರ ಅಲ್ಲಿ ಇರಲಿಲ್ಲ. ದೇವಿಯ ಆ ಶಾಪದಿಂದ ದೇವತೆಗಳು ಪುತ್ರಹೀನರಾದರು.

ರುದ್ರಸ್ತು ತೇಜೋಪ್ರತಿಮಂ ಧಾರಯಾಮಾಸ ತತ್ ತದಾ ।
ಪ್ರಸ್ಕನ್ನಂ ತು ತತಸ್ತಸ್ಮಾತ್ ಕಿಂಚಿತ್ ತತ್ರಾಪತದ್ ಭುವಿ ॥೫೨॥

ರುದ್ರನು ತನ್ನ ಅಸದೃಶವಾದ ತೇಜಸ್ಸನ್ನು ಆಗ ತಡೆದುಕೊಂಡನು. ಆದರೂ ಅದರ ಸ್ವಲ್ಪ ಭಾಗವು ಜಾರಿ ಭೂಮಿಯಲ್ಲಿ ಬಿದ್ದಿತು.

ತತ್ ಪಪಾತ ತದಾ ಚಾಗ್ನೌ ವವೃಧೇ ಚಾದ್ಭುತೋಪಮಮ್ ।
ತೇಜಸ್ತೇಜಸಿ ಸಂಪೃಕ್ತಮೇಕಯೋನಿತ್ವಮಾಗತಮ್ ॥೫೩॥

ಅದು ಅಗ್ನಿಯಲ್ಲಿ ಬಿದ್ದು ಅದ್ಭುತವಾಗಿ ಬೆಳೆಯಿತು. ತೇಜಸ್ಸಿನ ಜೊತೆಯಲ್ಲಿ ಸಂಬಂಧವನ್ನು ಹೊಂದಿ ಒಂದೇ ಯೋನಿಯಲ್ಲಿ ಬೆರೆತು ಒಂದೇ ಮೂಲದಿಂದ ಬಂದಂತಾಯಿತು.

ಏತಸ್ಮಿನ್ನೇವ ಕಾಲೇ ತು ದೇವಾಃ ಶಕ್ರಪುರೋಗಮಾಃ ।
ಅಸುರಸ್ತಾರಕೋ ನಾಮ ತೇನ ಸಂತಾಪಿತಾ ಭೃಶಮ್ ॥೫೪॥

ಅದೇ ಕಾಲದಲ್ಲಿ ಇಂದ್ರ ಮೊದಲಾದ ದೇವತೆಗಳು ತಾರಕನೆಂಬ ಅಸುರನಿಂದ ಪೀಡೆಗೆ ಒಳಗಾದರು.

ಆದಿತ್ಯಾ ವಸವೋ ರುದ್ರಾ ಮರುತೋಽಥಾಶ್ವಿನಾವಪಿ ।
ಸಾಧ್ಯಾಶ್ಚ ಸರ್ವೇ ಸಂತ್ರಸ್ತಾ ದೈತೇಯಸ್ಯ ಪರಾಕ್ರಮಾತ್ ॥೫೫॥

ಆ ದೈತ್ಯನ ಪರಾಕ್ರಮದಿಂದ ವಸು-ರುದ್ರಾದಿತ್ಯರು, ಮರುತ್ತುಗಳು, ಅಶ್ವಿನಿಗಳು, ಸಾಧ್ಯರು ಎಲ್ಲರೂ ಹೆದರಿದರು.

ಸ್ಥಾನಾನಿ ದೇವತಾನಾಂ ಹಿ ವಿಮಾನಾನಿ ಪುರಾಣಿ ಚ ।
ಋಷೀಣಾಮಾಶ್ರಮಾಶ್ಚೈವ ಬಭೂವುರಸುರೈರ್ಹೃತಾಃ ॥೫೬॥

ಅಸುರರು ದೇವತೆಗಳ ಸ್ಥಾನವನ್ನೂ, ವಿಮಾನಗಳನ್ನೂ, ಪಟ್ಟಣಗಳನ್ನೂ, ಋಷಿಗಳ ಆಶ್ರಮಗಳನ್ನೂ ಅಪಹರಿಸಿದರು.

ತೇ ದೀನಮನಸಃ ಸರ್ವೇ ದೇವಾಶ್ಚ ಋಷಯಶ್ಚ ಹ ।
ಪ್ರಜಗ್ಮುಃ ಶರಣಂ ದೇವಂ ಬ್ರಹ್ಮಾಣಮಜರಂ ಪ್ರಭುಮ್ ॥೫೭॥

ಆಗ ಎಲ್ಲ ದೇವತೆಗಳು ಮತ್ತು ಋಷಿಗಳು ದೀನ ಮನಸ್ಸನ್ನು ಹೊಂದಿದವರಾಗಿ ಜರಾರಹಿತರೂ, ಪ್ರಭುವೂ ಆದ ಬ್ರಹ್ಮದೇವರನ್ನು ಶರಣುಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಸುವರ್ಣೋತ್ಪತ್ತಿಕಥನಂ ನಾಮ
ಪಂಚವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತಾರನೆಯ ಅಧ್ಯಾಯ

ಕಾರ್ತಿಕೇಯೋತ್ಪತ್ತಿ.

ದೇವಾಃ

ಅಸುರಸ್ತಾರಕೋ ನಾಮ ತ್ವಯಾ ದತ್ತವರಃ ಪ್ರಭೋ ।
ಸುರಾನೃಷೀಂಶ್ಚ ಕ್ಲಿಶ್ನಾತಿ ವಧಸ್ತಸ್ಯ ವಿಧೀಯತಾಮ್ ॥೧॥

ತಸ್ಮಾದ್ ಭಯಂ ಸಮುತ್ಪನ್ನಮಸ್ಮಾಕಂ ವೈ ಪಿತಾಮಹ ।
ಪರಿತ್ರಾಯಸ್ವ ನೋ ದೇವ ನ ಹ್ಯನ್ಯಾ ಗತಿರಸ್ತಿ ನಃ ॥೨॥

ದೇವತೆಗಳು– ಎಲೈ ಪ್ರಭುವೇ, ನಿನ್ನಿಂದ ವರವನ್ನು ಪಡೆದ ತಾರಕನೆಂಬ ಅಸುರನು ದೇವತೆಗಳನ್ನೂ ಮತ್ತು ಋಷಿಗಳನ್ನೂ ಬಾಧಿಸುತ್ತಿದ್ದಾನೆ. ಅವನ ವಧೆಯನ್ನು ಮಾಡುವವನಾಗು. ಎಲೈ ಪಿತಾಮಹನೇ, ನಮಗೆ ಅವನಿಂದ ಭಯವುಂಟಾಗಿದೆ. ಎಲೈ ದೇವನೇ, ನಮ್ಮನ್ನು ರಕ್ಷಿಸು. ನಮಗೆ ನಿನ್ನನ್ನು ಬಿಟ್ಟು ಬೇರೆ ಗತಿಯಿಲ್ಲ.

ಬ್ರಹ್ಮಾ

ಸಮೋಽಹಂ ಸರ್ವಭೂತಾನಾಮಧರ್ಮಂ ನೇಹ ರೋಚಯೇ ।
ಹನ್ಯತಾಂ ತಾರಕಃ ಕ್ಷಿಪ್ರಂ ಸುರರ್ಷಿಗಣಬಾಧಕಃ ॥೩॥

ಬ್ರಹ್ಮಾ– ನಾನು ಎಲ್ಲ ಪ್ರಾಣಿಗಳಿಗೂ ಸಮನಾದವನು. ಆದರೆ ಅಧರ್ಮವನ್ನು ನಾನು ಇಷ್ಟಪಡುವುದಿಲ್ಲ. ದೇವತೆಗಳಿಗೂ ಮತ್ತು ಋಷಿಗಳಿಗೂ ಬಾಧೆಯನ್ನು ಕೊಡುವ ತಾರಕನು ಶೀಘ್ರವಾಗಿ ಕೊಲ್ಲಲ್ಪಡಲಿ.

ವೇದಾ ಧರ್ಮಾಶ್ಚ ನೋತ್ಸಾದಂ ಗಚ್ಛೇಯುಃ ಸುರಸತ್ತಮಾಃ ।
ವಿಹಿತಂ ಪೂರ್ವಮೇವಾತ್ರ ಮಯಾ ವೈ ವ್ಯೇತು ವೋ ಜ್ವರಃ ॥೪॥

ಎಲೈ ಸುರಶ್ರೇಷ್ಠರೇ, ವೇದಗಳು ಮತ್ತು ಧರ್ಮಗಳು ವಿನಾಶವನ್ನು ಹೊಂದಬಾರದು. ನಾನು ತಾರಕಾಸುರನ ವಧೆಯ ವಿಷಯದಲ್ಲಿ ಮೊದಲೇ ಯೋಜನೆಯನ್ನು ಮಾಡಿದ್ದೇನೆ. ನೀವು ಆತಂಕಪಡುವುದು ಬೇಡ.

ದೇವಾಃ

ವರದಾನಾದ್ ಭಗವತೋ ದೈತೇಯೋ ಬಲಗರ್ವಿತಃ ।
ದೇವೈರ್ನ ಶಕ್ಯತೇ ಹಂತುಂ ಸ ಕಥಂ ಪ್ರಶಮಂ ವ್ರಜೇತ್ ॥೫॥

ದೇವತೆಗಳು– ನಿನ್ನಿಂದ ಪಡೆದ ವರದಾನದಿಂದ ದರ್ಪಿಷ್ಠನಾದ ದೈತ್ಯನು ದೇವತೆಗಳಿಂದ ಹತನಾಗುವುದಿಲ್ಲ. ಅವನು ಹೇಗೆ ವಿನಾಶವನ್ನು ಹೊಂದಿಯಾನು?

ಸ ಹಿ ನೈವ ಸ್ಮ ದೇವಾನಾಂ ನಾಸುರಾಣಾಂ ನ ರಕ್ಷಸಾಮ್ ।
ವಧ್ಯಃ ಸ್ಯಾಮಿತಿ ಜಗ್ರಾಹ ವರಂ ತ್ವತ್ತಃ ಪಿತಾಮಹ ॥೬॥

ಎಲೈ ಪಿತಾಮಹನೇ, ನಾನು ದೇವತೆಗಳಿಂದಾಗಲೀ, ಅಸುರರಿಂದಾಗಲೀ, ರಾಕ್ಷಸರಿಂದಾಗಲೀ ವಧ್ಯನಾಗಬಾರದೆಂದು ಅವನು ನಿನ್ನಿಂದ ವರವನ್ನು ಪಡೆದಿದ್ದಾನೆ.

ದೇವಾಶ್ಚ ಶಪ್ತಾ ರುದ್ರಾಣ್ಯಾ ಪ್ರಜೋಚ್ಛೇದೇ ಪುರಾಕೃತೇ ।
ನ ಭವಿಷ್ಯತಿ ವೋಽಪತ್ಯಮಿತಿ ಸರ್ವಜಗತ್ಪತೇ ॥೭॥

ಎಲೈ ಸರ್ವಜಗತ್ಪತಿಯೇ, ದೇವತೆಗಳು ಹಿಂದೆಯೇ ಪಾರ್ವತಿಯಿಂದ ನಿಮ್ಮ ಪ್ರಜೆಗಳು ಉಚ್ಛೇದವನ್ನು ಹೊಂದಲಿ, ನಿಮಗೆ ಪ್ರಜೆಗಳು ಉಂಟಾಗುವುದಿಲ್ಲ ಎಂದು ಶಪಿಸಲ್ಪಟ್ಟಿದ್ದಾರೆ.

ಬ್ರಹ್ಮಾ

ಹುತಾಶನೋ ನ ತತ್ರಾಸೀಚ್ಛಾಪಕಾಲೇ ಸುರೋತ್ತಮಾಃ ।
ಸ ಉತ್ಪಾದಯಿತಾಪತ್ಯಂ ವಧಾರ್ಥಂ ತ್ರಿದಶದ್ವಿಷಾಮ್ ॥೮॥

ಬ್ರಹ್ಮಾ– ಎಲೈ ಸುರೋತ್ತಮರೇ, ಪಾರ್ವತಿಯು ಶಾಪವನ್ನು ಕೊಟ್ಟ ಸಮಯದಲ್ಲಿ ಅಗ್ನಿಯು ಅಲ್ಲಿ ಇರಲಿಲ್ಲ. ಅವನು ದೇವಶತ್ರುವನ್ನು ವಧೆ ಮಾಡುವುದಕ್ಕಾಗಿ ಪುತ್ರನನ್ನು ಪಡೆಯುವನು.

ತದ್ವೈ ಸರ್ವಾನತಿಕ್ರಮ್ಯ ದೇವದಾನವರಾಕ್ಷಸಾನ್ ।
ಮಾನುಷಾನಥ ಗಂಧರ್ವಾನ್ ನಾಗಾನಥ ಚ ಪಕ್ಷಿಣಃ ॥೯॥

ಅಸ್ತ್ರೇಣಾಮೋಘಪಾತೇನ ಶಕ್ಯಾ ತಂ ಘಾತಯಿಷ್ಯತಿ ।
ಯತೋ ವೋ ಭಯಮುತ್ಪನ್ನಂ ಯೇ ಚಾನ್ಯೇ ಸುರಶತ್ರವಃ ॥೧೦॥

ಆ ಪುತ್ರನು ದೇವತೆಗಳನ್ನೂ, ದಾನವರನ್ನೂ, ರಾಕ್ಷಸರನ್ನೂ, ಮನುಷ್ಯರನ್ನೂ, ಗಂಧರ್ವರನ್ನೂ, ಸರ್ಪಗಳನ್ನೂ, ಪಕ್ಷಿಗಳನ್ನೂ ಮೀರಿ ಅಮೋಘವಾದ ಒಂದು ಶಕ್ತಿರೂಪವಾದ ಅಸ್ತ್ರದಿಂದ ನಿಮಗೆ ಯಾವನಿಂದ ಭಯವುಂಟಾಗಿದೆಯೋ ಅವನನ್ನೂ ಮತ್ತು ಬೇರೆ ದೇವಶತ್ರುಗಳನ್ನೂ ಸಂಹರಿಸುವನು.

ಸನಾತನೋ ಹಿ ಸಂಕಲ್ಪಃ ಕಾಮ ಇತ್ಯಭಿಧೀಯತೇ ।
ರುದ್ರಸ್ಯ ತೇಜಃ ಪ್ರಸ್ಕನ್ನಮಗ್ನೌ ನಿಪತಿತಂ ಚ ತತ್ ॥೧೧॥

ತತ್ತೇಜೋಽಗ್ನಿರ್ಮಹದ್ಭೂತಂ ದ್ವಿತೀಯಮಿವ ಪಾವಕಮ್ ।
ವಧಾರ್ಥಂ ದೇವಶತ್ರೂಣಾಂ ಗಂಗಾಯಾಂ ಜನಯಿಷ್ಯತಿ ॥೧೨॥

ಸನಾತನವಾದ ಸಂಕಲ್ಪಕ್ಕೆ ಕಾಮವೆಂದು ಹೆಸರು. (ಅವನಿಗೆ ಮನ್ಮಥ) ರುದ್ರದೇವರ ಆ ವೀರ್ಯವು ಜಾರಿ ಅಗ್ನಿಯಲ್ಲಿ ಬಿದ್ದಿದೆ. ಅಗ್ನಿ ಆ ತೇಜಸ್ಸನ್ನು ಎರಡನೆಯ ಅಗ್ನಿಯಂತೆ ದೇವಶತ್ರುಗಳ ವಿನಾಶಕ್ಕಾಗಿ ಒಂದು ದೊಡ್ಡ ಭೂತವನ್ನಾಗಿ (ದೊಡ್ಡ ಚೇತನವನ್ನಾಗಿ) ಗಂಗೆಯಲ್ಲಿ ಪಡೆಯುತ್ತಾನೆ.

ಸ ತು ನಾವಾಪ ತಂ ಶಾಪಂ ನಷ್ಟಃ ಸ ಹುತಭುಕ್ ತದಾ ।
ತಸ್ಮಾದ್ ವೋ ಭಯಹೃದ್ ದೇವಾಃ ಸಮುತ್ಪತ್ಸ್ಯತಿ ಪಾವಕಿಃ ॥೧೩॥

ಅಗ್ನಿಯು ಆಗ ಅಲ್ಲಿ ಇಲ್ಲದಿದ್ದುದರಿಂದ ಅವನಿಗೆ ಆ ಶಾಪವು ಬರಲಿಲ್ಲ. ಆದ್ದರಿಂದ ಎಲೈ ದೇವತೆಗಳೇ ನಿಮ್ಮ ಭಯವನ್ನು ಪರಿಹರಿಸುವ ಅಗ್ನಿಪುತ್ರನು ಜನಿಸುವನು.

ಅನ್ವಿಷ್ಯತಾಂ ವೈ ಜ್ವಲನಸ್ತಥಾ ಚಾದ್ಯ ನಿಯುಜ್ಯತಾಮ್ ।
ತಾರಕಸ್ಯ ವಧೋಪಾಯಃ ಕಥಿತೋ ವೈ ಮಯಾಽನಘಾಃ ॥೧೪॥

ಎಲೈ ಅನಘರೇ, ತಾರಕನ ವಧೋಪಾಯವನ್ನು ನಾನು ನಿಮಗೆ ಹೇಳಿದ್ದೇನೆ. ಅಗ್ನಿಯನ್ನು ಹುಡುಕಿ ಆ ಕಾರ್ಯದಲ್ಲಿ ಅವನನ್ನು ಈ ದಿನ ನಿಯೋಜಿಸಿ.

ನ ಹಿ ತೇಜಸ್ವಿನಾಂ ಶಾಪಾಸ್ತೇಜಃಸು ಪ್ರಭವಂತಿ ವೈ ।
ಬಲಾನ್ಯತಿಬಲಂ ಪ್ರಾಪ್ಯ ನಬಲಾನಿ ಭವಂತಿ ವೈ ॥೧೫॥

ತೇಜಸ್ವಿಗಳ ಶಾಪಗಳು ಅತಿತೇಜಸ್ವಿಗಳಿಗೆ ತಟ್ಟುವುದಿಲ್ಲ. ಬಲಗಳು ತಮಗಿಂತ ಉತ್ತಮ ಬಲಗಳನ್ನು ಎದುರಿಸಿದರೆ ದುರ್ಬಲವಾಗುತ್ತವೆ.

ಹನ್ಯಾದವಧ್ಯಾನ್ ವರದಾನಪಿ ಚೈವ ತಪಸ್ವಿನಃ ।
ಸಂಕಲ್ಪಾಭಿರುಚಿಃ ಕಾಮಃ ಸನಾತನತಮೋऽನಲಃ ॥೧೬॥

ಜಗತ್ಪತಿರನಿರ್ದೇಶ್ಯಃ ಸರ್ವಗಃ ಸರ್ವಭಾವನಃ ।
ಹೃಚ್ಛಯಃ ಸರ್ವಭೂತಾನಾಂ ಜ್ಯೇಷ್ಠೋ ರುದ್ರಾದಪಿ ಪ್ರಭುಃ ॥೧೭॥

ತಪಸ್ವಿಗಳು ವರದಾನದಿಂದ ಅವಧ್ಯರಾದವರನ್ನೂ ಮತ್ತು ವರವನ್ನು ನೀಡಿದವರನ್ನೂ ಕೊಂದಾರು. ಸಂಕಲ್ಪರೂಪವಾದ ಕಾಮವು ಸನಾತನನಾದ, ಜಗತ್ಪತಿಯಾದ, ನಿರ್ದೇಶ ಮಾಡಲು ಸಾಧ್ಯವಿಲ್ಲದ, ಸರ್ವತ್ರವ್ಯಾಪ್ತನಾದ, ಸರ್ವೋತ್ಪಾದಕನಾದ, ಸರ್ವಭೂತ ಹೃದಯವಾಸಿಯಾದ ಅಗ್ನಿರೂಪವಾದುದು. ಆ ಕಾಮವು ರುದ್ರನಿಗಿಂತ ಹಿರಿದಾದುದು.

ಅನ್ವಿಷ್ಯತಾಂ ಸ ತು ಕ್ಷಿಪ್ರಂ ತೇಜೋರಾಶಿರ್ಹುತಾಶನಃ ।
ಸ ವೋ ಮನೋಗತಂ ಕಾಮಂ ದೇವಃ ಸಂಪಾದಯಿಷ್ಯತಿ ॥೧೮॥

ತೇಜೋರಾಶಿಯಾದ ಅಗ್ನಿಯು ನಿಮ್ಮಿಂದ ಶೀಘ್ರವಾಗಿ ಹುಡುಕಲ್ಪಡಲಿ. ಆ ದೇವನು ನಿಮ್ಮ ಮನಸ್ಸಿನ ಅಭಿಲಾಷೆಯನ್ನು ನೆರವೇರಿಸುವನು (ಎಂದು ಹೇಳಿದರು).

ಏತದಾಕ್ಯಮುಪಶ್ರುತ್ಯ ತತೋ ದೇವಾ ಮಹಾತ್ಮನಃ ।
ಜಗ್ಮುಃ ಸಂಸಿದ್ಧಸಂಕಲ್ಪಾಃ ಪರ್ಯೇಷಂತೋ ವಿಭಾವಸುಮ್ ॥೧೯॥

ಮಹಾತ್ಮನಾದ ಬ್ರಹ್ಮದೇವರ ಈ ಮಾತುಗಳನ್ನು ಕೇಳಿದ ದೇವತೆಗಳು ತಮ್ಮ ಸಂಕಲ್ಪವು ಪೂರ್ಣವಾಗುತ್ತಿರಲು ಅಗ್ನಿಯನ್ನು ಹುಡುಕಿಕೊಂಡು ಹೊರಟರು.

ತತಸ್ತ್ರ್ಯಲೋಕ್ಯಮೃಷಯೋ ವ್ಯಚಿನ್ವಂತ ಸುರೈಃ ಸಹ ।
ಕಾಂಕ್ಷಂತೋ ದರ್ಶನಂ ವಹ್ನೇಃ ಸರ್ವೇ ತದ್ಗತಮಾನಸಾಃ ॥೨೦॥

ಋಷಿಗಳು ದೇವತೆಗಳ ಜೊತೆಯಲ್ಲಿ ಅಗ್ನಿಯನ್ನು ನೋಡಲು ಬಯಸುತ್ತಾ ಅಗ್ನಿಯಲ್ಲೇ ನೆಟ್ಟ ಮನಸ್ಸುಳ್ಳವರಾಗಿ ಮೂರುಲೋಕಗಳಲ್ಲಿಯೂ ಹುಡುಕಿದರು.

ಪರೇಣ ತಪಸಾ ಯುಕ್ತಾಃ ಶ್ರೀಮಂತೋ ಲೋಕವಿಶ್ರುತಾಃ ।
ಲೋಕಾನನ್ವಚರನ್ ಸಿದ್ಧಾಃ ಸರ್ವ ಏವ ಭೃಗೂದ್ವಹ ।
ನಷ್ಟಮಾತ್ಮನಿ ಸಂಲೀನಂ ನಾಧಿಜಗ್ಮುರ್ಹುತಾಶನಮ್ ॥೨೧॥

ಎಲೈ ಭೃಗೂದ್ವಹನೇ, ಶ್ರೇಷ್ಠ ತಪಸ್ಸಿನಿಂದ ಕೂಡಿದವರೂ, ಕಾಂತಿಯುಕ್ತರೂ, ಲೋಕವಿಖ್ಯಾತರೂ, ಸಿದ್ಧರೂ ಆದ ಅವರೆಲ್ಲರೂ ಲೋಕಗಳಲ್ಲಿ ಸಂಚರಿಸಿದರು. ನಷ್ಟನಾಗಿ ತನ್ನಲ್ಲಿಯೇ ಅಡಗಿಕೊಂಡಿದ್ದ ಅಗ್ನಿಯನ್ನು ಅವರು ಕಾಣಲಿಲ್ಲ.

ತತಃ ಸಂಜಾತಸಂತ್ರಾಸಾನಗ್ನೇರ್ದರ್ಶನಲಾಲಸಾನ್ ।
ಜಲೇಚರಃ ಕ್ಲಾಂತಮನಾಸ್ತೇಜಸಾಗ್ನೇಃ ಪ್ರದೀಪಿತಃ ।
ಉವಾಚ ದೇವಾನ್ ಮಂಡೂಕೋ ರಸಾತಳತಳೋತ್ಥಿತಃ ॥೨೨॥

ಆಗ ಅಗ್ನಿದರ್ಶನ ಲಾಲಸರಾದ, ಹೆದರಿದ ಅವರನ್ನು ಕುರಿತು ಅಗ್ನಿಯ ತಾಪಕ್ಕೆ ಒಳಗಾಗಿ ದಣಿದ ಮನಸ್ಸಿನಿಂದ ಕೂಡಿದ ರಸಾತಳ ಲೋಕದ ಕೆಳಭಾಗದಿಂದ ಮೇಲೆ ಬಂದ ಜಲಸಂಚಾರಿಯಾದ ಒಂದು ಮಂಡೂಕವು ದೇವತೆಗಳನ್ನು ಕುರಿತು ಹೇಳಿತು.

ರಸಾತಳತಳೇ ದೇವಾ ವಸತ್ಯಗ್ನಿರಿತಿ ಪ್ರಭೋ ।
ಸಂತಾಪಾದಿಹ ಸಂಪ್ರಾಪ್ತಃ ಪಾವಕಪ್ರಭವಾದಹಮ್ ॥೨೩॥

ಎಲೈ ಪ್ರಭುವೇ, ದೇವತೆಗಳೇ, ಅಗ್ನಿಯು ರಸಾತಳ ಲೋಕದ ಕೆಳಭಾಗದಲ್ಲಿ ವಾಸಿಸುತ್ತಿದ್ದಾನೆ. ಅಗ್ನಿಯಿಂದ ಉಂಟಾದ ಸಂತಾಪದಿಂದ ನಾನು ಇಲ್ಲಿಗೆ ಬಂದಿದ್ದೇನೆ.

ಸ ಸಂಸುಪ್ತೋ ಜಲೇ ದೇವಾ ಭಗವಾನ್ ಹವ್ಯವಾಹನಃ ।
ಅಪಃ ಸಂಸೃಜ್ಯ ತೇಜೋಭಿಸ್ತೇನ ಸಂತಾಪಿತಾ ವಯಮ್ ॥೨೪॥

ಪೂಜ್ಯನಾದ ಅಗ್ನಿಯು ತನ್ನ ತೇಜಸ್ಸನ್ನು ಜಲದ ಜೊತೆಯಲ್ಲಿ ಬೆರೆಸಿ ಜಲದಲ್ಲಿ ಮಲಗಿದ್ದಾನೆ. ಅದರಿಂದ ನಾವು ಸಂತಪ್ತರಾಗಿದ್ದೇವೆ.

ತಸ್ಯ ದರ್ಶನಮಿಷ್ಟಂ ವೋ ಯದಿ ದೇವಾ ವಿಭಾವಸೋಃ ।
ತತ್ಸೈನಮಭಿಗಚ್ಛಧ್ವಂ ಕಾರ್ಯಂ ವೋ ಯದಿ ವಹ್ನಿನಾ ॥೨೫॥

ಅಗ್ನಿದೇವನ ದರ್ಶನವು ನಿಮಗೆ ಇಷ್ಟವಾದರೆ ಅಗ್ನಿಯಿಂದ ಏನಾದರೂ ಕಾರ್ಯವಾಗಬೇಕಾದರೆ ಅಲ್ಲಿ ನೀವು ಅವನನ್ನು ಸಂಧಿಸಿ.

ಗಮ್ಯತಾಂ ಸಾಧಯಿಷ್ಯಾಮೋ ವಯಂ ಹ್ಯಗ್ನಿಭಯಾತ್ ಸುರಾಃ ।
ಏತಾವದುಕ್ತ್ವಾ ಮಂಡೂಕಸ್ತ್ವರಿತೋ ಜಲಮಾವಿಶತ್ ॥೨೬॥

ಎಲೈ ದೇವತೆಗಳೇ, ನೀವು ಹೊರಡಿ. ನಾವೂ ಸಹ ಅಗ್ನಿಭಯದಿಂದ ಬೇರೆ ಕಡೆಗೆ ಹೋಗುತ್ತೇವೆ (ಎಂದು ಹೇಳಿತು). ಇಷ್ಟು ಹೇಳಿ ಆ ಮಂಡೂಕವು ಶೀಘ್ರವಾಗಿ ಜಲವನ್ನು ಪ್ರವೇಶಿಸಿತು.

ಹುತಾಶನಸ್ತು ಬುಬುಧೇ ಮಂಡೂಕಸ್ಯಾಥ ಪೈಶುನಮ್ ।
ಶಶಾಪ ಸ ತಮಾಸಾದ್ಯ ನ ರಸಾನ್ ವೇತ್ಸ್ಯಸೀತಿ ವೈ ॥೨೭॥

ಮಂಡೂಕವು ಚಾಡಿ ಹೇಳಿದ ವಿಷಯವು ಅಗ್ನಿಗೆ ತಿಳಿಯಿತು. ಅವನು ಅದರ ಬಳಿಗೆ ಬಂದು ನಿನಗೆ ರಸಜ್ಞಾನವುಂಟಾಗುವುದಿಲ್ಲ ಎಂದು ಶಾಪವನ್ನು ಕೊಟ್ಟನು.

ತಂ ಸ ಸಂಯುಜ್ಯ ಶಾಪೇನ ಮಂಡೂಕಂ ಪಾವಕೋ ಯಯೌ ।
ಅನ್ಯತ್ರ ವಾಸಾಯ ವಿಭುರ್ನ ಚ ದೇವಾನದರ್ಶಯತ್ ॥೨೮॥

ಮಂಡೂಕಕ್ಕೆ ಶಾಪವನ್ನು ಕೊಟ್ಟು ವಿಭುವಾದ ಅಗ್ನಿಯು ವಾಸ ಮಾಡುವುದಕ್ಕೆ ಇನ್ನೊಂದು ಕಡೆಗೆ ಹೋದನು. ದೇವತೆಗಳಿಗೆ ತನ್ನ ದರ್ಶನವನ್ನು ಕೊಡಲಿಲ್ಲ.

ದೇವಾಸ್ತ್ವನುಗ್ರಹಂ ಚಕ್ರುರ್ಮಂಡೂಕಾನಾಂ ಭೃಗೂದ್ವಹ ।
ಯತ್ತಚ್ಛೃಣು ಮಹಾಬಾಹೋ ಗದತೋ ಮಮ ಸರ್ವಶಃ ॥೨೯॥

ಎಲೈ ಭೃಗೂದ್ವಹನೇ, ಮಹಾಬಾಹುವೇ, ದೇವತೆಗಳು ಮಂಡೂಕಗಳಿಗೆ ಯಾವ ಅನುಗ್ರಹವನ್ನು ಮಾಡಿದರೋ ಅದನ್ನು ನನ್ನಿಂದ ಕೇಳು.

ಅಗ್ನಿಶಾಪಾದಜಿಹ್ವಾಪಿ ರಸಜ್ಞಾನಬಹಿಷ್ಕೃತಾಃ ।
ಸರಸ್ವತೀಂ ಬಹುವಿಧಾಂ ಯೂಯಮುಚ್ಚಾರಯಿಷ್ಯಥ ॥೩೦॥

ಅಗ್ನಿಶಾಪದಿಂದ ಜಿಹ್ವಾಹೀನರಾಗಿ ರಸಜ್ಞಾನರಹಿತರಾದರೂ, ಬಹುವಿಧವಾದ ಶಬ್ದವನ್ನು ನೀವು ಮಾಡುವವರಾಗುವಿರಿ.

ಬಿಲವಾಸಗತಾಂಶ್ಚೈವ ನಿರಾದಾನಾನಚೇತಸಃ ।
ಗತಾಸೂನಪಿ ವಃ ಶುಷ್ಕಾನ್ ಭೂಮಿಃ ಸಂಧಾರಯಿಷ್ಯತಿ ।
ತಮೋಗತಾಯಾಮಪಿ ಚ ನಿಶಾಯಾಂ ವಿಚರಿಷ್ಯಥ ॥೩೧॥

ನೀವು ಬಿಲವಾಸವನ್ನು ಮಾಡಿ ಆಹಾರರಹಿತರಾಗಿ, ಪ್ರಜ್ಞಾಹೀನರಾಗಿ ಪ್ರಾಣಗಳನ್ನು ಬಿಟ್ಟರೂ ಭೂಮಿಯು ನಿಮ್ಮನ್ನು ಧರಿಸುವುದು. (ಬದುಕಿಸುವುದು) ರಾತ್ರಿಯು ಕತ್ತಲೆಯಿಂದ ತುಂಬಿದ್ದರೂ ನೀವು ಸಂಚಾರವನ್ನು ಮಾಡುವಿರಿ.

ಇತ್ಯುಕ್ತ್ವಾ ತಾಂಸ್ತತೋ ದೇವಾಃ ಪುನರೇವ ಮಹೀಮಿಮಾಮ್ ।
ಪರೀಯುರ್ಜ್ವಲನಸ್ಯಾರ್ಥೇ ನ ಚಾವಿಂದನ್ ಹುತಾಶನಮ್ ॥೩೨॥

ಮಂಡೂಕಗಳನ್ನು ಕುರಿತು ಹೀಗೆ ಹೇಳಿ ದೇವತೆಗಳು ಪುನಃ ಅಗ್ನಿಯನ್ನು ಹುಡುಕಲು ಈ ಭೂಮಿಯಲ್ಲೆಲ್ಲಾ ಸಂಚರಿಸಿದರು. ಆದರೆ ಅಗ್ನಿಯು ಅವರಿಗೆ ದೊರೆಯಲಿಲ್ಲ.

ಅಥ ತಾನ್ ದ್ವಿರದಃ ಕಶ್ಚಿತ್ ಸುರೇಂದ್ರದ್ವಿರದೋಪಮಃ ।
ಅಶ್ವತ್ಥಸ್ಥೋऽಗ್ನಿರಿತ್ಯೇವಂ ಪ್ರಾಹ ದೇವಾನ್ ಭೃಗೂದ್ವಹ ॥೩೩॥

ಎಲೈ ಭೃಗೂದ್ವಹನೇ, ಆಗ ದೇವೇಂದ್ರನ ಆನೆಯಾದ ಐರಾವತದಂತಿದ್ದ ಒಂದು ಆನೆಯು ದೇವತೆಗಳನ್ನು ಕುರಿತು ಅಗ್ನಿಯು ಅಶ್ವತ್ಥವೃಕ್ಷದಲ್ಲಿದ್ದಾನೆ ಎಂದು ಹೇಳಿತು.

ಶಶಾಪ ಜ್ವಲನಃ ಸರ್ವಾನ್ ದ್ವಿರದಾನ್ ಕ್ರೋಧಮೂರ್ಚ್ಛಿತಃ ।
ಪ್ರತೀಪಾ ಭವತಾಂ ಜಿಹ್ವಾ ಭವಿತ್ರೀತಿ ಭೃಗೂದ್ವಹ ॥೩೪॥

ಎಲೈ ಭೃಗೂದ್ವಹನೇ, ಕ್ರೋಧಮೂರ್ಛಿತನಾದ ಅಗ್ನಿಯು ಎಲ್ಲಾ ಆನೆಗಳಿಗೂ ನಿಮ್ಮ ನಾಲಿಗೆಯು ನಿಮಗೆ ವಿರುದ್ಧವಾಗಲಿ ಎಂದು ಶಾಪವನ್ನು ಕೊಟ್ಟನು.

ಇತ್ಯುಕ್ತ್ವಾ ನಿಃಸೃತೋऽಶ್ವತ್ಥಾದಗ್ನಿರ್ವಾರಣಸೂಚಿತಃ ।
ಪ್ರವಿವೇಶ ಶಮೀಗರ್ಭಮಥ ವಹ್ನಿಃ ಸುಷುಪ್ಸಯಾ ॥೩೫॥

ಆನೆಗಳಿಂದ ಸೂಚಿಸಲ್ಪಟ್ಟ ಅಗ್ನಿಯು ಹೀಗೆ ಹೇಳಿ ಅಶ್ವತ್ಥದಿಂದ ಹೊರಗೆ ಬಂದು ಮಲಗಲು ಬಯಸಿ ಶಮೀಗರ್ಭವನ್ನು ಪ್ರವೇಶಿಸಿದನು.

ಅನುಗ್ರಹಂ ತು ನಾಗಾನಾಂ ಯಂ ಚಕ್ರುಃ ಶೃಣು ತಂ ಪ್ರಭೋ ।
ದೇವಾ ಭೃಗುಕುಲಶ್ರೇಷ್ಠ ಪ್ರೀತಾಃ ಸತ್ಯಪರಾಕ್ರಮಾಃ ॥೩೬॥

ಎಲೈ ಪ್ರಭುವೇ, ಭೃಗುಕುಲಶ್ರೇಷ್ಠನೇ, ಸತ್ಯಪರಾಕ್ರಮರಾದ ದೇವತೆಗಳು ಆನೆಗಳಿಗೆ ಸಂತೋಷದಿಂದ ಏನು ಅನುಗ್ರಹವನ್ನು ಮಾಡಿದರು ಎಂಬುದನ್ನು ಕೇಳು.

ಪ್ರತೀಪಯಾ ಜಿಹ್ವಯಾಪಿ ಸರ್ವಾಹಾರಾನ್ ಕರಿಷ್ಯಥ ।
ವಾಚಂ ಚೋಚ್ಚಾರಯಿಷ್ಯಧ್ವಮುಚ್ಚೈರವ್ಯಂಜಿತಾಕ್ಷರಮ್ ।
ಇತ್ಯುಕ್ತ್ವಾ ಪುನರೇವಾಗ್ನಿಮನುಸಸ್ರುರ್ದಿವೌಕಸಃ ॥೩೭॥

ನಿಮ್ಮ ನಾಲಿಗೆಯು ನಿಮಗೆ ಅನುಕೂಲವಾಗಿಲ್ಲದಿದ್ದರೂ ನೀವು ಎಲ್ಲಾ ಆಹಾರಗಳನ್ನು ಸ್ವೀಕರಿಸುವಿರಿ. ಅಕ್ಷರಗಳನ್ನು ವ್ಯಕ್ತಪಡಿಸದೆ ದೊಡ್ಡ ಧ್ವನಿಯನ್ನು ಉತ್ಪಾದಿಸುವಿರಿ ಎಂದು ಹೇಳಿ ದೇವತೆಗಳು ಪುನಃ ಅಗ್ನಿಯನ್ನು ಹುಡುಕಲು ಪ್ರಾರಂಭಿಸಿದರು.

ಅಶ್ವತ್ಥಾನ್ನಿಃಸೃತಶ್ಚಾಗ್ನಿಃ ಶಮೀಗರ್ಭಗತಸ್ತದಾ ।
ಶುಕೇನ ಖ್ಯಾಪಿತೋ ವಿಪ್ರ ತಂ ದೇವಾಃ ಸಮುಪಾದ್ರವನ್ ॥೩೮॥

ಅಶ್ವತ್ಥದಿಂದ ಹೊರಗೆ ಬಂದು ಶಮೀಗರ್ಭವನ್ನು ಪ್ರವೇಶಿಸಿದ ಅಗ್ನಿಯನ್ನು ಒಂದು ಗಿಣಿಯು ಪ್ರಕಾಶಪಡಿಸಿತು. ಎಲೈ ವಿಪ್ರನೇ, ಆಗ ದೇವತೆಗಳು ಅಲ್ಲಿಗೆ ಓಡಿದರು.

ಶಶಾಪ ಶುಕಮಗ್ನಿಸ್ತು ವಾಗ್ವಿಹೀನೋ ಭವಿಷ್ಯಸಿ ।
ಜಿಹ್ವಾಂ ಚಾವರ್ತಯಾಮಾಸ ತಸ್ಯಾಪಿ ಹುತಭುಕ್ ತದಾ ॥೩೯॥

ಆಗ ಅಗ್ನಿಯು ಶುಕವನ್ನು ಕುರಿತು ನೀನು ವಾಗ್ವಿಹೀನನಾಗುವಿ (ಮಾತನಾಡದಂತೆ ಆಗುವಿ) ಎಂದು ಹೇಳಿ ಅದರ ನಾಲಿಗೆಯನ್ನು ಹೊರಳಿಸಿ ತಿರುಗಿಸಿದನು.

ದೃಷ್ಟ್ವಾ ತು ಜ್ವಲನಂ ದೇವಾಃ ಶುಕಮೂಚುರ್ದಯಾನ್ವಿತಾಃ ।
ಭವಿತಾ ನ ತ್ವಮತ್ಯಂತಂ ಶಕುನೇ ನಷ್ಟವಾಗಿತಿ ॥೪೦॥

ಆವೃತ್ತಜಿಹ್ವಸ್ಯ ಸತೋ ವಾಕ್ಯಂ ಕಾಂತಂ ಭವಿಷ್ಯತಿ ।
ಬಾಲಸ್ಯೇವ ಪ್ರವೃದ್ಧಸ್ಯ ಕಲಮವ್ಯಕ್ತಮದ್ಭುತಮ್ ॥೪೧॥

ಅಗ್ನಿಯನ್ನು ನೋಡಿದ ದೇವತೆಗಳು ಶುಕದ ಮೇಲೆ ದಯೆಯಿಂದ ಕೂಡಿ ಅದನ್ನು ಕುರಿತು- 'ಎಲೈ ಪಕ್ಷಿಯೇ, ನೀನು ಮಾತನಾಡುವುದನ್ನು ಪೂರ್ಣವಾಗಿ ಕಳೆದುಕೊಳ್ಳುವುದಿಲ್ಲ. ಆದರೂ ನಾಲಿಗೆಯನ್ನು ಹೊರಳಿಸಿದರೂ ನಿನ್ನಿಂದ ಮನೋಹರವಾದ ಮಾತು ಹೊರಬರುವುದು. ಚೆನ್ನಾಗಿ ಬೆಳೆದ ಬಾಲಕನಂತೆ ಆ ವಾಣಿಯು ಮಧುರವೂ, ಅದ್ಭುತವೂ ಆಗಿರುವುದು' ಎಂದು ಹೇಳಿದರು.

ಇತ್ಯುಕ್ತ್ವಾ ತಂ ಶಮೀಗರ್ಭೇ ವಹ್ನಿಮಾಲಕ್ಷ್ಯ ದೇವತಾಃ ।
ತದೇವಾಯತನಂ ಚಕ್ರುಃ ಪುಣ್ಯಂ ಸರ್ವಕ್ರಿಯಾಸ್ವಪಿ ॥೪೨॥

ದೇವತೆಗಳು ಹೀಗೆ ಹೇಳಿ ಶಮೀಗರ್ಭದಲ್ಲಿ ಅಗ್ನಿಯನ್ನು ನೋಡಿ ಎಲ್ಲ ಪುಣ್ಯ ಕಾರ್ಯಗಳಲ್ಲಿಯೂ ಅದನ್ನೇ ಒಂದು ಆಶ್ರಯಸ್ಥಾನವನ್ನಾಗಿ ಮಾಡಿಕೊಂಡರು.

ತತಃಪ್ರಭೃತಿ ಚಾಪ್ಯಗ್ನಿಃ ಶಮೀಗರ್ಭೇಷು ದೃಶ್ಯತೇ ।
ಉತ್ಪಾದನೇ ತಥೋಪಾಯಮನುಜಗ್ಮುಶ್ಚ ಮಾನವಾಃ ॥೪೩॥

ಅಲ್ಲಿಂದ ಆರಂಭಿಸಿ ಅಗ್ನಿಯು ಶಮೀಗರ್ಭದಲ್ಲಿ ಕಂಡುಬರುತ್ತಾನೆ. ಹಾಗೆಯೇ ಮನುಷ್ಯರು ಅಗ್ನಿಯನ್ನು ಉತ್ಪಾದಿಸಲು ಆಗಿನಿಂದಲೂ ಶಮೀರೂಪವಾದ ಒಂದು ಉಪಾಯವನ್ನು ಕಂಡುಕೊಂಡರು.

ಆಪೋ ರಸಾತಳೇ ಯಾಸ್ತು ಸಂಸೃಷ್ಟಾಶ್ಚಿತ್ರಭಾನುನಾ ।
ತಾಃ ಪರ್ವತಪ್ರಸ್ರವಣೈರೂಷ್ಮಾಂ ಮುಂಚಂತಿ ಭಾರ್ಗವ ।
ಪಾವಕೇನಾಧಿಶಯತಾ ಸಂತಪ್ತಾಸ್ತಸ್ಯ ತೇಜಸಾ ॥೪೪॥

ಎಲೈ ಭಾರ್ಗವನೇ, ರಸಾತಳ ಲೋಕದಲ್ಲಿದ್ದ ಜಲವು ತಮ್ಮಲ್ಲಿ ಮಲಗಿದ ಅಗ್ನಿಯ ತೇಜಸ್ಸಿನಿಂದ ಸಂತಪ್ತವಾಗಿ ಪರ್ವತದ ಜಲಪಾತಗಳಿಂದ ಹಬೆಯನ್ನು ಉಂಟು ಮಾಡುತ್ತವೆ.

ತತೋऽಗ್ನಿರ್ದೇವತಾ ದೃಷ್ಟ್ವಾ ಬಭೂವ ವ್ಯಥಿತಸ್ತದಾ ।
ಕಿಮಾಗಮನಮಿತ್ಯೇವಂ ತಾನಪೃಚ್ಛತ ಪಾವಕಃ ॥೪೫॥

ಆಗ ಅಗ್ನಿಯು ದೇವತೆಗಳನ್ನು ನೋಡಿ ವ್ಯಥೆಯನ್ನು ಹೊಂದಿ ನಿಮ್ಮ ಆಗಮನದ ಉದ್ದೇಶವೇನು ಎಂದು ಅವರನ್ನು ಕೇಳಿದನು.

ತಮೂಚುರ್ವಿಬುಧಾಃ ಸರ್ವೇ ತೇ ಚೈವ ಪರಮರ್ಷಯಃ ।
ತ್ವಾಂ ನಿಯೋಕ್ಷ್ಯಾಮಹೇ ಕಾರ್ಯೇ ತದ್ ಭವಾನ್ ಕರ್ತುಮರ್ಹತಿ ।
ಕೃತೇ ಚ ತಸ್ಮಿನ್ ಭವಿತಾ ತವಾಪಿ ಸುಮಹಾನ್ ಗುಣಃ ॥೪೬॥

ದೇವತೆಗಳು ಮತ್ತು ಪರಮರ್ಷಿಗಳು ಎಲ್ಲರೂ ಅವನನ್ನು ಕುರಿತು ನಿನಗೆ ಒಂದು ಕಾರ್ಯವನ್ನು ಹೇಳುವೆವು. ಅದನ್ನು ನೀನು ಮಾಡಬೇಕು. ಆ ಕಾರ್ಯವನ್ನು ಮಾಡಿದರೆ ನಿನಗೂ ಮಹಾಗುಣ ಪ್ರಾಪ್ತಿಯಾಗುವುದು ಎಂದು ಹೇಳಿದರು.

ಅಗ್ನಿಃ

ಬ್ರೂತ ಯದ್ ಭವತಾಂ ಕಾರ್ಯಂ ಸರ್ವಂ ಕರ್ತಾಸ್ಮಿ ತತ್ಸುರಾಃ ।
ಭವತಾಂ ಹಿ ನಿಯೋಜ್ಯೋಽಹಂ ಮಾ ವೋಽತ್ರಾಸ್ತು ವಿಚಾರಣಾ ॥

ಅಗ್ನಿ– ದೇವತೆಗಳೇ, ನಿಮಗೆ ಏನು ಮಾಡಬೇಕೆಂದು ಹೇಳಿ. ಎಲ್ಲವನ್ನೂ ಮಾಡುವೆನು. ನಾನು ನಿಮಗೆ ಅಧೀನನಾದವನು. ಈ ವಿಷಯದಲ್ಲಿ ಸಂಶಯ ಪಡುವುದು ಬೇಡ.

ದೇವಾಃ

ಅಸುರಸ್ತಾರಕೋ ನಾಮ ಬ್ರಹ್ಮಣೋ ವರದರ್ಪಿತಃ ।
ಅಸ್ಮಾನ್ ಪ್ರಬಾಧತೇ ವೀರ್ಯಾದ್ ವಧಸ್ತಸ್ಯ ವಿಧೀಯತಾಮ್ ॥೪೮॥

ದೇವತೆಗಳು– ತಾರಕನೆಂಬ ಅಸುರನು ಬ್ರಹ್ಮದೇವರ ವರದಿಂದ ದರ್ಪಿಷ್ಠನಾಗಿ ತನ್ನ ಪರಾಕ್ರಮದಿಂದ ನಮ್ಮನ್ನು ಬಾಧಿಸುತ್ತಿದ್ದಾನೆ. ಅವನ ವಧೆಯನ್ನು ಮಾಡಬೇಕು.

ಇಮಾನ್ ದೇವಗಣಾಂಸ್ತಾತ ಪ್ರಜಾಪತಿಗಣಾಂಸ್ತಥಾ ।
ಋಷೀಂಶ್ಚಾಪಿ ಮಹಾಭಾಗಾನ್ ಪರಿತ್ರಾಯಸ್ವ ಪಾವಕ ॥೪೯॥

ಎಲೈ ಅಗ್ನಿಯೇ, ಪ್ರೀತಿಪಾತ್ರನೇ, ಮಹಾನುಭಾವರಾದ ಋಷಿಗಳನ್ನೂ, ದೇವತಾ ಸಮೂಹವನ್ನೂ ಮತ್ತು ಪ್ರಜಾಪತಿ ಸಮೂಹವನ್ನೂ ರಕ್ಷಿಸುವವನಾಗು.

ಅಪತ್ಯಂ ತೇಜಸಾ ಯುಕ್ತಂ ಪ್ರವೀರಂ ಜನಯ ಪ್ರಭೋ ।
ಯದ್ ಭಯಂ ನೋಽಸುರಾತ್ ತಸ್ಮಾನ್ನಾಶಯೇದ್ ಹವ್ಯವಾಹನ ॥

ಎಲೈ ಪ್ರಭುವೇ, ಹವ್ಯವಾಹನನೇ, ನಮಗೆ ಅಸುರನಿಂದ ಉಂಟಾದ ಭಯವನ್ನು ನಾಶಪಡಿಸುವಂತಹ ವೀರನಾದ ಮತ್ತು ನಿನ್ನ ತೇಜಸ್ಸಿನಿಂದ ಕೂಡಿದ ಪುತ್ರನನ್ನು ಪಡೆಯುವವನಾಗು.

ಶಪ್ತಾನಾಂ ನೋ ಮಹಾದೇವ್ಯಾ ನಾನ್ಯದಸ್ತಿ ಪರಾಯಣಮ್ ।
ಅನ್ಯತ್ರ ಭವತೋ ವೀರ್ಯಂ ತಸ್ಮಾತ್ ತ್ರಾಯಸ್ವ ನಸ್ತತಃ ॥೫೧॥

ಮಹಾದೇವಿಯಾದ ಪಾರ್ವತಿಯ ಶಾಪಕ್ಕೆ ಒಳಗಾದ ನಮಗೆ ನಿನ್ನ ಪರಾಕ್ರಮವನ್ನು ಬಿಟ್ಟು ಬೇರೆ ಉಪಾಯವಿಲ್ಲ. ಆದ್ದರಿಂದ ನಮ್ಮನ್ನು ಆ ಭಯದಿಂದ ರಕ್ಷಿಸು.

ಇತ್ಯುಕ್ತಃ ಸ ತಥೇತ್ಯುಕ್ತ್ವಾ ಭಗವಾನ್ ಹವ್ಯಕವ್ಯಭುಕ್ ।
ಜಗಾಮಾಥ ದುರಾಧರ್ಷೋ ಗಂಗಾಂ ಭಾಗೀರಥೀಂ ಪ್ರತಿ ॥೫೨॥

ಹೀಗೆ ಹೇಳಲ್ಪಟ್ಟ ಹವ್ಯಕವ್ಯಭೋಜಿಯಾದ ಪೂಜ್ಯನಾದ ಅಗ್ನಿಯು ಹಾಗೆಯೇ ಆಗಲಿ ಎಂದು ಹೇಳಿ ದುರಾಧರ್ಷನಾದ ಅವನು ಭಾಗೀರಥಿಯ ಬಳಿಗೆ ಹೋದನು.

ತಯಾ ಚಾಪ್ಯಭವನ್ ಮಿಶ್ರೋ ಗರ್ಭಶ್ಚಾಸ್ಯಾಭವತ್ ತದಾ ।
ವವೃಧೇ ಸ ತದಾ ಗರ್ಭಃ ಕಕ್ಷೇ ಕೃಷ್ಣಗತಿರ್ಯಥಾ ॥೫೩॥

ಅವನು ಅವಳ ಜೊತೆಯಲ್ಲಿ ಸಂಯೋಗವನ್ನು ಹೊಂದಿದನು. ಆಗ ಭಾಗೀರಥಿಗೆ ಗರ್ಭವುಂಟಾಗಿ ಹುಲ್ಲುಗಾವಲಿನಲ್ಲಿ ಬಿದ್ದ ಅಗ್ನಿಯಂತೆ ಅದು ವೃದ್ಧಿಯನ್ನು ಹೊಂದಿತು.

ತೇಜಸಾ ತಸ್ಯ ಗರ್ಭಸ್ಯ ಗಂಗಾ ವಿಹ್ವಲಚೇತನಾ ।
ಸಂತಾಪಮಗಮತ್ ತೀವ್ರಂ ಸಾ ಸೋಢುಂ ನ ಶಶಾಕ ಹ ॥೫೪॥

ಆ ಗರ್ಭದ ತೇಜಸ್ಸಿನಿಂದ ಗಂಗೆಯು ವಿಹ್ವಲಳಾದಳು. ತೀವ್ರ ಸಂತಾಪವನ್ನು ಹೊಂದಿದ ಅವಳಿಗೆ ಆ ತೇಜಸ್ಸನ್ನು ಸಹಿಸಲು ಸಾಧ್ಯವಾಗಲಿಲ್ಲ.

ಆಹಿತೇ ಜ್ವಲನೇನಾಥ ಗರ್ಭೇ ತೇಜಃಸಮನ್ವಿತೇ ।
ಗಂಗಾಯಾಮಸುರಃ ಕಶ್ಚಿದ್ ಭೈರವಂ ನಾದಮುತ್ಸೃಜತ್ ॥೫೫॥

ಗಂಗೆಯಲ್ಲಿ ಅಗ್ನಿಯಿಂದ ತೇಜೋಯುಕ್ತವಾದ ಗರ್ಭವು ಅರ್ಪಿಸಲ್ಪಡುತ್ತಿರಲು ಒಬ್ಬ ಅಸುರನು ಭೈರವನಾದವನ್ನು ಮಾಡಿದನು.

ಅಬುದ್ಧಿಪತತೇನಾಥ ನಾದೇನ ವಿಪುಲೇನ ಸಾ ।
ವಿತ್ರಸ್ತೋದ್ಭ್ರಾಂತನಯನಾ ಗಂಗಾ ವಿಪ್ಲುತಲೋಚನಾ ।
ವಿಸಂಜ್ಞಾ ನಾಶಕದ್ ಗರ್ಭಂ ಸಂಧಾರಯಿತುಮಾತ್ಮನಾ ॥೫೬॥

ಅಕಸ್ಮಾತ್ತಾಗಿ ಹೊರಬಂದ ವಿಪುಲವಾದ ಆ ನಾದದಿಂದ ಹೆದರಿದ ಜ್ವಲಿಸುವ ಕಣ್ಣುಗಳುಳ್ಳ ವಿಶಾಲಾಕ್ಷಿಯಾದ ಗಂಗೆಯು ವಿಸಂಜ್ಞಳಾಗಿ ಆಗ ಗರ್ಭವನ್ನು ಧರಿಸಲು ಶಕ್ತಳಾಗಲಿಲ್ಲ.

ಸಾ ತು ತೇಜಃಪರೀತಾಂಗೀ ಕಂಪಮಾನಾ ಚ ಜಾಹ್ನವೀ ।
ಉವಾಚ ವಚನಂ ವಿಪ್ರ ತದಾ ಗರ್ಭಬಲೋದ್ಧತಾ ।
ನ ತೇ ಶಕ್ತಾಸ್ಮಿ ಭಗವಂಸ್ತೇಜಸೋಽಸ್ಯ ವಿಧಾರಣೇ ॥೫೭॥

ಆ ಗರ್ಭದ ತೇಜಸ್ಸು ತನ್ನ ಶರೀರದಲ್ಲಿ ವ್ಯಾಪಿಸಿದ್ದರಿಂದ ಮತ್ತು ಅಸುರನ ನಾದದಿಂದ ನಡುಗುತ್ತಿದ್ದ ಅವಳು ಅಗ್ನಿಯನ್ನು ಕುರಿತು ಪೂಜ್ಯನೇ, ಈ ಗರ್ಭವನ್ನು ಧರಿಸಲು ನನಗೆ ಸಾಧ್ಯವಿಲ್ಲ ಎಂದು ಹೇಳಿದಳು.

ವಿಮೂಢಾಽಸ್ಮಿ ಕೃತಾಽನೇನ ತಥಾಽಸ್ವಾಸ್ಥ್ಯಂ ಕೃತಂ ಪರಮ್ ।
ವಿಹ್ವಲಾ ಚಾಸ್ಮಿ ಭಗವಂಸ್ತೇಜೋ ನಷ್ಟಂ ಚ ಮೇಽನಘ ॥೫೮॥

ಈ ಗರ್ಭದಿಂದ ನಾನು ವಿಮೂಢಳಾಗಿದ್ದೇನೆ, ಅಸ್ವಸ್ಥಳಾಗಿದ್ದೇನೆ, ವಿಹ್ವಲಳೂ ಆಗಿದ್ದೇನೆ. ಪೂಜ್ಯನೇ, ಅನಘನೇ, ನನ್ನ ತೇಜಸ್ಸನ್ನು ಕಳೆದುಕೊಂಡಿದ್ದೇನೆ.

ಧಾರಣೇ ನಾಸ್ಯ ಶಕ್ತಾಽಹಂ ಗರ್ಭಸ್ಯ ತಪತಾಂವರ ।
ಉತ್ಸೃಜ್ಯೇಽಹಮಿಮಂ ದುಃಖಾನ್ನ ತು ಕಾಮಾತ್ ಕಥಂಚನ ॥೫೯॥

ಎಲೈ ಜ್ವಲಿಸುವವರಲ್ಲಿ ಶ್ರೇಷ್ಠನೇ, ನಾನು ಈ ಗರ್ಭವನ್ನು ಧರಿಸಲಾರೆ. ನಾನು ತಡೆಯಲಾರದೆ ಇದನ್ನು ವಿಸರ್ಜಿಸುತ್ತಿದ್ದೇನೆ. ಮನಃಪೂರ್ವಕವಾಗಿ ಅಲ್ಲ.

ನ ಚೇತಸೋಽಸ್ತಿ ಸಂಸ್ಪರ್ಶೋ ಮಮ ದೇವ ವಿಭಾವಸೋ ।
ಆಪದರ್ಥೇ ಹಿ ಸಂಬಂಧಃ ಸುಸೂಕ್ಷ್ಮೋಽಪಿ ಮಹಾದ್ಯುತೇ ॥೬೦॥

ಎಲೈ ಅಗ್ನಿಯೇ, ಎಲೈ ಮಹಾದ್ಯುತಿಯೇ, ನನ್ನ ಮನಸ್ಸಿಗೂ ಈ ಗರ್ಭಕ್ಕೂ ಯಾವ ಸೂಕ್ಷ್ಮವಾದ ಸಂಬಂಧವೂ ಇಲ್ಲ. ಆಪದ್ಧರ್ಮವಾಗಿ ಮಾತ್ರ ಸಂಬಂಧವಿದೆ.

ಯದತ್ರ ಗುಣಸಂಪನ್ನಮಿತರಂ ವಾ ಹುತಾಶನ ।
ತ್ವಯ್ಯೇವ ತದಹಂ ಮನ್ಯೇ ಧರ್ಮಾಧರ್ಮೌ ಚ ಕೇವಲೌ ॥೬೧॥

ಎಲೈ ಅಗ್ನಿಯೇ, ಇದರಲ್ಲಿ ಯಾವ ಗುಣದೋಷಗಳಿದ್ದರೂ, ಧರ್ಮಾಧರ್ಮಗಳಿದ್ದರೂ ಅದು ನಿನಗೇ ಸೇರಿದುದು ಎಂದು ನಾನು ಭಾವಿಸುತ್ತೇನೆ.

ತಾಮುವಾಚ ತತೋ ವಹ್ನಿರ್ಧಾರ್ಯತಾಂ ಧಾರ್ಯತಾಮಯಮ್ ।
ಗರ್ಭೋ ಮತ್ತೇಜಸಾ ಯುಕ್ತೋ ಮಹಾಗುಣಫಲೋದಯಃ ॥೬೨॥

ಆಗ ಅಗ್ನಿಯು ಅವಳನ್ನು ಕುರಿತು ಈ ಗರ್ಭವನ್ನು ಧರಿಸು. ನನ್ನ ತೇಜಸ್ಸಿನಿಂದ ಕೂಡಿದ ಈ ಗರ್ಭವು ನಿನಗೆ ಮಹಾಫಲವನ್ನು ಕೊಡುತ್ತದೆ (ಎಂದು ಹೇಳಿದನು).

ಶಕ್ತಾ ಹ್ಯಸಿ ಮಹೀಂ ಕೃತ್ಸ್ನಾಂ ವೋಢುಂ ಧಾರಯಿತುಂ ತಥಾ ।
ನ ಹಿ ತೇ ಕಿಂಚಿದಪ್ರಾಪ್ಯಂ ಮದ್ರೇತೋಧಾರಣಾದೃತೇ ॥೬೩॥

ಈ ಸಮಸ್ತವಾದ ಭೂಮಿಯನ್ನು ಹೊರಲು ಮತ್ತು ಧರಿಸಲು ನೀನು ಶಕ್ತಳಾಗಿದ್ದೀಯೆ. ನನ್ನ ಗರ್ಭವನ್ನು ಧಾರಣ ಮಾಡುವುದರಿಂದ ನಿನಗೆ ಅಪ್ರಾಪ್ಯವಾದ ಫಲವು ಯಾವುದೂ ಇಲ್ಲ (ಎಂದು ಹೇಳಿದನು).

ಸಾ ವಹ್ನಿನಾ ವಾರ್ಯಮಾಣಾ ದೇವೈಶ್ಚಾಪಿ ಸರಿದ್ವರಾ ।
ಸಮುತ್ಸಸರ್ಜ ತಂ ಗರ್ಭಂ ಮೇರೌ ಗಿರಿವರೇ ತದಾ ॥೬೪॥

ಅಗ್ನಿಯಿಂದಲೂ ಮತ್ತು ದೇವತೆಗಳಿಂದಲೂ ಹೀಗೆ ನಿಷೇಧಿಸಲ್ಪಡುತ್ತಿದ್ದರೂ ಸರಿತ್‌ಶ್ರೇಷ್ಠಳಾದ ಗಂಗೆಯು ಆ ಗರ್ಭವನ್ನು ಶ್ರೇಷ್ಠವಾದ ಮೇರುಪರ್ವತದಲ್ಲಿ ವಿಸರ್ಜಿಸಿದಳು.

ಸಮರ್ಥಾ ಧಾರಣೇ ಚಾಪಿ ರುದ್ರತೇಜಃಪ್ರಧರ್ಷಿತಾ ।
ನಾಶಕತ್ ತಂ ತದಾ ಗರ್ಭಂ ಸಂಧಾರಯಿತುಮೋಜಸಾ ॥೬೫॥

ಅವಳು ಧಾರಣೆಯನ್ನು ಮಾಡಲು ಸಮರ್ಥಳಾದರೂ ರುದ್ರದೇವರ ತೇಜಸ್ಸಿನಿಂದ ಸಂತಪ್ತಳಾಗಿ ತನ್ನ ಸಾಮರ್ಥ್ಯದಿಂದ ಗರ್ಭವನ್ನು ಧರಿಸಲು ಆಗ ಶಕ್ತಳಾಗಲಿಲ್ಲ.

ಸಾ ಸಮುತ್ಸೃಜ್ಯ ತಂ ದುಃಖಾದ್ ದೀಪ್ತವೈಶ್ವಾನರಪ್ರಭಮ್ ।
ದರ್ಶಯಾಮಾಸ ಚಾಗ್ನಿಸ್ತಾಂ ತದಾ ಗಂಗಾಂ ಭೃಗೂದ್ವಹ ।
ಪಪ್ರಚ್ಛ ಸರಿತಾಂ ಶ್ರೇಷ್ಠಾಂ ಕಚ್ಚಿದ್ ಗರ್ಭಃ ಸುಖೋದಯಃ ॥೬೬॥

ಜ್ವಲಿಸುವ ಅಗ್ನಿಯ ಕಾಂತಿಯನ್ನು ಹೊಂದಿದ ಆ ಗರ್ಭವನ್ನು ಅವಳು ದುಃಖದಿಂದ ವಿಸರ್ಜಿಸಿದಳು. ಎಲೈ ಭೃಗೂದ್ವಹನೇ, ಅನಂತರ ಅಗ್ನಿಯು ಅವಳಿಗೆ ದರ್ಶನವನ್ನು ಕೊಟ್ಟು ಆ ಶ್ರೇಷ್ಠ ನದಿಯನ್ನು ಕುರಿತು ಗರ್ಭವು ಸುಖವಾಗಿ ಉದಯಿಸಿತೆ ಎಂದು ಪ್ರಶ್ನೆಯನ್ನು ಮಾಡಿದನು.

ಕೀದೃಗ್ವರ್ಣೋಽಪಿ ವಾ ದೇವಿ ಕೀದೃಗ್ರೂಪಶ್ಚ ದೃಶ್ಯತೇ ।
ತೇಜಸಾ ಕೇನ ವಾ ಯುಕ್ತಃ ಸರ್ವಮೇತದ್ ಬ್ರವೀಹಿ ಮೇ ॥೬೭॥

ದೇವಿಯೇ, ಶಿಶುವಿನ ವರ್ಣವೇನು? ರೂಪವೇನು? ಎಂತಹ ತೇಜಸ್ಸಿನಿಂದ ಕೂಡಿದೆ? ಎಲ್ಲವನ್ನೂ ನನಗೆ ಹೇಳು (ಎಂದು ಕೇಳಿದನು).

ಗಂಗಾ

ಜಾತರೂಪಃ ಸ ಗರ್ಭೋ ವೈ ತೇಜಸಾ ತ್ವಮಿವಾನಲ ।
ಸುವರ್ಣೋ ವಿಮಲೋ ದೀಪ್ತಃ ಪರ್ವತಂ ಚಾವಭಾಸಯತ್ ॥೬೮॥

ಗಂಗಾ– ಆ ಗರ್ಭವು ಸುವರ್ಣಮಯವಾಗಿದೆ. ಎಲೈ ಅಗ್ನಿಯೇ, ತೇಜಸ್ಸಿನಲ್ಲಿ ನಿನ್ನಂತಿದೆ. ಪರಿಶುದ್ಧವಾದ ಪ್ರಕಾಶಿಸುವ ಆ ಸುವರ್ಣವು ತನ್ನ ಕಾಂತಿಯಿಂದ ಪರ್ವತವನ್ನು ಬೆಳಗಿಸಿತು.

ಪದ್ಮೋತ್ಪಲವಿಮಿಶ್ರಾಣಾಂ ಹ್ರದಾನಾಮಿವ ಶೀತಲಃ ।
ಗಂಧೋಽಸ್ಯ ಸ ಕದಂಬಾನಾಂ ತುಲ್ಯೋ ವೈ ತಪತಾಂವರ ॥೬೯॥

ಪದ್ಮೋತ್ಪಲ ಮಿಶ್ರಿತವಾದ ಸರೋವರದಂತೆ ಅದರ ಸ್ಪರ್ಶವು ಶೀತಲವಾಗಿದೆ. ಎಲೈ ಅಗ್ನಿಯೇ, ಆ ಶಿಶುವಿನ ಗಂಧವು ಕದಂಬ ಪುಷ್ಪಗಳ ಗಂಧಕ್ಕೆ ಸಮವಾಗಿದೆ.

ತೇಜಸಾ ತಸ್ಯ ಗರ್ಭಸ್ಯ ಭಾಸ್ಕರಸ್ಯೇವ ರಶ್ಮಿಭಿಃ ।
ಯದ್ ದ್ರವ್ಯಂ ಪರಿಸಂಸೃಷ್ಟಂ ಪೃಥಿವ್ಯಾಂ ಪರ್ವತೇಷು ವಾ ।
ತತ್ಸರ್ವಂ ಕಾಂಚನೀಭೂತಂ ಸಮಂತಾತ್ ಪ್ರತ್ಯದೃಶ್ಯತ ॥೭೦॥

ಸೂರ್ಯಕಿರಣಗಳನ್ನು ಹೋಲುವ ಆ ಗರ್ಭದ ತೇಜಸ್ಸಿನಿಂದ ಭೂಮಿಯಲ್ಲಿ ಮತ್ತು ಪರ್ವತಗಳಲ್ಲಿ ಯಾವ ದ್ರವ್ಯವು ಸಂಯೋಗವನ್ನು ಹೊಂದಿತೋ ಅದೆಲ್ಲವೂ ಸುತ್ತಲೂ ಸುವರ್ಣವಾಗಿಯೇ ತೋರುತ್ತಿದ್ದಿತು.

ಪರ್ಯಧಾವತ ಶೈಲಾಂಶ್ಚ ನದೀಃ ಪ್ರಸ್ರವಣಾನಿ ಚ ।
ವ್ಯದೀಪಯತ್ ತೇಜಸಾ ಚ ತ್ರೈಲೋಕ್ಯಂ ಸಚರಾಚರಮ್ ॥೭೧॥

ಆ ಶಿಶುವು ಓಡಾಡುತ್ತಾ ತನ್ನ ತೇಜಸ್ಸಿನಿಂದ ಪರ್ವತಗಳನ್ನೂ, ನದಿಗಳನ್ನೂ, ಝರಿಗಳನ್ನೂ, ಚರಾಚರ ಮೂರು ಲೋಕವನ್ನೂ ಬೆಳಗಿಸಿತು.

ಏವಂರೂಪಃ ಸ ಭಗವಾನ್ ಪುತ್ರಸ್ತೇ ಹವ್ಯವಾಹನ ।
ಸೂರ್ಯವೈಶ್ವಾನರಸಮಃ ಕಾಂತ್ಯಾ ಸೋಮ ಇವಾಪರಃ ।
ಏವಮುಕ್ತ್ವಾ ತು ಸಾ ದೇವೀ ತತ್ರೈವಾಂತರಧೀಯತ ॥೭೨॥

ಎಲೈ ಹವ್ಯವಾಹನನೇ, ನಿನ್ನ ಪೂಜ್ಯನಾದ ಪುತ್ರನು ಇಂತಹ ಗುಣವುಳ್ಳವನು. ತೇಜಸ್ಸಿನಲ್ಲಿ ಸೂರ್ಯನಿಗೂ, ಅಗ್ನಿಗೂ ಸಮಾನನಾದವನು. ಕಾಂತಿಯಲ್ಲಿ ಇನ್ನೊಬ್ಬ ಚಂದ್ರನಂತಿರುವವನು. ಹೀಗೆ ಹೇಳಿ ಗಂಗಾದೇವಿಯು ಅಲ್ಲಿಯೇ ಅಂತರ್ಧಾನವನ್ನು ಹೊಂದಿದಳು.

ಪಾವಕಶ್ಚಾಪಿ ತೇಜಸ್ವೀ ಕೃತ್ವಾ ಕಾರ್ಯಂ ದಿವೌಕಸಾಮ್ ।
ಜಗಾಮೇಷ್ಟಂ ತತೋ ದೇಶಂ ತದಾ ಭಾರ್ಗವನಂದನ ॥೭೩॥

ಎಲೈ ಭಾರ್ಗವನಂದನನೇ, ತೇಜಸ್ವಿಯಾದ ಅಗ್ನಿಯೂ ಕೂಡ ದೇವತೆಗಳ ಕಾರ್ಯವನ್ನು ನೆರವೇರಿಸಿ ತನಗೆ ಇಷ್ಟವಾದ ದೇಶಕ್ಕೆ ಹೊರಟು ಹೋದನು.

ಏತೈಃ ಕರ್ಮಗುಣೈರ್ಲೋಕೇ ನಾಮಾಗ್ನೇಃ ಪರಿಗೀಯತೇ ।
ಹಿರಣ್ಯರೇತಾ ಇತಿ ವೈ ಋಷಿಭಿರ್ವಿಬುಧೈಸ್ತಥಾ ।
ಪೃಥಿವೀ ಚ ತದಾ ದೇವೀ ಖ್ಯಾತಾ ವಸುಮತೀತಿ ವೈ ॥೭೪॥

ಈ ಕರ್ಮಗಳಿಂದಲೂ ಮತ್ತು ಗುಣಗಳಿಂದಲೂ ಲೋಕದಲ್ಲಿ ಅಗ್ನಿಯ ಹೆಸರುಗಾನ ಮಾಡಲ್ಪಡುತ್ತದೆ. ಋಷಿಗಳು ಮತ್ತು ದೇವತೆಗಳು ಅವನನ್ನು ಹಿರಣ್ಯರೇತ

ಎಂದು ಕರೆಯುತ್ತಾರಷ್ಟೆ? ಆಗ ಭೂದೇವಿಯೂ ಸಹ ವಸುಮತೀ ಎಂದು ಪ್ರಖ್ಯಾತಳಾದಳು.

ಸ ತು ಗರ್ಭೋ ಮಹಾತೇಜಾ ಗಾಂಗೇಯಃ ಪಾವಕೋದ್ಭವಃ ।
ದಿವ್ಯಂ ಶರವಣಂ ಪ್ರಾಪ್ಯ ವವೃಧೇऽದ್ಭುತದರ್ಶನಃ ॥೭೫॥

ಅಗ್ನಿಯಿಂದ ಗಂಗೆಯಲ್ಲಿ ಉಂಟಾದ ಮಹಾತೇಜಸ್ವಿಯಾದ ಆ ಶಿಶುವು ದಿವ್ಯವಾದ ಶರವಣಕ್ಕೆ ಹೋಗಿ ಅದ್ಭುತ ದರ್ಶನವನ್ನು ಹೊಂದಿ ಬೆಳೆಯಿತು.

ದದೃಶುಃ ಕೃತ್ತಿಕಾಸ್ತಂ ತು ಬಾಲಾರ್ಕಸದೃಶದ್ಯುತಿಮ್ ।
ಜಾತಸ್ನೇಹಾಶ್ಚ ತಂ ಬಾಲಂ ಪುಪುಷುಃ ಸ್ತನ್ಯವಿಸ್ರವೈಃ ॥೭೬॥

ಬಾಲಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ಆ ಶಿಶುವನ್ನು ನೋಡಿ ಕೃತ್ತಿಕೆಯರು ಅದರಲ್ಲಿ ಸ್ನೇಹವನ್ನು ಹೊಂದಿ ತಮ್ಮ ಸ್ತನ್ಯಗಳಿಂದ ಆ ಶಿಶುವನ್ನು ಪೋಷಿಸಿದರು.

ತತಃ ಸ ಕಾರ್ತ್ತಿಕೇಯತ್ವಮವಾಪ ಪರಮದ್ಯುತಿಃ ।
ಸ್ಕನ್ನತ್ವಾತ್ ಸ್ಕಂದತಾಂ ಚಾಪಿ ಗುಹಾವಾಸಾದ್ ಗುಹೋऽಭವತ್ ॥೭೭॥

ಆ ಕಾರಣದಿಂದ ಪರಮದ್ಯುತಿಯುಳ್ಳ ಅವನು ಕಾರ್ತಿಕೇಯನೆನಿಸಿಕೊಂಡನು. ರುದ್ರನ ದೇಹದಿಂದ ಜಾರಿದುದರಿಂದ ಸ್ಕಂದನೆಂದೂ, ಗುಹೆಯಲ್ಲಿ ವಾಸ ಮಾಡಿದುದರಿಂದ ಗುಹನೆಂದೂ ಕರೆಯಲ್ಪಟ್ಟನು.

ಏವಂ ಸುವರ್ಣಮುತ್ಪನ್ನಮಪತ್ಯಂ ಜಾತವೇದಸಃ ।
ತತ್ರ ಜಾಂಬೂನದಂ ಶ್ರೇಷ್ಠಂ ದೇವಾನಾಮಪಿ ಭೂಷಣಮ್ ॥೭೮॥

ಹೀಗೆ ಸುವರ್ಣವು ಅಗ್ನಿಯ ಪುತ್ರರೂಪದಲ್ಲಿ ಉದ್ಭವಿಸಿತು (ಆ ಸುವರ್ಣದಲ್ಲಿ ಅನೇಕ ಪ್ರಭೇದಗಳಿದೆ). ಅದರಲ್ಲಿ ಜಾಂಬೂನದವೆಂಬ ಸುವರ್ಣವು ಶ್ರೇಷ್ಠವಾದುದು ಮತ್ತು ದೇವತೆಗಳಿಗೂ ಭೂಷಣವಾದುದು.

ತತಃಪ್ರಭೃತಿ ಚಾಪ್ಯೇತಜ್ಜಾತರೂಪಮುದಾಹೃತಮ್ ।
ಯತ್ ಸುವರ್ಣಂ ಸ ಭಗವಾನಗ್ನಿರೀಶಃ ಪ್ರಜಾಪತಿಃ ॥೭೯॥

ಅಗಿನಿಂದ ಪ್ರಾರಂಭಿಸಿ ಸುವರ್ಣವನ್ನು ಜಾತರೂಪವೆಂದು ಕರೆಯುತ್ತಾರೆ. ಸುವರ್ಣವು ಪೂಜ್ಯನಾದ ಅಗ್ನಿಯ ರೂಪವನ್ನು ಹೊಂದಿರುವುದು. ಈಶ್ವರನ ರೂಪವನ್ನು ಹೊಂದಿರುವುದು ಮತ್ತು ಪ್ರಜಾಪತಿಯ ರೂಪವನ್ನು ಹೊಂದಿರುವುದು.

ಪವಿತ್ರಾಣಾಂ ಪವಿತ್ರಂ ಹಿ ಕನಕಂ ದ್ವಿಜಸತ್ತಮ ।
ಅಗ್ನೀಷೋಮಾತ್ಮಕಂ ಚೈವ ಜಾತರೂಪಮುದಾಹೃತಮ್ ॥೮೦॥

ಎಲೈ ದ್ವಿಜಶ್ರೇಷ್ಠನೇ, ಸುವರ್ಣವು ಪವಿತ್ರಗಳಲ್ಲಿ ಪವಿತ್ರವಾದುದು. ಅದನ್ನು ಅಗ್ನಿ ಮತ್ತು ಚಂದ್ರಾತ್ಮಕವಾದುದು ಎಂದು ಕರೆಯುತ್ತಾರೆ.

ರತ್ನಾನಾಮುತ್ತಮಂ ರತ್ನಂ ಭೂಷಣಾನಾಂ ತಥೋತ್ತಮಮ್ ।
ಪವಿತ್ರಂ ಚ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಮ್ ॥೮೧॥

ಅದು ರತ್ನಗಳಲ್ಲಿ ಉತ್ತಮವಾದ ರತ್ನ. ಭೂಷಣಗಳಲ್ಲಿ ಉತ್ತಮವಾದ ಭೂಷಣ. ಪವಿತ್ರಗಳಲ್ಲಿ ಉತ್ತಮವಾದ ಪವಿತ್ರ ಮತ್ತು ಮಂಗಳಗಳಲ್ಲಿ ಉತ್ತಮವಾದ ಮಂಗಳ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಕಾರ್ತಿಕೇಯೋತ್ಪತ್ತಿರ್ನಾಮ
ಷಟ್‌ವಿಂಶತ್ಯಧಿಕಶತತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೇಳನೆಯ ಅಧ್ಯಾಯ

ಸುವರ್ಣ ಮಹಿಮೆ

ವಸಿಷ್ಠಃ

ಅಪಿ ಚೇದಂ ಪುರಾ ರಾಮ ಶ್ರುತಂ ಮೇ ಬ್ರಹ್ಮದರ್ಶನಮ್ ।
ಪಿತಾಮಹಸ್ಯ ಯದ್ ವೃತ್ತಂ ಬ್ರಹ್ಮಣಃ ಪರಮೇಷ್ಠಿನಃ ॥೧॥

ದೇವಸ್ಯ ಮಹತಸ್ತಾತ ವಾರುಣೀಂ ಬಿಭ್ರತಸ್ತನುಮ್ ।
ಐಶ್ವರ್ಯೇ ವಾರುಣೇ ರಾಮ ರುದ್ರಸ್ಯೇಶಸ್ಯ ವೈ ಪ್ರಭೋ ॥೨॥

ವಸಿಷ್ಠ– ಎಲೈ ಪರಶುರಾಮನೇ, ಪ್ರೀತಿಪಾತ್ರನೇ, ಹಿಂದೆ ರುದ್ರನು ಯಾಗ ಮಾಡುವ ಸಮಯದಲ್ಲಿ ಮಹತ್ತತ್ವಾಭಿಮಾನಿಗಳಾದ ಬ್ರಹ್ಮದೇವರಿಗೆ ಏನಾಯಿತು ಎಂಬುದನ್ನು ನಾನು ಕೇಳಿದ್ದೇನೆ. ಹಾಗೆಯೇ ರುದ್ರನು ವರುಣನ ದೇಹವನ್ನು ಧರಿಸಿ ಯಾಗವನ್ನು ಮಾಡುವಾಗ ವರುಣನ ಯಜ್ಞೈಶ್ವರ್ಯ ವಿಷಯದಲ್ಲಿ ಏನು ನಡೆಯಿತೆಂಬುದನ್ನೂ ನಾನು ಕೇಳಿದ್ದೇನೆ. ಎಲೈ ಪ್ರಭುವೇ, ಅದನ್ನು ನಿನಗೆ ಹೇಳುವೆನು.

ಆಜಗ್ಮುರ್ಮುನಯಃ ಸರ್ವೇ ದೇವಾಶ್ಚಾಗ್ನಿಪುರೋಗಮಾಃ ।
ಯಜ್ಞಾಂಗಾನಿ ಚ ಸರ್ವಾಣಿ ವಷಟ್‌ಕಾರಶ್ಚ ಮೂರ್ತಿಮಾನ್ ॥೩॥

ಆ ಯಜ್ಞಕ್ಕೆ ಎಲ್ಲ ಋಷಿಗಳೂ, ಅಗ್ನಿ ಮೊದಲಾದ ದೇವತೆಗಳೂ, ಯಜ್ಞಾಂಗಗಳೂ, ವಷಟ್‌ಕಾರವೂ ದೇಹವನ್ನು ಧರಿಸಿ ಬಂದವು.

ಮೂರ್ತಿಮಂತಿ ಚ ಸಾಮಾನಿ ಯಜೂಂಷಿ ಚ ಸಹಸ್ರಶಃ ।
ಋಗ್ವೇದಶ್ಚಾಗಮತ್ ತತ್ರ ಪದಕ್ರಮವಿಭೂಷಿತಃ ॥೪॥

ಪದಕ್ರಮಸಹಿತವಾದ ಋಗ್ವೇದ, ಯಜುರ್ವೇದ, ಸಾಮವೇದಗಳು ದೇಹವನ್ನು ಧರಿಸಿ ಅಲ್ಲಿಗೆ ಬಂದವು.

ಲಕ್ಷಣಾನಿ ಸ್ವರಾಃ ಸ್ತೋಭಾ ನಿರುಕ್ತಂ ಸ್ವರಭಕ್ತಯಃ ।
ಓಂಕಾರಶ್ಚಾವಸನ್ ನೇತ್ರೇ ನಿಗ್ರಹಪ್ರಗ್ರಹೌ ತಥಾ ॥೫॥

ಪ್ರಾತಿಶಾಖ್ಯ ಮೊದಲಾದ ಲಕ್ಷಣಶಾಸ್ತ್ರಗಳೂ, ಸ್ವರಗಳೂ, ಸ್ತೋಭಾಕ್ಷರಗಳೂ, ನಿರುಕ್ತ, ಸಾಮಸ್ವರಭಕ್ತಿಗಳು ಎಲ್ಲವೂ ದೇಹವನ್ನು ಧರಿಸಿ ಅಲ್ಲಿಗೆ ಬಂದವು. ಓಂಕಾರ, ನಿಗ್ರಹ ಮತ್ತು ಪ್ರಗ್ರಹಗಳು ರುದ್ರನ ಕಣ್ಣುಗಳಲ್ಲಿ ವಾಸ ಮಾಡಿದವು.

ವೇದಾಶ್ಚ ಸೋಪನಿಷದೋ ವಿದ್ಯಾ ಸಾವಿತ್ರ್ಯಥಾಪಿ ಚ ।
ಭೂತಂ ಭವ್ಯಂ ಭವಿಷ್ಯಚ್ಚ ದಧಾರ ಭಗವಾನ್ ಶಿವಃ ।
ಜುಹ್ವಚ್ಚಾತ್ಮನ್ಯಥಾತ್ಮಾನಂ ಸ್ವಯಮೇವ ತದಾ ಪ್ರಭೋ ॥೬॥

ಭಗವಂತನಾದ ಶಿವನು ವೇದಗಳನ್ನೂ, ಉಪನಿಷತ್ತುಗಳನ್ನೂ, ವಿದ್ಯೆಗಳನ್ನೂ ತನ್ನ ಅಂತರ್ಯಾಮಿಯಾದ ಪರಮಾತ್ಮನಿಗೆ ತನ್ನನ್ನೂ ತಾನೇ ಹೋಮ ಮಾಡಿಕೊಂಡನು.

ದೇವಪತ್ನ್ಯಶ್ಚ ಕನ್ಯಾಶ್ಚ ದೇವಾನಾಂ ಚೈವ ಮಾತರಃ ।
ಆಜಗ್ಮುಃ ಸಹಿತಾಸ್ತತ್ರ ತದಾ ಭೃಗುಕುಲೋದ್ವಹ ॥೭॥

ಯಜ್ಞಂ ಪಶುಪತೇಃ ಪ್ರೀತಾ ವರುಣಸ್ಯ ಮಹಾತ್ಮನಃ ।
ಸ್ವಯಂಭುವಸ್ತು ತಾ ದೃಷ್ಟ್ವಾ ರೇತಃ ಸಮಪತದ್ ಭುವಿ ॥೮॥

ಎಲೈ ಭೃಗುಕುಲೋದ್ವಹನೇ, ಪಶುಪತಿಯು ಮಾಡಿದ ಮಹಾತ್ಮನಾದ ವರುಣನ ಯಜ್ಞಕ್ಕೆ ದೇವಪತ್ನಿಯರು, ದೇವಮಾತೆಯರು ಮತ್ತು ದೇವಕನ್ಯೆಯರು ಎಲ್ಲರೂ ಸಂತೋಷದಿಂದ ಬಂದರು. ಆ ಕನ್ಯೆಯರನ್ನು ನೋಡಿದ ಬ್ರಹ್ಮದೇವರಿಗೆ ರೇತಃಸ್ಖಲನವಾಗಿ ಅದು ಭೂಮಿಯಲ್ಲಿ ಬಿದ್ದಿತು.

ಈ ಯಜ್ಞದಲ್ಲಿ ವರುಣನು ನಿಮಿತ್ತ ಮಾತ್ರ. ವರುಣನ ಒಳಗೆ ನಿಯಾಮಕನಾಗಿದ್ದು ವರುಣಪದವಾಚ್ಯನಾದ ಮಹಾತ್ಮನಾದ ಪಶುಪತಿಯೇ ಯಜ್ಞವನ್ನು ಮಾಡುವವನು ಎಂಬ ಅಭಿಪ್ರಾಯದಿಂದ ವರುಣನ ಯಜ್ಞ, ರುದ್ರನ ಯಜ್ಞ ಎಂಬ ಆಪತತಃ ಸಂಶಯಕಾರಕವಾದ ವಚನವಿದೆ - ಲಕ್ಷಾಲಂಕಾರ.

ತಸ್ಯ ಶುಕ್ರಸ್ಯ ನಿಷ್ಯಂದಾತ್ ಪಾಂಸೂನ್ ಸಂಗೃಹ್ಯ ಭೂಮಿತಃ ।
ಪ್ರಾಸ್ಯತ್ ಪೂಷಾ ಕರಾಭ್ಯಾಂ ವೈ ತಸ್ಮಿನ್ನೇವ ಹುತಾಶನೇ ॥೯॥

ಪೂಷಾ ದೇವತೆಯು ಕೆಳಗೆ ಭೂಮಿಯಲ್ಲಿ ಬಿದ್ದ ಆ ವೀರ್ಯದ ಜೊತೆಯಲ್ಲಿ ಸ್ವಲ್ಪ ಧೂಳನ್ನೂ ತೆಗೆದುಕೊಂಡು ಎರಡು ಕೈಗಳಿಂದ ಅದೇ ಅಗ್ನಿಯಲ್ಲಿ ಹೋಮ ಮಾಡಿದನು.

ತತಸ್ತಸ್ಮಿನ್ ಸಂಪ್ರವೃತ್ತೇ ಸತ್ರೇ ಜ್ವಲಿತಪಾವಕೇ ।
ಬ್ರಹ್ಮಣೋ ಜುಹ್ವತಸ್ತತ್ರ ಪ್ರಾದುರ್ಭಾವೋ ಬಭೂವ ಹ ॥೧೦॥

ಆ ಯಾಗದಲ್ಲಿ ಜ್ವಲಿಸುವ ಅಗ್ನಿಯಲ್ಲಿ ಹಾಗೆ ಹೋಮ ಮಾಡುತ್ತಿರಲು ಬ್ರಹ್ಮದೇವರಿಗೆ ಪುನಃ ವೀರ್ಯದ ಪ್ರಾದುರ್ಭಾವವುಂಟಾಯಿತು.

ಸ್ಕನ್ನಮಾತ್ರಂ ಚ ತಚ್ಚುಕ್ರಂ ಸ್ರುವೇಣ ಪ್ರತಿಗೃಹ್ಯ ಸಃ ।
ಆಜ್ಯವನ್ಮಂತ್ರೇವಚ್ಚಾಪಿ ಸೋಽಜುಹೋದ್ ಭೃಗುನಂದನ ॥೧೧॥

ಎಲೈ ಭೃಗುನಂದನನೇ, ಆ ವೀರ್ಯವನ್ನು ಬ್ರಹ್ಮದೇವರು ಸ್ರುವದಲ್ಲಿ ತೆಗೆದುಕೊಂಡು ಆಜ್ಯಭಾಗದಿಂದ ಹೋಮವನ್ನು ಮಾಡುವಂತೆ ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮವನ್ನು ಮಾಡಿದರು.

ತತಃ ಸಂಜನಯಾಮಾಸ ಭೂತಗ್ರಾಮಂ ಸ ವೀರ್ಯವಾನ್ ।
ತತಸ್ತು ತೇಜಸಸ್ತಸ್ಮಾಜ್ಜಜ್ಞೇ ಲೋಕೇಷು ತೈಜಸಮ್ ॥೧೨॥

ಪ್ರಶಸ್ತವಾದ ವೀರ್ಯವುಳ್ಳ ಅವರು ಆ ಪ್ರಕ್ರಿಯೆಯಿಂದ ಎಲ್ಲ ಪ್ರಾಣಿಗಳ ಸಮೂಹವನ್ನು ಸೃಷ್ಟಿಸಿದರು. ವೀರ್ಯದಲ್ಲಿದ್ದ ತೇಜಸ್ಸಿನಿಂದ ಲೋಕದಲ್ಲಿ ರಜೋಗುಣವು ಜನಿಸಿತು.

ತಮಸಸ್ತಾಮಸಾ ಭಾವಾ ವ್ಯಾಪಿ ಸತ್ತ್ವಂ ತಥೋಭಯಮ್ ।
ಸಗುಣಸ್ತೇಜಸೋ ನಿತ್ಯಂ ತಮಸ ಆಕಾಶ ಏವ ಚ ॥೧೩॥

ವೀರ್ಯದಲ್ಲಿದ್ದ ತಮೋಭಾಗದಿಂದ ತಮೋಗುಣವೂ ಮತ್ತು ತಾಮಸ ಪದಾರ್ಥಗಳೂ ಹುಟ್ಟಿದವು. ಸತ್ವಗುಣವು ರಜೋಗುಣ ಮತ್ತು ತಮೋಗುಣವನ್ನು ವ್ಯಾಪಿಸಿಕೊಂಡಿದ್ದಿತು. ಶಬ್ದಗುಣ ಸಹಿತವಾದ ಆಕಾಶವು ತಮೋಗುಣದಿಂದಲೂ ಮತ್ತು ರಜೋಗುಣದಿಂದಲೂ ಜನಿಸಿತು. ರಜೋಗುಣದಿಂದ ಶಬ್ದರೂಪವಾದ ಗುಣವೂ, ತಮೋಗುಣದಿಂದ ಆಕಾಶರೂಪವಾದ ದ್ರವ್ಯವೂ ಜನಿಸಿತು ಎಂದು ವಿಶ್ಲೇಷಣೆ - ಲಕ್ಷಾಲಂಕಾರ.

ಸರ್ವಭೂತೇಷ್ವಥ ತಥಾ ಸತ್ತ್ವಂ ತೇಜಸ್ತಥಾ ತಮಃ ।
ಶುಕ್ರೇ ಹುತೇऽಗ್ನೌ ತಸ್ಮಿಂಸ್ತು ಪ್ರಾದುರಾಸಂಸ್ತ್ರಯಃ ಪ್ರಭೋ ॥೧೪॥

ಪುರುಷಾ ವಪುಷಾ ಯುಕ್ತಾ ಯುಕ್ತಾಃ ಪ್ರಸವಜೈರ್ಗುಣೈಃ ।
ಭೃಗಿತ್ಯೇವ ಭೃಗುಃ ಪೂರ್ವಮಂಗಾರೇಭ್ಯೋऽಂಗಿರಾಭವತ್ ॥೧೫॥

ಹಾಗೆಯೇ ಜನಿಸಿದ ಎಲ್ಲ ಪ್ರಾಣಿಗಳಲ್ಲಿಯೂ ಸತ್ವ-ರಜಸ್-ತಮೋಗುಣಗಳು ಸೇರಿಕೊಂಡವು. ಎಲೈ ಪ್ರಭುವೇ, ವೀರ್ಯವು ಆ ಅಗ್ನಿಯಲ್ಲಿ ಹೋಮ ಮಾಡಲ್ಪಡುತ್ತಿರಲು ಆ ಅಗ್ನಿಯಿಂದ ತಮ್ಮ ಸ್ವಾಭಾವಿಕ ಗುಣಗಳಿಂದ ಕೂಡಿದ

ಶರೀರಯುಕ್ತರಾದ ಮೂರು ಪುರುಷರು ಪ್ರಾದುರ್ಭೂತರಾದರು. ಅಗ್ನಿಯಲ್ಲಿ ಹವಿಸ್ಸನ್ನು ಹಾಕುವಾಗ ಅಗ್ನಿಯು ಅದನ್ನು ಹಿಡಿಯುವಾಗ ಉಂಟಾಗುವ ಭುಕ್ ಶಬ್ದದಿಂದ ಭೃಗುವೂ, ಕೆಂಡಗಳಿಂದ ಅಂಗಿರಸರೂ ಪ್ರಾದುರ್ಭೂತರಾದರು.

ಅಂಗಾರಸಂಶ್ರಯಾಚ್ಚೈವ ಕವಿರಿತ್ಯಪರೋಽಭವತ್ ।
ಸಹ ಜ್ವಾಲಾಭಿರುತ್ಪನ್ನೋ ಭೃಗುಸ್ತಸ್ಮಾದ್ ಭೃಗುಃ ಸ್ಮೃತಃ ॥೧೬॥

ಕೆಂಡಗಳ ಜೊತೆಯಲ್ಲಿ ಜ್ವಾಲೆಯಿಂದಲೂ ಕೂಡಿ ಕವಿ ಎಂಬ ಇನ್ನೊಬ್ಬ ಪುರುಷನು ಪ್ರಾದುರ್ಭೂತನಾದನು. ಮೇಲೆ ಹೇಳಿದ ಕಾರಣದಿಂದ ಭೃಗುವು ಭೃಗುವೆಂದು ಕರೆಸಿಕೊಳ್ಳಲ್ಪಡುತ್ತಾರೆ.

ಮರೀಚಿಭ್ಯೋ ಮರೀಚಿಸ್ತು ಮಾರೀಚಃ ಕಶ್ಯಪೋ ಹ್ಯಭೂತ್ ।
ಅಂಗಿರೇಭ್ಯೋಽಂಗಿರಾಸ್ತಾತ ವಾಲಖಿಲ್ಯಾಃ ಶಿಲೋಚ್ಚಯಾತ್ ।
ಅತ್ರೈವಾತ್ರೇತಿ ಚ ವಿಭೋ ಜಾತಮಾತ್ರಂ ವದಂತ್ಯಪಿ ॥೧೭॥

ಹೋಮಾಗ್ನಿಯ ಕಿರಣಗಳಿಂದ ಮರೀಚಿ ಋಷಿಯು ಜನಿಸಿದನು. ಕಶ್ಯಪರು ಮರೀಚಿಯ ಪುತ್ರರಾಗಿ ಜನಿಸಿದರು. ಎಲೈ ಪ್ರೀತಿಪಾತ್ರನೇ, ಅಂಗಿರಸರು ಅಗ್ನಿಯ ಕೆಂಡಗಳಿಂದಲೂ, ವಾಲಖಿಲ್ಯರು ದರ್ಭೆಯ ಸಮೂಹದಿಂದಲೂ ಜನಿಸಿದರು. ಜ್ವಾಲೆಯನ್ನು ಉಂಟುಮಾಡುವುದಕ್ಕಾಗಿ ಇಲ್ಲಿ ಆಹುತಿಯನ್ನು ಹಾಕಿ, ಇಲ್ಲಿ ಆಹುತಿಯನ್ನು ಹಾಕಿ (ಅತ್ರ ಅತ್ರ) ಎಂದು ಹೇಳುತ್ತಿರುವಾಗ ಅತ್ರಿಗಳು ಜನಿಸಿದರು.

ತಥಾ ಭಸ್ಮವ್ಯಪೋಹೇಭ್ಯೋ ಬ್ರಹ್ಮರ್ಷಿಗಣಸಮ್ಮಿತಾಃ ।
ವೈಖಾನಸಾಃ ಸಮುತ್ಪನ್ನಾಸ್ತಪಃಶ್ರುತಗುಣೇಪ್ಸವಃ ।
ಅಶ್ರುಭ್ಯೋಽಸ್ಯ ಸಮುತ್ಪನ್ನಾವಶ್ವಿನೌ ರೂಪಸಮ್ಮತೌ ॥೧೮॥

ಹಾಗೆಯೇ ಭಸ್ಮಸಮೂಹದಿಂದ ಬ್ರಹ್ಮರ್ಷಿಗಣ ಸಮಾನರಾದ, ತಪಸ್ಸನ್ನು, ವಿದ್ಯೆಯನ್ನು, ಗುಣಗಳನ್ನು ಪಡೆಯಲು ಅಪೇಕ್ಷಿಸುವ ವೈಖಾನಸರು ಜನಿಸಿದರು. ಅಗ್ನಿಯು ಅನೇಕ ಸೋಮಲತೆಗಳನ್ನು ಆಸ್ವಾದಿಸಿ ಸುರಿಸಿದ ಸಂತೋಷದ ಕಣ್ಣೀರುಗಳಿಂದ ರೂಪಸಮ್ಮತರಾದ ಅಶ್ವಿನೀದೇವತೆಗಳು ಜನಿಸಿದರು.

ಶೇಷಾಃ ಪ್ರಜಾನಾಂ ಪತಯಃ ಸ್ರೋತೋಭ್ಯಸ್ತಸ್ಯ ಜಜ್ಞಿರೇ ।
ಋಷಯೋ ಲೋಮಕೂಪೇಭ್ಯಃ ಸ್ವೇದಾಚ್ಛಂದೋಽಮಲಾತ್ಮಕಮ್ ॥೧೯॥

ಉಳಿದ ಪ್ರಜಾಪತಿಗಳು ಅಗ್ನಿಯ ಸ್ರೋತಸ್ಸುಗಳಿಂದ ಜನಿಸಿದರು. ರೋಮ ಕೂಪಗಳಿಂದ ಋಷಿಗಳು ಜನಿಸಿದರು. ಪವಿತ್ರವಾದ ಛಂದಸ್ಸುಗಳು ಸ್ವೇದದಿಂದ ಜನಿಸಿದವು.

ಏತಸ್ಮಾತ್ಕಾರಣಾದಾಹುರಗ್ನಿಂ ಸರ್ವಾಸ್ತು ದೇವತಾಃ ।
ಋಷಯಃ ಶ್ರುತಸಂಪನ್ನಾ ವೇದಪ್ರಾಮಾಣ್ಯದರ್ಶನಾತ್ ॥೨೦॥

ಈ ಕಾರಣದಿಂದ (ಅಗ್ನಿಯಿಂದಲೇ ಎಲ್ಲ ದೇವತೆಗಳು ಹೊರಬಂದ ಕಾರಣದಿಂದ) ವೇದಪ್ರಾಮಾಣ್ಯವನ್ನು ಅನುಸರಿಸಿ ವಿದ್ಯಾವಂತರಾದ ಋಷಿಗಳು ಅಗ್ನಿಯೇ ಸರ್ವದೇವತೆಗಳು ಎಂದು ಹೇಳುತ್ತಾರೆ.

ಯಾನಿ ದಾರೂಣಿ ತೇ ಮಾಸಾ ನಿರ್ಯಾಸಾಃ ಪಕ್ಷಸಂಜ್ಞಿತಾಃ ।
ಅಹೋರಾತ್ರಾ ಮುಹೂರ್ತಾಸ್ತು ಪಿತ್ತಂ ಜ್ಯೋತಿಶ್ಚ ವಾರುಣಮ್ ॥೨೧॥

ಹೋಮದ ಕಟ್ಟಿಗೆಗಳು ಮಾಸಗಳು, ಕಟ್ಟಿಗೆಗಳಲ್ಲಿ ಬರುವ ದ್ರವವು ಪಕ್ಷಗಳು. ಅಹೋರಾತ್ರಿ ಮತ್ತು ಮುಹೂರ್ತಗಳು ಅಗ್ನಿಯ ಪಿತ್ತರಸವಾದವು. ಅಗ್ನಿಯಲ್ಲಿರುವ ಜ್ಯೋತಿಯು ವರುಣನ ಸಂಬಂಧಿಯಾದುದು (ಮಾಸಾದಿ ಅಭಿಮಾನಿ ದೇವತೆಗಳು ಅಗ್ನಿಯಿಂದ ಹೊರಬಂದರು ಎಂದು ಅಭಿಪ್ರಾಯ).

ರೌದ್ರಂ ಲೋಹಿತಮಿತ್ಯಾಹುರ್ಲೋಹಿತಾತ್ ಕನಕಂ ಸ್ಮೃತಮ್ ।
ತನ್ಮೈತ್ರಮಿತಿ ವಿಜ್ಞೇಯಂ ಧೂಮಾಚ್ಚ ವಸವಃ ಸ್ಮೃತಾಃ ॥೨೨॥

ಅಗ್ನಿಯ ಲೋಹಿತವು ರುದ್ರಸಂಬಂಧಿಯಾದುದು ಎಂದು ಹೇಳುತ್ತಾರೆ. ಲೋಹಿತದಿಂದ ಕನಕವು (ಸುವರ್ಣವು) ಉಂಟಾಯಿತು. ಸುವರ್ಣವನ್ನು ಅನ್ಯೋನ್ಯ ಪ್ರೀತಿಜನಕವೆಂದು ತಿಳಿಯಬೇಕು. ಧೂಮದಿಂದ ವಸುಗಳು ಜನಿಸಿದರು -ಲಕ್ಷಾಲಂಕಾರ.

ಅರ್ಚಿಷೋ ಯಾಶ್ಚ ತೇ ರುದ್ರಾಸ್ತಥಾಽದಿತ್ಯಾ ಮಹಾಪ್ರಭಾಃ ।
ಉದ್ದಿಷ್ಟಾಸ್ತೇ ತಥಾಂಗಾರಾ ಯೇ ಧಿಷ್ಣ್ಯೇಷು ದಿವಿ ಸ್ಥಿತಾಃ ॥೨೩॥

ಅಗ್ನಿಯ ಕಿಡಿಗಳು ಏಕಾದಶ ರುದ್ರರಾದರು. ಆದಿತ್ಯರು ಅಗ್ನಿಯ ಮಹಾಪ್ರಭೆ ಎಂದು ಹೇಳಲ್ಪಡುತ್ತಾರೆ. ಕೆಂಡಗಳು (ಅಂಗಾರಗಳು) ಆಕಾಶದಲ್ಲಿ ತಮ್ಮ ತಮ್ಮ ಸ್ಥಾನದಲ್ಲಿರುವ ನಕ್ಷತ್ರಗಳು. (ಇಲ್ಲಿ ಎಲ್ಲ ಕಡೆಯಲ್ಲಿಯೂ ಜನಿಸಿದವು ಎಂದೇ ಅರ್ಥವನ್ನು ಮಾಡಬೇಕು).

ಆದಿನಾಥಶ್ಚ ಲೋಕಸ್ಯ ತತ್ಪರಂ ಬ್ರಹ್ಮ ತದ್ ಧ್ರುವಮ್ ।
ಸರ್ವಕಾಮದಮಿತ್ಯಾಹುಸ್ತತ್ರ ಹವ್ಯಮುದಾವಹತ್ ॥೨೪॥

ಲೋಕಕ್ಕೆ ಮೊದಲನೆ ಸ್ವಾಮಿಯಾದ ಬ್ರಹ್ಮದೇವರು ಶಾಶ್ವತ, ಸರ್ವಕಾಮಪ್ರದ ಎಂದು ಹೇಳಲ್ಪಡುವ ಪರಬ್ರಹ್ಮನಿಗೆ ಆ ಹವ್ಯವನ್ನು ಸಮರ್ಪಿಸಿದರು.

ತತೋಽಬ್ರವೀನ್ಮಹಾದೇವೋ ವರುಣಃ ಪರಮಾತ್ಮನಃ ।
ಮಮ ಸತ್ರಮಿದಂ ದಿವ್ಯಮಹಂ ಗೃಹಪತಿಸ್ತ್ವಿಹ ॥೨೫॥

ತ್ರೀಣಿ ಪೂರ್ವಾಣ್ಯಪತ್ಯಾನಿ ಮಮ ತಾನಿ ನ ಸಂಶಯಃ ।
ಇತಿ ಜಾನೀತ ಖಗಮಾ ಮಮ ಯಜ್ಞಫಲಂ ಹಿ ತತ್ ॥೨೬॥

ಆಗ ವರುಣನ ಅಂತರ್ನಿಮಾಯಕನಾದ ಮಹಾದೇವನು ಪರಮಾತ್ಮನನ್ನು ಕುರಿತು ದಿವ್ಯವಾದ ಈ ಸತ್ರವು ನನ್ನದು. ಇದರಲ್ಲಿ ನಾನೇ ಯಜಮಾನ. ಆದ್ದರಿಂದ ಮೊದಲು ಜನಿಸಿದ ಮೂರು ಪುತ್ರರು ನನ್ನವರೇ ಎಂಬುದರಲ್ಲಿ ಸಂಶಯವಿಲ್ಲ. ಎಲೈ ಆಕಾಶಸಂಚಾರಿಯಾದ ದೇವತೆಗಳೇ ಆ ಮೂವರು ಪುತ್ರರು ನನ್ನ ಯಜ್ಞದ ಫಲವೆಂದು ತಿಳಿಯಿರಿ ಎಂದು ಹೇಳಿದನು.

ಅಗ್ನಿಃ

ಮದಂಗೇಭ್ಯಃ ಪ್ರಸೂತಾನಿ ಮದಾಶ್ರಯಕೃತಾನಿ ಚ ।
ಮಮೈವ ತಾನ್ಯಪತ್ಯಾನಿ ವರುಣೋ ಹ್ಯವಶಾತ್ಮಕಃ ॥೨೭॥

ಅಗ್ನಿ– ಈ ಮೂರು ಮಕ್ಕಳು ನನ್ನ ದೇಹದ ಅವಯವಗಳಿಂದ ಸೃಷ್ಟರಾದವರು. ನನ್ನನ್ನೇ ಆಶ್ರಯಿಸಿಕೊಂಡಿರುವವರು. ಆದ್ದರಿಂದ ವರುಣನು ಹೇಳುವ ಮಾತುಗಳು ಸರಿಯಲ್ಲ. ಅವನ ಮನಸ್ಸು ಸರಿಯಾದ ಸ್ಥಿತಿಯಲ್ಲಿಲ್ಲ.

ಅಥಾಬ್ರವೀಲ್ಲೋಕಗುರುರ್ಬ್ರಹ್ಮಾ ಲೋಕಪಿತಾಮಹಃ ।
ಮಮೈವ ತಾನ್ಯಪತ್ಯಾನಿ ಮಮ ಶುಕ್ರಂ ಹುತಂ ಹಿ ತತ್ ॥೨೮॥

ಅಹಂ ವಕ್ತಾ ಚ ಮಂತ್ರಸ್ಯ ಹೋತಾ ಶುಕ್ರಸ್ಯ ಚೈವ ಹ ।
ಯಸ್ಯ ಬೀಜಂ ಫಲಂ ತಸ್ಯ ಶುಕ್ರಂ ಚೇತ್ಕಾರಣಂ ಮತಮ್ ॥೨೯॥

ಆಗ ಲೋಕಪಿತಾಮಹರೂ, ಸರ್ವಲೋಕಗುರುಗಳೂ ಆದ ಬ್ರಹ್ಮದೇವರು ಆ ಮೂವರು ನನ್ನ ಮಕ್ಕಳೇ. ನನ್ನ ವೀರ್ಯವೇ ಅಗ್ನಿಯಲ್ಲಿ ಹೋಮ ಮಾಡಲ್ಪಟ್ಟಿದೆಯಷ್ಟೆ. ನಾನೇ ಮಂತ್ರವನ್ನು ಹೇಳುವವನು ಮತ್ತು ವೀರ್ಯವನ್ನು ಹೋಮ ಮಾಡುವವನೂ ನಾನೇ. ಬೀಜವು ಯಾವನದೋ ಫಲವೂ ಅವನಿಗೇ ಸೇರಬೇಕು. ವೀರ್ಯವು ಕಾರಣವಾದರೆ ಆ ಮಕ್ಕಳು ನನಗೇ ಸೇರಬೇಕು ಎಂದು ಹೇಳಿದರು.

ತತೋಽಬ್ರುವನ್ ದೇವಗಣಾಃ ಪಿತಾಮಹಮುಪೇತ್ಯ ವೈ ।
ಕೃತಾಂಜಲಿಪುಟಾಃ ಸರ್ವೇ ಶಿರೋಭಿರಭಿವಂದ್ಯ ಚ ॥೩೦॥

ವಯಂ ಚ ಭಗವನ್ ಸರ್ವೇ ಜಗಚ್ಚ ಸಚರಾಚರಮ್ ।
ತವೈವ ಪ್ರಸವಾಃ ಸರ್ವೇ ತಸ್ಮಾದಗ್ನಿರ್ವಿಭಾವಸುಃ ।
ವರುಣಶ್ಚೇಶ್ವರೋ ದೇವೋ ಲಭತಾಂ ಕಾಮಮೀಪ್ಸಿತಮ್ ॥೩೧॥

ಆಗ ಎಲ್ಲ ದೇವತೆಗಳು ಪಿತಾಮಹರಾದ ಬ್ರಹ್ಮದೇವರನ್ನು ಸಮೀಪಿಸಿ ಎಲ್ಲರೂ ಕೈಗಳನ್ನು ಮುಗಿದು ಶಿರಸಾ ನಮಸ್ಕರಿಸಿ ಪೂಜ್ಯರೇ ನಾವು ಮತ್ತು ಚರಾಚರವಾದ ಸರ್ವಜಗತ್ತು ನಿಮ್ಮ ಸಂತಾನವೇ ಸರಿ. ಆದ್ದರಿಂದ ವಿಭಾವಸುವಾದ ಅಗ್ನಿಯೂ, ಇಲ್ಲಿ ಯಜ್ಞದಲ್ಲಿ ಈಶ್ವರನಾದ ವರುಣನೂ ತಮಗೆ ಈಪ್ಸಿತವಾದ ಅಭಿಪ್ರಾಯವನ್ನು ಹೊಂದಲಿ (ಪುತ್ರರನ್ನು ಹೊಂದಲಿ) ಎಂದು ಹೇಳಿದರು.

ನಿಸರ್ಗಾದ್ ವರುಣಶ್ಚಾಪಿ ಬ್ರಹ್ಮಣೋ ಯಾದಸಾಂ ಪತಿಃ ।
ಜಗ್ರಾಹ ವೈ ಭೃಗುಂ ಪೂರ್ವಮಪತ್ಯಂ ಸೂರ್ಯವರ್ಚಸಮ್ ॥೩೨॥

ಬ್ರಹ್ಮದೇವರ ಆದೇಶದಂತೆ ಯಾದೋಗಣಗಳಿಗೆ ಒಡೆಯನಾದ ವರುಣನು ಮೊದಲು ಜನಿಸಿದ ಸೂರ್ಯನ ಕಾಂತಿಯುಳ್ಳ ಭೃಗುವನ್ನು ತನ್ನ ಪುತ್ರನಾಗಿ ಸ್ವೀಕರಿಸಿದನು (ಆನಂತರ ರುದ್ರನೂ ಸ್ವೀಕರಿಸಿದನು ಎಂದು ತಿಳಿಯಬೇಕು - ಲಕ್ಷಾಲಂಕಾರ).

ಈಶ್ವರೋಽಂಗಿರಸಂ ಚಾಗ್ನೇರಪತ್ಯಾರ್ಥೇಽಭ್ಯಕಲ್ಪಯತ್ ।
ಪಿತಾಮಹಸ್ತ್ವಪತ್ಯಂ ವೈ ಕವಿಂ ಜಗ್ರಾಹ ತತ್ತ್ವವಿತ್ ॥೩೩॥

ಅನಂತರ ಪ್ರಭುವಾದ ಬ್ರಹ್ಮದೇವರು ಅಂಗಿರಸರನ್ನು ಅಗ್ನಿಯ ಪುತ್ರನನ್ನಾಗಿ ನಿರ್ಧರಿಸಿದರು. ತತ್ತ್ವಜ್ಞಾನಿಗಳಾದ ಬ್ರಹ್ಮದೇವರು ಕವಿಯನ್ನು ಪುತ್ರನನ್ನಾಗಿ ಸ್ವೀಕರಿಸಿದರು.

ತದಾ ಸ ವಾರುಣಃ ಖ್ಯಾತೌ ಭೃಗುಃ ಪ್ರಸವಕರ್ಮಕೃತ್ ।
ಆಗ್ನೇಯಸ್ತ್ವಂಗಿರಾಃ ಶ್ರೀಮಾನ್ ಕವಿರ್ಬ್ರಾಹ್ಮೋ ಮಹಾಯಶಾಃ ।
ಭಾರ್ಗವಾಂಗಿರಸೌ ಲೋಕೇ ಲೋಕಸಂತಾನಲಕ್ಷಣೌ ॥೩೪॥

ಆಗ ವರುಣ ಪುತ್ರನಾದ ಭೃಗುವು ತನ್ನ ಪತ್ನಿಯಾದ ಖ್ಯಾತಿಯಲ್ಲಿ ಸಂತತಿಯನ್ನು ಬೆಳೆಸಿದನು. ಅಂಗಿರಸರಿಂದ ಅಗ್ನಿಯ ಸಂತತಿ ಮುಂದುವರೆಯಿತು. ಕಾಂತಿಯುಕ್ತನಾದ ಬ್ರಹ್ಮಪುತ್ರನಾದ, ಮಹಾಕೀರ್ತಿವಂತನಾದ ಕವಿಯು ತನ್ನ ಸಂತಾನವನ್ನು ಬೆಳೆಸಿದನು. ಭೃಗುಗಳು ಮತ್ತು ಅಂಗಿರಸರು ಲೋಕದಲ್ಲಿ ಸಂತತಿಯನ್ನು ಬೆಳೆಸಿದವರೆಂದು ಪ್ರಸಿದ್ಧರಾಗಿದ್ದಾರೆ.

ಏತೇ ವಿಪ್ರವರಾಃ ಸರ್ವೇ ಪ್ರಜಾನಾಂ ಪತಯಸ್ತ್ರಯಃ ।
ಸರ್ವಂ ಸಂತಾನಮೇತೇಷಾಮಿದಮಿತ್ಯುಪಧಾರಯ ॥೩೫॥

ಈ ಎಲ್ಲಾ ವಿಪ್ರಶ್ರೇಷ್ಠರು ಪ್ರಜಾಪತಿಗಳೆಂದು ಖ್ಯಾತರಾಗಿದ್ದಾರೆ. ಈ ಪ್ರಪಂಚದಲ್ಲಿರುವ ಪ್ರಜಾಸಂತತಿಗಳೆಲ್ಲವೂ ಇವರಿಗೇ ಸೇರಿದುದೆಂದು ತಿಳಿಯುವವನಾಗು.

ಭೃಗೋಸ್ತು ಪುತ್ರಾಸ್ತತ್ರಾಸನ್ ಸಪ್ತ ತುಲ್ಯಾ ಭೃಗೋರ್ಗುಣೈಃ ।
ಚ್ಯವನೋ ವಜ್ರಶೀರ್ಷಶ್ಚ ಶುಚಿರೌರ್ವಸ್ತಥೈವ ಚ ॥೩೬॥

ಶುಕ್ರೋ ವರೇಣ್ಯಶ್ಚ ವಿಭುಃ ಸವನಶ್ಚೇತಿ ಸಪ್ತ ತೇ ।
ಭಾರ್ಗವಾ ವಾರುಣಾಃ ಸರ್ವೇ ಯೇಷಾಂ ವಂಶೇ ಭವಾನಪಿ ॥೩೭॥

ಭೃಗುವಿಗೆ ತನ್ನ ಗುಣಕ್ಕೆ ಸಮಾನವಾದ ಗುಣವುಳ್ಳ ಏಳು ಜನ ಪುತ್ರರಾದರು. ಅವರು ಚ್ಯವನ, ವಜ್ರಶೀರ್ಷ, ಶುಚಿ, ಔರ್ವ, ಶುಕ್ರ, ವರೇಣ್ಯ ಮತ್ತು ಸಮರ್ಥನಾದ ಸವನ. ಈ ಭಾರ್ಗವರೆಲ್ಲರೂ ವರುಣನ ಸಂತತಿಯಲ್ಲಿ ಬಂದವರು. ಎಲೈ ಪರಶುರಾಮನೇ, ನೀನೂ ಸಹ ಅವರ ವಂಶದಲ್ಲಿಯೇ ಬಂದಿದ್ದೀಯೆ.

ಅಷ್ಟೌ ಚಾಂಗಿರಸಃ ಪುತ್ರಾ ವಾರುಣಾಸ್ತೇಽಪ್ಯುದಾಹೃತಾಃ ।
ಬೃಹಸ್ಪತಿರುಚಥ್ಯಶ್ಚ ವಯಸ್ಯಃ ಶಾಂತಿರೇವ ಚ ॥೩೮॥

ಘೋರೋ ವಿರೂಪಃ ಸಂವರ್ತಃ ಸುಧನ್ವಾ ಚಾಷ್ಟಮಃ ಸ್ಮೃತಃ ।
ಏತೇಽಷ್ಟಾವಗ್ನಿಜಾಃ ಸರ್ವೇ ಜ್ಞಾನನಿಷ್ಠಾ ನಿರಾಮಯಾಃ ॥೩೯॥

ಅಂಗಿರಸರ ಪುತ್ರರು ಎಂಟುಮಂದಿ. ಅವರೂ ವರುಣ ಸಂತತಿಗೇ ಸೇರಿದವರು ಎಂದು ಹೇಳಲ್ಪಡುತ್ತಾರೆ. ಬೃಹಸ್ಪತಿ, ಉಚಥ್ಯ, ವಯಸ್ಯ, ಶಾಂತಿ, ಘೋರ, ವಿರೂಪ, ಸಂವರ್ತ, ಸುಧನ್ವಾ ಇವರು ಆ ಎಂಟು ಪುತ್ರರು. ಈ ಎಂಟು ಪುತ್ರರೂ ಅಗ್ನಿಯ ಪುತ್ರರು, ಜ್ಞಾನನಿಷ್ಠರು ಮತ್ತು ರೋಗಾದಿ ದೋಷರಹಿತರು.

ಬ್ರಾಹ್ಮಣಸ್ಯ ಕವೇಃ ಪುತ್ರಾ ವಾರುಣಾಸ್ತೇಽಪ್ಯುದಾಹೃತಾಃ ।
ಅಷ್ಟೌ ಪ್ರಸವಜೈರ್ಯುಕ್ತಾ ಗುಣೈರ್ಬ್ರಹ್ಮವಿದಃ ಶುಭಾಃ ॥೪೦॥

ಕವಿಃ ಕಾವ್ಯಶ್ಚ ವಿಷ್ಣುಶ್ಚ ಬುದ್ಧಿಮಾನುಶನಾಸ್ತಥಾ ।
ಭೃಗುಶ್ಚ ವಿರಜಾಶ್ಚೈವ ಕಾಶೀ ಚೋಗ್ರಶ್ಚ ಧರ್ಮವಿತ್ ॥೪೧॥

ಬ್ರಹ್ಮಪುತ್ರರಾದ ಕವಿಯ ಪುತ್ರರೂ ವರುಣನ ಸಂತತಿಗೇ ಸೇರಿದವರು. ತಮ್ಮ ಪುತ್ರರಿಂದ ಕೂಡಿದ ಆ ಎಂಟು ಪುತ್ರರು ಶುಭರಾದವರು ಮತ್ತು ಬ್ರಹ್ಮಜ್ಞಾನಿಗಳಿಗೆ ಸಮರಾದವರು. ಅವರು ಕವಿ, ಕಾವ್ಯ, ವಿಷ್ಣು, ಮೇಧಾವಿಯಾದ ಉಶನಾ, ಭೃಗು, ವಿರಜಾ, ಕಾಶೀ ಮತ್ತು ಧರ್ಮಜ್ಞನಾದ ಉಗ್ರ.

ಅಷ್ಟೌ ಕವಿಸುತಾ ಹ್ಯೇತೇ ಸರ್ವಮೇಭಿರ್ಜಗತ್ ತತಮ್ ।
ಪ್ರಜಾಪತಯ ಏತೇ ಹಿ ಪ್ರಜಾನಾಂ ಯೈರಿಮಾಃ ಪ್ರಜಾಃ ॥೪೨॥

ಈ ಎಂಟು ಮಂದಿ ಕವಿಯ ಪುತ್ರರು. ಇವರಿಂದ ಎಂದರೆ ಭೃಗು, ಅಂಗಿರಸರು ಮತ್ತು ಕವಿಯ ಸಂತತಿಯಿಂದ ಜಗತ್ತು ತುಂಬಿಹೋಗಿದೆ. ಇವರು ಪ್ರಜಾಪತಿಗಳು. ಅವರ ಪ್ರಜೆಗಳಿಂದ ಈಗಿನ ಪ್ರಜೆಗಳು ಉಂಟಾಗಿದ್ದಾರೆ.

ಏವಮಂಗಿರಸಶ್ಚೈವ ಕವೇಶ್ಚ ಪ್ರಸವಾನ್ವಯೈಃ ।
ಭೃಗೋಶ್ಚ ಭೃಗುಶಾರ್ದೂಲ ವಂಶಜೈಃ ಸಂತತಂ ಜಗತ್ ॥೪೩॥

ಎಲೈ ಭೃಗುಶಾರ್ದೂಲನೇ, ಹೀಗೆ ಅಂಗಿರಸರ, ಕವಿಯ ಮತ್ತು ಭೃಗುವಿನ ಪುತ್ರ ಸಂತತಿಯಿಂದ ಮತ್ತು ಆ ವಂಶದಲ್ಲಿ ಜನಿಸಿದವರಿಂದ ಜಗತ್ತು ತುಂಬಿಹೋಗಿದೆ.

ವರುಣಶ್ಚಾದಿತೋ ವಿಪ್ರ ಜಗ್ರಾಹ ಪ್ರಭುರೀಶ್ವರಃ ।
ಕವಿಂ ತಾತ ಭೃಗುಂ ಚೈವ ತಸ್ಮಾತ್ ತೌ ವಾರುಣೌ ಸ್ಮೃತೌ ॥೪೪॥

ಎಲೈ ಪ್ರೀತಿಪಾತ್ರನೇ, ಬ್ರಾಹ್ಮಣನೇ, ಸಮರ್ಥನೂ, ಪ್ರಭುವೂ ಆದ ವರುಣನು ಮೊದಲು ಕವಿ ಮತ್ತು ಭೃಗು ಇಬ್ಬರನ್ನು ಸ್ವೀಕರಿಸಿದನು. ಆದ್ದರಿಂದ ಅವರು ವರುಣಪುತ್ರರೆಂದು ಹೇಳಲ್ಪಡುತ್ತಾರೆ.

ಜಗ್ರಾಹಾಂಗಿರಸಂ ದೇವಃ ಶಿಖೀ ತಸ್ಮಾದ್ಧುತಾಶನಃ ।
ತಸ್ಮಾದಂಗಿರಸೋ ಜ್ಞೇಯಾಃ ಸರ್ವ ಏವ ತದನ್ವಯಾಃ ॥೪೫॥

ಶಿಖಿಯಾದ ಅಗ್ನಿದೇವನು ಅಂಗಿರಸರನ್ನು ಸ್ವೀಕರಿಸಿದನು. ಆದ್ದರಿಂದ ಎಲ್ಲಾ ಅಂಗಿರಸರೂ ಅಗ್ನಿಯ ಸಂತತಿಯಲ್ಲಿ ಬಂದವರೆಂದು ತಿಳಿಯಬೇಕು.

ಬ್ರಹ್ಮಾ ಪಿತಾಮಹಃ ಪೂರ್ವಂ ದೇವತಾಭಿಃ ಪ್ರಸಾದಿತಃ ।
ಇಮೇ ನಃ ಸಂತರಿಷ್ಯಂತಿ ಪ್ರಜಾಭಿರ್ಜಗದೀಶ್ವರಾಃ ॥೪೬॥

ಸರ್ವೇ ಪ್ರಜಾನಾಂ ಪತಯಃ ಸರ್ವೇ ಚಾತಿತಪಸ್ವಿನಃ ।
ತತ್ಪ್ರಸಾದಾದಿಮಂ ಲೋಕಂ ತಾರಯಿಷ್ಯಂತಿ ಶಾಶ್ವತಮ್ ॥೪೭॥

ತಥೈವ ವಂಶಕರ್ತಾರಸ್ತವ ತೇಜೋವಿವರ್ಧನಾಃ ।
ಭವೇಯುರ್ವೇದವಿದುಷಃ ಸರ್ವೇ ವಾಕ್ಪತಯಸ್ತಥಾ ॥೪೮॥

ದೇವತೆಗಳು ಹಿಂದೆಯೇ ಪಿತಾಮಹರಾದ ಬ್ರಹ್ಮದೇವರನ್ನು ಹೀಗೆ ಪ್ರಸನ್ನಗೊಳಿಸಿದರು - ಈ ಜಗತ್ ಪ್ರಭುಗಳಾದ ಪ್ರಜಾಪತಿಗಳು ನಮ್ಮನ್ನು ಪಾರು

ಮಾಡುತ್ತಾರೆ. ಇವರೆಲ್ಲರೂ ಬಹಳ ತಪಸ್ವಿಗಳು. ನಿಮ್ಮ ಅನುಗ್ರಹದಿಂದ ಈ ಶಾಶ್ವತವಾದ ಲೋಕವನ್ನು ಸಮಗ್ರವಾಗಿ ಪಾರುಮಾಡುತ್ತಾರೆ. ಹಾಗೆಯೇ ವಂಶವನ್ನು ಬೆಳೆಸಿ ನಿಮ್ಮ ತೇಜಸ್ಸನ್ನು ಅಭಿವೃದ್ಧಿಗೊಳಿಸುತ್ತಾರೆ. ಇವರೆಲ್ಲರೂ ವೇದವಿದ್ವಾಂಸರೂ ಮತ್ತು ವಾಕ್ಪತಿಗಳೂ ಆಗುತ್ತಾರೆ.

ದೇವಪಕ್ಷಧರಾಃ ಸೌಮ್ಯಾಃ ಪ್ರಾಜಾಪತ್ಯಾ ಮಹರ್ಷಯಃ ।
ಆಪ್ನುವಂತಿ ತಪಶ್ಚೈವ ಬ್ರಹ್ಮಚರ್ಯಂ ಪರಂ ತಥಾ ॥೪೯॥

ಪ್ರಜಾಪತಿಗಳಾದ ಈ ಮಹರ್ಷಿಗಳು ದೇವತೆಗಳ ಪಕ್ಷದಲ್ಲಿ ಇರುವವರು, ಶಾಂತಸ್ವಭಾವದವರು. ತಪಸ್ಸನ್ನು ಮತ್ತು ಶ್ರೇಷ್ಠವಾದ ಬ್ರಹ್ಮಚರ್ಯವನ್ನು ಆಚರಿಸುತ್ತಾರೆ.

ಸರ್ವೇ ಹಿ ವಯಮೇತೇ ಚ ತವೈವ ಪ್ರಸವಃ ಪ್ರಭೋ ।
ದೇವಾನಾಂ ಬ್ರಾಹ್ಮಣಾನಾಂ ಚ ತ್ವಂ ಹಿ ಕರ್ತಾ ಪಿತಾಮಹ ॥೫೦॥

ಎಲೈ ಪ್ರಭುವೇ, ನಾವೂ, ಈ ಪ್ರಜಾಪತಿಗಳೂ ಎಲ್ಲರೂ ನಿನ್ನ ಮಕ್ಕಳು. ಎಲೈ ಪಿತಾಮಹನೇ, ದೇವತೆಗಳಿಗೂ ಮತ್ತು ಬ್ರಾಹ್ಮಣರಿಗೂ ನೀನೇ ಜನಕನಾದವನು.

ಮರೀಚಿಮಾದಿತಃ ಕೃತ್ವಾ ಸರ್ವೇ ಚೈವಾಥ ಭಾರ್ಗವಾಃ ।
ಅಪತ್ಯಾನೀತಿ ಸಂಪ್ರೇಕ್ಷ್ಯ ಕ್ಷಮಯಾಮ ಪಿತಾಮಹ ॥೫೧॥

ಎಲೈ ಪಿತಾಮಹನೇ, ಮರೀಚಿ ಋಷಿಗಳಿಂದ ಹಿಡಿದು ಎಲ್ಲ ಭಾರ್ಗವರೂ ನಿಮ್ಮ ಮಕ್ಕಳೆಂದು ತಿಳಿ. ನಿಮ್ಮನ್ನು ಪ್ರಸನ್ನರಾಗಿ ಎಂದು ಕೇಳುತ್ತಿದ್ದೇವೆ.

ತೇ ತ್ವನೇನೈವ ರೂಪೇಣ ಪ್ರಜನಿಷ್ಯಂತಿ ವೈ ಪ್ರಜಾಃ ।
ಸ್ಥಾಪಯಿಷ್ಯಂತಿ ಚಾತ್ಮಾನಂ ಯುಗಾದಿನಿಧನೇ ತಥಾ ॥೫೨॥

ಈ ಪ್ರಜಾಪತಿಗಳು ದಿವ್ಯರೂಪದಿಂದ ಪ್ರಜೆಗಳನ್ನು ಸೃಷ್ಟಿಸುವರು. ಪ್ರಜೆಗಳ ರೂಪದಲ್ಲಿ ತಮ್ಮನ್ನು ಯುಗದ ಆರಂಭದಿಂದ ಅಂತ್ಯಕಾಲದವರೆಗೂ ಸ್ಥಾಪಿಸಿಕೊಳ್ಳುತ್ತಾರೆ (ಎಂದು ಬ್ರಹ್ಮದೇವರನ್ನು ಸ್ತೋತ್ರ ಮಾಡಿದರು).

ಏವಮೇತತ್ಪುರಾ ವೃತ್ತಂ ತಸ್ಯ ಯಜ್ಞೇ ಮಹಾತ್ಮನಃ ।
ದೇವಶ್ರೇಷ್ಠಸ್ಯ ಲೋಕಾದೌ ವಾರುಣೀಂ ಬಿಭ್ರತಸ್ತನುಮ್ ॥೫೩॥

ಹೀಗೆ ಮಹಾತ್ಮರಾದ, ವರುಣದೇಹವನ್ನು ಧರಿಸಿದ, ದೇವಶ್ರೇಷ್ಠರಾದ ರುದ್ರದೇವರ ಯಜ್ಞದಲ್ಲಿ ಪ್ರಪಂಚದ ಆದಿಯಲ್ಲಿ ಇಂತಹ ಘಟನೆಯು ನಡೆಯಿತು.

ಅಗ್ನಿರ್ಬ್ರಹ್ಮಾ ಪಶುಪತಿಃ ಶರ್ವೋ ರುದ್ರಃ ಪ್ರಜಾಪತಿಃ ।
ಅಗ್ನೇರಪತ್ಯಮೇತದ್ವೈ ಸುವರ್ಣಮಿತಿ ಧಾರಣಾ ॥೫೪॥

ಅಗ್ನಿ, ಬ್ರಹ್ಮಾ, ಪಶುಪತಿ, ಶರ್ವ, ರುದ್ರ, ಪ್ರಜಾಪತಿ ಮತ್ತು ಸುವರ್ಣ ಎಲ್ಲವೂ ಅಗ್ನಿಯ ಅಪತ್ಯರೆಂದು ನಿಶ್ಚಿತವಾದುದು.

ಅಗ್ನ್ಯಭಾವೇ ಚ ಕುರ್ವಂತಿ ವಹ್ನಿಸ್ಥಾನೇಷು ಕಾಂಚನಮ್ ।
ಜಾಮದಗ್ನ್ಯ ಪ್ರಮಾಣಜ್ಞಾ ವೇದಶ್ರುತಿನಿದರ್ಶನಾತ್ ॥೫೫॥

ಎಲೈ ಪರಶುರಾಮನೇ, ವೇದಪ್ರಾಮಾಣ್ಯವನ್ನು ತಿಳಿದವರು ಅಗ್ನಿ ಇಲ್ಲದಿದ್ದರೆ ಅಗ್ನಿಯ ಸ್ಥಾನದಲ್ಲಿ ಸುವರ್ಣವನ್ನು ಇಡುತ್ತಾರೆ.

ಕುಶಸ್ತಂಬೇ ಜುಹೋತ್ಯಗ್ನಿಂ ಸುವರ್ಣಂ ತತ್ರ ಸಂಸ್ಥಿತಮ್ ।
ಹುತೇ ಪ್ರೀತಿಕರೀಮೃದ್ಧಿಂ ಭಗವಾಂಸ್ತತ್ರ ಮನ್ಯತೇ ॥೫೬॥

ದರ್ಭೆಯ ಸಮೂಹದಲ್ಲಿ ಅಗ್ನಿಗೆ ಹೋಮವನ್ನು ಮಾಡುತ್ತಾರೆ. ಅಲ್ಲಿ ಸುವರ್ಣವಿದೆ. ಅಲ್ಲಿ ಹೋಮವನ್ನು ಮಾಡಿದರೆ ಅಗ್ನಿಯು ಅದು ತನಗೆ ಪ್ರೀತಿಕರವಾದ ಆಹುತಿ ಎಂದು ತಿಳಿಯುತ್ತಾನೆ.

ತಸ್ಮಾದಗ್ನಿಪರಾಃ ಸರ್ವಾ ದೇವತಾ ಇತಿ ಶುಶ್ರುಮ ।
ಬ್ರಹ್ಮಣೋ ಹಿ ಪ್ರಸೂತೋಽಗ್ನಿರಗ್ನೇರಪಿ ಚ ಕಾಂಚನಮ್ ॥೫೭॥

ಆದ್ದರಿಂದ ಎಲ್ಲ ದೇವತೆಗಳೂ ಅಗ್ನಿಯನ್ನು ಪೂಜಿಸುತ್ತಾರೆ ಎಂದು ಕೇಳಿದ್ದೇವೆ. ಬ್ರಹ್ಮನಿಂದ ಜನಿಸಿದವನು ಅಗ್ನಿ. ಅಗ್ನಿಯಿಂದ ಜನಿಸಿದುದು ಸುವರ್ಣ.

ತಸ್ಮಾದ್ ಯೇ ವೈ ಪ್ರಯಚ್ಛಂತಿ ಸುವರ್ಣಂ ಧರ್ಮದರ್ಶಿನಃ ।
ದೇವತಾಸ್ತೇ ಪ್ರಯಚ್ಛಂತಿ ಸಮಸ್ತಾ ಇತಿ ನಃ ಶ್ರುತಮ್ ॥೫೮॥

ಆದ್ದರಿಂದ ಯಾವ ಧರ್ಮದರ್ಶಿಗಳು ಸುವರ್ಣವನ್ನು ದಾನ ಮಾಡುತ್ತಾರೆಯೋ ಅವರು ಸಮಸ್ತ ದೇವತೆಗಳನ್ನೂ ದಾನ ಮಾಡುತ್ತಾರೆ ಎಂಬುದನ್ನು ನಾವು ಕೇಳಿದ್ದೇವೆ.

ತಸ್ಯ ಚಾತಮಸೋ ಲೋಕಾನ್ ಗಚ್ಛತಃ ಪರಮಾಂ ಗತಿಮ್ ।
ಸ್ವರ್ಗಲೋಕೇ ರಾಜರಾಜ್ಯೇನ ಸೋಽಭಿಷಿಚ್ಯೇತ ಭಾರ್ಗವ ॥೫೯॥

ಎಲೈ ಭಾರ್ಗವನೇ, ಸುವರ್ಣದಾನವನ್ನು ಮಾಡಿ ಶ್ರೇಷ್ಠವಾದ ಗತಿಯನ್ನು ಪಡೆಯುವವನಿಗೆ ಅಂಧಕಾರ ರಹಿತವಾದ ಲೋಕಗಳು ದೊರೆಯುತ್ತವೆ. ಸ್ವರ್ಗ ಲೋಕದಲ್ಲಿ ಅವನು ಸಾಧನೆಗೆ ಯೋಗ್ಯವಾದ ಸಂಪತ್ತಿನೊಡನೆ ಅಭಿಷೇಕ ಮಾಡಲ್ಪಡುತ್ತಾನೆ.

ಆದಿತ್ಯೋದಯನೇ ಪ್ರಾಪ್ತೇ ವಿಧಿಮಂತ್ರಪುರಸ್ಕೃತಮ್ ।
ದದಾತಿ ಕಾಂಚನಂ ಯೋ ವೈ ದುಃಸ್ವಪ್ನಂ ಪ್ರತಿಹಂತಿ ಸಃ ॥೬೦॥

ಸೂರ್ಯೋದಯದ ಸಮಯದಲ್ಲಿ ಯಾವನು ವಿಧಿಮಂತ್ರ ಪುರಸ್ಸಾರವಾಗಿ ಸುವರ್ಣದಾನವನ್ನು ಮಾಡುತ್ತಾನೆಯೋ ಅವನು ದುಃಸ್ವಪ್ನದ ಫಲವನ್ನು ನಾಶ ಪಡಿಸುತ್ತಾನೆ.

ದದಾತ್ಯುದಿತಮಾತ್ರೇ ಯಸ್ತಸ್ಯ ಪಾಪ್ಮಾ ವಿಧೂಯತೇ ।
ಮಧ್ಯಾಹ್ನೇ ದದತೋ ರುಗ್ಮಂ ಹಂತಿ ಪಾಪಮನಾಗತಮ್ ॥೬೧॥

ಸೂರ್ಯನು ಉದಯಿಸಿದ ತಕ್ಷಣ ದಾನವನ್ನು ಮಾಡುವವನು ತನ್ನ ಎಲ್ಲಾ ಪಾಪಗಳನ್ನು ಕಳೆದುಕೊಳ್ಳುತ್ತಾನೆ. ಮಧ್ಯಾಹ್ನ ಕಾಲದಲ್ಲಿ ಸುವರ್ಣದಾನವನ್ನು ಮಾಡಿದರೆ ಅದು ಮುಂದೆ ಬರಲಿರುವ ಪಾಪಗಳನ್ನು ವಿನಾಶಗೊಳಿಸುತ್ತದೆ.

ದದಾತಿ ಪಶ್ಚಿಮಾಂ ಸಂಧ್ಯಾಂ ಯಃ ಸುವರ್ಣಂ ಧೃತವ್ರತಃ ।
ಬ್ರಹ್ಮವಾಯ್ವಗ್ನಿಸೋಮಾನಾಂ ಸಾಲೋಕ್ಯಮುಪಯಾತಿ ಸಃ ॥೬೨॥

ಯಾವನು ಒಳ್ಳೆಯ ವ್ರತವನ್ನು ಧರಿಸಿ ಸಾಯಂಕಾಲದ ಸಂಧ್ಯಾಕಾಲದಲ್ಲಿ ಸುವರ್ಣ ದಾನವನ್ನು ಮಾಡುತ್ತಾನೆಯೋ ಅವನು ಬ್ರಹ್ಮ-ವಾಯು-ಅಗ್ನಿ-ಚಂದ್ರರ ಸಾಲೋಕ್ಯವನ್ನು ಹೊಂದುತ್ತಾನೆ.

ಸೇಂದ್ರೇಷು ಚೈವ ಲೋಕೇಷು ಪ್ರತಿಷ್ಠಾಂ ಪ್ರಾಪ್ನುತೇ ಶುಭಾಮ್ ।
ಇಹ ಲೋಕೇ ಯಶಃ ಪ್ರಾಪ್ಯ ಶಾಂತಪಾಪ್ಮಾ ಪ್ರಮೋದತೇ ॥೬೩॥

ಇಂದ್ರನಿಂದ ಅಧಿಷ್ಠಿತವಾದ ಲೋಕಗಳಲ್ಲಿ ಶುಭವಾದ ಸ್ಥಾನವನ್ನು ಪಡೆಯುತ್ತಾನೆ. ಈ ಲೋಕದಲ್ಲಿ ಪಾಪವನ್ನು ಕಳೆದುಕೊಂಡು ಕೀರ್ತಿಯನ್ನು ಪಡೆದು ಸಂತೋಷ ಪಡುತ್ತಾನೆ.

ತತಃ ಸಂಪದ್ಯತೇಽನ್ಯೇಷು ಲೋಕೇಷ್ವಪ್ರತಿಮಃ ಸದಾ ।
ಅನಾವೃತಗತಿಶ್ಚೈವ ಕಾಮಚಾರೀ ಭವತ್ಯುತ ॥೬೪॥

ಅನಂತರ ಅನ್ಯಲೋಕಗಳಿಗೆ ಹೋಗಿ ಅಲ್ಲಿ ಅಸದೃಶನಾಗುತ್ತಾನೆ. ಅವನು ಆ ಲೋಕದಿಂದ ಹಿಂದಿರುಗದೆ ತನ್ನ ಇಚ್ಛೆಗೆ ಅನುಗುಣವಾಗಿ ಅಲ್ಲಿ ಸಂಚರಿಸುತ್ತಾನೆ.

ನ ಚ ಕ್ಷರತಿ ತೇಭ್ಯಃ ಸ ಶಶ್ವಚ್ಚೈವಾಪ್ನುತೇ ಮಹತ್ ।
ಸುವರ್ಣಮಕ್ಷಯಂ ದತ್ತ್ವಾ ಲೋಕಾನಾಪ್ನೋತಿ ಪುಷ್ಕಳಾನ್ ॥೬೫॥

ಅವನು ಆ ಲೋಕಗಳಿಂದ ಚ್ಯುತನಾಗುವುದಿಲ್ಲ. ಅವನು ಶಾಶ್ವತವಾಗಿ ಮಹತ್ವವನ್ನು ಪಡೆಯುತ್ತಾನೆ. ಅಕ್ಷಯವಾದ ಸುವರ್ಣದಾನವನ್ನು ಮಾಡಿ ಪುಷ್ಕಳವಾದ ಲೋಕಗಳನ್ನು ಪಡೆಯುತ್ತಾನೆ.

ಯಸ್ತು ಸಂಜನಯಿತ್ವಾಽಗ್ನಿಮಾದಿತ್ಯೋದಯನಂ ಪ್ರತಿ ।
ದದ್ಯಾದ್ ವೈ ವ್ರತಮುದ್ದಿಶ್ಯ ಸರ್ವಾನ್ ಕಾಮಾನ್ ಸಮಶ್ನುತೇ ॥೬೬॥

ಯಾವನು ಸೂರ್ಯೋದಯದ ಸಮಯದಲ್ಲಿ ವ್ರತವನ್ನು ಉದ್ದೇಶಿಸಿ ಅಗ್ನಿಪ್ರತಿಷ್ಠಾಪನೆಯನ್ನು ಮಾಡಿ ಸುವರ್ಣದಾನವನ್ನು ಮಾಡುತ್ತಾನೆಯೋ ಅವನು ಎಲ್ಲಾ ಕಾಮಗಳನ್ನೂ ಪಡೆಯುತ್ತಾನೆ.

ಅಗ್ನಿರಿತ್ಯೇವ ತತ್ ಪ್ರಾಹುಃ ಪ್ರದಾನಂ ವೈ ಸುಖಾವಹಮ್ ।
ಯಥೇಷ್ಟಗುಣಸಂಪನ್ನಂ ಪ್ರವರ್ತಕಮಿತಿ ಸ್ಮೃತಮ್ ॥೬೭॥

ಸುವರ್ಣವನ್ನು ಅಗ್ನಿ ಎಂದೇ ಹೇಳುತ್ತಾರೆ. ಸುವರ್ಣದಾನವು ಯಾವಾಗಲೂ ಸುಖವನ್ನು ತಂದುಕೊಡುವಂತಹದು ಮತ್ತು ದಾನ ಮಾಡಿದವನನ್ನು ಅವನಿಗೆ ಇಷ್ಟವಾದ ಗುಣಗಳಿಂದ ಸಂಪನ್ನನಾಗಿ ಮಾಡುವುದು ಎಂದೂ ಹೇಳುತ್ತಾರೆ.

ಭೀಷ್ಮಃ

ಇತ್ಯುಕ್ತಃ ಸ ವಸಿಷ್ಠೇನ ಜಾಮದಗ್ನ್ಯಃ ಪ್ರತಾಪವಾನ್ ।
ದದೌ ಸುವರ್ಣಂ ವಿಪ್ರೇಭ್ಯೋ ವ್ಯಮುಚ್ಯತ ಚ ಕಿಲ್ಬಿಷಾತ್ ॥೬೮॥

ಭೀಷ್ಮ- ವಸಿಷ್ಠರಿಂದ ಹೀಗೆ ಹೇಳಲ್ಪಟ್ಟ ಪ್ರತಾಪಶಾಲಿಯಾದ ಪರಶುರಾಮನು ಬ್ರಾಹ್ಮಣರಿಗೆ ಸುವರ್ಣದಾನವನ್ನು ಮಾಡಿ ತನ್ನ ದೋಷದಿಂದ ನಿರ್ಮುಕ್ತನಾದನು.

ಏತತ್ ತೇ ಸರ್ವಮಾಖ್ಯಾತಂ ಸುವರ್ಣಸ್ಯ ಮಹೀಪತೇ ।
ಪ್ರದಾನಸ್ಯ ಫಲಂ ಚೈವ ಜನ್ಮ ಚಾಗ್ನ್ಯಮನುತ್ತಮಮ್ ॥೬೯॥

ಎಲೈ ಯುಧಿಷ್ಠಿರರಾಜನೇ, ಸುವರ್ಣಕ್ಕೆ ಸಂಬಂಧಿಸಿದ ಈ ಎಲ್ಲವನ್ನೂ ನಿನಗೆ ಹೇಳಿದ್ದೇನೆ. ಸುವರ್ಣದ ಶ್ರೇಷ್ಠವಾದ ಉತ್ಪತ್ತಿಯನ್ನೂ, ಅದರ ದಾನದ ಫಲವನ್ನೂ ಹೇಳಿದ್ದೇನೆ.

ತಸ್ಮಾತ್ ತ್ವಮಪಿ ವಿಪ್ರೇಭ್ಯಃ ಪ್ರಯಚ್ಛ ಕನಕಂ ಬಹು ।
ದದತ್ಸುವರ್ಣಂ ನೃಪತೇ ಕಿಲ್ಬಿಷಾದ್ ವಿಪ್ರಮೋಕ್ಷ್ಯಸಿ ॥೭೦॥

ಆದ್ದರಿಂದ ನೀನೂ ಸಹ ಬ್ರಾಹ್ಮಣರಿಗೆ ಬಹಳ ಸುವರ್ಣವನ್ನು ದಾನ ಮಾಡು. ಎಲೈ ರಾಜನೇ, ಸುವರ್ಣದಾನವನ್ನು ಮಾಡಿದರೆ ನೀನು ದೋಷಗಳಿಂದ ನಿರ್ಮುಕ್ತನಾಗುವಿ.

ಏವಮೇತನ್ಮಹಾರಾಜ ಸುವರ್ಣಸ್ಯ ಮಹಾತ್ಮನಃ ।
ಜನ್ಮ ತೇ ಕಥಿತಂ ಪುಣ್ಯಂ ಪ್ರದಾನಂ ಚ ಯುಧಿಷ್ಠಿರ ॥೭೧॥

ಎಲೈ ಮಹಾರಾಜನೇ, ಯುಧಿಷ್ಠಿರನೇ, ಹೀಗೆ ನಾನು ನಿನಗೆ ಮಹಾತ್ಮನಾದ ಸುವರ್ಣದ ಉತ್ಪತ್ತಿಯನ್ನೂ, ಪುಣ್ಯಪ್ರದಾನವಾದ ದಾನವನ್ನೂ ಹೇಳಿದ್ದೇನೆ.

ಇತಿ ರಾಮಮುವಾಚೇದಂ ವಸಿಷ್ಠಃ ಶ್ರೇಷ್ಠವಾಗೃಷಿಃ ।
ಸುವರ್ಣದಾನೇ ಮಾಹಾತ್ಮ್ಯಂ ತತ್ಕುರುಷ್ವ ಯುಧಿಷ್ಠಿರ ॥೭೨॥

ಎಲೈ ಯುಧಿಷ್ಠಿರನೇ, ಸುವರ್ಣದಾನದ ಮಹಾತ್ಮೆಯನ್ನು ಶ್ರೇಷ್ಠವಚನರಾದ ವಸಿಷ್ಠರು ಪರಶುರಾಮನಿಗೆ ಹೇಳಿದರು. ನೀನೂ ಸಹ ಸುವರ್ಣದಾನವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಸುವರ್ಣಜನ್ಮಾದಿಕಥನಂ ನಾಮ
ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೆಂಟನೆಯ ಅಧ್ಯಾಯ

ತಾರಕ ವಧೆ.

ಯುಧಿಷ್ಠಿರಃ

ಉಕ್ತಾಃ ಪಿತಾಮಹೇನೇಹ ಸುವರ್ಣಸ್ಯ ವಿಧಾನತಃ ।
ವಿಸ್ತರೇಣ ಪ್ರದಾನಸ್ಯ ಯೇ ಗುಣಾಃ ಶ್ರುತಿಲಕ್ಷಣಾಃ ॥೧॥

ಯತ್ತು ಕಾರಣಮುತ್ಪತ್ತೇಃ ಸುವರ್ಣಸ್ಯೇಹ ಕೀರ್ತಿತಮ್ ।
ಸ ಕಥಂ ತಾರಕಃ ಪ್ರಾಪ್ತೋ ನಿಧನಂ ತದ್ ಬ್ರವೀಹಿ ಮೇ ॥೨॥

ಯುಧಿಷ್ಠಿರ– ಪಿತಾಮಹರಾದ ಬ್ರಹ್ಮದೇವರು ಶ್ರುತಿಗೆ ಅನುಸಾರವಾಗಿ ಸುವರ್ಣದಾನದ ವಿಧಿಯನ್ನು ಮತ್ತು ಸುವರ್ಣದಾನದ ಗುಣಗಳನ್ನು ಹೇಳಿದ್ದಾರೆ. ಆದರೆ ಸುವರ್ಣದ ಉತ್ಪತ್ತಿಗೆ ಕಾರಣವೆಂದು ಹೇಳಲಾದ ಆ ತಾರಕಾಸುರನು ಹೇಗೆ ನಿಧನವನ್ನು ಹೊಂದಿದನೆಂದು ನನಗೆ ಹೇಳು.

ಉಕ್ತಃ ಸ ದೇವತಾನಾಂ ಹಿ ಅವಧ್ಯ ಇತಿ ಪಾರ್ಥಿವ ।
ನ ಚ ತಸ್ಯೇಹ ತೇ ಮೃತ್ಯುರ್ವಿಸ್ತರೇಣ ಪ್ರಕೀರ್ತಿತಃ ॥೩॥

ಏತದಿಚ್ಛಾಮ್ಯಹಂ ಶ್ರೋತುಂ ತತ್ತ್ವತಃ ಕುರುಕುಲೋದ್ವಹ ।
ಕಾರ್ತ್ತಿಕೇಯೇನ ತಾರಕವಧಂ ಪರಂ ಕೌತೂಹಲಂ ಹಿ ಮೇ ॥೪॥

ಎಲೈ ರಾಜನೇ, ಅವನು ದೇವತೆಗಳಿಂದ ಅವಧ್ಯನಾದವನು ಎಂದು ಹೇಳಿದೆ. ಆದರೆ ಅವನ ವಧೆಯನ್ನು ವಿಸ್ತಾರವಾಗಿ ಹೇಳಲಿಲ್ಲ. ಎಲೈ ಕುರುಕುಲೋದ್ವಹನೇ,

ತಾರಕವಧೆಯನ್ನು ಸಂಪೂರ್ಣವಾಗಿ ಕೇಳಲು ಬಯಸುತ್ತೇನೆ. ನನಗೆ ಈ ವಿಷಯದಲ್ಲಿ ಬಹಳ ಕುತೂಹಲವಿದೆ.

ಭೀಷ್ಮಃ

ವಿಪನ್ನಕೃತ್ಯಾ ರಾಜೇಂದ್ರ ದೇವತಾ ಋಷಯಸ್ತಥಾ ।
ಕೃತ್ತಿಕಾಶ್ಚೋದಯಾಮಾಸುರಪತ್ಯಭರಣಾಯ ವೈ ॥೫॥

ಭೀಷ್ಮ- ಎಲೈ ರಾಜೇಂದ್ರನೇ, ತಮ್ಮ ಕಾರ್ಯವು ಕೆಡುತ್ತಿರಲು ಆಗ ದೇವತೆಗಳು ಮತ್ತು ಋಷಿಗಳು ಕೃತ್ತಿಕೆಯರನ್ನು ಆ ಗರ್ಭವನ್ನು ಪೋಷಿಸುವಂತೆ ಒತ್ತಾಯಪಡಿಸಿದರು.

ನ ದೇವತಾನಾಂ ಕಾಚಿದ್ಧಿ ಸಮರ್ಥಾ ಜಾತವೇದಸಃ ।
ಏಕಾಪಿ ಶಕ್ತಾ ತಂ ಗರ್ಭಂ ಸಂಧಾರಯಿತುಮೋಜಸಾ ॥೬॥

ಅಗ್ನಿಯಿಂದ ಉಂಟಾದ ಆ ಗರ್ಭವನ್ನು ತಮ್ಮ ಸಾಮರ್ಥ್ಯದಿಂದ ಧರಿಸಲು ದೇವತೆಗಳಲ್ಲಿ ಒಬ್ಬರೂ ಸಮರ್ಥರಾಗಲಿಲ್ಲ.

ಷಣ್ಣಾಂ ತಾಸಾಂ ತತಃ ಪ್ರೀತಃ ಪಾವಕೋ ಗರ್ಭಧಾರಣಾತ್ ।
ಸ್ವೇನ ತೇಜೋವಿಸರ್ಗೇಣ ವೀರ್ಯೇಣ ಪರಮೇಣ ಚ ॥೭॥

ತನ್ನ ತೇಜಸ್ಸಿನಿಂದಲೂ, ಶ್ರೇಷ್ಠವಾದ ಪರಾಕ್ರಮದಿಂದಲೂ ಉಂಟಾದ ಆ ಗರ್ಭವನ್ನು ಧರಿಸಲು ಕೃತ್ತಿಕೆಯರು ಒಪ್ಪಿದುದರಿಂದ ಅಗ್ನಿಯು ಅವರಿಗೆ ಪ್ರಸನ್ನನಾದನು.

ತಾಸ್ತು ಷಟ್‌ಕೃತ್ತಿಕಾ ಗರ್ಭಂ ಪುಪುಷುರ್ಜಾತವೇದಸಃ ।
ಷಟ್‌ಸು ವರ್ತ್ಮಸು ತೇಜೋಽಗ್ನೇಃ ಸಕಲಂ ನಿಹಿತಂ ಪ್ರಭೋ ॥೮॥

ಆ ಷಟ್‌ಕೃತ್ತಿಕೆಯರು ಅಗ್ನಿಯ ಗರ್ಭವನ್ನು ಪೋಷಿಸಿದರು. ಎಲೈ ಪ್ರಭುವೇ, ಅಗ್ನಿಯ ಪೂರ್ಣವಾದ ತೇಜಸ್ಸು ಆರು ಮಾರ್ಗಗಳಲ್ಲಿ ಸ್ಥಾಪಿತವಾಯಿತು.

ತತಸ್ತಾ ವರ್ಧಮಾನಸ್ಯ ಕುಮಾರಸ್ಯ ಮಹಾತ್ಮನಃ ।
ತೇಜಸಾಽಭಿಪರೀತಾಂಗ್ಯೋ ನ ಕ್ವಚಿಚ್ಛರ್ಮ ಲೇಭಿರೇ ॥೯॥

ಮಹಾತ್ಮನಾದ ಅಗ್ನಿಯ ಗರ್ಭನಾದ ಕುಮಾರನು ಹಾಗೆಯೇ ಗರ್ಭದಲ್ಲಿ ಬೆಳೆಯುತ್ತಿರಲು ಅವನ ತೇಜಸ್ಸಿನಿಂದ ತಪ್ತವಾದ ಶರೀರವುಳ್ಳ ಕೃತ್ತಿಕೆಯರು ಸುಖವನ್ನು ಹೊಂದಲಿಲ್ಲ.

ತತಸ್ತೇಜಃಪರೀತಾಂಗ್ಯಃ ಸರ್ವಾಃ ಕಾಲ ಉಪಸ್ಥಿತೇ ।
ಸಮಂ ಗರ್ಭಂ ಸುಷುವಿರೇ ಕೃತ್ತಿಕಾಸ್ತಾ ನರರ್ಷಭ ॥೧೦॥

ಎಲೈ ನರರ್ಷಭನೇ, ಆ ಕುಮಾರನ ತೇಜಸ್ಸು ಹಾಗೆ ತಾಪಗೊಳಿಸುತ್ತಿರಲು ಆ ಕೃತ್ತಿಕೆಯರೆಲ್ಲರೂ ಏಕಕಾಲದಲ್ಲಿ ಗರ್ಭವನ್ನು ಪ್ರಸವಿಸಿದರು.

ತತಸ್ತಂ ಷಡಧಿಷ್ಠಾನಂ ಗರ್ಭಮೇಕತ್ವಮಾಗತಮ್ ।
ಪೃಥಿವೀ ಪ್ರತಿಜಗ್ರಾಹ ಕೃತ್ತಿಕಾನಾಂ ಸಮೀಪತಃ ॥೧೧॥

ಆರು ಅಧಿಷ್ಠಾನದಲ್ಲಿದ್ದ ಆ ಗರ್ಭವು ಜನಿಸಿ ಹೊರಗೆ ಬಂದು ಒಂದೇ ಮೂರ್ತಿಯಾಯಿತು. ಆಗ ಕೃತ್ತಿಕೆಯರ ಸಮೀಪದಿಂದ ಪೃಥಿವಿಯು ಆ ಶರೀರವನ್ನು ತೆಗೆದುಕೊಂಡಳು.

ಸ ಗರ್ಭೋ ದಿವ್ಯಸಂಸ್ಥಾನೋ ದೀಪ್ತಿಮಾನ್ ಪಾವಕಪ್ರಭಃ ।
ದಿವ್ಯಂ ಶರವಣಂ ಪ್ರಾಪ್ಯ ವವೃಧೇ ಪ್ರಿಯದರ್ಶನಃ ॥೧೨॥

ಅಗ್ನಿಯ ಪ್ರಭೆಯನ್ನು ಹೊಂದಿದ್ದ, ಕಾಂತಿಯುಕ್ತವಾದ, ದಿವ್ಯವಾದ ಆಕಾರವನ್ನು ಹೊಂದಿದ್ದ ಆ ಗರ್ಭವು (ಶಿಶುವು) ದಿವ್ಯವಾದ ಶರವಣಕ್ಕೆ ಹೋಗಿ ನೋಡಲು ಮನೋಹರವಾಗಿ ಬೆಳೆಯಿತು.

ದದೃಶುಃ ಕೃತ್ತಿಕಾಸ್ತಂ ತು ಬಾಲಂ ವಹ್ನಿಸಮದ್ಯುತಿಮ್ ।
ಜಾತಸ್ನೇಹಾಶ್ಚ ಸೌಹಾರ್ದಾತ್ ಪುಪುಷುಃ ಸ್ತನ್ಯವಿಸ್ರವೈಃ ॥೧೩॥

ಅಗ್ನಿಗೆ ಸಮಾನವಾದ ಕಾಂತಿಯುಳ್ಳ ಆ ಶಿಶುವನ್ನು ಕೃತ್ತಿಕೆಯರು ನೋಡಿದರು. ಶಿಶುವಿನಲ್ಲಿ ಸ್ನೇಹವುಂಟಾಗಿ ಅವರು ತಮ್ಮ ಸ್ತನ್ಯಕ್ಷೀರದಿಂದ ಅದನ್ನು ಪೋಷಿಸಿದರು.

ಅಭವತ್ ಕಾರ್ತ್ತಿಕೇಯಃ ಸ ತ್ರೈಲೋಕ್ಯೇ ಸಚರಾಚರೇ ।
ಸ್ಕನ್ನತ್ವಾತ್ ಸ್ಕಂದತಾಂ ಚಾಪ ಗುಹಾವಾಸಾದ್ ಗುಹೋऽಭವತ್ ॥೧೪॥

ಆದ್ದರಿಂದ ಅವನು ಚರಾಚರ ಸಹಿತವಾದ ಮೂರುಲೋಕಗಳಲ್ಲಿ ಕಾರ್ತ್ತಿಕೇಯ ಎಂದು ಹೆಸರನ್ನು ಹೊಂದಿದನು. ವೀರ್ಯವು ಜಾರಿ ಗರ್ಭರೂಪವನ್ನು ಪಡೆದುದರಿಂದ ಸ್ಕಂದನೆನಿಸಿದನು. ಗುಹೆಯಲ್ಲಿ ವಾಸ ಮಾಡಿದುದರಿಂದ ಗುಹ ಎನಿಸಿಕೊಂಡನು.

ತತೋ ದೇವಾಸ್ತ್ರಯಸ್ತ್ರಿಂದ್ ದಿಶಶ್ಚ ಸದಿಗೀಶ್ವರಾಃ ।
ರುದ್ರೋ ಧಾತಾ ಚ ವಿಷ್ಣುಶ್ಚ ಯಜ್ಞಃ ಪೂಷಾऽರ್ಯಮಾ ಭಗಃ ॥೧೫॥

ಅಂಶೋ ಮಿತ್ರಶ್ಚ ಸಾಧ್ಯಾಶ್ಚ ವಸವೋ ವಾಸವೋऽಶ್ವಿನೌ ।
ಆಪೋ ವಾಯುರ್ನಭಶ್ಚಂದ್ರೋ ನಕ್ಷತ್ರಾಣಿ ಗ್ರಹಾ ರವಿಃ ॥೧೬॥

ಪೃಥಗ್ಭೂತಾನಿ ಚಾನ್ಯಾನಿ ಯಾನಿ ದೇವಗಣಾನಿ ವೈ ।
ಆಜಗ್ಮುಸ್ತತ್ರ ತಂ ದ್ರಷ್ಟುಂ ಕುಮಾರಂ ಜ್ವಲನಾತ್ಮಜಮ್ ।
ಋಷಯಸ್ತುಷ್ಟುವುಶ್ಚೈವ ಗಂಧರ್ವಾಶ್ಚ ಜಗುಸ್ತಥಾ ॥೧೭॥

ಆಗ ಮೂವತ್ಮೂರು ದೇವತೆಗಳು, ದಿಕ್ಕುಗಳು, ದಿಕ್ಪಾಲಕರು, ರುದ್ರ, ಬ್ರಹ್ಮ, ವಿಷ್ಣು, ಯಜ್ಞ, ಪೂಷ, ಅರ್ಯಮಾ, ಭಗ, ವರುಣ, ಮಿತ್ರ, ಸಾಧ್ಯರು, ವಸುಗಳು, ಇಂದ್ರ, ಅಶ್ವಿನಿಗಳು, ಜಲ, ವಾಯು, ಆಕಾಶ, ಚಂದ್ರ, ನಕ್ಷತ್ರಗಳು, ಗ್ರಹಗಳು, ಸೂರ್ಯ ಮತ್ತು ಉಳಿದ ಬೇರೆ ಬೇರೆ ದೇವತಾ ಗಣಗಳು ಅಗ್ನಿಪುತ್ರನಾದ ಆ ಕುಮಾರನನ್ನು ನೋಡಲು ಅಲ್ಲಿಗೆ ಬಂದರು. ಋಷಿಗಳು ಅಲ್ಲಿ ಸ್ತೋತ್ರವನ್ನು ಮಾಡಿದರು. ಗಂಧರ್ವರು ಗಾನ ಮಾಡಿದರು.

ಷಡಾನನಂ ಕುಮಾರಂ ತಂ ದ್ವಿಷಡಕ್ಷಂ ದ್ವಿಜಪ್ರಿಯಮ್ ।
ಪೀನಾಂಸಂ ದ್ವಾದಶಭುಜಂ ಪಾವಕಾದಿತ್ಯವರ್ಚಸಮ್ ॥೧೮॥

ಶಯಾನಂ ಶರಗುಲ್ಮಸ್ಥಂ ದೃಷ್ಟ್ವಾ ದೇವಾಃ ಸಹರ್ಷಿಭಿಃ ।
ಲೇಭಿರೇ ಪರಮಂ ಹರ್ಷಂ ಮೇನಿರೇ ಚಾಸುರಂ ಹತಮ್ ॥೧೯॥

ಆರು ಮುಖಗಳು, ಹನ್ನೆರಡು ಕಣ್ಣುಗಳು, ಎತ್ತರವಾದ ವಕ್ಷಸ್ಥಲ, ಹನ್ನೆರಡು ಭುಜಗಳು ಇವುಗಳನ್ನು ಹೊಂದಿದ್ದ ದ್ವಿಜಪ್ರಿಯನೂ, ಸೂರ್ಯಾಗ್ನಿ ಪ್ರಭೆಯುಳ್ಳವನೂ ಆದ, ಶರ ಎಂಬ ತೃಣಗಳ ಪೊದೆಯಲ್ಲಿ ಮಲಗಿರುವ ಕುಮಾರನನ್ನು ದೇವತೆಗಳು ಋಷಿಗಳ ಜೊತೆಯಲ್ಲಿ ನೋಡಿ ಪರಮಹರ್ಷವನ್ನು ತಾಳಿ ತಾರಕಾಸುರನು ಹತನಾದನು ಎಂದು ತಿಳಿದರು.

ತತೋ ದೇವಾಃ ಪ್ರಿಯಾಣ್ಯಸ್ಯ ಸರ್ವ ಏವ ಸಮಾಚರನ್ ।
ಕ್ರೀಡತಃ ಕ್ರೀಡನೀಯಾನಿ ದದುಃ ಪಕ್ಷಿಗಣಾಂಶ್ಚ ಹ ॥೨೦॥

ಅನಂತರ ಎಲ್ಲ ದೇವತೆಗಳೂ ಆ ಕುಮಾರನಿಗೆ ಪ್ರಿಯವನ್ನುಂಟು ಮಾಡಿದರು. ಆಟವಾಡುವ ಅವನಿಗೆ ಕ್ರೀಡಾಸಾಮಗ್ರಿಗಳನ್ನು ಮತ್ತು ಪಕ್ಷಿಗಣಗಳನ್ನು ಕೊಟ್ಟರು.

ಸುಪರ್ಣೋಽಸ್ಯ ದದೌ ಪತ್ರಂ ಮಯೂರಂ ಚಿತ್ರಬರ್ಹಿಣಮ್ ।
ರಾಕ್ಷಸಾಶ್ಚ ದದುಸ್ತಸ್ಮೈ ವರಾಹಮಹಿಷಾವುಭೌ ॥೨೧॥

ಗರುಡನು ವಿಚಿತ್ರವಾದ ಗರಿಗಳನ್ನು ಹೊಂದಿದ್ದ ಮಯೂರ ಪಕ್ಷಿಯನ್ನು ಕೊಟ್ಟನು. ರಾಕ್ಷಸರು ಅವನಿಗೆ ವರಾಹ-ಮಹಿಷಗಳನ್ನು ಕೊಟ್ಟರು.

ಕುಕ್ಕುಟಂ ಚಾಗ್ನಿಸಂಕಾಶಂ ಪ್ರದದೌ ವರುಣಃ ಸ್ವಯಮ್ ।
ಚಂದ್ರಮಾಃ ಪ್ರದದೌ ಮೇಷಮಾದಿತ್ಯೋ ರುಚಿರಾಂ ಪ್ರಭಾಮ್ ॥೨೨॥

ವರುಣನು ಅಗ್ನಿಯಂತೆ ಇದ್ದ ಕೆಂಪುಬಣ್ಣದ ಕುಕ್ಕುಟವನ್ನು ತಾನೇ ಕೊಟ್ಟನು. ಚಂದ್ರನು ಟಗರನ್ನೂ, ಸೂರ್ಯನು ದಿವ್ಯಕಾಂತಿಯನ್ನೂ ಕೊಟ್ಟನು.

ಗವಾಂ ಮಾತಾ ಚ ಗಾ ದೇವೀ ದದೌ ಶತಸಹಸ್ರಶಃ ।
ಛಾಗಮಗ್ನಿರ್ಗುಣೋಪೇತಮಿಲಾ(ಳಾ) ಪುಷ್ಪಫಲಂ ಬಹು ॥೨೩॥

ಗೋಮಾತೆಯಾದ ಸುರಭಿದೇವಿಯು ನೂರಾರು ಸಾವಿರಾರು ಸಂಖ್ಯೆಯಲ್ಲಿ ಗೋವುಗಳನ್ನು ಕೊಟ್ಟಳು. ಅಗ್ನಿಯು ಒಳ್ಳೆಯ ಗುಣದಿಂದ ಕೂಡಿದ ಹೋತವನ್ನು ಕೊಟ್ಟನು. ಭೂಮಿಯು ಬಹಳ ಪುಷ್ಪ-ಫಲಗಳನ್ನು ನೀಡಿದಳು.

ಸುಧನ್ವಾ ಶಕಟಂ ಚೈವ ರಥಂ ಚಾಮಿತಕೂಬರಮ್ ।
ವರುಣೋ ವಾರಣಾನ್ ದಿವ್ಯಾನ್ ಭುಜಂಗಾನ್ ಪ್ರದದೌ ಶುಭಾನ್ ।
ಸಿಂಹಾನ್ ಸುರೇಂದ್ರೋ ವ್ಯಾಘ್ರಾಂಶ್ಚ ದ್ವೀಪಿನೋನ್ಯಾಂಶ್ಚ ದಂಷ್ಟ್ರಿಣಃ ॥

ಸುಧನ್ವನು ಗಾಡಿಯನ್ನೂ ಮತ್ತು ವಿಸ್ತಾರವಾದ ಕೂಬರವುಳ್ಳ ರಥವನ್ನೂ ಕೊಟ್ಟನು. ವರುಣನು ದಿವ್ಯವಾದ ಗಜಗಳನ್ನೂ ಮತ್ತು ಶುಭವಾದ ಸರ್ಪಗಳನ್ನೂ ಕೊಟ್ಟನು. ಸುರೇಂದ್ರನು ಸಿಂಹಗಳನ್ನೂ, ವ್ಯಾಘ್ರಗಳನ್ನೂ, ಚಿರತೆಗಳನ್ನೂ ಉಳಿದ ದಂಷ್ಟ್ರವುಳ್ಳ ಪ್ರಾಣಿಗಳನ್ನೂ ಕೊಟ್ಟನು.

ಶ್ವಾಪದಾಂಶ್ಚ ಬಹೂನ್ ಘೋರಾಂಶ್ಚತ್ರಾಣಿ ವಿವಿಧಾನಿ ಚ ।
ರಾಕ್ಷಸಾಸುರಸಂಘಾಶ್ಚ ಯೇಽನುಜಗ್ಮುಸ್ತಮೀಶ್ವರಮ್ ॥೨೫॥

ಪ್ರಭುವಾದ ಆ ಸ್ಕಂದನ ಬಳಿಗೆ ಬಂದ ಅಸುರ ರಾಕ್ಷಸ ಸಮೂಹಗಳು ಘೋರವೂ, ವಿಚಿತ್ರವೂ, ವಿವಿಧವೂ ಆದ ಅನೇಕವಾದ ಮಾಂಸಾಹಾರಿ ಪ್ರಾಣಿಗಳನ್ನು ಕೊಟ್ಟವು.

ವರ್ಧಮಾನಂ ತು ತಂ ದೃಷ್ಟ್ವಾ ಪ್ರಾರ್ಥಯಾಮಾಸ ತಾರಕಃ ।
ಉಪಾಯೈರ್ಬಹುಭಿರ್ಹಂತುಂ ನಾಶಕಚ್ಚಾಪಿ ತಂ ವಿಭುಮ್ ॥೨೬॥

ಅವನು ಬೆಳೆಯುತ್ತಿರುವುದನ್ನು ನೋಡಿ ತಾರಕನು ಅನೇಕ ಉಪಾಯಗಳಿಂದ ಅವನನ್ನು ಕೊಲ್ಲಲು ಪ್ರಯತ್ನಿಸಿದನು. ಆದರೆ ವಿಭುವಾದ ಅವನನ್ನು ಕೊಲ್ಲಲು ಸಮರ್ಥನಾಗಲಿಲ್ಲ.

ಸೇನಾಪತ್ಯೇನ ತಂ ದೇವಾಃ ಪೂಜಯಿತ್ವಾ ಗುಹಾಲಯಮ್ ।
ಶಶಂಸುರ್ವಿಪ್ರಕಾರಂ ತಂ ತಸ್ಮೈ ತಾರಕಕಾರಿತಮ್ ॥೨೭॥

ದೇವತೆಗಳು ಗುಹಾವಾಸಿಯಾದ ಸ್ಕಂದನನ್ನು ಸೇನಾಪತ್ಯವನ್ನು ಕೊಟ್ಟು ಪೂಜಿಸಿ ಅವನಿಗೆ ತಾರಕನು ಮಾಡಿದ ಅಪಚಾರಗಳನ್ನು ತಿಳಿಸಿದರು.

ಸ ವಿವೃದ್ಧೋ ಮಹಾವೀರ್ಯೋ ದೇವಸೇನಾಪತಿಃ ಪ್ರಭುಃ ।
ಜಘಾನಾಮೋಘಯಾ ಶಕ್ತ್ಯಾ ದಾನವಂ ತಾರಕಂ ಗುಹಃ ॥೨೮॥

ದೇವಸೇನಾಪತಿಯೂ, ಪ್ರಭುವೂ, ಮಹಾಪರಾಕ್ರಮಶಾಲಿಯೂ ಆದ ಗುಹನು ಚೆನ್ನಾಗಿ ಬೆಳೆದು ಅಮೋಘವಾದ ಶಕ್ತಿಯಿಂದ ತಾರಕಾಸುರನನ್ನು ಸಂಹಾರ ಮಾಡಿದನು.

ತೇನ ತಸ್ಮಿನ್ ಕುಮಾರೇಣ ಕ್ರೀಡತಾ ನಿಹತೇऽಸುರೇ ।
ಸುರೇಂದ್ರಃ ಸ್ಥಾಪಿತೋ ರಾಜ್ಯೇ ದೇವಾನಾಂ ಪುನರೀಶ್ವರಃ ॥೨೯॥

ಆ ಕುಮಾರನಿಂದ (ಗುಹನಿಂದ) ಕ್ರೀಡೆಯಿಂದ ತಾರಕಾಸುರನು ಕೊಲ್ಲಲ್ಪಡುತ್ತಿರಲು ಸುರೇಂದ್ರನು ಪುನಃ ತನ್ನ ರಾಜ್ಯದಲ್ಲಿ ಪ್ರತಿಷ್ಠಿತನಾಗಿ ದೇವತೆಗಳ ಒಡೆಯನಾದನು.

ಸ ಸೇನಾಪತಿರೇವಾಥ ಬಭೌ ಸ್ಕಂದಃ ಪ್ರತಾಪವಾನ್ ।
ಈಶೋ ಗೋಪ್ತಾ ಚ ದೇವಾನಾಂ ಪ್ರಿಯಕೃಚ್ಚಂಕರಸ್ಯ ಚ ॥೩೦॥

ಆ ಪ್ರತಾಪಶಾಲಿಯಾದ ಗುಹನಾದರೂ ಸೇನಾಪತಿಯಾಗಿಯೇ ಮುಂದುವರೆದು ದೇವತೆಗಳಿಗೆ ಪ್ರಭುವೂ, ದೇವತೆಗಳಿಗೆ ರಕ್ಷಕನೂ ಮತ್ತು ಶಂಕರನಿಗೆ ಪ್ರಿಯಕಾರಿಯೂ ಆದನು.

ಹಿರಣ್ಯಮೂರ್ತಿರ್ಭಗವಾನೇಷ ಏವ ಚ ಪಾವಕಿಃ ।
ಸದಾಕುಮಾರೋ ದೇವಾನಾಂ ಸೇನಾಪತ್ಯಮವಾಪ್ತವಾನ್ ॥೩೧॥

ಅಗ್ನಿಪುತ್ರನಾದ ಪೂಜ್ಯನಾದ ಗುಹನು ಸುವರ್ಣಮೂರ್ತಿಯಾದವನು. ಸದಾಕುಮಾರನಾದ ಅವನು ದೇವತೆಗಳಿಗೆ ಸೇನಾಪತಿಯಾದನು.

ತಸ್ಮಾತ್ ಸುವರ್ಣಂ ಮಂಗಲ್ಯಂ ರತ್ನಮಕ್ಷಯ್ಯಮುತ್ತಮಮ್ ।
ಸಹಜಂ ಕಾರ್ತಿಕೇಯಸ್ಯ ವಹ್ನೇಸ್ತೇಜಃ ಪರಂ ಮತಮ್ ॥೩೨॥

ಆದ್ದರಿಂದ ಸುವರ್ಣವು ಮಂಗಳಪ್ರದವಾದುದು. ಶ್ರೇಷ್ಠವಾದ ಅಕ್ಷಯವಾದ ರತ್ನರೂಪವಾದುದು. ವಹ್ನಿಯ ತೇಜೋರೂಪವಾದುದು ಮತ್ತು ಗುಹನ ಜೊತೆಯಲ್ಲಿಯೇ ಜನಿಸಿದುದು.

ಏವಂ ರಾಮಾಯ ಕೌರವ್ಯ ವಸಿಷ್ಠೋಽಕಥಯತ್ ಪುರಾ ।
ತಸ್ಮಾತ್ ಸುವರ್ಣದಾನಾಯ ಪ್ರಯತಸ್ವ ನರಾಧಿಪ ॥೩೩॥

ಎಲೈ ಕೌರವ್ಯನೇ (ಯುಧಿಷ್ಠಿರನೇ), ಹೀಗೆ ಹಿಂದೆ ವಸಿಷ್ಠರು ಪರಶುರಾಮರಿಗೆ ಹೇಳಿದರು. ಎಲೈ ನರಾಧಿಪನೇ, ಆದ್ದರಿಂದ ನೀನೂ ಸುವರ್ಣದಾನವನ್ನು ಮಾಡಲು ಪ್ರಯತ್ನಪಡು.

ರಾಮಃ ಸುವರ್ಣಂ ದತ್ತ್ವಾ ಹಿ ವಿಮುಕ್ತಃ ಸರ್ವಕಿಲ್ಬಿಷೈಃ ।
ತ್ರಿವಿಷ್ಟಪೇ ಮಹತ್ಸ್ಥಾನಮವಾಪಾಸುಲಭಂ ನರೈಃ ॥೩೪॥

ಪರಶುರಾಮರು ಸುವರ್ಣದಾನವನ್ನು ಮಾಡಿ ಎಲ್ಲ ದೋಷಗಳಿಂದಲೂ ನಿರ್ಮುಕ್ತರಾಗಿ ಸ್ವರ್ಗಲೋಕದಲ್ಲಿ ಮನುಷ್ಯರು ಪಡೆಯಲು ಸಾಧ್ಯವಿಲ್ಲದ ಶ್ರೇಷ್ಠವಾದ ಸ್ಥಾನವನ್ನು ಪಡೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ತಾರಕವಧೋ ನಾಮ
ಅಷ್ಟವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ಶ್ರಾದ್ಧಕಲ್ಪ

ಯುಧಿಷ್ಠಿರಃ

ಚಾತುರ್ವರ್ಣ್ಯಸ್ಯ ಧರ್ಮಾತ್ಮನ್ ಧರ್ಮಃ ಪ್ರೋಕ್ತಸ್ತ್ವಯಾಽನಘ ।
ತಥೈವ ಮೇ ಶ್ರಾದ್ಧವಿಧಿಂ ಕೃತ್ಸ್ನಂ ಪ್ರಬ್ರೂಹಿ ಪಾರ್ಥಿವ ॥೧॥

ಯುಧಿಷ್ಠಿರ– ಎಲೈ ಧರ್ಮಾತ್ಮನೇ, ಅನಘನೇ, ನೀನು ನಾಲ್ಕುವರ್ಣಗಳ ಧರ್ಮವನ್ನು ಹೇಳಿದ್ದೀಯೆ. ಎಲೈ ಧರ್ಮಾತ್ಮನೇ, ಹಾಗೆ ನನಗೆ ಸಮಗ್ರವಾದ ಶ್ರಾದ್ಧವಿಧಿಯನ್ನು ಹೇಳು.

ವೈಶಂಪಾಯನಃ

ಯುಧಿಷ್ಠಿರೇಣೈವಮುಕ್ತೋ ಭೀಷ್ಮಃ ಶಾಂತನವಸ್ತದಾ ।
ಇಮಂ ಶ್ರಾದ್ಧವಿಧಿಂ ಕೃತ್ಸ್ನಂ ಪ್ರವಕ್ತುಮುಪಚಕ್ರಮೇ ॥೨॥

ವೈಶಂಪಾಯನ– ಯುಧಿಷ್ಠಿರನಿಂದ ಹೀಗೆ ಹೇಳಲ್ಪಟ್ಟ ಶಂತನುಪುತ್ರರಾದ ಭೀಷ್ಮರು ಈ ಸಮಗ್ರವಾದ ಶ್ರಾದ್ಧವಿಧಿಯನ್ನು ಹೇಳಲು ಉಪಕ್ರಮಿಸಿದರು.

ಭೀಷ್ಮಃ

ಶೃಣುಷ್ವಾವಹಿತೋ ರಾಜನ್ ಶ್ರಾದ್ಧಕಲ್ಪಮಿಮಂ ಶುಭಮ್ ।
ಧನ್ಯಂ ಯಶಸ್ಯಂ ಪುತ್ರೀಯಂ ಪಿತೃಯಜ್ಞಂ ಪರಂತಪ ॥೩॥

ಭೀಷ್ಮ– ಎಲೈ ರಾಜನೇ, ಈ ಪವಿತ್ರವಾದ ಶ್ರಾದ್ಧಕಲ್ಪವನ್ನು ಅವಧಾನದಿಂದ ಕೇಳು. ಎಲೈ ಪರಂತಪನೇ, ಪಿತೃಯಜ್ಞವು ಧನಪ್ರದವಾದುದು, ಕೀರ್ತಿಪ್ರದವಾದುದು ಮತ್ತು ಪುತ್ರಪ್ರದವಾದುದು.

ದೇವಾಸುರಮನುಷ್ಯಾಣಾಂ ಗಂಧರ್ವೋರಗರಕ್ಷಸಾಮ್ ।
ಪಿಶಾಚಕಿನ್ನರಾಣಾಂ ಚ ಪೂಜ್ಯಾ ವೈ ಪಿತರಃ ಸದಾ ॥೪॥

ಪಿತೃಗಳು ದೇವಾಸುರ-ಮನುಷ್ಯರಿಗೂ, ಗಂಧರ್ವೋರಗ-ರಾಕ್ಷಸರಿಗೂ, ಪಿಶಾಚ-ಕಿನ್ನರರಿಗೂ ಯಾವಾಗಲೂ ಪೂಜ್ಯರಾದವರು.

ಪಿತೄನ್ ಪೂಜ್ಯಾದಿತಃ ಪಶ್ಚಾದ್ ದೇವಾನ್ ಸಂತರ್ಪಯಂತಿ ವೈ ।
ತಸ್ಮಾತ್ ಸರ್ವಪ್ರಯತ್ನೇನ ಪುರುಷಃ ಪೂಜಯೇತ್ ಸದಾ ॥೫॥

ಮೊದಲು ಪಿತೃಗಳನ್ನು ಪೂಜಿಸಿ ಅನಂತರ ದೇವತೆಗಳನ್ನು ತೃಪ್ತಿಪಡಿಸುತ್ತಾರೆ. ಆದ್ದರಿಂದ ಪುರುಷನು ಸರ್ವಪ್ರಯತ್ನದಿಂದ ಯಾವಾಗಲೂ ಪಿತೃಗಳನ್ನು ಪೂಜಿಸಬೇಕು.

ಅನ್ವಾಹಾರ್ಯಂ ಮಹಾರಾಜ ಪಿತೄಣಾಂ ಶ್ರಾದ್ಧಮುಚ್ಯತೇ ।
ತಚ್ಚಾಮಿಷೇಣ ವಿಧಿನಾ ವಿಧಿಃ ಪ್ರಥಮಕಲ್ಪಿತಃ ॥೬॥

ಎಲೈ ಮಹಾರಾಜನೇ, ಪಿತೃಗಳ ಶ್ರಾದ್ಧಕ್ಕೆ ಅನ್ವಾಹಾರ್ಯ ಎಂದು ಹೇಳುತ್ತಾರೆ. ಮಾಂಸವಿಧಿಯಿಂದ ಶ್ರಾದ್ಧವನ್ನು ಮಾಡುವುದು ಬಹಳ ಶ್ರೇಷ್ಠವಾದುದು.

ಸರ್ವೇಷ್ವಹಃಸು ಪ್ರೀಯಂತೇ ಕೃತೈಃ ಶ್ರಾದ್ಧೈಃ ಪಿತಾಮಹಾಃ ।
ಪ್ರವಕ್ಷ್ಯಾಮಿ ತು ತೇ ಸರ್ವಾಂಸ್ತಿಥ್ಯಾಂ ತಿಥ್ಯಾಂ ಗುಣಾಗುಣಾನ್ ॥೭॥

ಯೇಷ್ವಹಃಸು ಕೃತೈಃ ಶ್ರಾದ್ಧೈರ್ಯತ್ಫಲಂ ಪ್ರಾಪ್ಯತೇಽನಘ ।
ತತ್ಸರ್ವಂ ಕೀರ್ತಯಿಷ್ಯಾಮಿ ಯಥಾವತ್ ತನ್ನಿಬೋಧ ಮೇ ॥೮॥

ಪಿತಾಮಹರು ಎಲ್ಲ ದಿನಗಳಲ್ಲಿಯೂ ಮಾಡಿದ ಶ್ರಾದ್ಧಗಳಿಂದ ಸಂತೋಷ ಪಡುತ್ತಾರೆ. ನಾನು ಒಂದೊಂದು ತಿಥಿಯಲ್ಲೂ ಮಾಡುವ ಶ್ರಾದ್ಧಗಳಿಗೆ ಗುಣ-ದೋಷಗಳನ್ನು ಹೇಳುವೆನು. ಎಲೈ ಅನಘನೇ, ಯಾವ ದಿನದಲ್ಲಿ ಮಾಡಿದ ಶ್ರಾದ್ಧಕ್ಕೆ ಏನು ಫಲವೆಂದು ಎಲ್ಲವನ್ನೂ ನಾನು ಸರಿಯಾಗಿ ಹೇಳುವೆನು ಅದನ್ನು ಕೇಳು.

ಪಿತೄನರ್ಚ್ಯ ಪ್ರತಿಪದಿ ಪ್ರಾಪ್ನುಯಾತ್ ಸ್ವಗೃಹೇ ಸ್ತ್ರಿಯಃ ।
ಅಭಿರೂಪಪ್ರಜಾಯಿನ್ಯೋ ದರ್ಶನೀಯಾ ಬಹುಪ್ರಜಾಃ ॥೯॥

ಪಾಡ್ಯದ ದಿನದಂದು ಪಿತೃಗಳನ್ನು ಪೂಜಿಸಿದರೆ ತನ್ನ ಗೃಹದಲ್ಲಿ ಸುಂದರವಾದ ಪ್ರಜೆಗಳನ್ನು ಪಡೆಯುವ, ಅನೇಕ ಪುತ್ರರನ್ನು ಹೊಂದುವ, ಒಳ್ಳೆಯ ಸ್ತ್ರೀಯರನ್ನು ಪಡೆಯುವನು.

ಸ್ತ್ರಿಯೋ ದ್ವಿತೀಯಾಂ ಜಾಯಂತೇ ತೃತೀಯಾಯಾಂ ತು ವಂದಿನಃ ।
ಚತುರ್ಥ್ಯಾಂ ಕ್ಷುದ್ರಪಶವೋ ಭವಂತಿ ಬಹವೋ ಗೃಹೇ ॥೧೦॥

ದ್ವಿತೀಯಾ ತಿಥಿಯ ಶ್ರಾದ್ಧದಿಂದ ಪುತ್ರಿಯರೂ, ತೃತೀಯಾ ಶ್ರಾದ್ಧದಿಂದ ವಂದಿಗಳೂ ಉಂಟಾಗುತ್ತಾರೆ. ಚತುರ್ಥೀ ಶ್ರಾದ್ಧದಿಂದ ಗೃಹದಲ್ಲಿ ಅನೇಕ ಕ್ಷುದ್ರಪಶುಗಳೂ ಉಂಟಾಗುತ್ತವೆ.

ಪಂಚಮ್ಯಾಂ ಬಹವಃ ಪುತ್ರಾ ಜಾಯಂತೇ ಕುರ್ವತಾಂ ನೃಪ ।
ಕುರ್ವಾಣಾಸ್ತು ನರಾಃ ಷಷ್ಠ್ಯಾಂ ಭವಂತಿ ದ್ಯುತಿಭಾಗಿನಃ ॥೧೧॥

ಎಲೈ ರಾಜನೇ, ಪಂಚಮಿಯಲ್ಲಿ ಶ್ರಾದ್ಧ ಮಾಡುವವರಿಗೆ ಅನೇಕ ಪುತ್ರರು ಜನಿಸುತ್ತಾರೆ. ಷಷ್ಠಿಯಲ್ಲಿ ಶ್ರಾದ್ಧವನ್ನು ಮಾಡುವವರು ಕಾಂತಿಯುಕ್ತರಾಗುತ್ತಾರೆ.

ಕೃಷಿಭಾಗೀ ಭವೇಚ್ಛ್ರಾದ್ಧಂ ಕುರ್ವಾಣಃ ಸಪ್ತಮೀಂ ನೃಪ ।
ಅಷ್ಟಮ್ಯಾಂ ತು ಪ್ರಕುರ್ವಾಣೋ ವಾಣಿಜ್ಯೇ ಲಾಭಮಾಪ್ನುಯಾತ್ ॥

ಸಪ್ತಮಿಯಂದು ಶ್ರಾದ್ಧವನ್ನು ಮಾಡುವವನು ಕೃಷಿನಿರತನಾಗುತ್ತಾನೆ. ಅಷ್ಟಮಿಯಂದು ಶ್ರಾದ್ಧ ಮಾಡಿದರೆ ವ್ಯಾಪಾರದಲ್ಲಿ ಲಾಭವುಂಟಾಗುವುದು.

ನವಮ್ಯಾಂ ಕುರ್ವತಃ ಶ್ರಾದ್ಧಂ ಭವತ್ಯೇಕಶಫಫಲಂ ಬಹು ।
ವಿವರ್ಧಂತೇ ತು ದಶಮೀಂ ಗಾವಃ ಶ್ರಾದ್ಧಾನಿ ಕುರ್ವತಃ ॥೧೩॥

ನವಮಿಯಲ್ಲಿ ಶ್ರಾದ್ಧ ಮಾಡಿದರೆ ಅವನ ಮನೆಯಲ್ಲಿ ಒಂದು ಗೊರಸಿನ ಅನೇಕ ಪ್ರಾಣಿಗಳು ಉಂಟಾಗುತ್ತವೆ. ದಶಮಿಯಂದು ಶ್ರಾದ್ಧವನ್ನು ಮಾಡಿದವನಿಗೆ ಗೋವುಗಳು ಅಭಿವೃದ್ಧಿಯನ್ನು ಹೊಂದುತ್ತವೆ.

ಕುಪ್ಯಭಾಗೀ ಭವೇನ್ಮರ್ತ್ಯಃ ಕುರ್ವನ್ನೇಕಾದಶೀಂ ನೃಪ ।
ಬ್ರಹ್ಮವರ್ಚಸ್ವಿನಃ ಪುತ್ರಾ ಜಾಯಂತೇ ತಸ್ಯ ವೇಶ್ಮನಿ ॥೧೪॥

ಎಲೈ ರಾಜನೇ, (ವಿದ್ಧ) ಏಕಾದಶಿಯಂದು ಶ್ರಾದ್ಧ ಮಾಡುವವನಿಗೆ ವಸ್ತ್ರ-ಪಾತ್ರೆಗಳು ಲಭಿಸುತ್ತವೆ. ಅವನ ಮನೆಯಲ್ಲಿ ಬ್ರಹ್ಮವರ್ಚಸ್ಸನ್ನು ಹೊಂದಿದ ಪುತ್ರರು ಜನಿಸುತ್ತಾರೆ (ಲಕ್ಷಾಲಂಕಾರ).

ದ್ವಾದಶ್ಯಾಮೀಹಮಾನಸ್ಯ ನಿತ್ಯಮೇವ ಪ್ರದೃಶ್ಯತೇ ।
ರಜತಂ ಬಹು ಚಿತ್ರಂ ಚ ಸುವರ್ಣಂ ಚ ಮನೋರಮಮ್ ॥೧೫॥

ದ್ವಾದಶಿಯಂದು ಶ್ರಾದ್ಧಮಾಡುವವನ ಮನೆಯಲ್ಲಿ ಬಹುವಿಧವಾದ, ವಿಚಿತ್ರವಾದ ಬೆಳ್ಳಿಯೂ ಮತ್ತು ಮನೋಹರವಾದ ಸುವರ್ಣವೂ ಕಂಡುಬರುತ್ತದೆ.

ಜ್ಞಾತೀನಾಂ ತು ಭವೇಚ್ಛ್ರೇಷ್ಠಃ ಕುರ್ವನ್ ಶ್ರಾದ್ಧಂ ತ್ರಯೋದಶೀಮ್ ।
ಅವಶ್ಯಂ ತು ಯುವಾನೋಽಸ್ಯ ಪ್ರಮೀಯಂತೇ ನರಾ ಗೃಹೇ ॥೧೬॥

ತ್ರಯೋದಶಿಯಂದು ಶ್ರಾದ್ಧ ಮಾಡುವವನು ತನ್ನ ಬಂಧುಗಳೊಂದಿಗೆ ಶ್ರೇಷ್ಠನಾಗುತ್ತಾನೆ. ಆದರೆ ಅವನ ಮನೆಯಲ್ಲಿ ಅವಶ್ಯವಾಗಿ ಯುವಕರು ಮೃತರಾಗುತ್ತಾರೆ.

ಯುದ್ಧಭಾಗೀ ಭವೇನ್ಮರ್ತ್ಯಃ ಶ್ರಾದ್ಧಂ ಕುರ್ವಂಶ್ಚತುರ್ದಶೀಮ್ ।
ಅಮಾವಾಸ್ಯಾಂ ತು ನಿವಪನ್ ಸರ್ವಾನ್ ಕಾಮಾನವಾಪ್ನುಯಾತ್ ॥

ಚತುರ್ದಶಿಯಂದು ಶ್ರಾದ್ಧ ಮಾಡುವವನು ಯುದ್ಧದಲ್ಲಿ ಭಾಗವಹಿಸುತ್ತಾನೆ. ಅಮಾವಾಸ್ಯೆಯಂದು ಶ್ರಾದ್ಧ ಮಾಡುವವನು ಎಲ್ಲಾ ಕಾಮಗಳನ್ನೂ ಹೊಂದುವನು.

ಕೃಷ್ಣಪಕ್ಷೇ ದಶಮ್ಯಾದೌ ವರ್ಜಯಿತ್ವಾ ಚತುರ್ದಶೀಮ್ ।
ಶ್ರಾದ್ಧಕರ್ಮಣಿ ತಿಥ್ಯಃ ಸ್ಯುಃ ಪ್ರಶಸ್ತಾ ನ ತಥೇತರಾಃ ॥೧೮॥

ಕೃಷ್ಣಪಕ್ಷದಲ್ಲಿ ಚತುರ್ದಶಿಯನ್ನು ಬಿಟ್ಟು ದಶಮ್ಯಾದಿ ತಿಥಿಗಳು ಶ್ರಾದ್ಧಕರ್ಮಕ್ಕೆ ಪ್ರಶಸ್ತವಾಗುತ್ತವೆ. ಇತರ ತಿಥಿಗಳು ಅಷ್ಟು ಪ್ರಶಸ್ತವಲ್ಲ.

ಯಥಾ ಚೈವಾಪರಃ ಪಕ್ಷಃ ಪೂರ್ವಪಕ್ಷಾದ್ ವಿಶಿಷ್ಯತೇ ।
ತಥಾ ಶ್ರಾದ್ಧಸ್ಯ ಪೂರ್ವಾಹ್ಣಾದಪರಾಹ್ಣೋ ವಿಶಿಷ್ಯತೇ ॥೧೯॥

ಹೇಗೆ ತಿಂಗಳಿನ ಪೂರ್ವಪಕ್ಷಕ್ಕಿಂತಲೂ ಅಪರಪಕ್ಷವು ಶ್ರೇಷ್ಠವೋ ಅದರಂತೆ ಪೂರ್ವಾಹ್ಣದಲ್ಲಿ ಮಾಡಿದ ಶ್ರಾದ್ಧಕಿಂತಲೂ ಅಪರಾಹ್ಣದಲ್ಲಿ ಮಾಡಿದ ಶ್ರಾದ್ಧವು ಶ್ರೇಷ್ಠವಾಗುತ್ತದೆ.

ಪೌರ್ಣಿಮಾಂತ ಮಾಸಗಳನ್ನು ಎಣಿಸುವಾಗ ಪ್ರತಿಯೊಂದು ಮಾಸದಲ್ಲಿಯೂ ಮೊದಲು ಕೃಷ್ಣಪಕ್ಷ ಅನಂತರ ಶುಕ್ಲಪಕ್ಷವು ಬರುತ್ತದೆ. ಸ್ನಾನಾದಿಗಳಿಗೆ ಮತ್ತು ಉತ್ತರ

ಭಾರತದಲ್ಲಿ ಎಷ್ಟೋ ಪಂಚಾಂಗದಲ್ಲಿ ಇದೇ ಕ್ರಮವನ್ನು ಅನುಸರಿಸುತ್ತಾರೆ. ಏಕಾದಶಿಗಳ ಮಹಿಮೆಗಳನ್ನು ಹೇಳುವಾಗಲೂ ಇದೇ ರೀತಿ ಅನುಸರಿಸಲ್ಪಡುತ್ತದೆ – ಲಕ್ಷಾಲಂಕಾರ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಶ್ರಾದ್ಧಹವಿಧಿನಿರೂಪಣಂ ನಾಮ
ಏಕೋನತ್ರಿಂಶತ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತನೆಯ ಅಧ್ಯಾಯ

ಶ್ರಾದ್ಧದಲ್ಲಿ ಹವಿಸ್ಸಿನ ನಿರೂಪಣೆ

ಯುಧಿಷ್ಠಿರಃ

ಕಿಂಸ್ವಿದ್ ದತ್ತಂ ಪಿತೃಭ್ಯೋ ವೈ ಭವತ್ಯಕ್ಷಯಮೀಶ್ವರ ।
ಕಿಂ ಹವಿಶ್ಚಿರರಾತ್ರಾಯ ಕಿಮಾನಂತ್ಯಾಯ ಕಲ್ಪತೇ ॥೧॥

ಯುಧಿಷ್ಠಿರ– ಎಲೈ ಪ್ರಭುವೇ, ಶ್ರಾದ್ಧದಲ್ಲಿ ಕೊಟ್ಟ ಯಾವ ಪದಾರ್ಥವು ಪಿತೃಗಳಿಗೆ ಅಕ್ಷಯವಾಗುತ್ತದೆ? ಯಾವ ಹವಿಸ್ಸು ಬಹುಕಾಲದವರೆಗೆ ಸಂತೋಷವನ್ನು ಕೊಡುತ್ತದೆ? ಯಾವುದು ಅನಂತವಾಗುತ್ತದೆ?

ಭೀಷ್ಮಃ

ಹವೀಂಷಿ ಶ್ರಾದ್ಧಕಲ್ಪೇ ತು ಯಾನಿ ಶ್ರಾದ್ಧವಿದೋ ವಿದುಃ ।
ತಾನಿ ಮೇ ಶೃಣು ಕಾಮ್ಯಾನಿ ಫಲಂ ಚೈಷಾಂ ಯುಧಿಷ್ಠಿರ ॥೨॥

ಭೀಷ್ಮ– ಎಲೈ ಯುಧಿಷ್ಠಿರನೇ, ಶ್ರಾದ್ಧವನ್ನು ತಿಳಿದಂತಹ ಶ್ರಾದ್ಧವಿಧಿಯ ಹವಿಸ್ಸುಗಳನ್ನು ಮತ್ತು ಅವುಗಳ ಫಲವನ್ನು ಹೇಳುತ್ತೇನೆ. ಅದನ್ನು ಕೇಳು.

ತಿಲೈರ್ವ್ರೀಹಿಯವೈರ್ಮಾಷೈರದ್ಭಿರ್ಮೂಲಫಲೈಸ್ತಥಾ ।
ದತ್ತೇನ ಮಾಸಂ ಪ್ರೀಯಂತೇ ಶ್ರಾದ್ಧೇನ ಪಿತರೋ ನೃಪ ॥೩॥

ಎಲೈ ರಾಜನೇ, ಎಳ್ಳು, ಬತ್ತ, ಗೋಧಿ, ಜಲ, ಗೆಡ್ಡೆ-ಗೆಣಸುಗಳು ಮತ್ತು ಫಲ ಇವುಗಳನ್ನು ಶ್ರಾದ್ಧದಲ್ಲಿ ಕೊಟ್ಟರೆ ಪಿತೃಗಳು ಒಂದು ತಿಂಗಳ ಕಾಲ ಸಂತೋಷದಿಂದ ಇರುತ್ತಾರೆ.

ವರ್ಧಮಾನತಿಲಂ ಶ್ರಾದ್ಧಮಕ್ಷಯಂ ಮನುರಬ್ರವೀತ್ ।
ಸರ್ವೇಷ್ವೇವ ತು ಭೋಜ್ಯೇಷು ತಿಲಾಃ ಪ್ರಾಧಾನ್ಯತಃ ಸ್ಮೃತಾಃ ॥೪॥

ಸಮೃದ್ಧವಾದ ಎಳ್ಳನ್ನು ಹೊಂದಿರುವ ಶ್ರಾದ್ಧವು ಅಕ್ಷಯಫಲವನ್ನು ಕೊಡುತ್ತದೆ ಎಂದು ಮನುವು ಹೇಳಿದ್ದಾನೆ. ಎಲ್ಲ ಭೋಜ್ಯಗಳಲ್ಲಿಯೂ ತಿಲವು ಪ್ರಧಾನವಾದುದು ಎಂದು ಹೇಳಲ್ಪಡುತ್ತದೆ.

ದ್ವೌ ಮಾಸೌ ತು ಭವೇತ್ ತೃಪ್ತಿರ್ಮತ್ಸ್ಯೈಃ ಪಿತೃಗಣಸ್ಯ ಹ ।
ತ್ರೀನ್ಮಾಸಾನಾವಿಕೇನಾಹುಶ್ಚಾತುರ್ಮಾಸ್ಯಂ ಶಶೇನ ತು ॥೫॥

ಮೀನುಗಳನ್ನು ಹವಿಸ್ಸಾಗಿ ಕೊಡುವುದರಿಂದ ಪಿತೃಗಳಿಗೆ ಎರಡು ತಿಂಗಳ ಕಾಲ ಸಂತೋಷವಿರುತ್ತದೆ. ಕುರಿಮಾಂಸದ ಹವಿಸ್ಸಿನಿಂದ ಮೂರುತಿಂಗಳು, ಮೊಲದ ಮಾಂಸದ ಹವಿಸ್ಸಿನಿಂದ ನಾಲ್ಕು ತಿಂಗಳು ಸಂತೋಷವುಂಟಾಗುತ್ತದೆ.

ಆಜೇನ ಮಾಸಾನ್ ಪ್ರೀಯಂತೇ ಪಂಚೈವ ಪಿತರೋ ನೃಪ ।
ವಾರಾಹೇಣ ತು ಷಣ್ಮಾಸಾನ್ ಸಪ್ತ ವೈ ಶಾಕುನೇನ ತು ॥೬॥

ಎಲೈ ರಾಜನೇ, ಆಡಿನ ಮಾಂಸದಿಂದ ಪಿತೃಗಳು ಐದುತಿಂಗಳು ಸಂತೋಷದಿಂದ ಇರುತ್ತಾರೆ. ಹಂದಿಮಾಂಸದಿಂದ ಆರುತಿಂಗಳುಗಳ ಕಾಲ ಮತ್ತು ಪಕ್ಷಿಯ ಮಾಂಸದಿಂದ ಏಳು ತಿಂಗಳುಗಳ ಕಾಲ ಸಂತೋಷದಿಂದ ಇರುತ್ತಾರೆ.

ಮಾಸಾನಷ್ಟೌ ಪಾರ್ಷತೇನ ರೌರವೇಣ ನವೈವ ತು ।
ಗವಯಸ್ಯ ತು ಮಾಂಸೇನ ತೃಪ್ತಿಃ ಸ್ಯಾದ್ ದಶಮಾಸಿಕೀ ॥೭॥

ಜಿಂಕೆಯ ಮಾಂಸದಿಂದ ಎಂಟು ತಿಂಗಳು, ರೌರವ ಮಾಂಸದಿಂದ ಒಂಬತ್ತು ತಿಂಗಳು, ಗವಯ (ಕಾಡುದನ) ಮಾಂಸದಿಂದ ಹತ್ತು ತಿಂಗಳು ತೃಪ್ತಿಯುಂಟಾಗುತ್ತದೆ.

ಮಾಸಾನೇಕಾದಶ ಪ್ರೀತಿಃ ಪಿತೄಣಾಂ ಮಾಹಿಷೇಣ ತು ।
ಗವ್ಯೇನ ದತ್ತೇ ಶ್ರಾದ್ಧೇ ತು ಸಂವತ್ಸರಮಿಹೋಚ್ಯತೇ ॥೮॥

ಎಮ್ಮೆಯ ಮಾಂಸದಿಂದ ಪಿತೃಗಳಿಗೆ ಹನ್ನೊಂದು ತಿಂಗಳು, ಗವ್ಯದಿಂದ (ಗೋ ಸಂಬಂಧಿಪದಾರ್ಥದಿಂದ-ಗೋಮಾಂಸದಿಂದ ಶ್ರಾದ್ಧವನ್ನು ಮಾಡಿದರೆ ಒಂದು ವರ್ಷದ ಕಾಲ ತೃಪ್ತಿಯನ್ನು ಹೊಂದುತ್ತಾರೆ.

ಯಥಾ ಗವ್ಯಂ ತಥಾ ಯುಕ್ತಂ ಪಾಯಸಂ ಸರ್ಪಿಷಾ ಸಹ ।
ವಾರ್ಧ್ರಾಣಸಸ್ಯ ಮಾಂಸೇನ ತೃಪ್ತಿರ್ದ್ವಾದಶವಾರ್ಷಿಕೀ ॥೯॥

ಗವ್ಯವು ಪಿತೃಗಳಿಗೆ ತೃಪ್ತಿಪಡಿಸಿದಂತೆ ಘೃತ ಸಹಿತವಾದ ಪಾಯಸವು ತೃಪ್ತಿಯನ್ನು ಉಂಟುಮಾಡುತ್ತದೆ. ಕಾಡೆಮ್ಮೆಯ ಮಾಂಸದಿಂದ ಪಿತೃಗಳಿಗೆ ಹನ್ನೆರಡು ವರ್ಷಗಳ ಕಾಲ ತೃಪ್ತಿಯುಂಟಾಗುತ್ತದೆ.

ಆನಂತ್ಯಾಯ ಭವೇದ್ದತ್ತಂ ಖಡ್ಗಮಾಂಸಂ ಪಿತೃಕ್ಷಯೇ ।
ಕಾಲಶಾಕಂ ಚ ಲೌಹಂ ಚಾಪ್ಯಾನಂತ್ಯೇಂ ಛಾಗ ಉಚ್ಯತೇ ॥೧೦॥

ಪಿತೃಗಳ ಶ್ರಾದ್ಧದಲ್ಲಿ ಖಡ್ಗಮೃಗ ಮಾಂಸವನ್ನು ಕೊಟ್ಟರೆ ಅನಂತಕಾಲದಲ್ಲಿ ಪಿತೃಗಳು ತೃಪ್ತಿಯನ್ನು ಹೊಂದುತ್ತಾರೆ. ಕಾಲಶಾಕ (ಕರೀಬೇವು) ಹಾಗೂ ಹೋತದ ಮಾಂಸ ಇವು ಅನಂತಫಲವನ್ನು ಕೊಡುತ್ತದೆ.

ಗಾಥಾಶ್ಚಾಪ್ಯತ್ರ ಗಾಯಂತಿ ಪಿತೃಗೀತಾ ಯುಧಿಷ್ಠಿರ ।
ಸನತ್ಕುಮಾರೋ ಭಗವಾನ್ ಪುರಾ ಮಯ್ಯಭ್ಯಭಾಷತ ॥೧೧॥

ಎಲೈ ಯುಧಿಷ್ಠಿರನೇ, ಈ ವಿಷಯದಲ್ಲಿ ಪಿತೃಗಳು ಹಾಡಿದ ಒಂದು ಗೀತೆಯನ್ನು ಪೂಜ್ಯರಾದ ಸನತ್ಕುಮಾರರು ಹಿಂದೆ ನನಗೆ ಹೇಳಿದರು.

ಅಪಿ ನಃ ಸ ಕುಲೇ ಜಾಯಾದ್ ಯೋ ನೋ ದದ್ಯಾತ್ ತ್ರಯೋದಶೀಮ್ ।
ಮಘಾಸು ಸರ್ಪಿಷಾ ಯುಕ್ತಂ ಪಾಯಸಂ ದಕ್ಷಿಣಾಯನೇ ॥೧೨॥

ಆಜೇನ ವಾಪಿ ಲೌಹೇನ ಮಘಾಸ್ವೇವ ಯತವ್ರತಃ ।
ಹಸ್ತಿಚ್ಛಾಯಾಸು ವಿಧಿವತ್ಕರ್ಣವ್ಯಜನವೀಜಿತಮ್ ॥೧೩॥

ನಮ್ಮ ಕುಲದಲ್ಲಿ ದಕ್ಷಿಣಾಯನ ತ್ರಯೋದಶಿಯಂದು ಮಘಾನಕ್ಷತ್ರದಲ್ಲಿ ಘೃತ ಮಿಶ್ರವಾದ ಪಾಯಸವನ್ನು ಪಿತೃಗಳಿಗಾಗಿ ಕೊಡುವ ಯಾವನಾದರೂ ಜನಿಸಲಿ. ಮಘಾನಕ್ಷತ್ರದಲ್ಲಿಯೇ ವ್ರತನಿಯಮಾಸಕ್ತನಾಗಿ ಆಡಿನ ರಸ ಮಾಂಸದಿಂದ ವಟವೃಕ್ಷದ ಛಾಯೆಯಲ್ಲಿ ಬೀಸಣಿಗೆಯಿಂದ (ಕರ್ಣವ್ಯಜನದಿಂದ) ಶ್ರಾದ್ಧವನ್ನು ಮಾಡುವವನು ನಮ್ಮ ಕುಲದಲ್ಲಿ ಜನಿಸಲಿ (ಎಂಬುದು ಆ ಗೀತೆ).

ಹಸ್ತಿಚ್ಛಾಯಾ ಎಂದರೆ ಹಸ್ತದಂತೆ ಚಾಚಿಕೊಂಡಿರುವ ಬಿಳಿಲುಗಳು. ಅದನ್ನು ಹೊಂದಿರುವ ವಟವೃಕ್ಷವು ಹಸ್ತಿ. ವಟವೃಕ್ಷಛಾಯೆಯಲ್ಲಿ ಎಂದು ಅರ್ಥ - ಲಕ್ಷಾಲಂಕಾರ.

ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಽಪಿ ಗಯಾಂ ವ್ರಜೇತ್ ।
ಯತ್ರಾಸೌ ಪ್ರಥಿತೋ ಲೋಕೇಷ್ವಕ್ಷಯ್ಯಕರಣೋ ವಟಃ ॥೧೪॥

ಲೋಕಗಳಲ್ಲಿ ಪ್ರಸಿದ್ಧವಾದ, ಮಾಡಿದುದಕ್ಕೆ ಅಕ್ಷಯ ಫಲವನ್ನು ಕೊಡುವ ಅಕ್ಷಯವಟವಿರುವ ಗಯಾಕ್ಷೇತ್ರಕ್ಕೆ ಯಾವನಾದರೂ ಹೋಗಿ ಶ್ರಾದ್ಧವನ್ನು ಮಾಡಬಹುದು ಎಂಬ ಅಭಿಪ್ರಾಯದಿಂದ ಅನೇಕ ಪುತ್ರರನ್ನು ಅಪೇಕ್ಷಿಸಬೇಕು.

ಆಪೋ ಮೂಲಂ ಫಲಂ ಮಾಂಸಮನ್ನಂ ವಾಪಿ ಪಿತೃಕ್ಷಯೇ ।
ಯತ್ಕಿಂಚಿನ್ಮಧುಸಮ್ಮಿಶ್ರಂ ತದಾನಂತ್ಯಾಯ ಕಲ್ಪತೇ ॥೧೫॥

ಜಲ, ಗೆಡ್ಡೆ-ಗೆಣಸುಗಳು, ಫಲ, ಮಾಂಸ, ಅನ್ನ- ಇವು ಪಿತೃಶ್ರಾದ್ಧದಲ್ಲಿ ಮುಖ್ಯವಾದವುಗಳು. ಜೇನು ಮಿಶ್ರಿತವಾಗಿ ಯಾವುದು ಕೊಡಲ್ಪಡುತ್ತದೆಯೋ ಅವೆಲ್ಲವೂ ಅನಂತ ಫಲವನ್ನು ಕೊಡುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಅನುಶಾಸನಪರ್ವಣಿ ದಾನಧರ್ಮೇ ಶ್ರಾದ್ಧಹವಿರ್ನಿರೂಪಣಂ ನಾಮ
ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೊಂದನೆಯ ಅಧ್ಯಾಯ

ನಕ್ಷತ್ರಯೋಗದಲ್ಲಿ ಶ್ರಾದ್ಧಫಲ ಕಥನ.

ಭೀಷ್ಮಃ

ಯಮಸ್ತು ಯಾನಿ ಶ್ರಾದ್ಧಾನಿ ಪ್ರೋವಾಚ ಶಶಬಿಂದವೇ ।
ತಾನಿ ಮೇ ಶೃಣು ಕಾಮ್ಯಾನಿ ನಕ್ಷತ್ರೇಷು ಪೃಥಕ್‌ಪೃಥಕ್ ॥೧॥

ಭೀಷ್ಮ– ಯಮದೇವರು ಶಶಬಿಂದುವಿಗೆ ಬೇರೆ ಬೇರೆ ನಕ್ಷತ್ರಯೋಗಗಳಲ್ಲಿ ಕಾಮ್ಯ ಶ್ರಾದ್ಧಗಳಿಗೆ ಯಾವ ಫಲವನ್ನು ಹೇಳಿದರೋ ಅದನ್ನು ನನ್ನಿಂದ ಕೇಳು.

ಶ್ರಾದ್ಧಂ ಯಃ ಕೃತ್ತಿಕಾಯೋಗೇ ಕುರ್ವೀತ ಸತತಂ ನರಃ ।
ಅಗ್ನೀನಾಧಾಯ ಸಾಪತ್ಯೋ ಯಜೇತ ವಿಗತಜ್ವರಃ ॥೨॥

ಯಾವ ಮನುಷ್ಯನು ಕೃತ್ತಿಕಾ ನಕ್ಷತ್ರದಲ್ಲಿ ಸತತವೂ ಶ್ರಾದ್ಧವನ್ನು ಮಾಡುತ್ತಾನೋ ಅವನು ಅಗ್ನಿಯ ಆಧಾನವನ್ನು ಮಾಡಿ ಪುತ್ರರ ಜೊತೆಯಲ್ಲಿ ನಿಶ್ಚಿಂತೆಯಾಗಿ ಯಾಗವನ್ನು ಮಾಡುತ್ತಾನೆ.

ಅಪತ್ಯಕಾಮೋ ರೋಹಿಣ್ಯಾಮೋಜಸ್ಕಾಮೋ ಮೃಗೋತ್ತಮೇ ।
ಕ್ರೂರಕರ್ಮಾ ದದಚ್ಛ್ರಾದ್ಧಮಾರ್ದ್ರಾಯಾಂ ಮಾನವೋ ಭವೇತ್ ॥೩॥

ಪುತ್ರರನ್ನು ಬಯಸುವ ಮಾನವನು ರೋಹಿಣಿ ನಕ್ಷತ್ರದಲ್ಲಿಯೂ, ಶರೀರದ ಶಕ್ತಿಯನ್ನು ಬಯಸುವ ಮನುಷ್ಯನು ಮೃಗಶಿರಾನಕ್ಷತ್ರದಲ್ಲಿಯೂ ಶ್ರಾದ್ಧವನ್ನು ಮಾಡಬೇಕು. ಆರ್ದ್ರಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಕ್ರೂರಕರ್ಮಿ ಆಗುತ್ತಾನೆ.

ಕೃಷಿಭಾಗೀ ಭವೇತ್ ಮರ್ತ್ಯಃ ಕುರ್ವನ್ ಶ್ರಾದ್ಧಂ ಪುನರ್ವಸೌ ।
ಪುಷ್ಟಿಕಾಮೋಽಥ ಪುಷ್ಯೇಣ ಶ್ರಾದ್ಧಮೀಹೇತ ಮಾನವಃ ॥೪॥

ಪುನರ್ವಸು ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವ ಮನುಷ್ಯನು ಕೃಷಿಕನಾಗುತ್ತಾನೆ. ಪುಷ್ಟಿಯನ್ನು ಬಯಸುವ ಮನುಷ್ಯನು ಪುಷ್ಯಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡಬೇಕು.

ಆಶ್ಲೇಷಾಯಾಂ ದದಚ್ಛ್ರಾದ್ಧಂ ವೀರಾನ್ ಪುತ್ರಾನ್ ಪ್ರಜಾಯತೇ ।
ಜ್ಞಾತೀನಾಂ ತು ಭವೇಚ್ಛ್ರೇಷ್ಠೋ ಮಘಾಸು ಶ್ರಾದ್ಧಮಾವಪನ್ ॥೫॥

ಆಶ್ಲೇಷಾ ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ವೀರರಾದ ಪುತ್ರರನ್ನು ಪಡೆಯುತ್ತಾನೆ. ಮಘಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಬಂಧುಗಳಲ್ಲಿ ಶ್ರೇಷ್ಠನಾಗುತ್ತಾನೆ.

ಫಲ್ಗುನೀಷು ದದಚ್ಛ್ರಾದ್ಧಂ ಸುಭಗಃ ಶ್ರಾದ್ಧದೋ ಭವೇತ್ ।
ಅಪತ್ಯಭಾಗುತ್ತರಾಸು ಹಸ್ತೇನ ಫಲಭಾಗ್ ಭವೇತ್ ॥೬॥

ಪೂರ್ವಫಲ್ಗುಣಿ ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಸೌಭಾಗ್ಯಯುಕ್ತನಾಗುತ್ತಾನೆ. ಉತ್ತರಾ ನಕ್ಷತ್ರದಲ್ಲಿ ಪುತ್ರರನ್ನೂ, ಹಸ್ತಾ ನಕ್ಷತ್ರದಲ್ಲಿ ಫಲಗಳನ್ನೂ ಪಡೆಯುತ್ತಾರೆ.

ಚಿತ್ರಾಯಾಂ ತು ದದಚ್ಛ್ರಾದ್ಧಂ ಲಭೇದ್ ರೂಪವತಃ ಸುತಾನ್ ।
ಸ್ವಾತಿಯೋಗೇ ಪಿತೄನರ್ಚ್ಯ ವಾಣಿಜ್ಯಮುಪಜೀವತಿ ॥೭॥

ಚಿತ್ತಾ ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ರೂಪವಂತರಾದ ಪುತ್ರರನ್ನು ಪಡೆಯುತ್ತಾರೆ. ಸ್ವಾತೀ ನಕ್ಷತ್ರದಲ್ಲಿ ಪಿತೃಗಳನ್ನು ಅರ್ಚಿಸುವವನು ವಾಣಿಜ್ಯವನ್ನು ಅವಲಂಬಿಸುತ್ತಾನೆ.

ಬಹುಪುತ್ರೋ ವಿಶಾಖಾಸು ಪಿತ್ರ್ಯಮೀಹನ್ ಭವೇನ್ನರಃ ।
ಅನುರಾಧಾಸು ಕುರ್ವಾಣೋ ರಾಜಚಕ್ರಂ ಪ್ರವರ್ತಯೇತ್ ॥೮॥

ವಿಶಾಖಾ ನಕ್ಷತ್ರದಲ್ಲಿ ಪಿತೃಯಜ್ಞವನ್ನು ಮಾಡುವವನು ಅನೇಕ ಪುತ್ರರನ್ನು ಪಡೆಯುತ್ತಾರೆ. ಅನುರಾಧಾ ನಕ್ಷತ್ರದಲ್ಲಿ ಮಾಡುವವನು ರಾಜಚಕ್ರ ಪ್ರವರ್ತಕನಾಗುತ್ತಾನೆ.

ಆಧಿಪತ್ಯಂ ವ್ರಜೇನ್ಮರ್ತ್ಯೋ ಜ್ಯೇಷ್ಠಾಯಾಮಪವರ್ಜಯನ್ ।
ನರಃ ಕುರುಕುಲಶ್ರೇಷ್ಠ ಶ್ರದ್ಧಾದಮಪುರಃಸರಃ ॥೯॥

ಎಲೈ ಕುರುಕುಲಶ್ರೇಷ್ಠನೇ, ಶ್ರದ್ಧಾಮತ್ತು ನಿಯಮಯುಕ್ತನಾಗಿ ಜ್ಯೇಷ್ಠಾ ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವ ಮಾನವನು ಅಧಿಪತಿಯಾಗುತ್ತಾನೆ.

ಮೂಲೇ ತ್ವಾರೋಗ್ಯಮರ್ಚ್ಛೇತ ಯಶೋऽಷಾಢಾಸ್ವನುತ್ತಮಮ್ ।
ಉತ್ತರಾಸು ತ್ವಷಾಢಾಸು ವೀತಶೋಕಶ್ಚರೇನ್ಮಹೀಮ್ ॥೧೦॥

ಮೂಲಾ ನಕ್ಷತ್ರದಲ್ಲಿ ಆರೋಗ್ಯವನ್ನು ಹೊಂದುತ್ತಾನೆ. ಪೂರ್ವಾಷಾಢಾ ನಕ್ಷತ್ರದಲ್ಲಿ ಕೀರ್ತಿಯನ್ನು ಪಡೆಯುತ್ತಾನೆ. ಉತ್ತರಾಷಾಢಾ ನಕ್ಷತ್ರದಲ್ಲಿ ಶೋಕರಹಿತನಾಗಿ ತೀರ್ಥಯಾತ್ರೆಯನ್ನು ಮಾಡುತ್ತಾನೆ.

ಶ್ರಾದ್ಧಂ ತ್ವಭಿಜಿತೇ ಕುರ್ವನ್ ವಿದ್ಯಾಂ ಶ್ರೇಷ್ಠಾಮವಾಪ್ನುಯಾತ್ ।
ಶ್ರವಣೇ ತು ದದಚ್ಛ್ರಾದ್ಧಂ ಪ್ರೇತ್ಯ ಗಚ್ಛೇತ್ ಪರಾಂ ಗತಿಮ್ ॥೧೧॥

ಅಭಿಜಿತ್ ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಶ್ರೇಷ್ಠವಾದ ವಿದ್ಯೆಯನ್ನು ಪಡೆಯುತ್ತಾನೆ. ಶ್ರವಣ ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಮರಣಾನಂತರದಲ್ಲಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ (ಲಕ್ಷಾಲಂಕಾರ).

ರಾಜ್ಯಭಾಗೀ ಧನಿಷ್ಠಾಯಾಂ ಪ್ರಾಪ್ನುಯಾನ್ನಾಪದಂ ನರಃ ।
ನಕ್ಷತ್ರೇ ವಾರುಣೇ ಕುರ್ವನ್ ಭಿಷಕ್ಸಿದ್ಧಿಮವಾಪ್ನುಯಾತ್ ॥೧೨॥

ಧನಿಷ್ಠಾ ನಕ್ಷತ್ರದಲ್ಲಿ ರಾಜ್ಯವನ್ನು ಪಡೆಯುತ್ತಾನೆ ಮತ್ತು ಆಪತ್ತುಗಳು ಬರುವುದಿಲ್ಲ. ವರುಣದೇವತಾಕವಾದ ಶತಭಿಷಾ ನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಔಷಧ ಸಿದ್ಧಿಯನ್ನು ಪಡೆಯುತ್ತಾನೆ.

ಪೂರ್ವಪ್ರೋಷ್ಠಪದಾಃ ಕುರ್ವನ್ ಬಹು ವಿಂಧೇದಜಾವಿಕಮ್ ।
ಉತ್ತರಾಸ್ವಥ ಕುರ್ವಾಣೋ ವಿಂದತೇ ಗಾಃ ಸಹಸ್ರಶಃ ॥೧೩॥

ಪೂರ್ವಾಭಾದ್ರಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಬಹಳ ಆಡು-ಕುರಿಗಳನ್ನು ಪಡೆಯುತ್ತಾನೆ. ಉತ್ತರಾಭಾದ್ರಾ ನಕ್ಷತ್ರದಲ್ಲಿ ಮಾಡುವವನು ಸಹಸ್ರಾರು ಗೋವುಗಳನ್ನು ಪಡೆಯುತ್ತಾನೆ.

ಬಹುರೂಪ್ಯಕೃತಂ ವಿತ್ತಂ ವಿಂದತೇ ರೇವತೀಂ ಶ್ರಿತಃ ।
ಅಶ್ವಾಂಶ್ಚಾಶ್ವಯುಜೇ ವೇತ್ತಿ ಭರಣೀಷ್ವಾಯುರುತ್ತಮಮ್ ॥೧೪॥

ರೇವತೀ ನಕ್ಷತ್ರವನ್ನು ಆಶ್ರಯಿಸಿ ಶ್ರಾದ್ಧವನ್ನು ಮಾಡುವವನು ಸುವರ್ಣ ಸಂಬಂಧಿಯಾದ ಬಹಳ ಧನವನ್ನು ಹೊಂದುತ್ತಾನೆ. ಅಶ್ವಿನೀ ನಕ್ಷತ್ರದಲ್ಲಿ ಅಶ್ವಗಳನ್ನೂ, ಭರಣೀ ನಕ್ಷತ್ರದಲ್ಲಿ ಶ್ರೇಷ್ಠವಾದ ಆಯುಸ್ಸನ್ನು ಹೊಂದುತ್ತಾನೆ.

ಇಮಂ ಶ್ರಾದ್ಧವಿಧಿಂ ಶ್ರುತ್ವಾ ಶಶಬಿಂದುಸ್ತಥಾऽಕರೋತ್ ।
ಅಕ್ಲೇಶೇನಾಜಯಚ್ಚಾಪಿ ಮಹೀಂ ಸೋऽನುಶಶಾಸ ಹ ॥೧೫॥

ಈ ಶ್ರಾದ್ಧವಿಧಿಯನ್ನು ಕೇಳಿ ಶಶಬಿಂದುವು ಹಾಗೆಯೇ ಮಾಡಿದನು ಮತ್ತು ಅನಾಯಾಸವಾಗಿ ಭೂಮಿಯನ್ನು ಗೆದ್ದು ಆಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ದಾನಧರ್ಮೇ ನಕ್ಷತ್ರಯೋಗೇ ಕಾಮ್ಯಶ್ರಾದ್ಧವಿಧಿನಿರೂಪಣಂ ನಾಮ ಏಕತ್ರಿಂಶತ್ಯಧಿಕಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅನುಶಾಸನಪರ್ವದಲ್ಲಿ ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★



ISBN: 978-93-88813-36-5